
ಪ್ರೊ.ಕೆ.ರಾಮದಾಸ್
ಕುರಿತ ಲೇಖನಗಳು



# ಉರಿದ ಪಂಜು

ಸಂ: ಡಿ.ಎಸ್.ನಾಗಭೂಷಣ ಪ್ರೊ.ಎಚ್.ಎಲ್. ಕೇಶವಮೂರ್ತಿ



# ಉರಿದ ಪಂಜು

(ಪ್ರೊ.ಕೆ.ರಾಮದಾಸ್ ನೆನಪಿನ ಸಂಪುಟ)

**ಸಂಪಾದಕರು**

ಡಿ.ಎಸ್. ನಾಗಭೂಷಣ

ಪ್ರೊ.ಎಚ್.ಎಲ್. ಕೇಶವಮೂರ್ತಿ

**ಅಭಿರುಚಿ ಪ್ರಕಾಶನ**

ನಂ. ೩೮೭, ೧೪ನೆಯ ಮುಖ್ಯರಸ್ತೆ, ೩ನೆಯ ಅಡ್ಡರಸ್ತೆ,

ಸರಸ್ವತೀಪುರ, ಮೈಸೂರು - ೯

# URIDA PANJU

(A Collection articles on a K.Ramadas )

**Edited by**

D.S. Nagabhushana

Prof. H.L. Keshavamurthy

**Published by Abhiruchi prakashana**

#386, 14th main, 3rd cross,

Saraswathipura, Mysore - 9.

Karnataka. Ph. 9980560013

E-mail: Abhiruchiprakashana@yahoo.co.in

Pages - xviii + 556 = 574, + 8 Page Colour Price : Rs. 375

First Impression - 2012

ISBN: 81-7877-075-X

# ಉರಿದ ಪಂಜು

(ಪ್ರೊ.ಕೆ.ರಾಮದಾಸ್ ನೆನಪಿನ ಸಂಪುಟ)

ಮೊದಲ ಮುದ್ರಣ : ೨೦೧೨



ಪ್ರಕಾಶಕರು : 'ಅಭಿರುಚಿ ಗಣೇಶ್'

ಬೆಲೆ : ಮೂನ್ನೂರ ಎಪ್ಪತ್ತೈದು ರೂಪಾಯಿಗಳು

ಮುಖಪುಟ ವಿನ್ಯಾಸ : ಸುಧಾಕರ ದರ್ಬೆ

ಅಕ್ಷರ ಜೋಡಣೆ : ಅಭಿರುಚಿ ಕಂಪ್ಯೂಟರ್ಸ್

ಮುದ್ರಣ : ವಿಶ್ವಾಸ್ ಪ್ರಿಂಟ್ಸ್

ಚಾಮರಾಜಪೇಟೆ, ಬೆಂಗಳೂರು - ೧೮

# ಸಂಪಾದಕರ ಮಾತು

ಒಂದು ವರ್ಷದ ಹಿಂದೆ ಸಂಪೂರ್ಣ ಕೈತೊಳೆದುಕೊಂಡಿದ್ದ ಜವಾಬ್ದಾರಿ ಮತ್ತೆ ನನ್ನ ಕೊರಳಿಗೆ ಸುತ್ತಿಕೊಂಡಿದೆ ! ಈ ಸಂಪುಟದ ಕೆಲಸವನ್ನು ಎಚ್.ಎಲ್. ಕೇಶವಮೂರ್ತಿ ಅವರೊಡಗೂಡಿ ಪೂರ್ಣ ಮುಗಿಸಿ, ಮುದ್ರಣಕ್ಕೆ ಕೊಡಲಾಗಿತ್ತು. ಅಷ್ಟೇ ಅಲ್ಲ, ಸಂಪುಟದ ಬಿಡುಗಡೆಯ ಸಮಾರಂಭದ ದಿನಾಂಕ ಮತ್ತು ಇತರ ವಿವರಗಳನ್ನು ಎಚ್.ಎಲ್.ಕೆ ಸಿದ್ಧಪಡಿಸಿ ನನಗೆ ತೋರಿಸಿದ್ದರು. ಆದರೆ ಕೊನೇ ನಿಮಿಷದಲ್ಲಿ ರಾಮದಾಸ್ ಅವರ ಮೈಸೂರಿನ ಅಭಿಮಾನಿಗಳಲ್ಲಿ ಕೆಲವರು, ಮುಖ್ಯರಾದವರ ಲೇಖನಗಳೇ ಸಂಪುಟದಲ್ಲಿ ಇಲ್ಲವೆಂದೋ, ಮತ್ತೊಂದೋ ಕಾರಣ ನೀಡಿ ಅದರ ಪ್ರಕಟಣೆಯನ್ನು ತಡೆದಿದ್ದರು. ಹಾಗೂ ಅವರಲ್ಲಿ ಕೆಲವರು ಅಂತಹವರಿಂದ ಲೇಖನಗಳನ್ನು ತರಿಸಿಕೊಡುವ ಜವಾಬ್ದಾರಿಯನ್ನೂ ಹೊತ್ತಿದ್ದರೆಂದು ಕೇಳಿರುವೆ. ಆದರೆ ಆರು ತಿಂಗಳುಗಳ ನಂತರವೂ ಸಂಬಂಧಪಟ್ಟವರಿಂದ ಲೇಖನಗಳು ಬರದೆ ಸಂಪುಟದ ಪ್ರಕಟಣೆ ನೆನೆಗುದಿಗೆ ಬಿದ್ದಿತು. ಹೀಗಾಗಿ, ಕಳೆದ 30 ವರ್ಷಗಳಿಂದ ಯಾವ ಕೆಲಸ ಮಾಡಹೊರಟರೂ ಎದುರಾಗುವ ಇಂತಹ 'ಸಮಾಜವಾದಿ' ತಕರಾರುಗಳನ್ನು ನೋಡಿ ಬೇಸತ್ತಿದ್ದ ನಾನು, ಈ ಸಂಪುಟಕ್ಕೂ ನನಗೂ ಇನ್ನು ಸಂಬಂಧವಿಲ್ಲವೆಂದು ಹೇಳಿಬಿಟ್ಟಿದ್ದೆ.

ಸಂಪಾದಕ ಮಂಡಳಿಯಲ್ಲಿದ್ದ ನಾನು ಮತ್ತು ಎಚ್.ಎಲ್. ಕೇಶವಮೂರ್ತಿಯವರು ಕೆ. ಮುದ್ದುಕೃಷ್ಣ ಅವರೊಡನೆ ಶಿವಮೊಗ್ಗದ ನಮ್ಮ ಮನೆಯಲ್ಲಿ ಕೂತು, ರಾಮದಾಸರ ಸಂಪರ್ಕವಿದ್ದ ಎಲ್ಲರ ಹೆಸರುಗಳನ್ನು ಪಟ್ಟಿಮಾಡಿ, ಬರೆಯಬಲ್ಲವರೆಲ್ಲರಿಂದ ನಮಗೆ ಸೂಕ್ತ ಕಂಡ ವಿಷಯ ನೀಡಿ ಲೇಖನಗಳನ್ನು ಆಹ್ವಾನಿಸಿದ್ದೆವು. ನಾವು ನೀಡಿದ್ದ ಕೊನೆಯ ದಿನಾಂಕದ ನಂತರವೂ, ಎಚ್.ಎಲ್.ಕೆ ಮತ್ತು ಮುದ್ದುಕೃಷ್ಣ ಲೇಖನ ಕಳಿಸದವರಿಗೆ ನೆನಪಿನೋಲೆ ಬರೆದಿದ್ದರು. ಹಾಗೆ ಬಂದ ಲೇಖನಗಳ ಜೊತೆ ರಾಮದಾಸ್ ನಿಧನರಾದ ಸಂದರ್ಭದಲ್ಲಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಬರಹಗಳನ್ನು ವಿಳಾಸ ಲಭ್ಯವಿದ್ದವರೆಲ್ಲರ ಅನುಮತಿ ಪಡೆದು ಜೋಡಿಸಿ ಸಂಪುಟವನ್ನು ರೂಪಿಸಿದ್ದೆವು. ಇದಾದ ಒಂದು ವರ್ಷದ ನಂತರವೂ ಆ 'ಮುಖ್ಯ'ರಿಂದ ಲೇಖನಗಳು ಬರದೆ, ಬೇರೆ ಮೂರು-ನಾಲ್ಕು ಲೇಖನಗಳಷ್ಟೇ ಈ ಸಂಪುಟ ಸೇರಿಕೊಂಡು ಈಗ

ಮತ್ತೆ ಅಂತಿಮ ರೂಪುರೇಷೆಗಳಿಗಾಗಿ ನನ್ನ ಮುಂದೆ ಬಂದಿದೆ. ರಾಮದಾಸ್ ಅವರ ಮೇಲಿನ ಪ್ರೀತಿಯಿಂದಷ್ಟೇ ನಾನು ಈ ಕೆಲಸವನ್ನು ಮತ್ತೆ ಕೈಗೆತ್ತಿಕೊಳ್ಳಬೇಕಿದೆ.

ಏಕೆಂದರೆ ರಾಮದಾಸ್ ನನ್ನ ಮೂವತ್ತು ವರ್ಷಗಳ ಗೆಳೆಯ. ಹಿರಿಯ ಗೆಳೆಯ ಎಂದೂ ಹೇಳಬೇಕು. ಇಲ್ಲದಿದ್ದರೆ ಅವರಿರುವೆಡೆಯಲ್ಲೇ ಸಿಟ್ಟಾದಾರು ! ಅವರು ತಮ್ಮ ಹಿರಿತನವನ್ನು ಸ್ಪಷ್ಟಪಡಿಸಿಕೊಂಡೇ, ಕಾಪಿಟ್ಟುಕೊಂಡೇ ಗೆಳೆತನವನ್ನು ಬೆಳೆಸಿಕೊಂಡವರು. ನಾನು ಅವರ ಹಿರಿತನವನ್ನೊಪ್ಪಿಕೊಂಡೇ ಅವರ ಗೆಳೆತನವಿನ್ನು ಉಳಿಸಿಕೊಂಡವನು ! ಈ ಒಪ್ಪಿಗೆ ಅಪ್ರಜ್ಞಾಪೂರ್ವಕವಾಗಿ ಉಲ್ಲಂಘನೆಯಾದಾಗಲೆಲ್ಲ ಘರ್ಷಣೆಗಳಾಗಿವೆ. ಘರ್ಷಣೆಗಳ ನಂತರ ಗೆಳೆತನ ಮುಂದುವರೆದಿದೆ. ನಾನೆಲ್ಲಿದ್ದರೂ, ಮೈಸೂರಿಗೆ ಬಂದಾಗಲೆಲ್ಲ ಅವರ ಮನೆಯಲ್ಲಿ ಉಳಿಯಬೇಕೆಂಬುದು ಅವರ ಕಟ್ಟಪ್ಪಣೆ. ಹಾಗೆ ಹೋದ ಒಂದರೆ ತಾಸಿನಲ್ಲೇ ಯಾವುದೋ ಮಾತುಕತೆ ಮಧ್ಯೆ ಭಿನ್ನಾಭಿಪ್ರಾಯ ಉಂಟಾದೊಡನೆ ಅವರು 'I say get out of my house!' ಎಂದು ಆಜ್ಞಾಪಿಸಬಲ್ಲವರೂ ಆಗಿದ್ದರು !

ಇಂತಹ ರಾಮದಾಸ್ ಬಗ್ಗೆ ನೆನಪಿನ ಸಂಪುಟ ಮಾಡುವುದು ಕಷ್ಟ ಅಥವಾ ವಿಚಿತ್ರ ಜವಾಬ್ದಾರಿಯ ಕೆಲಸ. ರಾಮದಾಸ್ ನಿಧನರಾದ ಕೆಲವೇ ದಿನಗಳ ನಂತರ ಅವರ ಮನೆಯಲ್ಲಿ ಸಭೆ ಸೇರಿದ್ದ ಅವರ ಮೈಸೂರು ಅಭಿಮಾನಿ ಗೆಳೆಯರ ಬಳಗದ ಪರವಾಗಿ ಎಚ್.ಎಲ್. ಕೇಶವಮೂರ್ತಿ ಮತ್ತು ರಾಜಶೇಖರ ಕೋಟಿ ನನಗೆ ದೂರವಾಣಿ ಕರೆ ಮಾಡಿ, ಈ ಸಂಪುಟದ ಪ್ರಸ್ತಾವನೆಯನ್ನಿರಿಸಿದರು. ಅದರ ಸಂಪಾದನೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಕೋರಿ ಅವರು ಆಗ್ರಹಿಸಿದಾಗ, ಕಳೆದ 30 ವರ್ಷಗಳಲ್ಲಿ ನಾನು ಕಂಡ ರಾಮದಾಸ್ ಚಿತ್ರಗಳು ನನ್ನ ಕಣ್ಮುಂದೆ ಹಾದು ಹೋದವು. ಈ ಕಲಸು ಮೇಲೋಗರವನ್ನು ಒಂದು ಹದಕ್ಕೆ ತಂದು, ಒಂದು ಸುಸಂಗತ ಚಿತ್ರ ಮೂಡಿಸುವುದೇ ಈ ಸಂಪುಟದ ಮೂಲಕ ನಾನು ಮಾಡಬೇಕಾದ ಕೆಲಸ ಎಂಬುದು ಅರಿವಾದಾಗ ಕೊಂಚ ಗಾಬರಿಯೇ ಆಯಿತು. ಆದರೆ ರಾಮದಾಸ್‌ರಂತಹವರ ಋಣ ನಮ್ಮಂತಹವರ ಮೇಲೆ ಇದ್ದೇ ಇದೆ. ಹಾಗೆ ನೋಡಿದರೆ ನಾವೆಲ್ಲರೂ ಪರಸ್ಪರ ಋಣದಲ್ಲೇ ಬೆಳೆದಿರುವುದು. ಅವರು ನಮ್ಮನ್ನು ಬೆಳೆಸುತ್ತಾ, ನಾವು ಅವರನ್ನು ಬೆಳೆಸುತ್ತಾ; ಅವರ ಬದುಕನ್ನು ನಾವು ರೂಪಿಸುತ್ತಾ, ನಮ್ಮ ಬದುಕನ್ನು ಅವರು ರೂಪಿಸುತ್ತಾ; ಒಟ್ಟಾರೆ ನಮ್ಮೆಲ್ಲರದೆಂಬ ಬದುಕನ್ನು ತಕ್ಕಮಟ್ಟಿಗೆ ಸಹ್ಯವೂ, ಸುಂದರವೂ, ಅರ್ಥಪೂರ್ಣವನ್ನಾಗಿಯೂ ಮಾಡಿಕೊಳ್ಳಲು ಯತ್ನಿಸಿದ್ದೇವೆ. ಹಾಗಾಗಿ ನಾನು ಈ ಜವಾಬ್ದಾರಿಯನ್ನು ಒಪ್ಪಿಕೊಂಡೆ. ಜೊತೆಗಿರುವ ಎಚ್.ಎಲ್.ಕೆ ಈ ಜವಾಬ್ದಾರಿಯ ಭಾರವನ್ನು ಹಗುರಗೊಳಿಸಿದ್ದಾರೆ.

ರಾಮದಾಸ್ ಸ್ವಾತಂತ್ರ್ಯೋತ್ತರ ಭಾರತದ ಮೊದಲ ಕೆಲವು ದಶಕಗಳಲ್ಲಾದರೂ ನಮ್ಮ ಪ್ರಜಾಪ್ರಭುತ್ವ ನಿಜವಾದ ಅರ್ಥದಲ್ಲಿ ಕ್ರಿಯಾಶೀಲವಾಗಿದ್ದುದರ ದ್ಯೋತಕವೇ ಆಗಿದ್ದಾರೆ. ಹಾಗೇ ಆ ಕ್ರಿಯಾಶೀಲತೆ ನಂತರದ ದಶಕಗಳಲ್ಲಿ ಅವನತಿಗೊಳ್ಳುತ್ತಾ ಬಂದುದರ ದ್ಯೋತಕವೂ ಆಗಿದ್ದಾರೆ- ಇನ್ನೊಂದು ಅರ್ಥದಲ್ಲಿ. ಮೊದಲ ಘಟ್ಟದಲ್ಲಿ ರಾಮದಾಸ್ ಕನ್ನಡ ನಾಡಿನ ಒಂದು ಅಜ್ಞಾತ ಗ್ರಾಮದ ಒಂದು ಅಜ್ಞಾತ ಜಾತಿಯ ಬಡ ಕುಟುಂಬದಲ್ಲಿ ಹುಟ್ಟಿದ ಹುಡುಗನಾಗಿ

ತನ್ನ ಬದುಕನ್ನು ಯಶಸ್ವಿಯಾಗಿ ಕಟ್ಟಿಕೊಳ್ಳಲು ಅನುವು ಮಾಡಿಕೊಟ್ಟ ಪ್ರಜಾಪ್ರಭುತ್ವದ ಮೌಲ್ಯಗಳ ಪ್ರತಿನಿಧಿಯಾದರೆ, ಎರಡನೇ ಘಟ್ಟದಲ್ಲಿ ಈ ಮೌಲ್ಯಗಳು ಅವನತಿಯ ಹಾದಿ ಹಿಡಿದಾಗ ಅದರ ವಿರುದ್ಧ ವೈಯಕ್ತಿಕ ತುರ್ತಿನೊಂದಿಗೆ ದನಿ ಎತ್ತಿದ ಹಲವು ಸಮೂಹಗಳು, ಆಂದೋಲನಗಳ ಪ್ರತಿನಿಧಿಯೂ ಆಗಿದ್ದಾರೆ. ಅವರು ತಮ್ಮ ಬದುಕಿನ, ಪ್ರತಿಭಟನೆಯ ತಿರುಳು ಮತ್ತು ದಿಕ್ಕುಗಳನ್ನು ಲೋಹಿಯಾ ಸಮಾಜವಾದಿ ಆಂದೋಲನದಿಂದ ಪಡೆದುಕೊಂಡರಾದರೂ, ಎಲ್ಲ ರೀತಿಯ ಅನ್ಯಾಯಗಳ ವಿರುದ್ಧ ದನಿ ಎತ್ತಲು ಅವರು ಅದನ್ನು ಒಂದು ಮಿತಿಯನ್ನಾಗಿಯೇನೂ ಪರಿಗಣಿಸಲಿಲ್ಲ. ಇಂತಹ ಉಲ್ಲಂಘನೆಗಳ ಮೂಲಕವೇ ಲೋಹಿಯಾ ವಿಚಾರಗಳಿಗೆ, ಸಮಾಜವಾದಿ ಆಂದೋಲನದ ಛಿದ್ರೀಕರಣದ ನಂತರವೂ ಅವರು ಚಲಾವಣೆಯನ್ನು ಒದಗಿಸಿಕೊಟ್ಟರು; ಅವುಗಳ ಕ್ರಿಯಾಶೀಲ ಜೀವಂತಿಕೆಯನ್ನು ಕಾಪಾಡುತ್ತಾ ಹೋದರು ಎಂದೇ ಹೇಳಬೇಕು. ರಾಮದಾಸ್ ಪೆರಿಯಾರ್ ಮೂಲದ ವಿಚಾರವಾದಿಯೂ ಆಗಿದ್ದುದರಿಂದ ಅವರ ವ್ಯಕ್ತಿತ್ವ ಯಾವಾಗಲೂ ಸಮಾಜವಾದಿ ತಾಂತ್ರಿಕ ಚೌಕಟ್ಟಿನಲ್ಲೇ ಇರುತ್ತಿತ್ತೆಂದು ಹೇಳಲೂ ಆಗುತ್ತಿರಲಿಲ್ಲ. ಇದರಿಂದಾಗಿ ಅವರು ಆಗಾಗ್ಗೆ ತಮ್ಮ ವೈಯಕ್ತಿಕ ನಿಲುವುಗಳ ಮೂಲಕ ಸಮಾಜವಾದಿ ಗೆಳೆಯರನ್ನು ಬೆಚ್ಚಿ ಬೀಳಿಸುತ್ತಿದ್ದರು. ಅದರಲ್ಲಿ ಖುಷಿಯನ್ನೂ ಪಡೆಯುತ್ತಿದ್ದರು.

ಹೀಗೆ ಕ್ರಮೇಣ ಒಂದು ಸುಸಂಗತ ವೈಚಾರಿಕ ಚೌಕಟ್ಟಿಗೆ ಸಿಗದೆ ಬೆಳೆದ ರಾಮದಾಸ್, ಸಹಜವಾಗಿಯೇ ಸ್ಥೂಲವಾಗಿ ಪ್ರಗತಿಪರವೆಂದು ಕರೆಯಬಹುದಾದ ಎಲ್ಲ ನಿಲುವುಗಳಿಗೂ, ಚಟುವಟಿಕೆಗಳಿಗೂ ಆಶ್ರಯದಾತರೋ, ಸ್ಫೂರ್ತಿ ಕೇಂದ್ರವೋ ಆಗತೊಡಗಿದ್ದರು. ಈ ಸಂಪುಟದ ಹಲವು ಲೇಖನಗಳು ಹಲವು ರಾಜಕೀಯ ನೆಲೆಗಳ ಜನರಿಂದ ರಾಮದಾಸರನ್ನು ತಮ್ಮವರೆಂದೇ ಪರಿಗಣಿಸಿ, ಹಲವು ಪ್ರಶ್ನೆಗಳನ್ನು ಎತ್ತುತ್ತಲೇ ಪ್ರೀತಿಯಿಂದ ಬರೆಯಲ್ಪಟ್ಟಿರುವುದನ್ನು ನೋಡಬಹುದು. ಇನ್ನು ರಾಮದಾಸ್ ಅವರ ಪತ್ರಿಕಾ ಹೇಳಿಕೆಗಳ ವಿಭಾಗ, ಅವರ ವೈವಿಧ್ಯಮಯ 'ಆಸಕ್ತಿ'ಗಳನ್ನಲ್ಲದೆ, ಅವರ ನಿರಂತರ ಅಶಾಂತತೆಯ ಹಲವು ಮೂಲಗಳನ್ನೂ ಗುರುತಿಸಬಲ್ಲುದಾಗಿದೆ. ತಮ್ಮ ವರ್ತಮಾನದೊಂದಿಗೆ ನಿರಂತರ ಸಂವಾದ, ಸಂಘರ್ಷದಲ್ಲಿದ್ದ ವ್ಯಕ್ತಿ ರಾಮದಾಸ್. ಇಂತಹ ವ್ಯಕ್ತಿ ಹಲವು ಭಾವನಾತ್ಮಕ ಮತ್ತು ವೈಚಾರಿಕ ಕುರುಡುಗಳಿಗೆ ಒಳಗಾದದ್ದೂ ಸಹಜವೇ. ಅವುಗಳ ಸೂಕ್ಷ್ಮ ನಿರೂಪಣೆಗಳೂ ಇಲ್ಲಿನ ಹಲವು ಲೇಖನಗಳಲ್ಲಿ ಇರುವುದನ್ನು ನೀವು ಗಮನಿಸಬಹುದು. ಹಾಗೇ ತುಂಬಾ ಹತ್ತಿರಕ್ಕೆ ಬಂದು ಅವರನ್ನು ಮುಟ್ಟಿ ನೋಡದವರ ಸ್ವಲ್ಪ ಉತ್ಪ್ರೇಕ್ಷೆಯ ನೋಟಗಳೂ ಇಲ್ಲಿವೆ. ಇವರ ಜೊತೆಗಾರರಾಗಿದ್ದ ತೇಜಸ್ವಿ, ನಂಜುಂಡಸ್ವಾಮಿ, ಲಂಕೇಶರು ಸಾಹಿತಿಯಾಗಿಯೋ, ಸಂಘಟನಕಾರರಾಗಿಯೋ ಅಥವಾ ಪತ್ರಕರ್ತರಾಗಿಯೋ ಸಾರ್ವಜನಿಕ ಮಹತ್ವ ಗಳಿಸಿದ್ದವರು. ಆದರೆ ಇಂತಹ ಯಾವುದೇ ಸಾರ್ವಜನಿಕ ಮಹತ್ವದ ಸ್ಥಾನವಿಲ್ಲದ, ಬರೀ ಪ್ರತಿಭಟನಾಕಾರರಾಗಿ ಕರ್ನಾಟಕದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನಮನ ಗೆದ್ದ ಏಕೈಕ ವ್ಯಕ್ತಿ ಎಂದರೆ ರಾಮದಾಸ್‌ರೇ ಎಂದು ಕಾಣುತ್ತದೆ. ಈ ನಾಲ್ವರಲ್ಲಿ ಇವರು ಕೊನೆಯವರಾಗಿ ನಿರ್ಗಮಿಸಿ ಶೂನ್ಯವನ್ನು ಸೃಷ್ಟಿಸಿದ್ದೂ ಅವರು

ಸಾರ್ವಜನಿಕ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿತ್ತೆಂದು ತೋರುತ್ತದೆ. ಹಾಗಾಗಿಯೇ ಈ ತಲ್ಲಣ, ಸಂಪುಟ ರೂಪಿಸುವ ಈ ತುರ್ತು.

ಅದೇನೇ ಇರಲಿ, ರಾಮದಾಸ್ ಬರೀ ಪ್ರತಿಭಟನಾಕಾರ ಅಥವಾ ಪರಿಣಾಮಕಾರಿ ವಾಕ್ಪಟು ಮಾತ್ರವಾಗಿರಲಿಲ್ಲ. ಅವರಿಗೊಂದು ಖಾಸಗಿ ವ್ಯಕ್ತಿತ್ವವೂ ಇತ್ತು.ಅವರ ಕೌಟುಂಬಿಕ ಮುಖಗಳ ಹಲವು ಚಹರೆಗಳನ್ನು ಅವರ ಪತ್ನಿ, ಮಗಳು ಮತ್ತು ಅಳಿಯ ಇಲ್ಲಿ ಚಿತ್ರಿಸಿದ್ದಾರೆ. ಹಾಗೇ 'ನೇರ ಮಾತು' ವಿಭಾಗದಲ್ಲಿ ರಾಮದಾಸ್‌ರಲ್ಲಿ ಹೇಗೆ ಒಳ್ಳೆಯ ಲವಲವಿಕೆಯ, ಸ್ವಾರಸ್ಯಕರ ಗದ್ಯಕಾರನೂ ಇದ್ದ ಎಂಬುದನ್ನು ಪರಿಚಯಿಸುವ ನಾಲ್ಕಾರು ಲೇಖನಗಳಿವೆ. ಇನ್ನು 'ಮುಖಾಮುಖಿ'ಯಲ್ಲಿ ಅವರ ವಿಚಾರಗಳು ತಮ್ಮದೇ ವಿಶಿಷ್ಟತೆಗಳೊಂದಿಗೆ ಹರಳುಗಟ್ಟಲು ಪ್ರಯತ್ನಿಸಿರುವುದನ್ನು ಕಾಣಬಹುದು.

ಇನ್ನು 'ಪ್ರಚಲಿತ' ವಿಭಾಗದಲ್ಲಿ ರಾಮದಾಸ್‌ರಿಗೆ ಪ್ರಿಯವಾಗಿದ್ದ ಚರ್ಚೆಯ ವಿಷಯಗಳಾದ ವೈಜ್ಞಾನಿಕ ಮನೋಭಾವ, ಜಾತಿ ಪದ್ಧತಿ, ಕೋಮುವಾದ, ಸೆಕ್ಯುಲರಿಸಂ ಮತ್ತು ಸಮಾಜವಾದಿ ಆಂದೋಲನ ಕುರಿತು ಪರಿಣತರು ಬರೆದಿರುವ ಲೇಖನಗಳಿವೆ. ಇದು ಸಂಪುಟದ ಪೂರಕ ಭಾಗ. ಆದರೆ ಈ ಲೇಖನಗಳಲ್ಲಿನ ನಿಲುವುಗಳನ್ನು ರಾಮದಾಸ್ ಅವರು ಎಷ್ಟರಮಟ್ಟಿಗೆ ಒಪ್ಪುತ್ತಿದ್ದರೋ ನಾವು ಹೇಳಲಾರೆವು. ಹಾಗೇ ಅಲ್ಲಿರುವ ವಿಚಾರಗಳನ್ನು ಸಂಪಾದಕೀಯ ಮಂಡಳಿ ಒಪ್ಪುತ್ತದೆ ಎಂದೇನೂ ಅಲ್ಲ. ಅಲ್ಲದೆ ಈ ಲೇಖನಗಳು ಸಂಪುಟ ತಡವಾದದ್ದರಿಂದ ಹಳತೂ ಆಗತೊಡಗಿವೆ.

ಹೀಗೆ ರಾಮದಾಸ್‌ರ ನೆನಪಿನ ಸಂಪುಟವನ್ನು ಅವರ ವರ್ಣಮಯ ವ್ಯಕ್ತಿತ್ವವನ್ನು ಹಿಡಿದಿಡುವ ಪ್ರಯತ್ನವಾಗಿ ನೋಡಿದರೆ, ಅದು ಯಶಸ್ವಿಯಾಗಿದೆ ಎಂದೇ ಹೇಳಬಹುದೇನೋ. ಆದರೆ ಈ ಸಂಪುಟವನ್ನು ಸಿದ್ಧಪಡಿಸಲು ಕೂತಾಗ ನಮ್ಮ ಉದ್ದೇಶವಿದ್ದುದು ಏನು ಎಂಬುದನ್ನು ಇಲ್ಲಿ ಸೂಚಿಸಬಯಸುತ್ತೇವೆ. ರಾಮದಾಸರ ವ್ಯಕ್ತಿತ್ವವನ್ನು, ಅವರ ಚಟುವಟಿಕೆಗಳ ಮೂಲಕ ಕಟ್ಟಿಕೊಡುವಾಗ; ಆ ಕಾಲದ ಜನಪರ ಹೋರಾಟದ ಸ್ವರೂಪವನ್ನು ಪರಿಚಯ ಮಾಡಿಕೊಡುತ್ತಾ, ಅದರ ಶಕ್ತಿ ದೌರ್ಬಲ್ಯಗಳೆರಡನ್ನೂ ನಿರೂಪಿಸುವ ಮೂಲಕ ಈ ಹೋರಾಟ ಪರಂಪರೆಗೆ ಒಂದು ಆತ್ಮವಿಮರ್ಶೆಯ ಆಯಾಮ ನೀಡುವುದೇ ಆಗಿತ್ತು. ಆದರೆ ಈ ಉದ್ದೇಶ ಕೆಲವು ಲೇಖನಗಳಲ್ಲಿ ಅಲ್ಲಲ್ಲಿ ಪ್ರತಿಫಲಿತವಾಗಿದೆಯಾದರೂ ಒಟ್ಟಾರೆ ಅದು ಸಾಧಿತವಾಗಿದೆ ಎಂದು ಹೇಳಲಾರೆವು. ನಾವು ಒಬ್ಬ ವ್ಯಕ್ತಿ ಬದುಕಿದ್ದಾಗ ಆಡಬಲ್ಲ ಮಾತುಗಳನ್ನು, ಆತ ಕಣ್ಮರೆಯಾದ ನಂತರ ಆಡಲಾಗದವರು. ಅದು ನಮ್ಮ "ಸಂಸ್ಕೃತಿ". ಈ 'ಸಂಸ್ಕೃತಿ'ಯಿಂದಾಗಿ ಇಲ್ಲಿ ರಾಮದಾಸ್‌ರ ವ್ಯಕ್ತಿತ್ವ ಮತ್ತು ಹೋರಾಟಗಳೆರಡೂ ಏಕಮುಖವಾಗಿಯೇ ಚಿತ್ರಿತವಾಗಿದೆ ಎಂಬ ಅನುಮಾನ ನಮ್ಮದು. ಇದಕ್ಕೆ ಇನ್ನೊಂದು ಕಾರಣ, ಅವರನ್ನು ಒಳಹೊಕ್ಕು ನೋಡಿದವರಾಗಿದ್ದ; ಹಾಗಾಗಿ ಅವರನ್ನು ವಿಮರ್ಶೆಗೆ ಒಡ್ಡಬಲ್ಲವರಾಗಿದ್ದ ಹಲವರು ತಮ್ಮದೇ ಕಾರಣಗಳಿಂದಾಗಿ ಈ ಸಂಪುಟಕ್ಕೆ ಬರೆಯದಿರುವುದು.

ಹಾಗಾಗಿ ಇಲ್ಲಿ ರಾಮದಾಸ್ ಸಾರಾಸಗಟಾಗಿ 'ಹೀರೋ' ಆಗಿಯೇ ಚಿತ್ರಿತವಾಗಿರುವ ಸಂಭವವಿದೆ. ಆದರೆ ಅವರನ್ನು ಹತ್ತಿರದಿಂದ ಬಲ್ಲವರಿಗೆ ಅವರು ಎಲ್ಲ ಸಂದರ್ಭಗಳಲ್ಲೂ ಹೀರೋ ಏನೂ ಆಗಿರಲಿಲ್ಲ ಎಂಬುದೂ ಗೊತ್ತಿದೆ. ಎಲ್ಲ ಸಾಮಾನ್ಯ ಮನುಷ್ಯರಂತೆ ಅವರು ಅಹಂಕಾರಿಯಾಗಿಯೂ, ಕೆಟ್ಟ ಹಠವಾದಿಯಾಗಿಯೂ, ಅತಿ ವೈಯಕ್ತಿಕವಾದಿಯಾಗಿಯೂ, ಕುರುಡು ವ್ಯಕ್ತಿ ನಿಷ್ಠೆಯಿಂದಲೂ ವರ್ತಿಸಿದ ಹಲವು ಸಂದರ್ಭಗಳುಂಟು. ಮೈಸೂರಿನ ಹಲವು ಗೆಳೆಯರು ಅವರ ಮುಂಗೋಪ, ಅಸಹನೆ, ಸಿಟ್ಟು, ಸೆಡವು ಮತ್ತು ಅಸಮರ್ಥನೀಯ ಆರೋಪ ಮತ್ತು ಕಟು ಟೀಕೆಗಳಿಂದ ನೊಂದು ಅವರಿಂದ ಕೆಲವರು ದೀರ್ಘಕಾಲಿಕವಾಗಿ, ಇನ್ನು ಕೆಲವರು ಶಾಶ್ವತವಾಗಿ ದೂರವಾದ ಸಂದರ್ಭಗಳೂ ಉಂಟು. ಇದರಿಂದಾಗಿ ಅವರೇ ರೂಪಿಸುತ್ತಿದ್ದ, ಪೋಷಿಸುತ್ತಿದ್ದ, ಬೆಂಬಲಿಸಿ ಭಾಗವಹಿಸುತ್ತಿದ್ದ ಅನೇಕ ಕಾರ್ಯಕ್ರಮಗಳಿಗೆ, ಆಂದೋಲನಗಳಲ್ಲದೆ ಸಾಕಷ್ಟು ಹಾನಿಯೂ ಆಗಿದೆ. ಅವರಿಗೆ ಎಲ್ಲರಿಗಿದ್ದಂತೆ ಸಣ್ಣಪುಟ್ಟ ಸಾರ್ವಜನಿಕ ಆಸೆಗಳಿದ್ದುವಾದರೂ (ಅವರ ರಾಜಕೀಯ ಸ್ನೇಹಿತರೇ ಉದ್ದೀಪಿಸಿದ್ದ ಎಂ.ಎಲ್.ಸಿ ಗಿರಿ ಅಥವಾ ಕೆಪಿಎಸ್‌ಸಿ ಸದಸ್ಯತ್ವ ಇತ್ಯಾದಿ), ಯಾವುದೇ ಆಂದೋಲನವನ್ನು ತಮ್ಮ ಯಾವುದೇ ಸ್ವಾರ್ಥಕ್ಕೆ ಅವರು ಬಲಿಗೊಡದಷ್ಟು Integrity ಇದ್ದ ಮನುಷ್ಯರಾಗಿದ್ದುದರಿಂದ ! ಇಂತಹ ಹಾನಿಗಳನ್ನು ಅವರ ಗೆಳೆಯರು ಮನಸ್ಸಿಗೆ ಹಾಕಿಕೊಳ್ಳದೇ ಅವರ ಕೊನೆಯ ದಿನದವರೆಗೂ ಅವರ ಜೊತೆಗೆ ಕೈಗೂಡಿಸಿ ನಡೆದಿದ್ದಾರೆ. ಹೀಗೆ ರಾಮದಾಸ್ ಎಂಬ 'ಉರಿದ ಪಂಜು'ಗೆ ಇಂಧನಗಳು ಹಲವಾರು !

ಆದರೂ ಇವನ್ನೆಲ್ಲ ಲೆಕ್ಕಕ್ಕೆ ತೆಗೆದುಕೊಳ್ಳದೆ, ಒಬ್ಬ ಮನುಷ್ಯನ ವ್ಯಕ್ತಿತ್ವವನ್ನು ಮತ್ತು ಆ ವ್ಯಕ್ತಿತ್ವ ರೂಪಿಸಿದ ಮತ್ತು ಭಾಗವಹಿಸಿದ ಸಾರ್ವಜನಿಕ ಜೀವನವನ್ನು ಸರಿಸುಮಾರಾಗಿಯೂ ಅಂದಾಜು ಮಾಡಲಾಗದು. ಸತ್ತ ಮೇಲೆ ಒಬ್ಬ ವ್ಯಕ್ತಿಯ ಬಗ್ಗೆ ಕೆಟ್ಟ ಮಾತನಾಡಬಾರದೆಂಬುದು ನಮ್ಮ ಸತ್ಸಂಪ್ರದಾಯ. ಇದನ್ನು ವ್ಯಕ್ತಿಯ ಮಟ್ಟಿಗೆ ಆದರಿಸಬಹುದು. ಆದರೆ ನಾವು ಈ ಸಂಪುಟದ ಮೂಲಕ ಪ್ರಸ್ತುತಪಡಿಸ ಹೊರಟದ್ದು ರಾಮದಾಸ್‌ರನ್ನು ಓರ್ವ ವ್ಯಕ್ತಿಯನ್ನಾಗಿ ಮಾತ್ರವಲ್ಲ; ಒಂದು ಕಾಲದ ಜನಪರ ಹೋರಾಟದ ಒಂದು ಪ್ರತೀಕವಾಗಿ ಕೂಡಾ. ಅದು ಇಲ್ಲಿ ನಾವು ಉದ್ದೇಶಿಸಿದಷ್ಟು ಸ್ಫುಟವಾಗಿ ಮೂಡಿಬಂದಿಲ್ಲ ಎಂಬ ಅಳುಕಿನೊಂದಿಗೆ ಈ ಸಂಪುಟವನ್ನು ನಿಮ್ಮ ಕೈಗಿಡುತ್ತಿದ್ದೇವೆ. ಆದರೆ ಒಟ್ಟಾರೆಯಾಗಿ ಒಂದು ಕಾಲದ ಸಾಮಾಜಿಕ ಚರಿತ್ರೆಯ ಒಂದು ಮುಖವನ್ನಾದರೂ ಸ್ಥೂಲವಾಗಿಯಾದರೂ ಇದು ಕಟ್ಟಿ ಕೊಟ್ಟಿದೆ ಎಂದು ಭಾವಿಸಿದ್ದೇವೆ.

ಈ ಸಂಪುಟವನ್ನು ಸಂಕಲಿಸುವಲ್ಲಿ ನೆರವಾದವರು ಹಲವಾರು ಜನ. ಮೊದಲಿಗೆ ಈ ಸಂಪುಟಕ್ಕಾಗಿ ಲೇಖನಗಳನ್ನು ಬರೆದುಕೊಟ್ಟ ಮತ್ತು ತಮ್ಮ ಪ್ರಕಟಿತ ಲೇಖನಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಎಲ್ಲ ಲೇಖಕರಿಗೆ ನಮ್ಮ ಕೃತಜ್ಞತೆಗಳು. ಹಾಗೇ ರಾಮದಾಸ್ ಮತ್ತು ಪತ್ನಿ ನಿರ್ಮಲಾರ ಲೇಖನಗಳನ್ನೂ, ಕವಿತೆಗಳನ್ನೂ ಪತ್ರಿಕಾ ಹೇಳಿಕೆಗಳನ್ನೂ, ಚಿತ್ರಗಳನ್ನು ಒದಗಿಸಿದ ಅವರ ಮಗಳು ಸ್ನೇಹ ಮತ್ತು ಅಳಿಯ ಓಂಕಾರ್‌ಗೆ ಮತ್ತು ಇವೆಲ್ಲವನ್ನು ಸಂಗ್ರಹಿಸಿ

ಸಂಪಾದಕರಿಗೆ ಜೋಡಿಸಿಕೊಟ್ಟ ಕೆ. ಮುದ್ದುಕೃಷ್ಣ ಅವರನ್ನು ಹಾಗೂ ಪ್ರಕಾಶಕರಾದ ಅಭಿರುಚಿ ಗಣೇಶರನ್ನು ಇಲ್ಲಿ ನೆನೆಯಬೇಕು. ಅಷ್ಟೇ ಅಲ್ಲ ಸಂಪುಟಕ್ಕೆ ಅರ್ಥಪೂರ್ಣ ಮುಖಪುಟ ವಿನ್ಯಾಸ ಮಾಡಿಕೊಟ್ಟ ಸುಧಾಕರ ದರ್ಬೆ ಹಾಗೂ ಇಲ್ಲಿನ ಕೆಲವು ಲೇಖನಗಳನ್ನು ಪ್ರಕಟಿಸಿದ ಲಂಕೇಶ್ ಪತ್ರಿಕೆ, ಕನ್ನಡ ಟೈಮ್ಸ್, ಅಗ್ನಿ, ಬಹುಮತ ಮತ್ತು ಆಂದೋಲನ ಮುಂತಾದ ಪತ್ರಿಕೆಯ ಸಂಪಾದಕರುಗಳಿಗೆ ಹಾಗೂ ಅಂದವಾಗಿ ಮುದ್ರಿಸಿಕೊಟ್ಟಿರುವ ವಿಶ್ವಾಸ್ ಪ್ರಿಂಟ್ಸ್‌ನವರಿಗೂ ನಮ್ಮ ನಮನಗಳು.

ಡಿ.ಎಸ್. ನಾಗಭೂಷಣ
ಸಂಪಾದಕ ಮಂಡಳಿ ಪರವಾಗಿ

# ನಮ್ಮ ರಾಮನೇ ಬೇರೆ...

ನಮ್ಮ ರಾಮನ ಜನ್ಮಭೂಮಿ
ಕನ್ನಡ ದೇಶದ ಅಪ್ಪಟ ಮಲೆನಾಡು
ದಾದಿ ಅಮ್ಮ ಲೋಕಮಾತೆ
ಕೇವಲ ಅವಳ ಕಣ್ಣ ಆರೈಕೆ
ಮಳೆಗೆ ಕರಗಿ ಕುಸಿವ ಗೋಡೆ
ಸೋರುವ ಸೂರು
ನಿರ್ಭೀತಿ, ನೀರವ ಮೌನ ಕಲಿಸಿತು
ಮಲೆನಾಡ ಕಾಡು.

ಬಾಲ್ಯದಲ್ಲಿ ಚಂದ್ರಾಮನ್ನ ಕೇಳಲಿಲ್ಲ
ಒಮ್ಮೆ ಕಬ್ಬಿನ ಜಲ್ಲೆ ಕೇಳಿದ
ಕಬ್ಬುಳ್ಳ ಕಿಲಾಡಿ ಇವನ
ಕಿವಿಯ ಓಲೆ ಮೇಲೇ ಕಣ್ಣಿಟ್ಟ.
ನಮ್ಮ ರಾಮ ತೆಪ್ಪಗೆ ಬಿಚ್ಚಿ ಕೊಟ್ಟ !

ಇನ್ನೊಮ್ಮೆ ಶ್ವೇತಛತ್ರಗಳ ಕಂಡರಿಯದ ನಮ್ಮ ರಾಮನ
ಕೊಡೆ ಕದ್ದರು, ಯಾರೋ ಪುಣ್ಯಾತ್ಮರು
ಸಿಟ್ಟಿಗೆ ಕೊಡೆಯಂಗಡಿಯಿಂದ
ಹೊಸ ಕೊಡೆಯನ್ನೇ ಎಗರಿಸಿದ ನಮ್ಮ ರಾಮ !
ಅಷ್ಟು ದೂರ ಹೋಗಿ ಕೊಡೆ ಬಿಡಿಸಿ ನೋಡಿದ
ಹೊಸ ಕೊಡೆಯ ಒಳಗೆಲ್ಲ
ಹರಿದ ರಂಧ್ರಗಳ ತುಂಬ
ಬೆಳ್ಳನೆಯ ಆಕಾಶ ಬೇಕಾದಷ್ಟು ಕಂಡ
ಆ ಇಕ್ಕಟ್ಟಿನೊಳಗೇ ಬೆಳೆಯಬೇಕೆಂಬುದ ಕಂಡುಕೊಂಡ.

ಧೈರ್ಯದ ಬಳಿ ಭಯ ಸುಳಿವುದುಂಟೆ ?
ಭಯಕ್ಕೆ ಎಂಟೆದೆ ಬೇಕಾಗಿತ್ತು
ರಾಮನ ಬಳಿ ಸುಳಿಯಲು
ನಿಷ್ಠುರಿಯ ಮಾತ ರಣಕಹಳೆ ಮೊಳಗು
ಮುಲಾಜಿ ಗಿಲಾಜಿಗಿಲ್ಲ ಇವನ ಬಳಿ ಇಲಾಜು
ನಮ್ಮ ರಾಮನೇ ಬೇರೆ.

ಗಾಳಿಯನ್ನುಸಿರಾಡಿದ್ದಿಲ್ಲ ನಮ್ಮ ರಾಮ
ಪ್ರಜಾಪ್ರಭುತ್ವವೇ ಉಚ್ಛ್ವಾಸ
ವೈಚಾರಿಕತೆಯ ನಿಶ್ವಾಸ
ನಿಷ್ಠುರತೆಯೇ ಉಚ್ಛ್ವಾಸ
ಆತ್ಮವಿಶ್ವಾಸ ನಿಶ್ವಾಸ
ನಿತ್ಯ ನಿರಂತರ ಬಂಡುಕೋರ
ನಮ್ಮ ರಾಮನೇ ಬೇರೆ.

ನಮ್ಮ ರಾಮನ ಬಳಿ
ಬತ್ತಲಾರದ ಬತ್ತಳಿಕೆ ತುಂಬ ವಿವಿಧಾಸ್ತ್ರಗಳು.
ವ್ಯವಸ್ಥೆಯ ವಿರುದ್ಧಾಸ್ತ್ರ
ಜಾತೀಯತೆಯ ವಿರುದ್ಧಾಸ್ತ್ರ
ಭ್ರಷ್ಟತೆಯ ವಿರುದ್ಧಾಸ್ತ್ರ
ಸಿದ್ಧ ಏಕಾಂಗಿ ಎದೆ ಸೆಟೆದು ಪ್ರಯೋಗಿಸುವ ಕಲಿ
ಎದುರಿದ್ದವರ ಎದೆಗಷ್ಟೇ ನೇರಗುರಿ.

ನಮ್ಮ ಬಂಡುಕೋರ ರಾಮನ
ಬಳಿಯಿದ್ದದ್ದು ಒಂದೇ ಮಾರಕಾಸ್ತ್ರ
ಅಂಗೈಯಲ್ಲಿ ಮುಚ್ಚಿದ Matchbox
ಅದಕ್ಕೆ ಏಕೈಕ ಬಲಿ ಚಾರ್ಮ್ಸ್ ಸಿಗರೇಟ್
'ಇದೇನು ಸಾರ್' ಅನ್ನುವವರಿಗೆ
'ಅದೆಲ್ಲ ಬಿಡ್ರೀ' ಎಂಬ ರೆಡಿಮೇಡ್ ಉತ್ತರ
ಸಿಗರೇಟ್ ಹೊಗೆ ಬಾಯ್ತುಂಬ ನಗೆ
ಚೆಲ್ಲುತ್ತಿದ್ದ ನಮ್ಮ ರಾಮನೇ ಬೇರೆ.

ನಿರ್ಮಲಾಂತಃಕರಣದ ಮಡದಿ ಜೊತೆಗೂಡಿ
ಜಾತಿಗಿಂತ ನೀತಿ ಮುಖ್ಯ, ಪ್ರೀತಿ ಮುಖ್ಯ ಎಂದು ಹಾಡಿ
ಗುಣಶಾಲಿ ಮದ್ದು ನೀಡಿ ಒಲುಮೆಯ ಚಿಲುಮೆಯುಕ್ಕಿಸಿದ
ಕಲ್ಮಶವುಳ್ಳವರ ಒಳಗನ್ನು ತೊಳೆಯುತ್ತಿದ್ದ
ತನ್ನಂತೆ ಬಾಲ್ಯವುಂಡವರ ಬಾಳಿಗೆ
ಬೆಳಕಿನ ಪಂಜು ಹಿಡಿದ
ನಮ್ಮ ರಾಮನೇ ಬೇರೆ.

- ಅಗ್ರಹಾರ ಕೃಷ್ಣಮೂರ್ತಿ

# ಪರಿವಿಡಿ

## ನಮ್ಮ ರಾಮದಾಸ್

ನಮ್ಮ ಮೇಸ್ಟ್ರು



ಮನೆಯಂಗಳ

# ನಮ್ಮ ರಾಮದಾಸ್

# ದಣಿವರಿಯದ ಹೋರಾಟಗಾರ

ಡಾ. ಕೆ. ಮರುಳಸಿದ್ದಪ್ಪ

ಕರ್ನಾಟಕದಲ್ಲಿ ಅರವತ್ತು ಮತ್ತು ಎಪ್ಪತ್ತರ ದಶಕಗಳನ್ನು ಜಾಗೃತ ಕಾಲವೆಂದು ಗುರುತಿಸಿದರೆ, ಈ ಜಾಗೃತಿಯ ಕೇಂದ್ರಬಿಂದು ಶಿವಮೊಗ್ಗ ಜಿಲ್ಲೆಯಾಗಿತ್ತು. ಶಾಂತವೇರಿ ಗೋಪಾಲಗೌಡರ ನಾಯಕತ್ವದಲ್ಲಿ ಆರಂಭವಾದ ಸಮಾಜವಾದಿ ಚಳವಳಿಯ ಫಲವಾಗಿಯೇ ಹುಟ್ಟಿದ ಕಾಗೋಡು ಸತ್ಯಾಗ್ರಹ, ಮತ್ತು ಅವರ ಸ್ಫೂರ್ತಿಯಿಂದಲೇ ಮುಂದೆ ರೂಪು ಪಡೆದ ರೈತ ಚಳವಳಿ, ಗೋಕಾಕ್ ಚಳವಳಿ, ದಲಿತ ಚಳವಳಿ... ಇವೆಲ್ಲವೂ ಈಗ ನಮ್ಮ ಚರಿತ್ರೆಯ ಪುಟಗಳನ್ನು ಸೇರಿಹೋಗಿವೆ;ಅಥವಾ ನಾಮಮಾತ್ರವಾಗಿ ಉಳಿದಿವೆ. ಇಪ್ಪತ್ತನೆಯ ಶತಮಾನದ ಕೊನೆಯ ಭಾಗದವರೆಗೂ ಪ್ರಖರವಾಗಿದ್ದ ಚಳವಳಿಗಳು ಬರಬರುತ್ತ ನಿಸ್ತೇಜಗೊಂಡವು. ಈಗ ಅನೇಕ ಚಳವಳಿಗಳು ಲಾಭದಾಯಕ ದಂಧೆಗಳಾಗಿ ರಾಜಕಾರಣಿಗಳ ಸಾಧನವಾಗಿಬಿಟ್ಟಿವೆ. ಈ ಪ್ರಕ್ರಿಯೆ ಹಿಂದಿರುವ ಜಾಗತಿಕ ಹಾಗೂ ರಾಷ್ಟ್ರ ರಾಜಕಾರಣದ ಒತ್ತಡ ಹಾಗೂ ಪ್ರಭಾವಗಳೇನೇ ಇರಲಿ, ಇಂದಿನ ಕರ್ನಾಟಕವು ಮಾತ್ರ ಸಾಂಸ್ಕೃತಿಕವಾಗಿ ರಾಜಕೀಯವಾಗಿ ಹಿನ್ನಡೆಯ ಕಾಲದಲ್ಲಿದೆ ಎಂಬುದಕ್ಕೆ ಪುರಾವೆಗಳೇನೂ ಬೇಕಿಲ್ಲ. ಸಾಹಿತ್ಯ, ಕಲೆ, ರಾಜಕೀಯ, ಯಾವುದೇ ನೆಲೆಯಿಂದ ನೋಡಿದರೂ ಭರವಸೆಯೇ ಕಾಣದ, ಈ ಕಾಲದಲ್ಲಿ ಎಪ್ಪತ್ತರ ದಶಕದ ಸಾಂಸ್ಕೃತಿಕ ಹೋರಾಟದ ಮುಂಚೂಣಿಯಲ್ಲಿದ್ದ ಒಂದೊಂದು ನಕ್ಷತ್ರಗಳೂ ಕಳಚಿ ಬೀಳತೊಡಗಿವೆ. ಇತ್ತೀಚೆಗೆ ತಾನೆ ನಮ್ಮನ್ನು ಅಗಲಿದ ಪ್ರೊ.ಕೆ. ರಾಮದಾಸ್ ಇಂತಹ ಅಪೂರ್ವ ಪ್ರಗತಿಪರ ವಿಚಾರವಾದಿ ಹೋರಾಟಗಾರರಲ್ಲಿ ಒಂದು ಜ್ವಲಂತ ತಾರೆಯಾಗಿ ನಮ್ಮ ನೆನಪಿನಲ್ಲಿ ಉಳಿದಿರುತ್ತಾರೆ.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರೂ ಅವರ ಕಾರ್ಯಕ್ಷೇತ್ರ ಸಾಮಾಜಿಕವಾಗಿತ್ತು. ಜನಪ್ರಿಯ ಅಧ್ಯಾಪಕರಾಗಿದ್ದ ಅವರು ತಮ್ಮ ಪಾಠಗಳಂತೆಯೇ, ಸ್ವಂತ ವ್ಯಕ್ತಿತ್ವದ ಪ್ರಭಾವದಿಂದಲೂ ಸಾವಿರಾರು ವಿದ್ಯಾರ್ಥಿಗಳನ್ನು ಆಕರ್ಷಿಸಿದ್ದರು;ಅವರು

ರೂಪಿಸುತ್ತಿದ್ದ ಸಾಮಾಜಿಕ ಚಳವಳಿಗೆ ಈ ವಿದ್ಯಾರ್ಥಿಗಳು ಸಹಜವಾಗಿಯೇ ಬಂದು ಸೇರಿಕೊಳ್ಳುತ್ತಿದ್ದರು. ಅಸ್ಖಲಿತವಾದ ಅವರ ಮಾತಿನ ಮೋಡಿಗೆ, ವೈಚಾರಿಕ ಸ್ಪಷ್ಟತೆಗೆ ನಿದರ್ಶನವಾಗಿ ತೋರಿಸಲು ವ್ಯಕ್ತಿಗಳು ತೀರಾ ವಿರಳವಾಗಿ ದೊರೆಯುತ್ತಾರೆ. ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ವಿಶ್ಲೇಷಿಸಿ ಆಗಾಗ, ವಿಶೇಷವಾಗಿ 'ಲಂಕೇಶ್ ಪತ್ರಿಕೆ'ಗೆ ಲೇಖನಗಳನ್ನು ಬರೆಯುತ್ತಿದ್ದರಾದರೂ, ಅವರಿಗೆ ಬರಹಗಾರನೆಂಬ ಹೆಸರು ಪಡೆಯುವ ಹಂಬಲವಿರಲಿಲ್ಲ. ಶಿಕ್ಷಣ, ಸಮಾಜ, ಸಾಹಿತ್ಯ ಹೀಗೆ ಯಾವುದೇ ಆಗುಹೋಗುಗಳಿಗೆ ತತ್‌ಕ್ಷಣ ಪ್ರತಿಕ್ರಿಯಿಸಿ, ಚಳವಳಿಗಳನ್ನು ರೂಪಿಸುತ್ತಿದ್ದ ಅವರ ಬದುಕಿನ ಕ್ರಮ ಅನನ್ಯವಾದುದು. ಮೈಸೂರು ನಗರದ ಪ್ರತಿಷ್ಠಿತರ ಪಾಲಿಗೆ ರಾಮದಾಸ್ ಮತ್ತವರ ಗೆಳೆಯರ ಬಳಗ, ಕಳೆದ ನಾಲ್ಕು ದಶಕಗಳಿಂದ ದುಃಸ್ವಪ್ನವಾಗಿ ಕಾಡುತ್ತಿದ್ದರು. ಈ ಪ್ರತಿಷ್ಠಿತರಲ್ಲಿ ಕೆಲವರಾದರೂ, ರಾಮದಾಸ್ ಸಾವಿನಿಂದ ಬಿಡುಗಡೆಯ ನಿಟ್ಟುಸಿರು ಬಿಟ್ಟಿರಬಹುದು. ಶಿವಮೊಗ್ಗ ಜಿಲ್ಲೆಯ ಸಾಗರದ ಶಾಲಾದಿನಗಳಲ್ಲಿಯೇ ಸಮಾಜವಾದಿ ಆಂದೋಲನದ ಪರಿಸರದಲ್ಲಿ ಬೆಳೆದ ರಾಮದಾಸರಿಗೆ ಶಿವಮೊಗ್ಗ ಕಾಲೇಜಿಗೆ ಸೇರಿದಾಗ ತೇಜಸ್ವಿ, ಲಂಕೇಶರ ಒಡನಾಟ ದೊರೆಯಿತು. ಮುಂದೆ ಮೈಸೂರಿನ ಮಹಾರಾಜ ಕಾಲೇಜಿಗೆ ವಿದ್ಯಾರ್ಥಿಯಾಗಿ, ಬಳಿಕ ಅಧ್ಯಾಪಕರಾಗಿ ಸೇರಿದ ಮೇಲೆ, ಪ್ರೊ. ನಂಜುಂಡಸ್ವಾಮಿಯವರ ಪ್ರಭಾವಕ್ಕೂ ಒಳಗಾದರು. ಅವರೆಲ್ಲರ ಜೊತೆಗೂಡಿ ರಾಮದಾಸ್ ರೂಪಿಸಿದ ಚಳವಳಿಗಳು, ಹಮ್ಮಿಕೊಂಡ ಪ್ರಗತಿಪರ ಕಾರ್ಯಕ್ರಮಗಳು, ಮುಂದಿನ ಮೂರು ನಾಲ್ಕು ದಶಕಗಳ ಕಾಲ ಕರ್ನಾಟಕದ ವಿಚಾರವಾದಿ ಚಿಂತನಾ ಪರಂಪರೆಯನ್ನು ಕಟ್ಟಿ ಬೆಳೆಸಿವೆ. ರೈತ ಚಳವಳಿ, ಬರಹಗಾರರ ಒಕ್ಕೂಟ, ಸಮಾಜವಾದಿ ಯುವಜನ ಸಭಾ, ಜಾತಿ ವಿನಾಶ ಚಳವಳಿ ಹೀಗೆ ಹತ್ತಾರು ಪ್ರಗತಿಪರ ಚಳವಳಿಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದ ಪ್ರೊ. ರಾಮದಾಸರಿಗೆ, ಅವುಗಳಲ್ಲೆಲ್ಲಾ ಅತ್ಯಂತ ಪ್ರಿಯವಾದ ಕ್ಷೇತ್ರವೆಂದರೆ, ಜಾತಿ ವಿನಾಶ ಚಳವಳಿಯಾಗಿತ್ತು. ಅವರ ನೇತೃತ್ವದಲ್ಲಿ ನೂರಾರು ಅಂತರಜಾತಿ ವಿವಾಹಗಳಾಗಿವೆ. ಕೋಮುವಾದದಂತೆಯೇ ಜಾತಿವಾದವೂ ಅಪಾಯಕಾರಿಯೆಂದು ಹೇಳುತ್ತಿದ್ದ ಲಂಕೇಶ್ ಮತ್ತು ರಾಮದಾಸರು ಕೆಲವೊಮ್ಮೆ ತಮ್ಮ ವಾದವನ್ನು ಅತಿರೇಕಕ್ಕೆ ಕೊಂಡೊಯ್ಯುತ್ತಿದ್ದರೆಂಬುದನ್ನು ನಾನು ಬಲ್ಲೆ. ಒಂದೇ ಜಾತಿಗೆ ಸೇರಿದ ಸ್ನೇಹಿತರು ಒಟ್ಟಾಗಿ ಕುಳಿತು ಮಾತಾಡಿದರೂ ತಪ್ಪು ಸಂದೇಶ ರವಾನೆಯಾಗಬಹುದೆಂದು ಒಮ್ಮೆ ಲಂಕೇಶರು ವಾದಿಸಿದಾಗ, ನಾನು ತೀವ್ರವಾಗಿ ಆಕ್ಷೇಪಿಸಿದ್ದುಂಟು. ಇಂತಹ ಸಂದರ್ಭದಲ್ಲೆಲ್ಲಾ ಲಂಕೇಶರನ್ನು ರಾಮದಾಸರು ಬೆಂಬಲಿಸುತ್ತಿದ್ದರಾದರೂ ಕೆಲವೊಮ್ಮೆ ನಿರ್ದಿಷ್ಟ ಪ್ರಕರಣಗಳ ಮಾನವೀಯ ಆಯಾಮ ಗೊತ್ತಾದರೆ ಮೆದುವಾಗುತ್ತಿದ್ದರು.

ಅಂತರಜಾತಿ ವಿವಾಹಗಳಿಗೆ ನಮ್ಮೆಲ್ಲರ ಬೆಂಬಲವಿದ್ದರೂ, ಮದುವೆಯೆಂಬುದು ತೀರಾ ಖಾಸಗಿ ಸಂಬಂಧವಾಗಿದ್ದು, ಅದರ ಬಗೆಗೆ ಮೂಗು ಹಾಕಿ ವ್ಯಾಖ್ಯಾನಿಸಲು ಅನ್ಯರಿಗೆ ಅವಕಾಶವಿರಬಾರದೆಂಬುದು ನನ್ನ ದೃಢವಾದ ನಂಬಿಕೆ. ಅಂತರಜಾತಿ ವಿವಾಹಗಳನ್ನು ಕಾನೂನುಬದ್ಧವಾಗಿಯೇ ಕಡ್ಡಾಯಗೊಳಿಸಬೇಕೆಂದು ಹೇಳಿದ ನಮ್ಮ ಮಾಜಿ ಪ್ರಧಾನಿ ಚೌಧರಿ

ಚರಣ ಸಿಂಗರನ್ನು ಈ ದೇಶದ ಮೇಲ್ವರ್ಗದ ಪತ್ರಕರ್ತರು ಎಂದೂ ಪ್ರಗತಿಪರನೆಂದು ಗುರುತಿಸಲೇ ಇಲ್ಲ. ಅವರನ್ನು ಒಂದು ಜಾತಿಯ ನಾಯಕನೆಂದೇ ಬಿಂಬಿಸಿದರು.

ಆದುದರಿಂದ ಮದುವೆಎಂಬುದು ಚಳವಳಿಯ ತಾತ್ವಿಕತೆಗಾಗಿ ಮಾಡಿಕೊಳ್ಳುವ ಸಂಬಂಧವಲ್ಲ;ಸ್ವಜಾತಿಯೊಳಗಿನ ಸಂಬಂಧವಿರಲಿ, ಅಂತರಜಾತಿ ವಿವಾಹವಿರಲಿ, ಹುಡುಗ-ಹುಡುಗಿ ಒಪ್ಪಿ ಲಗ್ನವಾಗಬೇಕೆಂದೂ, ಯಾವುದೇ ಬಗೆಯ ಶೋಷಣೆಗೆ ಮದುವೆಯ ವ್ಯವಹಾರದಲ್ಲಿ ಅವಕಾಶವಾಗಬಾರದೆಂದೂ ನನ್ನಂತಹವರ ನಂಬಿಕೆ;ಇದು ಲಂಕೇಶ್ ಮತ್ತು ರಾಮದಾಸರಿಗೆ ಸಾಂಪ್ರದಾಯಿಕವಾಗಿ ಕಾಣಿಸುತ್ತಿತ್ತು.

ಜಾತಿಯ ಬೇರುಗಳು ನಮ್ಮ ವ್ಯಕ್ತಿತ್ವದ ಆಳದಲ್ಲಿಯೇ ಹಾಸುಹೊಕ್ಕಾಗಿ ವ್ಯಾಪಿಸಿರುವಾಗ ಅವನ್ನು ಸಂಪೂರ್ಣವಾಗಿ ತೊಡೆದು ಹಾಕುವುದಕ್ಕಿಂತ ಅದನ್ನು ಉದಾತ್ತೀಕರಿಸಿ ಮಾನವೀಯ ಗೊಳಿಸಬಹುದೆಂಬುದು ನನ್ನ ನಂಬಿಕೆ.

ಜಾತಿಯು, ವ್ಯಕ್ತಿಗೆ ಅಹಂಕಾರದ ಅಸ್ತ್ರವಾಗಿ ಪರಿಣಮಿಸಿ, ಅನ್ಯರನ್ನು ದ್ವೇಷಿಸಲು ಅಥವಾ ತನ್ನವರು ಅಪಾತ್ರರಾಗಿದ್ದಾಗಲೂ ಪ್ರೋತ್ಸಾಹಿಸಲು ಕಾರಣವಾಗದಿದ್ದರೆ, ಅದು ಅಪಾಯಕಾರಿಯಲ್ಲವೆಂದು ನಾವು ವಾದಿಸಿದರೆ ಲಂಕೇಶರಾಗಲೀ ರಾಮದಾಸ್ ಆಗಲೀ ಒಪ್ಪುತ್ತಿರಲಿಲ್ಲ. ಆದರೂ ಇಂತಹ ವಾದ ವಿವಾದಗಳಲ್ಲಿ ರಾಮದಾಸ್ ಲಂಕೇಶರಂತೆ ಹಠಮಾರಿ ಯಾಗಿರಲಿಲ್ಲ. ನಮ್ಮ ಭಿನ್ನಾಭಿಪ್ರಾಯಗಳು ರಾಮದಾಸರೊಂದಿಗೆ ಸ್ನೇಹಕ್ಕೆ ಅಡ್ಡಿಯಾಗುತ್ತಿರಲಿಲ್ಲ. ವ್ಯಕ್ತಿಯೊಬ್ಬನ ಸಮಗ್ರ ವ್ಯಕ್ತಿತ್ವವನ್ನು ಪರಿಗಣಿಸಿ ಅವನೊಡನೆ ಅವರ ಸ್ನೇಹ ಸಂಬಂಧವಿರುತ್ತಿದ್ದ ಕಾರಣದಿಂದಲೇ ನಮ್ಮಂತವರು ದೀರ್ಘಕಾಲ ರಾಮದಾಸ್ ಸ್ನೇಹಿತರಾಗಿರಲು ಸಾಧ್ಯವಾಯಿತು.

ಮಠಾಧಿಪತಿಗಳು, ಮಂತ್ರಿ ಮಹೋದಯರನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸುತ್ತಿದ್ದ ರಾಮದಾಸರಿಗೆ ಕೆಲವರಾದರೂ ಮಠಾಧಿಪತಿಗಳೊಂದಿಗೆ ಆತ್ಮೀಯ ಸ್ನೇಹವಿತ್ತೆಂಬುದು ಕೆಲವರಿಗೆ ಆಶ್ಚರ್ಯದ ಸಂಗತಿಯಾಗಬಹುದು. ಜಾತ್ಯತೀತ ನಂಬಿಕೆಗೆ ಬದ್ಧರಾಗಿ ನಡೆ ನುಡಿಯಲ್ಲಿ ಅದನ್ನನುಸರಿಸಿ, ಪ್ರಗತಿಪರರನ್ನ ಪ್ರೋತ್ಸಾಹಿಸುತ್ತಿದ್ದ ಒಬ್ಬಿಬ್ಬ ಮಠಾಧಿಪತಿಗಳು ಆಗಾಗ ರಾಮದಾಸರನ್ನು ಸಲಹೆಗಳಿಗಾಗಿ ಸಂಪರ್ಕಿಸುವುದಿತ್ತು. ಹಲವು ರಾಜಕಾರಣಿಗಳೂ ಅವರಿಂದ ಮಾರ್ಗದರ್ಶನ ಪಡೆಯುತ್ತಿದ್ದರು. ಆದರೆ ಯಾರಿಂದಲೂ ಯಾವ ಬಳುವಳಿಗಳನ್ನು ಅವರು ಪಡೆದವರಲ್ಲ;ಯಾರಿಗೂ ಕಾಲು ಮುಟ್ಟಿ ನಮಸ್ಕರಿಸಲಿಲ್ಲ. ವ್ಯವಸ್ಥೆಯೊಂದಿಗೆ ಸಂಪೂರ್ಣ ರಾಜಿ ಮಾಡಿಕೊಳ್ಳದೆ, ಸಮುದಾಯದ ಹಿತಕ್ಕಾಗಿ ಅಧಿಕಾರದಲ್ಲಿರುವವರೊಂದಿಗೆ ಅಲ್ಪ ಸ್ವಲ್ಪ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಅವರೆಂದೂ ಹಿಂಜರಿದವರಲ್ಲ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ರಾಜಕೀಯವನ್ನು ಸಂಪೂರ್ಣವಾಗಿ ವೃತ್ತಿನಿರತ ರಾಜಕಾರಣಿಗಳಿಗೇ ಬಿಡುವಂತಿಲ್ಲವೆಂಬುದನ್ನು ರಾಮದಾಸರಂತೆ ನಾವೆಲ್ಲ ನಂಬಿದ್ದೇವೆ. ರಾಮದಾಸ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಲಂಕೇಶರೊಂದಿಗೆ ಸೇರಿ ಪ್ರಗತಿರಂಗವೆಂಬ ರಾಜಕೀಯ ಪಕ್ಷವನ್ನೂ ಕಟ್ಟಿ, ಪ್ರಚಾರಕ್ಕಾಗಿ ಕರ್ನಾಟಕದ ಉದ್ದಗಲಕ್ಕೂ ಸಂಚರಿಸಿದರು.

ವ್ಯಕ್ತಿವಾದಿ ಲಂಕೇಶರ ನಾಯಕತ್ವವು ರಾಜಕೀಯಕ್ಕೆ ಸರಿ ಹೊಂದುವುದಿಲ್ಲವೆಂಬ ಅರಿವು ರಾಮದಾಸರಿಗೆ ಬಹುಬೇಗ ಬಂದಿತಾದರೂ ಇಟ್ಟ ಹೆಜ್ಜೆಗೆ ಬದ್ಧರಾಗಿಯೇ ನಡೆದು ಅನುಭವದಿಂದ ಪಾಠ ಕಲಿತರು. ಇತ್ತೀಚೆಗೆ ತಾನೇ ನಡೆದ ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರಿಯಿಂದ ಸ್ಪರ್ಧಿಸಿದ್ದ ಸಿದ್ಧರಾಮಯ್ಯನವರು ಗೆಲ್ಲುವುದು ತಾತ್ವಿಕವಾಗಿ ಏಕೆ ಮುಖ್ಯವೆಂಬುದನ್ನು ನಮಗೆಲ್ಲಾ ವಿವರಿಸಿ, ನಾವೆಲ್ಲ ಅವರೊಂದಿಗೆ ಚುನಾವಣಾ ಪ್ರಚಾರಕ್ಕಾಗಿ ನಾಲ್ಕಾರು ದಿನ ಮೈಸೂರಿನ ಬೀದಿ ಬೀದಿ ಸುತ್ತಾಡುವಂತೆ ಪ್ರಚೋದಿಸಿದರು. ಸಿದ್ಧರಾಮಯ್ಯನವರ ಗೆಲುವಿಗೆ ನಮ್ಮ ನೈತಿಕ ಬೆಂಬಲದಿಂದ ಎಷ್ಟರಮಟ್ಟಿನ ಪ್ರಯೋಜನವಾಯಿತೆಂಬ ಅಂಶ ಇಲ್ಲಿ ಮುಖ್ಯವಲ್ಲ. ನಮ್ಮ ಮಟ್ಟಿಗೆ ಇದೊಂದು ಅಪೂರ್ವ ಅನುಭವ. ಮಧ್ಯಮ ವರ್ಗದ ಮಡಿವಂತಿಕೆಯಿಂದ ನಮಗೆ ಈ ಕ್ರಿಯೆಯಿಂದ ಮುಕ್ತಿ ದೊರೆಯಿತು. ಇದಕ್ಕಾಗಿ ನಾವು ರಾಮದಾಸ್ ಅವರಿಗೆ ಋಣಿಯಾಗಿರಬೇಕು.

"ಲಂಕೇಶ್ ಪತ್ರಿಕೆ"ಯೊಂದಿಗೆ ರಾಮದಾಸ್ ಸಂಬಂಧ ವಿಶಿಷ್ಟವಾದುದು. ಲಂಕೇಶರ ಹಲವು ನೈತಿಕ, ಸಾಮಾಜಿಕ, ರಾಜಕೀಯ ಕಾಳಜಿಗಳ ಹಿಂದೆ ರಾಮದಾಸರ ಪ್ರೀತಿಯ ಒತ್ತಾಸೆಯಿತ್ತು. ತಮ್ಮ ಆಪ್ತ ಬಳಗದಲ್ಲಿಯೂ ರಾಮದಾಸ್ ಅಭಿಪ್ರಾಯಗಳಿಗೆ ಲಂಕೇಶ್ ಹೆಚ್ಚಿನ ಮಹತ್ವಕೊಡುತ್ತಿದ್ದರು. ಅವರಿಗೆ ತಮ್ಮ ಪುಸ್ತಕವೊಂದನ್ನು ಅರ್ಪಿಸಿ, ಅವರನ್ನು ಗೆಳೆಯ ಮಾರ್ಗದರ್ಶಿ ಎಂದು ಲಂಕೇಶ್ ಉಲ್ಲೇಖಿಸಿದ್ದಾರೆ. ಪತ್ರಿಕೆಯ ಹಲವಾರು ರಾಜಕೀಯ ಹಾಗೂ ಸಾಂಸ್ಕೃತಿಕ ನೀತಿ ನಿರೂಪಣೆಯಲ್ಲಿ ರಾಮದಾಸರ ಪಾತ್ರವಿರುತ್ತಿತ್ತು. ವೈಯಕ್ತಿಕ ಸ್ನೇಹವನ್ನೂ ಮೀರಿ ಪತ್ರಿಕೆಯ ಪರವಾಗಿ ರಾಮದಾಸ್ ನಿಲ್ಲುತ್ತಿದ್ದ ಹಲವು ಸಂದರ್ಭಗಳಲ್ಲಿ 'ಕುವೆಂಪು ಸ್ವಹಸ್ತಾಕ್ಷರ ಪ್ರತಿ'ಬಗೆಗೆ ನಡೆದ ಹಗರಣವೇ ಸಾಕ್ಷಿಯಾಗಿತ್ತು. ಇದು ಸ್ವಹಸ್ತಾಕ್ಷರ ಪ್ರತಿಯೇ ಅಥವಾ ಕಂಪ್ಯೂಟರ್ ತಾಂತ್ರಿಕ ಕಸರತ್ತಿನಿಂದ ಸೃಷ್ಟಿಯಾದುದೇ, ಎಂಬ ವಿಚಾರದಲ್ಲಿ 'ಲಂಕೇಶ್ ಪತ್ರಿಕೆ'ಯಲ್ಲಿ ವಿವಾದ ಹುಟ್ಟಿತು. ಈ ವಿವಾದ ದಿಂದ ಸಿಟ್ಟಿಗೆದ್ದ ತೇಜಸ್ವಿ, ರಾಮದಾಸರ ವಿಚಾರದಲ್ಲಿ ಬೇಸರಗೊಂಡರೂ ರಾಮದಾಸ್ ಪತ್ರಿಕೆಯ ಜೊತೆಗೆ ನಿಂತದ್ದನ್ನು ನಾನು ಕೇಳಿ ಬಲ್ಲೆ. ಲಂಕೇಶ್ ಹಾಗೂ ರಾಮದಾಸ್ ನಡುವೆಯೂ ಭಿನ್ನಾಭಿಪ್ರಾಯಗಳಿಲ್ಲದೆ ಇರಲಿಲ್ಲ. ಅದೇನಿದ್ದರೂ ಲಂಕೇಶ್, ತೇಜಸ್ವಿ- ಇಬ್ಬರೂ ರಾಮದಾಸರ ಪಾರದರ್ಶಕ ವ್ಯಕ್ತಿತ್ವಕ್ಕೆ ಮಾರುಹೋಗಿದ್ದರು. ಇಬ್ಬರ ವಿಚಾರದಲ್ಲಿಯೂ ರಾಮದಾಸ್ ಅತೀವ ಪ್ರೀತಿ ಇಟ್ಟುಕೊಂಡಿದ್ದರು.

ಯಾವ ಮುಲಾಜಿಗೂ ಒಳಗಾಗದೆ ಹಲವಾರು ವರ್ಷಗಳಿಂದ ಅವರೊಂದಿಗೆ ಸ್ನೇಹ ವಿಟ್ಟುಕೊಂಡವರು ಮತ್ತು ಹಿರಿಯರ ಬಗೆಗೂ ಬಹಿರಂಗವಾಗಿ ಸ್ಪಷ್ಟ ನಿಲುವು ತೆಗೆದುಕೊಳ್ಳುತ್ತಿದ್ದ ರಾಮದಾಸ್, ಇದರಿಂದಾಗಿ ಹೆಚ್ಚು ಜನರ ಸ್ನೇಹವನ್ನೇನೂ ಕಳೆದುಕೊಳ್ಳಲಿಲ್ಲವೆಂಬುದು ಮಾತ್ರ ಸೋಜಿಗದ ವಿಚಾರವಾಗಿದೆ. ಸಮಕಾಲೀನ ಕನ್ನಡ ಸಾಮಾಜಿಕ ಸಂದರ್ಭವಿನ್ನೂ ಆರೋಗ್ಯಕರವಾಗಿಯೇ ಉಳಿದಿದೆ ಯಾದುದರಿಂದಲೇ ಇದು ಸಾಧ್ಯವಾಗಿದೆ ಎನಿಸುತ್ತದೆ. ಹಿರಿಯ ಬರಹಗಾರ ಯು.ಆರ್. ಅನಂತಮೂರ್ತಿ, ಮಾಜಿ ಉಪಮುಖ್ಯಮಂತ್ರಿ ಸಿದ್ಧರಾಮಯ್ಯ, ಮಾಜಿ

ಮಂತ್ರಿ ಎಚ್. ವಿಶ್ವನಾಥ್ ಇವರುಗಳನ್ನು ರಾಮದಾಸ್ ಒಂದಲ್ಲ ಒಂದು ಕಾರಣಕ್ಕೆ ಟೀಕಿಸಿದ್ದರು, ಪ್ರತಿಭಟಿಸಿದ್ದರು. ಆದರೆ ರಾಮದಾಸ್ ಪಾರ್ಥಿವ ಶರೀರವನ್ನು ವಿದ್ಯುತ್ ಚಿತಾಗಾರದಲ್ಲಿ ಅಗ್ನಿಗೆ ಅರ್ಪಿಸಿದಾಗ ಅವರೆಲ್ಲ ದುಃಖಭರಿತರಾಗಿ ಅಲ್ಲಿ ಸೇರಿದ್ದ ದೃಶ್ಯ ಅಪೂರ್ವವೆನ್ನಿಸಿತ್ತು. ಸಾರ್ವಜನಿಕ ನಿಲುವುಗಳನ್ನೂ ವೈಯಕ್ತಿಕ ಸ್ನೇಹ ಸಂಬಂಧವನ್ನೂ ಬೇರ್ಪಡಿಸಿ ವಸ್ತುನಿಷ್ಠವಾಗಿ ನೋಡಬಲ್ಲ ಧೀಮಂತಿಕೆ ರಾಮದಾಸರಿಗೆ ಇದ್ದುದರಿಂದಲೇ, ಯಾರೂ ಅವರನ್ನೂ ತಪ್ಪಾಗಿ ಭಾವಿಸಿರಲಿಲ್ಲ.

ಕೆಲವು ವರ್ಷಗಳ ಹಿಂದೆ ಎಚ್.ವಿಶ್ವನಾಥ್‌ರವರು ಮಂತ್ರಿಯಾಗಿದ್ದಾಗ ಊರ ಹಬ್ಬವೊಂದರಲ್ಲಿ ನೂರಾರು ಕುರಿಗಳನ್ನು ದೇವಿಗೆ ಬಲಿ ಕೊಟ್ಟ ಸಂದರ್ಭದ ಔತಣ ಕೂಟದಲ್ಲಿ ಅವರು ಭಾಗಿಯಾದುದನ್ನು ಟೀಕಿಸಿ ರಾಮದಾಸ್ ಪ್ರತಿಭಟಿಸಿದರು. ಆಗ ನಾನು ಪ್ರತಿಕ್ರಿಯೆಯಾಗಿ ಪತ್ರಿಕೆಯಲ್ಲಿ ರಾಮದಾಸರನ್ನು ಆಕ್ಷೇಪಿಸಿದೆ. ಸ್ವತಃ ಮಾಂಸಾಹಾರಿಯಾಗಿರುವ ರಾಮದಾಸ್ ಈ ಸಂದರ್ಭವನ್ನು ಕೇವಲ ಕಾನೂನಿನ ನೆಲೆಯಿಂದ ನೋಡದೆ, ಹೆಚ್ಚು ವ್ಯಾಪಕವಾಗಿ ಪರಿಶೀಲಿಸಬಹುದಿತ್ತೆಂದು ನಾನು ಬರೆದೆ. ಮಾರನೆಯ ದಿನವೇ ರಾಮದಾಸ್ ನನಗೆ ಸಿಕ್ಕಿದಾಗ, ಅದರ ವಿವಿಧ ಪರಿಣಾಮಗಳನ್ನು ನನ್ನೊಂದಿಗೆ ಚರ್ಚಿಸಿದರು. ಮೂಢನಂಬಿಕೆಯೊಂದನ್ನು ಪ್ರತಿಭಟಿಸುವ ಕ್ರಿಯೆಯಾಗಿ ಇದನ್ನು ನಾವು ಗಮನಿಸ ಬೇಕೆಂದರು. ಹಿಂದುಳಿದ ವರ್ಗದಿಂದ ಬಂದ ರಾಜಕೀಯ ನಾಯಕರು ಮೂಢನಂಬಿಕೆಗೆ ಇಂಬು ಕೊಡುವ ಆಚರಣೆಗಳಿಂದ ಪ್ರಜ್ಞಾಪೂರ್ವಕವಾಗಿ ದೂರವಿರದಿದ್ದರೆ, ಬಹುಸಂಖ್ಯಾತ ಸಮುದಾಯವು ಇನ್ನೂ ಅನೇಕ ವರ್ಷಗಳ ಕಾಲ ಕತ್ತಲಿನಲ್ಲಿಯೇ ಕೊಳೆಯ ಬೇಕಾಗುತ್ತದೆಯೆಂದು ವಾದಿಸಿದರು. ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ ಸಿದ್ಧರಾಮಯ್ಯನವರನ್ನು ಬೆಂಬಲಿಸಿ ಪ್ರಚಾರ ಮಾಡಿದರಾದರೂ ಅವರು ಮಠಾಧಿಪತಿಗಳ ಆಶೀರ್ವಾದ ಬೇಡಿ ಮಠದಿಂದ ಮಠಕ್ಕೆ ಎಡತಾಕುತ್ತಿರುವುದನ್ನು ಖಂಡಿಸಿ ಹೇಳಿಕೆ ಕೊಟ್ಟರು. ಇತ್ತೀಚೆಗೆ ತಾನೆ ತಮ್ಮ ಗುರುಗಳಾದ ದೇಜಗೌರವರ 'ವಿಶ್ವಮಾನವ ಪ್ರಶಸ್ತಿ'ಯನ್ನು ಅಪಾತ್ರರಿಗೆ ಹಂಚುತ್ತಿದ್ದಾರೆಂದು ಆಪಾದಿಸಿ, ವಿವಾದ ಸೃಷ್ಟಿಸಿದರು.

ಅದಮ್ಯ ಉತ್ಸಾಹ, ದ್ವೇಷರಹಿತ ಆಕ್ರೋಶ, ನಿಖರವಾದ ಸೈದ್ಧಾಂತಿಕ ಸ್ಪಷ್ಟತೆಯಿದ್ದ ರಾಮದಾಸ್ ಎಂದೂ ತಮ್ಮ ವೈಯಕ್ತಿಕ ಬದುಕಿನ ಏಳಿಗೆಯತ್ತ ಯೋಚಿಸಿದ್ದ ನಿದರ್ಶನಗಳಿಲ್ಲ. ಸುಮಾರು ನಾಲ್ಕು ದಶಕಗಳ ನಮ್ಮ ಸ್ನೇಹ, ಸತ್ಸಂಗ, ಮಾತುಕತೆಯಲ್ಲಿ ತಮ್ಮ ಸ್ವಂತ ಬದುಕಿನ ಬಗೆಗೆ ಅವರು ಪ್ರಸ್ತಾಪಿಸಿರುವುದು ಅಪರೂಪವಾಗಿ ಮಾತ್ರ. ಲಂಕೇಶರು ತೀರಿಹೋದ ಮೇಲೆ ನಾವು ಭೆಟ್ಟಿಯಾದಾಗಲೆಲ್ಲ ಪರಸ್ಪರ ಆರೋಗ್ಯದ ವಿಚಾರವನ್ನು ಲಘು ಹಾಸ್ಯದ ಧಾಟಿಯಲ್ಲಿ ವಿನಿಮಯ ಮಾಡಿಕೊಳ್ಳುತ್ತಿದ್ದರೂ, ತಮಗಿದ್ದ ಸಕ್ಕರೆ ಕಾಯಿಲೆ ಇತ್ಯಾದಿ ದೈಹಿಕ ಉಪಧಿಗಳನ್ನು ಅವರೆಂದೂ ವಿಶೇಷವೆಂಬಂತೆ ಚರ್ಚಿಸುತ್ತಿರಲಿಲ್ಲ. ತಮ್ಮ ಮಡದಿ ನಿರ್ಮಲಾರ ಆರೋಗ್ಯದ ಬಗೆಗೇ ಅವರು ಸ್ವಲ್ಪ ಮಟ್ಟಿಗೆ ಕಳವಳಪಡುತ್ತಿದ್ದರು. 'ಚಾರ್ವಾಕ'ವೆಂಬ ಅವರ ಮನೆಯ ಹೆಸರಿಗೆ ಅನ್ವರ್ಥಕವಾಗಿಯೇ ಬದುಕಿದರು. ಊಟ, ತಿಂಡಿ, ಪಾನೀಯ, ಧೂಮಪಾನ -

ಯಾವುದರಲ್ಲೂ ಲೆಕ್ಕಾಚಾರದ ಎಚ್ಚರ ಅವರಿಗಿರಲಿಲ್ಲ. ಸ್ನೇಹಿತರ ಒಡನಾಟದಲ್ಲಿ ಗಂಟೆಗಟ್ಟಲೆ ಮಾತನಾಡುತ್ತಾ ಸಂತೋಷದಿಂದಿರುವಾಗ ಆಹಾರ, ಪಾನೀಯಗಳ ಸಂಯಮದ ಬಗೆಗೆ ಯಾರಾದರೂ ಎಚ್ಚರಿಸಿದರೆ ಅವರಿಗೆ ಸಿಟ್ಟುಬರುತ್ತಿತ್ತು. ಹೀಗಾಗಿ ಅವರಿಗೆ ಕ್ಯಾನ್ಸರ್ ಬಂದದ್ದು ಗೊತ್ತಾಗುವ ಹೊತ್ತಿಗೆ, ರೋಗ ಉಲ್ಬಣವಾಗಿತ್ತು; ಸುದ್ದಿ ತಿಳಿದವರು ನಂಬಲು ಸಮಯ ತೆಗೆದುಕೊಳ್ಳುತ್ತಿರುವಂತೆಯೇ ಸಾವು ಬರಸಿಡಿಲಿನಂತೆ ಅವರ ಮೇಲೆರಗಿತು.

ರಾಮದಾಸ್ ನಮ್ಮನ್ನು ಅಗಲುವ ಒಂದು ವಾರದ ಹಿಂದೆ ತಾನೆ ಕಿದ್ವಾಯಿ ಆಸ್ಪತ್ರೆಗೆ ಅವರನ್ನು ನೋಡಲು ಹೋಗಿದ್ದೆ. ಅವರ ಮುಖದಲ್ಲಾಗಲೀ ಮಾತಿನಲ್ಲಾಗಲೀ ಕ್ಯಾನ್ಸರ್ ನಂತಹ ಮರಣಾಂತಿಕ ರೋಗದ ಲಕ್ಷಣವಿರಲಿಲ್ಲ. ಗೆಲುವಿನಿಂದ ಎಂದಿನಂತೆ ಆತ್ಮೀಯವಾಗಿ ಮಾತನಾಡಿದರು. ಒಂದು ತಾಸಿಗೂ ಹೆಚ್ಚು ಕಾಲ ನಮ್ಮೊಂದಿಗೆ ಹರಟೆ ಕೊಚ್ಚಿದ್ದರು. ಕಾಯಿಲೆಯ ವಿಚಾರ ಹೆಚ್ಚಾಗಿ ಪ್ರಸ್ತಾಪವಾಗಲೇ ಇಲ್ಲ. ಅವರು ಎಂದಿನಂತೆ ತಮ್ಮ ಹೋರಾಟಗಳನ್ನು ಮುಂದುವರಿಸಲು ಅನುವಾಗುವಂತೆ ಗುಣಮುಖರಾಗುವರೆಂದು ನಾವೆಲ್ಲ ಭಾವಿಸಿದ್ದೆವು. ಆಸ್ಪತ್ರೆಯಿಂದ ಅವರು ಮೈಸೂರಿಗೆ ಹಿಂದಿರುಗಿದ ಮರು ದಿನವೇ ಕಿದ್ವಾಯಿ ಆಸ್ಪತ್ರೆಯ ಹಿರಿಯ ವೈದ್ಯೆಯೊಬ್ಬರು ನಮ್ಮ ಕುಟುಂಬದ ಪರಿಚಯವಿರುವ ಅವರೊಂದಿಗೆ ಪ್ರಾಸಂಗಿಕವಾಗಿ ರಾಮದಾಸ್ ಬಗೆಗೆ ಪ್ರಸ್ತಾಪಿಸಿದಾಗ ಅವರು ಕೊಟ್ಟ ಸಮಾಚಾರ ನನ್ನನ್ನು ಜರ್ಝರಿತ ಗೊಳಿಸಿತು. ಈ ಸುದ್ದಿಯನ್ನು ಯಾರಿಗೂ ತಿಳಿಸದೆ ಮೌನವಹಿಸಿದೆ. ಮುಂದಿನ ಎರಡೇ ದಿನಗಳಲ್ಲಿ, ಮುಂಜಾನೆ ನಾನಿನ್ನೂ ಹಾಸಿಗೆಯಲ್ಲಿರುವಾಗಲೇ ಫೋನ್ ರಿಂಗಣಗುಟ್ಟಿತು. ಮೈಸೂರಿನಿಂದ ಗೆಳೆಯ ಸ್ವಾಮಿ ಆನಂದ್ ಸುದ್ದಿ ತಿಳಿಸಿದರು. ಮೈಸೂರಿನ ಗೆಳಯರೊಂದಿಗೆ ತೆರಳಿ ರಾಮದಾಸ್ ಪಾರ್ಥಿವ ಶರೀರವನ್ನು ವಿದ್ಯುತ್ ಚಿತೆಗೆ ಅರ್ಪಿಸಿ ಖಿನ್ನನಾಗಿ ಹಿಂದಿರುಗಿದೆ.

ದಣಿವರಿಯದಿದ್ದ ಹೋರಾಟಗಾರ ರಾಮದಾಸ್, ಈಗ ನಮಗೆ ಕೇವಲ ನೆನಪಾಗಿ ಮಾತ್ರ ಉಳಿಯುವುದಿಲ್ಲ. ಕರ್ನಾಟಕದ ಎಲ್ಲ ಪ್ರಗತಿಪರ ಹೋರಾಟಗಳಲ್ಲಿ ಅವರು ಸ್ಫೂರ್ತಿಯಾಗಿ ಚೇತನವಾಗಿ ವ್ಯಾಪಿಸಿ ಕೊಂಡಿದ್ದಾರೆ. ಬದುಕಿಯೂ ಸತ್ತಂತಿರುವ ಅನೇಕ ಬುದ್ಧಿಜೀವಿ ಬರಹಗಾರರಿಗಿಂತ ಸತ್ತೂ ಜೀವಂತವಿರುವ ಲಂಕೇಶ್, ತೇಜಸ್ವಿ, ನಂಜುಂಡಸ್ವಾಮಿ, ರಾಮದಾಸ್, ನಮಗೆ ಹೆಚ್ಚು ಪ್ರಸ್ತುತವಾಗುತ್ತಾರೆ. ಕೋಮುವಾದಿ ಶಕ್ತಿಗಳು ಈ ರಾಜ್ಯವನ್ನು ಕಬಳಿಸಲು ಹೊಂಚು ಹಾಕುತ್ತಿರುವಾಗ, ರಾಮದಾಸರಂತಹ ಹೋರಾಟಗಾರರ ನೇತೃತ್ವ ನಮಗೆ ಬೇಕಿತ್ತು. ಆದರೇನು?ಸಾವಿಗೆ ಇದಾವುದರ ಪರಿವೆ ಇರಲು ಸಾಧ್ಯವಿದೆಯೇ?

# ಸೆಲ್ಫ್‌ಮೇಡ್ ಮನುಷ್ಯ

ಮೀರಾ ನಾಯಕ್

ಧೀರಧ್ವನಿಯ ಅಶಾಂತ ಸಂತ

ಆತ್ಮ ಸಾಕ್ಷಿಯನ್ನು ಕೊಂದುಕೊಂಡು ಬದುಕುವವರ ಮಧ್ಯೆ ಜೀವಂತವಾಗಿದ್ದು, ಎದ್ದು ಕಾಣುತ್ತಿದ್ದ ಅಪೂರ್ವ ವ್ಯಕ್ತಿತ್ವ ಪ್ರೊ. ರಾಮದಾಸರದು. ಕನ್ನಡ ನೆಲದಲ್ಲಿ ಯಾವುದೇ ರೂಪದ ಸ್ವಾಭಿಮಾನ ಚಳವಳಿ ಹೆಪ್ಪುಗಟ್ಟಲು ಪ್ರೇರಕ ಶಕ್ತಿಯಂತೆ ಇದ್ದವರು ಅವರು. ದಿಟ್ಟ ವೈಚಾರಿಕ ಮುನ್ನೋಟ; ಕಟು ನಿಷ್ಠುರ ಬದ್ಧತೆ; ನಿಷ್ಕಳಂಕ ನೈತಿಕ ಸ್ವಚ್ಛತೆ ರಾಮದಾಸ್ ವ್ಯಕ್ತಿತ್ವದ ಜೀವಬಿಂದುಗಳು. ಪ್ರಜಾತಾಂತ್ರಿಕ ರಚನೆಯನ್ನು ಅಸ್ತವ್ಯಸ್ತ ಗೊಳಿಸುವ ಹಿತಾಸಕ್ತಿಗಳನ್ನು ಅವರು ಮುಲಾಜಿಲ್ಲದೆ ಖಂಡತುಂಡವಾಗಿ ಖಂಡಿಸುತ್ತಿದ್ದರು. ಹಾಗಾಗಿ ಅವರ ಎದುರು ನಿಂತು ಮಾತಾಡಬೇಕೆಂದರೆ, ನೈತಿಕಸ್ಥೈರ್ಯ ಅದೆಷ್ಟಿದ್ದರೂ ಕಡಿಮೆಯೆನ್ನಿಸುತ್ತಿತ್ತು. ಕಟ್ಟುಮಸ್ತಾದ ಶಬ್ದಶರೀರದ ಒಳಗೆ ಸಮಕಾಲೀನ ಆಗುಹೋಗುಗಳನ್ನು ಮನದಟ್ಟಾಗುವಂತೆ ಮುಟ್ಟಿಸುವ ಕಲೆ; ಯಾರ ಅನ್ಯಾಯಗಳಿರಲಿ... ಅದು ಎಲ್ಲೇ ನಡೆದಿರಲಿ ಅವುಗಳ ವಿರುದ್ಧ ಒಳಗೊಳಗೇ ಕುದಿಯುತ್ತಿದ್ದ ಈ ಅಶಾಂತ ಸಂತನಿಗೆ ತುಂಬುಗೌರವದ ಕೃತಜ್ಞತೆ.

೧೯೬೫ರಲ್ಲಿ ಮದುವೆ ಆಗಿ ನಾನು ಮೈಸೂರಿಗೆ ಬಂದಾಗ ರಾಮದಾಸ್ ಪರಿಚಯ ಆಯ್ತು. ೬೫ ರಲ್ಲಿ ನಾನು ಪ್ರಥಮ ಬಿ.ಎ.ಗೆ ಮಹಾರಾಜ ಕಾಲೇಜಿಗೆ ಸೇರಿಕೊಂಡಾಗ ರಾಮದಾಸ್ ಫೈನಲ್ ಇಯರ್ ಬಿ.ಎ.ನಲ್ಲಿ ಇದ್ರು. ಒಂದ್ ಸಾರಿ ಪಂಚಲಿಂಗೇಗೌಡ್ರು ಕ್ಲಾಸಲ್ಲಿ ಹರಿಹರನ ರಗಳೆ ಪಾಠ ಮಾಡ್ತಿದ್ರು. ಅದರಲ್ಲಿ 'ನಾಯಕ್ಸಾನಿ' ಅನ್ನೋ ಒಂದು ಪದ ಬರುತ್ತೆ. ನಮ್ಮ ಹಿಂದಿನ ಬೆಂಚಲ್ಲಿ ಕುಳ್ತಿದ್ದ ಒಬ್ಬ ಹುಡುಗ 'ನಾಯಕರೆಲ್ಲ ನಾಯಕ್ಸಾನಿರು... ನಾಯಕರೆಲ್ಲ ನಾಯಕ್ಸಾನಿರು... 'ಅಂತ ಹೇಳ್ದ. ನಾನು ಹಿಂದಕ್ಕೆ ತಿರುಗಿ 'ನೋಡಿ ಈ ಥರ ಎಲ್ಲ ಹೇಳಬೇಡಿ ಅರ್ಥ ಗೊತ್ತಿಲ್ದೆ ಮಾತನಾಡಬಾರ್ದು, ಬಾಯ್ ಮುಚ್ಕಂಡಿರಿ....' ಅಂದೆ. ಜೂನಿಯರ್ ಬಿ.ಎ

ಹಾಲ್‌ನಲ್ಲಿ ಸುಮಾರು ಮುನ್ನೂರು ಜನ ವಿದ್ಯಾರ್ಥಿಗಳಿದ್ರು. ಅದ್ರಲ್ಲಿ ನಾವು ಏಳು ಜನ ಮಾತ್ರ ಹುಡ್ಗಿರು. ಹುಡುಗರಲ್ಲಿ ಕೆಲವರು ಆ ಹುಡುಗನಿಗೆ ಕುಮ್ಮಕ್ಕ್ ಕೊಟ್ಟಿದ್ರು ಅನ್ಸುತ್ತೆ, ಮತ್ತೆಮತ್ತೆ ಆ ಹುಡ್ಗ ಹಾಗೆ ಹೇಳ್ದಾಗ ನನಗೆ ತುಂಬಾ ಸಿಟ್ಟ್‌ಬಂತು. ಹೋಗಿ ಅವನ ಅಂಗಿ ಕಾಲರ್‌ಪಟ್ಟಿ ಹಿಡ್ಕೊಂಡು: 'ಯಾರಯ್ಯ ನಾಯಕ್ನಾನಿ...ನಿನಗೆ ಅಕ್ಕ-ತಂಗೀರು ಇಲ್ವ....? ಏನು ಹುಡ್ಗಾಟ ಆಡ್ತಿದ್ದೀಯ. ತಪ್ಪಾಯ್ತು ಅಂತ ಈ ಕ್ಲಾಸ್ ರೂಮಲ್ಲಿ ಎಲ್ಲಾರೆದ್ರು ಕೇಳದೆ ಹೋದ್ರೆ, ಹಿಂಗೆ ನಿನ್ನ ಪ್ರಿನ್ಸಿಪಾಲ್ ಹತ್ರ ಎಳ್ಕೊಂಡ್ ಹೋಗ್ತೀನಿ'ಅಂದೆ. ಇದನ್ನೆಲ್ಲ ನೋಡ್ತಿದ್ದ ಪಂಚಲಿಂಗೇಗೌಡ್ರು ಸ್ತಂಭೀಭೂತರಾಗಿ ನಿಂತು ಬೆವರು ಒರ್ಸಿಕೊಳ್ತಿದ್ರು. ಆಮೇಲೆ ಆ ಹುಡ್ಗ ತಪ್ಪಾಯ್ತು ಅಂತ ಹೇಳ್ದ. ಯಾರೋ ಹೋಗಿ ರಾಮದಾಸ್ ಅಂಡ್ ಕಂಪನಿಗೆ ಈ ಸುದ್ದಿ ತಲುಪಿಸಿದ್ರು. ತಕ್ಷಣ ರಾಮದಾಸ್, ಆಲನಹಳ್ಳಿ ಕೃಷ್ಣ ಮತ್ತೆ ಅವರ ಸ್ನೇಹಿತರೆಲ್ಲ ನಮ್ ಕ್ಲಾಸ್‌ರೂಮ್ ಹತ್ರ ಬಂದ್ರು. ಸೈನಿಕರ ಹಾಗೆ ಬಂದ ರಾಮದಾಸ್; " ಯಾರ್ ಮೀರಕ್ಕ ನಿಮ್ಮನ್ನ ಏನೋ ಅಂದ್ನಂತೆ. ಯಾರ್ ಆ ಅಯೋಗ್ಯ ಬಡ್ಡೀಮಗ? ತೋರ್ಸಿ"ಅಂದ್ರು. "ಯಾಕ್ ರಾಮದಾಸ್ ನೀವೆಲ್ಲ ಬಂದ್ರಿ. ದಯವಿಟ್ಟು ಆ ಹುಡ್ಗನ ತಂಟೆಗೆ ನೀವು ಬರಬೇಡಿ. ನಾನ್ ನೋಡ್ಕೊತ್ತೀನಿ ಹೋಗಿ"ಅಂದೆ. ಅವರೆಲ್ಲ ಹೋದ್ರು.

ರಾಮದಾಸ್ ಪರಿಚಯವಾದ ಮೂರು ನಾಲ್ಕು ವರ್ಷದ ನಂತರ ಅವರ ತಾಯಿ ಮಂಜಮ್ಮ ಕೆ.ಆರ್. ಹಾಸ್ಪೆಟಲ್‌ಗೆ ದಾದಿ (ನರ್ಸ್)ಆಗಿ ಬಂದ್ರು. ಮುಂಚೆ ಇವ್ರು ಬಂಬೂಬಜಾರಲ್ಲಿದ್ರು. ಆ ಮೇಲೆ ನಮ್ ಮನೆಯ ಹಿಂದಗಡೆ ಮನೆಗೆ ಬಂದ್ರು. ನಾವು ಒಂದೇ ಮನೆಯವರ ಹಾಗೆ ಇದ್ವಿ. ಮಂಜಮ್ಮನವರು ನನಗೂ ತಾಯಿ ಥರ ಆಗಿದ್ರು. ಮಂಜಮ್ಮ ತುಂಬ ಧೈರ್ಯಶಾಲಿಯಾಗಿದ್ರು. ಎಷ್ಟು ಹ್ಯೂಮನ್ ಅಂದ್ರೆ, ಜನಪ್ರೀತೀನೆ ಅವರ ಬಂಡವಾಳ. ಅವರಿಗೆ ಪರಿಚಯ ಇಲ್ಲದವರು ಆಸ್ಪತ್ರೇಲಿ ನರಳ್ತಾ ಇದ್ರೆ ಮಂಜಮ್ಮನವರ ಇಡೀ ರಾತ್ರಿ ಅವರ ಹತ್ರ ಇದ್ದು ನೋಡ್ಕೋತಿದ್ರು. ಲವ್ ಮ್ಯಾರೇಜ್‌ಆಗ್ ಬಂದೋರ್ಗೆ ಸಹಾಯ ಮಾಡ್ತಿದ್ರು. ಆಗ ನನ್ನ ಎಲ್ಲಾಕಷ್ಟ ಸುಖಕ್ಕೆ ಅವರು ತಾಯಿ ಥರ ನೆರವಾಗುತ್ತಿದ್ದರು. ನನಗೆ ಎರಡನೇ ಮಗು ಹೆರಿಗೆ ಆಗ್ವಾಗ ನಾನು ಮಿಷನ್ ಆಸ್ಪತ್ರೇಲಿ ಇದ್ದೆ, ಮಂಜಮ್ಮರಿಗೆ ಈ ವಿಷಯ ಗೊತ್ತಾಗಿ, ತಕ್ಷಣ ಆಟೋ ಸ್ಟ್ರೈಕ್ ಇದ್ದ ಕಾರಣ ಲಾರಿ ಹತ್ಕೊಂಡು ಕಣ್ಣಲ್ಲಿ ನೀರು ತುಂಬಿಕೊಂಡು ಮಿಷನ್ ಆಸ್ಪತ್ರೆಗೆ ಬಂದ್ರು. ಅಂತಾ ಅಮ್ಮ ಅವರು. ಇದನ್ನೆ ಏನೋ ಕರುಳ ಸಂಬಂಧ ಅನ್ನೋದು. ಅಂಥಾ ಅಮ್ಮನ ಮಗ ರಾಮದಾಸ್. ಹಾಗಾಗಿ ಇವರಲ್ಲಿದ್ದ ಗುಣಗಳು ಕೆಲವು ತಾಯಿಯಿಂದಲೇ ಬಂದವು. ಯೂನಿವರ್ಸಿಟಿ ಕ್ವಾಟ್ರರ್ಸ್‌ನಲ್ಲಿದ್ದಾಗ ನಾವು, ಪ್ರಭುಶಂಕರ್ ಮತ್ತು ರಾಮದಾಸ್ ಮೂವರ ಮನೆಯವರೂ ಒಂದೇ ಮನೆಯವರ ಹಾಗೆ ಇದ್ವಿ.

೧೯೭೫ ಜೂನ್ ೨೫ ರ ಮಧ್ಯ ರಾತ್ರಿ ಎಮರ್ಜೆನ್ಸಿ ಡಿಕ್ಲೇರ್ ಆಯ್ತು. ಅದೇ ವರ್ಷ ಆಗಸ್ಟ್ ೧೫ ಕ್ಕೆ ನಿರ್ಮಲ ಅವರೊಟ್ಟಿಗೆ ರಾಮದಾಸ್ ಮದುವೆ ಅಂತ ನಿಶ್ಚಯವಾಯ್ತು. ಅದಕ್ಕೆ ಮುಂಚೆ ನಾನು ನನ್ ಮಗಳು ಕೀರ್ತಿ, ಅಮ್ಮ ಮೂವರು ಬೆಂಗಳೂರ್ಗೆ ಹೋಗಿ ನಿರ್ಮಲ ಅವರ್ನ ನೋಡ್ಕೊಂಡು, ಅವರ ಮನೆಯವರನ್ನೆಲ್ಲ ಪರಿಚಯ ಮಾಡ್ಕೊಂಡು ಮಾತಾಡ್ಸಿ

ಬಂದ್ವಿ. ಯೂನಿವರ್ಸಿಟಿ ಕ್ವಾಟ್ರರ್ಸ್‌ನ ರಾಮದಾಸ್ ಮನೇಲಿ ಆಗಸ್ಟ್ ೧೫ ರಂದು ಸರಳವಾಗಿ ಮದ್ವೆ ಆಯ್ತು. ನಮ್ಮನೇಲಿ ಎಲ್ರೀಗೂ ಊಟ. ನಮ್ಮ ಮತ್ತು ರಾಮದಾಸ್ ಅವರ ಮನೆಯವರೆಲ್ಲರ ಕಷ್ಟ ಸುಖದಲ್ಲಿ ತಾವಿದ್ದೇವೆ ಎಂದು ಅಂತಃಕರಣದ ಪ್ರೀತಿ ತೋರುತ್ತಿದ್ದವರು ಪ್ರಭುಶಂಕರ್ ಮೇಷ್ಟ್ರು ಮತ್ತು ಅವರ ಹೆಂಡತಿ ಡಾ. ಶಾಂತಾ ಅವರು. ಅವರ ಪ್ರೀತಿಯ ನೆನಪು ಸಹ ಈಗ ಬರುತ್ತಿದೆ.

ನನ್ ಮಗಳು ಪಿ.ಯು.ಸಿ.ಆದ್ ಮೇಲೆ ಮಹಾರಾಜ ಕಾಲೇಜಿಗೆ ಅರ್ಜಿ ಹಾಕಿದ್ಲು. ಆಗ ರಾಮದಾಸ್ ಅಲ್ಲಿ ಲೆಕ್ಚರರ್ ಆಗಿದ್ರು. "ನೋಡು ನೀನು ಮೀರಕ್ಕನಷ್ಟು ಧೈರ್ಯವಂತೆಯಾಗಿದ್ರೆ ಬಾ. ಇಲ್ಲದಿದ್ರೆ ಬರಬೇಡ" ಅಂತ ನನ್ ಮಗಳಿಗೆ ಹೇಳಿದ್ರು. ನನ್ ಮಗಳು ಪುಟ್ಟ ಮಗು ಆಗಿದ್ವಾಗಿಂದ ಅವಳ ಜೊತೆ ರಾಮದಾಸ್ ತುಂಬಾ ಪ್ರೀತಿ, ಸಲಿಗೆಯಿಂದ ಇರ್ತಿದ್ರು. ಪ್ರತಿದಿನ ಇವಳನ್ನ ಕರ್ಕೊಂಡು ವಾಕಿಂಗ್ ಹೋಗೋರು, ಮೋಟಾರ್ ಬೈಕ್‌ನಲ್ಲಿ ಸುತ್ತಾಡ್ಸೋರು. ತಾವ್ ಸಿಗರೇಟ್ ಸೇದುವಾಗ 'ಅಮ್ಮನಿಗೆ ಹೇಳ್ಬೇಡ...' ಅಂತ ಇವಳಿಗೆ ಚಾಕ್‌ಲೇಟ್ ಕೊಡ್ಸೋರು. ಒಂದ್ಸಾರಿ ರಾಮದಾಸ್ ಬೈಕಲ್ಲಿ ನಿರ್ಮಲ ಹೋಗೋದನ್ನು ನೋಡಿದ ನನ್ನ ಮಗಳು ನಮ್ಮ ಹತ್ರ ಬಂದು, 'ಅಯ್ಯೋ ರಾಮದಾಸ್ ಮಾಮನ ಬೈಕಲ್ಲಿ ಒಂದು ಹುಡ್ಗಿ ಹೋಗ್ತಿದ್ದಳು' ಅಂತ ಹೇಳ್ತಿದ್ಲು. ಅದೇ ಸಮಯಕ್ಕೆ ನಿರ್ಮಲನ್ನ ಕರ್ಕೊಂಡು ಬಂದ ರಾಮದಾಸ: "ನೋಡಿ ನಾಯಕ್ರೆ, ಇದೇ ಹುಡ್ಗೀನ ನಾನು ಬೈಕ್‌ನಲ್ಲಿ ಕರ್ಕೊಂಡು ಹೋಗ್ತಿದ್ದದ್ದು...." ಅಂತ ತೋರ್ಸಿ ನಕ್ಕರು. ನಾವೆಲ್ಲರೂ ನಕ್ಕೆವು.

ರಾಮದಾಸ್ ಅನೇಕ ಚಳವಳಿಗಳಲ್ಲಿ ನಮ್ ಜೊತೆ ಭಾಗವಹಿಸುತಿದ್ರು. ಒಂದೇನಂದ್ರೆ ರಾಮದಾಸ್ ತಾವ್ ಹೇಳ್ದಂಗೆ ಆಗ್ಬೇಕು ಅನ್ನೋರು. ಆದ್ರೆ ಒಳ್ಳೆ ಹೋರಾಟಗಾರ, ಸೆಲ್ಫ್ ಮೇಡ್‌ಮನ್. ಅಂದ್ರೆ ಯಾರ ಸಹಾಯನೂ ಇಲ್ಲದೆ ಬೆಳೆದವರು. ಆದ್ರೆ ಒಂದೊಂದು ಸಾರಿ ಸಮಾಜದ ಬಗ್ಗೇನೂ ಯೋಚ್ನೆ ಮಾಡಬೇಕಾಗುತ್ತೆ. ಇಲ್ಲಿಯ ವಾಸ್ತವ ಏನು ಅಂತ ಅರ್ಥಮಾಡ್ಕೊಂಡು ಹೋರಾಟ ಮಾಡ್ಬೇಕಾಗುತ್ತೆ. ಆದ್ರೆ ಈ ರೀತಿ ವಿಚಾರಗಳಲ್ಲಿ ರಾಮದಾಸ್ ಒಂದೊಂದು ಸಾರಿ ನಮಗೆ ಮುಜುಗರ ಆಗೋ ಹಾಗೆ ನಡ್ಕೊಳೋರು. ಆದ್ರೆ ಹುಟ್ಟು ಹೋರಾಟಗಾರ ಅನ್ನೋದ್ರಲ್ಲಿ ಸಂಶಯ ಇಲ್ಲ. ಅವರು ಹೇಳ್ದಗೆ ನಾವು ಕೇಳ್ಬೇಕು. ನಾವೇನಾದ್ರು ಸಜೆಷನ್ ಕೊಟ್ರೆ ಅವರು ತಗೋತಾ ಇರಲಿಲ್ಲ.

ಒಂದ್ಸಲ ಬೆಂಗಳೂರಿಗೆ ಹೋಗಿದ್ದಾಗ ರಾಮದಾಸ್‌ಗೆ ಹಾರ್ಟ್‌ಪ್ರಾಬ್ಲಂ ಆಯ್ತು. ಆಸ್ಪತ್ರೆಯಲ್ಲಿದ್ದು ಮೈಸೂರಿಗೆ ಬಂದ ಮೇಲೆ ಒಮ್ಮೆ ೧೯೯೫ ರಲ್ಲಿ ನಾಯಕ್ರು ರಾಮದಾಸ್‌ನ್ನ ಗೋಪಾಲಗೌಡ ಆಸ್ಪತ್ರೆಗೆ ನಮ್ಮನೆ ಕಾರಿನಲ್ಲಿ ಕರ್ಕೊಂಡು ಹೋದ್ರು. ವಿಷ್ಣುಮೂರ್ತಿಯವರ ಹಾರ್ಟ್ ಸ್ಪೆಷಲಿಸ್ಟ್ ಡಾಕ್ಟ್ರು ಆಂಜಿಯೋಗ್ರಾಮ್ ಮಾಡಿಸ್ಕೊಳ್ಳಿ ಅಂತ ಹೇಳಿದ್ರು. ಆದ್ರೆ ಅವರು ಮಾಡಿಸ್ಕೊಳ್ಳಲಿಲ್ಲ. ಒಟ್ನಲ್ಲಿ ಕಾಯಿಲೆಯನ್ನೇ ಮಣಿಸಬೇಕು; ಕಾಯಿಲೆಗೆ ನಾನು ಬಗ್ಗಬಾರದು ಅನ್ನೋ ಸ್ವಭಾವ ಅವರದು. ಕೊನೆಯವರೆಗೂ ಅದರೊಟ್ಟಿಗೆ ಹೋರಾಡ್ತನೆ ಬಂದ್ರು. ಅವರ ಮಗಳಿಗೆ ಇನ್ನೂ ಮದ್ವೆ ಆಗಿರಲಿಲ್ಲ. ಆಗ ಅವರು ಸ್ವಲ್ಪ ಧೈರ್ಯಗುಂದಿದ್ರು. 'ಮೀರಕ್ಕ,

ನಾಯಕ್ರೆ ನನ್ ಮಗಳ್ನ ನೀವೆ ನೋಡ್ಕೋಬೇಕು' ಅಂತ ಹೇಳಿದ್ದರು. ಸ್ವಲ್ಪ ದಿನಗಳಲ್ಲೇ ಧೈರ್ಯ ತಂದುಕೊಂಡು ಹಾರ್ಟ್ ಪ್ರಾಬ್ಲಂಗೆ ಕ್ಯಾರೆ ಅನ್ನದೆ ಹೋರಾಟಗಳಲ್ಲಿ ಧೀರತನದಿಂದಲೇ ತೊಡಗಿಸಿಕೊಂಡರು. ಕೊನೆಯವರೆಗೂ ಹಾಗೇ ನಡೆದುಕೊಂಡರು.

ಬಸಪ್ಪ ಮೆಮೋರಿಯಲ್ ಆಸ್ಪತ್ರೇಲಿ ಮನೆ ಕೆಲಸಕ್ಕೆ ಇದ್ದ ಒಬ್ಬ ಹುಡ್ಗಿನ ಸೇರ್ಸಿದ್ದು, ಕೊನೆಗೆ ಆ ಹುಡ್ಗಿ ಸತ್ತೊದ್ದು. ಆಗ ರಾಮದಾಸ್ ಡಿ.ಸಿ. ಆಫೀಸ್ ಮುಂದೆ ಪ್ರತಿಭಟನೆ ಮಾಡುವಾಗ ಅಲ್ಲಿಗೆ ಬಂದ ಪೊಲೀಸ್ ಕಮಿಷನರ್ ಚಂದ್ರಶೇಖರ್ ಜೊತೆ ಅನುಚಿತವಾಗಿ ವರ್ತಿಸಿದರು. ಇದು ನಮಗೆ ಸರಿ ಅನ್ನಿಸಲಿಲ್ಲ. ಇದನ್ನ ವಿರೋಧಿಸಿ ನಾವು ರಾಮದಾಸ್ ಮಾಡಿದ್ದು ತಪ್ಪು, ಹೋರಾಟಗಾರರು ಹೀಗ್ಮಾಡ್ಬಾರ್ದು ಅಂತ ವಾಚಕರವಾಣಿಗೆ ಹನ್ನೆರಡೊ-ಹದಿನಾಲ್ಕೊ ಜನ ಸಹಿ ಹಾಕಿ ಪತ್ರ ಬರೆದಿದ್ದೆವು. ಪ್ರಕಟವಾಗಿತ್ತದು. ಇದನ್ನ ಕೊನೆಯವರೆಗೂ, ಸಾಯೊ ಎರಡು ದಿವಸ ಮುಂಚೆ ಕೂಡ; 'ನನ್ನ ವಿರುದ್ಧ ನೀವು ಹಾಗ್ ಮಾಡಿದ್ರಲ್ಲ' ಅಂತ ಸಹಿ ಮಾಡಿದ್ದವರ ಹತ್ತಿರ ಕೇಳಿದ್ರಂತೆ. ಅವ್ರು ಆವೇಶದಲ್ಲಿ ನಿರ್ಣಯ ತಕ್ಕೊಂಡ್ರೆ ಅದೇ ಕೊನೆ. ಮತ್ತೆ ಅದನ್ನ ಯೋಚ್ನೆ ಮಾಡ್ತಿರಲಿಲ್ಲ.

ರಾಮದಾಸ್ ನಾನ್ ಮಾಡೋ ಮೀನ್ ಅಡಿಗೇನ ತುಂಬಾ ಇಷ್ಟಪಡೋರು. ನಮ್ಮದು ರಾಮದಾಸ್ ಅವರದು ೪೨ ವರ್ಷಗಳ ಹತ್ತಿರದ ಒಡನಾಟ. ಈಗ ಬೇಸರ ಆಗುತ್ತೆ. ಏನೇ ಆದ್ರು ರಾಮದಾಸ್ ಇರ್ಬೇಕಿತ್ತು. ಯಾವುದೇ ಹೋರಾಟಾನ ಅವರು ಸ್ವಾರ್ಥಕ್ಕಾಗಿ ಮಾಡಿದೋರಲ್ಲ. ಅವರ -ನಮ್ಮ ನಡುವೆ ಅಭಿಪ್ರಾಯ ವ್ಯತ್ಯಾಸ ಏನೇ ಇರಬಹುದು. ಆದ್ರೆ ಇನ್ಯಾರನ್ನೋ ಟೀಸ್ ಮಾಡೋಕಾಗ್ಲಿ, ಏನೋ ಪಡಕೊಳ್ಳೋಕಾಗ್ಲಿ ಅವರು ಹೋರಾಟ ಮಾಡಿದೋರಲ್ಲ. ವಿದ್ಯಾರ್ಥಿ ದಿಸೆಯಿಂದ ಹಿಡಿದು ಕೊನೆವರೆಗೂ ಹಾಗೇ ಇದ್ರು. ಅವರಿಗಿದ್ದ ಅನಫೈಡ್‌ನೆಸ್ಸನ್ನ ಯಾರೂ ಪ್ರಶ್ನೆ ಮಾಡೋ ಹಾಗಿಲ್ಲ. ಬೇರೆ ಬೇರೆ ಸಂಘಟನೆಗಳನ್ನ ಹುಟ್ಟಾಕ್ತ ಹೋದ್ರೇ ಹೊರತು ಯಾವುದೇ ಒಂದು ಸಂಘಟನೆಯನ್ನು ಸ್ಥಿರವಾಗಿ ಉಳಿಸಿಕೊಳ್ಳೋಕೆ ಅವರಿಂದ ಸಾಧ್ಯವಾಗ್ಲಿಲ್ಲ. ಮಾನವ ಮಂಟಪದಲ್ಲಿ ಅವರು ಮಾಡಿಸುತ್ತಿದ್ದ ಅಂತರಜಾತಿ, ಸರಳ ವಿವಾಹಗಳು ಒಂದು ರೀತಿಯ ಒಳ್ಳೆಕಾಯಕವೇ. ಅವರಲ್ಲಿ ಆದರ್ಶ ಮತ್ತು ಕೆಲವು ಮಿತಿಗಳು ಒಟ್ಟೊಟ್ಟಿಗೆ ಇದ್ವು. ಮಾನವ ಮಂಟಪದಿಂದ ಬಹಳಷ್ಟು ಜನಕ್ಕೆ ಅನುಕೂಲಾನೂ ಆಗಿದೆ. ಬಹಳಷ್ಟು ಜನಕ್ಕೆ ಧೈರ್ಯ ಕೊಡುವ ನೆಲೆಯಾಗಿತ್ತು ಅದು.

ರಾಮದಾಸ್ ವಿಶ್ವವಿದ್ಯಾನಿಲಯದ ನೌಕರಿಯಲ್ಲಿದ್ದೂ ಹೋರಾಟ ಮಾಡಿದ್ದಿದೆಯಲ್ಲ , ಅದು ಸಾಮಾನ್ಯ ಧೈರ್ಯವಲ್ಲ. ಇದು ಅಪರೂಪವೆ. ಇನ್ನು ಮುಂದೆ ಯಾವುದೇ ಕಾರ್ಯಕ್ರಮ, ಹೋರಾಟ ಮಾಡಿದ್ರೂ ರಾಮದಾಸ್ ಇಲ್ಲ ಅನ್ನೋದು ಖಂಡಿತಾ ಗೊತ್ತಾಗುತ್ತೆ. ಆ ಮಟ್ಟಿಗೆ ಹಿ ವಾಸ್ ಎ ಫೋರ್ಸ್. ೪೦ ವರ್ಷಗಳ ಮೈಸೂರಿನ ಸಾಮಾಜಿಕ ಹೋರಾಟದ ಚರಿತ್ರೆ ಅಂತ ಯಾರಾದರೂ ಬರೆದ್ರೆ ರಾಮದಾಸ್ ಪಾತ್ರ ಬಹಳ ಮಹತ್ವದ್ದು ಮತ್ತು ಮುಖ್ಯವಾದದ್ದು. ನಿರಂತರವಾದ ಹೋರಾಟದಲ್ಲಿ ಅವರದು ಎದ್ದು ನಿಲ್ಲುವ ವ್ಯಕ್ತಿತ್ವ. ಮೈಸೂರಿನ ಸಾಮಾಜಿಕ ಕಾಳಜಿಯ ಹೋರಾಟದಲ್ಲಿ ರಾಮದಾಸ್ ಮೊಟ್ಟಮೊದಲಿಗೆ ನೆನಪಿಸಿಕೊಳ್ಳಬೇಕಾದ ಹೆಸರು.

ಕರ್ನಾಟಕದಲ್ಲಿ ಇವತ್ತು ರಾಮದಾಸ್ ತರದವರು ಎಷ್ಟು ಜನ ಸಿಕ್ತಾರೆ. ನಾವು ಅವರನ್ನು ವಿಮರ್ಶೆಮಾಡಕಾಗಲ್ಲ. ನಮಗೆ ಪ್ರೀತಿಯನ್ನ ಕೊಟ್ಟವರು. ಏನೂ ಇಲ್ಲದೆ ಇದ್ದ ನೆಲೆಯಿಂದ ಬಂದ ರಾಮದಾಸ್ ವ್ಯಕ್ತಿತ್ವವನ್ನು ಕಟ್ಟಿಕೊಂಡು ಮೈಸೂರು ಅಂದಾಕ್ಷಣ ರಾಮದಾಸ್ ಅವರನ್ನ ನೆನಪಿಸಿಕೊಳ್ಳುವ ಮಟ್ಟಿಗೆ ಬೆಳೆದ್ರು. ಇದು ಸಾಮಾನ್ಯವಾದದ್ದಲ್ಲ. ರಾಮದಾಸ್ ಗಳಿಸಿ ಕೊಂಡುದ್ದೆಲ್ಲ ಸ್ವಯಾರ್ಜಿತವಾಗಿ, ಹೋರಾಟದಿಂದ. ಅವರಿಗೆ ಯಾವುದೇ ಜಾತಿಯ ಬೆಂಬಲವಾಗ್ಲಿ, ಗಾಡ್‌ಫಾದರ್ ಆಗ್ಲಿ ಇರಲಿಲ್ಲ. ತನ್ನನ್ನು ತಾನೇ ಕಟ್ಟಿಕೊಂಡವರಲ್ಲಿ ರಾಮದಾಸ್‌ರೂ ಒಬ್ಬರು. ರಾಮದಾಸ್ ಮೈಸೂರಿನಲ್ಲಿ ಒಂದು ಹೋರಾಟದ ಶಕ್ತಿಯಾಗಿ, ವ್ಯಕ್ತಿಯಾಗಿ ಬೆಳೆದವರು. ಇಲ್ಲಿ ಅವರ ನೆನಪು ಉಳಿಸಿಕೊಳ್ಳುವಂತೆ ಮಾಡುವುದು ಮೈಸೂರು ನಗರಪಾಲಿಕೆಯ ನೈತಿಕ ಜವಾಬ್ದಾರಿ ಎಂದು ನಾನು ಭಾವಿಸಿದ್ದೇನೆ.

# ಧೀಮಂತಿಕೆ, ಹೃದಯ ಶ್ರೀಮಂತಿಕೆ...

ಪ್ರೊ. ಜಿ. ಕೆ.ಗೋವಿಂದರಾವ್

ಈ ಬಗೆಯ ಒಂದು ಗಳಿಗೆ ಏರ್ಪಡಬಹುದು, ನಾನು ಈ ಬಗೆಯ ಲೇಖನ ಬರೆಯಬೇಕಾಗಬಹುದು ಎಂದು ಖಂಡಿತ ಎಣಿಸಿರಲಿಲ್ಲ. ರಾಮದಾಸ್ ಬಗ್ಗೆ ಬರೆಯುವುದು ಅತ್ಯಂತ ಸಂತಸದ ವಿಷಯ ಹೌದು. ಆದರೆ ಈ ಸಂದರ್ಭದಲ್ಲಿ ಬರೆಯಬೇಕಾಗಿ ಬಂದುದು ನನಗೆ ಮನಸ್ಸು ಕಿವುಚುವ ಸಂಗತಿ.

ರಾಮದಾಸ್ ಬಗ್ಗೆ ನೆನೆಸಿಕೊಂಡಾಗಲೆಲ್ಲ ನನಗೆ ತಂಪುಗಾಳಿಯ ಅನುಭವವಾಗುತ್ತದೆ. ಚಳಿಗಾಲದ ಬೆಳಗಿನಲ್ಲಿ ಮೈಗೆ ಸೂರ್ಯನ ಮೊದಲ ಕಿರಣಗಳ ಸ್ಪರ್ಶದಿಂದ ಆಗುವ ಪುಲಕದ ಅನುಭವವಾಗುತ್ತದೆ. ತಂಗಾಳಿಯ ಹಾಗೆ, ಬೆಳಗಿನ ಬೆಚ್ಚನೆ ಸೂರ್ಯಕಿರಣಗಳ ಹಾಗೆ ಸ್ವಚ್ಛಂದ ವ್ಯಕ್ತಿತ್ವ ರಾಮದಾಸರದು. ಅವರ ಮನೆಯ ಕಾಂಪೌಂಡಿನಲ್ಲಿ ಬೆಳೆದ ಗಿಡಗಳಿಗೆ ಸ್ವತಃ ತಾವೇ ನೀರು ಹಾಕಿ ಪೋಷಿಸಿದ ಹಾಗೆ ಅವರು ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು; ಆ ಗಿಡಗಳ ಹಾಗೆಯೇ ಸಹಜವಾಗಿ, ಸುಂದರವಾಗಿ ರೂಪುಗೊಂಡಿದ್ದರು. ಈ ಮನುಷ್ಯನ ಬಳಿ ಮನಸ್ಸು ಬಿಚ್ಚಿ ಮಾತನಾಡಬಹುದು, ಯಾವ ಮುಜುಗರಗಳಿಲ್ಲದೆ ನಡೆದುಕೊಳ್ಳಬಹುದು, ಮುಕ್ತವಾಗಿ ಚರ್ಚಿಸಬಹುದು. ವಿರೋಧಿಸಬಹುದು, ಜಗಳಗಳನ್ನೂ ಆಡಬಹುದು ಎಂಬ ವಿಶ್ವಾಸ ಮೂಡಿಸುವಂಥ ವಾತಾವರಣವಿರುತ್ತಿತ್ತು. ಅವರ ಮಾತುಗಳಲ್ಲಿ ದೃಢತೆಯಿತ್ತು. ಗಾಢ ನಂಬಿಕೆಗಳ ಛಾಪು ಇರುತ್ತಿತ್ತು. ಅದರ ಜೊತೆಗೇ ಒಂದಂಶ ಭಿನ್ನ ರೀತಿಯ ಮಾತಿರಬಹುದು, ನಂಬಿಕೆಯಿರಬಹುದು ಎಂಬ ವಿನಯದ ಭಾವವೂ ಇರುತ್ತಿತ್ತು. ಒಂದು ವಿಷಯದ ಬಗ್ಗೆ ಮಾತ್ರ ಅವರ ಅಚಲವಾದ ಹಾಗೂ ಬೇಷರತ್ತಾದ ನಂಬಿಕೆಯೆಂದರೆ ಜೀವಪ್ರೇಮ. ಮನುಷ್ಯ, ಮನುಷ್ಯ ಸಂಬಂಧಗಳು, ಭವಿಷ್ಯ ಪ್ರಜ್ಞೆ ಹಾಗೂ ಮನುಷ್ಯ ವಿಕಾಸ ಇವುಗಳ ಕುರಿತಾದ ಅವರ ಶ್ರದ್ಧೆ ಸುತ್ತಲವರನ್ನು ಬಹುಬೇಗದಲ್ಲಿ ಪ್ರಭಾವಿಸುವಷ್ಟು ಗಾಢವಾಗಿದ್ದಿತು.

ರಾಮದಾಸ್ ಅವರ ಆಸಕ್ತಿಗಳು ವೈವಿಧ್ಯಮಯವಾಗಿದ್ದವು. ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಕ ಹೀಗೆ ಹಲವಾರು. ಆದರೆ ಅವರದು ಈ ಯಾವ ವಿಷಯಗಳಲ್ಲಿಯೂ ಕೇವಲ ವಿಚಾರ ಸಂಕಿರಣಗಳ ವೇದಿಕೆಗಳಿಗೆ ಸೀಮಿತವಾದ ಆಸಕ್ತಿಗಳಾಗಿರಲಿಲ್ಲ. ಅಥವಾ ಪಾಂಡಿತ್ಯ ಪೂರ್ವ ಲೇಖನಗಳಷ್ಟೇ ಆಗಿರಲಿಲ್ಲ. ಅವರೊಬ್ಬ ಬೀದಿ ಹೋರಾಟಗಾರ. ಜನಗಳ ಮಧ್ಯೆಯೇ ಅವರು ಸಂಪೂರ್ಣ ಅರಳುತ್ತಿದ್ದುದು -ಚಳವಳಿಗಳು, ಧರಣಿಗಳು, ರ್‍ಯಾಲಿಗಳು;ಮೈಸೂರಿನಲ್ಲಷ್ಟೇ ಅಲ್ಲ, ಕರ್ನಾಟಕದ ಯಾವ ಮೂಲೆಯಲ್ಲಿಯೇ ಇಂಥದ್ದು ಆಗಲಿ ಅಲ್ಲಿ ರಾಮದಾಸರು ಇದ್ದೇ ಇರುತ್ತಿದ್ದರು. ಮೈಸೂರಿನಲ್ಲಿಯಂತೂ ರಾಮದಾಸರ ನೇತೃತ್ವವಿಲ್ಲದ ಯಾವ ಪ್ರಗತಿಪರ ಹೋರಾಟವೂ ಅಸಾಧ್ಯವೆನಿಸುವಷ್ಟು ಅವರು ತಮ್ಮನ್ನು ತಾವು ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡಿದ್ದರು. ಸ್ವಾತಂತ್ರ್ಯ, ಸಮಾನತೆ, ಜಾತಿವಿನಾಶ ಹಾಗೂ ಇವುಗಳನ್ನೆಲ್ಲ ಒಳಗೊಂಡ ಪ್ರಧಾನ ಮೌಲ್ಯವಾದ ಪ್ರಜಾಪ್ರಭುತ್ವ ಇವುಗಳೇ ರಾಮದಾಸರನ್ನು ಸ್ಫೂರ್ತಿಗೊಳಿಸುತ್ತಿದ್ದ, ಜೀವಂತವಾಗಿರಿಸಿದ್ದ ಆದರ್ಶಗಳು. ಅವರ ವ್ಯಕ್ತಿತ್ವದಲ್ಲಿ, ಅವರ ಮಾತುಗಳಲ್ಲಿ ಚಡಪಡಿಕೆ ಕಾಣುತ್ತಿದ್ದರೂ, ಪ್ರಜ್ಞಾಪ್ರಭುತ್ವದಲ್ಲಿ ಅವಶ್ಯವಾದ ತಾಳ್ಮೆಯ ಗುಣವೂ, ಇಂದಿಗಿಂತ ನಾಳೆ ಹಸನಾಗಬಹುದು ಎಂಬ ನಂಬಿಕೆಯಲ್ಲಿ ಆ ನಾಳೆಗಾಗಿ ಕಾಯುವ ಗುಣವೂ ಅಗಾಧವಾಗಿದ್ದಿತು.

ವೇದಿಕೆಗಳ ಮೇಲೆ ಅವರು ಸಿಟ್ಟಿನಲ್ಲಿ ಮಾತನಾಡಿದ ಅಥವಾ ಪತ್ರಿಕಾ ಹೇಳಿಕೆಗಳಲ್ಲಿ ಕಟುವಾಗಿ ಮಾತನಾಡಿದ ಅನೇಕ ಸಂದರ್ಭಗಳಿದ್ದರೂ ಯಾವ ಕ್ಷಣದಲ್ಲಿಯೂ ಮನುಷ್ಯನ ಅಂತರ್ಯದಲ್ಲಿ ವಿಚಾರ ಆಸಕ್ತಿ, ವಿವೇಚನೆ, ಮಾನವೀಯ ಲಕ್ಷಣಗಳು ಇವು ಆಳದಲ್ಲಿ ಇದ್ದೇ ಇರುತ್ತವೆ ಎಂಬ ನಂಬಿಕೆಯನ್ನು ಮಾತ್ರ ಅವರು ಎಂದೂ ಕಳೆದುಕೊಳ್ಳಲಿಲ್ಲ. ಹಾಗಾಗಿಯೇ ಅವರ ಸಿಟ್ಟು ಸೆಡವು ಸಿಡುಕುಗಳು ಕೂಡ ಕ್ರಿಯಾಶೀಲವೂ, ಮೂಲದಲ್ಲಿ ಅತ್ಯಂತ ಆರ್ದ್ರವೂ ಆಗಿರುತ್ತಿದ್ದವು. ಈ ಗುಣವಿದ್ದುದರಿಂದಲೇ ಅವರು ಯಾವ ಸಂದರ್ಭದಲ್ಲಿ ಯಾರೊಡನೆ ಏನೇ ಭಿನ್ನಾಭಿಪ್ರಾಯ, ವಿರೋಧ ಮತ್ತು ಬಹಿರಂಗ ಉಗ್ರ ಪ್ರತಿಭಟನೆ ವ್ಯಕ್ತಪಡಿಸಿರಲಿ, ಮನಸ್ಸಿನಲ್ಲಿ ಆ ಗಳಿಗೆಯನ್ನು ಸದಾ ನೆನೆಪಿನಲ್ಲಿಟ್ಟು ಆ ವ್ಯಕ್ತಿಗಳ ಬಗ್ಗೆ ಹುಳಿಯಾಗುತ್ತಿರಲಿಲ್ಲ. ಮನಸ್ಸನ್ನು ಈ ಬಗೆಯಲ್ಲಿ ನಿರ್ಮಲವಾಗಿ ಇರಿಸಿಕೊಳ್ಳುವುದು ಖಂಡಿತ ಸುಲಭವಲ್ಲ. ಬಹು ದೃಢವಾದ ನಿಲುವುಗಳನ್ನು ತೆಗೆದುಕೊಳ್ಳುತ್ತಿದ್ದರೂ ಕೂಡ ಆ ನಿಲುವು ಕೊಂಚ ಅತಿಯಾದ್ದು ಎನಿಸಿದರೆ ತಮ್ಮ ನಿಲುವನ್ನು ಬದಲಿಸಿಕೊಳ್ಳುವಷ್ಟು ತೆರೆದ ಮನಸ್ಸು ಅವರಲ್ಲಿದ್ದಿತು. ಮೈಸೂರು ಚಾಮುಂಡೇಶ್ವರಿ ಉಪಚುನಾವಣೆಯ ಸಂದರ್ಭದಲ್ಲಿ ಸಿದ್ಧರಾಮಯ್ಯನವರಿಗೆ ನೈತಿಕ ಬೆಂಬಲ ಸೂಚಿಸಬೇಕು ಎಂದು ನಿರ್ಧರಿಸಿದ್ದು, ಆ ನಿಟ್ಟಿನಲ್ಲಿ ಮುಂದುವರೆದು ಮತಯಾಚನೆಗೆ ಜನಗಳ ಬಳಿಗೆ ಹೋಗಬೇಕು ಎಂಬುದರ ಬಗ್ಗೆ ಅವರ ವಿರೋಧವಿದ್ದಿತು. ಆದರೆ ನಾವು ಕೆಲವು ಸ್ನೇಹಿತರು ಈ ಚುನಾವಣೆ ಪ್ರಜಾಪ್ರಭುತ್ವದ ಅಳಿವು ಉಳಿವಿನ ಪ್ರಶ್ನೆ, ಕೋಮುವಾದಕ್ಕೆ ನಾವು ನೀಡಬಹುದಾದ ಸ್ಪಷ್ಟ ಉತ್ತರವೆಂದು ವಾದಿಸಿದ ಮೇಲೆ ಅವರು ಸಂಪೂರ್ಣ ತಮ್ಮ ನಿಲುವನ್ನು ಬದಲಿಸಿಕೊಂಡದ್ದಷ್ಟೇ ಅಲ್ಲ; ನಾಲ್ಕು ದಿವಸ ಹಗಲು ರಾತ್ರಿ, ರಸ್ತೆ ರಸ್ತೆಗಳಲ್ಲಿ, ಜನಗಳ ಬಳಿ

ಸಿದ್ದರಾಮಯ್ಯನವರ ಪರ ಮತ ಯಾಚಿಸಲು ಉತ್ಸಾಹದಿಂದ ಪಾಲ್ಗೊಂಡಿದ್ದರು. ಒಂದು ದೊಡ್ಡ ಕಾರಣಕ್ಕಾಗಿ ರಾಜಿ ಮಾಡಿಕೊಳ್ಳುವುದೂ ಕೂಡ ವೈಯಕ್ತಿಕ ಬದುಕಿನಲ್ಲಿ ಪ್ರಜಾಪ್ರಭುತ್ವದ ನಾಡಿನಲ್ಲಿ ರೂಢಿಸಿಕೊಳ್ಳಬೇಕಾದ ಬಹುಮುಖ್ಯ ಗುಣ ಎಂಬುದು ಅವರಿಗೆ ಗೊತ್ತಿದ್ದಿತು.

ಅವರ ಮನೆಯಲ್ಲಿ ಕಾಲ ಕಳೆಯುವುದೇ ಒಂದು ವಿಶಿಷ್ಟ ಅನುಭವ. ಎಷ್ಟು ತರಹೆಯ ಜನ ಅಲ್ಲಿ ಬರುತ್ತಿದ್ದರು! ಯುವಕ-ಯುವತಿಯರು ಪ್ರೇಮಿಸಿ ಮದುವೆಯಾಗುವುದಕ್ಕೆ ಜಾತಿ ಅಡ್ಡ ಬಂದರೆ ರಾಮದಾಸರ ಮನೆಯಲ್ಲಿ ಸಮಸ್ಯೆ ಪರಿಹಾರ; ಎಲ್ಲ ಪ್ರತಿಭಟನೆಗಳ ರೂಪುರೇಷೆಗಳ ನಿರ್ಧಾರ ಅಲ್ಲಿಯೇ;ಯಾರಿಗೋ ಅನ್ಯಾಯವಾಗಿದೆ, ಮತ್ಯಾರದೋ ಶೋಷಣೆ ನಡೆಯುತ್ತಿದೆ ಎಂದರೆ ಅದರ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತಾದ ಚರ್ಚೆ ಅವರ ಸಮ್ಮುಖದಲ್ಲಿ. ಆದರೆ ಎಲ್ಲವೂ ಇಷ್ಟು ಘನಗಂಭೀರ ವಿಷಯಗಳೇ ಆಗಿರದೆ ಆಗಾಗ ಕೆಲವು ಗಾಸಿಪ್‌ಗಳೂ ಸೇರಿಕೊಳ್ಳುತ್ತಿದ್ದವು. ರಾಮದಾಸ್ ತಮ್ಮ ಸುತ್ತಲ ಹಿರಿ-ಕಿರಿಯ ಕೆಲವು ವ್ಯಕ್ತಿಗಳನ್ನು ಸಮರ್ಥವಾಗಿ ಅನುಕರಿಸುತ್ತಿದ್ದರು. ಆ ವ್ಯಕ್ತಿಗಳ ವೈಚಿತ್ರ್ಯಗಳು, ಡಾಂಭಿಕತೆ, ಮಾತಿನಲ್ಲಿ ಕಪಟ, ಕೆಲವೊಮ್ಮೆ ಶುದ್ಧ ಮೂರ್ಖತನಗಳು-ಈ ಎಲ್ಲವನ್ನೂ ಎಂದೂ ಕೇಡಿನ ಬುದ್ಧಿಯಿರದೆ ಅನುಕರಿಸುತ್ತಿದ್ದರು. ಇದು ಕೇವಲ ಆ ಕ್ಷಣದ ಆರೋಗ್ಯಕರ ಮನರಂಜನೆಗಾಗಿ ಮಾತ್ರವಾಗಿರುತ್ತಿದ್ದಿತು. ಅವರ ಮನೆಗೆ ಹೋದಾಗಲೆಲ್ಲ ಗಂಡ ಮತ್ತು ಅವರ ಸ್ನೇಹಿತರ ಜೊತೆ ಸಂಕೋಚದಲ್ಲಿ, ಮೌನದಲ್ಲಿ ಮುದುಡಿ ಕೂತು ಆಗೊಮ್ಮೆ - ಈಗೊಮ್ಮೆ ಸುತ್ತಲ ಮಾತುಗಳಿಗೆ, ಗಂಡನ ಹಾಗೂ ಅವರ ಸ್ನೇಹಿತರ 'ಹುಚ್ಚು'ಗಳಿಗೆ ಪ್ರತಿಕ್ರಿಯೆಯೇ ಎಂಬಂತೆ ಸಣ್ಣದಾಗಿ ಮುಗುಳ್ನಗುತ್ತಿದ್ದ ನಿರ್ಮಲ ಮತ್ತು ಮೈತುಂಬ ಉಲ್ಲಾಸ ತುಂಬಿಕೊಂಡು ಮನೆತುಂಬ ಓಡಾಡಿಕೊಂಡು, ಒಮ್ಮೊಮ್ಮೆ ಬಾಯಿತುಂಬ ಮಾತನಾಡತ್ತಿದ್ದ ಮಗಳು ಸ್ನೇಹಾ ಹಾಗೂ ಮನೆಯಲ್ಲಿದ್ದರೆ ಆಗ -ಈಗ ತುಂಬಿದ ನಗೆಯೊತ್ತು ಮುಖ ತೋರಿಸುತ್ತಿದ್ದ ಅಳಿಯ ಓಂಕಾರ್ ಇವರುಗಳೆಲ್ಲ 'ಚಾರ್ವಾಕ' ಮನೆಯನ್ನು ಬೆಚ್ಚಗೆ ಇರಿಸುತ್ತಿದ್ದರು. ಅವರ ಮನೆಯಲ್ಲಿ ಕಾಲ ಕಳೆಯುವುದೇ ಒಂದು ಅನುಭವ.

ಬುದ್ಧ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್, ಲೋಹಿಯಾ, ಜೆ.ಪಿ ಇವರುಗಳು ರಾಮದಾಸ್ ಅವರ ಮೇಲೆ ಗಾಢ ಪ್ರಭಾವ ಬೀರಿರುವುದು ಎಲ್ಲರೂ ಗಮನಿಸಿರುವ ಸಂಗತಿ. ಹಾಗೆಯೇ ಕುವೆಂಪು, ಕಾರಂತ ಮತ್ತು ಲಂಕೇಶ್, ಅನಂತಮೂರ್ತಿ, ತೇಜಸ್ವಿ, ಮಹದೇವ ಇವರುಗಳ ಸಾಹಿತ್ಯ ಕೂಡ. ಈ ಪ್ರಭಾವಗಳು ಕೇವಲ ಅಕಡೆಮಿಕ್ ಸಂಗತಿಯಾಗಿರದೆ ಅವರ ವಿಚಾರಶಕ್ತಿ ಹಾಗೂ ಕ್ರಿಯೆಗಳನ್ನು ರೂಪಿಸಿದ ಜೀವಂತ ಸ್ಫೂರ್ತಿಗಳಾಗಿದ್ದವು. ಆ ಸ್ಫೂರ್ತಿಯನ್ನು ಕಡೆಯವರೆವಿಗೂ ಹಾಗೆಯೇ ಉಳಿಸಿಕೊಂಡು ಬಂದಿದ್ದರು. ಹೀಗಾಗಿಯೇ ವ್ಯಕ್ತಿಗಳ ದಾಕ್ಷಿಣ್ಯದಲ್ಲಿ ಅಥವಾ ಸಂದರ್ಭಗಳ ಒತ್ತಡದಲ್ಲಿ ತಮ್ಮ ನಿಲುವನ್ನು ಸಡಿಲಗೊಳಿಸುವುದು ಅವರಿಗೆ ಸಾಧ್ಯವೇ ಆಗುತ್ತಿರಲಿಲ್ಲ. ರಾಜಕೀಯ ಸಾಮಾಜಿಕ ವಿಷಯಗಳಲ್ಲಿ ಅವರ ವಿಚಾರ ಸ್ಪಷ್ಟತೆ, ಪ್ರಖರತೆಗಳು ಎಷ್ಟಿದ್ದಿತೋ ಅಷ್ಟೇ ಪ್ರಖರವಾದ ಸಾಹಿತ್ಯಕ ವಿಮರ್ಶಾ ಗುಣವೂ ಇತ್ತು. ಈ ವಿಷಯ ಅವರ ಬಹು ಆಪ್ತರಿಗೆ ವಿನಾ ಬೇರೆಯವರಿಗೆ ತಿಳಿಯುವುದು ಸಾಧ್ಯವಿರಲಿಲ್ಲ.

ಕಾರಣವೆಂದರೆ, ಅವರು ಬರೆಯುವ ಅಥವಾ ಸಾಹಿತ್ಯ ವೇದಿಕೆಗಳಲ್ಲಿ ಭಾಗವಹಿಸುವ ಪರಿಪಾಠ ಇಟ್ಟುಕೊಂಡಿರಲಿಲ್ಲ. ಕೆಲವು ಪ್ರತಿಷ್ಠಿತ, ಪ್ರಮುಖ ಲೇಖಕರುಗಳ ಕುರಿತಾದ ಅವರ ಒಳನೋಟಗಳು ನನ್ನನ್ನು ಅಚ್ಚರಿಗೊಳಿಸುತ್ತಿದ್ದವು.

ಇಂಥ ಎಲ್ಲಾ ಮಾನಸಿಕ ಸಂಸ್ಕಾರಗಳಿಂದಲೇ ಅವರು ಅಹಿಂಸಾವಾದಕ್ಕೆ ಬೇಷರತ್ತಾಗಿ ಅರ್ಪಿಸಿಕೊಂಡು ಬಿಟ್ಟಿದ್ದರು. ಮಹಾನ್ ಚಿಂತಕರು, ಮಹತ್ವದ ಲೇಖಕರು ಇವರುಗಳ ಪ್ರಭಾವದಿಂದಾಗಿ ಬದುಕಿನ ಬಗ್ಗೆ, ಭವಿಷ್ಯದ ಬಗ್ಗೆ, ರಾಷ್ಟ್ರದ ಬಗ್ಗೆ ಅವರು ಎಂದೂ ಸಿನಿಕರಾಗುವುದು ಸಾಧ್ಯವೇ ಇರಲಿಲ್ಲ. ಸಿನಿಕತನವೇ ಹಿಂಸಾವಾದಕ್ಕೆ ಮತ್ತು ಅದರ ಸೋದರ ಸಂಬಂಧಿ ಕೋಮುವಾದಕ್ಕೆ ನಾಂದಿ. ಮಾತು, ಮಾತಿನ ಮೂಲಕ ಮನಸ್ಸುಗಳನ್ನು ಮುಟ್ಟುವ ಯತ್ನ, ವಿಚಾರ ವಿನಿಮಯ, ಚರ್ಚೆ ಈ ಯತ್ನಗಳಲ್ಲಿ ನಂಬಿಕೆ, ತಾಳ್ಮೆ ಇವುಗಳೇ ಅಹಿಂಸೆಯ ಗುಣಗಳು. ರಾಮದಾಸ್ ಅವರ ಬದುಕಿನ ರೀತಿಯೇ ಇವುಗಳನ್ನು ಅಳವಡಿಸಿಕೊಂಡು ಪಾಲಿಸುವುದರಲ್ಲಿದ್ದಿತು. ಅವರನ್ನು ಕೋಮುವಾದಿಗಳು ಸಹಿಸದೇ ಇದ್ದಂತೆಯೇ ಹಿಂಸಾವಾದಿಗಳೂ ರಾಮದಾಸರನ್ನು ಒಲಿಸಿಕೊಳ್ಳುವ ಯತ್ನಗಳ್ಯಾವುವೂ ಯಶಸ್ವಿಯಾಗುವುದಿಲ್ಲವೆಂಬುದು ಖಂಡಿತವಾದ ಮೇಲೆ ಅವರನ್ನು ಅಷ್ಟೇ ಅಸಹನೆಯಿಂದ ಕಾಣುತ್ತಿದ್ದುದು ಸ್ಪಷ್ಟವಾಗಿದ್ದಿತು.

ರಾಮದಾಸ್ ಅವರು ಏನು ಬಿಟ್ಟು ಹೋಗಿದ್ದಾರೆ? ಮುಂದಿನ ಪೀಳಿಗೆಗಳು ಹೇಗೆ ಅವರನ್ನು ನೆನೆಸಿಕೊಳ್ಳುತ್ತವೆ? ನೆನೆಸಿಕೊಳ್ಳುವುದಕ್ಕೆ ಇರುವ ಅವರ ಮೂರ್ತವಾದ ಸಾಧನೆಗಳೇನು?ನನಗೆ ಗೊತ್ತಿದ್ದ ಮಟ್ಟಿಗೆ ಅವರ ಯಾವುದೇ ಪ್ರಕಟಿತ ಪುಸ್ತಕ ಇಲ್ಲ. ಹಾಗೆಂದ ಮಾತ್ರಕ್ಕೆ 'ನಾನು ಹೋದ ಮೇಲೆ ಹತ್ತು ವರ್ಷಗಳಲ್ಲಿ ಜನ ತನ್ನನ್ನು ಹೇಗೆ ತಾನೇ ನೆನೆಸಿಕೊಳ್ಳುತ್ತಾರೆ?'ಎಂದು ಅವರು ಕೊರಗುತ್ತಿದ್ದರೆಂದಾಗಲೀ, ಎಳ್ಳಷ್ಟೂ ಅದರ ಕುರಿತು ತಲೆಕೆಡಿಸಿಕೊಂಡಿದ್ದರೆಂದಾಗಲೀ ಅಲ್ಲವೇ ಅಲ್ಲ. ಆ ಆಲೋಚನೆ ಬರುವುದು ಅವರ ಆಪ್ತರಿಗೆ, ಗೆಳೆಯರಿಗೆ -ಸಕಾರಣವಾಗಿ ಕೂಡ. ಇಷ್ಟು ವಿಚಾರಶೀಲ, ಧೈರ್ಯಪ್ರವೃತ್ತಿಯ, ಜೀವಪ್ರೇಮದ ವ್ಯಕ್ತಿಯೊಬ್ಬ ಕಾಲಕ್ರಮೇಣ ಸಂಪೂರ್ಣ ಅಳಿಸಿಹೋಗಿಬಿಡಬೇಕೆ ಎಂದು ಖೇದಗೊಳ್ಳುವುದು ನಾವು. ಆದರೆ ಹೀಗೆ ಆಲೋಚನೆ ಮಾಡುತ್ತಿರುವಾಗಲೇ ಮತ್ತೊಂದು ಸತ್ಯದ ಅರಿವಾಗುತ್ತ ಹೋಗುತ್ತದೆ ನಮಗೆ. ನಾವು ಕಲಿಯುವುದು, ಬೆಳೆಯುವುದು, ಸ್ಫೂರ್ತಿಗೊಳ್ಳುವುದು ಲೇಖಕರ, ಧರ್ಮಗುರುಗಳ, ರಾಜಕಾರಣಿಗಳ, ಯಾರೇ ಇರಲಿ- ಅವರುಗಳು ರಚಿಸಿದ ಕೃತಿಗಳಿಂದ ಮಾತ್ರವಲ್ಲ. ಅಥವಾ ಕಣ್ಣಿಗೆ ಹೊಡೆಯುವಂಥ ಅವರ ಸಾಧನೆಗಳಿಂದಲ್ಲ. ಅವು ಕನಿಷ್ಠ ಪ್ರಮಾಣದವು. ನಾವು ನಿಜವಾಗಿ ಪ್ರಭಾವಿತರಾಗುವುದು ಅವರ ಬದುಕಿನ ರೀತಿಯಿಂದ, ನಡವಳಿಕೆಯಿಂದ, ಮನುಷ್ಯ ಸಂಬಂಧಗಳಲ್ಲಿ ಅವರು ತೋರಿದ ಶ್ರದ್ಧೆಗಳಿಂದ; ಹಾಗೆಯೇ ಅವರ ವಿಚಾರ ಧೀಮಂತಿಕೆ, ಹೃದಯ ಶ್ರೀಮಂತಿಕೆ ಇವುಗಳಿಂದ. ಇಂದು ಅವು ನಮ್ಮನ್ನು ಪ್ರಭಾವಿಸಿದರೆ ಅದು ಕ್ರಮೇಣ ಸುಪ್ತವಾಗಿ ನಮ್ಮ ಜೀವನ ರೀತಿಯೇ ಆಗುತ್ತದೆ, ನಾವು ಉಸಿರಾಡುವ ಗಾಳಿಯೇ ಆಗುತ್ತದೆ.

ಪರಿಣಾಮವಾಗಿ ತಲೆಮಾರಿನಿಂದ ತಲೆಮಾರಿಗೆ ಹರಿಯುತ್ತದೆ. ಇದೊಂದು ವಿವರಣೆಗಳಿಗೆ ಮೀರಿದ ರೀತಿಯ ಶಾಶ್ವತ ಮಾದರಿ. ರಾಮದಾಸರ ನೆನಪು ಈ ಬಗೆಯದು. ನೆನಪಷ್ಟೇ ಅಲ್ಲ-ಅನುಭವ.

ತೇಜಸ್ವಿ ತೀರಿಕೊಂಡ ಒಂದೆರಡು ವಾರಗಳ ನಂತರ ನಾನು ರಾಮದಾಸ್ ಅವರನ್ನು ಭೇಟಿಯಾದಾಗ 'ತೇಜಸ್ವಿ ಅವರ ನಿಧನದಿಂದ ಅಗಿರುವ ನಷ್ಟವು ನಮ್ಮನ್ನು ಬಹಳ ದಿನಗಳ ಕಾಲ ಕಾಡುತ್ತಿರುತ್ತದೆ'ಅಂದಿದ್ದೆ. ಅದಕ್ಕವರು ತೀರ ಖಿನ್ನರಾಗಿ 'ಹೌದು'ಎಂದಿದ್ದರು. ಆದರೆ ಯಾರಿಗೆ ಗೊತ್ತಿತ್ತು ಈ ಮನುಷ್ಯನೂ ಅಷ್ಟೇ ಅವಸರದಲ್ಲಿದ್ದಾರೆ ಎಂದು?

ರಾಮದಾಸ್ ಅವರು ಯಾರಿಂದಲೂ ಏನೂ ಬಯಸಿರಲಿಲ್ಲ. ಯಾವುದಕ್ಕೂ ಯಾರ ಬಳಿಯೂ ತಲೆಬಾಗಲಿಲ್ಲ. ಆದರೆ ತಮ್ಮ ದೇಹಸ್ಥಿತಿ ಗುಣವಾಗಿ ಪೂರ್ವಸ್ಥಿತಿಗೆ ಮರಳಲು ಅಸಾಧ್ಯವಾದಷ್ಟು ಹದಗೆಟ್ಟಿದೆ ಎಂಬುದು ಖಂಡಿತವಾದ ಮೇಲೆ ಅವರ ಮನೆಯವರ ಬಳಿ, ಆಪ್ತರ ಬಳಿ, ಗೆಳೆಯರ ಬಳಿ ಹೇಳುತ್ತಿದ್ದ ಒಂದೇ ಮಾತೆಂದರೆ 'ನನಗೆ ಸಾವಿನ ಭಯವಿಲ್ಲ, ಸಿದ್ಧನಿದ್ದೇನೆ. ಆದರೆ ನರಳುವುದು, ಅದರಿಂದ ಬೇರೆಯವರಿಗೆ ಹೊರೆಯಾಗುವುದು ಇಷ್ಟವಿಲ್ಲ ಮುಕ್ತನಾದರೆ ಸಾಕು'ಎಂದು.

ಈ ಆಸೆ, ಒಂದು ಬಗೆಯ ಪ್ರಾರ್ಥನೆ ಮುಟ್ಟಿದ್ದೇ ತಡ ತನ್ನನ್ನು ಇದುವರೆವಿಗೂ ಏನನ್ನೂ ಬೇಡದೆ, ಎದೆ ಸೆಟೆಸಿಕೊಂಡೇ ಬಾಳಿ ಬದುಕಿದ ಈ ವ್ಯಕ್ತಿಯೂ ತನ್ನನ್ನು ಕೋರುವಂತಾಯಿತಲ್ಲ ಎಂಬ ವಿಚಿತ್ರ ವಿಜಯದ ತೃಪ್ತಿಯಲ್ಲಿ ಪ್ರಕೃತಿ ಡಬಲ್‌ಸ್ಪೀಡಿನಲ್ಲಿ ಅವರ ವಿನಂತಿಯನ್ನು ಈಡೇರಿಸಿ ಕೃತಾರ್ಥಭಾವ ತಾಳಿರಬೇಕು...

# ಕಳಚಿದ ಕೊನೆಯ ಕೊಂಡಿ

**ರಾಜಶೇಖರ ಕೋಟಿ**

೧೯೬೯ರ ದಿನಗಳವು. ಪ್ರೊ. ಎಂ.ಡಿ.ನಂಜುಂಡಸ್ವಾಮಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕೆ.ರಾಮದಾಸ್, ಪ.ಮಲ್ಲೇಶ್, ಕಡಿದಾಳು ಶಾಮಣ್ಣ, ಎನ್.ಡಿ.ಸುಂದರೇಶ್, ಬಿ.ಎನ್.ಶ್ರೀರಾಂ, ಮೊದಲಾದ ಸಮಾಜವಾದಿ ಗೆಳೆಯರು (ಒಮ್ಮೊಮ್ಮೆ ಪಿ.ಲಂಕೇಶ್ ಕೂಡಾ ) ಸಮಾಜವಾದಿ ಪಕ್ಷದ ಯುವ ಘಟಕವಾದ ಸಮಾಜವಾದಿ ಯುವಜನ ಸಭಾದ ಸಂಘಟನೆಗಾಗಿ ಧಾರವಾಡಕ್ಕೆ ಬಂದು ಹೋಗಲಾರಂಭಿಸಿದ್ದರು. ಆಗ ನಾನು ಪಾಟೀಲ ಪುಟ್ಟಪ್ಪನವರ ವಿಶ್ವವಾಣಿ ಪತ್ರಿಕೆಯ ಧಾರವಾಡದ ವರದಿಗಾರನಾಗಿದ್ದೆ. ಅವರ ಸಭೆಗಳಿಗೆ ವರದಿ ಮಾಡಲೆಂದು ನಾನು ಹೋಗುತ್ತಿದ್ದೆ. ಆಗ ನನಗೇನೂ ಅಷ್ಟಾಗಿ ಗೊತ್ತಿಲ್ಲದ ಸಮಾಜವಾದಿ ಚಿಂತನೆಗಳ ಬಗ್ಗೆ ಅವರು ಆಡುತ್ತಿದ್ದ ಮಾತುಗಳು, ಜಾತಿ ವ್ಯವಸ್ಥೆ, ಊಳಿಗಮಾನ್ಯ ಪದ್ಧತಿ, ಬಂಡವಾಳಶಾಹಿ ವ್ಯವಸ್ಥೆ, ಮೇಲು ಕೀಳು, ಶೋಷಣೆ, ದೌರ್ಜನ್ಯ, ದಬ್ಬಾಳಿಕೆ, ಮೌಢ್ಯ ಇತ್ಯಾದಿ ಬಗ್ಗೆ ಅವರ ಹರಿತ ಭಾಷಣಗಳು, ವಿಶ್ಲೇಷಣೆಗಳು, ಕ್ರಮಕ್ರಮೇಣವಾಗಿ ನನ್ನ ಮೇಲೆ ಪರಿಣಾಮ ಬೀರಲಾರಂಭಿಸಿದ್ದವು. ಅವರ ನೇರ, ಖಚಿತ, ದಿಟ್ಟ, ಮಾತುಗಳು, ಹೊಯ್ಯಾಟವಿಲ್ಲದ ಅವರ ಧ್ವನಿ ನನ್ನ ಮೇಲೆ ಮೋಡಿ ಮಾಡತೊಡಗಿದ್ದವು. ಇದರ ಪರಿಣಾಮವಾಗಿ ಒಂದು ದಿನ ನಾನು ಕೂಡ ಸಮಾಜವಾದಿ ಯುವಜನ ಸಭಾದ ಸಕ್ರಿಯ ಸದಸ್ಯನಾಗಿ ಸಮಾಜವಾದಿ ಚಳವಳಿಯಲ್ಲಿ ನನ್ನನ್ನು ತೊಡಗಿಸಿಕೊಂಡುಬಿಟ್ಟೆ. ಇದರ ಫಲವಾಗಿ, ಸಮಾಜವಾದಿ ಚಳವಳಿಗೆ ಪೂರಕವಾಗಿ ೧೯೭೨ರಲ್ಲಿ ಆಂದೋಲನ ವಾರಪತ್ರಿಕೆಯನ್ನು ನಾನು ಆರಂಭಿಸಿದೆ.

ಆಗ ಈ ಸಮಾಜವಾದಿ ಗೆಳೆಯರು ಜಾತಿ, ವರ್ಗಗಳಿಲ್ಲದ, ಮೇಲು ಕೀಳಿಲ್ಲದ, ಶೋಷಣೆ ಇಲ್ಲದ, ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ಕನಸು ಕಾಣುತ್ತಿದ್ದರು. ಆ ನಿಟ್ಟಿನಲ್ಲಿ ಸಂಘಟಿತವಾದ ಪ್ರಾಮಾಣಿಕ ಹೋರಾಟ ನಡೆಸಿದ್ದರು. ದೌರ್ಜನ್ಯ, ದಬ್ಬಾಳಿಕೆ, ಶೋಷಣೆ,

ಭ್ರಷ್ಟಾಚಾರದ ವಿರುದ್ಧ ಅವರು ಸಿಡಿದು ಬೀಳುತ್ತಿದ್ದರು;ಧ್ವನಿ ಎತ್ತಿ ಬೀದಿಗಿಳಿಯುತ್ತಿದ್ದರು. ಆಗ ಈ ಎಲ್ಲ ಚಟುವಟಿಕೆಗಳಿಗೆ ಆಂದೋಲನ ಮುಖವಾಣಿಯಂತಿತ್ತು. ಆ ಸಂದರ್ಭದಲ್ಲಿ, ಹಣಕಾಸಿನ ಮುಗ್ಗಟ್ಟಿನಿಂದ, ಮುದ್ರಣ ವ್ಯವಸ್ಥೆಯ ತೊಂದರೆಯಿಂದ ನಿಯಮಿತವಾಗಿ ವಾರವಾರವೂ ಆಂದೋಲನ ಪ್ರಕಟವಾಗುತ್ತಿರಲಿಲ್ಲ. ಇದರಿಂದ ಚಿಂತಿತರಾದ, ಕಸಿವಿಸಿಗೊಂಡ ಈ ಹಿರಿಯ ಗೆಳೆಯರು ಹಾಗೂ ಇವರೊಟ್ಟಿಗೆ ದೇವನೂರು ಮಹಾದೇವ ಕೂಡ ಸೇರಿ ನನ್ನನ್ನು ಒಪ್ಪಿಸಿ, ಒಳ್ಳೆಯ ಮುದ್ರಣ ವ್ಯವಸ್ಥೆಯನ್ನು ಹೊಂದಿದ್ದ ಪ.ಮಲ್ಲೇಶ್ ಅವರ ಮಯೂರ ಮುದ್ರಣಾಲಯದಲ್ಲಿ ಆಂದೋಲನವನ್ನು ಮುದ್ರಿಸಿ ಹೊರತರಲೆಂದು ಕೆಲವು ದಿನಗಳ ಮಟ್ಟಿಗೆಂದು ೧೯೭೪ರ ಒಂದು ದಿನ ಮೈಸೂರಿಗೆ ನನ್ನನ್ನು ಕರೆತಂದರು. ಉಟ್ಟಿದ್ದೂ ಸೇರಿದಂತೆ ಎರಡು ಜೊತೆ ಬಟ್ಟೆ, ಪತ್ರಿಕೆಯ ಪ್ರತಿಗಳಿದ್ದ ಬಗಲ ಚೀಲದೊಂದಿಗೆ ಮೈಸೂರಿಗೆ ಗುಳೇ ಬಂದ ನನಗೆ ಊಟ ವಸತಿಯ ಆಶ್ರಯವನ್ನು ತಮ್ಮ ಮನೆಯಲ್ಲಿ ಒದಗಿಸಿದವರೇ ಕೆ. ರಾಮದಾಸ್. ಕೆಲದಿನಗಳ ಮಟ್ಟಿಗೆಂದು ಬಂದ ನಾನು ಮುಂದೆ ಕೆ. ರಾಮದಾಸ್ ಹಾಗೂ ದೇವನೂರ ಮಹಾದೇವ ಅವರ ಒತ್ತಾಸೆಯಿಂದ ಮೈಸೂರಿನಲ್ಲೇ ಖಾಯಂ ಆಗಿ ಉಳಿದು ಬಿಟ್ಟೆ.

ಇದಾಗಿ ೩೩ ವರ್ಷಗಳೇ ಸಂದು ಹೋಗಿವೆ. ಈ ಅವಧಿಯಲ್ಲಿ ಸಮಾಜವಾದಿ ಚಳವಳಿ ಕಾರಣಾಂತರಗಳಿಂದ ಛಿದ್ರವಾಗಿ, ಹ್ರಾಸವಾಗಿ, ಒಟ್ಟೊಟ್ಟಿಗಿದ್ದ ಗೆಳೆಯರೆಲ್ಲ ಪರಸ್ಪರ ದೂರವಾಗಿ ಚಳವಳಿ ಕ್ಷೀಣಿಸುತ್ತಾ ಬಂದದ್ದು ಈಗ ಇತಿಹಾಸ.

ಆದರೆ, ಸಂಘಟನಾತ್ಮಕವಾಗಿ ಈ ಗೆಳೆಯರು ದೂರಾಗಿಹೋದರೂ ವೈಯಕ್ತಿತ ನೆಲೆಯಲ್ಲಿ ಒಬ್ಬೊಬ್ಬರೂ ಒಂದೊಂದು ನಡುಗಡ್ಡೆಯಂತೆ ಅಸ್ತಿತ್ವ ಉಳಿಸಿಕೊಂಡು ಸಮಾಜವಾದಿ ತತ್ವದ ಹಿನ್ನೆಲೆಯಲ್ಲೇ ವಿಭಿನ್ನ ರೀತಿಯ ಸಂಘಟನೆಗಳನ್ನು ಕಟ್ಟಿಕೊಂಡು ಹೋರಾಟ ನಡೆಸಿಕೊಂಡು ಹೊರಟದ್ದು ಕೂಡ ಅಷ್ಟೇ ಸತ್ಯ. ಪ್ರೊ. ಎಂ.ಡಿ.ನಂಜುಂಡಸ್ವಾಮಿ ರೈತ ಚಳವಳಿಯಲ್ಲಿ ತೊಡಗಿಸಿಕೊಂಡರೆ, ಪಿ. ಲಂಕೇಶ್ ಹಾಗೂ ಕೆ.ರಾಮದಾಸ್ ಪ್ರಗತಿರಂಗ ಕಟ್ಟಿಕೊಂಡರು. ತೇಜಸ್ವಿ ಮೂಡಿಗೆರೆಯಲ್ಲಿದ್ದುಕೊಂಡೇ ಪರಿಸರ, ನಿಸರ್ಗ, ಪಕ್ಷಿ ಪ್ರಾಣಿ ಪ್ರಪಂಚದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿಕೊಂಡಿದ್ದರು. ಈ ಪೈಕಿ ಮೊದಲಿಗೆ ಪಿ.ಲಂಕೇಶ್, ಆನಂತರ ಎಂ.ಡಿ.ಎನ್, ಇತ್ತೀಚೆಗೆ ತೇಜಸ್ವಿ ಕಾಲವಾದ ನಂತರ ಈಗ, ಈ ಪ್ರಮುಖ ಸಮಾಜವಾದಿ ಚಿಂತಕರ, ಹೋರಾಟಗಾರರ ನಡುವಿನ ಕೊನೆಯ ಕೊಂಡಿಯಾಗಿ ಉಳಿದಿದ್ದ ಕೆ.ರಾಮದಾಸ್ ಕೂಡ ಇನ್ನಿಲ್ಲವಾಗಿದ್ದಾರೆ.

ಇವರುಗಳ ಪೈಕಿ ಅಂದು, ೧೯೭೯ರಲ್ಲಿ ನಾನು ಧಾರವಾಡದಲ್ಲಿ ಕಂಡಿದ್ದ ಕೆ. ರಾಮದಾಸ್ ಅವರನ್ನು , ಯಾವತ್ತೂ ಯಾವುದೇ ಮುಲಾಜಿಗೆ ಒಳಗಾಗದ, ಹಂಗಿಗೆ ಒಳಗಾಗದ, ಅವರ ಹೋರಾಟದ ಮನೋಭಾವವನ್ನು ಕಳೆದ ೩೭ವರ್ಷಗಳಿಂದ ಹತ್ತಿರದಿಂದಲೇ ನೋಡುತ್ತ ಬಂದಿದ್ದೇನೆ. ಆಗ ಇಪ್ಪತ್ತೇಳೋ, ಇಪ್ಪತ್ತೆಂಟೋ ವಯಸ್ಸಿನಲ್ಲಿ ಬಿಸಿರಕ್ತದ ಯುವಕನಾಗಿದ್ದಾಗ ಸಮಾಜದ ಅಸಮಾನ ವ್ಯವಸ್ಥೆ ಬಗ್ಗೆ, ಶೋಷಣೆ, ದೌರ್ಜನ್ಯದ ವಿರುದ್ಧ ಕೊತಕೊತನೆ ಕುದಿಯುತ್ತಿದ್ದ ರಾಮದಾಸ್ ಇತ್ತೀಚಿನವರೆಗೂ ೬೭ರ ಇಳಿವಯಸ್ಸಿನಲ್ಲೂ ಅದೇ ಮನೋಭಾವ

ಉಳಿಸಿಕೊಂಡು ಹೋರಾಟ ನಡೆಸುತ್ತಿದ್ದರು. ಸಮಷ್ಟಿಯ ಒಳಿತಿಗೆ ವಿರುದ್ಧವಾದುದನ್ನು, ಹಾಗೆ ಮಾಡುವವರು ಎಷ್ಟೇ ದೊಡ್ಡವರಾದರೂ, ಎಷ್ಟೇ ಪ್ರಭಾವಶಾಲಿಗಳಾದರೂ ಯಾವ ಮುಲಾಜೂ ಇಲ್ಲದೆ, ನಿರ್ಭಿಡೆಯಿಂದ, ಧೈರ್ಯದಿಂದ ಅಂತಹವರನ್ನು ಖಂಡಿಸುತ್ತಿದ್ದರು, ವಿರೋಧಿಸುತ್ತಿದ್ದರು, ಹೋರಾಟ ಮಾಡುತ್ತಿದ್ದರು. ತಮ್ಮ ಕೆಲಸಕ್ಕೆ ಸಂಚಕಾರ ಎದುರಾದ ಸಂದರ್ಭದಲ್ಲೂ ಅವರು ಅಳುಕುತ್ತಿರಲಿಲ್ಲ. ಅಧೀರರಾಗುತ್ತಿರಲಿಲ್ಲ. ಅಷ್ಟರಮಟ್ಟಿನ ಬದ್ಧತೆ ಅವರದ್ದಾಗಿತ್ತು. ಪ್ರತಿಭಟಿಸುವ ಧ್ವನಿಗಳೇ ಉಡುಗಿ, ಕ್ಷೀಣವಾಗಿದ್ದಾಗ ಅವರು ಒಂಟಿ ಸಲಗನಂತೆ, ಅನ್ಯಾಯ ಅಕ್ರಮಗಳ ವಿರುದ್ಧ, ಮೌಢ್ಯ, ಶೋಷಣೆಗಳ ವಿರುದ್ಧ, ಕಂದಾಚಾರಗಳ ವಿರುದ್ಧ, ಜಾತಿ ವ್ಯವಸ್ಥೆಯ ವಿರುದ್ಧ ದೈತ್ಯ ಶಕ್ತಿಯಂತೆ ಒಬ್ಬಂಟಿಯಾಗಿಯೇ ಹೋರಾಟ ನಡೆಸುತ್ತ ಬಂದಿದ್ದರು. ಒಂದಲ್ಲ ಎರಡಲ್ಲ ಪ್ರತಿದಿನವೂ ಒಂದಲ್ಲಾ ಒಂದು ಜನಪರ ಹೋರಾಟದಲ್ಲಿ, ಪ್ರತಿಭಟನೆಯಲ್ಲಿ ಅವರು ತೊಡಗಿಕೊಂಡಿರುತ್ತಿದ್ದರು. ಆದರೆ, ಅವರು ಉನ್ಮತ್ತ ಒಂಟಿ ಸಲಗ ಆಗಿರಲಿಲ್ಲ. ಮಾನವೀಯ ಅಂತಃಕರಣದೊಂದಿಗೆ , ವೈಚಾರಿಕ ಹಾಗೂ ಸಾಮಾಜಿಕ ಬದ್ಧತೆಯೊಂದಿಗೆ ಸಮಾಜದ ಅಂಕು ಡೊಂಕುಗಳು, ಜಾತಿ ಧರ್ಮದ ಭೇದ ಭಾವಗಳು, ದೌರ್ಜನ್ಯ, ದಬ್ಬಾಳಿಕೆ, ಅಕ್ರಮಗಳ ವಿರುದ್ಧದ ಸಾತ್ವಿಕ ಹೋರಾಟ ಅವರದಾಗಿತ್ತು. ಇಷ್ಟೇ ಅಲ್ಲ;ಮೈಸೂರಿನ ಕೆಲವೇ ಕೆಲವು ಹೋರಾಟದ ಹಾಗೂ ಜಾತ್ಯತೀತ ಮನೋಭಾವದ ಯುವ ಚೇತನಗಳಿಗಂತೂ ಅವರು ಉದ್ದೀಪನ ಶಕ್ತಿಯಾಗಿದ್ದರು.

ಸ್ವಾರ್ಥ, ಕಪಟ, ವಂಚನೆಗಳೇ ತುಂಬಿರುವ ಇಂದಿನ ದಿನಗಳಲ್ಲಂತೂ ಸಮಾಜದ ಒಳಿತಿನ ಬಗ್ಗೆ ಕಳಕಳಿ, ಕಾಳಜಿಯುಳ್ಳ; ಶೋಷಣೆ, ಅನ್ಯಾಯ, ಅಕ್ರಮಗಳ ವಿರುದ್ಧ ಸದಾ ಸಿಡಿದು ಬೀಳುತ್ತಿದ್ದ ನಿಸ್ವಾರ್ಥ ಮನೋಭಾವದ ಅಪರೂಪದ, ಹೋರಾಟದ, ಪ್ರತಿಭಟನೆಯ ಧ್ವನಿ ಅವರಾಗಿದ್ದರು. ಈಗ ಅವರ ನಿಧನದೊಂದಿಗೆ ಆ ಧ್ವನಿಯೂ ಇಲ್ಲದಂತಾಗಿದೆ.

# ನನ್ನ ಪ್ರೀತಿಯ ಗೆಳೆಯ

**ಡಾ. ಕೆ. ಮಹಾದೇವ**

ನನ್ನ ಮತ್ತು ಪ್ರೊ.ಕೆ. ರಾಮದಾಸ್ ಅವರ ಗೆಳೆತನ ಸುಮಾರು ಮೂವತ್ತು ವರ್ಷಗಳಷ್ಟು ಹಳೆಯದು. 1976 ರಲ್ಲಿ ನಾನು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಮೊದಲ ಬಾರಿಗೆ ಆರಿಸಿಬಂದಾಗ ಪ್ರೊ. ಕೆ. ರಾಮದಾಸ್ ಅವರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದರು. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಗಿನ ಕುಲಪತಿಗಳಾಗಿದ್ದ ಮಾನ್ಯಶ್ರೀ ಡಿ.ವಿ. ಅರಸುರವರ ಆಡಳಿತವನ್ನು ತಾತ್ವಿಕನೆಲೆಯಲ್ಲಿ ವಿರೋಧಿಸಿದವರಲ್ಲಿ ನಾನು ಕೂಡ ಒಬ್ಬನಾಗಿದ್ದೆ. ಆದರೆ ನನಗಿಂತಲೂ ಮುಂಚೆಯೇ ಪ್ರೊ.ಕೆ. ರಾಮದಾಸ್ ಅವರು ವಿಶ್ವವಿದ್ಯಾನಿಲಯದ ಆಡಳಿತದ ವಿರುದ್ಧ ಪ್ರತಿಭಟನೆಗೆ ಇಳಿದಿದ್ದು, ಮುಂಚೂಣಿಯಲ್ಲಿದ್ದರು. ಆಗ ನನಗೆ ಅವರ ಪರಿಚಯ ಅಷ್ಟಾಗಿರಲಿಲ್ಲ. ಶ್ರೀ ಮಾನ್ ಡಿ.ವಿ. ಅರಸುರವರ ಆಡಳಿತದ ವೈಖರಿ ಮತ್ತು ಧೋರಣೆಯನ್ನು ಕಂಡು ಬೇಸತ್ತಿದ್ದ ನಾನು ಒಂದು ಸಲ ಅವರ ರಾಜಿನಾಮೆಯನ್ನು ಸೆನೆಟ್ ಸಭೆಯಲ್ಲಿ ಏರು ಧ್ವನಿಯಲ್ಲಿ ಕೇಳಿದಾಗ ಅದು ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಗಿ ಸುದ್ದಿಯಾಯಿತು. ಯಾಕೆಂದರೆ ಅದು ತುರ್ತುಪರಿಸ್ಥಿತಿಯ ಸಂದರ್ಭ. ಆಗ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತದ ಚುಕ್ಕಾಣಿ ಹಿಡಿದಿದ್ದ ಮಾನ್ಯಶ್ರೀ ಡಿ.ವಿ. ಅರಸುರವರು ವಿರುದ್ಧ ಮಾತನಾಡಲು ಎಲ್ಲರೂ ಹೆದರುತ್ತಿದ್ದರು. ಯಾಕೆಂದರೆ ತುರ್ತು ಪರಿಸ್ಥಿತಿಯ ನಿಬಂಧನೆಯಂತೆ ಸರ್ಕಾರದ ಮತ್ತು ಅಧಿಕಾರಿಶಾಹಿಯ ವಿರುದ್ಧ ಮಾತನಾಡಿದರೆ ಜೈಲುವಾಸ ಅನುಭವಿಸಬೇಕಾಗುತ್ತದೆ ಎಂಬ ಹೆದರಿಕೆ ಎಲ್ಲರ ಮನವನ್ನು ಆವರಿಸಿತ್ತು. ಆಗ ನಾನು ಬಿಸಿರಕ್ತದ ಯುವಕ. ಆಡಳಿತದ ಜನ-ವಿರೋಧಿ ನೀತಿಗಳನ್ನು ಸಹಿಸಿಕೊಳ್ಳಲು ನನ್ನಿಂದ ಆಗುತ್ತಿರಲಿಲ್ಲ. ಹಾಗಾಗಿ ತುರ್ತು ಪರಿಸ್ಥಿತಿಯ ಭಯವನ್ನು ಲೆಕ್ಕಿಸದೆ ಡಿ.ವಿ. ಅರಸು ರವರ ರಾಜೀನಾಮೆಯನ್ನು ಕೇಳಿದ್ದೆ. ಈ ಪ್ರಸಂಗದಿಂದ ಸಂತೋಷಗೊಂಡಿದ್ದ ಪ್ರೊ.ಕೆ. ರಾಮದಾಸ್

ಅವರು ನನ್ನ ಬಗ್ಗೆ ಬೇರೆಯವರ ಹತ್ತಿರ "ಯಾರ್‍ರೀ ಆ ಜೇಂಸ್ ಬಾಂಡ್ ತರಹ Rayban Glass ಹಾಕಿಕೊಂಡು ಬರ್ತಾರಲ್ಲ ಆ ಸೆನೆಟ್ ಮೀಟಿಂಗ್ ಗೆ, ಅವರು ನಿರ್ಭಯದಿಂದ ಮಾತನಾಡುತ್ತಾರಂತೆ ಅಂತಹವರು ಬೇಕ್ರಿ ನಮಗೆ, ಈ ವ್ಯವಸ್ಥೆಯನ್ನು ರಿಪೇರಿಮಾಡಲು", ಎಂದು ಹಲವು ಬಾರಿ ಹೇಳಿದ್ದು ಅವರ ನ್ಯಾಯಪರ ದೃಷ್ಟಿಕೋನವನ್ನೂ, ಖಂಡಿತವಾದವನ್ನೂ ಪ್ರತಿಬಿಂಬಿಸುತ್ತದೆ.

ಡಾ. ಕೆ.ಎಸ್. ಹೆಗಡೆಯವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಅವಧಿಯಲ್ಲಿ ನಾನು ಮತ್ತು ಪ್ರೊ. ರಾಮದಾಸ್ ಅವರು ಇನ್ನೂ ಹತ್ತಿರವಾಗುವ, ತುಂಬ ಆತ್ಮೀಯರಾಗುವ ಸಂದರ್ಭವೊಂದು ಸೃಷ್ಟಿಯಾಯಿತು. ಆಗ ನಾನು ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕೇತರ ಉದ್ಯೋಗಿಗಳ ಸಂಘದ ಅಧ್ಯಕ್ಷನಾಗಿದ್ದೆ, ಹಾಗೂ ಸೆನೆಟ್ ಸದಸ್ಯನೂ ಕೂಡ ಆಗಿದ್ದೆ. ಆಗ ನಾನು ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧಿಕಾರಿಗಳ ವಿರುದ್ಧ ಸಮರ ಸಾರಿದ ದಿನಗಳವು. ಇದೇ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಚುನಾವಣೆ ಡಿಕ್ಲೇರ್ ಆಯಿತು. ವಿಶ್ವವಿದ್ಯಾನಿಲಯದ ಆಡಳಿತ ವರ್ಗ ಸದರಿ ಸೆನೆಟ್ ಚುನಾವಣೆಯಲ್ಲಿ ನನ್ನನ್ನು ಸೋಲಿಸಲೇಬೇಕೆಂದು ಪಣತೊಟ್ಟಿತು. ಆ ದಿನಗಳು ನನಗೆ ತುಂಬಾ ಇಕ್ಕಟ್ಟಿನ ಮತ್ತು ಒಂಟಿತನದ ದಿನಗಳಾಗಿದ್ದವು. ಇಂತಹ ಇಕ್ಕಟ್ಟಿನ ಸಂದರ್ಭದಲ್ಲಿ ಪ್ರೊ. ರಾಮದಾಸ್ ಅವರು ನನ್ನ ಪರವಾಗಿ ನಿಂತರು. ಆ ಸಂದರ್ಭದಲ್ಲಿ ಇಡೀ ಸರ್ಕಾರವೇ ನನ್ನ ವಿರುದ್ಧವಿತ್ತು. ಆಗ ಗೆಳೆಯ ರಾಮದಾಸ್ ಅವರು ನನ್ನ ಪರವಾಗಿ ನಿಂತು ಹೋರಾಡಿದರು ಮಾತ್ರವಲ್ಲ ತಮ್ಮ ಅಪಾರ ಪ್ರೀತಿ, ವಿಶ್ವಾಸವನ್ನು ತೋರಿದರು. ಪ್ರೊ. ರಾಮದಾಸ್ ಅವರ ಸ್ನೇಹಿತರೇ ನನ್ನ ವಿರುದ್ಧ ಸೆನೆಟ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದರೂ ರಾಮದಾಸ್ ಅವರು ನನ್ನ ಪರವಾಗಿ ನಿಂತು, ಹೋರಾಟ ಮಾಡಿ ನಾನು ಗೆಲ್ಲಲ್ಲು ಸಹಕರಿಸಿದರು. ಆ ಸಂದರ್ಭದಲ್ಲಿ ನಾನು ಪ್ರತಿದಿನ ಬೆಳಿಗ್ಗೆ ೫.೩೦ ಗಂಟೆಗೆ ರಾಮದಾಸ್ ಅವರ ಮನೆಗೆ ಹೋಗಿ ಅವರೊಂದಿಗೆ ಚರ್ಚಿಸಿ ಅವರ ಸ್ನೇಹದ, ಪ್ರೀತಿಯ ಸಲಹೆಗಳನ್ನು ಸ್ವೀಕರಿಸಿ ೭.೩೦ ಗಂಟೆಗೆ ನನ್ನ ಮನೆಗೆ ವಾಪಸ್ಸು ಬರುತ್ತಿದ್ದೆ. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ನಾನು ಪ್ರೊ. ರಾಮದಾಸ್ ಅವರ ಜೊತೆಯಲ್ಲಿ ನಿತ್ಯವೂ ಮಾತನಾಡಿ ನನ್ನ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಿದ್ದೆ.

ಡಾ. ವೈ.ಪಿ. ರುದ್ರಪ್ಪನವರು ಕುಲಪತಿಗಳಾಗಿದ್ದ ಸಂದರ್ಭದಲ್ಲಿ ಪ್ರೊ. ರಾಮದಾಸ್ ಅವರು ತಳೆದ ಒಂದು ಗಟ್ಟಿ ನಿಲುವಿನ ಬಗ್ಗೆ ಪ್ರಸ್ತಾಪ ಮಾಡುವುದು ಸೂಕ್ತವೆನಿಸುತ್ತದೆ. ಆಗ ರಾಮದಾಸ್ ಅವರು ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘದ ಅಧ್ಯಕ್ಷರಾಗಿದ್ದರು. ನಾನು ಅಧ್ಯಾಪಕೇತರ ಉದ್ಯೋಗಿಗಳ ಸಂಘದ ಅಧ್ಯಕ್ಷ ಮತ್ತು ಸಿಂಡಿಕೇಟ್ ಸದಸ್ಯನಾಗಿದ್ದೆ. ಡಾ. ವೈ.ಪಿ ರುದ್ರಪ್ಪನವರು ಹಾಲಿ ಹಂಗಾಮಿ ಅಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದವರನ್ನು ತೆಗೆದು ಹಾಕಿ, ಜಾಹೀರಾತಿನ ಮೂಲಕ ಖಾಲಿಯಿದ್ದ ಹಂಗಾಮಿ ಅಧ್ಯಾಪಕರ ಹುದ್ದೆಗಳನ್ನು ಭರ್ತಿಮಾಡುವ ತೀರ್ಮಾನವನ್ನು ತೆಗೆದುಕೊಂಡರು. ಕುಲಪತಿಗಳ ಈ ನಿರ್ಧಾರದಿಂದ ಹಾಲಿ ಕೆಲಸಮಾಡುತ್ತಿದ್ದ ಹಂಗಾಮಿ ಅಧ್ಯಾಪಕರಿಗೆ ಅನ್ಯಾಯವಾಗುತ್ತದೆಂದು ಬಗೆದ ಪ್ರೊ.

ರಾಮದಾಸ್ ಅವರು ಕುಲಪತಿಗಳ ಈ ತೀರ್ಮಾನದ ವಿರುದ್ಧ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ಆದರೂ ಡಾ. ರುದ್ರಪ್ಪನವರು ತಮ್ಮ ನಿರ್ಧಾರದಿಂದ ಹಿಂದಕ್ಕೆ ಸರಿಯಲಿಲ್ಲ. ನಾನು ರುದ್ರಪ್ಪನವರ ಈ ತೀರ್ಮಾನವನ್ನು ವಿರೋಧಿಸಿ ಪ್ರೊ. ರಾಮದಾಸ್ ಅವರಿಗೆ ನನ್ನ ಬೆಂಬಲವನ್ನು ನೀಡಿದೆ. ಆಗ ಪ್ರೊ.ಕೆ. ರಾಮದಾಸ್, ಡಾ. ಯು.ಆರ್. ಅನಂತಮೂರ್ತಿ, ಡಾ. ಬೆಳ್ಳಿಯಪ್ಪ ಮತ್ತು ನಾನು ನಮ್ಮ ಮನೆಯಲ್ಲಿ ಸೇರಿ ಸುದೀರ್ಘವಾಗಿ ಚರ್ಚಿಸಿ ಒಂದು ನಿರ್ಧಾರಕ್ಕೆ ಬಂದೆವು. ನಾನು ಸಿಂಡಿಕೇಟ್‌ನಲ್ಲಿ ಹಂಗಾಮಿ ಅಧ್ಯಾಪಕರಿಗೆ ಆದ ಅನ್ಯಾಯವನ್ನು ಸರಿಪಡಿಸಿ ಅವರಿಗೆ ನ್ಯಾಯ ದೊರಕಿಸಿಕೊಡುವುದು, ಒಂದು ವೇಳೆ ಅದು ಸಾಧ್ಯವಾಗದೆ ಹೋದ ಪಕ್ಷದಲ್ಲಿ ನಾನು ನನ್ನ ಸಿಂಡಿಕೇಟ್ ಸದಸ್ಯತ್ವಕ್ಕೆ ರಾಜಿನಾಮೆ ನೀಡಿ ಎಲ್ಲ ಪ್ರಗತಿಪರ ಗೆಳೆಯರು ಸೇರಿ ಡಾ||ವೈ.ಪಿ. ರುದ್ರಪ್ಪನವರ ತೀರ್ಮಾನದ ವಿರುದ್ಧ ಹೋರಾಡುವುದೆಂದು ತೀರ್ಮಾನಿಸಿದೆವು. ಆದರೆ ಸಿಂಡಿಕೇಟ್ ನಲ್ಲಿ ಹೋರಾಡಿದ್ದರಿಂದ ಡಾ|| ರುದ್ರಪ್ಪನವರು ತಮ್ಮ ನಿರ್ಧಾರದಿಂದ ಹಿಂದೆ ಸರಿದರು. ಹಾಗಾಗಿ ಕೆಲಸ ಕಳೆದುಕೊಂಡಿದ್ದ ಎಲ್ಲ ಹಂಗಾಮಿ ಅಧ್ಯಾಪಕರು ಮತ್ತೆ ವಾಪಸ್ ಕೆಲಸಕ್ಕೆ ಸೇರಿದರು. ಈ ಒಂದು ಪ್ರಕರಣದಿಂದ ನನ್ನ ಮತ್ತು ಪ್ರೊ. ರಾಮದಾಸ್ ಅವರ ಮಧ್ಯೆ ಎಂದೆಂದೂ ಮುರಿಯಲಾಗದ ಗೆಳೆತನ, ಬಾಂಧವ್ಯ ಏರ್ಪಟ್ಟಿತು.

ಪ್ರೊ. ಮಾದಯ್ಯನವರು ಕುಲಪತಿಗಳಾದ್ದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷಾಂಗದ ಕುಲಸಚಿವರನ್ನು ಸ್ನಾತಕೋತ್ತರ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳು ಕೂಡಿಹಾಕಿದ್ದರು. ಅದು ಮಧ್ಯರಾತ್ರಿಯ ಸಮಯ ಆಗ ಪ್ರೊ. ಮಾದಯ್ಯನವರು ಪ್ರೊ. ರಾಮದಾಸ್ ಅವರ ಸಹಾಯ ಕೇಳಲಾಗಿ ರಾಮದಾಸ್ ಅವರು ಕುಲಪತಿಗಳ ಜೊತೆಯಲ್ಲಿ ಆ ಮಧ್ಯರಾತ್ರಿಯಲ್ಲಿ ಹಾಸ್ಟೆಲಿಗೆ ಹೋಗಿ ವಿದ್ಯಾರ್ಥಿಗಳ ಮನಸ್ಸನ್ನು ತಿಳಿಗೊಳಿಸಿ, ಅವರನ್ನು ಒಲಿಸಿ ಪರೀಕ್ಷಾಂಗದ ಕುಲಸಚಿವರನ್ನು ಬಿಡಿಸಿಕೊಂಡು ಬಂದರು. ಇದು ವಿಶ್ವವಿದ್ಯಾನಿಲಯದ ಬಗ್ಗೆ ಪ್ರೊ. ರಾಮದಾಸ್ ಅವರಿಗಿದ್ದ ಪ್ರೀತಿ ಮತ್ತು ಕಳಕಳಿಯನ್ನು ತೋರಿಸುತ್ತದೆ.

ಹುಟ್ಟು ಹೋರಾಟಗಾರರಾದ ಪ್ರೊ. ರಾಮದಾಸ್ ಅವರಿಗೆ ಭಯವೆಂಬುದೆ ಇರಲಿಲ್ಲ. ಸದಾ ಒಳ್ಳೆಯದನ್ನು ನ್ಯಾಯೋಚಿತವಾದುದನ್ನು ಚಿಂತಿಸುತ್ತಿದ್ದ ಅವರಿಗೆ ಹೆದರಿಕೆ ಎಂಬುದು ಗೊತ್ತಿರಲಿಲ್ಲ. ನನ್ನ ಜೀವನದಲ್ಲಿ ಅವರ ಹಾಗೆ ತತ್ವಾದರ್ಶಗಳಿಗೆ ನ್ಯಾಯಸಮ್ಮತವಾದುದಕ್ಕೆ ಹೋರಾಡಿದ ಇನ್ನೊಬ್ಬ ವ್ಯಕ್ತಿಯನ್ನು ನಾನು ಕಂಡಿಲ್ಲ. ದಲಿತವಾಣಿಯಾಗಿದ್ದ ಪ್ರೊ. ರಾಮದಾಸ್ ಅವರು ತಮ್ಮ ಸ್ವಂತಕ್ಕಾಗಿ ಯಾರಲ್ಲಿಯೂ ಏನನ್ನೂ ಬಯಸಿದವರಲ್ಲ. ಅವರ ಬಯಕೆ ಅಪೇಕ್ಷೆಗಳು ಸಮೂಹದ, ಸಮಾಜದ ಹಿತಕ್ಕಾಗಿ ಮಾತ್ರ ಮೀಸಲಾಗಿದ್ದವು. ನುಡಿದಂತೆ ನಡೆಯುತ್ತಿದ್ದ ಈ ಧೀಮಂತ ವ್ಯಕ್ತಿಯನ್ನು ನಾನು ಅತಿಯಾಗಿ ಪ್ರೀತಿಸುತ್ತಿದ್ದೆ ಹಾಗೂ ಅವರು ಹೇಳಿದ ನ್ಯಾಯ ಸಮ್ಮತವಾದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೆ.

ಪ್ರೊ. ಕೆ. ರಾಮದಾಸ್ ಅವರು ಕುಲಪತಿಗಳಾಗಿದ್ದ ಪ್ರೊ. ಮಾದಯ್ಯ ನವರ ಆಡಳಿತ ನೀತಿಯನ್ನು ವಿರೋಧಿಸುತ್ತಿದ್ದರು ಎಂಬ ಒಂದೇ ಒಂದು ಕಾರಣಕ್ಕಾಗಿ ಅವರನ್ನು ಅಮಾನತ್ತಿನಲ್ಲಿಡಲು ಪ್ರೊ. ಮಾದಯ್ಯನವರು ಮಧ್ಯರಾತ್ರಿ ಕರಡನ್ನು ಸಿದ್ಧಗೊಳಿಸಿದರು.

ಇದನ್ನರಿತ ಕಛೇರಿಯ ಕೆಲಸಗಾರ ಆ ಮಧ್ಯ ರಾತ್ರಿಯೇ ನನಗೆ ಫೋನು ಮಾಡಿ ವಿಷಯ ತಿಳಿಸಿದ. ನನಗೆ ಗಾಬರಿಯಾಯಿತು ಮತ್ತು ಯೋಚನೆ ಶುರುವಾಯಿತು. ಯಾಕೆಂದರೆ ನ್ಯಾಯ ಪರವಾಗಿದ್ದ, ಖಂಡಿತ ವಾದಿಯಾಗಿದ್ದ ಪ್ರೊ. ರಾಮದಾಸ್ ಅವರನ್ನು ಅಮಾನತ್ತಿನಲ್ಲಿಡುವುದು ನನ್ನಂತಹವನಿಗೆ ಎಂದೂ ಸರಿ ಕಂಡಿರಲಿಲ್ಲ. ಆದರೆ ನನ್ನೊಂದಿಗೆ ಉತ್ತಮ ಸಂಬಂಧಹೊಂದಿದ್ದ ಪ್ರೊ. ಮಾದಯ್ಯ ನವರ ಈ ತೀರ್ಮಾನದ ವಿರುದ್ಧ ಸಿಂಡಿಕೇಟಿನಲ್ಲಿ ಹೋರಾಡಿ ಆ ಅಮಾನತ್ತನ್ನು ರದ್ದುಗೊಳಿಸಬೇಕಾಗಿತ್ತು. ಆಗ ನಾನು ಸಿಂಡಿಕೇಟ್‌ನ ಇನ್ನೊಬ್ಬ ಸದಸ್ಯ ಸ್ನೇಹಿತರಾಗಿದ್ದ ಶ್ರೀ ಎಚ್.ಎ. ವೆಂಕಟೇಶ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರೊ.ಕೆ. ರಾಮದಾಸ್ ಅವರನ್ನು ಅಮಾನತ್ತಿನಲ್ಲಿಡುವ ಕುಲಪತಿಗಳ ತೀರ್ಮಾನವನ್ನು ವಿರೋಧಿಸಿ ರದ್ದುಗೊಳಿಸಿದೆವು. ಇದು ನಾನು ನನ್ನ ಜೀವನದಲ್ಲಿ ಮಾಡಿದ ಉತ್ತಮ ಕೆಲಸವೆಂದು ಇಂದಿಗೂ ನಂಬಿದ್ದೇನೆ. ಈ ಘಟನೆಯ ನಂತರ ಮುಂದಿನ ದಿನಗಳಲ್ಲಿ ಪ್ರೊ. ಮಾದಯ್ಯನವರು ನನ್ನ ಮೇಲೆ ಸುಳ್ಳು ಕೇಸು ಕೊಟ್ಟು ಬಂಧಿಸುವಲ್ಲಿ ಯಶಸ್ವಿಯಾದರು. ಈ ಸುದ್ದಿ ತಿಳಿದ ತಕ್ಷಣವೇ ಪ್ರೊ. ಕೆ. ರಾಮದಾಸ್ ಅವರು ವಕೀಲರೊಬ್ಬರನ್ನು ಕರೆದುಕೊಂಡು ಬಂದು ನನ್ನನ್ನು ಬಿಡುಗಡೆ ಗೊಳಿಸಿದ್ದರು. ಈ ಸಂದರ್ಭವನ್ನು ಸ್ಮರಿಸಿ ಕೊಂಡರೆ ನನ್ನ ಕಣ್ಣು ಇಂದಿಗೂ ತೇವವಾಗುತ್ತವೆ. ನನ್ನ ಸಂಕಷ್ಟದ ಸಂದರ್ಭದಲ್ಲಿ ಪ್ರೊ. ಕೆ. ರಾಮದಾಸ್ ಅವರು ನನಗೆ ತೋರಿದ ಪ್ರೀತಿ, ನೀಡಿದ ಸಹಾಯ ಎಂದಿಗೂ ಮರೆಯುವಂತಹದ್ದಲ್ಲ. ಗೆಳೆಯರಿಗೆ ಪ್ರಾಣವನ್ನಾದರೂ ನೀಡಿ ಅವರನ್ನು ರಕ್ಷಿಸುವ ದೊಡ್ಡ ಗುಣ ಪ್ರೊ. ರಾಮದಾಸ್ ಅವರದು. ಪ್ರೊ. ಮಾದಯ್ಯನವರು ನನ್ನ ಮೇಲೆ ಕೊಟ್ಟ ದೂರು ಸುಳ್ಳು ಎಂಬುದು ಆಮೇಲೆ ಕೋರ್ಟಿನಲ್ಲಿ ಸಾಬೀತಾಯಿತು, ಆ ಮಾತು ಬೇರೆ.

ಮಾನ್ಯಶ್ರೀ ಸಿದ್ಧರಾಮಯ್ಯನವರ ಉಪಚುನಾವಣೆಯಲ್ಲಿ ನಾನು ಮತ್ತು ಪ್ರೊ.ಕೆ. ರಾಮದಾಸ್, ಪ್ರೊ.ಜಿ.ಕೆ. ಗೋವಿಂದರಾವ್, ಪ್ರೊ. ರವಿವರ್ಮಕುಮಾರ್, ಮಾಜಿ ಎಂ.ಎಲ್.ಸಿ. ಮಹೇಶ್ ಮುಂತಾದವರು ದಿನ ನಿತ್ಯ ಚುನಾವಣಾ ಪ್ರಚಾರ ಮಾಡಿ ಒಟ್ಟಿಗೆ ಹೋಟೆಲಿನಲ್ಲಿ ಊಟ-ತಿಂಡಿ ಮಾಡುತ್ತಿದ್ದೆವು. ಹೀಗೆ ಕೊನೆಯ ದಿನಗಳಲ್ಲಿ ರಾಮದಾಸ್ ಅವರ ಜೊತೆ ಕಳೆದ ದಿನಗಳು ನನಗೆ ತುಂಬ ಸಂತೋಷವನ್ನುಂಟುಮಾಡಿವೆ. ಚುನಾವಣೆ ಮುಗಿದ ಸ್ವಲ್ಪ ದಿನಕ್ಕೆ ಶ್ರೀ ಕೆ.ಪಿ. ಪೂರ್ಣಚಂದ್ರತೇಜಸ್ವಿಯವರು ನಿಧನರಾದರು. ಈ ಸುದ್ದಿಯನ್ನು ಕೇಳಿದ ತಕ್ಷಣವೆ ಪ್ರೊ. ರಾಮದಾಸ್ ಅವರು ತುಂಬಾ ನೋವು, ಸಂಕಟವನ್ನು ಅನುಭವಿಸಿದರು. ಯಾಕೆಂದರೆ ತೇಜಸ್ವಿ ಮತ್ತು ರಾಮದಾಸ್ ಅವರು ಅತ್ಯಂತ ಆತ್ಮೀಯ ಸ್ನೇಹಿತರಾಗಿದ್ದರು. ತೇಜಸ್ವಿಯವರ ನಿಧನ ರಾಮದಾಸ್ ಅವರಿಗೆ ಸಹಿಸಲು ಅಸಾಧ್ಯವಾದ ನೋವು, ಸಂಕಟಕ್ಕೆ ಈಡುಮಾಡಿತ್ತು. ತೇಜಸ್ವಿಯವರ ಶವಸಂಸ್ಕಾರದ ನಂತರ ಇವರಿಗೆ ಕಾಣಿಸಿಕೊಂಡ ಕೆಮ್ಮು ಕೊನೆಯವರೆಗೂ ವಾಸಿಯಾಗಲಿಲ್ಲ. ಪ್ರೊ. ರಾಮದಾಸ್ ಅವರಿಗೆ ಲಂಗ್ ಕ್ಯಾನ್ಸರ್ ಇದೆ ಎಂಬ ಸುದ್ದಿ ಅವರ ಬಯೊಪ್ಸಿ ರಿಪೋರ್ಟ್‌ನ ಮೂಲಕ ತಿಳಿದಾಗ ಅವರ ಸ್ನೇಹಿತರಿಗೆಲ್ಲ ತುಂಬ ಗಾಬರಿಯಾಯಿತು. ಆದರೆ ವೈದ್ಯರಾದಿಯಾಗಿ ಯಾರೂ ಏನೂ ಮಾಡೊ ಸ್ಥಿತಿಯಲ್ಲಿರಲಿಲ್ಲ. ಅವರಿಗೆ ಚಿಕಿತ್ಸೆ ನೀಡಿದರೂ ಅದು ಫಲಕಾರಿಯಾಗದೆ ಅವರನ್ನು ನಾವು ಕಳೆದುಕೊಂಡೆವು. ಕೊನೆಯ ದಿನ ನಾನು

ಅವರನ್ನು ಭೇಟಿ ಮಾಡಿ ರಕ್ತ ಪರೀಕ್ಷೆ ಮಾಡಿಸೋಣ ಬನ್ನಿ ಎಂದೆ. ಅವರು ಈ ದಿನ ಬೇಡ ನಾಳೆ ಹೋಗೋಣ ನನಗೆ ನಿದ್ರೆ ಬರುತ್ತಿದೆ, ವೇಳೆಯಾಗಿದೆ ನೀವು ಮನೆಗೆ ಹೋಗಿ ಎಂದು ನನ್ನನ್ನು ಮನೆಗೆ ಕಳಿಸಿ ಕೊಟ್ಟರು. ಮರು ದಿನ ಬೆಳಿಗ್ಗೆ ೫ ಗಂಟೆಗೆ ಅವರ ಮನೆಯಿಂದ ನನಗೆ ಫೋನ್ ಕರೆ ಬಂದಿತು. ನಾನು ಅವರ ಮನೆಗೆ ಹೋಗುವಷ್ಟರಲ್ಲಿ ಅವರು ತೀರಿಕೊಂಡಿದ್ದರು. ಅದುವೇ ನನ್ನ ಕೊನೆಯ ನಮಸ್ಕಾರ, ನನ್ನ ಗೆಳೆಯ ಪ್ರೊ.ಕೆ. ರಾಮದಾಸ್ ಅವರಿಗೆ. ನನ್ನ ಸಂಕಷ್ಟದ ಸಂದರ್ಭಗಳಲ್ಲಿ ಅವರ ಮನೆಗೆ ಹೋಗಿ ಮಾತನಾಡಿ, ಮನಸ್ಸು ಹಗುರ ಮಾಡಿ ಕೊಳ್ಳುತ್ತಿದ್ದೆ. ನಾನು ಈ ಅವರಿಲ್ಲದ ಸಂದರ್ಭದಲ್ಲಿ ಒಂಟಿತನದ ನೋವಿನಿಂದ ನರಳುತ್ತಿದ್ದೇನೆ. ನಿಜಕ್ಕೂ ಪ್ರೊ. ರಾಮದಾಸ್ ಅವರಿಗೆ ಸಾಟಿಯಾದ ಇನ್ನೊಬ್ಬ ಗೆಳೆಯನಿಲ್ಲದ ಕೊರತೆ ನನ್ನನ್ನು ಕಾಡುತ್ತಿದೆ.

# ಅಪರೂಪದ ಗೆಳೆಯ

**ಡಾ. ಹೆಚ್. ಬಿ. ಶಿವರಾಂ**

ರಾಮದಾಸ್ ಮತ್ತು ನನ್ನ ಗೆಳೆತನ ವಿದ್ಯಾರ್ಥಿ ದೆಸೆಯಲ್ಲಿ ಆರಂಭವಾಯ್ತು, ಅದು ಪ್ರಭು ಶಂಕರ್, ಜಿ.ಹೆಚ್ ನಾಯಕರ ಸಮ್ಮುಖದಲ್ಲೇ ನಮ್ಮಿಬ್ಬರ ಪರಿಚಯವಾಯ್ತು, ಸಮಾನಮನಸ್ಕರು ಎಲ್ಲಿದ್ದರೂ ಒಂದುಗೂಡುವಂತಹ ವಾತಾವರಣ ಅಂದು ಮೈಸೂರಿನ ಮಹಾರಾಜ ಕಾಲೇಜಿನ ಆವರಣದಲ್ಲಿತ್ತು. ಬಹುಮುಖ್ಯವಾಗಿ ಅಂದು ಸಮಾಜವಾದಿ ಚಿಂತನೆಯಲ್ಲಿದ್ದ ಗೆಳೆಯರೆಲ್ಲಾ ಒಟ್ಟಾಗಿ ಸೇರುತ್ತಿದ್ದ ಕಾಲ. ಅಂದಿನ ವಿದ್ಯಾರ್ಥಿಗಳಿಗೆ ಓದೇ ಮುಖ್ಯವಾಗಿರಲಿಲ್ಲ. ಈ ಸಮಾಜದ ಎಲ್ಲಾ ಕೊಳಕುಗಳನ್ನು ಸರಿಪಡಿಸುವವರಂತೆ ಓಡಾಡುತ್ತಿದ್ದರು. ಆ ಸಂದರ್ಭದ ಒಂದು ತಲೆಮಾರಿಗೆ ಲೋಹಿಯಾರ ಪ್ರಭಾವ ಗಾಢವಾಗಿ ತಟ್ಟಿತ್ತು. ನಾನು ಸಕಲೇಶಪುರ ಸಮೀಪದ ಹಾನುಬಾಳಿನಿಂದ ಹೋದದ್ದು ಎಂ.ಬಿ.ಬಿ.ಎಸ್. ಓದಲೆಂದು, ಆದರೆ ನನಗೆ ಸಿಕ್ಕಿದ್ದು ಲೋಹಿಯಾವಾದಿ ಗೆಳೆಯರು. ನಾನು ಮೈಸೂರಿಗೆ ಹೋಗುವಷ್ಟರಲ್ಲಾಗಲೇ ಶಿವಮೊಗ್ಗದ ಕಡೆಯಿಂದ ಬಂದ ರಾಮದಾಸ್, ಶಾಮಣ್ಣ, ಸುಂದರೇಶ್, ಕೊಣಂದೂರು ಲಿಂಗಪ್ಪ, ತೇಜಸ್ವಿ ಇವರೆಲ್ಲಾ ನಿರ್ಭೀತಿಯಿಂದ ಮಾತನಾಡುತ್ತ ಎಲ್ಲವನ್ನ ಬುಡಮೇಲುಮಾಡಿ ನಂತರ ಸಮತಟ್ಟು ಮಾಡುವವರಂತೆ ಓಡಾಡುತ್ತಿದ್ದರು. ಅದು ನವನಿರ್ಮಾಣ ಕ್ರಾಂತಿಯ ಸಂಘಟನೆ ಸಮಯ ಎಂ.ಡಿ.ನಂಜುಂಡಸ್ವಾಮಿಯವರು ಹರಿಯಾದ ಚಾಟಿಕೋಲಿನಿಂದ ಬಾರಿಸಿದಂತಹ ಮಾತುಗಳಿಂದ ನಮ್ಮನ್ನೆಲ್ಲಾ ಆಕರ್ಷಿಸಿದ್ದರು. ಮೈಸೂರಿನಲ್ಲಿದ್ದಾಗ ನನ್ನ ಹೆಚ್ಚಿನ ಒಡನಾಟವಿದ್ದುದ್ದು ರಾಮದಾಸ್ ಮತ್ತು ತೇಜಸ್ವಿಯವರ ಜೊತೆ. ರಾಮದಾಸರ ಖಚಿತವಾದ ಠೇಂಕಾರದ ಮಾತುಗಳು ನನಗೆ ಬಹಳ ಹಿಡಿಸಿದ್ದವು, ನಾನು ಎಂ.ಡಿ ಮಾಡುವಷ್ಟರಲ್ಲಿ ಅವರಾಗಲೇ ಮಹಾರಾಜ ಕಾಲೇಜಿನ ಲೆಕ್ಚರರ್ ಆಗಿದ್ದರು. ಆದರೂ ಬಂದು ನನ್ನ ಓದಿಗೆ ಸಹಾಯ ಮಾಡುತ್ತಿದ್ದರು. ಆಗಿನ ಸಂದರ್ಭ ಹೇಗಿತ್ತೆಂದರೆ ಸಮಾಜವಾದಿ

ಚಿಂತನೆಯ ಗೆಳೆಯರು ಯಾವ ಜಾತಿ, ಯಾವ ಊರು ಎಂಬುದು ಬೇಕಿರಲಿಲ್ಲ. ಸಮಾನ ಮನಸ್ಸಿನ ಗೆಳೆತನದ ಎದುರು. ಅವು ಬೇಕಾಗಿಯೂ ಇರಲಿಲ್ಲ. ಆದ್ದರಿಂದ ರಾಮದಾಸ್ ನಿಜವಾಗಿಯೂ ಯಾವ ಊರಿನವರು ಎಂಬುದು ನನಗೆ ಗೊತ್ತಿರಲಿಲ್ಲ. ಇನ್ನ ಜಾತಿಯಂತೂ ತಿಳಿಯಲೇಯಿಲ್ಲ. ಅದೆಲ್ಲವನ್ನು ಮೆಟ್ಟಿ, ಎದೆ ಸೆಟಿಸಿನಿಂತ ರಾಮದಾಸ್ ನಿಜವಾಗಿಯೂ ವಿಶ್ವಮಾನವರಾಗಿದ್ದರು. ನಮ್ಮ ಮೈಸೂರಿನ ಓದು ಮತ್ತು ಚಳವಳಿಗಳು ಒಟ್ಟಾಗಿ ಸಾಗುತ್ತಿರುವಾಗ, ಜೆ.ಪಿ.ಚಳವಳಿ ಆರಂಭವಾಯ್ತು. ಆಗಾಗಲೇ ಲೋಹಿಯಾ ವಿಚಾರಧಾರೆಯಲ್ಲಿ ತೇಲುತ್ತಿದ್ದ ನಮಗೆ, ಕಾರ್ಯತಃ ಚಳವಳಿ ಮಾಡುವ ಅವಕಾಶವನ್ನ ಜೆ.ಪಿ ಚಳವಳಿ ಒದಗಿಸಿತು. ಆಗ ಜೆ.ಪಿಯವರನ್ನು ಖುದ್ದು ಭೇಟಿಯಾಗಲು ನಾವೆಲ್ಲಾ ಡೆಲ್ಲಿಗೆ ಹೋಗಿದ್ದೆವು. ನಮ್ಮ ಜೊತೆ ಹೆಚ್. ವಿಶ್ವನಾಥ್ ಕೂಡ ಇದ್ದರು. ನವ ನಿರ್ಮಾಣ ಸಂಘಟನೆಯಿಂದ ನಾವು ಸುಮಾರು ೧೫ ಜನಗಳಿದ್ದರೆ ಜನಸಂಘದ ಪಿ.ಜಿ. ಆರ್. ಸಿಂಧ್ಯಾ ಒಬ್ಬರೇ ಬಂದಿದ್ದರು. ನಾವೆಲ್ಲ ಜೆ.ಪಿ. ಯವರನ್ನು ನೋಡಿ ಮಾತನಾಡಿಸಲು ಕರ್ನಾಟಕದಿಂದ ಬಂದಿದ್ದೇವೆ ಎಂಬ ವಿಷಯವನ್ನ ಜೆ.ಪಿ. ಯವರಿಗೆ ತಲುಪಿಸಿದಾಗ, ಜೆ.ಪಿ. ಸಂದರ್ಶನಕ್ಕೆ ಅವಕಾಶಕೊಟ್ಟರು. ನಾವು ಜೆ.ಪಿ.ಯವರಿಗೆ ನಮಸ್ಕರಿಸಿ ನಿಂತಿರುವಾಗ ಬಂದ ಸಿಂಧ್ಯಾ ಅವರು ಕಾಲಿಗೆ ಅಡ್ಡಡ್ಡ ಬಿದ್ದು ಜೆ.ಪಿ. ಯವರಿಂದ ಬೈಸಿಕೊಂಡರು. ನಂತರ ನಾವು ನಮ್ಮ ಹೋರಾಟದ ವಿವರ ಕೊಟ್ಟೆವು. ಅದೇ ಸಮಯದಲ್ಲಿ ಪಾಟ್ನಾದಲ್ಲಿ ನಡೆದ ರ್‍ಯಾಲಿಗೂ ಹೋಗಿ ಬಂದೆವು. ಆ ನಂತರ ಸಂಭವಿಸಿದ ಎಮರ್ಜೆನ್ಸಿಯಲ್ಲಿ ನಾವೆಲ್ಲಾ ಜೈಲುಪಾಲಾಗಬಹುದೆಂದು ನಂಬಿದ್ದೆವು. ಆದರೆ ಹಾಗೇನೂ ಆಗಲಿಲ್ಲ. ಎಂ.ಡಿ. ಮುಗಿದ ನಂತರ ನಾನು ವೈದ್ಯನಾದೆ. ಎಂ.ಎ. ಮುಗಿಸಿದ ರಾಮದಾಸ್ ಮಹಾರಾಜ ಕಾಲೇಜಿನಲ್ಲಿ ಲೆಕ್ಚರರ್ ಆದರು. ತೇಜಸ್ವಿ ಮೈಸೂರು ದಿಕ್ಕಿಗೆ ವಿದಾಯ ಹೇಳಿ ಮೂಡಿಗೆರೆ ಕಾಡಿಗೆ ಬಂದು ಸೇರಿಕೊಂಡರು. ಆದರೂ, ನಮ್ಮ ಗೆಳೆತನ ಹಾಗೇ ಮುಂದುವರಿದವು. ರಾಮದಾಸ್ ಮೈಸೂರಿನಿಂದ ತೇಜಸ್ವಿನೋಡಲು ಬಂದರೆ ನನಗೂ ಫೋನ್ ಮಾಡುತ್ತಿದ್ದರು. ಎಲ್ಲರೂ ಸೇರಿ ಸಕಲೇಶಪುರ ಮತ್ತು ಮೂಡಿಗೆರೆ ಕಾಡಿನಲ್ಲಿ ಸುತ್ತಿ ವಾಪಸಾಗುತ್ತಿದ್ದೆವು. ರಾಮದಾಸರ ಚರ್ಚೆಯ ಬಹುಪಾಲು ಮತೀಯವಾದಿಗಳನ್ನು ಟೀಕಿಸುವುದಾಗಿತ್ತು. ಮೊದಲು ಜನಸಂಘವನ್ನು ಬೈಯುತ್ತಿದ್ದ ಅವರು ನಂತರ ಬಿ.ಜೆ.ಪಿ ಯವರನ್ನು ತಾರಾ ಮಾರಾ ಟೀಕಿಸುತ್ತಿದ್ದರು. ನಂತರ ಈ ಟೀಕೆಯಲ್ಲಿ ಹಲವಾರು ಕವಲುಗಳು ಕಾಣಿಸಿಕೊಂಡವು. ಹೇಗೆಂದರೆ ಆರೆಸೆಸ್ಸ್, ವಿಶ್ವ ಹಿಂದೂ ಸಂಘಟನೆ, ಭಜರಂಗದಳ, ಕರಸೇವಕರು, ಹೀಗೆ ನಾನಾ ವಿಧದ ಅವತಾರಿಗಳನ್ನು ಟೀಕೆ ಮಾಡಬೇಕಾದ ಅನಿವಾರ್ಯತೆಯೊದಗಿದಾಗ ತೇಜಸ್ವಿ ತಮಾಷೆಯಾಗಿ ನಗುತ್ತಿದ್ದರು. ರಾಮದಾಸ್ ನಿರ್ಮಲ ಅವರನ್ನು ಮದುವೆಯಾದ ಮೇಲೂ ನನ್ನ ಕುಟುಂಬ ಮತ್ತು ರಾಮದಾಸ್ ಕುಟುಂಬದ ಸ್ನೇಹವೂ ಮುಂದುವರಿಯಿತು. ಹಾಗಾಗಿ ರಾಮದಾಸ್ ಶಿವಮೊಗ್ಗಕ್ಕೆ ಬಂದಾಗ ಎಲ್ಲೂ ಉಳಿದುಕೊಳ್ಳದೆ ನೇರ ನಮ್ಮ ಮನೆಗೇ ಬಂದು ಉಳಿದುಕೊಳ್ಳುತ್ತಿದ್ದರು. ನನ್ನ ಮಾವನವರಾದ ತ್ಯಾನಂದೂರು ಪುಟ್ಟಣ್ಣನವರು ರಾಮದಾಸ್ ಸೇರಿದರೆ ಇಡೀ ಮಲೆನಾಡಿನ ಸಂಗತಿಗಳನ್ನು ಚರ್ಚಿಸುತ್ತಿದ್ದರು. ಪುಟ್ಟಣ್ಣನವರ ಒಬ್ಬಳೇ ಮಗಳಾದ ಆಶಾಗೆ ರಾಮದಾಸ್ ಅಪರೂಪದ ಅಣ್ಣ ಸಿಕ್ಕಿದಂತಾಯ್ತು.

ಹಾಗಾಗಿ ರಾಮದಾಸ್ ಮೈಸೂರಿನಿಂದ ಬಂದರೆ ನಮ್ಮ ಮನೆಯಲ್ಲೇ ಉಳಿದು ಕೆಲವು ವಿಷಯಗಳಲ್ಲಿ ನನ್ನೊಡನೆ ಜಗಳವಾಡಿ ಹೋಗುತ್ತಿದ್ದರು. ನಮ್ಮ ಜಗಳವೇನಿದ್ದರೂ ಕರ್ನಾಟಕದ ಸರಕಾರಗಳು, ಆಡಳಿತದ ಬಗ್ಗೆ ನಡೆಯುತ್ತಿದ್ದವು. ಕ್ರಮೇಣ ಮತಾಂಧತೆ ಮತ್ತು ಮುಸ್ಲಿಮರನ್ನು ಸರಕಾರ ಓಲೈಸುವ ಬಗ್ಗೆಯೂ ನಮ್ಮಲ್ಲಿ ಜಗಳವಾಗುತ್ತಿದ್ದವು.

ರಾಮದಾಸ್, ತೇಜಸ್ವಿ ಮತ್ತು ನಾನು ಬೇಸರವಾದಾಗ ಪ್ರವಾಸ ಮಾಡುತ್ತ ಗಂಟೆಗಟ್ಟಲೆ ಚರ್ಚಿಸುತ್ತ ಇರುವಾಗ ನಮ್ಮ ನಡುವೆ ಇನ್ನು ಹೆಚ್ಚಿನ ಚರ್ಚೆ ಮತ್ತು ಜಗಳಗಳಾಗುವಂತಹ ಘಟನೆಗಳು ಕರ್ನಾಟಕದಲ್ಲಿ ಸಂಭವಿಸತೊಡಗಿದವು. ಮುಖ್ಯವಾಗಿ ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ತಡವಾಗಿಯಾದರೂ, ರೈತ ಸಂಘಟನೆ ರೂಪುಗೊಳ್ಳತೊಡಗಿತು. ಆ ಸಮಯದಲ್ಲಿ ತಮಿಳುನಾಡಿನ ರೈತನಾಯಕ ನಾರಾಯಣ ಸ್ವಾಮಿಯನ್ನು ಕರೆಸಿ ಸಕಲೇಶಪುರದ ಹಾನುಬಾಳಿನ ನಮ್ಮ ಮನೆಯಲ್ಲಿ ಒಂದು ವಾರವಿಟ್ಟುಕೊಂಡಿದ್ದೆ. ನಾರಾಯಣಸ್ವಾಮಿ ಬಂದು ಹೋದಮೇಲೆ ರೈತ ಚಳವಳಿ ಇನ್ನು ಜೋರಾಯ್ತು. ರೈತಸಂಘ ರಾಜಕಾರಣಕ್ಕೆ ಇಳಿಯುವುದು ಬೇಡ ಎಂದು ರಾಮದಾಸ್ ಮತ್ತು ನಾನು ಒಟ್ಟಾಗಿಯೇ ನಮ್ಮ ಅಭಿಪ್ರಾಯವನ್ನು ರೈತ ಮುಖಂಡರಿಗೆ ತಲುಪಿಸಿದ್ದೆವು. ಆದರೆ ರಾಜಕಾರಣ ಪ್ರವೇಶದ ದೆಸೆಯಿಂದ ರೈತ ಸಂಘವೇ ಒಡೆದು ಹೋದಾಗ ನನಗೆ ಬಹಳ ನೋವಾಗಿತ್ತು. ಅಷ್ಟೊತ್ತಿಗಾಗಲೇ ರಾಮದಾಸ್ ಲಂಕೇಶರೊಂದಿಗೆ ಪ್ರಗತಿರಂಗ ಮಾಡಿಕೊಂಡು ಊರೂರು ಸುತ್ತುತ್ತಾ ಭಾಷಣ ಮಾಡುತ್ತಿದ್ದರು. ಲಂಕೇಶ್ ಮತ್ತು ನಮ್ಮ ನಡುವೆ ಭಿನ್ನಾಭಿಪ್ರಾಯವುಂಟಾಗಿ ನಾವು ಅವರ ಸಹವಾಸದಿಂದ ದೂರವಿದ್ದರೂ, ಅವರಿಗೂ ಆಪ್ತರಾಗಿದ್ದ ರಾಮದಾಸ್ ನಮ್ಮ ನಡುವೆ ಎಂದೂ ಮನಸ್ತಾಪವುಂಟಾಗಲಿಲ್ಲ. ಆದರೆ ಕ್ರಮೇಣ ನನ್ನ ಗೆಳೆಯರಾಗಿದ್ದ ರಾಮದಾಸ್ ನನ್ನ ಪೇಷಂಟ್ ಆಗಿ ನಾನು ಅವರಿಗೆ ಡಾಕ್ಟರೂ ಆಗಬೇಕಾಯ್ತು. ಆವರಿಗೆ ಹೃದಯದಲ್ಲಿ ತೊಂದರೆಯಿದೆಯೆಂದು ಗೊತ್ತಾದಾಗ ಸಿದ್ಧರಾಮಯ್ಯ ಆಸ್ಪತ್ರೆಗೆ ಸೇರಿಸಿದ್ದರಂತೆ. ಈ ಸುದ್ದಿ ತಿಳಿದ ನಾನು ಅವರು ಸಿಗರೇಟ್ ಸೇದುವುದನ್ನು ಬಿಡಿಸಿದ್ದೆ. ಆದರೆ ನನಗೆ ಕಾಣದಂತೆ ನಿರ್ಭೀತಿಯಿಂದಲೇ ಚಾರ್ಮಿನಾರ್ ಸೇದುತ್ತಿದ್ದರು. ಅವರು ಈಚೆಗೆ ನನ್ನನ್ನು ನೋಡಲು ಬಂದಾಗೆಲ್ಲಾ ಮೊದಲು ಅವರ ಬಿ.ಪಿ, ಶುಗರ್, ತೂಕ ಇತ್ಯಾದಿಯನ್ನು ಕಡ್ಡಾಯವಾಗಿ ಚೆಕ್ ಮಾಡಿ ಮಾತ್ರೆ ಕೊಟ್ಟು ಡಯಟ್ ಬಗ್ಗೆ ಎಚ್ಚರಿಕೆ ಕೊಡುತ್ತಿದ್ದೆ. ರಾಮದಾಸ್ ಬಹಳ ಒಳ್ಳೆ ರೋಗಿಯಂತೆ ಎಲ್ಲವನ್ನು ಕೇಳಿಸಿಕೊಂಡು ತಾವು ಮಾಡುವುದನ್ನೇ ಮಾಡುತ್ತಿದ್ದರು. ಆರೋಗ್ಯದ ಬಗ್ಗೆ ತುಂಬಾ ಅಸಡ್ಡೆಯಿಂದ ನಡೆದುಕೊಳ್ಳುತ್ತಿದ್ದರು. ಇತ್ತೀಚೆಗೆ ತೇಜಸ್ವಿ ಕಂಪ್ಯೂಟರ್ ಮುಂದೆ ಕುಳಿತು, ಎಲ್ಲಿಗೂ ಬರಲ್ಲ, ನಮ್ಮನ್ನೆಲ್ಲಾ ಮರತೇಬಿಟ್ರು ಎಂದು ಹೇಳುತ್ತಿದ್ದರು. ಆದರೂ, "ಮಹಾನ್ ಲೇಖಕ ಕಂಡ್ರಿ ಇನ್ನು ಏನೇನ್ ಬರಿತರೋ ನೋಡೋಣ ಇರಿ" ಎಂದು ಸಮಾಧಾನಗೊಳ್ಳುತ್ತಿದ್ದರು.

ಆದರೆ ಎರಡೇ ತಿಂಗಳ ಅವಧಿಯಲ್ಲಿ ಇಬ್ಬರೂ ಹೋಗಿಬಿಟ್ಟರು. ನನ್ನ ಗೆಳೆಯ ರಾಮದಾಸರದು ಒಂದು ಅಪರೂಪದ ಪ್ರತಿಭಟನೆ ಧ್ವನಿ. ದೇ. ಜವರೇಗೌಡರ ಮಗ ವಿ.ಸಿ.ಯಾಗುವಾಗ ಪ್ರಬಲವಾಗಿ ಪ್ರತಿಭಟಿಸಿದ್ದರು. ಈ ನಾಡಿನಲ್ಲಿ ಯಾವುದೇ ಅನ್ಯಾಯ

ನಡೆದರೂ ಕೂಡ ರಾಮದಾಸರ ಪ್ರತಿಭಟನೆಯ ಧ್ವನಿ ಮೊಳಗುತ್ತಿತ್ತು. ಅಂತಹ ಧ್ವನಿಯೊಂದು ಇಲ್ಲವಾಗಿರುವುದನ್ನು ನೆನೆಸಿಕೊಂಡರೆ ಮನಸ್ಸಿಗೆ ಬಹಳ ನೋವಾಗುತ್ತದೆ. ಗೆಳೆಯ ರಾಮದಾಸ್ ಮನಸ್ಸಿನಲ್ಲಿ ಯಾವ ದೋಷವನ್ನು ಇಟ್ಟುಕೊಳ್ಳದೆ, ಗಟ್ಟಿಗಂಟಲಲ್ಲಿ ಮಾತನಾಡುತ್ತಿದ್ದರು. ಅವರ ಬಳಿ ಮುಚ್ಚುಮರೆಯ ಯಾವ ಗುಟ್ಟುಗಳೂ ಇರಲಿಲ್ಲ. ತೆರೆದ ಪುಸ್ತಕದಂತಿದ್ದ ಅವರು ಪರಿಚಯವಾದ ಕ್ಷಣದಿಂದ ಕಡೆಯವರೆಗೂ ಹಾಗೇ ಇದ್ದರು. ಕಾಲಮಾನದ ಒತ್ತಡದಲ್ಲಿ ಒಬ್ಬ ವ್ಯಕ್ತಿ ಎಂದಾದರೂ ಬದಲಾಗುತ್ತಾನೆ. ಆತನ ಮಾತು ನಡವಳಿಕೆಯಲ್ಲಿ ವ್ಯತ್ಯಾಸಗಳಾಗಬಹುದು. ಆದರೆ ನನ್ನ ಈ ಬಾಲಸಖ ಮಾತ್ರ ನಿಷ್ಕಳಂಕ ಸ್ನೇಹಕ್ಕೆ ಸಾಕ್ಷಿಯಾಗಿದ್ದಾರೆ.

# ಇನ್ನೆಲ್ಲಿ ಆ ತಾಪ... ಆ ಬೆಳಕು ?

ಡಿ.ಎಸ್. ನಾಗಭೂಷಣ

ಕರ್ನಾಟಕದ ಪ್ರತಿಭಟನೆಯ ಧ್ವನಿ ಉಡುಗಿ ಹೋಗಿದೆ. ಪ್ರೊ. ಕೆ.ರಾಮದಾಸ್ ಇನ್ನಿಲ್ಲ. ಕಳೆದ ೪೦ ವರ್ಷಗಳಿಂದ ಸತತವಾಗಿ ರಾಜ್ಯದಲ್ಲಿ ಎಲ್ಲ ರೀತಿಯ 'ಪ್ರಭುತ್ವ'ಗಳ ವಿರುದ್ಧ ಸಮರ ಸಾರಿದ್ದ ರಾಮದಾಸ್, ಅನ್ಯಾಯಗಳ ವಿರುದ್ಧ ಪ್ರತಿಭಟನೆಗಳನ್ನು ರೂಪಿಸಬೇಕಿದ್ದ ಸಂಘಟನೆಗಳು ಇತ್ತೀಚಿನ ವರ್ಷಗಳಲ್ಲಿ ಜಾಗತೀಕರಣದ ಒತ್ತಡಗಳಿಗೆ ಸಿಕ್ಕಿ ಉಸಿರು ಕಳೆದುಕೊಳ್ಳುತ್ತಿದ್ದಂತೆ, ಒಂಟಿದನಿಯಾಗಿಯೇ ತಮ್ಮ ಸಮರವನ್ನು ಮುಂದುವರೆಸಿದ್ದರು. ಆ ಸಮರವೂ ಈಗ ನಿಲುಗಡೆಗೆ ಬಂದಂತಾಗಿದೆ.

ರಾಮದಾಸರನ್ನು ನಾನು ಮೊದಲು ನೋಡಿದ್ದು, ೧೯೭೭ರ ಚುನಾವಣೆಗಳ ನಂತರ ಜನತಾ ಸರ್ಕಾರ ಅಧಿಕಾರ ಸ್ವೀಕರಿಸಿ, ರಾಷ್ಟ್ರ ಸರ್ವಾಧಿಕಾರದ ಆತಂಕದಿಂದ ಬಿಡುಗಡೆಗೊಂಡು ನಿಟ್ಟುಸಿರುಬಿಡುತ್ತಿದ್ದ ಹೊತ್ತಿನಲ್ಲಿ. ಬೆಂಗಳೂರಿನ ಗಾಂಧಿಭವನದಲ್ಲಿ ಸೇರಿದ್ದ ಕರ್ನಾಟಕದ ಪಕ್ಷಾತೀತ ಸಮಾಜವಾದಿಗಳ ಸಭೆಯಲ್ಲಿ ಪ್ರೊ. ನಂಜುಂಡಸ್ವಾಮಿಯವರ ವಿರುದ್ಧ ತಮ್ಮ ಕಂಚಿನ ಕಂಠದಲ್ಲಿ ವಾಕ್ಸಮರದಲ್ಲಿ ತೊಡಗಿದ್ದ ಅವರು, ಅಂದು ಒಬ್ಬ ನುರಿತ ಚರ್ಚಾಪಟುವಿನಂತಷ್ಟೇ ನನಗೆ ಗೋಚರಿಸಿದ್ದರು. ಅಲ್ಲೇ ನನಗೆ ಆಗ ಹಿರಿಯ ಸಮಾಜವಾದಿಗಳೆನಿಸಿದ್ದ ರಾಚಪ್ಪ ಬೆಟ್ಸೂರ್, ರಾಚಪ್ಪ ಹಡಪದ್, ಕಡಿದಾಳು ಶಾಮಣ್ಣ, ಕೆ.ಎಂ. ಶಂಕರಪ್ಪರಿಂದ ಹಿಡಿದು ಆಗ ತಾನೇ ಸಮಾಜವಾದಿ ಚಳವಳಿಗೆ ಕಣ್ಣು ಬಿಡುತ್ತಿದ್ದ ರವಿವರ್ಮಕುಮಾರ್. ಮಂಜುನಾಥ ದತ್ತ, ವೆಂಕಟೇಶಮೂರ್ತಿ, ರಾಜೇಗೌಡ ಮುಂತಾದವರ ಪರಿಚಯವಾದದ್ದು. ಆಗ ಉದ್ಯೋಗ ನಿಮಿತ್ತ ದೆಹಲಿಯಲ್ಲಿ ವಾಸವಿದ್ದ ಕಾರಣದಿಂದಾಗಿ ಉತ್ತರ ಭಾರತದ ಮಣ್ಣಿನ ವಾಸನೆಯ ದಟ್ಟ ದರಿದ್ರಾವಸ್ಥೆಯ ಸಮಾಜವಾದಿಗಳನ್ನಷ್ಟೇ ಕಂಡಿದ್ದ ನನಗೆ, ಕರ್ನಾಟಕದ ಈ ಮಧ್ಯಮ ವರ್ಗದ ನಾಜೂಕಿನ ಸಮಾಜವಾದಿಗಳನ್ನು ಕಂಡು ಸ್ವಲ್ಪ ಆಶ್ಚರ್ಯವೂ , ಸ್ವಲ್ಪ ಕುತೂಹಲವೂ

ಉಂಟಾಯಿತು. ಮುಂದೆ ನನಗೆ ರಾಮದಾಸ್ ಈ ಮಧ್ಯಮ ವರ್ಗದ ಸಮಾಜವಾದಿಗಳ ವಿಶಿಷ್ಟ ಮಾದರಿಯಂತೆಯೇ ಕಾಣಲಾರಂಭಿಸಿದ್ದರೆ, ಅವರ ಈ ಮೊದಲ ದರ್ಶನ ಸಂದರ್ಭವೇ ಕಾರಣವಾಗಿರಬಹುದು.

ರಾಮದಾಸ್ ಅವರನ್ನು ನಾನು ಮೊದಲ ಬಾರಿಗೆ ಹತ್ತಿರದಿಂದ ಕಂಡದ್ದು, ೧೯೭೪ರಲ್ಲಿ ಹಾಸನದಲ್ಲಿ ಏರ್ಪಡಿಸಲಾಗಿದ್ದ 'ತರುಣ ಲೋಹಿಯಾವಾದಿಗಳ ಸಮ್ಮೇಳನ'ದಲ್ಲಿ. ಕಿಷನ್ ಪಟ್ನಾಯಕ್, ಪ್ರೊ. ನಂಜುಂಡಸ್ವಾಮಿ, ತೇಜಸ್ವಿಯವರು ಹಾಜರಿದ್ದ ಆ ಸಮ್ಮೇಳನದಲ್ಲಿ ಸಮಾಜವಾದಿ ತತ್ವವನ್ನು ಸಾರಸಂಗ್ರಹವಾಗಿ ಹೀರಿಕೊಂಡಂತೆ, ಕಟು ಬದ್ಧತೆಯಿಂದ ನಿಷ್ಠುರವಾಗಿ ಮಾತನಾಡಿ ನನ್ನ ಗಮನ ಸೆಳೆದವರೆಂದರೆ ಈ ಕೆ. ರಾಮದಾಸರೇ. ಅಲ್ಲದೆ, ಸಮಾಜವಾದಿ ಯುವಜನ ಸಭಾವನ್ನು ಪುನರುಜ್ಜೀವನಗೊಳಿಸಲು ಅಲ್ಲಿ ಸೇರಿದ್ದ ಪ್ರತಿಯೊಬ್ಬರೂ ಪ್ರತಿ ತಿಂಗಳು ತಮ್ಮ ಮಾಸಿಕ ಆದಾಯದ ಶೇ. ೫ರಷ್ಟನ್ನು ಅದರ ಹೊಸ ಸಂಚಾಲಕರಿಗೆ ಕಳಿಸಿಕೊಡಬೇಕೆಂಬ ತೀರ್ಮಾನಕ್ಕೆ ಬದ್ಧರಾದವರು ರಾಮದಾಸ್ ಮತ್ತು ನಾನು ಮಾತ್ರ ಆಗಿದ್ದೆವು! ಅಂದಿನಿಂದ ಆರಂಭವಾದ ನಮ್ಮ ಪರಸ್ಪರ ಗೌರವದ ಗೆಳೆತನ ಹಲವು ಬಾರಿ ವೈಯಕ್ತಿಕ ಭಿನ್ನಾಭಿಪ್ರಾಯಗಳಿಂದುಂಟಾದ ಘರ್ಷಣೆಗಳ ಕಹಿಯ ಹೊರತಾಗಿಯೂ, ಅವರ ಸಾವಿನ ದಿನದವರೆಗೂ ನಿರಂತರವಾಗಿ ಮುಂದುವರಿದುಕೊಂಡು ಬರಲು ಸಾಧ್ಯವಾದದ್ದು, ಮತ್ತೆ ಅವರ ಆಳದ ಸಮಾಜವಾದಿ ಬದ್ಧತೆಯಿಂದಾಗಿ.

ಮಲೆನಾಡಿನ ಅಜ್ಞಾತ ಮೂಲೆಯೊಂದರ ಅಜ್ಞಾತ ಜಾತಿಗೆ ಸೇರಿದ್ದ ರಾಮದಾಸ್ ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು, ನರ್ಸ್ ಉದ್ಯೋಗದಲ್ಲಿದ್ದ ತಾಯಿ ಮಂಜಮ್ಮನವರ ಹಠದಿಂದಾಗಿ ಬಡತನದ ಸಂಕಷ್ಟಗಳ ಮಧ್ಯೆಯೂ ಅಧ್ಯಯನಕ್ಕಾಗಿ ಮೈಸೂರಿನವರೆಗೆ ಬಂದವರು ಮತ್ತು ಅಲ್ಲೇ ಉದ್ಯೋಗ ಪಡೆದು ನೆಲೆಸಿದವರು. ತಮ್ಮ ಬಾಲ್ಯದಲ್ಲೇ ಲೋಹಿಯಾ ದರ್ಶನ ಮಾಡಿ, ಸಮಾಜವಾದಿ ಚಳವಳಿಯ ಪ್ರಭಾವಕ್ಕೊಳಗಾಗಿದ್ದ ರಾಮದಾಸ್, ಅದು ಕಲಿಸಿಕೊಟ್ಟ ಸ್ವಾಭಿಮಾನ ಹಾಗೂ ದಿಟ್ಟತನಗಳ ಮೂಲಕ ಬದುಕು ಕಟ್ಟಿಕೊಂಡವರು. ನಮ್ಮ ಪ್ರಜಾಪ್ರಭುತ್ವದ ವೈಫಲ್ಯಗಳ ಬಗ್ಗೆ ಯಾರು ಏನೇ ಹೇಳಲಿ, ಅದು ರಾಮದಾಸರಂತಹ ಅಲಕ್ಷಿತ ಸಮುದಾಯಗಳ ಪ್ರತಿನಿಧಿಗಳಿಗೆ ಅವಕಾಶ ಹಾಗೂ ಆತ್ಮವಿಶ್ವಾಸಗಳ ಎದೆ ಹಾಲು ನೀಡಿ ಪೊರೆದ ಕೀರ್ತಿಗಂತೂ ಭಾಜನವಾಗಿದೆ. ಹಾಗಾಗಿಯೇ ರಾಮದಾಸರು ಪ್ರಜಾಪ್ರಭುತ್ವದ ಯಾವುದೇ ಮೌಲ್ಯಕ್ಕೆ ಧಕ್ಕೆ ಒದಗಿದರೂ, ಅದು ಸಾವು ಬದುಕುಗಳ ಪ್ರಶ್ನೆಯೆಂಬಷ್ಟು ತೀವ್ರವಾಗಿ ಪ್ರತಿಭಟನೆಗೆ ಸಜ್ಜಾಗುತ್ತಿದ್ದರು.

ಕುವೆಂಪುರಿಂದ ಹಿಡಿದು ದೇವನೂರು ಮಹಾದೇವ ಅವರವರೆಗೆ ನಮ್ಮ ಕಾಲದ ಅತ್ಯುತ್ತಮ ಮನಸ್ಸುಗಳೊಂದಿಗೆ ತಮ್ಮ ವಿಶಿಷ್ಟ ನಿಷ್ಠುರತೆಯೊಂದಿಗೆ ಸಂವಾದ ಮಾಡಿದ ರಾಮದಾಸ್, ಒಮ್ಮೊಮ್ಮೆ ತಮ್ಮ ವೈಚಾರಿಕ ಕಟಿ ಬದ್ಧತೆಗೆ ತಾವೇ ಮಾರು ಹೋಗಿ ಇತರ ಸಾಮಾನ್ಯರ ಮೇಲೆ ಅನಗತ್ಯವಾಗಿ ಹರಿಹಾಯುತ್ತಿದ್ದುದೂ ಉಂಟು! ಲಂಕೇಶರ ಪತ್ರಿಕೋದ್ಯಮದ ಆರಂಭದ ಅತ್ಯುತ್ತಮ ವರ್ಷಗಳಲ್ಲಿ ಅವರ ಆತ್ಮೀಯ ಸಖನಾದ ರಾಮದಾಸ್, ಆ ಪತ್ರಿಕೋದ್ಯಮದ

ಅವನತಿಯ ಕೊನೆಯ ವರ್ಷಗಳಲ್ಲೂ ಬರಿ ಸಖನಾಗಿಯೇ ಮುಂದುವರಿದು ಆಶ್ಚರ್ಯ ಹುಟ್ಟಿಸಿದ್ದರು. ವೈಯುಕ್ತಿಕ ನೆಲೆಯಲ್ಲಿ ಇಂತಹ ವೈರುಧ್ಯಗಳಿಗೆ ಆಗಾಗ್ಗೆ ಬಲಿಯಾಗುತ್ತಿದ್ದ ಅವರು, ಅದರಿಂದಾಗಿಯೋ ಏನೋ, ಸದಾ ಆಂತರಿಕವಾಗಿ ಅಶಾಂತರಾಗಿ ಚಡಪಡಿಕೆಯಲ್ಲಿರುತ್ತಿದ್ದರು. ವಿಚಾರವಾದ ಹಾಗೂ ಸಮಾಜವಾದಗಳ ಕಲಸುಮೇಲೋಗರದ ಚಡಪಡಿಕೆಯದು.

ಅನ್ಯಾಯದ ವಿರುದ್ಧ ಪ್ರತಿಭಟಿಸದವನು ಅನ್ಯಾಯದಲ್ಲಿ ಪಾಲುದಾರನೇ ಎಂಬ ಲೋಹಿಯಾ ಅವರ ಮಾತಿನಲ್ಲಿ ಅಚಲ ನಂಬಿಕೆಯಿಟ್ಟಿದ್ದ ರಾಮದಾಸ್, ತಮ್ಮ ಬದುಕಿನುದ್ದಕ್ಕೂ ತಮ್ಮ ಸುತ್ತಮುತ್ತ ಯಾವುದೇ ಅನ್ಯಾಯ ನಡೆದರೂ ಅಲ್ಲಿ ಹಾಜರಿರುತ್ತಿದ್ದರು. ಒಮ್ಮೊಮ್ಮೆ ಅವರ ಪ್ರತಿಭಟನೆಯ ತೀವ್ರತೆ ಔಚಿತ್ಯ ಮೀರಿ ಪ್ರಕಟವಾಗುತ್ತಿದ್ದ ಸಂದರ್ಭಗಳಲ್ಲಿ ಅವರ ಗೆಳೆಯರಿಗೆ ಮುಜುಗರವಾಗುತ್ತಿದ್ದುದೂ ಉಂಟು. ಇದರ ಬಗ್ಗೆ ಕ್ರುದ್ಧರಾಗುತ್ತಿದ್ದ ರಾಮದಾಸ್ ತಮ್ಮ ಆಪ್ತ ಗೆಳೆಯರ ಮೇಲೂ ಯದ್ವಾತದ್ವಾ ಹರಿಹಾಯಲು ಹಿಂಜರಿಯುತ್ತಿರಲಿಲ್ಲ. ಹೀಗಾಗಿ ಕ್ರಮೇಣ ಗೆಳೆಯರಿಂದ ದೂರವಾಗುತ್ತಾ ಹೋದ ಅವರು, ತಮ್ಮ ಕೊನೆಯ ವರ್ಷಗಳಲ್ಲಿ ಒಂಟಿತನದ ಹತಾಶೆಯಲ್ಲಿ ದಿಕ್ಕೆಟ್ಟಂತಿದ್ದರು. ಆದರೆ ಇದೇ ಹೊತ್ತಿಗೆ ಕಾಣಿಸಿಕೊಂಡ ಪತ್ನಿ ನಿರ್ಮಲಾ ಅವರ ತೀವ್ರ ಅನಾರೋಗ್ಯ ಅವರಿಗೆ ಸಹನೆ ಸಂಯಮಗಳನ್ನು ಕಲಿಸತೊಡಗಿತ್ತು. ಗೆಳೆಯರು ಮತ್ತೆ ಬರಲಾರಂಭಿಸಿದ್ದರು. ತಮ್ಮ ಕೊನೆಯ ದಿನಗಳಲ್ಲಿ ಕ್ರೋಧದ ಕಹಿ ಕಳೆದುಕೊಂಡಂತೆ ಸದಾ ಪ್ರೀತಿ ಸೂಸುತ್ತಿದ್ದ ರಾಮದಾಸ್, ಬದುಕಿನ ಮೂಲಪಾಠ ಕಲಿತು ಲೋಕ ತ್ಯಜಿಸಿದ ಅದೃಷ್ಟವಂತ.

ರಾಮದಾಸರನ್ನು ಅವರ ಗೆಳೆಯರು ಸಮಾಜವಾದಿ, ವಿಚಾರವಾದಿ, ನಿಷ್ಠುರವಾದಿ, ಹಠವಾದಿ, ಜಗಳಗಂಟ ಎಂದೆಲ್ಲ ಗುರುತಿಸಿದ್ದುಂಟು. ಆದರೆ ಇವೆಲ್ಲ ಸೇರಿದಂತೆ, ಅವರ ವ್ಯಕ್ತಿತ್ವಕ್ಕೊಪ್ಪುವ ಅಭಿದಾನವೆಂದರೆ, Permanent non -conformist ( ನಿರಂತರ ಬಂಡುಕೋರ). ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಮತೀಯತೆ, ಜಾತೀಯತೆ, ಮೌಢ್ಯಾಚರಣೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಯುವಜನರ ನಿಷ್ಕ್ರಿಯತೆಗಳ ಬಗ್ಗೆ ಚಿಂತಿತರಾಗಿದ್ದ ರಾಮದಾಸ್, ಕಳೆದ ಶತಮಾನದಲ್ಲಿ ವಿದ್ಯೆ ಪಡೆದು ಆತ್ಮವಿಶ್ವಾಸ ಗಳಿಸಿಕೊಂಡ ಅನೇಕ ಅನಾಮಿಕ ಅಲ್ಪಸಂಖ್ಯಾತ ಜಾತಿಗಳ ಧೀರ ಪ್ರತಿನಿಧಿಯಾಗಿ ಇದನ್ನೆಲ್ಲ ವಿಷಾದದಿಂದ ನೋಡುತ್ತಾ, ಸರಿಮಾಡಲಾಗದ ಸಂಕಟದಲ್ಲಿ ನಮ್ಮನ್ನಗಲಿ ಹೋಗಿದ್ದಾರೆ. ತಮ್ಮ ವಿದ್ಯಾಗುರು ಜಿ. ಎಸ್. ಎಸ್. ಅವರ ಅಭಿನಂದನ ಗ್ರಂಥಕ್ಕೆ ಬರೆದ ಲೇಖನವೊಂದರಲ್ಲಿ ಅವರು, ತಮ್ಮ ಗುರುಗಳು ಕತ್ತಲಲ್ಲಿ ದೀಪ ಹಿಡಿದು ಹೊರಟಿದ್ದರೆ, ತಾವು ಪಂಜು ಹಿಡಿದು ಹೊರಟಿರುವುದಾಗಿ ತಮ್ಮನ್ನು ತಾವೇ ವರ್ಣಿಸಿಕೊಂಡಿದ್ದರು. ರಾಮದಾಸ್‌ರಿಗೆ ಇದಕ್ಕಿಂತ ಸರಿಯಾದ ವರ್ಣನೆ ಮತ್ತೊಂದಿರಲಾರದು!

ಆ ಪಂಜು ಇಂದು ಆರಿ ಹೋಗಿದೆ. ಇನ್ನೆಲ್ಲಿ ಅಂಥ ಆ ತಾಪ, ಆ ಬೆಳಕು?

# ಕಂಬ ಬೆಂದಿತ್ತು.... ಹಾರಿತ್ತು ಗುಹೇಶ್ವರ....

ಕೆ.ಬಿ. ಸಿದ್ದಯ್ಯ

ನಾಲ್ಕು ಮನೆಯ ಗ್ರಾಮದಲ್ಲಿ ಹುಟ್ಟಿದ ಬಳಿಕ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಯಲ್ಲಿ ಕಲಿತ ನನ್ನ ವಿದ್ಯಾಭ್ಯಾಸ ಎಂಬ ಸಂಕಷ್ಟದ ಮಹಾ ಪ್ರಯಾಣ ಇಂಗ್ಲಿಷ್ ಎಂ.ಎ ಓದಲು ಮೈಸೂರು ತಲುಪಿತ್ತು. ಅದು ಮೈಸೂರನ್ನು ಕನಸಿನಲ್ಲಿ ಕಂಡಂತಾಯ್ತು. ಅಂದಿನ ನನ್ನ ಕನಸಿನ ಕಣ್ಣುಗಳೊಳಗೆ ಬಂದು ನಿಜಗಣ್ಣನ್ನು ತೆರೆಸುವಂತೆ ಪ್ರೇರೇಪಿಸಿದವರು ಮೂವರು. ಗುರುಗಳಾದ ಅನಂತಮೂರ್ತಿಯವರು, ನಿತ್ಯ ಹೋರಾಟದ ಚಿಲುಮೆಯಂತೆ ಚಿಮ್ಮುತ್ತಿದ್ದ ಕೆ.ರಾಮದಾಸ್‌ರವರು ಹಾಗೂ ಮೌನವೇ ರೂಪಾಗಿ ಅಲ್ಲಲ್ಲೇ ಸುಳಿದಾಡುತ್ತಿದ್ದ ದೇವನೂರು ಮಹಾದೇವರವರು. ಆ ನಿತ್ಯ ಹೋರಾಟದ ಚಿಲುಮೆ ಬತ್ತಿ ಹೋಗಿದೆ ಎಂದು ಯಾವ ನಾಲಿಗೆಯಲ್ಲಿ ಹೇಳಲಿ? ಬಿ. ಕೃಷ್ಣಪ್ಪನವರಿಂದ ಹಿಡಿದು ಡಿ.ಆರ್. ನಾಗರಾಜ್, ಲಂಕೇಶ್, ತೇಜಸ್ವಿ, ನಂಜುಂಡಸ್ವಾಮಿ, ರಾಮದಾಸ್‌ವರೆಗೆ ಎಷ್ಟೊಂದು ಒಡನಾಡಿಗಳ ಸಾವು ಕಣ್ಣೆದುರಿಗೆ ಆಯಿತು. ಕಂಡದ್ದನ್ನು ನುಡಿಯಲ್ಲಿ ನುಡಿಯಲಾಗದೆ, ನುಡಿಯಲ್ಲೂ ಇರಲಾಗದ ಈ ಸಂದರ್ಭದಲ್ಲಿ ಸಾವಿನ ಸುತ್ತ ಹರಿದಾಡುವ ಕಣ್ಣೀರು ನಮ್ಮನ್ನು ಆಹಾರವಾಗಿಸಿಕೊಳ್ಳುತ್ತಿದೆ ಎಂಬ ಭಯ ನನ್ನ ಕಣ್ಣೊಳಗಿನ ಒಂದಿಷ್ಟು ಬೆಳಕನ್ನೂ ಕಿತ್ತುಕೊಂಡಂತೆ ಹಿರಿಯ ಒಡನಾಡಿ ರಾಮದಾಸ್ ಅವರನ್ನು ಸಾವು ಕಿತ್ತುಕೊಂಡಿತು. ಅಥವಾ ನಮ್ಮ ತೇಜಸ್ವಿ, 'ನಾನು ಲಂಕೇಶ್ ಒಂಟಿಯಾಗಿದ್ದೇವೆ, ನೀನೂ ಬಾ ಮಾರಾಯ'ಎಂದು ಕರಸಿಕೊಂಡಿರಬಹುದು.

ಹಿರಿಯ ತಲೆಮಾರಿನ ಹೋರಾಟಗಾರರ ಸಾವಿನ ದುಃಖವನ್ನು ಉಣ್ಣಲಾರದ ನನ್ನ ತಲೆಮಾರಿನ ಗೆಳೆಯರು, ಹೋರಾಟಗಾರರ ಬದುಕಿನ ಮರಣೋತ್ತರ ವರದಿಗಳನ್ನು ಅತ್ಯಂತ ಜೀವಂತವಾಗಿ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದಾರೆ. ಕಣ್ಣೀರನ್ನು ಅಕ್ಷರದ ಬಟ್ಟಲಲ್ಲಿ ತುಂಬಿ ಬರೆದು ಸಂಕಟವನ್ನು ನುಂಗಿಕೊಳ್ಳಲು ಹೆಣಗುತ್ತಿದ್ದಾರೆ. ಇದನ್ನೆಲ್ಲ ನೋಡುತ್ತಿದ್ದರೆ ನನ್ನ ಕಣ್ಣುಗಳು

ಬತ್ತಿ ಹೋಗಬಾರದೆ ಅನ್ನಿಸುತ್ತಿದೆ. ಅಲ್ಲಮನ ನುಡಿ ದುಃಖಿತಪ್ತ ಮನಸ್ಸುಗಳನ್ನು ಚೇತರಿಸುವ ಮದ್ದಿನಂತೆ ಕಿವಿಗೆ ಬೀಳುತ್ತಿದೆ.

**ಸುಖವ ಬಲ್ಲಾತ ಸುಖಿಯಲ್ಲ**
**ದುಃಖವ ಬಲ್ಲಾತ ದುಃಖಿಯಲ್ಲ**
**ಸುಖ ದುಃಖವೆರಡನೂ ಬಲ್ಲಾತ ಜ್ಞಾನಿಯಲ್ಲ**
**ಹುಟ್ಟುವ ಮುನ್ನ ಸಾವಿನ ಕುರುಹ ಬಲ್ಲಡೆ ಬಲ್ಲ ಗುಹೇಶ್ವರ**

ಅಥವಾ

**ಉರಿಯ ಗಿರಿಯ ಮೇಲೊಂದು ಅರಗಿನ ಕಂಬ**
**ಕಂಬದ ಮೇಲೊಂದು ಹಂಸೆ ಕುಂತಿತ್ತು**
**ಕಂಬ ಬೆಂದಿತ್ತು ಹಂಸೆ ಹಾರಿತ್ತು ಗುಹೇಶ್ವರ**

ಹೀಗೆ ತೇಜಸ್ವಿ ಲಂಕೇಶ್, ರಾಮದಾಸ್ ಅವರ ಪ್ರಾಣಪಕ್ಷಿ ಕಣ್ಣೆದುರಿಗೇ ಹಾರಿ ಹೋಗುತ್ತಿರುವುದನ್ನು ನೋಡುವ ಶಕ್ತಿ ಬರಲೆಂದು ಗುರುವನ್ನು ಪ್ರಾರ್ಥಿಸುತ್ತೇನೆ.

## ಎಸ್ಪಿಯು ಕತ್ತಿನ ಪಟ್ಟಿ ಹಿಡಿದ ಪ್ರಸಂಗ

ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದ ಕಾಲ. ಡಿ. ವಿ. ಅರಸು ಎಂಬುವವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಕವಾಗಿದ್ದರು. ಆ ಕುಲಪತಿ ಎಂತಹ ಮೋಜಿನ ಮನುಷ್ಯನಂದರೆ, ಕುಲಪತಿಯವರ ಕಚೇರಿಯ ಒಳಶೃಂಗಾರಕ್ಕೆ ರತ್ನಗಂಬಳಿ ಹಾಸುವುದರಿಂದ ಹಿಡಿದು ಇನ್ನೂ ಯಾವಯಾವುದಕ್ಕೋ ಲಕ್ಷಾಂತರ ರೂಪಾಯಿಯನ್ನು ಖರ್ಚು ಮಾಡಿದ್ದರು. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೆ ಹಣ ಬಳಸುವ ಬದಲು, ಕಚೇರಿಯ ಐಶಾರಾಮಕ್ಕೆ ಹಣ ದುರುಪಯೋಗ ಮಾಡುತ್ತಿರುವುದನ್ನು ಸಹಿಸದ ವಿದ್ಯಾರ್ಥಿ ಸಮೂಹ ಪ್ರತಿಭಟನೆಯನ್ನು ಹಮ್ಮಿಕೊಂಡಿತ್ತು. ಸ್ನಾತಕೋತ್ತರ ವಿದ್ಯಾರ್ಥಿಗಳು, ಪದವಿ ಕಾಲೇಜಿನ ವಿದ್ಯಾರ್ಥಿಗಳು ಪ್ರತಿಭಟನಾ ಮೆರವಣಿಗೆಯನ್ನು ಸಂಘಟಿಸಿ ಕುಲಪತಿಯವರ ದುರಾಡಳಿತದ ವಿರುದ್ಧ ಪ್ರತಿಭಟನಾ ಮೆರವಣಿಗೆಯಲ್ಲಿ ಬಂದರು. ರಾಮದಾಸ್‌ರವರು ತಾವು ಅಧ್ಯಾಪಕರೆಂಬುದನ್ನು ಮರೆತು ವಿದ್ಯಾರ್ಥಿಗಳ ನಡುವೆ ವಿದ್ಯಾರ್ಥಿಯಾಗಿ ಪ್ರತಿಭಟಿಸಲು ನಾಯಕತ್ವ ವಹಿಸಿದ್ದರು . ಬೃಹತ್ ಮೆರವಣಿಗೆ ಸಾಗುತ್ತಾ ಧಿಕ್ಕಾರಗಳನ್ನು ಮೊಳಗಿಸುತ್ತಾ ರಾಮಸ್ವಾಮಿ ವೃತ್ತವನ್ನು ತಲುಪಿತು. ಅಲ್ಲಿಯವರೆಗೂ ತಾಳ್ಮೆಯಿಂದ ವರ್ತಿಸಿದ್ದ ಪೊಲೀಸ್ ಇಲಾಖೆ ತಾಳ್ಮೆ ಗೆಟ್ಟಿತು.

ವಿದ್ಯಾರ್ಥಿ ಸಮೂಹದಿಂದ ಯಾವುದೇ ಪ್ರಚೋದನಾತ್ಮಕ ಘಟನೆ ನಡೆಯದಿದ್ದರೂ ಆಗಿನ ಎಸ್‌ಪಿ ಆಗಿದ್ದ ಸುಬ್ಬಯ್ಯನವರು ಲಾಠಿ ಚಾರ್ಜ್ ಆರ್ಡರ್ ಮಾಡಿದರು. ಲಾಠಿಚಾರ್ಜ್ ಆದ ಕೂಡಲೇ ವಿದ್ಯಾರ್ಥಿಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡಲು ಪ್ರಾರಂಭಿಸಿದರು. ಇದನ್ನು ಕಂಡ

ರಾಮದಾಸ್‌ರವರು ಭಯಂಕರವಾದ ಸಿಟ್ಟಿನಿಂದ ಎಸ್‌ಪಿಯವರ ಕತ್ತಿನ ಪಟ್ಟಿ ಹಿಡಿದು 'ಏನೋ ವಿದ್ಯಾರ್ಥಿಗಳ ಮೇಲೆ ಲಾಠಿಚಾರ್ಜ್ ಮಾಡ್ತೀಯ' ಎಂದು ಗದರಿದರು.

ರಾಮದಾಸ್ ಅವರ ಮೇಲೆ ಕೈಮಾಡಲು ಎತ್ತಿದ್ದ ಪೊಲೀಸ್ ಕೈಗಳು ಹಾಗೇ ಕೆಳಗಿಳಿದವು. ಓಡಿ ಹೋಗುತ್ತಿದ್ದ ವಿದ್ಯಾರ್ಥಿಗಳು ಮತ್ತೆ ಮೆರವಣಿಗೆಗೆ ಬಂದರು. ಆಗ ರಾಮದಾಸ್ ಎಸ್‌ಪಿಯವರ ಕತ್ತಿನ ಪಟ್ಟಿ ಬಿಟ್ಟು 'ನಾನು ಹಾಗೂ ನನ್ನ ವಿದ್ಯಾರ್ಥಿಗಳು ಅಹಿಂಸಾವಾದಿಗಳು. ನೀವು-ನಿಮ್ಮ ಸರ್ಕಾರ ಲಾಠಿ, ಬಂದೂಕು ಹಿಡಿದು ಬಂದಿದ್ದೀರಿ. ನೀವು ಹಿಂಸಾಚಾರಿಗಳು. ಇದನ್ನ ನಾನು ಸಹಿಸುವುದಿಲ್ಲ'ಎಂದು ಏರಿದ ಧ್ವನಿಯಲ್ಲಿ ಹೇಳಿದರು. ಆಗ ಎಸ್‌ಪಿ ಮತ್ತು ರಾಮದಾಸ್ ಅವರೇ ಇಡೀ ಪ್ರತಿಭಟನಾ ಮೆರವಣಿಗೆಯ ನಾಯಕತ್ವ ವಹಿಸಿದವರಂತೆ ಮುನ್ನಡೆದರು.

ತೇಜಸ್ವಿ, ರಾಮದಾಸ್‌ರವರ ಸಾವಿನ ದುಃಖ ನಮ್ಮನ್ನು ಹತಾಶರನ್ನಾಗಿಸಬಾರದು. ಅವರ ಹೋರಾಟದ ಬದುಕು ನಮ್ಮನ್ನು ಮತ್ತೊಮ್ಮೆ ನಮ್ಮ ಕಣ್ಣೆದುರಿನ ಅನ್ಯಾಯಗಳ ವಿರುದ್ಧ ಬಡಿದು ಎಚ್ಚರಿಸುತ್ತದೆ. ಆದ್ದರಿಂದ ತೇಜಸ್ವಿ, ರಾಮದಾಸ್ ನಂತರದ ನನ್ನ ತಲೆಮಾರಿನ ಲೇಖಕರು, ಹೋರಾಟಗಾರರು, ಬುದ್ಧಿಜೀವಿಗಳು, ಹೋರಾಟಗಾರರಾಗಿ ಅವರು ಹಚ್ಚಿದ ಚಳವಳಿಯ ಹಣತೆಗೆ ಚಿಂತನೆಯ ಬತ್ತಿ ಹಾಗೂ ಕಾರ್ಯಕ್ರಮದ ಎಣ್ಣೆ ಸುರಿದು ಆ ಹಣತೆಯ ಬೆಳಕಿನಲ್ಲಿ ಸಾಗಬೇಕೆಂಬ ಕನಸು ನಮ್ಮನ್ನು ನಿದ್ದೆಯಲ್ಲೂ ಎಚ್ಚರಿಸುವುದೇ ನಾವು ಅವರಿಗೆ ತೋರಿಸುವ ಗೌರವ.

# ಅಭಿವ್ಯಕ್ತಿ ಸ್ವಾತಂತ್ರ್ಯದ ಅಪರೂಪ ಚೇತನ

ಪ್ರೊ.ರವಿವರ್ಮಕುಮಾರ್

ನನ್ನ ಬದುಕಿನಲ್ಲಿ ಅತ್ಯಂತ ಆಳವಾದ ಪ್ರಭಾವ ಬೀರಿ ಸಮಯಕ್ಕೆ ಮೊದಲೇ ನಿರ್ಗಮಿಸಿದವರು, ನಮ್ಮ ಸ್ನೇಹ ಗಟ್ಟಿಯಾಗಿ ಫಲ ಕೊಡುವ ಮೊದಲೇ ಟಾಟಾ ಹೇಳಿ ಹೋದವರು ಪ್ರೊ.ಕೆ. ರಾಮದಾಸ್.

ಎಪ್ಪತ್ತರ ದಶಕದ ಆದಿಯಲ್ಲಿ 'ಆಂದೋಲನ' ಒಂದು ವಾರಪತ್ರಿಕೆಯಾಗಿತ್ತು. ಜಯಪ್ರಕಾಶ ನಾರಾಯಣರ ಸಂಪೂರ್ಣ ಕ್ರಾಂತಿ ಚಳುವಳಿ ದೇಶದ ಉದ್ದಗಲಕ್ಕೆ ಹಬ್ಬಿ ವಿದ್ಯಾರ್ಥಿಗಳಿಗೆ ಪೂರ್ಣಾವಧಿ ಕಾರ್ಯಕ್ರಮವಾಗಿತ್ತು. ಪತ್ರಿಕೆಯನ್ನು ಅಚ್ಚು ಹಾಕಿಸಿ ತಮ್ಮ ಮೋಟಾರ್ ಸೈಕಲ್ ಮೇಲೆ ಬೆಂಗಳೂರಿಗೆ ತರುತ್ತಿದ್ದವರು ರಾಜಶೇಖರ ಕೋಟಿ. ಆಗ ಅದರ ಮುಖಬೆಲೆ 25 ಪೈಸೆ. ಕೋಟಿ ಅವರು ಬರುವುದನ್ನೆ ರಾಮಕೃಷ್ಣ ಲಾಡ್ಜ್‌ನಲ್ಲಿ ಕಾಯುತ್ತಿದ್ದ ನಾವು ಅರ್ಧ ಗಂಟೆಯಲ್ಲೇ ಎಲ್ಲಾ ಪತ್ರಿಕೆಗಳನ್ನೂ ಕೆಂಪೇಗೌಡ ಸರ್ಕಲ್‌ನಲ್ಲಿ ಮಾರಿಬಿಡುತ್ತಿದ್ದೆವು. ಚೆನ್ನಾಗಿ ಮಾರಾಟವಾಗುತ್ತಿತ್ತು. ಆ ಪತ್ರಿಕೆಯಲ್ಲಿ ರೆಗ್ಯುಲರ್ ಆಗಿ ಬರೆಯುತ್ತಿದ್ದ ಒಂದು ಹೆಸರು 'ರಾದಾ' ಎಂಬುದು. ನಾನು ಯಾರು ಈ ಹುಡುಗಿ ಅಂತ ಪ್ರೊ. ನಂಜುಂಡಸ್ವಾಮಿ ಅವರನ್ನು ಕೇಳಿದೆ. 'ಓ ತುಂಬಾ ಸುಂದರವಾಗಿದ್ದಾಳೆ; ನೀವು ಆಕೆಯನ್ನು ನೋಡಬೇಕು' ಅಂತ ನಂಜುಂಡಸ್ವಾಮಿ ಹೇಳಿದರು. 'ಯಾರು ಈ ರಾದಾ ನಾನು ನೋಡೇ ಇಲ್ವಲ್ಲ ?' ಅಂದುಕೊಂಡು ನಾನು ಬಹಳ ದಿವಸ ರಾದಾ ಎನ್ನುವ ಹುಡುಗಿಗಾಗಿ ಹುಡುಕಾಡುತ್ತಿದ್ದೆ. ಆದರೆ ಆ ಬರವಣಿಗೆಯಲ್ಲಿ ಇದ್ದಂಥ ಒಂದು ಧೀಮಂತಿಕೆ, ಕೆಚ್ಚು, ಎಲ್ಲಕ್ಕಿಂತ ಹೆಚ್ಚಾಗಿ ನಿರ್ಭಯತೆ ನೋಡಿ ನನಗೆ ಒಂದು ಹುಡುಗಿ ಇಷ್ಟು ನಿರ್ಭಯವಾಗಿ ಬರಿತಾ ಇದ್ದಾಳಲ್ಲ ಅನ್ನೋ ವಿಸ್ಮಯವನ್ನು ಮೂಡಿಸಿತ್ತು.

ನಾನು ಆಗ ನಂಜುಂಡಸ್ವಾಮಿ ಅವರ ವಿದ್ಯಾರ್ಥಿ. ಒಮ್ಮೆ ನಂಜುಂಡಸ್ವಾಮಿ ಅವರು ನನ್ನನ್ನು 'ಮೈಸೂರಿಗೆ ಬರುತ್ತೀರಾ ಹೋಗಿಬರೋಣ?' ಅಂದು ಕರೆದುಕೊಂಡು ಹೋದರು.

ಮೈಸೂರಿಗೆ ಹೋದೆವು. ನಂತರ ಪ್ರತಿ ಶನಿವಾರ ಇದು ನಮ್ಮ ಕಾರ್ಯಕ್ರಮವಾಗಿತ್ತು. ಆಗ ರಾಮದಾಸ್ ಅವರ ಮನೆ ಗಂಗೋತ್ರಿಯಲ್ಲಿತ್ತು. ಆಗಿನ್ನೂ ರಾಮದಾಸ್‌ಗೆ ಮದುವೆ ಆಗಿರಲಿಲ್ಲ. ಮೈಸೂರಿಗೆ ತಲುಪಿದ ಕೂಡಲೇ ನಂಜುಂಡಸ್ವಾಮಿಯವರ ಅಭ್ಯಾಸ ಅಂದ್ರೆ ಮನೆಯಲ್ಲಿ ಬ್ಯಾಗ್ ಬಿಸಾಕಿ, ಅಟೆಂಡೆನ್ಸ್ ಹಾಕಿ ನೇರ ರಾಮದಾಸ್ ಮನೆಗೆ ಹೋಗೋದು. ಆಗ ತೇಜಸ್ವಿನೂ ಮೈಸೂರಲ್ಲಿ ಇದ್ರು. ರಾಮದಾಸ್ ಮನೆಗೆ ತೇಜಸ್ವಿ, ಶ್ರೀರಾಮ್ ಎಲ್ಲ ಬರೋರು. ನಾವೂ ಹೋದಾಗ ಸೇರ್ತಾ ಇದ್ವಿ. ನನಗೆ ಅದು ಮೊದಲ ಭೇಟಿ. ನಾವು ಮನೆಗೆ ಹೋದಾಗ ನಂಜುಂಡಸ್ವಾಮಿ ಹೇಳಿದ್ರು 'ನೋಡಿ ನೀವು ಹುಡುಕ್ತಾ ಇದ್ರಲ್ಲ 'ಆಂದೋಲನ'ದ ಸುಂದರವಾದ ಹುಡುಗಿ ಇವರೇ ರಾಮದಾಸ್ ಅಂತ ಅವರ ಹೆಸರು 'ರಾದಾ' ಅನ್ನೋದು ಅವರ ಹೆಸರಿನ ಅಬ್ರಿವೇಷನ್' ಅಂತ ಹೇಳಿದ್ರು. ನಾನು ಆಗ 'ಅಯ್ಯೋ ನೀವು ಹುಡುಗಿ ಅಂತ ನನ್ನನ್ನ ನಂಬಿಸಿಬಿಟ್ಟಿದ್ರಲ್ಲ' ಅಂತ ಅಂದೆ. ಆಗ ನಂಜುಂಡಸ್ವಾಮಿ 'ನೋಡಿ ಹೇಗಿದೆ ?' ಅಂತ ಗೇಲಿ ಮಾಡಿದ್ರು.

ಆ ಥರಾ ಪರಿಚಯವಾದವರು ರಾಮದಾಸ್ ಅವರು. ಸುಮಾರು ನಲ್ವತ್ತು ವರ್ಷಗಳ ಈ ಸ್ನೇಹ ಎಷ್ಟು ಅದ್ಭುತವಾದ ಅನುಭವ, ಅಯ್ಯೋ ಮುಗಿದೇ ಹೋಯ್ತಲ್ಲ ಅನ್ನುವಷ್ಟರ ಮಟ್ಟಿಗೆ ನನ್ನ ಅವರ ಸ್ನೇಹ ಇತ್ತು.

1975ರಲ್ಲಿ ರಾಮದಾಸ್ ಮೈಸೂರಿನ ತಂಡದ ಭಿನ್ನಮತೀಯರ ತಂಡದ ನೇತೃತ್ವ ವಹಿಸಿ, ಒಂದೇ ಏಟಿಗೆ ನವನಿರ್ಮಾಣ ಕ್ರಾಂತಿಯನ್ನು ಅದರ ಫೌಂಡೇಶನ್ ಕಾನ್‌ಫರೆನ್ಸ್‌ನಲ್ಲೇ, ತುಂಡು ತುಂಡು ಮಾಡಿ ಬಿಸಾಕಿದ್ರು. ನವನಿರ್ಮಾಣ ಕ್ರಾಂತಿ ಜಯಪ್ರಕಾಶ್ ನಾರಾಯಣ್ ಅವರ ಚಳವಳಿಯನ್ನು ಕರ್ನಾಟಕಕ್ಕೆ ತಂದ ಸಂಘಟನೆ. ಪ್ರೊ. ನಂಜುಂಡಸ್ವಾಮಿಯವರನ್ನು ಸಮಾಜವಾದಿ ಯುವಜನಸಭಾದಿಂದ ಹೊರಹಾಕಿದ ಮೇಲೆ ಅಸ್ತಿತ್ವಕ್ಕೆ ಬಂದ ಸಂಘಟನೆ ನವನಿರ್ಮಾಣ ಕ್ರಾಂತಿ. ಜಯಪ್ರಕಾಶ್‌ನಾರಾಯಣ್ ಚಳವಳಿಯನ್ನು ಕರ್ನಾಟಕದಲ್ಲಿ ನಿಜವಾಗಿ ರಾಜ್ಯದ ಉದ್ದಗಲಕ್ಕೆ ಹರಡಿಸಿದ್ದು, ಯುವಕರನ್ನು, ವಿದ್ಯಾರ್ಥಿಗಳನ್ನು ಚಳವಳಿಯಲ್ಲಿ ತೊಡಗಿಸಿದ್ದು ನವನಿರ್ಮಾಣ ಕ್ರಾಂತಿ. ಅದರ ಅಧ್ಯಕ್ಷತೆಯನ್ನು ಆಗ ಬಹಳ ಒಳ್ಳೆಯ ಹೆಸರು ಮಾಡಿದ್ದ, ಪ್ರಾಮಾಣಿಕ ರಾಜಕಾರಣದ ಪ್ರತಿರೂಪವಾಗಿದ್ದ ಕಡಿದಾಳ್ ಮಂಜಪ್ಪ ಅವರು ವಹಿಸಬೇಕು ಅಂತ ನಂಜುಂಡಸ್ವಾಮಿ, ತೇಜಸ್ವಿ ತೀರ್ಮಾನ ಮಾಡಿದ್ರು. ಕಡಿದಾಳ್ ಮಂಜಪ್ಪನವರನ್ನು ಒಪ್ಪಿಸಿದ್ರು. ಆಗ ಒಂದು ಫೌಂಡೇಶನ್ ಕಾನ್ಫೆರೆನ್ಸ್ ಅನ್ನು 1975 ಫೆಬ್ರವರಿ 16 ಬೆಂಗಳೂರಿನ ಗಾಂಧಿಭವನದಲ್ಲಿ ನಡೆಸಲಾಯಿತು. ಅದು ನವನಿರ್ಮಾಣ ಕ್ರಾಂತಿಯ ಫೌಂಡೇಶನ್ ಕಾನ್ಫರೆನ್ಸ್. ಆ ಸನ್ನಿವೇಶದಲ್ಲಿ ಒಂದು ಬೆಳವಣಿಗೆ ಆಯಿತು. ನನ್ನನ್ನು ಬಹಳ ಒತ್ತಾಯ ಮಾಡಿದರು. 'ನೋಡಿ ವಿಕೇಂದ್ರೀಕರಣ ಅಂತ ಹೇಳ್ತೀರಿ, ಲೋಹಿಯಾ ಅಂತೀರಿ; ಆದರೆ ವಿಕೇಂದ್ರೀಕರಣ ಮಾತ್ರ ಮಾಡ್ತಾ ಇಲ್ಲ' ಅಂತ ನಾವು ನಂಜುಂಡಸ್ವಾಮಿಯವರನ್ನು ಟೀಕಿಸುತ್ತಿದ್ದೆವು. ಎಲ್ಲಾ ಇಲಾಖೆಗಳನ್ನೂ ನಂಜುಂಡಸ್ವಾಮಿಯವರೇ ಇಟ್ಟುಕೊಂಡಿದ್ದರು. ಆಗ ಒಂದು ಸಂಪರ್ಕ ಶಾಖೆಯನ್ನು ಮಾತ್ರ ಮೈಸೂರು ತಂಡಕ್ಕೆ ವಹಿಸಿಕೊಡಲು ನಿರ್ಧಾರ ಮಾಡಿದ್ರು. ವಹಿಸಿಕೊಟ್ಟ

ಕೂಡಲೇ ಮೊದಲ ಸರ್ಕ್ಯುಲರ್ ನಂಜುಂಡಸ್ವಾಮಿ ಮತ್ತು ತೇಜಸ್ವಿ, ಮಂಜಪ್ಪ ಅವರನ್ನು ಕರೆದುಕೊಂಡು ಬಂದದ್ದರ ವಿರುದ್ಧ. "ನಿಮ್ಮ ವೈಯಕ್ತಿಕ ಚಪಲಕ್ಕೆ ಕರೆದುಕೊಂಡು ಬಂದಿದ್ದೀರಾ ಅಂತ ಪ. ಮಲ್ಲೇಶ್ ಅವರ ಮೈಸೂರು ಯುನಿಟ್‌ನ ತಂಡ ಬಂದು ನಂಜುಂಡಸ್ವಾಮಿಯವರನ್ನ ಹಿಗ್ಗಾಮುಗ್ಗಾ ಟೀಕಿಸಿದರು. ಸಭೆಯಲ್ಲಿ ಗಲಾಟೆ ನಡೆಯಿತು. ಕಾನ್ಫೆರೆನ್ಸ್‌ನೇ ಒಂದು ರೀತಿ ಸಮಾರೋಪ ಆಗಿಬಿಟ್ಟಿತು. ಈ ತಂಡದ ನಾಯಕತ್ವ ವಹಿಸಿದ್ದ ರಾಮದಾಸ್ ಅವರು ಅತ್ಯುಗ್ರವಾಗಿ ಇದನ್ನು ಖಂಡಿಸಿ ಮಾತನಾಡಿದರು. ಇದಾದ ನಂತರ ನಾನು ರಾಮದಾಸ್ ಅವರಿಂದ ಸ್ವಲ್ಪ ಕಾಲ ದೂರವಾಗಿದ್ದೆ.

ನಂತರ ಜೆ.ಪಿ. ಕರ್ನಾಟಕಕ್ಕೆ ಬಂದಾಗ ಅವರನ್ನು ಮೈಸೂರಿಗೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಮತ್ತೆ ರಾಮದಾಸ್ ಸಕ್ರಿಯವಾಗಿ ಚಳುವಳಿಯಲ್ಲಿ ಭಾಗವಹಿಸಲು ಶುರು ಮಾಡಿದರು. ಅಷ್ಟರಲ್ಲಿ ಎಮರ್ಜೆನ್ಸಿ ಬಂತು. ಆನಂತರ ನಾವು ವಿಚಾರವಾದಿ ಚಳುವಳಿಯನ್ನು ಹಮ್ಮಿಕೊಂಡೆವು. ಈ ಚಳುವಳಿಯಲ್ಲಿ ರಾಮದಾಸ್ ಬಹಳ ಮುಖ್ಯಪಾತ್ರ ವಹಿಸಿದರು. ಅಬ್ರಹಾಂ ಕೋವೂರ್ ಅವರ ಎಲ್ಲಾ ವಿಚಾರವಾದಿ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಮತ್ತೆ ನಮ್ಮ ಸ್ನೇಹ ಚಿಗುರಿತು.

ನನಗೆ ಬಹಳ ಅದ್ಭುತವಾದ ವ್ಯಕ್ತಿತ್ವ ರಾಮದಾಸ್ ಅವರಲ್ಲಿ ಕಂಡದ್ದು ಅವರು ಅಭಿವ್ಯಕ್ತಿ ಸ್ವಾತಂತ್ರ್ಯದ ನಿರಂಕುಶತ್ವವನ್ನು ಸಂಭ್ರಮದಿಂದ ಅನುಭವಿಸಿದ್ದು. ಎಂತಹ ಸನ್ನಿವೇಶಗಳಲ್ಲೂ ಕೂಡ ತಮ್ಮ ಅಭಿಪ್ರಾಯವನ್ನು ಹಿಂದೆ ಮುಂದೆ ನೋಡದೆ ತಮಗೆ ಅನ್ನಿಸಿದ್ದನ್ನು, ನೇರವಾಗಿ, ಸ್ಪಷ್ಟವಾಗಿ, ಘಂಟಾಘೋಷವಾಗಿ, ತುಂಬಿದ ಸಭೆಯಲ್ಲೂ ಹೇಳೋರು, ಖಾಸಗಿ ಸಭೆಗಳಲ್ಲೂ ಹೇಳೋರು. ಇದಕ್ಕೆ ಒಂದು ಉದಾಹರಣೆ: ಅನಂತಮೂರ್ತಿ ತಮ್ಮ ಕುಟುಂಬದೊಂದಿಗೆ ಬಂದಿದ್ದರು. ನಾವೆಲ್ಲಾ ಊಟ ಮಾಡುತ್ತಿದ್ದೆವು. ರಾಮದಾಸ್ ಅನಂತಮೂರ್ತಿಯನ್ನುದ್ದೇಶಿಸಿ ಒಂದು ಮಾತು ಹೇಳಿದರು: "ಸಾರ್, ಈಗ ಲಂಕೇಶ್, ನಂಜುಂಡಸ್ವಾಮಿ ಹೋಗಿಬಿಟ್ಟರು. ತೇಜಸ್ವಿ ಹೋಗಿಬಿಟ್ಟರು. ಈಗ ನೀವೇ ಎಲ್ಲಾ ಚಳುವಳಿಗಳಲ್ಲಿ ಮಾರ್ಗದರ್ಶನ ಮಾಡಬೇಕು' ಆಮೇಲೆ ಒಂದು ಮಾತು ಹೇಳಿದರು. 'ಇನ್ಮೇಲೆ ನೀವು ಸ್ಟ್ರೈಟ್ ಫಾರ್ವರ್ಡ್ ಆಗಿ ಇರಬೇಕು ಸಾರ್ !' ಅಂದರೆ ಅವರು ತಮಗೆ ಅನ್ನಿಸಿದ್ದನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದರು. ಇದು ಖಾಸಗಿ ಕಾರ್ಯಕ್ರಮದ ಉದಾಹರಣೆ.

ಇನ್ನೊಂದು ಸಾರ್ವಜನಿಕವಾದ ಉದಾಹರಣೆ. ಆಗ ಮಾನಸಗಂಗೋತ್ರಿಯಲ್ಲಿ ಸಿಂಡಿಕೇಟ್ ಭವನ ಕಟ್ಟುತ್ತಿದ್ದ ಸಂದರ್ಭದಲ್ಲಿ ಅದನ್ನು ವಿರೋಧಿಸಿ ಎಲ್ಲಾ ಅಧ್ಯಾಪಕರು ಧರಣಿ ಕೂರೋಕೆ ನಿರ್ಧಾರ ಮಾಡಿದ್ರು. ಆದರೆ ಆಗಿನ ವೈಸ್‌ಛಾನ್ಸಲರ್ ಅಧ್ಯಾಪಕರ್‍ಯಾರೂ ಪ್ರತಿಭಟನೆಯಲ್ಲಿ ಭಾಗವಹಿಸದಿರುವ ಹಾಗೆ ನೋಡಿಕೊಂಡರು. ಆದರೆ ಆ ಧರಣಿಯಲ್ಲಿ ರಾಮದಾಸ್ ಒಬ್ಬರೇ ಭಾಗವಹಿಸಿದ್ದರು. ಆಗ ರಾಮದಾಸ್ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಕೂಡ ಉಪಕುಲಪತಿಗಳು ಮುಂದಾಗಿದ್ದರು. ಅಂತಹ ಸಂದರ್ಭದಲ್ಲಿ ಕಾನೂನಿನ ದೃಷ್ಟಿಯಲ್ಲಿ ಅವರಿಗೆ ನಾನು ರಕ್ಷಣೆ

ನೀಡಿದೆ. ಹಾಗಾಗಿ ಶಿಸ್ತಿನ ಕ್ರಮ ಜರುಗಲಿಲ್ಲ. ಆದರೆ ಆ ಮಟ್ಟಕ್ಕೆ ಅದು ಉಲ್ಬಣಗೊಂಡಿತ್ತು. ಎಲ್ಲಾ ಅಧ್ಯಾಪಕರು ಕೈಕೊಟ್ಟಾಗಲೂ ತಾವೊಬ್ಬರೇ ಪ್ರತಿಭಟನೆ ಮಾಡಿದವರು ರಾಮದಾಸ್.

ರಾಮದಾಸ್ ಅವರು ಗೆಳೆಯರಿಗೆ ಎಂತಹ ತ್ಯಾಗಕ್ಕೂ ಸಿದ್ಧರಾಗುತ್ತಿದ್ದರು, ಗೆಳೆಯರನ್ನು, ಗೆಳೆತನವನ್ನು ಪ್ರೀತಿಸುತ್ತಿದ್ದರು, ಪರಿಗಣಿಸುತ್ತಿದ್ದರು, ಅವರು ಬೆಂಗಳೂರಿಗೆ ಬಂದಾಗಲೆಲ್ಲ ನಮಗೆ ಹೆಚ್ಚಿನ ಸಂಭ್ರಮ. ಯಾಕೆಂದರೆ ನಾವು ನಮ್ಮ ದೈನಂದಿನ ಚಟುವಟಿಕೆಗಳಲ್ಲಿದ್ದರೂ ಅವರೊಂದಿಗೆ ಹೆಚ್ಚು ಬೆರೆಯುತ್ತಿದ್ದೆವು. ಕೆಲವು ಸಂದರ್ಭಗಳಲ್ಲಿ ಅವರು ಸ್ನೇಹಿತರಿಗೆ ತೊಂದರೆಯಾಗಬಾರದು ಅಂತ ಬೆಂಗಳೂರಿಗೆ ಬಂದರೂ ನಮಗೆ ತಿಳಿಸುತ್ತಿರಲಿಲ್ಲ. ನಾವೆಲ್ಲ ಎಷ್ಟು ಬಿಜಿಯಾಗಿದ್ದೇವೋ ಏನೋ, ನಮಗೆ ತೊಂದರೆ ಕೊಡಬಾರದು ಅನ್ನುವುದು ಅವರ ನಿಲುವಾಗಿರುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಅವರು ತಮ್ಮ ಕಾರ್ಯಕ್ರಮ ಮುಗಿಸಿ ಹೋಗುವ ಹಿಂದಿನ ದಿನ ಮಾತ್ರ ಫೋನ್ ಮಾಡಿ 'ರೀ ರವಿ ನಾನು ಬೆಂಗಳೂರಿಗೆ ಬಂದಿದ್ದೆ ಕಣ್ರೀ... ಎರಡು ದಿನ ಆಯ್ತು. ನಾಳೆ ಹೊರಪ್ತಾ ಇದ್ದೀನಿ... ಸಿಗ್ತೀರಾ ? ನೀವೇ ಬರ್ತೀರಾ ನಾನೇ ಬರ್ಲಾ?' ಎಂದು ಕೇಳುತ್ತಿದ್ದರು. ಅದು ಅವರ ಸೂಕ್ಷ್ಮತೆ. ಅದು ಒಂದು ಮಾನವೀಯ ಲಕ್ಷಣ. ಅವರ ಫ್ಯಾಮಿಲಿ ಲೈಫಲ್ಲಿ ಮೇಲ್ನೋಟಕ್ಕೆ ಅವರು ಹೆಂಡ್ತಿ ಮಕ್ಕಳ ಬಗ್ಗೆ ಗಮನ ಕೊಡೋದಿಲ್ಲ ಅಂತ ಅನ್ನಿಸುತ್ತಿತ್ತು. ಯಾವಾಗಲೂ ಪ್ರತಿಭಟನೆ, ಧರಣಿ, ಹೋರಾಟ ಅಂತ ಇರುತ್ತಿದ್ದರು. ಅವರು ತಮ್ಮ ಕುಟುಂಬಕ್ಕೋಸ್ಕರ ಅಂತ ಕೇಳಿಕೊಂಡದ್ದಾಗಲೀ, ನಾನು ಬರೋಕ್ಕಾಗಲ್ಲ ಕಣ್ರೀ ಎಂದಾಗಲೀ ಹೇಳುತ್ತಿರಲಿಲ್ಲ. ಅದು ಅವರ ಅದ್ಭುತ ವ್ಯಕ್ತಿತ್ವದ ಲಕ್ಷಣ. ಎಂದಾದರೂ ಒಮ್ಮೆ ಚಳವಳಿಗೆ ಲೇಟಾಗಿ ಬಂದರೆ ಎಸ್.ಡಿ. ಸುಂದರೇಶ್ ಹೇಳುತ್ತಿದ್ದ 'ಏನ್ರೀ ಹೆಂಡ್ತಿ ಮಕ್ಕಳಿಗೆ ಕಾವು ಕೊಟ್ಕೊಂಡು ಕೂತಿದ್ರೀರೇನ್ರಿ' ಮಾತುಗಳಿಂದ ಇತರೆಯವರನ್ನು ರೇಗಿಸೋರು. ಅವರು ತಮ್ಮ ಕೌಟುಂಬಿಕ ಅಗತ್ಯಗಳನ್ನೂ ನಿರ್ಲಕ್ಷಿಸಿ ಸಾರ್ವಜನಿಕ ಚಳುವಳಿಗಳಲ್ಲಿ ತೊಡಗಿಸಿಕೊಂಡರು.

ಆದರೆ ಹಾಗೆ ಚಳವಳಿಯಲ್ಲಿ ತೊಡಗಿಕೊಂಡಿದ್ದ ರಾಮದಾಸ್ ತಮ್ಮ ಪತ್ನಿ ನಿರ್ಮಲ ಅವರು ಕಾಯಿಲೆ ಬಿದ್ದ ನಂತರ ಸಂಪೂರ್ಣವಾಗಿ ಬದಲಾಗಿ ಹೋದರು. ಸಾರ್ವಜನಿಕ ಕೆಲಸಗಳಿಗೆ ಬಂದರೂ ತಕ್ಷಣ ವಾಪಸ್ಸು ಹೋಗಿಬಿಡುತ್ತಿದ್ದರು. 'ನಾನು ಹೋಗಬೇಕು ಕಣ್ರೀ, ಇಲ್ಲ ಅಂದರೆ ನಿರ್ಮಲಾ ಪರಿಸ್ಥಿತಿ ಬಿಗಡಾಯಿಸುತ್ತೆ ಅನ್ನುತ್ತಿದ್ದರು. ಎಷ್ಟೇ ಹೊತ್ತಾದರೂ ನಾನು ಹೋಗಲೇಬೇಕು' ಅಂತ ಹೊರಟುಬಿಡುತ್ತಿದ್ದರು. ಒಮ್ಮೆ ಡಾ. ಜಯಪ್ರಕಾಶ್ ನಾರಾಯಣ್ ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ನಿರ್ಮಲ ಅವರನ್ನು ಸೇರಿಸಿದ್ರು. ತಮ್ಮ ಪತ್ನಿಯೊಂದಿಗೆ ರಾಮದಾಸ್ ಒಂದು ವಾರ ಇದ್ದರು. ಆಗ ನಿರ್ಮಲ ಉತ್ತಮವಾಗಿ ಚೇತರಿಸಿಕೊಂಡರು. ಅಂತಹ ಮಾನವೀಯ ಗುಣವನ್ನು ಅವರು ಪತ್ನಿ ಮತ್ತು ಮಗಳ ಬಗ್ಗೆ ತೋರುತ್ತಿದ್ದರು. ತಮ್ಮ ಮಗಳೂ ಕೂಡ ತಮ್ಮಂತೆಯೇ ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲಿ ಅನ್ನುವ ನಿಲುವು ಅವರಲ್ಲಿ ಇತ್ತು. ಅವರ ಮಗಳು ಕೂಡ ಅಷ್ಟೇ ನೇರವಾಗಿ ನಡೆದುಕೊಳ್ಳುತ್ತಿದ್ದಳು. ಸ್ನೇಹ ಮದುವೆ ಬಗ್ಗೆ ಕೂಡ ಅವರು ಅಷ್ಟೇ ಕಾಳಜಿ ಇಟ್ಟುಕೊಳ್ಳುತ್ತಿದ್ದರು. ಅವರಿಗೆ ಓಂಕಾರ್ ಸಿಕ್ಕಿದ್ದು ನಿಜಕ್ಕೂ ನಮಗೆಲ್ಲ ಹೆಮ್ಮೆಯ ವಿಚಾರ. ಸ್ನೇಹಳ ಮದುವೆ ಕೂಡ ಬಹಳ ವಿಶಿಷ್ಟವಾದದ್ದು. ಯಾವುದೇ ರೀತಿಯ ಕಂದಾಚಾರವಿಲ್ಲದ ಮದುವೆ. ಪ್ರೀತಿ ವಾತ್ಸಲ್ಯಗಳು ತುಂಬಿದ್ದ ಸಂತೋಷ ಕೂಟ.

ಅವರ ಕ್ರಿಯಾಶೀಲತೆಗೆ, ಹೋರಾಟಕ್ಕೆ ಒಂದು ಸಾಂಘಿಕ ಸ್ವರೂಪ ಕೊನೆವರೆಗೂ ಸಿಕ್ಕಲೇ ಇಲ್ಲವೇನೋ ಅನ್ನೋದು ನನ್ನ ಅನಿಸಿಕೆ. ಯಾಕೆಂದರೆ ಇಂತಹ ಒಂದು ಅದ್ಭುತವಾದ ಅಭಿವ್ಯಕ್ತಿ ಸ್ವಾತಂತ್ರ್ಯದ ಚೇತನ ಒಂದು ಸಾಂಘಿಕ ಚೌಕಟ್ಟಿಗೆ ನಿಲ್ಲುತ್ತಲೇ ಇರಲಿಲ್ಲ. ಯಾವುದೇ ಸಂಸ್ಥೆಯಲ್ಲೇ ಆಗಲಿ, ಸಂಘದಲ್ಲೇ ಆಗಲಿ ಅದರ ಒಂದು ಅಂಗವಾಗಿ ನಿಲ್ಲದೆ ಅದರ ವಿರುದ್ಧವಾಗಿ ನಿಂತು, ಮೂರ್ತಿಭಂಜಕರಾಗಿ ಬಿಡುತ್ತಿದ್ದರು. ಹಾಗಾಗಿ ಅವರು ಒಂಟಿಜೀವಿಯಾಗಿಯೇ ಬದುಕಿದರು, ಒಂಟಿಜೀವಿಯಾಗಿಯೇ ನಿರ್ಗಮಿಸಿದರು. ತೇಜಸ್ವಿ, ನಂಜುಂಡಸ್ವಾಮಿಯವರ ವಿರುದ್ಧ ಕೂಡ ಭಿನ್ನಾಭಿಪ್ರಾಯವನ್ನು ಅವರು ದಾಖಲಿಸಿದರು. ಅವೆಲ್ಲ ತಾತ್ವಿಕವಾದ ಕಾರಣಕ್ಕೆ ಉಂಟಾಗುತ್ತಿದ್ದ ಭಿನ್ನಾಭಿಪ್ರಾಯಗಳು. ರಾಮದಾಸ್ ಯಾರ ಬಗ್ಗೆಯೂ ವೈಯಕ್ತಿಕ ಕಾರಣಗಳಿಗೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದವರಲ್ಲ. ರಾಮದಾಸ್ ಅವರದು ಅಂತಹ ಅಪರಂಜಿ ವ್ಯಕ್ತಿತ್ವ. ಉದಾಹರಣೆಗೆ ತೇಜಸ್ವಿ ಅವರು ಒಮ್ಮೆ 'ಗಾಂಧೀಜಿ ಇಂದಿನ ಕಾಲಕ್ಕೆ ಅಪ್ರಸ್ತುತ' ಎನ್ನುವ ಹಾಗೆ ತಳೆದ ನಿಲುವಿನ ಬಗ್ಗೆ ರಾಮದಾಸ್ ಬಹಳ ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿ, ಅವರ ನಿಲುವು ಎಷ್ಟು ಅಸಮಂಜಸ ಎನ್ನುವುದನ್ನು ಎತ್ತಿ ತೋರಿಸಿದರು. ಕಡಿದಾಳ್ ಮಂಜಪ್ಪನವರು ನವನಿರ್ಮಾಣ ಕ್ರಾಂತಿಗೆ ಬಂದ ಸಂದರ್ಭದಲ್ಲಿ ಕಟುವಾಗಿ ಟೀಕಿಸಿದರು. ಅಂತಹ ಒಂದು ಅದ್ಭುತ ಚೇತನ ಅವರು. ಕೊನೆಯವರೆಗೂ ಅವರು ಮೋಂಬತ್ತಿ ಬೆಳಕು ಕೊಡುತ್ತ ತನ್ನ ಇರುವಿಕೆಯನ್ನೇ ಸುಟ್ಟು ಬೂದಿ ಮಾಡುವಂತೆ ಬದುಕಿದವರು. ಅವರು ನಿರ್ಗಮಿಸಿದ ಮೇಲೆ ನಮ್ಮ ಚಳವಳಿಯ ಅತ್ಯಂತ ಪ್ರಬಲವಾದ ಧ್ವನಿ ಕಣ್ಮರೆಯಾಯಿತು ಅನ್ನುವುದು ನನ್ನ ಅಭಿಪ್ರಾಯ.

ನಾನು ಚುಕ್ಕಿ ನಂಜುಂಡಸ್ವಾಮಿ ಅವರ ಮದುವೆಗೆ ಇಟಲಿಗೆ ಹೋಗಬೇಕಾಗಿತ್ತು. ಆಗ ರಾಮದಾಸ್ ಆರೋಗ್ಯ ಬಿಗಡಾಯಿಸಿದೆ ಅನ್ನುವ ಸುದ್ದಿ ಬಂತು. ಆಗ ನಾನು ಮದುವೆಗೆ ಬರುವುದಿಲ್ಲವೆಂದು ಚುಕ್ಕಿಗೆ ತಿಳಿಸಿ, ರಾಮದಾಸ್ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಲು ಮುಂದಾದೆವು. ಆಗ ರಾಮದಾಸ್ ಕಿದ್ವಾಯಿ ಆಸ್ಪತ್ರೆಗೆ ಹೋದಾಗ ಆಸ್ಪತ್ರೆಗೆ ಹೋಗುವ ಮುಂಚೆ 'ರವಿ ಆಸ್ಪತ್ರೆ ಇರಲಿ, ಬನ್ನಿ ಇಲ್ಲಿ. ಆಸ್ಪತ್ರೆಗೆ ಹೋದಮೇಲೆ ನಾನು ಏನಾಗ್ತಿನೊ, ಚಿಕಿತ್ಸೆ ಕೊಟ್ಟ ಮೇಲೆ ಏನು ಮರಿತೀನೋ ಗೊತ್ತಿಲ್ಲ. ಅದನ್ನು ಮರೆಯುವುದಕ್ಕೆ ಮೊದಲು ನಾನು ಮಾಡಬೇಕಾದ ಕೆಲಸವೊಂದು ಇದೆ' ಅಂತ ಹೇಳಿ ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯಕ್ಕೆ 25 ಸಾವಿರ ರೂಪಾಯಿಗಳ ದೇಣಿಗೆಯ ಚೆಕ್ಕನ್ನು ನನ್ನ ಜೇಬಿನಲ್ಲಿಟ್ಟರು. ಆಮೇಲೆ ಆಸ್ಪತ್ರೆ ಒಳಗೆ ಹೋದರು. ಅವರು ಬೆಂಗಳೂರಿನಲ್ಲಿ ಇದ್ದದ್ದು ಅದೇ ಕೊನೇ ದಿನ. ಅವರು ಸತ್ತ ದಿನವೂ ಆ ಚೆಕ್ ಅನ್ನು ನಾನು ಜೇಬಲ್ಲೇ ಇಟ್ಟುಕೊಂಡಿದ್ದೆ. ಅವರಿಗೇ ಆ ಹಣದ ಅವಶ್ಯಕತೆ ಬೀಳಬಹುದು ಅಂತ ನಾನು ಚೆಕ್ ಕ್ಯಾಶ್ ಮಾಡಿಸದೆ ಹಾಗೆಯೇ ಇಟ್ಟುಕೊಂಡಿದ್ದೆ. ಅವರಿಗೆ ಚಿಕಿತ್ಸೆಗೆ ಬೇಕಾಗಬಹುದು ಅಂತ ಅಂದುಕೊಂಡಿದ್ದೆ.

ಈ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ದಾಖಲಿಸಬೇಕು. ಕಿದ್ವಾಯಿ ಆಸ್ಪತ್ರೆಯ ಡೈರೆಕ್ಟರ್ ಡಾ. ಬಾಪ್ಸಿ ಅಂತ. ಅಲ್ಲಿ ನನ್ನ ಸ್ನೇಹಿತ ಲಾಯರ್

ಸೋಮಶೇಖರ್ ಅವರ ಪತ್ನಿ ಪ್ರೊ.ಗಾಯತ್ರಿದೇವಿ ಅಂತ ಅಲ್ಲಿ ಪೆಥಾಲಜಿ ಇಲಾಖೆಯ ಮುಖ್ಯಸ್ಥರು. ಅವರನ್ನು ಭೇಟಿಯಾಗಿ ರಾಮದಾಸ್ ಅವರನ್ನು ಪರಿಚಯಿಸಿದೆ. ಅವರು ಎಲ್ಲವನ್ನೂ ಬಹಳ ಮುತುವರ್ಜಿ ವಹಿಸಿ ಪರೀಕ್ಷೆಗಳನ್ನು ಮಾಡಲು ಮುಂದಾದರು. ಆ ಆಸ್ಪತ್ರೆಯಲ್ಲಿದ್ದವರಲ್ಲಿ ಅರ್ಧ ಸಿಬ್ಬಂದಿ, ಡಾಕ್ಟರ್‌ಗಳೆಲ್ಲ ನನ್ನ ಕಕ್ಷಿದಾರರಾಗಿದ್ದವರೇ. ಅವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಚಳವಳಿ ಜೊತೆಗೆ ಒಡನಾಟ ಇಟ್ಟುಕೊಂಡಿದ್ದವರು. ಅವರು ಎಲ್ಲರೂ ಬಂದು ರಾಮದಾಸ್ ಅನಾರೋಗ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಆಗ ಡಾ. ಗಾಯತ್ರಿದೇವಿ ಅವರು ಕಾಯಿಲೆಯ ತೀವ್ರತೆ ನೋಡಿ ಯಾರಿಂದಲೋ ಚಿಕಿತ್ಸೆ ಕೊಡಿಸೋ ಬದಲು ಆಸ್ಪತ್ರೆಯ ಡೈರೆಕ್ಟರ್ ಡಾ. ಬಾಪ್ಸಿಯವರಿಂದಲೇ ಚಿಕಿತ್ಸೆ ಕೊಡಿಸೋಣ, ನಂಜುಂಡಸ್ವಾಮಿಯವರಿಗೂ ಅವರೇ ಚಿಕಿತ್ಸೆ ಕೊಟ್ಟಿದ್ದು ಅಂತ ಸಲಹೆ ಕೊಟ್ಟರು. ಆಗ ಡೈರೆಕ್ಟರ್ ಎಲ್ಲವನ್ನು ನೋಡಿ ಸ್ಪಷ್ಟವಾಗಿ ಏನಾಗಿದೆ ಎಂದು ಹೇಳಿದರು. ಆಗ ನಾನು ಅನುಭವಿಸಿದ್ದು ಒಬ್ಬ ಸಾಮಾನ್ಯ ಮನುಷ್ಯನಿಗೆ ಸಾಧ್ಯವಾಗದ್ದು; ಅದೇನೆಂದರೆ ಒಬ್ಬ ಸಾಮಾನ್ಯ ಮನುಷ್ಯನಾದರೆ ತನಗೆ ಕ್ಯಾನ್ಸರ್ ಆಗಿದೆ ಅಂದಕೂಡಲೇ ಆಘಾತಕ್ಕೊಳಗಾಗುತ್ತಾನೆ. ಆದರೆ ರಾಮದಾಸ್ ಅವರು ಅದರ ಭೀಕರತೆಯನ್ನೆಲ್ಲ ಅರಿತರೂ ಡೈರೆಕ್ಟರ್‌ಗೇನೇ ಒಂದು ಕ್ಲಾಸ್ ತೆಗೆದುಕೊಂಡುಬಿಟ್ಟರು. 'ಮೇಡಂ, ನಾನು ಸಾವಿಗೆ ಹೆದರಿಕೊಂಡು ಇಲ್ಲಿಗೆ ಬಂದಿಲ್ಲ. ನಾನು ಬದುಕಿರೋವಷ್ಟು ಕಾಲ ಬೇರೆಯವರಿಗೆ ಹೊರೆಯಾಗಬಾರದು. ನನ್ನ ಸೇವೆಯಲ್ಲಿ ಬೇರೆಯವರ ಬದುಕಿಗೆ ತೊಂದರೆಯಾಗಬಾರದು. ಅದಕ್ಕಾಗಿ ಮಾತ್ರ ಬಂದಿದ್ದೇನೆ ಹೊರತು ಸಾವಿಗೆ ಹೆದರಿ ಅಲ್ಲ' ಅಂತ ಅರ್ಧ ಗಂಟೆ ಭಾಷಣವನ್ನೇ ಮಾಡಿಬಿಟ್ಟರು.

ಅಲ್ಲಿದ್ದ ಡಾಕ್ಟರ್‌ಗಳು, ಸಿಬ್ಬಂದಿ ಎಲ್ಲರೂ ಅವಾಕ್ಕಾದರು. ನನಗೂ ಕೂಡ ಶಾಕ್ ಆಯಿತು. 'ಏನು ಈ ಮನುಷ್ಯ ಸಾವು ಕದ ತಟ್ಟುತ್ತಿದ್ದರೂ ನಮಗೇ ಭಾಷಣ ಕೊಡುತ್ತಿದ್ದಾರಲ್ಲ' ಅಂತ ಅಂತಹ ಒಂದು ಅದ್ಭುತ ವ್ಯಕ್ತಿತ್ವ ಅವರದು. ಅವರ ಕೊನೆಯ ಮಾತುಗಳ ಸಂದರ್ಭದಲ್ಲಿ ನನಗೆ ಒಂದು ಸಿನಿಮಾ ನೆನಪಿಗೆ ಬರುತ್ತದೆ. 'ಆನಂದ್' ಎನ್ನುವ ಹಿಂದಿ ಸಿನಿಮಾ ಅದು. ಅದರಲ್ಲಿ ರಾಜೇಶ್ ಖನ್ನಾನಿಗೆ ಕ್ಯಾನ್ಸರ್ ಬಂದಿರುತ್ತದೆ. ಅವನು ಸಾವಿಗೆ ಮುಖಾಮುಖಿಯಾಗುವ ಸನ್ನಿವೇಶದಲ್ಲಿ ಅವನು ಸಾವಿನ ಬಗ್ಗೆಯೇ ಒಂದು ಭಾಷಣ ಮಾಡುತ್ತಾನೆ. ಅನಂತರ ಅವನು ಸತ್ತುಹೋಗುತ್ತಾನೆ. ಅದನ್ನು ಅಮಿತಾಭ್ ಬಚ್ಚನ್ ರೆಕಾರ್ಡ್ ಮಾಡಿಟ್ಟುಕೊಂಡಿರುತ್ತಾನೆ. ಆ ಸನ್ನಿವೇಶವನ್ನು ನೆನಪಿಗೆ ತರುವಂತಹ ಮಾತುಗಳು ರಾಮದಾಸ್ ಅವರದಾಗಿದ್ದವು. ಅದು ನನ್ನ ಬದುಕಿನಲ್ಲಿ ಮರೆಯಲಾಗದ ಘಟನೆ.

ಅವರದು ಎಂತಹ ಅದ್ಭುತವಾದ ಬದ್ಧತೆ ಎಂದರೆ ಅವರ ಕೊನೆಯ ಸಹಿ, ಚೆಕ್ ಕೂಡ ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯಕ್ಕೆ ಕೊಟ್ಟಿದ್ದು. ಅಂತಹ ಅಪ್ರತಿಮ ಹೋರಾಟಗಾರರನ್ನು ಕಳೆದುಕೊಂಡ ಚಳವಳಿ, ವಿಚಾರವಾದಿ ಒಕ್ಕೂಟ ಬಳಲಿಬಿಟ್ಟಿದೆ. ಮೊದಲಿಗೆ ಮೈಸೂರಿಗೆ ಹೋಗುವುದೆಂದರೆ ಸಂತೋಷವಾಗುತ್ತಿತ್ತು. ಈಗ ಮೈಸೂರಿಗೆ ಹೋಗುವುದೆಂದರೇ ಬೇಸರವಾಗುತ್ತದೆ.

ಅವರದು ಒಂದು ಕನಸಿತ್ತು. ನಾವು ಮತ್ತು ಅವರ ಕುಟುಂಬ ಹದಿನೈದು ದಿನ ಕೇರಳಕ್ಕೆ ಹೋಗಬೇಕೆಂಬುದು ಅವರ ಬಯಕೆಯಾಗಿತ್ತು. ಇಡೀ ಕೇರಳ ನೋಡಿಕೊಂಡು ಬರೋಣ ಅಂದುಕೊಂಡಿದ್ದೆವು. ಆದರೆ ಅವರ ಆರೋಗ್ಯ, ನಿರ್ಮಲ ಅವರ ಆರೋಗ್ಯ ಅವಕಾಶ ಮಾಡಿಕೊಡಲಿಲ್ಲ.

ಅವರ ನಿಸ್ವಾರ್ಥದ ಬದುಕನ್ನು ನಾನು ಪ್ರಸ್ತಾಪಿಸಲೇಬೇಕು. ಅವರು ತಾವು ಮಾಡುತ್ತಿದ್ದ ಎಲ್ಲಾ ಹೋರಾಟಗಳಲ್ಲೂ ತಮ್ಮ ವೈಯಕ್ತಿಕ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಮೌಲ್ಯಗಳನ್ನು ಬಲಿ ಕೊಡುತ್ತಿರಲಿಲ್ಲ. ವಿಶೇಷವಾಗಿ ಯೂನಿವರ್ಸಿಟಿ ಪ್ರೊಫೆಸರರಾಗಿ ಬರುವ ತೊಂದರೆಗಳನ್ನು ಅವು ಗೊತ್ತಿದ್ದರೂ ಕೂಡ ನಿರ್ಲಕ್ಷಿಸಿ ಹೋರಾಟ ಮಾಡುತ್ತಿದ್ದರು. ಕೆಲವು ಸಾಹಿತಿಗಳಿಗೆ, ವಿಮರ್ಶಕರಿಗೆ ರಾಜಕೀಯದೊಡನಾಟ ಇದ್ದವರಿಗೆ ಸಾಮಾನ್ಯವಾಗಿ ಬರುತ್ತಿದ್ದ ಪ್ರಲೋಭನೆಗಳು ಇರುತ್ತಿದ್ದರೂ ರಾಮದಾಸ್ ಎಂದೂ ಅಂತಹ ಪ್ರಲೋಭನೆಗಳಿಗೆ ಬಲಿಯಾಗಲಿಲ್ಲ.

ರಾಜಕೀಯದಲ್ಲಿ ಅವರಿಗೆ ಬಹಳ ಹತ್ತಿರದವರಾಗಿದ್ದವರೆಂದರೆ ಎಂ.ಪಿ. ಪ್ರಕಾಶ್ ಮತ್ತು ಸಿದ್ದರಾಮಯ್ಯ ಅವರಿಬ್ಬರೂ ಅಧಿಕಾರದಲ್ಲಿದ್ದಾಗ ರಾಮದಾಸ್ ಒಮ್ಮೆಯೂ ಅವರನ್ನು ಹುಡುಕಿಕೊಂಡು ಅವರ ಬಳಿಗೆ ಹೋಗಲಿಲ್ಲ. ಅವರೇ ರಾಮದಾಸ್ ಅವರನ್ನು ಹುಡುಕಿಕೊಂಡು ಬರುತ್ತಿದ್ದರು. ತಮ್ಮ ಸ್ವಂತ ಹಿತಾಸಕ್ತಿಗೆ ಅವರು ತಮ್ಮ ಸ್ನೇಹಿತರನ್ನೇ ಆಗಲಿ, ಯಾವುದೇ ರಾಜಕೀಯ ನಾಯಕರನ್ನೆ ಬಳಸಿಕೊಳ್ಳಲೇ ಇಲ್ಲ.

ಇಂದಿನ ಚಳವಳಿಗಳು ನಿಷ್ಕ್ರಿಯವಾಗಲು ಒಂದು ಕಾರಣವೆಂದರೆ ರಾಮದಾಸ್ ಅವರ ಸ್ಥಾನವನ್ನು ತುಂಬಲು ನಮಗ್ಯಾರಿಗೂ ಸಾಧ್ಯವಾಗುತ್ತಿಲ್ಲ. ಇದಕ್ಕೆ ಇನ್ನೂ ಒಂದು ಕಾರಣವೆಂದರೆ, ಆಗ ಇದ್ದ ಕರ್ನಾಟಕದ ಮೂರು ಯುನಿವರ್ಸಿಟಿಗಳೂ ಕೂಡ ಚೈತನ್ಯದಿಂದ ಪುಟಿಯುತ್ತಿದ್ದವು. ನಮ್ಮೆಲ್ಲ ಸ್ಟಡಿ ಕ್ಯಾಂಪುಗಳು ಆಗುತ್ತಿದ್ದುದು, ಚಳವಳಿಯ ಹುಟ್ಟು ಬೆಳವಣಿಗೆ ಆಗುತ್ತಿದ್ದುದೆ ಕ್ಯಾಂಪಸ್‌ಗಳಲ್ಲಿ. ಯುನಿವರ್ಸಿಟಿ ಮೇಷ್ಟ್ರುಗಳಿಗೆ ಯುಜಿಸಿ ಸ್ಕೇಲ್ ಬಂದ ಮೇಲೆ ಎಲ್ಲಾ ಚಳವಳಿಗಳೂ ತಣ್ಣಗಾದವು. ಇಂದು ಮೇಷ್ಟ್ರುಗಳ ವಿರುದ್ಧವೇ ಪ್ರತಿಭಟನೆ ಮಾಡುವಂತಹ ಸನ್ನಿವೇಶ ಬಂದಿದೆ. ಯುನಿವರ್ಸಿಟಿಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆಯೇ ಇಲ್ಲದಂತಾಗಿದೆ. ಈಗ ನನಗೆ ಚಳುವಳಿಗಳೆಲ್ಲ ಹೇಗೆ ಕಾಣುತ್ತಿರುವುದೆಂದರೆ ಒಂದು ಹುಲಿಯನ್ನು ಕೊಂದು ಅದರ ಚರ್ಮವನ್ನು ಬಳಸಿಕೊಂಡು ಮ್ಯೂಸಿಯಂನಲ್ಲಿ ಇಟ್ಟು ಪ್ರದರ್ಶಿಸುತ್ತಿರುವಂತೆ ಕಾಣುತ್ತಿದೆ. ಅದನ್ನು ಹೋಗಿ ನೋಡುವ ನಾವು ಕೇವಲ ಪ್ರೇಕ್ಷಕರಾಗಿದ್ದೇವೆ ಅಷ್ಟೆ.

ಈಗ ರಾಮದಾಸ್ ಅವರ ಹೆಸರಿನಲ್ಲಿ ಪುಸ್ತಕ ಹೊರಬರುತ್ತಿರುವುದು ಹೆಮ್ಮೆಯ ವಿಷಯ. ರಾಮದಾಸ್ ಬದುಕನ್ನು ದಾಖಲಿಸುವುದು, ಅದನ್ನು ಮುಂದಿನ ಪೀಳಿಗೆಗೆ ಕೊಡಬೇಕಿರುವುದು ನಮ್ಮೆಲ್ಲರ ಕನಿಷ್ಠ ಕರ್ತವ್ಯ. ಇಂತಹ ಕೆಲಸ ಮಾಡುತ್ತಿರುವ ನಿಮ್ಮೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

---

ಈ ಲೇಖನವನ್ನು ಧ್ವನಿಮುದ್ರಣದಿಂದ ಅಕ್ಷರಕ್ಕೆ ರೂಪಾಂತರಿಸಿದವರು ಕೆ.ಎಲ್.ಚಂದ್ರಶೇಖರ್ ಐಜೂರು ಮತ್ತು ಮಂಜುನಾಥ್ ಲತಾ

# ರಾಮದಾಸ್ ಎಂಬ ಏಕ ವ್ಯಕ್ತಿ ಸೇನೆ

**ನಟರಾಜ್ ಹುಳಿಯಾರ್**

ತಮ್ಮ ಅರವತ್ತೇಳು ವರ್ಷಗಳ ಬದುಕಿನಲ್ಲಿ ಸುಮಾರು ನಾಲ್ಕು ದಶಕಗಳಿಗೂ ಹೆಚ್ಚಿನ ಕಾಲ ಸಾಮಾಜಿಕ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಹೋರಾಡಿದ ಕನ್ನಡ ಪ್ರೊಫೆಸರ್ ಕೆ. ರಾಮದಾಸ್ ದೈಹಿಕವಾಗಿ ಇನ್ನು ಮುಂದೆ ನಮ್ಮೊಡನೆ ಇರುವುದಿಲ್ಲ. ಆದರೆ ಎಲ್ಲ ಕಾಲದಲ್ಲೂ ಎಲ್ಲ ತಲೆಮಾರುಗಳಲ್ಲೂ ಈ ಬಗೆಯ ನೈತಿಕ ಸಿಟ್ಟಿನ ಚೈತನ್ಯ ಬೆಳೆಯುತ್ತಾ ಹೋಗುತ್ತದೆ ಎಂಬುದು ನನ್ನ ಗಾಢ ನಂಬಿಕೆ. ರಾಮದಾಸ್ ಈ ನಾಡಿನ ದೊಡ್ಡ ಚಿಂತಕರಲ್ಲದಿರಬಹುದು;ಆದರೆ ಪೆರಿಯಾರ್, ಲೋಹಿಯಾ, ಎಂ.ಡಿ. ನಂಜುಂಡಸ್ವಾಮಿ, ಲಂಕೇಶ್, ತೇಜಸ್ವಿ ಮುಂತಾದವರೆಲ್ಲ ರಾಮದಾಸರ ಮಾತು ಹಾಗೂ ಕ್ರಿಯೆಗಳ ಮೂಲಕ ಪ್ರತಿನಿತ್ಯ ಪ್ರಕಟಗೊಳ್ಳುತ್ತಿದ್ದರು. ದೊಡ್ಡ ದೊಡ್ಡ ಸಂಘಟನೆಗಳಿಗಿಂತ, ಸಣ್ಣಪುಟ್ಟ ಗುಂಪುಗಳಲ್ಲಿ ವೈಚಾರಿಕತೆ ಹಾಗೂ ಪ್ರತಿಭಟನೆಯ ಮಿಂಚು ಕಂಡಾಗ ರಾಮದಾಸ್ ಸಾರ್ಥಕತೆಯ ಭಾವ ಅನುಭವಿಸುತ್ತಿದ್ದರು.

ನಮ್ಮ ಈ ಕಾಲದಲ್ಲಿ ಈ ನಾಡಿನ ಪ್ರಗತಿಪರ ಚಿಂತನೆ ಹಾಗು ಚಳವಳಿಗಳಲ್ಲಿ ವಿಕಾಸಗೊಳ್ಳುತ್ತಿದ್ದ ಚಿಂತನೆಯ ಸಾರವನ್ನು, ಕಾವನ್ನು ಎಲ್ಲೆಡೆ, ಅದರಲ್ಲೂ ವ್ಯವಸ್ಥೆಯ ಬಗ್ಗೆ ಸಂತೃಪ್ತರಾಗಿದ್ದು, ಜಡವಾಗಿರುವವರಲ್ಲಿ ವ್ಯವಸ್ಥೆಯ ವಿರುದ್ಧ ಪ್ರಾಮಾಣಿಕ ಸಿಟ್ಟನ್ನು ಮೂಡಿಸಲೆತ್ನಿಸಿದರು. ಎಲ್ಲ ಚಳವಳಿಗಳೂ ಕ್ಷೀಣವಾದಾಗ, ಅಂತರ್ಜಾತೀಯ ವಿವಾಹಿತರ ವೇದಿಕೆಯಾದ ಮಾನವ ಮಂಟಪವನ್ನು ಕಟ್ಟಲೆತ್ನಿಸಿದರು. ಲೋಹಿಯಾವಾದದ ಕರ್ನಾಟಕದ ಮಾದರಿಯೊಂದು ನಮ್ಮ ರೈತ ಚಳವಳಿಯಲ್ಲಿದೆ; ಹಾಗೆಯೇ ರಾಮದಾಸ್ ಸಂಘಟಿಸಿದ ಚರ್ಚೆ, ವೇದಿಕೆಗಳು ಹಾಗೂ ಬೀದಿಬದಿಯ ಪ್ರತಿಭಟನೆಗಳಲ್ಲೂ ಲೋಹಿಯಾ ಮಾದರಿ ಇದೆ. ಸರ್ಕಾರಿ ಕೆಲಸವಾಗಲೀ ಸರ್ಕಾರಿ ಅಸ್ತ್ರಗಳಾಗಲೀ ರಾಮದಾಸರ ಬಾಯಿ ಕಟ್ಟಲಿಲ್ಲ. ತಾವು ಕೆಲಸ ಮಾಡುವ ವಿಶ್ವವಿದ್ಯಾಲಯದ ಕುಲಪತಿಯ ವಿರುದ್ಧ ಹೇಗೋ ಹಾಗೆ ಎಚ್. ವಿಶ್ವನಾಥರಂಥ

ಮಂತ್ರಿಯನ್ನೂ ಅವರು ನೇರವಾಗಿ ಮುಖಾಮುಖಿಯಾಗಬಲ್ಲವರಾಗಿದ್ದರು. ಲಂಕೇಶರ ಜೊತೆ ಇದ್ದುಕೊಂಡೇ ಅವರನ್ನು ಕಟುವಾಗಿ ಟೀಕಿಸಬಲ್ಲವರಾಗಿದ್ದರು. ಕಳೆದ ವರ್ಷದಷ್ಟೇ ಅವರು ಸುಮ್ಮನೆ ದಾರಿಯಲ್ಲಿ ಹೋಗುತ್ತಿದ್ದಾಗ, ಬಡಜನರ ಗುಂಪೊಂದು ಅವರನ್ನು ತಮ್ಮ ಪ್ರತಿಭಟನೆಯನ್ನು ಬೆಂಬಲಿಸುವಂತೆ ಕೋರಿತು. ಆ ಪ್ರತಿಭಟನೆಯಲ್ಲಿ ಭಾಗಿಯಾದ ರಾಮದಾಸ್ ಮೊನ್ನೆಮೊನ್ನೆಯ ತನಕವೂ ಅದಕ್ಕೆ ಸಂಬಂಧಪಟ್ಟ ಕೇಸುಗಳಿಗೆ ಹಾಜರಾಗುತ್ತಲೇ ಇದ್ದರು. ಈ ಎಲ್ಲ ಚಟುವಟಿಕೆಗಳ ಮೂಲಕವೇ ಅವರು ತಮ್ಮ ಶಕ್ತಿಯನ್ನು ಸದಾ ನವೀಕರಿಸಿಕೊಳ್ಳುತ್ತಾ ಬಂದರು.

ಪ್ರಾಯಶಃ ೧೯೯೮ರ ಸುಮಾರಿಗೆ ರಾಮದಾಸ್ ಅವರಿಗೆ ಹೃದಯಾಘಾತವಾಯಿತು. ಅವತ್ತು ಆಕಸ್ಮಿಕವಾಗಿ ನಾನು ಅವರ ಬಳಿ ಇದ್ದೆ. ಲಂಕೇಶರ ತೋಟದಲ್ಲಿ ನಡೆದ ಸಮಾರಂಭವೊಂದಕ್ಕೆ ರಾಮದಾಸ್ ಮತ್ತು ಅವರ ಪತ್ನಿ ನಿರ್ಮಲ ಬೆಂಗಳೂರಿಗೆ ಬಂದಿದ್ದರು. ರಾಮದಾಸ್ ಅವತ್ತು ಟ್ರೈನಿನಿಂದ ಇಳಿಯುವ ಹೊತ್ತಿಗಾಗಲೇ ಸುಸ್ತಾಗಿದ್ದರಂತೆ. ಆದರೂ ಮೆಜೆಸ್ಟಿಕ್‌ನ ಮೇಲುಸೇತುವೆ ಮೇಲೆ ನಡೆದು ರಾಮಕೃಷ್ಣ ಲಾಡ್ಜ್ ತಲುಪಿ, ಆನಂತರ ಲಂಕೇಶ್ ಪತ್ರಿಕೆಯ ಕಛೇರಿಗೆ ಬಂದಿದ್ದರು. ಅದಾದ ಮೇಲೆ ಮೆಟ್ಟಿಲಿಳಿದು ವ್ಯಾನ್‌ನಲ್ಲಿ ಲಂಕೇಶರ ತೋಟ ತಲುಪಿದ್ದರು. ನಾನು ಆ ತೋಟ ತಲುಪಿದಾಗ ಕತ್ತಲಾಗಿತ್ತು. ಲಂಕೇಶರು, 'ಆ ರಾಮದಾಸ್ ಯಾಕೋ ನಿನ್ನನ್ನು ಕೇಳ್ತಾ ಇದ್ದರು, ನೋಡು'ಎಂದರು. ನಾನು ತೋಟದ ಮನೆಯ ಕೆಳಗಿನ ರೂಮಿಗೆ ಹೋದೆ. ಅಲ್ಲಿ ರಾಮದಾಸ್ ಮಲಗಿದ್ದರು. 'ಏನ್ಸಾರ್'ಎಂದರೆ, 'ಏನೋ ಎದೆ ಉರಿ ಕಣ್ರೀ, ತುಂಬಾ ಅಸಿಡಿಟಿ' ಎಂದು ಮತ್ತೊಂದು ಜೆಲ್ಯೂಸಿಲ್ ಮಾತ್ರೆ ಬಾಯಿಗೆ ಹಾಕಿಕೊಂಡರು. ಅದಾದ ನಂತರ ಟೆರೇಸಿನ ಮೇಲೆ ನಡೆಯುತ್ತಿದ್ದ ಪಾರ್ಟಿಯ ಕಡೆಗೆ ಬಂದ ನನಗೆ ಜರಗನಹಳ್ಳಿ ಶಿವಶಂಕರ್ ಅವರ ಮಿತ್ರರೊಬ್ಬರು ಸಿಕ್ಕರು. ಅವರು ಅದೇ ಆಗ ಎಂಬಿಬಿಎಸ್ ಮುಗಿಸಿ ಹೌಸ್‌ಸರ್ಜನ್ ತರಬೇತಿಯಲ್ಲಿದ್ದರು. ಅದು ಗೊತ್ತಾದ ತಕ್ಷಣ ನಾನು 'ರಾಮದಾಸ್ ಅವರಿಗೆ ಸ್ವಲ್ಪ ಅಸಿಡಿಟಿ, ನೋಡಿ ಡಾಕ್ಟರ್'ಎಂದು ಅವರನ್ನು ಅಲ್ಲಿಗೆ ಕರೆದುಕೊಂಡು ಹೋದೆ. ಅವರು ರಾಮದಾಸರ ದೇಹದ ಸೂಚನೆಗಳನ್ನು ನೋಡನೋಡುತ್ತಿದ್ದಂತೆ ಗಾಬರಿಯಾಗಿ, 'ತಕ್ಷಣ ಆಸ್ಪತ್ರೆಗೆ ಹೋಗಬೇಕು'ಎಂದರು. ಲಂಕೇಶರ ಡ್ರೈವರ್ ರೇವಣ್ಣ ಕಾರಿನಲ್ಲಿ ರಾಮದಾಸ್, ನಿರ್ಮಲ ಹಾಗೂ ಡಾಕ್ಟರನ್ನು ಕರೆದುಕೊಂಡು ಹೊರಟರು.

ಎರಡು ಮೂರು ಗಂಟೆಗಳ ನಂತರ ಸುದ್ದಿ ಗೊತ್ತಾಯಿತು. ಹತ್ತಿರದ ಆಸ್ಪತ್ರೆಯೊಂದರ ವೈದ್ಯರು ರಾಮದಾಸರನ್ನು ಸೀದಾ ಜಯದೇವ ಆಸ್ಪತ್ರೆಗೆ ಕರೆದೊಯ್ಯಲು ಹೇಳಿದರು. ಅಲ್ಲಿ ತಕ್ಷಣ ಅವರನ್ನು ಐಸಿಯುಗೆ ಸೇರಿಸಿದ ಹೃದಯತಜ್ಞರು ಅವತ್ತು ಮಧ್ಯಾಹ್ನದ ಸುಮಾರಿಗಾಗಲೇ ರಾಮದಾಸರಿಗೆ ಹೃದಯಾಘಾತವಾಗಿದ್ದ ಸುದ್ದಿ ಹೇಳಿದರು. ಅದೆಲ್ಲ ಆದ ಮೇಲೆ ಕೂಡ ರಾಮದಾಸ್ ಹೃದಯದ ಆಪರೇಷನ್ ಮಾಡಿಸಿಕೊಳ್ಳಲು ಒಪ್ಪಲಿಲ್ಲ. ಹಾಗೂ ಹೀಗೂ ಮಾತ್ರೆಗಳಲ್ಲೇ ಹತ್ತು ವರ್ಷ ತಳ್ಳುತ್ತಾ ಬಂದರು. ಇದೆಲ್ಲದರ ನಡುವೆ ಅವರ ಚೈತನ್ಯ ಮಾತ್ರ

ಕುಗ್ಗಲಿಲ್ಲ; ಅದು ಪ್ರಖರವಾಗಿ ಉರಿಯುತ್ತಲೇ ಹೋಯಿತು ಎಂಬುದನ್ನು ನೆನಪಿಸಲು ಮಾತ್ರ ಅವರ ದೈಹಿಕ ಖಾಯಿಲೆಯ ಬಗ್ಗೆ ಹೇಳಿರುವೆ ಅಷ್ಟೆ.

ರಾಮದಾಸ್ ಉರಿಯುವ ಮುನಿಯಂತೆ ಕಾಣುತ್ತಿದ್ದರೂ ಅಪಾರ ತಮಾಷೆಯ ವ್ಯಕ್ತಿಯೂ ಆಗಿದ್ದರೆಂಬುದು ಅವರ ಬಳಗಕ್ಕೆಲ್ಲಾ ಗೊತ್ತಿದೆ. ಖಾಸಗಿ ಬಳಗದಲ್ಲಿ ಅವರ ನಾಟಕೀಯತೆ, ಅಣಕ ಪ್ರತಿಭೆಗಳೆಲ್ಲ ಹೊರ ಹೊಮ್ಮುತ್ತಿದ್ದವು. ಅದರ ನಡುವೆಯೇ ಸಿಟ್ಟು, ಸೆಡವುಗಳ ವಾಗ್ವಾದಗಳು ಕೂಡ ಸೇರಿರುತ್ತಿದ್ದವು. ಮೈಸೂರಿನ ಪ್ರಗತಿಪರರು ಅವರ ನಾಯಕತ್ವವನ್ನು ಅರ್ಧ ಗಂಭೀರವಾಗಿ, ಅರ್ಧ ತಮಾಷೆಯಾಗಿ ಸ್ವೀಕರಿಸುತ್ತಿದ್ದರು. ರಾಮದಾಸ್ ಬೈದರೆ ತೀರಾ ಘಾಸಿಗೊಳ್ಳದ, 'ಡ್ಯಾಡಿಯ ಶೈಲಿಯೇ ಹಾಗೆ'ಎನ್ನುತ್ತಿದ್ದರು. ರಾಮದಾಸರ ಪ್ರಾಮಾಣಿಕ ಸಿಟ್ಟು ಕೆಲವು ಸಲ ದಿಕ್ಕುದೆಸೆಯಿಲ್ಲದ್ದು ಎಂದು ಅವರ ಮಿತ್ರರಿಗೆಲ್ಲ ಅನ್ನಿಸಿದ್ದರೂ ಅದು ನಿಸ್ವಾರ್ಥದಿಂದ ಹುಟ್ಟಿದೆಯೆಂಬುದು ಕೂಡ ಅವರಿಗೆ ಗೊತ್ತಿತ್ತು. ಕವಿ ಕೆ.ನ.ಶಿವತೀರ್ಥನ್ ಥರದವರಂತೂ ರಾಮದಾಸ್‌ಗೆ ಸಿಟ್ಟು ಬರಲಿ ಎಂಬಂತೇ ನಡೆದುಕೊಂಡು, ಅವರು ಬೈದರೆ ಸಾಕು ಖುಷಿಗೊಳ್ಳುತ್ತಿದ್ದರು.

ಈ ಬಗೆಗಿನ ಲಘುಪ್ರಸಂಗವೊಂದನ್ನು ಹೇಳಬೇಕು:ಶಿವತೀರ್ಥನ್ ಹಾಗೂ ರಾಮದಾಸ್ ಸುಮಾರು ನಲವತ್ತು ವರ್ಷಗಳಿಂದ ಗೆಳೆಯರು. ಕಳೆದ ಒಂದೆರಡು ವರ್ಷಗಳಿಂದ ಶಿವತೀರ್ಥನ್ ರಾಮದಾಸ್ ಅವರನ್ನು ಹೆಚ್ಚು ಭೇಟಿಯಾಗುತ್ತಿರಲಿಲ್ಲ. ಕೆಲವು ತಿಂಗಳ ಕೆಳಗೆ, ಒಂದು ಬೆಳಗ್ಗೆ ಏಳು ಗಂಟೆಗೇ ಶಿವತೀರ್ಥನ್ ರಾಮದಾಸರ ಮನೆಗೆ ಹೋದರು.

ಶಿವತೀರ್ಥನ್ ಈಚೆಗೆ ತಮ್ಮ ಮನೆಯ ಕಡೆ ಸುಳಿದಿಲ್ಲವೆಂದು ರಾಮದಾಸ್‌ಗೆ ಮುನಿಸು ಬೇರೆ ಇತ್ತು. ಅವತ್ತು ರಾಮದಾಸ್ ತಮ್ಮ ಮನೆಯ ಹೊರಗೆ ಕೂತು ಪೇಪರ್ ಓದುತ್ತಿದ್ದಾಗ ಶಿವತೀರ್ಥನ್ ಕಳ್ಳನಗೆ ಬೀರುತ್ತಾ ಕಾಂಪೌಂಡ್ ಹೊಕ್ಕರು. ಈ ಅನಿರೀಕ್ಷಿತ ಭೇಟಿಯಿಂದ ರಾಮದಾಸ್‌ಗೆ ಹರ್ಷವಾಗಿದ್ದರೂ ತಮ್ಮ ಗತ್ತು ಬಿಡಲು ಅವರಿಗೆ ಇಷ್ಟವಿರಲಿಲ್ಲ. 'ಏನ್ರೀ ಸತ್ತಿದ್ದಾನೋ ಇಲ್ವೋ ಅಂತ ಗ್ಯಾರಂಟಿ ಮಾಡ್ಕೊಳ್ಳೋಕೆ ಬಂದ್ರೇನ್ರೀ?' ಎಂದು ರೇಗುತ್ತಾ ಕೇಳಿದರು. ಶಿವತೀರ್ಥನ್ ಮುಗುಳ್ನಗುತ್ತಾ ಕುರ್ಚಿಯ ಮೇಲೆ ಕೂರುತ್ತಾ, 'ಇಲ್ಲ ರಾಮಣ್ಣ, ಬೆಳಗ್ಗೆ ಹೇರ್‌ಕಟಿಂಗ್‌ಗೆ ಅಂತ ಸಲೂನಿಗೆ ಬಂದೆ. ಅಲ್ಲಿ ತುಂಬ ರಶ್ಶು. ಕೂತ್ಕೊಳ್ಳೋಕೆ ಜಾಗ ಇರಲಿಲ್ಲ. ಅದಕ್ಕೇ ಇಲ್ಲಿಗೆ ಬಂದೆ' ಎಂದು ಮುಗ್ಧತೆ ನಟಿಸಲೆತ್ನಿಸಿದರು. ಈ ಬಗೆಯ ಉತ್ತರ ಕೇಳಿ ರಾಮದಾಸ್‌ಗೆ ರೇಗಿ ಶಿವತೀರ್ಥನ್‌ರನ್ನು ಬಯ್ಯತೊಡಗಿದರು. ಇದನ್ನು ಕಂಡ ಶಿವತೀರ್ಥನ್ ಪುಳಕಗೊಂಡು ನಗತೊಡಗಿದರು. ರಾಮದಾಸರೊಂದಿಗೆ ಈ ಬಗೆಯ ಸಂಬಂಧವಿದ್ದ ಶಿವತೀರ್ಥನ್ ಮೊನ್ನೆ ಖಿನ್ನರಾಗಿ 'ಇನ್ನು ಜಗಳವಾಡೋಕೆ ಜನ ಇಲ್ಲ'ಎಂದದ್ದು ರಾಮದಾಸ್ ಬಳಗದ ಅನೇಕರ ಎದೆಯಿಂದ ಬಂದ ಮಾತಿನಂತಿತ್ತು.

ರಾಮದಾಸ್ ಸಿಟ್ಟಿನಿಂದ ಎಲ್ಲರನ್ನು ಬೈದರೂ, ಸಾಮಾಜಿಕ ಸವಾಲುಗಳು ಬಂದಾಗ ಎಲ್ಲರೂ ಅವರನ್ನು ಹುಡುಕಿಕೊಂಡು ಹೋಗುತ್ತಿದ್ದರು. ಆದ್ದರಿಂದಲೇ ರಾಮದಾಸ್ ಎನ್ನುವುದು ಒಂದು ಚೈತನ್ಯ ಎಂಬ ಮಾತನ್ನು ಇವತ್ತು ಎಲ್ಲರೂ ಹೇಳತೊಡಗಿದ್ದಾರೆ. ವ್ಯವಸ್ಥೆಯ ವಿರುದ್ಧ

ಪ್ರಾಮಾಣಿಕವಾದ ಸಿಟ್ಟಿರುವ ಎಲ್ಲರೊಳಗೂ ಹರಿಯುವ ಚೈತನ್ಯ ಅದು. ನಮ್ಮಲ್ಲಿ ಹಲವರು ಅನೇಕ ಬಗೆಯ ಹಿಂಜರಿಕೆ, ಲೆಕ್ಕಾಚಾರ, ಸ್ವಂತ ಏಳಿಗೆಯ ದೃಷ್ಟಿಯಿಂದ ಅದುಮಿಡಲು ಪ್ರಯತ್ನಿಸುವ ಚೈತನ್ಯ ಅದು. ಲಾಭ ನಷ್ಟದ ಪ್ರಶ್ನೆಯನ್ನು ಮುಂದು ಮಾಡಿಕೊಂಡು ಅನೇಕರು ಮೆಲ್ಲಗೆ ಚಿವುಟಿ ಹಾಕುವ ಈ ಚೈತನ್ಯವನ್ನು ರಾಮದಾಸ್ ಉಕ್ಕಿ ಸ್ಫೋಟಗೊಳ್ಳಲು ಬಿಟ್ಟರು. ಆ ಕಾರಣದಿಂದಾಗಿಯೇ ಅವರು ಎಲ್ಲ ಜನಪರ ಚಳವಳಿಗಳ ಸಖನಾದರು. ಆ ಚಳವಳಿಗಳ ಜೊತೆ ಅವರು ಖಾಯಂ ಸಂಬಂಧ ಇಟ್ಟುಕೊಳ್ಳದಿದ್ದರೂ ಆ ಚಳವಳಿಗಳೆಲ್ಲ ಅವರನ್ನು ತಮ್ಮ ಸ್ಫೂರ್ತಿಗಳಲ್ಲೊಂದು ಎಂದು ತಿಳಿದಿದ್ದವು.

ರಾಮದಾಸ್ ಒಂದು ದೃಷ್ಟಿಯಿಂದ ಏಕವ್ಯಕ್ತಿ ಸೇನೆಯಂತಿದ್ದರು. ತಮ್ಮ ಹಿಂದೆ ಜನ ಸಂಘಟನೆ, ಜನಬೆಂಬಲ ಇದೆಯೋ ಇಲ್ಲವೋ ಎಂಬ ಪ್ರಶ್ನೆ ಅವರಿಗೆ ಮುಖ್ಯವಾಗಿರಲಿಲ್ಲ. ಆದರೆ ಕರ್ನಾಟಕದ ಅನೇಕ ಭಾಗಗಳಲ್ಲಿ ಕಾಣಬರುವ ರಾಮದಾಸರಂಥ ಗಟ್ಟಿ ವ್ಯಕ್ತಿದನಿಗಳು ಒಂದು ಸಂಘಟನೆಯಷ್ಟೇ ಬಲಶಾಲಿಯಾಗಿರಬಲ್ಲವು ಎಂಬುದನ್ನು ಮರೆಯದಿರೋಣ. ರಾಮದಾಸರ ನಿರ್ಗಮನ ನಮ್ಮನ್ನು ಕುಗ್ಗಿಸಬಾರದು. ಬದಲಿಗೆ ರಾಮದಾಸ್‌ರಿಂದ ಸ್ಫೂರ್ತಿಗೊಂಡ ನೂರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು, ಅವರ ಮಿತ್ರರನ್ನು ಒಂದೆಡೆ ಸೇರಿಸಿ ಈ ರಾಮದಾಸ್ ಚೈತನ್ಯವನ್ನು ಇನ್ನಷ್ಟು ಪ್ರಖರವಾಗಿಸಬೇಕು. ರಾಮದಾಸ್ ಎಲ್ಲ ಜನತಾ ಚಳವಳಿಗಳ ಸಖರಂತೆ, ಪಕ್ಕಾರರಂತೆ ಇದ್ದರು ತಾನೆ? ಅವರಿಂದ ಪ್ರೇರಣೆ ಪಡೆದವರು ಈ ಚಳವಳಿಗಳ ಬೆಂಬಲಿಗರಾಗಿಯಾದರೂ ಮುಂದುವರಿಯಬೇಕು ಹಾಗೂ ಈ ಚಳವಳಿಗಳಿಗೆ ಬೇಕಾದ ಬಗೆಬಗೆಯ ಶಕ್ತಿಯನ್ನು ಒದಗಿಸಬಲ್ಲವರಾಗಬೇಕು. ಚಳವಳಿಗಳಿಗೆ ಬೌದ್ಧಿಕ ಸಾಮಗ್ರಿಯನ್ನು ಹೊಂದಿಸಿಕೊಡುವುದರ ಜೊತೆಗೆ ಇನ್ನೂ ಅನೇಕ ರೀತಿಯ ಹೊಣೆಗಳನ್ನು ಹೊರಲು ನಾವೆಲ್ಲ ಸಿದ್ಧರಿರಬೇಕು. ರಾಮದಾಸ್, ತೇಜಸ್ವಿ, ಎಂ.ಡಿ. ನಂಜುಂಡಸ್ವಾಮಿ, ಲಂಕೇಶರಿಂದ ಪ್ರೇರಣೆ ಪಡೆದ ಇಂಥ ನೂರು ಜನರ ತಂಡವೊಂದನ್ನು ರೂಪಿಸಲು ಸಾಧ್ಯವೇ ಎಂಬ ಬಗ್ಗೆ ರೈತನಾಯಕರಾದ ಕೋಡಿಹಳ್ಳಿ ಚಂದ್ರಶೇಖರ್, ಕವಿ ಕೃಷ್ಣಮೂರ್ತಿ ಬಿಳಿಗೆರೆ ಮೊದಲಾದವರೆಲ್ಲ ಮೊನ್ನೆ ಚರ್ಚಿಸಿದೆವು. ಎಲ್ಲವನ್ನೂ ರಾಮದಾಸ್‌ರಂಥವರ ಹೆಗಲಿಗೆ ಹಾಕಿ, ಉಳಿದವರು ಆರಾಮಗಿರುವ ಪ್ರವೃತ್ತಿ ಮುಂದಿನ ದಿನಗಳಲ್ಲಿ ಈ ನಾಡಿಗೆ ತೀರಾ ದುಬಾರಿಯಾಗಲಿದೆ ಎಂಬ ಎಚ್ಚರ ನಮ್ಮೊಳಗೆ ಮೂಡುವುದು ಅನಿವಾರ್ಯವಾಗಿದೆ ಎಂದು ನಮಗೆ ನಾವೇ ತಾಕೀತು ಮಾಡಿಕೊಂಡೆವು.

# ಪ್ರಿಯ ರಾಮದಾಸ್, ದಯವಿಟ್ಟು ಕ್ಷಮಿಸಿ

**ಸತ್ಯಮೂರ್ತಿ ಆನಂದೂರು**

'ಹೋರಾಟದ ಬದುಕಿನಲ್ಲಿರುವವರು ಅದರ ವ್ಯಾಪ್ತಿ ಮತ್ತು ಗುರಿಯನ್ನು ಅರಿಯದಿದ್ದರೆ ಸರ್ವನಾಶವಾಗುವುದು ಖಂಡಿತ. ನೀವೆಲ್ಲ ಪತ್ರಿಕೆಯ ಒಂದು ಲೇಖನವನ್ನು ಕುರಿತು ಟೀಕಿಸಿದ್ದೀರಿ; ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ... ಆದರೆ, ಇಡೀ ಪತ್ರಿಕೆಯ tonc ಅಥವಾ ಧ್ವನಿಯನ್ನು ಗುರುತಿಸದೇ ಹೋದದ್ದು ನನಗೆ ವಿಷಾದವಾಗಿ ಕಾಣುತ್ತದೆ. ರೈತ ಹೋರಾಟ, ದಲಿತರ ಹೋರಾಟ, ಗೋಕಾಕ್ ಚಳವಳಿ, ಲಂಕೇಶ್ ಪತ್ರಿಕೆ.... ಇವೆಲ್ಲ ಒಂದೇ ಧ್ವನಿಯ ಬೇರೆ ಬೇರೆ ಕವಲುಗಳು. ಈ ಸತ್ಯವನ್ನು ನಾವು ಅರಿಯದಿದ್ದರೆ ನಾವು ನಾವೇ ಹೊಡೆದಾಡಿ ಸಾಯಬೇಕಾಗುತ್ತದೆ.'

ಅದೇಕೊ ಗೊತ್ತಿಲ್ಲ. ಹತ್ತೊಂಬತ್ತರ ಬೆಳಗ್ಗಿನ ಆರು ಗಂಟೆಗೆ ಬಸವರಾಜ್ ಫೋನ್ ಮಾಡಿ, 'ರಾಮದಾಸ್ ತೀರಿಕೊಂಡ್ರು'ಅಂತ ಹೇಳಿದ ಕೂಡಲೇ ನನಗೆ ನೆನಪಾದದ್ದು ಅವರ ಮಾತಿನ ಒಂದು ವಾಕ್ಯ: 'ರೀ ಸತ್ಯಮೂರ್ತಿ, ಈ ಥರ ನಮ್ಮ ಮೇಲೇ ನೀವು ಕೋಪ ಮಾಡಿಕೊಳ್ಳೋದು ಒಳ್ಳೆಯದಲ್ಲ ಕಣ್ರೀ... ಮೈಸೂರಿಗೆ ಬರ್‍ತೀರಂತೆ... ಆದ್ರೆ ಯಾವತ್ತೂ ನಮ್ಮ ಮನೆಗೆ ಬರಲೇ ಇಲ್ಲ... ಅಷ್ಟು ಕೋಪಾನೇನ್ರಿ?'

ನನಗೂ ಅರ್ಥವಾಗುತ್ತಿಲ್ಲ. ರಾಮದಾಸ್ ಬಗ್ಗೆ ನನಗೇಕೆ ಕೋಪ ಇತ್ತು? ಹದಿನೇಳು ವರುಷಗಳ ಕಾಲ ಅವರ ಬಳಿ ಮಾತನಾಡದೇ ಇರುವಷ್ಟು ಅದು ಪ್ರಬಲವಾಗಿತ್ತೆ? ಅದು ಹಟಮಾರಿತನವೆ? ಪ್ರೀತಿಯೇ? ಮೊಂಡಾಟವೇ?ಅಥವಾ ನಾವು ಪ್ರೀತಿಸುವ ವ್ಯಕ್ತಿಯೊಬ್ಬರು ನಮಗೇ ಹಿತವಲ್ಲದ ಕೆಲಸ ಮಾಡಿದಾಗ ಬರುವ ಸಿಟ್ಟೆ ?ಇವತ್ತಿಗೂ ನನಗೆ ಅರ್ಥವಾಗಿಲ್ಲ. ಹಾಗಂತ ಯಾವತ್ತೂ ರಾಮದಾಸ್ ಬಗ್ಗೆ ಸೇಡಾಗಲೀ, ದ್ವೇಷವಾಗಲೀ ನನ್ನ ಮನಸ್ಸಿನ ಮೂಲೆಯಲ್ಲೂ ಸುಳಿಯಲು ಸಾಧ್ಯವಿರಲಿಲ್ಲ. ಆದರೂ ನಾನೇಕೆ ಅವರ ಬಳಿ ಮಾತು ಬಿಟ್ಟೆ?

ಎಷ್ಟೋ ಸಲ ನನಗೂ ಅನ್ನಿಸಿದೆ, ನಮಗೆಲ್ಲ ಸಾತ್ವಿಕ ಸಿಟ್ಟನ್ನು ಕಲಿಸಿದವರೇ ಈ ರಾಮದಾಸ್. ವ್ಯವಸ್ಥೆಯ ವಿರುದ್ಧ, ಜಾತೀಯತೆಯ ವಿರುದ್ಧ, ಭ್ರಷ್ಟಾಚಾರದ ವಿರುದ್ಧ, ಸಮಯಸಾಧಕತನದ ವಿರುದ್ಧ, ಕೊನೆಗೆ ನಮ್ಮ ಒಳಗೇ ಇರಬಹುದಾದ ಕಲ್ಮಶಗಳ ವಿರುದ್ಧವೂ ಸಿಡಿದೇಳುವಂತೆ ನಮ್ಮನ್ನೆಲ್ಲ ರೂಪಿಸಿದ ವಿಶೇಷ ವ್ಯಕ್ತಿ. ಅವರ ಮಾತುಗಳು ಸ್ಪಷ್ಟ, ನೇರ. ಹಾಗೆಯೇ ಅವರ ವ್ಯಕ್ತಿತ್ವ ಕೂಡ. ಭೂತಕನ್ನಡಿ ಹಾಕಿ ಹುಡುಕಿದರೂ ಅವರ ಒಳಗೆ ಕಿಂಚಿತ್ತೂ ಕಲ್ಮಶವಿರಲಿಲ್ಲ. ತಮ್ಮ ಮನಸ್ಸಿಗೆ ಬುದ್ಧಿಗೆ ಸರಿ ಅನ್ನಿಸಿದ್ದನ್ನು ತಾವೊಬ್ಬರೇ ಆದರೂ ಸರಿ, ಮಾಡಿಯೇ ತೀರುವುದು ರಾಮದಾಸ್ ಜಾಯಮಾನ. ಇಡೀ ವ್ಯವಸ್ಥೆಯೇ ಎದುರಾಗಿ ನಿಂತರೂ ರಾಮದಾಸ್ ಹೆದರುತ್ತಿರಲಿಲ್ಲ. ಅವರೊಳಗೇ ಒಬ್ಬ ಉಗ್ರ ಪ್ರತಿಭಟನಾಕಾರನಿದ್ದ. ಅದರ ಎದುರು ಕಾನೂನು, ವ್ಯವಸ್ಥೆ, ಪೊಲೀಸು, ಗೂಂಡಾಗಿರಿಗಳೆಲ್ಲ ನಗಣ್ಯವಾಗಿರುತ್ತಿದ್ದವು.

೧೯೮೨ರಲ್ಲಿ ತೇಜಸ್ವಿ, ರಾಮದಾಸ್ ಸೇರಿ 'ಲಂಕೇಶ್ ಪತ್ರಿಕೆ'ಗೆ ರೈತ ಹೋರಾಟದ ಬಗ್ಗೆ ಬರೆದ ಲೇಖನ, ವರದಿ ಇವತ್ತಿಗೂ ಐತಿಹಾಸಿಕ ದಾಖಲೆ ಎನಿಸುವಂಥದು. ಶಾಮಣ್ಣ, ನಂಜುಂಡಸ್ವಾಮಿ, ಸುಂದರೇಶ್ ಇಡೀ ರೈತ ಚಳವಳಿಯನ್ನು ಒಂದು ಸೈದ್ಧಾಂತಿಕ ಹೋರಾಟವಾಗಿ ರೂಪಿಸಿದ್ದು; ಆ ಚಳವಳಿಗೆ ಲೋಹಿಯಾ, ಜಯಪ್ರಕಾಶ್ ನಾರಾಯಣರ ಚಿಂತನೆಯನ್ನೇ ಚೈತನ್ಯವಾಗಿಸಿದ್ದು; ಸಮಾಜವಾದ ಒಂದು ಚಳವಳಿಯ ಮೂಲಸತ್ವವಾದದ್ದನ್ನು ಮಂಡಿಸಿದ ರೀತಿ ಇವತ್ತಿಗೂ ಅನನ್ಯವಾದುವು. ಹಾಗಾಗಿ ರಾಮದಾಸ್ ಅವರ ಬಗ್ಗೆಯಾಗಲಿ, ಅವರ ಚಿಂತನೆಯ ಬಗ್ಗೆಯಾಗಲೀ, ಯಾವತ್ತೂ ನನಗೆ ಅಭಿಪ್ರಾಯ ಭೇದ ಬರಲು ಸಾಧ್ಯವಿರಲಿಲ್ಲ. ಆದರೂ ನಾವು ೧೯೯೦ರಿಂದ ೨೦೦೭ನೇ ಇಸವಿಯವರೆಗೆ ಗುರುತೇ ಇರದವರಂತೆ, ಮಾತು ಕೂಡ ಆಡದಷ್ಟು ದೂರವಾಗಿದ್ದೆವು.

'ಲಂಕೇಶ್ ಪತ್ರಿಕೆ'ಯಲ್ಲಿ ರಾಮದಾಸ್ ಬರೆದದ್ದೇ ಕಡಿಮೆ. ಅಥವಾ ಇಲ್ಲ ಎಂದೇ ಹೇಳಬಹುದು. ಆದರೆ, ' ಲಂಕೇಶ್ ಪತ್ರಿಕೆ'ಗೆ ಬಲಗೈಯಾಗಿ ಇದ್ದವರು ರಾಮದಾಸ್. ಒಂದು ಪತ್ರಿಕೆಯ ಧ್ವನಿ, ಅದರ ಸಿದ್ಧಾಂತ, ಕೆಳವರ್ಗದವರ ಬಗೆಗೆ ಇರಬೇಕಾದ ಕಾಳಜಿ, ನೊಂದವರ ಪರವಾಗಿ ಮೊಳಗಬೇಕಾದ ಕೂಗು-ಇದರಲ್ಲೆಲ್ಲ ಲಂಕೇಶ್, ತೇಜಸ್ವಿ, ಚಂಪಾ ಮುಂತಾದವರ ಪಾತ್ರದಷ್ಟೇ ಮುಖ್ಯಪಾತ್ರ ರಾಮದಾಸ್‌ರದಾಗಿರುತ್ತಿತ್ತು. ರಾಮದಾಸ್ ಇಲ್ಲದಿದ್ದರೆ ಲಂಕೇಶ್ ಹೋರಾಟದ ಒಂದು ಮೂಲವೇ ಗೋಚರವಾಗುತ್ತಿರಲಿಲ್ಲ ಎಂದು ನನ್ನ ನಂಬಿಕೆ. ನಾಗತಿಹಳ್ಳಿ ಎಂಬ ಊರಿನಲ್ಲಿ ಹೆಣ್ಣುಮಗಳೊಬ್ಬಳನ್ನು ಊರಿಂದ ಬಹಿಷ್ಕಾರ ಹಾಕಿದಾಗ; ಕಂಚನಹಳ್ಳಿ ಗಂಗಾಧರ ಮೂರ್ತಿ ಕೊಲೆಯಾದಾಗ;ಮಲೆನಾಡಿನ ಕೊಪ್ಪದಲ್ಲಿ ನಿರಂತರವಾಗಿ ಕಾಡು ಕಡಿಯುವ ದಂಧೆ ನಡೆದಾಗ... ಎಲ್ಲೆಡೆಯೂ ಲಂಕೇಶರ ಜೊತೆಗಿದ್ದವರು ರಾಮದಾಸ್. ಸೊಂಟದ ಮೇಲೆ ಎಡಗೈ ಇಟ್ಟುಕೊಂಡು ರಾಮದಾಸ್ ಭಾಷಣಕ್ಕಿಳಿದರೆಂದರೆ ರಣಕಹಳೆಯೇ ಮೊಳಗುತ್ತಿತ್ತು.

ನನಗಿನ್ನೂ ನೆನಪಿದೆ. ೧೯೮೮ರ ಆಸುಪಾಸಿನಲ್ಲಿ ಒಮ್ಮೆ ಮಂಡ್ಯದಲ್ಲಿ 'ಲಂಕೇಶ್ ಪತ್ರಿಕೆ'ಯ ಸಂವಾದ ಕಾರ್ಯಕ್ರಮ ಏರ್ಪಾಟಾಗಿತ್ತು. ಪತ್ರಿಕೆ ಮತ್ತು ಓದುಗರ ನಡುವಣ ಸೌಹಾರ್ದದ ಕಾರ್ಯಕ್ರಮ ಅದು. ಮೈಸೂರಿನಿಂದ ಕೆಂಪು ಎಜ್‌ಡಿ ಬೈಕಿನಲ್ಲಿ ರಾಮದಾಸ್ ಬಂದಿದ್ದರು.

ಅದಾಗಲೇ ಪತ್ರಿಕೆಯಲ್ಲಿ ನಂಜುಂಡಸ್ವಾಮಿಯವರ ಬಗ್ಗೆ ತುಸು ತೇಜೋವಧೆಯಾಗುವಂತಹ ಬರಹಗಳು ಬಂದಿದ್ದರಿಂದ ಮಂಡ್ಯದ ರೈತರು ಅದರಲ್ಲೂ ಯುವ ಪೀಳಿಗೆ ಅಸಮಾಧಾನದಿಂದಲೇ ಇತ್ತು. ಬೆಳಿಗ್ಗೆ ಸಮಾರಂಭ ಆರಂಭವಾಗುವಾಗಲೇ ಆ ವಾತಾವರಣ ಹೊಗೆಯಾಡುತ್ತಿದ್ದುದರಿಂದ ಎಚ್. ಎಲ್. ಕೇಶವಮೂರ್ತಿ ಮುಂತಾದವರು ಆತಂಕಗೊಂಡಿದ್ದರು. ಆದರೆ, ರಾಮದಾಸ್ ಇದ್ಯಾವುದನ್ನೂ ಲೆಕ್ಕಿಸುವಂತಿರಲಿಲ್ಲ. ಪತ್ರಿಕೆಯ ಮಾತುಗಾರರಾಗಿ ಲಂಕೇಶ್‌ರ ಜೊತೆಗೆ ಕೇಶವಮೂರ್ತಿ, ರಾಮದಾಸ್, ಕೃಷ್ಣ ಆಲನಹಳ್ಳಿ ಇದ್ದರೆ, ಎದುರಾಳಿಗಳಾಗಿ ರೈತ ಹುಡುಗರು.

ಸಭೆ ಆರಂಭವಾಗುತ್ತಿದ್ದಂತೆಯೇ ಒಂದಷ್ಟು ಜನ ಯುವಕರು ಹಸಿರು ಶಾಲು ಹೊತ್ತು ಆ ರೈತ ಸಂಭಾಗಣದೊಳಗೆ ಕಾಲಿಟ್ಟರು. ಪತ್ರಿಕೆಯ ಬಗ್ಗೆ ಮಾತುಗಳೆಲ್ಲ ಮುಗಿಯುವ ವೇಳೆಗೆ ಬೆಸಗರಹಳ್ಳಿ ರಾಮಣ್ಣನವರ ಮಗ ರವಿಕಾಂತೇಗೌಡ (ಈಗಿನ ಸಿಸಿಬಿ ಡಿಸಿಪಿ) ಓದುಗರ ಪರವಾಗಿ ಮಾತುಗಳನ್ನಾರಂಭಿಸಿದರು. ರವಿ ಆಗಿನ್ನೂ ಪಿಯುಸಿ ಓದುತ್ತಿದ್ದ ಹುಡುಗ. ಒಂದೊಂದೇ ಮಾತನಾಡುತ್ತ ರವಿ ಇಡೀ ಪತ್ರಿಕೆಯ ಧೋರಣೆಯನ್ನು ಖಂಡಿಸುತ್ತ, ಅದರ ರೈತ ವಿರೋಧಿ ನಿಲುವನ್ನು ಪ್ರತಿಭಟಿಸುತ್ತ ಇಡೀ ಸಭೆಯನ್ನು ಗುಡಿಸಿ ಗುಂಡಾಂತರ ಮಾಡಿಹಾಕಿದರು. ಗೊಂದಲದಲ್ಲೇ ಬೆಳಗಿನ ಗೋಷ್ಠಿ ಮುಗಿಯಿತು.

ಸಂಜೆಯ ಗೋಷ್ಠಿಗೆ ಈ ರೈತರ ಆಪಾದನೆಗೆ ಯಾರು ಉತ್ತರ ಕೊಡಬೇಕೆಂದೇ ಸ್ಪಷ್ಟವಾಯಿತು. ಕೃಷ್ಣ ಆಲನಹಳ್ಳಿ ಮೈಕು ತೆಗೆದುಕೊಂಡು ತಾವು ಪೆಗ್ಗಡದೇವನ ಕೋಟೆಯ ಕಡೆಯವರೆಂದೂ, ಇಲ್ಲಿಗಿಂತಲೂ ಕ್ರೂರ ಮೃಗಗಳನ್ನು ನೋಡಿರುವುದಾಗಿಯೂ ರೈತರನ್ನೂ, ಬೆಳಿಗ್ಗೆ ಮಾತನಾಡಿದ ರವಿಕಾಂತೇಗೌಡರನ್ನೂ, ಅವರ ಜೊತೆಗೆ ದನಿಗೂಡಿಸಿದ ಇತರರನ್ನೂ ಮುಳ್ಳಿನ ಥರ ಚುಚ್ಚತೊಡಗಿದರು. ರಾಮದಾಸ್ ಸನ್ನೆ ಮಾಡಿ ಕೃಷ್ಣರಿಗೆ ಮಾತು ನಿಲ್ಲಿಸಲು ಹೇಳುವ ಮೊದಲೇ ಬೆಂಕಿ ಹತ್ತಿಕೊಂಡಿತ್ತು. ಒಂದು ಹಂತದಲ್ಲಿ ವೇದಿಕೆಯಲ್ಲಿ ನಿಂತಿದ್ದ ಕೃಷ್ಣ ಹಾಗೂ ಕೆಳಗೆ ಕುರ್ಚಿಯಿಂದೆದ್ದು ನಿಂತಿದ್ದ ರೈತ ಮುಖಂಡರ ನಡುವೆ ನೀನು ತಾನು ಅನ್ನುವವರೆಗೂ ಸಾಗಿ, ಅವರಿಬ್ಬರೂ ಹೊಡೆದಾಟಕ್ಕೆ ಹತ್ತಿರವಾಗುವಷ್ಟು ಹತ್ತಿರ ಹತ್ತಿರ ಬಂದಿದ್ದರು. ಲಂಕೇಶರಂತೂ ಮಾತನಾಡಲು ಸಾಧ್ಯವಾಗದಷ್ಟು ದಿಗ್ಭ್ರಮೆಗೊಂಡಿದ್ದರು.

ಆಗ ಮೈಕು ತೆಗೆದುಕೊಂಡವರು ರಾಮದಾಸ್. ನಿಧಾನವಾಗಿ ಅವರ ಮಾತು ಆರಂಭವಾಗುತ್ತಿದ್ದಂತೆಯೇ ಸಭೆ ತಣ್ಣಗಾಯಿತು. ಆ ಭಾಷಣ ಪೂರ್ತಿ ಯಾರೂ ದಾಖಲು ಮಾಡಲಿಲ್ಲ ಅನ್ನಿಸುತ್ತದೆ. ನನಗೆ ನೆನಪಿರುವ ಮಟ್ಟಿಗೆ ಅದೊಂದು ಎಲ್ಲರ ಪ್ರಜ್ಞೆ ಹಾಗೂ ಹೋರಾಟದ ಬದುಕನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಭಾಷಣ ;

'ನಾನು ಬೆಳಗ್ಗೆಯಿಂದಲೂ ನೋಡಿದ್ದೇನೆ. ಎಲ್ಲರ ಮಾತನ್ನೂ ಕೇಳಿದ್ದೇನೆ. ಮೊದಲು ನಿಮ್ಮ ಅಭಿಪ್ರಾಯಗಳನ್ನು ಗೌರವಿಸುತ್ತೇನೆ. ಆದರೆ, ಹೋರಾಟದ ಬದುಕಿನಲ್ಲಿರುವವರು ಅದರ ವ್ಯಾಪ್ತಿ ಮತ್ತು ಅದರ ಗುರಿಯನ್ನು ಅರಿಯದಿದ್ದರೆ ನಾವೆಲ್ಲ ಸರ್ವನಾಶವಾಗುವುದು ಖಂಡಿತ. ನೀವೆಲ್ಲ ಪತ್ರಿಕೆಯ ಒಂದು ಅಂಕಣ ಅಥವಾ ಒಂದು ಲೇಖನವನ್ನು ಕುರಿತು ಟೀಕಿಸಿದ್ದೀರಿ; ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ... ಆದರೆ, ಇಡೀ ಪತ್ರಿಕೆಯ toneಅಥವಾ

ಧ್ವನಿಯನ್ನು ಗುರುತಿಸದೇ ಹೋದದ್ದು ನನಗೆ ವಿಷಾದವಾಗಿ ಕಾಣುತ್ತದೆ. ರೈತ ಹೋರಾಟ, ದಲಿತರ ಹೋರಾಟ, ಗೋಕಾಕ್ ಚಳವಳಿ, ಲಂಕೇಶ್ ಪತ್ರಿಕೆ... ಇವೆಲ್ಲ ಒಂದೇ ಧ್ವನಿಯ ಬೇರೆ ಬೇರೆ ಕವಲುಗಳು. ಈ ಸತ್ಯವನ್ನು ನಾವು ಅರಿಯದಿದ್ದರೆ ನಾವು ನಾವೇ ಹೊಡೆದಾಡಿ ಸಾಯಬೇಕಾಗುತ್ತದೆ. ರೈತ ಹೋರಾಟದಲ್ಲೂ ತಪ್ಪುಗಳಾಗಿಲ್ವಾ?ದಲಿತ ಹೋರಾಟದಲ್ಲೂ ಆಗಿಲ್ವಾ?ಹಾಗೇ ಕನ್ನಡ ಹೋರಾಟದಲ್ಲೂ ಆಗಿಲ್ವಾ?... ಅದೇ ರೀತಿ ಪತ್ರಿಕೆಯ ಒಂದು ಲೇಖನ ಅಥವಾ ಒಂದು ಅಂಕಣದಲ್ಲೂ ಆಗುತ್ತದೆ. ಅದನ್ನು ನಾವು ನಾವೇ ಸರಿಮಾಡಿಕೊಳ್ಳದಿದ್ದರೆ ಭಾರೀ ದೊಡ್ಡ ದುರಂತಕ್ಕೆ ದಂಡ ತೆರಬೇಕಾಗುತ್ತದೆ...'

ಸಭೆ ಶಾಂತವಾಗಿ ಬರಖಾಸ್ತಾಯಿತು. ರಾಮದಾಸ್ ಬೈಕ್ ಹತ್ತಿ ಹೊರಟೇಹೋದರು. ಲಂಕೇಶ್ ತುಸು ಅವಮಾನದಲ್ಲೇ ಕಾದಾಡುತ್ತಿದ್ದರು. ಆದರೆ, ನನಗಿನ್ನೂ ನೆನಪಿದೆ. ಅವತ್ತು ರಾಮದಾಸ್ ಮಾಡಿದ ಭಾಷಣ ಬರೀ ರೈತರಿಗೆ ಮಾತ್ರ ಸಂಬಂಧಪಡಲಿಲ್ಲ. ಪತ್ರಿಕೆಯ ಮುಂದಿನ, 'ಪತ್ರಿಕೆ' ಎಂಬ ಹೋರಾಟದಲ್ಲಿ 'ಸಣ್ಣತನ'ಗಳು ಕಡಿಮೆಯಾದದ್ದೇ ರಾಮದಾಸ್ ಥರದವರಿಂದ ಅಂತ ನನ್ನ ನಂಬಿಕೆ.

ರಾಮದಾಸ್ ನಿತ್ಯ ಹೋರಾಟದ ಮನುಷ್ಯ. ಅವರಲ್ಲಿ ಪ್ರಗತಿರಂಗದ ಹುಚ್ಚು ಹಿಡಿಸಿದ್ದೇ ಲಂಕೇಶ್. ಜನತಾ ಸರ್ಕಾರವೂ ಅತ್ಯಂತ ಕ್ಷುಲ್ಲಕ ರೀತಿಯ ರಾಜಕಾರಣದ ದಾರಿ ಹಿಡಿದದ್ದೇ ಈ ಪ್ರಗತಿರಂಗದ ಹುಟ್ಟಿಗೆ ಕಾರಣವಾದದ್ದು. ಲಂಕೇಶ್, ರಾಮದಾಸ್ ನಡೆಸಿದ ನೂರಾರು ಸಭೆಗಳಲ್ಲಿ ಲಂಕೇಶರ ವ್ಯಕ್ತಿತ್ವ ಒಂದು ಆಕರ್ಷಣೆಯಾದರೆ ರಾಮದಾಸ್‌ರ ಮಾತು ಇನ್ನೊಂದು ಆಕರ್ಷಣೆ. ಇದೆಲ್ಲಾ ಆಗುಹೋಗುವ ಕತೆ ಅಲ್ಲ ಕಣ್ರೀ... 'ಎಂದು ಬೈದುಕೊಳ್ಳುತ್ತಲೇ ತೇಜಸ್ವಿ ಮಾತನಾಡಿ' ಹೋಗುತ್ತಿದ್ದರು. ಒಂದು ದಿನವಂತೂ ತೇಜಸ್ವಿ 'ನೀವೆಲ್ಲ ಸೇರಿ ಪ್ರಗತಿರಂಗದ ದೊಂಬರಾಟದಲ್ಲಿ ಪತ್ರಿಕೇನ ಸರ್ವನಾಶ ಮಾಡಲು ಹಟ ತೊಟ್ಟಿದ್ದೀರಿ ಅಂತ ಕಾಣ್ತಾದೆ' ಅಂದರು. ನಾನು 'ಇದನ್ನು ದಯವಿಟ್ಟು ರಾಮದಾಸ್‌ಗೆ ಹೇಳಿ' ಅಂದೆ. ತೇಜಸ್ವಿ 'ಪ್ರಯೋಜನ ಇಲ್ಲ ಕಣಯ್ಯಾ. ಆ ರಾಮದಾಸ್ ಈಗಾಗಲೇ ಸರ್ಕಾರ ಬೀಳಿಸುವವರೆಗೂ ಬಿಡುವುದಿಲ್ಲ ಅನ್ನುವಂತೆ ಪಣತೊಟ್ಟಿರೋ ಹಾಗೆ ಕಾಣ್ತದೆ... ಅವರ ಕತೆ ಹಾಳಾಗ್ಲಿ... ನಿವೆಲ್ಲ ಏನು ಮಾಡ್ತಿದೀರೋ ಮಾರಾಯ? ನೀನೂ ಕೂಡ ಪ್ರಗತಿರಂಗದ ಗುರುತ್ವಾಕರ್ಷಣಕ್ಕೆ ಸಿಕ್ಕಿಕೊಂಡು ಲಾಟರಿ ಹೊಡೀತಿದೀಯೋ ಹೇಗೆ?' ಎಂದು ಪತ್ರ ಬರೆದು ಗದರಿದರು.

ನಾವು ಲಂಕೇಶರಿಗೆ ಹೇಳುವ ಹಾಗಿರಲಿಲ್ಲ. ಶೃಂಗೇರಿಯ ಯಾವುದೋ ಸಭೆ ಮುಗಿದಾಗ, ಲಂಕೇಶ್ ಮಲಗಿದ್ದ ವೇಳೆಯಲ್ಲಿ ರಾಮದಾಸ್ ಜೊತೆಗೆ ಈ ವಿಷಯ ಪ್ರಸ್ತಾಪಿಸಿದೆ. ತೇಜಸ್ವಿ ಬೈದದ್ದನ್ನೂ ಪತ್ರಿಕೆ ಮೊದಲಿನ ಗುಣಮಟ್ಟದಿಂದ ದೂರ ಸರಿಯುತ್ತಿರುವುದನ್ನೂ ಹೇಳಿದೆ. ರಾಮದಾಸ್ ಖಿನ್ನರಾದರು. ಬಹುಶಃ ಆಗ ಮಧ್ಯರಾತ್ರಿ ಎರಡೂವರೆ ಗಂಟೆ ಇರಬೇಕು. ಒಂದು ಚಾರ್ಮ್ಸ್ ಸಿಗರೇಟು ಹತ್ತಿಸಿ, ಮೂಗಿನಿಂದ ದಟ್ಟ ಹೊಗೆಯನ್ನು ನಿಟ್ಟುಸಿರಾಗಿ ಬಿಟ್ಟು ಹೇಳಿದರು: 'ಇಲ್ಲ ಕಣ್ರೀ... ಇದಕ್ಕೊಂದು ವ್ಯವಸ್ಥೆ ಮಾಡಲೇಬೇಕು. ಆದರೆ, ಈ ಮೇಷ್ಟ್ರಿಗೆ ಒಂದು ಸಾರಿ

ಏನಾದರೂ ತಲೆಗೆ ಹೊಕ್ಕಿತೆಂದರೆ ಅದನ್ನು ಮಾಡಿಯೇ ತೀರಬೇಕು. ನಾವ್ಯಾರೂ ಅವರಿಗೆ ಬುದ್ಧಿ ಹೇಳುವ ಹಾಗಿಲ್ಲ... ' ಎಂದೆ. ನೋಡೋಣ ಎಂದರು.

ಅದೇ ಸಂದರ್ಭದಲ್ಲಿ, ಅಂದರೆ ೧೯೮೦ರ ಆರಂಭದಲ್ಲಿ ಒಂದು ಘಟನೆ ನಡೆಯಿತು. ಆ ವರ್ಷದ ಸಾಹಿತ್ಯ ಸಮ್ಮೇಳನವನ್ನು ಧಿಕ್ಕರಿಸಬೇಕೆಂದು ಡಿ. ಆರ್. ನಾಗರಾಜ್ ಮತ್ತು ಶೂದ್ರ ಶ್ರೀನಿವಾಸ್ ಒಂದು ಪತ್ರಿಕಾ ಹೇಳಿಕೆ ಕೊಟ್ಟರು. ಅದರ ಬದಲಾಗಿ 'ಪರ್ಯಾಯ ಸಾಹಿತ್ಯ ಸಮ್ಮೇಳನ' ಮಾಡಬೇಕೆಂದು ಲಂಕೇಶರ ಬಳಿ ಬಂದು ಹೇಳಿದರು. ಅಡಿಗರ ಕಾಲದಲ್ಲಿ ಒಮ್ಮೆ ನಡೆದ ಪ್ರತಿಭಟನೆಯ ಪುನರಾವರ್ತನೆ ಆಗಬೇಕೆಂಬುದು ಅವರ ಯೋಚನೆ. ಆದರೆ ಶೂದ್ರ ಮತ್ತು ಡಿಆರ್ ನೀಡಿದ ಹೇಳಿಕೆಗಳು ಎಷ್ಟೊಂದು ಅಸಂಬದ್ಧವಾಗಿದ್ದವೆಂದರೆ, ಅದನ್ನು ಓದಿದವರಿಗೆ ಇದರಲ್ಲೊಂದು ಪೂರ್ವಾಗ್ರಹ ಇದೆಯೆಂದು ಅನ್ನಿಸದೇ ಇರುತ್ತಿರಲಿಲ್ಲ.

ಯುವಕರಾಗಿದ್ದ ನಮಗೆ ಇದು ಸಾಕಷ್ಟು ಕಾಡತೊಡಗಿತು. ನಾನು, ಚಂದ್ರು, ಕಾಮರಾಜ್, ಶಿವಶಂಕರ್ ಮೊದಲಾದವರೆಲ್ಲ ಶೂದ್ರ-ಡಿಆರ್ ಹೇಳಿದ ಮಾತುಗಳನ್ನೂ, ಅವರ ಅಭಿಪ್ರಾಯದ ವಿರೋಧಾಭಾಸಗಳನ್ನೂ ಸಮಗ್ರವಾಗಿ ಬರೆದು 'ಪ್ರಜಾವಾಣಿ'ಗೆ ಕೊಟ್ಟೆವು. 'ಪ್ರಜಾವಾಣಿ'ಯಲ್ಲಿ ಆ ಪತ್ರರೂಪದ ಲೇಖನ ಬರಹ ಯಥಾವತ್ತಾಗಿ ಅಚ್ಚಾಗಿ, ಸಾಹಿತ್ಯಲೋಕದಲ್ಲಿ, ಅದರಲ್ಲೂ ಡಿಆರ್, ಶೂದ್ರರ ಬಳಗದಲ್ಲಿ ಬೆಂಕಿಯನ್ನೇ ಹಚ್ಚಿಬಿಟ್ಟಿತು. ಲಂಕೇಶ್ ಅದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದರೋ ಇಲ್ಲವೋ. ಆದರೆ ಶೂದ್ರಾದಿಗಳು ಸೇರಿ 'ಇದು ನಿಮ್ಮ ವಿರುದ್ಧವೇ ಮಾಡುತ್ತಿರುವ ಬಂಡಾಯ' ಎಂಬಂತೆ ಬಣ್ಣ ಹಚ್ಚತೊಡಗಿದರು. ಲಂಕೇಶರೂ ನಂಬಿದರು. ಮರುದಿನವೇ ನಾವೆಲ್ಲ ಕಚೇರಿಯಲ್ಲಿರುವಾಗಿ ನನ್ನನ್ನೂ, ಚಂದ್ರುವನ್ನೂ ಕರೆದು 'ಇನ್ನುಮೇಲೆ ನೀವು ಪತ್ರಿಕೆಗೆ ಬರೆಯುವ ಅಗತ್ಯವಿಲ್ಲ' ಎಂದರು. ಲಂಕೇಶ್ ಪತ್ರಿಕೆಗೆ ಬಿದ್ದ ಮೊದಲ ಬಾಂಬ್ ಅದು.

ಹೀಗಾಗಬಹುದೆಂದು ಅರಿತಿದ್ದ ರಾಮದಾಸ್ ಕೂಡಲೇ ಲಂಕೇಶ್‌ರಿಗೆ ಫೋನ್ ಮಾಡಿದಾಗ ಅವರು ಕಿಡಿಕಾರುತ್ತಲೇ ಇದ್ದರಂತೆ. ನನಗೆ ಫೋನ್ ಮಾಡಿ ಹೇಳಿದ ರಾಮದಾಸ್ ಪತ್ರಿಕೆಗೆ ಒಂದು ಪತ್ರವನ್ನು ಬರೆದರು: 'ಪ್ರಜಾವಾಣಿಯಲ್ಲಿ ಆಲೂರು, ಆನಂದೂರು ಮುಂತಾದವರು ಬರೆದ ಅಭಿಪ್ರಾಯದ ಬಗ್ಗೆ ನೀವು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಅಲ್ಲದೆ ಅವರ ಮೇಲೆ ನೀವೇನಾದರೂ ಕ್ರಮ ಕೈಗೊಂಡು ಅನಾಹುತ ಮಾಡಬೇಡಿ. ಅವರದೂ ಒಂದು ಅಭಿಪ್ರಾಯ ಎಂಬುದನ್ನು ನಾವೆಲ್ಲರೂ ಗೌರವಿಸಬೇಕು. ಅದಕ್ಕಿಂತಲೂ ಮುಖ್ಯವಾಗಿ ಅವರ ಅಭಿಪ್ರಾಯ ಎಷ್ಟು ಸಕಾರಣವಾದುದು ಎಂಬುದನ್ನು ನಾವು ನೀವೆಲ್ಲ ಮೊದಲು ಮನದಟ್ಟು ಪ  ಕೋಬೇಕು. ನಮ್ಮ ಮುಂದಿನ ಪೀಳಿಗೆಯ ಈ ಹುಡುಗರ ಅಭಿಪ್ರಾಯದ ಬಗ್ಗೆ ನನಗೆ ಸಮ್ಮ ಯೂ ಇದೆ, ಸಂತೋಷವೂ ಇದೆ. ಆದರೆ, ನೀವು ಇದನ್ನೇ ಆಧಾರವಾಗಿಟ್ಟುಕೊಂಡು ಪತ್ರಿಕೆಗೆ ಕುಂದಾಗುವಂತೆ ಮಾಡಬಾರದು'. ಲಂಕೇಶರು ರಾಮದಾಸ್‌ರಿಗೆ ಏನು ಉತ್ತರ ಕೊಟ್ಟರೋ ಗೊತ್ತಿಲ್ಲ. ಅಂತೂ ಪತ್ರಿಕೆಯ ಅತ್ಯುತ್ತಮ ಬರಹಗಾರರಲ್ಲೊಬ್ಬರಾದ ಚಂದ್ರುಗೆ ಪತ್ರಿಕೆಯ ಸಂಬಂಧ ಕಳಚಿಹೋಯ್ತು.

ಮುಂದಿನ ಹತ್ತು ತಿಂಗಳಲ್ಲೇ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದ ಪೂರ್ತಿಜನ ಬಿಡುವಂಥ ದುರ್ಘಟನೆ ನಡೆದೇ ಹೋಯ್ತು. ಪತ್ರಿಕೆಯನ್ನು ಅಪಾರವಾಗಿ ಪ್ರೀತಿಸುತ್ತಿದ್ದ ನಾವೆಲ್ಲ ಪತ್ರಿಕೆ ಬಿಡಬೇಕಾದ ಸನ್ನಿವೇಶ ಒಂದರ ಹಿಂದೊಂದರಂತೆ ನಿರ್ಮಾಣವಾಯ್ತು. ಪ್ರಗತಿರಂಗದ ಬಗ್ಗೆ ನಮ್ಮ ಒಲವು ಇಲ್ಲದೆ ಇದ್ದರು, ಪರ್ಯಾಯ ಸಾಹಿತ್ಯ ಸಮ್ಮೇಳನದ ಬಗ್ಗೆ ನಮ್ಮ ಹೇಳಿಕೆ ಇದೇ ಲಂಕೇಶರಿಗೆ ಒಂದು ರೀತಿಯ ಸವಾಲು ಎನಿಸಿರಬೇಕು. ಹಲವು ದುರ್ಘಟನೆಗಳು ನಡೆದಾಗ, ನಾನು ಗುಬ್ಬಿ ಮೊದಲು ಕಾರುತ್ತಿದ್ದುದು ರಾಮದಾಸ್ ಬಳಿ. ಅತ್ತ ಲಂಕೇಶರನ್ನೂ ಬಿಡಲಾಗದೆ, ಇತ್ತ ನಮ್ಮನ್ನೂ ತಿರಸ್ಕರಿಸಲಾಗದೆ ರಾಮದಾಸ್ ಒದ್ದಾಡಿದರು. ಬಹಳಷ್ಟು ಹುಡಗರನ್ನು ಒಂದೇ ದಿನ ಕೆಲಸದಿಂದ ಕಿತ್ತುಹಾಕಿದ ಲಂಕೇಶರ ವಿರುದ್ಧ ನಮ್ಮೆದುರು ಕೂಗಾಡಿದ್ದ ಕೇಶವಮೂರ್ತಿ ಮರುಕ್ಷಣದಲ್ಲೇ ತಣ್ಣಗಾಗಿದ್ದರು. ನಾವೆಲ್ಲಾ ಕ್ರಾಂತಿಕಾರಿ ರಾಮದಾಸ್ ಅಂತ ಕರೆಯುತ್ತಿದ್ದ ರಾಮದಾಸರೇ ಒಂದು ಬಗೆಯ ಮೌನ. ಹಾಗೆಯೇ 'ನಾನೇ ಬಂದು ಮಾತಾಡುತ್ತೇನೆ' ಎಂದು ನಮ್ಮೆದುರು ಹೇಳುತ್ತಿದ್ದ ಸಬೂಬುಗಳು ನಮಗೆಲ್ಲ ಕಿರಿಕಿರಿ ಎನಿಸಿತೊಡಗಿದವು. ಕೊನೆಗೂ ರಾಮದಾಸ್ ಬರಲೇ ಇಲ್ಲ. ಒಂದು ದಿನ ಕಾರಣವಿಲ್ಲದೆ ಯಾವುದೋ ಕ್ಷುಲ್ಲಕ ಕಾರಣಕ್ಕೆ ನಮ್ಮನ್ನೆಲ್ಲ ಲಂಕೇಶ್, ಅರೆಸ್ಟ್ ಮಾಡಿಸಿ ಒಂದುದಿನ ಸ್ಟೇಷನ್‌ನಲ್ಲಿ ಕೊಳೆಸಿದಾಗ ಈ ಲಂಕೇಶ್, ರಾಮದಾಸ್, ತೇಜಸ್ವಿ, ಕೇಶವಮೂರ್ತಿ ಎಲ್ಲರ ಬಗೆಗೆ ಒಂದು ಬಗೆಯ ಸಿಟ್ಟು, ಅಸಹನೆ ಬೆಳೆಯತೊಡಗಿತು.

ಅದೇ ಕೊನೆ... ಆವತ್ತಿನಿಂದ ನಾನು ರಾಮದಾಸರನ್ನು ಮಾತನಾಡಿಸಲಿಲ್ಲ. ಹಾಗೆಂದು ಯಾವತ್ತೂ ಇದು ದ್ವೇಷದ ಸ್ವರೂಪ ಪಡೆಯಲೇ ಇಲ್ಲ. ರಾಮದಾಸ್ ಬಗ್ಗೆ, ಯಾರಾದರೂ ಸಣ್ಣತನದ ಮಾತಾಡಿದರೆ, ಮೊದಲು ಕೋಪ ಬರುತ್ತಿದ್ದುದೇ ನಮಗೆ. ಒಂದು ಸಲ ಚಂಪಾ, 'ಅವರು ರಾಮದಾಸರಲ್ಲ, ರಾವಣದಾಸ'ಎಂದು ಬರೆದಾಗ ನಾವೆಲ್ಲ ಕಿಡಿಕಿಡಿಯಾಗಿದ್ದೆವು! ಮೈಸೂರಿನಲ್ಲಿ ರಾಮದಾಸ್ ಯಾವುದಾದರೂ ಪ್ರತಿಭಟನೆ ನಡೆಸಿದಾಗ ಮನಪೂರ್ವಕವಾಗಿ ಅವರನ್ನು ಬೆಂಬಲಿಸುತ್ತಿದ್ದೆವು.

೨೦೦೦ದ ಇಸವಿ. ಇನ್ನೇನು ಒಂದು ವಾರ ಇದೆಯೆನ್ನುವಾಗ ನಾನು 'ಜನವಾಹಿನಿ' ಪತ್ರಿಕೆಗಾಗಿ ಲಂಕೇಶರನ್ನು ಸಂದರ್ಶಿಸಬೇಕಿತ್ತು. ಹತ್ತು ವರ್ಷಗಳ ಕಾಲ ಲಂಕೇಶರನ್ನು ಮಾತಾಡಿಸಿರಲಿಲ್ಲ. ಅವತ್ತು ಲಂಕೇಶ್ ಪತ್ರಿಕೆಗೆ ಹೋದಾಗ ಒಂದು ಕುರ್ಚಿಯ ಮೇಲೆ ರಾಮದಾಸ್ ಕೂತಿದ್ದರು. ಲಂಕೇಶ್‌ರಿಗೆ ಅವತ್ತು ತೀವ್ರ ಅನಾರೋಗ್ಯ. ನಾನು ಅದೇ ಮೊಂಡುತನದಿಂದ ರಾಮದಾಸರನ್ನು ನೋಡಿಯೂ ನೋಡದವನಂತೆ ಕೂತಿದ್ದೆ. ನನ್ನ ಹಟಮಾರಿತನವನ್ನು ರಾಮದಾಸ್ ಗಮನಿಸಿರಬೇಕು. ಮುಗುಳ್ನಗುತ್ತಲೇ 'ಏನ್ರಿ ಸತ್ಯಮೂರ್ತಿ... ಇನ್ನೂ ಕೋಪಾನೇನ್ರಿ?' ಅಂದರೂ ನಾನು ಮಾತಾಡಲಿಲ್ಲ. ಏನು ಮಾಡಬೇಕೆಂದು ತೋಚದೆ ತುಸು ನಕ್ಕೆ. 'ಇದೆಲ್ಲಾ ಒಳ್ಳೇದಲ್ಲ ಕಣ್ರೀ... ಪ್ರಭುಶಂಕರ್ ಮನೆಗೆ ಯಾವಾಗಲೂ ಬರ್ತೀರಂತೆ. ನನ್ನನ್ನು ನೋಡದೇ ಇರೋವಷ್ಟು ಕೋಪಾನೇನ್ರಿ?' ಹಾಗೆ ಏನೇನೋ ಹೇಳಿದರು. ನನ್ನ ಬಾಯಿಂದ ಒಂದೂ ಮಾತು ಹೊರಡಲಿಲ್ಲ.

ಇದಕ್ಕೂ ಕೆಲವು ವರ್ಷಗಳ ಹಿಂದೆ ತೇಜಸ್ವಿಯವರು ಇದೇ ಬಸವರಾಜ್‌ರ ಕೈಲಿ ನನ್ನ
ವಿಳಾಸ ತೆಗೆದುಕೊಂಡು ಒಂದು ಪತ್ರ ಬರೆದಿದ್ದರು. ನಾನು ನನ್ನ ಇಳಿಯದ ಸಿಟ್ಟಿನಿಂದ, 'ನೀವೆಲ್ಲ
ದೊಡ್ಡ ಮನುಷ್ಯರು. ನೀವು ಶ್ರೀರಾಮ್, ರಾಮದಾಸ್ ಮುಂತಾದ ದೊಡ್ಡವರನ್ನು ಭೇಟಿ
ಮಾಡದೆ ಮಾತಾಡದೇ ಇದ್ದರೇನೇ ನಮಗೆ ಒಳ್ಳೆಯದು' ಎಂದು ಪತ್ರ ಬರೆದಿದ್ದೆ. ಎರಡೇ
ದಿನದಲ್ಲಿ ತೇಜಸ್ವಿಯವರ ಪತ್ರ ಬಂತು. 'ಪ್ರಿಯ ಸತ್ಯಮೂರ್ತಿ, ನಿನ್ನ ಕಾಗದ ತಲುಪಿತು.
ಶ್ರೀರಾಮ್, ರಾಮದಾಸ್ ಬಗ್ಗೆ ನಿನ್ನ ಅಭಿಪ್ರಾಯ ಸಂಪೂರ್ಣ ತಪ್ಪು. ಈ ರೀತಿಯ
ದುರಭಿಪ್ರಾಯಗಳಿಂದ ನಾವು ಇರುವ ಮೂರು ಮತ್ತೊಂದು ಜನ ಗೆಳೆಯರನ್ನೂ
ಕಳೆದುಕೊಳ್ಳುತ್ತೇವೆ. ನಿನಗೆ ನನ್ನ ಮಾತಿನ ಅರ್ಥ ನಿಧಾನವಾಗಿ ಆಗುತ್ತೆ. ಅದ್ದರಿಂದ ಈ ಬಗ್ಗೆ
ಹೆಚ್ಚು ಮಾತಾಡಲು ಇಷ್ಟವಿಲ್ಲ..." ಎಂದು ದೀರ್ಘ ಪತ್ರ ಬರೆದರು. ಅವತ್ತಿನಿಂದಲೂ
ಇಂಥದೊಂದು ಸಂದಿಗ್ಧ ಸ್ಥಿತಿ ನನ್ನನ್ನು ಕಾಡುತ್ತಿತ್ತು. ಅದೇಕೋ ರಾಮದಾಸರನ್ನು ಮಾತಾಡಿಸಲು
ಸಾಧ್ಯವೇ ಆಗಲಿಲ್ಲ. ಒಂದೊಂದು ಸಾರಿ ನನ್ನ ಹಟಮಾರಿತನದ ಬಗ್ಗೆ ನನಗೇ ಬೇಸರ ಹುಟ್ಟಿದ್ದೂ
ಇದೆ. (ಬಸವರಾಜ್ ಮದುವೆಯಲ್ಲಿ ರಾಮದಾಸ್, ಕೇಶವಮೂರ್ತಿ ಇರುತ್ತಾರೆಂದು ಮದುವೆ
ಮುಗಿದು ಎಲ್ಲರೂ ಹೋದ ಮೇಲೆ ಹೋಗಿದ್ದೆ...)

ಎಲ್ಲೋ ಒಂದು ಕಡೆ ಇದನ್ನು ಮೀರಬೇಕೆಂದು ಪ್ರಯತ್ನಿಸಿದರೂ ಯಾವುದೋ ಒಂದು
'ಆತ್ಮೀಯ ಮೊಂಡುತನ' ನನ್ನನ್ನು ತಡೆಯುತ್ತಿತ್ತು. ತೇಜಸ್ವಿ ನಿಧನದಿಂದೀಚೆಗೆ ನನಗೆ ನಾನೆ
ಅನ್ಯಾಯ ಮಾಡಿಕೊಂಡೆ ಎಂದು ಅನಿಸಿದ್ದು. ಕುಪ್ಪಳ್ಳಿ ಮನೆಯ ಕಟ್ಟೆಯ ಮೇಲೆ ಕೂತಿದ್ದ
ರಾಮದಾಸರನ್ನು ಕಂಡು ನನ್ನ ಕಣ್ಣು ತುಂಬಿಕೊಂಡವು. ನೀದಾ ಅವರಲ್ಲಿಗೆ ಹೋಗಿ ಅವರ ಕೈ
ಹಿಡಿದುಕೊಂಡೆ. ಅವರು ಅಳುವಿನಲ್ಲೇ ಮುಳುಗಿದ್ದರೂ 'ಇಲ್ಲ ಕಣ್ರೀ ಸತ್ಯಮೂರ್ತಿ...
ಇನ್ನುಮೇಲೆ ನಾವ್ಯಾರೂ ಈ ರೀತಿ ಒಟ್ಟಿಗೆ ಸೇರೋದಿಲ್ಲ. ಇದೇ ಕೊನೆ ಕಣ್ರೀ. ಎಲ್ಲ
ಮುಗಿದೋಯ್ತು...' ಎಂದು ಕಂಬನಿ ಮಿಡಿದರು. ತೇಜಸ್ವಿ ಇಲ್ಲದ ನೋವಿನ ನಡುವೆ
ರಾಮದಾಸ್ ಜೊತೆ ಮಾತನಾಡಿದ ಸಮಾಧಾನ ಮಾತ್ರ ಉಳಿದಿತ್ತು.

ನೆನ್ನೆ ರಾಮದಾಸ್ ನಿಧನರಾದಾಗ ಕೆಲವು ಪತ್ರಕರ್ತರು ಕಡಿದಾಳ ಶಾಮಣ್ಣನವರನ್ನು
ಮಾತಾಡುವಂತೆ ಕೇಳುತ್ತಿದ್ದರು. 'ಏನ್ರಿ ಹೇಳೋದಿದೆ... ಒಂದು ಮಾತು ಅರ್ಥ ಮಾಡ್ಕೊಳ್ಳಿ.
ನಲವತ್ತೈದು ವರ್ಷದಿಂದ ನಾವೆಲ್ಲ ಜೊತೆಗಿದ್ದೆವು. ಇವತ್ತಿನವರೆಗೂ ರಾಮದಾಸ್ ಯಾವ
ಜಾತಿ ಅಂತ ನಮಗೆ ಗೊತ್ತಿಲ್ಲ. ಅವರೂ ಹೇಳಲಿಲ್ಲ. ನಿಜವಾಗಿಯೂ ಜಾತ್ಯತೀತನಾಗಿ ಬದುಕಿದ
ಒಬ್ಬರೇ ಒಬ್ಬರು ಅಂದ್ರೆ ಈ ರಾಮದಾಸ್!'ಎಂದು ಶಾಮಣ್ಣ ಒಂದೇ ವಾಕ್ಯದಲ್ಲಿ
ರಾಮದಾಸರನ್ನು ಬಣ್ಣಿಸುತ್ತಿದ್ದರು.

ಆಗಲೇ ನನ್ನ ಎದೆಯಲ್ಲಿ ಹೊರಟ ಉದ್ಗಾರ 'ಪ್ರಿಯ ರಾಮದಾಸ್, ದಯವಿಟ್ಟು ಕ್ಷಮಿಸಿ.'

# ಕಣ್ಮರೆಯಾದ ಸಾಕ್ಷಿಪ್ರಜ್ಞೆ

ಗೌರಿ ಲಂಕೇಶ್

ಪ್ರೀತಿಯ ರಾಮದಾಸ್, ಆಕ್ಷಣ ಎಷ್ಟು ನೋವಿನಿಂದ ಆದರೂ ಕೃತಜ್ಞತೆಯಿಂದ ಕೂಡಿತ್ತೆಂದರೆ, ಜೆನ್ನಿ ಮತ್ತು ಸಂಗಡಿಗರು ನಿಮ್ಮ ಸುತ್ತ ನಿಂತು " ಓ ನನ್ನ ಚೇತನ, ಆಗು ನೀ ಅನಿಕೇತನ" ಪದ್ಯವನ್ನು ಹಾಡುತ್ತಿದ್ದರೆ, ಸ್ವತಃ ನೀವೇ ಎದ್ದು ಕೂತು "ಸಾಕು ಸುಮ್ಮನಾಗ್ರಿ" ಎಂದು ನಗುತ್ತಲೇ ಜಾಡಿಸುತ್ತಿದ್ದರಿ ಎನಿಸುವಂತಿತ್ತು. ಆ ಹಾಡಿನ ಪದಗಳು ತೇಲಿಬಂದಾಗ ನಿಮ್ಮ ಮನೆಯ ಹೊರಗಡೆ ಇದ್ದವರನ್ನೆಲ್ಲ ಹೇಗೆ ತಾಕಿತೆಂದರೆ, ಅಲ್ಲಲ್ಲಿ ಕೂತಿದ್ದವರೂ ಎದ್ದು ತಟಸ್ಥರಾಗಿ ನಿಂತು ನಿಮ್ಮ ಬಗೆಗಿನ ಗೌರವವನ್ನು, ನಿಮ್ಮ ಅಗಲಿಕೆಯ ನೋವನ್ನು, ಎಲ್ಲರನ್ನು ಕಾಡುತ್ತಿದ್ದ ತಬ್ಬಲಿತನವನ್ನು ವ್ಯಕ್ತಪಡಿಸಿದರು.

ಆನಂತರ, ನಿಮ್ಮ ದೇಹವೂ ಈ ಭೂಮಿಯೊಂದಿಗಿನ ನಂಟನ್ನು ಕಳಚಿಕೊಳ್ಳುವ ಮುನ್ನ ಮತ್ತೊಂದು ಹಾಡು...

**ನಾಗಲಿಂಗ ಯೋಗಿತಾನು ತಿರುಗೊದ್ಯಾತಕೆ**
**ಒಂದು ಹೆಣಕೆ ಎರಡು ಹೆಣವು ಕುಣಿವುದ್ಯಾತಕೆ**
**ಮುಂದುಗಾಣದಾಗಿ ತನ್ನೊಳು ದಣಿವುದ್ಯಾತಕೆ|ಪ|**
**ಭೊಗಳಮುಖಿಯು ಮಗನ ಕೂಡ ರಗಳಿಯಾತಕೆ**
**ಸಿಗದೆಹೋದನೆಂದು ತನ್ನೊಳು ದಣಿವುದ್ಯಾತಕೆ|ಪ|**
**ಭೋಗದುರಿತ ಭವದ ಉರಿಗೆ ಸಿಲುಕುದ್ಯಾತಕೆ**
**ರೋಗನಿದ್ರ ಕಷ್ಟನಷ್ಟ ವ್ಯಸನವ್ಯಾತಕೆ|ಪ|**

ತನ್ನ ಸಮಾಜಕ್ಕೆ ಒಳಿತಾಗಲಿ ಎಂದು ಹಪಹಪಿಸುವ ಮನುಷ್ಯನ ಬಗೆಗಿನ ಶಿಶುನಾಳ ಷರೀಫರ ಆ ಹಾಡು ತಮಗೆಂದೇ ಬರೆದಂತಿತ್ತು. ಆಗಲೂ ಕೂಡ, ಎಲ್ಲರೂ ಸುಮ್ಮನೆ ಆ

ಹಾಡಿನೊಂದಿಗೆ, ನಿಮ್ಮ ಜೀವನದ ಆಶಯಗಳೊಂದಿಗೆ ಬೆಸೆದು ಕೊಂಡವರಂತೆ ನಿಂತು ನಿಮಗೆ ತಮ್ಮ ಕೃತಜ್ಞತೆ ಗಳನ್ನು ಸಲ್ಲಿಸಿದರು. ಯಾವುದೇ ಗೊಡ್ಡು ಪೂಜೆ, ಸಂಪ್ರದಾಯ ಇಲ್ಲದೆ, ಈ ಎರಡು ಹಾಡುಗಳೊಂದಿಗೆ ನಿಮ್ಮನ್ನು ಬೀಳ್ಕೊಟ್ಟೆವು. ಕುವೆಂಪು. ಶಿಶುನಾಳ, ರಾಮದಾಸ್.... ಇದಕ್ಕಿಂತ  ಬೆಸುಗೆ ಇನ್ನಾವುದಿದ್ದೀತು?

ಮರುದಿನದ ಪತ್ರಿಕೆಗಳು ನಿಮ್ಮನ್ನು ವಿಚಾರವಾದಿ, ಜಾತ್ಯತೀತ ವಾದಿ, ನಿಷ್ಠುರ ಹೋರಾಟಗಾರ ಎಂದೆಲ್ಲ ಬಣ್ಣಿಸಿದ್ದವು. ಅವೆಲ್ಲವುಗಳೊಂದಿಗೆ ನೀವು ನನಗೆ ಸಾಕ್ಷಿಪ್ರಜ್ಞೆ ಆಗಿದ್ದಿರಿ. (ನನ್ನಂತೆಯೇ ಇನ್ನೂ ಸಾವಿರಾರು ಜನರಿಗೆ ಕೂಡ) ಅಪ್ಪನನ್ನು ಕಳೆದುಕೊಂಡು ಅವರ ಪತ್ರಿಕೆಯ ಜವಾಬ್ದಾರಿಯನ್ನು ಹೊತ್ತ ನಂತರ ನನ್ನನ್ನು ಯಾವಾಗಲೂ ಕಾಡಿರುವ ಪ್ರಶ್ನೆಗಳು ಎರಡು.

ಮೊದಲನೆಯದು : "ಅಪ್ಪ ಇದ್ದಿದ್ದರೆ ಏನನ್ನುತ್ತಿದ್ದರು ?" ಎರಡನೆಯದು : "ಇದರ ಬಗ್ಗೆ ರಾಮದಾಸ್ ಹೇಗೆ ಪ್ರತಿಕ್ರಿಯಿಸುತ್ತಾರೆ ?" ಎಂಬುದು.

ನನಗಿನ್ನೂ ಚೆನ್ನಾಗಿ ನೆನಪಿದೆ. ಪತ್ರಿಕೆಯಲ್ಲೇ ಭ್ರಷ್ಟಾಚಾರ ಪ್ರಾರಂಭವಾದಾಗ ನಾನು ದಿಗ್ಭ್ರಾಂತಳಾದೆ. ಏನು ಮಾಡುವುದೆಂದೇ ತೋಚದವಳಾದೆ. ಕೊನೆಗೆ ನನ್ನ ತಳಮಳವನ್ನು ತಡೆದುಕೊಳ್ಳಲಾರದೆ ನಿಮಗೆ ಫೋನ್‌ಮಾಡಿ ನಿಮ್ಮೊಂದಿಗೆ ಮಾತನಾಡಲು ತಕ್ಷಣವೇ ಹೊರಟು ಮೈಸೂರಿಗೆ ಬರುವುದಾಗಿ ಹೇಳಿದೆ. ಇದರ ಬಗ್ಗೆ ಅಪ್ಪ ಮತ್ತು ನಿಮ್ಮ ಮಿತ್ರ, ನನ್ನ ಹಿತೈಷಿ ಎಚ್.ಎಲ್. ಕೇಶವಮೂರ್ತಿಯವರನ್ನೂ ಕರೆದುಕೊಂಡು ಮೈಸೂರಿನ ನಿಮ್ಮ ಮನೆ ತಲುಪಿದಾಗ ರಾತ್ರಿ ಎಂಟು ಗಂಟೆ ಆಗಿತ್ತು. ಅವತ್ತು ಲಂಕೇಶರ ಆಶಯಗಳನ್ನು ಜೀವಂತವಾಗಿ ಉಳಿಸಲು ಏನು ಮಾಡಬೇಕೆಂದು ಚಿಂತಿಸಿದ ನಂತರ ನಮ್ಮೆಲ್ಲರಿಗೂ ಹೊಳೆದದ್ದೇ ಈ ಪತ್ರಿಕೆಯ ಟೈಟಲ್ ಅನ್ನು ರಿಜಿಸ್ಟರ್ ಮಾಡಿಸುವುದು. ಅದಾದ ಎಷ್ಟೋ ತಿಂಗಳುಗಳ ನಂತರ ಬರೀ ದಾಖಲೆಯಲ್ಲಿದ್ದ ಈ ಪತ್ರಿಕೆ ಜೀವ ಪಡೆದ ಸಂದರ್ಭ ಎಲ್ಲರಿಗೂ ಗೊತ್ತು. ಅವತ್ತೂ ನಾನು ನಿಮ್ಮೊಂದಿಗೆ ಫೋನ್ ಮಾಡಿ ಚರ್ಚಿಸಿದ್ದೆ.

ಅಂದು ನನ್ನ ಮುಂದಿದ್ದ ಎರಡು ಆಯ್ಕೆಗಳನ್ನು ಹೇಳಿದ್ದೆ. ಒಂದು:ಇದ್ಯಾವುದೂ ಬೇಡ ಎಂದು ದೆಹಲಿಯಲ್ಲೋ, ಮತ್ತಿನ್ನೆಲ್ಲೋ ಕೆಲಸ ಮಾಡುತ್ತಾ ಸುಮ್ಮನಿರುವುದು. ಎರಡು:ಕೋಮುವಾದ ವಿರುದ್ಧದ ಮತ್ತು ಜನಪರವಾದ ಹೋರಾಟಗಳನ್ನು ಮುಂದುವರೆಸಬೇಕೆಂದರೆ 'ಲಂಕೇಶ್' ವಾರ ಪತ್ರಿಕೆಗೆ ಚಾಲನೆ ನೀಡುವುದು. "ಇದು ನನ್ನ ವೈಯಕ್ತಿಕ ನಿರ್ಧಾರ ಅಲ್ಲ, ನಮ್ಮೆಲ್ಲರ ನಿರ್ಧಾರವಾಗಬೇಕು. ಅಷ್ಟೇ ಅಲ್ಲ, ನೀವೊಬ್ಬರು 'ಮತ್ತೊಂದು ಪತ್ರಿಕೆ ಬೇಡ' ಅಂದರೆ ನಾನು ಸುಮ್ಮನಾಗುತ್ತೇನೆ. ಆದರೆ ಅದರ ಪರಿಣಾಮವನ್ನು ಎದುರಿಸಲೂ ನಾವೆಲ್ಲ ಸಿದ್ಧರಿರಬೇಕು. ನೀವೇ ನಿರ್ಧರಿಸಿ" ಎಂದಿದ್ದೆ. ಆಗ ಲಂಕೇಶ್ ಪತ್ರಿಕೆ ಮರುಜನ್ಮ ಪಡೆಯಬೇಕು ಎಂದು ನೀವು ಹೇಳಿ ಪ್ರೋತ್ಸಾಹಿಸಿದ್ದಿರಲ್ಲದೆ, ಇದರ ಬಿಡುಗಡೆ ಕಾರ್ಯಕ್ರಮಕ್ಕೂ ಬಂದು ನೆರವಾಗಿದ್ದಿರಿ.

ಆದರೆ ಆ ನಂತರದ ದಿನಗಳಲ್ಲಿ ನೀವೂ ಕೂಡ ನಕ್ಸಲರ ಬಗೆಗಿನ ನನ್ನ ನಿಲುವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಹೋದಿರಿ. ಅಥವಾ ನಿಮಗೆ ಅರ್ಥ ಮಾಡಿಕೊಡುವುದರಲ್ಲಿ ನಾನೇ ಸೋತೆ. ಹೌದು, ಪ್ರಜಾಸತ್ತಾತ್ಮಕ ಹೋರಾಟದಲ್ಲಿ, ಅಹಿಂಸಾತ್ಮಕ ಚಳವಳಿಗಳಲ್ಲಿ ನಿಮಗಿರುವಷ್ಟೇ ನಂಬಿಕೆ ನನಗೂ ಇದೆ. ನಮ್ಮಿಬ್ಬರ ನಡುವೆ- ನಾನು ಅರ್ಥಮಾಡಿಕೊಂಡಂತೆ- ವ್ಯತ್ಯಾಸ ಎಲ್ಲಿದೆ ಅಂದರೆ, ಯಾಕೆ ಪ್ರಜಾಸತ್ತಾತ್ಮಕವಾಗಿಯೇ, ಅಹಿಂಸಾತ್ಮಕವಾಗಿಯೇ ಹತ್ತಾರು ವರ್ಷಗಳ ಕಾಲ ನಡೆದ ಹೋರಾಟಗಲೆಲ್ಲವು ಒಂದೋ ಸೋತಿವೆ, ಅಥವಾ ಸರ್ಕಾರಗಳು ದಮನ ಮಾಡಿವೆ ಎಂದು ಪ್ರಶ್ನಿಸುತ್ತೇನೆ ನಾನು. ಹಾಗೆ ಪ್ರಶ್ನಿಸುವುದು ನನ್ನ ಕರ್ತವ್ಯ ಮಾತ್ರವಲ್ಲ, ಹಾಗೆ ಪ್ರಶ್ನಿಸಲೇಬಾರದು ಎಂಬುದು ದಮನಕಾರಿ ಧೋರಣೆ ಎಂಬುದು ನನ್ನ ನಿಲುವು. ಇವತ್ತು ನನ್ನಂತೆಯೇ ಈ ಪ್ರಶ್ನೆಗಳನ್ನು ಹಲವಾರು ಜನ ಕೇಳುತ್ತಿದ್ದಾರೆ. ಅಂದ ಮಾತ್ರಕ್ಕೆ ನಾವೆಲ್ಲರೂ ನಕ್ಸಲರ ಬೆಂಬಲಿಗರೆಂದಾಗಲಿ, ಸಶಸ್ತ್ರ ಹೋರಾಟಕ್ಕೆ ಕರೆ ನೀಡುತ್ತಿದ್ದೇವೆಂದಾಗಲಿ ತರ್ಕಿಸುವುದು ತಪ್ಪು ಎಂದು ಹೇಳಿ, ಹೇಳಿ ನನ್ನ ನಾಲಿಗೆಯೇ ಒಣಗಿ ಹೋಗಿದೆ.

ಅಂದಹಾಗೆ, ಆ ಪ್ರಶ್ನೆಗಳನ್ನು ಕೇಳುತ್ತಿರುವ ಉದ್ದೇಶ ಇಷ್ಟೇ: ಇವತ್ತು ನಮ್ಮ ಸರ್ಕಾರ ಮತ್ತು ಆಡಳಿತ ವ್ಯವಸ್ಥೆ ಪ್ರಜಾಸತ್ತಾತ್ಮಕ ಹೋರಾಟಗಳನ್ನು ದಮನ ಮಾಡುತ್ತಿರುವಾಗ, ನಮ್ಮ ಚಳವಳಿಗಳು ಯಶಸ್ವಿಯಾಗಬೇಕಾದರೆ ಯಾವ ರೀತಿಯ ಬದಲಾವಣೆಗಳನ್ನು ಹೊಂದಬೇಕು, ಹೇಗೆ ಮಾರ್ಪಾಡಾಗಬೇಕೆಂಬ ಹುಡುಕಾಟದ ಯತ್ನ ಅದು, ಇಂತಹ ಪ್ರಯತ್ನಗಳನ್ನು ಮಾಡದೇ ಎಲ್ಲ ಜನಪರ ಹೋರಾಟಗಳು ವಿಫಲವಾಗುವುದನ್ನು ನೋಡುತ್ತಾ ಸುಮ್ಮನೆ ಕೂತಿರುವುದಾದರೂ ಹೇಗೆ?

ನಿಮಗೆ ಗೊತ್ತಿರುವಂತೆ, ಬಾಬಾಬುಡನ್‌ಗಿರಿಯಲ್ಲಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಯಶಸ್ಸು ಕಂಡಿದ್ದು, ಮತ್ತು ಹಾಗೆ ಯಶಸ್ವಿಯಾಗಿದ್ದಕ್ಕೇ ಇವತ್ತು 'ನಕ್ಸಲ್ ಬೆಂಬಲಿಗ ಸಂಘಟನೆ' ಎಂಬ ಹಣೆಪಟ್ಟಿಗೆ ಗುರಿಯಾಗಿರುವುದು ನಾವು ಪರಿವಾರದೊಂದಿಗೆ ಮುಖಾಮುಖಿ ಸಂಘರ್ಷಕ್ಕೆ ಇಳಿದಿದ್ದರಿಂದಲೇ. ಅಂತಹ ಸಂಘರ್ಷಕ್ಕೆ ಇಳಿಯದೇ ಬರೀ ಸಮಾವೇಶ, ವಿಚಾರ ಸಂಕಿರಣ ಖಂಡನಾ ಪ್ರತಿಭಟನೆ ಇತ್ಯಾದಿಗಳನ್ನು ಮಾಡಿಕೊಂಡು ಸುಮ್ಮನಿದ್ದಿದ್ದರೆ ಈ ಯಶಸ್ಸು ಸಾಧ್ಯವಾಗುತ್ತಿರಲಿಲ್ಲ.

ಅಂದಹಾಗೆ, ಎಲ್ಲೂ ಪ್ರತಿಭಟಿಸದೆ, ಸುಮ್ಮನಿದ್ದಿದ್ದರೆ ಅಥವಾ ನಿರುಪಯುಕ್ತ ಚರ್ಚಾ ಸಭೆಗಳಲ್ಲಿ ಭಾಗವಹಿಸುವ ಮೂಲಕವೇ ಸಾರ್ಥಕತೆ ಕಾಣುವಂತಿದ್ದರೆ ಎಷ್ಟು ಸೊಗಸಾಗಿರುತ್ತಿತ್ತು ಗೊತ್ತಾ ? ಜೈಲು, ವಿಚಾರಣೆ, ಗಡಿಪಾರು ಬೆದರಿಕೆ, ನ್ಯಾಯಾಲಯದಿಂದ ನೋಟೀಸು, ಇಂತಹ ಜಂಜಾಟಗಳೇ ಇರುತ್ತಿರಲಿಲ್ಲ.

ಬಾಬಾಬುಡನ್‌ಗಿರಿ ಹೋರಾಟದ ಹಾದಿಯನ್ನು ಯಶಸ್ಸಿನತ್ತ ತಿರುಗಿಸಿದ್ದೂ ಅಂತಹ ಪ್ರಶ್ನೆಗಳನ್ನು ಕೇಳಿಕೊಳ್ಳುವ ಮೂಲಕವೇ. ಇಲ್ಲೊಂದು ಮುಖ್ಯ ಅಂಶ ಯಾವುದೆಂದರೆ ನಮ್ಮ ಹೋರಾಟವೂ ಪ್ರಜಾಸತ್ತಾತ್ಮಕವಾದದ್ದೇ. ಆದರೆ ವಿಪರ್ಯಾಸದ ಸಂಗತಿ ಯಾವುದೆಂದರೆ ನಾವು ಯಾವ ಕಾನೂನನ್ನು ಉಲ್ಲಂಘಿಸದಿದ್ದರೂ ಸರ್ಕಾರ ಮಾತ್ರ ಹಲವಾರು ಕಾನೂನುಗಳನ್ನು

ಬಳಸಿ ನಮ್ಮನ್ನೆಲ್ಲ ಇವತ್ತು ವಿಚಾರಣೆಗೆ ಒಳಪಡಿಸುತ್ತಿರುವುದು, ಹಲವರ ಮೇಲೆ 'ಫೈಲ್ ಬಿಲ್ಡ್ ಅಪ್' ಮಾಡುತ್ತಿರುವುದು, ನಕ್ಸಲರ ಬೆಂಬಲಿಗರು ಎಂದು ಹೇಳಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಬೆದರಿಸುತ್ತಿರುವುದು. ಇಂತಹ ಅನ್ಯಾಯವನ್ನು ಪ್ರತಿಭಟಿಸುವುದು ಹೇಗೆ?

ನೀವು ಗುಡ್‌ಬೈ ಹೇಳಿದ ಕೆಲವೇ ದಿನಗಳಲ್ಲಿ ಏನಾಯಿತು ಗೊತ್ತಾ? ನಿಮ್ಮಷ್ಟೇ ಅಹಿಂಸಾವಾದಿಯಾದ ನಿಮ್ಮ ಆಪ್ತ ಮಿತ್ರ ಕಡಿದಾಳು ಶಾಮಣ್ಣನವರಿಗೆ ರಾಜ್ಯ ಸರ್ಕಾರದ ಪೊಲೀಸರು 'ನಕ್ಸಲ್ ಬೆಂಬಲಿಗರು'ಎಂಬ ಹಣೆಪಟ್ಟಿ ಹಚ್ಚಿದ್ದಾರೆ. ಅದನ್ನು ಓದುತ್ತಿದ್ದಂತೆ ನಿಮ್ಮ ಪ್ರತಿಕ್ರಿಯೆ ಏನಾಗಿರುತ್ತಿತ್ತು ಎಂದು ಊಹಿಸಲು ಯತ್ನಿಸಿದೆ. ಯು.ಆರ್. ಅನಂತಮೂರ್ತಿಯವರು "ರೈತಪರ, ಜನಪರ ಹೋರಾಟಗಾರ ಶಾಮಣ್ಣ ನಕ್ಸಲ್ ಬೆಂಬಲಿಗನಾದರೆ. ನನ್ನ ಹೆಸರೂ ಆ ಪಟ್ಟಿಯಲ್ಲಿ ಇರಲಿ" ಎಂದು ಹೇಳಿದಂತೆ ನೀವೂ ಹೇಳುತ್ತಿದ್ದಿರಾ ? ನನಗೆ ಅನ್ನಿಸಿದ ಇನ್ನೊಂದು ವಿಷಯ ಯಾವುದು ಗೊತ್ತಾ?ನೀವು ಇನ್ನು ಸ್ವಲ್ಪ ದಿನ ಇದ್ದಿದ್ದರೆ ನೀವು ಕೂಡ ಆ ಪಟ್ಟಿಯಲ್ಲಿ ಸೇರಿರುತ್ತಿದ್ದಿರಿ.

ಇದನ್ನು ಯಾಕೆ ಹೇಳುತ್ತಿದ್ದೇನೆ ಅಂದರೆ ಮೊದಲನೆಯದಾಗಿ ಜನಪರ ಹೋರಾಟಗಾರರು, ಚಿಂತಕರು, ಸಂಘಟನೆಗಳು, ಇತರರು ಆ ಪಟ್ಟಿಯಲ್ಲಿದ್ದಾರೆ, (ಅಂದಹಾಗೆ ನನ್ನ ಹೆಸರು ಅದರಲ್ಲಿ ಇಲ್ಲದಿರುವುದು ಹಲವರಲ್ಲಿ ಆಚ್ಚರಿ ಮೂಡಿಸಿದ್ದರೆ, ಚೆಡ್ಡಿಗಳಿಗೆ ಎಷ್ಟು ಕೋಪ ತರಿಸಿದೆ ಎಂದರೆ ಕಾರ್ಕಳದ ಬಿಜೆಪಿಯವರು ನನ್ನನ್ನು ಅನಂತ ಮೂರ್ತಿಯವರನ್ನು ಆ ಪಟ್ಟಿಯಲ್ಲಿ ಸೇರಿಸಬೇಕು ಎಂದು ಕರೆ ನೀಡಿದ್ದಾರೆ. ಈ ಕರೆಯ ಬಗ್ಗೆ ಕೇಳಿ ನನ್ನ ಹೆಸರು ಇಲ್ಲದಿರುವುದುರ ಬಗ್ಗೆ ಕೆಲಕಾಲ ಜಿಗುಪ್ಸೆ ಆಯಿತು. !)ಎರಡನೆಯದಾಗಿ ಆ ಪಟ್ಟಿಯಲ್ಲಿ ಇರುವವರೆಲ್ಲರೂ ಕೋಮುವಾದಿ ಸಂಘ ಪರಿವಾರದ ವಿರೋಧಿಗಳು.

ಇವತ್ತೇನಾಗುತ್ತಿದೆ ಎಂಬುದನ್ನು ಅರಿತುಕೊಳ್ಳಬೇಕಾದರೆ ಪ್ರಸ್ತುತ ರಾಜಕೀಯ ಸಂದರ್ಭವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಒಂದೆಡೆ ಇನ್ನು ಹಲವೇ ತಿಂಗಳಲ್ಲಿ ಮುಖ್ಯಮಂತ್ರಿ ಗದ್ದುಗೆಯೊಂದಿಗೆ ಗೃಹ ಇಲಾಖೆ ಸೇರಿದಂತೆ ಹಲವು ಪ್ರಮುಖ ಸ್ಥಾನಗಳು ಬಿಜೆಪಿ ಪಕ್ಷದ ಕೈಗಳಿಗೆ ಹೋಗಲಿವೆ. ಈಗಾಗಲೇ ಹಣಕಾಸು ಇಲಾಖೆಯ ಮೂಲಕ ರಾಜ್ಯದೆಲ್ಲೆಡೆ ಸಂಘ ಪರಿವಾರದ ಬೇರುಗಳನ್ನು ಗಟ್ಟಿಗೊಳಿಸಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಗೃಹಮಂತ್ರಿ ಎಂ.ಪಿ. ಪ್ರಕಾಶರಿಗೇ 'ಗೊತ್ತಿಲ್ಲದಂತೆ' ಪೊಲೀಸರು 'ನಕ್ಸಲ್ ಬೆಂಬಲಿಗರ' ಪಟ್ಟಿ ಬಿಡುಗಡೆ ಮಾಡಿದ್ದಾರೆ. ಆ ಪಟ್ಟಿಯಲ್ಲಿರುವವರಲ್ಲಿ ಎಷ್ಟು ಜನ ನಿಜವಾಗಲೂ ನಕ್ಸಲ್ ಬೆಂಬಲಿಗರು ಎಂಬುದಕ್ಕಿಂತಲೂ, ಅವರೆಲ್ಲರೂ ಕೋಮುವಾದದ ವಿರೋಧಿಗಳು ಎಂಬುದು ಗಮನಾರ್ಹ ವಿಷಯ. ಆದ್ದರಿಂದ ಬರುವ ದಿನಗಳಲ್ಲಿ ಅಧಿಕಾರ ಬಿಜೆಪಿಗೆ ಹಸ್ತಾಂತರ ಗೊಂಡ ನಂತರ ಅವರೆಲ್ಲರ ಮೇಲೆ ಪೊಲೀಸರ ಕಿರುಕುಳ ಹೆಚ್ಚಾಗುತ್ತದೆ. ಯಾಕೆಂದರೆ ಬಿಜೆಪಿ ಪಕ್ಷಕ್ಕೆ ಕೋಮುವಾದದ ವಿರುದ್ಧ ಮಾತನಾಡುವವರನ್ನು ಕಂಡರಾಗದು, ಅದರಲ್ಲೂ ಅಂಥವರೆಲ್ಲ ಆದಿವಾಸಿಗಳ, ರೈತರ, ಮಹಿಳೆಯರ ಮತ್ತು ಶೋಷಣೆಗೆ ಒಳಗಾಗಿರುವವರ ಪರ ದನಿ ಎತ್ತುವವರಾಗಿರುವಾಗ ಬಿಜೆಪಿ

ಹೇಗೆ ಸುಮ್ಮನಿರುತ್ತದೆ. ಇವತ್ತು ಬಿಡುಗಡೆ ಯಾಗಿರುವ ಪಟ್ಟಿಯ ಹಿಂದಿರುವ ಉದ್ದೇಶ ಎಲ್ಲ ಭಿನ್ನಮತೀಯ ದನಿಗಳ ಸದ್ದಡಗಿಸುವುದು.

ಪ್ರೀತಿಯ ರಾಮದಾಸರೇ, ಜಾಗತೀಕರಣದ ಕರಾಳ ಮುಖ ಬಹಿರಂಗಗೊಳ್ಳುವ ಮುನ್ನವೇ ಹೊರಟು ಹೋದ ಅಪ್ಪ 'ಮಾರ್ಕೆಟ್, ಮಾರ್ಕೆಟ್' ಎಂಬ ಟೀಕೆ ಟಿಪ್ಪಣಿ ಬರೆದಿದ್ದರು. ಹಾಗೆಯೇ ಜಾಗತೀಕರಣದಿಂದಾಗುವ ಅಪಾಯಗಳನ್ನು ತೇಜಸ್ವಿಯವರು ಅರಿತಿದ್ದರೂ ಹಲವಾರು ಬಾರಿ ಅದು ಅನಿವಾರ್ಯ ಎಂಬ ನಿಲುವನ್ನು ತಾಳಿದ್ದರು. ಆದರೆ ಅವರಿಬ್ಬರಿಗಿಂತಲೂ ಜಾಗತೀಕರಣದ ಪರಿಣಾಮಗಳನ್ನು ಅರ್ಥ ಮಾಡಿಕೊಂಡವರು ನೀವು. ಅದರ ವಿರುದ್ಧ ಸತತವಾಗಿ ಮಾತನಾಡಿದವರು ನೀವು. ಆದರೆ ಜಾಗತೀಕರಣಕ್ಕೂ, ಕೋಮುವಾದಕ್ಕೂ ಸರ್ಕಾರಗಳು ದಮನಕಾರಿ ಆಗುವುದಕ್ಕೂ ಜನಪರ ಹೋರಾಟಗಾರರು 'ನಕ್ಸಲ್ ಬೆಂಬಲಿಗ'ರೆಂಬ ಆರೋಪಕ್ಕೆ ಗುರಿಯಾಗುವುದಕ್ಕೂ ಹಲವಾರು ಸ್ತರಗಳಲ್ಲಿ ನಂಟಿದೆ ಎಂದು ನಮ್ಮ ಜನ ಅರ್ಥ ಮಾಡಿಕೊಳ್ಳುವುದು ಯಾವಾಗ?

ಇಂತಹ ಪರಿಸ್ಥಿತಿಯಲ್ಲಿ ಸಶಸ್ತ್ರ ಹೋರಾಟ ಮಾರ್ಗವಲ್ಲ, ಆದರೆ ದಮನಕ್ಕೊಳಗಾಗದೇ ಪ್ರಜಾಸತ್ತಾತ್ಮಕವಾಗಿ ನಡೆಯುವ ಹೋರಾಟ ಹೇಗಿರಬೇಕು? ಸರ್ಕಾರಗಳಿಗೆ ನೈತಿಕತೆ, ನ್ಯಾಯ ಎಂಬುದರ ಪರಿಕಲ್ಪನೆಗಳೇ ಇಲ್ಲದಿರುವಾಗ ಅದಕ್ಕೆ ಅರ್ಥ ಮಾಡಿಕೊಡುವುದು ಹೇಗೆ?

ಇಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುವ ಯತ್ನದಲ್ಲಿ ನಾವೆಲ್ಲ ಇರುವಾಗಲೇ ನೀವು ಚಿರ ಮೌನವಹಿಸಿದ್ದೀರಿ. ಉತ್ತರ ಕೊಡುವವವರು ಯಾರು...?

# ಸ್ವಸ್ಥ ಸಮಾಜದ ಮುಖವಾಣಿ

ಕೃಪಾಕರ - ಸೇನಾನಿ

ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲ ಮೈಸೂರು ನಗರದ ಸಾಕ್ಷಿಪ್ರಜ್ಞೆಯಂತಿದ್ದ, ಕರ್ನಾಟಕ ಸಂಸ್ಕೃತಿಯ ವಿಚಾರವಂತಿಕೆಯ ಪ್ರತೀಕದಂತಿದ್ದ ಪ್ರೊ. ಕೆ. ರಾಮದಾಸ್ ಅವರು ನಿಧನರಾಗಿದ್ದಾರೆ. ಅಕ್ಷರಶಃ ಮೈಸೂರು ಮೌನವಾಗಿದೆ.

ದೈತ್ಯಾಕಾರ, ಸಿಡಿಲಿನಂತಹ ಮಾತುಗಳು, ಪ್ರಖರವಾದ ಚಿಂತನೆ, ಪಾರದರ್ಶಕ ವ್ಯಕ್ತಿತ್ವ, ಅನ್ಯಾಯದ ವಿರುದ್ಧ ಸದಾ ಉರಿಯುವ ಸಿಟ್ಟು, ಎಲ್ಲದಕ್ಕೂ ಅವಸರದ ವರ್ತನೆ-ಹೀಗೆ ಬೆಂಕಿಯಂಥ, ಸಿಡಿಲಿನಂತಹ, ಎಲ್ಲವನ್ನೂ ಕೆಡವಿಕೊಳ್ಳಬಲ್ಲ ಸಾಮರ್ಥ್ಯವಿದ್ದ ರಾಮದಾಸ್ ಅವರನ್ನು ಮೃತ್ಯು ನಿಧಾನವಾಗಿ ವಶಪಡಿಸಿಕೊಂಡು ಬಗ್ಗಿಸಿದ್ದು ಮಾತ್ರ ಸೋಜಿಗ.

ಎಂಬತ್ತರ ದಶಕದಲ್ಲಿ ಇನ್ನೂ ಎಳೆಯ ಯುವಕರಾಗಿದ್ದ ನಮ್ಮನ್ನು ಆಕರ್ಷಿಸಲು, ಪ್ರಭಾವಿಸಲು, ಮುನ್ನಡೆಸಲು ಮೈಸೂರಿನಲ್ಲಿ ವಿಶಿಷ್ಟವಾದ ಬುದ್ಧಿಜೀವಿ ವರ್ಗವಿತ್ತು. ಕೆ. ರಾಮದಾಸ್, ದೇವನೂರ ಮಹಾದೇವ ಇತ್ಯಾದಿ ಜನರು ಅದಾಗಲೇ ಭೌತಿಕವಾಗಿ ತೇಜಸ್ವಿ-ನಂಜುಂಡಸ್ವಾಮಿ ಅವರಿಂದ ದೂರವಾಗಿದ್ದರೂ, ಅವರ ಪ್ರಖರ ಚಿಂತನೆಗಳನ್ನು ಉಣಬಡಿಸುತ್ತಿದ್ದರು. ಅದರಲ್ಲೂ ರಾಮದಾಸ್‌ರವರು ಅನೇಕ ಪೀಳಿಗೆಯ ತರುಣರು ದಿಕ್ಕುತಪ್ಪಿ ಸಮಾಜ ವಿರೋಧಿಗಳಾಗುವ ಸಾಧ್ಯತೆಯಿಂದ ಪಾರುಮಾಡಿದ್ದೇ ಅಲ್ಲದೆ, ಸಾಮಾಜಿಕ ಹೊಣೆಗಾರಿಕೆಯಿಂದ ಬದುಕುವಂತೆ ಸಹ ದುಡಿದಿದ್ದಾರೆ. ತಮ್ಮ ಮನೆಯನ್ನೇ ಅನೇಕ ಯುವ ಜೋಡಿಗಳ ಬೆಸುಗೆಗೆ ವೇದಿಕೆಯನ್ನಾಗಿಸಿ ಮಾನವತೆಯನ್ನು ಆರಂಭಿಸಿದ್ದಾರೆ .

ಕೆ. ರಾಮದಾಸ್ ಅವರನ್ನು ನೆನೆಯುವಾಗಲೆಲ್ಲ ಅವರ ನೈತಿಕ ನಿಷ್ಠುರತೆ ನೆನಪಾಗುತ್ತದೆ. ತಪ್ಪೆಂದು ಕಂಡಾಗ ಜೊತೆಯಲ್ಲಿದ್ದವರನ್ನೂ ಝಾಡಿಸುವ ಜಾಯಮಾನ ಅವರದ್ದು. ಹಾಗೆಯೇ ತಪ್ಪು ಎಂದು ಅರಿವಾದಾಗ ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಅದರ ವಿರುದ್ಧ ಏರಿಹೋಗುವ

ಅವಸರವೂ ಇತ್ತು. ಇವರ ಅವಸರವನ್ನೇ ಅನೇಕರು ತಮ್ಮ ಅವಸರದಿಂದಲೇ ತಪ್ಪು ನಿರ್ಣಯಗಳಿಗೆ ಅಂಟಿಕೊಂಡ ಪ್ರಕರಣಗಳೂ ಉಂಟು. ಆದರೆ, ಅವರಲ್ಲಿದ್ದ ಶ್ರೇಷ್ಠ ಗುಣವೆಂದರೆ ತಾವು ಅಪ್ರಜ್ಞಾಪೂರ್ವಕವಾಗಿ ಮಾಡಿದ ತಪ್ಪು, ತೆಗೆದುಕೊಂಡ ನಿರ್ಣಯ ಮನದಟ್ಟಾದ ಕೂಡಲೇ ಪೇಚಾಡಿಕೊಳ್ಳುತ್ತಿದ್ದರು. ತಪ್ಪನ್ನು ಒಪ್ಪಿಕೊಳ್ಳುತ್ತಿದ್ದರು.

ಉತ್ತಮ ಗೆಳೆಯರು, ಸೈದ್ಧಾಂತಿಕ ತಿಳಿವಳಿಕೆ, ಪ್ರಚಂಡ ಧೈರ್ಯ, ನಿಷ್ಠುರತೆ ಮತ್ತು ಪ್ರಾಮಾಣಿಕತೆಯನ್ನು ಬೆನ್ನಿಗಿಟ್ಟುಕೊಂಡು ರಾಮದಾಸ್‌ರವರು ಜಾತೀಯತೆ, ಭ್ರಷ್ಟತೆ ಮತ್ತು ಕೋಮುವಾದದ ವಿರುದ್ಧ ನಿರಂತರವಾಗಿ ಸೆಣೆಸಾಡಿದವರು. ಇಂಥ ಉಗ್ರ ಸಂಕಲ್ಪವಿದ್ದ ರಾಮದಾಸ್‌ರವರು ತಮ್ಮ ಗೆಳೆಯ ತೇಜಸ್ವಿಯ ನಿಧನವನ್ನು ಸಹಿಸಲಾಗದೆ ಬಿಕ್ಕಿ ಬಿಕ್ಕಿ ಅತ್ತರು. 'ನಮ್ಮೆಲ್ಲರ ಶ್ರದ್ಧಾಂಜಲಿ ಇದು'ಎಂದು ಭಾವುಕವಾಗಿ ನುಡಿದರು. ತೇಜಸ್ವಿಯವರ ನಿಧನಾನಂತರ ಅನೇಕ ಬಾರಿ ರಾಮದಾಸ್‌ರವರನ್ನು ಭೇಟಿಯಾದಾಗಲೂ ಆ ಗುಂಗಿನಿಂದ ಹೊರಬಂದವರಂತೆ ಕಾಣುತ್ತಲೇ ಇರಲಿಲ್ಲ. ಕುಪ್ಪಳಿಯಲ್ಲಿ ಅಂತ್ಯ ಸಂಸ್ಕಾರದಲ್ಲೂ ಪಾಲ್ಗೊಂಡು ಭಾರವಾದ ಹೃದಯ ಹೊತ್ತು ಹಿಂದಿರುಗಿದ ರಾಮದಾಸ್‌ರವರು ಮಾರನೆಯ ದಿನ ಯಾವುದೋ ಕೆಲಸದ ಮೇಲೆ ಕೊಡಗಿಗೆ ಹೋಗಿಬಂದರು. ಅವರ ಜೀವನ ರೇಖೆ ಇಳಿಮುಖ ಹಾದಿ ಹಿಡಿದಿತ್ತು. ಹೀಗೊಮ್ಮೆ ಮಾತನಾಡುತ್ತಿರುವಾಗ ಲಹರಿಗೆ ಬಂದ ರಾಮದಾಸ್‌ರವರು 'ತೇಜಸ್ವಿ ನೋಡ್ರಿ, ಒಳ್ಳೆ ಹೆಚ್ಚಾಗಿ ಗಾಳಿ ತುಂಬಿದ ಟ್ಯೂಬ್‌ನಂತೆ ಒಂದೇ ಸಾರಿ burst ಆಗಿಹೋದ್ರು. ನಮ್ಮದು ಪಂಕ್ಚರ್ ಆಗಿರೋ ಟ್ಯೂಬ್. ನಿಧಾನವಾಗಿ ಗಾಳಿ ಠುಸ್ ಅಂತಾ ಹೋಗ್ತಾ ಇದೆ' ಎಂದು ನಗಾಡಿದರು. 'ಪಂಕ್ಚರ್ ಆದ್ರೆ ತೇಪೆ ಹಾಕಿ ಇನ್ನೊಂದಷ್ಟು ದಿನ ಗಾಡಿ ಓಡಿಸ್ಬೋದು ಬಿಡಿ ಸಾರ್'ಎಂದು ನಮ್ಮ ಆಶ್ವಾಸನೆ. ಆದರೆ, ನಾವು ಹೇಳುವ ಹೊತ್ತಿಗೆ ಅವರ ಜೀವನವೆಂಬ ಟ್ಯೂಬ್ ತುಂಬಾ ವೀಕಾಗಿ ಹೋಗಿತ್ತು.

ವಿದ್ಯಾರ್ಥಿ ದೆಸೆಯಿಂದಲೇ ನಿಕಟವರ್ತಿಗಳಾಗಿದ್ದ ತೇಜಸ್ವಿ-ರಾಮದಾಸ್ ಮೀನು ಬೇಟೆಯಲ್ಲಿ ಜೊತೆಗಾರರು. ತೇಜಸ್ವಿ ಮೂಡಿಗೆರೆಗೆ ಸೇರಿದ ನಂತರ, ಈ ಎಕ್ಕುಟ್ಟಿಹೋಗಿರೋ ಅಧ್ಯಾಪಕ ವೃತ್ತಿ ಬಿಟ್ಟು ಬರುವಂತೆ ಆಮಿಷ ಒಡ್ಡಿದರೂ, ರಾಮದಾಸ್ ಮೈಸೂರಲ್ಲೇ ನಿಂತರು. ಆದರೆ, ಅವರ ಗೆಳೆತನಕ್ಕೇನೂ ಆಗ ಕುಂದುಂಟಾಗಿರಲಿಲ್ಲ. ಒಮ್ಮೆ ಯಾವುದೋ ನದಿಗೆ ರಾಮದಾಸ್‌ರನ್ನು ತೇಜಸ್ವಿ, ತಾವು ಹೊಸದಾಗಿ ಖರೀದಿಸಿದ್ದ ಗಾಳ, ರೀಲ್, ರಾಡ್‌ಗಳೊಡನೆ ಮೀನು ಶಿಕಾರಿಗೆ ಕರೆದುಕೊಂಡು ಹೊರಟಿದ್ದರಂತೆ. ದಾರಿಯಲ್ಲಿ ಜೀಪು ನಿಂತುಹೋಗಿ ರಿಪೇರಿಗೆ ಕೈಹಾಕಿದರಂತೆ. ರಾಡ್, ರೀಲ್, ದಾರ ಇತ್ಯಾದಿಗಳನ್ನು ರಾಮದಾಸ್‌ರವರ ಸುಪರ್ದಿಗೆ ಕೊಟ್ಟು ಬೀಳುತ್ತಿರುವ ಮಳೆಯಲ್ಲೇ ವಾಹನ ರಿಪೇರಿ ಮಾಡಿದರಂತೆ. ಅನ್ಯಮನಸ್ಕರಾಗಿದ್ದ ರಾಮದಾಸ್‌ರವರು ಜೀಪು ಸ್ಟಾರ್ಟ್ ಆಗುತ್ತಲೇ ಹತ್ತಿಕೊಂಡರಂತೆ. ಎರಡು ಹೆಜ್ಜೆ ಹೋದ ನಂತರ ರಾಡೆಲ್ಲಿ, ರೀಲೆಲ್ಲಿ ಎಂದು ತೇಜಸ್ವಿ ವಿಚಾರಿಸಿದಾಗ ಹುಡುಕಿಕೊಂಡ ರಾಮದಾಸ್‌ರವರಿಗೆ ಕಂಡದ್ದು ಚಕ್ರದಡಿಯಲ್ಲಿ ಅಪ್ಪಚ್ಚಿಯಾಗಿದ್ದ ರೀಲ್. 'ನೋಡ್ರಿ, ಅದು ಹೊಸದು ನಿಜ. ನಾನು ಎಲ್ಲಿಯಾದರೂ ಸರಿ ಖರೀದಿ ಮಾಡಿ ಕೊಡುತ್ತೇನೆ' ಎಂದರೂ ತೇಜಸ್ವಿ ಒಂದೂವರೆ ದಿನ

ಸತತವಾಗಿ ಬೈದ್ರು. ಖರೀದಿ ಮಾಡೋದಲ್ಲರೀ ಮುಖ್ಯ, ಇಷ್ಟು ವಯಸ್ಸಾದ್ರೂ ಒಂದು ಸಾಮಾನ್‌ನ ನೆಟ್ಟಗೆ ನೋಡಿಕೊಳ್ಳೋಕು ಬರಲ್ವಲ್ಲರೀ ಎಂದು ಬೈದ್ರು. ತೇಜಸ್ವಿ ಶಿಸ್ತು ನಮಗ್ಯಾರಿಗೂ ಬರಲ್ಲ. ಮೈಸೂರಿಗೆ ಬಂದು ಬನ್ರಿ ಮೀನು ಹಿಡಿಯೋಕೆ ಹೋಗೋಣ ಅಂತಿದ್ರು. ಕ್ಲಾಸಿದೆ ಕಣ್ರೀ ಅಂದ್ರೆ ಮೆಟ್ಟಾಗೆ ಹೊಡೀತೀನಿ!ಅದೇಸ್ ಕ್ಲಾಸು ಅಂತಾ ಸಾಯ್ತೀರಾ. ಆ ಹುಡುಗ್ರುನ್ನ ಗೋಳು ಹುಯ್ಕಂಡು ಅಂತಿದ್ರು-ಕೊನೆಯ ದಿನಗಳಲ್ಲಿ ತೇಜಸ್ವಿಯವರ ನೆನಪು ಅವರನ್ನು ಹಿಂಡಿ ಹಿಪ್ಪೆ ಮಾಡಿತ್ತು.

ಇತ್ತೀಚೆಗೆ ಯಾರೋ ರಾಮದಾಸ್‌ರವರನ್ನು ಇಂಟರ್‌ವ್ಯೂ ಮಾಡ ಬೇಕೆಂದಾಗ 'ನಮ್ಮದೇನ್ ಸಾಧನೇ ರೀ... ನಾನು ಆ ನಂಜುಂಡಸ್ವಾಮಿ, ತೇಜಸ್ವಿ, ಲಂಕೇಶ್ ಅವರುಗಳ ಶಾಡೋ ಅಷ್ಟೆ'ಎಂದು ನಿರ್ಲಿಪ್ತವಾಗಿ ನುಡಿದರಂತೆ. ಆದರೆ, ಪ್ರಚಂಡ ಭಾಷಣಕಾರರಾದ ರಾಮದಾಸ್ ಹೇಳುತ್ತಿದ್ದದ್ದು 'ನನಗೆ ಧೈರ್ಯ, ಪ್ರತಿಭಟನೆಯ ಛಾತಿ ಮತ್ತು ಭಾಷಣದ ಕೌಶಲ್ಯ ಕಲಿಸಿಕೊಟ್ಟದ್ದು ನಂಜುಂಡಸ್ವಾಮಿ ಅವರು' ಎಂದು.

ರಾಮದಾಸ್‌ರ ವಿಶಿಷ್ಟ ವ್ಯಕ್ತಿತ್ವ ರೂಪುಗೊಳ್ಳಲು ಅವರ ತಾಯಿ ಮಂಜಮ್ಮನವರ ಕೊಡುಗೆ ಅನನ್ಯವಾದದ್ದು. ತಂದೆಯನ್ನು ಬಹುಬೇಗನೆ ಕಳೆದುಕೊಂಡ ರಾಮದಾಸ್ ರವರಿಗೆ ಯಾವುದೇ ಕೊರತೆಯಾಗದಂತೆ, ಅವರ ವ್ಯಕ್ತಿತ್ವ ವಿಕಸನಕ್ಕೆ ಅಡ್ಡಿಯಾಗದಂತೆ ಬೆಳೆಸಿದ ಅಪೂರ್ವ ತಾಯಿ ಅವರು. ಶುಶ್ರೂಷಕಿಯಾಗಿ ಲಕ್ಷಾಂತರ ಜನರಿಗೆ ಸೇವೆ ಮಾಡಿದ ಅವರ ನಿರಾವಲಂಬನೆಯ ಬದುಕು ರಾಮದಾಸ್ ರವರಲ್ಲಿ ಸ್ಫೂರ್ತಿ, ಜಾತ್ಯತೀತ ಮನೋಭಾವನೆಯನ್ನು ರೂಪಿಸಿರಬೇಕೆಂದೆನಿಸುತ್ತದೆ. ಕುವೆಂಪುರ ಕುಟುಂಬಕ್ಕೂ ಅಚ್ಚುಮೆಚ್ಚಾಗಿದ್ದ ಮಂಜಮ್ಮನವರು ಮಗನನ್ನು ಭೀಮನಂತೆ ಬೆಳೆಸಿದರು. ಭೀಮನಂತಹ ದೃಢಕಾಯದಲ್ಲೂ ಕುಸುಮದಂತಹ ಹೃದಯ ಅರಳುವಂತೆ ನೋಡಿಕೊಂಡರು.

ರಾಮದಾಸ್‌ರವರು ಈ ಮೃತ್ಯುವಿನ ಹಿಡಿತಕ್ಕೆ ಸಿಕ್ಕಿದ್ದು ಸಹ ಸೋಜಿಗವೆನಿಸುತ್ತದೆ. ತೊಂಬತ್ತರ ದಶಕದಲ್ಲಿ ನಾವು ಕೇರಳದ ಸೈಲೆಂಟ್ ವ್ಯಾಲಿಗೆ ಹೋಗಲು ನಿರ್ಧರಿಸಿದಾಗ ರಾಮದಾಸ್ ನಮ್ಮನ್ನು ಕೂಡಿಕೊಂಡರು. ಯಾತ್ರೆ ಅಷ್ಟೊಂದು ಶ್ರಮದಾಯಕವಿರಬಹುದೆಂಬ ಕಲ್ಪನೆ ನಮಗಿರಲಿಲ್ಲ. ಒಂದು ಹಂತದಲ್ಲಿ ವಾಹನವನ್ನು ಬಿಟ್ಟು ನಡೆದೇ ಹೋಗಬೇಕು. ಬೆಳಿಗ್ಗೆ ೬.೩೦ಕ್ಕೆ ಆರಂಭವಾದ ನಮ್ಮ ಯಾತ್ರೆ ೪೮ ಕಿ.ಮೀ ದೂರ ನಡೆದ ಮೇಲೆ ನಿಂತಿತು. ಆ ದುರ್ಗಮವಾದ ನಡಿಗೆಯಲ್ಲಿ ರಾಮದಾಸ್‌ರವರು ಸಮವಾಗಿ ಹೆಜ್ಜೆ ಹಾಕಿದರು. ಆ ವಯಸ್ಸಿನಲ್ಲೂ, ಹುಮ್ಮಸ್ಸು ಉತ್ಸಾಹವಿತ್ತು.

ರಾಮದಾಸ್‌ರವರ ಆರೋಗ್ಯದ ಇಳಿಮುಖ ಎಲ್ಲಿ ಆರಂಭವಾಯಿತೆನ್ನುವುದನ್ನು ಕಳೆದ ಒಂದೂವರೆ ದಶಕಕ್ಕೂ ಹೆಚ್ಚು ಕಾಲ ಅವರ ಸಖನಾಗಿರುವ ಸ್ವಾಮಿ ಆನಂದ್ ಮಾತ್ರ ಹೇಳಬಲ್ಲರೇನೋ!ಅವರ ಅಂತರಂಗವನ್ನು ಹಂಚಿಕೊಂಡು, ಹಲವೊಮ್ಮೆ ಅವರ ಅವಸರದ ನಿರ್ಧಾರಗಳ ಮೇಲೂ ಪ್ರಭಾವ ಬೀರಬಲ್ಲವರಾಗಿದ್ದ ಸ್ವಾಮಿ ಆನಂದ್ ರಾಮದಾಸ್‌ರವರ ಹೋರಾಟದ ಬದುಕನ್ನು ಕಟ್ಟಿಕೊಡಬಲ್ಲರು.

ನಮಗೆ ರಾಮದಾಸ್‌ರವರು ಸ್ವಸ್ಥ ಸಮಾಜಕ್ಕೆ ಹಂಬಲಿಸುವ ಸಮುದಾಯದ ಮುಖವಾಣಿಯಂತೆ ಕಾಣುತ್ತಿದ್ದರು. ಯಾವುದೇ ಅನ್ಯಾಯ ಜರುಗಿತೆಂದು ಸುದ್ದಿ ಬಂದಾಗ ರಾಮದಾಸ್ ಪ್ರತಿಭಟಿಸುತ್ತಾರೆ ಎಂಬ ಅಭಯವಿತ್ತು. ನಿಶ್ಚಿಂತೆಯಿಂದ ನಮ್ಮೆಲ್ಲ ಹೊಣೆಗಾರಿಕೆಯನ್ನು ಅವರ ಮೇಲೆ ವರ್ಗಾಯಿಸಿದ್ದೆವು. ಹಾಗಾಗಿ ಅವರು ಎಲ್ಲೋ ತಪ್ಪು ನಿರ್ಣಯಕ್ಕೆ ಬಂದಿದ್ದಾರೆ ಅಂದುಕೊಂಡರೂ, ಅವೆಲ್ಲ ಸಹಜವೆಂದೇ ಸ್ವೀಕರಿಸಿಬಿಡುತ್ತಿದ್ದೆವು. ಇತ್ತೀಚೆಗೆ ಒಮ್ಮೆ ಅವರ ಮನೆಗೆ ಫೋನ್ ಮಾಡಿದಾಗ ಮಗಳು ಸ್ನೇಹಾ ಉತ್ತರಿಸಿದಳು. ತಂದೆಗೆ ಗಂಟಲು ಇನ್‌ಫೆಕ್ಷನ್ ಆಗಿದೆ ಎಂದು ಹೇಳಿದಳು. ನಾವು ತಮಾಷೆಯಾಗಿ 'ಏನು ಮೈಸೂರಿನ ವಾಯಿಸ್ಗೇ ಇನ್‌ಫೆಕ್ಷನ್ನು? ಈಗ ರಾಮದಾಸ್ ರವರು ಮೌನವಾದರಾ?' ಎಂದು ಕೀಟಲೆ ಮಾಡಿದೆವು. ಆನಂತರ ಅವರ ಗಂಭೀರ ಸ್ಥಿತಿಯ ಅರಿವಾಗಿತ್ತು. ನಿಧನರಾಗುವ ಹಿಂದಿನ ಸಂಜೆ ಅವರನ್ನು ಭೇಟಿಯಾದಾಗ ಯಾತನೆ ಅನುಭವಿಸುತ್ತಿದ್ದ ಅವರನ್ನು ನೋಡಲಾಗಲಿಲ್ಲ. ಪಂಕ್ಚರ್ ಆದ ಟ್ಯೂಬಿನಂತೆ ನಿಧಾನವಾಗಿ ಉಸಿರನ್ನು ಕಳೆದುಕೊಂಡ ನೋವಿನಿಂದ ಬಿಡುಗಡೆಯಾದ ರಾಮದಾಸ್‌ರವರನ್ನು ಕಂಡಿದ್ದು ಮಾರನೇ ದಿನ.

# ಗುರು ರಾಮದಾಸ್

**ಕೆ.ಫಣಿರಾಜ್**

೧೯೭೦ರ ದಶಕದ ಕರ್ನಾಟಕದಲ್ಲಿ ನಡೆದ ಸಾಮೂಹಿಕ ಚಳವಳಿಗಳ ಪ್ರಭಾವದಲ್ಲಿ ವ್ಯಕ್ತಿತ್ವದ ಸ್ವರೂಪವನ್ನು ಕಂಡುಕೊಂಡು ಅನೇಕ ಹುಡುಗರಲ್ಲಿ ನಾನೂ ಒಬ್ಬ. ರಾಮದಾಸ್ ಆ ಕಾಲದ ಇಚ್ಛಾಶಕ್ತಿಯನ್ನು ರೂಪಿಸಿದ ಪ್ರಮುಖರಲ್ಲಿ ಒಬ್ಬರು. ಅವರು ತೀರಿದರು ಎಂದು ತಿಳಿದಾಗ ಆದ ಕಳವಳದ ಅಂತಃಕರಣವನ್ನು ಇಲ್ಲಿ ಹೇಳುತ್ತೇನೆ. ಲಂಕೇಶ್, ತೇಜಸ್ವಿ ಮತ್ತು ರಾಮದಾಸ್ ಒಡನಾಡಿಗಳಾಗಿದ್ದು ಸಮಾಜವಾದಿ ವೈಚಾರಿಕತೆಗಾಗಿ ಮಾತ್ರವಲ್ಲ. ಜೀವನವನ್ನೂ, ಕಲೆಯನ್ನೂ ವಿಭಿನ್ನ ಕ್ರಮದಲ್ಲಿ ಗ್ರಹಿಸಿ, ಮಡಿವಂತರನ್ನು ಬೆಚ್ಚಿಸುವ ರೂಪಕಗಳನ್ನು ಕಟ್ಟುವ ಸೃಜನಾಶಕ್ತಿಯ ಬಗ್ಗೆ ಇದ್ದ ಕಡುಮೋಹ(ಪ್ಯಾಶನ್)ದಲ್ಲೂ ಇವರು ಒಡನಾಡಿಗಳು. ಲಂಕೇಶ್ ಕನ್ನಡದ ಉತ್ಕೃಷ್ಟ ಪದ್ಯ ಹಾಗೂ ಗದ್ಯ ಲೇಖಕರು; ತೇಜಸ್ವಿ ಕನ್ನಡದ ಅತ್ಯುತ್ತಮ ಗದ್ಯ ಲೇಖಕರು ಮತ್ತು ವಿಜ್ಞಾನದ ವಿಭಿನ್ನ ಜ್ಞಾನಿ. ಈ ಜ್ಞಾನವಲಯಗಳು- ಯಾವ ಕಾರಣಕ್ಕಾದರೂ ಸರಿ-ಹದಗೆಡುವವರೆಗೂ, ಅವರನ್ನು-ಪ್ರತಿಭೆಯ ಹೊಟ್ಟೆಕಿಚ್ಚಿನಿಂದಾದರೂ -ನೆನೆಯುತ್ತಲೇ ಇರಬೇಕು. ಯಜಮಾನಿಕೆಯ ಮುಸುಕನ್ನು ತೂರಿ ತಮ್ಮ ಇರುವಿಕೆಯನ್ನು ಸವಾಲಾಗಿ ತೋರುವ ಅಪ್ಪಟ ಪ್ರತಿಭೆಗಳವರು.

ಆದರೆ, ರಾಮದಾಸ್ ತಮ್ಮ ಕ್ರಿಯಾಶಕ್ತಿಯನ್ನು ಅಸಮಾನತೆಯ ವಿರುದ್ಧ ನಡೆಸುವ ಸಾಮಾಜಿಕ ಚಳವಳಿಗಳಿಗೆ ನೀಡಿ, ಆ ತಲೆಮಾರಿನ ಪ್ರಭಾವಿ 'ಪಬ್ಲಿಕ್ ಇಂಟ್‌ಲೆಕ್ಚುಯಲ್' ಆದರು. ಈ 'ಪಬ್ಲಿಕ್ ಇಂಟೆಲೆಕ್ಚುಯಲ್'ಗಳ ಸಾಧ್ಯತೆ-ಮಿತಿಗಳು ನಮ್ಮ ಚಳವಳಿಗೂ, ಒಟ್ಟು ಬದುಕಿಗೂ ಅರ್ಥವಾಗದಿರುವ ಕಾರಣದಿಂದಲೋ ಏನೋ, ತತ್ಸಮಾನವಾದ ಕನ್ನಡ ಶಬ್ದ ಇಲ್ಲದಾಗಿ, ಇತ್ತೀಚಿಗೆ ನಮ್ಮ ಪತ್ರಿಕೆಗಳು ಕುಲಗೆಡಿಸಿರುವ -ಆ ಕಾರಣಕ್ಕೇ ಸಂಘಪರಿವಾರಕ್ಕೆ ಪ್ರಿಯವಾಗಿರುವ ಭಾಷೆಯ ಪ್ರಕಾರ ರಾಮದಾಸ್ 'ವಿಚಾರವಾದಿ'ಯಾಗಿಬಿಟ್ಟಿದ್ದಾರೆ. ಪತ್ರಿಕೆಗಳು

ಅನುಮಾನಾಸ್ಪದವಾಗಿ ಪ್ರಯೋಗಿಸಲು ಶುರುಮಾಡಿರುವ ಈ ಶಬ್ದ ಪ್ರಯೋಗದ ಹಿಂದೆ ಒಂದು ಚಾಲಾಕುತನವಿದೆ. ಹೊಸ ಪದಕೋಶದ ಪ್ರಕಾರ, 'ಜಾತೀಯತೆಯ ವಿರೋಧ' ಎಂದರೆ ಯಾವುದೇ ಜಾತಿಯ ಜನರ ಬಗ್ಗೆ ಮಾತನಾಡದೆ ಇರುವುದು; ಅಂದರೆ ಕೆಳಜಾತಿಗಳ ಮೇಲೆ ಯಜಮಾನ ಜಾತಿಯ ಜನ ಮಾಡುವ ದಬ್ಬಾಳಿಕೆಯನ್ನು ವಿರೋಧಿಸುವುದೂ 'ಜಾತೀಯತೆ'ಯಾಗುತ್ತದೆ.

ಹಾಗೆಯೇ 'ಸೆಕ್ಯುಲಾರ್'ಎಂದರೆ (ಯಾವ ಮತದ ಪರವಾಗಿಯಲ್ಲ) ಯಾವ ಮತಕ್ಕೂ ಸೇರಿದವರ ಪರವಾಗಿ ಮಾತಾನಾಡದೇ ಇರುವುದು; ಅಂದರೆ, ಸಂವಿಧಾನದನ್ವಯ ಹಾಗೂ ಕಾನೂನು ಆಳ್ವಿಕೆಗೆ ವ್ಯತಿರಿಕ್ತವಾಗಿ ಅಲ್ಪಸಂಖ್ಯಾತರ ಮೇಲಾಗುವ ಹಲ್ಲೆಗಳನ್ನು ವಿರೋಧಿಸುವುದು ಮತ್ತು ಹಲ್ಲೆಗೆ ತುತ್ತಾದ ಜನರಿಗೆ ನ್ಯಾಯ ಸಿಗಬೇಕು ಎಂದು ಒತ್ತಾಯಿಸುವುದು ' ಮತೀಯ ಪಕ್ಷಪಾತ'ವಾಗುತ್ತದೆ. ಇದರ ಜೊತೆ , ಪ್ರಭುತ್ವವೇ ಯಜಮಾನಿಕೆ ವಹಿಸಿ 'ಹಸಿದವರಿಂದ ಕಿತ್ತುಕೊಂಡು ಹೊಟ್ಟೆಬಾಕರಿಗೆ ಉಣ್ಣಿಸುವ' 'ಆರ್ಥಿಕ ಸ್ವಾತಂತ್ರ್ಯ'ವನ್ನು ವಿರೋಧಿಸುವವರು 'ಸರಕಾರದ ನಿರಂಕುಶತೆ'ಯ ಪರವಾಗಿರುವ 'ಸಮಾಜವಾದಿ' ಗಳಾಗಿಬಿಡುತ್ತಾರೆ. ಈ 'ಅನರ್ಥಕೋಶ'ದ ಪ್ರಕಾರ, ಈ ಮೂರು ಗುಣಗಳನ್ನು ಹೊಂದಿದವರು 'ವಿಚಾರವಾದಿ' ಗಳು-ಇಂಗ್ಲಿಷ್ ಪತ್ರಿಕೆಗಳ ಪ್ರಕಾರ 'ಜೋಲವಾಲ'ಗಳು.

ರಾಮದಾಸ್ ಅಪ್ಪಟ 'ವಿಚಾರವಾದಿ'; ಅವರು ಜೀವನದುದ್ದಕ್ಕೂ ಕಾದಿಟ್ಟುಕೊಂಡು, ನಿರ್ಗಮಿಸುವಾಗ ನಮಗೆ ಬಿಟ್ಟುಕೊಟ್ಟಿರುವ ಪಟ್ಟ ಅದೊಂದೆ. ಒಂದು ಕಡೆಯಿಂದ ನೋಡಿದರೆ, ನೀಟಾಗಿ ಟ್ರಿಮ್ ಮಾಡಿದ ಮೀಸೆಯಲ್ಲಿ ೫೦ರ ದಶಕದ ಸಿನಿಮಾ ನಾಯಕರ ತರಹ ಕಾಣುತ್ತಿದ್ದ ರಾಮದಾಸ್, 'ಯಾವ ದೊರೆಗೂ ಬೇಡದ ಈ ಪಟ್ಟದ ವಾರಸುದಾರಿಕೆಗೆ ನೀವು ತಯಾರಿದ್ದೀರ?' ಎಂದು, ತಮ್ಮ ಟ್ರೇಡ್ ಮಾರ್ಕ್ ಎದೆಸೆಟೆಸಿ ನಿಂತ ಭಂಗಿಯಲ್ಲಿ ನಿಂತು, ಸವಾಲು ಹಾಕುತ್ತಿರುವ ಹಾಗಿದೆ.

ನಾಸ್ತಿಕತೆ ಹಾಗು ಜಾತಿ-ಮತಾಚರಣೆಗಳ ನಿಷ್ಠುರ ನಿರಾಕರಣೆ ರಾಮದಾಸರ ಪ್ರಜ್ಞಾಪೂರ್ವಕ ಆಯ್ಕೆಯಾಗಿತ್ತು. ಅವರು ಹಳ್ಳಿಯ ಬಡಕುಟುಂಬದಲ್ಲಿ ಹುಟ್ಟಿ ಬೆಳೆದು, ಜೀವನದುದ್ದಕ್ಕೂ ಕರ್ನಾಟಕದಲ್ಲಿಯೇ ಬದುಕು ನೆಟ್ಟುಕೊಂಡಿದ್ದವರು. ಜನ, ದೇವರು ಮತ್ತು ಮತಾಚರಣೆಗಳ ಆಸರೆ ಪಡೆಯುವುದರ ಹಿಂದಿರುವ ಸೂಕ್ಷ್ಮಗಳು ಈ ನಂಬಿಕೆಗಳು ಲೋಕಜೀವನದಲ್ಲಿ ಹೆಣೆದುಕೊಂಡು ರೂಪ ಪಡೆದಿರುವ ನಮ್ಮ ಊರುಗಳ ಜೀವನಕ್ರಮಗಳೂ ರಾಮದಾಸರಿಗೆ ಖಂಡಿತ ಗೊತ್ತಿದ್ದವು. ಆದರೆ ಇದೇ ಜಾತಿ-ಮತಾಚರಣೆಗಳು ಸಾಮಾಜಿಕ ಯಜಮಾನಿಕೆ, ಅಸಮಾನತೆಗಳಿಗೆ ಸಾಧನವಾಗಿರುವುದನ್ನೂ ಕೂಡ ನಮ್ಮ ಊರು-ಕೇರಿಗಳ ಬದುಕಿನ ಮೂಲಕವೇ ನಾವು ಕಂಡು ಕೊಳ್ಳಬಹುದು-ರಾಮದಾಸ್‌ಹಾಗೆಯೇ ಕಂಡುಕೊಂಡಿದ್ದರು.

ಜನರ ನಿತ್ಯಜೀವನದ ನೆಲೆಗಳನ್ನು ಉಡಾಫೆ ಮಾಡದೆ, ಸಾಮಾಜಿಕ ಅಸಮಾನತೆಗೆ ಪ್ರತಿರೋಧ ತೋರುವ ಚಳವಳಿಗಳನ್ನು ಕಟ್ಟುವುದು ಎಂಥ ಕಷ್ಟದಾಯಕ ಕೆಲಸ ಎನ್ನುವುದು ಲೋಹಿಯಾ ಮತ್ತು ಅಂಬೇಡ್ಕರ್‌ರಿಗೆ ಮಾತ್ರವಲ್ಲ, ಆಸ್ತಿಕರಾಗಿದ್ದ ಗಾಂಧೀಜಿಗೂ ಗೊತ್ತಿತ್ತು.

ಇಂತಹ ಸಂದರ್ಭಗಳಲ್ಲಿ ಒಂದಲ್ಲ ಒಂದು ಕಡೆ, ಸಮಾಜದ ರೂಢಿಯನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸದೇ ವಿಧಿ ಇಲ್ಲ ಎನ್ನುವುದು ನಮ್ಮ ಲೋಕನಾಯಕರಿಗೆ ಖಚಿತವಾಗಿತ್ತು. ಗಾಂಧೀಜಿ ಅಸ್ಪೃಶ್ಯರಿಗೆ ಪ್ರವೇಶ ನಿರಾಕರಿಸುವ ದೇವಸ್ಥಾನಗಳಿಗೆ -ಸಾಮಾನ್ಯ ಭಕ್ತಾದಿಗಳಿಗೆ ಅದು ಎಷ್ಟೇ ಪವಿತ್ರವಾಗಿರಲಿ-ತಾನು ಪ್ರವೇಶಿಸುವುದಿಲ್ಲ ಎಂಬ ಕಟು ನಿರ್ಧಾರವನ್ನು ಸಾರ್ವಜನಿಕ ಹೋರಾಟದ ಭಾಗ ಮಾಡಿಕೊಂಡಿದ್ದರು;ಅವರು ಎಷ್ಟರಮಟ್ಟಿಗೆ ಅದಕ್ಕೆ ಬದ್ಧರಾಗಿದ್ದರೆಂದರೆ, ಪೂರಿಯ ಜಗನ್ನಾಥ ದೇವಾಲಯಕ್ಕೆ ಕಸ್ತೂರ್ ಬಾ, ಗಾಂಧಿಗೆ ಗೊತ್ತಾಗದ ಹಾಗೆ, ಹೋಗಿಬಂದಿರುವುದು ತಿಳಿದು ಸಾರ್ವಜನಿಕವಾಗಿಯೇ ತಮ್ಮ ಅಸಂತೃಪ್ತಿಯನ್ನು ತೋಡಿಕೊಂಡರು.

ಹಾಗೆಯೇ ಅವರ ಕೊನೆಯ ದಿನಗಳಲ್ಲಿ, ಪ್ರಾರ್ಥನಾ ಸಭೆಗಳಿಗೆ ಬರುತ್ತಿದ್ದ ಬಹುಪಾಲು ಜನ ಸಭೆಯಲ್ಲಿ ಕುರಾನ್ ಮತ್ತು ಬೈಬಲ್ ಪಠಣಕ್ಕೆ ಆಕ್ಷೇಪವೆತ್ತಿದಾಗ, ನಿಷ್ಠುರವಾಗಿ'ಇಚ್ಛೆಯಿಲ್ಲದವರು ಸಭೆಯಿಂದ ಹೊರಹೋಗಬಹುದು' ಎಂದುಬಿಡುತ್ತಿದ್ದರು. ರಾಜೇಂದ್ರಪ್ರಸಾದ್ ರಾಷ್ಟ್ರಾಧ್ಯಕ್ಷರಾಗಿದ್ದಾಗ ಕಾಶಿಯಲ್ಲಿ ಬ್ರಾಹ್ಮಣರ ಕಾಲು ತೊಳೆದದ್ದನ್ನು ಖಂಡಿಸಿದ ಲೋಹಿಯಾರ ನಿಷ್ಠುರತೆಯು, 'ಹಿಂದೂವಾಗಿ ಹುಟ್ಟಿದೆ, ಆದರೆ ಹಿಂದೂವಾಗಿ ಸಾಯಲಾರೆ' ಎಂಬ ಬಾಬಾಸಾಹೇಬರ ನಿಷ್ಠುರತೆಯೂ ಇದೇ ಬಗೆಯದು. ಈ ಕಾರಣಕ್ಕಾಗಿಯೇ ಇವರು ಜಾತಿಯಲ್ಲಿ ನಂಬಿಕೆ ಇಟ್ಟುಕೊಂಡಿದ್ದ ಭಾರತದ ಕೋಟ್ಯಂತರ ಸಾಮಾನ್ಯ ಸಂಸಾರಸ್ಥರಿಗೆ ಅಪ್ರಿಯರಾಗಿದ್ದರು.

ರಾಮದಾಸ್ ನಾಸ್ತಿಕರಾಗಿದ್ದು, ಜಾತಿ-ಮತಾಚರಣೆಗಳನ್ನು ನಿರಾಕರಿಸಿದ್ದು, ಜಾತಿ ಅಸಮಾನತೆಯ ವಿರುದ್ಧದ ಈ ಪ್ರತಿರೋಧ ಪರಂಪರೆಯ ಮೇಲಿನ ವಿಶ್ವಾಸದಿಂದ; ಈ ಕಾರಣಕ್ಕೇ ರಾಮದಾಸ್ ಜಾತಿನಿಷ್ಠೆಯುಳ್ಳ ಸಾಮಾನ್ಯ ಜನರಿಗೆ ಅಪ್ರಿಯರಾಗಿದ್ದರು. ಹಾಗಂತ, ರಾಮದಾಸ್ ಲೌಕಿಕ ಅನ್ಯಾಯಗಳ ವಿರುದ್ಧ ಸಂಘಟಿಸಿದ ಚಳವಳಿಗಳು, ತನ್ನ ಹಾಗೆ ಜಾತಿ-ಮತಗಳ ಬಗ್ಗೆ ನಿರ್ದಾಕ್ಷಿಣ್ಯವಾಗಿರುವವರಿಗೆ ಮಾತ್ರ ನ್ಯಾಯ ದೊರಕಬೇಕು ಎಂಬ ಸ್ವರೂಪವನ್ನು ಪಡೆದಿರುತ್ತಿರಲಿಲ್ಲ; ಲೌಕಿಕ ನ್ಯಾಯದ ವಿಷಯದಲ್ಲಿ ಅನ್ಯಾಯಕ್ಕೆ ಒಳಗಾದವರ ನಡುವೆ ಭಿನ್ನವೆಣಿಸುವ ಬುದ್ಧಿ, ರಾಮದಾಸ್ ನೆಚ್ಚಿಕೊಂಡಿದ್ದ ಭಾರತದ ನ್ಯಾಯಪರ ಚಳವಳಿಗಳ ಪರಂಪರೆಯಲ್ಲೇ ಇಲ್ಲ. ಈ ರೀತಿ ಭಿನ್ನವೆಣಿಸುವ ಕೇಡಿತನವೆನಿದ್ದರೂ, ಸಾಮೂಹಿಕ ಚಳವಳಿಗೆ ಹಿಂದೂತ್ವವಾದ ಅಂಟಿಸಿರುವ ರೋಗ.

ರಾಮದಾಸರ ನಿರ್ದಾಕ್ಷಿಣ್ಯ ವೈಚಾರಿಕ ನಿಲುವಿನ ಬಗ್ಗೆ ಇಷ್ಟು ವಿಸ್ತಾರವಾಗಿ ಹೇಳಿದ್ದಕ್ಕೆ ಕಾರಣವಿದೆ. ೯೦ರ ನಂತರ ನಮ್ಮ ಬೌದ್ಧಿಕ ವಿಶ್ಲೇಷಣೆಗಳು, ರಾಮದಾಸರಂತಹವರ ವೈಚಾರಿಕ ಬದ್ಧತೆಯನ್ನೂ, ಪಶ್ಚಿಮದ 'ಎನ್‌ಲೈಟನ್‌ಮೆಂಟ್' ವಿಚಾರಧಾರೆಯಿಂದ ಕಡ ಪಡೆದ, ಭಾರತದ ಸಾಮಾನ್ಯಜನರ ಜೀವನದ ನಂಬಿಕೆಗಳನ್ನು ಅಸಡ್ಡೆ ಮಾಡುವ, ಅಧಿಕಾರಸ್ಥ ವೈಚಾರಿಕ ರಚನೆಗಳ ಸಾಲಿಗೆ ಸೇರಿಸಿ ಇಂಥ ವೈಚಾರಿಕತೆ ದೇಶದ ಕೋಟ್ಯಂತರ ಜನರ ಬದುಕಿಗೆ ಅಪ್ರಸ್ತುತ ಎನ್ನುತ್ತಿವೆ. ಅಷ್ಟರಮಟ್ಟಿಗೆ, ರಾಮದಾಸ್ ಸಂಘಟಿಸುತ್ತಿದ್ದಂತಹ ಚಳವಳಿಗಳು

ಲೋಕವ್ಯಾಪಕತೆಯನ್ನು ಪಡೆಯಲು ಅಸಮರ್ಥವಾಗಿರುವ, ಒರಟು ಹಟದ ಚಳವಳಿಗಳಾಗಿ ಕಾಣುತ್ತಿವೆ.

ರಾಮದಾಸರ ವೈಚಾರಿಕತೆ, ಭಾರತದ ವಸಾಹತುಶಾಹಿ ವಿರೋಧಿ ಚಳವಳಿಯಲ್ಲಿ ರೂಪ ಪಡೆದ, ವೈರುಧ್ಯಮಯವಾಗಿದ್ದರೂ ಯುಗಪ್ರವರ್ತಕ ಗುಣಪಡೆದಿದ್ದ ವೈಚಾರಿಕ ಪರಂಪರೆಗೆ ಸೇರಿದ್ದು. ಈ ವೈಚಾರಿಕತೆಗೆ 'ಎನ್‌ಲೈಟನ್‌ಮೆಂಟ್' ವಿಚಾರಧಾರೆಯ ಆಸರೆ ಇದೆ ನಿಜ;ಅದರ ಜೊತೆ ಭಾರತದ ಸಾಮಾಜಿಕ ಅಸಮಾನತೆಯ ವಾಸ್ತವಿಕತೆಯನ್ನು ಮೀರಲು ಕಟ್ಟಿಕೊಂಡ ಪ್ರತಿರೋಧದ ವಿವಿಧ ರೂಪಗಳು ಹೆಣೆದುಕೊಂಡಿವೆ. ಎಷ್ಟು ದಟ್ಟವಾಗಿ ಹೆಣೆದುಕೊಂಡಿವೆ ಎಂದರೆ ಅಸಮಾನತೆಯನ್ನು -ಲೋಕರೂಢಿಗೆ ವಿರುದ್ಧವಾಗಿ- ನೈತಿಕ ನಿಷ್ಠುರತೆಯಲ್ಲಿ ಎದುರಿಸುವುದು ಈ ವೈಚಾರಿಕತೆಯ ಅಧ್ಯಾತ್ಮವಾಗಿಬಿಟ್ಟಿದೆ. ಲಂಕೇಶರ ಬರಹ ಹಾಗೂ ಅವರ ಸಂಪಾದಕತ್ವದ 'ಲಂಕೇಶ್ ಪತ್ರಿಕೆ', ಕುವೆಂಪು ಅವರ ಆಧ್ಯಾತ್ಮಿಕ ರಚನೆಗಳನ್ನು ಮೀರಿ ಮತಾತೀತ ಅಧ್ಯಾತ್ಮ ಪರಿಕಲ್ಪನೆಯಲ್ಲಿ ತೊಡಗಿದ ತೇಜಸ್ವಿಯ ಬರಹ, ಮಹಾದೇವರ ಕಥಾನಕ, ೧೯೭೦ರ ದಶಕದ ಚಳವಳಿಗಳು ಮತ್ತು ರಾಮದಾಸರ ಬದುಕು- ಈ ಎಲ್ಲವುಗಳೂ ಜಾತಿ-ಮತಗಳೊಂದಿಗೆ ನಿಷ್ಠುರ ಕಟ್ಟಿಕೊಂಡು ಹೊಸ ಆಧ್ಯಾತ್ಮಿಕತೆಯ ಶೋಧನೆಯ ಮಾರ್ಗಗಳು.

ರಾಮದಾಸರ ಸಾವಿನ ಗಳಿಗೆಯಲ್ಲಿ ಅವರ ಆತ್ಮಶೋಧನೆಯ ಪಥ ನಿರ್ಜನವಾಗುತ್ತಿರುವಂತೆ ಕಾಣುತ್ತಿದೆ. ಲೌಕಿಕ ನ್ಯಾಯ, ಆಧ್ಯಾತ್ಮಿಕ ಶೋಧ ಎರಡಕ್ಕೂ ಮೂರು ಕಾಸಿನ ಬೆಲೆಯನ್ನು ಕೊಡದೆ, ಉಳ್ಳವರ ಶಿವಾಲಯವನ್ನು ಕಟ್ಟುವ 'ಫ್ಯಾಸಿಸಂ'ನ ಅತ್ಯಾಧುನಿಕ ರಾಜಮಾರ್ಗಕ್ಕೆ ಜನರ ಹಿಂಡನ್ನು ನುಗ್ಗಿಸಲು 'ಹಿಂದೂತ್ವವಾದಿ'ಗಳು ಆಯುಧ ಹಿಡಿದು ನಿಂತಿದ್ದಾರೆ. 'ಹತ್ತು ಜನ ಆದ್ರೆ ಹತ್ತು ಜನ. ಯು ಸೀ ನಾವು ಜಸ್ಟೀಸ್‌ಗೆ ಮಾರಲ್ ಫೋರ್ಸ್ ಆಗೋ ಕೆಲಸ ಮಾಡ್ತಿರಬೇಕು ಕಣ್ರಿ' ಎಂದು ಸಿಗರೇಟಿನ ಹುಡಿ ಹಾರಿಸಿ ರಾಮದಾಸ್ ಪ್ರತಿಭಟನಾ ಧರಣಿಗೆ ಹೊರಟವರಂತೆ ನಿರ್ಗಮಿಸಿಬಿಟ್ಟಿದ್ದಾರೆ. ಅವರ ಅಧ್ಯಾತ್ಮವನ್ನು ನೆಚ್ಚಿಕೊಂಡು ಬದುಕಬೇಕೆನ್ನುವವರಿಗೆ ಅವರು ಕಾಲಪರಿವರ್ತನೆಯ ಸವಾಲುಗಳನ್ನು ಬಿಟ್ಟುಹೋಗಿದ್ದಾರೆ. 'ಗುರು ರಾಮದಾಸರಿಗೆ' ನಮಸ್ಕಾರ.

# ಮಾತು ಜೀವ... ಮೌನ ಸಾವು...

ಡಾ. ಸಿ.ಎಸ್. ದ್ವಾರಕಾನಾಥ್

ಕಳೆದ ಕಾಲುಶತಮಾನದಲ್ಲಿ ಕೆ. ರಾಮದಾಸ್‌ರನ್ನು ನಿಕಟವಾಗಿ ಬಲ್ಲವರಲ್ಲಿ ನಾನೂ ಒಬ್ಬ. ಕೋಲಾರದ ನನಗೆ ಮೈಸೂರಿನ ರಾಮದಾಸ್ ಎಂದೂ ದೂರವೆನಿಸಿರಲಿಲ್ಲ. ಯಾವುದೇ ಹೋರಾಟಕ್ಕೆ, ಯಾವುದೇ ಪ್ರತಿಭಟನೆಗೆ ಹೊರಗಿನಿಂದ ಅತಿಥಿಗಳನ್ನು ಕರೆಸಬೇಕೆಂದಾಗಲೆಲ್ಲ ಮೊದಲು ನಮ್ಮ ತಲೆಗಳಲ್ಲಿ ಸುಳಿಯುತ್ತಿದ್ದ ಹೆಸರೇ ರಾಮದಾಸ್‌ರವರದು. 'ಲಂಕೇಶ್ ಪತ್ರಿಕೆ'ಆರಂಭವಾದ ಮೇಲಂತೂ ಲಂಕೇಶರಿಗೆ ತೀರ ಹತ್ತಿರವಾಗಿಬಿಟ್ಟಿದ್ದರು. ಸಿದ್ಧಾಂತದಲ್ಲಿ ರಾಮದಾಸ್ ಎಂದೂ ರಾಜಿಯಾಗಿದ್ದನ್ನು ನಾವು ಕಂಡಿಲ್ಲ. ಅವರ ವೈಚಾರಿಕತೆ, ಮಾನವೀಯತೆಯಲ್ಲಿ ಎಂದೂ ಒಡಕು ಮೂಡಿದ್ದನ್ನು ನಾವು ನೋಡಿಲ್ಲ. ಯಾವುದೇ ಜೀವಪರ ಚಳವಳಿಯಾದರೂ ರಾಮದಾಸ್ ಮುಂಚೂಣಿಯಲ್ಲಿ ನಿಂತು ಮಾತಾಡಿದರೆಂದರೆ ಆ ಚಳವಳಿಗೆ ಸ್ಪಷ್ಟತೆ ಬಂದುಬಿಡುತ್ತಿತ್ತು. ಈ ಕಾರಣದಿಂದಲೇ ಅದು ವಿಚಾರವಾದಿ ಚಳವಳಿಯಿರಬಹುದು, ರೈತ ಚಳವಳಿ, ದಲಿತ ಚಳವಳಿ, ಹಿಂದುಳಿದವರ ಚಳವಳಿ, ಕನ್ನಡ ಚಳವಳಿ, ಬಂಡಾಯ ಚಳವಳಿ ಯಾವುದೇ ಆದರೂ ರಾಮದಾಸ್ ಅದರ ಭಾಗವಾಗುತ್ತಿದ್ದರು.

ಪ್ರೊ. ನಂಜುಂಡಸ್ವಾಮಿ, ಲಂಕೇಶ್, ತೇಜಸ್ವಿಯಂತಹವರಿಗೆ ಅತ್ಯಂತ ನಿಕಟವಾಗಿದ್ದ ರಾಮದಾಸ್, ಈ ಎಲ್ಲಾ ತಿಕ್ಕಲರನ್ನು ಒಗ್ಗೂಡಿಸಬಲ್ಲ ಏಕೈಕ ಕೊಂಡಿಯಾಗಿದ್ದರು. ಜಾತಿಯೇ. ಇಲ್ಲದ ಮನುಷ್ಯನೊಬ್ಬನನ್ನು ನಾನು ನೋಡಿದ್ದೇನೆಂದರೆ ಅದು ರಾಮದಾಸ್ ಒಬ್ಬರನ್ನೇ!ಅವರ ಜಾತಿ ಮೂಲವನ್ನು ಕಂಡುಹಿಡಿಯಲು ಅನೇಕ ಸಲ ಯತ್ನಿಸಿ ಸೋತಿದ್ದೇನೆ. ಹೋರಾಟದಲ್ಲಿರುವ ಪ್ರತಿಯೊಬ್ಬರನ್ನು ತನ್ನ ಸಂಬಂಧಿಗಳಂತೆ ಕಂಡ ರಾಮದಾಸ್ ತಮ್ಮ ಸರ್ವಸ್ವವೂ ಆಗಿದ್ದ ಲಂಕೇಶ್, ಪ್ರೊಫೆಸರ್, ತೇಜಸ್ವಿಯವರು ಇಲ್ಲವಾದಂತೆಲ್ಲಾ ರಾಮದಾಸ್ ಕೂಡ ಹಂತ ಹಂತವಾಗಿ ಸಾವಿನ ಕಡೆ ನಡೆಯತೊಡಗಿದರು. ತೇಜಸ್ವಿ ಸತ್ತಮೇಲಂತೂ ಸ್ಪಷ್ಟವಾಗಿ ಸಾವಿನ

ಕಡೆ ಮುಖ ಮಾಡಿಬಿಟ್ಟ ರಾಮದಾಸ್ ಕೇವಲ ಮೂರು ತಿಂಗಳಲ್ಲೇ ತೇಜಸ್ವಿ ನಡೆದ ಹಾದಿಯಲ್ಲೇ ನಡೆದುಬಿಟ್ಟರು! ಮೈಸೂರೆಂದರೆ ರಾಮದಾಸ್ ಎಂದು ನಂಬಿದ್ದ ನಮ್ಮಂಥವರಿಗೆ ಮೈಸೂರು ಇಂದು ಖಾಲಿಯಾಗಿದೆ!

* * *

ಈ ಒಂದು ವರ್ಷದಲ್ಲಿ ರಾಮದಾಸ್ ನನಗೆ ನಾಲ್ಕು ಸಲ ಸಿಕ್ಕಿದ್ದರು. ಸಿದ್ಧರಾಮಯ್ಯನವರ ಪ್ರತಿಷ್ಠಿತ ಚಾಮುಂಡೇಶ್ವರಿ ಚುನಾವಣೆಯ ಸಂದರ್ಶನದ ದಿನ ವಿಶ್ಲೇಷಿಸಲು ಗೆಳೆಯ ಜಿ. ಎನ್. ಮೋಹನ್, ರಾಮದಾಸ್ ಮತ್ತು ನನ್ನನ್ನು ಈಟಿವಿಗೆ ಆಹ್ವಾನಿಸಿದ್ದರು. ನಮ್ಮೊಂದಿಗೆ ಜನವಾದಿ ಸಂಘಟನೆಯ ವಿಮಲಾ ಅವರನ್ನೂ ಆಹ್ವಾನಿಸಿದ್ದರು. ನಾವೆಲ್ಲ ಒಟ್ಟಿಗೆ ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಗೆ ಹೊರಟೆವು. ಏರ್‌ಪೋರ್ಟ್‌ಗೆ ಹೊರಡುವ ಮುಂಚೆ ಬೆಂಗಳೂರಿನ ನನ್ನ ಆಫೀಸಿಗೆ ಬಂದ ರಾಮದಾಸ್ ಅವರು ದಿನನಿತ್ಯ ತೆಗೆದುಕೊಳ್ಳಬೇಕಾದ ಔಷಧಿ ಮರೆತು ಬಂದಿದ್ದರು. ಬೆಂಗಳೂರಿಂದ ಹೊರಟ ಲಾಗಾಯ್ತು ರಾಮೋಜಿ ಸಿಟಿ ತಲುಪುವವರೆಗೆ ಅವರ ಔಷಧಿ ಹುಡುಕುತ್ತ ನಾವು ಒದ್ದಾಡುತ್ತಿದ್ದೆವೇ ಹೊರತು ಅವರು 'ಒಂದು ದಿನ ತಗೊಳ್ದೆ ಇದ್ರೆ ಪರವಾಗಿಲ್ಲ ಬಿಡ್ರಿ...'ಎಂದು ಸಿಗರೇಟು ಸೇದುತ್ತಾ ತಣ್ಣಗೆ ನಿಂತಿರುತ್ತಿದ್ದರು. ಅವರ ಆರೋಗ್ಯದ ಬಗ್ಗೆ ಅವರಿಗೆ ಅಷ್ಟು ನಿರ್ಲಕ್ಷ್ಯವಿತ್ತು. ಆದರೆ, ಆಗಾಗ ಮೈಸೂರಿಗೆ ಫೋನ್ ಮಾಡಿ ನಿರ್ಮಲ ಮೇಡಂರ ಆರೋಗ್ಯವನ್ನು ವಿಚಾರಿಸಿಕೊಳ್ಳುತ್ತಿದ್ದರು. ನಮ್ಮಿಬ್ಬರ ನಡುವೆ ಇದ್ದ ಗೊಂದಲವನ್ನು ಪರಿಹರಿಸಿಕೊಂಡೆವು. ಅವರು ರಾತ್ರಿಯಿಡೀ ಸಿಗರೇಟ್ ಸೇದುತ್ತಾ ಎದ್ದೇ ಇದ್ದರು.

ಬೆಳಿಗ್ಗೆ ನಾವು ಸ್ಟುಡಿಯೋದಲ್ಲಿ ಕನಿಷ್ಠ ಐದು ಗಂಟೆಗಳ ಕಾಲ ಕದಲದಂತೆ ಕೂರಬೇಕಿತ್ತು. ಗಂಟೆಗೆ ಎರಡು ಸಲವಾದರೂ ಟಾಯ್ಲೆಟ್ ಕಡೆ ಹೋಗುತ್ತಿದ್ದ ರಾಮದಾಸ್ ಐದು ಗಂಟೆಗಳ ಕಾಲ ಕದಲದೆ ಕೂತು ತಮ್ಮ ವಿಲ್‌ಪವರ್ ಅನ್ನು ಸಾಬೀತು ಪಡಿಸಿದರು! ನಮ್ಮಿಬ್ಬರಿಗೂ ಮೇಕಪ್ ಮಾಡುವಾಗ 'ಕಡಿಮೆ ಬಣ್ಣ ಬಳೀರಿ ನಾವಿಬ್ಬರೂ ಇರೋದೆ ಕಪ್ಪು, ನಮ್ಮ ಮುಖ ಬೆಳ್ಳಗಿರುವುದನ್ನು ನೋಡಿದರೆ ನಮ್ಮವರಿಗ್ಯಾರಿಗೂ ಗುರುತು ಸಿಗಲ್ಲ' ಎಂದು ಸೂರು ಎದ್ದುಹೋಗುವಂತೆ ನಗುತ್ತಿದ್ದರು.

ಅಂದು ನಾವು ಒಟ್ಟಿಗಿದ್ದ ಎರಡು ದಿನಗಳ ಒಡನಾಟದ ಪ್ರತಿಕ್ಷಣವೂ ನೆನಪಾಗುತ್ತೆ, ಮಂಜಾಗತ್ತೆ...

* * *

ಕಳೆದ ತಿಂಗಳು ಅಮೆರಿಕಾದಿಂದ ರೆಡ್ಡಿ ಬಂದ. ಅವನಿಗೆ ರಾಮದಾಸ್ ಅಂದರೆ ಪ್ರಾಣ. ನಮ್ಮೆಲ್ಲರಿಗಿಂತಲೂ ರಾಮದಾಸ್‌ರೊಂದಿಗೆ ಹೆಚ್ಚು ಆತ್ಮೀಯವಾಗಿದ್ದವನು ರೆಡ್ಡಿ. ಅವನ ಒಂದು ವಾರದ ಭಾರತ ಪ್ರವಾಸದಲ್ಲಿ ಒಂದು ದಿನ ಮೈಸೂರಿಗೆ ಹೋಗಿ ರಾಮದಾಸ್‌ರನ್ನು

ನೋಡಿ ಬರಬೇಕೆಂದು ಪಟ್ಟು ಹಿಡಿದ. ನಾವಿಬ್ಬರೂ ಹೊರಟೆವು. ಮೈಸೂರಿಗೆ ಹೊರಡುತ್ತಾ ಮಂಡ್ಯದಲ್ಲಿ ಎಚ್.ಎಲ್.ಕೇಶವಮೂರ್ತಿಯವರನ್ನು ಕರೆದೊಯ್ದೆವು. ದಾರಿಯುದ್ದಕ್ಕೂ ರಾಮದಾಸ್ ಬಗ್ಗೆಯೇ ಮಾತನಾಡುತ್ತಿದ್ದೆವು. ಮೈಸೂರು ತಲುಪಿ ಶಿವತೀರ್ಥನ್ ಮನೆಗೆ ಹೋಗಿ ಅಲ್ಲಿಂದ ರಾಮದಾಸ್ ಮನೆಗೆ ಹೋದೆವು. ತೇಜಸ್ವಿ ನಿಧನರಾದ ದಿನದಿಂದಲೂ ರಾಮದಾಸ್ ಜರ್ಝರಿತರಾಗಿ ಮಲಗಿಬಿಟ್ಟಿದ್ದರು. ನಾವು ಬಂದ ಸುದ್ದಿ ತಿಳಿದು ಎದ್ದು ಬಂದರು. ರಾಮದಾಸ್ ಅಷ್ಟು ವೀಕ್ ಆಗಿದ್ದನ್ನು ನಾನೆಂದೂ ಕಂಡಿರಲಿಲ್ಲ. ರಾಮದಾಸ್, ನಿರ್ಮಲ ಮೇಡಂ ಇಬ್ಬರೂ ಕೂತು ಒಂದು ಗಂಟೆಗೂ ಹೆಚ್ಚು ಕಾಲ ಮಾತನಾಡಿದರು. ನಾನು ಪೇಜಾವರ ವಿರುದ್ಧ ಕೇಸ್ ನಡೆಸುತ್ತಿದ್ದುದರ ಬಗ್ಗೆ ಪ್ರಸ್ತಾಪಿಸಿ ನನ್ನ ಬೆನ್ನುತಟ್ಟಿ ಮಾತನಾಡಿದರು. 'ನೋಡಿ, ತೇಜಸ್ವಿ ಹೋದಮೇಲೆ ಮಲಗಿದವರು ಈಗ ನಿಮ್ಮನ್ನೆಲ್ಲಾ ನೋಡಿ ಎದ್ದು ಬಂದಿದ್ದಾರೆ...' ಎಂದು ನಿರ್ಮಲ ಮೇಡಂ ಹೇಳಿದರು. (ನಿರ್ಮಲ ಮೇಡಂ ನನ್ನ ಅಧ್ಯಾಪಕಿಯಾಗಿದ್ದವರು) ಅವರಿಗೆ ಸ್ಟ್ರೈನ್ ಆಗಬಾರದೆಂದು ನಾವೇ ಬಲವಂತದಿಂದ ಎದ್ದು ಹೊರಟೆವು. ಅಂದು ರಾಮದಾಸ್ ಕುಳಿತಿದ್ದ ಜಾಗದಲ್ಲಿ ಗೋಡೆಯ ಮೇಲಿದ್ದ ಬುದ್ಧನ ಫೋಟೊ ಒಂದು ನನ್ನನ್ನು ತೀರ ಆಕರ್ಷಿಸಿತ್ತು. ಸುಂದರವಾದ, ನಿರ್ಮಲವಾದ ಬುದ್ಧ ನನ್ನನ್ನು ಆವರಿಸಿದ್ದ. ರಾಮದಾಸ್ ಗೇಟಿನವರೆಗೂ ಬಂದು ನಮ್ಮನ್ನು ಬೀಳ್ಕೊಟ್ಟರು.

ರೆಡ್ಡಿ ಹೊರಬಂದವನೇ 'ಇದು ನನ್ನ ಕಡೆಯ ರಾಮದಾಸ್ ಭೇಟಿ ಇರಬಹುದು 'ಎಂದ. ಭಾರದ ಧ್ವನಿಯಲ್ಲಿ, ಬೆಂಗಳೂರು ತಲುಪುವವರೆಗೂ ರಾಮದಾಸ್‌ರ ಅನಾರೋಗ್ಯ ನಮ್ಮನ್ನು ಕಾಡುತ್ತಿತ್ತು.

* * *

ಕಳೆದ ಶನಿವಾರ ಕಿದ್ವಾಯ್ ಆಸ್ಪತ್ರೆಯಲ್ಲಿದ್ದ ರಾಮದಾಸ್‌ರನ್ನು ಭೆಟ್ಟಿಯಾದೆ. ರಾಮದಾಸ್‌ರಿಗೆ ಶ್ವಾಸಕೋಶದ ಕ್ಯಾನ್ಸರ್ ಎಂದು ಅದಾಗ ತಾನೇ ಡಯಾಗ್ನೈಸ್ ಆಗಿತ್ತು ಕೀಮೋಥೆರಪಿ ಪಡೆದಿದ್ದ ರಾಮದಾಸ್ ತೀರ ಗೆಲುವಾಗಿ ಮಾಮೂಲಿನಂತೆ ಮಾತನಾಡುತ್ತಿದ್ದರು. ಅವರ ಹಾಸಿಗೆಯ ಮೇಲೆ ಖುಷವಂತ್‌ಸಿಂಗ್‌ರ 'ಟ್ರೈನ್ ಟು ಪಾಕಿಸ್ತಾನ್' ಪುಸ್ತಕವಿತ್ತು. ಅದೇ ಸಮಯಕ್ಕೆ ಎಂ.ಪಿ. ಪ್ರಕಾಶ್ ಬಂದರು. ವಿಪರೀತ ಮಾತನಾಡುತ್ತಿದ್ದ ರಾಮದಾಸ್‌ರನ್ನು ಪ್ರಕಾಶ್ 'ನೀವು ಇದೇ ರೀತಿ ಮಾತನಾಡುತ್ತಾ ಅಲ್ಲಿಗೆ (ಸ್ವರ್ಗಕ್ಕೊ, ನರಕಕ್ಕೋ)ಹೋಗುತ್ತೀರಿ. ಅಲ್ಲಿ ಈಗಾಗಲೇ ಪ್ರೊಫೆಸರ್, ಲಂಕೇಶ್, ತೇಜಸ್ವಿ ಎಲ್ಲಾ ಇದ್ದಾರೆ. ನೀವೆಲ್ಲ ಸೇರಿ ಅಲ್ಲೂ ಪ್ರತಿಭಟನೆ, ಹೋರಾಟ ಶುರುಮಾಡಿಬಿಡ್ತೀರೊ ಏನೋ...' ಎನ್ನುತ್ತಿದ್ದಂತೆ ರಾಮದಾಸ್ ಜೋರಾಗಿ ನಗುತ್ತಾ 'ಇಲ್ಲ ಕಣ್ರೀ ಅವ್ರೆಲ್ಲಾ ಅಲ್ಲಿಗೆ ಹೋಗಿರಲ್ಲ, ಇಲ್ಲೇ ಸುತ್ತಮುತ್ತ ಮರ, ಪಕ್ಷಿಗಳಲ್ಲಿ ಇರುತ್ತಾರೆ. ನಾನೂ ಅಲ್ಲಿಗೇ ಹೋಗ್ತಿನಿ....'ಎಂದರು. ಪ್ರಕಾಶ್ '....ನಿಮಗೆಲ್ಲೋ ಒಳ್ಳೆ ಮೆಡಿಸನ್ ಕೊಟ್ಟಿರಬೇಕು, ಅದಕ್ಕೆ ಇಷ್ಟು ಗಟ್ಟಿಯಾಗಿ ಮಾತಾಡ್ತಿದ್ದೀರಿ....' ಎಂದು ತಮಾಷೆ ಮಾಡುತ್ತಿದ್ದಂತೆ ರಾಮದಾಸ್ ತಮ್ಮ ಬೆಡ್ ಮೇಲೆಯೇ ಕೂರಿಸಿಕೊಂಡಿದ್ದ ನನ್ನನ್ನು

ತಬ್ಬಿ ಹಿಡಿದು, 'ಮೆಡಿಸನ್ ಅಲ್ಲ ಕಣ್ರೀ... ನನ್ನ ಸ್ಟ್ರೆಂಥು... ಇಂಥ ನಮ್ಮ ಹುಡುಗರು... ನೋಡಿ ಪೇಜಾವರನ ವಿರುದ್ಧ ಹೇಗೆ ಫೈಟ್ ಮಾಡುತ್ತಿದ್ದಾನೆ... ಇಂಥವರನ್ನು ನೋಡಿದರೆ ನನಗೆ ಶಕ್ತಿ ಬಂದುಬಿಡುತ್ತೆ...' ಅನ್ನುತ್ತಿದ್ದರು.

ಎಂ.ಪಿ.ಪ್ರಕಾಶ್ ಹೊರಟ ನಂತರ ಪ್ರೊ. ರವಿವರ್ಮಕುಮಾರ್ ಬಂದರು. ರಾಮದಾಸ್‌ರ ಆರೋಗ್ಯದ ಬಗ್ಗೆ ತೀರ ಕಾಳಜಿ ವಹಿಸಿದ್ದ ರವಿವರ್ಮಕುಮಾರ್, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆ ನೋಡಿಕೊಳ್ಳುತ್ತಿದ್ದ ಸ್ವಾಮಿಆನಂದ್ ಮತ್ತು ಅಳಿಯ ಓಂಕಾರ್ ನಿಜಕ್ಕೂ ರಾಮದಾಸ್‌ರಲ್ಲಿ ಜೀವ ಉಕ್ಕಿಸಲು ಕಾರಣರಾಗಿದ್ದರು. ಅಂದು ನನಗೆ ಊಟ ಮಾಡಿಸುವವರೆಗೂ ರಾಮದಾಸ್‌ರವರು ನನ್ನನ್ನು ಬಿಡಲಿಲ್ಲ.

ರಾಮದಾಸ್‌ರವರನ್ನು ಡಿಸ್ಚಾರ್ಜ್ ಮಾಡಿ ಮೂರು ವಾರ ಬಿಟ್ಟು ಬರಲು ಡಾಕ್ಟರ್ ಹೇಳಿದ್ದರು. ಮೆಡಿಸಿನ್ ಸರಿಯಾಗಿ ತೆಗೆದುಕೊಳ್ಳಬೇಕು, ಯಾವ ಕಾರಣಕ್ಕೂ ಸಿಗರೇಟು-ಗುಂಡು ಮುಟ್ಟಬಾರದು ಎಂದು ಸೂಚನೆ ನೀಡಿದ ರವಿವರ್ಮಕುಮಾರ್‌ರವರು 'ಇಷ್ಟೊಂದು ಮಾತಾಡಿದರೆ ಹೇಗೆ?ಇಷ್ಟು ಮಾತಾಡಿದರೆ ನಿಜಕ್ಕೂ ಸ್ಟ್ರೈನ್ ಆಗುತ್ತೆ... ನೀವು ಮಾತು ಕಡಿಮೆ ಮಾಡಬೇಕು...'ಎಂದು ಹೇಳುತ್ತಿದ್ದಂತೆ 'ಮಾತಾಡದೆ ಹೇಗಿರ್ಲಿ? ಮಾತಾಡದೆ ಇರೋದು ಅಂದರೆ ಸಾವು ಅಷ್ಟೆ...'ಎಂದ ರಾಮದಾಸ್ 'ಮಾತು ಜೀವ... ಮೌನ ಸಾವು ಕಣ್ರೀ... ನೋಡಿ ಈಗ ತೇಜಸ್ವಿ ಮೌನವಾದರು... ಹಾಗೇ ನಾನೂ ಕೂಡ...' ಎಂದರು ನಗುತ್ತಾ.

'ಮೂರು ವಾರಕ್ಕೆ ನೀವು ಬಂದಾಗ ಬರ್ತೀನಿ ಸಾರ್'ಎಂದು ಹೇಳಿ ಕೈಕುಲುಕಿ 'ಫೈಲನ್ನು ಮನೆಗೇ ಕೊಂಡೊಯ್ಯಿರಿ... ನೀವು ಬಂದಾಗ ಸುಲಭವಾಗುತ್ತೆ... ಇಲ್ಲದಿದ್ದಲ್ಲಿ ಈ ಫೈಲ್ ಹುಡುಕೋಕೆ ಆಸ್ಪತ್ರೆಯವರಿಗೆ ಎರಡು ಗಂಟೆ ಹಿಡಿಯುತ್ತೆ'ಅಂತ ಹೇಳಿ ನಾನು ಹೊರಟೆ.

ಇದು ಕಡೆಯ ಭೇಟಿ ಎಂದು ನನಗೆ ಕಿಂಚಿತ್ತೂ ಅನಿಸಿರಲಿಲ್ಲ.

* * *

ನಿನ್ನೆ ಗೆಳೆಯ ಸುಬ್ರಮಣ್ಯಂ ಮತ್ತು ಬಸವರಾಜ್‌ರೊಂದಿಗೆ ಮೈಸೂರಿಗೆ ಹೊರಟೆವು. ಕಳೆದ ತಿಂಗಳು ನಾನು, ರೆಡ್ಡಿ ಭೆಟ್ಟಿ ಮಾಡಿದ್ದ ಮನೆ 'ಚಾರ್ವಾಕ'ದಲ್ಲಿ ರಾಮದಾಸ್ ತಣ್ಣಗೆ ಮಲಗಿದ್ದರು. ಹಣೆಯ ಮೇಲೆ ಯಾವುದೇ ಜಾತಿ ಮತದ ಚಿಹ್ನೆಗಳಿರಲಿಲ್ಲ. ತಲೆಯ ಬಳಿ ಅಂದು ನನ್ನನ್ನು ಆಕರ್ಷಿಸಿದ್ದ ಬುದ್ಧನ ಫೋಟೊ. ಸಾವು-ಬದುಕುಗಳ ಎಲ್ಲಾ ರಹಸ್ಯಗಳನ್ನು ಜೀರ್ಣಿಸಿಕೊಂಡು ಮುಗುಳ್ನಗುವಂತೆ ಆ ವಿರಾಮಮೂರ್ತಿ ಕಾಣುತ್ತಿದ್ದ.

'ಅನ್‌ಸಂಗ್ ಹೀರೋ'ಒಬ್ಬರ ವಿದಾಯಕ್ಕೆ ಕನ್ನಡದ ಅತ್ಯಂತ ಹಿರಿಯ ಸಾಹಿತಿಯಿಂದ ಹಿಡಿದು ಈಗಷ್ಟೇ ಬರೆಯಲು ಆರಂಭಿಸಿದ ಸಾಹಿತಿಯವರೆಗೆ ಎಲ್ಲರೂ ನೆರೆದಿದ್ದರು. ರೈತಸಂಘ, ದಲಿತ ಸಂಘಟನೆಗಳ ನಾಯಕರು, ಕಾರ್ಯಕರ್ತರು, ಮಾನವೀಯ ಮೌಲ್ಯಗಳಲ್ಲಿ ನಂಬಿಕೆಯಿಟ್ಟವರೆಲ್ಲರೂ ಮೌನವಾಗಿ ರೋದಿಸುತ್ತಿದ್ದರು. ಅದೊಂದು ಕಂಡರಿಯದ ಯಾತ್ರೆ.

ಯಾವುದೇ ಸಂಪ್ರದಾಯ, ಕಂದಾಚಾರಗಳಿಲ್ಲದ ಅಂತ್ಯಕ್ರಿಯೆ ನಡೆಯುವಾಗ ಗೆಳೆಯ ಜೆನ್ನಿ ಹಾಡಿದ ಹಾಡು ಎಲ್ಲರ ಹೃದಯಗಳನ್ನೂ ತೇವಗೊಳಿಸಿತು.

ಅಲ್ಲಿಗೆ ಜೀವಪರ ಹೋರಾಟದ ಧ್ವನಿಯೊಂದರ ಅಧ್ಯಾಯ ಮುಗಿದಿತ್ತು... ಗೆಣೆಕಾರ ತೇಜಸ್ವಿ ಹಾದಿಯಲ್ಲೇ ರಾಮದಾಸ್ ಮೌನಕ್ಕೆ ಶರಣಾಗಿದ್ದರು.

# ನಿಷ್ಠುರನ ನಿರ್ಗಮನ

**ನಾಗತಿಹಳ್ಳಿ ಚಂದ್ರಶೇಖರ**

ಪ್ರೊ.ಕೆ.ರಾಮದಾಸ್ ಈಗ ಮಾತನಾಡದೆ ಮಲಗಿದ್ದರು. ಜಗಳಗಂಟ ಸ್ತಬ್ಧವಾಗಿದ್ದ. ತಕರಾರು ತೆಗೆದು ನ್ಯಾಯಕ್ಕೆ ಒತ್ತಾಯಿಸುತ್ತಿದ್ದ ಮನುಷ್ಯ ಈಗ ಅನಂತ ಮೌನದಲ್ಲಿ ಕರಗಿಹೋಗಿದ್ದ. ಸಾವಿರಾರು ಜನ ಎಲ್ಲೆಲ್ಲಿಂದಲೋ ಬರುತ್ತಿದ್ದರು. ಎಲ್ಲ ಚಳವಳಿಗಳಲ್ಲಿ ಕಂಡ ಮುಖಗಳು. ಹೋರಾಟದಲ್ಲಿ ನಡೆದ ಕಾಲ್ಗಳು. ಜಾಥಾಗಳಲ್ಲಿ ಎತ್ತಿದ ಕೈಗಳು. ರಾಮದಾಸ್‌ರ ಹಿಂದೆ ತಿರುಗಿದ, ಕೂಗಿದ ದನಿಗಳು. ಅಂತರ್ಜಾತಿ ಮದುವೆಗಳಲ್ಲಿ ಕೊರಳೊಡ್ಡಿದವರು, ಸಮ್ಮೇಳನ-ಸಂಕಿರಣಗಳಲ್ಲಿ ಸಿಕ್ಕವರು. ಕೋಮುಗಲಭೆ, ಜಾತಿ ಜಗಳ ನಡೆದ ಜಾಗಗಳಲ್ಲಿ ಧರಣಿ ನಡೆಸಲು ಬಂದಿದ್ದವರು. ಬರೆವವರು. ಪಾಠ ಹೇಳುವವರು. ಪತ್ರಕರ್ತರು. ರಾಜಕಾರಣಿಗಳು, ವಿದ್ಯಾರ್ಥಿಗಳು, ಸಂಘಟಕರು...

ಗಿರೀಶ್ ಬಂದು 'ರಾಮದಾಸ್ ಬಗ್ಗೆ ಪರ್ಸನಲ್ ನೋಟ್ ಬರೆದುಕೊಡಿ' ಎಂದ. ಇದು ಕಷ್ಟದ ಕೆಲಸ. ಕ್ಲೀಷೆಗಳು ಅಮರಿಕೊಳ್ಳುವ ಅಪಾಯ. ಹೋದ ಕೆಲವು ದಿನಗಳಲ್ಲಿ ಸಾಮಾಜಿಕ ನೆಲೆಯಲ್ಲಿ ಡಾ. ರಾಜ್ ಬಗ್ಗೆ, ಸಿಜಿಕೆ ಬಗ್ಗೆ, ತೇಜಸ್ವಿ ಬಗ್ಗೆ ಮತ್ತು ವೈಯಕ್ತಿಕ ನೆಲೆಯಲ್ಲಿ ಅಪ್ಪನ ಬಗ್ಗೆ, ಭಾವನ ಬಗ್ಗೆ ನೆನಪಿನ ವಿಷಾದ ಗೀತೆ ಹಾಡುತ್ತ ಹಾಡುತ್ತ ಸಾವು ಕರೆಯದೇ ಬರುವ ನೆಂಟನಂತಾಗಿದೆ. ತೀರಿಕೊಂಡ ಕೂಡಲೇ ಗರಿಗೆದರುವ ನೆನಪುಗಳನ್ನು ದಾಖಲಿಸುವುದು ಒಂದು ರೀತಿಯಲ್ಲಿ ಉಪಯುಕ್ತ ಶ್ರದ್ಧಾಂಜಲಿಯಾಗಬಹುದು. ಮತ್ತೊಂದು ಕಡೆ ಹಾಗೆ ದಾಖಲಿಸುವಾಗ ತೀರಿಕೊಂಡವರು ಎದುರಿಗಿಲ್ಲ ಅನ್ನುವ advantage ತೆಗೆದುಕೊಂಡು ಉತ್ಪ್ರೇಕ್ಷಿತ, ಅತಿ ಭಾವುಕತೆಗಳ ವಿವರಗಳ ಮೂಲಕ ತಾನೂ, ತೀರಿಕೊಂಡವರೂ ಎಷ್ಟು ಆಪ್ತರು ಎಂದು ಅವರು ತೀರಿಕೊಂಡ ಮೇಲೆ ಶಂಖ ಊದುವುದು. ಇದೆಲ್ಲ ಎಚ್ಚರದಿಂದ ನನಗೆ ಗೊತ್ತಿದ್ದ, ಗೊತ್ತಿರುವ ಪ್ರೊ.ರಾಮ್‌ದಾಸ್‌ರನ್ನು ನೆನಪಿಸಿಕೊಳ್ಳಲು ಯತ್ನಿಸುತ್ತೇನೆ.

ಇಲ್ಲಿರುವ ಹಳೆಯ ಫೋಟೋ ೧೯೮೫ರ ಆಗಸ್ಟ್ ಹದಿನೈದರ ಸಂಜೆ ತೆಗೆದದ್ದು. ರಾಮದಾಸ್, ವೈಕುಂಠರಾಜು, ಪ್ರೋಲಂಕಿ ನನ್ನ ಕೃತಿ ಬಿಡುಗಡೆಗೆ ಬಂದಿದ್ದರು. ರಾಮದಾಸ್‌ರ ಬಲಬದಿ ಕನ್ನಡಕ ಮತ್ತು ಹೊಟ್ಟೆಗಳಿಲ್ಲದೆ ಇರುವವ ನಾನೇ!ನನ್ನ ಮತ್ತು ರಾಮದಾಸ್‌ರವರ ಒಂದೆ ರಾಷ್ಟ್ರಪತಿಗಳ ಅಂಗರಕ್ಷಕ ಶಿಸ್ತಿನಿಂದ ನಿಂತಿರುವವರೇ ಜೆ. ಬಿ. ರಂಗಸ್ವಾಮಿ. ಆವತ್ತು ನನ್ನ ಜನ್ಮದಿನ. ಜನ್ಮದಿನದಂದು ಕೇಕು ಕತ್ತರಿಸಿ, ದೀಪ ಆರಿಸುವ ಚಾಳಿ ಬಿಟ್ಟು ಪುಸ್ತಕ ಬಿಡುಗಡೆ ಮಾಡುವುದೋ, ಅಂತರಜಾತಿ ಮದುವೆ ಮಾಡುವುದೋ, ಗಿಡ ನೆಡುವುದೋ, ರಕ್ತದಾನ ಮಾಡುವುದೋ ಆಗಬೇಕೆಂದು ಅಭಿವ್ಯಕ್ತಿ ವೇದಿಕೆಯನ್ನು ಆವತ್ತು ಹುಟ್ಟುಹಾಕಿದ್ದು. ಬರೋಬ್ಬರಿ ೨೨ ವರ್ಷಗಳಾಯಿತು. ಆವತ್ತು ದೀಪ ಹಚ್ಚಿ ಉದ್ಘಾಟಿಸಿದವರು ರಾಮದಾಸ್.ಪುಸ್ತಕ ಬಿಡುಗಡೆಗೆ ಅಂತ ಕರೆದರೂ ಅವರು ಕೃತಿ ಕುರಿತು ಹೆಚ್ಚು ಮಾತಾಡದೆ ನಮ್ಮ ಸಮಾಜದ ಅನಿಷ್ಟಗಳನ್ನೇ ಕುರಿತು ಬಹಳ ಮಾತನಾಡಿದರು. ಅವರ ಕೇಂದ್ರಪ್ರಜ್ಞೆ ಸಮಾಜವೇ ಆಗಿರುತ್ತಿತ್ತು. ರಾಮದಾಸ್ ಸದಾ ವಿರೋಧಪಕ್ಷದ ಪ್ರತೀಕ. ಎಲ್ಲ ಸರಿ ಇದೆ, ಸ್ವಸ್ಥವಾಗಿದೆ ಎಂದು ತೂಕಡಿಸಲು ಯಾರನ್ನೂ ಬಿಡದೆ ಸದಾ ಜಾಗೃತವಾಗಿರಿಸಲು, ಛಾಟಿ ಹಿಡಿದು ನಿಂತೇ ಇರುತ್ತಿದ್ದರು.

ನನಗೆ ರಾಮದಾಸ್‌ರ ಪರಿಚಯವಾದದ್ದು ಮೈಸೂರು ಮಹಾರಾಜ ಕಾಲೇಜಿನಲ್ಲಿ. ಅವರು ನನಗೆ ತರಗತಿಯ ನೇರ ಗುರುಗಳಾಗಿರಲಿಲ್ಲ. ಅನಂತಮೂರ್ತಿ.ತೇಜಸ್ವಿ, ಲಂಕೇಶರಂತೆ ಮಾನಸ ಗುರುಗಳು. ನಾನು ಬಿ.ಎ ಮುಗಿಸಿದ್ದು ೧೯೮೨ರಲ್ಲಿ. ಮಹಾರಾಜ ಸಂಜೆ ಕಾಲೇಜಿನಲ್ಲಿ. ಬೆಳಗಿನ ಹೊತ್ತು ಬೇರೇನೋ ಕೆಲಸ ಮಾಡುತ್ತಿದ್ದೆ. ಸಹಜವಾಗಿ 'ನಾನು ಮಹಾನ್ ಶೋಷಿತ, ಅನೇಕ ಸೌಲಭ್ಯಗಳಿಂದ ವಂಚಿತ'ಎಂಬ ಪ್ರಜ್ಞೆ ಗಾಢವಾಗಿತ್ತು. ಆ ವೇಳೆಗೆ ಪ್ರಾರಂಭವಾಗಿದ್ದ ಲಂಕೇಶ್ ಪತ್ರಿಕೆ ನಮ್ಮ ಪ್ರಜ್ಞೆಗೆ ಹೇಳಿಮಾಡಿಸಿದ ಅಭಿವ್ಯಕ್ತಿ ಮಾಧ್ಯಮದಂತಿತ್ತು. ರಾಮದಾಸ್ ಅವರ ಜತೆಗಿನ ಒಡನಾಟ ಇನ್ನಷ್ಟು ದಟ್ಟವಾಗತೊಡಗಿದ್ದು ಲಂಕೇಶ್ ಪತ್ರಿಕೆಯಲ್ಲಿ ನಾನು ಅನಿಯಮಿತವಾಗಿ ಬರೆಯತೊಡಗಿದ ಮೇಲೆಯೇ. ಆಗೊಮ್ಮೆ ಈಗೊಮ್ಮೆ ಬರೆದರೂ, ಬರವಣಿಗೆಯ ಉಮೇದು ಸಿಕ್ಕಿದ್ದು ಲಂಕೇಶ್ ಪತ್ರಿಕೆಯಿಂದಲೇ. ರಾಮದಾಸ್‌ರು ಲಂಕೇಶರ ಶಿಷ್ಯರಾಗಿದ್ದರೂ ಕೆಲವೊಮ್ಮೆ ಅವರೇ ಗುರುಗಳಂತೆ ಕಾಣಿಸುತ್ತಾ ಇದ್ದರು. ರಾಮದಾಸ್ ಉದ್ಘಾಟಿಸಿದ ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆಗೆ ನಾಡಿನ ಎಲ್ಲ ಚಿಂತಕರೂ ಬಹುತೇಕ ಬಂದಿದ್ದಾರೆ. ವೇದಿಕೆಯ ಚಟುವಟಿಕೆಗಳನ್ನು ನಾಗತಿಹಳ್ಳಿಗೂ ವಿಸ್ತರಿಸಲಾಗಿದೆ. ಆದರೆ, ಒಂದೇ ಒಂದು ವರ್ಷವೂ ಕಾರ್ಯಕ್ರಮ ನಿಲ್ಲಿಸಿಲ್ಲ. ಸರ್ಕಾರದಿಂದ ಹಣ ಬೇಡಿಲ್ಲ. ಸಂಸ್ಕೃತಿ ಇಲಾಖೆಯ ನೆರವು ಪಡೆದಿಲ್ಲ. ಇದು ನಮಗೆ ರಾಮದಾಸ್ ಅವರಂಥ ಅಪ್ಪಟ ಹೋರಾಟಗಾರರು ಹಚ್ಚಿಕೊಟ್ಟ ದೀಪ. ಅದು ಪ್ರತಿ ಆಗಸ್ಟ್ ಹದಿನೈದರಂದು ಸಾಂಕೇತಿಕವಾಗಿ ಉರಿಯುತ್ತಲೇ ಇದೆ.

ಉದ್ಯೋಗ ಅರಸಿ ಬೆಂಗಳೂರಿಗೆ ಬಂದಾಗ ಲಂಕೇಶರು ಅಂತಃಕರಣ ತೋರಿ ಪತ್ರಿಕೆಯಲ್ಲೇ ಕೆಲಸ ಮಾಡು ಅಂತಿದ್ದರು. ಅಷ್ಟರಲ್ಲಿ ನನಗೆ ನ್ಯಾಯಾಲಯದಲ್ಲಿ ಗುಮಾಸ್ತಗಿರಿ ಸಿಕ್ಕಿತು. ಲಂಕೇಶ್ ಪತ್ರಿಕೆಗೆ ಮಂಗಳವಾರದ ವಾರಾಂತ್ಯದ ಭೇಟಿ. ಲಂಕೇಶ್ ಮೇಷ್ಟ್ರು ಊರಿನಿಂದ

ಹೊರಗೆ ಹೋಗುವಾಗ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಹಾಗೆ ಲಂಕೇಶರೊಟ್ಟಿಗೆ ರಾಮದಾಸರ ಮೈಸೂರಿನ ಮನೆಗೆ ಹೋಗಿದ್ದು ಅಸಂಖ್ಯಬಾರಿ. ಮೇಷ್ಟ್ರಿಗೆ ರಾಮದಾಸ್ ಎಂದರೆ ಅಪಾರವಾದ ಗೆಳೆತನ. 'ಗೆಳೆತನ'ಅನ್ನುವ ಪದ ಬೇಕೆಂದೇ ಬಳಸಿದ್ದೇನೆ. ಅದರ ಸಂಬಂಧವನ್ನು ಬೇರಾವ ಪದವೂ ವಿವರಿಸಲಾಗದು. ಪತ್ರಿಕೆಯ ಹೂರಣ ಕುರಿತು ರಾಮದಾಸ್ ಆಳವಾಗಿ ಚರ್ಚಿಸುತ್ತಿದ್ದರು. ಸಭೆಗಳಲ್ಲಿ ಪತ್ರಿಕೆ ಕುರಿತು ಅನೇಕ ಬಾರಿ ಅವರೇ ಮಾತನಾಡಬೇಕಾದಾಗ ತಮ್ಮನ್ನು ತಾವು 'ನಿಲಯದ ಕಲಾವಿದರು'ಎಂದು ಗೇಲಿ ಮಾಡಿಕೊಳ್ಳುತ್ತಿದ್ದರು. ಲಂಕೇಶರ, ಲಂಕೇಶ್ ಪತ್ರಿಕೆಯ ಸಾಕ್ಷಿಪ್ರಜ್ಞೆಯಂತಿದ್ದರು. ಅಲ್ಲಿ ಭಟ್ಟಂಗಿತನವಿರಲಿಲ್ಲ. ಹುಸಿಭಕ್ತಿ, ಹುಸಿಭಾವುಕತೆ ಇರಲಿಲ್ಲ. ಸಮಾಜವನ್ನು ಸರಿಪಡಿಸುವ ಹಟಮಾರಿತನದ ಜೊತೆಗೇ ಇಲ್ಲಿನ ಕಠೋರ ವಾಸ್ತವಗಳ ಅರಿವಿತ್ತು. ಯಾವುದನ್ನೂ ರೊಮ್ಯಾಂಟಿಸೈಸ್ ಮಾಡದೆ ನೋಡುವ ನಿರ್ಭಾವುಕ ನೋಟವಿತ್ತು. ವಾರಭವಿಷ್ಯ, ಜಾಹೀರಾತುಗಳಂಥ ಸುಳ್ಳುಗಳಿಲ್ಲದೆ ಪತ್ರಿಕೆ ನಡೆಸಲು ಲಂಕೇಶರಿಗೆ ಇಂಬಾಗಿ ನಿಂತವರು ರಾಮದಾಸ್. ಮನುಷ್ಯರ ಬಗೆಗಿನ ಕಾಳಜಿ, ಸಮಾಜದ ಬಗೆಗಿನ ಕಾಳಜಿ ಅವರ ಬದುಕಿನ ಜೀವಸೆಲೆಗಳಾಗಿದ್ದವು. ಭೂಗಳ್ಳರು, ಸಮಾಜದ್ರೋಹಿಗಳು, ಕರ್ಮಠರು, ಪುಢಾರಿಗಳು, ಮೂಲಭೂತವಾದಿಗಳು, ಭ್ರಷ್ಟರು ರಾಮದಾಸರನ್ನು ಕಂಡರೆ ಬೆಚ್ಚಿಬೀಳುತ್ತಿದ್ದರು.

'ಪ್ರಗತಿರಂಗ'ಸೋಲು ಖಚಿತವಾಗಿದ್ದರೂ ನಡೆಸಿದ ಒಂದು ರಾಜಕೀಯ ಪ್ರಯೋಗದಂತಿತ್ತು. ಇದರ ಕೆಲವು ಸಭೆಗಳಿಗೆ ರಾಮದಾಸ್ ಮತ್ತು ಲಂಕೇಶ್‌ರೊಟ್ಟಿಗೆ ಹೋಗಿದ್ದೆ. ಉತ್ತಮ ಭಾಷಣಕಾರರಾಗಿದ್ದ ರಾಮದಾಸ್ ಲೇಖಕರಾಗಿರಲಿಲ್ಲ. ಉತ್ತಮ ಲೇಖಕರಾಗಿದ್ದ ಲಂಕೇಶ್, ಭಾಷಣಕಾರರಾಗಿರಲಿಲ್ಲ. ಹೀಗಾಗಿ ಅವರಿಬ್ಬರೂ ಒಗ್ಗೂಡದೆ ಏನು ಮಾಡಿದರೂ ಅದು ಪರಿಪೂರ್ಣ ಅನ್ನಿಸುತ್ತಿರಲಿಲ್ಲ. ಭಣಗುಡುವ ಖಾಲಿ ಕುರ್ಚಿಗಳ ನಡುವೆ ಕುಳಿತ ಒಬ್ಬಿಬ್ಬರು ಪ್ರೇಕ್ಷಕರಿಗೇ ಹೋರಾಟದ ಉತ್ಸಾಹದ ಮಾತುಗಳನ್ನಾಡುತ್ತಿದ್ದರು ರಾಮದಾಸ್. ಇದು ಜನಪ್ರಿಯವಲ್ಲದ ಕಾಯಕ. ಸಾಮುದಾಯಿಕ ಬದುಕಿನಲ್ಲಿ ಚುರುಕುತನ, ಪ್ರತಿಭಟನೆ, ಕ್ರಿಯಾಶೀಲತೆ ಸತ್ತೇ ಹೋಗಿವೆ, ಈಗ ಉಚಿತ ಸಾಲ ಮೇಳ, ಉಚಿತ ನಿವೇಶನ ಹಂಚಿಕೆ ಏನಾದರೊಂದು 'ಉಚಿತ'ವಾಗಿ ಸಿಗುತ್ತದೆ ಎನಿಸಿದರೆ ಮಾತ್ರ ಜನ ಸೇರುತ್ತಾರೆ. ಮಾತು ಮಾಂತ್ರಿಕರ ಮೋಸ ಅಂತ ಗೊತ್ತಾಗಿದೆ. ಯಾರಾದರೊಬ್ಬ ವೇದಿಕೆಯ ಮೇಲೆ ಮಾತನಾಡತೊಡಗಿದರೆ, ಅವನ ಮಾತಿನ ಮೂರನೆ ವಾಕ್ಯ, ಏರುಸ್ತರಕ್ಕೆ ಹೋಗುತ್ತಿದ್ದಂತೆ ಅವನನ್ನು ಸಂದೇಹಿಸಿ ತಿರಸ್ಕರಿಸಿ ಜಾಗ ಖಾಲಿ ಮಾಡುತ್ತಾರೆ. ಮಾತು ಖಾಲಿ ಸದ್ದಿನಂತಾಗಿದೆ. ಆದರೆ, ರಾಮದಾಸ್ ಮಾತು ಹಿಡಿದುಕೂರಿಸುತ್ತಿತ್ತು. ಅದು ಕಾಫಿ ಶಾಪ್‌ನಲ್ಲಾಗಲೀ, ಗುಂಡಿನ ಕೂಟವಾಗಿರಲಿ, ಸಾರ್ವಜನಿಕ ಸಭೆಯಾಗಿರಲಿ ರಾಮದಾಸ್ ಲಯಬದ್ಧವಾಗಿ ಆದರೆ ಆಕ್ರಮಣಕಾರಿಯಂತೆ, ತನ್ನ ಮಾತುಗಳು ಜೋಗುಳವಾಗದಂತೆ, ಚಿಂತನೆಗೆ ಸಾಣೆ ಹಿಡಿಯುವಂತೆ ಮಾತನಾಡುತ್ತಿದ್ದರು. ಆಳುವ ಪ್ರಭುಗಳು ತಮ್ಮ ಮಿತ್ರರಾಗಿದ್ದಾಗಲೂ, ಭ್ರಷ್ಟ ಅಧಿಕಾರಿ

ತನ್ನ ಮಿತ್ರನಾಗಿದ್ದಾಗಲೂ ಅವರ ಪ್ರತಿಭಟನೆ, ಪ್ರಶ್ನೆಗಳು ಯಾವ ಮುಲಾಜೂ ಇಲ್ಲದಂತೆ ಅಪ್ಪಳಿಸುತ್ತಿದ್ದವು. ಈಗಲೂ ಅವರ ದನಿ ಅದೆಷ್ಟೋ ಕಿವಿಗಳಲ್ಲಿ ಚಂಡೆಯ ಸದ್ದಿನಂತೆ ಉಳಿದಿದೆ.

ಬದನವಾಳು ಮತ್ತು ನಮ್ಮ ಹಳ್ಳಿಯಲ್ಲಿ ದಲಿತರ ಮೇಲೆ ಬೇರೆ ಬೇರೆ ಸ್ವರೂಪದ ದೌರ್ಜನ್ಯವಾದಾಗ ರಾಮದಾಸ್, ಲಂಕೇಶ್ ಮತ್ತು 'ದುಷ್ಟಕೂಟ'ವೆಲ್ಲ ಹಳ್ಳಿಗೇ ಬಂದಿದ್ದರು. ಇವರು ನಗರದಲ್ಲಿ ಕುಳಿತು ಪತ್ರಿಕಾಗೋಷ್ಠಿ ಕರೆದು ಸೇಫ್ ಆಗಿ ಪ್ರತಿಭಟಿಸುವ ಬುದ್ಧಿಜೀವಿಗಳಾಗಿರಲಿಲ್ಲ. ನೇರವಾಗಿ ಗಲಭೆ ನಡೆದ ಜಾಗಕ್ಕೆ ಹೋಗಿ ಜನಾಭಿಪ್ರಾಯ ಸಂಗ್ರಹಿಸುವುದು, ಅದನ್ನು ಅರ್ಥೈಸಿ ಅದೇ ಊರಲ್ಲಿ ಸಭೆ ನಡೆಸುವುದು, ಅಷ್ಟೇ ನಿಷ್ಠುರವಾಗಿ ಮಾತನಾಡುವುದು ರಾಮದಾಸ್ ಅವರಿಗಿತ್ತು. ಯಾವ ಪೊಲೀಸರ ರಕ್ಷಣೆ ಇಲ್ಲದೆ ಬಂದು ಮಾತನಾಡಲು ಆತ್ಮಸ್ಥೈರ್ಯವೊಂದೇ ಆಸ್ತಿ. ಪೇಪರಿನವರು ಅಂದರೆ ಹಳ್ಳಿಗರೂ ಕೂಡ ವಿಚಿತ್ರವಾಗಿ ನೋಡುತ್ತಿದ್ದರು, ನಮ್ಮೂರಿನವನೊಬ್ಬ ಅವರು ಭಾಷಣ ಮಾಡಿ ಸುಸ್ತಾಗಿದ್ದಾಗ ಎಳನೀರು ಕೆತ್ತಿ ಕೊಟ್ಟ. ರಾಮದಾಸ್ 'ನಿಮ್ಮಂಥ ಹುಡುಗ್ರೆಲ್ಲ ಸೇರಿ ಹಳ್ಳೀನ ಸರ್ಯಾಗಿ ನೋಡಿಕೋಬೇಕು ಕಣ್ರಯ್ಯಾ'ಅಂದರು. 'ಬುಡಿಸಾ ನೋಡಕತ್ತಿವಿ' ಎಂದ. ವಾಸ್ತವವಾಗಿ ಅವನೇ ದೌರ್ಜನ್ಯ ನಡೆಸಿದ್ದ ದುಷ್ಟನಾಗಿದ್ದ! ಇಂಥ ವಿರೋಧಾಭಾಸಗಳುಅನೇಕ ಎದುರಾಗುತ್ತಿದ್ದವು.

ಮಾತು ಪ್ರತಿಭಟನೆಯ ಸಂಕೇತದಂತೆಯೇ ಚಮತ್ಕಾರಿಯ ಚೋದ್ಯ ಕೂಡ. ಚೆನ್ನಾಗಿ ಕೂತು ಕಲಿತು ಅದನ್ನೇ ವೃತ್ತಿಯಾಗಿಸಿ ಬದುಕುವ ಅನೇಕರಿದ್ದಾರೆ. ಆದರೆ, ರಾಮದಾಸ್‌ಗೆ ಮಾತು ಬಂಡವಾಳವಾಗಿರಲಿಲ್ಲ; ಪ್ರತಿಭಟನೆಯ ದನಿಯಾಗಿತ್ತು. ಅದರಿಂದ ಅವರು ಪದವಿ, ಕೀರ್ತಿ, ಅಕಾಡೆಮಿ ಪ್ರಶಸ್ತಿ, ಅಧ್ಯಕ್ಷಗಿರಿ ಗಿಟ್ಟಿಸಲಿಲ್ಲ. ಇವತ್ತು ಮಾತಿನ ಮಲ್ಲರು ಮರುಳು ಮಾಡುವ ಕಲೆಯನ್ನು ಕರಗತ ಮಾಡಿಕೊಂಡು ಹುಸಿ ರೋಮಾಂಚನ ಹುಟ್ಟಿಸಬಲ್ಲರು; ವಿಧಾನಸಭೆಯ ಹೊರಗೂ-ಒಳಗೂ. ಆದರೆ, ರಾಮದಾಸ್‌ರ ದನಿ, ಕ್ರಿಯಾಶೀಲತೆ ಸ್ವಾಭಿಮಾನದ ಪ್ರತೀಕವಾಗಿತ್ತು. ಸ್ವಂತ ತೆವಲಿಗೆ ಅವರು ಸಿಡಿದೇಳುತ್ತಿರಲಿಲ್ಲ. ಸಿದ್ಧಾಂತದ ಹೊರಗುಳಿದು ಅರಚುತ್ತಿರಲಿಲ್ಲ. ಆದ್ದರಿಂದಲೇ ಅವರ ಮಾತು ಲಂಕೇಶರ ಆವತ್ತಿನ ಪತ್ರಿಕೆ ಇದ್ದಂತೆಯೇ, ತೇಜಸ್ವಿಯವರ ಸಾಹಿತ್ಯದಂತೆಯೇ ಸಮಾಜದ ಅಗತ್ಯವಾಗಿತ್ತು. ಅದು ಎಲ್ಲ ಕಾಲದ ಅಗತ್ಯ ಕೂಡಾ.

# ಧೈರ್ಯವಂತನ ಧಾವಂತ

ಬಸವರಾಜು

'ಲಂಕೇಶು, ತೇಜಸ್ವಿ, ನಂಜುಂಡಸ್ವಾಮಿ ಹೋದ್ಮೇಲೆ ನಮ್ಮ ಐಡೆಂಟಿಟಿನೇ ಇಲ್ಲ ಕಣ್ರಿ... ಮುಖರಹಿತ ವ್ಯಕ್ತಿಗಳ ಥರ ಸುಮ್ಮನೆ ಓಡಾಡಿಕೊಂಡಿದ್ದೀವಿ...'

ಹತ್ತು ದಿನಗಳ ಕೆಳಗೆ ಕಿದ್ವಾಯಿ ಆಸ್ಪತ್ರೆಯಲ್ಲಿ ರಾಮದಾಸ್‌ರನ್ನು ಕಂಡಾಗ ಧ್ವನಿ ಕೊಂಚ ಕುಗ್ಗಿತ್ತು. ಅನಾಥಪ್ರಜ್ಞೆ ಕಾಡಲಾರಂಭಿಸಿತ್ತು.

'ಇವ್ರಿಗೆ ನಾನೇನ್ ಮಾಡಿದ್ದೀನಿ, ಈ ಪ್ರೀತಿಗೆ ನಾನು ಏನ್ ಹೇಳ್ಬೇಕು ಅಂತಾನೆ ಅರ್ಥ ಆಗ್ತಿಲ್ಲ...'

ಆಸ್ಪತ್ರೆಗೆ ಅಡ್ಮಿಟ್ ಆಗಿದಾರೆ ಅಂತ ವಿಷಯ ತಿಳಿದು ನೋಡಲು ಬರುತ್ತಿದ್ದ ಸ್ನೇಹಿತರು, ಅಭಿಮಾನಿಗಳು, ಹಿತೈಷಿಗಳು, ಶಿಷ್ಯರು ತೋರಿದ ಪ್ರೀತಿಗೆ ರಾಮದಾಸ್ ಕರಗಿಹೋಗಿದ್ದರು. ಮರುಕ್ಷಣವೇ ಅದೇ ಎಂದಿನ ಧಾಟಿಯಲ್ಲಿ, 'ಸಾಕು ಬಿಡ್ರಿ... ಇದಕ್ಕಿಂತ ಇನ್ನೇನು ಬೇಕು ನನ್ಗೆ...'ಎಂದರು.

ಅಂದರೆ, ಸಾವಿಗೆ ಸಿದ್ಧರಾಗಿದ್ದರು. ಮಾನಸಿಕವಾಗಿ ಎಂದೋ ನಿರ್ಧರಿಸಿಕೊಂಡಂತೆ ಕಾಣುತ್ತಿದ್ದರು.

ರಾಮದಾಸ್‌ರನ್ನು ಕಂಡರೆ ಲಂಕೇಶರಿಗೆ ಅತಿ ಪ್ರೀತಿ. ಆದರೆ ರಾಮದಾಸರಿಗೆ ಲಂಕೇಶ್-ನಂಜುಂಡಸ್ವಾಮಿ-ತೇಜಸ್ವಿ ಮೂವರು ಇಷ್ಟ. ವಿಚಾರವಂತಿಕೆ, ಬುದ್ಧಿಮತ್ತೆಯಲ್ಲಿ ಮೂವರೂ ಮೂರು ದಿಕ್ಕುಗಳು. ಐಲುತನ, ಉಡಾಫೆ, ವ್ಯಂಗ್ಯಕ್ಕೆ ಮೂವರೂ ಹೆಸರುವಾಸಿ. ಮೂವರನ್ನೂ ಸಂಭಾಳಿಸುವುದು, ಸಂಭಾಳಿಸುವಾಗ ನೋವು,ಅವಮಾನ, ಆರೋಪಗಳಿಗೆ ಗುರಿಯಾಗುವ ಸರದಿ ಮಾತ್ರ ರಾಮದಾಸ್‌ರವರದಾಗಿತ್ತು.

'ಲಂಕೇಶ್ ಭಟ್ಟಂಗಿ ದಲ್ಲಾಳಿ.... ನನ್ಮೇಲೆ ಬರಸೋದ್ರಲ್ಲಿ ನಿಮ್ದೂ ಕೈವಾಡ ಇದೆ ಅಂತ ತೇಜಸ್ವಿ ನನ್ಜೊತೆ ಮಾತು ಬಿಟ್ರು...ನನ್ಗೆ ತುಂಬಾನೇ ನೋವಾಯ್ತು.. ನನ್ನ ಕಷ್ಟ ಇವರ್‍ಯಾರಿಗೂ

ಅರ್ಥಾನೇ ಆಗ್ತಿರಲಿಲ್ಲ... ಕಾಂಪ್ಲೆಕ್ಸ್ ಪರ್ಸನಾಲಿಟೀಸ್, ತಿಕ್ಕಲುಗಳು ಕಣ್ರೀ... ಇವ್ರೆಲ್ಲ ತೆ ಇದ್ವಲ್ಲಾ ಹೇಳಿ...'

ಇಂತಹ ರಾಮದಾಸ್ ನನಗೆ ಪರಿಚಯವಾಗಿದ್ದು ಲಂಕೇಶರಿಂದ. ಪತ್ರಿಕೆ ಕೆಲಸ ಮುಗಿಸಿ ಮೈಸೂರಿಗೆ ರಾಮದಾಸ್ ಮನೆಗೆ ಹೋಗುವುದು, ಅಲ್ಲಿಗೆ ದೇವನೂರು, ಶಿವತೀರ್ಥನ್. ಶ್ರೀರಾಮ್ ಬರುವುದು. ಒಂದಷ್ಟು ಗುಂಡು ಹಾಕಿ ಹರಟೆ ಹೊಡೆಯುವುದು. ಗುಂಡು ಹೆಚ್ಚಾದಾಗ. ಮಾತು ಅತಿಯಾದಾಗ ಒಂದೊಂದು ಸಲ ಜಗಳ, ಮನಸ್ತಾಪ. ರಾತ್ರಿ ಎಷ್ಟು ಹೊತ್ತಾದರೂ ಸರಿ, ಸಡನ್ನಾಗಿ ಸೆಟಗೊಂಡು ಎದ್ದು ಹೊರಟೇಬಿಡುತ್ತಿದ್ದರು- ಅಸಹನೆಯ ಮೂಟೆಯಂತಿದ್ದ ಲಂಕೇಶರು. ಮಾರನೇ ದಿನ ಬೆಳಗ್ಗೆ ಅತ್ತ ಮೈಸೂರಿನಿಂದ ಕ್ಷೇಮ ಸಮಾಚಾರ ಕೇಳಲು ಫೋನ್ ಮಾಡುತ್ತಿದ್ದರು-ಮಮತಾಮಯಿ ರಾಮದಾಸರು.

ಇವರ ಒಡನಾಟದಲ್ಲಿ ಬಲಿಯುತ್ತಿದ್ದ ನಾನು ಇವರೆಲ್ಲರಿಗಿಂತ ತೀರಾ ಚಿಕ್ಕವನು. ಆದರೆ. ಅವರು ತೋರುತ್ತಿದ್ದ ಪ್ರೀತಿ ಬ್ರಹ್ಮಾಂಡ. ಹೀಗೆ ರಾಮದಾಸ್‌ರ ಪ್ರೀತಿ, ಪ್ರಭಾವಲಯದಲ್ಲಿ ಇಪ್ಪತ್ತು ವರ್ಷಕಳೆದರೂ ನನಗಿಂತ ರಾಮದಾಸ್‌ರನ್ನು ತೀರಾ ಹತ್ತಿರದಿಂದ ಬಲ್ಲವರು ಹಲವರಿದ್ದಾರೆ. ಅದರಲ್ಲೂ ನಮ್ಮ ಸ್ವಾಮಿ ಆನಂದ್ ಅವರ ಮನೆ ಮಗನೇ ಆಗಿಹೋಗಿದ್ದಾರೆ. ಅಂಥವರು ಆಪ್ತವಾಗಿ ಕಂಡರಿಸುವುದು ಈ ಕ್ಷಣಕ್ಕೆ ಸೂಕ್ತವಾದುದು ಎಂಬ ಅರಿವಿದ್ದರೂ, ಒಂದೇ ದಿನದಲ್ಲಿ ಇಡೀ ಸಂಚಿಕೆ ರೂಪಿಸುವ ಅನಿವಾರ್ಯತೆಗೊಳಗಾಗಿ ಬಲ್ಲವರಿಂದ ಬರೆಸುವ ಸಾಹಸಕ್ಕೆ ಕೈ ಹಾಕಬೇಕಾಯಿತು. ಆತಂಕ, ನೋವು. ವಿಷಾದಗಳಿಂದಲೇ ಸಂಚಿಕೆ ರೂಪಿಸಬೇಕಾಯಿತು.

ರಾಮದಾಸರ ಜಾತಿ ಯಾವುದೆಂದು ಯಾರಿಗೂ ಗೊತ್ತಿಲ್ಲ. ಅವರ ಸಂಪರ್ಕಕ್ಕೆ ಬಂದವರೂ ಅದನ್ನು ಕೇಳಲಿಲ್ಲ. ಜಾತ್ಯತೀತರತ್ತ ಅವರ ಒಲವು, ಜಾತ್ಯತೀತರ ಪರವಾಗಿರುವುದು ಅವರ ಬದ್ಧತೆ. ಅದರಲ್ಲೂ ಜಾತಿ ತೊರೆದು ಮದುವೆಯಾದವರನ್ನು ಬಿಗಿದಪ್ಪಿಕೊಂಡು ಭಾರೀ ಬೆಂಬಲಿಸುತ್ತಿದ್ದರು. ಅವರ ಮನೆ ಅಂತಹ ನೂರಾರು ಅಂತರಜಾತಿಯ ಮದುವೆಗಳಿಗೆ ಸಾಕ್ಷಿಯಾಗಿತ್ತು.

ಅಂತಹ ಒಂದು ಅಂತರಜಾತಿಯ ಮದುವೆಯ ನೆನಪೊಂದು ಇಲ್ಲಿದೆ.

ಬೆಂಗಳೂರಿನ ಮಧ್ಯಮವರ್ಗದ ಮುಸಲ್ಮಾನ ಯುವಕ ಮತ್ತು ರಾಜಕೀಯವಾಗಿ, ಆರ್ಥಿಕವಾಗಿ ಬಲಾಢ್ಯರಾದ ನಾಯ್ಡು ಕುಟುಂಬದ ಏಕೈಕ ಪುತ್ರಿಯಾದ ಯುವತಿಯ ನಡುವೆ ಪ್ರೀತಿ ಬೆಳೆಯಿತು. ಇಬ್ಬರದೂ ಸೀರಿಯಸ್ ಮತ್ತು ಸಿನ್ಸಿಯರ್ ಲವ್. ಈ ಪ್ರೇಮಿಗಳು ಬಂದು ನನಗೆ ಗಂಟುಬಿದ್ದರು. ನಾನು ಬೆಂಗಳೂರಿನ ಬುದ್ಧಿಜೀವಿಗಳು, ಕಲಾವಿದರು, ಪತ್ರಕರ್ತರನ್ನೆಲ್ಲ ಅಂಗಲಾಚಿದೆ. ಅವರು ಸಮಯ ಮತ್ತು ಸಮಸ್ಯೆಯ ನೆಪ ಹೇಳಿ ಕಳಚಿಕೊಂಡರು.

ಆಗ ಬೆಂಗಳೂರು ನಗರದ ಪೊಲೀಸ್ ಕಮಿಷನರ್ ಆಗಿದ್ದ ಮರಿಸ್ವಾಮಿಯವರನ್ನು ಕಂಡು. 'ಸಾರ್, ನೀವು ಸುಮ್ಮನೆ ಅವರ ಜೊತೆ ನಿಂತು ಒಂದು ಫೋಟೋ ತೆಗೆಸಿಕೊಳ್ಳಿ, ಮುಂದಿನದನ್ನು ನಾನು ನಿಭಾಯಿಸುತ್ತೇನೆ'ಎಂದೆ.

ಪುರಿಸ್ವಾಮಿಯವರು, 'ಹುಡುಗಿಯ ಅಪ್ಪ ಬಿಜೆಪಿ ಕಾರ್ಪೊರೇಟರ್, ಹುಡುಗ ಮುಸ್ಲಿಂ, ಸೆಂಟ್ರಲ್‌ನಲ್ಲಿ ಬಿಜೆಪಿ ಪವರ್‌ನಲ್ಲಿದೆ, ಹಿಂದೂ ಮುಸ್ಲಿಂ ಗಲಾಟೆ, ಲಾ ಅಂಡ್ ಆರ್ಡರ್ ಪ್ರಾಬ್ಲಂ, ನನ್ನ ಪೀರಿಯಡ್‌ನಲ್ಲಿ.... ಬೇಡಿ ಬಸವರಾಜ್. ಬೇರೆ ಎಲ್ಲಾದ್ರು ಮಾಡಿ, ನಾನು ಏನು ಪೊಲೀಸ್ ಪ್ರೊಟೆಕ್ಷನ್ ಬೇಕೋ ಅದೆಲ್ಲ ಕೊಡ್ತೇನೆ' ಎಂದರು.

ಕೊನೆಗೆ ನಮ್ಮ ಸಂಪಾದಕರಾದ ಶ್ರೀಧರ್ ಹತ್ತಿರ ಬಂದೆ. ಅವರು ಹುಡುಗ-ಹುಡುಗಿಯನ್ನು ಮಾತಾಡಿಸಿ, 'ಮದುವೆ ಮಾಡಿಸೋಣ. ಬನ್ನಿ ಬಸುರಾಜ್'ಅಂದರು. ಆದರೆ. ಈ ನಡುವೆ ಹುಡುಗಿಯ ಅಪ್ಪ ಹುಡುಗಿಯನ್ನು ಮನೆಯಲ್ಲಿ ಬಂಧಿಸಿಟ್ಟ. ಬೇರೊಬ್ಬ ಹುಡುಗನೊಂದಿಗೆ ಮದುವೆ ಮಾಡಿಸಲು ತಯಾರಾದ. ಹುಡುಗ ಹೊರಗಿದ್ದು ಚಡಪಡಿಸತೊಡಗಿದ.

ಇದ್ದಕ್ಕಿದ್ದಂತೆ ಒಂದು ದಿನ ಬೆಳಗ್ಗೆ ಆರು ಗಂಟೆಗೆ ಆ ಲವರ್‌ಗಳಿಂದ ಫೋನ್, 'ಸಾರ್, ನಾವು ಮನೆಯಿಂದ ಹೊರಗೆ ಓಡಿಬಂದು ಬಿಟ್ಟಿದ್ದೇವೆ. ಅವರು ಹುಡುಕ್ತಿದಾರೆ, ಏನಾದ್ರು ಮಾಡಿ' ಅಂತ. ನಾನು ಶ್ರೀಧರ್‌ರವರಿಗೆ ಫೋನ್ ಮಾಡಿದೆ. ಅವರು 'ಒಂದು ಕಾರ್ ವ್ಯವಸ್ಥೆ ಮಾಡಿಕೊಡ್ತೇನೆ. ಬೆಂಗಳೂರಿಂದ ಹೊರಗಡೆ ಎಲ್ಲಾದ್ರು ಕರ್ಕೊಂಡು ಹೋಗ್ಬಿಡಿ'ಅಂದರು.

ಆಗ ನನಗೆ ನೆನಪಾದದ್ದು ರಾಮದಾಸ್. ಯಾಕೆಂದರೆ ನನ್ನ ಮದುವೆಯಾಗಿದ್ದೆ ರಾಮದಾಸ್‌ರ ಪೌರೋಹಿತ್ಯದಲ್ಲಿ. ರಾಮದಾಸ್‌ಗೆ ಫೋನ್ ಮಾಡಿದರೆ, ಅವರು ಕೂಲಾಗಿ, 'ಯಾಕ್ ಹೆದರ್ತೀರ ಬಸುರಾಜ್, ಕರ್ಕೊಂಡು ಬನ್ನಿ ಮದುವೆ ಮಾಡ್ಸೋಣ'ಅಂದರು

ಮಾರ್ಗ ಮಧ್ಯದಲ್ಲಿ ಯಾರಾದರೂ ಬಂದು ಅಟ್ಯಾಕ್ ಮಾಡಿದರೆ ಎಂಬ ಆತಂಕದಲ್ಲೇ ಹುಡುಗ-ಹುಡುಗಿಯನ್ನು ಮೈಸೂರಿಗೆ ಕರೆದುಕೊಂಡುಹೋದೆ. ರಾಮದಾಸ್ ಮನೆಮುಂದೆ ಹೋಗಿ ಇಳಿಯುತ್ತಿದ್ದಂತೆ ನಮ್ಮ ಸ್ವಾಮಿ ಆನಂದ್ ಮೈಸೂರಿನ ಸಾರಸ್ವತ ಲೋಕದ ದಿಗ್ಗಜರಾದ ಎಲ್. ಬಸವರಾಜು, ದೇಜಗೌ, ದೇವನೂರು ಮಹದೇವರನ್ನು ಕರೆತಂದು ಕೂರಿಸಿದ್ದರು. ಜೊತೆಗೆ ಒಡನಾಡಿಯ ಪರುಶು-ಸ್ಟ್ಯಾನ್ಲಿ, ಕೃಪಾಕರ -ಸೇನಾನಿ, ಮೂಡ್ನಾಕೂಡು ಚಿನ್ನಸ್ವಾಮಿ ಇದ್ದರು. ಇವರು ಸಾಲದು ಎಂಬಂತೆ ಮೈಸೂರಿನ ಗೆಳೆಯರು ಮತ್ತು ಮಾಧ್ಯಮದ ಅಷ್ಟೂ ಜನ... ಅವರನ್ನೆಲ್ಲ ನೋಡಿ ಎಂಥ ಧೈರ್ಯ ಬಂತು ಅಂದರೆ... ಆ ಧೈರ್ಯವೇ ರಾಮದಾಸ್.

ಇಂಥ ದಿಟ್ಟ, ಗಟ್ಟಿಗ ರಾಮದಾಸ್ ಲಂಕೇಶರು ಸತ್ತಾಗ ಅರ್ಧಜೀವವಾದರು. ಲಂಕೇಶರ ಕಾರಣಕ್ಕೇ ಪ್ರೊಫೆಸರ್ ನಂಜುಂಡಸ್ವಾಮಿ ಮತ್ತು ತೇಜಸ್ವಿಯವರಿಂದ ದೂರವಾಗಿದ್ದ ರಾಮದಾಸ್‌ರಿಗೆ ಆಗ ನಿಜಕ್ಕೂ ಕಷ್ಟದ ಕಾಲ. ಕಷ್ಟ ಎದುರಾದರೂ ಕಟ್ಟಿದ ಪ್ರಗತಿರಂಗವನ್ನು ಬಿಡಲಿಲ್ಲ, ಪ್ರತಿಭಟನೆಯನ್ನು ನಿಲ್ಲಿಸಲಿಲ್ಲ. ಅಧಿಕಾರಸ್ಥರನ್ನು ಹತ್ತಿರ ಬಿಟ್ಟುಕೊಳ್ಳಲಿಲ್ಲ. ಸರ್ಕಾರದ ಮುಲಾಜಿಗೆ ಒಳಗಾಗಲಿಲ್ಲ. ಇದ್ದಷ್ಟು ದಿನವೂ ಒಬ್ಬಂಟಿಯಾಗಿ ಹೋರಾಡುತ್ತಲೇ ಕಾಲ ನೂಕಿದರು.

ಈ ಮಧ್ಯೆ ಪ್ರೊಫೆಸರ್ ತೀರಿಕೊಂಡಾಗ ಇನ್ನಷ್ಟು ಕುಗ್ಗಿದರು. ಜೀವದ ಗೆಳೆಯ ತೇಜಸ್ವಿ ಇದ್ದಕ್ಕಿದ್ದಂತೆ ಇಲ್ಲವಾದಾಗ ಅಸ್ತಿತ್ವವನ್ನೇ ಕಳೆದುಕೊಂಡವರಂತೆ ಕುಸಿದು ಕೂತರು.

ಅವತ್ತೆ ನಿರ್ಧರಿಸಿಕೊಂಡರೋ ಅಥವಾ ಆ ಮೂವರು ಗೆಳೆಯರು ಇಲ್ಲಿರಲು ಬಿಡಲಿಲ್ಲವೋ... ಅಂತೂ ಅವರಲ್ಲಿಗೆ ಇವರು ಕೂಡ ಹೋಗಿಯೇಬಿಟ್ಟರು.

# ಬೆಂಕಿಯಲ್ಲವದು, ಬೆಚ್ಚಗಿನ ಮಮತೆ

ಸವಿತಾ ನಾಗಭೂಷಣ

ನಾಗಭೂಷಣರಿಗೆ ಒಂದು ಕಾಲದಲ್ಲಿ ಮೈಸೂರೆಂದರೆ ಒಂದು ತೀರ್ಥಕ್ಷೇತ್ರವಿದ್ದಂತೆ. ಹಾಗಾಗಿ ನಾವು ಮದುವೆಯಾದ ಕೆಲವೇ ದಿನಗಳಲ್ಲಿ ಮೈಸೂರಿಗೆ ಹೊರಟೆವು. ಮದುವೆಯಾದ ತಕ್ಷಣ ಮೊದಲು ಮನೆದೇವರ ಹತ್ತಿರ ಕರೆದುಕೊಂಡುಹೋಗುವ ವಾಡಿಕೆಯಂತೆ ನಾಗಭೂಷಣ ಮೈಸೂರಿನಲ್ಲಿ ನನ್ನನ್ನು ಮೊದಲು ಕರೆದುಕೊಂಡು ಹೋದದ್ದು ಕೆ. ರಾಮದಾಸರ ಮನೆಗೇ! ಅಲ್ಲಿ ನಮಗೆ ರಾಮದಾಸರ ಮನೆಯಲ್ಲಿ ತುಂಬು ಆತಿಥ್ಯ. ನಂತರ ಮಹಾದೇವ, ವೈ. ಮಹೇಶ್, ಗೋವಿಂದಯ್ಯ, ಆಲನಹಳ್ಳಿ, ಶಿವತೀರ್ಥನ್, ನೆಲಮನೆ ದೇವೇಗೌಡ-ಹೀಗೆ ಒಂದು ಸುತ್ತು ತಿರುಗಿ ಬಂದೆವು. ಒಬ್ಬಬ್ಬರೂ ಒಂದೊಂದು ಥರ... ಕೋಪ, ತಾಪ, ಪರಿತಾಪ ಹಾಗೂ ಇವೆಲ್ಲವನ್ನೂ ಮೀರಿಸುವಂತೆ ವಿಚಾರ, ಮಮಕಾರ... ತತ್‌ಕ್ಷಣವೇ ಅಸಹಕಾರ... ಇವೆಲ್ಲದರ ಒಟ್ಟು ಮೊತ್ತವೇ ರಾಮದಾಸ್.

ಒಳ್ಳೆಯದಕ್ಕೋ, ಕೆಟ್ಟದಕ್ಕೋ ನಮ್ಮಲ್ಲಿ ಅನೇಕರು ಬದಲಾಗಿರುವುದನ್ನು ನೋಡಿದ್ದೇನೆ. ಆದರೆ ರಾಮದಾಸ್ ಹಾಗಲ್ಲ... ಆದಿಯೂ ಪ್ರತಿಭಟನೆ, ಅಂತ್ಯವೂ ಪ್ರತಿಭಟನೆ... ಹೋರಾಟ ಅವರ ಮಂತ್ರ, ಪ್ರತಿಭಟನೆ ಅವರ ತಂತ್ರ. ಯಾರಿಗೂ ಅಂಜಿದವರಲ್ಲ ಅವರು. ಸಾವಿಗೂ ಹಲವಾರು ಬಾರಿ ಸವಾಲೆಸದವರೇ ... ಈಗ ನಿರ್ಗಮಿಸಿದ್ದಾರೆ. ನಿರ್ಗಮಿಸುವ ಹಿಂದಿನ ಮೂರು ದಿನಗಳೂ ನಾವು ಅವರ ಜೊತೆಯಲ್ಲಿದ್ದೆವು. ಮೊದಲಬಾರಿಗೆ ಅವರು ಪೂರ್ತಿ ಸಮಾಧಾನದಿಂದ ನಮ್ಮೊಡನೆ ಮಾತನಾಡಿದರು. ತಮ್ಮ ಹೋರಾಟವನ್ನೂ ಮುಂದುವರೆಸಿಕೊಂಡು ಹೋಗುವ ಜವಬ್ದಾರಿ ನಿಮ್ಮೆಲ್ಲರದು ಎಂದರು. ನನ್ನನ್ನು ಯಾವಾಗಲೂ 'ರೀ ಸವಿತಾ...'ಎಂದು ಕರೆಯುತ್ತಿದ್ದವರು, ಮೊದಲ ಬಾರಿಗೆ ಅಮ್ಮ ಎಂದು ಸಂಬೋಧಿಸಿದ್ದು ನನ್ನ ಎದೆಯ ಯಾವುದೋ ತಂತಿಯನ್ನು ಮೀಟಿದಂತೆನಿಸಿತು... ಅವರು ಸುಸ್ತಾಗಿದ್ದರು; ಆದರೆ ನಿರ್ಗಮಿಸುವ

ಯಾವ ಸೂಚನೆಯೂ ಇರಲಿಲ್ಲ. ಅಂತಹ ಸೂಚನೆ ಕೊಟ್ಟರೆ ಎಲ್ಲಿ ಅವರು ಮತ್ತೊಮ್ಮೆ ತನ್ನ ಕುಣಿಕೆಯಿಂದ ತಪ್ಪಿಸಿಕೊಂಡಾರೋ ಎಂಬ ಆತಂಕದಲ್ಲಿ ಆ ಹಂತಕ ಅವರನ್ನು ಕೊಂಡೊಯ್ದಿದ್ದಾನೆ...

ಕಳೆದ ಜನವರಿಯಲ್ಲಿ ತೀವ್ರ ಅಸ್ವಸ್ಥತೆಯ ನಡುವೆಯೂ ಶಿವಮೊಗ್ಗಕ್ಕೆ ಬಂದು ನನ್ನ ಹಾಗೂ ನಾಗಭೂಷಣ ಅವರ ಪುಸ್ತಕ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ನಮ್ಮ ಪಕ್ಕದಲ್ಲಿ ಕೂತೇ, ಸಮಾರಂಭ ಏರ್ಪಡಿಸುವುದು ಹೀಗಲ್ಲ ಎಂಬ ಸಿಟ್ಟಿನ ಮಾತಿನೊಂದಿಗೇ ಭಾಷಣದ ಕಿಡಿ ಹೊತ್ತಿಸಿದರು! ಅವರನ್ನು ಬಲ್ಲವರಿಗೆ ಅದೇನೂ ಹೊಸದಲ್ಲ. ಆದರೆ ಸಭಿಕರಿಗೆ ಗಾಬರಿ ಹಾಗೂ ಆಶ್ಚರ್ಯ. ಅವರೇಕೆ ಹಾಗೆ ಮಾತಾಡಿದರು ಎಂದು ಎಲ್ಲರೂ ನಮ್ಮನ್ನು ವಿವರಣೆ ಕೇಳುವವರೇ... ಅದು ಅವರ ಶೈಲಿ... ಎಂದೆವು. ಹೀಗೂ ಉಂಟೇ ಎಂದು ಅವರು ಆಶ್ಚರ್ಯ ವ್ಯಕ್ತಪಡಿಸಿದರು. rough, tough and warm ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ರಾಮದಾಸ್ ಅಗ್ನಿಪರ್ವತದ ಹಾಗೆ... ಸಿಡಿದಾಗ ದೂರ ನಿಂತು ನೋಡುವುದೇ ಒಂದು ಚಂದ. ಸಹಿಸಬಲ್ಲರಾದರೆ, ಹತ್ತಿರವಿದ್ದೂ ಆ ಬಿಸಿಯಲ್ಲಿ ಪ್ರೀತಿಯನ್ನು ಕಾಣಬಹುದಿತ್ತು.

ಬೆಂಕಿಯಲ್ಲವದು, ಬೆಚ್ಚಗಿನ ಮಮತೆ.

# ನಿಗಿನಿಗಿ ಚಲಿಸುವ ಜ್ವಾಲೆ

ಇಂದ್ರಜಿತ್ ಲಂಕೇಶ್

ದಾವಣಗೆರೆಯಿಂದ ಬಂದ ಯುವಕ ನನ್ನನ್ನು ಭೇಟಿಯಾದ. ಇತ್ತೀಚೆಗೆ ಬಹಳಷ್ಟು ಯುವಕ ಯುವತಿಯರು ಸಿನಿಮಾದಲ್ಲಿ ಚಾನ್ಸ್ ಕೇಳಿಕೊಂಡು ಬರುವವರೇ ಹೆಚ್ಚು. ಕೆಲವರು ಸಿನಿಮಾಕ್ಕಾಗಿ ಹಾಡು, ಕಥೆ, ಕಾದಂಬರಿ ಬರೆದುಕೊಂಡೂ ಬರುತ್ತಾರೆ. ಆದರೆ ಈ ಯುವಕ ಅದಾವುದೂ ಇಲ್ಲದೆ ಭೈರಪ್ಪನವರ ಪುಸ್ತಕ 'ಆವರಣ' ಕುರಿತು ಮುಖಪುಟ ವರದಿ ಮಾಡಿದ್ದನ್ನು ಮೆಚ್ಚಿಕೊಳ್ಳುತ್ತ ಮಾತಿಗೆ ಪೀಠಿಕೆ ಹಾಕಿದ. ತನ್ನನ್ನು ಸುರೇಶ ಎಂದು ಪರಿಚಯಿಸಿಕೊಂಡ.

" ಏನು ಮಾಡುತ್ತಿರುವಿರಿ?" ಎಂದೆ.

" ಬೆಂಗಳೂರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಹುದ್ದೆಗಾಗಿ ಸಂದರ್ಶನಕ್ಕೆ ಬಂದಿದ್ದೇನೆ" ಎಂದ.

" ಇಂಜಿನಿಯರಿಂಗ್ ಓದಿ, ಅಭಿರುಚಿಯುಳ್ಳವರು ಈಗ ವಿರಳವಾಗುತ್ತಿದ್ದಾರೆ. ಈಗಿನ ಆರ್ಟ್ಸ್ ವಿದ್ಯಾರ್ಥಿಗಳಿಗೆ ಕುವೆಂಪು, ಬೇಂದ್ರೆಗಳನ್ನು ಪರಿಚಯ ಮಾಡಿಕೊಡಬೇಕಾದ ಪ್ರಸಂಗವುಂಟಾಗಿದೆ" ಎಂದೆ ನಗುತ್ತ.

"ನಾನು ಮೇಷ್ಟ್ರು ಬರಹಗಳನ್ನು ಓದಿದ್ದೇನೆ. ಅವರ ಟೀಕೆ ಟಿಪ್ಪಣಿಗಳು ನನಗೆ ಸಾಮಾಜಿಕ ದೃಷ್ಟಿಕೋನ ತಂದುಕೊಟ್ಟವು. ಮೇಷ್ಟ್ರು ಬರೆದ ಸಾಹಿತ್ಯ ಓದಿ ಕಾಲೇಜಿನಲ್ಲಿ ಡಿಬೇಟ್‌ಗಳಲ್ಲಿ ಗೆದ್ದಿದ್ದೇನೆ. ಆ ವಿಚಾರಗಳಿಂದ ಪ್ರೇರಿತಗೊಂಡಿರುವ ನನ್ನ ಬುದ್ಧಿಗೆ ಇಂದು ಪ್ರಾಮಾಣಿಕತೆ ಮಾತ್ರ ಕೆಲಸಕ್ಕೆ ಬರುವಂಥದ್ದು ಎನಿಸುತ್ತದೆ. ಹಲವಾರು ವಿಷಯಗಳಲ್ಲಿ ಮೇಷ್ಟ್ರು ಗಾಂಧೀಜಿಯನ್ನು ಫಾಲೋ ಮಾಡುತ್ತಿದ್ದರು. ಗಾಂಧೀಜಿ ಯಾವತ್ತೂ 'ಗುರಿಗಿಂತ ದಾರಿ ಮುಖ್ಯ' ಎಂದು ಹೇಳುತ್ತಿದ್ದರು. ಆರಂಭದಲ್ಲಿ ಭ್ರಷ್ಟತನದಿಂದ ಮೇಲೆ ಬಂದು ಆನಂತರ ಸಮಾಜಕ್ಕೆ ನೀತಿಬೋಧೆ ಮಾಡುವ 'ಸಜ್ಜನ'ರು ಈಗ ಸಾಕಷ್ಟಿದ್ದಾರೆ. ಅಂಥವರ ಬೋಧನೆಗಳಿಗೆ

ಭ್ರಷ್ಟಪ್ರೇತಾತ್ಮಗಳು ಅಂಟಿಕೊಂಡಿರುತ್ತವೆ. ಅವರ ಮಾತುಗಳನ್ನು ಕೇಳಿದಾಗಲೆಲ್ಲ ಭೂತ ಭಗವದ್ಗೀತೆ ನುಡಿದಂತೆ ಎನ್ನುವ ಮಾತು ನೆನಪಾಗುತ್ತಿರುತ್ತದೆ. ಗುರಿ ತಲುಪಲಿ ಅಥವಾ ತಲುಪುವಲ್ಲಿ ವಿಫಲವಾಗಲಿ ದಾರಿ ಮಾತ್ರ ಪ್ರಾಮಾಣಿಕವಾಗಿರಬೇಕು ಎನ್ನುವುದನ್ನು ಸ್ವತಃ ಪ್ರಾಯೋಗಿಕವಾಗಿ ನಡೆದು ತೋರಿಸಿದವರು ಮೇಷ್ಟ್ರು. ಇಂದು ಎಷ್ಟೆಲ್ಲ ಸಾಹಿತಿಗಳಿದ್ದಾರೆ. ಮೇಷ್ಟ್ರ ಥರ ಆತ್ಮಸಾಕ್ಷಿ ಕಾಯ್ದುಕೊಂಡವರು ಎಷ್ಟು ಜನ? ನಾನು ಕಂಡವರಲ್ಲಿ ರಾಮದಾಸ್ ಒಬ್ಬರೇ ನನಗೆ ಕಾಣುತ್ತಿರುವುದು. ಅವರೊಂದಿಗೆ ನಾನು ಹೆಚ್ಚು ಒಡನಾಡಿದವನಲ್ಲ. ಅವರ ಬಿಡಿ ಬರಹಗಳನ್ನು ಅಲ್ಲಲ್ಲಿ ಓದಿದವನು. ಅದರಿಂದ ಉತ್ಸಾಹಗೊಂಡು ಅವರ ಭಾಷಣಗಳಿಗೆ ಹೋಗಿ ಅವರ ಮಾತುಗಳನ್ನ ಮನನ ಮಾಡಿಕೊಂಡವನು. ಒಮ್ಮೆ ಬಸವನಗುಡಿಯ ನ್ಯಾಷನಲ್ ಕಾಲೇಜ್‌ನಲ್ಲಿ ಪ್ರೊ.ಚಂಪಾ ಅವರನ್ನು ರಾಮದಾಸ್ ವೇದಿಕೆ ಮೇಲೆಯೇ ತರಾಟೆಗೆ ತೆಗೆದುಕೊಂಡದ್ದು ಈಗಲೂ ನೆನಪಿದೆ. ಚಂಪಾ ಎಲ್ಲರನ್ನು ಛೇಡಿಸಬಲ್ಲ ಅಂತಃಸತ್ವವುಳ್ಳವರು ಎನ್ನುವ ಭಾವನೆ ನನ್ನಲ್ಲಿತ್ತು. ಅವರ ನಿಲುವುಗಳ ಮಲಿನತೆಯನ್ನು ರಾಮದಾಸ್ ಬಯಲಿಗೆಳೆದಾಗ ನಾನು ತಬ್ಬಿಬ್ಬಾಗಿದ್ದೆ. ಚಂಪಾ ಅವರಿಗೆ ಸರಕಾರೀ ಕುರ್ಚಿ ಸಿಕ್ಕಾಗ ಏನೆಲ್ಲ ಮಾಡಿ ರಾಡಿ ಮಾಡಿಕೊಂಡುಬಿಟ್ಟರಲ್ಲ....! ಅಂಥ ಒಂದೇ ಒಂದು ಪ್ರಸಂಗ ಮೇಷ್ಟ್ರ ಬದುಕಿನಲ್ಲಿಯಾಗಲೀ, ರಾಮದಾಸರ ಬದುಕಿನಲ್ಲಿ ಯಾಗಲೀ ಬರಲಿಲ್ಲವಲ್ಲ..." ಎಂದ ಸುರೇಶ ಭಾವವೇಶಕ್ಕೊಳಗಾದವನಂತೆ....

" ನಿಮ್ಮಂಥವರ ಇಂಥ ಸ್ಪಂದನವೇ ಕನ್ನಡದ ಸಾಂಸ್ಕೃತಿಕ ಬದುಕಿಗೆ ಆತ್ಮ ಸಾಕ್ಷಿಯಾಗಿದೆ. ನೀವು ರೂಪಿಸಿಕೊಂಡಿರುವ ವ್ಯಕ್ತಿತ್ವ, ಭಾವನೆಗಳಿಗೆ ಹೆಮ್ಮೆಯುಂಟಾಗುತ್ತಿದೆ" ಎಂದು ಕೈ ಕುಲುಕಿದೆ.

ಸುರೇಶ್ ಅದೆಷ್ಟು ಸೂಕ್ಷ್ಮಜ್ಞನೆಂದರೆ, " ನಿಮಗೆ ಸಮಯ ಸಿಗುವುದೆ ಬಹಳ ಅಪರೂಪ. ನನಗೆ ನಿಮ್ಮೊಂದಿಗೆ ಚರ್ಚಿಸಲು ಇಷ್ಟು ಅವಕಾಶ ಮಾಡಿಕೊಟ್ಟಿರಲ್ಲ ಧನ್ಯ" ಎಂದ.

"ಆಟೋಗ್ರಾಫ್‌ಗೆ ಸಹಿ ಮಾಡಿ"ಎಂದ.

" ನಿಮಗೆ ಕೆಲಸ ಸಿಗಲಿ. ಬೆಂಗಳೂರಲ್ಲಿ ನೀವಿರುವಂತಾಗಲಿ. ಆಗಾಗ ಪತ್ರಿಕೆ ಕಚೇರಿಗೆ ಬರುತ್ತಿರಿ" ಎಂದು ಶುಭಾಶಯ ಕೋರಿ ಕಳುಹಿಸಿದೆ.

ಮಾರನೆಯ ಬೆಳಗ್ಗೆ ಎಂಥ ಆಶ್ಚರ್ಯಾಘಾತ ಕಾದಿತ್ತೆಂದರೆ, ರಾಮದಾಸ್ ಕೊನೆಯುಸಿರೆಳೆದಿದ್ದರು. ನೆನ್ನೆ ಸಂಜೆಯಷ್ಟೆ ಸುರೇಶ ರಾಮದಾಸ್ ವಿಷಯವನ್ನು ನನ್ನ ಹತ್ತಿರ ಹೇಳಿ ಹೋದ. ಬೆಳಗ್ಗೆ ಇಂಥ ಸುದ್ದಿ! ಆತ್ಮೀಯರೊಂದಿಗೆ ಆಪ್ತಅಲೆ, ಕಂಪನಗಳ ಸಂಬಂಧ ಸುಪ್ತವಾಗಿರುತ್ತೆ ಎನ್ನುವ ಮಾತುಗಳು ತೇಲಿ ಬಂದವು...

ಅಂದು ನಾನು ಸಂದಿಗ್ಧದಲ್ಲಿದ್ದೆ. ಪತ್ರಿಕಾರಂಗಕ್ಕೆ ಬರುವುದೋ ಬೇರೆ ಇನ್ನೇನಾದರೂ ಮಾಡುವುದೋ ಎಂದು. ಆಲ್‌ರೌಂಡರ್ ನೀಲನಕ್ಷೆಯೆಲ್ಲ ಸಿದ್ಧವಾಗಿತ್ತು. ಅಪ್ಪ, ನಿನ್ನ ಆಯ್ಕೆಯೇ ಅಂತಿಮ ನಾನು ಏನೂ ಒತ್ತಾಯ ಮಾಡಲಾರೆ ಎಂದಿದ್ದರು. ಆ ಮಾತುಗಳು ನಡೆಯುವಾಗ ಮೈಸೂರಿನಿಂದ ರಾಮದಾಸ್ ಬಂದರು. ನನ್ನ ಹೆಗಲಮೇಲೆ ಕೈಯಿರಿಸಿ ಅಜಿತ್

ನೀನೇನೂ ಭಯ ಬೀಳಬೇಡ. ಯಾವತ್ತೂ ಲೈಫ್‌ನಲ್ಲಿ ಡಿಸಿಷನ್ ಮುಖ್ಯ. ಎಷ್ಟೋ ಜನರಲ್ಲಿ ಸಾಮರ್ಥ್ಯ, ಪ್ರತಿಭೆಗಳಿರುತ್ತವೆ. ಆದರೆ ಡಿಸಿಷನ್ ತೆಕ್ಕೊಳ್ಳೊ ಧೈರ್ಯ ಇರೊಲ್ಲ. ಹಾಗಾಗಿ ಅವರಿಗೆ ಏನನ್ನೂ ಸಾಧಿಸಲಾಗೊಲ್ಲ. ಬಹಳಷ್ಟು ಜನ ಡಿಸಿಷನ್ ತೆಕ್ಕೊಳ್ಳೋಕೆ ಏಕೆ ಹೆದರ್ತಾರೆ ಗೊತ್ತಾ? ತಾವು ಮಾಡಬೇಕಂದುಕೊಂಡದ್ದನ್ನು ತಾವೊಬ್ಬರೇ ಮಾಡಬೇಕಾಗುತ್ತೆ ಎನ್ನುವ ಹುಚ್ಚು ಆಲೋಚನೆಯಿಂದ. ಮನುಷ್ಯ ಒಂಟಿಯಾಗಿ ಏನನ್ನೂ ಮಾಡಲಾರ. ನೀನು ಏನೇ ಮಾಡಿದರೂ ಅದಕ್ಕೆ ಸಹಾಯ ಮಾಡುವವರ, ಹೆಗಲುಕೊಡುವವರ ತಂಡವೇ ಇರುತ್ತದೆ.... ಗಾಂಧೀಜಿ ಒಬ್ಬರೇ ಸ್ವತಂತ್ರ್ಯ ಸಾಧಿಸಿದರಾ? ಅವರು ದೃಢವಾದ ಡಿಸಿಷನ್ ತೆಗೆದುಕೊಂಡರು. ಆಗ ಜನ ಜೇನ್ನೊಣಗಳಂತೆ ಅವರನ್ನು ಮುತ್ತಿಕೊಂಡರು. ಗಾಂಧೀಜಿಯ ನಿಸ್ವಾರ್ಥ ದೃಢ ನಿರ್ಧಾರ ಮತ್ತಾರಲ್ಲೂ ಇದ್ದಿಲ್ಲ. ಹಾಗಾಗಿ ಜನ ಉಳಿದವರಿಗೆ ಬೆಲೆ ಕೊಡುತ್ತಿರಲಿಲ್ಲ. ಗಾಂಧೀಜಿ ಹೇಳಿದರೆ ಜೀವ ಕೊಡಲೂ ಸಿದ್ಧರಾಗಿದ್ದರು. ಹೆಣ್ಣು ಮಕ್ಕಳು ತಮ್ಮ ತಾಳಿ, ಬಳೆಗಳನ್ನೂ ಬಿಚ್ಚಿ ಮಹಾತ್ಮನ ಮಡಿಲಿಗೆ ಹಾಕುತ್ತಿದ್ದರು.... ನೀನು ಡಿಸಿಷನ್ ತೆಗೆದುಕೊಂಡು ನೆಡುಗಂಬವಾಗಿ ನಿಲ್ಲು ಯಶಸ್ಸು ತಾನೇ ಹುಡುಕಿಕೊಂಡು ಬರುತ್ತೆ..." ಎಂದರು.

ಆಗ ಅಪ್ಪ " ಸ್ವಲ್ಪ ಅವನೂ ಯೋಚಿಸಲಿ ಅಂತ ಹೇಳಿದ್ದೇನೆ. ಮತ್ತೆ ನಿಮ್ಮ ಮಾತುಗಳ ಭರವಸೆ ಅವನಿಗೆ ಹಾಸಿಗೆಯಾಗಬಾರದು..." ಎಂದರು ರಾಮದಾಸ್ ಕಡೆ ನೋಡುತ್ತ.

" ಅಯ್ಯೋ ಅಜಿತು ಪುಟಾಣಿ ಕಣ್ರೀ, ಇವತ್ತಿಗೂ ನನಗೆ ಅವ್ನು ದೊಡ್ಡೋನಾಗಿದಾನೆ ಅಂತ್ಲೇ ಅನ್ನಿಸ್ತಿಲ್ಲ" ಎಂದು ನನ್ನನ್ನು ತಮ್ಮ ಬಲ ಮಗ್ಗುಲಲ್ಲಿ ಅವುಚಿಕೊಂಡರು....

ಅಂದು ರಾಮದಾಸ್ ಅವರು ಆಡಿದ ಮಾತುಗಳು ನನ್ನ ತಲೆಯಲ್ಲಿ ಹಸಿಗೋಡೆಯಲ್ಲಿ ಹರಳೆಸೆದಂತೆ ನೆಟ್ಟುಕೊಂಡವು. ನಾನು ಅಂದುಕೊಂಡ ಸಾಧನೆಗಳು ಸಾಕಾರಗೊಳ್ಳತೊಡಗಿದವು. ಅಂದು ನನ್ನ ಮನ ಓಲಾಡುವಾಗ ಅದನ್ನು ತಡೆದು ನಿಲ್ಲಿಸಿ ಧೈರ್ಯ ಕೊಟ್ಟ ರಾಮದಾಸ್ ಭಾವುಕ ಘಳಿಗೆಗಳಲ್ಲಿ ಪ್ರತ್ಯಕ್ಷರಾಗುತ್ತಿರುತ್ತಾರೆ:ಹಿರಿಯ ಮಾರ್ಗದರ್ಶಿಯಂತೆ....

ರಾಮದಾಸ್ ಧ್ವನಿಯಲ್ಲಿ ಅಂಥ ಒಂದು ಶಕ್ತಿ ಇತ್ತು. ಅದು ಸುಮ್ಮನೆ ನಾಟಕದ ನಟನಿಗೆ ಕಲೆಯಂತೆ ಬಂದದ್ದಲ್ಲ. ಈ ಸಮಾಜದ ಕ್ರೌರ್ಯ, ನೋವು, ತಾರತಮ್ಯ, ಬಡತನ, ಸಾಂಸ್ಕೃತಿಕ ದಿವಾಳಿತನಗಳ ವಿರುದ್ಧ ಸಿಡಿದೆದ್ದ ಮನಸ್ಸಿನ ಜ್ವಾಲಾಗ್ನಿಯಲ್ಲಿ ಪ್ರಜ್ವಲಿಸುವ ನಿಗಿನಿಗಿ ಕೆಂಡವಾಗಿತ್ತು ಅವರ ಧ್ವನಿ. ಅದಕ್ಕೇ ಅದರ ಸ್ಪರ್ಶಕ್ಕೆ ಸಿಕ್ಕ ಮನಸ್ಸುಗಳೆಲ್ಲ ಹೊತ್ತಿಕೊಂಡು ಉರಿಯತೊಡಗುತ್ತಿದ್ದವು; ಸಮಾಜಕ್ಕೆ ಬೆಳಕಿನ ದೀಪಗಳಾಗುತ್ತಿದ್ದವು....

# ರಾಮದಾಸ್ ಈಗ ನಮ್ಮ ಹೊರಗಿಲ್ಲ

ಮಂಜುನಾಥ ಅದ್ದೆ

ನಾನು ಸಾಹಿತ್ಯ, ವಿಚಾರಗಳಿಗೆ ಕಣ್ಣು ತೆರೆದುಕೊಂಡಾಗ ಅಲ್ಲಲ್ಲಿ ಸಭೆ, ಸಮಾರಂಭಗಳಲ್ಲಿ ರಾಮದಾಸ್‌ರ ಹೆಸರು ಕಿವಿಗೆ ಬೀಳುತ್ತಿತ್ತು. ರಾಮದಾಸ್ ಪ್ರಖ್ಯಾತ ವಿಚಾರವಾದಿಗಳೆಂತಲೂ, ಹೋರಾಟಗಾರರೆಂತಲೂ, ಅವರು ಹಾಗೆ ಹೇಳಿದರು, ಹೀಗೆ ಹೇಳಿದರು ಎಂತಲೂ ಕಿವಿಗೆ ಬೀಳುತ್ತಾ, ಪೇಪರ್‌ಗಳಲ್ಲಿ ಕಣ್ಣಿಗೆ ಕಾಣುತ್ತಾ ಹೋದಂತೆಲ್ಲಾ ಅವರ ಬಗ್ಗೆ ನನ್ನೊಳಗಿನ ಕಿರಿಕಿರಿಯೂ ಹೆಚ್ಚಾಗುತ್ತಾ ಹೋಯ್ತು.

ನನ್ನ ಕಿರಿಕಿರಿ ಇದ್ದದ್ದು ಅವರ ಹೆಸರಿನ ಬಗ್ಗೆ. ಆಗಷ್ಟೇ 'ರಾಮಾಯಣ ವಿಷವೃಕ್ಷಂ','ಸೀತಾಯಣ'ಓದಿದ್ದ ನನಗೆ ಈ ಹೋರಾಟಗಾರ, ವಿಚಾರವಾದಿ ರಾಮದಾಸ ಅಂತ ಏಕೆ ಹೆಸರಿಟ್ಟುಕೊಳ್ಳಬೇಕು? ಅವರ ತಾಯಿ-ತಂದೆ ಆ ಹೆಸರಿಟ್ಟಿದ್ದರೂ ಅವರೇಕೆ ಅದನ್ನು ಮುಂದುವರೆಸಬೇಕು? ರಾಮನಿಗೆ ದಾಸನಾಗಿರುವ ಆ ಹೆಸರನ್ನ ಇಪ್ಪತ್ತೈದು ರೂಪಾಯಿ ಖರ್ಚು ಮಾಡಿ ಒಳ್ಳೆಯ ಹೆಸರಾಗಿ ಬದಲಾಯಿಸಿಕೊಳ್ಳದ ಇವರನ್ನು ವಿಚಾರವಾದಿ ಎಂದು ನಂಬುವುದು ಹೇಗೆ ಎನ್ನುವುದು ನನ್ನ ಪ್ರಶ್ನೆಯಾಗಿತ್ತು.

ಹೆಸರು ಬದಲಾಯಿಸುವ ಕಾನೂನಿನ ವಿಚಾರಗಳು ಆಗ ನನಗೆ ತಿಳಿದಿದ್ದು ನಮ್ಮ ಪಕ್ಕದ ಊರಿನ ಪರಮೇಶಿಯಿಂದ. ಈ ಪರಮೇಶಿ ಬೆಂಗಳೂರಿಗೆ ಲಾ ಓದಲು ಹೋಗಿ, ಅದೆಲ್ಲೆಲ್ಲೋ ಅಂಡಲೆದು ಅರ್ಧಕ್ಕೆ ಬಿಟ್ಟು ಬಂದು ತನ್ನಪ್ಪನ ಸೀಬೆಹಣ್ಣಿನ ತೋಟಕ್ಕೆ ನೀರು ಕಟ್ಟುತ್ತಿದ್ದ. ನಾವೆಲ್ಲಾ ಸೇರಿದಾಗ ಏನೂ ಹೇಳಲು ತೋಚದ ಪರಮೇಶಿ ಕಾನೂನಿನ ವಿಚಾರ ಹೇಳಿ ಬೆರಗುಗೊಳಿಸುತ್ತಿದ್ದ. ಪರಮೇಶಿ ಮಾತು ಕೇಳಿ ಅವನ ಊರಿನ ಧಣಿ ಹನುಮೇಗೌಡರು ನಮಗೆ ಕೊಟ್ಟಿದ್ದ ಎರಡು ಪಲ್ಲ ರಾಗಿಯ ಸಾಲದ ಕಾಟದಿಂದ ಪಾರಾಗಲು ನಾನು ಎಸ್‌ಎಸ್‌ಎಲ್‌ಸಿ ಓದುವಾಗ ಪಾಪರ್ ಚೀಟಿ ಕೊಂಡುಕೊಂಡು ಬರಲು ದೊಡ್ಡಬಳ್ಳಾಪುರದ ಕೋರ್ಟ್‌ಗೆ ಹೋಗಿದ್ದೆ.

ಪರಮೇಶಿ 'ಕೋರ್ಟ್‌ಗೆ ಹೋಗಿ ಹತ್ತು ರೂಪಾಯಿ ಕೊಟ್ಟರೆ ಪಾಪರ್‌ಚೀಟಿ ಕೊಡ್ತಾರೆ. ಅದನ್ನು ತೋರಿಸಿದರೆ ಸಾಲ ಕೊಟ್ಟವನು ವಾಪಸ್ ಕೇಳುವಂತೆಯೇ ಇಲ್ಲ' ಎಂಬ ಐನಾತಿ ಐಡಿಯಾ ಕೊಟ್ಟಿದ್ದ. ಪ್ರತಿದಿನ ಬೆಳಿಗ್ಗೆ ಮನೆ ಮುಂದೆ ಹನುಮೇಗೌಡರು ಹಾಕುತ್ತಿದ್ದ ಹಾಜರಾತಿ, ಅಪಾಚ್ಯ ಬೈಗುಳ, ಆತನ ಹಿಂದೆ ಕುರಿಯಂತೆ ಕೂಲಿಗೆ ಹೋಗುತ್ತಿದ್ದ ನಮ್ಮಪ್ಪನ ಚಿತ್ರಗಳೆಲ್ಲಾ ಪರಮೇಶಿ ಐಡಿಯಾವನ್ನು ನಾನು ನಂಬುವಂತೆ ಮಾಡಿದ್ದವು. ಇವೆಲ್ಲಾ ಇರಲಿ;ಈ ಪರಮೇಶಿ ಕೊಟ್ಟ ಹೆಸರು ಬದಲಾವಣೆಯ ಐಡಿಯಾ 'ರಾಮದಾಸ'ಹೆಸರಿನ ಕಿರಿಕಿರಿಗೆ ಎಂ.ಎ ಮುಗಿಸುವ ತನಕ ನನ್ನಲ್ಲಿ ಉತ್ತರವಾಗಿತ್ತು.

ಇದು ಹೋದದ್ದು ನಾನು ಪಾರ್ಟ್‌ಟೈಂ ಲೆಕ್ಚರರ್ ಆಗಿ ಹುಡುಗರನ್ನ ಕಟ್ಟಿಕೊಂಡು ಬಿಎಂಐಸಿ ರಸ್ತೆ ವಿರುದ್ಧ ಮೈಸೂರು ತನಕ ಸೈಕಲ್ ಜಾಥಾ ಹೋದಾಗ. ಮೈಸೂರಿನ ಬೀದಿ ಸಭೆಗೆ ಯಾರನ್ನ ಗೆಸ್ಟ್ ಆಗಿ ಕರೆಯುವುದು ಎನ್ನುವ ಪ್ರಶ್ನೆ ಮಧ್ಯದಾರಿಯಲ್ಲಿ ನಮಗೆ ಎದುರಾಯಿತು. ಜೊತೆಗಿದ್ದ ಬಿ. ಎಸ್. ಜಗದೀಶ್, ಜನಾರ್ದನ್ ಕೆಸರಗದ್ದೆ ಇಬ್ಬರೂ 'ರಾಮದಾಸ್‌ನ ಕರೆಯೋಣ'ಎಂದರು. ಅದಕ್ಕೂ ಮೊದಲು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಒಲವಿನ ವೇದಿಕೆಯ ಸಮಾವೇಶ ನಡೆದಿತ್ತು. ನಾನೂ ನೋಡಲು ಹೋಗಿದ್ದೆ. ರಾಮದಾಸ್‌ರ ಭಾಷಣ ಮುಗಿದ ತಕ್ಷಣ ಒಬ್ಬ ಹುಡುಗ, ಒಬ್ಬ ಹುಡುಗಿ ಎದ್ದು ಹಠಾತ್ ಸ್ಫೂರ್ತಿಯಿಂದ ಮದುವೆಯಾಗಲು ಮುಂದಾದರು. ಇದರಿಂದ ಥ್ರಿಲ್ ಆದ ಎಲ್ಲರೂ ಅವರಿಗೆ ಮದುವೆ ಮಾಡಿಸಿದರು. ಎಲ್ಲರಿಗಿಂತ ಹೆಚ್ಚಿನದಾಗಿ ರಾಮದಾಸ್ ಥ್ರಿಲ್ ಆಗಿದ್ದರು.

ಇವರು ಆ ಹುಡುಗ ಹುಡುಗಿಯ ಬದ್ಧತೆ, ಯೋಚನೆ, ಬದುಕು ಯಾವುದನ್ನೂ ವಿಚಾರ ಮಾಡದೆ ಮದುವೆ ಮಾಡಿದ್ದು ನನಗೆ ಸರಿ ಕಂಡಿರಲಿಲ್ಲ. ಇದನ್ನ ಅಲ್ಲಲ್ಲಿ ಗೇಲಿ ಮಾಡಿದ್ದೆ. ಒಲವಿನ ವೇದಿಕೆಯ ಈ ದೇಶಾವರಿತನದ ಕಹಿ ಮನಸ್ಸಲ್ಲೇ ಇತ್ತು. ಜಗದೀಶ್, ಜನಾರ್ದನ್ ಇಬ್ಬರೂ ಬೇರಾರೂ ನಮ್ಮಂತಹವರ ಬೀದಿ ಸಭೆಗೆ ಬರುವುದಿಲ್ಲ ಎಂದು ಆತಂಕ ಪ್ರಕಟಿಸಿದಾಗ ರಾಮದಾಸ್ ಓಕೆ ಎಂದು ಎಲ್ಲರೂ ಒಪ್ಪಿದೆವು.

ಒಂದೇ ಫೋನ್‌ಕಾಲ್‌ನಲ್ಲಿ ನಾವು ಮೈಸೂರು ತಲುಪುವ ಹೊತ್ತಿಗೆ ಅರಮನೆ ಸರ್ಕಲ್‌ಗೆ ಬಂದು ಕಾಯುತ್ತಾ ನಿಂತಿದ್ದರು ರಾಮದಾಸ್. ಬಿಎಂಐಸಿ ರಸ್ತೆ, ಸರ್ಕಾರದ ಕ್ರಮ ಖಂಡಿಸಿ ನಮ್ಮ ಶ್ರಮವನ್ನು ಶ್ಲಾಘಿಸಿ ಒಂದು ಗಂಟೆ ಮಾತನಾಡಿದರು. ಸೈಕಲ್ ತುಳಿದು ಸುಸ್ತಾಗಿದ್ದ ನಮಗೆಲ್ಲಾ ಅವರ ಮಾತುಗಳು ಬಾಡಿದ್ದ ಪೈರಿನ ಮೇಲೆ ಬಿದ್ದ ಮಳೆ ಹನಿಯಂತೆ ಭಾಸವಾದವು. ಇಷ್ಟಕ್ಕೆ ಮನೆಗೆ ಹೋಗದ ರಾಮದಾಸ್ ನಮಗೆಲ್ಲಾ ಕಾಫಿ ಬಿಸ್ಕೆಟ್ ಕೊಡಿಸಿ, ತಮ್ಮ ಹಿಂದೆ ಒಂದು ಪುಟ್ಟ ಹಿಂಡಿನಂತೆ ಕಟ್ಟಿಕೊಂಡು ಬಂದಿದ್ದ ಶಿಶು ಮಕ್ಕಳಿಗೆ - ಮೈಸೂರು ಬಿಡುವ ತನಕ ನಮಗೆ ದಾರಿ ತೋರಿಸಲು ಆಜ್ಞಾಪಿಸಿದರು.

ಅವರು ಕೊಡಿಸಿದ ಕಾಫಿ ಕುಡಿಯುವಾಗ ನನ್ನ ಕಿರಿಕಿರಿ ನಾಲಿಗೆಯಲ್ಲಿ ತೇಲಿಬಂದು 'ರಾಮದಾಸ'ಹೆಸರಿಗೆ ಆಕ್ಷೇಪಿಸಿದೆ.ತಣ್ಣಗೆ ನಕ್ಕ ರಾಮದಾಸ್'ಬಿಜೆಪಿಯವರು ಹೇಳುವ ರಾಮನೇ ಬೇರೆ, ನಮ್ಮ ರಾಮನೇ ಬೇರೆ'ಎಂದು ಒಂದು ಗಂಟೆ ವಿವರಿಸಿ, ಜಾತಿ, ಕಂದಾಚಾರ, ಮೌಢ್ಯ,

ನಿರ್ಬಂಧಗಳನ್ನು ಹೇಗೆ ಈ ದೇಶದ ದುಡಿಯುವ ಜನರ ಮೇಲೆ ವೈದಿಕರು ಹೇರಿದ್ದಾರೆ ಎಂದು ಹೇಳಿದರು. ನಾವೆಲ್ಲಾ ಸೇರಿ ಇವನ್ನೆಲ್ಲಾ ನಿರ್ಮೂಲನೆ ಮಾಡಿದಾಗ ತಮ್ಮ ಹೆಸರನ್ನೂ ನಿರ್ಮೂಲನೆ ಮಾಡುವುದಾಗಿ ಭರವಸೆ ಕೊಟ್ಟು, 'ಹೆಸರಲ್ಲೇನಿದೆ ಹೋಗೋ ಹುಚ್ಚಪ್ಪಾ! ನಾವು ಹೇಗಿರ್ತೀವಿ, ಏನು ಮಾಡ್ತೀವಿ ಅನ್ನೋದು ಮುಖ್ಯ' ಎಂದು ನನ್ನ ಉಗ್ರ ಸ್ಥಿತಿ ಕಂಡು ಹೊಟ್ಟೆ ತುಂಬಾ ನಗಾಡಿದರು.

ದೇಶಿಯ ತಳಿ ಬಿತ್ತನೆಯಿಂದ ಕುರಿ ಗೊಬ್ಬರದ ತನಕ ಹೊಲದ ನೆಲೆಯಿಲ್ಲದ ಈ ಜಂಗಮರೂಪಿ ರಾಮದಾಸ್ ತಿಳಿದುಕೊಂಡು ಮಾತನಾಡಿದ್ದನ್ನ ಕೇಳಿದ್ದೇನೆ. ಹಬೀಬ್ ತನ್ವೀರ್ 'ಅಗ್ರಿಕಲ್ಚರ್ ಇಲ್ಲದಿದ್ರೆ ಈ ದೇಶದಲ್ಲಿ ಕಲ್ಚರ್ರೂ ಇರಲ್ಲ' ಎಂದು ಹೇಳಿದ್ದನ್ನ ರಾಮದಾಸ್‌ಗೆ ಹೇಳಿ ನೀವೂ ಕೃಷಿ ಮಾಡಿದ ಜೀವನಾನುಭವ ಪಡೆಯಬೇಕಿತ್ತು ಎಂದು ವರ್ಷದ ಹಿಂದೆ ಹೇಳಿದ್ದೆ. ಮತ್ತದೇ ನಿರ್ಮಲ ನಗೆ ನಕ್ಕ ರಾಮದಾಸ್'ನಾನೂ ಕೃಷಿಕಾನೆ ಕಣ್ರೀ, ತೇಜಸ್ವಿ ತೋಟ, ಮಾದೇವನ ತೋಟ, ಆನಂದನ ತೋಟ ಎಲ್ಲಾ ನನ್ನೋವೆ'ಎಂದರು.

ನಾನು ರಾಮದಾಸರಿಗೆ ಮೂರು ವರ್ಷಗಳ ಹಿಂದೆ ಮತ್ತೊಂದು ವಿಚಾರಕ್ಕೆ ಗಂಟುಬಿದ್ದಿದ್ದೆ. ಅವರಿಗೆ ಹತ್ತಿರವಿದ್ದ ಬೆಂಗಳೂರಿನ ಗೆಳೆಯರೊಬ್ಬರು ಅಮಲಿನಂತೆ ವಿಚಾರವಾದಕ್ಕೆ ಗಂಟುಬಿದ್ದು, ಅದೇ ಟ್ರಾಕ್‌ನಲ್ಲಿದ್ದ ಮತ್ತೊಬ್ಬರ ಮೇಲೆ ವಿನಾಕಾರಣ ಕೆಂಡಕಾರುತ್ತಿದ್ದರು. 'ಇದನ್ನು ಅವರಿಗೆ ತಿಳಿಸಿ ಹೇಳಿ, ಇಲ್ಲಾಂದ್ರೆ ದೂರ ಇಡಿ'ಎಂಬುದು ನನ್ನ ತಕರಾರು. 'ಏನಯ್ಯ ಮಾಡ್ಲಿ, ಎಷ್ಟು ಹೇಳಿದರೂ ನಾಯಿಬಾಲ ಡೊಂಕು ಅನ್ನೋದು - ಹೋದಮೇಲೆ ಅದೇ ಮಾಡ್ತಾರೆ. ಪ್ರೀತಿ ಅನ್ನೋದು ದೊಡ್ಡದಲ್ವಾ ?ನಾನೆಂಗೆ ಅನ್ನ ತಿನ್ನೋ ಮನುಷ್ಯರನ್ನ ದ್ವೇಷ ಮಾಡ್ಲಿ ಹೇಳು?'ಎಂದು ಮರುಪ್ರಶ್ನೆ ಹಾಕಿದ್ದರು. 'ಅನ್ನ ತಿನ್ನೊ ಮನುಷ್ಯರ ವಿಚಾರವಾಗಿ ನೀವು ಏನು ನಂಬಿಕೆ ಇಟ್ಟಿದ್ದೀರೊ ಅವರಿಗೂ ಅದನ್ನೇ ಹೇಳಿ'ಎಂದೆ. ಮತ್ತದೇ ನಿರ್ಮಲ ನಗು. ಹತ್ತಿರ ಇದ್ದವರು ಒಮ್ಮೊಮ್ಮೆ ತಪ್ಪು ಮಾಡಿದರೆ ಗದರಿಸಿ ಮರೆತುಬಿಡುವ ಪ್ರೀತಿಯ ವೀಕ್‌ನೆಸ್!

ಈ ಏಳೆಂಟು ವರ್ಷಗಳಲ್ಲಿ ಅನೇಕ ಸಲ ರಾಮದಾಸ್‌ರನ್ನ ನೋಡಿದ್ದೇನೆ. ನಾನು ಮೊದಲ ಬಾರಿ ಮೈಸೂರಿನ ಬೀದಿಯಲ್ಲಿ ಕಂಡ ಅವರ ಪ್ರಖರತೆ, ಖಚಿತ ಮಾತು, ಉತ್ಸಾಹ, ನಗು ಯಾವುದರಲ್ಲೂ ಒಂದು ರಾಗಿಕಾಳಿನ ತೂಕ ಕಡಿಮೆಯಾಗಿದ್ದನ್ನ ಕೊನೆಯ ಭೇಟಿಯ ತನಕ ನಾನು ನೋಡಿಲ್ಲ.

ಅವರನ್ನ ಜೀವಂತವಾಗಿ ಕೊನೆಯ ಬಾರಿ ನೋಡಿದ್ದು ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯ ರೋಗಿಗಳ ರೂಂನಲ್ಲಿ. ನಾನು ಕೇಶವರೆಡ್ಡಿ ಹಂದ್ರಾಳ ಕೀಮೊಥೆರಪಿಗೆ ನೆನ್ನೆಯಷ್ಟೇ ತುತ್ತಾಗಿರುವ ರಾಮದಾಸ್, ರೋಗಿಯಂತೆ ಬೆಡ್‌ನ ಮೇಲೆ ಮಲಗಿರಬಹುದೆಂದು ಎಣಿಸಿ ಅಲ್ಲಿಗೆ ಹೋದೆವು. ರೋಗ ಇದೆ, ಅದಕ್ಕಾಗಿ ಮೈತುಂಬಾ ಔಷಧಿ ಇಂಜೆಕ್ಟ್ ಮಾಡಿದ್ದಾರೆ ಎಂಬುದನ್ನೂ ಮರೆತು ರಾಮದಾಸ್ ಸ್ವಾಮಿ ಆನಂದ್ ಜೊತೆ ಏನೋ ಮಾತಲ್ಲಿ ತೊಡಗಿದ್ದದ್ದು ರೂಮಿನಿಂದ ಇಪ್ಪತ್ತಡಿ ದೂರಕ್ಕೆ ಗಂಟೆ ಹೊಡೆದಂತೆ ಕೇಳಿಸುತ್ತಿತ್ತು.

ನಾವು ಹೋಗಿ ಕುಶಲೋಪರಿಯ ಪ್ರಸಂಗ ಮುಗಿದಷ್ಟೇ ತಡ,'ಅದು ಬಿಡ್ರಿ, ಪತ್ರಿಕೆ ಚೆನ್ನಾಗಿ ಬರ್ತಿದೆ. ಆ ಬೌಫಿಯಾರ್ ಬಗ್ಗೆ ಬರೆದದ್ದು ಚನ್ನಾಗಿತ್ತು. ಶ್ರೀಧರ್ ಹೇಗಿದ್ದಾರೆ?'ಎಂದು ಕೇಳಿದರು. ಶ್ರೀಧರ್ ಅವರಿಗೆ ಅಲ್ಲಿಂದಲೇ ಫೋನ್ ಮಾಡಿ ಕೊಟ್ಟೆ. ಅದಾದ ಅರ್ಧ ಗಂಟೆಗೆ ಶ್ರೀಧರ್, ಬಚ್ಚಸ್ ಇಬ್ಬರೂ ಕಿದ್ವಾಯಿಗೆ ಬಂದರು. ಆನಂತರ ನಿರರ್ಗಳ ಒಂದು ಗಂಟೆ ರಾಮದಾಸ್ ಮೇಷ್ಟ್ರ ಪಾಠ. ಶ್ರೀಧರ್ ಅವರು 'ನೀವು ಮಾತಾಡುವುದು ಬೇಡ...ಬೇಡ...' ಎಂದು ಪದೇ ಪದೇ ಹೇಳಿದರೂ ಅದನ್ನ ಕಿವಿಗೂ ಬಿಟ್ಟುಕೊಳ್ಳದೆ 'See ಶ್ರೀಧರ್... ಈಗ ಅಲೋಪತಿಯಲ್ಲಿ ...'ಎಡೆಬಿಡದ ಮಾತು.

ಇದಾದ ಒಂದು ಗಂಟೆಗೆ ಪ್ರೊ. ರವಿವರ್ಮ ಕುಮಾರ್, ಶಾರದಾ ಮೇಡಂ ಬಂದರು. ರಾಮದಾಸ್ ಮಾತಿಗೆ ಪೂರ್ಣ ಲೈಸೆನ್ಸ್ ಪಡೆದವರಂತೆ ಯುವಜನ ಸಭಾ, ಗೋಕಾಕ್ ಚಳವಳಿ, ದೇವೇಗೌಡ, ಸರ್ಕಾರ ನೂರೆಂಟು ಶುರುವಿಟ್ಟರು. ಅವರ ಮಾತಿನ ಓಘ ಕಂಡು ಶ್ರೀಧರ್‌ರವರು ಬೇಸರಿಸುತ್ತಾ ಈಚೆಗೆ ಬಂದು ರಾಮದಾಸ್‌ರಿಗೆ ಅವರ ಜೀವನಾಡಿಯಷ್ಟೇ ಹತ್ತಿರವಿದ್ದ ಸ್ವಾಮಿ ಆನಂದ್‌ಗೆ, ಅಳಿಯ ಓಂಕಾರ್‌ಗೆ 'ಇವರೇನು ಎಷ್ಟು ಹೇಳಿದರೂ ಕೇಳಲ್ಲ. ಮೌನವಾಗಿದ್ದು ಎನರ್ಜಿಯನ್ನು ಒಳಕ್ಕೆ ತುಂಬಿಕೊಳ್ಳುವ ಬದಲು, ಒಳಗಿರುವ ಎನರ್ಜಿನೆಲ್ಲಾ ಮಾತಾಡಿ ಹೊರಕ್ಕೆ ಹಾಕ್ತಿದ್ದಾರಲ್ಲಾ...'ಎಂದು ಆಕ್ಷೇಪಿಸಿದರು. ಯಾರ ಮಾತನ್ನೂ ಕೇಳುವ ನಿಸ್ಸಹಾಯಕತೆಯಲ್ಲಿ ರಾಮದಾಸ್ ಇರಲಿಲ್ಲ.

ಮಧ್ಯೆ ಕೆಲಸವಿದೆ ಎಂದು ಹೊರಟಿದ್ದ ನನಗೆ ಶ್ರೀಧರ್‌ರವರು ಫೋನ್ ಮಾಡಿ 'ಅಧ್ವೆ, ಇವರೆಲ್ಲಾ ಕ್ಯಾನ್ಸರ್ ಅಂದ್ರೆ ಏನೂಂತನೆ ತಿಳಕಂಡಿಲ್ಲ ಕಣ್ರೀ. ಏನ್ರೀ ಮಾತು... ಮಾತು. ಹೀಗೆ ಮಾತಾಡ್ತಾ ಇದ್ರೆ ನಮ್ಮ ರಾಮದಾಸ್ ಇನ್ನೆರಡು ತಿಂಗಳೂ ಇರಲ್ಲ ಕಣ್ರೀ' ಎಂದರು. ಇದನ್ನು ರಾಮದಾಸ್‌ರ ಉತ್ಸಾಹ, ದೃಢತೆ, ಜೀವಂತಿಕೆಯನ್ನು ಆಗಷ್ಟೇ ಕಂಡುಬಂದಿದ್ದ ನನಗೆ ನಂಬಲಾಗಲಿಲ್ಲ. ಹಂದ್ರಾಳರಿಗೆ ಹೇಳಿದೆ. ಅವರೂ 'ಹಂಗೇನೂ ಇಲ್ಲ ಬಿಡಿ ಸಾರ್. ಚನ್ನಾಗೇ ಇದ್ದಾರೆ' ಎಂದರು. ಇದನ್ನ ಶ್ರೀಧರ್‌ರವರಿಗೆ ಹೇಳಿದಾಗ 'ನಿಮ್ಮಿಬ್ಬರಿಗೂ ಕ್ಯಾನ್ಸರ್ ಅಂದ್ರೆ ಏನೂಂತ ಗೊತ್ತಿಲ್ಲ ಬಿಡಿ'ಎಂದರು.

ಮಂಗಳವಾರ ಬೆಳಗಿನ ಜಾವ ಸ್ವಾಮಿ ಆನಂದ್ ಫೋನ್ ಮಾಡಿ 'ರಾಮದಾಸ್ ತೀರಿಕೊಂಡರು' ಅಂದಾಗ ತಕ್ಷಣ ನನಗೆ ಜ್ಞಾಪಕಕ್ಕೆ ಬಂದದ್ದು ಶ್ರೀಧರ್‌ರವರ ಮಾತು. ಈಗ ರಾಮದಾಸ್ ನಮ್ಮ ಹೊರಗಿರುವ ಒಬ್ಬ ವ್ಯಕ್ತಿಯಾಗಿ ಉಳಿದಿಲ್ಲ; ಒಳಗಿನ ಚೈತನ್ಯವಾಗಿ ಅಷ್ಟೇ; ಇದನ್ನು ನಂಬಲು ಕಷ್ಟವಾಗುತ್ತಿದೆ.

# ನಷ್ಟ ಭರಿಸುವುದು ಹೇಗೆ ?

**ಸನತ್ ಕುಮಾರ ಬೆಳಗಲಿ**

ಕೆ. ರಾಮದಾಸ್ ಇಷ್ಟು ಬೇಗ ನಮ್ಮನ್ನೆಲ್ಲ ಅಗಲಿ ಹೋಗುತ್ತಾರೆ ಎಂದು ಖಂಡಿತ ಅನಿಸಿರಲಿಲ್ಲ. ಅವರು ತುಂಬ ಸೋತು ಹೋಗಿದ್ದಾರೆ ಎಂದು ಗೆಳೆಯ ಬಿ.ಎಂ. ಬಷೀರ್ ಹೇಳಿದಾಗ ಆತಂಕ ಉಂಟಾಗಿತ್ತು. ಒಂದೆರಡು ದಿನದಲ್ಲಿ ಅವರನ್ನು ಕಂಡು ಮಾತಾಡಿ ಬರಬೇಕೆನ್ನುವಾಗಲೇ ಮಂಗಳವಾರ ಅವರು ಕೊನೆಯುಸಿರೆಳೆದ ಮೆಸೇಜ್ ಬಂತು. ಕೊನೆಯ ಬಾರಿ ಅವರೊಂದಿಗೆ ಮಾತಾಡಲು ಸಾಧ್ಯವಾಗಲೇ ಇಲ್ಲ. ಅಂತಿಮಯಾತ್ರೆಗೆ ಹೋದಾಗ ಹಳೆಯ ನೆನಪುಗಳೆಲ್ಲ ಒತ್ತರಿಸಿ ಬಂದವು.

ರಾಮದಾಸರೊಂದಿಗೆ ನನ್ನ ಒಡನಾಟ ಮೂರು ದಶಕಗಳಷ್ಟು ಹಳೆಯದು. ಅವರು ಲೋಹಿಯಾ ಸಮಾಜವಾದಿ, ನಾನು ಕಮ್ಯುನಿಸ್ಟ್ ಆಂದೋಲನದಲ್ಲಿ ಗುರುತಿಸಿಕೊಂಡವನು. ಆ ಕಾಲದಲ್ಲಿ ಅಂದರೆ ಬಾಬರಿ ಮಸೀದಿ ಉರುಳುವ ಮುನ್ನ ಸೋಷಲಿಸ್ಟರಿಗೂ ಕಮ್ಯುನಿಸ್ಟರಿಗೂ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುತ್ತಿರಲಿಲ್ಲ.

೧೯೮೭ - ೮೮ ಇರಬಹುದು. ಬಳ್ಳಾರಿಯಲ್ಲಿ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನ, ಕೈಗಾ ಸೇರಿದಂತೆ ಅಭಿವೃದ್ಧಿ ಯೋಜನೆಗಳ ಔಚಿತ್ಯದ ಬಗ್ಗೆ ವಿಚಾರಗೋಷ್ಠಿ. ನಾನು ಸಿ. ವೀರಣ್ಣ, ನಾಗೇಶ್ ಹೆಗಡೆ, ಗುರುಶಾಂತ್- ಪಾಲುಗೊಂಡಿದ್ದೆವು. ಕೈಗಾದಂಥ ಅಭಿವೃದ್ಧಿ ಯೋಜನೆಗಳು ಭಾರತದಂಥ ಅಭಿವೃದ್ಧಿಶೀಲ ದೇಶಗಳಿಗೆ ಅಗತ್ಯ ಎಂಬುದೇ ಕಮ್ಯುನಿಸ್ಟ್ ಪಕ್ಷಗಳ ಅಂದಿನ ನಿಲುವು. ನಾನು ಈ ನಿಲುವನ್ನೇ ಪಟ್ಟುಹಿಡಿದು ಪ್ರತಿಪಾದಿಸಿದೆ. ನಾಗೇಶ್ ಹೆಗಡೆ ನಮ್ಮ ಅಭಿಪ್ರಾಯವನ್ನು ವಿರೋಧಿಸಿದರು. ಆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕೆ. ರಾಮದಾಸ್ " ನೀವು ಕಮ್ಯುನಿಸ್ಟರೇ ಹೀಗೆ, ದೇಶ ನಿಮಗೆ ಅರ್ಥವಾಗಿಲ್ಲ" ಎಂದು ವಾದಕ್ಕಿಳಿದರು.

ಇದೊಂದು ಉದಾಹರಣೆ ಮಾತ್ರ. ಹೀಗೆ ಉದ್ದಕ್ಕೂ ಜಗಳವಾಡಿಕೊಂಡೇ ಬಂದೆವು. ಆದರೆ ವೈಯಕ್ತಿಕ ಸ್ನೇಹ ಸಂಬಂಧಕ್ಕೆ ಈ ಭಿನ್ನಾಭಿಪ್ರಾಯ ಎಂದೂ ಅಡ್ಡಿಯಾಗಲಿಲ್ಲ. ಬರಹಗಾರರ ಒಕ್ಕೂಟ, ಜಾತಿವಿನಾಶ ಸಮ್ಮೇಳನ - ಹೀಗೆ ಎಲ್ಲ ಚಟುವಟಿಕೆಗಳಲ್ಲಿ ನಾವು ಒಂದಾಗಿ ಕೆಲಸ ಮಾಡಲು ಲಂಕೇಶ್ ಪತ್ರಿಕೆ ವೇದಿಕೆಯಾಗಿತ್ತು.

ಅಂತರಜಾತಿ ವಿವಾಹಿತರ ವೇದಿಕೆ, ಮಾನವ ಮಂಟಪ ನಮ್ಮನ್ನು ಇನ್ನಷ್ಟು ಹತ್ತಿರಕ್ಕೆ ತಂತು. ಆಗ ಹುಬ್ಬಳ್ಳಿಯಲ್ಲಿದ್ದ ನಮ್ಮನ್ನು ರಾಮದಾಸ್ ಬೆಂಗಳೂರಿನ ಸಮಾವೇಶಕ್ಕೆ ಕರೆಸಿಕೊಂಡಿದ್ದರು.

ಹೀಗೆ ಸಿದ್ಧಾಂತದ ನೆಲೆಯಲ್ಲಿ ಕಿತ್ತಾಡುತ್ತಾ ಬಂದ ನಮ್ಮನ್ನು ಒಂದುಗೂಡಿಸಿದ್ದು ೧೯೯೨ರ ಅಯೋಧ್ಯೆ ಘಟನೆ. ಬಾಬರಿ ಮಸೀದಿಯನ್ನು ಸಂಘಪರಿವಾರದ ಪುಂಡರು ಆ ವರ್ಷ ಡಿಸೆಂಬರ್ ೬ರಂದು ಧ್ವಂಸಗೊಳಿಸಿದಾಗ ಈ ದೇಶದಲ್ಲಿ ಕೇಂದ್ರದಲ್ಲಿ ಸೆಕ್ಯೂಲರ್ ಸರ್ಕಾರವಿತ್ತು. ಕೇಂದ್ರೀಯ ಪಡೆಗಳ ಸಮ್ಮುಖದಲ್ಲೇ ಕೇಸರಿಪಡೆ ಮಸೀದಿಯನ್ನು ಕೆಡವಿದಾಗ ಈ ದೇಶದ ಪ್ರಗತಿಪರರಿಗೆಲ್ಲ ಶಾಕ್ ಆಯಿತು. ನಮ್ಮ ಅರಿವಿಗೆ ಬಾರದೆ ಫ್ಯಾಸಿಸ್ಟ್ ಶಕ್ತಿಗಳು ಭಯಾನಕವಾಗಿ ಬೆಳೆದುನಿಂತಿದ್ದವು. 'ಹಿಂದೂರಾಷ್ಟ್ರ'ದ ರಚನೆಯ ಮಾತು ಕೇಳಿಬರತೊಡಗಿತು.

ಇದರಿಂದ ರಾಮದಾಸ್ ನಿಜಕ್ಕೂ ಚಿಂತಾಕ್ರಾಂತರಾಗಿದ್ದರು. ಮಸೀದಿ ಉರುಳಿದ ಒಂದು ವಾರದ ನಂತರ ನಾನು ಮೈಸೂರಿಗೆ ಹೋದಾಗ ಅವರನ್ನು ಭೇಟಿ ಮಾಡಿದೆ. ದೇಶದ ವಿದ್ಯಮಾನಗಳ ಬಗ್ಗೆ ನೋವಿನಿಂದ ಮಾತಾಡಿದ ರಾಮದಾಸ್ "ಇನ್ನು ನಾವು ಸೋಷಲಿಸ್ಟರು, ಕಮ್ಯುನಿಸ್ಟರು ಜಗಳವಾಡಕೂಡದು. ನಮ್ಮ ಶತ್ರು ದೇಶವನ್ನೇ ನುಂಗಲು ಬಾಯಿ ತೆರೆದು ನಿಂತಿದ್ದಾನೆ. ಇನ್ನು ಮುಂದೆ ಏನಿದ್ದರೂ ಫ್ಯಾಸಿಸಂ ವಿರುದ್ಧ ಹೋರಾಟ ನಮ್ಮ ಏಕೈಕ ಅಜೆಂಡಾ" ಎಂದು ಹೇಳಿದ್ದರು. ಆ ನಂತರ ಹತ್ತು ವರ್ಷಗಳ ಕಾಲ ಕೊನೆಯುಸಿರೆಳೆಯುವವರೆಗೆ ರಾಮದಾಸ್ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಅವಿಶ್ರಾಂತ ಹೋರಾಟ ಮಾಡಿದರು.

ಜೆ.ಪಿ. ಚಳವಳಿಯಿಂದ ಸಂಘಪರಿವಾರ ಹೆಮ್ಮರವಾಗಿ ಬೆಳೆಯಿತು ಎಂದು ಹೇಳಿದಾಗ ಒಪ್ಪಿಕೊಳ್ಳುತ್ತಿದ್ದ ರಾಮದಾಸ್ ನಂತರ ಮೈಸೂರಿನಲ್ಲಿ ಕಮ್ಯುನಿಸ್ಟರ ಕಾರ್ಯಕ್ರಮಗಳಲ್ಲಿ ಕಾಯಂ ಮುಖ್ಯ ಭಾಷಣಕಾರರಾಗಿ ಬರತೊಡಗಿದರು. ಕಮ್ಯುನಿಸ್ಟರಿಂದ ಮಾತ್ರ ಫ್ಯಾಸಿಸ್ಟ್ ಶಕ್ತಿಗಳನ್ನು ತಡೆಯಲು ಸಾಧ್ಯ ಎಂದು ಹೇಳುತ್ತಿದ್ದರು. ಹೀಗೆ ಮಸೀದಿ ಧ್ವಂಸ ನಮ್ಮನ್ನು ಒಂದುಗೂಡಿಸಿತು. ಇಂಥ ರಾಮದಾಸ್ ಸಡನ್ನಾಗಿ ಎದ್ದುಹೋಗಿಬಿಟ್ಟರಲ್ಲ. ಈ ನಷ್ಟವನ್ನು ಭರಿಸುವುದು ಹೇಗೆ?

# ರಾಮದಾಸ್ ವ್ಯಕ್ತಿತ್ವವೇ ಬೇರೆ...

**ಹೊರೆಯಾಲ ದೊರೆಸ್ವಾಮಿ**

ಅಂದಿನ ದಿನಗಳಲ್ಲಿ ಶ್ರೀಕೃಷ್ಣ ಆಲನಹಳ್ಳಿ ಸೃಜನಾತ್ಮಕ ಕೃತಿಗಳಿಂದ ಹಾಗೂ ಮುನ್ನುಗ್ಗುವ ಸ್ವಭಾವದಿಂದ ಬೆರಗುಗೊಳಿಸುತ್ತಿದ್ದ. ಆದರೆ, ರಾಮದಾಸ್ ವ್ಯಕ್ತಿತ್ವವೇ ಬೇರೆ. ಅವರ ಮಾತಿನಲ್ಲಿ ಒಂದು ತರ್ಕಬದ್ಧ ವಿಚಾರಸರಣಿ ಇರುತ್ತಿತ್ತು. ಜೊತೆಗೆ ತಮ್ಮ ಅಭಿಪ್ರಾಯವನ್ನು ಯಾವ ಮುಚ್ಚುಮರೆಯಿಲ್ಲದೆ ಬಿಚ್ಚಿಡುತ್ತಿದ್ದರು. ನನಗೆ ಚೆನ್ನಾಗಿ ನೆನಪಿರುವ ಅಂಥ ಒಂದು ಸಂದರ್ಭವನ್ನು ಇಲ್ಲಿ ದಾಖಲಿಸಲು ಇಚ್ಛಿಸುತ್ತೇನೆ: ಮಹಾರಾಜ ಕಾಲೇಜಿನಲ್ಲಿ ೧೯೬೫-೬೭ ನೆಯ ಸಾಲಿನಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ ನಡೆದಿರಲಿಲ್ಲ. ಆ ಬಗ್ಗೆ ಕೆಲವು ವಿದ್ಯಾರ್ಥಿಗಳಿಗೆ ಅಸಮಾಧಾನವಿತ್ತು. ಕಾಲೇಜಿನ ವಾರ್ಷಿಕೋತ್ಸವ ದಿನವನ್ನು ಕಾದು ಕುಳಿತು ವಿದ್ಯಾರ್ಥಿಗಳ ಪರವಾಗಿ ಮಾತನಾಡಿದ ರಾಮದಾಸ್‌ರವರು ಪ್ರಿನ್ಸಿಪಾಲರನ್ನು ವೇದಿಕೆಯ ಮೇಲೆಯೇ ತರಾಟೆಗೆ ತೆಗೆದುಕೊಂಡಿದ್ದರು. ವಿದ್ಯಾರ್ಥಿ ಸಂಘದ ಆವಶ್ಯಕತೆಯನ್ನು, ಅದರ ಮಹತ್ವವನ್ನು ಬಲು ಅಚ್ಚುಕಟ್ಟಾಗಿ ವಿವರಿಸಿದ್ದರು. ವಿದ್ಯಾರ್ಥಿ ಸಮೂಹ ಮಾತ್ರ ಅಲ್ಲ, ಮಹಾರಾಜ ಕಾಲೇಜಿನ ಅಧ್ಯಾಪಕರಾದಿಯಾಗಿ ಎಲ್ಲರೂ ಅಂದು ಅವರನ್ನು ಕೊಂಡಾಡಿದರು.

ಅಷ್ಟೊತ್ತಿಗಾಗಲೆ ಸಮಾಜವಾದಿ ಯುವಜನಸಭಾದ ಸಕ್ರಿಯ ಸದಸ್ಯರಾಗಿದ್ದ ಅವರು ೧೯೬೬ರಲ್ಲಿ ನಡೆದ ಹಿಂದಿ ವಿರುದ್ಧದ ಹೋರಾಟದಲ್ಲಿ ತಮ್ಮನ್ನು ಪ್ರಾಮಾಣಿಕವಾಗಿ ತೊಡಗಿಸಿಕೊಂಡಿದ್ದರು. ಆ ಹೊತ್ತಿನಲ್ಲಿ ನಾನೂ ಅವರೊಂದಿಗಿರುತ್ತಿದ್ದೆ. ಮಹಾರಾಜ ಕಾಲೇಜಿನಲ್ಲಿ ನಾನು ಕಂಡ ಹಾಗೆ ಅವರೊಬ್ಬ ಉತ್ತಮ ವಾಕ್ಪಟು ಆಗಿದ್ದರು. ಹಲವಾರು ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಜಯಶೀಲರಾಗುತ್ತಿದ್ದರು. ರಾಮದಾಸ್ ಮಾತಿನ ಶೈಲಿಗಿಂತ ಹೆಚ್ಚಾಗಿ ಅವರ ಧೈರ್ಯವನ್ನು ನಾನು ಬಹುವಾಗಿ ಮೆಚ್ಚಿಕೊಂಡಿದ್ದೆ. ಕಾಲೇಜಿನ ದಿನಗಳಲ್ಲಿ ರಾಮದಾಸ್ ಅವರೊಂದಿಗಿನ ನನ್ನ ಮಾತುಕತೆ ತುಂಬ ಕಡಿಮೆಯಿತ್ತು. ಅವರು ಕೂಡ ಮೇಲೆ

ಬಿದ್ದು ಯಾರೊಂದಿಗೂ ಹೆಚ್ಚು ಮಾತನಾಡುತ್ತಿರಲಿಲ್ಲ. ರಾಮದಾಸ್ ಮತ್ತು ಶ್ರೀಕೃಷ್ಣ ಆಲನಹಳ್ಳಿ ಮಹಾರಾಜ ಕಾಲೇಜು ಬಿಟ್ಟು ತೆರಳಿದಾಗ ನನ್ನಂಥ ಅನೇಕರಿಗೆ ಏನೋ ಒಂದು ಬಗೆಯ ಖಾಲಿತನ ಕಾಡಿದಂತಾಯಿತು.

ಒಂದು ವರ್ಷದ ನಂತರ ನಾವೆಲ್ಲ ಮತ್ತೆ ಅಧ್ಯಯನ ಸಂಸ್ಥೆಯಲ್ಲಿ ಸೇರಿದೆವು. ೧೯೬೮ರಲ್ಲಿ ನಾನು ಕನ್ನಡ ಎಂ.ಎ.ಗೆ ಸೇರಿದಾಗ, ಅವರೂ ಕೂಡ ಕನ್ನಡ ಎಂ.ಎ ಅಂತಿಮ ತರಗತಿಯಲ್ಲಿದ್ದರು. ಆ ಅವಧಿಯಲ್ಲಿ ನಡೆದ ಒಂದು ಘಟನೆ ಇಲ್ಲಿ ನೆನಪಾಗುತ್ತಿದೆ:

೧೯೬೯- ಮಹಾತ್ಮಾಗಾಂಧೀಯವರ ಜನ್ಮಶತಾಬ್ದಿ ವರ್ಷ. ಆಗ ಎಚ್. ತಿಪ್ಪೇರುದ್ರ ಸ್ವಾಮಿಯವರು ಗಾಂಧೀಭವನದ ನಿರ್ದೇಶಕರಾಗಿದ್ದರು. ಆ ವರ್ಷದ ಬೇಸಿಗೆಯಲ್ಲಿ ಗಾಂಧೀಭವನದಲ್ಲಿ ಗಾಂಧೀ ತತ್ತ್ವಚಿಂತನೆಯ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸುತ್ತಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಬಿಳಿಗಿರಿರಂಗನ ಬೆಟ್ಟದಲ್ಲಿದ್ದ ಗಾಂಧೀ ಪ್ರತಿಷ್ಠಾನದ ಸಹಯೋಗದೊಂದಿಗೆ ಒಂದು ವಾರ ಕಾಲದ ಶ್ರಮದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಆ ಶಿಬಿರದಲ್ಲಿ ಅನಂತರಾಮು, ಗಜಾನನ ಈಶ್ವರ ಹೆಗಡೆ, ತೀ.ನಂ.ಶಂಕರನಾರಾಯಣ, ರಾಮದಾಸ್ ಹೀಗೆ ನಾವೆಲ್ಲಾ ಪಾಲ್ಗೊಂಡಿದ್ದೆವು. ಗಾಂಧೀ ಆಶ್ರಮದಲ್ಲಿ ಸೋಲಿಗರ ನಡುವೆ ಕೆಲಸ ಮಾಡುವುದು ನಮ್ಮ ಕಾರ್ಯಕ್ರಮವಾಗಿತ್ತು. ಆ ಒಂದು ವಾರಕಾಲದ ಶ್ರಮದಾನ ಶಿಬಿರ ನಿಜಕ್ಕೂ ಚಿರಸ್ಮರಣೀಯವಾದುದು.

ಅವಿಸ್ಮರಣೀಯ ಅನುಭವ ಕೊಟ್ಟ ಬೆಟ್ಟದಿಂದ ಮರಳಿ ಬಂದ ತರುವಾಯ ನಾವೆಲ್ಲ ಹಲವಾರು ಬಾರಿ ಶ್ರಮದಾನ ಶಿಬಿರಗಳಲ್ಲಿ, ಗಾಂಧೀ ಚಿಂತನೆಯ ಮಾಲೆಗಳಲ್ಲಿ ಎಡೆಬಿಡದೆ ಪಾಲ್ಗೊಂಡೆವು. ಅದರಲ್ಲಿ ವಿದ್ಯಾರ್ಥಿಗಳಲ್ಲದೆ, ಅಧ್ಯಾಪಕರೂ ವಿಶೇಷವಾಗಿ ಭಾಗವಹಿಸುತ್ತಿದ್ದರು. ಆ ಪೈಕಿ ನಿಗದಿತ ಕಾಲಕ್ಕೆ ಬಂದು, ನಿಷ್ಠೆಯಿಂದ ತೊಡಗಿಸಿಕೊಳ್ಳುತ್ತಿದ್ದವರಲ್ಲಿ ರಾಮದಾಸ್ ಕೂಡ ಒಬ್ಬರಾಗಿದ್ದರು. ಒಂದು ದಿನ ಊಟದ ಸಮಯದಲ್ಲಿ ಅವರು ಹಾರಿಸಿದ ನಗೆಚಾಟಿಯೊಂದು ಇಲ್ಲಿ ನೆನಪಾಗುತ್ತಿದೆ. ಸಾಲಾಗಿ ಊಟಕ್ಕೆ ಕುಳಿತವರ ಮುಂದೆ ಹಾಕಲಾಗಿದ್ದ ಎಲೆಗಳ ಮೇಲೆ ಊಟ ಬಡಿಸುವವರು ಒಂದೊಂದಾಗಿ ಪರಿಕರಗಳನ್ನು ಹಾಕುತ್ತ ಹೋಗುತ್ತಿದ್ದರು. ಎಲ್ಲರ ಎಲೆಗೂ ಎಲ್ಲ ಪರಿಕರಗಳು ಬರುವವರೆಗೆ ಯಾರು ಏನನ್ನು ತಿನ್ನುವಂತಿರಲಿಲ್ಲ. ಆ ಹೊತ್ತಿನಲ್ಲಿ ಮತ್ತೊಬ್ಬ ಪ್ರಾಮಾಣಿಕ ವ್ಯಕ್ತಿತ್ವದ ಅಧ್ಯಾಪಕರೂ, ಗಾಂಧೀವಾದಿಗಳೂ ಆಗಿದ್ದ ಉ.ಕಾ. ಸುಬ್ರಾಯಾಚಾರ್ ಅವರು ಹೇಳಿಕೊಡುತ್ತಿದ್ದ 'ಸಹನಾ ಭವತು ಸಹನೌಭುನಕ್ತು...' ಎಂದು ಪ್ರಾರಂಭವಾಗುವ ಶ್ಲೋಕವನ್ನು ಪಠಿಸಿ, ಅನಂತರ ಊಟ ಮಾಡಬೇಕಾಗಿತ್ತು. ಆಗೊಮ್ಮೆ ರಾಮದಾಸ್ ನಸುನಗುತ್ತಾ ಹೀಗೆ ಹೇಳಿದರು: ಈ ಶ್ಲೋಕ ಯಾಕೆ ಹೇಳ್ಬೇಕು ಗೊತ್ರೇನ್ರೀ? ಊಟಕ್ಕೂತವರ್ಗೆಲ್ಲ ಪದಾರ್ಥಗಳು ಬಂದು ಬೀಳೋವರ್ಗೆ ಬೇರೆ ಯಾರೂ ಏನನ್ನೂ ತಿನ್ನಬಾರ್ದು ಅಂತ. ಇಲ್ಲದಿದ್ರೆ, ಮೊದಲು ಬಡಿಸಿದವ್ರು ಮೊದಲು ತಿನ್ನೋಕೆ ಶುರುಮಾಡಿದ್ರೆ ಉಳಿದವರು ಮಿಕಿ ಮಿಕಿ ಅಂತ ನೋಡ್ಬೇಕ್ಕಾಗುತ್ತೆ. ಕೆಲವರ ಎಲೆ ಖಾಲಿಯಾಗುತ್ತೆ. ಇನ್ನು ಕೆಲವರ ಎಲೆ ತುಂಬಿರುತ್ತೆ. ಇದನ್ನೆಲ್ಲ

ತಪ್ಪಿಸಿ ಎಲ್ರು ಒಂದೇ ಟೈಂನಲ್ಲಿ, ಸಮಾನವಾಗಿ ಊಟ ಮಾಡ್ಲಿ ಅಂತ. ಇದೂ ಒಂದು ರೀತೀಲಿ ಊಟದ ಸಮಾಜವಾದ ಅಂತ ಅವರದೇ ಗಂಭೀರ ಶೈಲಿಯಲ್ಲಿ ಹೇಳಿದರು. ಅವರ ಮಾತನ್ನು ಕೇಳಿ ಊಟಕ್ಕೆ ಕುಳಿತಿದ್ದವರೆಲ್ಲ ಘೊಳ್ಳನೆ ನಕ್ಕರು. ಉ.ಕಾ. ಸುಬ್ರಾಯಾಚಾರ್ ದುರುಗುಟ್ಟಿಕೊಂಡು ರಾಮದಾಸ್ ಕಡೆಗೆ ಕಣ್ಣು ಹಾಯಿಸಿದರು.

ಜನಪರ ಧೋರಣೆಯುಳ್ಳ ರಾಮದಾಸ್ ಸಾಹಿತ್ಯ ಸಮಾರಂಭಗಳಿಗಿಂತ ವೈಚಾರಿಕ ಸಮಾರಂಭಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸುತ್ತಿದ್ದರು. ಸಮಾಜವಾದಿ ಚಿಂತನೆಯ ಹಿನ್ನೆಲೆಯುಳ್ಳ ಅವರು ಆ ದೃಷ್ಟಿಕೋನದಿಂದಲೇ ಸಮಾಜದ ಸಮಸ್ಯೆಗಳನ್ನು ನೋಡುತ್ತಿದ್ದರು. ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ಮುಂದುವರೆದ ಅವರು ಯಾವುದೇ ವಿಷಯದ ಬಗ್ಗೆ ವಸ್ತುನಿಷ್ಠವಾಗಿ ನೋಡುತ್ತಿದ್ದರು. ಭಾವನಾತ್ಮಕ ಎಳೆಗಳಿಗೆ ಅವರಲ್ಲಿ ಆಸ್ಪದವಿರುತ್ತಿರಲಿಲ್ಲ. ಇದಕ್ಕೆ ನಿದರ್ಶನವಾಗಿ ವಿಚಾರವಾದಿ ಒಕ್ಕೂಟದ ನೇತೃತ್ವದಲ್ಲಿ ಯಾಗವೊಂದರ ವಿರುದ್ಧ ನಡೆದ ಪ್ರತಿಭಟನೆಯನ್ನು ಇಲ್ಲಿ ದಾಖಲಿಸುವುದು ಸೂಕ್ತ: ೧೯೭೬ ರಲ್ಲಿ ಮೈಸೂರು ನಗರದ ಬನುಮಯ್ಯ ಕಾಲೇಜಿನ ಆವರಣದಲ್ಲಿ ಮೂರು ದಿನಗಳ ಕಾಲ ಯಾಗವೊಂದನ್ನು ಕೆಲವು ಸನಾತನವಾದಿಗಳು ವ್ಯವಸ್ಥೆ ಮಾಡಿದ್ದರು. ಮೈಸೂರಿನ ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಆರ್ಯಮಿತ್ರ ಅವರು ಅದರಲ್ಲಿ ಭಾಗವಹಿಸಿದ್ದರು. ಯಾಗದ ಸಂದರ್ಭದಲ್ಲಿ ಬೆಲೆಯುಳ್ಳ ವಸ್ತುವನ್ನು ಅಗ್ನಿಕುಂಡಕ್ಕೆ ಹಾಕುವುದು ಸಾಮಾನ್ಯ ತಾನೆ? ಈ ರೀತಿ ಪದಾರ್ಥಗಳನ್ನು ಸುಟ್ಟು ನಾಶಮಾಡುವುದರ ವಿರುದ್ಧ ಮೈಸೂರಿನ ವಿಚಾರವಾದಿ ಒಕ್ಕೂಟದ ನೇತೃತ್ವದಲ್ಲಿ ಮೂರು ದಿನಗಳ ಕಾಲವೂ ಬೃಹತ್ ಪ್ರತಿಭಟನಾ ಮೆರವಣಿಗೆಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಪ.ಮಲ್ಲೇಶ್‌ರವರು ಒಕ್ಕೂಟದ ಅಧ್ಯಕ್ಷರಾಗಿದ್ದರು. ಜಗನ್ಮೋಹನ ಅರಮನೆ ಮುಂಭಾಗದಿಂದ ಹೊರಡುತ್ತಿದ್ದ ಮೆರವಣಿಗೆ ಕೆಲವು ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಅನಂತರ ಯಾಗದ ಬಳಿಯೇ ಕೊನೆಗೊಳ್ಳುತಿತ್ತು. ಮೆರವಣಿಗೆಯಲ್ಲಿ ಗಾಂಧೀವಾದಿ ಟಿ.ಎಸ್. ಅನಂತರಂಗಾಚಾರ್, ಎನ್.ಈಶ್ವರ್, ರಾಮದಾಸ್, ನಾಗರಾಜೇಗೌಡ, ಭಕ್ತರಾಮೇಗೌಡ, ವಿ.ಜಗನ್ನಾಥ್, ಬಸವರಾಜ್ ಕುಕ್ಕರಹಳ್ಳಿ, ನಾನು ಸೇರಿದಂತೆ ಹಲವರು ಇರುತ್ತಿದ್ದೆವು. ಪ್ರತಿಭಟನೆಯ ಮೂರನೆಯ ದಿನ ಆರ್ಯಮಿತ್ರ ಅವರು ಯಾಗದ ಬಳಿ ಬಂದರು. ಆ ದಿನ ಸಂಜೆ ಪ್ರತಿಭಟನಾಕಾರರಿಗೂ ಆರ್ಯಮಿತ್ರರನ್ನೊಳಗೊಂಡ ವ್ಯವಸ್ಥಾಪಕ ವರ್ಗದವರಿಗೂ ಮಾತಿನ ಭಾರಿ ಚಕಮುಕಿಯೇ ಆಯಿತು. ರಾಮದಾಸ್‌ರವರು ಯಾಗ ಸಂಘಟಕರು ಹಾಗೂ ಜಿಲ್ಲಾಧಿಕಾರಿಗಳ ಮೇಲೆ ಎಗರಿ ಬಿದ್ದರು. ಏನಿಲ್ಲವೆಂದರೂ ಆರ್ಯಮಿತ್ರರಾದಿಯಾಗಿ ಕೆಲವರಿಗಾದರೂ ಯಾಗದಲ್ಲಿ ಆಗುವ ದುಂದುವೆಚ್ಚ, ಪದಾರ್ಥದ ನಾಶಗಳ ಬಗ್ಗೆ ಕೊಂಚವಾದರೂ ಮರುಚಿಂತನೆ ಮಾಡುವ ಹಾಗಾಯಿತು ಎಂಬುದು ಇಲ್ಲಿ ಉಲ್ಲೇಖನೀಯ. ಅನಂತರ ರಾಮದಾಸ್ ವಿಚಾರವಾದಿ ಒಕ್ಕೂಟದ ಅಧ್ಯಕ್ಷರಾದರು. ಅವರ ಅವಧಿಯಲ್ಲಿ ಹಲವಾರು ವೈಚಾರಿಕ ಕಾರ್ಯಕ್ರಮಗಳು ಹಾಗೂ ಬಳಿಕ ನಾನು ಒಕ್ಕೂಟದ ಅಧ್ಯಕ್ಷನಾದೆ. ಅಧ್ಯಕ್ಷ ಸ್ಥಾನಕ್ಕೆ ನನ್ನ ಹೆಸರು ಸೂಚಿಸಿದವರು ಅವರೇ. ಆ ಸಮಯದಲ್ಲಿ ನಡೆದ ಒಕ್ಕೂಟದ

ಚಟುವಟಿಕೆಗಳನ್ನು ಮೆಚ್ಚಿಕೊಳ್ಳುತ್ತಿದ್ದರು. ತಪ್ಪಿದ್ದಲ್ಲಿ ಖಂಡಿಸುತ್ತಿದ್ದರು. ಒಮ್ಮೆ ನನಗೂ ಅವರಿಗೂ ಮಾತಿನ ಚಿಕ್ಕಾಟ ಶುರುವಾಗಿ, ಆ ಮೇಲೆ ಪರಸ್ಪರ ಸಿಗರೇಟು ಹಚ್ಚಿಕೊಂಡು ಸೇದುವುದರೊಂದಿಗೆ ಮುಕ್ತಾಯವಾಯಿತು.

ರಾಮದಾಸ್ ಹೋರಾಟದ ಛಾಪನ್ನು ಬಹಳ ಹತ್ತಿರದಿಂದ ಕಂಡ ಇನ್ನೊಂದು ಸಂದರ್ಭ_ ಗೋಕಾಕ್ ಭಾಷಾವರದಿ ಅನುಷ್ಠಾನಕ್ಕಾಗಿ ಮೈಸೂರಿನಲ್ಲಿ ನಡೆದ ಹೋರಾಟ. ೧೯೮೧ರ ಕೊನೆಯಲ್ಲಿ (ಡಿಸೆಂಬರ್ ತಿಂಗಳು)ಗೋಕಾಕ್ ಭಾಷಾವರದಿ ಜಾರಿಗೆ ಆಗ್ರಹ ನಡೆದಿತ್ತು. ಪ್ರೌಢಶಾಲಾ ಮಟ್ಟದ ಶಿಕ್ಷಣದಲ್ಲಿ ಕನ್ನಡಕ್ಕೆ ಆದ್ಯತೆ ಕುರಿತ ಹೋರಾಟ ಅದಾಗಿತ್ತು. ಅದು ಪರೋಕ್ಷವಾಗಿ ಆವರೆಗೆ ಪ್ರಮುಖ ಸ್ಥಾನದಲ್ಲಿದ್ದ ಸಂಸ್ಕೃತವನ್ನು ಪ್ರಶ್ನಿಸುವುದಾಗಿತ್ತು. ಆದರೆ, ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ರಾಜ್ಯಸಭಾ ಸದಸ್ಯರಾಗಿದ್ದ ಎಫ್.ಎಂ. ಖಾನ್ ಉರ್ದು ವಿರೋಧಿ ಅಂಥ ಭಾವಿಸಿ, ವರದಿ ವಿರುದ್ಧ ಬೆಂಗಳೂರಿನಲ್ಲಿ ಪ್ರತಿಭಟನಾ ಮೆರವಣಿಗೆ ತೆಗೆದಿದ್ದರು. ಅದು ರಾಜ್ಯಾದ್ಯಂತ ಕನ್ನಡಿಗರಲ್ಲಿ ಸಹಜವಾಗೇ ಸಿಟ್ಟನ್ನು ಬಿತ್ತಿತ್ತು. ಅದಲ್ಲದೆ ಶಿಕ್ಷಣದಲ್ಲಿ ಕನ್ನಡ ಭಾಷೆಯ ಪ್ರಥಮ ಸ್ಥಾನಕ್ಕೆ ಇನ್ನೂ ಹಲವರು ವಿರೋಧಿಸುತ್ತಿದ್ದರು. ಆಗ ಹುಟ್ಟಿಕೊಂಡಿದ್ದೇ ಗೋಕಾಕ್ ಚಳವಳಿ.

ಮೈಸೂರಿನಲ್ಲಿ ಆಗ, ಕನ್ನಡ ಮಾಧ್ಯಮ ಹೋರಾಟ ಸಮಿತಿ ಅಸ್ತಿತ್ವದಲ್ಲಿತ್ತು. ಸ.ರ. ಸುದರ್ಶನ, ಮಹಾವೀರ್ ಪ್ರಸಾದ್ ಮತ್ತು ನಾನು ಸೇರಿದಂತೆ ಮೂವರು ಆ ಸಮಿತಿಯ ಸಂಚಾಲಕರಾಗಿದ್ದೆವು. ಗೋಕಾಕ್ ವರದಿಗೆ ಆಗ್ರಹಿಸಿ ಮಹಾರಾಜ ಕಾಲೇಜು ಶತಮಾನೋತ್ಸವ ಭವನದ ಮುಂದಿನ ಉದ್ಯಾನವನದಲ್ಲಿ ಒಂದು ಸಭೆ ಕರೆದಿದ್ದೆವು. ಸಭೆಯಲ್ಲಿ ನಾನಲ್ಲದೆ. ಡಿ.ವಿಜಯಾ, ಸಿ.ರಮೇಶ್, ರಾಮದಾಸ್ ಮುಂತಾದವರಿದ್ದರು. ಗೋಕಾಕ್ ವರದಿಯ ಅನುಷ್ಠಾನಕ್ಕಾಗಿ ಚಳವಳಿ ರೂಪಿಸುವುದು ಸಭೆಯ ಉದ್ದೇಶವಾಗಿತ್ತು. ಚರ್ಚೆಗಳು ಪ್ರಾರಂಭವಾದವು. ಆಗ, ನಾನು ಭಾವಾವೇಶದಿಂದ ಒಂದು ವಾರಕಾಲ ಉಪವಾಸ ಕೂರುವುದಾಗಿ ಸಭೆಗೆ ತಿಳಿಸಿದೆ. ಆಗ ರಾಮದಾಸ್ "ಇದು ಎಲ್ಲರ ಚಳವಳಿ ಆಗಬೇಕು, ಒಬ್ಬರ ತ್ಯಾಗ ಆಗಬಾರದು. ಕನ್ನಡ ಭಾಷೆಯ ಸ್ಥಾನಮಾನಕ್ಕಾಗಿ ಹೋರಾಡುವುದು ನಮ್ಮೆಲ್ಲರ ಜವಾಬ್ದಾರಿ. ನಾವೆಲ್ಲರೂ ಒಟ್ಟಾಗಿ ಸೇರಿ ಚಳವಳಿ ರೂಪಿಸೋಣ" ಎಂದು ಸಲಹೆ ನೀಡಿದರು. ಸಭೆ ಅದಕ್ಕೆ ತನ್ನ ಒಪ್ಪಿಗೆ ನೀಡಿತು.

ಕೆಲವು ದಿನಗಳಾದ ಮೇಲೆ ಕನ್ನಡ ಸಾಹಿತ್ಯ ಪರಿಷತ್ ನೇತೃತ್ವದಲ್ಲಿ ಚಳವಳಿ ನಡೆಯಿತು. ಆಮೇಲೆ ಕನ್ನಡ ಕ್ರಿಯಾಸಮಿತಿ ನೇತೃತ್ವದಲ್ಲಿ ಚಳವಳಿ ಮುಂದುವರೆಯಿತು. ಆಗ ಪ.ಮಲ್ಲೇಶ್ ಅವರು ಸಂಚಾಲಕರಾಗಿದ್ದರು. ಆ ದಿನಗಳಲ್ಲೇ ಒಂದು ದಿನ (ಬಹುಶಃ ಏಪ್ರಿಲ್ ತಿಂಗಳು) ಅಂದಿನ ಮುಖ್ಯಮಂತ್ರಿಗಳಾಗಿದ್ದ ಆರ್. ಗುಂಡೂರಾವ್ ಅವರು ಮಾನಸಗಂಗೋತ್ರಿಯ ಒಂದು ಸಮಾರಂಭಕ್ಕೆ ಬರುವವರಿದ್ದರು. ಪೊಲೀಸ್ ಇಲಾಖೆ ಭರ್ಜರಿ ಭದ್ರತೆ ವ್ಯವಸ್ಥೆ ಮಾಡಿತ್ತು. ಆದರೆ, ಅದರ ಹಿಂದಿನ ರಾತ್ರಿಯೇ ನಾವು ಕೆಲವು ಕ್ರಿಯಾಸಮಿತಿಯ ಸದಸ್ಯರು ಒಂದೆಡೆ ಸೇರಿ

ಮುಖ್ಯಮಂತ್ರಿಯವರ ವಿರುದ್ಧ ಪ್ರತಿಭಟನೆ ಮಾಡಿ, ಗೋಕಾಕ್ ವರದಿ ಅನುಷ್ಠಾನಕ್ಕೆ ಆಗ್ರಹಿಸಬೇಕೆಂದು ನಿರ್ಧರಿಸಿದ್ದೆವು.

ಮುಖ್ಯಮಂತ್ರಿಯವರು ಕಾರಿನಿಂದಿಳಿದು ಭದ್ರತಾಸಿಬ್ಬಂದಿಯ ರಕ್ಷಣೆಯೊಂದಿಗೆ ಸಮಾರಂಭದ ಸ್ಥಳಕ್ಕೆ ಪ್ರವೇಶಿಸುತ್ತಿದ್ದಂತೆ ಗುಜುಗುಜು ಪ್ರಾರಂಭವಾಯಿತು. ಇನ್ನೇನು ನಾನು ಘೋಷಣೆ ಹಾಕಬೇಕೆನ್ನುವಷ್ಟರಲ್ಲಿ ಸುದರ್ಶನ, 'ಗೋಕಾಕ್ ವರದಿ ಜಾರಿಗೆ ಬರಲಿ'ಅಂತ ಘೋಷಣೆ ಹಾಕುತ್ತ ವೇದಿಕೆ ಏರಿದರು. ಆ ತತ್‌ಕ್ಷಣವೆ ನಾನು ಏರಿದ ಧ್ವನಿಯಲ್ಲಿ ಘೋಷಣೆ ಕೂಗುತ್ತಾ ಕುರ್ಚಿಯ ಮೇಲೆ ಎದ್ದು ನಿಂತೆ. ಎಲ್ಲ ಕಡೆಯಿಂದ ಘೋಷಣೆಗಳು ಮೊಳಗಿದವು. ಮಫ್ತಿಯಲ್ಲಿದ್ದ ಪೊಲೀಸರು ಸೇರಿದಂತೆ ಉಳಿದ ಪೊಲೀಸರು ಕಕ್ಕಾಬಿಕ್ಕಿಯಾಗಿ ನೋಡತೊಡಗಿದರು. ವೇದಿಕೆ ಮೇಲಿದ್ದ ಕುಂಡಗಳು ಹಾರಾಡಿದವು. ಅಷ್ಟರಲ್ಲಿ ಪ. ಮಲ್ಲೇಶ್ ಮುಖ್ಯಮಂತ್ರಿಯವರನ್ನು ಅಡ್ಡಗಟ್ಟಿದರು. ರಾಮದಾಸ್ ಎದ್ದವರೇ ಮುಂದಿನಿಂದ ಗುಂಡೂರಾವ್ ಅವರನ್ನು ತಬ್ಬಿಹಿಡಿದರು. ಪೊಲೀಸರು ರಾಮದಾಸ್ ಅವರನ್ನು ಬಿಡಿಸಿಕೊಳ್ಳಲು ಬಲಪ್ರಯೋಗ ಮಾಡತೊಡಗಿದರು. ಅದನ್ನು ಕಂಡು ನಾನು ನಿಂತಲ್ಲಿಂದಲೇ ಹಾರಿ ರಾಮದಾಸ್‌ಗೆ ಬೆಂಬಲವಾಗಿ ನಿಂತೆ. ಮುಖ್ಯಮಂತ್ರಿಯವರ ಎಡಪಕ್ಕವನ್ನು ತಬ್ಬಿಹಿಡಿದೆ. ಇನ್ನೂ ಕೆಲವು ಚಳವಳಿಗಾರರು ಬಂದು ನಮ್ಮ ಬೆಂಬಲಕ್ಕೆ ನಿಂತರು. ಅಷ್ಟರಲ್ಲಿ ಉಗ್ರರಾದ ಪೊಲೀಸರು ರಾಮದಾಸ್‌ಗೂ ನನಗೂ ಬೆತ್ತದಿಂದ ಬಡಿದು ಮುಖ್ಯಮಂತ್ರಿಯವರಿಂದ ಬಿಡಿಸಿ, ವ್ಯಾನಿನತ್ತ ಎಳೆದೊಯ್ದರು. ರಾಮದಾಸ್ ಜಗ್ಗಾಡುತ್ತಲೇ ಇದ್ದರು. ನಾನು ಘೋಷಣೆ ಹಾಕುತ್ತಲೇ ಇದ್ದೆ. ಇನ್ನೂ ಹಲವರು ನಮ್ಮ ಜೊತೆಗಿದ್ದರು. ಅಂದು ರಾಜಶೇಖರ ಕೋಟಿಯವರಿಗೆ ಹೆಚ್ಚಿನ ಹೊಡೆತ ಬಿತ್ತು. ಒಂದು ವಾರದವರೆಗೆ ನನ್ನ ಗಂಟಲು ಕಟ್ಟಿತ್ತು. ಆ ಸಂದರ್ಭದಲ್ಲಿ ಚಳವಳಿಗಾರರು ಪ್ರದರ್ಶಿಸಿದ ಅಭೂತಪೂರ್ವ ಛಲ ಮತ್ತು ಕಾಳಜಿ ಎಂದೆಂದೂ ಸ್ಮರಣೀಯವಾದುದು. ಗೋಕಾಕ್ ಚಳವಳಿ ಮುಂದುವರೆಯಿತು. ಅದರ ಎಲ್ಲ ಹಂತಗಳಲ್ಲೂ ರಾಮದಾಸ್ ಸಕ್ರಿಯವಾಗಿ ಭಾಗವಹಿಸಿ ಅದಕ್ಕೊಂದು ಆತ್ಮಬಲವನ್ನು ನೀಡುತ್ತಿದ್ದರೆಂದೇ ನನ್ನ ಪ್ರಾಮಾಣಿಕ ಅನಿಸಿಕೆ.

ಹೀಗೆ ರಾಮದಾಸ್ ಕರ್ನಾಟಕದಲ್ಲಿ ಹುಟ್ಟಿಕೊಂಡ ಹಲವು ಹತ್ತು ಚಳವಳಿಗಳಲ್ಲಿ, ಮೆರವಣಿಗೆಗಳಲ್ಲಿ ಭಾಗವಹಿಸಿ ಅಲ್ಲೆಲ್ಲ ತಮ್ಮ ಖಚಿತ ಅಭಿಪ್ರಾಯಗಳನ್ನು ಬಿತ್ತುತ್ತಿದ್ದರು. ಅನಿಸಿದ್ದನ್ನು ನೇರವಾಗಿ ಹೇಳಿಬಿಡುವ ನಿರ್ಭಿಡೆ ವ್ಯಕ್ತಿತ್ವದ ರಾಮದಾಸ್ ಕ್ರಮೇಣ ಸಂಘಟನೆಗಳು ವಿಘಟನೆಗಳಾಗುತ್ತಿರುವುದುನ್ನು ಕಂಡು ಬೇಸರಗೊಂಡಿದ್ದರು. ಹಾಗೆಯೇ ಸಂಘಟಕರ, ಚಳವಳಿಗಾರರ ಇತಿಮಿತಿಗಳ ಬಗ್ಗೆಯೂ ಸ್ಪಷ್ಟವಾದ ನಿಲುವು ತಾಳಿದ್ದರು. ಈ ಚಳವಳಿಗಾರರು, ಸಂಘಟಕರು ಸಣ್ಣಪುಟ್ಟ ಆಮಿಷಕ್ಕೆಲ್ಲ ದುಂಬಾಲು ಬೀಳುತ್ತಾರೆ ಅಂತ ಅಸಹ್ಯ ಪಟ್ಟುಕೊಂಡಿದ್ದರು.

ವಿದ್ಯಾರ್ಥಿ ಜೀವನದಿಂದಲೂ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಪರವಾಗಿದ್ದ ರಾಮದಾಸ್ ಅವರ ಎಲ್ಲ ಚಳವಳಿಗಳೂ ಕೊನೆಯವರೆಗೂ ಆ ಪರವಾಗೇ ಇದ್ದವು. ಸಮಾಜವಾದಿ

ಚಿಂತಕರಾಗಿದ್ದು, ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಆ ಮೂಲಕವೇ ಸಾಧಿಸಬಹುದೆಂಬುದು ಅವರ ನಂಬಿಕೆಯೂ ಆಗಿತ್ತೆಂದು ನನಗೆ ಹಲವಾರು ಸಾರಿ ಅನ್ನಿಸುತ್ತಿತ್ತು. ಆ ಕಾರಣದಿಂದಲೇ ಇರಬೇಕು ಅವರೆಂದೂ ವರ್ಗ ಸಂಘರ್ಷದ ಸಿದ್ಧಾಂತವನ್ನು ತಾತ್ವಿಕವಾಗಿ ಒಪ್ಪುತ್ತಿರಲಿಲ್ಲ. ಮೈಸೂರಿಗೆ ಈಗ್ಗೆ ಏಳು ವರ್ಷಗಳ ಹಿಂದೆ ಬಂದಿದ್ದ ಗದ್ದರ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ವೀಕ್ಷಿಸಿ 'ಇದರಲ್ಲಿ ಏನು ಇಲ್ಲಕಣ್ರಿ' ಎಂದು ಹೇಳಿದ್ದು ನನಗಿನ್ನೂ ಚೆನ್ನಾಗಿ ನೆನಪಿದೆ.

ವೈಯಕ್ತಿಕ ನೆಲೆಗಟ್ಟಿನಲ್ಲಿ ವ್ಯಕ್ತಿಯನ್ನು ಸಮಾಜವನ್ನು ಟೀಕಿಸುವ ಬದಲು ಅವರು ತಾತ್ವಿಕ ನೆಲೆಗಟ್ಟಿನಲ್ಲಿ ನೋಡುತ್ತಿದ್ದುದೇ ಹೆಚ್ಚು. ಆದರೆ ಅದನ್ನು ಸರಿಯಾಗಿ ಅರಿಯದವರು ಬೇರೊಂದು ರೀತಿಯಲ್ಲಿ ಅರ್ಥೈಸುತ್ತಿದ್ದರು. ಈ ಎಲ್ಲ ಗುಣಧರ್ಮದೊಂದಿಗೆ ಕೆಲವೊಂದು ಮಿತಿಗಳೂ ಅವರಿಗಿದ್ದವು. ಅವರು ತಮ್ಮ ಅನಿಸಿಕೆಗಳನ್ನು, ವಿಚಾರಗಳನ್ನು ವೇದಿಕೆಗಳ ಮೇಲೆ ಖಡಾಖಂಡಿತವಾಗಿ ಹೇಳಿಬಿಡುತ್ತಿದ್ದವರೇ ಹೊರತು, ಅವಕ್ಕೊಂದು ಅಕ್ಷರ ರೂಪ ಕೊಡುವಲ್ಲಿ ಸಫಲರಾಗಲಿಲ್ಲ. ಆದರೂ ಸಾಂಸ್ಕೃತಿಕ ವಲಯದಲ್ಲಿ ತಮ್ಮದೇ ಆದ ವಿಚಾರಲಹರಿಗಳನ್ನು ಬಿತ್ತುತ್ತಿದ್ದ ಅನನ್ಯ ಕಳಕಳಿಯ ವ್ಯಕ್ತಿತ್ವದ ರಾಮದಾಸ್ ನಮ್ಮೆಲ್ಲರ ಒಡಲಾಳದಲ್ಲಿ ಹಲವು ಹತ್ತು ವರ್ಷಗಳ ಕಾಲ ಚಿರಸ್ಥಾಯಿಯಾಗಿರುತ್ತಾರೆ. ಅದಕ್ಕೆ ಪೂರಕವಾಗಿ ಅವರ ವೈಚಾರಿಕ ಚಿಂತನೆಗಳನ್ನು ಕ್ರೋಡೀಕರಿಸಿ ಒಂದೆಡೆ ಸಂಗ್ರಹಿಸಬೇಕಾದ ಅಗತ್ಯವಂತೂ ಇದ್ದೇ ಇದೆ.

# ಕೊಂಡಿಯೊಂದು ಕಳಚಿತು

ಪ್ರೊ. ಶಿವರಾಮಯ್ಯ

ಪ್ರೊ. ರಾಮದಾಸ್ 30-40 ವರ್ಷಗಳಿಂದ ಹಳೆಯ ಮೈಸೂರು ಪ್ರಾಂತ್ಯದ ಚಳವಳಿಗಳ ಮುಂಚೂಣಿಯ ಒಬ್ಬ ವ್ಯಕ್ತಿಯಾಗಿದ್ದರು. ರೈತ ಕಾರ್ಮಿಕರ, ವಿದ್ಯಾರ್ಥಿಗಳ, ಮಕ್ಕಳ-ಸ್ತ್ರೀಯರ, ಸಾಹಿತಿ ಕಲಾವಿದರ ಹೀಗೆ ಯಾರ ಸಮಸ್ಯೆಗಳಿದ್ದರೂ ಅವರು ತೀವ್ರ ಪ್ರತಿಕ್ರಿಯೆ ನೀಡುತ್ತಿದ್ದರು. ಜಾತಿ-ಧರ್ಮ ಮತಗಳ ರಾಜಕಾರಣಗಳನ್ನು ಕಂಡರೆ ಕಿಡಿ ಕಾರುತ್ತಿದ್ದರು. ಸಾಮಾಜಿಕ ಸಮಸ್ಯೆ ಅದು ಹಿರಿದಾಗಲೀ ಕಿರಿದಾಗಲೀ ಅವರು ಪ್ರತಿಕ್ರಿಯಿಸದೆ ಸುಮ್ಮನೆ ಕೂರುವ ವ್ಯಕ್ತಿಯಾಗಿರಲಿಲ್ಲ. ಖಿನ್ನತೆ ಎಂಬುದು ಅವರ ಬಳಿ ಸುಳಿಯುತ್ತಿರಲಿಲ್ಲ. ಅನೇಕ ಪ್ರಗತಿ ಪರ ಸಂಘಟನೆಗಳಲ್ಲಿ ಅವರು ತೊಡಗಿಕೊಂಡಿದ್ದರು. ಜಾತಿ ವಿನಾಶ ವೇದಿಕೆ, ಸಾಹಿತಿ ಬರಹಗಾರರ ಒಕ್ಕೂಟ, ಪ್ರಗತಿರಂಗ ಮುಂತಾದ ಸಂಘಟನೆಗಳಲ್ಲಿ ಕ್ರಿಯಾಶೀಲರಾಗಿದ್ದುಕೊಂಡು ಸಾಮಾಜಿಕ ಅನ್ಯಾಯಗಳನ್ನು ಕಾಲ ಕಾಲಕ್ಕೆ ಪ್ರಶ್ನಿಸುತ್ತಾ ಬಂದರು ರಾಮದಾಸ್. ಈ ಕಾರಣಗಳಿಂದಾಗಿ ಅನೇಕ ವೇಳೆ ಪೊಲೀಸರ ಆತಿಥ್ಯವನ್ನೂ ಅನುಭವಿಸಿದರು.

ಇದೇ ಜೂ.೧೯.೨೦೦೭ ರಂದು ಮೈಸೂರಿನ ಕುವೆಂಪು ನಗರದ ಪಂಚಮಂತ್ರ ರಸ್ತೆಯ 'ಚಾರ್ವಾಕ' ಗೃಹ ನಿವಾಸಿಯಾಗಿದ್ದ ಪ್ರೊ.ಕೆ.ರಾಮದಾಸ್ (66) ನಮ್ಮನ್ನಗಲಿದರು. ರಾಮದಾಸ್‌ರ ಅಗಲಿಕೆಯನ್ನು ಸಹಿಸಲಾರದ ಜನಮನದ ಹಾಡುಗಾರ ಜನ್ನಿ (ಜನಾರ್ಧನ್) ಕುವೆಂಪು ಅವರ 'ಅನಿಕೇತನ' ಕವನವನ್ನು ಅವರ ಪಾರ್ಥಿವ ಶರೀರದ ಎದುರು ಹಾಡಿ ನೆರೆದ ಸಾವಿರಾರು ಅಭಿಮಾನಿಗಳ ಪರವಾಗಿ ಗೌರವ ನಮನ ಸಲ್ಲಿಸಿದರು. ಪ್ರೊ.ಕೆ. ರಾಮದಾಸ್ ಅವರೊಂದಿಗೆ ಕರ್ನಾಟಕದ ಆಧುನಿಕ 'ಚಾರ್ವಾಕ' ಪರಂಪರೆಯ ಕೊಂಡಿಯೊಂದು ಕಳಚಿತು. ಚಾರ್ವಾಕ ಎಂದರೆ ದೇವರ ಅಸ್ತಿತ್ವದಲ್ಲಿ ನಂಬಿಕೆ ಇಲ್ಲದವನು; ನಾಸ್ತಿಕ ಎಂದು. ಆದರೆ ಚಾರ್ವಾಕರು ಆಧುನಿಕತೆಯ ಲೋಲುಪರಲ್ಲ. ಅವರು ಪ್ರಜಾತಂತ್ರವಾದಿಗಳು. ಜನರೊಡನಿದ್ದು, ಜನರಲ್ಲಿ ನಂಬಿಕೆ ಇಟ್ಟು

ಅವರ ಪುರೋಭಿವೃದ್ಧಿಗೆ ಶ್ರಮಿಸುವವರು. ನಾಸ್ತಿಕರೆಂದರೆ ಕನಸುಗಳಿಂದ ದೂರ ಸರಿದವರಲ್ಲ. ಆದ್ದರಿಂದ ರಾಮದಾಸರ ಕನಸುಗಳು ಇಂತಿದ್ದವು.

ಕನಸುಗಳು ಬೇಕು. ಎಂಥ ಸಂದರ್ಭದಲ್ಲೂ ಸಾಮಾಜಿಕ ಕಳಕಳಿಗಳಿಂದ ದೂರವಾಗದ ಕ್ರಿಯಾಶೀಲ ಅಭಿವ್ಯಕ್ತಿ ಎಲ್ಲರಿಗೂ ಸಾಧ್ಯವಾಗಬೇಕು. ಪ್ರತಿಭಟನೆ ಪ್ರಶ್ನೆಗಳಿಗೆ ಸಾವಿಲ್ಲ. ಸತ್ಯ ಹೇಳುವುದು ಜಾತಿಧರ್ಮ ಪ್ರಭುತ್ವದ ಅನ್ಯಾಯಗಳ ವಿರುದ್ಧ ದಂಗೆಯೇಳುವುದು, ನಮ್ಮನ್ನು ಒಂಟಿತನದ ಹಿಂಸೆಗೆ ಗುರಿ ಮಾಡಿದರೂ ಸಾವಿರಾರು ಕನಸುಗಳನ್ನು ಕಟ್ಟಿಕೊಂಡು ಮತ್ತೆ ಮತ್ತೆ ಪುಟಿಯುವ ಉತ್ಸಾಹವಿರಬೇಕು. ಆದರೆ ಈ ಗುರಿ ಸಾಧನೆಗಾಗಿ ಯಾವತ್ತೂ ಹಿಂಸಾಮಾರ್ಗವನ್ನು ತುಳಿಯುವುದು ತಪ್ಪು. 'ನಕ್ಸಲೀಯರು ಅಡಗಿಕೊಳ್ಳುವುದರಲ್ಲಿಯೇ ಅವರ ಅಪರಾಧಿ ಪ್ರಜ್ಞೆ ಇದೆ. ಅದು ಅಪಾಯಕರ. ಆದ್ದರಿಂದ ನಾವು ಅಂತಹ ಮಾರ್ಗವನ್ನು ಖಂಡಿಸದೆ ಗತ್ಯಂತರವಿಲ್ಲ', ಎಂದು ರಾಮದಾಸ್ ಪ್ರತಿಪಾದಿಸಿದರು. ಕುವೆಂಪು, ಲಂಕೇಶ್, ದೇವನೂರು, ತೇಜಸ್ವಿ, ಶಿವರಾಮ ಕಾರಂತರ ಬರಹಗಳನ್ನು ನಮ್ಮ ಹೊಸ ತಲೆಮಾರಿನ ಬರಹಗಾರರು ಓದುವುದರೊಂದಿಗೆ ತಮ್ಮ ಪ್ರಜ್ಞೆಯನ್ನು ವಿಸ್ತರಿಸಿಕೊಳ್ಳುವುದು ಸೂಕ್ತ ಎಂದು ಸಲಹೆ ಮಾಡಿದರು ಅವರು. ಹೀಗೆ ರಾಮದಾಸ್ ವಿಚಾರವಾದಿ ಟಾರ್ಚನ್ನು ಬೆಳಗಿಸುತ್ತ ನಾಡಿನ ಎಲ್ಲೆಡೆ ಸಂಚರಿಸಿದರು. ಉದಾಹರಣೆಗೆ:

ಕೆಲವು ವರ್ಷಗಳ ಹಿಂದೆ ಮೈಸೂರಿನಲ್ಲಿ ಮನೆಗೆಲಸದ ಹುಡುಗಿಯೊಬ್ಬಳಿಗೆ ಚಿತ್ರಹಿಂಸೆ ನೀಡಿ, ಅವಳ ಸಾವಿಗೆ ಕಾರಣರಾದವರನ್ನು ಅರೆಸ್ಟ್ ಮಾಡಬೇಕೆಂದು ಪ್ರತಿಭಟಿಸಿದರು. ವಿಪರ್ಯಾಸ ಎಂದರೆ ನ್ಯಾಯ ಕೇಳಲು ಹೊರಟ ಇವರ ಗುಂಪಿನ ಮೇಲೆ ಪೋಲೀಸರು ಲಾಠಿಚಾರ್ಜ್ ಮಾಡಿದರು. ಮಲೆನಾಡಿನ ಸಾಗರ ಸೀಮೆಯಿಂದ ಬಂದು ಮೈಸೂರಿನಲ್ಲಿ ಅಧ್ಯಾಪಕರಾಗಿ ನೆಲೆ ನಿಂತು, ಅನೇಕ ವಿದ್ಯಾರ್ಥಿಗಳಲ್ಲಿ ವೈಚಾರಿಕ ಪ್ರಭೆಯನ್ನು ಉದ್ದೀಪನಗೊಳಿಸಿದರು ಪ್ರೊ. ರಾಮದಾಸ್. ಅವರ ವೈಚಾರಿಕ ದಕ್ಷತೆ ಅನನ್ಯ. ಕೆಲವು ವರ್ಷಗಳ ಹಿಂದೆ ಮಂಡ್ಯದಲ್ಲಿ ಕರ್ನಾಟಕ ವಿಮೋಚನಾರಂಗ ಸಂಘಟನೆ ಸಭೆಯಲ್ಲಿ ಅವರು ಮಾಡಿದ ಭಾಷಣ ಈ ನಿಟ್ಟಿನಲ್ಲಿ ಗಮನಾರ್ಹ. ಕೋಮುವಾದಿ ಸಂಘಟನೆಗಳದು 'ಭಸ್ಮಾಸುರ ಸಂಸ್ಕೃತಿ' ಎಂದೂ, ಮತ್ತು ಇಂದಿನ ಜಾಗತೀಕರಣದ್ದು 'ಬಕಾಸುರ ಸಂಸ್ಕೃತಿ' ಎಂದು ಅವರು ವಿಶ್ಲೇಷಿಸುತ್ತಿದ್ದರು. ಈ ಎರಡರಿಂದ ದೇಶ ತಲ್ಲಣಗೊಳ್ಳುತ್ತಿದೆ. ಇದಕ್ಕೆಲ್ಲ ಕಾರಣ ಎಂದರೆ ನಮ್ಮ ಮೂಲಭೂತವಾದಿಗಳು ಮತ್ತು ಅಮೆರಿಕದ ಸೂಪರ್ ಪವರ್ ಬಂಡವಾಳಶಾಹಿಗಳು. ಇದು ಅವರ ನೇರ ನಡೆನುಡಿಗೆ ಸಾಕ್ಷಿ.

ಆದಿವಾಸಿ ಜನರ ಪರವಾಗಿ ನ್ಯಾಯ ಕೇಳುವ ಮೇಧಾಪಾಟ್ಕರ್, ಅರುಂಧತಿರಾಯ್ ಮುಂತಾದ ಸಮಾಜ ಕಾರ್ಯಕರ್ತೆಯರನ್ನು ಜೈಲಿಗೆ ದೂಡುವ ನಮ್ಮ ನ್ಯಾಯಾಲಯಗಳು, ಮಂದಿರ-ಮಸೀದಿ ಮೇಲಿನ ತೀರ್ಪನ್ನು ಲೆಕ್ಕಿಸದೆ ಧಿಮಾಕಿನಿಂದ ತಿರುಗುವ ಸಂಘ ಪರಿವಾರದ ನಾಯಕರನ್ನು ಮಾತ್ರ ಹೇಗೆ ಸಹಿಸಿಕೊಂಡಿದೆ ಎಂದು ಅವರು ಪ್ರಶ್ನಿಸುತ್ತಿದ್ದರು. ವಿಶ್ವ ಹಿಂದೂ

ಪರಿಷತ್ತಿನ ಸನ್ಯಾಸಿ ರಾಜಕಾರಣಿಗಳ ಭಂಡತನವನ್ನು ಅವರು ಖಂಡಿಸುತ್ತಿದ್ದರು. ಶೂದ್ರ ಆದಿವಾಸಿ ಮಕ್ಕಳ ಕೈಗೆ ತ್ರಿಶೂಲ ತಲವಾರ್ ಕೊಟ್ಟು ಅಲ್ಪಸಂಖ್ಯಾತರ ಮೇಲೆ ಧಾಳಿ ಮಾಡಲು ನಿಯೋಜಿಸುವ ಸಂಘ ಪರಿವಾರವು ಯಾವತ್ತೂ ಈ ವಿಚಾರವಂತರ ಕೆಂಗಣ್ಣಿಗೆ ಗುರಿಯಾಗಿಯೇ ಇತ್ತು.

ಈ ನಡುವೆ ನಮ್ಮ ಆದರ್ಶಗಳು ಮೌಲ್ಯಗಳು ಹೆಚ್ಚೆಚ್ಚು ನೆಲ ಕಚ್ಚುತ್ತಿರುವುದಕ್ಕೆ ವಿಷಾದಿಸುವ ರಾಮದಾಸ್, ನಮ್ಮ ವಿಶ್ವವಿದ್ಯಾಲಯ ಹಾಗೂ ಶಿಕ್ಷಣ ಸಂಸ್ಥೆಗಳು ಕೇವಲ ಜಾತಿ ವಿಕಾರಗಳಾಗುತ್ತಿವೆ ಎಂದು ಆಕ್ಷೇಪಿಸುತ್ತಿದ್ದರು. ಇಂಥ ಕಡೆ ನೀವು ಕಲಿಯುವುದು ಏಂಥದು ಇಲ್ಲವೆಂದು ವಿದ್ಯಾರ್ಥಿಗಳಿಗೆ ತಿಳಿಯ ಹೇಳುತ್ತಿದ್ದರು. ಇಂಥಹ ಕೆಟ್ಟ ಗಬ್ಬುನಾರುವ ದೇಶ ಒಂದನ್ನು ಹೊಸ ಶತಮಾನದಲ್ಲಿ ಯುವ ಪೀಳಿಗೆಗೆ ಹಸ್ತಾಂತರಿಸುವುದಕ್ಕಾಗಿ ಅವರು ಬೇಸರಿಸುತ್ತಿದ್ದರು.

ಆದರೆ ದೊಡ್ಡವರ ಈ ಸಣ್ಣತನದತ್ತ ನೀವು ಕಣ್ಣೆತ್ತಿ ಸಹ ನೋಡದೆ ನಾಳಿನ ಆಶಾಶಿಖರಗಳಾಗಿ ಬೆಳೆಯಬೇಕೆಂದು ಆಶಿಸುತ್ತಿದ್ದರು. ಜಾತಿ ದೇಶವನ್ನು ಒಡೆಯುತ್ತದೆ, ಆದ್ದರಿಂದ ಸೌಹಾರ್ದದ ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ಮಾಡಬೇಕು ಅದಕ್ಕಾಗಿ ನೀವು ಜವಾಬ್ದಾರಿ ಹೊರಬೇಕು ಎಂದರವರು. ರಾಮದಾಸರ ಮಾತುಗಳನ್ನು ಕೆಲವರು ಸಿನಿಕತನವೆಂದು ಜರೆದು ಮಾತಾಡಿದ್ದುಂಟು. ಆದರೂ ಅದನ್ನು ಲೆಕ್ಕಿಸದೆ, ದೇಹಾಲಸ್ಯ ದಣಿವುಗಳಿಲ್ಲದೆ ರಾಮದಾಸ್ ಎದೆಗಾರಿಕೆಯಿಂದ ಮಾತನಾಡುತ್ತಾ ಹೋದರು. ಅವರ ಮಾತುಗಳಿಗೆ ಜನ ಮಾರು ಹೋಗುತ್ತಿದ್ದರು. ಅಪ್ರಿಯ ಸತ್ಯವಾದರೂ ಬಿಡದೆ ನಿಷ್ಠುರವಾಗಿ ಮಾತನಾಡುತ್ತಿದ್ದ ಅವರ ಪ್ರಾಮಾಣಿಕತೆಗೆ, ಧೈರ್ಯಕ್ಕೆ ಕನ್ನಡ ಜನ ಗೌರವಿಸಿದರು.

ಈ ಮಾತಿಗೆ ನಿದರ್ಶನವಾಗಿ ಒಂದೆರಡು ಸಂದರ್ಭಗಳನ್ನಿಲ್ಲಿ ಉಲ್ಲೇಖಿಸಬಹುದು. ೨೦೦೨ ಏಪ್ರಿಲ್ 8ರಂದು ಬೆಂಗಳೂರಿನಲ್ಲಿ ನಡೆದ ತೇಜಸ್ವಿ ಬದುಕು-ಬರಹ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ರಾಮದಾಸ್ ಅವರು, ಪ್ರಶಸ್ತಿ ವಾಂಛೆಯಿಂದ ನಮ್ಮ ಅನೇಕ ಜನ ಸಾಹಿತಿಗಳು ವಿಧಾನ ಸೌಧದ ಬಳಿ ಟೆಂಟ್ ಹಾಕಿ, ಲಾಬಿ ಮಾಡುತ್ತಾರೆಂದು ದೂರಿದ್ದು ಉಚಿತವಾಗಿಯೇ ಇತ್ತು. ಅವರ ವಾಗ್ದಾಳಿ ಯಾರನ್ನೂ ಬಿಟ್ಟಿರಲಿಲ್ಲ. ಕೆಲವು ವರ್ಷಕಾಲ ಬರವಣಿಗೆಯನ್ನು ಸ್ಥಗಿತಗೊಳಿಸಿ, ಕಂಪ್ಯೂಟರ್ ಕಲಿಕೆಯಲ್ಲಿ ತೊಡಗಿಸಿಕೊಂಡಿದ್ದ ಅವರ ಆತ್ಮೀಯ ಲೇಖಕರಾದ ತೇಜಸ್ವಿಯವರನ್ನು ಕುರಿತು 'ಆಮೆಯಂತೆ' ಚಿಪ್ಪಿನೊಳಗೆ ಸೇರಿಕೊಳ್ಳದೆ ಹೊರಬಂದು, ಜಾಗತಿಕ ವಿಷಜ್ವಾಲೆಗೆ ಮುಖಾಮುಖಿಯಾಗಿ ನಿಂತು, ತಮ್ಮ ಸಾಹಿತ್ಯ ಕಥನವನ್ನು ಮುಂದುವರಿಸಬೇಕೆಂದು ಒತ್ತಾಯಿಸಿದರು. ತದನಂತರ ತೇಜಸ್ವಿಯವರು ಮಾಯಾಲೋಕ (೨೦೦೫)ವನ್ನು ಬರೆದದ್ದು ಕಾಕತಾಳೀಯವೇನಲ್ಲ.

ಪ್ರೊ. ರಾಮದಾಸ್ ತುಂಬಾ ನಿಷ್ಠುರ ನಿಲುವಿನ ವ್ಯಕ್ತಿ ಎಂಬುದಕ್ಕೆ ಇನ್ನೊಂದು ನಿದರ್ಶನ. ಲಂಕೇಶ್ ಪತ್ರಿಕೆ ಸ್ಥಾಪಿತವಾದ ಒಂದೇ ವರ್ಷದಲ್ಲಿ ಅದು ಕರ್ನಾಟಕದ ಜಾಣ-ಜಾಣೆಯರಲ್ಲಿ ಒಂದು ಹೊಸ ಸಂಚಲವನ್ನುಂಟು ಮಾಡಿದ್ದು ಈಗ ಇತಿಹಾಸ. ಹೀಗೆ ಪತ್ರಿಕೆ ಯಶಸ್ಸಿನ ಶಿಖರ

ಮುಟ್ಟಿದ ವರ್ಷಾಚರಣೆಯನ್ನು ಮೈಸೂರಿನಲ್ಲಿ ಆಚರಿಸಬೇಕೆಂದು ಬಯಸಿದ ಲಂಕೇಶ್ ಅಭಿಮಾನಿಗಳು ಅವರನ್ನು ಮೈಸೂರಿಗೆ ಆಹ್ವಾನಿಸಿದರು. ಆ ಸನ್ಮಾನ ಸಭೆಗೆ ಹೋದ ರಾಮದಾಸ್ ಅವರು 'ಇಂಥ ಸನ್ಮಾನ ಸಂಸ್ಕೃತಿಗೆ ಧಿಕ್ಕಾರವಿರಲಿ ಭಟ್ಟಂಗಿ ಸಂಸ್ಕೃತಿಗೆ ಧಿಕ್ಕಾರವಿರಲಿ' ಎಂದು ಘೋಷಣೆ ಕೂಗಿ ಹೊರ ಬಂದರು. ಅದು ಲಂಕೇಶ್ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ 'ಹೊಸ ಕ್ರಾಂತಿಕಾರಿ ಒಬ್ಬನ ಆರ್ಭಟ' ಎಂಬ ತಲೆ ಬರಹದಲ್ಲಿ ಲೇವಡಿಗೆ ಗುರಿಯಾಯಿತು. ಆದರೂ ರಾಮದಾಸ್ ಅವರ ನಿಲುವು ಸತ್ಯ ನಿಷ್ಠವಾಗಿತ್ತು. ಇದನ್ನರಿತ ಲಂಕೇಶ್ ಕೆಲವು ದಿನಗಳ ಮೇಲೆ ಸ್ವತಃ ತಾವೇ ಮೈಸೂರಿಗೆ ಹೋಗಿ, ರಾಮದಾಸರನ್ನು ಕಂಡು 'ನಿನ್ನ ಪ್ರತಿಭಟನೆ ಸರಿ, ನೀನು ನನ್ನ ಒಬ್ಬ ಮಾರ್ಗದರ್ಶಿ' ಎಂದೆಲ್ಲಾ ಹೇಳಿ ತಮ್ಮ ಪ್ರೀತಿಯನ್ನು ಹಂಚಿಕೊಂಡುಬಂದರು. (೧೩.೩.೨೦೦೭ರ ಲಂಕೇಶ್ ಪತ್ರಿಕೆ ಲೇಖನ ಗಮನಿಸಿ)

ಪ್ರೊ.ಕೆ. ರಾಮದಾಸರ ಸಮಕಾಲೀನ ಪ್ರಜ್ಞೆಗೆ, ಅವರ ವಿಮರ್ಶಾ ವಿವೇಕಕ್ಕೆ ಇಂಥಹ ಹಲವಾರು ಪ್ರಸಂಗಗಳನ್ನು ಉದಾಹರಿಸಬಹುದು. ಅವರು ಜನಪರ ಹೋರಾಟಗಾರರು ಸಾಮಾಜಿಕ ಅನ್ಯಾಯಗಳಿಗೆ ಯಾವ ರಾಜಿ ಕಬೂಲಿಯೂ ಇಲ್ಲದೆ ಎದ್ದು ನಿಲ್ಲುತ್ತಿದ್ದರು. ಮೈಸೂರು-ಬೆಂಗಳೂರು ಕಾರಿಡಾರ್ ರಸ್ತೆ (BMIC) ಕಾಮಗಾರಿ ವಿರುದ್ಧ, ಕುದುರೆಮುಖ ಗಣಿಗಾರಿಕೆ ವಿರುದ್ಧ, ಕುದುರೆಮುಖ ನ್ಯಾಶನಲ್ ಪಾರ್ಕ್ ವ್ಯಾಪ್ತಿಯಿಂದ ಆದಿವಾಸಿ ಗಿರಿಜನರನ್ನು ಒಕ್ಕಲೆಬ್ಬಿಸುವ ವಿರುದ್ಧ ಅವರು ದನಿ ಎತ್ತಿದರು. ಹೀಗೆ ಜನಪರ ಸಂಘಟನೆಗಳಲ್ಲಿ ಜೀವಮಾನಪೂರ್ತಿ ತೊಡಗಿಸಿಕೊಂಡಿದ್ದರು. 'ಅಭಿವೃದ್ಧಿ ಎನ್ನೋದೆ ಒಂದು ಭ್ರಮೆ' ಎಂದು ಮನವರಿಕೆ ಮಾಡಿಕೊಂಡಿದ್ದ ರಾಮದಾಸ್ ಅವರು ಲೂಟಿಕೋರ ಜಾಗತೀಕರಣವನ್ನು ನೆಲಮೂಲ ಸಂಸ್ಕೃತಿಯ ವಕ್ತಾರರಾಗಿ ಅವರು ವಿರೋಧಿಸುತ್ತಲೇ ಬಂದರು.

ಪ್ರೊ.ಕೆ. ರಾಮದಾಸ್ ಅವರು ಸೃಜನಶೀಲ ಲೇಖಕರಲ್ಲವಾದರೂ ಅನೇಕ ಲೇಖಕರಿಗೆ ಪ್ರೇರಕರೂ ಪೋಷಕರೂ ಆಗಿದ್ದರು. ಕುವೆಂಪು ಪರಂಪರೆಯ ವಿಜ್ಞಾನ ಜ್ಯೋತಿಯನ್ನು ಬೆಳಗಿಸಲು ಅವರು ಮುಂದಾದರು. ಮತ ಮೌಢ್ಯಗಳನ್ನು ಸೀಳಿ ನೂತನ ವಿಚಾರ ಕ್ರಾಂತಿಗೆ ಕರೆ ಕೊಟ್ಟ ಕವಿವಾಣಿ ಅವರ ಆದರ್ಶವಾಗಿತ್ತು. ಪ್ರಸ್ತುತ ಅವರು ನಮ್ಮೊಡನೆ ಇಲ್ಲದಿದ್ದರೂ ಅವರು ಹಚ್ಚಿಟ್ಟ ವೈಚಾರಿಕ ದೀವಟಿಗೆ ನಮ್ಮ ಎದುರಿಗಿದೆ. ಅದರಿಂದ ಯುವ ಪೀಳಿಗೆ ತಮ್ಮ ತಮ್ಮ ನೀತಿಗಳನ್ನು ಹಚ್ಚಿಕೊಂಡು ಮುನ್ನಡೆಯಬಹುದು.

ತೇಜಸ್ವಿಯವರು ನಿಧನರಾದಂದು (೫-೪-೨೦೦೭) ರಾಮದಾಸ್ ಹೇಳಿದ ಒಂದು ಮಾತು ಮಾರ್ಮಿಕವಾಗಿತ್ತು. 'ಇನ್ನು ಇಲ್ಲಿ ಕಲೆತಿರುವ ನಾವೆಲ್ಲರೂ ಮತ್ತೆ ಸೇರುವೆವೋ ಇಲ್ಲವೋ! ಆದ್ದರಿಂದ ಇಂದೇ ಪರಸ್ಪರ ವಿದಾಯ ಹೇಳಿಕೊಳ್ಳೋಣ' ಅದೇ ಪ್ರಕಾರ ಅವರು ಈಗ ನಡೆದುಬಿಟ್ಟರು. ಈ ವಿಚಾರವಾದಿ, ಚಾರ್ವಾಕ ವ್ಯಕ್ತಿಯೂ ದಾರ್ಶನಿಕನೂ ಆಗಿದ್ದನೆಂದರೆ ನಂಬುವುದು ಕಷ್ಟ!

# 'ಲಂಕೇಶರ ಶಕ್ತಿ ರಾಮದಾಸರ ದನಿಯಲ್ಲಿತ್ತು'

ಬಿ. ಚಂದ್ರೇಗೌಡ

ರಾಮದಾಸರು ಕಣ್ಣೀರು ಹಾಕಿದ್ದನ್ನು ನಾನು ನೋಡೇಯಿರಲಿಲ್ಲ. ಆದರೆ ಕುಪ್ಪಳ್ಳಿಯ ಕವಿಶೈಲದ ಪಕ್ಕದಲ್ಲಿನ ಸಭಾಂಗಣದಲ್ಲಿ ಇರಿಸಿದ್ದ ತೇಜಸ್ವಿ ಶವ ನೋಡಲು ಬಂದ ಕೆ.ಬಿ. ಸಿದ್ದಯ್ಯ ಅವರನ್ನು ಸಮಾಧಾನಿಸುತ್ತ, " ಇನ್ನು ಯಾರಿಗೂ ಶ್ರದ್ಧಾಂಜಲಿ ಸಭೆ ಮಾಡೋದು ಬೇಡ. ಇದೇ ಕಟ್ಟಕಡೆಯ ಶ್ರದ್ಧಾಂಜಲಿ ಸಭೆ ಅಂತ ತಿಳಕೊಂಡು ಎಲ್ಲರೂ ವಿದಾಯ ಹೇಳಿಬಿಡೋಣ" ಎಂದು ಕಣ್ಣೀರು ಹರಿಸಿದ್ದರು. ರಾಮದಾಸರಿಗೆ ತೇಜಸ್ವಿಯವರ ಸಾವು ಎಷ್ಟು ಆಘಾತ ಮಾಡಿತ್ತೆಂದರೆ ಯಾರನ್ನೂ ದೃಷ್ಟಿಸಿ ನೋಡದೆ ತಮಗೆ ತಾವೇ ಮಾತನಾಡಿಕೊಳ್ಳುತ್ತಿದ್ದರು. ನಾವು ಹತ್ತಿರ ಹೋಗಿ ಮಾತನಾಡಿಸಲೂ ಧೈರ್ಯ ಬರಲಿಲ್ಲ. ಅವರಾಗಲೇ ತೇಜಸ್ವಿಯವರ ದಾರಿಯಲ್ಲಿದ್ದಂತೆ ಕಾಣುತ್ತಿದ್ದರು. ಇದರ ನಡುವೆ ಸಂಪೂರ್ಣ ತಮ್ಮನ್ನೇ ಅವಲಂಬಿಸಿದ್ದ ನಿರ್ಮಲ ಮೇಡಂರನ್ನು ಜೋಪಾನವಾಗಿ ಕರೆದುಕೊಂಡು ಹೋಗುವ ದೃಶ್ಯ ಮನಕರಗಿಸುವಂತಿತ್ತು.

ರಾಮದಾಸ್ ಒಂದು ಅಪ್ಪಟ ಪ್ರತಿಭಟನೆಯ ಧ್ವನಿ. ಈ ಧ್ವನಿಯನ್ನು ನಾನು ಮೊದಲಬಾರಿಗೆ ಕೇಳಿದ್ದು ಮಂಡ್ಯದಲ್ಲಿ, ಲಂಕೇಶ್ ಪತ್ರಿಕೆ ಹೊರಬಂದ ಒಂದೆರಡು ವರ್ಷಗಳ ನಂತರ ಓದುಗರ ಪ್ರತಿಕ್ರಿಯೆ ಮತ್ತು ಟೀಕೆಗಳನ್ನು ಖುದ್ದು ಕೇಳಬೇಕೆಂದು ತೀರ್ಮಾನಿಸಿದ ಲಂಕೇಶ್, ಪ್ರತಿ ಜಿಲ್ಲೆಯಲ್ಲಿ ಸಭೆ ಮಾಡಬೇಕೆಂಬ ಹುಚ್ಚು ನಿರ್ಧಾರ ಮಾಡಿದರು. ಇದರ ಮೊದಲ ಸಭೆಯನ್ನು ಮಂಡ್ಯದಲ್ಲಿ ಮಾಡುವುದಾಗಿ ಎಚ್.ಎಲ್. ಕೇಶವಮೂರ್ತಿಯವರು ಹೇಳಿದರಲ್ಲದೆ ಅದರಂತೆ ರೈತ ಸಭಾಂಗಣದಲ್ಲಿ ಮೂರುಗೋಷ್ಠಿಗಳನ್ನು ಮತ್ತು ಬಂದ ಗಣ್ಯರಿಗೆ ಊಟದ ಏರ್ಪಾಡನ್ನು ಮಾಡಿದರು.

ಮೊದಲ ಗೋಷ್ಠಿ ಆರಂಭವಾದ ನಂತರ ಲಂಕೇಶರಿಂದ ಟೀಕಿಸಿಕೊಂಡಿದ್ದ ರೈತ ಮುಖಂಡ ಅಭಿಮಾನಿಗಳಿಂದ ಪ್ರತಿಭಟನೆ ಆರಂಭವಾಯ್ತು. ಯಾವ ಗೋಷ್ಠಿಗಳೂ ಸರಿಯಾಗಿ ನಡೆಯಲು

ಅವರು ಬಿಡಲಿಲ್ಲ. ಆಲನಹಳ್ಳಿ ಕೃಷ್ಣ ಸಭೆ ಮಧ್ಯೆ ಮಾತನಾಡಿದವರ ಮೇಲೆಲ್ಲಾ ಹರಿಹಾಯ್ದು ಇನ್ನಷ್ಟು ಪ್ರಕ್ಷುಬ್ಧ ಮಾಡಿದರು. ಆಗ ರಾಮದಾಸರು " ಪತ್ರಿಕೆ ರಾಜ್ಯದಲ್ಲಿ ಉಂಟು ಮಾಡಿರುವ ಸಂಚಲನ ಮತ್ತು ಅದು ಪ್ರಶ್ನೆ ಕೇಳುವಂತೆ ಮೂಡಿಸಿರುವ ಕೆಚ್ಚಿನಿಂದಲೇ ನೀವು ಪತ್ರಿಕೆ ಧೋರಣೆ ಬಗ್ಗೆ ಕೇಳುತ್ತಿದ್ದೀರಿ. ಸಂಪಾದಕನ ವೈಯಕ್ತಿಕ ಜೀವನ ಶೈಲಿಯನ್ನು ಟೀಕಿಸಿ ಪತ್ರಿಕೆಯ ಕೊಡುಗೆಯನ್ನು ಬದಿಗೊತ್ತಿ ಇಂತಹ ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವದ ಸಭೆಯನ್ನು ಹಾಳು ಮಾಡಬೇಡಿ" ಎಂದು ಎಲ್ಲ ಪ್ರತಿಭಟನೆಕಾರರಿಗೂ ಸಮರ್ಪಕವಾಗಿ ಉತ್ತರ ಕೊಟ್ಟರು.

ಮಂಡ್ಯದಲ್ಲಿ ಈವರೆಗೆ ಇಂತಹ ಸಭೆ ಇರಲಿ, ಒಂದೇ ಪಾರ್ಟಿಯವರ ಸಭೆಗಳೂ ನೆಟ್ಟಗೆ ನಡೆದ ಉದಾಹರಣೆಗಳಿಲ್ಲ. ಅಲ್ಲಿ ಎಲ್ಲಾ ಮುಗಿಯುವುದೂ ಬೈಗುಳ, ಕೈ ಮಿಲಾವಣೆಯಿಂದಲೇ. ಹಾಸನದಿಂದ ಬಂದಿದ್ದ ಬಾನು ಮುಷ್ತಾಕರಿಗೂ ಮಾತನಾಡಲು ಅವಕಾಶ ಕೊಡಲಿಲ್ಲ. ನಾನು ಮಂಡ್ಯ ಜಿಲ್ಲೆಯವನೇ ಆದರೂ ಇವರ ನಡವಳಿಕೆ ನನ್ನಲ್ಲಿ ದಿಗಿಲು ಹುಟ್ಟಿಸಿ, ಎಚ್.ಎಲ್. ಕೇಶವಮೂರ್ತಿಯವರು ಕಂಡದ್ದನ್ನು ಕಂಡಂತೆ ಬರೆದುಕೊಂಡು ಇಲ್ಲಿ ಹೇಗಿದ್ದಾರೆ ಅನ್ನಿಸಿತು. ಆದರೆ ಅವತ್ತು ಲಂಕೇಶ್ ನಡೆದುಕೊಂಡಿದ್ದು ಮಾತ್ರ ಅವರ 'ಮುಸ್ಸಂಜೆ ಕಥಾಪ್ರಸಂಗ'ದ ರಂಗಪ್ಪನಂತೆ;ಯಾರಿಗೂ ಕೇರ್ ಮಾಡದೆ ಹೇಳುವುದನ್ನೆಲ್ಲ ಹೇಳಿಹೋದರು. ಅದಕ್ಕೂ ಮುನ್ನ ನನ್ನನ್ನು ರಾಮದಾಸರಿಗೆ ಪರಿಚಯಿಸಿದರು.

ಅಂದು ಮಂಡ್ಯದ ಕಿಡಿಗೇಡಿಗಳಿಗೆ ಸಮರ್ಪಕವಾದ ಉತ್ತರ ನೀಡಿ, ಅವರೇ ಕುಳಿತು ಯೋಚಿಸುವಂತೆ ಮಾಡಿ ಹೋದ ರಾಮದಾಸರ ಭಾಷಣಗಳನ್ನು ನಾನೆಂದೂ ತಪ್ಪಿಸಿ ಕೊಂಡಿದ್ದಿಲ್ಲ. ಅದರಲ್ಲೂ ಅವರು ಮೇಷ್ಟರ ಜೊತೆ ಪ್ರಗತಿರಂಗದ ಸಭೆ ಮಾಡುತ್ತ ತಿರುಗುವಾಗ ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ , ಶಿವಮೊಗ್ಗ ಇಲ್ಲೆಲ್ಲಾ ರಾಮದಾಸ್ ಮಾಡಿದ ನೂರಾರು ಭಾಷಣಗಳಿಗೆ ವಶೀಕರಣಗೊಂಡಂತೆ ಅವರ ಧ್ವನಿಯನ್ನು ಅರಸುತ್ತ ಹೋಗಿದ್ದೇನೆ.

ಹೀಗೆ ಹೋಗುತ್ತ ನನಗನಿಸಿದ್ದೇನೆಂದರೆ, ಲಂಕೇಶರ ಬರವಣಿಗೆಯ ಶಕ್ತಿ ರಾಮದಾಸರ ಭಾಷಣದಲ್ಲಿ ಇತ್ತು. ಅವರ ಪ್ರತಿಭಟನೆಯ ದನಿಯಲ್ಲಿ ಈ ನಾಡಿನ ಸತ್ತ ಮನಸ್ಸುಗಳನ್ನು ಬಡಿದೆಬ್ಬಿಸುವ ಸಂಜೀವಿನಿಯಿತ್ತು. ಅವರ ಈ ದನಿಗೆ ಸಿಕ್ಕವರು ಜಾತಿ ವಿರೋಧಿಗಳಾಗಿದ್ದಾರೆ, ಅಂತರ್ಜಾತಿ ವಿವಾಹ ಮಾಡಿಕೊಂಡಿದ್ದಾರೆ, ಕಂದಾಚಾರಗಳ ವಿರೋಧಿಗಳಾಗಿದ್ದಾರೆ, ಪುರೋಹಿತಶಾಹಿಗಳ ಪರಿಮವೈರಿಗಳಾಗಿದ್ದಾರೆ.

ಅಪ್ಪಟ ಸಮಾಜವಾದಿಗಳು ಹೇಗಿರಬೇಕೆಂಬುದನ್ನು ರಾಮದಾಸ್ ತಮ್ಮ ನಡೆನುಡಿಯಿಂದಲೇ ತೋರಿದ್ದರು. ಅವರು ನಡೆಯುವಂತೆಯೇ ಮಾತು ನೇರ. ಅವರ ಪ್ರತಿಭಟನೆಯ ಬಗ್ಗೆ ಯಾರೂ ಸಣ್ಣದಾಗಿ ಮಾತನಾಡುವಂತಿರಲಿಲ್ಲ. ತಮ್ಮ ನಿಷ್ಠುರ ನಾಲಿಗೆಗೆ ಹತ್ತಿರದವರನ್ನೂ ಕಳೆದುಕೊಳ್ಳಲು ಅಂತಃಕರಣದ ಜೀವಿಯಾದ ಅವರಲ್ಲಿ ಯಾರ ಬಗ್ಗೆಯೂ ದ್ವೇಷವಿರಲಿಲ್ಲ.

ತತ್ತೂರಿನಲ್ಲಿ ಒಬ್ಬನಿಗೆ ಮೆಟ್ಟಿನಲ್ಲಿ ಮಲ ಅದ್ದಿ ಬಾಯಿಗೆ ಇಡಲಾಗಿದೆ ಎಂಬ ಸುದ್ದಿ ಕೇಳಿ ಮೈಸೂರಿನಿಂದ ಓಡಿ ಬಂದಿದ್ದರು. ತತ್ತೂರಿನಲ್ಲಿ ಪ್ರತಿಭಟನಾ ಜಾಗದಲ್ಲಿ ತಾವೂ ಧರಣಿ

ಹುಳಿತ ನಂತರ, ಈ ಪ್ರಕರಣದ ಆರೋಪಿ ಸ್ಥಳೀಯ ಜಮೀನ್ದಾರನ ಮನೆಗೂ ಹೋಗಿ, ಪ್ರಕರಣದ ವಿವರ ಕೇಳಿ ಆತನಿಗೆ ಎಚ್ಚರಿಕೆ ಹೇಳಿಬಂದರು. ಈ ನಾಡಿನ ಯಾವುದೇ ಮೂಲೆಯಲ್ಲಿನ ಪ್ರತಿಭಟನೆಗೆ ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ ಓಡಿ ಬರುತ್ತಿದ್ದ ರಾಮದಾಸರು ಶಿವಮೊಗ್ಗೆಗೆ ನೀಡಿದ ಕಡೆ ಭೇಟಿ ಎಂದರೆ ಡಿ.ಎಸ್. ನಾಗಭೂಷಣ ಮತ್ತು ಸವಿತಾ ನಾಗಭೂಷಣ ದಂಪತಿಗಳ ಪುಸ್ತಕ ಬಿಡುಗಡೆಗೆ ಬಂದದ್ದು.

ತೇಜಸ್ವಿ, ರಾಮದಾಸ್, ಶಾಮಣ್ಣ ಇವರ ಟೀಮಿನಲ್ಲಿ ಎಚ್.ಬಿ.ಶಿವರಾಂ ಎಂಬ ವೈದ್ಯರೂ ಇದ್ದಾರೆ. ಇವರು ಸದಾ ತಮ್ಮ ಸಹ ಹೋರಾಟಗಾರರ ಆರೋಗ್ಯ ತಪಾಸಣೆ ಮಾಡಿ ಮಾತ್ರೆ, ಪಥ್ಯ ಮತ್ತು ಎಚ್ಚರಿಕೆ ಹೇಳಿ ಕಳಿಸುವುದನ್ನೇ ಮಾಡಿಕೊಂಡು ಬಂದಿದ್ದಾರೆ. ರಾಮದಾಸ್ ಶಿವಮೊಗ್ಗಕ್ಕೆ ಬಂದಾಗಲೆಲ್ಲಾ ಉಳಿದು ಕೊಳ್ಳುವುದು ಅವರ ಮನೆಯಲ್ಲೇ.

ಡಿ.ಎಸ್.ನಾಗಭೂಷಣ ದಂಪತಿಗಳ ಪುಸ್ತಕ ಬಿಡುಗಡೆಗೆ ಬಂದಾಗಲೂ ಡಾ.ಶಿವರಾಂ, ರಾಮದಾಸರನ್ನು ಆಮೂಲಾಗ್ರ ತಪಾಸಣೆ ಮಾಡಿ " ಏನು ಮಾಡದು ಚಂದ್ರೇಗೌಡ್ರೆ, ಇವುರ್‍ಯಾಕೋ ನಮ್ಮ ಚಕಪ್ಪು, ಸಲಹೆ, ಸೂಚನೆಗೆ ಕೇರ್ ಮಾಡ್ತಯಿಲ್ಲ. ಧೈರ್ಯವಾಗಿ ಆ ಕಡೆನೆ ಹೊಂಟಂಗೆ ಕಾಣ್ತರೆ" ಎಂದು ತಮಾಷೆ ಮಾಡಿದ್ದರು.

ರಾಮದಾಸರ ನಿರ್ಭೀತಗುಣಕ್ಕೆ ಹತ್ತು ವರ್ಷದ ಹಿಂದೆಯೇ ಅವರನ್ನು ಹುಡುಕಿ ಬಂದ ಸಾವು ದೂರ ಹೋಗಿತ್ತು. ಲಂಕೇಶರ ಹುಟ್ಟು ಹಬ್ಬಕ್ಕೆಂದು ಎಲ್ಲರೂ ತೋಟದಲ್ಲಿ ಸೇರಿಕೊಂಡು ಇನ್ನೇನು ಎಣ್ಣೆ ಸಮಾರಾಧನೆಯಲ್ಲಿ ಮುಳುಗೇಳುವ ಕಾರ್ಯಕ್ರಮ ಉದ್ಘಾಟನೆಯಾಗಬೇಕು. ಅಷ್ಟರಲ್ಲಿ ರಾಮದಾಸರಿಗೆ ಹೃದಯಾಘಾತವಾಗಿತ್ತು. ಅದಕ್ಕೇನೂ ಕೇರ್ ಮಾಡದೆ, ಒಂದು ಸಂತೋಷಕೂಟಕ್ಕೆ ಯಾವ ಅಡ್ಡಿಯೂ ಬರದಂತೆ ಸದ್ದಿಲ್ಲದೆ ಹೋಗಿ ಜಯದೇವ ಆಸ್ಪತ್ರೆಗೆ ಸೇರಿದ್ದರು. ಆಪರೇಷನ್ ಮಾಡಿಸಿಕೊಂಡರೆ ಇನ್ನು ಕೆಲವರ್ಷ ಬದುಕಬಹುದೆಂಬ ಸಲಹೆಗೆ ಅವರೇನೂ ಕೇರ್ ಮಾಡಿರಲಿಲ್ಲ.

ರಾಮದಾಸರಿಗಿಂತ ಮೊದಲೇ ಹೊರಟುಹೋದ ಲಂಕೇಶರ ಎಚ್ಚರಿಕೆಯ ನಂತರವೂ ರಾಮದಾಸ್ ಏಳೆಂಟು ವರ್ಷವಿದ್ದರೂ ತಮ್ಮ ಆತ್ಮೀಯ ಒಡನಾಡಿ, ಒಂದು ರೀತಿಯಲ್ಲಿ ಒಂದೇ ತರಹ ಚಿಂತಿಸುತ್ತಿದ್ದ ಲಂಕೇಶ್ ನಿರ್ಗಮನದ ನಂತರ ಅವರ ತಾರಕದ ದನಿ ತಗ್ಗಿತ್ತು. ಅದಕ್ಕಿಂತ ಮತೀಯವಾದಿಗಳು ವಿಜೃಂಭಿಸುತ್ತ, ಅಪಾತ್ರರು ಈ ರಾಜ್ಯವನ್ನಾಳುತ್ತ ಮೆರೆಯುತ್ತಿರುವುದು ಅವರು ಸಹಿಸಲು ಸಾಧ್ಯವಾದ ಹದಗೆಟ್ಟ ವಾತಾವರಣವಾಗಿತ್ತು. ಅವರ ಹೋರಾಟದ ಪ್ರತಿಫಲವಾಗಿ ಇಲ್ಲಿ ಬೇರೆಯದೇ ವ್ಯವಸ್ಥೆಯೊಂದು ರೂಪುಗೊಳ್ಳಬೇಕಿತ್ತು. ಹಾಗಾಗದೆ ಎಲ್ಲ ಚಳವಳಿಗಳೂ ನೆಲಹಿಡಿದು, ಎಲ್ಲ ನಾಯಕರೂ ಕಾಲವಾಗಿ, ಮತೀಯ ಶಕ್ತಿಗಳು ಹತ್ತಿಯುರಿಯಲು ಎಣ್ಣೆ ನೀಡುವಂತಹವರು ಮಂಚೂಣಿಗೆ ಬಂದರು. ಬಹುಶಃ ರಾಮದಾಸರಿಗೆ ನರಕ ಸದೃಶ ವಾತಾವರಣವಾಗಿ ಗೋಚರವಾಗಿತ್ತು. ಆದರೂ ತಮ್ಮದು ಒಂಟಿ ದನಿಯಲ್ಲವೆಂದು ಭಾವಿಸಿದ್ದರು.

"ಈ ನಾಡಿನಲ್ಲಿ ಲಂಕೇಶ್ ರೂಪಿಸಿದ ಸಮೂಹವೊಂದಿದೆ. ಹಾಗೆಯೇ ರೈತನಾಯಕ ನಂಜುಂಡಸ್ವಾಮಿ ಕಟ್ಟಿದ್ದ ಪಡೆಯೂ ಇದೆ. ದಲಿತ ನಾಯಕರು ರೂಪಿಸಿದ ಹೊಸ ತರುಣ ಜನಾಂಗವೊಂದಿದೆ. ಇವರೆಲ್ಲಾ ಒಟ್ಟಾಗಿ ಸೇರಿ ಈ ಕೆಟ್ಟ ಪ್ರಭುತ್ವದ ವಿರುದ್ಧ ದನಿ ಎತ್ತಿದರೆ ಇವರೆಲ್ಲಾ ಅಡ್ರಸ್ಸಿಲ್ಲದಂತೆ ಓಡಿಬಿಡುತ್ತಾರೆ. ರೈತ ಚಳವಳಿ, ಗೋಕಾಕ್ ಚಳವಳಿ, ಲಂಕೇಶ್ ಪತ್ರಿಕೆ ಸೇರಿ ೧೯೮೩ರ ರಲ್ಲಿ ತಂದ ಬದಲಾವಣೆ ನಮ್ಮ ಮುಂದಿದೆ" ಎಂದು ಎಲ್ಲರನ್ನು ಅವರು ಹುರಿದುಂಬಿಸಲು ಯತ್ನಿಸುತ್ತಿದ್ದರು. ಈ ಮಣ್ಣಿನಲ್ಲಿ ಆಗಿಹೋದ ಗೋಪಾಲಗೌಡರು ಹೇಗೆ ಯಾರಿಗೂ ಹೋಲಿಸಲಾಗದ ರಾಜಕಾರಣಿಯಾಗಿ ಉಳಿದಿದ್ದರೊ, ಹಾಗೆಯೇ ರಾಮದಾಸ್ ಅಪರೂಪದ ಹೋರಾಟಗಾರರಾಗಿ ಉಳಿದುಬಿಡುತ್ತಾರೆ. ಅವರಿಗೆ ಜನ್ಮ ಕೊಟ್ಟ ತಾಯಿ ಹೇಗೆ ತಾವು ವಾಸ ಮಾಡಿದ ಎಲ್ಲಾ ಜಾಗಗಳಲ್ಲಿ ಎಲ್ಲರಿಗೂ ತಾಯಿಯಾಗಿದ್ದರೋ ಹಾಗೆ ಶೋಷಿತರು, ಅವಮಾನಿತರು, ಈ ವ್ಯವಸ್ಥೆಯ ಎಲ್ಲ ನೊಂದಜೀವಿಗಳು, ಜಾತ್ಯತೀತರ, ಅಂತರ್ಜಾತಿ ವಿವಾಹವಾದವರ ನಾಯಕರಾಗಿದ್ದರು ರಾಮದಾಸ್.

ಅವರು ರೂಪಿಸಿದ ಮನಸ್ಸುಗಳು ಇರುವವರೆಗೂ ಅವರೇ ನಾಯಕರು.

# ನಿಷ್ಠುರದಲ್ಲೂ ತಾಯ್ತನದ ಹಂಬಲ....

ಬಿ.ಮಹೇಶ್ ಹರವೆ /ಅಪೂರ್ವ ಡಿಸಿಲ್ವ

'ನಿಲ್ ನೆಟ್ಟಗೆ ನಿಲ್ ಜೆನ್ ನೇರ ಮಾಡು'

ಎಂಬ ಕುವೆಂಪು ಅವರ ಕಾವ್ಯದ ಸಾಲುಗಳು ಇವರನ್ನು ನೋಡಿಯೇ ರಚಿಸಿರುವುದೇನೋ ಎಂಬಂತಿದ್ದ, ಆತ್ಮವಿಶ್ವಾಸವೇ ರೂಪು ಪಡೆದಂತೆಯಿದ್ದ ಮೇಷ್ಟ್ರು ಅಂದು ಅದಾಗಿರಲಿಲ್ಲ. ಅವರು ತೇಜಸ್ವಿಯವರ ಸಾವಿನ ಗುಂಗಿನಲ್ಲೇ ಇದ್ದರು. "ನೋಡ್ರಿ, ತೇಜಸ್ವಿ ಏರೋಪ್ಲೇನ್‌ಗೆ ಟಿಕೇಟ್ ತಕ್ಕೊಂಡು ಹೋದಂಗೆ ಹೋಗೇ ಬಿಟ್ರು. ನಮಗೆ ಅಂಥಾ ಸಾವು ಬರುತ್ತೇನ್ರೀ. ಈ ನರಕವನ್ನೆಲ್ಲಾ ಅನುಭವಿಸಿ ಸಾಯ್‌ಬೇಕಾಗುತ್ತೆ"ಅಂತ ಸಾವಿನ ಧ್ಯಾನದಲ್ಲೇ ಇದ್ದರೇನೋ ಅನ್ನುತ್ತೆ. ಈ ನಡುವೆ ನಾವು ನಿಮ್ಮ ಆತ್ಮಚರಿತ್ರೆ ಬರೀರಿ ಸಾರ್ ಎಂದಾಗ "ಆತ್ಮಾನೇ ಇಲ್ಲದ ಮೇಲೆ... ಅದೆ ಹೋದ ಮೇಲೆ, ಇನ್ನಾವ ಆತ್ಮಚರಿತ್ರೆ ಬರ್ದು ಆಗ್ಬೇಕಾದ್ದು ಏನಿದೆ" ಎಂದಾಗ ಮತ್ತೆ ತೇಜಸ್ವಿಯವರು ಅವರ ಮಾತು ಮಾತುಗಳಲ್ಲಿ ಮನೆ ಮಾಡಿದ್ದರು ಅನ್ನಿಸ್ತು. ತಮ್ಮ ಅರವತ್ತಾರು ವರುಷದ ಬದುಕಿನಲ್ಲಿ ಯಾವ್ಯಾವುದನ್ನೋ ಎದುರಿಸಿದ ಮೇಷ್ಟ್ರು ತೇಜಸ್ವಿಯವರು ಇಲ್ಲದ ಗಳಿಗೆಗಳನ್ನು ಎದುರಿಸಲಾಗಲೇ ಇಲ್ಲ.

ಇಂಥ ಸಂದರ್ಭದಲ್ಲೂ ತಮ್ಮೆಲ್ಲಾ ಯಾತನೆಗಳನ್ನು ಅದುಮಿಟ್ಟುಕೊಂಡು ಪ್ರಸ್ತುತಕ್ಕೆ ಪ್ರತಿಕ್ರಿಯಿಸುವ ಆ ನಿಷ್ಠುರತೆಯಲ್ಲಿ ಅವರು ಥೇಟ್ ರಾಮದಾಸರಾಗೇ ಪ್ರತಿಕ್ರಿಯಿಸಿದ್ದು ಇನ್ನೂ ಹಸಿರಾಗೇ ಉಳಿದಿದೆ. ಅಂದು ಅವರನ್ನು 'ಆನು ದೇವಾ ಹೊರಗಣವನು...' ಪುಸ್ತಕದ ಸಂವಾದ ಕಾರ್ಯಕ್ರಮದ ಉದ್ಘಾಟನೆಗೆ ಕರೆಯಲು ಹೋಗಿದ್ದೆವು. ಮೇಷ್ಟ್ರು ನಿಜವಾಗಿಯೂ ಮೈಮೇಲೆ ಏರಿ ಬಂದವರಂತೆ ಪ್ರತಿಕ್ರಿಯಿಸಿದರು: " ಬುದ್ಧಿಯಿದೆ ಏನ್ರಿ ನಿಮಗೆ, ನಾವು ಜಾತಿ ನಾಶವಾಗಲಿ ಅಂತ ಹೋರಾಟ ಮಾಡಿದ್ರೆ ಅದನ್ನೇ ಹುಡುಕಿಕೊಂಡು ಹೋಗ್ತಾ ಇದ್ದೀರಲ್ಲಾ. ನಾವು ಪಾಯ್‌ಖಾನೆ ಮಾಡಿ ಬಂದ ಜಾಗಕ್ಕೆ ಯಾವನ್ನಾದ್ರೂ ಕರ್ಕೊಂಡು ಹೋಗಿ-ನೋಡಿ, ಇಲ್ಲೇ

ನಾನು ಪಾಯ್‌ಖಾನೆ ಮಾಡಿದ್ದು ಅಂತ ತೋರಿಸ್ತೀರೇನ್ರೀ. ಹೊಲಸನ್ನು ತೊಳೆದು ಸ್ವಚ್ಛ ಮಾಡ್ಬೇಕು. ದಾಖಲೆಗೆ ಇಟ್ಟುಕೊಳ್ಳೋದಲ್ಲಾ. ಬಸವಣ್ಣನನ್ನು ಯಾವ ಜಾತಿಯವರು ಬೇಕಾದರೂ ನಮ್ಮವನು ಅಂತ ಕ್ಲೇಮ್ ಮಾಡಬಹುದು. ಅವನು ಎಲ್ಲರ ಜಾತಿಯವನು" ಅಂತ ಒಂದೇ ಉಸುರಿನಲ್ಲಿ ನುಡಿದುದಕ್ಕೆ ಇಡೀ ದೇಹ ತಿದಿಯಾಗಿ ರೂಪಾಂತರಗೊಂಡು ಮುಖವೆಲ್ಲ ಸಿಟ್ಟಿನಿಂದ ಅದುರುತ್ತಿತ್ತು. ನನ್ನೊಂದಿಗೆ ಬಂದಿದ್ದ ಗೆಳೆಯ ರಾಜೇಶ್ ಅದು ಸಂಶೋಧನ ಬರಹ ಸಾರ್ ಅಂದ. "ಹೌದು ಕಣ್ರೀ, ಭೈರಪ್ಪ ಸಹ ತನ್ನ 'ಆವರಣ'ವನ್ನ ಸಂಶೋಧನ ಕೃತಿ ಅಂತಾನೇ ಕರೆಯೋದು. ಅದಕ್ಕೆ ಕಡೆಯಲ್ಲಿ ಆಧಾರ ಗ್ರಂಥಗಳ ಪಟ್ಟೀನೂ ಸಹ ಕೊಟ್ಟಿದ್ದಾರೆ. ಇದರಿಂದ ಏನ್ರೀಪ್ರಯೋಜನ" ಅಂತ ಹೇಳಿ, ನೀವು ಮಾಡಬೇಕಾದ ಕೆಲಸ ಬೇಕಾದಷ್ಟಿದೆ. ಯುವ ಜನಾಂಗವನ್ನು ಮತ್ತೆ ಜಾತಿಯ ಸಂಕೋಲೆಯಲ್ಲಿ ಬಂಧಿಸಬೇಡಿ ಎಂದು ಹೇಳಿದರು. ಸಾರ್, ಇದನ್ನೇ ತಾವು ಬಂದು ಹೇಳಿ ಎಂದಾಗ, "ಹೇಳೋಕೆ ನನಗೇನ್ರೀ, ಆದ್ರೆ ನೋಡ್ರೀ ಈ ಕಪ್‌ನಲ್ಲಿ ನಾನೀಗ ಕಫ ಉಗೀತಾ ಇದ್ದೇನೆ. ಇನ್ನು ಸ್ವಲ್ಪ ಹೆಚ್ಚು ಮಾತಾಡಿದ್ರೆ ರಕ್ತ ತುಂಬಿ ಹೋಗುತ್ತೆ. ನನ್ನ ಸ್ಥಿತಿ ನಿಮಗೆ ಅರ್ಥ ಆಗಲ್ಲ. ಹೋಗಿ... ಹೋಗಿ... ಅಲ್ರೀ ಎಂಟುನೂರು ವರ್ಷದ ಹಿಂದಿನ ಬಸವಣ್ಣನ ಜಾತೀನ ಹುಡುಕಲಿಕ್ಕೆ ಹೊರಟ್ಟಿದ್ದೀರಲ್ಲಾ ನಿಮ್ಗೆ ನನ್ನ ಜಾತಿ ಯಾವುದು ಅಂತ ಗೊತ್ತೇನ್ರಿ?" ಎಂದಾಗ ಯಾವುದು ಸಾರ್ ಎಂದು ಕೇಳಬೇಕೆಂದು ನಮಗನ್ನಿಸಲೇ ಇಲ್ಲ. ಏಕೆಂದರೆ ಅವರು ಮೇಲಿಂದ ಮೇಲೆ ಈ ಭಾಷೆ ಮತ್ತು ಜಾತಿಯ ವಿಚಾರಗಳು ಭಾರತದ ಬಹುವೇಳೆಯನ್ನು ಆಕ್ರಮಿಸಿಕೊಂಡಿವೆ. ನಾವು ಇವುಗಳ ಬಗ್ಗೆ ಮಾತಾಡುತ್ತಲೇ ವ್ಯರ್ಥ ಕಸರತ್ತು ಮಾಡ್ತಾ ಇದ್ದೇವೆ. ಪರಿಹಾರಾನೂ ಸಿಕ್ಕಿಲ್ಲ, ಪ್ರಯೋಜನವೂ ಆಗಿಲ್ಲ. ಬಿಟ್‌ಬಿಡ್ರಿ ಈ ವಿಚಾರಗಳನ್ನ" ಅಂತ ೯-೧೧-೨೦೦೨ ರಲ್ಲಿ ಶಿವಮೊಗ್ಗದಲ್ಲಿ 'ಸಮಾಜವಾದ, ಮುಂದಿನ ಸವಾಲುಗಳು' ಎಂಬ ವಿಚಾರ ಸಂಕಿರಣದಲ್ಲಿ 'ಸಮಾಜವಾದದ ಭಾಷೆ'ಎಂಬ ವಿಷಯದ ಬಗ್ಗೆ ಮಾತಾಡಿದ ಪ್ರೊ. ರಾಜೇಂದ್ರ ಚೆನ್ನಿಯವರಿಗೆ ಪ್ರತಿಕ್ರಿಯಿಸುತ್ತ ಹೇಳಿದ ಮಾತು ಕಿವಿಯಲ್ಲಿ ರಿಂಗಣಿಸುತ್ತಲೇ ಇತ್ತು.

ನಿಷ್ಠುರದಲ್ಲೂ ತಾಯ್ತನದ ಹಂಬಲವನ್ನು ಹೊಂದಿದ್ದ ಮೇಷ್ಟ್ರು ಇಂದು ನಮ್ಮೊಂದಿಗಿಲ್ಲ ಎಂದು ಭಾವಿಸುವುದಾದರೂ ಹೇಗೆ? ಅವರ ಕನಸಿನ ಯುವ ಕರ್ನಾಟಕವನ್ನು ಸಕ್ರಿಯಗೊಳಿಸುವುದರ ಮೂಲಕ ಅವರಿಗೆ ನುಡಿನಮನ ಸಲ್ಲಿಸಿದರೆ ಅದಕ್ಕೊಂದು ಅರ್ಥ ಲಭಿಸುವುದೇನೋ?

# ನಾಯಕರ ನಾಯಕ....

**ಚೇಳೂರು ವೆಂಕಟೇಶ್**

ಪ್ರೊ. ಕೆ,ರಾಮದಾಸ್‌ರವರ ನಿಧನವಾರ್ತೆ ತಿಳಿಯುತ್ತಿದ್ದಂತೆ ಥಟ್ಟನೆ ಎದ್ದು ನನ್ನ ಗುರುಗಳಾದ ಕವಿ ಕೆ.ಬಿ. ಸಿದ್ದಯ್ಯನವರಿಗೆ ದೂರವಾಣಿ ಕರೆ ಮಾಡಿದಾಗ ಮೌನ ಮಾತಾಗಿತ್ತು. ನಿಧಾನವಾಗಿ ಮಾತನಾಡಿ, ತಕ್ಷಣ ಹೊರಡೋಣ ಎಂದರು. ತುಮಕೂರಿನ ಉದ್ಯಮಿ ಚಿದಂಬರಯ್ಯ, ಕೆ.ಬಿ., ನಟರಾಜ್ ಹೊನವಳ್ಳಿ, ರಾಮಚಂದ್ರರವರೊಂದಿಗೆ ಹೊರಟೆವು. ತುಮಕೂರಿನಿಂದ ಮೈಸೂರಿನ ರಾಮದಾಸ್‌ರವರ ಮನೆಯಬಾಗಿಲಿಗೆ ಹೋಗುವವರೆಗೆ ಚಿದಂಬರಯ್ಯ ಮತ್ತು ಕೆ.ಬಿ. ರವರ ನಡುವಿನ ಸಂಭಾಷಣೆ ನನ್ನೊಳಗೆ ಸಂಚಲನ ಮೂಡಿಸಿತ್ತು. ಕೆ.ಬಿ.ಯವರು ರಾಮದಾಸ್‌ರವರ ಚಳವಳಿಯ ಪ್ರಸಂಗಗಳನ್ನು ವಿವರಿಸಿದ ಬಗೆಯಲ್ಲಿ ರಾಮದಾಸ್‌ರವರ ಚಾರ್ವಾಕತನ ಅನಾವರಣಗೊಂಡಿತು. ನಾನು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತನಾಗಿದ್ದಾಗ ಇವರ ಬಗ್ಗೆ ಕೇವಲ ಪತ್ರಿಕೆಗಳಲ್ಲಿ ಓದಿದ, ಗೆಳೆಯರೊಂದಿಗೆ ಮಾತನಾಡುತ್ತಿದ್ದ ನೆನಪು ಮರುಕಳಿಸುತ್ತಿತ್ತು.

ಅವರ ಮನೆ ಮುಂದೆ ನೆರೆದಿದ್ದ ಕನ್ನಡ ನಾಡಿನ ಅಗ್ರಗಣ್ಯನಾಯಕರ ರೋದನ, ಅವರ ಜೊತೆಯಲ್ಲಿದ್ದ ನೂರಾರು ಚಳವಳಿಗಾರರು, ಕನ್ನಡಪರ ಚಳವಳಿಗಾರರು, ಕವಿಗಳು, ವಿಮರ್ಶಕರು, ಅಳುತ್ತಿದ್ದ ವಿದ್ಯಾರ್ಥಿನಾಯಕರು ಇವರೆಲ್ಲರ ಮುಖದಲ್ಲಿ ಸಾವು ಮನೆ ಮಾಡಿತ್ತು. ಕಣ್ಣೀರ ಕಣ್ಣುಗಳಲ್ಲಿ ಕಣ್ ಸನ್ನೆಯ ಮಾತು. ಬಿಟ್ಟರು ಬಿಡೆನೆಂಬ ರವರವ ಮೌನ, ಬಂಡವಾಳಶಾಹಿಗಳ, ಭೂಮಾಲೀಕರ, ವೈದಿಕಶಾಹಿಗಳ, ವಿರುದ್ಧ ಹೋರಾಡಿ ಸಮ ಸಮಾಜ ನಿರ್ಮಾಣಕ್ಕಾಗಿ ಪ್ರಯತ್ನಪಟ್ಟ ನಾಯಕರು ಕೈಚೆಲ್ಲಿ ಕುಳಿತಿದ್ದರು. ರಾಮದಾಸ್‌ರವರ ಶವವನ್ನು ನಡುಮನೆಯಿಂದ ಆಂಬುಲೆನ್ಸ್ ವ್ಯಾನ್‌ಗೆ ಒಯ್ದಾಗ ರಾಮದಾಸ್‌ರವರ ಮಗಳು ಥಟ್ಟನೆ ಅಂಬುಲೆನ್ಸ್ ಏರಿ ಶವದ ಮುಖವನ್ನು ಎರಡು ಕೈಯಿಂದ ಉಜ್ಜುತ್ತಾ ತನ್ನ ಕಣ್ಣೀರನ್ನು

ಚಿರನಿದ್ರೆಯ ಮುಖದ ಮೇಲೆ ಬೀಳುತ್ತಿದ್ದ ದೃಶ್ಯ ನೋಡಿ ಈ ದೇಹದಿಂದ ದೂರವಾದೆ ಏಕೆ ಆತ್ಮನೆ?ಈ ಸಾವು ನ್ಯಾಯವೇ ಅನ್ನಿಸಿತು.

ಈ ಎಲ್ಲಾ ಘಟನೆಗಳ ನಡುವೆ ದೇವನೂರು ಮಹಾದೇವರವರು ರಾಮದಾಸ್‌ರವರ ಮನೆಯ ಮುಂದಿನ ಬಲಭಾಗದ ಸ್ವಲ್ಪ ದೂರದ ಮರದ ಕೆಳಗೆ ಹಳೇ ಶರ್ಟ್, ಹಳೇಪ್ಯಾಂಟ್, ಹವಾಯ್ ಚಪ್ಪಲಿ, ಕೈಯಲ್ಲೊಂದು ಉಲ್ಲನ್ ಟೋಪಿ ಹಿಡಿದುಕೊಂಡು ಒಂದು ಪ್ಲಾಸ್ಟಿಕ್ ಕುರ್ಚಿಯಲ್ಲಿ ಕುಳಿತಿದ್ದರು. ಅವರಿದ್ದಲ್ಲಿಗೆ ಹೋದ ಕವಿ ಕೆ.ಬಿ. ಸಿದ್ದಯ್ಯನವರು ಎದುರಿಗೆ ಕುಳಿತುಕೊಂಡು ಪರಸ್ಪರ ದಿಟ್ಟಿಸಿ ನೋಡಿಕೊಳ್ಳುತ್ತಾ ಎಲ್ಲವನ್ನು ಕಳೆದುಕೊಂಡವರಂತೆ ದಿಗ್ಭ್ರಾಂತರಾಗಿದ್ದರು. ಸ್ವಲ್ಪ ಮೌನದ ನಂತರ ಕೆ.ಬಿ. 'ತೇಜಸ್ವಿಯವರ ಮರಣವನ್ನು ಜೀವದ ಗೆಳೆಯ ದಕ್ಕಿಸಿಕೊಂಡಿರಲಾರರು, ಆದರೂ ಸುಮಾರು ಒಂದೂವರೆ ತಿಂಗಳಿಂದಲೂ ಈ ಹಿಂದೆ ತೇಜಸ್ವಿ ಮತ್ತು ಇವರ ಮಧ್ಯೆ ನಡೆದಿರಬಹುದಾದ ಎಲ್ಲಾ ದಿನಗಳ, ಕ್ಷಣಗಳ ಸಂಗತಿಗಳನ್ನು ನೆನಪಿಸಿಕೊಳ್ಳುತ್ತಾ ಒಬ್ಬರೇ ಕುಳಿತಿರುತ್ತಿದ್ದರು. ಬಹುಶಃ ತೇಜಸ್ವಿಯವರನ್ನು ಬಿಟ್ಟಿರದ ಮನಸ್ಸು ಜರ್ಜರಿತವಾಗಿರಬಹುದು. ತೇಜಸ್ವಿ ಇಲ್ಲದ ಜಗತ್ತು ನನಗೇಕೆ ಎಂದು ಅನ್ನಿಸಿರಬಹುದು' ಎನ್ನುವಾಗ ತನ್ನೊಳಗೆ ಉಕ್ಕಿದ ಕಣ್ಣೀರನ್ನು ಕಣ್ಣೊಳಗೆ ನುಂಗಿ ಮಹಾದೇವರು, 'ಆಯ್ತು ನಡಿಯೋ ಅಂತ್ಯಸಂಸ್ಕಾರ ಚಾಮುಂಡಿ ಬೆಟ್ಟದ ತಪ್ಪಲಲ್ಲಿದೆ'ಎಂದರು. ಇವರಿಬ್ಬರಲ್ಲೂ ಒಬ್ಬ ಮೇರು ಮಾರ್ಗದರ್ಶಕನನ್ನ ಕಳೆದುಕೊಂಡ ಬಹುದೊಡ್ಡ ಮೌನ ಆವರಿಸಿತ್ತು. ನಾನು ನನ್ನೊಳಗೇ ಇದನ್ನು ವಿವರಿಸಿಕೊಳ್ಳುತ್ತಿರುವುದೇಕೆ ಎಂಬ ಪ್ರಶ್ನೆಯನ್ನು ನಾನೇ ಹಾಕಿಕೊಂಡಾಗ ನಾವು ಚಿಕ್ಕವರಾಗಿದ್ದಾಗ ನಮ್ಮಟ್ಟಿ ಕೇರಿಯ ಯಜಮಾನರು ಆಗಾಗ ಹೇಳುತ್ತಿದ್ದ ಮಾತು ನೆನಪಾಯ್ತು. 'ಸಾಯೋತನ್ಕ ನಾಲ್ಕು ಜನ್ಕೆ ಬೇಕಾದಂಗೆ ಬದುಕ್ರೋ ಇಲ್ಲಂದ್ರೆ ನೀವ್ ಸತ್ತಾಗ ನಿಮ್ಮನ್ ಹೊರೋಕೆ ನಾಲ್ಕುಜನ ಇಲ್ದೆ ಅನಾಥ ಹೆಣ ಆಗ್ತೀರಾ'ಎಂದು ಬೈಯ್ದು ಬುದ್ಧಿ ಹೇಳುತ್ತಿದ್ದರು.

ಒಬ್ಬ ವ್ಯಕ್ತಿ ಎಷ್ಟೇ ದೊಡ್ಡವನಾದರೂ ಅವನ ಅಂತ್ಯ ಸಂಸ್ಕಾರದಲ್ಲಿ ಅವರವರ ಸೇವಾ ಕ್ಷೇತ್ರದವರು ಮಾತ್ರ ಸೇರಬಲ್ಲರು. ಆದರೆ ಒಬ್ಬ ವ್ಯಕ್ತಿಯ ಸಾವಿಗೆ ರಾಜಕಾರಣಿಗಳು, ಚಳವಳಿಗಾರರು, ಸಮಾಜ ಚಿಂತಕರು, ಕವಿಗಳು, ಸಾಹಿತಿಗಳು, ಉದ್ಯಮಿಗಳು, ವಿದ್ಯಾರ್ಥಿಗಳು ಹೀಗೆ ಒಟ್ಟಾರೆ ಎಲ್ಲಾ ರಂಗದ ನಾಯಕರು ಸೇರಿದ್ದು ನೋಡಿದರೆ ನಾಯಕರ ನಾಯಕ ಅಸ್ತಂಗತನಾದನೇ ಅನ್ನಿಸಿತು.

ಅತ್ತ ಪೂರ್ಣಚಂದ್ರ ಮುಳುಗಿದ;ಇತ್ತ ಬೆಳಕು ಕೊಡುವ ಸೂರ್ಯ ಕರಗಿದ, ಈಗ ನಾವು ಅನಾಥರು ಅನ್ನಿಸಿತು.

ಚಾರ್ವಾಕ ಮೌನ!

ಕುವೆಂಪು ನಗರದ 'ಚಾರ್ವಾಕ' ಮೌನ...

ನೂರಾರು ಮಂದಿಗೆ ವೈಚಾರಿಕತೆಯ ಪಾಠ ಹೇಳಿ, ಸಾವಿರಾರು ಶಿಷ್ಯಂದಿರು, ಅನೇಕಾನೇಕ ಗೆಳೆಯರು, ಅಭಿಮಾನಿಗಳನ್ನು ಕಟ್ಟಿಕೊಂಡಿದ್ದ ಕೆ. ರಾಮದಾಸ್ ಅಸ್ತಂಗತರಾಗಿದ್ದಾರೆ.

# ಕರ್ನಾಟಕದ ನಿಜವಾದ ಮಾನವ ಹಕ್ಕು

ಚಂದ್ರಶೇಖರ ಐಜೂರ್

ಲಂಕೇಶ್, ತೇಜಸ್ವಿಯವರ ಬರಹಗಳನ್ನು ಮತ್ತೆ ಮತ್ತೆ ಓದುವ ಮೂಲಕವಾದರೂ ನಾವು ನಮ್ಮ ಎದೆಯ ಕವಾಟದೊಳಕ್ಕೆ ಅವರನ್ನು ಕರೆದುಕೊಳ್ಳಬಹುದು. ಆದರೆ ರಾಮದಾಸ್‌ರನ್ನು ಅಕ್ಷರದ ಮುಷ್ಟಿಯೊಳಕ್ಕೆ ತಂದುಕೊಳ್ಳಲು ಸಾಧ್ಯವಿಲ್ಲ. ಕಾಡ್ಗಿಚ್ಚನ್ನೆ ಒಡಲೊಳಗೆ ಪೇರಿಸಿಟ್ಟುಕೊಂಡವರಂತೆ ಮಾತಿನ ಮೂಲಕ ಸದಾ ಸ್ಫೋಟಗೊಳ್ಳುತ್ತಿದ್ದ ಅವರ ವಿಚಾರಕ್ರಾಂತಿಯ ಚಾಟಿ ಏಟಿಗೆ ಬೆತ್ತಲಾದವರೆಷ್ಟೋ, ಪರಾಜಾದ ದೇವರುಗಳೆಷ್ಟೋ.

ಮಠವೊಂದರ ಸ್ವಾಮೀಜಿಯೊಬ್ಬರು ಜಾತ್ಯತೀತತೆ, ಕೋಮುವಾದದ ಬಗ್ಗೆ ಮಾತನಾಡಲು ಪ್ರೊ.ಕೆ. ರಾಮದಾಸ್‌ರನ್ನು ಅಲ್ಲಿಗೆ ಕರೆಸಿದ್ದಾಗ, ಈ ಮಠಗಳನ್ನು ನಾಶಮಾಡುವ ಮೂಲಕವೂ ಜಾತ್ಯತೀತತೆಯನ್ನು ಸೃಷ್ಟಿಸಬಹುದೆಂದು ಖಿದ್ದು ಆ ಮಠದ ಸ್ವಾಮೀಜಿಯೇ ದಂಗಾಗುವಂತೆ ಸಿಡಿದಿದ್ದವರು ರಾಮದಾಸ್. ಮನುಷ್ಯನ ಎಲ್ಲ ಕ್ಷುದ್ರ ವ್ಯಾಪಾರಗಳ ಸಂತೆಯೊಳಗೆ ನಿತ್ಯವೂ ಬಿಕರಿಗಿರುವ ಈ ದೇವರು, ಧರ್ಮ, ಜಾತಿಗಳನ್ನು ನನ್ನಂಥವರು ಇನ್ನಷ್ಟು ನಿಕೃಷ್ಟವಾಗಿ ನೋಡುವುದನ್ನು ಕಲಿಸಿದವರು ರಾಮದಾಸ್.ಮೂರು ವರ್ಷಗಳ ಹಿಂದೆ ಸೆಂಟ್ರಲ್ ಕಾಲೇಜ್‌ನ ಸಭಾಂಗಣದಲ್ಲಿ ಸಿಜಿಕೆಯವರು ಸಂಘಟಿಸಿದ್ದ 'ಕುವೆಂಪು ಶತಮಾನೋತ್ಸವ'ದ ಕಾರ್ಯಕ್ರಮಕ್ಕೆ ಬಂದಿದ್ದ ಕೆ. ರಾಮದಾಸ್ 'ಈ ದಲಿತರು, ದಲಿತ ನಾಯಕರು ಎಷ್ಟೊಂದು ದಾರಿ ತಪ್ಪಿದ್ದಾರೆಂದರೆ, 'ನಮ್ಮ ಅಂಬೇಡ್ಕರ್ ಸುದ್ದಿಗೆ ಬರ್ಬೇಡಿ, ಅವರು ಯಾವತ್ತಿದ್ರೂ ನಮ್ಮ ಸ್ವತ್ತು. ಅವರ ತಂಟೇಗೇನಾದ್ರೂ ಬಂದ್ರೇ ನಾವು ಸುಮ್ನಿರಲ್ಲಾ, ಹುಷಾರ್'ಅನ್ನುತ್ತಾ, ಬಿಲದೊಳಕ್ಕೆ ಸಿಕ್ಕು ಇನ್ನಷ್ಟು ಸಂಕುಚಿತರಾಗ್ತಿದ್ದಾರೆ. ಮೊದ್ಲು ಅವರು ಇದರಿಂದ ಹೊರ ಬರ್ಬೇಕು' ಎಂದು ನಿಷ್ಠುರವಾಗಿಯೇ ದಲಿತರನ್ನು ತರಾಟೆಗೆ ತೆಗೆದುಕೊಂಡಿದ್ದರು.

ಕಳೆದ ವರ್ಷ ಮೈಸೂರು ರಸ್ತೆಯ ನಿಲ್ದಾಣವೊಂದರಲ್ಲಿ ರಾಮದಾಸ್ ಅವರು ನಿಂತಿದ್ದರು. ಕೂಡಲೇ ನಾನು ಕೂತಿದ್ದ ಬಸ್ಸಿನಿಂದಿಳಿದು ಅವರತ್ತ ನಡೆದೆ. ಬಹುಶಃ ಆಗ ಸಮಯ

ಮಧ್ಯರಾತ್ರಿಯ ೧೨.೩೦ ದಾಟಿತ್ತೆಂದು ಕಾಣುತ್ತದೆ. ಆ ದೊಡ್ಡ ರಸ್ತೆಯ ಆಸುಪಾಸು ಕೆ. ರಾಮದಾಸ್‌ರು ಮತ್ತು ನನ್ನ ಹೊರತಾಗಿ ಇನ್ನೊಂದೇ ಒಂದು ವ್ಯಕ್ತಿಯ ನೆರಳಿರಲಿಲ್ಲ. ನಾನು ಅವರಿಗೆ ಸಮೀಪವಾಗುತ್ತಿದ್ದಂತೆಯೇ ಅವರಿಗೆ ಗಾಬರಿಯಾಗಿರಬೇಕು. ಆ ಸರಿರಾತ್ರಿಯಲ್ಲಿ ಅವರ ಆತಂಕ ಕೂಡ ಸಹಜವಾಗಿತ್ತು. ನಾನು ಅವರ ಹತ್ತಿರ ಬಂದು ನನ್ನ ಹೆಸರು, ಪರಿಚಯವನ್ನು ಹೇಳಿಕೊಂಡೆ. ಆಗಷ್ಟೇ ನಟರಾಜ್ ಹುಳಿಯಾರ್ ಅವರ ಮನೆಯಿಂದ ಹಿಂತಿರುಗಿದ್ದ ಅವರು ಈ ರಾತ್ರಿಯೇ ಮೈಸೂರು ತಲುಪಬೇಕೆಂಬ ಒತ್ತಡದಲ್ಲಿದ್ದಂತೆ ಕಾಣುತ್ತಿತ್ತು. ಅವರನ್ನು ಮೈಸೂರಿಗೆ ಬಸ್ಸು ಸಿಗುವ ಇನ್ನೊಂದು ನಿಲ್ದಾಣಕ್ಕೆ ಕರೆದೊಯ್ದೆ. ಇಡೀ ರಸ್ತೆ ಬಿಕೋ ಎನ್ನುತ್ತಿತ್ತು. ನನ್ನ ಕಾಳಜಿ ನೋಡಿ'ನಂದಿರ್ಲಿ, ನೀನ್ ಬೇಗ ಮನೆ ಸೇರ್ಕಳಪ್ಪ' ಅಂದ್ರು. ಅಷ್ಟರಲ್ಲಿ ದೂರದಲ್ಲೊಂದು ಬಸ್ಸು ಬರುತ್ತಿದ್ದಂತೆ ಕಾಣುತ್ತಿತ್ತು. ಅವರು ಏನನ್ನೋ ನೆನಪಿಸಿಕೊಂಡವರಂತೆ, ತಮ್ಮ ಜೇಬಿನಿಂದ ತುಂಡು ಹಾಳೆಯೊಂದನ್ನು ತೆಗೆದು 'ಇದು ನನ್ನ ಮನೆ ಅಡ್ರೆಸ್, ನೀವು ಮೈಸೂರಿಗೆ ಬಂದಾಗ ದಯವಿಟ್ಟು ನಮ್ಮನೆಗೆ ಬನ್ನಿ'ಅಂದ್ರು.

ಅವರನ್ನು ಕಳಿಸಿ ನಾನು ನನ್ನ ರೂಮಿಗೆ ಹಿಂತಿರುಗುವ ಹಾದಿಯಲ್ಲಿ ಅವರು ಕೊಟ್ಟಿದ್ದ ಅಡ್ರೆಸ್ ನೋಡಿದೆ. ಮನೆಯ ಹೆಸರು 'ಚಾರ್ವಾಕ'ಎಂದಿತ್ತು. ಯಾವತ್ತಾದರೊಂದು ದಿನ ಗೆಳೆಯರನ್ನು ಕಟ್ಟಿಕೊಂಡು ಮೈಸೂರಿನ ನವಿಲು ರಸ್ತೆ ಮತ್ತು ಪಂಚಮಂತ್ರ ರಸ್ತೆಯ ತುಂಬೆಲ್ಲ ಓಡಾಡಬೇಕೆನಿಸಿತು. ಈ ಬೆಂಗಳೂರಿನ ಸಾವಿರ ಕೊಳವೆಯೊಳಗಿನ ಬದುಕು ಮೈಸೂರನ್ನು ನನ್ನಿಂದ ಇನ್ನಷ್ಟು ದೂರ ಮಾಡಿತು.

ಇತ್ತೀಚೆಗೆ ಸಿಕ್ಕ 'ಊರುಕೇರಿ'ಪತ್ರಿಕೆಯಲ್ಲಿ ರಾಮದಾಸ್ ಅವರ ಆತ್ಮಕಥನದ ಭಾಗದಂತಿದ್ದ 'ನೆನೆವ ಪರಿಮಳ'ವನ್ನು ಓದಿ ಚಕಿತನಾಗಿದ್ದೆ. ಆ ಲೇಖನದ ಕೆಲವು ಭಾಗಗಳನ್ನು ಅವರ ಮಾತಿನಲ್ಲೇ ಕೇಳಿ: 'ಪಿಯುಸಿ ಮುಗಿಸಿದ್ದೆ. ಪ್ರಜಾವಾಣಿಯಲ್ಲಿ ಉಚಿತ ಹಾಸ್ಟೆಲ್ ಎಂಬ ಜಾಹೀರಾತು ಬಂದಿತ್ತು. ಅರ್ಜಿ ಹಾಕಿದೆ. ಸೀಟು ಸಿಕ್ಕಿದೆ ಬನ್ನಿ ಎಂಬ ಪತ್ರ ಬಂತು. ಮೈಸೂರಿನ ಕೆ.ಆರ್.ಸರ್ಕಲ್ ಬಳಿ ಇದ್ದ ಒಕ್ಕಲಿಗರ ಹಾಸ್ಟೆಲ್ ಹತ್ತಿರ ಹೋದೆ. ರಾತ್ರಿ ಒಂಭತ್ತು ಗಂಟೆಯಾಗಿತ್ತು. ಹಾಸ್ಟೆಲೊಳಗೆ ಕಾಲಿಟ್ಟೆ. ವಾರ್ಡನ್ ಬಂದ. ಪತ್ರ ತೋರಿಸಿದೆ. 'ನಿನ್ನದು ಯಾವ ಜಾತಿ?'ಎಂದ. 'ನನಗ್ಗೊತ್ತಿಲ್ಲ'ಎಂದೆ. ಪತ್ರವನ್ನು ಪರಪರನೆ ಹರಿದು, ಟ್ರಂಕ್‌ತೆಗೆದು ಹೊರಗೆಸೆದು 'ನಡಿ ಆಚೆ'ಎಂದ, ನಾನು ಭೂಮಿಗಿಳಿದೆ. ಅಳು ಬಂತು. ಜಾತಿ ಗೊತ್ತಿಲ್ಲದೆ ಇರುವುದೂ ಎಷ್ಟು ಸಮಸ್ಯೆ ಎಂದು ದುಃಖವಾಯಿತು. ಜಾತಿ ಪದ್ಧತಿ ಬಗ್ಗೆ ಮತ್ತಷ್ಟು ಅಸಹ್ಯವುಂಟಾಯಿತು... ಯಾರು ತನ್ನ ಕುಲದ ಬಗ್ಗೆ ದಂಗೆಯೇಳಬಲ್ಲರೋ ಅಂಥವರು ಮಾತ್ರ ಜಾತ್ಯತೀತ ದರ್ಶನಗಳನ್ನು ನೀಡಬಲ್ಲರು. ಅಂಬೇಡ್ಕರ್ ಬರೀ ದಲಿತರಿಗೆ, ಬಸವಣ್ಣ ಕೇವಲ ಲಿಂಗಾಯಿತರಿಗೆ ಎನ್ನುವಂಥ ವಾತಾವರಣ ಒಳ್ಳೆಯದಲ್ಲ. ಮಠಾಧೀಶರ ಪಾದಗಳಲ್ಲಿ ಪ್ರಭುತ್ವ ಬಿದ್ದು ಒದ್ದಾಡುತ್ತಿದೆ. ನಕ್ಸಲೀಯರ ಗುರಿ ಸರಿ. ಆದರೆ ಅವರ ಮಾರ್ಗ ತಪ್ಪು. ಅವರಿಗೆ ಬುದ್ಧ ಗುರುವಾಗಬೇಕಿತ್ತು. ಬಂದೂಕು ಗುರುವಾಗಿದೆ. ಬಂದೂಕಿನಿಂದ ಸಮಾಜದ ಬದಲಾವಣೆ ಅಸಾಧ್ಯ. ಸಮಾಜದ ನಡುವೆ ನಿಂತು ಹೋರಾಡುವ ಸಾತ್ವಿಕತೆ ತೊರೆದು ಅಡಗುದಾಣಗಳಲ್ಲಿ

ಕುಳಿತು ರಕ್ತದ ಕಣ್ಣಿನಿಂದ ಬದಲಾವಣೆಯ ಪ್ರಯೋಜನವಿಲ್ಲ. ವಿಚಾರವಂತ ಯುವಶಕ್ತಿ ಬಂದೂಕನ್ನು ಆರಾಧಿಸುತ್ತಾ ಬಲಿಯಾಗುವುದು, ಚಳವಳಿಯಾಗಲಾರದು. ಅಡಗಿಕೊಳ್ಳುವುದರಲ್ಲೇ ಅಪರಾಧಿ ಪ್ರಜ್ಞೆಯಿದೆ. ನಮ್ಮ ಕನಸು ಬಲಿಗೆ ಕಾರಣವಾಗುವುದು ಅಪಾಯಕರ... ಸತ್ಯ ಹೇಳುವುದು, ಜಾತಿ, ಧರ್ಮದ, ಪ್ರಭುತ್ವದ ಅನ್ಯಾಯಗಳ ವಿರುದ್ಧ ದಂಗೆಯೇಳುವುದು ನಮ್ಮನ್ನು ಒಂಟಿತನದ ಹಿಂಸೆಗೆ ಗುರಿಮಾಡಿದರೂ ಸಾವಿರಾರು ಕನಸುಗಳನ್ನು ಕಟ್ಟಿಕೊಂಡು ಮತ್ತೆ ಮತ್ತೆ ಪುಟಿಯುವ ಉತ್ಸಾಹವಿರಬೇಕು...

ಇಂತಹ ರಾಮದಾಸ್‌ರವರ ಮಾತುಗಳ ಮಹತ್ವ ಎಷ್ಟೆಂದು ಬಿಡಿಸಿ ಹೇಳಬೇಕಿಲ್ಲ.

# ಶಾಶ್ವತ ವಿರೋಧ ಪಕ್ಷ ಇನ್ನಿಲ್ಲ

ಯು.ಎಸ್. ಮಹೇಶ್

ಪ್ರತಿವಾರ ಲಂಕೇಶ್ ಬರೆದಿದ್ದನ್ನು ತಪ್ಪದೆ ಓದ್ತಾ ಇದ್ದ ನನಗೆ -ಈ ಮನುಷ್ಯ, ಸುಮ್ನೆ ಎಲ್ಲಾರ್ನೂ ಬೈದ್ ಬರೆದ್ರೆ ಆಗೋಯ್ತಾ? ಅದೆಲ್ಲ ಬಿಟ್ಟು ಇವ್ರೇ ಯಾಕೆ ಒಂದ್ ಪಾರ್ಟಿ ಕಟ್ಟಬಾರ್ದು ಅಂತ ಅನ್ನಿಸ್ತಾ ಇತ್ತು. ಲಂಕೇಶ್ ಅವರಿಗೂ ಕೂಡಾ ಅನ್ನಿಸ್ತೋ ಏನೋ! ಪ್ರಗತಿರಂಗ ಶುರುಮಾಡಿದ್ರು. 'ಮೈಸೂರ್‌ನಲ್ಲೊಂದು ರೇಪ್‌ಜಿತ್ ಹಗರಣ' ಅಂತ ಇಲ್ಲಿನ ಒಂದು ಭೂ ಹಗರಣದ ವಿರುದ್ಧ ಪ್ರಗತಿರಂಗದ ವತಿಯಿಂದ ಅಅರ ಮೇನಲ್ಲಿ ಒಂದು ಪ್ರತಿಭಟನೆ ಏರ್ಪಾಟಾಗಿತ್ತು. ಆ ವಿಚಾರ ಗೊತ್ತಾಗಿ ನಾನು ಪ್ರತಿಭಟನೆ ನಡೀತಾಯಿದ್ದ ಚಾಮುಂಡಿ ವಿಹಾರ ಕ್ರೀಡಾಂಗಣಕ್ಕೆ ಹೋದೆ. ಅಲ್ಲಿ ೩೦-೪೦ ಜನ ಸೇರಿದ್ರು. ಲಂಕೇಶ್ ರಾಮದಾಸ್ ಕೂಡಾ ಇದ್ರು. ಪ್ರತಿಭಟನೆ ಮುಗ್ದಿ ಎಲ್ರೂ ಹೊರಟಾಗ ನಾನೇ ಹೋಗಿ ರಾಮದಾಸ್ ಅವರನ್ನ ಪರಿಚಯ ಮಾಡಿಕೊಂಡು ಅವರ ಮನೆ ಅಡ್ರಸ್ ತಗೊಂಡೆ. ಆ ಮೇಲೆ ಒಂದಿವ್ಸ ಅವರ ಮನೆಗೆ ಹೋಗಿ, 'ಸಾರ್ ಮೈಸೂರಲ್ಲೂ ಪ್ರಗತಿರಂಗ ಕಟ್ಟೋಣ' ಅಂತ ಮಾತಾಡಿದೆ. ಅವ್ರು ಆಯ್ತು ಕಟ್ಟೋಣ. ನೀವೇನ್ ಮಾಡ್ತಾಯಿದ್ದೀರಾ, ಅಂಗಡಿ ಇಟ್ಕೊಂಡಿದ್ದೀರಾ? ಅಂತಾ ಎಲ್ಲ ಕೇಳಿ ತಿಳ್ಕಂಡ್ರು. 'ಈಗ ಬೇರೆ ಎಲ್ಲ ಕಡೆ ಓಡಾಡ್ತಾಯಿದ್ದೀವಿ, ಕಟ್ಟೋಣ' ಅಂದ್ರು.

ಯಾವ್ದೋ ಒಂದು ಡೇಟು ಕೊಡೋರು. ಆ ಡೇಟ್‌ಗೆ ಹೋದ್ರೆ ಇನ್ನೇನೋ ಒಂದು ಹೇಳೋರು. ಆ ನಡುವೆ ನಾನೇನೇ ಆಲೋಚನೆ ಮಾಡಿ ಅವರ ಅನುಮತಿ ತಗೊಂಡು ಲಂಕೇಶರ ಕಚೇರಿಗೆ ಒಂದು ಪತ್ರ ಬರ್ದೆ. ಅಲ್ಲಿಂದ ಲಂಕೇಶ್ ಅಭಿಮಾನಿಗಳು ಮೈಸೂರಲ್ಲಿ ಯಾರ್ಯಾರು ಇದ್ದಾರೆ ಅಂತಾ ಒಂದು ಪಟ್ಟಿ ತಗೊಂಡೆ. ಅವರು ಕೊಟ್ಟ ವಿಳಾಸದಂತೆ ಎಲ್ಲರಿಗೂ ನಾನೇ ಪೋಸ್ಟ್ ಕಾರ್ಡ್ ಹಾಕಿದೆ. ಅದರ ಪ್ರಕಾರ ರಾಮದಾಸ್ ಅವರ ಕಾರ್ ಶೆಡ್ಡಲ್ಲಿ ಒಂದಿವ ಮೀಟಿಂಗ್ ಕರುದ್ವಿ. ಅವತ್ತು ದೊಡ್ಡ ದೊಡ್ಡ ಚಳವಳಿಗಾರರು, ಜೊತೆಗೆ ಒಂದಷ್ಟು ಹೊಸ

ಹುಡುಗ್ರು ಕೂಡ ಬಂದ್ರು. ಅವರಲ್ಲಿ ಉಗ್ರನರಸಿಂಹೇಗೌಡ, ಚೆಲುವೇಗೌಡ, ಆರಾಧ್ಯ, ಶ್ರೀನಿವಾಸ್ ಇವರೆಲ್ಲ ಇದ್ರು. ರಾಮದಾಸ್ ನನ್ನ ಆಸಕ್ತೀನ ಮೊದಲೇ ಗುರುತಿಸಿದ್ರು. ಹಾಗಾಗಿ ಅಲ್ಲೇ ನನ್ನನ್ನು ಮೈಸೂರು ನಗರ ಜಿಲ್ಲಾ ಸಂಚಾಲಕ ಅಂತ ಮಾಡಿದ್ರು. ಅಲ್ಲಿಂದ ನನ್ನ ಮತ್ತು ರಾಮದಾಸ್ ಅವರು ಸಂಪರ್ಕ ಬೆಳೀತಾ ಹೋಯ್ತು.

ಅಲ್ಲಿಂದ ನಾವು ಇವರ ಸಲಹೆಯಂತೆ ಮೀಟಿಂಗ್ ಕರೀತಾ ಇದ್ವಿ. ಆದ್ರೆ ಪ್ರೋಗ್ರಾಮ್ ಕೊಡೋದಿಕ್ಕೆ ಆಗ್ತಾಯಿರ್ಲಿಲ್ಲ. ಯಾವುದೇ ಒಂದು ಸಂಘಟನೆ ಪ್ರೋಗ್ರಾಮ್ ಕೊಡ್ದೇಯಿದ್ರೆ ವೀಕ್ ಆಗುತ್ತೆ. ಅದೇ ಪ್ರಗತಿರಂಗದಲ್ಲೂ ಆಯ್ತು. ಆದ್ರಿಂದ ಬಂದ ಹುಡುಗ್ರೆಲ್ಲ ಹೊರಟು ಹೋದ್ರು. ತೀರಾ ಕಮಿಟ್‌ಮೆಂಟ್ ಇದ್ದೋರು ಮಾತ್ರ ಉಳಕೊಂಡ್ರು. ರಾಮದಾಸ್ ಅವರೂ ಕೂಡಾ ಪ್ರಗತಿರಂಗದ ಬಗ್ಗೆ ತೀರಾ ನಂಬಿಕೆಯನ್ನ ಇಟ್ಕೊಂಡಿರಲಿಲ್ಲ. ನಾನು ನೋಡ್ದಂಗೆ ಅವರು ಲಂಕೇಶ್ ಆರ್ಗನೈಜ್ ಮಾಡಿದ ಸಭೆಗಳಿಗೆ ಹೋಗ್ತಾಯಿದ್ರು. ಆದರೆ ಎಲ್ಲಿಗೂ ಇವರೇ ಖುದ್ದಾಗಿ ಹೋಗಿ ಸಂಘಟನೆ ಮಾಡಿದ್ದನ್ನ ನಾನು ಕಂಡಿಲ್ಲ.

ಮುಂದೆ ಬಾಬ್ರಿ ಮಸೀದಿ ಗಲಾಟೆ ಶುರುವಾಯ್ತು. ಅದು ಎಷ್ಟು ಪ್ರಖರವಾಗಿತ್ತು ಅಂದ್ರೆ ಇಡೀ ಮೈಸೂರು ಕೋಮುವಾದದ ಅಲೆಗೆ ಲಕ್ವ ಹೊಡ್ದಂಗೆ ಆಗಿತ್ತು. ಇನ್ನೇನು ಬಿಜೆಪಿ ಅಧಿಕಾರಕ್ಕೆ ಬಂದೇಬಿಡ್ತು ಅಂತಾ ಎಲ್ರೂ ಸುಮ್ಮನಾಗಿಬಿಟ್ಟಿದ್ರು. ಕಾಂಗ್ರೆಸ್ಸು, ಜನತಾ ಪಾರ್ಟಿ, ಕಮ್ಯುನಿಷ್ಟರುಗಳು ಕೂಡಾ ದಿಕ್ಕು ತೋಚದೇ ಪರಿತಪಿಸ್ತಾಯಿದ್ರು. ಅದೇ ಸಂದರ್ಭದಲ್ಲಿ ರಾಮದಾಸ್ ಅವರ ಮೇಲೆ ಹಲ್ಲೆ ನಡೀತು. ಸರಸ್ವತಿಪುರಂ ರೋಟರಿ ಭವನದಲ್ಲಿ ಕೋಮುವಾದಿಗಳ ಒಂದು ವಿಚಾರ ಸಂಕಿರಣದಲ್ಲಿ ರಾಮದಾಸ್ ಪ್ರಶ್ನಿಸಿದಾಗ ಅವರ ಮೇಲೆ ಹಲ್ಲೆಯಾಯಿತು. ಅವತ್ತು ಗೌತಮ ಹಾಸ್ಟೆಲ್ಲಿಂದ ಹುಡುಗ್ರು ಬಂದು, ಆ ಕೋಮುವಾದಿಗಳನ್ನೆಲ್ಲ ಹೊಡ್ದು ಓಡ್ಸಿದ್ರು. ಈ ಘಟನೆ ಆದ ಮೂರೇ ದಿನಕ್ಕೆ ಮೈಸೂರಿನಲ್ಲೊಂದು ಬೃಹತ್ ಕೋಮು ವಿರೋಧಿ ಪ್ರತಿಭಟನೆ ಆಯೋಜಿಸಿದ್ವಿ. ಸಾವಿರಾರು ಜನ ಸೇರಿ ಮಾನವ ಸರಪಳಿ ರಚಿಸಿ, ಕ್ಯಾಂಡಲ್ ಮೆರವಣಿಗೆ ಮಾಡಿದರು. ಆ ಪ್ರತಿಭಟನೆಗೆ ಬಿಜೆಪಿಯೇತರ ಎಲ್ಲ ಪಕ್ಷದವ್ರೂ ಬಂದು ಸೇರಿದ್ರು.

ನಾವು ರಾಮದಾಸ್ ನೇತೃತ್ವದಲ್ಲಿ ಮಾಡಿರುವ ಪ್ರತಿಭಟನೆಗಳಿಗೆ ಲೆಕ್ಕಾನೇ ಇಲ್ಲ. ಗಾಂಧೀಭವನಕ್ಕೆ ಬೇಲಿ, ಯುದ್ಧವಿರೋಧಿ, ನೈಸ್ ಕಾರಿಡಾರ್, ಕಾವೇರಿ ವಿವಾದ, ಎ.ಕೆ. ಸುಬ್ಬಯ್ಯನವರ ಮೇಲಿನ ಹಲ್ಲೆ ಪ್ರಕರಣ, ಕಂಚನಹಳ್ಳಿ ಗಂಗಾಧರ ಮೂರ್ತಿ ಕೊಲೆ, ಉಮ್ಮತ್ತೂರು, ಬದನವಾಳು, ವೀರಪ್ಪನ್ ಪ್ರಕರಣ, ಶಂಕರ್‌ದಯಾಳ್ ಶರ್ಮಾರ ವಿರುದ್ಧ ಇನ್ನೂ ಹತ್ತು ಹಲವಾರು ಪ್ರತಿಭಟನೆಗಳನ್ನು ಮಾಡಿದ್ದೀವಿ.

ರಾಮದಾಸ್ ಭಾಷಣ ಅಂದ್ರೆ ಸಾಕು ಕೇಳುಗರೆಲ್ಲ ರೋಮಾಂಚಿತರಾಗ್ತಾಯಿದ್ರು. ಎ.ಕೆ.ಸುಬ್ಬಯ್ಯನವರ ಮೇಲೆ ಕೋರ್ಟ್ ಮುಂಭಾಗದಲ್ಲೇ ಹಲ್ಲೆಯಾದಾಗ ಸ್ಥಳದಲ್ಲಿದ್ದ ಡಿಸಿಪಿಯೊಬ್ಬರು ಕರ್ತವ್ಯ ವಿಮುಖರಾಗಿದ್ದರು. ಆ ಬಗ್ಗೆ ಭಾಷಣ ಮಾಡ್ತ ರಾಮದಾಸ್: 'ನೀವು

ನಿಮ್ಮ ಖಾಕಿ ಬಟ್ಟೆಗೆ ನಿಷ್ಠೆಯಾಗಿಲ್ಲದಿದ್ದರೆ ವೀ ಆರ್‌ಗೋಯಿಂಗ್ ಟು ರಿಮೂವ್ ಯುವರ್ ಯೂನಿಫಾರ್ಮ್ ಟು ಅಪ್ ಹೋಲ್ಡ್ ದಿ ಡಿಗ್‌ನಿಟಿ ಆಫ್ ಪೊಲೀಸ್'ಎಂದೇ ಗುಡುಗಿದರು.

ರಾಮದಾಸ್ ಅವರು ಯಾವುದೇ ಕೆಲಸ ಮಾಡುವಾಗ್ಲೂ ಅಷ್ಟೇ. ಅದನ್ನ ತುಂಬಾ ಅಚ್ಚುಕಟ್ಟಾಗಿ ಮಾಡಬೇಕು ಅಂತಾನೇ ಹೊರಾಡೋರು. ಮನಸ್ಸಿನಲ್ಲೇ ಇಡೀ ಪ್ರೋಗ್ರಾಂ ಚಾಕೌಟ್ ಮಾಡ್ಕೊಂಡು ಬಿಟ್ಟಿರೋರು. ಅವರು ಹೇಳ್ದಂಗೆ ನಾವು ಮಾಡಬೇಕಿತ್ತು. ಮಧ್ಯದಲ್ಲಿ ಏನಾದರೂ ಪ್ರಶ್ನಿಸಿದರೆ ಭಾರೀ ಅಗ್ರೆಸಿವ್ ಆಗಿಬಿಡೋರು. ಅವರ ಕಮಿಟ್‌ಮೆಂಟೇ ಹಾಗಿತ್ತು. ಇನ್ವಾಲ್‌ಮೆಂಟಂತೂ ಇನ್ನೂ ಅದ್ಭುತವಾಗಿರ್ತಾಯಿತ್ತು.

ಅದೇ ರೀತಿ ಅವರ ಜೊತೆ ಇದ್ದ ಹುಡುಗ್ರನ್ನೆಲ್ಲ ನೀವು ಏನ್ ಮಾಡ್ತಾ ಇದ್ದೀರಿ, ಹೇಗೆ ಅಂತ ಎಲ್ಲಾ ಕೇಳೋವ್ರು . ನೈತಿಕ ಬೆಂಬಲ ಕೊಡೋರು. ಯಾರಾದ್ರೂ ನನಗೆ ರಾಮದಾಸ್ ತುಂಬಾ ಕ್ಲೋಸ್ ಅಂತ ಹೋದ್ರೆ ಅಲ್ಲೊಂದು ಗೆರೆ ಎಳೆದುಬಿಡೋವ್ರು. ಅಂದ್ರೆ ಡಿಸ್ಟೆನ್ಸ್ ಮೈನ್‌ಟೇನ್ ಮಾಡೋರು. ಅದು ಗೋತ್ತಾಗ್ದೇ ಕೆಲವರು ಭ್ರಮನಿರಸನ ಹೊಂದಿ ಹೊರಟುಹೋಗುತ್ತಿದ್ದರು . ವಾಸ್ತವ ಗೊತ್ತಿರುವವರು ಮಾತ್ರ ಅವರ ಜೊತೆ ಉಳೀತಾಯಿದ್ರು. ನಾನು ಲಂಕೇಶ್ ಪತ್ರಿಕೆ ಓದಿ ಎಷ್ಟೇ ಪ್ರಭಾವಿತನಾಗಿದ್ರೂ ಆ ವಿಚಾರಕ್ಕೆಲ್ಲ ರಾಮದಾಸ್ ಅವರೇ ಕಾರಣ. ಇನ್ನೊಂದು ಹೇಳ್ಬೇಕೆಂದ್ರೆ ನಾನು ಲಂಕೇಶ್ ಜೊತೆ ಇದ್ದದ್ದು ಲಂಕೇಶ್ ಪತ್ರಿಕೆಯ ಒಡನಾಟ, ಪುಸ್ತಕಗಳ ಮಾರಾಟ, ತೇಜಸ್ವಿ ಪುಸ್ತಕ ಪ್ರಕಾಶನದ ಒಡನಾಟ ಇವೆಲ್ಲ ರಾಮದಾಸ್ ಮುಖಾಂತರಾನೇ ಆದದ್ದು. ಲಂಕೇಶ್ ಪಾರ್ಟಿಗಳಲ್ಲಿ ಒಟ್ಟಾಗಿ ಸೇರ್ತಾಇದ್ವಿ. ಆ ಅಟ್ಮಾಸ್ಫಿಯರ್ ಚೆನ್ನಾಗಿರೋದು.

ಅವರಿಗೆ ಹಾರ್ಟ್ ಅಟ್ಯಾಕ್ ಆದಾಗ ಆಪರೇಷನ್ ಮಾಡಿಸಿಕೊಳ್ಳೋವರ ಬಗ್ಗೆ ಒಂದು ಲಾಜಿಕನ್ನ ಯೂಸ್ ಮಾಡಿದ್ರು. ಆ ಸಂದರ್ಭದಲ್ಲೆಲ್ಲಾ ಅವರ ಜೊತೇನೇ ಇರ್ತಾ ಇದ್ದೆ. 'ಆಪರೇಷನ್‌ಗೆ ಅದೆಷ್ಟೋ ದುಡ್ಡು ಖರ್ಚಾಗುತ್ತೆ. ಆಗಲಿ. ಆದ್ರೆ, ವಾಟಿಸ್ ದಿ ಗ್ಯಾರಂಟಿ... ನೋ ಗ್ಯಾರಂಟಿ. ಆಪರೇಷನ್ ಆದ ಒಂದ್ ಗಂಟೇನಲ್ಲೇ ಹೋಗ್ಬೋದು, ಇಲ್ಲಾ ಮತ್ತೆ ಅಟ್ಯಾಕ್ ಆಗ್ಬೋದು. ಏನ್ ಉಪಯೋಗ?' ಮೊದಮೊದಲು ಅವರು ಸ್ವಲ್ಪ ಹೆದರಿಕೊಂಡಿದ್ರು. ಆದ್ರೂ ಆಪರೇಷನ್ ಮಾಡ್ಸ್‌ಕೊಳ್ಳೋದಿಕ್ಕೆ ರೆಡಿಯಿರ್ಲಿಲ್ಲ. ಅಂದ್ರೆ ಅದು ಅವರಿಗೆ ಕನ್ವಿನ್ಸ್ ಆಗಲಿಲ್ಲ. ಆಲ್ಟರ್‌ನೇಟಿವ್ ಮೆಡಿಸನ್‌ನ ಸ್ವಲ್ಪ ದಿವಸ ತೆಗೆದುಕೊಂಡರು. ಅವರಿಗೆ ಡಾಕ್ಟ್ರು ಮೆಟ್ಟಿಲು ಹತ್ತಬೇಡಿ, ಏದುಸಿರು ಬಿಡಬೇಡಿ ಅಂತ ಎಲ್ಲಾ ಹೇಳಿದ್ರು. ಆಗೆಲ್ಲ ಸ್ವಲ್ಪ ದಿವಸ ನಾನೇ ಕಾಲೇಜಿಗೆ ಕರ್‍ಕೊಂಡೋಗಿ ಸೈನ್ ಹಾಕ್ಸಿ ಕರ್‍ಕೊಂಡ್ ಬರ್ತಾ ಇದ್ದೆ. ಆಮೇಲೆ ಹೇ...ಬಿಡ್ರಿ... ಹಿಂಗೇ ಹೆದರಿ ಕೊಂಡು ಇದ್ರೆ ಆಯ್ತು 'ಅಂತ ಆ ಹ್ಯಾಂಗೋವರ್‌ನಿಂದ ಹೊರಗ ಬಂದ್ಬಿಟ್ರು. ಯಾರ್ ಏನೇ ಹೇಳಿದ್ರೂ ಆಪರೇಷನ್ ಮಾಡಿಸ್ಕೊಳ್ಳಿಲ್ಲ. ಲಂಕೇಶರಂತೂ ಶತಾಯಗತಾಯ ಪ್ರಯತ್ನ ಮಾಡಿದ್ರೂ ಒಪ್ಕೊಳ್ಳಿಲ್ಲ.

ನಮ್ಮಗಳ ಬಗ್ಗೆ ರಾಮದಾಸ್‌ಗೆ ತುಂಬಾ ಪ್ರೀತಿ ಇತ್ತಂತೆ. ನಮ್ಮ ಆಬ್‌ಸೆನ್ಸ್‌ನಲ್ಲಿ ಬಹಳ ಕಡೆ ಅದನ್ನ ಹೇಳಿಕೊಂಡಿದ್ದಾರೆ. ಈ ಹುಡುಗ್ರು ಹೇಳಿದ ಟೈಂಗೆ ಕೆಲ್ಸ ಮಾಡ್ತಾರೆ ಅಂತ ಬಹಳ

ಜನರ ಹತ್ರ ಹೇಳಿದ್ದಾರೆ. ಆದ್ರೆ ಎದ್ರಿಗೆ ಮಾತ್ರ ಯಾರನ್ನೂ ಯಾವತ್ತೂ ಹೊಗಳ್ತಾ ಇರ್ಲಿಲ್ಲ. ಹಾಗೇನೇ ಯಾರಿಗೇ ಆದ್ರೂ ಬಹುವಚನವನ್ನು ಧಾರಾಳವಾಗಿ ಬಳಸುತ್ತಿದ್ದರು. ಬಹಳ ಜನ ಮೊದಲು 'ನೀವು' ಅಂತ ಮಾತಾಡುತ್ತಾ ಇದ್ದೋರು ಆತ್ಮೀಯರಾದ ಮೇಲೆ 'ನೀನು 'ಅನ್ನೋಕೆ ಶುರುಮಾಡ್ತಾರೆ. ಆದರೆ ಇವರು ಯಾವತ್ತೂ ದೊಡ್ಡವರಿರಲಿ, ಚಿಕ್ಕವರಿರಲಿ ನೀವು ಅಂತಾನೆ ಮಾತಾಡಿಸುತ್ತಿದ್ರು.

ನನ್ನ ಮತ್ತು ರಾಮದಾಸ್ ಕುಟುಂಬದ ವೈಯಕ್ತಿಕ ಒಡನಾಟ ಇನ್ನರ್ ಸರ್ಕಲ್ ಅಂತೀವಲ್ಲ, ಹಾಗಿತ್ತು. ಒಂದು ಘಟನೆ ಹೇಳಬೇಕು: ಒಂದ್ಸಲ ನಮ್ಮ ಮನೆ ಸೋರ್‍ತಾಯಿತ್ತು. ಅವ್ರ ಫ್ರೆಂಡ್ ಒಬ್ರು ಪಾಪಣ್ಣ ಅಂತ ಕಂಟ್ರಾಕ್ಟರ್ ಇದ್ದರು. ಅವರ ಅಡ್ರೆಸ್ ಕೊಡಿ ಅಂತ ನಾನು ಕೇಳ್ದೆ. ಆಗ ಅವರು, 'ಅವರ ಮನೆ ಅಲ್ಲೆಲ್ಲೋ ಬರುತ್ತೆ. ಇರಿ ನಾನೇ ಬರ್ತೀನಿ' ಅಂತ ಕಾರ್ ತೊಗೊಂಡು ಬಂದ್ರು. ಅಲ್ಲಿಂದ ಹೋಗಿ ಪಾಪಣ್ಣನನ್ನು ಕರ್ಕೊಂಡು ನಮ್ಮನೆಗೆ ಬಂದು ಎಲ್ಲೆಲ್ಲಿ ಸೋರುತ್ತೆ ಅದಕ್ಕೆ ಏನೇನು ಮಾಡ್ಬೇಕು ಅಂತೆಲ್ಲ ನಮ್ಮಪ್ಪನ ಜೊತೆ ಮಾತಾಡ್ಕೊಂಡು ಬಂದ್ರು.

ಇನ್ನೊಂದು ಸಲ ನನ್ನ ಮಗ ಚಿಕ್ಕವನು, ನನ್ನ ಹೆಂಡ್ತಿ ಬಾಣಂತಿ. ಏನೇನೋ ಲಗೇಜು ತುಂಬಾ ಇತ್ತು. ಆಗ ಸ್ನೇಹಾ ಕಾರು ಕಲ್ತಿದ್ಲು. 'ಏನ್ ಸ್ನೇಹಾ ರೈಲ್ವೆ ಸ್ಟೇಷನ್ನಿಗೆ ಡ್ರಾಪ್ ಕೊಡ್ತ್ಯಾ ಅಂತಾ' ನಾನು ತಮಾಷೆ ಮಾಡ್ದೆ. ಆಗ ರಾಮದಾಸ್ ಇದ್ದವರು ಎಷ್ಟು ಗಂಟೆಗೆ ಬರಬೇಕು ಅಂತ ಎಲ್ಲಾ ಕೇಳ್ಕಂಡು ಅವರೇ ಕಾರ್ ತಗೊಂಡು, ಸ್ನೇಹನ ಜೊತೆ ಬಂದ್ಬಿಟ್ರು; ಅದೂ ಮೇಡಂಗೆ ಆರೋಗ್ಯ ಸರಿಯಿಲ್ದೆ ಯಿದ್ದಾಗ. ಹೀಗೆ ಬೇರೆಯವರಿಗೆ ಸಹಾಯ ಮಾಡಬೇಕು ಅಂದಾಗ ಅಷ್ಟೇ ಉತ್ಸಾಹದಿಂದ ಇರ್‍ತಾಯಿದ್ರು. ಹಾಗೇನೆ ಬೇರೆಯವರ ಮನೆಯ ಸಮಸ್ಯೆ ನಮ್ಮ ಮನೆಯ ಸಮಸ್ಯೆ ಅಂತಾನೇ ಬಗೆಹರಿಸೋದಿಕ್ಕೆ ಪ್ರಯತ್ನ ಪಡ್ತಾಯಿದ್ರು. ತಮ್ಮ ಕೈಯಲ್ಲಿ ಆದಷ್ಟು ಸಹಾಯ ಮಾಡುತ್ತಿದ್ದರು. ಎಲ್ಲಿಂದಲೋ ಓಡಿ ಬಂದು ಕೆಲವ್ರು ಮದುವೆ ಆಗೋರಲ್ಲಾ, ಅವರಿಗೂ ಕೂಡ ಅಗತ್ಯ ವಸ್ತುಗಳನ್ನು ಕೊಡಿಸೋರು. ಕೆಲವು ಸಾರಿ ನಮಗೂ ಸ್ಟೌವ್, ಸಣ್ಣಪುಟ್ಟ ವಸ್ತುಗಳನ್ನು ಕೊಡಿಸಿ ಅಂತ ಹೇಳೋವ್ರು.

ಒಂದ್ ಸಲ ನಿರ್ಮಲ ಮೇಡಂನ ಬಿ.ಎಮ್ ಆಸ್ಪತ್ರೆಗೆ ಸೇರಿಸಿದ್ರು. ಯಾರಿಗೂ ಗೊತ್ತಿರಲಿಲ್ಲ, ನನಗೂ ಸ್ವಾಮಿ ಆನಂದ್‌ಗೂ ಗೊತ್ತಾಗಿ ಹೋದ್ವಿ. ಅವರು ಆ ಕಡೆಯಿಂದ ಬರ್‍ತಾಯಿದ್ರು. ನಮ್ಮನ್ನು ನೋಡಿ ಅವರಿಗೆ ಕಣ್ಣೀರು ಬಂದ್ಬಿಡ್ತು. ಆಗ 'ನನ್ನ ವಿರುದ್ಧ ಯಾರೂ ಈ ರೀತಿ ಪ್ರತಿಭಟನೆ ಮಾಡಿರ್ಲಿಲ್ಲ. ಆದರೆ ನಿರ್ಮಲ ಮಾಡಿಬಿಟ್ಲು' ಅಂತ ಹೇಳಿದರು. ಅಂದ್ರೆ ತಮ್ಮ ಕೋಪಕ್ಕೆ ಆಕೆ ಕುಸಿದು ಹೋಗಿಬಿಟ್ಲು ಅನ್ನೋ ಭಾವನೆಯನ್ನು ನಮ್ಮ ಜೊತೆ ಹಂಚಿಕೊಂಡರು.

ನಮಗಿದ್ದ ವೈಚಾರಿಕ ಹುಮ್ಮಸ್ಸಿನಲ್ಲಿ ರಾಮದಾಸ್ ಏನು ಹೇಳಿದ್ರೂ ಮಾಡೋಕೆ ರೆಡಿ ಇದ್ವಿ. ಉಗ್ರಗಾಮಿಗಳೋ, ನಕ್ಸಲೈಟ್‌ಗಳೋ ಆಗೋಕೆ ರೆಡಿ ಇದ್ದ ಮನಸ್ಥಿತಿ ಅದು. ಅಂಥ ಮನಸ್ಥಿತೀನ ಅವರು ದುರುಪಯೋಗ ಮಾಡಿಕೊಳ್ಳಲಿಲ್ಲ. ನಮ್ಮ ಶಕ್ತೀನ ವಿವೇಚನೆ ಮಾಡಿ

ಜವಾಬ್ದಾರಿಯುತವಾಗಿ ಪೌಲ್ಸ್ ಮಾಡಿದರು. ನನಗೆ ಮೊದಲಿನಿಂದಲೂ ಕಾಡುವ ಅಂಶ ಇದು.

ನೇರ ಪ್ರಜಾಪ್ರಭುತ್ವದ ಬಗ್ಗೆ ಅವರಿಗೆ ಅಪಾರವಾದ ನಂಬಿಕೆ ಇತ್ತು. ಒಬ್ಬ ಸಾಮಾನ್ಯ ಪ್ರಜೆ ಯಾರನ್ನ ಬೇಕಾದರೂ ಪ್ರಶ್ನಿಸಬಹುದು ಅಂತ ಹೇಳುತ್ತಿದ್ದರು. ಜೊತೆಗೆ, ಅವರು ಎಷ್ಟೇ ಅಂತರಜಾತಿ, ಪ್ರಗತಿಪರ, ಸರಳ ಮದುವೆಗಳನ್ನು ಮಾಡಿಸಿದ್ದರೂ, ಅನಿವಾರ್ಯವಾಗಿ ನಡೆಯೋ ಸಾಂಪ್ರದಾಯಿಕ ಮದುವೆಗಳ ಬಗ್ಗೆ ಅಸಹನೆ, ತಿರಸ್ಕಾರ ಇರಲಿಲ್ಲ. ನಾವು ಮಾಮೂಲಿಯಂತೆ ಮದುವೆಯಾದ್ರೂ ಪ್ರಶ್ನೆ ಮಾಡಿರಲಿಲ್ಲ. ಅವತ್ತು ನನ್ನ ಮದುವೆ ದಿವ್ಸ, ಅವರ ಮನೆಯಿಂದಾನೆ ಧಾರೆ ಮುಹೂರ್ತಕ್ಕೆ ಹೊರಟಿದ್ದೆ. 'ಏನ್ರೀ, ಒಳ್ಳೇ ದಿವಾನರ ಥರ ಕಾಣ್ತಿದೀರಲ್ರೀ'ಅಂತ ನಗುತ್ತಾ ಹೇಳಿದ್ದರು.

ಅವರು ಪ್ರೆಸ್ ಕಾನ್ಫರೆನ್ಸ್‌ನಲ್ಲಿ ಅಡ್ರೆಸ್ ಮಾಡ್ತಾಯಿದ್ದ ಶೈಲಿನೇ ವಿಶಿಷ್ಟವಾಗಿತ್ತು. ಯಾರೇ ಪತ್ರಕರ್ತರಿಗೆ ಅವರನ್ನು ಅಲುಗಾಡಿಸಿ ಪ್ರಶ್ನೆ ಮಾಡೋದಿಕ್ಕೆ ಆಗ್ತಾಯಿರಲಿಲ್ಲ. ಆಮೇಲೆ ಅವರು ಒಂದು ಪ್ರೆಸ್ ನೋಟ್ ಕೊಟ್ರೂ ಅಂದ್ರೂ ಅಷ್ಟೇ, ಅದ್ರಲ್ಲಿ ಭಾಷೇನಾ ಹೆಕ್ಕಿ ತೆಗಿಯೋಕೂ ಆಗ್ತಾ ಇರಲಿಲ್ಲ. ಅಷ್ಟು ಪರ್‌ಫೆಕ್ಟ್ ಆಗಿ, ಸ್ಪಷ್ಟವಾಗಿ ಬರೆದು ಕೊಡೋರು. ಇಡೀ ನೋಟ್‌ನ ಪ್ರೆಸ್‌ನೋರು ಯಥಾವತ್ತಾಗಿ ಬಳಸಿಕೊಳ್ತಾ ಇದ್ರು. ಬರೆಯುವಾಗ್ಲೂ ಅಷ್ಟೇ ತುಂಬಾ ಮುದ್ದಾಗಿ ಗ್ರಾಮೆಟಿಕ್ ಮಿಸ್ಟೇಕ್ ಇಲ್ಲ್ದಂಗೆ ಬರ್ದು, ನಿರ್ಮಲಾ ನೀನು ಒಂದ್ಸಲ ನೋಡು ಅಂತಾ ಮೇಡಂಗೆ ತೋರಿಸಿ ಅನಂತರ ರಿಲೀಸ್ ಮಾಡೋರು.

ನಾವು ಪ್ರೆಸ್ ಕಾನ್ಫರೆನ್ಸ್‌ನಲ್ಲಿ ಪ್ರೆಸ್ ನೋಟ್‌ನ ಹಂಚ್ತಾಯಿದ್ವಿ. ಒಂದ್ಸಲ ಏನಾಯ್ತು ಅಂದ್ರೆ ಏನೋ ಕಾರಣದಿಂದ ಬಿಜೆಪಿ ಒಲವಿರೋ ಒಬ್ಬ ಪತ್ರಕರ್ತನಿಗೆ ಪ್ರೆಸ್‌ನೋಟ್ ಮಿಸ್ ಆಯ್ತು. ಮೂರನೆ ಸಾರಿ ಅವನು ನೇರವಾಗೇ ಪ್ರತಿಭಟಿಸಿಬಿಟ್ಟ; ನೀವಿಲ್ಲಿ ಗುಂಪುಗಾರಿಕೆ ಮಾಡ್ತೀರಾ ಅಂತಾ. ಆಗ ರಾಮದಾಸ್ ಅವರು ಸಾರಿ ಅಂತಾ ಅಂದ್ರು. ಆಮೇಲೆ ಹೊರಗೆ ಬಂದು ಟೀ ಕುಡಿತಾ ಇದ್ವಿ. ಆವಾಗ ರಾಮದಾಸ್ ಆತನನ್ನ ಕರೆದು. ನಾವು ನಿಮಗೆ ಪ್ರೆಸ್ ನೋಟ್ ಕೊಡೋದಿಲ್ಲ ಅಂತಾ ಇಟ್ಕೊಳ್ಳಿ, ಆಗ ಏನು ಮಾಡ್ತೀರಾ ಅಂತಾ ಕೇಳಿದ್ರು. ಅದಕ್ಕವನು ನಿಮ್ಮ ಸುದ್ದೀನಾ ಹಾಕೋದಿಲ್ಲ ಅಂದ. ಇಲ್ಲ ಅದು ಸಾಧ್ಯ ಇಲ್ಲ, ನಾವು ಕೊಡ್ತೀವಿ-ಬಿಡ್ತೀವಿ ಅದು ಬೇರೆ. ಆದ್ರೆ ಒಬ್ಬ ಪ್ರೆಸ್‌ನವರಾಗಿ ಅದನ್ನ ಕಲೆಕ್ಟ್ ಮಾಡ್ಕೊಳ್ಳೋದು ನಿಮ್ಮ ಜವಾಬ್ದಾರಿ ಅಂತ ಹೇಳಿದ್ರು.

ರಾಮದಾಸ್ ಕೆಲವು ಸಲ ಪ್ರೆಸ್ ಕಾನ್ಫರೆನ್ಸ್‌ನೂ ಪಾಠಶಾಲೆ ಮಾಡ್ಕೊಂಬು ಬಿಡೋರು. ಇನ್ನೊಂದು ಮಜಾ ಏನಂದ್ರೆ ಒಂದು ಪೊಲೀಸ್ ವಿರುದ್ದದ ಪ್ರೆಸ್ ಕಾನ್ಫರೆನ್ಸ್‌ನಲ್ಲಿ ಪೊಲೀಸ್ ಮಾಹಿತಿದಾರರು ಬಂದು ಕೂತ್ಕಂಡು ಬಿಟ್ಟಿದ್ರು. ಇವರು ಹೇಳಿದ್ರು: ಇದು ಪ್ರೆಸ್ ಕಾನ್ಫರೆನ್ಸು, ಪ್ರೆಸ್‌ನೋರ್ನ ಬಿಟ್ಟು, ಪೊಲೀಸ್‌ನೋರು ಯಾರಾದ್ರು ಇದ್ರೆ ಹೊರಗೆ ಹೋಗಿ ಅಂತಾ. ಆಗ ಇಬ್ಬರು ಹೊರಗೆ ಹೋದ್ರು. ಸರಿ, ಅಲ್ಲಿ ಪ್ರೆಸ್‌ನೋರ್ನ ಪರಿಚಯ ಮಾಡ್ಕೋಳ್ತಾ ಇದ್ರು. ಅಲ್ಲಿ ಒಬ್ಬ ಪೊಲೀಸ್‌ನೋನು ಇನ್ನೂ ಕೂತ್ಕಂಡಿದ್ದ. ಅವನು ಪ್ರೆಸ್ನೋನು ಅಲ್ಲಾ ಅಂತಾ

ಗೊತ್ತಾಗೋಯ್ತು. ಆಗ ಇವರು " ರೀ, ಒಂದು ದನಕ್ಕೆ ಹೊಡೆದ್ರೆ ಎಲ್ಲವಕ್ಕೂ ಗೊತ್ತಾಗಬೇಕು,ಎದ್ದು ಹೋಗಬೇಕು" ಅಂತಾ ಅಂದ್ರು. ಸರಿ ಅವನು ಎದ್ದು ಹೊರಟು ಹೋದ. ಅವತ್ತು ಕೋಮುವಾದಿಗಳ ಜೊತೆ ಗುರುತಿಸಿಕೊಂಡಿದ್ದ ಒಂದು ಪತ್ರಿಕೆಯ ಸಂಪಾದಕರೇ "ಪೊಲೀಸರಿಗೆ ಪಾಠ ಕಲಿಸಿದ ಮೇಷ್ಟ್ರು" ಅಂತಾ ಬಾಕ್ಸ್ ಐಟಮ್ ಬರೆದ್ರು. ಪತ್ರಿಕೆಯವರಿಗಂತೂ ರಾಮದಾಸ್ ಪತ್ರಿಕಾಗೋಷ್ಠಿ ಅಂದ್ರೆ ಒಂದು ರೀತಿ ರೋಮಾಂಚನಕಾರಿ ಸಂಗತಿಯಾಗಿತ್ತು.

ರಾಮದಾಸ್ ಹತ್ತಾರು ಸಂಘಟನೆಗಳ ಹೆಸರುಗಳಲ್ಲಿ ಸಮಾಜದಲ್ಲಿ ನಡೆಯುವ ಯಾವುದೇ ಅನ್ಯಾಯಕ್ಕೆ ತಕ್ಷಣ ಪ್ರತಿಕ್ರಿಯಿಸಿ ಬಿಡುತ್ತಿದ್ರು. ಈ ಮೂಲಕ ಮೈಸೂರಿನಲ್ಲಿ ಒಂದು ದೊಡ್ಡ ಪ್ರಗತಿಪರ ಶಕ್ತಿಯಿದೆ ಅಂತ ಒಂದು ಭಯ ಮತ್ತು ಎಚ್ಚರಿಕೆಯನ್ನ maintain ಮಾಡಿದ್ರು. ಇವತ್ತು ಆ ಶಾಶ್ವತ ವಿರೋಧ ಪಕ್ಷದ ಎಚ್ಚರದ ಧ್ವನಿ ನಮ್ಮೊಂದಿಗಿಲ್ಲ.

# ತನುವಿನೊಳಗೆ ಅನುದಿನವಿದ್ದೂ...

ಚಿಕ್ಕಮಗಳೂರು ಗಣೇಶ

ಕುವೆಂಪು ಕಾರಂತರ ಮಾತಿರಲಿ ಬಿಡಿ... ನಾನು ಕಣ್ಣಾರೆ ಲಂಕೇಶರನ್ನಂತೂ ಕಾಣಲಿಲ್ಲ. ನಂಜುಂಡಸ್ವಾಮಿ ಭಾಷಣ ಕೇಳೋ ಭಾಗ್ಯ ಸಿಕ್ಕಲೇ ಇಲ್ಲ. ಇನ್ನು ತೇಜಸ್ವಿ ಅವರು ನಮ್ಮೂರಿಗೆ ಬಹಳಾನೆ ಹತ್ತಿರದಲ್ಲಿದ್ರೂ ಕಂಡು ಮಾತಾಡಿಸೋ ಧೈರ್ಯ-ಹುಚ್ಚು ಕೆದರಲೇ ಇಲ್ಲ. ನಮ್ಮ ಕೈಕಾಲಿಗೇ ಸಿಕ್ಕುತ್ತಿದ್ದ ಬಿ.ಕೆ.ಸುಂದರೇಶರಲ್ಲಿ ನಾನು ಪ್ರಾಮಾಣಿಕವಾದ ಹೋರಾಟದ ಬದುಕಿನ ಕರೇಜನ್ನ ಕಂಡೆ... ಸ್ವಲ್ಪ ಸ್ವಲ್ಪಾ ರೂಢಿಸಿಕೊಂಡೆ. ಕೊಳಚೆ ಕೆಸರಲ್ಲಿ ಅರಳುತ್ತಿದ್ದ ನಾವು ತುಟಿ ಬಿಚ್ಚೋ ಮುಂಚೇನೆ ಅವರು ತಿರುಗಿ ಬಾರದಷ್ಟು ದೂರ ಆದಾಗ ಕಣ್ಣತುಂಬಾ ಸಣ್ಣಗೆ ಸೋನೆಮಳೆ ಜಿನುಗುತ್ತಿತ್ತು. ಅಯ್ಯಪ್ಪ! ಗುರಿ ತೋರಬೇಕಾದ ಗುರು ದಾರಿಮಧ್ಯೆ ನಿಂತನಿಂತಲ್ಲೇ ಅಂತರ್ಧಾನನಾಗಿದ್ದ. ನನ್ನಂಥೋರಿಗಂತೂ ಎಳೆವಯಸ್ಸಿನಲ್ಲಿ ಅದು ಮರೆಯಲಾಗದ ದೊಡ್ಡ ಆಘಾತವಾಗಿತ್ತು.

ಮತ್ತೆ ನಾನು, ನಾವೆಲ್ಲ ಮೆಚ್ಚುವ ಆದರ್ಶದ ಧೀರಧ್ವನಿಯನ್ನು ಕಣ್ಣಾರೆ ಕಂಡದ್ದು, ಮನಸಾರೆ ಕೇಳಿಸಿಕೊಂಡದ್ದು ಮೈಸೂರಿನಲ್ಲೆ; ಅದು ರಾಮದಾಸ್ ಮೇಷ್ಟ್ರ ಮೂಲಕ. ಹಾಗೆ ನೋಡಿದರೆ, ಇಲ್ಲಿಗೆ ಬರೋ ಮುಂಚೆ ಮತ್ತೆ ಆಮೇಲೆ ಕೂಡ ರಾಮದಾಸ್ ಅಂದ್ರೆ ಯಾರೂ ಅಂತ ನನಗೆ ಗೊತ್ತಿರಲಿಲ್ಲ, ನನ್ನ ಕ್ರಿಯಾಶೀಲತೆಯನ್ನು ಪ್ರೋತ್ಸಾಹಿಸುತ್ತಿದ್ದವರಲ್ಲೇ ಒಬ್ಬರು, ಒಂದಿನ ನಾನು ಮಾಡಿದ ಸಣ್ಣ ತಪ್ಪಿಗೆ ರಾಮದಾಸರ ಹೆಸರು ಹಿಡಿದು ಜಾಡಿಸಿದ್ದರು. "ಏನ್ರೀ... ನಿಮಗೆ ಕನಿಷ್ಠ ಕಾಮನ್‌ಸೆನ್ಸ್ ಇದೆಯೇನ್ರೀ. ನಿಮ್ಮ ಕೊಳಚೆ ಬುದ್ಧೀನ ಏನೇ ಮಾಡಿದ್ರೂ ತಿದ್ದೋಕಾಗಲ್ಲ. ನೀವೆಲ್ಲ ಹಿಂಗೇ. ನೀವು ಯಾರ ಫಾಲೋಯರ್ಸ್ ಅಂತ ನನಗೆ ಚೆನ್ನಾಗ್ ಗೊತ್ತು. ಆ ರಾಮದಾಸ್ ಪಂಥ ಅಲ್ವೇನ್ರೀ ನೀವು. ಅವನೆಲ್ಲಿ ನಿಮಗೆ ನಯ-ವಿನಯ, ಭಯ-ಭಕ್ತಿ ಕಲಿಸಿರ್‍ತಾನೆ. ಮೊದಲು ಅವನಿಗೆ ಅದು ಇದ್ರೆ ತಾನೆ? ಎಷ್ಟಾದರೂ ನಾಯಿ ಬಾಲ ಡೊಂಕೇ

ಬಿಡಿ, ತಿದ್ದೋಕಾಗಲ್ಲ"....ಈ ತರದ ಮಾತುಗಳನ್ನು ಒಂದೆರಡು ಮೂರು ಸಾರಿ ಹೇಳಿದ್ದರು. ನನಗೆ ಬಹಳಾನೆ ಹರ್ಟ್‌ಆಗಿತ್ತು.

ಆ ದಿನ ಇಡೀ ರಾತ್ರಿ ಕಣ್ಣಿನ ಕೊಳ ಖಾಲಿಯಾಗುವಷ್ಟು ಕಣ್ಣೀರು ಸುರಿಸಿದ್ದೆ. ಬದುಕೇ ಬೇಡ ಅನ್ನುವಷ್ಟು ಹತಾಶೆ, ಅಸಹನೆ, ಗೊಂದಲ. ಮಧ್ಯೆ ಮಧ್ಯೆ ಅಂತೂ "ಈ ರಾಮದಾಸ್ ಅನ್ನೋ ಪುಣ್ಯಾತ್ಮ ಯಾರಪ್ಪ... ನೋಡಿಲ್ಲ, ಮಾಡಿಲ್ಲ. ನನ್ನ ಯಾಕೆ ಹೀಗೆ ಒಂದೇ ಸಮ ಕಾಡ್ತಾ ಇದ್ದಾರೆ" ಅನ್ನಿಸಿತ್ತು. ಮುಂದೇನೂ ಕೆಲ ದಿವಸಗಳ ಕಾಲ ರಾಮದಾಸ್ ಅನ್ನೋ ಮೂರ್ತಿ ಕಾಣದೆ ಇದ್ರೂ ಇಲ್ಲಿನ ಪೇಪರ್‌ಗಳಲ್ಲಿ ಅವರ ಫೋಟೋ... ಭಾಷಣ ನೋಡ್ತಿದ್ದೆ. ಇವನು ಪ್ರಚಾರಪ್ರಿಯ ಅಂತೆ, ಪೇಪರ್ ಟೈಗರ್ ಅಂತೆ, ಮನುಷ್ಯವಿರೋಧಿ ಕಣ್ರೀ -ಅಂತೆಲ್ಲ ಏನೇನೋ ತರತರದ ಕತೆಗಳನ್ನ ನನಗೆ ಆಪ್ತವಾಗುತ್ತಿದ್ದ ಬಳಗ ತಲೇಲಿ ತುಂಬೋಕೆ ಶುರು ಮಾಡಿತು.

ಈ ತರದಲ್ಲಿ ರಾಮದಾಸ್ ಅನೂಹ್ಯ ಕಲ್ಪನೆಗಳ ಮೂಲಕ ನನ್ನೊಳಗೆ ಭೂತಾಕಾರ ತಾಳಿ ಮೂಡತೊಡಗಿದರು. ಒಂಥರಾ ಮುಗ್ಧನಾಗಿದ್ದ ನನ್ನ ಪಾಲಿಗೆ ಅವರು ವಿರೋಧ ಪಕ್ಷದ 'ಖಳ'ನಾಯಕನ ರೀತಿ ದಿನೇ ದಿನೇ ಬೆಳೆಯತೊಡಗಿದರು. ಹೀಗೆ ಹಗಲಿರುಳು ನೆರಳಂತೆ ಕಾಡಿದ ಈ ವ್ಯಕ್ತಿತ್ವ ಆನಂತರದ ದಿನಗಳಲ್ಲಿ ಪರಮಾಪ್ತ ಸ್ಥಾನದಲ್ಲಿ ನೆಲೆಯೂರಿತು. ಅವರ ಮೈಕಟ್ಟು, ಚಹರೆ, ಧ್ವನಿ, ನಿಂತ ನಿಲುವು ಎಲ್ಲವನ್ನೂ ಮೈಯೆಲ್ಲ ಕಣ್ಣಾಗಿ ನೋಡುವ ಹಂಬಲ ಇಮ್ಮಡಿಯಾಯಿತು. ಯಾವುದೇ ಇಶ್ಯುಗಳಿರಲಿ, ಸಮಸ್ಯೆಗಳಿರಲಿ, ಯೋಜನೆಗಳೇ ಇರಲಿ.... ರಾಮದಾಸ್ ಹೇಗೆ ಪ್ರತಿಕ್ರಿಯಿಸುತ್ತಾರೆ ಅನ್ನೋಕುತೂಹಲ ನನ್ನ ಕಣ್ಣು ಕಿವಿಗಳನ್ನು ಜೀವಂತವಾಗಿಟ್ಟಿತ್ತು. ಅವರು ತಮ್ಮದೇ ಗತ್ತಿನಲ್ಲಿ ಎದುರು ಸುಳಿದಾಗಲೆಲ್ಲ ನನಗೆ ಅನ್ನಿಸುತ್ತಿದ್ದದ್ದು, 'ಈ ಮನುಷ್ಯ ವಿರೋಧ ಕಟ್ಟಿಕೊಳ್ಳೋದಕ್ಕೆ ಅಂತಾನೆ ಈ ಭೂಮಿ ಮೇಲೆ ಜನ್ಮ ಎತ್ತಿದಾರ'ಅಂತ.

ಅದು ಯಾವುದೇ ರೂಪದ ಅನ್ಯಾಯಗಳಿರಲಿ;ಅಪ್ಪಿ ತಪ್ಪಿ ಕೂಡ ಯಾರಾದರೂ ಅದನ್ನು ಮಾಡಿರಲಿ, ರಾಮದಾಸರ ನಿಷ್ಠುರ ಧ್ವನಿ ಅದರತ್ತ ಎಡೆಬಿಡದೆ ಗುಡುಗುತ್ತಿತ್ತು. ಹಂಗಿನರಮನೆಯಲ್ಲಿ ಕ್ಷಣಕಾಲ ಬದುಕೋದೂ ಜೀವಮಾನದ ಅಸಹ್ಯ ಅಂತ ಹೇಳುತ್ತಾ, ಬದುಕಿನುದ್ದಕ್ಕೂ ಆಮಿಷಗಳ ವಿರುದ್ಧ ಈಜಿ ವಿರೋಧಪಕ್ಷವಾಗೇ ಉಳಿಯೋದು ಕಷ್ಟಸಾಧ್ಯ. ಅಂತಹ ಒಂದು ಅತ್ಯಪೂರ್ವವಾದ ಧೀಮಂತ ಬದುಕನ್ನು ರಾಮದಾಸ್ ಅವರ ನೆಪದಲ್ಲಿ ನಾವು ದಿನನಿತ್ಯ ಕಣ್ತುಂಬಿಕೊಳ್ಳುತ್ತಾ ಇದ್ವಿ.

ಎಲ್ಲಕ್ಕಿಂತ ಮುಖ್ಯವಾಗಿ ಅವರು ನನಗೆ 'ಬೀದಿಯಲ್ಲಿ ಪಾಠ ಕಲಿಸಿದ ಮೇಷ್ಟ್ರು'ರೀತಿ ಕಾಣುತ್ತಾರೆ. ಹೇಗೋ ಇದ್ದವರು, ಎಲ್ಲೋ ಬಿದ್ದವರನ್ನೆಲ್ಲ ತಂದು ಒಂದು ಕಡೆ ಗುಡ್ಡೆಹಾಕಿ ಪ್ರತಿಭಟಿಸುವ ಛಾತಿ ಮತ್ತು ಚೈತನ್ಯವನ್ನ ತುಂಬೋದಿದೆಯಲ್ಲ:ಒಟ್ಟಿಗೆ ಸಾವಿರ ಶಾಲೆಗಳನ್ನು ತೆರೆದಂತೆ... ಅದು ಬಹಳಾನೆ ಕಷ್ಟದ ಕೆಲಸ, ಬೀದೀನೆ ಒಂದು ಅನುಭವ 'ಮಂಟಪ' ಆಗೋದು. ವಿಶ್ವವಿದ್ಯಾ 'ನಿಲಯ'ಆಗೋದು;ಎಲ್ಲ ಜಾತಿಪಂಥದೋರು ಸೇರಿ (ಅದನ್ನು ಮೀರಿ)ಪಾಠ

ಕೇಳೋದಿದೆಯಲ್ಲ ಅದೊಂದು ಅಪ್ಪಟ ರೋಮಾಂಚನದ, ನೈತಿಕ ತಾಕತ್ತಿನ ಕ್ಷಣ ಅಂತಾನೆ ನನ್ನ ತಿಳಿವಳಿಕೆ. ಹೀಗೆ ಕಟ್ಟಡಗಳ ಚೌಕಟ್ಟನ್ನ ಮೀರಿ ಬೀದಿಬದಿಯಲ್ಲಿ ಬದುಕಿನ, ವೈಚಾರಿಕತೆಯ, ಕನಸುಗಳ ಪಾಠ ಹೇಳಿಕೊಟ್ಟವರನ್ನು ಪಟ್ಟಿ ಮಾಡೋಕೆ ಹೋದ್ರೆ ಬೆರಳೆಣಿಕೆಯ ಮಂದೀನೂ ಲೆಕ್ಕಕ್ಕೆ ಸಿಕ್ಕೋದಿಲ್ಲ!

ರಾಮದಾಸ್ ಮೇಷ್ಟ್ರು ನಮ್ಮ ಬಹುದಿನಗಳ ಕನಸಿನ 'ಸಕಾಲ'ವನ್ನ ಕಣ್ತುಂಬ ನೋಡಬೇಕು, ಅದರ ಬಗ್ಗೆ ಮಾತಾಡಬೇಕು, ಆಡಬೇಕು, ತಕರಾರು ಮಾಡಬೇಕು, ಕೈಗೆತ್ತಿಕೊಂಡು ಮುತ್ತಿಕ್ಕಬೇಕು ಅಂತೆಲ್ಲಾ ಏನೇನೋ ಆಸೆ ಹೊತ್ತಿದ್ವಿ. ಮೊದಲನೆಯ ಸಂಚಿಕೆ ನೋಡಿ'ಬ್ಯೂಟಿಫುಲ್ಲಾಗಿದೆ ಕಣ್ರೀ' ಅಂತ ಅಷ್ಟಗಲ ಕನ್ನಡಕದೊಳಗಿಂದ ಕಣ್ಣರಳಿಸಿದ್ದೇ ನಮಗೆ ಸಿಕ್ಕ ಆಸ್ತಿ. ಅದೇನೋ ಕಾಲಕ್ಕೆ ಇಂತಹ ಸೆಂಟಿಮೆಂಟಲ್ ಅಟ್ಯಾಚ್‌ಮೆಂಟ್‌ಗಳೇ ಅರ್ಥ ಆಗೋಲ್ಲ. ಅಥವಾ ಅದಕ್ಕೂ ಇಂಥ ಯಾವುದೇ ಹಂಗಿಲ್ಲ ನೋಡಿ!ಹಂಗಿಲ್ಲದಿದ್ದರೆ ಮೊನ್ನೆ ಮೊನ್ನೆ ತಾನೆ ನಮ್ಮೆದುರು ಕಾರ್ಯಕ್ರಮವೊಂದರಲ್ಲಿ ಕಂಸಾಳೆ ಬಡಿದು ಕುಣಿದು ಬೆಚ್ಚಿಬೀಳಿಸಿದ್ದ ಮೇಷ್ಟ್ರು ಇಷ್ಟು ಬೇಗ ಕಣ್ಣುಮುಚ್ಚಿ ಕೊಳ್ಳುತ್ತಿದ್ದರೇ?

'ವೀರನಾದೊಡೆ ವೈರಿ ಮೆಚ್ಚಬೇಕು'ಅನ್ನುತ್ತಾನೆ ಬಸವಣ್ಣ. ಅವನ ಪ್ರಕಾರ ಮರ್ತ್ಯದ ಬದುಕನ್ನು ಬೆಳಗಿಕೊಂಡವರಿಗೆ ಅದೇ ನಿಜವಾದ Character certificate; ಜನಮೆಚ್ಚಿ ಕೊಡೋ Top most award. ಆ ಹೊತ್ತು ಮೇಷ್ಟ್ರು, ಅಶಾಂತ ಸಂತತನದ ಪೊರೆ ಕಳಚಿ ನಿಶ್ಚಿಂತ ನಿದ್ದೆಯಲ್ಲಿ ಅದ್ದಿ ಹೋದ ಸಂದರ್ಭ; ರಚ್ಚೆ ಹಿಡಿದ ಮಗುವಿನಂತೆ ಬಿಟ್ಟೂಬಿಡದೆ ಅಳುತ್ತಿದ್ದ ಮಳೆಯಲ್ಲಿ ತೋಯುತ್ತಾ... ಬದುಕಿದ್ದಾಗ ಅವರೊಂದಿಗೆ ಜಗಳವಾಡಿದವರು, ಮನೆಮೆಟ್ಟಿಲು ತುಳಿಯೋಕೆ ಭಯ ಬೀಳೋರು, ನೆಲಮುಗಿಲ ಗಾತ್ರದ ಭಿನ್ನಮತ ಹೊಂದಿದ್ದವರು, ಹಣೆತುಂಬ ಕುಂಕುಮ ಮೆತ್ತಿಕೊಂಡು ತಮ್ಮದೇ ಗತ್ತಿನಲ್ಲಿ ಓಡಾಡೋ ಸಂಘ ಪರಿವಾರದ ಗೆಳೆಯರು, ಉದ್ದಾನುದ್ದಗಡ್ಡ ನೀವಿಕೊಂಡು ಬರುತ್ತಿದ್ದ ಮುಸ್ಲಿಂ ಮೌಲ್ವಿಗಳು, ಅನಾಥರು, ಬಾಲಕಾರ್ಮಿಕರು, ಒಡನಾಡಿಗಳು-ಎಲ್ಲರೂ ರಾಮದಾಸರ ಹೃದಯವಂತಿಕೆಯನ್ನ ಎತ್ತಾಡಿ ಮಾತಾಡುತ್ತಿದ್ದಾಗ ಕಲ್ಯಾಣದಣ್ಣಯ್ಯನ ಮಾತು ನಿಜಕ್ಕೂ ನಿಜವೆನಿಸಿತು. ಶರಣರ ಬದುಕಿನ ಗುಟ್ಟನ್ನು ಮರಣದಲ್ಲೇ ಕುಂತು ಕಾಣಬೇಕೆಂಬ ದರ್ಶನ ಸಾಕ್ಷಾತ್ಕಾರವಾಯಿತು.

ಮೈಸೂರಿನ ಸಾಂಸ್ಕೃತಿಕ ಚಲನಶೀಲತೆಯ ತನುವಿನೊಳಗೆ ಅನುದಿನವಿದ್ದು, ವಿರಾಟ ಸಮಾವೇಶಗಳೇ ಆಗಲಿ, ಅಡ್ಡಪಲ್ಲಕ್ಕಿ ಉತ್ಸವಗಳಾಗಲಿ, ಅತಿರುದ್ರ ಮಹಾಯಾಗಗಳೇ ಆಗಲಿ ಖಡಾಖಂಡಿತವಾಗಿ ಗಟ್ಟಿ ಧ್ವನಿಯಲ್ಲಿ ಖಂಡಿಸುತ್ತಿದ್ದ ಆ ಆಜಾನು ಬಾಹುಬಲಿ ಇನ್ನು ನಮ್ಮೊಂದಿಗೆ ಇರುವುದಿಲ್ಲವೆಂದಾಗ ಒಂದು ಕ್ಷಣ ಯಾಕೋ ಮೂಕರಾಗದಲ್ಲಿ ಹಲುಬುವಂತಾಗುತ್ತದೆ.

ಮೇಷ್ಟ್ರೇ... ಕೊಲ್ಲುವ ಮನಸ್ಸುಗಳಿಂದಾಚೆ ಬೆಟ್ಟದ ತಪ್ಪಲಿನ ಅರಳಿ ಮರದ ನೆರಳಿನಲ್ಲಿ ನಮಗಾಗಿ ಬೆಚ್ಚಗಿನ ಗೂಡೊಂದನ್ನ ಪ್ರೀತಿಯಿಂದ ನೇಯ್ದು ಕೊಟ್ಟಿದ್ದೀರಿ. ಅಲ್ಲಿ ಅನ್ನಾಹಾರ ತಿನ್ನುವ, ಹಾರುವ, ಗಡಿ ಮೀರುವ, ಪ್ರಪಂಚವನ್ನು, ಅರಿಯುವ ಪಾಠವನ್ನು ಹೇಳಿಕೊಟ್ಟಿದ್ದೀರಿ.

ಇನ್ನೇನನ್ನೋ ಹೆಕ್ಕಿತರುವ ತರಾತುರಿಯಿಂದ ದಿಗಂತದ ಅನಂತ ನೀಲಿಯಲ್ಲಿ ಲೀನವಾಗಿದ್ದೀರಿ. ಮತ್ತೇಕೋ ನಿಮ್ಮ ಪತ್ತೆಯಿಲ್ಲ? ನಾವು ಪಿಳಿಪಿಳಿ ಕಣ್ಣಲ್ಲಿ ಜಪಕೂತು ನಿಮ್ಮ ನೆನಪನ್ನೇ ಧ್ಯಾನಿಸುತ್ತಿದ್ದೇವೆ. ಈ ನಾನಾ ಸಿಕ್ಕುಗಳ ಚಕ್ರವ್ಯೂಹದೊಳಗೆ ತದೇಕ ಚಿತ್ತದಲ್ಲಿ ನುಗ್ಗುವ ಛಾತಿ ಕಲಿಸಿದ್ದೀರಿ. "ಹೊರಬರುವ ಬೆಳಕಿಂಡಿಯ ಶೋಧಕ್ಕೆ ಸ್ವಂತ ಪ್ರಯತ್ನವಿರಲಿ;ಯಾರ ಕೈ ಬಾಯಿ ಕಾದರೂ ಎಳ್ಳಷ್ಟು ಸುಖವಿಲ್ಲ...." ಯುದ್ಧಭೂಮಿಯಲ್ಲಿ ಬುದ್ಧ ಬೋಧನೆ ಮಾಡಿದ್ದೀರಿ.

ಹಸಿರು ಹೆಪ್ಪಾಗಿ.... ಕಪ್ಪಾಗಿ
ಹೆಗ್ಗಾಡ ತುಂಬೆಲ್ಲ ಕಾಳ್ಗತ್ತಲೆ
ಮತ್ತೆಂದು ಬರುವುದು ನೀವು...?

# ಮಡಿಕೇರಿಯಲ್ಲಿ ರಾಮದಾಸ್

ಟಿ.ರಂಗಪ್ಪ ಮಡಿಕೇರಿ

ರಾಮದಾಸ್ ಹೀಗೆ ಒಮ್ಮೆ ಬಂದಿದ್ದರು ಮಡಿಕೇರಿಗೆ, ೧೫-೦೪-೨೦೦೭ರ ಸಂಜೆ. ಲಂಕೇಶ್ ಮತ್ತು ಇತರೆ ದಿನಪತ್ರಿಕೆಗಳಲ್ಲಿ ಕಾಣುತ್ತಿದ್ದವರಂಗೆ ಅವರೇನು ಇರಲಿಲ್ಲ. ಒಂದು ಬುಶ್‌ಶರ್ಟ್ ಮತ್ತು ಕಪ್ಪುಬಣ್ಣದ ಪ್ಯಾಂಟ್‌ಧರಿಸಿದ್ದರು. ಕೈಯಲ್ಲಿ ಸಣ್ಣದೊಂದು ಸೂಟ್‌ಕೇಸ್, ಹೆಗಲ ಮೇಲೊಂದು ಬ್ಯಾಗ್. ಅವರೊಂದಿಗೆ ಮೈಸೂರಿನ ಅಭಿರುಚಿ ಪ್ರಕಾಶನದ ಗಣೇಶ್. ಮಡಿಕೇರಿ ಬಸ್‌ಸ್ಟಾಂಡಿನಿಂದ ಹೊರಬರುವಾಗ ಸಮಯ ಸಂಜೆ ೬.೩೦.

ನಾಳೆ ಒಂದು ಫಂಕ್ಷನ್ ಇದೆ, ಡಿ.ವೈ.ಎಫ್.ಐ. ಅಧ್ಯಯನ ಶಿಬಿರ, ನೆಲ್ಲಿಹುದಿಕೇರಿಯಲ್ಲಿ, ಬಸ್‌ಸ್ಟಾಂಡಿನಲ್ಲಿ ಅವರನ್ನು ಬರಮಾಡಿಕೋ, ನಾನು ನಂತರ ಬಂದು ಸೇರಿಕೋತೀನಿ... ಎಂದು ಗೆಳೆಯ ವಿಠಲ್ ಹೇಳಿದ್ದ. ರಾಮದಾಸರು ಸ್ಟಾಂಡಿನಿಂದ ಸಿಗರೇಟ್ ಬುಸುಗುಟ್ಟುತ್ತಾ ಅಜಾನುಬಾಹುವಿನಂತೆ ಎಲ್ಲವನ್ನು ಎದೆ ಎತ್ತಿ ಎದುರಿಸಿದಂತೆ ನಡೆಯುತ್ತಾಬಂದರು. ಒಂದು ಪುಟ್ಟ ಶೇಕ್‌ಹ್ಯಾಂಡಿನಿಂದ ನನ್ನ, ಅವರ ಮತ್ತು ಗಣೇಶರ ಪರಿಚಯವಾಗುತ್ತಿರುವಾಗಲೇ ಗೆಳೆಯ ವಿಠಲ್ ಜೊತೆ ಸೇರಿದ. ರಂಗಚಾವಡಿಗೆ ಹೋಗುವ ಎನ್ನುವಷ್ಟರಲ್ಲಿ ಮೇಷ್ಟ್ರು ಜೊತೆ ಒಂದು ಪೆಗ್ ಬೇಕೆನಿಸಿ ಬಸ್‌ಸ್ಟಾಂಡಿನ ಸನಿಹದಲ್ಲೇ ಇದ್ದ 'ವೆಸ್ಟ್ ಎಂಡ್' ಬಾರಿಗೆ ಹೋದೆವು. ಬಾರ್‌ನ ಒಳಗಡೆ ತುಂಬಾ ರಶ್ ಇತ್ತು. ಅದಕ್ಕೆ ಆತುಕೊಂಡ ಚರಂಡಿಯ ಕ[illegible]ಯ ಮೇಲೆ ಕುಳಿತುಕೊಳ್ಳೋಣವೇ ಎಂದು ಪ್ರೊಫೆಸರಿಗೆ ಕೇಳಿದಾಗ"ಒಳಗಿದ್ದ[illegible]ರ ಮಾತು ಕೇಳಿಸಿಕೊಳ್ಳುವುದಕ್ಕಿಂತ ನಾವು ನಾವೇ ಕೂತ್ಕೊಂಡು ಇಲ್ಲೇ ಹರಟೋಣ. ನನಗೊ[illegible]ದು ಡಿ.ಎಸ್.ಪಿ. ಸ್ಮಾಲ್" ಎಂದರು. ನಾವುಗಳು ಎರಡು ಪೆಗ್ ಏರಿಸುವಾಗಲೇ "ನನಗೆ ಜಾಸ್ತಿ ಬೇಡ ಕಣ್ರಯ್ಯ, ನೀವು ಬೇಕಾದ್ರೆ ತಗೋಳಿ, ನಾಳೆ ಭಾಷಣ ಮಾಡ್ಬೇಕು. ಹಾ! ಊಟಕ್ಕೊಂದು ಪೆಗ್ ಇರಲಿ" ಎಂದರು. ಊಟಕ್ಕೆಂದು ಪಾರ್ಸೆಲ್ ತೆಗೆದು ಕೊಂಡು ಅಲ್ಲಿಂದ ಹೊರಟೆವು.

ಕಾಫಿತೋಟದ ಸಣ್ಣ ಇಳಿಜಾರನ್ನು ಕ್ರಮಿಸಿ ಚಾವಡಿಯ ಮುಂದೆ ಇದ್ದ ಮಾವಿನಮರದ ಸುತ್ತುಕಟ್ಟೆಯ ಮೇಲೆ ರಾಮದಾಸ್ ಕೂತರು.

"ಏನ್ ಕಣ್ರೀ.... ತೇಜಸ್ವಿ ಮನೆಗೆ ಬಂದಂಗೆ ಅನ್ಸ್ತಾಯಿದೆ ರೀ" ಎನ್ನುತ್ತಾ ತಮ್ಮ ಜೀವದ ಗೆಳೆಯನ ಬಗ್ಗೆ ನೆನಪುಗಳನ್ನು ತೆರೆದುಕೊಳ್ಳತೊಡಗಿದರು... "ನಿಮಿಗ್ ಗೊತ್ತೇನ್ರೀ, ಒಂದು ಸಲ ನಾನು, ತೇಜಸ್ವಿ ಮತ್ತು ಶ್ರೀರಾಮ್ ಮೂಡಿಗೆರೆಯ ಪರಿಸರದಲ್ಲಿ ಕಾರಲ್ಲಿ ಹೋಗುತ್ತಿದ್ದಾಗ ಸಡನ್ನಾಗಿ ಬ್ರೇಕ್‌ಹಾಕಿ ರಿವರ್ಸ್‌ಗೇರಿನಲ್ಲಿ ಸ್ವಲ್ಪ ದೂರಕ್ಕೆ ಹಿಂದಕ್ಕೆ ಬಂದರು. ಹರಕಲು ಬಟ್ಟೆ ಧರಿಸಿದ್ದ ದನ ಕಾಯುವ ಹುಡುಗಿಯೊಬ್ಬಳು ಪೊದೆಯಲ್ಲಿ ಅವಿತಿದ್ದಳು. ತೇಜಸ್ವಿ ಅವಳನ್ನು ಕರೆದು ಒಂದು ನೂರು ರೂಪಾಯಿ ಅವಳ ಕೈಗಿಟ್ಟು 'ಬಟ್ಟೆ ತೆಗೆದುಕೋ' ಎಂದು ಕಾರನ್ನ ಓಡಿಸಿದರು. ಕಾರಿನಲ್ಲೇ ಇದ್ದು ರಸ್ತೆಯ ಬದಿಯನ್ನೇ ನೋಡ್ತಾ ಹೊರಟ ನಮಗೇ ಕಾಣಿಸದಿದ್ದದ್ದು ಆತನಿಗೆ ಕಾಣ್ತು ನೋಡ್ರೀ" ಎಂದು ನೆನಪು ಮಾಡ್ಕೊಳ್ತನೇ ಇದ್ರು.

ಅಗಲಿದ ಗೆಳೆಯನ ನೆನಪು ಹೀಗೆ ತೆರೆದುಕೊಳ್ಳುತ್ತಲೇ ಇತ್ತು. ಇತ್ತ ಚಾವಡಿಯ ಕ್ಯಾಂಪ್‌ಫೈರ್‌ನ ಮುಂದೆ ತಣ್ಣನೆಯ ಮಂಜು ಇಡೀ ತೋಟವನ್ನ ಆವರಿಸಿಕೊಂಡಿತ್ತು. ಅದೇಕೊ ಗೊತ್ತಿಲ್ಲ, ದಿಢೀರನೇ ಎದ್ದ ವಿಠಲ ಮನೆಯೊಳಗಿಂದ ಒಂದು ಪನಾಮ ಹ್ಯಾಟನ್ನ ತಂದು ಅದಾಗಲೇ ನಿರಂತರ ಕೆಮ್ತಾ ಇದ್ದ ರಾಮದಾಸ್ ತಲೆಯ ಮೇಲೆ ಇರಿಸಿದ.

" ಇದೆಲ್ಲಾ ಬೇಡ ಕಣ್ರೀ......"

"ಇಲ್ಲಿ ಶೀತ ಜಾಸ್ತಿ ಇದೆ. ಅದಕ್ಕೆ ಕೆಮ್ತು ಸಾರ್, ಈ ತರ ಕೆಮ್ಮಿಗೆ ಬ್ರಾಂಡಿಯನ್ನ ಬಿಸಿನೀರಲ್ಲಿ ತೆಗೆದುಕೊಂಡ್ರೆ ಬಾರಿ ಒಳ್ಳೆದು."

" ಹೌದಾ, ಮೈಸೂರಿಗೆ ಹೋದ ಮೇಲೆ ಟ್ರೈ ಮಾಡ್ರೀನಿ" ಅಂತ ಅಕ್ಕಿ ರೊಟ್ಟಿ, ಚಿಕನ್ ಮೆಲ್ಲುತ್ತಾ ಇದ್ರು. "ತೇಜಸ್ವೀ ಚಿಕನ್ ಬಿರಿಯಾನಿನ ಬಹಳ ಚೆನ್ನಾಗಿ ಮಾಡ್ತಾ ಇದ್ರು ಕಣ್ರೀ. ಇಡೀ ಕೊತ್ತಂಬರೀ ಸೊಪ್ಪನ್ನ ಹಾಕ್ತಾ ಇದ್ರು" ಅಂತೆಲ್ಲಾ ಹೇಳ್ತಾ " ಮರೆತೇ ಬಿಟ್ಟೇ, ನೀವೇನ್ ಮಾಡ್ಕೊಂಡಿದ್ದೀರೀ?"

" ಸರ್ ನಾನು ಉಪನ್ಯಾಸಕ, ವಿಠಲ್ ಫ್ರೀ ಲ್ಯಾನ್ಸರ್ ಪತ್ರಕರ್ತ. ಇನ್ನೊಬ್ರು ಇವತ್ ಮಿಸ್ ಆಗಿದ್ದಾರೆ. ಕೆ.ಆರ್. ವಿದ್ಯಾಧರ. ಇತ್ತೀಚೆಗೆ ಲಂಕೇಶ್‌ನಲ್ಲಿ 'ಟಿಪ್ಪು ಹೆಸರೇ ಸ್ವಾತಂತ್ರ್ಯ' ಲೇಖನ ಬರೆದಿದ್ದರು."

ಹೀಗೆ ನಮ್ಮನ್ನ ನಾವೇ ಪರಿಚಯ ಮಾಡ್ಕೊಳ್ತಾ ರಂಗಚಾವಡಿಯ ರಚನೆ ಮಾಡಿಕೊಂಡದ್ದು. ಪ್ರಸನ್ನ, ಕಿಕ್ಕೇರಿ ಬಂದು ಉದ್ಘಾಟನೆ ಮಾಡಿ ಹೋದದ್ದು, ದಾರಿ ಭಿಕ್ಷುಕ ತಂಬೂರಿ ಗೋವಿಂದಯ್ಯನ ತತ್ವಪದಗಳನ್ನ ಕಾಲೇಜಿನಲ್ಲಿ, ಆಕಾಶವಾಣಿಯಲ್ಲಿ ಪರಿಚಯ ಮಾಡಿಸಿದ್ದು, ಆಪ್ತಮಿತ್ರರ ನಡುವೆ ನೈಸರ್ಗಿಕ ಕೃಷಿಪದ್ಧತಿ ಬಗ್ಗೆ ಸಮಾಲೋಚನೆ ನಡೆಸಿದ್ದು.... ಎನ್ನುತ್ತಿರುವಾಗಲೇ ಮೇಷ್ಟ್ರ ಚಿತ್ತ ಕೋಮುವಾದಕ್ಕೆ ತಿರುಗಿ "ಅದೇನ್ರೀ ಮಂಗಳೂರಿಗೆ ಒಮ್ಮೆ ಹೋಗಿದ್ದೆ. ಎಲ್ನೋಡಿದರೂ ಕೇಸರಿಮಯ, ದೇವರ ಪುನರ್ ಪ್ರತಿಷ್ಠಾಪ್ನೆ, ಬ್ಯಾನರ್,

ಹೋರ್ಡಿಂಗ್ಸ್, ಎಲ್ಲೇ ಚಲಿಸಿದರೂ ಇದೇಯಾ. ಏನಾಗಿದೇ ರೀ ಆ ಜಿಲ್ಲೆಯ ಬುದ್ಧಿವಂತರಿಗೆ? ಇಲ್ಲಿ ಹೇಗೆ ನಿಮ್ಮ ಕೊಡಗ್ನಲ್ಲಿ ?"

"ಹೌದು ಸರ್, ಇಲ್ಲೂ ಕೂಡ ಮಂಗಳೂರು ಕೋಮುವಾದದ ಸನ್ನಿ ವ್ಯಾಪಿಸಿಕೊಳ್ತಾ ಇದೆ. ಇತ್ತೀಚೆಗೆ ನೀವು ಗಮನಿಸಿರಬಹುದು. ವಿರಾಟ್ ಹಿಂದೂ ಸಮಾಜೋತ್ಸವ ಕೊಡಗ್ನಲ್ಲೂ ನಡೀತು ಸರ್."

" ಹುಷಾರಾಗ್ ಇರ್ಬೇಕ್ ಕಣ್ರೀ. ಇಡೀ ಸಮಾಜವನ್ನ ಗುತ್ತಿಗೆ ಪಡ್ಕಂಡ್ ಬಿಟ್ಟಾರಿವ್ರು."

" ಸರ್.... 'ಆವರಣ'?"

"ಥೂ ಫ್ಯಾಸಿಸ್ಟ್ ಕಣ್ರೀ ಅವ್ನು. ಓದ್ಲೇ ಬಾರದು. ಓದಿದ್ರೇ ದೇವರೇ ಆಗ್ಬಿಡ್ತನವ್ನು. ನೆಗ್ಲೆಕ್ಟ್ ಮಾಡ್ರೀ ಅದನ್ನ... " ಮಾತನಾಡ್ತನೇ ಇದ್ರು.

ಶೀತ ಆಗ್ಬಾರ್ದು ಅಂತ ವಿಠಲ್ ನೀಡಿದ್ದ ಟೋಪಿ, ಸಿಗರೇಟ್ ಸೇದುತ್ತಿದ್ದ ಶೈಲಿ, ಬೆಂಕಿಯ ಜಳದಲ್ಲಿ ಕಾಣಿಸುತ್ತಿದ್ದ ಅವರ ಮುಖ... ಇವೆಲ್ಲವನ್ನು ನಾನು ಮತ್ತು ಗಣೇಶ್ ನಮ್ಮ ಮೊಬೈಲ್‌ನಲ್ಲಿ ಕ್ಲಿಕ್ ಮಾಡಿಕೊಂಡಾಗ ರಾಮದಾಸ್ ಸುಮ್ಮನಿದ್ದರು.... ಹೊಗೆ ಬಿಡುತ್ತಾ ತಲೆಯೆತ್ತಿ ಆಕಾಶ ನೋಡ್ತಾ ಮಾತುಗಳು ಮೌನವಾಗುವ ಹೊತ್ತಿನಲ್ಲಿ "ರೀ ನೀವ್ ನಡಿರೀ, ಹೆಂಡ್ತಿ ಮಕ್ಳಿರೋರು, ಲೇಟಾಯ್ತು ನಾಳೆ ನೆಲ್ಲಿಹುದಿಕೇರಿ ಫಂಕ್ಷನ್‌ನಲ್ಲಿ ಸೇರೋಣಾ. "

"ಸರ್ ನೀವು ಕೂಡ ಮಲಗಿ...."

"ಇಲ್ಲಿ ನಾನು ಸ್ವಲ್ಪ ಹೊತ್ತು ಇಲ್ಲೇ ಬೆಂಕಿ ಎದುರು ಕೂತು ಮಲಗ್ತೀನಿ." ಒಬ್ರೇ ಕೂತ್ರು.

ಗೆಳೆಯ ತೇಜಸ್ವಿ ಜೊತೆ ಮಾತನಾಡಬೇಕೆನಿಸಿತೋ.....

ಬಾಳಸಂಗಾತಿಯ ಕಾಯಿಲೆಯ ಚಿಂತೆಯೋ.....

ಅಷ್ಟಕ್ಕೂ ಒತ್ತರಿಸಿ ಬರುತ್ತಿದ್ದ ಕೆಮ್ಮನ್ನ ಒತ್ತಿಕ್ಕಿ, ಒತ್ತಿಕ್ಕಿ ಕೆಮ್ತನೇ ಇದ್ರು. ಮಿಸ್ಟ್ ಹೊಗೆಯ ಮಧ್ಯೆ ಏಕಾಂಗಿ. ಆಗ ಹೊತ್ತು ೧೨.೩೦.

ಬೆಳಿಗ್ಗೆ ನೆಲ್ಲಿ ಹುದಿಕೇರಿ ಕಾರ್ಯಕ್ರಮಕ್ಕೆ ಗಡಿಬಿಡಿಯಲ್ಲಿ ಹೋಗುತ್ತಿರುವಾಗ ಆಕಾಶವಾಣಿಯಲ್ಲಿ ಮಾತನಾಡಿಸಬೇಕೆನ್ನಿ "ತೇಜಸ್ವಿ ಒಂದು ನೆನಪು" ಎಂಬ ವಿಷಯವನ್ನ ಅವರಿಗೆ ಕೊಟ್ಟೆ. ಬರೋಬ್ಬರಿ ಒಂದೂವರೆ ತಾಸು ತೇಜಸ್ವಿಯ ನೆನಪು ಮಾಡಿಕೊಳ್ತಾನೇ ಇದ್ರು. ರಿಕಾರ್ಡಿಂಗ್ ಮುಗಿದ ಮೇಲೆ ಹೇಗಾಯ್ತು ಸರ್ ಅಂತ ಕೇಳ್ದಾಗ 'ಅದ್ನೇನ್ ಕೇಳ್ತೀರಿ ? ಆ ತೇಜಸ್ವಿ ಸಾಯೋದಕ್ಕಿಂತ ಮುಂಚೆ 'ಏ ರಾಮದಾಸ್, ಭಾಷಣದಲ್ಲೇ ನಿಮ್ ಶೀಟೆ ತೀರಿಸ್ಕೊಂಡ್ ಬಿಡ್ತೀರಿ. ಏನಾದ್ರೂ ಒಂದು ಬರೆಯೋ ಮಾರಾಯ' ಎಂದು ರೇಗಿಸಿದ್ದನು. "ಇ... ಸ್ ಭಾಷಣ ಬಿಡ್ರೀ" ಎಂದರು.

ಕಾರ್ಯಕ್ರಮಕ್ಕೆ ತಡವಾಗುತ್ತೆ ಅಂತ ತಿಂಡಿ ತಿನ್ನೋದೆ ಮರೆತು ಕಾರನ್ನೇರಿ ಹೊರಟರು. ಅವರ ಹಿಂದೆಯೇ ನಾವುಗಳು ಬೈಕಿನಲ್ಲಿ ಕಾರ್ಯಕ್ರಮದ ಹಾಲಿಗೆ ತಲುಪಿದಾಗ ಕಾಮ್ರೇಡ್‌ಗಳ ಪ್ರಸ್ತಾವನೆ ಜೋರಾಗಿಯೇ ಪ್ರವಹಿಸುತ್ತಿತ್ತು. ರಾಮದಾಸರ ಭಾಷಣ ಇನ್ನೂ ಪ್ರಾರಂಭವಾಗಿರಲಿಲ್ಲ. "ಕೋಮುವಾದ, ಭಯೋತ್ಪಾದನೆ ಮತ್ತು ಜಾತಿವಾದದ ಅಪಾಯಗಳ

ದಿನಾಂಕ ೧೬-೦೪-೨೦೦೭" ಎನ್ನುವ ಕೆಂಪು ಬ್ಯಾನರಿನ ಮುಂದೆ ಡಾರ್ಕ್ ಬ್ಲೂ ಜುಬ್ಬ ಧರಿಸಿ ಪೋಡಿಯಮ್ಮಿನ ಮುಂದೆ ಎದೆ ಸೆಟೆಸಿ ಕೋಮುವಾದದ ಬಗ್ಗೆನೇ ಮಾತನಾಡ್ತ " ಸಂವಿಧಾನ ವಿರೋಧಿಗಳು ಇವ್ರು. ಇವತ್ತು ದಲಿತರ, ಶೂದ್ರರ, ನಿರ್ಲಕ್ಷಿತರ ಲಾಂಛನಗಳನ್ನೇ ಅಪಹರಿಸಿ ಹಿಂದೂತ್ವದ ಕೋಮುವಾದವನ್ನ ನಮ್ಮೆಲ್ಲರ ಮೇಲೆ ಹೇರ್ತಾ ಇದ್ದಾರೆ. ಇದರ ವಿರುದ್ಧ ಯುವಕರು ಪ್ರತಿಭಟಿಸಬೇಕು. ಸುಮ್ಮನೇ ಕಾಡಿನಲ್ಲಿ ಬಂದೂಕ ಹಿಡ್ಕೊಂಡು ಜನರಿಂದ ದೂರವಾಗಿ ಕಾಡಿನಲ್ಲಿ ನಕ್ಸಲರ ಹೋರಾಟ ಎಂಥದ್ದು ?" ಎಂದು ಚಾಟಿ ಬೀಸ್ತಾ " ಜಾಗತೀಕರಣ ಮತ್ತು ಕೋಮುವಾದ, ಇವೆರಡೂ ನಮ್ಮನ್ನ ನಾಶ ಮಾಡ್ತವೆ. ಯುವಕರು ಎಚ್ಚೆತ್ತುಕೊಂಡು ಇವೆರಡರ ವಿರುದ್ಧ ಹೋರಾಡ ಬೇಕು..." ಎಂದು ಹೇಳಿ ತಮ್ಮ ಮಾತು ಮುಗಿಸಿ ಕೂತರು.

ಅಷ್ಟರಲ್ಲಿ ಗಣೇಶ ನಮ್ಮನ್ನು ಎಚ್ಚರಿಸಿದ. "ಮೇಷ್ಟು ತಿಂಡಿನೇ ತಿಂದಿಲ್ಲ. ಕಾಮ್ರೇಡ್‌ಗಳು ಅವರನ್ನ ಕೂರಿಸ್ಕೊಂಡು ಕಿರುಚ್ತನೇ ಇದ್ದಾರೆ. ಈಗ ೧೨.೩೦ ಗಂಟೆ, ಅವರು ಡಯಾಬಿಟಿಕ್ ಬೇರೆ. ವೇದಿಕೆಯಲ್ಲೇ ಏನಾದರೂ ತಿನ್ನಲಿಕ್ಕೆ ಕೊಡಿ" ಎಂದ. ಅವರಿಗೆ ವೇದಿಕೆಯಲ್ಲಿಯೇ ಒಂದು ಟ್ರೇನಲ್ಲಿ ಹಣ್ಣುಗಳನ್ನ ಇಡಲಾಯಿತು. ರಾಮದಾಸ್ ಮುಟ್ಟಲೇ ಇಲ್ಲ. ಪಕ್ಕದಲ್ಲೇ ಇದ್ದ ನೀರು ಕುಡಿದರು ಮಾತ್ರ. ಕಾಮ್ರೇಡ್‌ಗಳ ವಂದನಾರ್ಪಣೆ ಆರ್ಭಟವು ಮುಗಿದೇ ಹೋಯ್ತು. ೧.೩೦ ಕ್ಕೆ ಊಟದ ವ್ಯವಸ್ಥೆ ಇತ್ತು. ಊಟಕ್ಕೆ ಕರೆದಾಗ "ರೀ ಈಗತಾನೆ ವೇದಿಕೆಯಿಂದ ಎದ್ದು ಬಂದಿದ್ದೇನೆ. ಊಟ ಅಂತ ಏನೂ ಬೇಡ. ಇವತ್ತು ಸಂಜೆನೇ ಮನೆಗೆ ಹೋಗ್ಬೇಕು, ಜರ್ನಿ ಬೇರೆ. ಊಟಗೀಟ ಅಂತ ಮಾಡಿದ್ರೆ ಟಾಯ್ಲೆಟ್ ಪ್ರಾಬ್ಲಮ್. ಬಸ್‌ನಲ್ಲಿ ಪ್ರಯಾಣ ಮಾಡೋದು ಕಷ್ಟ ಆಗುತ್ತೆ. ಸೇಬು ಕೊಟ್ಬಿಡಿ" ಎಂದು ಹಣ್ಣನ್ನು ತಿಂದರು.

ಸರಿ, ರಾಮದಾಸರನ್ನ ಪಿರಿಯಾಪಟ್ಟಣದವರೆಗೆ ಬಿಟ್ಟು ಬರುತ್ತೇನೆ ಎಂದು ಕಾಮ್ರೇಡ್ ರಂಜನ್ ಕಾರಿನಲ್ಲಿ ಕೂರಿಸಿ ಕೊಂಡರು. ಬನ್ರೀ ನೀವುನೂ, ಬಸ್‌ಸ್ಟಾಂಡಿನಲ್ಲಿ ಟೀ ಕುಡಿದು ಹೊರಡೋಣವಂತೆ ಎಂದು ನಮ್ಮನ್ನೂ ಕರೆದರು. ಟೀ ಕುಡಿದು ಹೊರಡುವಾಗ "ನೀವೆಲ್ಲಾ ಒಟ್ಟಾಗಿ ಮೈಸೂರಿಗೆ ಬನ್ನಿ. ನಿಮಗಿಷ್ಟವಾದ ತಲೆ ಮಾಂಸ, ಬೋಟಿ ನಮ್ಮನೆ ಹತ್ರನೇ ಒಂದು ಹೋಟೆಲ್‌ನಲ್ಲಿ ಸಿಗುತ್ತೆ. ಗಣೇಶನಿಗೆ ಗೊತ್ತಿದೆ. ತರಸ್ಕೊಂಡು ಮನೆಯಲ್ಲೇ ಹರಟೆ ಹೊಡ್ಕೊಂಡು ತಿಂದ್ರಾಯ್ತು.... ಬರ್ತೇನೆ" ಎಂದು ಹೊರಟುಹೋದ್ರು.

ಒಂದು ರಾತ್ರಿ, ಅರ್ಧ ಹಗಲು ಅವರೊಟ್ಟಿಗೆ ಕಳೆದ ಹ್ಯಾಂಗ್‌ಓವರ್‌ನಿಂದ ನಮ್ಮ ವಿಠ್ಠಲ 'ರಾಮದಾಸ್ ನಮ್ಮ ಮನೆಗೆ ಬಂದು ಹೋದದ್ದು ತೇಜಸ್ವಿನೇ ಬಂದಂಗಾಯ್ತು" ಎನ್ನುತ್ತಿದ್ದ. 2-3 ದಿನ ಕಳೆದ ಮೇಲೆ ಮೈಸೂರಿಗೆ ಫೋನ್ ಮಾಡಿದಾಗಲೇ "ಲಂಗ್ ಇನ್‌ಫೆಕ್ಷನ್ ಆಗಿದೆ ಕಣ್ರೀ ಮಡಿಕೇರಿಯಿಂದ ಬಂದ್ಮೇಲೆ" ಅಂದಿದ್ರಂತೆ. ಸ್ವಲ್ಪ ದಿನ ಕಳೆದ ನಂತರ ಗೌರಿಲಂಕೇಶ್ ಪತ್ರಿಕೇಲಿ ಅವರು ಲಂಗ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆಂದು ಪ್ರಕಟವಾಯಿತು. ಮೊನ್ನೆ ಪಟ್ಟಾಭಿರಾಮ ಸೋಮಯಾಜಿ ಮಡಿಕೇರಿಗೆ ಬಂದಾಗ "ತುಂಬಾ ಸೀರಿಯಸ್ ಆಗಿದೆ. ಹೆಚ್ಚು ದಿನ ಬದಕೋದಿಲ್ಲ" ಅಂದಿದ್ರು. ಮೈಸೂರಿಗೆ ಹೋಗಿ ಅವರೊಟ್ಟಿಗೆ ಒಂದಿಷ್ಟು ಕಾಲ ಕಳೆದು ಬರೋಣ, ಈ ವಾರದೊಳಗೆ ಹೋಗೋಣ ಎಂದ ನಾವುಗಳು ತೀರ್ಮಾನ ಮಾಡಿದ ಮಾರನೇ

ದಿನವೇ ನಮ್ಮನ್ನೆಲ್ಲ ಬಿಟ್ಟು ಹೊರಟಿದ್ದರು.

ಚಾಮುಂಡಿ ಬೆಟ್ಟದ ತಪ್ಪಲಿನ ಕೆಳಗೆ
ವಿದ್ಯುತ್ ಶಾಖದ ಮಂಚದ ಮೇಲೆ
ಅಂಗಾತ ಸುಟ್ಟು ಬೂದಿಯಾಗಿ
ಛಾವಣಿಯ ಹೊಗೆಯಾಗಿ
ಬಂದುಹೋದ ಮನಸ್ಸು ಮಿದುಳೊಳಗೆ
ಸದಾ ಹೋರಾಟದ ಕಿಚ್ಚು ಬಟಾಬಯಲಾಗಿ.....
ನಾವಿದ್ದೇವೆ.
ಧನ್ಯವಾದಗಳೊಂದಿಗೆ ,

# "ಹೇಗಿದ್ದೀರಾ ಅಂಕಲ್?" "ದಿಲ್‌ದಾರಾಗಿದ್ದೀನಮ್ಮಾ....."

ಪಚ್ಚೆ ನಂಜುಂಡಸ್ವಾಮಿ

ರಾಮದಾಸ್ ಅಂಕಲ್‌ರತ್ತ ನಾವು ಆಕರ್ಷಿತರಾದದ್ದು ಅವರ ನೆನಪಿನ ಶಕ್ತಿಯನ್ನು ಕಂಡು. ಅವರ ಜೀವನದಲ್ಲಿ ನಡೆದ ಘಟನೆಗಳನ್ನು ಒಂದು ಕಥೆಯ ರೀತಿಯಲ್ಲಿ ಹೇಳುತ್ತಿದ್ದದ್ದು ಮನಮೋಹಕವಾಗಿರುತ್ತಿತ್ತು. ಫೆ.೩, ೨೦೦೭, ಪಪ್ಪನ ಮೂರನೇ ವರ್ಷದ ನೆನಪಿನ ದಿನ. ನಾನು ಹಂಚಿಕೊಂಡಿದ್ದಂತಹ ವೇದಿಕೆಗಳಲ್ಲೆಲ್ಲಾ ವಾದ ವಿವಾದಗಳಾಗುತ್ತಿದ್ದರಿಂದ ಅವರ ಸಹವಾಸ ಬೇಡವೆಂದು, ಎಷ್ಟೇ ಬಲವಂತ ಮಾಡಿದರೂ ಅಂದು ವೇದಿಕೆ ಹತ್ತಲು ನಾನು ಒಪ್ಪಲಿಲ್ಲ. ಆ ವೇದಿಕೆಯಲ್ಲಿ ಪುಟ್ಟಣ್ಣಯ್ಯನವರೂ ಇದ್ದಿದ್ದರಿಂದ ನಾನು ವೇದಿಕೆ ಹತ್ತಲಿಲ್ಲವೆಂದು ತಿಳಿದ ರಾಮದಾಸ್ ಅಂಕಲ್ ಸಿಡಿಮಿಡಿಗೊಂಡರು. ನಂತರ ಅಧ್ಯಕ್ಷೀಯ ಭಾಷಣ ಮಾಡುವಾಗ "ನಂಜುಂಡಸ್ವಾಮಿಯವರ ಮಗ ಪಚ್ಚೆ ಬಂದಿದ್ದಾರೆ. ಅವರು ಕಾಣಿಸಿಕೊಳ್ಳುವುದೇ ಅಪರೂಪ. ಅವರು ಇಂದಿನ ರೈತರ ಪರಿಸ್ಥಿತಿಯಲ್ಲಿ ರೈತ ಸಂಘಗಳು ಒಂದುಗೂಡುವುದಕ್ಕೆ ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಪ್ಪಬೇಕು" ಎಂದು ಗುಂಡು ಹಾರಿಸಿಯೇಬಿಟ್ಟರು. ತಬ್ಬಿಬ್ಬಾದ ನಾನು, ಅವರು ವೇದಿಕೆಯಿಂದ ಇಳಿಯುತ್ತಿದ್ದಂತೆಯೇ "ಅಯ್ಯೋ ಅಂಕಲ್, ನಾನಿನ್ನೂ ಅಭಿಮನ್ಯು. ಚಕ್ರವ್ಯೂಹವನ್ನು ಭೇದಿಸುವುದಷ್ಟೇ ಗೊತ್ತು. ಒಳಗೋಗಿ ಹೊರಬರುವುದು ಗೊತ್ತಿಲ್ಲ. ಈ ವೇದಿಕೆ ಎನ್ನುವುದು ಚಕ್ರವ್ಯೂಹವಿದ್ದಂತೆ. ನಾನು ಅರ್ಜುನನಾದ ಮೇಲೆ ಬರುತ್ತೇನೆ" ಎಂದು ಗೇಲಿ ಮಾಡಿದೆ. ನನ್ನ ಮಾತು ಕೇಳಿ ರಾಮದಾಸ್ ಅಂಕಲ್ ನಕ್ಕರು. ಆನಂತರ ಪ್ರೊ.ರವಿವರ್ಮ ಕುಮಾರ್, ಕಡಿದಾಳು ಶಾಮಣ್ಣ, ರಾಮದಾಸ್ ಅಂಕಲ್, ನಾನು ಎಲ್ಲರೂ ಮೈಸೂರಿನ ಹೊರವಲಯದಲ್ಲಿರುವ ರೆಸಾರ್ಟ್‌ಗೆ ಊಟಕ್ಕೆ ಹೋದೆವು. ಅಲ್ಲಿ ರಾಮದಾಸ್ ಅಂಕಲ್, ತಮ್ಮ ವಿಸ್ಕಿಯ ಜೊತೆ ತಮ್ಮ ನೆನಪಿನ ಕ್ಯಾಸೆಟ್ ಆನ್ ಮಾಡಿದರು.

"ನಾನು, ನಂಜುಂಡಸ್ವಾಮಿ, ತೇಜಸ್ವಿ, ಲಂಕೇಶ್ ಇಷ್ಟೂ ಜನ ಅಣ್ಣತಮ್ಮಂದಿರ ತರಹ ಇದ್ವಪ್ಪ. ನಾವೆಲ್ಲಾ ಜೀವದ ಗೆಳೆಯರಾಗಿದ್ವಿ. ಈಗಿರುವ ನಿಮ್ಮಪ್ಪನ ರೆಬೆಲ್‌ಗಳಿದ್ದಾರಲ್ಲಾ. ಇವರೆಲ್ಲಾ ಯಾವ ಮಹಾ ರೆಬೆಲ್‌ಗಳಪ್ಪ. I was the first to rebel against Nanjundaswamy. Emergency ಸಮಯದಲ್ಲಿ ನಾನು, ನಿಮ್ಮಪ್ಪ, ತೇಜಸ್ವಿ, ಶಾಮಣ್ಣ, ಲಂಕೇಶ್ ಎಲ್ಲರೂ ಸೇರಿ ನವ ನಿರ್ಮಾಣ ಕ್ರಾಂತಿ ಕಟ್ಟುತ್ತಿದ್ದೆವು. ಆ ವೇದಿಕೆಗೆ ಕಡಿದಾಳ್ ಮಂಜಪ್ಪ ನವರನ್ನು ನಂಜುಂಡಸ್ವಾಮಿ ಆಹ್ವಾನಿಸಿ, ಅವರೇ ಆ ವೇದಿಕೆಯ ಅಧ್ಯಕ್ಷರಾಗಬೇಕೆಂದು ಒತ್ತಾಯ ಮಾಡಿದಾಗ, ನಾನು ಅದನ್ನು ಖಂಡಿಸಿದೆ. "ಅಲ್ಲ ಸಾರ್ ನೀವೇ ಹೇಳಿದ್ರಿ, ನಾವೆಲ್ಲರೂ ನಾಯಕರು, ನಾಯಕರಿಲ್ಲದೆ ಕ್ರಾಂತಿಯಾಗುತ್ತದೆ. ಅಂತ. ಈಗ ನೀವೇ ಹೀಗೆ ಮಾಡಿದರೆ ಹೇಗೆ?" ಎಂದು. ಅವರ ವಿರುದ್ಧ ರೆಬೆಲ್ ಆದೆ. ಆದರೆ ನಿಮ್ಮಪ್ಪನ ಮೇಲಿದ್ದ ಪ್ರೀತಿ ಮಾತ್ರ ಕಡಿಮೆಯಾಗಲಿಲ್ಲ. ಅವತ್ತು ನನ್ನ ಮೇಲೆ ಸಿಟ್ಟಾದ ನಂಜುಂಡಸ್ವಾಮಿ ನನ್ನ ಅವರ ಗೆಳೆತನವನ್ನು ಕಡ್ಡಿ ಮುರಿದ ಹಾಗೆ ಮುರಿದುಬಿಟ್ಟರು. ಆಗ ನನಗೆ ತುಂಬಾ ನೋವಾಯಿತು.

ನಮ್ಮಮ್ಮನನ್ನು ನಂಜುಂಡಸ್ವಾಮಿ ತುಂಬಾ ಹಚ್ಚಿಕೊಂಡಿದ್ದರು. ಅವರ ಕೈ ಅಡುಗೆ ಅವರಿಗೆ ಪಂಚಪ್ರಾಣ. ಒಮ್ಮೆ ನಾನು ಸಾಕಿದ್ದ ಪ್ರೀತಿಯ ನಾಯಿ ತುಂಬಾ ಅಸ್ವಸ್ಥಗೊಂಡಿತ್ತು. ನಾನು ಬಹಳ ನೊಂದುಕೊಂಡು ಕಣ್ಣೀರಿಡುತ್ತಿದ್ದೆ. ಆ ನಾಯಿಯನ್ನು ನೋಡಿದ ನಂಜುಂಡಸ್ವಾಮಿ "ಬಿಡಿ, ಅದಿನ್ನು ಬದುಕೊಲ್ಲ " ಎಂದುಬಿಟ್ಟರು. ಅವರು ಹಾಗೆಂದ ಸ್ವಲ್ಪ ಸಮಯದ ನಂತರ ಅದು ತೀರಿಕೊಂಡಿತು. ಪಕ್ಕದಲ್ಲೇ ಇದ್ದ ತೇಜಸ್ವಿ "ಬಿಡಿ ರಾಮದಾಸ್, ನಾಯಿ ಅಂದ ಮೇಲೆ ಇವೆಲ್ಲಾ ಸಹಜ" ಎಂದುಬಿಟ್ಟರು. ಆದರೆ ನಂಜುಂಡಸ್ವಾಮಿ ಏನ್ಮಾಡಿದರು ಗೊತ್ತಾ? You love your dog so much, you carry the dog ,I will follow you ಎಂದರು. ನಾನು ನಂಜುಂಡಸ್ವಾಮಿ ಮತ್ತು ಅಮ್ಮ ನಾಯಿಯ ಶವವನ್ನು ತೆಗೆದುಕೊಂಡು ಮಾನಸಗಂಗೋತ್ರಿಯ ಹತ್ತಿರವಿದ್ದ ಬಯಲಿನ ಕಡೆ ನಡೆದೆವು. ಅದನ್ನು ಅಲ್ಲಿ ಹೂತುಹಾಕಿದ ಮೇಲೆ, let's give a peaceful farewell, let's mourn for a minute ಎಂದರು ನಂಜುಂಡಸ್ವಾಮಿ. ನನ್ನ ಮುದ್ದಿನ ನಾಯಿಗೆ ೧ ನಿಮಿಷ ಮೌನ ಆಚರಿಸಿ ಬಂದೆವು.

ನಿಮ್ಮಪ್ಪ ನಮಗೆಲ್ಲಾ ತುಂಬಾ ತಿಂಡಿ ಕೊಡ್ತೋರು. ಅವರ ಸಂಬಳ ಬಂದ್ರೆ, ಒಂದೇ ದಿನದಲ್ಲಿ ನಮಗೆಲ್ಲಾ ತಿಂಡಿ ಕೊಡ್ಸಿ ಖಾಲಿ ಮಾಡಿಬಿಡುತ್ತಿದ್ದರು. ಒಮ್ಮೆ "ದೊಡ್ಡ ದೊಡ್ಡ ಕುರ್ಚಿಯ ಮೇಲೆ ಕೂತುಕೊಂಡು, ಡ್ರಿಂಕ್ಸ್ ಬಾಟಲ್‌ನ ಶೋಕೇಸ್ ಮುಂದೆ ಕುಡಿಯುತ್ತಾರಲ್ಲ, ಅವೆಲ್ಲಾ ಏನು ಸಾರ್?"ಎಂದು ಕೇಳಿದೆ. " ಅದನ್ನು ಬಾರ್ ಎನ್ನುತ್ತಾರೆ" ಎಂದು ಹೇಳಿ ಅಂಥ ಜಾಗಗಳಿಗೆಲ್ಲಾ ನಮ್ಮನ್ನು ಕರೆದುಕೊಂಡು ಹೋಗಿ ಪಾರ್ಟಿ ಕೊಡಿಸಿ, ವಿಚಾರಮಂಥನ ಮಾಡುತ್ತಿದ್ದರು."

ಇನ್ನೊಮ್ಮೆ ಹಿರಿಯ ಗೆಳೆಯರಾದ ಸ್ವಾಮಿ ಆನಂದ್‌ರನ್ನು ಕರೆದುಕೊಂಡು ರಾಮದಾಸ್ ಅಂಕಲ್ ಮನೆಗೆ ಹೋಗಿ ಪಪ್ಪನ ಜೊತೆ ಕಳೆದ ನೆನಪುಗಳನ್ನೆಲ್ಲಾ ಹೇಳಿ ಎಂದು ವಿಡಿಯೋ ಸಂದರ್ಶನ ಮಾಡಿದೆ. ಎರಡು ಗಂಟೆಗಳ ಕಾಲ ಸಮಗ್ರವಾದ ನೆನಪುಗಳನ್ನು ಹೇಳಿದರು. ಅದಾದ

ಸ್ವಲ್ಪ ದಿನಗಳ ನಂತರ ಅವರು ಸಿಕ್ಕಿದ್ದು ತೇಜಸ್ವಿಯವರ ಅಂತ್ಯಕ್ರಿಯೆಯ ಸಂದರ್ಭದಲ್ಲಿ "ಏನ್ಹೆ ಏನ್ ಹೇಳ್ಲೆ ನಾನು? ಬೇಗ ತೇಜಸ್ವಿಯವರನ್ನು interview ಮಾಡು ಎಂದಿರಲಿಲ್ವಾ?ಹೋಗ್ಲಿಬಿಡು ನಾನೇ almost ಹೇಳಿದ್ದೀನಿ" ಎಂದು ರೇಗಿಬಿಟ್ಟರು. ಬಹಳ ವರ್ಷಗಳಿಂದ ಅತ್ತೇ ಇರದ ನಾನು ಅವತ್ತು ಅತ್ತು ಅವರಿಗೆ ಮುತ್ತಿಟ್ಟೆ. ಕವಿಶೈಲದಿಂದ ಹಾಸನದವರೆಗೆ ಒಟ್ಟಿಗೇ ಇಬ್ಬರೂ ಕಾರಲ್ಲಿ ಬಂದೆವು. ಪ್ರಯಾಣದ ತುಂಬಾ ಪಪ್ಪ, ತೇಜಸ್ವಿ, ಲಂಕೇಶ್ ಶ್ರೀರಾಮ್, ಶಾಮಣ್ಣ, ಸುಂದರೇಶ್ ಎಲ್ಲರ ನೆನಪು, ಅವರಲ್ಲಿ ಹರಿದಾಡಿ ಹೋದಾಗ ನಾನೇಕೆ ಈ ಗೆಳೆಯರ ನೆನಪುಗಳನ್ನು ಸಂಗ್ರಹಿಸಿ ಒಂದು ಪುಸ್ತಕ ಮಾಡಬಾರದು ಎಂದು ಯೋಚಿಸುತ್ತಿದ್ದಾಗಲೇ ಅವರ ಆರೋಗ್ಯ ಹದಗೆಡಲಾರಂಭಿಸಿತು.

ಈಗೊಂದು ಎರಡು ತಿಂಗಳ ಹಿಂದೆ ನಾನು, ಚುಕ್ಕಿ ಭೇಟಿ ನೀಡಿದ್ದಾಗ, ಅವರು ಕೆಮ್ಮುತ್ತಿದ್ದ ಶಬ್ದದಿಂದಲೇ ನನ್ನ ಮನಸ್ಸಿನಲ್ಲಿ "ಇವರಿಗೇನಾದ್ರು ಕ್ಯಾನ್ಸರ್ ಇದೆಯಾ" ಎನಿಸಿಬಿಡ್ತು. " ಏಕೆ ಹಿಂಗೆ ಕೆಮ್ತೀರಿ?" ಎಂದಾಗ "ಮಡಿಕೇರಿಗೆ ಹೋಗಿದ್ದೆ. ಆ ಹವಾಗುಣಕ್ಕೆ infection ಆಗಿದೆ" ಎಂದು ತೇಲಿಸಿಬಿಟ್ಟರು. "ಅಂಕಲ್, ಆದಷ್ಟು ಬೇಗ check up ಮಾಡಿಸಿಕೊಳ್ಳಿ. ನಿಮಗೆ ಹಾರ್ಟ್ ಪ್ರಾಬ್ಲಮ್, ಡಯಾಬಿಟೀಸ್ ಬೇರೆ ಇದೆ. ಇಷ್ಟು ಸಿಗರೇಟ್ ಬೇರೆ ಸೇದ್ತೀರಾ" ಎಂದಾಗ, "ಅದರ ಬಗ್ಗೆ ಕೇರೇ ಇಲ್ಲ" ಎಂದು ಉಡಾಫೆಯಾಗಿ ಹೇಳಿಬಿಟ್ಟರು. ಪಕ್ಕದಲ್ಲಿದ್ದ ಅಕ್ಕ ಕೂಡ ಈ ವಿಷಯದಲ್ಲಿ ಬೇಜಾರು ಮಾಡಿಕೊಂಡಿದ್ದರು.

ಅವರಿಗೆ ಹುಷಾರಿಲ್ಲ, ಹಾಸಿಗೆ ಹಿಡಿದಿದ್ದಾರೆಂದು ತಿಳಿದನಂತರ ಚುಕ್ಕಿ ಫೋನ್ ಮಾಡಿ, "ಹೆಂಗಿದ್ದೀರಾ ಅಂಕಲ್?" ಎಂದಾಗ " ದಿಲ್‌ದಾರಾಗಿದ್ದೀನಮ್ಮಾ, I am having a drink in KSCA club"ಎಂದರಂತೆ. ಅವರು ಇತ್ತೀಚೆಗೆ ಈ ಮಟ್ಟದಲ್ಲಿ ನಮಗೆ ಹತ್ತಿರವಾಗಿಬಿಟ್ಟಿದ್ದರು. ಅವರನ್ನು ಇಷ್ಟು ಹಚ್ಚಿಕೊಂಡ ಕೆಲದಿನಗಳಲ್ಲೇ ಅವರು ತೀರಿಕೊಳ್ಳುತ್ತಾರೆಂಬ ಊಹೆಯೂ ನಮಗಿರಲಿಲ್ಲ. ಅವರು ನಮ್ಮಿಬ್ಬರ ಜೀವನದಲ್ಲಿ ಬಂದು ಹೋದಂತಹ 'ಚಿರ ಮಿಂಚು'.

ಸ್ನೇಹಕ್ಕನ ಗರ್ಭದಲ್ಲಿರುವ ಪುಟಾಣಿಯು ರಾಮದಾಸ್ ಅಂಕಲ್ಲೇ ಆಗಿ ಜನ್ಮ ತಾಳಿಲಿ ಎಂಬುದೇ ನಮ್ಮಾಸೆ.

## ಗುರುವಿಗೇ 'ಮಲ್ನಾಡ್ ಡ್ರಿಂಕ್ಸ್' ಕುಡಿಸಿದರು

ಎಚ್.ಎಲ್. ಕೇಶವಮೂರ್ತಿ

ಅವರಿಗೆ ಅಧಿಕಾರ ಇರಲಿಲ್ಲ. ಅಂತಸ್ತು ಇರಲಿಲ್ಲ.

ಹೋಗಲಿ ಹಣ? ಅದಾದರೂ ಯಥೇಚ್ಛವಾಗಿತ್ತ?

ಅದೂ ಇಲ್ಲ.

ಹಾಳಾಗಲಿ. ಜಾತಿ? ಅದು ತಾನೆ ಮುಖ್ಯ? ಅದಾದರೂ ಇತ್ತ?

ಇಲ್ಲ. ಅವರ ಜಾತಿ ಯಾವುದು ಅನ್ನುವುದೇ ಗೊತ್ತಿಲ್ಲ!

ಅಂದಮೇಲೆ ಮುಗಿಯಿತು. ಇದು ಕಾರ್ಪೊರೇಷನ್ ಕೇಸು. ಶವಸಂಸ್ಕಾರಕ್ಕೆ ಅವರಿಗೆ ತಿಳಿಸಬೇಕು.

ಅರೆ, ಅದು ಹಾಗೆ ಆಗಲೇ ಇಲ್ಲ!

ಸಾವಿರಾರು ಜನ ಸೇರಿದ್ದರು. ಬರುವವರು ಬರುತ್ತಲೇ ಇದ್ದರು. ಹೋಗುವವರು ಹೋಗುತ್ತಲೇ ಇದ್ದರು. ಜನಸಂದಣಿ ಹೆಚ್ಚುತ್ತಲೇ ಹೋಯಿತು.

ಬಂದಿದ್ದ ಜನ ಎಂತಹವರು?

ಮೌಲ್ವಿಗಳು, ಪಾದರಿಗಳು, ಮಠಾಧೀಶರು!

ಹಿಂದೂ, ಕ್ರೈಸ್ತ ಮುಸಲ್ಮಾನರು!

ಅನಾಥರು, ಬಡವರು, ಶ್ರೀಮಂತರು!

ಮಿನಿ ಭಾರತವೇ ಅಲ್ಲಿತ್ತು!

ಜಾತಿ ಮರೆಯಾಗಿತ್ತು; ವರ್ಗನಾಶ ಆಗಿತ್ತು; ಮಾನವೀಯ ಮೌಲ್ಯ. ಅಂತಃ ಕರಣ ವಾತಾವರಣ ಆವರಿಸಿತ್ತು!

ಚಾರ್ವಾಕ ರಾಮದಾಸ್ ಅವರ ಆಶಯ ಸತ್ಯವಾಗಿಸಿತ್ತು!

ಅಂತಿಮ ದರ್ಶನ ಪಡೆದು ಗೌರವ ಸಮರ್ಪಿಸಲು ಬಂದಿದ್ದ ಅಗಾಧ ಜನಸ್ತೋಮ ಈ ಭಾವನೆ ಮೂಡಿಸಿತ್ತು.

ಇದಾದನಂತರ ನೆನಪು ಕಾರ್ಯಕ್ರಮ. 'ನೆನಪು' ಪದದ ಬಗ್ಗೆಯೇ ಜಿಜ್ಞಾಸೆ. ಹಠಹಿಡಿದಂತೆ ಬೆಳಗಿನಿಂದಲೇ ಮೈಸೂರಿನಲ್ಲಿ ಸುರಿಯುತ್ತಿದ್ದ ಮಳೆ. ವಿಶಾಲವಾದ ಸಭಾಂಗಣ. ಸಭಿಕರೇ ಬಾರದಿದ್ದರೇನು ಎಂಬ ಆತಂಕ ಸಂಘಟಕರಿಗೆ. ನಿಗದಿತ ಸಮಯ ಬಂದರೂ ಬೆರಳೆಣಿಕೆಯಷ್ಟೇ ಸಭಿಕರು. ಸಂಘಟಕರ ಪೆಚ್ಚುಮೋರೆ ಕೆಲವೇ ನಿಮಿಷಗಳಲ್ಲಿ ಗೆಲುವಾಯಿತು. ಸುರಿಯುವ ಮಳೆಯಲ್ಲೂ ಜನ ಕಿಕ್ಕಿರಿದರು!

ಸಾಮಾನ್ಯವಾಗಿ 'ನೆನಪು ಕಾರ್ಯಕ್ರಮ', 'ಶ್ರದ್ಧಾಂಜಲಿ ಸಭೆ' ಇಂತಹವುಗಳಲ್ಲಿ ಅತಿಥಿಗಳು ಹೇಗೆ ಮಾತನಾಡುತ್ತಾರೆ ಅಂದರೆ... ಚಂದನ ವಾಹಿನಿಯಲ್ಲಿ ವಾರ್ತೆ ಓದಿದಂತೆ! ನವರಸಗಳಿದ್ದರೂ ಅವರು ಬಳಸುವುದು ಶೋಕರಸ ಮಾತ್ರ! ಸಿಟ್ಟು, ಸೆಡವು, ಸಂತೋಷ, ದುಃಖ ಯಾವ ಸನ್ನಿವೇಶವೇ ಆಗಲಿ ಈ ಏಕತಾನವನ್ನು ಬಿಡುವುದಿಲ್ಲ. ರಾಮದಾಸ್ ಅವರೇ ಇದನ್ನ ಬಹಳ ಸಲ ಹೇಳಿದ್ದರು. ಆದರೆ ಅವತ್ತಿನ ಇಡೀ ಕಾರ್ಯಕ್ರಮ ಲವಲವಿಕೆಯಿಂದ ಕೂಡಿತ್ತು. ರಾಮದಾಸ್ ಎಂದೋ ಸಿಡಿಸಿದ್ದ ನಗೆ ಚಟಾಕಿಗಳು ಅವತ್ತು ಮತ್ತೆ 'ಢಂ ಢಮಾರ್' ಅಂತ ಸಿಡಿದು ಇಡೀ ಸಭಾಂಗಣ ನಗೆಯ ಅಬ್ಬರದಿಂದ ತುಂಬಿತ್ತು!

ಕಾರ್ಯಕ್ರಮ ಪ್ರಾರಂಭ ಆದದ್ದು ಹಿಂದೂಸ್ತಾನಿ ಗಾಯನದಿಂದ. ಸೊಗಸಾದ ಗಾಯನ. ಆದರೆ ಮುಂದಿನ ಸಾಲಿನಲ್ಲೇ ಕುಳಿತಿದ್ದ ಕೆಲವರಿಗೆ ಅದಕ್ಕಿಂತಲೂ ಪ್ರಮುಖವಾದ ಯಾವುದೋ ಸಂಗತಿ ದೊರೆತಿರಬೇಕು. ಅದರಲ್ಲಿ ಅವರು ಮಗ್ನರಾಗಿದ್ದರು. ಎಂತಹ ಘಟಾನುಘಟಿ ಕುಳವೇ ಆದರೂ ಇಂತಹ ಸಭಿಕರು ನಡುಗಿಸಿಬಿಡುತ್ತಾರೆ! ಅಲ್ಲದೆ ಕಾಲಮಿತಿ ಬೇರೆ ಇತ್ತು. ಹೀಗಾಗಿ ಅನಿವಾರ್ಯವಾಗಿ ತಮ್ಮ ಗಾಯನ ತುಂಡರಿಸಬೇಕಾಯಿತು. ಆನಂತರ ರಾಮದಾಸ್‌ಗೆ ಆತ್ಮೀಯವಾಗಿದ್ದ ಅಂತರ್ಜಾತಿ ವಿವಾಹ; ಅದನ್ನು ಪ್ರಭುಶಂಕರ ಅವರು ನಡೆಸಿಕೊಟ್ಟರು. ನಂತರ ಅವರಿಂದಲೇ ತಮ್ಮ ಶಿಷ್ಯನ ನೆನಪು.

'ರಾಮದಾಸ, ತೇಜಸ್ವಿ, ಶಾಮಣ್ಣ, ಸುಂದರೇಶ್ ಇವರೆಲ್ಲ ನನ್ನ ಶಿಷ್ಯರು ಅಂತ ಹೇಳ್ತಾರೆ. ಅವರನ್ನು ನಾನು ಯಾವತ್ತೂ ನನ್ನ ತರಗತಿಯಲ್ಲಿ ನೋಡಿದ್ದೇ ಇಲ್ಲ. ಅವರೆಲ್ಲ ತರಗತಿ ಒಳಗಿರುವುದಕ್ಕಿಂತ ಹೊರಗಿದ್ದದ್ದೇ ಹೆಚ್ಚು. ಇವರೆಲ್ಲ ಹೀಗೆ ಜೀವನದಲ್ಲಿ ಸಾಧನೆ ಮಾಡಿರುವುದನ್ನು ನೋಡಿದರೆ ವಿದ್ಯಾರ್ಥಿಗಳು ನನ್ನ ತರಗತಿಗಳಿಗೆ ಬರುವುದಕ್ಕಿಂತ ಹೊರಗಿದ್ದರೇ ಚಂದವೇನೋ ಅನ್ನಿಸುತ್ತೆ.' ಹೀಗೆ ಹಾಸ್ಯಮಯವಾಗಿ ಮಾತನಾಡಿ ಇಡೀ ಕಾರ್ಯಕ್ರಮದ ದಿಕ್ಸೂಚಿಯಾದರು.

ಸಮಾರೋಪ ಸಮಾರಂಭದಲ್ಲಿ ದೇವನೂರು ಮಹದೇವ ಹೇಳಿದ ಘಟನೆ ಪ್ರಭುಶಂಕರ ಅವರಿಗೆ ಸಂಬಂಧಿಸಿದ್ದರಿಂದ ಇಲ್ಲಿ ಹೇಳಲು ಬಯಸುತ್ತೇನೆ. (ಇದನ್ನು ಅವರು ಹೇಳಿದಾಗ ಪ್ರಭುಶಂಕರ ಅವರು ಸಭಾಂಗಣದಲ್ಲಿ ಇರಲಿಲ್ಲ).

ದೇವನೂರು ಹೇಳಿದ್ದು:

ರಾಮದಾಸ್ ಬಹಳಷ್ಟು ಘಟನೆಗಳನ್ನು ಸ್ವಾರಸ್ಯಕರವಾಗಿ ಹೇಳುತ್ತಿದ್ದರು. ಒಂದು ಘಟನೆಯನ್ನು ಹೇಳ್ತೀನಿ.

ಒಂದು ಸಲ ರಾಮದಾಸ್ ತಮ್ಮ ಗೆಳೆಯರ ಜೊತೆ ಶಿವಮೊಗ್ಗಕ್ಕೆ ಹೋಗಿದ್ದರಂತೆ. ಅವರ ಸಂಗಡ ಡಾ. ಪ್ರಭುಶಂಕರ್ ಹಾಗೂ ಅವರ ಪತ್ನಿ ಡಾ. ಶಾಂತ ಅವರೂ ಇದ್ದರಂತೆ. ಒಂದು ಹಳ್ಳಿಯಲ್ಲಿ ಇವರಿಗಾಗಿ ಸೊಗಸಾದ ಬಗನಿ ಹೆಂಡ ತಯಾರು ಇತ್ತಂತೆ. ರಾಮದಾಸ್‌ಗೆ ಬಗನಿ ಹೆಂಡದ ಮೇಲೆ ಆಸೆ. ಆದರೆ ಗುರು ಹಾಗೂ ಗುರುಪತ್ನಿ ಜೊತೆಯಲ್ಲಿದ್ದಾರೆ! ಅವರಿಬ್ಬರೂ ಮಾದಕ ಪಾನೀಯ ಅಂದರೆ ಮಾರುದೂರ ಹಾರುವವರು. ಅವರನ್ನು ತಪ್ಪಿಸಿ ಹೋಗಬೇಕು. ರಾತ್ರಿ ಮೀರುತ್ತಾ ಇದೆ. 'ಸಾರ್ ಹೊರಗಡೆ ತಿರುಗಾಡಿಕೊಂಡು ಬರ್ತೀನಿ' ಅಂದ್ರಂತೆ ರಾಮದಾಸ್. 'ನಾವೂ ಬರ್ತೀವಿ ನಡೀರಿ' ಅಂದರಂತೆ ಅವರು. ಇವರಿಗೋ ಪೀಕಲಾಟ. 'ಯಾರೋ ಸ್ನೇಹಿತರ ಮನೆ ಸಾರ್ ಅದು' ಅಂದರಂತೆ ಇವರು. 'ಆಗ್ಲಿ ರಾಮದಾಸ್, ನಾವು ಬಂದರೆ ಏನು ತೊಂದರೆ. ಇಲ್ಲಿ ಇಬ್ಬರೇ ಕುಳಿತು ಬೇಸರ ಆಗ್ತದೆ' ಅಂತ ಅವರೂ ಹೊರಟುನಿಂತರಂತೆ. ವಿಧಿ ಇಲ್ಲದೆ ಅವರನ್ನು ಕರೆದುಕೊಂಡು ಬಗನಿ ಹೆಂಡ ಇದ್ದ ಮನೆಗೆ ಹೋದರಂತೆ. ಅಲ್ಲಿ ಆ ದಂಪತಿಗಳಿಂದ ಗೌರವಾನ್ವಿತ ದೂರ ಕಾಪಾಡಿಕೊಂಡು ಈ ಪಟಾಲಂ ಕುಳಿತಿತ್ತಂತೆ. ಪಾನೀಯ ಸಮಾರಾಧನೇನೂ ಪ್ರಾರಂಭಿಸಿದರಂತೆ.

ಕುತೂಹಲ ತಾಳಲಾರದೆ. ಇದುವರೆವಿಗೆ ಅವರು ಚಪ್ಪರಿಸುತ್ತಾ ಕುಡಿಯುತ್ತಿದ್ದ ಪಾನೀಯವನ್ನು ನೋಡುತ್ತಾ ಇದ್ದ ಪ್ರಭುಶಂಕರ್ ಕೇಳಿದರಂತೆ- 'ಅದೇನ್ರಪ್ಪಾ ಅದು ನೀವು ಕುಡೀತಿರೋದು?'

'ಮಲ್ನಾಡು ಡ್ರಿಂಕ್ಸ್ ಸಾರ್' ಅಂದರಂತೆ ರಾಮದಾಸ್.

'ಹೌದಾ, ಹೇಗಿರುತ್ತೆ ಅದು?'

'ಚೆನ್ನಾಗಿರುತ್ತೆ ಸಾರ್'

'ಹೌದಾ, ನನಗೆ ಒಂದು ಲೋಟ ಕೊಡಿ ನೋಡೋಣ'

ಅನ್ಯ ಮಾರ್ಗವಿಲ್ಲದೆ ಇವರು ಒಂದು ಲೋಟದಲ್ಲಿ ಹಾಕಿಕೊಟ್ಟರಂತೆ. ಅದರ ರುಚಿ ನೋಡಿದ ಪ್ರಭುಶಂಕರ ಅವರು 'ಚೆನ್ನಾಗೇ ಇದೆ' ಎಂದು ಹೇಳುತ್ತಾ ಗಟಗಟನೆ ಕುಡಿದು ಮುಗಿಸಿ, 'ಎಲ್ಲಿ ಇನ್ನೊಂದು ಸ್ವಲ್ಪ ಹಾಕಿ' ಎಂದರಂತೆ. ಆ 'ಸ್ವಲ್ಪ' ಬಂದ ಮೇಲೆ 'ಶಾಂತನಿಗೂ ಒಂದು ಗ್ಲಾಸ್ ಕೊಡಿ' ಅಂದರಂತೆ. ಆ ರೀತಿಯೇ ಮಾಡಿದರಂತೆ ಗೆಳೆಯರು. ಅದರ ಸೇವನೆ ಮಾಡುತ್ತಾ ಕೇಳಿದರಂತೆ 'ಮಲ್ನಾಡ್ ಡ್ರಿಂಕ್ಸ್ ಅಂದಿರಿ. ಸ್ಥಳೀಯವಾಗಿ ಏನಂತ ಕರೀತಾರೆ ಇದನ್ನ.'

'ಮಲೆಗಳಲ್ಲಿ ಮದುಮಗಳು ಕಾದಂಬರೀಲಿ ಕುವೆಂಪು ಬರೀತರಲ್ಲಾ ಸಾರ್ ಬಗನಿ ಹೆಂಡ' ಅಂದರಂತೆ ರಾಮದಾಸ್.

ಇಷ್ಟನ್ನ ದೇವನೂರು ಹೇಳಿದರು: ನಮ್ಮ ಜೊತೆ ಹರಟುತ್ತಿದ್ದಾಗ ರಾಮದಾಸ್ ಹೇಳಿದ್ದು- ಇದರ ಮುಂದಿನ ಸಾಲು ಇನ್ನೂ ಮಜವಾಗಿದೆ.

'ಹಾಗಂತಾರಾ... ಇದು ನಿಮ್ಮಲ್ಲೇ ಇರಲಿ. ನಾವು ಕುಡಿದೊ ಅಂತ ಯಾರಿಗೂ ಹೇಳಬೇಡಿ' ಅಂದರಂತೆ ಪ್ರಭುಶಂಕರ ಅವರು!

ಹೀಗೆ ಇಡೀದಿನ ಇಂತಹ ಹಲವಾರು ಘಟನೆಗಳನ್ನು ಹೇಳುವ ಮೂಲಕ ಇಡೀ ಸಭಾಂಗಣವನ್ನು ನಗೆಗಡಲಿನಲ್ಲಿ ಕೆಡವಿದರು ಭಾಷಣಕಾರರು.

ಇಷ್ಟೇ ಆಗಿದ್ದರೆ ಕಾರ್ಯಕ್ರಮಕ್ಕೆ ಕಳೇನೇ ಬರುತ್ತಿರಲಿಲ್ಲ. ಒಂದು ರೀತಿಯ ಇತ್ತೀಚಿನ ನಗೆಹಬ್ಬ ಆಗಿ ಕೊನೆಗೊಳ್ಳುತ್ತಿತ್ತೇನೊ!

ಸಮಾಜವಾದಿಗಳ ಕಾರ್ಯಕ್ರಮ ಅಂದಮೇಲೆ ಒಂದಷ್ಟು ಪ್ರತಿಭಟನೆ, ಸೈದ್ಧಾಂತಿಕ ವಿರೋಧ, ಅರುಚಾಟ ಇದ್ದರೇನೇ ಅದಕ್ಕೊಂದು ಕಳೆ. ಅದೂ ನಡೆಯಿತು. 'ಜನಸಂಖ್ಯೆ ಆಧಾರಿತ ಮೀಸಲಾತಿ' ಕುರಿತಂತೆ ನಾಗಭೂಷಣ, ರವಿವರ್ಮಕುಮಾರ್ ನಡುವೆ ಮಾತಿನ ಚಕಮಕಿ ನಡೆದರೆ, ರೈತಸಂಘದ ಮೇಲ್ಮಟ್ಟದ ಪದಾಧಿಕಾರಿಗಳು ಸಂಘವನ್ನು ತ್ಯಜಿಸಿ ಕೋಮುವಾದಿ ಭಾರತೀಯ ಜನತಾ ಪಕ್ಷ ಸೇರಲು ಕಾರಣ-ರೈತಸಂಘ ತನ್ನ ಕಾರ್ಯಕರ್ತರಿಗೆ ಅಧ್ಯಯನ ಶಿಬಿರಗಳನ್ನು ನಡೆಸುವಲ್ಲಿ ಸೋತದ್ದು ಎಂಬುದನ್ನು ಕುರಿತಂತೆ ರವಿ, ಪುಟ್ಟಣ್ಣಯ್ಯ ಮತ್ತು ರೈತಸಂಘದ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು.

ರವಿವರ್ಮಕುಮಾರ್ ಹೇಳಿದ ಒಂದು ಘಟನೆ ಇಲ್ಲಿ ಪ್ರಸ್ತುತ ಅನ್ನಿಸುತ್ತೆ.

ಎಂ.ಡಿ. ನಂಜುಂಡಸ್ವಾಮಿಯವರು ಅಧಿಕಾರ ವಿಕೇಂದ್ರೀಕರಣದಲ್ಲಿ ನಂಬಿಕೆ ಇಟ್ಟವರು. ಆದರೂ ರೈತ ಸಂಘದ ಎಲ್ಲಾ ಕಾರ್ಯಗಳನ್ನೂ ಅವರೇ ಮಾಡುತ್ತಿದ್ದರು! ರವಿ ಕೇಳಿದರಂತೆ 'ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುವ ನೀವು ಯಾಕೆ ಅಧಿಕಾರ ಕೇಂದ್ರೀಕರಣ ಮಾಡಿಕೊಂಡಿದ್ದೀರಿ? ಇದನ್ನು ವಿಕೇಂದ್ರೀಕರಣ ಮಾಡಬಾರದೆ?'

ಬಹಳ ಒತ್ತಾಯದ ನಂತರ ವಿಕೇಂದ್ರೀಕರಣಕ್ಕೆ ಸಮ್ಮತಿಸಿದರಂತೆ.

ಇನ್ನು ಮುಂದೆ ಯಾರು ಯಾರಿಗೆ ಅಧಿಕಾರ ಹಂಚಬೇಕು ಎಂಬ ಪ್ರಶ್ನೆ.

ಸಂಘಟನೆ. ಇದನ್ನು ಯಾರಿಗೆ ಕೊಡಬೇಕು?

'ಸಂಘಟಿಸುವ ಶಕ್ತಿ ಯಾರಿಗಿದೇರಿ? ಯಾರಿಗೂ ಇಲ್ಲ' ನಂಜುಂಡಸ್ವಾಮಿ ಉತ್ತರ.

ಹಾಗಾಗಿ ಸಂಘಟನೆ ಅವರ ಪಾಲಾಯಿತು.

ಇನ್ನು ಹಣಕಾಸು ವಿಷಯ.

'ಆರ್ಥಿಕ ಶಿಸ್ತು ಯಾವನಿಗಾದರೂ ಇದೆಯ? ಯಾರಿಗೂ ಇಲ್ಲ'

ಹಣಕಾಸು ವಿಷಯವೂ ಅವರ ಬಗಲಿಗೆ.

ಸಭೆ ನಿರ್ವಹಣೆ ಸಂಗತಿ.

ತಮ್ಮನ್ನು ಬಿಟ್ಟರೆ ಯಾರಿಂದಲೂ ಸಾಧ್ಯ ಇಲ್ಲ!

ಹಾಗಾಗಿ ಎಲ್ಲ ವಿಷಯಗಳೂ ಮತ್ತೆ ಅವರ ಬಗಲಿಗೇ ಹೋದುವಂತೆ!

ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ ರಾಮದಾಸ್‌ಗೂ ಇಂತಹದ್ದೇ ಸ್ವಭಾವ. ಯಾವುದಾದರೂ ಕಾರ್ಯಕ್ರಮ ರೂಪಿಸಬೇಕಾದರೆ ಎಲ್ಲವನ್ನು ತಾನೇ ಮಾಡಬೇಕು ಎಂಬ ಕೆಟ್ಟ, ಹಟ.

ಇದಕ್ಕೆ ಕಾರಣ-ಬೇರೆಯವರ ಮೇಲಿನ ಅಪನಂಬಿಕೆಗಿಂತಲೂ ತಾನು ಹಿಡಿದ ಕಾರ್ಯ ಅಚ್ಚುಕಟ್ಟಾಗಿರಬೇಕೆಂಬ ನಿಲುವು ಇರಬಹುದೆ?

ಇತ್ತೀಚೆಗೆ ಒಬ್ಬ ವೈದಿಕ ಪತ್ರಕರ್ತ ಹಲವಾರು ವರ್ಷಗಳಿಂದ ರಾಮದಾಸ್ ಮಾಡಿದ ಭಾಷಣ ವ್ಯರ್ಥ ಎಂಬರ್ಥದ ಮಾತುಗಳನ್ನು ಬರೆದಿರುವುದನ್ನು ನೋಡಿದೆ. ಅವರಿಗೊಂದು ಪ್ರಶ್ನೆ-

ರಾಮದಾಸ್ ಮರಣ ಹೊಂದಿದ ದಿವಸ, ಅವರ ನೆನಪಿನ ಕಾರ್ಯಕ್ರಮಕ್ಕೆ ಅಷ್ಟೊಂದು ಅಗಾಧ ಸಂಖ್ಯೆಯಲ್ಲಿ ಜನ ಸೇರಿದ್ದರಲ್ಲ. ಯಾವ ಚುಂಬಕ ಶಕ್ತಿ ಕಾರಣ? ಸಾವಿರಾರು ಯುವ ಮನಸ್ಸುಗಳಲ್ಲಿ ವೈಚಾರಿಕತೆಯನ್ನು ಮೂಡಿಸಿದ ಅವರ ಭಾಷಣಗಳು!

ಇದು ವ್ಯರ್ಥ ಅನ್ನುವುದಾದರೆ ಸಾರ್ಥಕ ಯಾವುದು?

# ನಮ್ಮ ಮೇಷ್ಟ್ರು

# ರಾಮದಾಸ್: ನನ್ನೊಳಗಿನ ಅರಿವು

ಪ್ರೊ. ಅಪ್ಪಾಜಿಗೌಡ

ಅದು ೧೯೭೭ನೇ ಇಸವಿ. ನಾನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗ ಮಾಡುತ್ತಿದ್ದವನು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಮುದಾಯ ಕುಲಪತಿ ಡಿ. ವಿ. ಅರಸ್ ವಿರುದ್ಧ ಮುಷ್ಕರ ಹೂಡಿತ್ತು. ಸುಮಾರು ನಲವತ್ತೆರಡು ದಿನಗಳ ಕಾಲ ನಡೆದ ಐತಿಹಾಸಿಕ ಚಳವಳಿಯ ಕೊನೆಯ ದಿನಗಳು ಪೊಲೀಸ್ ದೌರ್ಜನ್ಯಕ್ಕೆ ನಲುಗಿದ್ದವು. ನಾನು, ನನ್ನಂತೆ ಅನೇಕ ಗೆಳೆಯರು ಆಮರಣಾಂತ ಉಪವಾಸ ಮಾಡುತ್ತಿದ್ದೆವು. ಏಳು ದಿನಗಳ ನನ್ನ ಅನ್ನ ಸತ್ಯಾಗ್ರಹ ಕೆ.ಆರ್. ಆಸ್ಪತ್ರೆಯಲ್ಲಿ ಕೊನೆಗೊಂಡು ಮುಷ್ಕರಕ್ಕೆ ಧುಮುಕಿದ್ದೆ. ಅಂದೇಕೋ ಪೊಲೀಸರು ವ್ಯಗ್ರಗೊಂಡಿದ್ದರು. ಅವರಿಗೂ ನಮ್ಮನ್ನು ಕಾದೂ ಕಾದೂ ಸಾಕಾಗಿದ್ದಿರಬೇಕು. ಸಿಕ್ಕ ಸಿಕ್ಕ ಹುಡುಗರನ್ನು ಲಾಠಿಗಳಿಂದ ಚಚ್ಚತೊಡಗಿದ್ದರು. ಕ್ರಾಫರ್ಡ್ ಭವನ ಖಾಲಿ ಮಾಡಿಸುವುದು ಅವರ ಘನ ಉದ್ದೇಶವಾಗಿತ್ತು. ನಾನೋ ಉಪವಾಸ ಸತ್ಯಾಗ್ರಹ ಮಾಡಿ ನನ್ನನ್ನೇ ನಾನು ಹೀರೋ ಎಂದು ಭಾವಿಸಿಕೊಂಡಿದ್ದೆ. ನಮ್ಮನ್ನು ಕಾಯುತ್ತಿದ್ದ ಪೊಲೀಸರೂ ಬಹಳ ಗೌರವದಿಂದ ಮಾತನಾಡಿಸುತ್ತಿದ್ದರು. ಈ ಅಹಂನಲ್ಲಿ, ಇವರು ನನ್ನನ್ನೇನೂ ಮಾಡಲಾರರು ಎಂದು ಲಾಠಿ ಪ್ರಹಾರದ ವಿರುದ್ಧ ಪೊಲೀಸರೊಡನೆ ಮಾತಿಗಿಳಿದೆ. ಅಮಾಯಕ ವಿದ್ಯಾರ್ಥಿಗಳನ್ನು ಹೀಗೆ ದಂಡಿಸುವುದು ಅನ್ಯಾಯ ಎಂದೆಲ್ಲಾ ಜಗಳವಾಡುತ್ತಿದ್ದಾಗಲೆ ಮತ್ತೆಲ್ಲಿಂದಲೋ ಬಂದ ಅಪರಿಚಿತ ಪೊಲೀಸ್ 'ಅಯ್ಯೋ ನಿಮ್ಮವ್ವನ್'ಎನ್ನುತ್ತ ಎಗ್ಗಾಮುಗ್ಗ ಬಾರಿಸಲು ಪ್ರಾರಂಭಿಸಿಯೇಬಿಟ್ಟ. ನನ್ನ ಅಹಂಗೆ, ದೇಹಕ್ಕೆ ಬಿದ್ದ ಪೆಟ್ಟಿನಿಂದ ಕಂಗಾಲಾಗಿ, ಅವರಿಂದ ತಪ್ಪಿಸಿಕೊಳ್ಳಲು ಓಡತೊಡಗಿದೆ. ನನ್ನಂತೆಯೇ ಓಡುತ್ತಿದ್ದ ಹತ್ತಾರು ವಿದ್ಯಾರ್ಥಿಗಳ ಗುಂಪಿನೊಡನೆ ಕ್ರಾಫರ್ಡ್ ಭವನದಿಂದ ಮಹಾರಾಜ ಕಾಲೇಜಿನತ್ತ ದೌಡಾಯಿಸಿದೆವು. ಪ್ರಾಣ ಭೀತಿಯಿಂದ ಮುಂದೆ ನಾವು, ಹಿಂದೆ ಪೊಲೀಸ್ ದಂಡು. ಹೀಗೆ ಓಡುತ್ತಾ ಮಹಾರಾಜ ಕಾಲೇಜಿನ

ಹಿಂಬದಿ ಗೇಟಿನ ಮೂಲಕ ಕಾಲೇಜಿನ ಆವರಣಕ್ಕೆ ನುಗ್ಗಿದೆವು. ನಮ್ಮ ದೈವವೇ ಎದ್ದು ಬಂದಂತೆ ನಮ್ಮ ಕಾಲೇಜಿನ ಆ ಗೇಟಿನ ಮಧ್ಯಭಾಗದಲ್ಲಿ ಚೈನಾ ಮಹಾಗೋಡೆಯಂತೆ, ಎರಡೂ ಕೈಗಳನ್ನು ಚಾಚಿ ರಾಮದಾಸ್, ನನ್ನ ಮೇಷ್ಟ್ರು ನಿಂತಿದ್ದರು. ಓಡಿಬಂದವರೆ ನಾವೆಲ್ಲ ಅವರ ಹಿಂದೆ ಅವಿತುಕೊಂಡೆವು. ಪೊಲೀಸರೂ ಬಂದರು. ಮೇಷ್ಟ್ರಿಗೆ ಅದೇನು ಸಿಟ್ಟೋ ದುಃಖದ ಮತ್ತೊಂದು ಅಂತಿಮ ಹಂತವೋ, 'ನನ್ನ ವಿದ್ಯಾರ್ಥಿಗಳನ್ನು ಮುಟ್ಟುವುದಕ್ಕೂ ನಾನು ಅವಕಾಶ ಕೊಡುವುದಿಲ್ಲ. ಅವರೇನು ತಪ್ಪು ಮಾಡಿದ್ದಾರೆ ? ಅವರೇನು ಕಳ್ಳರೆ ?ದರೋಡೆಕೋರರೆ ? ಅಮಾಯಕ ವಿದ್ಯಾರ್ಥಿಗಳನ್ನು ಹೀಗೆ ಹೊಡೆಯುತ್ತಿದ್ದೀರಲ್ಲ, ನಾಚಿಕೆಯಾಗುವುದಿಲ್ಲವೆ ನಿಮಗೆ ? ಹೋಗ್ರೀ ಹೋಗ್ರೀ ನಮ್ಮ ಕಾಲೇಜ್ ಕ್ಯಾಂಪಸ್ಗೆ ಕಾಲಿಡಲು ಯಾರ್ರೀ ನಿಮ್ಗೆ ಪರ್ಮಿಷನ್ ಕೊಟ್ಟೋರು? ನೀವು ನನ್ನ ವಿದ್ಯಾರ್ಥಿಗಳಿಗೆ ಹೊಡಿಯಬೇಕಾದರೆ ನನ್ನ ಹೆಣದ ಮೇಲೆ ಕಾಲನ್ನು ಇಟ್ಟುಕೊಂಡು ಹೋಗಬೇಕು, ಹೋಗ್ರೀ...' ಎನ್ನುತ್ತ ಮತ್ತಷ್ಟು ಗಟ್ಟಿಯಾಗಿ ನಿಂತು ತಮ್ಮ ಕೈಗಳನ್ನು ಮತ್ತೂ ಹಿರಿದಾಗಿ ಚಾಚಿದರು.

ಒಂದೆರಡು ಕ್ಷಣ ಪೊಲೀಸರು ನಿಂತು, ನಮ್ಮನ್ನೂ ಮೇಷ್ಟ್ರನ್ನೂ ನೋಡಿ ಒಂದು ಮಾತನ್ನೂ ಆಡದೆ ಹೊರಟುಹೋದರು.

ಅವರು ಅತ್ತ ಹೋಗುತ್ತಲೆ ಮೇಷ್ಟ್ರು ನಮ್ಮ ಕಡೆ ತಿರುಗಿದರು. ಮುಖ ಸಿಟ್ಟಿನಿಂದ ಉರಿಯುತ್ತಿತ್ತು. ಕಣ್ಣು ಕೆಂಪಗಾಗಿತ್ತು. ಜೊತೆಗೆ ಧಾರಾಕಾರ ಕಣ್ಣೀರು. ಅವರು ಒಂದೂ ಮಾತನಾಡಲಿಲ್ಲ. ಸುಮ್ಮನೆ ಕಾಲೇಜಿನ ಒಳಕ್ಕೆ ಹೋಗಿ ಎಂಬಂತೆ ಕೈಸನ್ನೆ ಮಾಡಿದರು. ರಾಮದಾಸ್ ಎಂದರೆ ಹಾಗೆಯೇ ದಂಡಿಸುವ, ಪ್ರೀತಿಸುವ ತಾಯಿ, ಎರಡೂ.

ನಾವೆಲ್ಲ ಕ್ಲಾಸ್‌ಗೆ ಚಕ್ಕರ್ ಹೊಡೆದು ಮುಷ್ಕರ ಮಾಡುತ್ತಿದ್ದರೆ ಬಹಳಷ್ಟು ಜನ ಅಧ್ಯಾಪಕರು ಆಕ್ಷೇಪಿಸುತ್ತಿದ್ದರು. ರಾಮದಾಸ್ ಮುಷ್ಕರ ಮಾಡಿ, ಹೋರಾಡಿ ಎಂದೇನೂ ಹೇಳಿರಲಿಲ್ಲ. ಆದರೆ, ನಾವು ತರಗತಿಗೆ ಚಕ್ಕರ್ ಹೊಡೆದು ಘೋಷಣೆ ಕೂಗುತ್ತಾ ಮೆರವಣಿಗೆ ಹೋಗುತ್ತಿದ್ದರೆ ಹೆಮ್ಮೆಯಿಂದ, ಕಣ್ಣಲ್ಲೇ ನಮ್ಮತ್ತ ಬೆಳಕು ಚೆಲ್ಲುತ್ತಾ ನಿಲ್ಲುತ್ತಿದ್ದರು.

'ರೀ ಅನ್ಯಾಯನ ಪ್ರತಿಭಟಿಸೋದಿಕ್ಕೆ ಯಾರಾದ್ರೇನು, ನಿಮ್ಗೆ ಅನ್ಯಾಯ ಆಗಿದೆ ಅನ್ನಿಸಿದ್ರೆ ಹೋರಾಟ ಮಾಡಿ, ಅದು ತಪ್ಪಲ್ಲ. ನೀವು ಯಾರಿಗೂ ಹೆದರಬೇಕಿಲ್ಲ. ಅನ್ಯಾಯನ ಪ್ರತಿಭಟಿಸುವ ಹಕ್ಕು ಎಲ್ಲರಿಗೂ ಇದೆ'ಎನ್ನುತ್ತಿದ್ದರು. ಈಗ ಇಂತಹ ಮೇಷ್ಟ್ರು ಯಾರಿದ್ದಾರೆ? ಇದ್ರು ಮನಸ್ ಬಿಚ್ಚಿ ಹೇಳೋರು ಇದ್ದಾರೇನು?

ನಮಗೆ ಬೀಳಬಹುದಾದ ಎಷ್ಟೋ ಹೊಡೆತಗಳಿಗೆ ಎದೆಯೊಡ್ಡಿ ನಿಂತ ರಾಮದಾಸ್ ಈಗ ಇಲ್ಲ ಎಂದರೆ ಸುಳ್ಳು. ಅವರಿದ್ದಾರೆ ನಮ್ಮೊಳಗಿನ ಅರಿವು ಆಗಿ.

ರಾಮದಾಸ್ ನನಗೆ ಮೇಷ್ಟ್ರು, ಅಥವಾ ನಾನವರ ಶಿಷ್ಯ. ಹೀಗೆಂದು ಹೇಳಿಕೊಳ್ಳಲು ಎಂದೂ ಹೆಮ್ಮೆ ನನಗೆ. ಅದೊಂದು ದೊಡ್ಡ ಗೌರವ ಪದಕ.

ನಿಜಕ್ಕೂ ಬದುಕಿನ ಪಾಠ ಕಲಿಸಿದವರೆ ಅವರು. ನನ್ನೊಳಗೆ ಜಾತ್ಯತೀತ ಮನೋಭಾವ ಬಿತ್ತಿದವರು, ಅದರಂತೆ ಬೆಳೆದು 'ಬೆಳೆ'ಯಾದಾಗ ಅದರ ರಕ್ಷಣೆಗೆ ಧಾವಿಸಿದವರು. ಅದರ 'ಫಸಲ'ನ್ನು ಕಂಡು ಕಣ್ಣಾಲಿ ತುಂಬ ನೀರು ತುಂಬಿಕೊಂಡು ನನ್ನ ತಬ್ಬಿಕೊಂಡವರು, ಇವರೆ.

ನನ್ನ ಮದುವೆ ಸಂದರ್ಭ. ಕಾಂಪ್ಲಿಕೇಷನ್ ಆಗಿ ಪ್ರೀತಿಸಿದವಳನ್ನು ಮದುವೆ ಆಗುತ್ತೇನೆ ಎಂದಾಗ ಕಷ್ಟ ಎನ್ನುವ ಸ್ಥಿತಿ. ಬಿಗುವಿನ ವಾತಾವರಣ. ಹೆತ್ತವರು ಒಪ್ಪಿಕೊಂಡರೂ ಮಿಕ್ಕವರದೇ ಮುಕ್ಕಿರಿತ.

'ಸಾರ್, ನಾನು ಮಂಗಳಾ ಎನ್ನುವ ದಲಿತ ಹುಡುಗಿಯನ್ನು ಪ್ರೀತಿಸ್ತಾ ಇದ್ದೇನೆ. ನನ್ನ ಜಾತಿ ನಿಮ್ಗೆಗೊತ್ತೇ ಇದೆ. ಅವಳ ತಂದೆ-ತಾಯಿ ಒಪ್ಪಿಕೊಂಡಿದ್ದಾರೆ. ಆದರೆ, ಅವಳ ಅಕ್ಕ-ಭಾವ ಯಾಕೋ ಭಿನ್ನರಾಗ ಹಾಕುತ್ತಿದ್ದಾರೆ. ಏನ್ ಸಾರ್ ಮಾಡೋದು'ಎನ್ನುತ್ತಾ ಅವರ ಮುಂದೆ ಕುಳಿತೆ. ನನ್ನ ಮತ್ತು ಮಂಗಳಾಳ ಕಮಿಟ್‌ಮೆಂಟ್ ಬಗ್ಗೆ ಪ್ರಶ್ನಿಸಿದರು. ಅವರ ಮನೆಗೆ ಹೋಗಿ ಮಾತಾಡಿದರು. ಎಲ್ಲರೂ ಒಪ್ಪಿದರು. ಆದರೆ, ನನಗೆ ಖಾಯಂ ಕೆಲಸವಿಲ್ಲ, ಮಂಗಳಾಗೂ. ಇಬ್ಬರೂ ದಿನಗೂಲಿಗಾಗಿ ದುಡಿಯುತ್ತಿದ್ದೆವು. ನಾನು 'ಮೈಸೂರು ಮಿತ್ರ'ದಲ್ಲಿ. ಅವಳು ಪಿ&ಟಿಯಲ್ಲಿ. ಖಾಯಂ ಕೆಲಸವಿಲ್ಲ. ಮದುವೆ ಆಗುವುದು ಬೇಡವೇ ಬೇಡ ಎಂಬುದು ನಮ್ಮ ನಿಲುವು. ನಮ್ಮ ಸಮಸ್ಯೆ ಅವರಿಗೆ ಅರ್ಥವಾಗಲಿಲ್ಲ.

'ಹೆಂಡತಿಯನ್ನು ಸಾಕಲಿಕ್ಕೆ ದುಡ್ಡು ತಾನೆ ಬೇಕು. ತಿಂಗಳಿಗೆ ಎಷ್ಟು ಬೇಕು ಅಷ್ಟನ್ನು ನಾನು ಪ್ರತೀ ತಿಂಗಳು ಕೊಡುತ್ತೇನೆ. ಪ್ರತೀ ತಿಂಗಳು ನನ್ನನ್ನು ಕೇಳಲು ಅವಮಾನ ಎನಿಸಿದರೆ ಅಷ್ಟು ಬಡ್ಡಿ ಬರುವಷ್ಟು ಹಣವನ್ನು ಬ್ಯಾಂಕ್‌ಗೆ ಡಿಪಾಸಿಟ್ ಮಾಡುತ್ತೇನೆ, ಮದುವೆ ಆಗಲಿ'. ಇದು ಅವರ ವಾದ. ಯಾರೂ ಸೋಲಲಿಲ್ಲ. ಈ ಕಠಿಣ ಸಂದರ್ಭದಲ್ಲಿ ನಮ್ಮ ಮೇಷ್ಟ್ರುಗಳ ಬಣ ತೆಗೆದುಕೊಂಡ ನಿರ್ಧಾರ ಅದರಲ್ಲೂ ರಾಮದಾಸ್ ಅಂದು ಆಡಿದ ಮಾತುಗಳು ಅವರುಗಳನ್ನು ಎಂದೂ ಗೌರವಿಸುವಂತೆ, ಪ್ರೀತಿಸುತ್ತಲೇ ಇರುವಂತೆ ಮಾಡಿದೆ.

ತಬ್ಬಲಿಯಾಗಿ ನಿಂತ ನನಗೆ, ಮಂಗಳಾಗೆ ಆಶ್ರಯದ, ನೆರವಿನ ಭರವಸೆಯನ್ನು ಹೃತ್ಪೂರ್ವಕವಾಗಿ ನೀಡಲು ಎಲ್ಲರೂ ಸಿದ್ಧರಾದರು, ಪ್ರೀತಿಯ ವರ್ಷವನ್ನೇ ನಮ್ಮ ಮೇಲೆ ಸುರಿದರು. ಇಂತಹ ಮೇಷ್ಟ್ರುಗಳನ್ನು ಪಡೆದ ನಾನು ಭಾಗ್ಯಶಾಲಿ ಅಲ್ಲವೆ?

ಅವರೊಳಗಿನ ತಾಯ್ತನವನ್ನು ಜನ ಗುರುತಿಸಿದ್ದರು. ಅವರು ಸಿಟ್ಟು ಮಾಡಿಕೊಂಡರೂ ಅದು ನಮ್ಮ ಮೇಲಿನ ಪ್ರೀತಿ ಎಂದು ಅರ್ಥ ಮಾಡಿಕೊಂಡರು. ತಪ್ಪು ಮಾಡಿ ಅವರಿಂದ ಬೈಸಿಕೊಳ್ಳುವುದರಲ್ಲಿ ರೋಮಾಂಚನ ಅನುಭವಿಸಿದರು.

'ಖಂಡಿತವಾದಿ ಲೋಕ ವಿರೋಧಿ' ಎನ್ನುವ ಗಾದೆ ಮಾತನ್ನು ಅವರ ಸಾವಿನ ದಿನ ಸೇರಿದ್ದ ಜನಸಾಗರ ನಿಜ ಮಾಡಿತು.

ದಬ್ಬಾಳಿಕೆ, ಅನ್ಯಾಯ ಕಂಡಾಗಲೆಲ್ಲ ಟೀಕಿಸುತ್ತಲೇ ತಮ್ಮ ವಿರೋಧಿಗಳೂ ಮೆಚ್ಚುವಂತೆ, ಪ್ರೀತಿಸುವಂತೆ ಬದುಕಿದರು ಮೇಷ್ಟ್ರು. ಅವರಂತೆ ಇದ್ದುದು ಅವರು ಮಾತ್ರ.

# ಇಂಥದ್ದಕ್ಕೆಲ್ಲಾ ದಮ್ ಬೇಕು ಕಣಯ್ಯ ದಮ್ಮು

ಎಸ್. ಗಂಗಾಧರಯ್ಯ

ಹಳ್ಳಿಯಿಂದ ಹೋಗಿದ್ದ ನನಗೆ ಮೈಸೂರಿನ ಮಹಾರಾಜ ಕಾಲೇಜಿನ ವಾತಾವರಣ, ಸದಾ ತ್ರೀ ಪೀಸ್ ಸೂಟಿನಲ್ಲಿ ಬಿಗುವಾಗಿರುತ್ತಿದ್ದ ಅಲ್ಲಿನ ಪ್ರಿನ್ಸಿಪಾಲರು, ತರಗತಿಗಳಲ್ಲಷ್ಟೇ ಮೇಸ್ಟ್ರುಗಳಂತೆ ಕಾಣುತ್ತಿದ್ದ ಬಹುತೇಕ ಮೇಸ್ಟ್ರುಗಳ ನಡುವೆ, ದಡಿಗಂಟಲಿನ, ನಗುಮೊಗದ, ತರಗತಿಗಳಾಚೆಗೂ ವಿದ್ಯಾರ್ಥಿಗಳ ಜೊತೆ ಸಲೀಸಾಗಿ ಬೆರೆಯುತ್ತಿದ್ದ ರಾಮದಾಸ್ ಅಪ್ಪಟ ಹಳ್ಳಿ ಮುಕ್ಕನಂತೆ ಒರಟೊರಟಾಗಿ ಕಾಣುತ್ತಿದ್ದರು. ಆದರೆ ಅವರ ಸಂವಾದ ಮೆದುಳಿನಿಂದ ನಡೆಯದೆ ನೇರ ಎದೆಯಿಂದಾಗುತ್ತಿತ್ತು. ಹಾಗಾಗಿ ತರಗತಿಗಳಲ್ಲಿ ಅನ್ಯಾಯ, ಅಸಮಾನತೆಯ ಬಗ್ಗೆ ಮಾತನಾಡುವ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಸ್ಪಂದನ ಕಳಪೆಯಾಗಿದ್ದರೆ, 'ದನ್‌ಗರ್‌ಗಳಾ, ಈ ವಯಸ್ನಲ್ಲೂ ಗುಬಾಲ್‌ಗಳ ಥರ ರಗ್ಗು ಕವುಚಿಕೊಂಡು ಕೂತೋರಂಗೆ ಕೂತಿದ್ದೀರಲ್ರೀ' ಅಂತ ಸ್ಫೋಟಿಸಿಬಿಡುತ್ತಿದ್ದರು. ಅದೇ ರೀತಿ ಕೆಲವೊಮ್ಮೆ 'ಅಲ್ರೀ ನಿಮ್ಮ ಸ್ಟ್ರೈಕು ಮಹಾರಾಣಿ ಕಾಲೇಜ್‌ನಿಂದ ಮುಂದಕ್ಕೆ ಯಾವತ್ತೂ ಹೋಗೇ ಇಲ್ವಲ್ರಿ, ಅಲ್ಲೀವರ್ಗೂ ಇರೋ ಹುಮ್ಮಸ್ಸು ಅಲ್ಲಿಗೋಗ್ತಿದ್ದಂಗೆ ಠುಸ್ ಅಂದು ಬಿಡುತ್ತಲ್ರಿ' ಅಂತ ತಮಾಷೆ ಮಾಡುತ್ತಿದ್ದರು.

ನಾನು ಮತ್ತು ಅಬ್ದುಲ್ ರಶೀದ್ ಸೇರಿಕೊಂಡು ಮಹಾರಾಜ ಕಾಲೇಜಿನಲ್ಲಿ 'ಅರಿವು' ಅನ್ನೋ ಗೋಡೆ ಪತ್ರಿಕೆ ಮಾಡುತ್ತಿದ್ದೆವು. ವಿದ್ಯಾರ್ಥಿ ಮಿತ್ರರುಗಳಿಂದ ಲೇಖನಗಳನ್ನು ಬರೆಸಿ, ನಂತರ ಅವುಗಳನ್ನೆಲ್ಲಾ ಕೈಯಲ್ಲಿ ಬರೆದುಕೊಂಡು ಬಂದು ಬೋರ್ಡೊಂದಕ್ಕೆ ಅಂಟಿಸುತ್ತಿದ್ದೆವು. ಒಂದು ದಿನ ಬೆಳಿಗ್ಗೆ ಬರೆದು ತಂದಿದ್ದ ಹಾಳೆಗಳನ್ನು ಬೋರ್ಡಿಗೆ ಅಂಟಿಸುತ್ತಿದ್ದೆ. ಅಂದು ರಾಮದಾಸ್ ಅವರು ಕೂಡಾ ಕಾಲೇಜಿಗೆ ಬೇಗ ಬಂದರು. ಬರುತ್ತಲೇ ನನ್ನನ್ನು ನೋಡಿ, 'ಏನಪ್ಪಾ ಏನ್ಮಾಡ್ತಾ ಇದೀಯಾ'ಅಂತ ನನ್ನ ಹತ್ತಿರಕ್ಕೇ ಬಂದು, ನನ್ನ ಕೈಯೆಲ್ಲಾ ಗಮ್ಮಾಗಿದ್ದನ್ನು ಕಂಡು, ಬಗಲಲ್ಲಿದ್ದ ಬ್ಯಾಗನ್ನು ಅಲ್ಲೇ ಕಾರಿಡಾರ್‌ನಲ್ಲಿಟ್ಟು ಅದರ ಮೇಲೆ ಹೆಲ್ಮೆಟ್ ಮಡಗಿ,'ಎಲ್ಲಿ

ಕೊಡಿಲ್ಲ, ಹಿಂಗಾ ಅಂಟಿಸೋದು' ಅಂತ ನನ್ನ ಕೈಯಲ್ಲಿದ್ದ ಹಾಳೆಯನ್ನು ಬೋರ್ಡಿಗೆ ಅಂಟಿಸಿ, ಹಾಗೆಯೇ ಕೊಂಚ ಹೊತ್ತು ಅದನ್ನು ದಿಟ್ಟಿಸಿದರು. 'ಯಾರ್ರೀ ಇದನ್ನ ಬರ್ದೋರು?' ಅಂದರು. ನಾನೇ ಅಂತ ಹೇಳಿದ ಮೇಲೆ ಪೂರಾ ಓದಿದರು; ಅದು ಎಸ್. ಎಲ್. ಭೈರಪ್ಪನವರ 'ಗೃಹಭಂಗ'ಕಾದಂಬರಿಯನ್ನು ಕುರಿತ ಲೇಖನವಾಗಿತ್ತು. ಗೃಹಭಂಗ ನಮಗಾಗ ಪಠ್ಯವಾಗಿತ್ತು. 'ಈ ಚೆಡ್ಡಿಗಳಿಗೆ ಹಿಂಗೆಲ್ಲಾ ಸಾಫ್ಟ್ ಆಗಿ ಹೇಳಿದ್ರೆ ಅರ್ಥ ಆಗೊಲ್ಲ, ಸರಿಯಾಗಿ ಇಕ್ಕಬೇಕು' ಅಂದರು. ಆರ್‌ಎಸ್‌ಎಸ್ ಆಲೋಚನೆಯವರನ್ನ ಚೆಡ್ಡಿಗಳು ಅಂತ ಕರೆಯುತ್ತಾರೆ ಅಂತ ನನಗೆ ಅವತ್ತು ಗೊತ್ತಾಯ್ತು.

ಸೆಕೆಂಡ್ ಇಯರ್ ಡಿಗ್ರಿಗೆ ಬರುವ ಹೊತ್ತಿಗಾಗಲೇ ನನಗೆ ಮತ್ತು ರಶೀದನಿಗೆ ಸಾಕೇತ್‌ರಾಜನ್ ಗೆಳೆಯನಾಗಿದ್ದ. ನನಗಾಗಲಿ ರಶೀದನಿಗಾಗಲಿ ಆ ಹೊತ್ತಲ್ಲಿ ನಕ್ಸಲಿಸಂ ಅಂದರೆ ಏನು ಅಂತ ಗೊತ್ತಿರಲಿಲ್ಲ. ಸಾಕೇತ್ ಕೂಡಾ ಎಂದೂ ಆ ಬಗ್ಗೆ ಮಾತಾಡಿದವನಲ್ಲ. ಸಣ್ಣಪುಟ್ಟ ಸಭೆ, ಪ್ರತಿಭಟನೆಗಳಲ್ಲಿ ನಮ್ಮೊಂದಿಗಿರುತ್ತಿದ್ದ ಸಾಕೇತ್ ಸರಳತೆ, ಆತ್ಮೀಯತೆ ಮತ್ತು ಮುಗುಳ್ನಗೆಗಳಿಂದಾಗಿ ನಮ್ಮನ್ನು ಆವರಿಸಿಕೊಂಡಂತೆ ಮೋಡಿ ಮಾಡಿದ್ದ. ಆದರೆ, ನಕ್ಸಲ್ ಗುಂಪಿನಲ್ಲಿ ಸಾಕೇತ್ ಒಬ್ಬ ಪ್ರಮುಖ ವ್ಯಕ್ತಿಯೆಂದೂ, ಅವನಿಗಾಗಿ ಪೊಲೀಸರಾಗಲೇ ಹುಡುಕಾಟ ಆರಂಭಿಸಿದ್ದಾರೆಂದು ಹೇಳಿದವರು ರಾಮದಾಸ್. ಒಂದು ದಿನ ಕ್ಲಾಸ್ ಮುಗಿಸಿಕೊಂಡು ಹೋಗುತ್ತಿದ್ದ ನಮ್ಮನ್ನು ಕರೆದ ರಾಮದಾಸ್, 'ಅಲ್ರಿ ನಿಮಗೇನಾದ್ರೂ ಬುದ್ಧಿಗಿದ್ಧಿ ಇದೆಯೇನ್ರಿ ಹೋಗಿ ಹೋಗಿ ನಕ್ಸಲಿಸಂಗೆ ಸಪೋರ್ಟ್ ಮಾಡ್ತಿದೀರಲ್ರೀ ಈ ಥರದವರಿಂದ ಕ್ರಾಂತಿ ಆಗುತ್ತೆ, ಬದಲಾವಣೆ ಆಗುತ್ತೆ ಅನ್ನೋದು ಭ್ರಮೆ ಕಣ್ರಿ' ಅಂತ ಏಕಾಏಕಿ ರೇಗಿಬಿಟ್ಟರು. ಗಾಂಧಿಯ ತತ್ವಗಳಲ್ಲಿ ಅಪಾರ ನಂಬಿಕೆ ಇಟ್ಟುಕೊಂಡಿದ್ದ, ಅಹಿಂಸೆ ಮತ್ತು ಚಳವಳಿಗಳ ಮೂಲಕ ಬದಲಾವಣೆಗಳನ್ನು ಬಯಸುತ್ತಿದ್ದ ರಾಮದಾಸ್‌ಗೆ ಇಂಥ ನಡವಳಿಕೆಗಳು ಅತಿರೇಕದಂತೆ ಕಾಣುತ್ತಿದ್ದವು.

ಅದೇ ವರ್ಷ ಸರ್ಕಾರ ವಿಶ್ವ ಕನ್ನಡ ಸಮ್ಮೇಳನ ನಡೆಸಿತು. ಅದನ್ನು ವಿರೋಧಿಸಿದ ನೂರಾರು ಜನರನ್ನು ಸಮ್ಮೇಳನದ ಹಿಂದಿನ ದಿನವೇ ಅರೆಸ್ಟ್ ಮಾಡಿಬಿಟ್ಟರು. ಹಾಗೆ ಅರೆಸ್ಟ್ ಆದವರನ್ನು ಎರಡು ಗುಂಪುಗಳನ್ನಾಗಿ ಮಾಡಿ ಒಂದೊಂದು ಗುಂಪನ್ನೂ ಒಂದೊಂದು ಕಡೆ ರವಾನಿಸಿದರು. ಸಾಕೇತ್‌ರಾಜನ್ ಒಳಗೊಂಡಂತೆ ನಾವು ಕೆಲವು ಗೆಳೆಯರು ರಾಮದಾಸ್ ಗುಂಪಿನಲ್ಲಿದ್ದೆವು. ಮೈಸೂರಿನ ಸೆಂಟ್ರಲ್ ಜೈಲಿನಲ್ಲಿ ನಾಲ್ಕು ದಿನ ಇದ್ದ ನಮ್ಮ ಗುಂಪಿಗೆ ಐದನೇ ದಿನಕ್ಕೆ ಬೇಲ್ ಸಿಕ್ಕಿತು. ಇನ್ನೇನು ಸಂಜೆ ಜೈಲಿನಿಂದ ಹೊರಡಬೇಕು ಅನ್ನುವಷ್ಟರಲ್ಲಿ ಸಾಕೇತ್‌ನನ್ನು ಮತ್ತೆ ಅರೆಸ್ಟ್ ಮಾಡಲು ಪೊಲೀಸರು ಜೈಲಿನ ಬಾಗಿಲಲ್ಲೇ ಹೊಂಚು ಹಾಕುತ್ತಿದ್ದಾರೆಂಬ ಸುದ್ದಿ ಅದು ಹೇಗೋ ರಾಮದಾಸ್ ಕಿವಿಗೆ ಬಿತ್ತು. 'ಸಾಕೇತ್‌ನನ್ನು ಅರೆಸ್ಟ್ ಮಾಡೋದಕ್ಕೆ ನಾವು ಬಿಡೋದಿಲ್ಲ. ಅವನೀಗ ಅರೆಸ್ಟ್ ಆಗಿರೋದು ಸರಿಯಾದ ಉದ್ದೇಶಕ್ಕಾಗಿ : ಇದು ಡೆಮೋಕ್ರಸಿ ಕಣ್ರಿ, ಬೇಕಾಬಿಟ್ಟಿ ಮಾಡೋಕೆ ಕಾನೂನು ಯಾರಪ್ಪನ ಮನೇದೂ ಅಲ್ಲ, ಅವನನ್ನೇನಾದ್ರೂ ಅರೆಸ್ಟ್ ಮಾಡಿದ್ರೆ ಆದ್ರೆ, ಸಾವಿರಾರು ಜನ ನಿಮ್ಮ ಆಫೀಸಿನ ಎದುರು ಧರಣಿ ಕೂರ್ತೀವಿ'ಅಂತ

ಖುದ್ದು ಎಸ್ಪಿಗೇ ಧಮಕಿ ಹಾಕಿದರು ರಾಮದಾಸ್. ಕಕ್ಕಾಬಿಕ್ಕಿಯಾದ ಎಸ್ಪಿ ಸಾಕೇತ್‌ನನ್ನು ಅರೆಸ್ಟ್ ಮಾಡುವ ವಿಚಾರವನ್ನು ಕೈಬಿಡಬೇಕಾಯ್ತು.

ನನ್ನ ಮತ್ತೊಬ್ಬ ಗೆಳೆಯ ಕೇಶವಪ್ರಸಾದ್ ಮಲೆಯಾಳಿ ಹುಡುಗಿಯೊಬ್ಬಳನ್ನು ರಾಮದಾಸ್ ನೇತೃತ್ವದಲ್ಲಿ ರಿಜಿಸ್ಟರ್ಡ್ ಮದುವೆ ಮಾಡಿಕೊಂಡ. ರಿಜಿಸ್ಟ್ರಾರ್ ಆಫೀಸಿನಿಂದ ಬಂದ ಮೇಲೆ ನನ್ನನ್ನು ಮತ್ತು ಆ ಹುಡುಗಿಯನ್ನು ಬಿಟ್ಟು ರಾಮದಾಸ್ ಮತ್ತು ಪ್ರಸಾದ್ ಗುಂಪು ಗುಂಡಿನ ಪಾರ್ಟಿಯ ಏರ್ಪಾಡಿಗಾಗಿ ಆಚೆ ಹೊರಟಿತು. ಅವರು ಅತ್ತ ಹೋದ ಕೊಂಚ ಹೊತ್ತಿಗೆ ಹೇಗೋ ಸುದ್ದಿ ತಿಳಿದುಕೊಂಡ ಹುಡುಗಿಯ ಕಡೆಯವರು ಮನೆಯನ್ನು ಹುಡುಕಿಕೊಂಡು ಬಂದೇ ಬಿಟ್ಟರು. ಬಂದವರೇ ಹುಡುಗಿಯ ಕಡೆಯ ಹಲವು ಹೆಂಗಸರು ಹುಡುಗಿಯನ್ನು ಬಾಯಿಗೆ ಬಂದಂತೆ ಬೈಯುತ್ತಾ ತಳ್ಳಾಡಹತ್ತಿದ್ದರು. ಅವರು ಮಲೆಯಾಳಂನಲ್ಲಿ ಬೈಯ್ಯುತ್ತಿದ್ದುದರಿಂದ ಏನು ಬೈಯ್ಯುತ್ತಿದಾರೆ ಎಂಬುದು ನನಗೆ ಅರ್ಥವಾಗದಿದ್ದರೂ ಅವರ ಮುಖಭಾವ, ವಿಕಾರ ರೂಪಗಳಿಂದಾಗಿ ಪರಿಸ್ಥಿತಿಯ ಗಂಭೀರತೆ ಅರ್ಥವಾಗುತ್ತಿತ್ತು. ಅಲ್ಲದೆ ಅವರಲ್ಲಿ ಕೆಲವರು ನನ್ನನ್ನೇ ಕೆಕ್ಕರಿಸಿಕೊಂಡು ನೋಡುತ್ತಿದ್ದುದರಿಂದ ನನಗೆ ಗಾಬರಿಯಾಗಿ ಅಳುವೇ ಬಂದು ಬಿಟ್ಟಿತ್ತು. ಇದೆಲ್ಲಾ ನಡೆಯುತ್ತಿದ್ದಾಗಲೇ ಆಚೆ ಹೋಗಿದ್ದ ರಾಮದಾಸ್ ಗುಂಪು, ಗುಂಡಿನ ಪಾರ್ಟಿಯ ಸಕಲ ಪರಿಕರಗಳನ್ನೂ ತೆಕ್ಕೆಗೆ ಹಾಕಿಕೊಂಡು ಪ್ರತ್ಯಕ್ಷವಾಯ್ತು. ನಡೆದಿದ್ದನ್ನೆಲ್ಲಾ ನಾನು ಹೇಳದಿದ್ದರೂ ಸೂಕ್ಷ್ಮವಾಗಿ ಗಮನಿಸಿದ ರಾಮದಾಸ್ ನನ್ನತ್ತ ಬಂದು, 'ಇಂಥದ್ದಕ್ಕೆಲ್ಲಾ ದಮ್ ಬೇಕು ಕಣಯ್ಯ ದಮ್ಮು. ಇಷ್ಟಕ್ಕೆಲ್ಲಾ ಹಿಂಗೆ ಹೆದರಿಬಿಟ್ಟರೆ ಹೆಂಗೆ' ಅನ್ನುತ್ತಾ ನನ್ನ ಹೆಗಲ ಮೇಲೆ ಕೈಯಿಟ್ಟು ಫಕ್ಕನೆ ನಕ್ಕುಬಿಟ್ಟರು. ಅವರ ಆ ನಗು ಕೆಲವು ಆ ಮಲೆಯಾಳಿ ಹೆಂಗಸರ ಮುಖದಲ್ಲೂ ಆಡಿದ್ದ ಕಂಡು ನನಗೆ ಕೊಂಚ ನಿಸೂರಾಯ್ತು.

ಇಂಥ ರಾಮದಾಸ್‌ರನ್ನು ನಾನು ಕಟ್ಟಕಡೆಗೆ ನೋಡಿದ್ದು, ಕನ್ನಡ ಟೈಮ್ಸ್ ರೂಪಿಸಿದ್ದ ತೇಜಸ್ವಿ ವಿಶೇಷ ಸಂಚಿಕೆಯ ಬಿಡುಗಡೆ ಸಮಾರಂಭದಲ್ಲಿ. ಜೀವದ ಗೆಳೆಯನ ಅಗಲಿಕೆಯಿಂದ ಕುಗ್ಗಿಹೋಗಿದ್ದ ರಾಮದಾಸ್ ಅಂದು ಗೆಳೆಯನ ನೆನಪುಗಳ ಆಳಕ್ಕೆ ಇಳಿಯುತ್ತಾ ಇಳಿಯುತ್ತಾ ಮಗುವಿನಂತೆ ಅತ್ತುಬಿಟ್ಟರು. ಅಂದು ಅದೇ ಸಮಾರಂಭದಲ್ಲಿ 'ತೇಜಸ್ವಿಯವರಂಥ ಸಲೀಸಾದ ಸಾವು ನನಗೂ ಬರಲಿ'ಅಂತ ಅಂದ ದೇವನೂರು ಮಹಾದೇವರಿಗೆ 'ಯಾಕಪ್ಪಾ ನಿಂಗಿಷ್ಟು ಅರ್ಜೆಂಟು? ನೀನು ಮಾಡಬೇಕಾದ್ದು ಇನ್ನೂ ತುಂಬಾ ಇದೆ', ಎಂದು ಹೇಳಿದಂತೆ ಮಹಾದೇವರನ್ನು ಓವರ್‌ಟೇಕ್ ಮಾಡಿಕೊಂಡು ಗೆಳೆಯನ ದಾರಿ ಹಿಡಿದು ಹೋಗಿದ್ದಾರೆ.

'ಇದು ನನ್ನ ಕಡೆಯ ಕಣ್ಣೀರು. ಇನ್ನು ಸತ್ತರೂ ಅಳಲು ನನ್ನ ಕಣ್ಣುಗಳಲ್ಲಿ ನೀರೇ ಇರುವುದಿಲ್ಲ', ತೇಜಸ್ವಿಯ ಸಾವಿನ ಸಂದರ್ಭದಲ್ಲಿ ಹೀಗೆ ದುಃಖಿಸಿದ ರಾಮದಾಸ್, ತಮ್ಮ ಕಣ್ಣೀರನ್ನು ಕಳೆದುಕೊಂಡು ನಮ್ಮಂಥವರ ಕಣ್ಣುಗಳಲ್ಲಿ ನೀರಿಟ್ಟು ಹೋಗಿದ್ದಾರೆ.

# ರಾಮದಾಸ್‌ಎಂಬ 'ಕೈಮರ'ವ ನೆನೆದು...

**ಪ್ರಸಾದ್ ಕುಂದೂರು**

ನಾವೆಲ್ಲ ಆಗತಾನೇ ಮಹಾರಾಜ ಕಾಲೇಜಿಗೆ ಸೇರಿದ್ದ ದಿನಗಳು. ಆ ಕಾಲೇಜಿನ ಇತಿಹಾಸ, ಅದರ ಭವ್ಯ ಕಟ್ಟಡ, ಬಾಗಿಲಿನಂಥ ದೊಡ್ಡ ದೊಡ್ಡ ಕಿಟಕಿಗಳು, ಪ್ರಿನ್ಸಿಪಾಲರ ಕೊಠಡಿ, ಅಧ್ಯಾಪಕರ ಕೊಠಡಿ, ಉದ್ದುದ್ದ ಕಾರಿಡಾರುಗಳು. ಇವೆಲ್ಲ ನಮಗೆ ಬೆರಗು, ಹೆದರಿಕೆ, ರೋಮಾಂಚನ ಹುಟ್ಟಿಸುತ್ತಿದ್ದವು. ಇಷ್ಟೇ ಹೆದರಿಕೆ, ರೋಮಾಂಚನ ಹುಟ್ಟಿಸುತ್ತಿದ್ದ ಮತ್ತೊಬ್ಬರೆಂದರೆ ರಾಮದಾಸ್ ಮೇಷ್ಟ್ರು. ಅಷ್ಟು ಹೊತ್ತಿಗಾಗಲೇ 'ಲಂಕೇಶ್ ಪತ್ರಿಕೆ'ಯ ದಾಸರಾಗಿದ್ದ ನಮಗೆಲ್ಲಾ ರಾಮದಾಸ್ ಮೇಷ್ಟ್ರೆಂದರೆ ಹೆಮ್ಮೆ, ಭಯ. ಅವರ ಗಂಭೀರ ನಿಲುವು, ಎದೆ ಉಬ್ಬಿಸಿ ನಡೆಯುವ ಠೀವಿ, ಪಾಠ ಮಾಡುತ್ತಿದ್ದ ರೀತಿಯೇ ನಮ್ಮಲ್ಲಿ ರೋಮಾಂಚನ ಹುಟ್ಟಿಸುತ್ತಿತ್ತು. ನಮಗೆಲ್ಲ ಅವರು ಒಂಥರಾ 'ಹೀರೋ'ನಂತೆ ಕಾಣುತ್ತಿದ್ದರು.

ಕಾಲೇಜಿಗೆ ಸೇರುವುದಷ್ಟೇ ನಮ್ಮ ಕೆಲಸ, ಪಾಸು ಮಾಡಿಸುವುದು ಮೇಷ್ಟ್ರರ ಕೆಲಸ ಅನ್ನುವಂತೆ ನಾವು ನಾಟಕ, ಸಂವಾದ ಅಂದುಕೊಂಡು ಹುಚ್ಚಾಪಟ್ಟೆ ತಿರುಗುತ್ತಿದ್ದ ಸಂದರ್ಭಗಳಲ್ಲಿ 'ಹಿಂಗೇ ಆದ್ರೆ ದನ ಕಾಯ್ಬೇಕಾಗುತ್ತೆ ಕಣ್ರೀ'ಎಂದು ಉಗಿದು ಬುದ್ಧಿವಾದ ಹೇಳಿದವರು ರಾಮದಾಸ್ ಮೇಷ್ಟ್ರು. 'ಲಂಕೇಶ್ ಪತ್ರಿಕೆ' ಓದಿಕೊಂಡು, ನಾವು ಏನ್ ಮಾತಾಡಿದರೂ ಅದೇ ವೈಚಾರಿಕತೆ'ಅನ್ನುವ ನಮ್ಮ ಭಯಂಕರ ಭ್ರಮೆಗಳನ್ನು ಮೇಷ್ಟ್ರು ಚೆನ್ನಾಗಿ ಒಡೆದರು. ಆದರೆ, ನಮ್ಮೆಲ್ಲರ ಎದೆಗಳಲ್ಲಿ ಅದೆಂಥದೋ ಒಂದು ಕಿಡಿಯನ್ನು ಮೇಷ್ಟ್ರು ಹಚ್ಚಿಬಿಟ್ಟರು ಅಂತ ಈಗಲು ಅನ್ನಿಸುತ್ತೆ.

ಮುಂದೆ ಡಿಗ್ರಿ ಮಾಡಿದ ನಂತರವೂ ಮೇಷ್ಟ್ರರೊಂದಿಗಿನ ಈ ಸಂಬಂಧ ಹಾಗೇ ಮುಂದುವರೆದು, ಗಂಗೋತ್ರಿಗೆ ಹೋದ ನಂತರ ಇನ್ನೂ ಗಟ್ಟಿಯಾಯಿತು. ನಾಟಕ, ಹಾಡು, ತಳವಳಿ ಹೀಗೆ ನಾವು ಸಂಘಟನೆಗಳನ್ನು ಕಟ್ಟಿಕೊಂಡು ಸಾಂಸ್ಕೃತಿಕವಾದ ಹೋರಾಟದ ದನಿಗಳನ್ನು

ಜೀವಂತವಾಗಿಡಲು ರಾಮದಾಸ್ ಮೇಷ್ಟ್ರು ಬೆನ್ನೆಲುಬಾಗಿ, ಪ್ರೇರಣೆಯಾಗಿ ನಿಂತಿದ್ದರು. 'ಚಳವಳಿಗಳಿಗೆ ಸಾಂಸ್ಕೃತಿಕ ಆಯಾಮ ಇಲ್ಲದೇ ಹೋದ್ರೆ ಅವು ಪೂರ್ಣವಾಗೊಲ್ಲ ಕಣ್ರೀ' ಅಂತ ಯಾವಾಗಲೂ ಹೇಳ್ತಾ ಇದ್ರು. ಗಂಗೋತ್ರಿಯಲ್ಲಿ 'ಜನಮನ'ಸಂಘಟನೆ ಕಟ್ಟಿದಾಗ ಮೊದಲು ಪ್ರೋತ್ಸಾಹಿಸಿ, ಬೆನ್ನಿಗೆ ನಿಂತವರು ರಾಮದಾಸ್ ಮೇಷ್ಟ್ರೇ. ನಮ್ಮ ಎಲ್ಲ ಕಾರ್ಯಕ್ರಮಗಳಿಗೆ ಸಬೂಬು ಹೇಳದೆ, ತಪ್ಪಿಸಿಕೊಳ್ಳದೇ ಬರ್‍ತಾ ಇದ್ರು. ನಮ್ಮಲ್ಲಿ ಉತ್ಸಾಹ ತುಂಬ್ತಾ ಇದ್ದರು. ನಮ್ಮಂತಹ ಅದೆಷ್ಟೋ ಜನರಿಗೆ ಆತ್ಮವಿಶ್ವಾಸ ತುಂಬಿದವರು ಅವರು.

ಅವರು ನಮಗೆಲ್ಲರಿಗೂ ಒಂಥರಾ 'ಕೈಮರ'ದ ಥರಾ ಇದ್ರು. ನಾಲ್ಕು ರಸ್ತೆ ಕೂಡೋ ಜಾಗದಲ್ಲಿ ರಸ್ತೆ ಮಧ್ಯದಲ್ಲಿ ಇರೋ ಕೈಮರದ ರೀತಿ, ಗೊಂದಲದಲ್ಲಿ ಇರುವವರಿಗೆ, ಪ್ರಾಮಾಣಿಕವಾಗಿ, ನೇರವಾಗಿ, ದಟ್ಟವಾಗಿ, ಸಹಜವಾಗಿ ದಾರಿ ತೋರಿಸೋ ಕೈಮರ ಅವರು. ದಾರಿ ತೋರಿಸೋ ಅನೇಕ ಜನ ಇದ್ದರೂ ರಾಮದಾಸ್‌ರವರಂತೆ ನಿಷ್ಪಕ್ಷಪಾತವಾಗಿ, ಪ್ರಾಮಾಣಿಕವಾಗಿ, ನೇರವಾಗಿರೋರು ಬಾಳ ಕಡಿಮೆ. ಲಂಕೇಶರ ಪ್ರಗತಿರಂಗದ ಬೆನ್ನಿಗೆ ಬಿದ್ದು ನಾವೆಲ್ಲ ಭಯಂಕರವಾದ ಭ್ರಮೆಗಳಲ್ಲಿದ್ದಾಗಲೂ ಆಗಾಗ, 'ಇವೆಲ್ಲ ನಡೆಯೋದು, ನಡೆಸೋದು ಕಷ್ಟ, ನಾಳೇನೇ ಕ್ರಾಂತಿ ಆಗಲ್ಲ. ಆದರೆ, ಹೋರಾಟದ ದನಿ ಅಡಗಬಾರದು' ಅಂತ ಬುದ್ಧಿ ಹೇಳಿ ಎಚ್ಚರಿಸುತ್ತಾ ಇದ್ದರು. ರಾಮದಾಸ್‌ರಿಗೆ ಚಳವಳಿಯೇ ಒಂದು ವಿಜೃಂಭಣೆ. ಅವರಿಗೆ ಚಳವಳಿ ಯಾವಾಗಲೂ ಗಟ್ಟಿ ದನಿಯಾಗಿಯೇ ಇರಬೇಕು ಅನ್ನುವ ಛಲ-ಹಠ. ಇಷ್ಟೆಲ್ಲ ನಿಷ್ಠುರವಾದಿ, ಹಠವಾದಿಯಂತೆ ಕಾಣುವ ರಾಮದಾಸರೊಳಗೆ ಅಗಾಧವಾದ ಪ್ರೀತಿ, ಅಂತಃಕರಣ ಇತ್ತು. 'ಮೊದಲು ವೈಯಕ್ತಿಕವಾದ ಬದುಕು ಕಟ್ಟಿಕೊಳ್ಳಿ. ಅದನ್ನ ಮರೀಬೇಡಿ' ಅಂತ ನಮಗೆ ಮೊದಲು ಹೇಳಿದವರು ಇವರೇ. ಆಮೇಲೆ ಗೆಳೆಯರೆಲ್ಲ ಸೇರಿಕೊಂಡು 'ನಿರಂತರ'ಪ್ರಾರಂಭಿಸಿದಾಗಲೂ ಮತ್ತೆ ಕೈಮರದಂತೆ ಬೆನ್ನಿಗೆ ನಿಂತವರು ಇವರೇ. 'ಇದನ್ನು ತುಂಬ ವ್ಯಾವಹಾರಿಕವಾಗಿ ನಡೆಸಿ, ಲೆಕ್ಕಾಚಾರ ತಪ್ಪಬೇಡಿ. ಹಿಂದೆ ಆಂದೋಲನ ಇತ್ತು. ಅಲ್ಲಿ ನಾವೆಲ್ಲ ಸೇರ್‍ತಾ ಇದ್ವಿ. ಈಗ ಅದೇ ಜಾಗದಲ್ಲಿ ನಿರಂತರ ಇದೆ. ನಾವೆಲ್ಲ ಸೇರೋಕೊಂದು ಜಾಗ ಆಯ್ತು ' ಅಂತ ಖುಷಿಪಟ್ಟಿದ್ದರು.

ರಾಮದಾಸ್ ಬರೀ ಹೋರಾಟ, ವೈಚಾರಿಕತೆ ಬಗ್ಗೆ ಮಾತ್ರ ಮಾತಾಡ್ತಾ ಇರಲಿಲ್ಲ. ಅವರ ಜೊತೆ ಮಾತು ಅಂದರೆ ಸಾಹಿತ್ಯ, ರಂಗಭೂಮಿ, ಅವರ ಬಾಲ್ಯಕಾಲ, ತಮಾಷೆ, ನಗು ಎಲ್ಲಾ ಇರ್‍ತಾ ಇತ್ತು. ಮನೆಗೆ ಹೋದರೆ ತಿಂಡಿ, ಟೀ, ಕಾಫಿ, ಬಾಳೆಹಣ್ಣು ಹೀಗೆ ತುಂಬ ಪ್ರೀತಿಯಿಂದ ಉಪಚಾರ ಮಾಡುತ್ತಿದ್ದರು. ಇದನ್ನು ಅವರ ಮನೆಯಲ್ಲಿ ಎಂದಿಗೂ ತಪ್ಪಿಸಲಿಲ್ಲ. ಎಷ್ಟೋ ಸಲ ನಾವೆಲ್ಲ ಟೀ ಕಾಫಿಗೆ ಅಂತಾನೇ ಅವರ ಮನೆಗೆ ಸಬೂಬು ಹೇಳಿಕೊಂಡು ಹೋದದ್ದೂ ಉಂಟು. ಜಾತಿ ಬಿಡಿ, ಜಾತಿ ಬಿಡಿ ಅಂತ ಹೇಳಿದ ಅನೇಕರು ಜಾತಿಯ ಕೋಟೆಯೊಳಗೆ ಸುಭದ್ರವಾಗಿ, ಸಂಭ್ರಮವಾಗಿ ಇರುವ ಸಂದರ್ಭದಲ್ಲಿ, ಆ ಚೌಕಟ್ಟನ್ನು ಧಿಕ್ಕರಿಸಿ, ದಿಟ್ಟವಾಗಿ ನಿಂತು ಯಾವ ಮುಲಾಜನ್ನೂ ತೋರದೇ ನಮಗೆ ದಾರಿ ತೋರಿಸುತ್ತಿದ್ದ ಪ್ರಾಮಾಣಿಕ 'ಕೈಮರ' ಅವರು. ಅವರಿಲ್ಲದೇ ನಿಜವಾಗಿ ನಮ್ಮಂತಹವರಿಗೆ ದಿಕ್ಕು ತೋಚದಂತೆ ಆಗಿದೆ. ನಮ್ಮಂತಹ

ನೂರಾರು ಜನರಿಗೆ ಒಂದು ರೀತಿಯ 'ಅನಾಥತೆ' ಕಾಡುತ್ತಿದೆ. ಅವರು ಯಾವಾಗಲೂ ಕೈಮರದಂತೆ ನಿಂತಿಪ್ಪರು. ರಸ್ತೆಯ ಮಧ್ಯದಲ್ಲಿ, ದೊಡ್ಡದಾಗಿ, ಗಟ್ಟಿಯಾಗಿ. ಯಾಕೆಂದರೆ ಅವರು ಇದ್ದದ್ದೇ ಹಾಗೆ.

## ಅದೆಲ್ಲ ಬ್ಯಾಡ ಕಣ್ರಿ...

ರಾಮದಾಸ್‌ರ ಜೀವನ, ಬದುಕು, ಹೋರಾಟಗಳ ಸಂಘರ್ಷದ ಹಾದಿ ಅಕ್ಷರಗಳಲ್ಲಿ ದಾಖಲೆಯಾಗದೇ ಹೋದದ್ದು ಇವತ್ತಿಗೂ ನಮ್ಮನ್ನು ಕಾಡುತ್ತಿದೆ.

ತಾನು ನಡೆದದ್ದೇ ಹಾದಿ ಎಂಬಂತೆ ಒಂಟಿ ಸಲಗನ ರೀತಿ ಅವರು ನಡೆದು ಹೋದರು. ಸುಮಾರು ಒಂದು ಒಂದೂವರೆ ವರ್ಷಗಳಿಂದಲೂ ನಾವು ಅವರ ಬೆನ್ನುಹತ್ತಿದ್ದೆವು. 'ಸಾರ್ ಹೇಗಾದರೂ ಮಾಡಿ ನಿಮ್ಮ ಜೀವನ ಚರಿತ್ರೆ ದಾಖಲಾಗಬೇಕು'ಅಂತ ದುಂಬಾಲು ಬಿದ್ದಿದ್ದೆವು. ಮೊದಮೊದಲು ಅವರು ಒಪ್ಪಲೇ ಇಲ್ಲ. 'ರೀ ಅದೆಲ್ಲ ಬ್ಯಾಡ ಕಣ್ರೀ, ಅದು ವ್ಯಕ್ತಿ ವೈಭವ ಆಗುತ್ತೆ, ಈ ಅಭಿನಂದನಾ ಗ್ರಂಥ, ಸ್ಮರಣಗ್ರಂಥಗಳು ನನಗೆ ಒಗ್ಗಲ್ಲ 'ಅಂತಾ ಖಡಾಖಂಡಿತವಾಗಿ ನಿರಾಕರಿಸುತ್ತಲೇ ಬಂದರು. ಆದರೂ ನಾವು ಹಟ ಬಿಡಲಿಲ್ಲ. 'ಅದು ವ್ಯಕ್ತಿ ವೈಭವ ಅಲ್ಲ ಬದಲಾಗಿ ನಿಮ್ಮ ಕಾಲಘಟ್ಟದ ಒಂದು ದೊಡ್ಡ ದಾಖಲೆ ಆಗುತ್ತೆ. ಮುಂದಿನವರಿಗೆ ಅದೊಂದು ಪಾಠ ಆಗುತ್ತೆ'ಎಂದು ಒತ್ತಾಯಿಸಿದಾಗ ನಿಧಾನಕ್ಕೆ ಒಪ್ಪಿಕೊಂಡರು. 'ನೀವು ಮಾಡುವುದಾದರೆ ಒಳ್ಳೇದು ಮಾಡಿ, ಆದರೆ, ನನಗೆ ಬರೆಯುವಷ್ಟು ತಾಳ್ಮೆ ಇಲ್ಲ. ನಾನು ಹೇಳ್ತಾ ಹೋಗ್ತೀನಿ, ನೀವು ಬರಕೊಂಡು ಬಿಡಿ'ಅಂದರು. ನಾವು ಒಪ್ಪಿದೆವು. ಆದರೆ, ಅವರ ವೈಯಕ್ತಿಕ ತೊಂದರೆಗಳಿಂದಾಗಿ ಸಂದರ್ಭದ ತೊಂದರೆಯಿಂದಾಗಿ ಆ ಕೆಲಸ ಆಗಲೇ ಇಲ್ಲ. ಇದು ನಮ್ಮನ್ನು ಬಹಳವಾಗಿ ಕಾಡುತ್ತಿರುವ ದುಃಖವಾಗಿಯೇ ಉಳಿದುಬಿಟ್ಟಿದೆ.

# ನಂಬಿದ್ದನ್ನು ಆಡಿದವರು, ಆಡಿದಂತೆ ನಡೆದವರು

ಪರಮೇಶ್ವರ ಗುರುಸ್ವಾಮಿ

ರಾಮದಾಸ್‌ರವರು ನಮಗೆ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಅಲ್ಲಿ ಓದಿದ ಸಾವಿರಾರು ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಅವರ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಭಾವಕ್ಕೆ ಒಳಗಾಗಿದ್ದಾರೆ.

ಐಚ್ಛಿಕ ಅಥವಾ ಎರಡನೆಯ ಭಾಷೆಯ ಕನ್ನಡ ತರಗತಿಯಾಗಲಿ ಪಾಠದೊಂದಿಗೆ ಸಾಮಾಜಿಕ ಅರಿವಿನ ಅಂಶಗಳು ಯಾವಾಗಲೂ ಅವರ ತರಗತಿಗಳಲ್ಲಿ ಇರುತ್ತಿದ್ದುವು. ಅವರ ಪ್ರಗತಿಪರ ಧೋರಣೆಗಳಿಗೆ ತರಗತಿಗಳಲ್ಲೇ ಸನಾತನವಾದಿ ಮನಸ್ಥಿತಿಯ ವಿದ್ಯಾರ್ಥಿಗಳಿಗೆ ಪ್ರತಿಕ್ರಿಯಿಸಿ ಚರ್ಚೆ ಮಾಡಲು ಅವಕಾಶವಿರುತ್ತಿತ್ತು. ಅವರೊಂದಿಗೆ ಜಗಳ ಕಾಯ್ದುಕೊಂಡು ತರಗತಿಯಲ್ಲಿ, ತರಗತಿಯ ಹೊರಗೆ ಚರ್ಚೆ ಮಾಡುತ್ತಿದ್ದ ಸನಾತನಿ ಮನಸ್ಥಿತಿಯ ವಿದ್ಯಾರ್ಥಿಗಳು ಸಹ ಉಪಾಧ್ಯಾಯರಾಗಿ ಅವರನ್ನು ಗೌರವಿಸುತ್ತಿದ್ದರು.

ನಾವಂತೂ ಕೆಲವು ವಿದ್ಯಾರ್ಥಿಗಳು ಅವರ ಬಗ್ಗೆ ಪ್ರೀತಿ, ಗೌರವ, ಅಭಿಮಾನವನ್ನಿಟ್ಟುಕೊಂಡೇ ನಾಟಕದ ತಾಲೀಮು ಇತ್ಯಾದಿ ಪಠ್ಯೇತರ ಚಟುವಟಿಕೆಯ ಸಂದರ್ಭಗಳಲ್ಲಿ ಅವರಿಂದ ಸಿಗರೇಟು ಕೇಳಿ ಪಡೆದು ಸೇದುತ್ತಿದ್ದೆವು. ಎಲ್ಲರನ್ನೂ ಸೈದ್ಧಾಂತಿಕವಾಗಿ ಮತ್ತು ಮಾನವೀಯವಾಗಿ ಅವರು ಸಮಾನವಾಗಿ ಕಾಣುತ್ತಿದ್ದರು.

ಎಲ್ಲವನ್ನೂ ವೈಚಾರಿಕ ನಿಕಷಕ್ಕೆ ಒಡ್ಡಿಯೇ ಪರಿಭಾವಿಸುತ್ತಿದ್ದ ಅವರಿಗೆ ಯಾವುದೂ ಅಸ್ಪಷ್ಟ ಅಥವಾ ಅಗೋಚರ ಎನಿಸುತ್ತಿರಲಿಲ್ಲ. ಯಾವುದರ ಬಗ್ಗೆಯಾದರೂ ಅವರು ಸ್ಪಷ್ಟ ಮತ್ತು ನಿಶ್ಚಿತ ಅಭಿಪ್ರಾಯವನ್ನು ಪ್ರಕಟಿಸುತ್ತಿದ್ದರು. ಅವರ ಉಚ್ಚಾರಣೆ ಹೇಗೆ ಅತ್ಯಂತ ಸ್ಪಷ್ಟವಾಗಿತ್ತೋ ಹಾಗೆಯೇ ಅವರ ವಿಚಾರಗಳು ಸಹ ಸ್ಪಷ್ಟವಾಗಿದ್ದುವು. ನನಗಂತೂ ಅವರು ನಮ್ಮ ಕಾಲದ ಚಾರ್ವಾಕ ಎನಿಸುತ್ತಿದ್ದರು.

ಯಾವುದೇ ಪ್ರಗತಿ ಪರ ಆಂದೋಲನ, ಸಂಘಟನೆ ಅಥವಾ ಹೋರಾಟಗಳಿದ್ದರೆ ಯಾವಾಗಲೂ ತುದಿಗಾಲಲ್ಲಿ ನಿಂತು ನಮ್ಮನ್ನೆಲ್ಲ ಜವಾಬ್ದಾರಿಯುತವಾಗಿ ನಡೆದುಕೊಳ್ಳಲು ಪ್ರೇರೇಪಿಸುತ್ತಿದ್ದರು.

ಆಗ ಮೈಸೂರು ವಿ.ವಿ.ಯ ಕುಲಪತಿಯಾಗಿದ್ದ ಡಿ.ವಿ. ಅರಸು ಆಡಳಿತದ ವಿರುದ್ಧ ನಡೆದ ವಿದ್ಯಾರ್ಥಿ ಚಳವಳಿ ಮರೆಯಲಾಗದ್ದು. ಇಡೀ ಚಳವಳಿ. ವಿದ್ಯಾರ್ಥಿ ಚಳವಳಿಗಳಿಗೆ ಸಹಜವಾದ ಕಲ್ಲು ತೂರಾಟ, ದೊಂಬಿ ಇತ್ಯಾದಿಗಳಿಗೆ ಈಡಾಗದೆ ಕೇವಲ ಶಾಂತಿಯುತವಾಗಿ ಅಹಿಂಸಾತ್ಮಕವಾಗಿ ನಡೆಯಲು ಮುಖ್ಯ ಪ್ರೇರಣೆ ರಾಮದಾಸ್ ರವರು.

ಆ ಸಂದರ್ಭದಲ್ಲಿ ಕ್ರಾಫರ್ಡ್ ಹಾಲ್ ಆವರಣದಲ್ಲಿ ಧರಣಿ ನಿರತ ವಿದ್ಯಾರ್ಥಿಗಳನ್ನು ಸರಿರಾತ್ರಿಯ ನಂತರ ಶಾಲು ಹೊದ್ದುಕೊಂಡು ಮಫ್ಲರ್ ಅಥವಾ ಮಂಕಿ ಕ್ಯಾಪ್ ಹಾಕಿಕೊಂಡು ವಾಕಿಂಗ್ ಬಂದವರಂತೆ ವೇಷ ಮರೆಸಿ ಕೆಲವು ಪ್ರೊಫೆಸರ್‌ಗಳು ಮತ್ತು ಉಪಾಧ್ಯಾಯರು ಚಳವಳಿಯನ್ನು ಪ್ರಚೋದಿಸುತ್ತಿದ್ದರು. ನಂತರ ಅವರಿಗೆ ಅವರದೇ ಆದ ಹಿಡನ್ ಅಜೆಂಡಾಗಳಿದ್ದುವೆಂಬುದು ನಂತರ ತಿಳಿದು ಬಂದ ವಿಷಯ. ಕೆಲವು ವಿದ್ಯಾರ್ಥಿಗಳು ಕುಲಪತಿಯವರ ರಾಜೀನಾಮೆಗೆ ಒತ್ತಾಯಿಸಿ ಆಮರಣಾಂತ ಉಪವಾಸ ಕೂರುತ್ತೇವೆಂದಾಗ ರಾಮದಾಸ್‌ರವರು "ನಿಮಗೆ ನಿಮ್ಮ ಜೀವಕ್ಕಿಂತ ಕುಲಪತಿ ರಾಜೀನಾಮೆ ನೀಡುವುದು ಮುಖ್ಯವೆನಿಸಿದರೆ ಮಾತ್ರ ಆಮರಣಾಂತ ಉಪವಾಸಕ್ಕೆ ಕೂರಿ. ಇಲ್ಲದಿದ್ದರೆ ಕೂರಬೇಡಿ" ಎಂದು ಹೇಳಿದ್ದರು.

ಇದು ರಾಮದಾಸ್. ನಂಬಿದ್ದನ್ನು ಆಡಿದವರು. ಆಡಿದಂತೆ ನಡೆದವರು. ಅವರು ನಡೆದದ್ದು, ಬದುಕಿದ್ದು ನಮ್ಮಂಥ ಬಹಳ ಜನರಲ್ಲಿ ಅಲ್ಪಸ್ವಲ್ಪವಾದರೂ ಇನ್ನೂ ಇದೆ. ಅದೇ ನಮ್ಮ ಸಮಾಧಾನ.

# ಮುಲಾಜಿಲ್ಲದ ಎದೆಗಾರಿಕೆ

**ಈ. ಧನಂಜಯ ಎಲಿಯೂರು**

ಪ್ರೊ.ಕೆ. ರಾಮದಾಸ್ ಅವರಿಗೆ ತರಗತಿಯಾಚೆಗಿನ ನಿಕಟವರ್ತಿಯಾಗಿದ್ದ ಅನೇಕ ಶಿಷ್ಯರಲ್ಲಿ ನಾನೂ ಒಬ್ಬ. ೧೯೬೩ರಲ್ಲಿ ನಾನು ಮೈಸೂರಿಗೆ ಬಂದೆ. ಮಹಾರಾಜ ಕಾಲೇಜಿನ ಇತಿಹಾಸದ ಉಪನ್ಯಾಸಕರಾದ ಡಾ. ನಿರ್ಮಲರಾಜು ಅವರು ರಾಮದಾಸ್ ಮೇಷ್ಟ್ರರಿಗೆ ನನ್ನ ಪರಿಚಯ ಮಾಡಿಕೊಟ್ಟರು. ಅಲ್ಲಿಂದ ಮಾನವ ಮಂಟಪದ ವಿವಾಹಗಳಲ್ಲಿ ಭಾಗವಹಿಸುವುದರ ಮುಖಾಂತರ ನಾನು ರಾಮದಾಸ್ ಸರ್‌ಗೆ ನಿಕಟವರ್ತಿಯಾದೆ. ಮೊದಲಿಗೆ ನಾನು ರಾಮದಾಸ್ ಮಾಸ್ಟರೊಡನೆ ಮಾತಿಗಿಳಿದ ವಿಷಯ ವಿವಾಹವನ್ನು ಕುರಿತದ್ದು:

ನನಗೆ ಸಾಹಿತಿ ದೊಡ್ಡರಂಗೇಗೌಡ ಅವರು ಪದವಿ ಓದುತ್ತಿದ್ದಾಗ ಗುರುಗಳಾಗಿದ್ದರು. ಅವರು ತರಗತಿಯಲ್ಲಿ ಒಮ್ಮೆ ಮಾತನಾಡುವಾಗ ಮದುವೆ ವಿಷಯವನ್ನು ಪ್ರಸ್ತಾಪಿಸುತ್ತಾ, ಮದುವೆಗಳು ಈಗ ನಡೆಯುತ್ತಿರುವ ಹಾಗೆ ನಡೆಯುವುದು ಸರಿಯಲ್ಲ. ಆಡಂಬರ, ಅದ್ದೂರಿ, ಸಂಪ್ರದಾಯ, ನೋಂದಣಿ-ಈ ಆಚರಣೆಯೆಲ್ಲ ಏತಕ್ಕೆ? ನಂಬಿಕೆ ಇಲ್ಲದವರು ಈ ರೀತಿ ಮದುವೆಯಾಗುತ್ತಾರೆ. ಒಂದು ಗಂಡು -ಒಂದು ಹೆಣ್ಣು ಪ್ರೀತಿಯಿಂದ ಒಪ್ಪಿ ನಾವಿಬ್ಬರು ಜೀವನ ಸಂಗಾತಿಗಳಾಗಿ ಬದುಕೋಣ ಎಂದು ಮಾನಸಿಕವಾಗಿ ಸಿದ್ಧರಾಗಿ ಒಪ್ಪಂದ ಮಾಡಿಕೊಂಡರೆ ಸಾಕು. ನಂಬಿಕೆಯೇ ಮದುವೆ. ಸುಮ್ಮನೆ ಈ ರೀತಿ ಮದುವೆಗಳು ತರವಲ್ಲ ಎಂದು ಹೇಳಿದ್ದ ಮಾತು ನನ್ನ ಮೇಲೆ ಪ್ರಭಾವ ಬೀರಿ ಹೌದಲ್ಲವೇ ಅನಿಸಿತ್ತು. ನಾನೂ ಕೂಡ ಹೀಗೇ ಮದುವೆಯಾಗಬೇಕೆಂದು ಬಯಸಿದ್ದೆ.

ಈ ವಿಷಯವನ್ನು ನನ್ನ ಮೊದಲ ಭೇಟಿಯಲ್ಲಿ ರಾಮದಾಸ್ ಸರ್ ಅವರೊಡನೆ ಹಂಚಿಕೊಂಡಾಗ ಅವರು"ಯಾರ್ರೀ ನಿಮಗೆ ಹೇಳಿದ್ದು. ಅವರ ಮಾತ ಕಟ್ಕಂಡು ಅಂಗೇನಾದ್ರು ಮದುವೆಯಾಗ್ಬುಟ್ರೆ" ಎಂದು ಪ್ರಾರಂಭ ಮಾಡಿ, ಯಾವುದೇ ರೀತಿ ಊರ್ಜಿತವಲ್ಲದೆ

ಮದುವೆಯಾಗುವುದು ತುಂಬಾ ಅಪಾಯಕಾರಿಯಾದದ್ದು. ನಾಳೆ ಏನಾದರೂ ಹೆಚ್ಚು-ಕಡಿಮೆಯಾದರೆ ಹುಡುಗನ ಮನೆಯವರಿಂದ ಆಶ್ರಯ ಪಡೆಯಲು ಹೆಣ್ಣು ಮಕ್ಕಳಿಗೆ ಯಾವ ಆಧಾರವೂ ಇರುವುದಿಲ್ಲ. ನಮ್ಮ ಮಗ ಮದುವೆಯನ್ನೇ ಆಗಿಲ್ಲ ಎಂದು ಹೇಳುತ್ತಾರೆ. ಅದಕ್ಕಾಗಿ ಒಂದು ಆಧಾರ ಇರಬೇಕು. ಕಾನೂನುಬದ್ಧವಾಗಿ ಮದುವೆಯಾಗುವುದು ಕ್ಷೇಮ. ನೋಂದಣಿ ಮಾಡಿಸಿ ಸರಳವಾಗಿ ಮದುವೆಯಾಗುವುದು ಒಳಿತು. ಬರೆ ಬಾಯಿ ಮಾತಿನಿಂದ ಮದುವೆಯಾಗವುದರಿಂದ ಮೋಸ ಹೋಗುವ ಸಾಧ್ಯತೆಗಳಿವೆ ಎಂಬ ಮಾತನ್ನು ಹೇಳಿ ನಾನು ಕೇಳಿದ ಮಾತಿಗೆ ಖಚಿತವಾದ ಉತ್ತರ ನೀಡಿದರು.

ಮುಂದೆ ೧೯೯೩-೧೯೯೪ರಲ್ಲಿ ಮೈಸೂರಿನ ಧ್ವನ್ಯಾಲೋಕದಲ್ಲಿ ಅಂತರ್ಜಾತಿ ವಿವಾಹಿತರ ಸಮಾರಂಭ ಜರುಗಿತು. ಅಲ್ಲಿ ಮಾತನಾಡಿದಾಗ ರಾಮದಾಸ್ ಸರ್ ಮತ್ತಷ್ಟು ಹತ್ತಿರವಾದರು. ನಂತರ ಮಾನವ ಮಂಟಪದಲ್ಲಿ ಮದುವೆಗಳನ್ನು ಮಾಡಿಸಲು ಪರಿಚಯದ ಕೆಲವರು ನನ್ನ ಬಳಿ ಬಂದಾಗ ನಾನವರನ್ನು ರಾಮದಾಸ್ ಮೇಷ್ಟ್ರು ಬಳಿ ಕರೆದುಕೊಂಡು ಹೋಗುತ್ತಿದ್ದೆ. ಮಾನವ ಮಂಟಪದ ಮದುವೆಗಳಲ್ಲಿ ನಾನೂ ಭಾಗವಹಿಸುತ್ತಿದ್ದೆ. ಆಗಿಂದ ಅವರ-ನನ್ನ ಸಂಪರ್ಕ ಜಾಸ್ತಿಯಾಯಿತು.

ನನ್ನಂತಹ ಒಬ್ಬ ಸಾಮಾನ್ಯನ ಜೊತೆಗೆ ಅವರು ನಡೆದುಕೊಂಡ ರೀತಿ ಮತ್ತು ತೋರಿದ ಪ್ರೀತಿ ನನ್ನಲ್ಲಿ ಅತ್ಯಾಶ್ಚರ್ಯವನ್ನುಂಟುಮಾಡಿದೆ. ಅವರು ತುಂಬಾ ಹಾಸ್ಯಮಯವಾಗಿ ಮಾತನಾಡಿ ನಮ್ಮನ್ನು ನಗೆಗಡಲಿನಲ್ಲಿ ಮುಳುಗಿಸಿ ಬಿಡುತ್ತಿದ್ದರು. ಅವರನ್ನು ಸೀರಿಯಸ್ಸಾಗಿ ನೋಡಿದ್ದಕ್ಕಿಂತಲೂ ಹಾಸ್ಯ ಮಾಡುವವರಾಗಿ ನೋಡಿದ್ದೇ ನನಗೆ ಹೆಚ್ಚು ನೆನಪು.

ಯಾವ ವ್ಯಕ್ತಿಯ ಬಗೆಯೂ ಅವರಿಗೆ ವೈಯಕ್ತಿಕ ದ್ವೇಷವಿರಲಿಲ್ಲ. ಆದರೆ ಸಾಮಾಜಿಕ ಅನ್ಯಾಯದ ವಿರುದ್ಧ ಯಾರೇ ಆಗಿರಲಿ, ಯಾವ ಮುಲಾಜನ್ನೂ ಲೆಕ್ಕಿಸದೆ ಅವರನ್ನೂ ಝಾಡಿಸಿ ಮಾತನಾಡುವ ಎದೆಗಾರಿಕೆ ರಾಮದಾಸ್ ಮೇಷ್ಟರಲ್ಲಿ ವಿಶೇಷವಾಗಿತ್ತು. ಅದರಿಂದಲೇ ಅವರು "ನನ್ನ ನೇರ ನಿಷ್ಠುರ ನುಡಿಗಳಿಂದ ಅನೇಕರ ವಿಶ್ವಾಸ ಕಳೆದುಕೊಂಡು ಏಕಾಂಗಿತನ ಅನುಭವಿಸುತ್ತಿದ್ದೇನೆ. ನಾನು ಹೀಗೆ ವರ್ತಿಸುತ್ತೇನೆಂದು ಯಾರೂ ಬರೋದಿಲ್ಲ ಕಣ್ರಿ"ಎಂದು ಪದೇ ಪದೇ ನಮ್ಮೊಡನೆ ತಮ್ಮ ಅನಿಸಿಕೆ ಹಂಚಿಕೊಳ್ಳುತ್ತಿದ್ದರು.

ರಾಮದಾಸ್ ಮೇಷ್ಟ್ರಲ್ಲಿದ್ದ ಇನ್ನೊಂದು ವಿಶೇಷ ಗುಣ ಅವರ ಬಗ್ಗೆ ಯಾರಾದರೂ ವಿರೋಧಿಸಿ ಮಾತನಾಡಿದರೆ ಅದನ್ನು ಹಾಸ್ಯವಾಗಿ ತೆಗೆದುಕೊಂಡು ಲೇವಡಿ ಮಾಡುತ್ತಿದ್ದರು. ಒಮ್ಮೆ ಟಿಪ್ಪು ಬಗ್ಗೆ ರಾಮದಾಸ್ ಅವರು ಹೇಳಿಕೆ ನೀಡಿದ್ದನ್ನು ವಿರೋಧಿಸಿ ಅವರ ಪ್ರತಿಕೃತಿ ದಹನ ಮಾಡಿ ಕೆಲವರು ಪ್ರತಿಭಟನೆ ಮಾಡಿದರು. ಇದರ ವಿಷಯವಾಗಿ ಗೆಳೆಯ ರಫೀಕ್ ಉಪ್ಪಿನಂಗಡಿ ಮತ್ತು ನಾನು ಅವರ ಮನೆಗೆ ಹೋಗಿ ಭೇಟಿ ಮಾಡಿ ಸಾರ್ ನೋಡಿ ಹೇಗೆ ನಿಮ್ಮ ಪ್ರತಿಕೃತಿಯನ್ನು ಸುಟ್ಟಿದ್ದಾರೆ ಎಂದು ಪ್ರಸ್ತಾಪಿಸಿದಾಗ ರಾಮದಾಸ್ ಸರ್ ಕೋಪಿಸಿಕೊಂಡು ಮಾತನಾಡಲಿಲ್ಲ, ಬಹಳ ಹಾಸ್ಯವಾಗಿ ಆ ವಿಷಯವನ್ನು ಪ್ರಸ್ತಾಪಿಸುತ್ತಾ "ನನ್ನದೂ ಒಂದು ಪ್ರತಿಕೃತಿ ಇದೆ ಅಂತಾ ಈಗ ಗೊತ್ತಾಯ್ತು ಕಣ್ರಿ" ಎಂದು ನಗತೊಡಗಿದರು.

ಹೀಗೆ ರಾಮದಾಸ್ ಸರ್ ಅವರ ಅನೇಕ ವಿಷಯಗಳನ್ನು ನಾನು ಹೇಳುತ್ತಾ ಹೋಗಬಹುದು. ೧೪ ವರ್ಷಗಳ ಕಾಲ ಅವರಿಗೆ ಶಿಷ್ಯನಾಗಿದ್ದೆ. ಅವರ ಬಗ್ಗೆ ನನಗೆ ಅಪಾರವಾದ ಗೌರವ, ಭಕ್ತಿ, ಪ್ರೀತಿ ಎಲ್ಲವೂ ಇದೆ. ಅವರೊಡನೆ ನಮಗೆ ಪರಿಚಯವಿತ್ತು ಎಂಬುದೇ ಹೆಮ್ಮೆಯ ವಿಷಯ.

# ತರಗತಿಯ ಒಳಗೆ ಮತ್ತು ಹೊರಗೆ ರಾಮದಾಸ್ ಕಲಿಸಿದ ಪಾಠಗಳು

ಡಾ. ಬಂಜಗೆರೆ ಜಯಪ್ರಕಾಶ

ನಾನು ಮೈಸೂರಿಗೆ ಹೋದದ್ದು ೧೯೮೨ ರಲ್ಲಿ. ಮಹಾರಾಜ ಕಾಲೇಜಿನಲ್ಲಿ ಪತ್ರಿಕೋದ್ಯಮ ಬಿ.ಎ. ಕಲಿಯಲು ದೂರದ ಚಿತ್ರದುರ್ಗದಿಂದ ಅಲ್ಲಿಗೆ ಬಂದಿದ್ದೆ. ಜನಪರ ಚಳವಳಿಗಳು ಚಿತ್ರದುರ್ಗ ಜಿಲ್ಲೆಯಲ್ಲೂ ಆಗ ಒಂದಷ್ಟು ಚಾಲ್ತಿಯಲ್ಲಿದ್ದವು. ನಾನು ಪಿಯುಸಿ ಓದುವಾಗ ಗೋಕಾಕ್ ವರದಿ ಚಳವಳಿಯ ಅಬ್ಬರ ದುರ್ಗದಲ್ಲಿ ಕಂಡುಬಂದಿತ್ತು. ಡಾ. ರಾಜ್ ಮತ್ತು ಸಾಹಿತಿಗಳ ತಂಡ ಜಿಲ್ಲೆಯಲ್ಲಿ ಸಾರ್ವಜನಿಕ ಸಭೆ ನಡೆಸಿತ್ತು. ಅದು ಬಿಟ್ಟರೆ ದಲಿತ ಸಂಘರ್ಷ ಸಮಿತಿಯ ಘಟಕಗಳು ಜಿಲ್ಲೆಯಲ್ಲಿ ಕಾರ್ಯಾರಂಭ ಮಾಡಿದ್ದವು. ನನಗೆ ಈ ಯಾವ ಸಂಘಟನೆಗಳೊಂದಿಗೂ ನೇರ ಸಂಪರ್ಕವಿರಲಿಲ್ಲ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಚಟುವಟಿಕೆಗಳಲ್ಲಿ ಒಂದು ವರ್ಷದಷ್ಟು ಕಾಲ ಸಂಪರ್ಕವಿತ್ತು. ಗ್ರಾಮಗಳಲ್ಲಿ ಅದು ಸಂಘಟಿಸುವ ಸ್ವಯಂ ಸೇವಾ ಶಿಬಿರಗಳಲ್ಲಿ ಪಾಲ್ಗೊಂಡು ಕೆಲವು ಹಳ್ಳಿಗಳಲ್ಲಿ ಕಸ ಬಾಚಿದ್ದೆ. ನಂತರ ಬೇಗನೆ ಅದರ ಧೋರಣೆಗಳ ಬಗ್ಗೆ ಭಿನ್ನಾಭಿಪ್ರಾಯ ಹುಟ್ಟಿ ಅದರಿಂದ ದೂರವಾಗಿದ್ದೆ. ಇಷ್ಟು ಬಿಟ್ಟರೆ ನನಗೆ ಚಳವಳಿಗಳ ಜೊತೆ ನೇರ ಸಂಪರ್ಕ ಇರಲಿಲ್ಲ.

ಗೋಕಾಕ್ ವರದಿ ಚಳವಳಿ ಬಿಸಿ ಆಗಿನ್ನೂ ಆರತೊಡಗಿತ್ತು. ಮೈಸೂರಲ್ಲಿ ವಿದ್ಯಾರ್ಥಿಗಳ ನಡುವೆ ಚರ್ಚಿತವಾಗುತ್ತಿದ್ದ ಚಳವಳಿಯ ಹೀರೋಗಳ ಪಟ್ಟಿಯಲ್ಲಿ ರಾಮದಾಸ್ ಹೆಸರು ತಪ್ಪದೆ ಇರುತ್ತಿತ್ತು. ಗುಂಡೂರಾವ್ ಮೈಸೂರಿಗೆ ಬಂದಾಗ ಸಭೆಯೊಂದರಲ್ಲಿ ಸಾರ್ವಜನಿಕವಾಗಿ ಮುಖ್ಯಮಂತ್ರಿಯ ಕೊರಳಪಟ್ಟಿಗೆ ಕೈಹಾಕಿ ಜಗಳ ಮಾಡಿದ್ದರಂತೆ ಎಂಬುದು ನಮ್ಮ ನಡುವೆ ಹಬ್ಬಿದ್ದ ದಂತ ಕಥೆ. ಈ ಕಥೆಯನ್ನು ನಮಗೆ ಬಿತ್ತರಿಸಿದವನು ಹೊನಕೆರೆ ನಂಜುಂಡೇಗೌಡ. ಹೊಸದಾಗಿ ರೂಪುಗೊಳ್ಳತೊಡಗಿದ್ದ ನಮ್ಮ ಸ್ನೇಹಿತರ ಗುಂಪಿನಲ್ಲಿ ಮೈಸೂರಿಗನಾಗಿದ್ದ

ನಂಜುಂಡೇಗೌಡ ಮೈಸೂರಿನ ಬೀದಿಗಳ ಬಗ್ಗೆ, ಹೋಟೆಲುಗಳ ಬಗ್ಗೆ, ಜನಗಳ ಬಗ್ಗೆ ಈ ಬಗೆಯ ಕಥನಗಳನ್ನು ಹೇಳುವ ಮುಖಾಂತರ ನಮ್ಮಲ್ಲಿ ಮೈಸೂರಿನ ಬಗ್ಗೆ ಬೆರಗನ್ನು ಮೂಡಿಸುತ್ತಿದ್ದ.

ರಾಮದಾಸ್ ಅವರ ತರಗತಿಗಳಲ್ಲಿ ಎಷ್ಟು ಕಟ್ಟುನಿಟ್ಟು ವರ್ತನೆಯವರು ಎಂಬುದನ್ನೂ ಹಲವು ರೀತಿಯಲ್ಲಿ ಆತ ವರ್ಣಿಸಿದ್ದ. ರಾಮದಾಸ್ ಬಗ್ಗೆ ಇದ್ದ ಈ ಬಗೆಯ ದಂತ ಕಥೆಗಳು ನಿಜವಿರಬೇಕೆಂದು ನಮಗೂ ಅನ್ನಿಸತೊಡಗಿತ್ತು. ಅವರ ನಿರ್ದಾಕ್ಷಿಣ್ಯ ಮಾತುಗಾರಿಕೆ, ಕಂಚಿನ ಕಂಠ, ದನಿ ಏರಿಸಿ ಮಾತನಾಡುವ ರೀತಿ, ನಗಲು ಬರುವುದಿಲ್ಲವೇನೋ ಎಂಬಂತೆ ಮುಖ ಬಿಗಿದುಕೊಂಡಿರುತ್ತಿದ್ದ ಅವರ ಪೈಲ್ವಾನ್ ಆಕೃತಿಯ ದೇಹ ಇವೆಲ್ಲ ನಮ್ಮ ಭಯಮಿಶ್ರಿತ ಗೌರವವನ್ನು ಹೆಚ್ಚಿಸಿದ್ದವು. ಗಂಭೀರ ವಿಚಾರಗಳನ್ನು ಮಂಡಿಸುತ್ತಾ, ಜಾಗ್ರತರಾಗಿರುವಂತೆ, ಪ್ರತಿಭಟನೆಯ ಗುಣ ಬೆಳೆಸಿಕೊಳ್ಳುವಂತೆ ಅವರು ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತಿದ್ದರು. ಅವರ ತರಗತಿಗಳಲ್ಲಿ ಕಪಿಚೇಷ್ಟೆ ಮಾಡಲು ಅವಕಾಶವಿಲ್ಲದಿರುವುದರಿಂದ ಗಂಭೀರವಾಗಿ ಕೂತು, ಸಾಕಾಗಿ ಮುಖ ಜೋಲು ಬಿಟ್ಟುಕೊಂಡಂತಾಗುತ್ತಿದ್ದೆವು.

ಅಂತಹ ಸಂದರ್ಭದಲ್ಲಿ ರಾಮದಾಸ್ ನಮ್ಮನ್ನೆಲ್ಲಾ ಅರ್ಧ ಹಾಸ್ಯ ಅರ್ಧ ಲೇವಡಿಯಿಂದ ನಗಿಸುತ್ತಿದ್ದರು. ಸಾಮಾನ್ಯವಾಗಿ ಹುಡುಗರನ್ನು ಛೇಡಿಸಲು ಬಳಸುತ್ತಿದ್ದ ಹೇಳಿಕೆ 'ಕುತ್ತಿಗೆ ತುಂಬ ಬೆಡ್ ಶೀಟ್ ಹೊದ್ಕಂಡು ಮಲ್ಗಿಬಿಡ್ತೀರಿ ಅಲ್ವೇನ್ರಿ' ಎಂಬುದಾಗಿತ್ತು. ಅದನ್ನು ಅವರು ಸಾಭಿನಯವಾಗಿ ಕೈಕಾಲು ಆಡಿಸಿ ಹೇಳುತ್ತಿದ್ದ ರೀತಿಯಿಂದಾಗಿ ವಿದ್ಯಾರ್ಥಿಗಳೆಲ್ಲ ಗೊಳ್ಳೆಂದು ನಗುತ್ತಿದ್ದರು. ಇಂತಹ ಸಂದರ್ಭಗಳನ್ನು ಬಿಟ್ಟರೆ ಮಿಕ್ಕಂತೆ ಅವರ ತರಗತಿ ಸದಾ ಗಂಭೀರ ನಿರೂಪಣೆಯಿಂದ ಕೂಡಿರುತ್ತಿತ್ತು. ನಡುನಡುವೆ ಸಮಾಜದ, ರಾಜಕಾರಣದ ಟೀಕೆ ಬಂದು ಹೋಗುತ್ತಿತ್ತು. ಅದು ನಮಗೆ ಚಿಂತನೆ ಹಾಗೂ ವ್ಯಕ್ತಿತ್ವ ರೂಪಿಸಿಕೊಳ್ಳಲು ಪರೋಕ್ಷವಾಗಿ ಒದಗುತ್ತಿದ್ದ ತರಬೇತಿಯಂತಾಗುತ್ತಿತ್ತು.

ವಿದ್ಯಾರ್ಥಿಗಳಾದವರು ಅಸಡ್ಡಾಳವಾಗಿ ಕಾಣುವಂತಿರಬಾರದು ಎಂಬುದು ಅವರ ಮತ್ತೊಂದು ಪ್ರತಿಪಾದನೆಯಾಗಿತ್ತು. ಅವರ ಉಡುಗೆ ತೊಡುಗೆಗಳಲ್ಲಿ ಸದಾ ಒಂದು ಅಚ್ಚು ಕಟ್ಟುತನವಿರುತ್ತಿತ್ತು. ಆದರ್ಶವಾದಿಗಳಾಗಿರುವುದೆಂದರೆ ವೈಯಕ್ತಿಕ ವಿಷಯಗಳಿಗೆ ಅಷ್ಟು ಗಮನಕೊಡದ ಸನ್ಯಾಸಿಗಳಂತಿರಬೇಕು ಎಂದುಕೊಂಡಿದ್ದ ನಮ್ಮ ಅರೆಬರೆ ತಿಳಿವಳಿಕೆಗೆ ಈ ಪ್ರತಿಪಾದನೆ ಅಚ್ಚರಿದಾಯಕವಾಗಿದ್ದುದು ಮಾತ್ರವಲ್ಲ, ಸಂತೋಷ ಕೊಡುವಂತಾದ್ದೂ ಆಗಿತ್ತು.

ನಮ್ಮ ಯೌವನದ ವಯಸ್ಸಿಗೆ ಆಕರ್ಷಕರಾಗಿ ಕಾಣಬೇಕೆಂಬ ಬಯಕೆಯೂ, ಆದರ್ಶವಂತರಾಗಿರಬೇಕೆಂಬ ಹಂಬಲವೂ ಒಟ್ಟೊಟ್ಟಿಗೆ ಇದ್ದವು. ಅದರಲ್ಲಿ ಯಾವುದನ್ನೂ ತ್ಯಾಗ ಮಾಡಬೇಕಾದ ಅಗತ್ಯವಿಲ್ಲ ಎಂಬ ವಾದದಿಂದ ನಾವು ಬಹುಮಟ್ಟಿಗೆ ಪ್ರಭಾವಿತರಾದೆವು. ಆದರ್ಶವಂತರಾಗಿರುವುದೆಂದರೆ ಹುಡಿಗಿಯರ ಕಡೆ ನೋಡದಂತಹ, ಅವರ ಬಗ್ಗೆ ಕುತೂಹಲವನ್ನೂ ಇಟ್ಟುಕೊಳ್ಳದಂತಹ ನಿರ್ವ್ಯಾಮೋಹಿಗಳಾಗಿರಬೇಕು ಎಂಬಂತಹ ನಿಲುವೂ ನಮ್ಮ ನಡುವೆ ಚಾಲ್ತಿಯಲ್ಲಿತ್ತು. ಅದೆಲ್ಲ ಶೋಕಿಲಾಲರ ಅಥವಾ ಪೋಲಿ ಪಟಾಲಂಗಳ

ಬಾಬತ್ತಾಪ್ಪರಿಂದ ನಾವು ಹಾಗಿರಲು ಸಾಧ್ಯವಿಲ್ಲ ಎಂದುಕೊಂಡಿದ್ದೆವು. ನವ ತರುಣರಾಗಿದ್ದ ನಮಗೆ ಈ ನಿರ್ಣಯ ಅತ್ಯಂತ ವೇದನೆಯ ಸಂಗತಿಯಾಗಿತ್ತು.

ಆದರ್ಶವಂತರಾಗಿರಬೇಕೆಂಬ ನಿಲುವೇನೋ ಸರಿ. ಆದರೆ ವಿರಾಗಿಗಳಾಗಿರುವುದೆಂದರೆ ಸ್ವಲ್ಪ ಕಷ್ಟ. ಅದು ಪ್ರಾಮಾಣಿಕತೆಯ ನಿಲುವಾಗುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಒಮ್ಮೆ ತರಗತಿಯಲ್ಲಿರುವಾಗ ರಾಮದಾಸ್ ತಮ್ಮ ವಿದ್ಯಾರ್ಥಿ ಜೀವನದ ಅನುಭವ ಹೇಳುತ್ತಾ, ತಮ್ಮ ಸಹಪಾಠಿ ಹುಡುಗಿಯರ ಗಮನ ಸೆಳೆಯಲು ತಾವು ಸಹಪಾಠಿಗಳು ಸ್ಪರ್ಧೆಗಿಳಿಯುತ್ತಿದ್ದುದನ್ನು ವಿವರಿಸಿದರು. ನಾವು ಆ ತರಗತಿಯಲ್ಲಿ ಇನ್ನಿಲ್ಲದಷ್ಟು ಉತ್ಸಾಹ ಪ್ರಕಟಿಸಿದೆವು. ನಾವು ಯಾರನ್ನು ಕಲ್ಲು ಮನಸ್ಸಿನ ಹೋರಾಟಗಾರ ಎಂದುಕೊಂಡಿದ್ದೆವೋ ಅಂತಹ ಮೇಷ್ಟ್ರು ಒಂದು ವಯಸ್ಸಿನಲ್ಲಿ ಹುಡುಗಿಯರನ್ನು ಮೆಚ್ಚಿಸಲು ಪ್ರಯತ್ನ ಪಟ್ಟವರಾಗಿದ್ದರು ಹಾಗೂ ಅದೇನೂ ಅನೈತಿಕ ವಿಷಯವಲ್ಲ ಎಂಬಷ್ಟು ಗೆಲುವಿನಿಂದ ವಿವರಿಸಿದ್ದು ನೋಡಿ, ನಮ್ಮ ಪ್ರಣಯ ಭಾಗ್ಯದ ಹಾದಿಯನ್ನು ಮುಚ್ಚಬೇಕಿಲ್ಲವೆಂದಾಯಿತು. ಹುಡುಗಿಯರ ಬಗ್ಗೆ ನಮಗಿರುವ ಆಸಕ್ತಿ ಅಪರಾಧವಲ್ಲವೆಂದಾಯಿತು. ನಮ್ಮ ಮನಸ್ಸು ಬಹಳ ನಿರಾಳವಾಯಿತು.

ಹಾಗೆ ನೋಡಿದರೆ ನಾವು ಕ್ರಾಂತಿಕಾರಿಗಳೆಂದು ಪೋಸು ಕೊಡಬೇಕೆಂಬ ಬಯಕೆಯ ಮೂಲದಲ್ಲಿ ಈ ಹುಡುಗಿಯರ ಎದುರು ಹೀರೋಗಳಾಗಬೇಕು ಎಂಬ ಅಂಶವೂ ಸೇರಿತ್ತು. ಹುಡುಗಿಯರನ್ನು ಬಿಟ್ಟು ಕ್ರಾಂತಿ ಮಾಡುವುದೆಂದರೆ ಹೇಗೆ. ಅಥವಾ ಕೇವಲ ಹುಡುಗಿಯರಿಗಾಗಿ ಆದರ್ಶಗಳನ್ನು ತ್ಯಜಿಸಿದ ಹುಲುಮಾನವರಾಗುವುದು ಹೇಗೆ ಎಂಬ ಗೊಂದಲದಿಂದ ಆ ದಿನ ನಾವು ಪಾರಾದೆವು. ಹುಡುಗಿಯರನ್ನು ಮೆಚ್ಚಿಸಲು ಕಪಿ ಚೇಷ್ಟೆ ಮಾಡುವುದಾಗಲಿ, ಅವರನ್ನು ಚುಡಾಯಿಸುವಂತಹ ಘನತೆಹೀನ ವರ್ತನೆ ತೋರಿಸುವುದಾಗಲೀ ಮಾಡಬಾರದೆಂದೂ, ಅವರ ಬಳಿ ಸಹಜ ಸ್ನೇಹದಲ್ಲಿರುವುದು ಮತ್ತು ನಿಜವಾದ ಪ್ರೇಮಕ್ಕಾಗಿ ಬಯಸುವುದು ತಪ್ಪಲ್ಲ ಎಂಬಂತಹ ನೈತಿಕ ಜೀವನ ಪ್ರೀತಿಯ ಹಾದಿಯ ಅರಿವು ನಮಗೆ ರಾಮದಾಸರ ಬೋಧನೆಗಳಿಂದ ಮೂಡತೊಡಗಿತು. ಹಾಗೆ ನೋಡಿದರೆ ಪ್ರೇಮಿಸಿ ಅಂತರ್ಜಾತೀಯ ಮದುವೆ ಆಗುವುದೂ ಕೂಡ ಕ್ರಾಂತಿಕಾರಿಯಾದ ಕೆಲಸ ಎಂಬುದು ಗೊತ್ತಾಗಿ, ಕ್ರಾಂತಿ ಮಾಡಲು ಹಾಗೂ ಸಾಧ್ಯವಾದರೆ ಯಾರನ್ನಾದರೂ ಪ್ರೇಮಿಸಲು ನಮ್ಮ ಗೆಳೆಯರ ತಂಡ ಉತ್ಸಾಹಭರಿತವಾಯಿತು.

ಇಂತಹ ವಿಷಯಗಳನ್ನು ವಿದ್ಯಾರ್ಥಿಗಳ ಎದುರು ಚೂರೂ ಲಂಪಟ ಭಾವನೆ ಮೂಡದಂತೆ ಚರ್ಚಿಸಬಲ್ಲವರಾಗಿದ್ದ ರಾಮದಾಸ್ ತರಗತಿ ಇಲ್ಲದಾಗ ಕ್ಯಾಂಟೀನಿಗೆ ಬರುವುದು, ನಾವು ಕಂಡರೆ ಕಾಫಿ ಕೊಡಿಸುವುದು, ಸಿಗರೇಟು ಸೇದುವವರಿಗೆ ಸಿಗರೇಟು ಸೇದಲು ಕೊಡುವುದು ಮಾಡುತ್ತಿದ್ದರು. ಕಾಲೇಜಿನ ಮೇಷ್ಟರ ಎದುರಿಗೆ ಸಿಗರೇಟು ಸೇದುವುದೆಂಬುದು ಭಯಂಕರ ಕ್ರಾಂತಿಕಾರಿ ವರ್ತನೆಯಾಗಿ ಕಾಣುತ್ತಿತ್ತು ನಮಗೆ. ಅದರಲ್ಲೂ ಸಿಗರೇಟು ಸೇದುವ ಹಂಬಲವಿದ್ದು ಅದನ್ನು ಕೊಳ್ಳಲು ಕಾಸಿಲ್ಲದವರಾಗಿದ್ದ ನಮ್ಮಂತಹವರಿಗೆ ರಾಮದಾಸ್ ಎಷ್ಟು ಅಭಿಮಾನದ ಮೇಷ್ಟ್ರಾಗಿ ಬಿಟ್ಟರೆಂದರೆ ಅವರು ಬಿಡುವಾಗಿ ಸಿಕ್ಕುವುದನ್ನೇ ಬಹಳ ಆಸೆಯಿಂದ ಕಾಯುತ್ತಿದ್ದೆವು.

ನಾನು ಮಹಾರಾಜಾದಲ್ಲಿ ಮೊದಲ ವರ್ಷದ ವಿದ್ಯಾರ್ಥಿಯಾಗಿದ್ದಾಗಲೇ ಕವನ ಸಂಕಲನವೊಂದನ್ನು ತರಲು ಸಿದ್ಧತೆ ನಡೆಸಿದೆ. ಅವು ಆವರೆಗೂ ಎಲ್ಲಿಯೂ ಪ್ರಕಟವಾಗಿರಲಿಲ್ಲ. ಗೆಳೆಯರ ಮುಂದೆ ಓದಿ ತೋರಿಸಿದ ಹಸಿ ಬಿಸಿ ಅಭಿವ್ಯಕ್ತಿಗಳವು. ಗೆಳೆಯರೆಲ್ಲ ತಲಾ ನೂರು ರೂಪಾಯಿ ದೇಣಿಗೆಯೊಂದಿಗೆ ಈ ಕೃತಿಯನ್ನು ಪ್ರಕಟಿಸುವುದಾಗಿ ಮುಂದೆ ಬಂದರು. ಆ ಸಂಕಲನದಲ್ಲಿ ನನ್ನ ಕವಿತೆಗಳಲ್ಲದೆ ಹೆಡತಲೆ ದೇವನಾಯಕ ಎಂಬ ನನ್ನ ಹಾಸ್ಟೆಲ್ ಸಹವಾಸಿಯ ಕವಿತೆಗಳೂ ಇರುವುದೆಂದು ನಿರ್ಣಯವಾಯಿತು. ಹಾಗೆ ಇಬ್ಬಿಬ್ಬರು ಸೇರಿ ಸಂಕಲನವೊಂದನ್ನು ತರುವುದು ಒಂದು ಸಾಹಿತ್ಯಿಕ ಪರಿಪಾಠವೋ ಅಲ್ಲವೋ ಎಂಬುದು ಕೂಡ ಗೊತ್ತಿಲ್ಲದ ಸಾಹಿತ್ಯ ಹವ್ಯಾಸಿಗಳು ಆಗ ನಾವು. ಸಂಕಲನ ತರಲು ಹಣ ಒದಗಿತೆಂದಾದೊಡನೆ ಅದಕ್ಕೊಂದು ಮುನ್ನುಡಿ ಬರೆಸಲು ಮುಂದಾದೆ ನಾನು.

ರಾಮದಾಸ್ ಅವರ ಬಳಿಗೆ ನನ್ನ ಕವಿತೆಗಳ ಕಟ್ಟು ತೆಗೆದುಕೊಂಡು ಹೋಗಿ ಓದಲು ಕೊಟ್ಟೆ. ಅವರು ಒಂದೆರಡು ವಾರಗಳ ನಂತರ ಕವಿತೆಗಳನ್ನು ತಿದ್ದಿ ಹಿಂದಿರುಗಿಸಿದರು. ಅಲ್ಲಲ್ಲಿ ಕವಿತೆಗಳ ಕೆಳಗೆ ಟಿಪ್ಪಣಿ ಹಾಕಿದ್ದರು. ಬರೆಯುವ ಹವ್ಯಾಸ ಬೆಳೆಸಿಕೊಂಡು ಹೋಗುವಂತೆ ಮೆಚ್ಚುಗೆಯ ಮಾತನಾಡಿದರು. ಆ ಸಂಕಲನಕ್ಕೊಂದು ಮುನ್ನುಡಿ ಬರೆಯುವಂತೆ ಅವರನ್ನು ಕೇಳಿಕೊಂಡೆ. ಕವಿ ಅಥವಾ ವಿಮರ್ಶಕರಾಗಿ ಹೆಸರಾಗಿರುವವರ ಬಳಿ ಮುನ್ನುಡಿ ಬರೆಸುವುದು ಸೂಕ್ತ ಎಂದು ಹೇಳಿ ಕೆಲವರ ಹೆಸರುಗಳನ್ನೂ ಸೂಚಿಸಿದರು.

ಅವರಿಗೆ ನನ್ನಂತಹ ಹುಡುಗು ಕವಿಯ ಸಂಕಲನಕ್ಕೆ ನಾಲ್ಕು ಮಾತು ಬರೆಯುವುದು ಕಷ್ಟದ ವಿಷಯವಾಗಿರಲಿಲ್ಲ. ಆದರೆ ಅದು ಯಾಕೋ ಅವರನ್ನವರು ಸಾಹಿತಿ ಎಂದು ಬಿಂಬಿಸಿಕೊಳ್ಳಲು ಪ್ರಯತ್ನಪಟ್ಟಂತೆ ಕಾಣುತ್ತಿರಲಿಲ್ಲ. ಅವರಿಗೆ ಸಾಹಿತ್ಯಾಸಕ್ತಿ ಕಡಿಮೆಯೇನಿರಲಿಲ್ಲ. ಆದರೆ ಅದನ್ನು ಅವರು ಬರವಣಿಗೆಗೆ ತರಲಿಲ್ಲ. ನಾನು ಅಷ್ಟು ವರ್ಷಗಳ ಕಾಲದ ಪರಿಚಯದಲ್ಲಿ ಅವರು ಬರೆದ ಕಥೆ, ಕವಿತೆ, ಲೇಖನ ಯಾವುದನ್ನೂ ಕಂಡಿಲ್ಲ. ವಾಚಕರ ವಾಣಿಗೆ ಪತ್ರ, ಹೋರಾಟಗಳ ಕರಪತ್ರ ಮುಂತಾದವುಗಳನ್ನು ಅವರು ಆಗಾಗ ಬರೆಯುತ್ತಿದ್ದುದು ಬಿಟ್ಟರೆ ಅವರು ಭಾಷಣ ಮಾಡಿದ್ದೇ ಹೆಚ್ಚು. ಆ ಭಾಷಣಗಳನ್ನೆಲ್ಲ ಸಂಗ್ರಹಿಸಿ ದಾಖಲಿಸುವುದು ಸಾಧ್ಯವಿದ್ದಿದ್ದರೆ ಅವರ ವೈಚಾರಿಕ ನಿಲುವುಗಳು, ಸಾಮಾಜಿಕ ಸ್ಪಂದನ ಮತ್ತು ಸಾಹಿತ್ಯ ಸಂವೇದನೆಗಳನ್ನು ಈಗಿನ ತಲೆಮಾರಿಗೆ ತಲುಪಿಸಬಹುದಾಗಿತ್ತು.

ರಾಮದಾಸ್ ಹೋರಾಟಪ್ರಿಯ ಮನೋಭಾವದವರಾಗಿದ್ದರೂ, ಸಾಹಿತ್ಯ ಚಟುವಟಿಕೆಗಳನ್ನು ಎಂದೂ ಲಘುವಾಗಿ ನೋಡುತ್ತಿರಲಿಲ್ಲ. ಸಾಹಿತ್ಯದ ಸಭೆಗಳಿಗೆ ತಪ್ಪದೆ ಬಂದು ಭಾಗವಹಿಸುತ್ತಿದ್ದರು. ಆದರೆ ಅವರ ಒಲವು ಹೆಚ್ಚಾಗಿದ್ದುದು ಸಾಮಾಜಿಕ ಕ್ರಿಯಾಶೀಲತೆಯ ಕಡೆಗೆ. ಉತ್ತಮವಾಗಿ ಬರೆದರಷ್ಟೇ ಸಾಲದು, ಸಾಮಾಜಿಕ ಕಳಕಳಿಯೂ ಇರಬೇಕು ಎಂಬುದನ್ನು ಅವರು ಸಾಹಿತ್ಯದ ತರಗತಿಗಳಲ್ಲೇ ಹೇಳುತ್ತಿದ್ದರು. ಆದರೆ ಅದೇ ಸಮಯದಲ್ಲಿ ಸಾಹಿತ್ಯಿಕ ಸಂವೇದನೆಯಿಲ್ಲದ, ವೈಚಾರಿಕ ಚಿಂತನೆಗಳ ನೆಲೆಗಟ್ಟಿಲ್ಲದ ಹೋರಾಟದ ಬಡಬಡಿಕೆಯನ್ನೂ ಮೆಚ್ಚಿಕೊಳ್ಳುತ್ತಿರಲಿಲ್ಲ. ಅವರ ಗ್ರಹಿಕೆಯಲ್ಲಿ ಶ್ರೇಷ್ಠ ಸಾಹಿತ್ಯ ಸಂವೇದನೆಯೆಂಬುದು ಅತ್ಯುತ್ತಮ

ಸಾಮಾಜಿಕ ಸ್ಪಂದನವನ್ನು ಒಳಗೊಂಡಿರುತ್ತದೆಯಾದರೆ, ಅತ್ಯುತ್ತಮ ಸಾಮಾಜಿಕ ಕಳಕಳಿಯೆಂಬುದು ಶ್ರೇಷ್ಠ ಸಾಹಿತ್ಯಿಕ, ಸಾಂಸ್ಕೃತಿಕ ಅಭಿರುಚಿಗಳನ್ನು ಒಳಗೊಂಡಿರುವಂತಾದ್ದಾಗಿತ್ತು.

ಇವುಗಳನ್ನುಳ್ಳ ಎಷ್ಟನ್ನೋ ಅವರು ನಮಗೆ ಬಾಯಿ ಬಿಟ್ಟು ಬೋಧಿಸಿದರು. ಮತ್ತೆಷ್ಟನ್ನೋ ಅವರ ಒಡನಾಟದಲ್ಲಿ ನಮ್ಮಷ್ಟಕ್ಕೆ ನಾವು ಕಂಡುಕೊಂಡು ಅನುಸರಿಸಲು ಪ್ರಯತ್ನಿಸಿದೆವು. ಎಂಬತ್ತರ ದಶಕದ ಆರಂಭದಲ್ಲಿ ಪ್ರಾರಂಭವಾದ ನನ್ನ ಶಿಷ್ಯತ್ವ ಅವರ ಕಡೆಗಾಲದವರೆಗೂ ಮುಂದುವರಿದಿತ್ತು. ಈ ನಡುವೆ ತಾತ್ವಿಕ ಭಿನ್ನಾಭಿಪ್ರಾಯಗಳಿಂದ ಅವರ ಜೊತೆ ಚಟುವಟಿಕೆಗಳಲ್ಲಿ ನಿಕಟವಾಗಿರದೇ ಇದ್ದ ಕಾಲಾವಧಿಯೂ ಇದೆ.

ರಾಮದಾಸ್ ಅವರ ಬಗ್ಗೆ ನಾವೆಲ್ಲ ಅಭಿಮಾನ ಬೆಳೆಸಿಕೊಂಡ ಕಾರಣಗಳು ಏನಿರಬಹುದು ಎಂಬುದನ್ನು ಅರ್ಥೈಸಿ ಹೇಳಲು ಈಗ ನನಗೆ ಪೂರ್ಣವಾಗಿ ಸಾಧ್ಯ ಅನಿಸುತ್ತಿಲ್ಲ. ಅಭಿಮಾನ ಬೆಳೆದದ್ದು ಹೌದು. ಅವರ ಜೊತೆ ನಾವು ಹುಡುಗಾಟಿಕೆಯಿಂದ ವರ್ತಿಸಲು ಸಾಧ್ಯವಿರಲಿಲ್ಲ. ಯಾವುದೇ ವಿಷಯವನ್ನು ಚರ್ಚಿಸಬಹುದಾಗಿತ್ತಾದರೂ ಅದನ್ನು ಲಘು ಮಾತುಕತೆಯನ್ನಾಗಿಸಲು ಸಾಧ್ಯವಿರಲಿಲ್ಲ. ನಗೆಚಾಟಿಕೆಯ ವರ್ತನೆಗಳಿಗೆ ಅವರ ಬಳಿ ಅವಕಾಶವಿರುತ್ತಿರಲಿಲ್ಲ. ಅವರೇ ಯಾವಾಗಲಾದರು ನಗು ಮುಖದವರಾಗಿ ನಮ್ಮನ್ನು ರೇಗಿಸಿದರೆ ನಾವು ಪೆಚ್ಚು ಮುಖದಲ್ಲಿ ಹಿ ಹ್ಹೀ ಎನ್ನುತ್ತಿದ್ದೆವೇ ಹೊರತು ತೀರಾ ಇತ್ತೀಚಿನವರೆಗೂ ಅವರ ಬಳಿ ನಾವಾಗಿ ಯಾವುದೇ ನಗೆಚಾಟಿಕೆ ಮಾಡಿದವರಲ್ಲ.

ಅವರ ಸ್ವಭಾವದಲ್ಲಿ ಗಾಂಭೀರ್ಯ ಎದ್ದು ಕಾಣುತ್ತಿತ್ತು. ನಮ್ಮ ಅಭಿಪ್ರಾಯಗಳನ್ನು ಸಲೀಸಾಗಿ ಒಪ್ಪಿ ಆ ಮೂಲಕ ನಮ್ಮನ್ನು ಸಂತುಷ್ಟಗೊಳಿಸುವ ವಿಧಾನವೂ ಅವರದಾಗಿರಲಿಲ್ಲ. ಭಾಷಣ ಮಾಡಿದಾಗಲೂ ಅವರ ಮಾತಿನಲ್ಲಿ ರಂಜನೀಯ ಅಂಶಗಳು ಇರುತ್ತಿದ್ದುದೇ ಕಮ್ಮಿ. ಹೋರಾಟದ ಬದ್ಧತೆ, ಕೆಚ್ಚು ಮೂಡಿಸುವಂತಹ ಮಾತುಗಳೇ ಹೆಚ್ಚಾಗಿರುತ್ತಿದ್ದವು. ಯಾವುದೇ ಜನಪರ ಹೋರಾಟದ ಸಭೆ ಅಥವಾ ಚಳವಳಿ ಇದ್ದಾಗಲು ಅವರದೊಂದು ಭಾಷಣ ಇದ್ದೇ ಇರುತ್ತಿತ್ತು. ಅವರ ಬಳಿ ಶಿಷ್ಯತ್ವ ಒಪ್ಪಿಕೊಂಡ ಹಲವಾರು ಅಧಿಕಾರಿಗಳು, ರಾಜಕಾರಣಿಗಳು ಇದ್ದರು. ಅವರ ಬಗ್ಗೆ ವಿನಾ ಪ್ರಸ್ತಾಪ ತರುವುದಾಗಲೀ, ವೈಯಕ್ತಿಕ ಸಮಸ್ಯೆಗಳಿಗೆ ಅವರ ಮರ್ಜಿ ಕೇಳುವುದಾಗಲೀ ರಾಮದಾಸ್ ಮಾಡಿದಂತೆ ನನಗೆ ಎಂದೂ ಕಂಡಿಲ್ಲ.

ಹಾಗೆ ನೋಡಿದರೆ ನಾನು ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿರುವವರೆಗೆ ಅವರ ಸಾಮಾಜಿಕ ಆದರ್ಶಗಳ ಅಭಿಮಾನಿಯಾಗಿದ್ದೆನೇ ಹೊರತು ಅವರ ರಾಜಕೀಯ ಚಟುವಟಿಕೆಗಳ ಅನುಯಾಯಿಯಾಗಿರಲಿಲ್ಲ. ಅವರದು ಲೋಹಿಯಾವಾದಿ ನಿಲುವು. ನಾನು ಆ ಹೊತ್ತಿಗಾಗಲೇ ಗೆಳೆಯ ನಂಜುಂಡೇಗೌಡನ ದೆಸೆಯಿಂದ ಎಸ್‌ಎಫ್‌ಐ ಸಂಘಟನೆಗೆ ಸೇರಿಕೊಂಡಿದ್ದೆ. ಅದೇನೂ ನನ್ನ ವೈಯಕ್ತಿಕ ಆಯ್ಕೆಯಾಗಿರಲಿಲ್ಲ. ಎಸ್‌ಎಫ್‌ಐನ ಧೋರಣೆ ಸಿದ್ಧಾಂತಗಳನ್ನು ಮೆಚ್ಚಿ ಅದಕ್ಕೆ ಸೇರಿಕೊಂಡೆ ಎಂದು ಹೇಳಲೂ ಸಾಧ್ಯವಿಲ್ಲ. ಅದು ಪ್ರಗತಿಪರ ಸಂಘಟನೆ ಎಂಬುದು ಮಾತ್ರ ಆಗ ನನಗೆ ಗೊತ್ತಾಗಿತ್ತು. ನಂತರದಲ್ಲಿ ಅದು ಸಿಪಿಎಂ ಪಕ್ಷದ ವಿದ್ಯಾರ್ಥಿ ಸಂಘಟನೆ

ಎಂಬುದು ಗೊತ್ತಾಯಿತು. ಬಡವರ ಪರವಾದ, ದುಡಿಯುವ ಜನರ ರಾಜ್ಯ ಬರಬೇಕೆಂದು ಪ್ರತಿಪಾದನೆ ಮಾಡುತ್ತಿದ್ದ ಸಿಪಿಎಂ ಪಕ್ಷದ ಧೋರಣೆಗಳ ಬಗ್ಗೆ ನನಗೆ ಅಭಿಮಾನವೂ ಉಂಟಾಯಿತು.

ಇತರೆ ಪ್ರಗತಿಪರ ಸಂಘಟನೆಗಳ ಬಗ್ಗೆಯೂ ನನಗೆ ಇಂತಹ ಅಭಿಮಾನವೇ ಉಂಟಾಗುತ್ತಿತ್ತು. ಆದರೆ ಒಂದು ಪಕ್ಷ, ಒಂದು ಸಿದ್ಧಾಂತಕ್ಕೆ ಬದ್ಧರಾದವರು ಇತರೆ ಸಂಘಟನೆಗಳ ನಿಲುವುಗಳನ್ನು ಟೀಕಿಸುತ್ತಾ ನಮ್ಮ ಸಂಘಟನೆಯ ಧ್ಯೇಯ ಧೋರಣೆಗಳನ್ನು ಮಾತ್ರ ಎತ್ತಿಹಿಡಿಯಬೇಕು ಎಂಬ ಪರಿಪಾಠವನ್ನು ನಂತರದಲ್ಲಿ ಕಲಿತುಕೊಂಡೆ. ಲೋಹಿಯಾವಾದಿಗಳು, ಅಂಬೇಡ್ಕರ್‌ವಾದಿಗಳು ಮುಂತಾದವರನ್ನು ಈ ಬಗೆಯ ಟೀಕೆಯಿಂದ ಹೊರಗಿಡಬೇಕೆಂದು ನಾನು ಪಕ್ಷದ ಮೀಟಿಂಗ್‌ಗಳಲ್ಲಿ ವಾದಿಸುತ್ತಿದ್ದೆನಾದರೂ ಅದಕ್ಕೆ ಸಮರ್ಥವಾದ ಸೈದ್ಧಾಂತಿಕ ಕಾರಣಗಳನ್ನು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಕ್ರಾಂತಿಯ ಈಡೇರಿಕೆಗೆ ಇವರೆಲ್ಲ ಅಡ್ಡ ಬರುವವರು ಎಂಬುದನ್ನು ಮಾರ್ಕ್ಸ್‌ವಾದಿ ಸಿದ್ಧಾಂತದ ಆಧಾರದಲ್ಲಿ ಹಿರಿಯ ಕಾಮ್ರೇಡ್‌ಗಳು ಹೇಳುವಾಗ ನನ್ನ ಬಾಯಿ ಕಟ್ಟಿಹೋಗುತ್ತಿತ್ತು. ಲೋಹಿಯಾವಾದಿಗಳು ಮತ್ತು ಅಂಬೇಡ್ಕರ್‌ವಾದಿಗಳ ಬಗ್ಗೆ ನನ್ನೊಳಗೆ ಹುಟ್ಟುವ ಮಮಕಾರಕ್ಕೆ ನನ್ನ ಪೆಟ್ಟಿಬೂರ್ಷ್ವಾ ಹಿನ್ನೆಲೆ ಕಾರಣವೇ ಹೊರತು ಭಾರತದ ಕ್ರಾಂತಿಗೆ ಅವರು ಅಡ್ಡ ಬರುವವರಾದರೆ ಅವರನ್ನು ಟೀಕಿಸುವುದು ತಪ್ಪಲ್ಲ ಎಂದು ಸಮಾಧಾನ ಮಾಡಿಕೊಳ್ಳುವುದನ್ನು ಕಲಿತುಕೊಂಡೆ.

ಈ ನಡುವೆ ನಾನು ರಾಮದಾಸ್ ಅವರನ್ನು ನಿಜವಾದ ಕ್ರಾಂತಿಕಾರಿ ಮಾದರಿಯಾಗಿ ಮೆಚ್ಚಿಕೊಂಡಿದ್ದೆ. ಅವರು ಲೋಹಿಯಾವಾದಿ ಇತ್ಯಾದಿ ನನಗೆ ಗೊತ್ತಿರಲಿಲ್ಲ. ಅವರು ತರಗತಿಗಳಲ್ಲಾಗಲೀ, ಹೊರಗಿನ ಸಭೆಗಳಲ್ಲಾಗಲೀ ಯಾವುದೋ ಒಂದು ಸಿದ್ಧಾಂತವನ್ನು ಉಲ್ಲೇಖಿಸಿ ಮಾತಾಡಿದಂತೆ ನನಗೆ ಆಗ ಅನಿಸುತ್ತಿರಲಿಲ್ಲ. ಒಟ್ಟಾರೆಯಾಗಿ ಹೋರಾಟದ ಪ್ರವೃತ್ತಿಯಿರಬೇಕು, ಅದು ಜನಸಾಮಾನ್ಯರ ಪರವಾದ ನಿಲುವಾಗಿರಬೇಕು ಎಂದು ಮಾತ್ರ ಅವರು ಪ್ರತಿಪಾದಿಸುತ್ತಿದ್ದಾರೆಂದು ಭಾವಿಸಿದ್ದೆ. ಎಸ್‌ಎಫ್‌ಐ ಪ್ರಥಮ ಮೈಸೂರು ಜಿಲ್ಲಾ ಸಮ್ಮೇಳನಕ್ಕಾಗಿ ಧನಸಂಗ್ರಹ ಮಾಡುತ್ತಿದ್ದ ಸಂದರ್ಭದಲ್ಲಿ ರಾಮದಾಸ್ ಅವರ ಬಳಿಯೂ ಧನಸಹಾಯ ಕೇಳೋಣವೆಂದು ನಮ್ಮ ಸಂಘಟನೆಗೆ ಆಗ ರಾಜ್ಯಾಧ್ಯಕ್ಷರಾಗಿದ್ದವರಿಗೆ ಹೇಳಿದೆ. ಆತ ಒಪ್ಪಲಿಲ್ಲ. ರಾಮದಾಸ್ ಸಿಪಿಎಂ ಪಕ್ಷದ ನಿಲುವುಗಳನ್ನು ಬೆಂಬಲಿಸುವುದಿಲ್ಲವೆಂದು ಆತ ಹೇಳಿದರು.

ನಾನು ಎಸ್‌ಎಫ್‌ಐ ಸಂಘಟನೆಗೆ ಓಡಾಡುತ್ತಿದ್ದುದು ಅವರಿ[illegible] ಗೊತ್ತಿತ್ತು. ತರಗತಿಗಳಲ್ಲಾಗಲೀ ಅಥವಾ ಹೊರಗೆ ಭೇಟಿಯಾದಾಗಲಾಗಲೀ ಅವರೆಂದೂ ಅ[illegible]ನ್ನು ಆಕ್ಷೇಪಿಸಿ ಮಾತನಾಡಿರಲಿಲ್ಲ. ಅಲ್ಲದೆ ಅವರು ಈ ಮೊದಲು ನಮ್ಮ ಗೆಳೆಯರ ಗುಂಪಿನ ಬಗ್ಗೆ ತೋರಿಸುತ್ತಿದ್ದ ವಿಶ್ವಾಸದಲ್ಲೂ ವ್ಯತ್ಯಾಸವಾಗಿರಲಿಲ್ಲ. ಸಾಮಾಜಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿರುವ ಹುಡುಗರೆಂದು ನಮ್ಮನ್ನು ಅವರು ಸ್ವಲ್ಪ ಹೆಚ್ಚೇ ಆದರಿಸುತ್ತಿದ್ದಾರೆಂದು ನಮಗೆ ಅನಿಸುತ್ತಿತ್ತು. ಹೀಗಿರುವಾಗ ನಾವು ಮಾಡುತ್ತಿರುವ ವಿದ್ಯಾರ್ಥಿ ಸಂಘಟನೆಯ

ಸಮ್ಮೇಳನಕ್ಕೆ ಅವರು ಸಣ್ಣ ಪ್ರಮಾಣದಲ್ಲಾದರೂ ಧನ ಸಹಾಯ ಮಾಡೇಮಾಡುತ್ತಾರೆಂಬುದು ನನ್ನ ಅನಿಸಿಕೆಯಾಗಿತ್ತು. ಈ ನಡುವೆ ವಿದ್ಯಾರ್ಥಿಗಳು ನಡೆಸಿದ ಕಾರ್ಯಕ್ರಮಗಳಿಗೆ ಅವರು ಧನ ಸಹಾಯ ನೀಡಿದ್ದನ್ನು ನಾನು ಕಂಡಿದ್ದೆ.

ರಾಮದಾಸ್ ಅವರು ಅಧ್ಯಾಪಕರ ಕೊಠಡಿಯಲ್ಲಿದ್ದಾಗ ಅವರನ್ನು ಎಸ್‌ಎಫ್‌ಐ ಅಧ್ಯಕ್ಷರ ಜೊತೆ ಹೋಗಿ ಕಂಡೆ. ಅವರು ವಿಶ್ವಾಸಪೂರ್ವಕವಾಗಿ ಮಾತನಾಡಿಸಿದರು. ನಮ್ಮ ಸಂಘಟನೆಯ ರಾಜ್ಯ ಮುಖಂಡರನ್ನು ಪರಿಚಯಿಸಿದೆ. ಹಾರ್ದಿಕವಾಗಿ ಮಾತನಾಡಿಸಿದರು. ನಾನು ಬಂದ ಉದ್ದೇಶ ತಿಳಿಸಿದೆ. ಅವರು ನನ್ನ ಬಗ್ಗೆ ಇರುವ ವ್ಯಕ್ತಿಗತ ಪ್ರೀತಿಯಿಂದಲಾದರೂ ಖಾಲಿ ಕೈಯಲ್ಲಿ ಕಳುಹಿಸುವುದಿಲ್ಲವೆಂಬುದು ನನ್ನ ಕನಿಷ್ಠ ನಿರೀಕ್ಷೆಯಾಗಿತ್ತು. ಆದರೆ ಹಾಗಾಗಲಿಲ್ಲ. ಅವರು ಸಿಪಿಎಂ ಪಕ್ಷದ ರಾಜಕೀಯ ನಿಲುವುಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸತೊಡಗಿದರು. ಟ್ರೇಡ್ ಯೂನಿಯನ್‌ಗಳಿಂದ ಸಂಗ್ರಹಿಸಿದ ಹಣದಿಂದ ಸಮ್ಮೇಳನ ನಡೆಸಿ ಎಂದರು. ಸಾಂಕೇತಿಕವಾಗಿಯಾದರೂ ಹಣ ನೀಡಿ ಎಂದು ನಾನು ಕೇಳಿದೆ. ಅವರು ಸುತಾರಾಂ ಒಪ್ಪಲಿಲ್ಲ. ನನಗೆ ಮುಖಭಂಗವಾಗಿತ್ತು. ಅವರು ಎಷ್ಟೋ ಸಲ ನಮ್ಮ ಗುಂಪಿಗೆಲ್ಲಾ ಕಾಫಿ ತಿಂಡಿ ಕೊಡಿಸಿದ್ದರು. ಅಷ್ಟು ಹಣ ಕೊಟ್ಟಿದ್ದರೂ ಸಾಕಾಗಿತ್ತು. ನಾನು ಅವರ ವಿದ್ಯಾರ್ಥಿ. ನನ್ನ ಬೇಡಿಕೆಯನ್ನು ಅವರು ನಿರಾಕರಿಸಲಿ. ಆದರೆ ನಮ್ಮ ಸಂಘಟನೆಯ ರಾಜ್ಯ ಮಟ್ಟದ ಮುಖಂಡರು ಬಂದಿರುವಾಗ, ಅದೂ ಅವರು ಬೇಡ ಎಂದು ಹೇಳಿದರೂ ನಾನೇ ಕರೆದುಕೊಂಡು ಬಂದಿರುವಾಗ ಆ ಮಟ್ಟಿಗಾದರೂ ನನ್ನ ಮರ್ಯಾದೆ ಉಳಿಸಬೇಕಾಗಿತ್ತು ಎಂದು ನಾನು ಅಂದುಕೊಂಡೆ.

ಒಂದು ಪ್ರಗತಿಪರ ಸಂಘಟನೆ ಹಣ ಕೇಳಿದಾಗ ಶಾಸ್ತ್ರಕ್ಕಾದರೂ ಸ್ವಲ್ಪ ಹಣ ಕೊಡದಿರುವಷ್ಟು ಹಠ ಯಾಕೆ ಎಂಬುದು ನನಗೆ ಅರ್ಥವಾಗಿರಲಿಲ್ಲ. ನನ್ನ ಜೊತೆ ಬಂದಿದ್ದವರು ಅದರ ಹಿಂದಿನ ರಾಜಕೀಯವನ್ನು ವಿವರಿಸಿದರು. ಅವರು ಲೋಹಿಯಾವಾದಿಗಳು. ನಮ್ಮ ಮಾರ್ಕ್ಸ್‌ವಾದ ಕಾರ್ಮಿಕರ ಸರ್ವಾಧಿಕಾರ ಎಂಬುದನ್ನು ಅವರು ಒಪ್ಪುವುದಿಲ್ಲ. ವರ್ಗ ಹೋರಾಟಕ್ಕಿಂತ ಜಾತಿ ಹೋರಾಟವೇ ಮುಖ್ಯ ಎನ್ನುತ್ತಾರೆ. ಅವರದು ಅರಾಜಕವಾದ. ನಿಯಮಬದ್ಧವಾಗಿ ಪಕ್ಷ ಕಟ್ಟುವುದನ್ನು, ಕಟ್ಟುನಿಟ್ಟಾದ ನಿಯಮಗಳಿಗೆ ಬದ್ಧರಾಗಿ ಸದಸ್ಯರು ಇರಬೇಕೆಂದು ಹೇಳುವುದನ್ನು ಅವರು ಗೇಲಿಮಾಡುತ್ತಾರೆ. ಸಣ್ಣ ಪ್ರಮಾಣದ ಖಾಸಗಿ ಬಂಡವಾಳ ಇರಬೇಕು ಎನ್ನುತ್ತಾರೆ, ಇತ್ಯಾದಿ. ಅವೆಲ್ಲ ನನಗೆ ಎಷ್ಟರ ಮಟ್ಟಿಗೆ ಅರ್ಥವಾದವೋ ಗೊತ್ತಿಲ್ಲ. ಆದರೆ ರಾಮದಾಸ್ ಮುಲಾಜಿಲ್ಲದೆ ತಮಗೆ ಸಮ್ಮತಿ ಇಲ್ಲದಿರುವುದನ್ನು ಬೆಂಬಲಿಸಲು ನಿರಾಕರಿಸುತ್ತಾರೆ ಎಂಬುದು ಗೊತ್ತಾಯಿತು.

ನಂತರದಲ್ಲಿ ಅವರು ಕಂಡಾಗ ನಾನು ಸಹಜವಾಗಿ ಮುಜುಗರಕ್ಕೊಳಗಾಗಿದ್ದೆ. ನನಗೆ ಮುಖಭಂಗ ಮಾಡಿದರು ಎಂಬುದಕ್ಕಿಂತ ಅವರಿಗೆ ಬೇಡದ ಇಕ್ಕಟ್ಟಿನ ಮಾತುಕತೆಯ ಸನ್ನಿವೇಶವೊಂದನ್ನು ಸೃಷ್ಟಿಸಿದ್ದೆನಲ್ಲ ಎಂಬುದೇ ನನ್ನ ಮುಜುಗರಕ್ಕೆ ಕಾರಣವಾಗಿತ್ತು. ರಾಮದಾಸ್ ಮಾತ್ರ ಬೇಸರಗೊಂಡಿದ್ದವರ ಹಾಗೆ ಕಾಣಲಿಲ್ಲ. ಸಮ್ಮೇಳನ ಹೇಗೆ ನಡೆಯಿತು ಎಂಬುದನ್ನು ವಿಚಾರಿಸಿದರು. ಎಸ್‌ಎಫ್‌ಐಗೆ ಯಾಕೆ ಸೇರಿಕೊಂಡೆ ಎಂದು ಬೈಯಬಹುದೆಂಬುದು ನನ್ನ

ಪೆದರಿಕೆಯಾಗಿತ್ತು. ಅವರು ಹಾಗೆನ್ನಲಿಲ್ಲ. ಮತ್ತೆ ಎಂದಿನಂತೆ ತರಗತಿಗೆ ಸಂಬಂಧಿಸಿದ ಅಥವಾ ಕಾಲೇಜಿಗೆ ಸಂಬಂಧಿಸಿದ ಏನಾದರೂ ಕೆಲಸ ನಿರ್ವಹಿಸುವ ತಂಡಗಳಿಗೆ ನನ್ನನ್ನು ಕರೆಯುವುದು ತಪ್ಪಿಸಲಿಲ್ಲ.

ಬಿ.ಎ.ಯಲ್ಲಿ ನಾನು ಕನ್ನಡ ಮಾಧ್ಯಮದಲ್ಲೆ ಉತ್ತರಿಸಿ ರ್‍ಯಾಂಕ್ ಪಡೆದುಕೊಂಡೆ. ಕನ್ನಡ ಭಾಷಾ ವಿಷಯದಲ್ಲಿ ಆ ಸಾಲಿನ ವಿಶ್ವವಿದ್ಯಾನಿಲಯ ಪದವಿ ಪರೀಕ್ಷೆಯಲ್ಲಿ ಎಲ್ಲರಿಗಿಂತ ಹೆಚ್ಚು ಅಂಕ ನಾನು ಪಡೆದಿದ್ದೆ. ಇದಕ್ಕಾಗಿ ವಿಶ್ವವಿದ್ಯಾನಿಲಯ ಕೊಡುವ ದತ್ತಿ ಬಹುಮಾನದ ಚಿನ್ನದ ಪದಕವೂ ನನಗೆ ಸಿಕ್ಕಿತ್ತು. ಕನ್ನಡ ಭಾಷೆಯ ಬಗ್ಗೆ ಅಪಾರ ಪ್ರೀತಿ ಹೊಂದಿದ್ದ ರಾಮದಾಸರು ಇದರಿಂದ ಬಹಳ ಸಂತೋಷಪಟ್ಟರು. ನಾನು ಮಹಾರಾಜಾ ಕಾಲೇಜಿನಲ್ಲಿ ಓದು ಮುಗಿಸಿ ಗಂಗೋತ್ರಿಗೆ ಹೋದ ಮೇಲೂ ಕನ್ನಡದಲ್ಲೆ ಬರೆದು ರ್‍ಯಾಂಕ್ ಗಳಿಸಿದ್ದರ ಬಗ್ಗೆ, ಭಾಷಾ ವಿಷಯದಲ್ಲಿ ಚಿನ್ನದ ಪದಕ ಪಡೆದ ಬಗ್ಗೆ ನಮ್ಮ ನಂತರದ ಬ್ಯಾಚಿನ ತರಗತಿಗಳಲ್ಲಿ ಅವರು ಅಭಿಮಾನದಿಂದ ಮಾತನಾಡಿದ್ದನ್ನು ಕಿರಿಯ ವಿದ್ಯಾರ್ಥಿಗಳು ನನಗೆ ಹೇಳಿದರು. ಕೇವಲ ಹೋರಾಟದ ಹೆಸರಿನಲ್ಲಿ ಬೀದಿ ಅಲೆಯುತ್ತಾ ಸಮಯ ಪೋಲು ಮಾಡುವ ವಿದ್ಯಾರ್ಥಿಗಳ ಬಗ್ಗೆ ಅವರಿಗೆ ಒಳ್ಳೆಯ ಅಭಿಪ್ರಾಯ ಇರಲಿಲ್ಲ. ವಿದ್ಯಾಭ್ಯಾಸ, ಜೀವನದ ಜವಾಬ್ದಾರಿ ನಿರ್ವಹಣೆ ಹಾಗೂ ಸಾಮಾಜಿಕ ಕಾಳಜಿಗಳು ಇವುಗಳಲ್ಲಿ ಎಲ್ಲದರ ಬಗ್ಗೆಯೂ ಹೊಣೆಯರಿತು ನಡೆಯುವ ವಿಧಾನವನ್ನೇ ಅವರು ಹೆಚ್ಚು ಇಷ್ಟಪಡುತ್ತಿದ್ದುದು.

ಈ ನಡುವೆ ನನ್ನ ಮಾರ್ಕ್ಸ್‌ವಾದಿ ರಾಜಕೀಯದ ಬಗ್ಗೆ ಅವರ ಮನಸ್ಸಿನಲ್ಲಿದ್ದುದು ವಿಮರ್ಶೆಯೇ ಹೊರತು ಹೀಯಾಳಿಕೆಯಲ್ಲ ಎಂಬುದು ನನಗೆ ನಿಚ್ಚಳವಾಗತೊಡಗಿತ್ತು. ಹಾಗಾಗಿ ಅವರನ್ನು ಮಾತನಾಡಿಸುವಾಗ ಉಂಟಾಗುತ್ತಿದ್ದ ಅಳುಕೂ ಸಹ ಮಾಯವಾಯಿತು. ನಾನು ಬೀದರ್‌ನ ಕೋಲಾರ ಕೈಗಾರಿಕಾ ಪ್ರದೇಶದ ಮಾಲಿನ್ಯದ ವಿರುದ್ಧ ಹೋರಾಟ ಸಂಘಟಿಸುತ್ತಾ, ತೀವ್ರ ಪೊಲೀಸ್ ದೌರ್ಜನ್ಯಕ್ಕೆ ಗುರಿಯಾಗಿ ಬಂಧನದಲ್ಲಿದ್ದಾಗ ಬಂಧನದ ವಿರುದ್ಧ ಮೈಸೂರಿನಲ್ಲಿ ದನಿಯೆತ್ತಿದವರಲ್ಲಿ ರಾಮದಾಸ್ ಪ್ರಮುಖರಾಗಿದ್ದರು. ಅವರು ನಾನು ಪ್ರತಿಪಾದಿಸುತ್ತಿದ್ದ ತೀವ್ರಗಾಮಿ ಕ್ರಾಂತಿಕಾರಿ ರಾಜಕೀಯ ನಿಲುವುಗಳನ್ನು ಒಪ್ಪುತ್ತಿರಲಿಲ್ಲ. ಆದರೆ ನಾನು ಮೈಸೂರಿಗೆ ಬಂದಾಗಲೆಲ್ಲ ಅವರನ್ನು ಭೇಟಿಯಾಗುವುದು ತಪ್ಪಿಸುತ್ತಿರಲಿಲ್ಲ. ನಾವು ಭೇಟಿಯಾದಾಗ ನಮ್ಮ ನಡುವೆ ಸೈದ್ಧಾಂತಿಕ ಚರ್ಚೆಗಳನ್ನೆತ್ತುವ ಗೊಡವೆಗೆ ಅವರು ಹೋಗುತ್ತಿರಲಿಲ್ಲ. ಅದು ಹೇಗೂ ಬದಲಾಗದಷ್ಟು ಬದ್ಧವಾಗಿದೆ ಎಂದವರು ತೀರ್ಮಾನಿಸಿದ್ದರು. ಆದರೆ ಸಿದ್ಧಾಂತಗಳಿಂದಾಗಿ ನಮ್ಮ ಗುರು ಶಿಷ್ಯ ಬಾಂಧವ್ಯದ ನಡುವೆ ದೊಡ್ಡ ತಡೆಗೋಡೆಯೇನೂ ನಿರ್ಮಾಣವಾಗಿರಲಿಲ್ಲ.

ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ಪದವಿ ಓದುತ್ತಿದ್ದ ಎರಡು ವರ್ಷಗಳು ನನ್ನ ಪಾಲಿಗೆ ಮಹತ್ತರ ಸಾಮಾಜಿಕ ಪಾಠಗಳನ್ನು ಕಲಿಸಿದ ಅವಧಿಯಾಗಿತ್ತು. ಆ ಹೊತ್ತಿಗೆ ನಾನು ಎಸ್‌ಎಫ್‌ಐ ಸಂಘಟನೆಯಿಂದ ಹೊರಬಂದಿದ್ದೆ. ಹಾಗಾಗಿ ಈ ಮೊದಲು ಕಡಿಮೆ ಸಂಪರ್ಕದಲ್ಲಿದ್ದ ರೈತ ಚಳವಳಿ, ವಿಚಾರವಾದಿ ಒಕ್ಕೂಟ, ಜಾತಿ ವಿನಾಶ ವೇದಿಕೆ, ರಟ್ನಹಳ್ಳಿ

ಅಣುಸ್ಥಾವರ ವಿರೋಧಿ ಒಕ್ಕೂಟ, ಬರ ಪರಿಹಾರ ಸಮಿತಿ, ವಿಶ್ವ ಕನ್ನಡ ಸಮ್ಮೇಳನ ವಿರೋಧ ಮುಂತಾದ ಹಲವಾರು ಚಳವಳಿಗಳ ಜೊತೆ ನಿಕಟವಾಗಿ ಬೆರೆತು ಕ್ರಿಯಾಶೀಲನಾದೆ.

ಈ ಎಲ್ಲಾ ಚಟುವಟಿಕೆಗಳಲ್ಲಿ ರಾಮದಾಸ್, ದೇವನೂರು ಮಹಾದೇವ, ಗೋವಿಂದಯ್ಯ, ರಾಮಲಿಂಗಂ, ಹಿ. ಶಿ. ರಾಮಚಂದ್ರೇಗೌಡ, ಶಿವರಾಮು ಕಾಡನಕುಪ್ಪೆ, ಶ್ರೀರಾಮ್ ಮುಂತಾದ ಹಲವರು ಕ್ರಿಯಾಶೀಲರಾಗಿದ್ದರು. ದಿನ ಬಿಟ್ಟು ದಿನ, ಕೆಲವು ಸಲ ದಿನವೂ ಇವರೆಲ್ಲರೊಂದಿಗೆ ನಾವು ಗಂಗೋತ್ರಿಯ ಗಾಂಧಿ ಭವನದಲ್ಲಿ ಸಭೆ ನಡೆಸುತ್ತಿದ್ದೆವು. ತೀವ್ರ ಚಟುವಟಿಕೆಯ ದಿನಗಳವು. ಈ ದಿನಗಳಲ್ಲಿ ರಾಮದಾಸ್ ಹೆಚ್ಚೂ ಕಡಿಮೆ ಈ ಬಗೆಯ ಚಟುವಟಿಕೆಗಳ ಕೇಂದ್ರ ಬಿಂದುವಂತಿರುತ್ತಿದ್ದರು. ಒಟ್ಟಿಗೇ ಸೇರಿ ಕೆಲಸ ಮಾಡುತ್ತಿದ್ದಾಗಲೂ ಹಲವರಿಗೆ ರಾಮದಾಸ್ ಅವರ ಧೋರಣೆಗಳು ಅಷ್ಟು ಒಪ್ಪಿಗೆಯಾಗುತ್ತಿರಲಿಲ್ಲ. ಕೆಲವು ಸಲ ಇದರಿಂದ ಸಭೆಗಳಲ್ಲಿ ವಾಗ್ವಾದವಾಗುತ್ತಿತ್ತು.

ವಾದ ವಿವಾದ, ಭೇದ ಭಿನ್ನಾಭಿಪ್ರಾಯ ಇವುಗಳ ನಡುವೆಯೇ ಸಾಮಾಜಿಕ ಕಾರಣಕ್ಕಾಗಿ ಒಂದಾಗಿ ಕೆಲಸ ಮಾಡುವುದು ಹೇಗೆಂಬುದನ್ನು ಆ ಗುಂಪಿನಲ್ಲಿ ನಾನು ಕಲಿಯತೊಡಗಿದ್ದೆ. ವಿಶ್ವ ಕನ್ನಡ ಸಮ್ಮೇಳನ ವಿರೋಧಿ ಒಕ್ಕೂಟದ ಪ್ರತಿಭಟನಾ ಕಾರ್ಯಕ್ರಮದ ಅಂಗವಾಗಿ ನಾವೆಲ್ಲಾ ವಿಶ್ವ ಕನ್ನಡ ಸಮ್ಮೇಳನದ ಹಿಂದಿನ ದಿನದಿಂದ ಹಿಡಿದು ಅದು ಮುಗಿದ ಮಾರನೇ ದಿನದವರೆಗೆ ಪೋಲೀಸರ ಅತಿಥಿಗಳಾಗಿ ಜೈಲಿನಲ್ಲಿದ್ದೆವು. ಮೈಸೂರಿನ ಪ್ರಗತಿಪರ ಲೇಖಕರು ಹಾಗೂ ಮುಖಂಡರು ಬಹುಪಾಲು ಜನ ಹಾಗೆ ಬಂಧನಕ್ಕೊಳಗಾಗಿದ್ದರು. ಜೈಲಿನಲ್ಲೇ ನಾವು ಅಧ್ಯಯನ ಶಿಬಿರ ನಡೆಸಿದೆವು. ಅಲ್ಲಿ ರಾಮದಾಸ್ ನಮ್ಮ ಜೊತೆ ಮತ್ತಷ್ಟು ಆಪ್ತತೆಯಿಂದ ಬೆರೆತರು. ರಾತ್ರಿ ಎಷ್ಟೋ ಹೊತ್ತಿನವರೆಗೆ ನಾವೆಲ್ಲಾ ಗುಂಪಾಗಿ ಅವರ ಹೋರಾಟದ ವಿವಿಧ ಅನುಭವಗಳನ್ನು ಕೇಳಿಸಿಕೊಳ್ಳುತ್ತಿದ್ದೆವು.

ಜೈಲಿನಲ್ಲಿ ಇರುವಾಗ ಸಿಗರೇಟು, ಬೀಡಿ ಚಟವಿರುವವರಿಗೆ ಅದರ ಸರಬರಾಜು ಒದಗಿಸುವುದೇ ಒಂದು ಮುಖ್ಯ ವಿಷಯವಾಗಿತ್ತು. ಸ್ವತಃ ಸಿಗರೇಟು ಪ್ರಿಯರಾದ ರಾಮದಾಸ್ ಸಿಗರೇಟು ಹಂಚಿಕೆಯ ಜವಾಬ್ದಾರಿ ವಹಿಸಿಕೊಂಡಿದ್ದರು. ಬಂಧನಕ್ಕೊಳಗಾಗದೆ ಹೊರಗಡೆ ಇದ್ದ ನಮ್ಮ ಹೋರಾಟದ ಹಿತೈಷಿಗಳು ಹಾಗೂ ರಾಮದಾಸ್ ಮತ್ತಿತರರ ಗೆಳೆಯರು ಜೈಲಿನಲ್ಲಿದ್ದ ನಮಗೆ ಸಿಗರೇಟು, ಹಣ್ಣುಹಂಪಲು ಇತ್ಯಾದಿಗಳನ್ನು ತಂದುಕೊಡುತ್ತಿದ್ದರು. ಬೆಳಿಗ್ಗೆ ಎದ್ದೊಡನೆ ನಮ್ಮೆಲ್ಲರಿಗೂ ಸಮಾನವಾಗಿ ಒಂದು ನಿಗದಿತ ಪ್ರಮಾಣದಲ್ಲಿ ಸಿಗರೇಟು ಮತ್ತು ಬೀಡಿಗಳನ್ನು ರಾಮದಾಸ್ ಹಂಚುತ್ತಿದ್ದರು. ಪೋಲೀಸರು ತಂದು ಕೊಟ್ಟ ಭರ್ಜರಿ ಊಟವನ್ನು ಮಾಡುವುದನ್ನು ಬಿಟ್ಟರೆ ನಮಗೆ ಬೇರೆ ಕೆಲಸವಿರುತ್ತಿರಲಿಲ್ಲ. ಹಾಗಾಗಿ ಬೀಡಿ, ಸಿಗರೇಟು ರೇಷನ್ ಬಹಳ ಬೇಗನೆ ಮುಗಿದುಹೋಗುತ್ತಿತ್ತು. ರಾಮದಾಸ್ ಬಳಿ ಇರುವ ಸಿಗರೇಟು ಸಂಗ್ರಹದಿಂದ ಹೆಚ್ಚಿನ ಪಾಲನ್ನು ಕೇಳುವಂತಿರಲಿಲ್ಲ. ಅವರಿವರನ್ನು ಕಾಡುತ್ತಾ, ಬೇಡುತ್ತಾ ಓಡಾಡುತ್ತಿದ್ದ ನನ್ನಂತಹವರ ಮೇಲೆ ಅವರಿಗೆ ಕರುಣೆ ಹುಟ್ಟಿ, ಒಮ್ಮೊಮ್ಮೆ ಅವರ ಪಾಲಿನಿಂದಲೇ ಒಂದು ಸಿಗರೇಟನ್ನು ಕೊಡುತ್ತಿದ್ದುದೂ ಉಂಟು.

ರಾಮದಾಸ್ ಅವರ ಶ್ರೀಮತಿ ನಿರ್ಮಲಾ, ನಾವು ಜೈಲಿನಲ್ಲಿದ್ದಾಗ ಅಲ್ಲಿರುವವರಿಗೆಲ್ಲಾ ಆಗುವಷ್ಟು ಬಗೆಬಗೆಯ ಅಡುಗೆ ಮಾಡಿ ತಂದು ಕೊಡುತ್ತಿದ್ದುದೂ ನನಗೆ ನೆನಪಿಗೆ ಬರುತ್ತಿದೆ.

ನಮ್ಮ ಹುಡುಗರ ಗುಂಪಿಗೆ ಆ ದಿನಗಳು ಬಹಳ ಸ್ಮರಣೀಯ ಅನುಭವವನ್ನು, ತಿಳವಳಿಕೆಯನ್ನು, ಸಾಂಘಿಕ ಜೀವನದ ಕಷ್ಟ ಸುಖಗಳ ಪರಿಚಯವನ್ನು ಒದಗಿಸಿದವು. ಜೈಲಿನಿಂದ ಹೊರಬಂದ ಕೆಲವು ದಿನ ನಮಗೆ ಮತ್ತೆ ಜೈಲಿಗೇ ಹೋಗಿ ಅದೇ ರೀತಿಯ ರಸವತ್ತಾದ ದಿನಗಳನ್ನು ಕಳೆಯಬೇಕೆಂಬ ಆಸೆ ಉಂಟಾಗುತ್ತಿತ್ತು. ಬೇರೆ ಬೇರೆ ಸಂಘಟನೆಗಳ ಬೇರೆ ಬೇರೆ ಸಿದ್ಧಾಂತಗಳ ಕ್ರಿಯಾಶೀಲರೆಲ್ಲಾ ಒಂದಾಗಿ ಬೆರೆತು ಕನ್ನಡ ನಾಡು ನುಡಿಯ ಉಳಿವಿಗೆ ಜನಪರ ನಿಲುವಿನಿಂದ ನಡೆಸಿದ ಅಂತಹ ಹಲವು ಹೋರಾಟಗಳಲ್ಲಿ ರಾಮದಾಸ್ ನಮ್ಮೆಲ್ಲರ ಪ್ರೀತಿಯ ಮೇಷ್ಟರಾಗಿದ್ದರು. ಕ್ಲಾಸಿನಲ್ಲಿ ಪಾಠ ಮಾಡುತ್ತಿರುವಷ್ಟೇ ಗಂಭೀರವಾಗಿ ಅವರು ಇಂತಹ ಸಂದರ್ಭಗಳಲ್ಲಿ ಭಾಷಣಗಳನ್ನೂ ಮಾಡುತ್ತಿದ್ದರು. ಸಾಮಾನ್ಯವಾಗಿ ಸಭೆಯ ಭಾಷಣಗಳಲ್ಲಿ ಅವರದೇ ಹೈಲೈಟ್. ಸಂದರ್ಭಕ್ಕನುಸಾರವಾಗಿ, ಖಚಿತವಾಗಿ ತಮ್ಮ ನಿಲುವುಗಳನ್ನು ಮಂಡಿಸುತ್ತಾ ಕೇಳುಗರನ್ನು ಪ್ರಭಾವಿಸುತ್ತಿದ್ದ ಅವರ ಮಾತಿನ ರೀತಿ ನಮ್ಮೆಲ್ಲರಿಗೆ ಬಹಳ ಇಷ್ಟವಾಗುತ್ತಿತ್ತು.

ಪೋಲೀಸರ ಜೊತೆ ವಾದ ವಿವಾದ ಮಾಡುವುದಿರಲಿ, ನಮ್ಮ ಚಳವಳಿಗಳ ವಿರೋಧಿಗಳೊಂದಿಗೆ ವಾಗ್ವಾದ ನಡೆಸುವುದಿರಲಿ, ಅವುಗಳಲ್ಲಿ ರಾಮದಾಸ್ ಹಾಜರಿದ್ದರೆಂದರೆ ನಮ್ಮೆಲ್ಲರಿಗೆ ವಿಚಿತ್ರ ಧೈರ್ಯ ಮತ್ತು ಸ್ಫೂರ್ತಿ ಉಂಟಾಗುತ್ತಿತ್ತು. ಅವರು ತರಗತಿಯಲ್ಲಿ ನಮಗೆ ಯಾವ ಪಾಠ ಮಾಡಿದರು ಎಂಬುದು ಬಹಳ ಅಸ್ಪಷ್ಟವಾಗಿ ಮಾತ್ರ ನೆನಪಲ್ಲಿದೆ. ಆದರೆ ಅವರು ನಮ್ಮೊಂದಿಗೆ ತರಗತಿಗಳ ಹೊರಗೆ ಆಡಿದ ಮಾತು, ಒಡನಾಡಿದ ಸನ್ನಿವೇಶಗಳು, ನಡೆಸಿದ ವಾದ ವಿವಾದಗಳು, ಹೋರಾಟದ ಹಾದಿಯಲ್ಲಿ ತುಂಬಿದ ಪ್ರೇರಣೆಗಳು ಇವೆಲ್ಲ ಸ್ಪಷ್ಟವಾಗಿ ಮನದಲ್ಲಿ ಅಚ್ಚೊತ್ತಿವೆ. ಇಂತಹ ಘಟನೆಗಳನ್ನು ವಿವರಿಸುತ್ತಾ ಹೋದರೆ ಅದೇ ಒಂದು ಪುಸ್ತಕದಷ್ಟಾಗಿಬಿಡುತ್ತದೆ. ಈಗ ಇಲ್ಲಿ ಅದನ್ನೆಲ್ಲಾ ವಿವರವಾಗಿ ಬರೆಯಲು ಸಾಧ್ಯವಿಲ್ಲ.

ನಾನು ನನ್ನ ವಿದ್ಯಾಭ್ಯಾಸ ಹಾಗೂ ಸಾಮಾಜಿಕ ಕ್ರಿಯಾಶೀಲತೆಯ ಅಭ್ಯಾಸ ಇವುಗಳ ಸಂದರ್ಭದಲ್ಲಿ ಏನನ್ನೇ ನೆನಪಿಸಿಕೊಂಡರೂ, ಆ ನೆನಪಿನ ಬಹಳ ದೊಡ್ಡ ಭಾಗವಾಗಿ ರಾಮದಾಸ್ ತುಂಬಿಕೊಂಡಿರುತ್ತಾರೆ. ಶಿಷ್ಯನಾಗಿ ಇಂತಹವರೆಲ್ಲರ ಒಡನಾಟದಲ್ಲಿ ಬೆಳೆದೆ ಎಂಬುದೇ ನನ್ನೊಳಗೆ ಈ ಗಳಿಗೆಗೂ ಅತ್ಯಂತ ಕೃತಜ್ಞತೆಯ ಭಾವನೆಯನ್ನು ಉಂಟು ಮಾಡುತ್ತಿದೆ. ರಾಮದಾಸ್ ಅವರು ಇದನ್ನು ಓದಲು ಇಲ್ಲಿಲ್ಲದಿರುವ ಸಮಯದಲ್ಲಿ ನಾನು ಸಲ್ಲಿಸಬಹುದಾದ ಗುರು ಕಾಣಿಕೆಯೆಂದರೆ ಈ ಹೃದಯಪೂರ್ವಕ ಕೃತಜ್ಞತೆಯೇ ಆಗಿದೆ.

# ಮನೆಯುಂಗಳ

# ಮಂಜಮ್ಮ ಎಂಬ ಅಪ್ಪಟ ತಾಯಿ

ಡಾ. ರಾಜೇಂದ್ರಸಿಂಗ್

ಕರ್ನಾಟಕದಲ್ಲಿ ಕೋಮುವಾದಿಗಳಿಗೆ, ಜಾತಿವಾದಿಗಳಿಗೆ, ಮಠಮಾನ್ಯಗಳಿಗೆ ಅಷ್ಟೆ ಅಲ್ಲ, ಢೋಂಗಿ ವಿಚಾರವಾದಿಗಳಿಗೂ ಸಹಿತ ಸಿಂಹಸ್ವಪ್ನವಾಗಿದ್ದ ಪ್ರೊ. ರಾಮದಾಸ್ ವಿಶೇಷತೆ ಎಂದರೆ ತಮ್ಮ ಹೋರಾಟದ ಬದುಕಿನ ಉದ್ದಕ್ಕೂ ಎಂತಹ ಸಂದರ್ಭದಲ್ಲೂ ರಾಜಿಯಾಗದೆ, ಸಾಯುವವರೆವಿಗೂ ದಣಿವರಿಯದಿದ್ದ ಏಕೈಕ ಪ್ರಗತಿಪರ ಹೋರಾಟಗಾರ ಎಂದು ಕರ್ನಾಟಕದ ಪ್ರಗತಿಪರ ಚರಿತ್ರೆಯಲ್ಲಿ ದಾಖಲಿಸಬೇಕಾದ ಸಂಗತಿ. ವಿಚಾರವಾದವನ್ನು ಹಾಸಿ ಹೊದ್ದು ಬದುಕಿದ ರಾಮದಾಸ್ ಸತ್ತಾಗಲೂ ಅದಕ್ಕೆ ಚ್ಯುತಿ ಬರದಂತೆ ಕಾಪಾಡಿಕೊಂಡವರು. ರಾಮದಾಸ್‌ಗಿದ್ದ ಸಮಸ್ಯೆಗಳು, ಕ್ರೈಸಿಸ್‌ಗಳು ಬೇರೆ ಯಾರಿಗೆ ಇದ್ದಿದ್ದರೂ ಚಳವಳಿಯಿರಲಿ ಎಂದೋ ಮೂಲೆ ಸೇರಿಬಿಡುತ್ತಿದ್ದರು.

ರಾಮದಾಸ್ ಬಲಾಢ್ಯ ಜಾತಿಗೆ ಸೇರಿದವರಾಗಿರಲಿಲ್ಲ. ಕನಿಷ್ಠಪಕ್ಷ ಸಂಖ್ಯಾ ದೃಷ್ಟಿಯಿಂದ ಬಹುಸಂಖ್ಯಾತರಾಗಿರುವ ದಲಿತರೂ ಆಗಿರಲಿಲ್ಲ. ಜಾತಿ ವಿಚಾರದಲ್ಲಿ ಅವರದೊಂದು ವಿಸ್ಮಯ ಬದುಕು. ಬಹುಶಃ ತನ್ನದೊಂದು ಜಾತಿ ಎಂಬ ಮೋಹಕ್ಕಾದರೂ ಬಲಿಯಾಗಬಾರದೆನ್ನುವ ಕಾರಣದಿಂದ ತಮ್ಮ ಜಾತಿ ಯಾವುದೆಂದು ಯಾರಿಗೂ ತಿಳಿಸದೆ ಸದರಿ ರೈತರ, ದಲಿತರ, ಹಿಂದುಳಿದವರ ಪರವಾಗಿ ಹೋರಾಟ ಮಾಡಿದ ರಾಮದಾಸ್‌ರ ಜೀವನ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಅತ್ಯಂತ ಆಶ್ಚರ್ಯಕರವಾದದ್ದು.

ರಾಮದಾಸ್ ತಾವು ಮಾಡುತ್ತಿದ್ದ ಹೋರಾಟಗಳಿಂದಲೆ ಅವರೆ ಅನೇಕ ಸಮಸ್ಯೆಗಳಿಗೆ ಸಿಲುಕಿಕೊಳ್ಳುತ್ತಿದ್ದರು. ಶಿವಮೊಗ್ಗದಿಂದ ಕಾಲೇಜು ಓದಲು ಮೈಸೂರಿಗೆ ಬಂದಾಗ ರಾಮದಾಸ್‌ಗೆ ಮೈಸೂರಿನಲ್ಲಿ ಯಾರೂ ಗೊತ್ತಿರಲಿಲ್ಲ. ಮುನಿಸಿಪಲ್ ಹಾಸ್ಟೆಲ್ ಸೇರಿದ ರಾಮದಾಸ್ ಸಹಪಾಠಿಗಳ ಹಿತಾಸಕ್ತಿಗಾಗಿ ತಟ್ಟೆ ಚಳವಳಿ ಮಾಡಲು ಹೋಗಿ ಬೀದಿಗೆ ಬಿದ್ದರು. ಆ

ಸಂದರ್ಭದಲ್ಲಿ ಬಡ ಮಕ್ಕಳಿಗೆ ಒಪ್ಪೊತ್ತಿನ ಊಟ ಹಾಕುತ್ತಿದ್ದ ಅನಾಮಧೇಯ ಮುದುಕಿಯೊಬ್ಬರ ಮನೆಯಲ್ಲಿ ಒಪ್ಪೊತ್ತಿನ ಊಟ ಮಾಡಿ ಕುಕ್ಕರಹಳ್ಳಿ ಕೆರೆ ಏರಿ ಮೇಲೆ ಬರಿಗಾಲಲ್ಲಿ ನಡೆದು ಎಂ. ಎ ಮಾಡಿದರು.

ನಾನು ಮಹಿಳಾ ಕಾಲೇಜಿನಲ್ಲಿ ರಾಮದಾಸರ ವಿದ್ಯಾರ್ಥಿಯಾಗಿದ್ದೆ. ಅದ್ಭುತ ವಾಗ್ಮಿಯಾಗಿದ್ದ ರಾಮದಾಸ್‌ರ ತರಗತಿ ಎಂದರೆ ಅಲ್ಲೊಂದು ಶಿಸ್ತು ಇರಲೇಬೇಕಾಗಿತ್ತು. ಕನ್ನಡ ಸಾಹಿತ್ಯದ ಬಗ್ಗೆ ಅವರಿಗಿದ್ದ ಅಪಾರ ಪ್ರತಿಭೆ ಎಂತಹವರನ್ನೂ ಮಂತ್ರಮುಗ್ಧರನ್ನಾಗಿಸುತ್ತಿತ್ತು. ಅವರದು ಕಂಚಿನ ಕಂಠ, ಸುಂದರ ಕಾಯ. ಯಾವುದೋ ಪೌರಾಣಿಕ ಚಿತ್ರದ ರಾಜ್‌ಕುಮಾರ್‌ನಂತೆ ಸುಂದರವಾಗಿ, ಲಕ್ಷಣವಾಗಿದ್ದ ರಾಮದಾಸ್ ದೈಹಿಕವಾಗಿಯೂ ಬಲಾಢ್ಯರು. ತಮ್ಮ ಆಕರ್ಷಕ, ವಿಭಿನ್ನ ನಡವಳಿಕೆಗಳಿಂದ ಎಂತಹ ಪ್ರತಿಗಾಮಿಯನ್ನೂ ಪ್ರಗತಿಪರನನ್ನಾಗಿ ಮಾರ್ಪಡಿಸುವ ಅಗಾಧಶಕ್ತಿ ಅವರಲ್ಲಿತ್ತು. ರಾಮದಾಸರ ವಿಶೇಷತೆ ಎಂದರೆ ತಾವು ಮಾತ್ರ ಹೋರಾಟಗಾರರಾಗಿ ರೂಪಿತವಾಗಿದ್ದಲ್ಲ. ಸುಮಾರು ೪೦ ವರ್ಷಗಳ ಸುಧೀರ್ಘ ಹೋರಾಟದ ಬದುಕಿನಲ್ಲಿ ಬಹಳಷ್ಟು-ಹೋರಾಟಗಾರರನ್ನು ಹುಟ್ಟುಹಾಕಿದುದು ಅವರ ಬಹುದೊಡ್ಡ ಸಾಧನೆ. ಗ್ರಾಮೀಣ ಭಾಗದಿಂದ ಬಂದಿದ್ದ ನಮ್ಮಂತಹ ಅನೇಕ ಮೂಢ ವಿದ್ಯಾರ್ಥಿಗಳನ್ನು ವಿಚಾರವಂತರಾಗುವಂತೆ ಪ್ರೇರೇಪಿಸಿದ ಕೀರ್ತಿ ರಾಮದಾಸ್ ಅವರದು. ಒಂದು ಜನಾಂಗವೇ ಆ ಕಾಲದಲ್ಲಿ ಮೈಸೂರಿನಲ್ಲಿ ಬದಲಾಯಿತೆಂದರೆ ಅದಕ್ಕೆ ಪ್ರೊ. ರಾಮದಾಸ್ ಕಾರಣರು. ಎಷ್ಟೋ ಜಾತಿವಾದಿ, ಕೋಮುವಾದಿ ವಿದ್ಯಾರ್ಥಿಗಳು ರಾಮದಾಸರ ಹೋರಾಟಗಳಿಂದ ಪ್ರಭಾವಿತರಾಗಿ ಜಾತಿ ವಿನಾಶದ ಚಳವಳಿಯಲ್ಲಿ ಭಾಗವಹಿಸಿದುದು ಮಾತ್ರವಲ್ಲ, ಅಂತರಜಾತಿ ವಿವಾಹಗಳ ಮುಖೇನ ತಮ್ಮ ಜೀವನದಲ್ಲಿ ಅದನ್ನು ಅಳವಡಿಸಿಕೊಂಡರು. ಇವತ್ತಿಗೂ ಕರ್ನಾಟಕದ ಮೂಲೆ ಮೂಲೆಯಲ್ಲಿ ಅನ್ಯಾಯಗಳ ವಿರುದ್ಧ ಒಂದು ಪ್ರತಿಕ್ರಿಯೆ ಸೃಷ್ಟಿಯಾಗುತ್ತಿದೆ ಎಂದರೆ ಅಲ್ಲೊಬ್ಬ ರಾಮದಾಸ್ ಶಿಷ್ಯನಿದ್ದಾನೆ ಎಂದೇ ಅರ್ಥ.

ಮೈಸೂರಿನಲ್ಲಿ ಅವರೇ ಬೆಳೆಸಿದ್ದ ಕರ್ನಾಟಕ ವಿಚಾರವಾದಿ ಒಕ್ಕೂಟದ ಕಾರ್ಯದರ್ಶಿಯಾಗಿ ನಾನು ಅನೇಕ ವರ್ಷ ಕೆಲಸ ಮಾಡುವ ಸಂದರ್ಭದಲ್ಲಿ ಡಾ. ರಾಮಲಿಂಗಂ ಅದರ ಅಧ್ಯಕ್ಷರಾಗಿದ್ದರು. ರಾಮದಾಸ್ ನಮಗೆ ಮಾರ್ಗದರ್ಶಕರಾಗಿದ್ದರು. ಈ ಒಕ್ಕೂಟದ ವತಿಯಿಂದ ನೂರಾರು ಅಂತರಜಾತಿ ವಿವಾಹಗಳನ್ನು ಮಾಡಿಸಿದೆವು. ಜಾತಿವಿನಾಶಕ್ಕೆ ಅಂತರಜಾತಿ ವಿವಾಹವೇ ಮದ್ದೆಂದು ರಾಮದಾಸ್ ತಿಳಿದಿದ್ದರು. 'ಮಾನವ ಮಂಟಪ'ಅಸ್ತಿತ್ವಕ್ಕೆ ಬರಲು ಕಾರಣರಾದರು.

ಪ್ರೊ. ರಾಮದಾಸ್‌ರ ಮನೆ ಸರಳ, ಅಂತರಜಾತಿ ವಿವಾಹಕ್ಕೆ ಒಂದು ವೇದಿಕೆಯಾಗಿತ್ತು. ಆ ಕಾಲದಲ್ಲಿ ಮೈಸೂರಿನ ಸುತ್ತಮುತ್ತ ಪ್ರೇಮಿಗಳು ಮನೆ ಬಿಟ್ಟು ಓಡಿಬಂದಿದ್ದಾರೆ ಎಂದರೆ ಅವರು ರಾಮದಾಸ್ ಮನೆಯಲ್ಲಿ, ಅವರ ರಕ್ಷಣೆಯಲ್ಲಿ ಇದ್ದಿರಬಹುದೆಂದು ತಿಳಿದಿದ್ದ ಕಾಲವೇ ಇತ್ತು. ರಾಮದಾಸ್‌ರ ತಾಯಿ ಮಂಜಮ್ಮ, ಪತ್ನಿ ನಿರ್ಮಲಾ ಮೇಡಂ, ಮಗಳು ಸ್ನೇಹಾ ಸಾಕಷ್ಟು ರಿಸ್ಕ್ ತೆಗೆದುಕೊಳ್ಳುತ್ತಿದ್ದರು. ಗಂಗೋತ್ರಿ ಕ್ವಾರ್ಟಸ್‌ನಲ್ಲಿ ರಾಮದಾಸ್, ರಾಮಲಿಂಗಂ ಮನೆ ಅಕ್ಕಪಕ್ಕದಲ್ಲಿತ್ತು. ಒಂದು ವಧುವಿನ ಮನೆ ಇನ್ನೊಂದು ವರನ ಮನೆ. ಅವರ ಕಡೆಯವರು

ಎಂದು ಅಟ್ಯಾಕ್ ಮಾಡಬಹುದೆಂದು ನಾವೊಂದಿಷ್ಟು ವಿದ್ಯಾರ್ಥಿಗಳು ಇವರುಗಳ ಮನೆಯಲ್ಲಿ ಕ್ಯಾಂಪ್ ಮಾಡುತ್ತಿದ್ದೆವು.ನಮ್ಮ ಊಟ, ತಿಂಡಿ, ಚಹ ಎಲ್ಲವೂ ರಾಮದಾಸ್ ಅವರ ಖರ್ಚಿನಲ್ಲಿ ನಡೆಯುತ್ತಿತ್ತು. ಸಬ್‌ರಿಜಿಸ್ಟ್ರಾರ್‌ಗಳ ಜೊತೆ ಜಗಳ ಮಾಡಿ ಮದುವೆ ನೋಂದಣಿ ಮಾಡಿಸುವವರೆಗೆ ರಾಮದಾಸ್‌ರವರಿಗೆ ನಿದ್ರೆ ಹತ್ತುತ್ತಿರಲಿಲ್ಲ. ರಾಮದಾಸ್‌ರ ಹೋರಾಟದ ಹಿಂದೆ ಅವರ ತಾಯಿ, ಪತ್ನಿ, ಮಗಳ ಕೊಡುಗೆ ನಾವೆಂದೂ ಮರೆಯಬಾರದು. ಅವರ ತಾಯಿ ಮಂಜಮ್ಮ ಅನಕ್ಷರಸ್ಥೆ, ದಿಟ್ಟ ಹೆಂಗಸು ಹೋರಾಟಗಾರ್ತಿ. ಮ್ಯಾಕ್ಸಿಂ ಗಾರ್ಕಿಯ ತಾಯಿಯನ್ನು ನಾನು ಇವರಲ್ಲಿ ಕಂಡಿದ್ದೆ. ಗೋಕಾಕ್ ಚಳವಳಿ ಸಂದರ್ಭ; ಮೈಸೂರಿನಲ್ಲಿ ಚಳವಳಿ ಹತ್ತಿಕ್ಕಬೇಕಾದರೆ ರಾಮದಾಸ್‌ರನ್ನು ಹತ್ತಿಕ್ಕಬೇಕೆಂದು ಸರ್ಕಾರ, ಪೊಲೀಸ್ ತಿಳಿದಿತ್ತು. ರಾಮದಾಸ್, ರಾಮಲಿಂಗಂ ಮನೆ ಸುತ್ತ ಪೊಲೀಸ್ ಪಡೆ ಓಡಾಡುತ್ತಿತ್ತು. ರಾಮದಾಸ್‌ರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರೆ ಅವರನ್ನು ಕೆಲಸದಿಂದ ತೆಗೆಯಬಹುದೆಂದು ತಿಳಿದಿತ್ತು. ನಾವು ಇದನ್ನು ತಿಳಿದು ನಾವು ಚಳವಳಿ ಮುಂದುವರೆಸುತ್ತೇವೆ. ನೀವು ಬರಬೇಡಿ ಎಂದೆವು. ರಾಮದಾಸ್ ಇರಲಿ, ಅವರ ತಾಯಿ ಇದಕ್ಕೆ ಒಪ್ಪಲಿಲ್ಲ. 'ಎಲ್ಲರೂ ಹೊರಗೆ ಪೊಲೀಸರಿಂದ ಏಟು ತಿನ್ನುತ್ತಿದ್ದರೆ ಮಗ ಮನೆಯಲ್ಲಿ ಮಲಗಿರಬೇಕಾ? ಚಳವಳಿ ಮಾಡಿ ಏನಾದರೂ ಪರವಾಗಿಲ್ಲ' ಎಂದರು. ಇಂತಹ ತಾಯಿ ಮಂಜಮ್ಮ.

ರಾಮದಾಸ್ ಮನೆ ಬೆಳಿಗ್ಗೆಯಿಂದ ರಾತ್ರಿಯವರೆಗೆ ಒಂದು ಪ್ರಗತಿಪರ ಚಟುವಟಿಕೆಗಳ ಕೇಂದ್ರವಾಗಿತ್ತು. ತೇಜಸ್ವಿ, ಲಂಕೇಶ್, ನಂಜುಂಡಸ್ವಾಮಿ, ಜಿ.ಹೆಚ್. ನಾಯಕರು, ದೇವನೂರು, ಕೋಟಿ ಸೇರಿದಂತೆ ಸದಾ ಬುದ್ಧಿಜೀವಿಗಳು ಸೇರಿ ಪ್ರಗತಿಪರ ಹೋರಾಟ ರೂಪಿಸುವ ಕೇಂದ್ರವಾಗಿತ್ತು. ಇಂದು ಪ್ರಗತಿಪರ ಚಳವಳಿಯ ನೇತಾರ 'ಚಾರ್ವಾಕ' ದಿಂದ ಹೊರಹೋಗಿದ್ದಾರೆ. ಚಹ ಸಿಗರೇಟು ಘಾಟು, ಬೆತ್ತದ ಚೇರು ಅನಾಥವಾಗಿವೆ; ನಮ್ಮಂತಹ ಸಾವಿರಾರು ಶಿಷ್ಯರೊಡನೆ.

# ಪ್ರೊ. ಕೆ. ರಾಮದಾಸ್ ಬಾಲ್ಯ

ವಿಲಿಯಂ

ನಾಡಿನ ಅಪರೂಪದ ಪ್ರೊಫೆಸರ್, ಪ್ರಖರ ಚಿಂತಕ, ಹೋರಾಟಗಾರ, ಪ್ರೊ.ಕೆ. ರಾಮದಾಸ್ ನಿಧನ, ನಮ್ಮ ಸಾಂದರ್ಭಿಕ ಚಿಂತನಾ ನೆಲೆಗೆ, ದೃಢ ಹೋರಾಟಕ್ಕೆ ಆಘಾತವಾಗಿದೆ ಎನ್ನುವುದು ಸತ್ಯ. ಪ್ರಾಮಾಣಿಕತೆ, ಪ್ರಾಂಜಲತೆ, ಸತ್ಯಪರತೆ, ನಿಷ್ಠುರತೆ, ಕಳಕಳಿಯ ಹೋರಾಟ ಯಾವತ್ತೂ ಪಕ್ಷಾತೀತವೆನ್ನಲು ನಮ್ಮ ನಡುವಿನ ಜೀವಂತ ಸಾಕ್ಷಿ ಇವರು. ಅಹಿಂಸೆ ಮತ್ತು ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಗಟ್ಟಿಯಾಗಿಡಲು ಕೊನೆಯವರೆಗೂ ಹೋರಾಡಿದವನು ರಾಮದಾಸ್. ನೇರ ನಡೆನುಡಿಯ ಪ್ರಾಮಾಣಿಕ ನಿಲುವಿನ ಅಪ್ಪಟ ವಿಚಾರವಾದಿ, ಈ ನಾಡಿನ ರಾಜಕೀಯ, ಸಾಮಾಜಿಕ ಚಳವಳಿಗಳ ಈ ನಿರ್ಭೀತ ಗಟ್ಟಿ ವ್ಯಕ್ತಿತ್ವ. ಯಾರ ಮುಲಾಜಿಗೂ ಬಾಗದೆ ಅನ್ಯಾಯಗಳ ವಿರುದ್ಧ ಏಳುತ್ತಿದ್ದ ಅಪೂರ್ವ ಧ್ವನಿ. ಸ್ವಾಭಿಮಾನ ಛಲವಂತಿಕೆ, ರಾಮದಾಸ್‌ಗೆ ರಕ್ತಗತವಾಗಿದ್ದ ಸಹಜಗುಣ.

ರಾಮದಾಸ್ ನನ್ನ ಬಾಲ್ಯ ಸ್ನೇಹಿತ, ಸಹಪಾಠಿ, ಒಂದೇ ಕೇರಿಯಲ್ಲಿ ಎದುರುಬದುರಿನ ಮನೆ ಎನ್ನುವದು ನನ್ನ ಬದುಕಿಗೆ ಸೇರಿದ ದ್ರವ್ಯ. ನನ್ನ ಕೇವಲ ಒಂದಿಬ್ಬರು ಏಕವಚನದ ಮಿತ್ರರಲ್ಲಿ ರಾಮದಾಸ್ ಕೂಡ ಒಬ್ಬನು. ಅಲ್ಲಿಂದ ಇಲ್ಲಿಯವರೆಗೆ ರಾಮದಾಸ್‌ನನ್ನು ನೋಡುತ್ತಾ, ಕೇಳುತ್ತಾ, ಓದುತ್ತಾ ಬಂದೆ. ಎಲ್ಲರ, ಮುಖ್ಯವಾಗಿ ಶೋಷಿತರ ಬೇನೆ ಬೇಸರ, ಸಂಕಟ ನೋವು ಪರದಾಟಗಳಿಗೆ ಹೆಗಲನ್ನು ಕೊಟ್ಟು ತನ್ನ ಹೆಗಲನ್ನು ಸವೆಸಿಕೊಂಡ ವ್ಯಕ್ತಿ ರಾಮದಾಸ್. ಈತ ಸಾರ್ವಜನಿಕ ವ್ಯಕ್ತಿ. ತನ್ನ ಕುಟುಂಬವನ್ನು ಸಹ ಇದೇ ನೆಲೆಯಲ್ಲಿ ಕಂಡ ಮನುಷ್ಯ. ತನಗಾಗಲಿ, ತನ್ನ ಕುಟುಂಬಕ್ಕಾಗಲಿ ರಾಮದಾಸ್ ಯಾವತ್ತೂ ತನ್ನ ಸಾರ್ವಜನಿಕ ವ್ಯಕ್ತಿತ್ವವನ್ನು ಉಪಯೋಗಿಸಲೇ ಇಲ್ಲ. ಮನಸ್ಸು ಮಾಡಿದ್ದರೆ ಏನೂಬೇಕಾದರೂ ಆಗಬಹುದಿತ್ತು. ಪದವಿ, ಕೀರ್ತಿ, ಅಕಾಡೆಮಿ, ಅಧ್ಯಕ್ಷಗಿರಿ - ಇಂಥವುಗಳನ್ನು ಸುಲಭವಾಗಿ

ಗಿಟ್ಟಿಸಿಕೊಳ್ಳಬಹುದಾಗಿತ್ತು. ಆದರೆ, ಏನೂ ಆಗದೆ ಹೋರಾಟಕ್ಕೊಂದು ಘನತೆ ಗೌರವವನ್ನು ತಂದುಕೊಟ್ಟ ವ್ಯಕ್ತಿ ರಾಮದಾಸ್. ರಾಮದಾಸ್ ಕೇವಲ ವೇದಿಕೆಯ, ಸೆಮಿನಾರುಗಳ, ಬರಹಗಳ ಹೋರಾಟಗಾರನಲ್ಲ. ಸಮಾಜವಾದಿ ಹಿನ್ನೆಲೆಯ ಬೀದಿ ಹೋರಾಟಗಾರ. ಹೋರಾಟಗಳ ಎಲ್ಲಾ ಬ್ಲೂಪ್ರಿಂಟ್ಸ್‌ಗಳು ತನ್ನ ಮನೆ 'ಚಾರ್ವಾಕ'ದಲ್ಲಿ; ಎಲ್ಲಾ ಇದೇ ನೆಲೆಯಲ್ಲಿ. ತಾಯಿ ಮಂಜಮ್ಮ, ಮಡದಿ ನಿರ್ಮಲಾ, ಮಗಳು ಸ್ನೇಹ, ಇತ್ತೀಚೆಗೆ ಅಳಿಯ ಓಂಕಾರ - ಇವರೆಲ್ಲರ ಬೆಂಬಲ ಈ ಚಾರ್ವಾಕನಿಗೆ. ಒಬ್ಬ ಹೋರಾಟಗಾರನಿಗೆ ತನ್ನ ಕುಟುಂಬದ ನೈತಿಕ ಒಲವಿಲ್ಲದೆ ಹೋದರೆ ಆತ ಮಧ್ಯೆ ತತ್ತರಿಸಿ ಹೋಗುವ ಸಾಧ್ಯತೆಗಳೇ ಹೆಚ್ಚು. ಇಲ್ಲಿ ರಾಮದಾಸ್ ತುಂಬ ಅದೃಷ್ಟವಂತ. ಹೀಗಾಗಿ ಪ್ರಖರವಾಗಿ ಚಿಂತಿಸಲು, ಪ್ರಖರವಾಗಿ ನಿಲ್ಲಲು, ಪ್ರಖರವಾಗಿ ಹೋರಾಟ ಮಾಡಲು ಸಾಧ್ಯವಾಯಿತು. ಮೂಲತಃ ರಾಮದಾಸ್ ಒಂಟಿ ಸಲಗ ಆದರೂ ಅಕ್ಕಪಕ್ಕ - ಹಿಂಭಾಗದಲ್ಲಿ ಸಲಗಗಳು ಇರುತ್ತಿದ್ದವು. ಖಂಡಿತಾ ಏಕವ್ಯಕ್ತಿ ಸೈನ್ಯ, ಆದರೂ ನಂಬಿಕೆಯ ಸೈನ್ಯಕ್ಕೆ ಕೊರತೆಯಿರಲಿಲ್ಲ. ಅದ್ಭುತ ಚಿಂತಕ ಶಕ್ತಿಯ ಅಪೂರ್ವ ತೋಂಡಿ ಸಾಂಪ್ರದಾಯಸ್ಥ. ನಮ್ಮ ನಡುವಿನ ಈ ಹೋರಾಟಗಾರ ಹೊತ್ತಿಸಿರುವ ದೀವಟಿಗೆ, ಬಿತ್ತಿರುವ ವಿಚಾರಗಳು, ಫಲ ನೀಡಿದೆ. ನೀಡುತ್ತೆ, ನೀಡಬೇಕು ಸಹ.

ರಾಮದಾಸ್ ಮೈಸೂರಿನಲ್ಲಿ ಹೋರಾಟವನ್ನು ಬೆಳೆಸಿದ ಹಾಗೆ ಮೈಸೂರು ರಾಮದಾಸ್‌ನನ್ನು ಬೆಳೆಸಿತು. ಡಿಗ್ರಿಯ ಓದಿಗಾಗಿ ಮೈಸೂರಿಗೆ ಹೋದ ರಾಮದಾಸ್ ಅಲ್ಲಿ ತನ್ನ ಮೊದಲ ರಾತ್ರಿ ಕಳೆದದ್ದು ರಾಮಸ್ವಾಮಿ ಸರ್ಕಲ್‌ನಲ್ಲಿ. ಅದು ಸಹ ಉಪವಾಸದಲ್ಲಿ. ಆ ಮುಂಜಾನೆಯೆದ್ದ ರಾಮದಾಸ್ ಮತ್ತೆ ಕೊನೆಯಲ್ಲಿ ಮಲಗಿದ್ದು (19-6-2007) ಚಾಮುಂಡಿ ಬೆಟ್ಟದ ತಪ್ಪಲಲ್ಲಿ. ಇವೆರಡರ ಮಧ್ಯೆ ರಾಮದಾಸ್ ಒಬ್ಬ ವ್ಯಕ್ತಿಯಾಗಿ, ಒಬ್ಬ ಹೋರಾಟಗಾರನಾಗಿ ಏನೆಲ್ಲಾ ಮಾಡಿದರೆನ್ನುವುದು ಈ ನಾಡು ಕಂಡ ಸತ್ಯ. ಹೋರಾಟಗಳು ಅಷ್ಟೆ, ಚಿಕ್ಕ ಚಿಕ್ಕ ಗುಬ್ಬಚ್ಚಿಗಳ ಮೇಲೆ ಅಲ್ಲ. ದೊಡ್ಡ ದೊಡ್ಡ ಜಾತಿ ಹುಳಗಳ ವಿರುದ್ಧ, ಕಿತ್ತು ತಿನ್ನುವ ಭ್ರಷ್ಟ ವ್ಯವಸ್ಥೆಯ ವಿರುದ್ಧ. ಹೆಪ್ಪುಗಟ್ಟಿದ ಧರ್ಮಸ್ಥಾವರದ ವಿರುದ್ಧ. ಪ್ರಜ್ಞೆ ಕಳಕೊಳ್ಳುತ್ತಿರುವ ಪ್ರಭುತ್ವದ ವಿರುದ್ಧ - ಹೀಗೆ ಒಂದಲ್ಲ ಎರಡಲ್ಲ. ಎಂದೂ ಈ ಚಾರ್ವಾಕ ಚಾಣಕ್ಯನಾಗಲೇ ಇಲ್ಲ. ಸುಮಾರು 45 ವರ್ಷಗಳ ಕಾಲ ಒಂದಲ್ಲ ಒಂದು ಸಾಮಾಜಿಕ ಪ್ರಶ್ನೆಗಳನ್ನು ಇಟ್ಟುಕೊಂಡು ಹೋರಾಡಿದ ಪರಿ ಬಹು ಅನನ್ಯ.

## ಸಾಗರದಲ್ಲಿ...

ರಾಮದಾಸ್ ತನ್ನ ಬಾಲ್ಯವನ್ನು (ಜನನ 26-3-1941) ಕಳೆದದ್ದು ಸಾಗರದಲ್ಲಿ. ತೀರಾ ಬಡತನದ ಕುಟುಂಬ. ತಂದೆ ಶಿವಯ್ಯ, ತಾಯಿ ಮಂಜಮ್ಮ. ರಾಮದಾಸ್ ತನ್ನ ತಂದೆಯನ್ನು ನೋಡುವುದಕ್ಕೆ ಮುಂಚೇನೆ ಅವರು ತೀರಿಕೊಂಡಿದ್ದರು. ಅಲ್ಲಿಂದ ಮುಂದೆ ಮಂಜಮ್ಮನೇ ರಾಮದಾಸ್‌ನ ಸರ್ವಸ್ವ. ರಾಮದಾಸ್‌ನ ಸಂಬಂಧಿಕರು ಸಹ ಯಾರೂ ಅನುಕೂಲಸ್ಥರಲ್ಲ.

ಮಂಜಕ್ಕನ ಸಾಕು ತಂಗಿ ರಾಧಾ ಮತ್ತು ಸಾಕು ಮಗಳು ಕಮಲ ರಿಪ್ಪನ್‌ಪೇಟೆಯಲ್ಲಿದ್ದಾರೆ. ರಾಮದಾಸ್‌ನ ಅಜ್ಜ ವೆಂಕಟಾಚಲಪತಿ ಹಾಗೂ ಚಿಕ್ಕಪ್ಪ ಲಕ್ಷ್ಮಣರಾವ್ ಸಾಗರದಲ್ಲಿಯೇ ಇದ್ದವರು. ಸಾಗರ, ರಿಪ್ಪನ್‌ಪೇಟೆ, ತೀರ್ಥಹಳ್ಳಿ ಸುತ್ತಮುತ್ತ ರಾಮದಾಸ್‌ನ ಅನೇಕ ಸಂಬಂಧಿಕರು ಇದ್ದಾರೆ.

ರಾಮದಾಸ್ ಮತ್ತು ನಾನು ಪ್ರೈಮರಿ ನಾಲ್ಕನೆ ತರಗತಿಯಿಂದ ಪಿ.ಯು.ಸಿ.ವರೆಗೆ ಸಹಪಾಠಿಗಳು. ಸಾಗರದ ಚಾಮರಾಜಪೇಟೆ ಪ್ರೈಮರಿಶಾಲೆ ನಮ್ಮಿಬ್ಬರ ಮೊದಲ ಯೂನಿವರ್ಸಿಟಿ, ನಂತರ ಗೌರ್ನಮೆಂಟ್ ಮಿಡ್ಲ್‌ಸ್ಕೂಲ್. ಆಗ ರಾಜ್ಯದ ಪ್ರಮುಖ ಮುನಿಸಿಪಲ್ ಹೈಸ್ಕೂಲ್‌ಗಳಲ್ಲಿ ಒಂದಾದ ಸಾಗರದ ಮುನಿಸಿಪಲ್ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ.ವರೆಗೆ ಇಬ್ಬರದು ಕನ್ನಡ ಮೀಡಿಯಂ. ನನಗೆ ಇಂಗ್ಲಿಷು ಮೀಡಿಯಂ ಸಿಗಲಿಲ. ರಾಮದಾಸ್ ಅದನ್ನು ಬಯಸಲಿಲ್ಲ. ಎಸ್.ಎಸ್.ಎಲ್.ಸಿ. ನಂತರ ಇಬ್ಬರ ಓದು ನಿಂತೇ ಹೋಯಿತು. ನಾನು ಹಾಗೂ ಹೀಗೂ ಗಣಿತದಲ್ಲಿ ಮೂವತ್ತೆಂಟು ಮಾರ್ಕ್ಸ್ ತಗೊಂಡು ಪಾಸಾದರೆ ರಾಮದಾಸ್ ಅಷ್ಟನ್ನೂ ಪಡೆಯಲು ಸಾಧ್ಯವಾಗದೆ ಫೇಲಾದ. ನಾನು ಪಾಸಾದರೂ ಆರ್ಥಿಕ ಕಾರಣಗಳಿಂದಾಗಿ ಮುಂದೆ ಶಿವಮೊಗ್ಗಕ್ಕೆ ಹೋಗಲು ಆಗಲಿಲ್ಲ. ಆಗ ಇಡೀ ಜಿಲ್ಲೆಗೆ ಶಿವಮೊಗ್ಗ ಸಹ್ಯಾದ್ರಿ ಕಾಲೇಜ್‌ವೊಂದೇ ಕಾಲೇಜು. ನಾನು, ನನ್ನ ತಂದೆಯ ಸಂಗಡ ಗಾರೆ ಕೆಲಸ ಮಾಡುತ್ತಿದ್ದರೆ ರಾಮದಾಸ್ ಅಲ್ಲಿ ಇಲ್ಲಿ ಕೆಲಸ ಮಾಡುತ್ತಿದ್ದದ್ದು ನನಗೆ ಚೆನ್ನಾಗಿ ನೆನಪಿದೆ. ನಮ್ಮ ಕೇರಿಯಲ್ಲಿ ಹೆಚ್ಚು ಓದಿದವರು ಯಾರೂ ಇರಲಿಲ್ಲ. ಹೆಣ್ಣು ಮಕ್ಕಳಲ್ಲಿ ನನ್ನ ತಾಯಿ ಜಲಜಾಕ್ಷಮ್ಮನೊಬ್ಬರೆ ಮೆಟ್ರಿಕ್ಯುಲೇಷನ್ ಆಗಿ ಟೀಚರ್ ಆಗಿದ್ದರು. ಆಗ ನಮಗೆಲ್ಲ ಸಂತೋಷವೆಂದರೆ ನಮ್ಮ ಕೇರಿಗೆ ಇರುವ ಸಮಗಾರ ಕೇರಿಯಲ್ಲೆ ಆಗಲೆ ಇಬ್ಬರು ಎಂ.ಎ. ಪದವೀಧರರಿದ್ದರು. ಇವರಲ್ಲಿ ಒಬ್ಬರು ವಾಳದ ಹನುಮಂತಪ್ಪನವರು ಸಹ್ಯಾದ್ರಿ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ಲೆಕ್ಚರರ್, ಮತ್ತೊಬ್ಬರು ಟಿ. ವೆಂಕಟಪ್ಪ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇದ್ದವರು. ಹನುಮಂತಪ್ಪ ಸಾಮಾನ್ಯ ಎತ್ತರದ ಸದಾ ನಗುವಿನ ವ್ಯಕ್ತಿ, ತುಂಬ ಒಳ್ಳೆಯ ಮನುಷ್ಯ. ಇವರ ತಂದೆ ಯಲ್ಲಪ್ಪವಾಳದ ಅವರಿಗೆ ದೊಡ್ಡ ಚಪ್ಪಲಿ ಅಂಗಡಿಯಿತ್ತು. ಐತಪ್ಪ ಅಂಗಡಿಯ ಪಕ್ಕದಲ್ಲಿದ್ದ ಈ ಅಂಗಡಿ ಸಾಗರದ ಪ್ರಮುಖ ಚಪ್ಪಲಿ ಅಂಗಡಿಯಾಗಿತ್ತು. ಅವರ ಅಂಗಡಿಯಲ್ಲಿ ಸದಾ 4-5 ಮಂದಿ ಚಪ್ಪಲಿಗಳನ್ನು ಹೊಲಿಯುತ್ತಿದ್ದರು. ಹನುಮಂತಪ್ಪ ಅವರಿಗೆ ಕೇರಿ ಹುಡುಗರ ಬಗ್ಗೆ ತುಂಬಾ ಕಾಳಜಿ. ನಮ್ಮಿಬ್ಬರನ್ನು ಆಗಾಗ ಕರೆದು ಮಾತನಾಡಿಸಿ, ನೀವು ಮುಂದೆ ಏನಾಗಬೇಕಂತಿದ್ದೀರಿ ಅಂತ ಅವರು ಕೇಳುತ್ತಿದ್ದಾಗ ನಮ್ಮಲ್ಲಿ ನಮ್ಮದೇ ಆದ ಉತ್ತರವಿರಲಿಲ್ಲ. ಹೇಗೂ, ಆಗ ಹನುಮಂತಪ್ಪನವರೆ ನಮ್ಮ ಗಾಢ್‌ಫಾದರ್. ನಮ್ಮಿಬ್ಬರನ್ನು ಆಗ್ತಾನೆ ಪ್ರಾರಂಭವಾಗಿದ್ದ ಸಹ್ಯಾದ್ರಿ ಕಾಲೇಜಿನ ಪಿ.ಯು.ಸಿ.ಗೆ ಸೇರಿಸಿದ್ದು ಅವರೇ. ಆ ಮನುಷ್ಯನೇ ಫಾರಂ ತಂದು, ಅದನ್ನು ಭರ್ತಿ ಮಾಡಿ ಕ್ಲಾಸನ್ನು ತೋರಿಸಿಕೊಟ್ಟಿದ್ದು. ರಾಮದಾಸ ಮತ್ತು ನಾನೂ ಯಾವತ್ತು ಅವರನ್ನು ಮರೆತಿರಲಿಲ್ಲ. ಪಾಪ, ಅವರು ಎನ್.ಸಿ.ಸಿ. ಟ್ರೈನಿಂಗ್‌ಗೆ ಕಾನ್ಪುರಕ್ಕೆ ಹೋಗಿದ್ದಾಗ, ಅಲ್ಲಿ ನದಿಯಲ್ಲಿ ಈಜುತ್ತಿದ್ದಾಗ ಮುಳುಗಿ ತೀರಿಕೊಂಡರು. ಸುಮಾರು 8 ದಿನಗಳ ನಂತರ ಅವರ

ಪಾರ್ಥಿವ ದೇಹವನ್ನು ಮಿಲಿಟರಿ ಜೀಪಿನಲ್ಲಿ ಸಾಗರಕ್ಕೆ ತಂದ ಸಂದರ್ಭ ಮಾತ್ರ ಮರೆಯುವಂತಿರಲಿಲ್ಲ. ನಂತರ ರಾಮದಾಸ್ ಮತ್ತು ನಾನು ಅನೇಕ ದಿನಗಳವರೆಗೆ ಕಾಲೇಜಿಗೆ ಹೋಗಿರಲಿಲ್ಲ. ಬಹಳ ಸಮಾಧಾನದ ಸಂಗತಿಯೆಂದರೆ ನಮ್ಮ ಪಿ.ಎಸ್.ಪಿ. ವಿಭಾಗದ ವಿದ್ಯಾರ್ಥಿಗಳು ಒಂದು ಅರ್ಥಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಅದರ ವ್ಯವಸ್ಥೆಯೆಲ್ಲವನ್ನು ಮಾಡಿದ್ದು ರಾಮದಾಸ್‌ನೆ. ಸಾಗರದಿಂದ ಮುಖ್ಯ ಭಾಷಣಕಾರರಾಗಿ ಬಂದಿದ್ದ ಎಸ್.ಎಸ್. ಕುಮಟ ಅವರು ಸಾಗರದ ಸಮಾಜವಾದದ ಚಳವಳಿಯಲ್ಲಿ ಹನುಮಂತಪ್ಪನವರ ಪಾತ್ರ ಕುರಿತು ಮಾತನಾಡಿದ್ದು ಹಾಗೂ ರಾಮದಾಸ್‌ನೇ ಪ್ರಸ್ತಾವನೆ ರೂಪದಲ್ಲಿ ಮಾತನಾಡಿದ್ದು ಎಲ್ಲರ ಗಮನ ಸೆಳೆದಿತ್ತು.

ಆಗ ಪಿ. ಲಂಕೇಶ್ ನಮಗೆ ಇಂಗ್ಲೀಷ್ ಮೇಷ್ಟ್ರು. ತುಂಬಾ ಸಿಟ್ಟು ಸಿಡುಕು, ಒರಟೊರಟು ಮಾತು. ಸದಾ ಸೂಟುಧಾರಿ. ಆದರೆ ಅವರ ಪಾಠ ಮಾತ್ರ ಚೆನ್ನಾಗಿರಲಿಲ್ಲ. ಆಗ ಕಾಲೇಜಿಗೆ ಬರ್‍ತಾಯಿದ್ದ 2-3 ಸ್ಕೂಟರ್‌ಗಳಲ್ಲಿ ಲಂಕೇಶ ಅವರದೇ ಹೊಸದು. ಲಂಕೇಶ್ ಅವರ ಕತೆಗಳು ಆಗಾಗ್ಗೆ ಪತ್ರಿಕೆಗಳಲ್ಲಿ ಬರ್‍ತಾ ಇದೆ ಅಂತ ರಾಮದಾಸ್ ಹೇಳಿದ್ರೂ ನಾನು ಓದಿರಲಿಲ್ಲ. ಅದು ಹೇಗೋ ಏನೋ ರಾಮದಾಸ್‌ನಿಗೆ ಲಂಕೇಶ್ ಅವರೊಡನೆ ವಿಶ್ವಾಸದ ಸಂಪರ್ಕವಿತ್ತು. ಬಹುಶಃ ಅವರಿಬ್ಬರ ಪರಸ್ಪರ ವಿಶ್ವಾಸಕ್ಕೆ ಅವರಿಬ್ಬರ ನೇರ ನಡೆನುಡಿ ಮತ್ತು ಸಾಹಿತ್ಯಾಸಕ್ತಿಗಳೇ ಕಾರಣ ಅಂತ ಅನಿಸುತ್ತೆ. ಮುಂದೆ ಈ ಗುರುಶಿಷ್ಯನ ಸ್ನೇಹ ಒಂದು ಇತಿಹಾಸವಾಯಿತು. ಲಂಕೇಶ್ ಅವರು ಅನೇಕ ಸಾರಿ 'ರಾಮದಾಸ್ ನನ್ನ ಸಾಕ್ಷಿ ಪ್ರಜ್ಞೆ' ಅಂತ ಹೇಳುತ್ತಾ ಬಂದದ್ದು ಬಹು ಅರ್ಥಪೂರ್ಣ. ಅಂತಹ ಲಂಕೇಶ್ ಅವರನ್ನು ರಾಮದಾಸ್ ಸದಾ ಕಾಡಿದ್ದು ಬಹಳ ವಿಶೇಷ. 'ಲಂಕೇಶ್ ಪತ್ರಿಕೆ' ಎಡವಿದಾಗ ಲಂಕೇಶ್ ಅವರನ್ನು ಎಚ್ಚರಿಸುವ ಶಕ್ತಿ ಸಹ ರಾಮದಾಸ್‌ಗೆ ಇತ್ತು. ತರಗತಿಗಳನ್ನು ಬಿಟ್ಟು ಹೊರಗೆಲ್ಲೂ ಲಂಕೇಶ್ ಅವರೊಡನೆ ನಾನು ಮಾತನಾಡಿಯೇ ಇರಲಿಲ್ಲ. ನಂತರ ಲಂಕೇಶ್ ಮೇಷ್ಟ್ರನ್ನು ನಾನು ಮತ್ತೆ ಭೇಟಿ ಆಗಿದ್ದು ಮೈಸೂರಿನ ರಾಮದಾಸ್‌ನ ಮನೆಯಲ್ಲಿ. ರಾಮದಾಸ್‌ನೆ ತುಂಬ ಪ್ರೀತಿಯಿಂದ ನನ್ನನ್ನು ಲಂಕೇಶ್ ಅವರಿಗೆ ಪರಿಚಯಿಸಿದ. ತುಂಬ ಹೊತ್ತು ಮಾತುಕತೆಯ ನಂತರ ಊಟಕ್ಕೆ ಕೂತೆವು. ಆಗ ಲಂಕೇಶ್ 'ರೀ, ವಿಲಿಯಂ ನಿಮ್ಮ ಕಾಲೇಜು ಲೈಫ್ ಹ್ಯಾಗಿತ್ತರಿ ?' ಅಂತ ನನ್ನನ್ನು ಕೇಳಿದಾಗ ರಾಮದಾಸ ನನ್ನ ಉತ್ತರಕ್ಕೆ ಕಾಯದೆ "ನಿಮ್ಮ ಪಾಠ ಹೊರತು, ಮತ್ತೆಲ್ಲ ಚೆನ್ನಾಗಿತ್ತು" ಅಂದಾಗ ಲಂಕೇಶ್ ನಕ್ಕ ರೀತಿ ನನಗೆ ಚೆನ್ನಾಗಿ ನೆನಪಿದೆ.

### ಹೊಳೆಬಾಗಿಲು ಕೇರಿ

ಸಾಗರದ ಆಗಿನ ಹೊಳೆಬಾಗಿಲು ಕೇರಿಯಲ್ಲಿ ನಮ್ಮಿಬ್ಬರ ಮನೆ. ನಾನು ಅಲ್ಲಿಯೇ ಹುಟ್ಟಿ ಬೆಳೆದರೆ ರಾಮದಾಸ್ ಚಿಕ್ಕ ಹುಡುಗನಾಗಿದ್ದಾಗ ನಮ್ಮ ಕೇರಿಗೆ ಬಂದವನಾದರೂ ಕೊನೆಯವರೆಗೂ ರಾಮದಾಸ್ ತಾನು ಸಾಗರದವನು ಅಂತ ಹೇಳಿ ಹೆಮ್ಮೆ ಪಡುತ್ತಿದ್ದ ವ್ಯಕ್ತಿ.

ಹೊಳೆಬಾಗಿಲು ಕೇರಿ ಬಹು ಅನ್ವರ್ಥನಾಮ. (ಈಗ ಅದು ಮಾರಿಕಾಂಬ ರಸ್ತೆಯ ಕೊನೆಯ ಭಾಗ). ಈ ಕೇರಿಯ ಒಂದು ಭಾಗ ವರದಾ ನದಿಯ ದಡದ ಮೇಲಿದೆ. ವರದಾ ನದಿಗೆ ಆಗ ಇಳಿಯಲು ಇದ್ದ ಅಧಿಕೃತ ದಾರಿ ನಮ್ಮ ಕೇರಿಯಲ್ಲಿತ್ತು. ಈ ಕೇರಿಯ ಒಂದು ಕೊನೆಯಲ್ಲಿ ಬಸ್ ರಸ್ತೆಯ ಸೇತುವೆ ಇದ್ದು ಮತ್ತೊಂದು ಕೊನೆಯಲ್ಲಿ ರೈಲ್ವೆ ಸೇತುವೆ. ಈ ಎರಡೂ ಸೇತುವೆಗಳ ಕೆಳಗೆ ತುಂಬಿದ ವರದಾ ನದಿ ಹರಿಯುವುದನ್ನು ನೋಡುವುದೆ ಒಂದು ಸೊಗಸು. ಆಗ ಬೇಸಿಗೆಯಲ್ಲೂ ಹೊಳೆ, ತುಂಬಿ ಹರಿಯುತ್ತಿತ್ತು, ಈಗಿನಂತಲ್ಲ. ನಮ್ಮ ಮನೆಯ ಅಡಿಗೆ ಮನೆ ಕಿಟಕಿ ತೆರೆದರೆ ವರದಾನದಿ ಮತ್ತು ರೈಲ್ವೆ ಸೇತುವೆ ನಮ್ಮ ಕಣ್ಮುಂದೆ. ಹಾದು ಹೋಗುವ ರೈಲುಗಳನ್ನು ನೋಡುವುದು ರಾಮದಾಸ್‌ನ ದೈನಂದಿನ ಕೆಲಸಗಳಲ್ಲಿ ಒಂದು. ಮಳೆಗಾಲದಲ್ಲಿ ವರದಾ ತುಂಬಿ ಹರಿದು ಎತ್ತರದ ಸೇತುವೆಯನ್ನು ಮುಟ್ಟುವುದೇ ಎಂಬ ಕಾತುರ, ಭಯ, ನಿರೀಕ್ಷೆಯಲ್ಲಿ ಇರುತ್ತಿದ್ದೆವು. ಭಾರಿ ಮಳೆಗಾಲದಲ್ಲಿ ತುಂಬಿದ ನೆರೆ ಬಂದಾಗ ನಮ್ಮ ಅಡಿಗೆ ಮನೆಯ ಕಿಟಕಿ ತೆರೆದು ರೈಲು ಬರುವುದನ್ನೇ ಕಾಯುತ್ತಿದ್ದ ರಾಮದಾಸ್ ಮತ್ತು ನಾನು ಅದು ಸೇತುವೆಯ ಮೇಲೆ ನಿಧಾನವಾಗಿ ಹೋಗುವುದನ್ನು ನೋಡಿ ಸಂತೋಷ ಮತ್ತು ಆತಂಕಪಟ್ಟಿದ್ದೇವೆ.

ನಮ್ಮ ಕೇರಿಗೆ ಸೇರಿಕೊಂಡೆ ಚಿಕ್ಕ ಚಿಕ್ಕ ಮೂರು ಕೇರಿಗಳು - ಕುಂಬಾರಕೇರಿ, ಅಗಸರ ಕೇರಿ, ಸಮಗಾರರ ಕೇರಿ. ಈಗ ಇವೆಲ್ಲಾ ತಮ್ಮ ತಮ್ಮ ಹೆಸರುಗಳನ್ನು ಬದಲಾಯಿಸಿಕೊಂಡು ರಾಜಮಹಾರಾಜರ ದೇವರುಗಳ ಹೆಸರನ್ನು ಇಟ್ಟುಕೊಡಿವೆ. ಈ ಮೂರೂ ಕೇರಿಗಳು ನಮ್ಮ ಕೇರಿಗೆ ಬಂದು ಸೇರಲೇಬೇಕು. ಕೊಂಕಣಿಗರು ತಮ್ಮ 'ಕೊಂಕಣಿಬೇಣ'ಕ್ಕೆ ಹೋಗುವಾಗಲೂ ಸಹ ನಮ್ಮ ಕೇರಿಯಿಂದಲೇ ಹೋಗಬೇಕು. ನಮ್ಮ ಕೇರಿಯಲ್ಲಿ ಸುಮಾರು 15 ಜಾತಿಗಳ ಸುಮಾರು ಇಪ್ಪತ್ತು ಮನೆಗಳು - ಬ್ರಾಹ್ಮಣ, ಲಿಂಗಾಯಿತ, ಸಮಗಾರ, ಬೋವಿ, ಕುಂಬಾರ, ಕೊಂಕಣಿ, ಮುಸ್ಲಿಂ, ಕುರುಬ, ಕ್ರೈಸ್ತ, ಮರಾಠಿ - ಹೀಗೆ ಇದೊಂದು ಜಾತಿಗಳ ಮ್ಯೂಜಿಯಂ. ಆದರೆ, ಅಲ್ಲಿದವರ ಜಾತಿ ಹೊಕ್ಕು ಬಳಕೆ ಮಾತ್ರ ಬಹು ಅನನ್ಯ. ಪರಸ್ಪರ ಸುಖ ಕಷ್ಟದಲ್ಲಿ ಭಾಗಿಯಾಗೋದು, ಪ್ರತಿಯೊಬ್ಬರೂ ಹೋಗ್ತಾ ಬರ್ತಾ ಮಾತಾಡೋದು, ಮಕ್ಕಳ ಬಗ್ಗೆ ಮಾತಾಡೋದು, ಒಟ್ಟೊಟ್ಟಿಗೆ ಬಟ್ಟೆ ತೊಳೆಲಿಕ್ಕೆ, ಸಂತೆಗೆ ಹೋಗೋದು - ಇವೆಲ್ಲಾ ತುಂಬಾ ಚೆನ್ನಾಗಿತ್ತು. ಇವೆಲ್ಲಾ ನಮ್ಮೆಲ್ಲರ ಮೇಲೆ ಮುಖ್ಯವಾಗಿ ರಾಮದಾಸ್‌ನಲ್ಲಿ ಅಚ್ಚಳಿದಿತ್ತು. ಇಂತಹ ಭಾವನೆಗಳನ್ನು ರಾಮದಾಸ್ ತುಂಬ ದುಡಿಸಿಕೊಂಡಿದ್ದು ನಾವೆಲ್ಲಾ ನೋಡಿರುವ ಸತ್ಯ. ರಾಮದಾಸ್‌ನ ತಾಯಿ ಮಂಜಮ್ಮ ಬೆಳೆಸಿಕೊಂಡಿದ್ದ ತಿಳುವಳಿಕೆ, ಹೃದಯವಂತಿಕೆ ಬಹು ಅಪರೂಪ. ಇಡೀ ಕೇರಿಗೆ ಮಂಜಮ್ಮ ಅಕ್ಕನೂ ಹೌದು ಅಮ್ಮನೂ ಹೌದು. ಯಾರದೋ ಮನೆಯಲ್ಲಿ ಬೇನೆ ಬೇಸರ ಅಲ್ಲಿ ಮಂಜಮ್ಮ, ಮತ್ತೆಲ್ಲೋ ಹೆರಿಗೆ ಅಲ್ಲಿ ಮಂಜಮ್ಮ, ಗಂಡ ಹೆಂಡತಿ ಜಗಳ ಅಲ್ಲಿ ಮಂಜಮ್ಮ, ಸತ್ಯನಾರಾಯಣ ಕತೆ, ಮಾರಿಹಬ್ಬ, ನೆಂಟಸ್ಥನ, ಮದುವೆ ಮುಂಜಿ, ಕ್ರಿಸ್‌ಮಸ್, ರಂಜಾನ್ - ಅಲ್ಲೆಲ್ಲಾ ಮಂಜಕ್ಕ. ಮಂಜಕ್ಕನ ವ್ಯಕ್ತಿತ್ವ, ನಿಲುವು, ಅರಳು ಹುರಿದಂತಹ ಮಾತುಗಳು, ನೀಳ ಆಕರ್ಷಕ ಬಣ್ಣದ ಮಂಜಮ್ಮ ಕೇರಿಮನೆಯವರೆಲ್ಲರ

ಪ್ರೀತಿಯನ್ನು ಗೆದ್ದಿದ್ದರು. ಮಂಜಕ್ಕನ ಹೊಕ್ಕು ಬಳಕೆಯ ವಿಶ್ವಾಸವೇ ರಾಮದಾಸ್ ಬದುಕಿನ ಇಡುಗಂಟು. ಆಗ ಒಂದು ಮನೆಯ ಹಬ್ಬ ಎಲ್ಲರ ಮನೆಯ ಹಬ್ಬ. ಈಗಿನವರು ಇದನ್ನೆಲ್ಲಾ ಕೇಳಿದರೆ ನಗುವುದು ಸಹಜ. ನಗರೀಕರಣ, ಜಾಗತೀಕರಣಗಳು ನಮ್ಮ ಅಂತಃಕರಣವನ್ನೇ ಒಣಗಿಸಿವೆ. ಮಂಜಕ್ಕನ ಹೊಕ್ಕು ಬಳಕೆ ವಿಶ್ವಾಸ ಪ್ರೀತಿಗಳು ಇಡೀ ಕೇರಿ ಮನೆಯ ಸುಂದರ ಒಡನಾಟ ರಾಮದಾಸ್‌ನ ಮೇಲೆ ಚೆನ್ನಾಗಿಯೇ ಪರಿಣಾಮ ಬೀರಿತ್ತು. ಸಮಗಾರ ಕೇರಿಯವರ ಮದುವೆ ಮುಂಜಿ, ಅವರ ಮಕ್ಕಳ ಶಿಕ್ಷಣ ನಮ್ಮ ಕೇರಿಯವರಿಗೆಲ್ಲಾ ಚೆನ್ನಾಗಿ ಗೊತ್ತಿತ್ತು. ಒಮ್ಮೊಮ್ಮೆ ಅವರ ಮನೆಗಳಲ್ಲಿ ಸಂಜೆಯಾದರೂ ಕೋಳಿ ಬರದಿದ್ದಾಗ, ಅದು ಕಳೆದುಹೋದದ್ದು ಖಾತ್ರಿಯಾದಾಗ, ಆ ಮನೆಯ ಹೆಂಗಸು ತನ್ನ ಮನೆಯ ಹೊರಗೆ ಬಂದು ಬೈಗುಳ ಪ್ರಾರಂಭಿಸಿದರೆ ನಾವು ಹುಡುಗರೆಲ್ಲಾ ಕದ್ದು ಕೇಳಿಸಿಕೊಳ್ಳುತ್ತಿದ್ದೆವು. ಬೈಗುಳಗಳೆಲ್ಲವೂ ಒಂದೇ ಫಾರ್‌ಮ್ಯಾಟ್. ಒಂದೇ ಲಯ, ಒಂದೇ ಓಘ. ಆ ರೀತಿಯ 'ವಯಸ್ಕರಿಗೆ ಮಾತ್ರ' ಬೈಗುಳವನ್ನು ನಾವು ಕೇಳಿದ್ದೆ ಅಲ್ಲಿ. ರಾಮದಾಸ್ ಅನೇಕ ಸಲ ಹೇಳ್ತಾಯಿದ್ದ ಒಂದು ಮಾತು - 'ಇಷ್ಟೆಲ್ಲಾ ಕೇಳ್ಕೊಂಡಮೇಲೆ ಆ ಕೋಳಿ ಕದ್ದವರು ಹೇಗಾದರೂ ಆ ಕೋಳಿ ತಿಂದಾರೋ ಮಾರಾಯ' ಅಂತ. ನಮಗೆ ಎಲ್ಲಾ ಕೇರಿಗಳ ವಾರಿಗೆಯವರೊಡನೆ ಒಡನಾಟವಿತ್ತು. ಅದರಲ್ಲೂ ರಾಮದಾಸ್‌ಗೆ ಸ್ವಲ್ಪ ಹೆಚ್ಚಿಗೆ, ಇವೆಲ್ಲ ರಾಮದಾಸ್‌ನ ರಕ್ತಕ್ಕೆ ಸೇರಿದ್ದ ಸಂಗತಿ.

### ಆಟಪಾಠ

ನಮ್ಮ ಪಾಠಗಳಿಗಿಂತ ಆಟಗಳೇ ಹೆಚ್ಚು. ಹಾಗೆ ಚೆನ್ನಾಗಿ ಓದುತ್ತಿದ್ದವರು ಪ್ರತಿಕೇರಿಗಳಲ್ಲಿ ಒಂದಿಬ್ಬರು ಮಾತ್ರ. ಆಟಕ್ಕೆ ಮಾತ್ರ ಎಲ್ಲರೂ ಸೈ. ಗೋಲಿ, ಚಿನ್ನಿದಾಂಡು, ಹುತೊತ್ತು, ಮರಕೋತಿ, ಬುಗುರಿ, ಸಿಕ್ಕವರ ಚೆಂಡು, ಲಗ್ಗೋರಿ - ಇವು ನಮ್ಮ ಆಪ್ತ ಆಟಗಳು. ಆಗ ಆಟಗಳೆಲ್ಲವೂ ಪಂಚಾಗದಲ್ಲಿ ಬರೆದಿಟ್ಟಂತೆ ಕ್ರಮವಾಗಿ ಬರುತ್ತಿದ್ದವು. ಅವೆಲ್ಲಾ ಒಂದು ರೀತಿಯಲ್ಲಿ ಸೀಸನಲ್ ಗೇಮ್‌ಗಳು. ಬುಗುರಿ ಪ್ರಾರಂಭವಾದರೆ ಊರಿನ ಎಲ್ಲಾ ಕಡೆಗಳಲ್ಲೂ ಬುಗುರಿ. ಈಗ ಎಲ್ಲಾ ಕಾಲಗಳಲ್ಲಿ ಎಲ್ಲಾ ಆಟಗಳನ್ನು ಪ್ರತಿನಿಧಿಸುವ ಏಕೈಕ ಆಟ ಕ್ರಿಕೆಟ್. ಗೋಲಿಯಲ್ಲಿ ರಾಮದಾಸ್‌ನ ಗುರಿ ಅಂದರೆ ಗುರಿ. ಅವನಲ್ಲಿ ತುಂಬ ಡಾಬಿ ಗೋಲಿಗಳಿದ್ದವು. ನಾವು ಅದಕ್ಕೆ ಡುಬ್ಬುಗೋಲಿ ಅಂತ ಕರೀತಾ ಇದ್ವಿ. ಅದು ಅವನ ಚಿಕ್ಕಪ್ಪನ ಸೈಕಲ್ ಅಂಗಡಿಯಿಂದ ತರುತ್ತಿದ್ದ ಬಾಲ್ಸು ಗೋಲಿ. ಗುರಿಯಿಟ್ಟು ಹೊಡೆದನೆಂದರೆ ನಮ್ಮೆಲ್ಲರ ಗೋಲಿಗಳು ಚೂರು ಚೂರು. ಚಿನ್ನಿ ದಾಂಡಿನ ಗಿಲ್ಲಿಯಲ್ಲಿ ಎತ್ತಿದ ಕೈ. ಮರಕೋತಿ ಆಟ ರಾಮದಾಸ್‌ನ ಪ್ರೀತಿಯ ಆಟಗಳಲ್ಲಿ ಒಂದು. ಟೊಂಗೆಯಿಂದ ಟೊಂಗೆಗೆ ಹಾರೋದು, ಟೊಂಗೆಯಿಂದ ಕೆಳಗೆ ಹಾರೋದು ರಾಮದಾಸ್‌ನಿಗೆ ತುಂಬಾ ಖುಷಿ. ಅದೇಕೋ ಏನೋ ರಾಮದಾಸ್‌ಗೆ ಮರಗಳೆಂದರೆ ಅಷ್ಟೊಂದು ಪ್ರೀತಿ. ಸಂತೋಷ ಜಾಸ್ತಿಯಾದಾಗಲು ಮರ ಹತ್ತಿ ಕೂರೋದು, ಬೇಸರವಾದಾಗಲೂ ಮರ ಹತ್ತಿ ಕೂರೋದು. ಕುತೂಹಲವೆಂದರೆ

ಎಸ್.ಎಸ್.ಎಲ್.ಸಿ. ಫೇಲಾದಾಗ ರಾಮದಾಸ್ ಬಹಳ ಹೊತ್ತು ಮರದ ಮೇಲೆ ಕೂತಿದ್ದು ನೆನಪಿದೆ. ಮರ, ಕಾಡು, ಹೊಳೆ - ಇವೆಲ್ಲಾ ರಾಮದಾಸ್‌ಗೆ ಕೊಟ್ಟ ಸಂತೋಷ ಸಮಾಧಾನ ಅಷ್ಟಿಷ್ಟಲ್ಲ. ಸಿಕ್ಕವರ ಚೆಂಡಿನಲ್ಲಿಯೂ ಹಾಗೆ, ಸಾಮಾನ್ಯವಾಗಿ ಚೆಂಡು ಬೇಕಂತಲೇ ರಾಮದಾಸ್‌ನ ಕೈಗೆ ಸಿಗ್ತಾಯಿತ್ತೋ ಏನೋ ! ಆಟದಲ್ಲಿ ಯಾರೂ ಅನ್ಯಾಯ ಆಡಬಾರದು, ಅಂದರೆ ಯಾರೂ ಭಂಡ ಆಡುವಂತಿಲ್ಲ. ರಾಮದಾಸ್ ಇದ್ದಾಗ ಯಾರಾದರೂ ಭಂಡ ಆಡಿದರೆ ಅವನ ಕತೇನೆ ಮುಗೀತು. ಹುಡುಗರ ಮೇಲೆ ಅಷ್ಟೊಂದು ಪ್ರಭಾವ. ಬುಗುರಿ ಆಟವೂ ಅಷ್ಟೇ ಖುಷಿ ಅವನಿಗೆ. ಸದಾ ಒಳ್ಳೆಯ ಬುಗುರಿ, ಒಳ್ಳೆಯ ದಾರ ರಾಮದಾಸ್‌ನಲ್ಲಿರುತ್ತಿತ್ತು. ಬುಗುರಿ ಗೋಲಿಗಳು ಯಾವಾಗಲೂ ಸ್ಪೇರ್ ಇರ್ತಾ ಇದ್ದವು. ಬುಗುರಿ ಮೊಳೆ ಮತ್ತು ಚಿನ್ನಿದಾಂಡುಗಳು ಅಜ್ಜನ ಕುಲುಮೆಯಿಂದ ಇಂಪೋರ್ಟ್ ಆಗುತ್ತಿದ್ದವು. ರಾಮದಾಸ್‌ನ ಚಿನ್ನಿದಾಂಡನ್ನು ತೆಗೆದುಕೊಂಡು ಆಡುವುದು ಎಲ್ಲರ ಆಸೆ. ರಾಮದಾಸ್ ಗುರಿಯಿಟ್ಟು ಬುಗುರಿ ತಿರುಗಲು ಬಿಟ್ಟಾಗ ಕೈಯಲ್ಲಿ ಉಳಿಯುವ ದಾರದ ಗತ್ತನ್ನು ನೋಡಬೇಕು. ಬುಗುರಿಯನ್ನು ತಿರುಗಿಸಿ ಅದು ನೆಲಕ್ಕೆ ಬೀಳುವದರೊಳಗೆ ಅಂಗೈಯ ಮೇಲೆ ತಗೊಂಡು ಅದನ್ನು ಚಿಕ್ಕ ಮಕ್ಕಳ ಅಂಗೈಯಲ್ಲಿ ಇಟ್ಟು ತಿರುಗುವಂತೆ ಮಾಡಿದಾಗ ಚಿಕ್ಕ ಮಕ್ಕಳ ಖುಷಿ ಅದೆಷ್ಟು ! ರಾಮದಾಸ್‌ನ ಬುಗುರಿಯಿಂದ ಗುನ್ನ ತಿಂದವರ ಮುಖ ನೋಡಲು ಆಗುತ್ತಿರಲಿಲ್ಲ. ಆಗ ಬುಗುರಿ ಆಟದಲ್ಲಿ 'ಮೈಸೂರು ಗುನ್ನ'ವೆನ್ನುವುದಿತ್ತು. ಮೈಸೂರು ಗುನ್ನಕ್ಕೆ ಅವಕಾಶ ಸಿಕ್ಕಾಗ ಮಾತ್ರ ಏಟು ತಿಂದ ಬುಗುರಿಗಳ ಅಡ್ರೆಸ್ಸ್ ಇರುತ್ತಿರಲಿಲ್ಲ. ಮೈಸೂರಿನವರೆಗೆ ಹಾಗೂ ಕರ್ನಾಟಕದ ಅನೇಕ ಮಂದಿಗೆ ರಾಮದಾಸ್‌ನ ಮೈಸೂರ್ ಗುನ್ನ ರುಚಿ ತಿಳಿದಿದೆ. ಇಲ್ಲಿ ಮಾತ್ರ ರಾಮದಾಸ್‌ನದು ಹಿಂಸೆಯ ಗುನ್ನವಲ್ಲ. ರಾಮದಾಸ್‌ನ ಯಾವುದೇ ಹೋರಾಟವಾಗಿರಲಿ ಅದು ಶಾಂತಿಯುತವಾಗಿ, ಪ್ರಜಾಪ್ರಭುತ್ವದ ನೆಲೆಯ ಮೇಲೆಯೇ ಸಾಗುತ್ತಿತ್ತು.

ಆಗ ನಮ್ಮ ಶಾಲೆಯಲ್ಲಿ ಅಗ್ರಹಾರದವರಿಗೆ ಒಂದು ಫುಟ್‌ಬಾಲ್, ಲಿಂಗಾಯತರ ಕೇರಿಗೆ ಒಂದು. ಮುಸ್ಲಿಂರು ಹೆಚ್ಚುವಿರುವಲ್ಲಿ ಒಂದು - ಹೀಗೆ ಅನೇಕ ಕಡೆಗಳಿಗೆ ಫುಟ್‌ಬಾಲ್ ಕೊಟ್ಟು ಕ್ಯಾಪ್ಟನ್ನ ಸಹಿ ತೆಗೆದುಕೊಳ್ಳುತ್ತಿದ್ದರು. ಆದರೆ ನಮ್ಮಂತ ಕೇರಿಗಳನ್ನು ಪಿ.ಇ. ಮೇಸ್ಟ್ರು ಕೇರ್ ಮಾಡುತ್ತಿರಲಿಲ್ಲ. ನಮ್ಮ ಸೀನಿಯರ್ಸ್ ದುಂಬಾಲು ಬಿದ್ರೂ ಮೇಸ್ಟ್ರಿಗೆ ಕೊಡಬೇಕು ಅಂತ ಅನಿಸಿರಲಿಲ್ಲ. ಒಂದು ದಿನ ಸುಮಾರು ಹತ್ತುಹನ್ನೆರಡು ಹುಡುಗರುಗಳನ್ನು ಕಟ್ಟಿಕೊಂಡು ರಾಮದಾಸ್ ಹೆಡ್‌ಮಾಸ್ಟರ್ ರೂಂನ ಮುಂದೆ ನಿಂತ್ಕೊಂಡ. ಕೋಳಿವಾಡ ಕೃಷ್ಣಮೂರ್ತಿ ಅನ್ನುವ ತುಂಬ ಒಳ್ಳೆಯ ಹೆಡ್‌ಮಾಸ್ಟರ್, ತುಂಬಾ ಒಳ್ಳೆಯ ಮೇಷ್ಟ್ರು ಸಹ, ಗುಂಪನ್ನು ನೋಡಿ ಸಿಟ್ಟು ಮಾಡಿಕೊಳ್ಳದೆ ರಾಮದಾಸ್‌ನನ್ನು ಮಾತ್ರ ಒಳಗೆ ಕರೆದು ವಿಚಾರಿಸಿ ಪಿ.ಇ. ಮೇಸ್ಟ್ರಿಗೆ ಕರೆಸಿ ಫುಟ್‌ಬಾಲ್ ಕೊಡಿಸಿದರು. ಇದು ರಾಮದಾಸ್.

ರಾಮದಾಸ್ ಮನೆಯಲ್ಲಿ ಒಂದು ಕೇರಂ ಬೋರ್ಡ್ ಇತ್ತು. ಅದು ಇಡೀ ಕೇರಿಯವರ ಕೇರಂ ಬೋರ್ಡ್. ಕೇರಂ ಆಟ ಆಡಿದ್ದಕ್ಕೆ ಲೆಕ್ಕವೇ ಇಲ್ಲ. ಮಂಜಕ್ಕನ ಮನೆಯೆಂದರೆ ಇಡೀ ಕೇರಿಯ ಎಲ್ಲರ ಮನೆ. ಈ ರೀತಿ ಹೊಕ್ಕು ಬಳಕೆ, ಲೀಡರ್‌ಶಿಪ್, ಭಂಡ ಆಡದಂತೆ

ನೋಡಿಕೊಳ್ಳುವುದು, ಭಂಡ ಆಡಿದವರಿಗೆ ಪಾಠ ಕಲಿಸುವುದು ರಾಮದಾಸ್ ಚಿಕ್ಕಂದಿನಿಂದಲೂ ಮೈಗೂಡಿಸಿಕೊಂಡ ಗುಣ. ಇವೆಲ್ಲ ಮೈಸೂರಿನಲ್ಲಿ ಹೇಗೆ ಅರಳಿತು ಅನ್ನುವುದು ಅಲ್ಲಿಯವರಿಗೆ ಚೆನ್ನಾಗಿ ಗೊತ್ತು. ನಮ್ಮ ಕೇರಿಯಲ್ಲಿ ಕ್ರಿಕೆಟ್ ಟೀಂ ಇದ್ದರೂ ರಾಮದಾಸ್ ಅದನ್ನು ಆಡುತ್ತಿರಲಿಲ್ಲ. ದೇಸಿ ವಿದೇಶಿ ಅನ್ನುವ ಕಲ್ಪನೆ ಕೂಡ ಇರಲಿಲ್ಲ, ಆದರೂ ಕ್ರಿಕೆಟ್ ಅಂದರೆ ಅಷ್ಟಕಷ್ಟೆ.

ಮಳೆಗಾಲದಲ್ಲಂತೂ ನಮ್ಮದು ಡ್ಯಾಮಿನ ಆಟ. ಆಗಿನ ಬಿ.ಇ.ಓ. ಕಚೇರಿ ಮತ್ತು ಉರ್ದು ಮಿಡ್ಲ್ ಸ್ಕೂಲಿನ ಮಧ್ಯೆ ಮೇಲಿನ ಇಡೀ ಮೈದಾನದ ನೀರು ಕೆಳಗೆ ಬರ್‍ತಾಯಿತ್ತು. ಆಗ ಅಲ್ಲಿ ರಸ್ತೆಯಿರಲಿಲ್ಲ. ಶನಿವಾರ ಶಾಲೆ ಮುಗಿದು ಎಲ್ಲರೂ ಹೋದ ಮೇಲೆ ನಮ್ಮ ಡ್ಯಾಂ ಕಟ್ಟುವ ಕೆಲಸ. ರಭಸವಾಗಿ ನೀರು ಬರುವಲ್ಲಿ ಕಲ್ಲು ಮಣ್ಣು ಹಾಕಿ ಕಟ್ಟೆಕಟ್ಟೋದು. ಚಿಕ್ಕ ಚಿಕ್ಕದಾಗಿ ಹರಿದು ಬರುತ್ತಿರುವ ನೀರನ್ನು ದೊಡ್ಡ ಕಟ್ಟೆಗೆ ಬರುವಂತೆ ಮಾಡಿ ಭರ್ಜರಿ ನೀರು ನಿಲ್ಲಿಸಿ ಖುಷಿಪಟ್ಟು ಮನೆಗೆ ಹೋಗ್ತಾ ಇದ್ವಿ. ಆಮೇಲೆ ಅಣೆಕಟ್ಟು ತಾನಾಗಿ ಒಡೆದು ಹೋಗ್ತಾಯಿತ್ತು. ಪಾಠಿ ಚೀಲ ಚಡ್ಡಿ ಶರ್ಟು ಎಲ್ಲಾ ಒದ್ದೆ, ಮನೆಯಲ್ಲಿ ಬೈಗುಳ. ಈ ಕಾಮಗಾರಿಗೆ ಕನಿಷ್ಠ ಐದಾರು ಕಾರ್ಮಿಕರು ಬೇಕು. ಇವರನ್ನು ಒಟ್ಟು ಹಾಕಲು ರಾಮದಾಸ್‌ನಿಗೆ ಕಷ್ಟವಾಗುತ್ತಿರಲಿಲ್ಲ.

ಶಾಲೆಯಲ್ಲಿ, ನಾನಾಗಲಿ, ರಾಮದಾಸ್ ಆಗಲಿ ಹೇಳಿಕೊಳ್ಳುವಷ್ಟು ಬುದ್ಧಿವಂತರಲ್ಲ. ಶಿಸ್ತುಬದ್ಧ ಓದು ಇರಲಿಲ್ಲ. ತಿಂಗಳಿಗೆ ಒಂದೆರಡು ಸಲವಾದರೂ ಒಟ್ಟಿಗೆ ಚಕ್ರಹೊಡೆಯುವ ಸಿಸ್ಟಮ್ ಇತ್ತು. ಚಕ್ರ ಹೊಡೆದ ದಿನ ನಾನು ಗೋಪಾಲಕೃಷ್ಣ ದೇವಸ್ಥಾನದಲ್ಲಿ ಕೂತಿದ್ರೆ ರಾಮದಾಸ್ ಪಕ್ಕದಲ್ಲೆ ಮರದ ಮೇಲೆ ಕೂತಿರುತ್ತಿದ್ದ. ಚಕ್ರ ಹೊಡೆಯುವುದರಲ್ಲಿ ನನಗಿಂತ ರಾಮದಾಸ್ ಹೆಚ್ಚು ಪರ್‌ಫೆಕ್ಟ್. ನನ್ನ ತಾಯಿ ಟೀಚರ್ ಆಗಿದ್ದರಿಂದ ಶಾಲೆಯ ಕೆಲವು ಮೇಷ್ಟ್ರುಗಳಿಗೆ ಗೊತ್ತಿದೆ ಎಂಬ ಭಯ, ಅಲ್ಲದೆ ನನಗೆ ನಾನೊಬ್ಬನೆ ಚಕ್ರ ಹೊಡೆಯುವಷ್ಟು ಧೈರ್ಯವಿರಲಿಲ್ಲ. ರಾಮದಾಸ್‌ನ ಧೈರ್ಯವೇ ಧೈರ್ಯ. ರಾಮದಾಸ್ ಶಾಲೆಗಿಂತ ಹೊರಗೆ ಕಲಿತ್ತದ್ದೆ ಜಾಸ್ತಿ. ರಜೆ ಸಿಕ್ಕಾಗಲೆಲ್ಲಾ ಕಾಡಿಗೆ ಹೋಗೋದು ಅವನ ಹವ್ಯಾಸ. ಅವನಿಗೆ ಕಾಡು ಕೊಟ್ಟಷ್ಟು ಅನುಭವ, ಸಂತೋಷ, ಸಾಂತ್ವನ ಶಾಲೆ ಕೊಟ್ಟಿರಲಿಲ್ಲ.

ಶಾಲೆಯ ಮೇಷ್ಟ್ರುಗಳಿಗೆಲ್ಲಾ ರಾಮದಾಸ್‌ನ ಲೀಡರ್‌ಶಿಪ್ ಗುಣ ಚೆನ್ನಾಗಿ ಗೊತ್ತಿತ್ತು. ಆಗ ನಮ್ಮ ಹೈಸ್ಕೂಲ್ ಮುಂದೆ ಮರಗಳು, ಗಿಡಗಳ ಮಟ್ಟಿಗಳು ತುಂಬಿದ್ದವು. ನಾವು ಹೈಸ್ಕೂಲಿಗೆ ಬರುವಾಗ, ಅಲ್ಲಿದ್ದ ದೊಡ್ಡ ದೊಡ್ಡ ಮರಗಳನ್ನು ಕಡಿದು ಹಾಕಿ ಚಿಕ್ಕ ಮಟ್ಟಿಗಳು ಮಾತ್ರ ಎದೆ ಎತ್ತರದಲ್ಲಿ ನಿಂತಿದ್ದವು. ಈಗೆಲ್ಲಾ ಕ್ರಿಕೆಟ್ ಗ್ರೌಂಡ್ ಆಗಿದೆ. ನಾವೆಲ್ಲ ಮಟ್ಟಿಗಳ ಮಧ್ಯದಲ್ಲಿದ್ದ ಆ ಕಾಲುದಾರಿಯಲ್ಲಿ ಶಾಲೆಗೆ ಹೋಗ್ತಾ ಇದ್ದೆವು. ಪ್ರೇಯರ್ ಟೈಮಿಗೆ ಇರೋದು ಕಂಪಲ್‌ಸರಿ. ಒಮ್ಮೆ ಶನಿವಾರ ಎಂದಿನಂತೆ ಬೆಳಗಿನ ಶಾಲೆ, ಸಾಮಾನ್ಯವಾಗಿ ಎಲ್ಲರೂ ಬೇಗ ಬೇಗನೆ ಬಂದಿದ್ದಾರೆ. ಪ್ರೇಯರ್ ಅಸೆಂಬ್ಲಿಯನ್ನು ನಡೆಸುತ್ತಿದ್ದವರು ನಮ್ಮ ಅಚ್ಚುಮೆಚ್ಚಿನ ಸಾಮಗ ರಾಮಸ್ವಾಮಿ ಅವರು. ತೀರ್ಥಹಳ್ಳಿಯ ಇವರು ಸಮಾಜವಾದದ ಅಭಿಮಾನಿಗಳು. ತುಂಬಾ ಒಳ್ಳೆಯ ಮೇಷ್ಟ್ರು, ಅವರ ಇಂಗ್ಲಿಷ್ ಮತ್ತು ಸಮಾಜಶಾಸ್ತ್ರ ಪಾಠ ನನಗಿನ್ನೂ ಚೆನ್ನಾಗಿ

ನೆನಪಿದೆ. ಅವತ್ತು ಶನಿವಾರಕ್ಕೆ ನೇಮಕವಾಗಿದ್ದ "ದೇವಲೋಕದ ನಮ್ಮ ತಂದೆಯೇ..." ಪ್ರಾರ್ಥನೆ ಮುಗಿಯುತಿತ್ತು. ವಿದ್ಯಾರ್ಥಿಗಳು ಸರಸರನೆ ಬರುತ್ತಲೇ ಇದ್ದರು. ರಾಷ್ಟ್ರಗೀತೆ ಗಂಭೀರವಾಗಿ ಪ್ರಾರಂಭವಾಯಿತು. ರಾಷ್ಟ್ರಗೀತೆಯನ್ನು ರಾಮದಾಸ್ ಕೇಳಿದೊಡನೆ ತಕ್ಷಣ ಅಲ್ಲಿಯೇ ಅಟೆಂಕ್ಷನ್‌ನಲ್ಲಿ ನಿಂತು ಗೌರವ ಅರ್ಪಿಸಿದನ್ನು 'ಎಸ್.ಆರ್.ಎಸ್' ಗಮನಿಸಿದ್ದರು. ಪ್ರೆಯರ್ ಮುಗಿದ ತಕ್ಷಣ ವಿದ್ಯಾರ್ಥಿಗಳಿಗೆ, ರಾಷ್ಟ್ರಗೀತೆಯನ್ನು ಕೇಳಿಸಿಕೊಂಡ ಒಂಬತ್ತನೇ 'ಸಿ' ರಾಮದಾಸ್, ದಾರಿಯಲ್ಲೇ ನಿಂತು ರಾಷ್ಟ್ರಗೀತೆಗೆ ಗೌರವ ಸಲ್ಲಿಸಿದನ್ನು ಚೆಂದವಾಗಿ ಅನೌನ್ಸ್ ಮಾಡಿ ಎಲ್ಲರೂ ಹೀಗಿರಬೇಕು ಎಂದು ಹೇಳುತ್ತಿರುವಾಗ ಯಾರೋ ಒಬ್ಬ ರಾಮದಾಸ್‌ನ ಮಿತ್ರ ಸ್ವಲ್ಪ ಹೆದರಿಕೊಂಡೆ ಚಪ್ಪಾಳೆ ತಟ್ಟಲು ಪ್ರಾರಂಭಿಸಿದಾಗ ಒಮ್ಮೆಲೆ ಎಲ್ಲರೂ ಮತ್ತು ಎಸ್.ಆರ್.ಎಸ್. ಸಹ ಚಪ್ಪಾಳೆ ತಟ್ಟಿದ್ದು ನನ್ನ ಮನಸ್ಸಿನಲ್ಲಿದೆ. ಆಗಲೆ ಇಡೀ ಶಾಲೆಗೆ ರಾಮದಾಸ್ ಗೊತ್ತಾಗಿದ್ದು. ರಾಮದಾಸ್‌ಗೆ ಇದೆಲ್ಲಾ ಗೊತ್ತಾಗಿದ್ದು ಕ್ಲಾಸಿಗೆ ಬಂದ ಮೇಲೆ. ತರಗತಿಯಲ್ಲಿ ಧೈರ್ಯವಾಗಿ ಎದ್ದು ನಿಂತು ಭಾಷಣ ಮಾಡುವುದರಲ್ಲಿ ರಾಮದಾಸ್‌ನೇ ಮುಂದೆ. ನೀಟಾಗಿ ನಿಂತುಕೊಂಡು ಬಹುಸ್ಫುಟವಾಗಿ ಮಾತನಾಡುತ್ತಿದ್ದ ರಾಮದಾಸ್‌ನ ಭಾಷಣ ಎಲ್ಲರ ಗಮನ ಸೆಳೆಯುತ್ತಿತ್ತು. ವಾರದ ಭಾಷಣ ಕಾರ್ಯಕ್ರಮದಲ್ಲಿ ರಾಮದಾಸ್‌ನೇ ಮೊದಲು. ಶಾಲೆಯಲ್ಲಿ ನಡೆಯುತ್ತಿದ್ದ ಚರ್ಚಾಸ್ಪರ್ಧೆಯಲ್ಲೂ ರಾಮದಾಸ್. ಆಗ ಅಂತರ್ ಹೈಸ್ಕೂಲ್ ಚರ್ಚಾಸ್ಪರ್ಧೆ ಮತ್ತು ಭಾವಗೀತೆಗಳ ಸ್ಪರ್ಧೆಯ ಕಾಲ. ಅಲ್ಲೆಲ್ಲಾ ರಾಮದಾಸ್‌ಗೆ ಒಂದಲ್ಲ ಒಂದು ಬಹುಮಾನ. ಸಾಗರದ ಹೈಸ್ಕೂಲಿನಲ್ಲಿ ಓದಿದ ಸುಮಾರು ಐದಾರು ವಿದ್ಯಾರ್ಥಿಗಳು ರಾಜ್ಯಮಟ್ಟದ ಚರ್ಚಾಸ್ಪರ್ಧೆಗಳಲ್ಲಿ ಹೆಸರು ಮಾಡಿದ್ದರು. ಕೆ.ಎಚ್. ಶ್ರೀನಿವಾಸ, ರಾಮದಾಸ್, ಬಂದಗದ್ದೆ ರಮೇಶ, ಕೆ.ಆರ್. ಸಾಗರಾಜ್, ಎ.ಆರ್. ಲಂಬೋಧರ, ಎ. ಕರಿಯಪ್ಪ - ಇವರ ಮಾತುಗಳನ್ನು ಕೇಳುವದೆಂದರೆ ಅಷ್ಟೊಂದು ಸಂತೋಷ. ಕೆ.ಆರ್. ನಾಗರಾಜ್ ಸುಪ್ರೀಂ ಕೋರ್ಟಿನಲ್ಲಿ ವಕೀಲರಾಗಿದ್ದು ಒಂದೆರಡು ವರ್ಷಗಳ ಹಿಂದೆ ತೀರಿಕೊಂಡರು. ಕುತೂಹಲವೆಂದರೆ ಅಂತರ್ ವಿಶ್ವವಿದ್ಯಾಲಯಗಳ ಚರ್ಚಾಸ್ಪರ್ಧೆಯಲ್ಲೂ ಸಾಗರದ ಇದೇ ವಿದ್ಯಾರ್ಥಿಗಳು ಬೇರೆ ಕಡೆಯಿಂದ ಬಂದು ಧಾರವಾಡವೋ, ಬೆಂಗಳೂರೋ, ಮೈಸೂರಿನಲ್ಲೋ ವೇದಿಕೆಯಲ್ಲಿ ಸೇರುತ್ತಿದ್ದರು. ಮಲೆನಾಡಿನ ಈ ವಿದ್ಯಾರ್ಥಿಗಳ ನಂತರ ಇಲ್ಲಿಯ ಸಮಾಜವಾದಿ ಯುವಕರ ಭಾಷಣಗಳನ್ನು ಪದೆ ಪದೆ ಕೇಳಬೇಕೆನಿಸುತ್ತಿತ್ತು. ಚರ್ಚಾಕೂಟಗಳು ಬಂದಾಗಲೆಲ್ಲಾ ರಾಮದಾಸ್‌ನ ತಯಾರಿ ನೋಡಬೇಕಾಗಿತ್ತು. ಅಕಾಡೆಮಿಕ್ ವಿಷಯಗಳು ಬಂದಾಗಲೆಲ್ಲಾ ಬೇಕಾಗುವ ಗಣ್ಯರ ಭೇಟಿ ಮಾಡುವ ಧೈರ್ಯ ರಾಮದಾಸ್‌ನಲ್ಲಿ ಆಗಲೇ ಇತ್ತು. ರಾಮದಾಸ್, ನಮ್ಮ ಹೈಸ್ಕೂಲ್ ವತಿಯಿಂದ ಸಾಗರದ ಸಾರ್ವಜನಿಕ ವೇದಿಕೆಯಲ್ಲಿ ಮಾತನಾಡಿದ್ದು ನನಗಿನ್ನು ಚೆನ್ನಾಗಿ ನೆನಪಿದೆ. ಅದು ರಾಮದಾಸ್‌ನ ಮೊದಲ ಸಾರ್ವಜನಿಕ ಭಾಷಣ. ಭಾಷಣ ಸ್ಪರ್ಧೆಯ ವಿಷಯ ಮದ್ಯಪಾನ ಕುರಿತಂತೆ. ಆಗಂತೂ ಇದು ಎಲ್ಲೆಡೆ ಚರ್ಚೆಗೆ ಒಳಗಾಗಿದ್ದ ವಿಷಯ. ತುಂಬಾ ಆವೇಶದಿಂದ ಬಹು ಸುಂದರವಾಗಿ ಮಧ್ಯಪಾನದ ವಿರೋಧವಾಗಿ ಮಾತಾಡಿದ ರಾಮದಾಸ್‌ಗೇನೆ ಮೊದಲ ಬಹುಮಾನ. ಅವತ್ತು ಕೆಲವು ದೊಡ್ಡವರು ಪ್ರೋತ್ಸಾಹ

ಬಹುಮಾನವಾಗಿ ನಗದು ಬಹುಮಾನವನ್ನೂ ಕೊಟ್ಟಿದ್ದರು. ಇತ್ತೀಚೆಗೆ ರಾಮದಾಸ್‌ಗೆ ಆ ಭಾಷಣ ಸ್ಪರ್ಧೆ, ಆ ಚರ್ಚೆಯ ವಿಷಯ ಮತ್ತು ಆ ಮೊದಲ ಬಹುಮಾನ - ಇವುಗಳನ್ನು ನೆನಪಿಸಿದ್ದೆ. ರಾಮದಾಸ್‌ಗೆ ಮಾತುಗಾರಿಗೆ ಮತ್ತು ವೇದಿಕೆ ಹವ್ಯಾಸ ಸಾಗರದಿಂದಲೇ ಇದ್ದು ನಂತರ ಅದು ಮೈಸೂರು ಮತ್ತು ಕರ್ನಾಟಕದಲ್ಲಿ ಹೆಚ್ಚಿಗೆ ಅರಳಿತು.

ಮಾತಿಗೆ ಬೆಲೆ ಬರೋದು ಕೇವಲ ಮಾತುಗಾರಿಕೆಯ ಓಘದಿಂದಲ್ಲ. ಅದರ ಹಿಂದೆ ಮಾತುಗಾರನ ಪ್ರಾಮಾಣಿಕತೆ, ಬದ್ಧತೆ, ಸತ್ಯ, ಕಾಳಜಿ ಮತ್ತು ನಿರ್ಭಿಡೆಯಿಂದ. ರಾಮದಾಸ್ ಮಾತುಗಳಿಗೆ ಬೆಲೆ ಗೌರವ ಶಕ್ತಿ ಬಂದಿರೋದೆ ಈ ಗುಣಗಳಿಂದ. ರಾಮದಾಸ್‌ನ ಭಾಷಣವೆಂದರೆ ಅದೊಂದು ಅನುಭವ, ಅಲ್ಲಿ ಬೆಂಕಿ ಮತ್ತು ಬೆಳಕು ಇರಲೇಬೇಕು. ಯುವಕರು, ಸಾಹಿತ್ಯ ಸಂಸ್ಕೃತಿಯಾಸಕ್ತರು ರಾಮದಾಸ್ ಭಾಷಣಕ್ಕೆ ಮುಗಿ ಬೀಳುತ್ತಿದ್ದರು. ಸಾಗರದ 'ಒಡನಾಟ' ಸಂಸ್ಥೆಗೆ ಒಂದೆರಡು ಸಲ ಆಹ್ವಾನಿಸಿದಾಗ ರಾಮದಾಸ್ "ಬೇಡ ಮಾರಾಯ, ನನಗೆ ಒಮ್ಮೆ ಭಾಷಣಕ್ಕೆ ಕರೆದವರು ಮತ್ತೊಮ್ಮೆ ಕರೆಯೊಲ್ಲ. ನಾನು ಭಾಷಣ ಮಾಡಿ ಬಂದ ಮೇಲೆ ಜನ ನಿಮ್ಮನ್ನ ಕೇಳ್ತಾರೆ" ಅಂತ ನಗ್ತಾ ನಗ್ತಾ ಹೇಳಿ, ಖಂಡಿತಾ ಬರ್‍ತೀನಿ, ಸಾಗರಕ್ಕೆ ಬರ್‍ಲಿಕ್ಕೆ ನೀವ್ಯಾರು ಕರೆಯೋದು ಬೇಡ ಅಂತ ತುಂಬ ಪ್ರೀತಿಯಿಂದ ಹೇಳಿದ್ದು ಮನಸಿನಲ್ಲಿ ಇದೆ.

### ಪುಟ್ಟ ಚಾರ್ವಾಕ

ರಾಮದಾಸ್ ಮೈಸೂರಿಗೆ ಹೋದ ಮೇಲೆ ಚಾರ್ವಾಕನಾಗಿದ್ದು, ಜಾತಿ ವಿನಾಶ ಹೋರಾಟಗಳಲ್ಲಿ ತನ್ನನ್ನು ತಾನು ತೀವ್ರವಾಗಿ ತೊಡಗಿಸಿಕೊಂಡದ್ದು, ಮಾನವ ಮಂಟಪಗಳ ಮೂಲಕ 400ಕ್ಕೂ ಹೆಚ್ಚು ಅಂತರ್ಜಾತಿ ಮದುವೆ ನಡೆಸಿದ್ದು - ಒಟ್ಟಾರೆ, ಜಾತಿ ದೇವರುಗಳಿಂದ ದೂರವಿದ್ದುಕೊಂಡೇ ಬದುಕನ್ನು ಉಂಡಿದ್ದು, ಕಂಡಿದ್ದು ಬಹು ವಿಶೇಷ. ದೇವರ ವಿರುದ್ಧ, ಜಾತಿ ವಿರುದ್ಧ, ಮಾತನಾಡುವ ಅನೇಕರಲ್ಲಿ ಒಳಗೊಳಗೆ ದೇವರನ್ನು, ಜಾತಿಯನ್ನು ಪ್ರೀತಿಸಿದವರ ಸಂಖ್ಯೆ ಕಡಿಮೆಯೇನಿಲ್ಲ. ಅಂತರಂಗ ಬಹಿರಂಗ ಎರಡರಲ್ಲೂ ಬಹು ಪ್ರಾಮಾಣಿಕವಾಗಿ ದೇವರನ್ನು, ಜಾತಿಗಳನ್ನು ಸಾರಾಸಗಟಾಗಿ ತಿರಸ್ಕರಿಸಿ ಅದಕ್ಕೆ ಬದ್ಧವಾಗಿ ರಾಮದಾಸ್‌ನ ಹಾಗೆ ಬದುಕಿದವರು ಬಹು ಅಪರೂಪ. ಸಾಯುವ ಕ್ಷಣದಲ್ಲೂ ಯಾವ ರೀತಿಯ ಧಾರ್ಮಿಕ ವಿಧಿಗಳನ್ನು ನಡೆಸಬಾರದೆಂಬ ಕಟ್ಟಾಜ್ಞೆ ಹೊರಡಿಸಿ ಅಂತೆಯೇ ನಿರ್ಗಮಿಸಿದ ಈ ಚಾರ್ವಾಕ. ಅಂತ್ಯ ಸಂಸ್ಕಾರದ ಗಳಿಗೆಯಲ್ಲಿ ರಾಮದಾಸ್ ಅಭಿಮಾನಿಗಳು, ಹೋರಾಟಗಾರರು ಜಾತಿ ವಿನಾಶದ ಹಾಡುಗಳನ್ನು, ಸಮಾನತೆಯ ಹಾಡುಗಳನ್ನು ಹೃದಯ ಬಿಚ್ಚಿ ಒಕ್ಕೊರಲದಿಂದ ಹಾಡಿದ್ದು ಈ ಚಾರ್ವಾಕನಿಗೆ ಸಂದ ಧಾರ್ಮಿಕ ವಿಧಿ. ಆಗ ಶವದ ಸುತ್ತ ಜೀವ ಹರಿಯುತ್ತಿತ್ತು. ರಾಮದಾಸ್ ಯಾವುದನ್ನು ನಂಬಿದ್ದನೋ, ಯಾವುದನ್ನು ಬಯಸಿದ್ದನೊ ಅದನ್ನೇ ಅಲ್ಲಿ ನೆರೆದಿದ್ದ ಜನ ಕೊಟ್ಟಿದ್ದು ಬಹು ಅರ್ಥಪೂರ್ಣ.

ರಾಮದಾಸ್ ತನ್ನ ಮೈಸೂರಿನ ಮನೆಗೆ 'ಚಾರ್ವಾಕ' ಅಂತ ಹೆಸರಿಟ್ಟಿದ್ದನ್ನು ನೋಡಿ ನಾನೇನೂ ತೀರಾ ಆಶ್ಚರ್ಯಪಟ್ಟಿರಲಿಲ್ಲ. ರಾಮದಾಸ್ ಯಾವತ್ತೂ ಚಾರ್ವಾಕ ಋಷಿಗೆ

ಅನ್ಯಾಯವಾಗುವಂತ ಕೆಲಸ ಮಾಡಲಿಲ್ಲ. ಒಮ್ಮೆಯಾದರೂ ಸಾಂದರ್ಭಿಕ ಒತ್ತಡಗಳಿಂದ ಆಸ್ತಿಕ ಋಷಿಯ ಕುಟೀರದತ್ತ ಕಣ್ಣು ಹೊರಳಿಸಲಿಲ್ಲ. ಇದೇನು ಖಂಡಿತಾ ಚಿಕ್ಕ ಸಂಗತಿಯಲ್ಲ. ಈ ನಿಲುವು ರಾಮದಾಸ್‌ನಿಗೆ ಬಾಲ್ಯದಿಂದಲೇ ಹೇಗೆ ಬಂತೆನ್ನುವುದು ಸಹ ಕುತೂಹಲ. ಏಕೆಂದರೆ ಸಾಗರದಲ್ಲಿರುವಾಗಲೇ ರಾಮದಾಸ್‌ನೊಳಗೊಬ್ಬ ಪುಟ್ಟ ಚಾರ್ವಾಕನಿದ್ದ. ಆತ ಬಹು ಸ್ಪಷ್ಟರೂಪ ಪಡೆದಿದ್ದು ಮೈಸೂರಿನಲ್ಲಿ.

ನಮ್ಮ ಮನೆಯ ಮುಂಭಾಗದಲ್ಲಿ, ಅಂದರೆ ರಾಮದಾಸ್ ಮನೆ ಪಕ್ಕದಲ್ಲಿ ಒಂದು ಗರಡಿ ಮನೆಯಿತ್ತು. ಅದೊಂದು ಹಳೆ ಗರಡಿ ಮನೆ. ಅದರಲ್ಲಿ ಅನೇಕ ಪೈಲ್ವಾನರು ಬೆಳ್ಳಿ, ಚಿನ್ನ, ಬಳೆಗಳನ್ನು, ಅಖಾಡ ಬಳೆಗಳನ್ನು ಗೆದ್ದವರಿದ್ದರು. ಆಗ ಸಾಗರ ಪ್ರಾಂತ್ಯದ ಬಹು ದೊಡ್ಡ ಪೈಲ್ವಾನರೆಂದರೆ ಎ. ಭೋಜಪ್ಪ ಅವರು. ಮುಂದೆ ಭೋಜಪ್ಪನವರು ಬಹಳ ಕಾಲ ಪುರಸಭಾಧ್ಯಕ್ಷರೂ ಆಗಿದ್ದ ವ್ಯಕ್ತಿ. ಆ ಕಾಲದಲ್ಲಿ ಸಾಗರದ ಕುಸ್ತಿ ಅಖಾಡವೆಂದರೆ ಎಲ್ಲಾ ಪೈಲ್ವಾನರ ಕನಸಿನ ಅಖಾಡ. ದಸರಾ ಮಾರಿಜಾತ್ರೆಗಳಲ್ಲಿ ಕುಸ್ತಿಯ ಮೇಲೆ ಕುಸ್ತಿ. ದಾವಣಗೆರೆಯ ಪೈಲ್ವಾನ್ ಚಾರ್ಲಿ ಸೇರಿದಂತೆ ಅನೇಕ ಪ್ರಸಿದ್ಧ ಪೈಲ್ವಾನರು ಸಾಗರದ ಅಖಾಡಕ್ಕೆ ಬಂದು ಹೋಗಿದ್ದರು. ಸೇರುತ್ತಿದ್ದ ಜನವೂ ಬಹಳ. ಆಗ ಕ್ರಿಕೆಟ್ ಹುಚ್ಚಿರಲಿಲ್ಲ. ಪೈಲ್ವಾನರು ತಿರುಗಾಡುವುದನ್ನು, ಅವರ ಕುಸ್ತಿಗಳನ್ನು, ಕುಸ್ತಿಗಳ ಹ್ಯಾಂಡ್‌ಬಿಲ್‌ಗಳನ್ನು ನೋಡುವುದೇ ನಮಗೆಲ್ಲಾ ಬಹು ಸಂಭ್ರಮ. ಕುಸ್ತಿಗಳ ಹ್ಯಾಂಡ್‌ಬಿಲ್‌ಗಳನ್ನು ನಾವಿಬ್ಬರೂ ಸಂಗ್ರಹಿಸಿ ಪರಸ್ಪರ ಎಣಿಸಿ ತೋರಿಸಿಕೊಳ್ಳುತ್ತಿದ್ದೆವು. ರಜೆಯ ದಿನಗಳಲ್ಲಿ, ಪ್ರತಿ ಶನಿವಾರ ಭಾನುವಾರ ನಮ್ಮ ಗರಡಿ ಮನೆಯಲ್ಲಿ ಪೈಲ್ವಾನರ ಎಂದಿನ ತಾಲೀಮ್‌ಗಳು ಮುಗಿದ ಮೇಲೆ ರಾಮದಾಸ್ ಮತ್ತು ನಾನು ತಾಲೀಮ್ ಮಾಡಿ ಕುಸ್ತಿ ಆಡುತ್ತಿದ್ದೆವು. ನಮ್ಮಿಬ್ಬರಿಗೂ ಅದೊಂದು ಬಹು ಪ್ರಿಯವಾದ ಅನುಭವ. ನಾವು ಬಹಳ ಸೀರಿಯಸ್ಸಾಗಿ ಕುಸ್ತಿಯನ್ನು ಆಡುತ್ತಿದ್ದ ಫಲಿತಾಂಶ 60:40. ನಾನು ರಾಮದಾಸ್‌ನಿಂದ ಗೆದ್ದದ್ದಕ್ಕಿಂತ ಸೋತಿದ್ದೆ ಹೆಚ್ಚು. ಆಗಲೆ ರಾಮದಾಸ್‌ಗೆ ಮೈಮನಗಳು ಗಟ್ಟಿಇದ್ದವು. ಗರಡಿ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ನಾವಿಬ್ಬರು ಹೋಗುತ್ತಿದ್ದದ್ದು ಭೋಜಪ್ಪ ಸೇರಿದಂತೆ ಕೆಲವರಿಗೆ ಗೊತ್ತಿತ್ತು. ಗರಡಿ ಮನೆಯಲ್ಲಿ ಪ್ರತಿ ಶುಕ್ರವಾರ ಗೋಧಾ ಪೂಜೆ. ಪೂಜೆಗೆ ಪೈಲ್ವಾನರೆಲ್ಲಾ ಸೇರುತ್ತಿದ್ದು, ಭೋಜಪ್ಪನವರು ನಮ್ಮಿಬ್ಬರಿಗೆ ಪೂಜೆಗೆ ಬರಲು ಹೇಳಿ ಕಳಿಸಿದರೂ ಕೂಡ ನಾವು ಹೋಗುತ್ತಿರಲಿಲ್ಲ. ಹೋಗದಿರಲು ನನ್ನ ಕಾರಣವೇ ಬೇರೆ, ರಾಮದಾಸ್‌ನ ಕಾರಣವೇ ಬೇರೆ. ಆದರೆ ಭೋಜಪ್ಪನವರು ಮಾತ್ರ ಪೂಜೆಯಾದ ಮೇಲೆ ಅವರ ಹುಡುಗರ ಕೈಯಲ್ಲಿ ನಮಗೆ ಕೊಡಲು ಪ್ರಸಾದ ಕಳಿಸುತ್ತಿದ್ದರು. ಮಂಡಕ್ಕಿ ಪ್ರಸಾದದಲ್ಲಿ ರಾರಾಜಿಸುತ್ತಿದ್ದ ಕಾಯಿಚೂರುಗಳೇ ನಮ್ಮ ವಿಶೇಷ ಆಕರ್ಷಣೆ. ನಾವಿಬ್ಬರೂ ಪ್ರಸಾದ ಮಾತ್ರ ಬಿಡ್ತಾಯಿರಲಿಲ್ಲ. (ಮುಂದೆ ರಾಮದಾಸ್ ಪ್ರಸಾದ ಕೂಡ ತಗೋಳ್ತಿರಲಿಲ್ಲ ಅಂತ ಕೇಳಿರುವೆ) ಪ್ರಸಾದ ನಮಗೆ ಬಂದ ಕೂಡಲೆ ರಾಮದಾಸ್‌ನ ಒಂದು ಕವಿವಾಣಿ ಇದ್ದೇ ಇರ್ತಿತ್ತು. "ಪೂಜೆ ಗೀಜೆ ಇಲ್ಲ, ಪ್ರಸಾದ ಮಾತ್ರ ತಪ್ಪೊಲ್ಲ, ಪೂಜೆಗೀಜೆ ಇಲ್ಲ, ಪ್ರಸಾದ ಮಾತ್ರ ತಪ್ಪೊಲ್ಲ" ಅಂತ. ಅವನ ನಂಬಿಕೆ, ನಿರ್ಧಾರಗಳ ಗಾಢತೆ ನನಗರ್ಥವಾಗಿದ್ದು ರಾಮದಾಸ್ ಮೈಸೂರಿಗೆ

ಹೋದ ಮೇಲೆ, ಪೂಜೆ ಮಾಡೋದು, ಪೂಜೆಗೆ ಹೋಗುವುದು, ಸತ್ಯನಾರಾಯಣ ಕತೆ, ದೇವಿಕತೆ, ಮಾರಿಪೂಜೆ - ಇವುಗಳಲ್ಲಿ ರಾಮದಾಸ್‌ನಿಗೆ ಯಾವ ಆಸಕ್ತಿಯೂ ಇರಲಿಲ್ಲ. ಸಾಮಾನ್ಯವಾಗಿ ಎಲ್ಲಾ ಪೈಲ್ವಾನರು ಗರಡಿ ಮನೆಗೆ ಬಂದು ತಮ್ಮ ಕುಸ್ತಿ ಕಾಸ್ಟ್ಯೂಮ್ ಧರಿಸುವುದಕ್ಕಿಂತ ಮುಂಚೆ ಅಲ್ಲಿಯ ಗೋಡೆ ಗೂಡಿನಲ್ಲಿರುವ ಹನುಮಂತನಿಗೆ ಊದಿನಕಡ್ಡಿ ಹಚ್ಚಿ ಕೈ ಮುಗಿದ ಮೇಲೇನೇ ಗೋಧಕ್ಕೆ ಪ್ರವೇಶ. ಇದೊಂದು ಗರಡಿ ಪರಂಪರೆ. ಆದರೆ ರಾಮದಾಸ್ ಒಮ್ಮೆಯಾದರೂ ಕೂಡ ಆ ಹನುಮಂತನ ಮುಖವನ್ನು ನೋಡಿದ್ದು ನನಗೆ ನೆನಪಿಲ್ಲ. ತಾಯಿ ಮಂಜಕ್ಕ ಪೂಜೆಯ ಯಾವ ಸಂದರ್ಭವನ್ನು ತಪ್ಪಿಸಿಕೊಳ್ಳುತ್ತಲೇ ಇರಲಿಲ್ಲ. ರಾಮದಾಸ್‌ನಿಗೆ ಈ ಭಾವನೆಗಳು ಹೇಗೆ ಬಂತೋ ಏನೋ ! ಉಣ್ಣಲು, ತೊಡಲು, ಇರಲು, ಬದುಕಲು, ಒಳ್ಳೆಯದಾಗಲು ದೇವರ ಪೂಜೆ ಅಗತ್ಯವೇ ಇಲ್ಲವೆನ್ನುವ ನಿರ್ಧಾರ ರಾಮದಾಸ್‌ನಲ್ಲಿ ಬಾಲ್ಯದಲ್ಲಿಯೇ ಇತ್ತು.

ನಮ್ಮ ಪ್ರೈಮರಿ, ಹೈಸ್ಕೂಲ್‌ಗಳಲ್ಲಿ ಸರಸ್ವತಿಪೂಜೆ, ಗಣಪತಿ ಪೂಜೆ - ಇವುಗಳಿಂದ ರಾಮದಾಸ ಆಗಲೇ ದೂರ. ಶಾಲೆಗೆ ಚಕ್ರ ಹೊಡೆದು ಗೋಪಾಲ ಕೃಷ್ಣ ದೇವಸ್ಥಾನದ ಹತ್ತಿರವೇ ಇದ್ದ ಸಂಪಿಗೆ ಮರದಿಂದ ತಾನು ಮೇಲಿಂದ ಕಿತ್ತು ಹಾಕುತ್ತಿದ್ದ ಹೂವುಗಳನ್ನು ಬೇರೆ ಹುಡುಗರೇ ದೇವರಿಗೆ ಹಾಕುತ್ತಿದ್ದರೆ ವಿನಹ ರಾಮದಾಸ್ ತಾನು ಹಾಕ್ತಾಯಿರಲಿಲ್ಲ. ಸರಸ್ವತಿ ಪೂಜೆ, ಗಣಪತಿ ಪೂಜೆಗೆ ಎಲ್ಲಾ ಹುಡುಗರು ದುಡ್ಡು ಕೊಟ್ಟ ಮೇಲೆ, ತರಗತಿ ಉಪಾಧ್ಯಾಯರು ಪದೇ ಪದೇ ಕೇಳಿದಾಗ ಕೊನೆಯಲ್ಲಿ, ಅನಿವಾರ್ಯವಾಗಿ ದುಡ್ಡುಕೊಡುತ್ತಿದ್ದ. ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ರಾಮದಾಸ್‌ನ ಲೀಡರ್‌ಶಿಪ್. ಆದರೆ ಪೂಜೆಗಳಿಂದ ಮಾತ್ರ ಬಹು ದೂರ. ಬಹುಶಃ ಒಬ್ಬ ಪುಟ್ಟ ಚಾರ್ವಾಕ ಅವನೊಳಗೆ ಅಂಬೆಗಾಲು ಹಾಕುತ್ತಿದ್ದ ಅಂತ ನನಗೀಗ ಅನಿಸುತ್ತೆ. ನಮ್ಮ ಹೈಸ್ಕೂಲಿನಲ್ಲಿ ಪ್ರತಿದಿನ ಒಂದೊಂದು ಧರ್ಮದ ಪ್ರಾರ್ಥನೆ ಇರುತ್ತಿತ್ತು. ಹಿಂದೂ, ಮುಸ್ಲಿಂ, ಕ್ರೈಸ್ತರ ಪ್ರಾರ್ಥನೆ, ಹೀಗೆ - ಇವೆಲ್ಲಾ ರಾಮದಾಸ್‌ನ ಮೇಲೆ ಕೆಲಸ ಮಾಡಿರಬೇಕು. ಈ ಭಾವನೆಗಳೆಲ್ಲಾ ಹರಳುಗಟ್ಟಿದ್ದು ಶಿವಮೊಗ್ಗದ ಬೆಕ್ಕಿನ ಕಲ್ಮಠ ಹಾಸ್ಟೆಲಿನಲ್ಲಿ. ಆಗ ಶಿವಮೊಗ್ಗದಲ್ಲಿ ಕ್ರಿಶ್ಚಿಯನ್ನರಿಗೆ ಹೊರತು ಮತ್ತೆಲ್ಲಾ ಜಾತಿಗಳಿಗೆ ಹಾಸ್ಟೆಲ್ ಇತ್ತು. ರಾಮದಾಸ್ ಮತ್ತು ನಾನು ಬೆಕ್ಕಿನ ಕಲ್ಮಠ ಸೇರಿಕೊಂಡೆವು. ಆ ಕಾಲದಲ್ಲಿಯೇ ಅದೊಂದು ಪಕ್ಕಾ ಸೆಕ್ಯುಲರ್ ಹಾಸ್ಟೆಲ್. ದಲಿತರು, ಮುಸ್ಲಿಂ, ಕ್ರಿಶ್ಚಿಯನ್, ಲಿಂಗಾಯಿತರು - ಹೀಗೆ ಅಲ್ಲಿ ಎಲ್ಲರಿಗೂ ತೆರೆದ ಬಾಗಿಲು. ಅಲ್ಲಿಯ ಐದು ವರ್ಷದ ಜೀವನ ನನಗಂತೂ ಅಪೂರ್ವ ಅನುಭವ. ಅದನ್ನು ರಾಮದಾಸ್ ಮಾತ್ರ ದುಡಿಸಿಕೊಂಡ ರೀತಿ ಬಹು ಅನನ್ಯ. ತುಂಬ ಒಳ್ಳೆಯ ಹಾಸ್ಟೆಲ್. ಸ್ವಾಮೀಜಿಯವರು ನಮ್ಮನ್ನೆಲ್ಲಾ ಚೆನ್ನಾಗಿ ನಡೆಸಿಕೊಂಡಿದ್ದರು. ಆಗೊಮ್ಮೆ ಈಗೊಮ್ಮೆ ತಿಳಿಸಾರಿನಲ್ಲಿ ತೇಲುತ್ತಿದ್ದ ಟೊಮ್ಯಾಟೊ ತುಂಡುಗಳನ್ನು ನೋಡಿ ಸಂತೋಷಪಡುತ್ತಿದ್ದ ಕಾಲ. ನೂರಾರು ಜಾತಿ ವಿಮೋಚನೆ ಲೇಖನಗಳು, ಸೆಮಿನಾರು ಭಾಷಣಗಳು ಮಾಡಬಹುದಾದ ಪರಿಣಾಮಗಳಿಗಿಂತ ಇಂತಹ ಹಾಸ್ಟೆಲ್‌ಗಳು ಮಾಡುತ್ತಿದ್ದ ಕೋಮು ಸೌಹಾರ್ದತೆ ತುಂಬಾ ಪರಿಣಾಮಕಾರಿ. ರಾಮದಾಸ್‌ಗೆ ಶಿವಮೊಗ್ಗದ ಈ ಹಾಸ್ಟೆಲ್ ಬಗ್ಗೆ ತುಂಬಾ ಗೌರವ ಅಂತ ಈಗಿನ ಪೂಜ್ಯ ಮುರುಘರಾಜೇಂದ್ರ ಸ್ವಾಮೀಜಿ ಅವರು ಅನೇಕ ಸಾರಿ ಹೇಳುವುದನ್ನು ಕೇಳಿದ್ದೇನೆ.

ಸಾಗರದ ಮಾರಿಜಾತ್ರೆ, ಗಣಪತಿ ತೇರು - ಇವೆಲ್ಲಾ ಮಂಜಕ್ಕಗೆ ಪ್ರಿಯವಾದರೂ ರಾಮದಾಸ್ ಮಾತ್ರ ಬಹಳ ದೂರ. ಈ ಪುಟ್ಟ ಚಾರ್ವಾಕನ ತಾತ್ವಿಕ ಎಲ್.ಕೆ.ಜಿ ಮತ್ತು ಯು.ಕೆ.ಜಿ ಗಳೆಲ್ಲಾ ಸಾಗರದಲ್ಲಿಯೇ.

ರಾಮದಾಸ್ ಮತ್ತು ನಾನು ಆರ್.ಎಸ್.ಎಸ್.ಗೆ ಹೋಗುತ್ತಿದ್ದುದು ನನಗೆ ಚೆನ್ನಾಗಿ ನೆನಪಿದೆ. ರಾಮದಾಸ್ ನನ್ನನ್ನು ಕರ್ಕೊಂಡು ಹೋಗಿದ್ನೋ ಅಥವಾ ಬೇರೆಯೊಬ್ಬರು ನಮ್ಮಿಬ್ಬರನ್ನು ಅಲ್ಲಿಗೆ ಕರ್ಕೊಂಡು ಹೋಗಿದ್ರೋ ನನಗೆ ಗೊತ್ತಿಲ್ಲ. ಆದರೆ ಅಲ್ಲಿಯ ಶಿಸ್ತು ಮತ್ತು ಆಟ ಮಾತ್ರ ನಮ್ಮನ್ನು ಹಿಡಿದಿಟ್ಟಿತ್ತು. ಆಗ ಸಾಗರದ ಗಂಧದ ಕೋಠಿಯಲ್ಲಿ ಆರ್.ಎಸ್.ಎಸ್. ಸೇರಿ ಬರುತ್ತಿದ್ದ ಸ್ಥಳ. ಆಗ ಆ ಕೋಠಿಯಲ್ಲಿ ಈಗಿನ ಸಾಮಿಲ್ಲುಗಳಲ್ಲಿ ನಾಟ ಸೇರಿಸಿ ಇಟ್ಟ ಹಾಗೆ ಗಂಧದ ತುಂಡುಗಳನ್ನು ಸೇರಿಸಿ ಇಡುತ್ತಿದ್ದ ಕಾಲ. ವರದಾ ನದಿಯಲ್ಲಿ ಬಹಳ ನೀರು ಹರಿದಿದೆ. ಮುಂದೆ ಶ್ರೀಗಂಧ ಸೊನಗಾರರ ಅಂಗಡಿಗೆ ಸೇರುತ್ತೋ ಏನೋ ! ನಾನು ಆರೆಸೆಸ್ಸಿಗೆ ಹೋಗ್ತಾ ಇದ್ದದ್ದು ನಮ್ಮ ಮನೆಯಲ್ಲಿ ಗೊತ್ತಿರಲಿಲ್ಲ. ನನಗದು ಸುಮಾರು ಮೂರು ತಿಂಗಳ ಅನುಭವ. ಯಾಕೋ ಏನೋ ನನ್ನನ್ನು ನೋಡಿ ಅಲ್ಲಿಯ ಹುಡುಗರು ಪಿಸುಗುಟ್ಟುವುದನ್ನು ನೋಡಿ ನನಗೆ ತುಂಬ ಮುಜುಗರವಾಗುತ್ತಿತ್ತು. ಹಾಗಾಗಿ ನಾನು ಅಲ್ಲಿಗೆ ಹೋಗೋದು ಬಿಟ್ಟೆ. ಕೆಲವು ದಿನಗಳ ನಂತರ ರಾಮದಾಸ್ ಸಹ ಬಿಟ್ಟ. ರಾಮದಾಸ್‌ನ ಕಾರಣ ಬೇರೇನೆ ಇತ್ತು ಅನಿಸುತ್ತೆ. ಸಾಗರದಲ್ಲಿ ಆರೆಸೆಸ್ ತೊರೆದ ರಾಮದಾಸ್‌ಗೆ ತನ್ನ ಕೊನೆಕಾಲದವರೆಗೆ ಅದರ ಬಗ್ಗೆ ಸಹಮತವಾಗಲೀ ಸಹನೆಯಾಗಲಿ ಇರಲಿಲ್ಲ. ಹೀಗೆ ರಾಮದಾಸ್‌ನ ಸಾರ್ವಜನಿಕ ಬದುಕಿನ ಅನೇಕ ನಿಲುವುಗಳು ಸಾಗರದಲ್ಲಿಯೇ ಸ್ಫುಟಗೊಂಡಿದ್ದವು. ಮೈಸೂರು ಮತ್ತು ಕರ್ನಾಟಕದಲ್ಲಿ ಈ ಚಾರ್ವಾಕ ನಡೆಸಿದ ಜಾತಿ ವಿರೋಧಿ ಹೋರಾಟ ಚಿಕ್ಕದೇನಲ್ಲ. ಒಮ್ಮೊಮ್ಮೆ ಬದ್ಧತೆಗೆ ಕಟ್ಟುಬಿದ್ದು ಆತ ಒಂಟಿಯಾಗಿ ನಡೆದುದ್ದುಂಟು. ಗುಂಪಿನಲ್ಲಿ ಹೋಗುವುದು ಬಹಳ ಸುಲಭ ಆದರೆ ಒಂಟಿಯಾಗಿ ನಡೆಯುವುದು ಬಹಳ ಕಷ್ಟ. ಒಂಟಿಯಾಗಿ ನಡೆಯುವ ಶಕ್ತಿ, ದೃಢತೆ, ಸಂಕಲ್ಪಗಳು ಈ ಚಾರ್ವಾಕನಲ್ಲಿತ್ತು.

## ಪಟಾಕಿ ಮಮ್ಮಿ ಸಾಹೇಬರ ಮನೆ

ನಮ್ಮ ಕೇರಿಯ ಏಕೈಕ ಮುಸ್ಲಿಂರ ಮನೆ ಮಮ್ಮಿ ಸಾಹೇಬರದು. ತುಂಬ ಒಳ್ಳೆಯ, ದೊಡ್ಡ ಕುಟುಂಬ. ಅವರ ಮಗ ಖಾಸಿಂ ಸಾಬ್ ಸಾಗರ ಪುರಸಭಾ ಉಪಾಧ್ಯಕ್ಷರಾಗಿ ಸಕ್ರಿಯ ಸಾರ್ವಜನಿಕ ಸೇವೆಯಲ್ಲಿದ್ದಾರೆ. ಇವರ ಮನೆ ರಸ್ತೆಗಿಂತ 15-20 ಮೆಟ್ಟಿಲು ಕೆಳಗೆ ವರದಾ ನದಿಯ ದಡದ ಮೇಲೆಯೆ ಇದೆ. ದೊಡ್ಡ ಮಳೆಗಾಲದಲ್ಲಿ ಇವರ ಮನೆಯವರೆಗೂ ಹೊಳೆ ನೀರು ಬರುತ್ತದೆ. ಈಗಲೂ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಈ ಮನೆ ಹಾಗೆಯೇ ಇದೆ. ಮಮ್ಮಿ ಸಾಹೇಬರು ಉತ್ತರ ಕನ್ನಡ ಜಿಲ್ಲೆಯವರು. ಪಟಾಕಿ ತಯಾರಿಸುವುದು ಅವರ ವಂಶ ವೃತ್ತಿ. ಸಾಹೇಬರ ಮನೆಯಂಗಳದಲ್ಲಿ ಒಂದು ಸುಂದರ ಬಾವಿಯಿದೆ. ವರ್ಷದ ಎಲ್ಲಾ ಕಾಲದಲ್ಲಿ ನೀರು ಇರುತ್ತೆ.

ಇದು ಕೇರಿಯ ಎಲ್ಲರ ಬಾವಿಯೂ ಹೌದು. ಈ ಬಾವಿಯಲ್ಲಿ ಎಲ್ಲರಿಗಾಗಿ ಒಂದು ಗಡೆಗಡೆ ಸದಾ ಸಿದ್ಧ. ಇದೊಂದು ಜಾತ್ಯತೀತ ಕೋಮು ಸೌಹಾರ್ದತೆಯ ಬಾವಿ. ಗಣಪತಿ ಹಬ್ಬದ ಎರಡು ತಿಂಗಳ ಮೊದಲೇ ಇವರ ಮನೆಯಲ್ಲಿ ಪಟಾಕಿ ತಯಾರಿಗಳು ಪ್ರಾರಂಭವಾಗುತ್ತಿತ್ತು. ಗರ್ನಾಲ್, ನೆಲಗುಮ್ಮ ಮುಂತಾದ ಪಟಾಕಿಗಳು ತಯಾರಾಗುತ್ತಿದ್ದವು. ಆಗಿನ್ನು ಕಂಪನಿ ಪಟಾಕಿಗಳು ಸಾಗರ ಪೇಟೆಗೆ ಬಂದಿರಲಿಲ್ಲ. ಎಲ್ಲಾ ದೇಸಿ ಪಟಾಕಿ. ಪಟಾಕಿ ಮದ್ದುಗಳ ಮಿಶ್ರಣ ಹಾಗು ಕೆಲವು ಅಪಾಯಕಾರಿ ಸೂಕ್ಷ್ಮ ಕೆಲಸಗಳನ್ನು ಆ ಕುಟುಂಬದವರೇ ಮಾಡಿದ ನಂತರ ಉಳಿದ ಕೆಲಸಗಳು ಕೇರಿಮನೆಯ ಹುಡುಗರು ಮತ್ತು ಕೆಲವು ಹೆಣ್ಣುಮಕ್ಕಳಿಗೆ ಮೀಸಲು. ಇಲ್ಲಿಯೂ ಮಂಜಕ್ಕ ಮಿಂಚುವ ಮಹಿಳೆ. ನೆಲಗುಮ್ಮ ಬೆಳ್ಳುಳ್ಳಿ ಆಕಾರದ ಪಟಾಕಿ. ಅದನ್ನು 'ಬೆಳ್ಳುಳ್ಳಿ' ಅಂತಲೂ ಕರೆಯುತ್ತಿದ್ದರು. ರಾಮದಾಸ್ ಸೇರಿದಂತೆ ನಾವೆಲ್ಲ ರಾಶಿ ರಾಶಿ ಬೆಳ್ಳುಳ್ಳಿಗಳಿಗೆ ಬಣ್ಣದ ಕಾಗದ ಸುತ್ತಿ ಅದರ ತುದಿಯನ್ನು ಹಿಂಡಿ ಸುತ್ತುತ್ತಿದ್ದೆವು. ಎಲ್ಲಾ ಜಾತಿಯ ಹುಡುಗರು ಈ ಕೆಲಸದಲ್ಲಿ ನಿರತರಾಗುತ್ತಿದ್ದರು. ಆಗಲೇ ನಮಗನಿಸಿದ್ದು ಹಿಂದೂಗಳ ಹಬ್ಬ, ಮುಸ್ಲಿಂರ ಪಟಾಕಿ ಹಾಗೂ ಕ್ರಿಶ್ಚಿಯನ್ನರ ಕೆಲಸ ಅಂತ. ಕೇರಿಮನೆಯ ಎಲ್ಲಾ ಜಾತಿಯವರು ಇಲ್ಲಿ ಒಂದಾಗುತ್ತಿದ್ದರು. ಎಲ್ಲಾ ಜಾತಿಯ ಮಕ್ಕಳು, ಹೆಂಗಸರು ತಮ್ಮ ವಿರಾಮದಲ್ಲಿ ಒಂದೆಡೆ ಸೇರಿ ಅನ್ಯೋನ್ಯತೆಯಿಂದ ಹರಟೆ ಹೊಡೆಯುತ್ತಾ, ಮಾಡುತ್ತಿದ್ದ ಪಟಾಕಿ ಕೆಲಸ ಎಲ್ಲರ ಮನಸ್ಸಿನಲ್ಲಿದ್ದರೂ ರಾಮದಾಸ್‌ನಲ್ಲಿ ಮಾತ್ರ ಅದು ತುಂಬಾ ಕೆಲಸ ಮಾಡಿದೆ. ಎಲ್ಲರೂ ತಯಾರಿಸುತ್ತಿದ್ದ ಪುಟ್ಟ ಪುಟ್ಟ ನೆಲಗುಮ್ಮಗಳ ಗುಪ್ಪೆಗಳನ್ನು ನೋಡುವುದೇ ಒಂದು ಅನುಭವ. ಇಲ್ಲಿಯೂ ದೊಡ್ಡ ಗುಪ್ಪೆ ರಾಮದಾಸ್‌ನದು. ಈ ಮುಸ್ಲಿಂ ಕುಟುಂಬ ತೋರಿಸುತ್ತಿದ್ದ ಪ್ರೀತಿ ಅನನ್ಯ. ಹಬ್ಬದ ದಿನದಂದೂ ನಮಗೂ ಪಟಾಕಿಯ ಸಂಗಡ ಬಕ್ಷೀಸು. ಸಂಬಳ ಅಂದಿದ್ದರೆ ಬಹುಶಃ ನಾವ್ಯಾರು ಹೋಗುತ್ತಿರಲಿಲ್ಲ. ನಮಗೆ ಸಿಗುತ್ತಿದ್ದ ಬಹು ದೊಡ್ಡ ಬಕ್ಷೀಸು ಅಂದರೆ ಕೋಮುಸೌಹಾರ್ದತೆ ಭಾವನೆಗಳು. ಅಲ್ಲಿಯ ಎಲ್ಲಾ ಹೊಕ್ಕು ಬಳಕೆಯ ಈ ಕೆಲಸ ಕಾರ್ಯಗಳ ಕನಸಿನ ಕಣಗಳನ್ನು ಸಾಗರದಿಂದ ಹೊತ್ತುಕೊಂಡು ಹೋದ ಈ ಪುಟ್ಟ ಚಾರ್ವಾಕ ಮೈಸೂರಿನಲ್ಲಿ ಹೇಗೆ ಸುಮ್ಮನಿದ್ದಾನು ! ರಾಮದಾಸ್ ಬದುಕಿನುದ್ದಕ್ಕೂ ಹೋರಾಡಿದ್ದು ಜಾತಿಮತ ಸೌಹಾರ್ದತೆಗಾಗಿ, ಜಾತಿ ವಿರೋಧಿಯ ನೀತಿಗಾಗಿ. ರಾಮದಾಸ್‌ನ ಮೈಮನಗಳ ತುಂಬ ಈ ಹೊಳವುಗಳಿದ್ದವು. ಇವುಗಳ ಸೆಮಿನಾರುಗಳು, ಸಮ್ಮೇಳನಗಳು, ಹೋರಾಟಗಳು - ಇವೆಲ್ಲಾ ರಾಮದಾಸ್‌ನಿಲ್ಲದೆ ಆಗುತ್ತಿರಲಿಲ್ಲ.

ರಾಮದಾಸ್‌ನ ಜಾತಿ ಯಾವುದೆಂದು ರಾಮದಾಸ್‌ನನ್ನು ಬದುಕಿರುವವರೆಗೂ ಯಾರೂ ಅವನನ್ನು ಕೇಳಿಲ್ಲ. ಪತ್ರಕರ್ತರ ಸಂಗಡ ಮಾತನಾಡುವಾಗ ಕಡಿದಾಳು ಶಾಮಣ್ಣ ಅವರು 'ರಾಮದಾಸ್‌ನ ಜಾತಿ ಯಾವುದೆಂದು ಅವರನ್ನು ಕೇಳುವ ಧೈರ್ಯ ಯಾರಿಗಿತ್ತು ?' ಎನ್ನುವ ಮಾತು ಬಹು ಅರ್ಥಪೂರ್ಣ. ಬಾಲ್ಯದಲ್ಲಿಯೂ ನಾವ್ಯಾರು ಈ ಬಗ್ಗೆ ಅವನನ್ನು ಕೇಳಿಲ್ಲ, ತಿಳಿಯಲು ಪ್ರಯತ್ನಿಸಲಿಲ್ಲ ಮತ್ತು ನಮಗದರ ಅಗತ್ಯವೂ ಇರಲಿಲ್ಲ. ರಾಮದಾಸ್ ಆ ರೀತಿ ಬೆಳೆದು ಬಂದವನು. ಜಾತೀಯತೆಯ ಸಮಸ್ಯೆಗಳು ಬಂದಾಗಲಂತೂ ಬಹು ಕಠಿಣವಾಗಿ,

ಒಮ್ಮೊಮ್ಮೆ ಅವನು ಅಗತ್ಯಕ್ಕಿಂತಲೂ ಹೆಚ್ಚಾಗಿ ಗುಡುಗಿದ್ದುಂಟು. ಇದಕ್ಕೆ ಸಾರ್ವಜನಿಕರ ತೀವ್ರ ಪ್ರತಿಕ್ರಿಯೆಗಳೂ ಸಹ ಅಷ್ಟೆ ಸ್ಪಷ್ಟವಾಗಿ ಹೊರಹೊಮ್ಮಿವೆ.

## ಸೋಮಣ್ಣನ ಮಲ್ಲಿಗೆ ಮನೆ

ನಮ್ಮ ಕೇರಿಯ ಸೋಮಣ್ಣ ಒಂದು ರೀತಿಯಲ್ಲಿ ಸಾರ್ವಜನಿಕ ವ್ಯಕ್ತಿ. ನೋಡಲು ಇದ್ದ ಹಾಗೆ ಒಂದೇ ರೀತಿಯಲ್ಲಿದ್ದರೂ ಈಗ ವಯಸ್ಸು 68. ಹಾಡುವುದು, ಹಾಡುಗಳನ್ನು ಬರೆಯುವುದು, ರಂಗೋಲಿ ಹಾಕುವುದು, ಚಿತ್ರಗಳನ್ನು ಬರೆಯುವುದು, ಮೇಕಪ್ ಮಾಡುವುದು - ಸೋಮಣ್ಣನ ದಿನಚರಿಗಳಲ್ಲಿ ಮುಖ್ಯವಾದ ಕೆಲಸ. ಸಾಗರದಲ್ಲಿ ಇವತ್ತು ಮೇಕಪ್ ಸೋಮಣ್ಣನೆಂದೇ ಕರೆಯುತ್ತಾರೆ. 'ಮಾಡಿ ಮಡಿದವರು', 'ಆಸ್ಫೋಟ', 'ಸ್ಪಂದನ', 'ಹುಚ್ಚ' ಸಿನಿಮಾಗಳಲ್ಲಿ ಚಿಕ್ಕ ಚಿಕ್ಕ ಪಾತ್ರಗಳು. 'ಅಬ್ದುಲ್ಲಾ ಗೋಪಾಲ'ರಲ್ಲಿ ಸ್ವಲ್ಪ ಜಾಸ್ತಿ ಬರುವ ಪಾತ್ರ. ಬೆಳಗ್ಗೆ ದೇವರ ಹೆಸರು ಕೊಟ್ಟರೆ ಸಂಜೆಗೆ ದೇವರ ಹಾಡು ರೆಡಿ, ಮತ್ತೆ ಸ್ವಲ್ಪ ಸಮಯ ಕೊಟ್ಟರೆ ರಾಗವೂ ರೆಡಿ. ಈ ಸೋಮಣ್ಣನ ಮನೆ ಪಕ್ಕದ್ದೇ ರಾಮದಾಸ್‌ನ ಮನೆ. ಮಂಜಕ್ಕ ಮತ್ತು ಸೋಮಣ್ಣನ ತಾಯಿ ಹುಚ್ಚಕ್ಕ ತುಂಬಾ ಫ್ರೆಂಡ್ಸ್. ಸೋಮಣ್ಣನ ಮನೆ ಅಂಗಳದಲ್ಲಿ ಒಂದು ಮರಕ್ಕೆ ಮಲ್ಲಿಗೆ ಬಳ್ಳಿಯನ್ನು ಹಬ್ಬಿಸಿದ್ದರು. ಬಳ್ಳಿ ತುಂಬ ನಕ್ಷತ್ರಗಳು. ನಾನು ಬಳ್ಳಿಯಲ್ಲಿ ಅಷ್ಟೊಂದು ಮಲ್ಲಿಗೆಯನ್ನು ನೋಡಿದ್ದೆ ಆವಾಗ. ಅವರ ಹಿತ್ತಲಿನಲ್ಲಿ ಸಹ ಒಂದೆರಡು ಮಲ್ಲಿಗೆ ಚಪ್ಪರ, ಅದರಲ್ಲೂ ಹೂವುಗಳ ರಾಶಿಯೇ ರಾಶಿ. ಬೆಳಗ್ಗೆ ಸಂಜೆ ಮನೆಯಂಗಳದಲ್ಲಿ 2-3 ಈಚಲ ಚಾಪೆ ಹಾಸಿ ಅದರ ಮೇಲೆ ಮಲ್ಲಿಗೆಯನ್ನು ಕಿತ್ತು ಹಾಕಿದರೆಂದರೆ ರಾಶಿ ರಾಶಿ ಮಲ್ಲಿಗೆ. ಸುತ್ತಲೂ ಕೇರಿ ಮನೆಯ ಆಸಕ್ತ ಹುಡುಗರು, ಹೆಂಗಸರು ಕೂತು ಮಲ್ಲಿಗೆ ದಂಡೆಯನ್ನು ಕಟ್ಟುವುದನ್ನು ನೋಡುವುದೇ ಚಂದ. ಮಲ್ಲಿಗೆ ದಂಡೆಗಳು, ಹಾರಗಳು ಸಿದ್ಧವಾದ ಮೇಲೆ, ಹತ್ತು ಹನ್ನೆರಡು ದಂಡೆಗಳನ್ನು ಒಂದುಗೂಡಿಸಿ ಸೋಮಣ್ಣನ ಕೈಯಲ್ಲಿ ಕೊಟ್ಟರೆ ಅದು ಮಾರಾಟಕ್ಕೆ. ಅವರದು ಬಡಕುಟುಂಬ. ಇಂತಹವುಗಳಿಂದಲೇ ಕುಟುಂಬ ಸಾಗುತ್ತಿತ್ತು. ರಾಮದಾಸ್, ನಾನು ಮತ್ತು ಕೆಲವು ಹುಡುಗರು ಈ ಮಲ್ಲಿಗೆಯ ರಾಶಿಯ ಸುತ್ತ ದಂಡೆಗಳನ್ನು ಕಟ್ಟುವುದು ಸಾಮಾನ್ಯವಾಗಿತ್ತು. ಪಟಾಕಿ ತಯಾರಿಕೆ ಒಂದು ರೀತಿಯಾದರೆ ಈ ಮಲ್ಲಿಗೆ ಒಡನಾಟ ಮತ್ತೊಂದು ರೀತಿಯದು. ಇಲ್ಲಿ ಆಗೊಮ್ಮೆ ಈಗೊಮ್ಮೆ ಹಾಡುಗಳು, ಆದರೆ ಸದಾ ಹರಟೆ. ಇಲ್ಲಿಯೂ ಅನೇಕ ಜಾತಿಗಳ ಕೈಮನಸ್ಸುಗಳು ಒಂದಾಗಿ ಕೆಲಸ ಮಾಡುತ್ತಿದ್ದ[illegible]ು ನಮಗೆ ಎಂದೂ ಕೆಲಸದಂತೆ ಕಾಣಲೇ ಇಲ್ಲ. ಇದೊಂದು "a thing of beauty' [illegible]ೇ ಆಗಿತ್ತು. ಬೀದಿಯಲ್ಲಿ ಹೋಗುವವರು ಈ ಮಲ್ಲಿಗೆ ಕೆಲಸವನ್ನು ನಿಂತು ನೋಡುತ್ತಿದ್ದರು. ಇವೆಲ್ಲಾ ನಮ್ಮ ಮನಸ್ಸಿಗೆ ಹಿತ ಕೊಟ್ಟಂತ ಕೆಲಸಗಳು. ಇದೊಂದು ಹೆಣ್ಣು ಮಕ್ಕಳ ಕೆಲಸವಂತ ನಮಗೆಂದೂ ಅನ್ನಿಸಿರಲಿಲ್ಲ. ಇಲ್ಲಿಯೂ ಮಂಜಕ್ಕನದೆ ಲೀಡರ್‌ಶಿಪ್. ಮದುವೆ ಕಾರ್ಯಗಳಲ್ಲಂತೂ ಈ ಮಾಲೆಗಳ ಬೇಡಿಕೆ ಬಹಳವಿತ್ತು. ಈ ಮಲ್ಲಿಗೆ ರಾಶಿ, ಹೂ

ಪೋಣಿಸುವುದು, ದಂಡೆ ಕಟ್ಟುವುದು - ಇವೆಲ್ಲಾ ಬಹು ರಮ್ಯ ಕೆಲಸಗಳು. ಹೆಣ್ಣು ಮಕ್ಕಳು ತಾವೂ ಹೂ ಮುಡಿದು ತಮ್ಮ ತಮ್ಮ ಮನೆಗಳಿಗೆ ಒಯ್ಯುತ್ತಿದ್ದರು. ನಮಗೆ ಇದೊಂದು ಅಪೂರ್ವ ಅನುಭವ. ಬೇರೆ ಬೇರೆ ಜಾತಿಯವರು ಒಂದೇ ಮಲ್ಲಿಗೆ ರಾಶಿಯಿಂದ ಹೂವುಗಳನ್ನು ಆಯ್ದು ಮಾಲೆಗಳನ್ನು ಕಟ್ಟುವ ಕೆಲಸ ರಾಮದಾಸ್‌ನಲ್ಲಿ ಸೂಕ್ಷ್ಮವಾದ ಕೆಲಸ ಮಾಡಿದೆ ಎಂದು ನನಗನಿಸಿದೆ. ರಾಮದಾಸ್ ಮೈಸೂರಿನಲ್ಲಿ ಹಾರಗಳ ಮೂಲಕ ಸುಮಾರು 400ಕ್ಕೂ ಹೆಚ್ಚಿನ ಅಂತರ ಜಾತಿ ಮದುವೆಗಳನ್ನು ಮಾಡಿಸಲು ಇದೇ ಒಂದು ಸೂಕ್ಷ್ಮ ಪ್ರೇರಣೆ ಆಗಿದ್ದರೆ ಆಶ್ಚರ್ಯವಿಲ್ಲ. ಸಾಗರದ ಈ ಮಲ್ಲಿಗೆ ಬಳ್ಳಿ, ಮೈಸೂರಿನ ಮಾನವ ಮಂಟಪದ ಮೇಲೆಲ್ಲ ಹರಡಿದ್ದು ಸತ್ಯ. ಮಲ್ಲಿಗೆ ರಾಶಿ, ಹೂಮಾಲೆ ಕಟ್ಟುವುದು, ಹೂವು ಪೋಣಿಸುವುದು - ಇಂತಹ ಕ್ರಿಯೆಗಳೆಲ್ಲಾ ರಾಮದಾಸ್‌ನ ಮನಸ್ಸಿನ ಸೂಕ್ಷ್ಮತೆಯೊಳಗೆ ಮದುವೆಗಳನ್ನು ಕಟ್ಟಲು ಕೆಲಸ ಮಾಡಿರಬೇಕು. ಸಾಗರದ ಈ ಮಲ್ಲಿಗೆ ಸಂದರ್ಭವನ್ನು ಮೈಸೂರಿನ ಮಾನವ ಮಂಟಪದ ಸಂಬಂಧ ಕಲ್ಪಿಸುವುದು ತಾರ್ಕಿಕ ಅಲ್ಲ ಅಂತ ಅನಿಸಬಹುದು. ಆದರೆ ತರ್ಕಕ್ಕೂ ಮೀರಿದ ಅನೇಕ ಸಂಗತಿಗಳು ಮಾಡುವ ಸೂಕ್ಷ್ಮ ಕೆಲಸ ಬಹು ವಿಸ್ಮಯ. ಈ ವಿಸ್ಮಯ ರಾಮದಾಸ್‌ನಲ್ಲಿ ಅರಿವಿಲ್ಲದೆ ಆಪಗಿತ್ತು. ಬೆಂಗಳೂರು ಮತ್ತು ಮೈಸೂರಿನಲ್ಲಿ 'ರಾಮದಾಸ್ ನೆನಪು' ಕಾರ್ಯಕ್ರಮಗಳ ಪ್ರಾರಂಭದಲ್ಲಿಯೇ ಅಂತರ್ಜಾತಿ ಮದುವೆಗಳು ಆಗಿದ್ದು ರಾಮದಾಸ್‌ಗೆ ಸಲ್ಲುವ ಗೌರವ. ಮಾನವ ಮಂಟಪದಲ್ಲಿ ಹೂಮಾಲೆಗಳು ಪರಸ್ಪರ ಬದಲಾಗುತ್ತಿದ್ದ ದೃಶ್ಯ ನನಗೆ ಸಾಗರದ ಆಗಿನ ಹೂಮಾಲೆಗಳನ್ನು ನೆನಪಿಸುತ್ತವೆ. ರಾಮದಾಸ್‌ನ ಮದುವೆ ಸಹ ಅಷ್ಟೇ ಸರಳ, ಮಂತ್ರ ಮಾಂಗಲ್ಯ ಹಾಗೂ ಹಾರಗಳ ಬದಲಾವಣೆ. ಕೇವಲ 10 ನಿಮಿಷಗಳಲ್ಲಿ ಬದುಕಿನುದ್ದದ ಕಾರ್ಯ. ಪರಸ್ಪರ ಪ್ರೀತಿಸಿ ಮದುವೆಯಾದ ಪ್ರೇಮಿಗಳಿಗೆ ರಾಮದಾಸ್ ಬಹು ದೊಡ್ಡ ಬೆಂಬಲ, ಬಹು ದೊಡ್ಡ ಶಕ್ತಿ. ಇಂತಹ ಮದುವೆಗಳನ್ನು ಏರ್ಪಡಿಸುವುದು ಸುಲಭವಲ್ಲ. ಕುಟುಂಬಗಳ ಕಡೆಯಿಂದ ಬರುವ ಹೆದರಿಕೆ, ಗಲಾಟೆಗಳಿಗೂ ಸಿದ್ಧವಿರಬೇಕಾಗುತ್ತದೆ. ಪ್ರೇಮಿಗಳ ಅನಿವಾರ್ಯತೆಗೆ ರಾಮದಾಸ್ ಸ್ಪಂದಿಸಿ ಅವರಿಗೆ ಕೊಡುವ ಕೌನ್ಸಿಲಿಂಗ್ ಸಹ ಬಹಳ ಅರ್ಥಪೂರ್ಣ. ರಾಮದಾಸ್ ನೆನಪಿಗೆ ಈ ಮಾನವ ಮಂಟಪ ಇನ್ನು ಸಕ್ರಿಯವಾಗಬೇಕು. ಮಲ್ಲಿಗೆ ಮಾತ್ರ ತನ್ನ ಕೆಲಸ ನಿಲ್ಲಿಸಬಾರದು.

## ರಾಮದಾಸ್ ಮತ್ತು ಕುಲುಮೆ

ರಾಮದಾಸ್‌ನ ಅಜ್ಜ ವೆಂಕಟಾಚಲಪತಿ ಅವರ ಕುಲುಮೆ ಹಾಗೂ ಚಿಕ್ಕಪ್ಪ ಲಕ್ಷ್ಮಣರಾಯರ ಸೈಕಲ್‌ಶಾಪ್ - ಇವೆರಡು ರಾಮದಾಸ್‌ಗೆ ಪ್ರೀತಿಯ ಕೇಂದ್ರ. ಸಾಗರದ ಮಾರ್ಕೆಟ್ ರಸ್ತೆಯಲ್ಲಿ ಅಜ್ಜನ ಕುಲುಮೆ. ಬಹುಮುಖ್ಯವಾಗಿ ಎತ್ತಿನಗಾಡಿ ಚಕ್ರಗಳಿಗೆ ಕಬ್ಬಿಣ ಪಟ್ಟಿ ಹಾಕುವ, ಕುಡುಗೋಲು, ಕತ್ತಿ, ಗುದ್ಲಿ, ಪಿಕಾಸಿ ಹಾಗೂ ಕಲ್ಲುಕೆತ್ತುವ ಬಾಚಿಗಳನ್ನು ಸರಿಯಾದ ರೂಪಕ್ಕೆ ತರುವ ಕೆಲಸಗಳೇ ಹೆಚ್ಚು. ವಿರಾಮದ ಸಮಯದಲ್ಲಿ ರಾಮದಾಸ್‌ಗೆ ಕುಲುಮೆಯಲ್ಲಿ ಕೂತು ತಿದಿ ಒತ್ತುವ ಕೆಲಸ. ಒಮ್ಮೊಮ್ಮೆ ರಾಮದಾಸ್‌ನ ಸಂಗಡ ನಾನು ಹೋಗುತ್ತಿದ್ದೆ. ಬೆಂಕಿಗೆ

ಹದವಾದ ತಿದಿ, ತುಂಬಾ ಕಾಯಿಸಲು ಹೆಚ್ಚಿಗೆ ತಿದಿ ಒತ್ತೋದು, ಕಾದು ಕೆಂಪಾದ ಕಬ್ಬಿಣಕ್ಕೆ ಸರಿಯಾಗಿ ಬಡಿಯುವುದು, ಅಜ್ಜ ಮಾಡುತ್ತಿದ್ದ ಈ ಕೆಲಸಗಳ ಮೇಲೆ ಈ ಮೊಮ್ಮಗನ ತದೇಕ ಚಿತ್ತಕೇಂದ್ರೀಕೃತ. ರಾಮದಾಸ್‌ನ ಒಳ ಕುಲುಮೆ ಸಹ ಸದಾ ಕಾವಿನಿಂದಲೇ ಇರುತ್ತಿತ್ತು. ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹೋರಾಟಗಳಲ್ಲಿ ಮಾಡುತ್ತಿದ್ದ ಸಿಟ್ಟುಗಳಲ್ಲಿ ರಾಮದಾಸ್‌ನ ಒಳಕುಲುಮೆಯ ಕಾವು ಬಹು ಸ್ಪಷ್ಟವಾಗಿತ್ತು. ಚಾರ್ವಾಕನ ವಿಚಾರಗಳೆಲ್ಲವೂ ಈ ಬೆಂಕಿಯ ಮೂಸೆಯಿಂದ ಬಂದಿರುವುದು ಸತ್ಯ. ರಾಮದಾಸ್ ಮಾಡಿರುವ ಹೋರಾಟಗಳಲ್ಲಿ ದೋಷಗಳು ನುಸುಳಿಲ್ಲವೆಂದರ್ಥವಲ್ಲ. ರಾಮದಾಸ್‌ನ ಪ್ರಾಮಾಣಿಕ ಕಾಳಜಿ, ನಿಸ್ವಾರ್ಥ ಹೋರಾಟ, ಬದ್ಧತೆ - ಇವುಗಳನ್ನು ನೋಡಿದವರಿಗೆ ಈ ದೋಷಗಳು ಅಮುಖ್ಯ. ರಾಮದಾಸ್‌ಗೆ ಮೈಸೂರಿನಲ್ಲಿ ಮತ್ತೊಂದು ಹೆಸರು 'ಬೆಂಕಿ ಉಂಡೆ', ಇದೊಂದು ರಚನಾತ್ಮಕ ಬೆಂಕಿ. ಅನಾವಶ್ಯಕವಾಗಿ ಸುಡುತ್ತಿರಲಿಲ್ಲ ಈ ಬೆಂಕಿ. ಬೆಂಕಿ ಎಷ್ಟು ಬೇಕು ಅಷ್ಟೇ ತಿದಿ ಒತ್ತುವ ಸ್ವಭಾವ. ಇದು ಹದವಾದ ಬೆಂಕಿ. ಹೋರಾಟದಲ್ಲಿ ಈ ಕುಲುಮೆ ಸದಾ ಜಾಗೃತ. ಈ ಕುಲುಮೆಗೆ ಬೇರೆಯವರ ತಿದಿಬೇಡ. ತನ್ನದೇ ಆದ ಕುಲುಮೆ, ತನ್ನದೇ ತಿದಿ, ಸುತ್ತಿಗೆ ಹಾಗು ಅಡಿಗಲ್ಲು. ಒಬ್ಬ ಕಾಲೇಜ್ ಮೇಷ್ಟ್ರಿಗೆ ಈ ಪ್ರಮಾಣದ ಒಳಕುಲುಮೆಯ ಕಾವು ಇರುವದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

### ಸೈಕಲ್ ಪ್ರಪಂಚ

ನನ್ನ ತಾಯಿ ಜಲಜಾಕ್ಷಮ್ಮ ಪ್ರೈಮರಿ ಶಾಲೆ ಟೀಚರ್, ತಂದೆ ಶಾಂತಪ್ಪ ಗಾರೆ ಕೆಲಸದ ಮೇಸ್ತ್ರಿ. ನಾವು ಎಂಟು ಜನ ಮಕ್ಕಳು. ನಮ್ಮ ಮನೆಯ ಕತೆಯೇ ಬೇರೆ ರಾಮದಾಸ್‌ನದೇ ಬೇರೆ. ರಾಮದಾಸ್‌ಗೆ ಮಂಜಕ್ಕ ಯಾವುದಕ್ಕೂ 'ಇಲ್ಲ' ಅಂತಿರಲಿಲ್ಲ. ಅವನಿಗೆ ಬಾಡಿಗೆ ಸೈಕಲ್ ಬೇಕೆಂದಾಗ ಪಾಕೇಟ್ ಮನಿ ಸಿಗುತ್ತಿತ್ತು. ರಾಮದಾಸ್ ಸೈಕಲ್ ಹೊಡೆಯುವುದನ್ನು ಯಾರಿಂದಲೂ ಕಲಿತಿರಲಿಲ್ಲ. ಗರ್ನಾಲ್ ಸಾಹೇಬರ ಮನೆಗೆ ಸದಾ ಹೋಗಿ ಬರುವವರು ಹೆಚ್ಚು, ಪಟಾಕಿ ಸೀಜನ್ ಅಲ್ಲಂತೂ ಇನ್ನೂ ಹೆಚ್ಚು. ರಸ್ತೆಯಿಂದ ಸಾಹೇಬರ ಮನೆಗೆ ಹೋಗಲು ಒಂದು ಚಿಕ್ಕ ಓಣಿಯಿದೆ. ಸೈಕಲ್‌ನಲ್ಲಿ ಬಂದವರೆಲ್ಲಾ ಸೈಕಲ್‌ನ್ನು ಓಣಿಯ ಗೋಡೆಗೆ ವಾಲಿಸಿ ಸೈಕಲ್ ಇಟ್ಟು ಹೋಗುತ್ತಿದ್ದರು. ಸೈಕಲ್‌ಗೆ ಬೀಗ ಹಾಕುವ ಸಂಸ್ಕೃತಿ ಇನ್ನೂ ಬಂದಿರಲಿಲ್ಲ. ರಾಮದಾಸ್‌ಗೆ ಸೈಕಲ್ ಕಲಿಯಲು ಆ ಓಣಿಯೇ ಸ್ಟೇಡಿಯಂ. ಓಣಿಯಲ್ಲಿರುತ್ತಿದ್ದ ಸೈಕಲನ್ನು ಹತ್ತಿ ಗೋಡೆ ಹಿಡಿದು ರಾಮದಾಸ್ ಸೈಕಲ್ ಬ್ಯಾಲನ್ಸ್ ಮಾಡುತ್ತಿದ್ದದ್ದು ಚಿಕ್ಕ ಚಿಕ್ಕ ಹುಡುಗರು ನೋಡುತ್ತಾ ನಿಲ್ಲುತ್ತಿದ್ದರು. ಕೆಲವು ಸಲ ಪರಿಚಯಸ್ಥರ ಸೈಕಲನ್ನು ಕೇಳಿ ಪಡೆಯುತ್ತಿದ್ದ ರಾಮದಾಸ್‌ಗೆ ಸೈಕಲ್ ಹೊಡೆಯುವುದು ಕರಗತವಾಯಿತು. ನನಗೆ ಮಾತ್ರ ರಾಮದಾಸ್‌ನೇ ಸೈಕಲ್ ಗುರು. ಸೈಕಲ್‌ಗಿಂತ ಮುಂಚೆ ನಮ್ಮಿಬ್ಬರ ಹತ್ತಿರ ಗಾಲಿಗಳು ಇದ್ದವು. ಅದು ಟಯರಿನ ಗಾಲಿ. ಕೈಯಲ್ಲೊಂದು ಗಾಲಿ ಮತ್ತು ಒಂದು ದಾಂಡು ಇದ್ದರೆ ಇಡೀ ಲೋಕ ಪರ್ಯಟನೆ ಮಾಡುವ ಹುಮ್ಮಸ್ಸಿನ ಕಾಲ. ಆ ಗಾಲಿ ಹೊಡೆದುಕೊಂಡು ತುಂಬಾ ಸ್ಪೀಡಾಗಿ ಹೋಗುವುದೇ ಒಂದು ಮಜ. ರಾಮದಾಸ್‌ನ ಗಾಲಿ ಮತ್ತು ದಾಂಡಿನ ಮೇಲೆ ಎಲ್ಲರ ಕಣ್ಣು. ತುಂಬಾ ಸ್ಪೀಡಾಗಿ

ಆ ಗಾಲಿಯನ್ನು ಹೊಡೆದುಕೊಂಡು ಹೋಗುವುದರಲ್ಲಿ ರಾಮದಾಸ್ ನಿಸ್ಸೀಮ. ನಮ್ಮ ಸ್ಪೀಡಿನ ಹಾಗೆ ಆ ಗಾಲಿಯ ಸ್ಪೀಡ್ ಸಹ. ಕೈಯಲ್ಲಿರುವ ಕೋಲೆ ಸ್ಟಿಯರಿಂಗ್ ಹಾಗೂ ಬ್ರೇಕ್. ಎಂತಹ ಸಂತೆ, ಪೇಟೆಯಲ್ಲಾದರೂ ರಾಮದಾಸ್‌ನ ಎಫಿಸಿಯೆನ್ಸಿ ಪ್ರಶ್ನಾತೀತ. ಅರ್ಜೆಂಟಾಗಿ ಬೇಕಾಗುವ ಮನೆ ಸಾಮಾನುಗಳ ಆರ್ಡರ್ ಬಂದರೆ ನಮಗಾಗುತ್ತಿದ್ದ ಸಂತೋಷ ಅಷ್ಟಿಷ್ಟಲ್ಲ. ಗಾಲಿಯಿಂದ ಸೈಕಲ್‌ಗೆ ಪ್ರಮೋಷನ್ ನಮ್ಮ ಬದುಕಿನ ದೊಡ್ಡ ಘಟ್ಟ. ಸೈಕಲ್ ಹೊಡೆಯುವುದರಲ್ಲಿಯೂ ನಮ್ಮ ವಾರಿಗೆಯವರಲ್ಲಿ ರಾಮದಾಸ್‌ನ್ನು ಮೀರಿಸುವವರು ಯಾರೂ ಇರಲಿಲ್ಲ. ನಾನು ಬೇಕಾದಷ್ಟು ಸಲ ಬಿದ್ದು ಚರ್ಮ ತೆರೆಸಿಕೊಂಡ ಸೀನುಗಳಿದ್ದವು. ರಾಮದಾಸ್‌ನ ಚಿಕ್ಕಪ್ಪ ಲಕ್ಷ್ಮಣರಾಯರ ಸೈಕಲ್ ಅಂಗಡಿ ಬ್ರಾಹ್ಮಣರ ಕೇರಿಯಲ್ಲಿತ್ತು. ಅಲ್ಲಿಗೆ ಆಗಾಗ್ಗೆ ಹೋಗ್ತಾಯಿದ್ದ ರಾಮದಾಸ್‌ಗೆ ಸೈಕಲ್ ಟೆಕ್ನಾಲಜಿ ಕರಗತವಾಗಿತ್ತು. ಮುಂದೆ ಮೈಸೂರಿನಲ್ಲಿ ಆತನ ಸೈಕಲ್, ಮೋಟಾರ್ ಬೈಕ್, ಕಾರುಗಳು ರಿಪೇರಿಗೆ ಬಂದರೆ ಸಂತೋಷದಿಂದ ಒಂದು ರೌಂಡ್ ಕೈಯಾಡಿಸಲೇಬೇಕು, ಸರಿಯಾಗದಿದ್ದರೆ ಮಾತ್ರ ಗ್ಯಾರೇಜು. ಲಕ್ಷ್ಮಣರಾಯರು ಪ್ರೀತಿಯಿಂದ ರಾಮದಾಸ್‌ಗೆ ದುಡ್ಡು ಕೊಡ್ತಾಯಿದ್ರು. ಅದ್ಯಾಕೋ ಏನೊ ಅವರ ಅಂಗಡಿಯ ಸೈಕಲನ್ನು ಮಾತ್ರ ರಾಮದಾಸ್ ತರ್‍ತಾ ಇರ್‍ಲಿಲ್ಲ. ನಮ್ಮಿಬ್ಬರಿಗೂ ಆಗಿನ ಬಿ.ಹೆಚ್. ರಸ್ತೆಯ ಉಮಾನಾಥರಾವ್ ಅವರ ಅಂಗಡಿಯ ಸೈಕಲ್ಲುಗಳೇ ನಮ್ಮ ಆಯ್ಕೆ. ಉಮಾನಾಥರಾವ್ ಅವರದು ಆ ಕಾಲದ ಹೀರೋ ಹೊಂಡ ಶೋರೂಂ. ಸಾಗರದ ಹಳೆ ಬಿ.ಹೆಚ್. ರಸ್ತೆಯಲ್ಲಿದ್ದ ಅವರ ಅಂಗಡಿ ಎದ್ದು ಕಾಣುತ್ತಿತ್ತು. ಎತ್ತರ, ಸಪೂರ, ಕೆಂಪು ಬಣ್ಣದ ಈ ವ್ಯಕ್ತಿ ಅಂಗಡಿಯಲ್ಲಿ ಕೂತುಕೊಳ್ಳುವುದೇ ಚೆಂದ. ಅವರು ಡಬ್ಬಲ್ ರೈಡಿಂಗ್ ಮಾಡುವವರಿಗೆ ಸೈಕಲ್ ಕೊಡುತ್ತಿರಲಿಲ್ಲ. ಅದಕ್ಕಾಗಿ ಸೈಕಲ್ಲಿನ ಹಿಂಭಾಗದ ಕ್ಯಾರಿಯರನ್ನೂ ಹಾಕುತ್ತಿರಲಿಲ್ಲ. ಪ್ರಾರಂಭದಲ್ಲಿ ನಾವು ಸೈಕಲ್ ಕೇಳಿದಾಗ ನಮ್ಮ ಹೆಸರಿನ ಸಂಗಡ ಒಂದು ಸಾಕ್ಷಿ ಬೇಕಾಗಿತ್ತು. ಹೆಸರಿನದೇನೂ ತೊಂದರೆಯಿರಲಿಲ್ಲ ಆದರೆ ಸಾಕ್ಷಿಯದೆ ತೊಂದರೆ. ಇಲ್ಲಿಯೇ ನಮ್ಮ ಸಮಸ್ಯೆಗಳ ಉಗಮ. ಉಮಾನಾಥರಾಯರು ಸಾರಸ್ವತ ಮತಸ್ಥರು. ಅವರ ಅಂಗಡಿಯಿಂದ ಕೊಂಕಣಿಗರ ಬೇಣದ ಕಡೆಗೆ ಹೋಗಿ ಬರುವಾಗ ನಮ್ಮ ಕೇರಿಯ ಮೇಲೆ ಹೋಗ್ತಾ ಇದ್ರು. ಒಮ್ಮೆ ನಾವು ನಮ್ಮ ಮನೆಮುಂದೆ ನಿಂತಿದ್ದನ್ನ ನೋಡಿದ ಅವರು ಮತ್ತೆ ನಮ್ಮಿಂದ ಸೈಕಲ್ ಸಾಕ್ಷಿ ಕೇಳುವುದು ಬಿಟ್ಟರು. ನಮ್ಮ ತಂದೆಯ ಪರಿಚಯ ಅವರಿಗಿತ್ತು. ಸಾಕ್ಷಿ ಕೇಳದೆ ಇದ್ದದ್ದು ನಮಗೆ ಒಂದು ರೀತಿಯ ಗೌರವ. ಅರ್ಧ ಗಂಟೆಗೆ ಬಾಡಿಗೆ ಸೈಕಲ್ ತಂದು ಒಂದು ನಿಮಿಷವೂ ಕಡಿಮೆಯಾಗದಂತೆ ಟೈಂ ಕೀಪ್ ಅಪ್ ಮಾಡಿ 5-6 ನಿಮಿಷ ಹೆಚ್ಚಾಗಿ ಹೊಡೆದು ಕೊಟ್ಟು ಬರ್‍ತಾ ಇದ್ವಿ. ನಾವಿಬ್ಬರೂ ಒಟ್ಟಿಗೆ ಹೋಗಿ ಸೈಕಲ್ ತಂದಿದ್ದು ನೆನಪಿಲ್ಲ. ಇದು ರಾಮದಾಸ್‌ನದೆ ಬ್ರಿಲಿಯೆಂಟ್ ಐಡಿಯಾ. ಒಬ್ಬರು ಸೈಕಲ್ ತಗೊಂಡರೆ ಮತ್ತೊಬ್ಬರು ಅಂಗಡಿಯವರಿಗೆ ಕಾಣದಂತೆ ದೂರ ನಿಲ್ಲಬೇಕು. ಪೇಟೆಯಲ್ಲಿ ಡಬ್ಬಲ್ ರೈಡಿಂಗ್ ಹೊಡೆಯುತ್ತಿರಲಿಲ್ಲ. ಆಗ ಡಬ್ಬಲ್ ರೈಡಿಂಗ್ ಅನ್ನು ಮಾಡುವವರನ್ನು ಸೈಕಲ್ ಸಮೇತ ಪೊಲೀಸ್ ಸ್ಟೇಷನ್‌ಗಳಿಗೆ ಎಳೆದುಕೊಂಡು ಹೋಗುವ ದೃಶ್ಯವನ್ನು ನಿಂತು ನೋಡುವಂತಿತ್ತು. ಸೈಕಲ್ ತರುವ ಹಾಗೂ ಕೊಡುವ ಪಾಯಿಂಟ್‌ನಲ್ಲಿ

ರಾಮದಾಸ್‌ನದೆ ಉಸ್ತುವಾರಿ. ಯಾವತ್ತೂ ಸೈಕಲ್ ತಗೊಂಡು ಮೈದಾನದಲ್ಲಿ ಹೊಡೆದಿರಲಿಲ್ಲ. ತಕ್ಷಣ ಕೆಳದಿ, ಇಕ್ಕೇರಿ, ಕಲಸಿಗೆ ಪ್ರಯಾಣ, ಡಬ್ಬಲ್ ರೈಡಿಂಗ್‌ನಲ್ಲಿ ಬಾಡಿಗೆ ಇಬ್ಬರದಾದರೂ ಅರ್ಜೆಂಟಿನಲ್ಲಿ ರಾಮದಾಸ್‌ನದೆ ಡ್ರೈವಿಂಗ್. ಕೈಬಿಟ್ಟು ಹೊಡೆಯೋದು ಎಂದಿನ ಮಾಮೂಲಿ ವರಸೆಗಳು. ತುಂಬಾ ಮೂಡ್‌ನಲ್ಲಿದ್ದಾಗ ಸಿನಿಮಾ ಹಾಡುಗಳು, ನಮ್ಮ ಮನೆಯ ಹತ್ತಿರವೇ ಸಿನಿಮಾ ಟಾಕೀಸ್ ಇದ್ದರೂ ನಾವಿಬ್ಬರೂ ಒಟ್ಟಿಗೆ ಸಿನಿಮಾಕ್ಕೆ ಹೋದ ನೆನಪಿಲ್ಲ. ಸೈಕಲ್ ರಾಮದಾಸ್‌ಗೆ ಪಂಚಪ್ರಾಣ. ಒಮ್ಮೊಮ್ಮೆ ತಾನೊಬ್ಬನೇ ಮೈಲುಗಟ್ಟಲೆ ಸುಮ್ಮನೆ ಹೋಗಿ ಬರೋದಿತ್ತು. ಮಾರನೇ ದಿನವೇ ನನಗೆ ಗೊತ್ತಾಗೋದು. ಮಿಡ್‌ವೈಫ್ ಟ್ರೈನಿಂಗ್ ಮುಗಿದ ಮೇಲೆ ಒಂದೆರಡು ವರ್ಷ ಮಂಜಮ್ಮ ಅಂಬಾರಗೋಡ್ಲಿನಲ್ಲಿ ಕೆಲಸ ಮಾಡುತ್ತಿದ್ದಾಗ ರಾಮದಾಸ್ ಸಾಗರದಲ್ಲಿಯೇ ಇದ್ದ. ರಾಮದಾಸ್ ಪ್ರತಿ ಶನಿವಾರ ಅಲ್ಲಿಗೆ ಹೋಗಿ ಸೋಮವಾರ ಬೆಳಗ್ಗೆ ಬರ್ತಾಯಿದ್ದದ್ದು ಸಾಮಾನ್ಯ. ಒಮ್ಮೆ, ಸೋಮವಾರ - ಮಂಗಳವಾರವೂ ರಜೆ ಬಂದಾಗ, ಸೈಕಲ್ ಮೇಲೆ ಅಂಬಾರಗೋಡ್ಲಿಗೆ ಹೋಗುವ ಸಖತ್ ಪ್ಲಾನ್‌ನನ್ನು ರಾಮದಾಸ್ ಮಾಡಿ ತನ್ನ ಚಿಕ್ಕಪ್ಪನ ಅಂಗಡಿಯ ಸೈಕಲನ್ನೇ ತಂದು ಅದಕ್ಕೆಲ್ಲಾ ಗ್ರೀಸ್ ಹಚ್ಚಿ ರೆಡಿಮಾಡಿಕೊಂಡಿದ್ದು ಆಯ್ತು. ಬಸ್ಸಿನಲ್ಲಿ ಹೋಗ್ತೀವಿ ಅಂತ ಮನೆಯಲ್ಲಿ ಹೇಳಿ ಡಬ್ಬಲ್ ರೈಡಿಂಗ್ ಸೈಕಲ್‌ನಲ್ಲಿ ಹೊರಟೆವು. ರಾಮದಾಸ್ ಸಂಗಡ ಇದ್ದರೆ ಎಂತವನೂ ಆರಾಂ ಆಗಿ ಇರಬಹುದು. ರಾಮದಾಸ್ ತಂದ ಚೀಲದಲ್ಲಿ ಕೆಲವು ವಸ್ತುಗಳು ಇದ್ದವು - ಮಂಡಕ್ಕಿ ಉಂಡೆ, ಚಕ್ಕುಲಿ. ಕಟಿಂಗ್ ಪ್ಲೆಯರ್, ಒಂದೆರಡು ಸ್ಪ್ಯಾನರ್, ಪ್ಯಾಚ್ ಹಾಕುವ ಲೋಷನ್, ಹ್ಯಾಂಡ್‌ಪಂಪ್, ರಾಮದಾಸ್‌ಗೆ ರಿಪೇರಿ ಹುಚ್ಚು ಬಹಳ. ನಮ್ಮ ಪ್ರವಾಸದ ಗುರಿ ಮಡೆನೂರು, ಹಿರೇಭಾಸ್ಕರ್ ಡ್ಯಾಂ. ಅದೊಂದು ಸುಂದರ ಡ್ಯಾಂ. ದೂರ ಪ್ರಯಾಣದ ಬಗ್ಗೆ ನನ್ನಲ್ಲಿ ಆತಂಕ ಇತ್ತು. ಆದರೆ ಸಂಗಡ ರಾಮದಾಸ್ ಇದ್ದನಲ್ಲಾ ! ಇಬ್ಬರು ಸಮಸಮವಾಗಿ ಸೈಕಲ್ ಹೊಡಕೊಂಡು ಹೋದ್ವಿ. ಒಂದು ಗಂಟೆಯ ನಂತರ ಹಿಂಭಾಗದ ಟಯರ್ ಟುಸ್ಸೆಂದಿತ್ತು. ನನ್ನ ಮುಖ ಒಮ್ಮೆಲೆ ಬಾಡಿದರೆ ರಾಮದಾಸ್‌ನದು ಅರಳಿತು. ತಕ್ಷಣ ಚೀಲದ ಮಂಡಕ್ಕಿ ಉಂಡೆ, ಚಕ್ಕುಲಿ ಹೊರಗೆ ಬಂತು. ನಂತರ ಸ್ಪಾನರ್, ಪ್ಯಾಚ್ ಲೋಷನ್, ನುರಿತ ಕೆಲಸಗಾರನ ಹಾಗೆ ರಾಮದಾಸ್ ಪ್ಯಾಚ್ ಹಾಕಲಾರಂಭಿಸಿದ. ನಾನು ಕೇವಲ ಹೆಲ್ಪರ್. ಚಕ್ರ ಸರಿಮಾಡಿಕೊಂಡು ಮುಂದೆ ಐದಾರು ಮೈಲು ಹೋದ ಮೇಲೆ ಸೈಕಲ್ ಚೈನ್ ಕಳಚಿ ತುಂಬ ರಗಳೆಯಾಯಿತು. ಮತ್ತೆ ರಾಮದಾಸ್‌ನ ಸಂಭ್ರಮ. ಅಂತೂ ಇಂತೂ ಅಂಬಾರಗೋಡ್ಲು ಹಿರೇಭಾಸ್ಕರ್ ಡ್ಯಾಂ ನೋಡಿಕೊಂಡು ಬಂದೆವು. ಇದೊಂದು ನನಗೆ ಮಹಾ ಪ್ರಯಾಣ. ರಾಮದಾಸ್‌ಗೆ ರಸ್ತೆ ತುಂಬ ಸಮಸ್ಯೆಗಳಿದ್ದರೆ ತುಂಬ ಖುಶಿ. ಬಹುಶಃ ರಾಮದಾಸ್‌ಗೆ ಹೈವೇಯಲ್ಲಿ ವಾಹನ ನಡೆಸಲು ಬರ್ತಾಯಿರ್ಲಿಲ್ಲ ಅಂತ ಕಾಣುತ್ತೆ.

ಬದುಕಿನುದ್ದಕ್ಕೂ ರಾಮದಾಸ್ ಕೈಗೊಂಡ ಪ್ರಯಾಣಗಳೆಲ್ಲವೂ, ಹೋರಾಟಗಳೆಲ್ಲವೂ ತುಂಬ ರಿಸ್ಕಿನದು. ಕಷ್ಟ, ಧೈರ್ಯ ಹೋರಾಟಗಳೇ ರಾಮದಾಸ್‌ನ ಉಸಿರು. ವಿದ್ಯಾರ್ಥಿಯಾಗಿದ್ದಾಗ, ವೃತ್ತಿಯಲ್ಲಿದ್ದಾಗ, ನಿವೃತ್ತಿಯಾದ ಮೇಲೆ ಹಾಗೂ ಕೊನೆಯಲ್ಲಿ ತನ್ನ ಸಾವಿನಲ್ಲೂ ರಾಮದಾಸ್ ತಗೊಂಡ ರಿಸ್ಕ್ ಬಹಳ ಕಠಿಣ. ರಾಮದಾಸ್ ಇನ್ನೂ ಸ್ವಲ್ಪಕಾಲ

ಬದುಕಬೇಕಾಗಿತ್ತು. ರಾಮದಾಸ್, ತೇಜಸ್ವಿ, ಲಂಕೇಶ್, ಶಾಮಣ್ಣ ಮತ್ತೆ ಅನೇಕ ಗೆಳೆಯರು ಸೇರಿಕೊಂಡು ಅದೆಷ್ಟು ಕಾಡು ಗುಡ್ಡಗಳಲ್ಲಿ ತಿರುಗಾಡಿದರೋ ಏನೋ ! ರಾಮದಾಸ್ ಹೇಳಿದ ಒಂದೆರಡು ಘಟನೆಗಳು ನನಗೆ ಮೈ ಜುಂ ಎನ್ನಿಸಿತ್ತು.

## ಬಂಗಡೆಮೀನು, ತಾರ್ಲೆ

ಚಿಕ್ಕಂದಿನಿಂದಲೂ ರಾಮದಾಸ್‌ಗೆ ನನ್ನ ಹಾಗೆ ಮೀನೆಂದರೆ ಇಷ್ಟ. ನನ್ನ ತಾಯಿ ಕುಮಟದವರಾದರೆ ತಂದೆ ಮುಲ್ಕಿಯವರು. ನಮ್ಮ ಮನೆಯ ನ್ಯಾಷನಲ್ ಫುಡ್ ಮೀನು. ರಾಮದಾಸ್ ಅವರೇನೂ ಕರಾವಳಿಯವರಲ್ಲ. ಆದರೂ ಮೀನು ಇಷ್ಟ. ಅವರಿಗೆ ಸಮುದ್ರದ ಮೀನೇ ಬೇಕಂತಿರಲಿಲ್ಲ. ಹೊಳೆ, ಕೆರೇದು ಆಗ್ತಾಯಿತ್ತು. ನಾವು, ರಾಮದಾಸ್, ಮಂಜಕ್ಕ ಎಲ್ಲ ಮೀನ್ ಮೈಂಡೆಡ್ ಫೆಲೋಸ್ ! ಸಾಗರದಲ್ಲಿ ಯಾವಾಗಲೂ ಮೀನು ಜಾಸ್ತಿಯಿರುತ್ತೆ. ಇಡೀ ಕರ್ನಾಟಕದಲ್ಲಿಯೇ ಅತಿ ದೊಡ್ಡ ಒಣ ಮೀನಿನ ಮಾರ್ಕೆಟ್ ಸಾಗರದಲ್ಲಿದೆ. ಕಾರವಾರ, ಭಟ್ಕಳ, ಹೊನ್ನಾವರ, ಕುಮಟಾ ಕಡೆಗಳಿಂದ ಮೀನು ಲಾಗಾಯ್ತಿನಿಂದಲೂ ಬರ್ತಾ ಇದೆ. ಆಗೆಲ್ಲಾ ಮೀನುಗಳ ಸುಗ್ಗಿಯೇ ಸುಗ್ಗಿ. ಬಂಗಡೆ ಮೀನು ಬಡವರ ಬಂಧು. ಜನಪ್ರಿಯತೆಯ ಟಾಪ್‌ಟೆನ್‌ನಲ್ಲಿ ಬಂಗಡೆ ಮತ್ತು ತಾರ್ಲೆಗೆ ಮೊದಲೆರಡು ಸ್ಥಾನ. ಆಗ ಒಂದು ರೂಪಾಯಿಗೆ 30-40 ಬಂಗಡೆ ಸಿಗ್ತಾಯಿತ್ತು. ತಾರ್ಲೆ ರೂಪಾಯಿಗೆ ನೂರು ಸಹ. ಸಂಜೆ ಆಗ್ತ ಆಗ್ತ ತಾರ್ಲೆಯನ್ನು ಬಾಚಿಬಾಚಿ ಕೊಡ್ತಾಯಿದ್ರು. ಆಗ ಮೀನಿನ ಮಾರ್ಕೆಟ್‌ಗೆ ಐಸ್ ಪ್ರವೇಶ ಆಗಿರಲಿಲ್ಲ. ಐಸ್ ಬಂದ ಮೇಲೆ ಮೀನನ್ನು ವಾರಗಟ್ಲೆ, ತಿಂಗಳುಗಟ್ಲೆ ಇಟ್ಟು ಮಾರುವ ವ್ಯವಸ್ಥೆಯೂ ಬಂತು, ದುಬಾರಿಯೂ ಆಯ್ತು, ರುಚಿಯೂ ಹೋಯ್ತು. ಆಗ ಮೀನು ತಿನ್ನುವ ದೊಡ್ಡ ದೊಡ್ಡ ಕೇರಿಗಳಿಗೆಲ್ಲಾ ಚಿಕ್ಕ ಚಿಕ್ಕ ಲಾರಿಗಳಲ್ಲಿ, ದೊಡ್ಡ ದೊಡ್ಡ ವ್ಯಾನ್‌ಗಳಲ್ಲಿ ಮೀನು ಬರ್ತಾಯಿತ್ತು. ಆ ಲಾರಿಗಳ, ವ್ಯಾನುಗಳ ಹಾರ್ನ್‌ಗಳಿಗೆಲ್ಲಾ ಮೀನಿನ ರುಚಿ. ಮೀನ್ ಹಾರ್ನ್ ಕೇಳಿದೊಡನೆ ಕೇರಿ ಜನ ಒಮ್ಮೆಲೆ ಅಲರ್ಟ್. ತಕ್ಷಣ ಮಂಜಕ್ಕ, ರಾಮದಾಸ್ ಲಾರಿ ಹತ್ತಿರ ಹಾಜರ್. ಎಲ್ಲರಿಗಿಂತ ಮೊದಲು ಮಂಜಕ್ಕ ಅದನ್ನು ಎತ್ತಿ ನೋಡಬೇಕು. ಮೀನನ್ನು ಪರೀಕ್ಷೆ ಮಾಡಬೇಕು, ಅದರ ಕಣ್ಣು ನೋಡಬೇಕು. ಇವೆಲ್ಲ ಮಂಜಕ್ಕನ ಪರೀಕ್ಷೆ. ಎಲ್ಲವೂ ಸರಿಯಿತ್ತೆಂದರೆ ಮಂಜಕ್ಕ ಕೈಬೀಸಿ ಓ.ಕೆ. ಸಿಗ್ನಲ್ ಕೊಡ್ತಾಯಿದ್ರು. ತಕ್ಷಣ ತಟ್ಟೆಗಳು, ತಪ್ಪಲೆಗಳು ಲಾರಿ ಬಳಿ ಓಡೋಡಿ ಬರ್ತಾಯಿದ್ದವು. ರಾಮದಾಸ್ ಸುಮ್ಮನೆ ಮೀನಿನ ರಾಶಿಯನ್ನೇ ನೋಡ್ತಾಯಿದ್ದ, ಕಡಲ ಧ್ಯಾನಸ್ಥನಂತೆ. ಪ್ರೈಮರಿ ಶಾಲೆಯಲ್ಲಿರುವಾಗಲೂ ಆಗೊಮ್ಮೆ ಈಗೊಮ್ಮೆ ಮೀನು ಹಿಡಿಯಲು ಅವನು ಹೋಗ್ತಾ ಇದ್ದದ್ದು ನಮಗೆಲ್ಲಾ ಗೊತ್ತಿರುವ ವಿಷಯ. ರಾಮದಾಸ್ ವರದಾನದಿಯ ದಡದ ಮೇಲೆ ಸ್ವಲ್ಪ ದೂರ ಹೋಗಿ ಗಾಳ ಹಾಕಿ ಕುಳಿತುಕೊಳ್ಳೋದಿತ್ತು. ಒಂದೆರಡು ಸಾರಿ ನಾನೂ ಅವನ ಸಂಗಡ ಸುಮ್ಮನೆ ಕೂತಿದ್ದೆ. ಮೀನು ಗಾಳ ಹಾಕುವವರ ಪಕ್ಕದಲ್ಲಿ ಇರೋದು ತುಂಬ ಕಷ್ಟದ ಕೆಲಸ. ಕೆಮ್ಮುವ ಹಾಗಿಲ್ಲ, ಆಕಳಿಸುವಂತಿರಲಿಲ್ಲ. ಚೂರೂ ಶಬ್ದವಾಗಬಾರದು,

ಹೊಗೆ ಬಿಡುವಂತಿಲ್ಲ, ಗಾಳ ಹಾಕುವವನಿಗೆ ಬಹುಶಃ ಒಬ್ಬ ಮೂಕ ಒಳ್ಳೆಯ ಕಂಪನಿ ಆಗಬಹುದು. ಮೀನು ಹಿಡಿಯುವುದು ಒಂದು ರೀತಿಯ ಜೂಜು ಇದ್ದ ಹಾಗೆ. 'ಸಿಕ್ಕಿದರೆ ಶಿಕಾರಿ ಇಲ್ಲದಿದ್ದರೆ ಬಿಕಾರಿ'. ಸಾಗರದಲ್ಲಿದ್ದಾಗ ಚಿಕ್ಕ ಚಿಕ್ಕ ಜಬ್ಬುಗಳು ಸಿಕ್ಕಿದರೆ ಸಾಕು ರಾಮದಾಸ್‌ಗೆ ಅದೇ ಬಿಗ್‌ಕ್ಯಾಚ್. ಶಿವಮೊಗ್ಗಾದಲ್ಲಿ ಮಾತ್ರ ಹೊಳೆದಂಡೆಯ ಹಾಸ್ಟೆಲಿನಲ್ಲಿದ್ದಾಗ ಅವನು ಮೀನು ಹಿಡಿಯುವ ಉಸಾಬರಿಗೆ ಹೋಗ್ತಾಯಿರಲಿಲ್ಲ. ಮತ್ತೆ ಆ ಹವ್ಯಾಸದ ಪ್ರಯತ್ನಗಳು ಆಗೊಮ್ಮೆ ಈಗೊಮ್ಮೆ ಆಗುತ್ತಿದ್ದದ್ದು ಮೈಸೂರಿಗೆ ಹೋದ ಮೇಲೆ. ರಾಮದಾಸ್ ಗಂಗೋತ್ರಿಯ ಸ್ಟಾಫ್ ಕ್ವಾರ್ಟ್ರ್ಸ್‌ನಲ್ಲಿದ್ದಾಗ ನಾನು ಎಂ.ಎ. ಕಾಂಟಾಕ್ಟ್ ಪ್ರೋಗ್ರಾಂಗೆ ಅಂತ ಒಂದು ತಿಂಗಳು ಅವರ ಮನೆಯಲ್ಲಿ ಇದ್ದೆ. ಅದು ರಾಮದಾಸ್‌ಗೆ ರಜೆಯ ಕಾಲ. ಅವತ್ತು ರಾಮದಾಸ್ ಬೆಳಗ್ಗೆ ಹೋದವನು ರಾತ್ರಿತನಕ ಬಂದಿರಲಿಲ್ಲ. 3-4 ಮೋಟಾರ್ ಬೈಕ್‌ಗಳು ಹೋಗಿತ್ತಂತೆ. ನಾನು ಬಂದಿರೋದು ರಾಮದಾಸ್‌ಗೆ ಗೊತ್ತಿರಲಿಲ್ಲ. ರಾತ್ರಿ ಹತ್ತರ ತನಕ ರಾಮದಾಸ್‌ನನ್ನು ಕಾಯುತ್ತಿದ್ದೆ. ಮಂಜಕ್ಕ ಎರಡು ಮೂರು ಸಾರಿ ಹೇಳಿದ್ರು "ವಿಲ್ಲಿ, ಸ್ವಲ್ಪ ತಾಳು, ರಾಮದಾಸ್ ಬಂದ ಮೇಲೆ ಊಟ ಮಾಡುವಿಯಂತೆ" ಅಂತ. 10 ಗಂಟೆಗೆ ರಾಮದಾಸನ ಚೇತೋಹಾರಿ ಮೋಟಾರ್ ಬೈಕ್ ಬಂತು. ಬಂದವನೆ ನನ್ನನ್ನು ನೋಡಿ ಸಂತೋಷದಿಂದ ಚೀಲದಿಂದ ದೊಡ್ಡ ಮೀನೊಂದನ್ನು ತೆಗೆದು ತಾಯಿ ಕೈಯಲ್ಲಿ ಕೊಟ್ಟ. ಮಂಜಕ್ಕ 10-15 ನಿಮಿಷದಲ್ಲಿ ಪದಾರ್ಥ ಮಾಡಿಯೇ ಬಿಟ್ಟರು. ಮೀನು ಹೊರತು ಮತ್ತೆಲ್ಲವೂ ಸಿದ್ಧವಾಗಿತ್ತು. ಏನು ಮಾರಾಯ ಎಂಥ ಮೀನು ತಂದಿದ್ದೀಯಲ್ಲಾ ಅಂದಾಗ 'ಇದೆಂಥ ಮೀನು'! ಇದಕ್ಕಿಂತ ದೊಡ್ಡ ಮೀನು ತಂದ ಕತೆಗಳನ್ನು ಬಹಳ ಹೊತ್ತು ಹೇಳುತ್ತಾ ಹೋದ. ರಾಮದಾಸ್‌ನ ಸಂದರ್ಭ ವಿವರಣೆ, ಹಾಸ್ಯ ಪ್ರಜ್ಞೆಯ ಚಿತ್ತಾಕರ್ಷಕ ಶಕ್ತಿಗೆ ಕೇಳುಗ ಮೋಡಿಯಾಗ್ತಾನೆ.

ರಾಮದಾಸ್‌ಗೆ ದೊಡ್ಡ ದೊಡ್ಡ ಮೀನುಗಳು ಸಿಕ್ಕ ಹಾಗೆ, ಬಹಳ ಜನ ಯುವಮಿತ್ರರು ಸಿಗ್ತಾಯಿದ್ದರು. ಮನುಷ್ಯರನ್ನು ಹಿಡಿಯುವ ಮೀನುಗಾರ. ಆದರೆ ರಾಮದಾಸ್ ಎಂದೂ ತನ್ನ ಹಿಂಬಾಲಕರಿಗಾಗಿ ತನ್ನ ಗಾಳವನ್ನಾಗಲಿ, ಬಲೆಯನ್ನಾಗಲಿ ಬೀಸುತ್ತಿರಲಿಲ್ಲ. ಅವರಾಗಿಯೇ, ರಾಮದಾಸ್‌ನ ವರ್ಚಸ್ ಅನ್ನು ನೋಡಿ, ಅವನಲ್ಲಿ ಒಬ್ಬ ನಾಯಕನನ್ನು ಕಂಡು ಹಿಂಬಾಲಿಸುತ್ತಿದ್ದರು. ರಾಮದಾಸ್ ಅವರಾರಿಗೂ ನಿರಾಶೆ ಮಾಡಿಲ್ಲ, ದಾರಿ ತಪ್ಪಿಸಲಿಲ್ಲ. ಹಿಂಸೆ ಮಾರ್ಗವನ್ನು ತಾನೂ ಹಿಡಿಯಲಿಲ್ಲ, ತನ್ನವರೂ ಹಿಡಿಯಲು ಬಿಡಲಿಲ್ಲ. ಕೊನೆಯವರೆಗೂ ಅಪ್ಪಟ ಪ್ರಜಾಪ್ರಭುತ್ವವಾದಿ, ಅಹಿಂಸಾವಾದಿ, ಇದನ್ನೇ ತನ್ನ ಹಿಂಬಾಲಕರಿಗೆ ಆದರ್ಶವಾಗಿ ಕೊಟ್ಟಿದ್ದು.

## ಮುಳ್ಳಣ್ಣು, ಸಂಪೇ ಹಣ್ಣು, ಗುಡ್ಡೇಗೇರಣ್ಣು

ನನ್ನ ಬಾಲ್ಯದಲ್ಲಿ ರಾಮದಾಸ್ ಸಂಗಡ ಕಾಡುಗಳಲ್ಲಿ ಸುತ್ತಾಡಿದ ಮೇಲೆ ಮತ್ತೆಂದೂ ನಾನು ಅಷ್ಟು ಅಲೆದಾಡಲಿಲ್ಲ. ಆದರೆ ರಾಮದಾಸ್ ಮೈಸೂರಿಗೆ ಹೋದ ಮೇಲೆ ತನ್ನ

ಮಿತ್ರರೊಡನೆ ಕಾಡುಮೇಡು ಅಲೆದಾಡಿದ್ದು ಒಂದು ಬೃಹತ್ ಅಧ್ಯಾಯ. ಕಾಡಿನಲ್ಲಿ ಸುತ್ತಾಡುವುದೆಂದರೆ ರಾಮದಾಸ್‌ಗೆ ಬಹು ಪ್ರೀತಿ. ರಾಮದಾಸ್‌ನ ಧೈರ್ಯಕ್ಕೂ ಅದೊಂದು ಕಾರಣ. ನಮ್ಮ ಮನೆಗಳಲ್ಲಿ ಮಳೆಗಾಲದ ಕಟ್ಟಿಗೆ ಶೇಖರಣೆ ಬಿಟ್ಟರೆ ಬೇಸಿಗೆ ಉರುವಲುಗೆ ಆಗಾಗ್ಗೆ ಪಕ್ಕದ ಸೂರನಗದ್ದೆ, ಶಿರವಾಳ ಕಾಡಿಗೆ ಹೋಗಿ ಕಟ್ಟಿಗೆ ಹೊರೆ ಕಟ್ಕೊಂಡು ಬರ್ತಾ ಇದ್ವಿ. ನಮ್ಮ ಕೇರಿಯ ಸುಮಾರು ಜನ ಹೋಗ್ತಾ ಇದ್ರು. ಮಂಜಕ್ಕ ರಾಮದಾಸ್‌ಗೆ ಮಳೆಗಾಲದ ಕಟ್ಟಿಗೆಯನ್ನು ಸ್ಟಾಕ್ ಮಾಡುವ ಉತ್ಸಾಹ. ಅವರಿಗೆ ಅದು ಕಾಡಿಗೆ ಹೋಗಲು ಒಂದು ನೆಪ ಮಾತ್ರ. ಕಟ್ಟಿಗೆಗೆ ಹೋದರೆ ಕಾಡಿನ ಹಣ್ಣುಗಳ ಭರ್ಜರಿ ಊಟ ಸಹ ಆಗುತ್ತಿತ್ತು. ಒಮ್ಮೊಮ್ಮೆ ರಾಮದಾಸ್ ಮತ್ತು ನಾನು ಹಣ್ಣುಗಳಿಗೋಸ್ಕರ ಕಾಡಿಗೆ ಹೋಗ್ತಾ ಇದ್ವಿ. ಮಲೆನಾಡಿನ ಹಣ್ಣುಗಳು ಅದೆಷ್ಟೋ ! ಕೌಳಿಹಣ್ಣು, ಪರಂಗಿ ಹಣ್ಣು, ತುಮರಿ ಹಣ್ಣು, ಸಂಪೇಹಣ್ಣು, ಮುರುಗಲ ಹಣ್ಣು, ಮುಳ್ಳಣ್ಣು, ಗುಡ್ಡೇಗೇರಣ್ಣು, ಈಚಲು ಹಣ್ಣು - ಒಂದೇ ಎರಡೇ ಈಗಂತೂ ಕಾಡಿನ ಸಂಗಡ ಹಣ್ಣುಗಳೂ ಮಾಯ. ರಾಮದಾಸ್‌ಗೆ ಕೆಲವು ಪ್ರತ್ಯೇಕ ಹಣ್ಣುಗಳ ಮರಗಳ ಸ್ಥಳಗಳು ಗೊತ್ತಿತ್ತು. ನಾನು ಮರದ ಒಂದು ಹಂತದವರೆಗೆ ಹತ್ತಿದರೆ ಆ ಪುಣ್ಯಾತ್ಮನಿಗೆ ರಿಸ್ಕ್ ತಗೊಂಡು ಮರದ ತುದಿಯಲ್ಲಿ ಹಣ್ಣು ಇರುವ ಟೊಂಗೆ ತನಕ ಹೋಗುವ ಧೈರ್ಯವಿತ್ತು. ರಾಮದಾಸ್ ಸೇಫ್ ಪಾಯಿಂಟ್‌ಗೆ ಬರೋತನಕ ನನಗೆ ಜೀವದ ಮೇಲೆ ಜೀವ ಇರ್ತಾ ಇರಲಿಲ್ಲ. ಆದರೆ ಯಾವತ್ತೂ ಅಂಥಾದೇನೂ ಆಗಿರಲಿಲ್ಲ. ಹೊಟ್ಟೆ ತುಂಬ ಹಣ್ಣು ತಿಂದು ಮನೆಯವರೆಗೆ, ಕೇರಿ ಹುಡುಗರಿಗೆ ಕೊಡುವಷ್ಟು ಹಣ್ಣು ಚೀಲದಲ್ಲಿ ತರ್ತಾ ಇದ್ವಿ, ನಂತರ ಗೆಳೆಯರಿಗೆ ಹಣ್ಣಿನ ಡಿಸ್ಟ್ರಿಬ್ಯೂಷನ್ ರಾಮದಾಸ್‌ನದೆ. ರಾಮದಾಸ್ ಮತ್ತು ನಮ್ಮ ಮನೆಯ ಹೆಂಚಿನ ಮೇಲೆ ಸೀಸನ್‌ನಲ್ಲಿ ನಾಲ್ಕೈದು ಗುಡ್ಡೆಗೇರಣ್ಣಿನ ಸರ ಇದ್ದೇ ಇರುತ್ತಿತ್ತು. ಚೆನ್ನಾಗಿ ಹಣ್ಣಾಗಿ ಒಣಗಿದ ಗುಡ್ಡೇಗೇರಣ್ಣಿನ ಮುಂದೆ ಗೋಡಂಬಿ, ಉತ್ತುತ್ತೆಗಳು ಏನೂ ಅಲ್ಲ. ಈಗ ಹಳ್ಳಿಯವರೇ ಪೇಟೆಯಿಂದ ಹಣ್ಣನ್ನು ಒಯ್ಯುವ ಕಾಲ ಬಂದಿದೆ. ಹಣ್ಣಿನ ಮರಗಳನ್ನು ಹತ್ತುವುದರಲ್ಲಿ ರಾಮದಾಸ್‌ಗೆ ತುಂಬಾ ಆಸಕ್ತಿ. ಬಾಲ್ಯದ ಸಾಹಸಗಳು ಶಿವಮೊಗ್ಗದಲ್ಲಿ ಮಾಯವಾಗಿ ಮತ್ತೆ ಅದು ಕೊನರಿದ್ದು ಮೈಸೂರಿನಲ್ಲಿ.

ಅಲೆ, ಆಲೆಮನೆ, ಆಲೆ ಹೊಡೆಯುವುದು, ಕಬ್ಬು ತಿನ್ನುವುದು, ಕೊಪ್ಪರಿಗೆಯಲ್ಲಿ ಕುದಿಯುವ ಬೆಲ್ಲ - ಇವೆಲ್ಲಾ ನಮಗೆ ಸೆಲೆಬ್ರೇಷನ್. ಆಗ ಆಲೆಮನೆಯವರೂ ಸಹ ಬಹು ಪ್ರೀತಿಯಿಂದ ಹಾಲು ಕುಡಿಯಲು ಕೊಡುತ್ತಿದ್ದರು. ಮನೆಗೆ ಒಯ್ಯಲು ಹಾಲು ಕೇಳಿದರೆ ಇಲ್ಲ ಎನ್ನುತ್ತಿರಲಿಲ್ಲ. ಬಾನೆ ಬೆಲ್ಲವೆಂದರೆ ಇಷ್ಟಾನೋ ಇಷ್ಟ ! ರಾಮದಾಸ್ ಬೆಲ್ಲವನ್ನು ಹೇಗಾದರೂ ಸಂಪಾದನೆ ಮಾಡುತ್ತಿದ್ದರ ಬಗ್ಗೆ ನನಗೆ ಬಹಳ ಧೈರ್ಯ. ಬಾನೆಯಲ್ಲಿ ಕುದಿಯುವ ಹಾಲಿನಲ್ಲಿ ಮುಳುಗೇಳುವ ಕೊಬ್ಬರಿ ಗಿಟಕನ್ನು ನೆನಸಿಕೊಂಡರೆ ಸಾಕು. ಒಂದ್ಸಾರಿ ಆಲೆಮನೆಯಿಂದ ಕಬ್ಬನ್ನು ಕದ್ದದ್ದು ಉಂಟು. ಇದರಲ್ಲಿ ರಾಮದಾಸ್‌ಗೆ ನನಗಿಂತ ಸ್ವಲ್ಪ ಹೆಚ್ಚಿನ ಅನುಭವ. ನಮ್ಮ ಮೊದಲನೆ 'ಆಪರೇಷನ್ ಆಲೆಮನೆ' ಬಹಳ ಥ್ರಿಲ್. ಶಿರವಾಳದ ಹತ್ತಿರದ ಒಂದು ಆಲೆಮನೆ ಹೊಳೆಯ ದಡದ ಮೇಲಿತ್ತು. ಹೊಳೆಗಿಂತ ಸುಮಾರು ಎತ್ತರದಲ್ಲಿ. ಆಲೆಮನೆಯಿಂದ ಕೆಳಗೆ

ಹೊಳೆತನಕ ಅಳ್ಳಟ್ಟೆಗಳ ರಾಶಿ. ಅಳ್ಳಟ್ಟೆಯ ಇಳಿಜಾರಿನಲ್ಲಿ ಯಾರೋ ಮಹಾನುಭಾವರು ಒಂದು ಹೊರೆ ಕಬ್ಬನ್ನು ಮುಚ್ಚಿಟ್ಟಿದ್ದರು. ಅದು ಹೇಗೋ ಕೇರಿ ಹುಡುಗರಿಗೆ ತಿಳಿಯಿತು. ತಕ್ಷಣ ಒಂದು ನಿಯೋಗ ರಾಮದಾಸ್ ಬಳಿ ಹೋಯಿತು. ರಾಮದಾಸ್ ಎಲ್ಲರ ಕಾನ್ಫಿಡೆನ್ಸ್ ಪಡೆದು ಒಂದು ಮಾಸ್ಟರ್ ಪ್ಲಾನ್ ತಯಾರಿಸಿದ. ಒಬ್ಬೊಬ್ಬರೆ ಹೊಳೆ ಬದಿಯಿಂದ ಆಲೆಮನೆ ಪಾಯಿಂಟ್‌ನಲ್ಲಿ ನಿಂತಿದ್ದೆವು. ಕೆಳಗೆ ನಿಂತರೆ ಮೇಲಿನವರ ಗಮನಕ್ಕೆ ಬರುತ್ತಿರಲಿಲ್ಲ. ರಾಮದಾಸ್ ಮತ್ತು ಇನ್ನೊಬ್ಬ ಹೀರೋ ಆಲೆಮನೆಯ ಎಲ್ಲರಿಗೂ ಕಾಣಿಸುವಂತೆ ಅಳ್ಳಟ್ಟೆಯ ಹೊರೆಯನ್ನು ಕಟ್ಟುವ ನಾಟಕ ಮಾಡುತ್ತ ಮುಚ್ಚಿಟ್ಟ ಕಬ್ಬನ್ನು ಒಂದೊಂದಾಗಿ ತಮ್ಮ ಕಾಲುಗಳ ಮಧ್ಯೆಯಿಂದ ಕೆಳಗೆ ಎಸೆಯತೊಡಗಿದರು. ಮೇಲಿನಿಂದ ಕೆಳಗಿನವರೆಗೆ ಸುಮಾರು 6-7 ಹುಡುಗರು ಕಬ್ಬನ್ನು ಸರಾಗವಾಗಿ ಒಬ್ಬರಿಂದ ಒಬ್ಬರಿಗೆ ಪಾಸು ಮಾಡಿ ಲೀಲಾಜಾಲವಾಗಿ ಕೆಳಗಿಳಿಸಿದರು. ನಂತರ ಒಬ್ಬೊಬ್ಬರು ನಾಲ್ಕೈದು ಕಬ್ಬನ್ನು ತಗೊಂಡು ಬೇರೆ ಬೇರೆ ದಾರಿಯಿಂದ ಮನೆ ಕಡೆಗೆ ಪರಾರಿ. ನಮ್ಮ ಮನೆಯಲ್ಲಿ ಈ ವಿಷಯ ಗೊತ್ತಾದ ಮೇಲೆ ನನಗೆ ಬಿದ್ದ ಏಟು ನೋಡಿ ರಾಮದಾಸ್ 'ಮತ್ತೆ ನೀನು ಬರೋದು ಬೇಡ ಮಾರಾಯ' ಅಂತ ಸಮಾಧಾನ ಮಾಡಿದ್ದು ಇನ್ನೂ ನೆನಪಿದೆ.

## ಆನೆಗುಂಡಿ ಮತ್ತು ಭೂತಪ್ಪನ ಗುಂಡಿ

ನಮ್ಮ ಮನೆಯ ಹಿಂಭಾಗದಲ್ಲಿಯೇ ಇರುವ ವರದಾ ಹೊಳೆಯಲ್ಲಿ ಭೂತಪ್ಪನ ಗುಂಡಿ ಮತ್ತು ಆನೆ ಗುಂಡಿ ಇದೆ. ಸರ್ಕಸ್ಸಿನ ಆನೆಗಳು ಸ್ನಾನ ಮಾಡುತ್ತಿದ್ದ ಗುಂಡಿಯೇ ಆನೆ ಗುಂಡಿ. ಹೊಳೆಯ ಉದ್ದಕ್ಕೂ ಅನೇಕ ಭೂತಪ್ಪನ ಗುಂಡಿಗಳು. ನಮ್ಮ ಭೂತಪ್ಪನ ಗುಂಡಿ ಬಹಳ ಸ್ಪೆಷಲ್. ಆಗಿನ್ನೂ ಊರಿನ ಕಚಡಾ ಚರಂಡಿಗಳ ಮೂಲಕ ಹೊಳೆಗೆ ಬರ್ತಾಯಿರ್ಲಿಲ್ಲ. ನೀರು ತುಂಬಾ ಚೆನ್ನಾಗಿತ್ತು. ಅಲ್ಲಿರುವ ಒಂದು ಬಂಡೆಯಮೇಲೆ ಹತ್ತಿ ಡೈವ್ ಮಾಡೋದು ನಮ್ಮ ಬೇಸಿಗೆಯ ಕೆಲಸಗಳಲ್ಲಿ ಒಂದು. ರಾಮದಾಸ್ ತುಂಬಾ ಒಳ್ಳೆಯ ಈಜುಗಾರ. ಹೊಳೆಗೆ ಸ್ನಾನಕ್ಕೆ ಹೋಗಲು ರಾಮದಾಸ್‌ನಿಗೆ ಮುಕ್ತ ಅವಕಾಶ, ಆದರೆ ನಮ್ಮ ಮನೆಯಲ್ಲಿ ಹಾಗಿರಲಿಲ್ಲ. ಆದರೂ ರಾಮದಾಸ್ ನನಗೆ ಈಜು ಕಲಿಸಿದ. ಈ ಭೂತಪ್ಪನ ಗುಂಡಿ ಬಗ್ಗೆ ರಾಮದಾಸ್‌ನಿಗೆ ತುಂಬ ಪ್ರೀತಿ. ಇಲ್ಲಿ ತುಂಬ ರಿಸ್ಕ್ ತಗೊಂಡು ಈಜುವುದೇ ರಾಮದಾಸ್‌ನ ಸಡಗರ. ಶಿವಮೊಗ್ಗದಲ್ಲಿರುವಾಗ ಜೆಕ್ಕಿನ ಕಲ್ಮಠ ಹಾಸ್ಟೆಲಿನಲ್ಲಿ ಹತ್ತಿಪ್ಪತ್ತು ಮೆಟ್ಟಿಲು ಇಳಿದರೆ ತುಂಗಾ ನದಿ. ಅಲ್ಲಿ ಪ್ರತಿದಿನ ಹೊಳೆಸ್ನಾನ. ಮಳೆಗಾಲದಲ್ಲಂತೂ ತುಂಬಾ ಹೆದರಿಕೆಯ ಸ್ನಾನ. ಅಲ್ಲೂ ತುಂಬಾ ರಿಸ್ಕ್‌ನಿಂದ ಎಲ್ಲರಿಗಿಂತ ಹೆಚ್ಚು ಈಜು ರಾಮದಾಸ್‌ನದು. ನಮಗೆಲ್ಲಾ ಇದ್ದ ಒಂದೇ ಧೈರ್ಯವೆಂದರೆ ರಾಮದಾಸ್. ಕೆಲವು ವರ್ಷಗಳ ಹಿಂದೆ ರಾಮದಾಸ್ ಗೆಳೆಯರಿಗೆಲ್ಲಾ ತನ್ನ ಸಾಗರದ ಊರುಕೇರಿ ತೋರಿಸಬೇಕೆಂಬ ಆಸೆಯಿಂದ ಬಂದಿದ್ದ. ಅವತ್ತು ನಾನಾಗಲಿ, ಇಲ್ಲಿಯ ಮತ್ಯಾರೂ ಪರಿಚಯವಿರುವವರಾಗಲಿ ಸಿಗಲಿಲ್ಲ. ಹಾಗೆಯೇ ಭೂತಪ್ಪನ ಗುಂಡಿಗೆ ತೋರಿಸಲು ಗೆಳೆಯರನ್ನು ಕರ್ಕೊಂಡು ಹೋಗಿ ನೋಡಿದ್ದಾನೆ. ಮೈಸೂರಿಗೆ ವಾಪಸಾದ ಮೇಲೆ ನನಗೊಂದು

ಬೈಯ್ದು ಕಾಗದ ಬರೆದಿದ್ದ "ನೀವೆಲ್ಲಾ ಸೇರಿ ಭೂತಪ್ಪನ ಗುಂಡಿಯನ್ನು ಅದೆಷ್ಟು ಹಾಳು ಮಾಡಿದ್ದೀರಿ. ಅಲ್ಲಿ ನೀರೇ ಇಲ್ಲ, ಬರಿ ಕಚಡಾ, ಕೀವು. ನೀವ್ಯಾಕೆ ಹೊಳೆ ಬಗ್ಗೆ ಸ್ವಲ್ಪ ಕೆಲಸ ಮಾಡಬಾರದು. ನಿಮ್ಮ ಸಾಹಿತ್ಯ ನಾಟಕ ಕ್ರಿಕೆಟ್ ಬದಿಗಿಟ್ಟು ಹೊಳೆಯನ್ನು ಚಂದಗೊಳಿಸಲಿಕ್ಕೆ ಆಗೋದಿಲ್ವಾ ? ಊರಿನ ಮಧ್ಯೆಯಲ್ಲಿ ಹೊಳೆ ಇರೋದು ಎಂತಹ ಅದೃಷ್ಟ ! ಅದನ್ನು ಹಾಳು ಮಾಡಿಟ್ಟಿದ್ದೀರಿ" ಅಂತ ಜೋರಾಗಿ ಬರೆದಿದ್ದ. ಕಾಗದದ ತುಂಬಾ ಸಾಗರದ ಪ್ರೀತಿ ತುಂಬಿತ್ತು.

ಹೌದು, ಹೊಳೆಯ ಬಗ್ಗೆ ನಾವ್ಯಾರು ಏನೂ ಮಾಡಿಲ್ಲ. ಊರಿನ ಕಚಡಾಗಳು ಸುಲಭವಾಗಿ ಸೇರಲು ಚರಂಡಿಗಳನ್ನು ಮಾಡುವುದರಲ್ಲಿಯೇ ನಾವೆಲ್ಲಾ ಸಂತೋಷಪಟ್ಟಿದ್ದೇವೆ ವಿನಹ ಹೊಳೆ ಉಳಿಸಲು ಪ್ರಯತ್ನಿಸಲಿಲ್ಲ. ಒಂದೊಂದು ಊರಿನಲ್ಲಿ ಒಬ್ಬೊಬ್ಬ ರಾಮದಾಸ್ ಇರಬೇಕು ಅನಿಸುತ್ತೆ. ಸಾಗರದ ಬಗ್ಗೆ ತನ್ನ ಸ್ನೇಹಿತರ ಬಳಿ ಬಹಳ ಹೇಳಿರುವುದನ್ನು ನಾನು ಕೇಳಿರುವೆ. ತನ್ನೂರು ಸಾಗರವೆಂಬ ಅಭಿಮಾನ ರಾಮದಾಸ್‌ನಿಗೆ. ಹೋದಾಗೆಲ್ಲಾ ಅವನಿಗೆ ಸಾಗರದ ಕತೆ ಕೇಳಬೇಕು. ಪತ್ರಗಳಲ್ಲೂ ಹಾಗೆಯೆ ಊರಿನ ಬಗ್ಗೆ, ಕೇರಿ ಹುಡುಗರ ಹಳೆಯ ಹೆಸರುಗಳನ್ನು ಬರೆದು ನೆನಪಿಸುತ್ತಿದ್ದ. ರಾಮದಾಸ್‌ನ ಅಕ್ಷರಗಳು ತುಂಬ ಸುಂದರ ಅಷ್ಟೇ ಶಕ್ತಿಯುತ, ಅವನ ವ್ಯಕ್ತಿತ್ವ ನಿಲುವು ನೇರ ಬದುಕು ಪತ್ರದಲ್ಲಿ ಕಾಣುತ್ತಿತ್ತು.

ಮಂಜಕ್ಕ ನಾಡಿಗೆ ಕೊಟ್ಟ ಬಹುದೊಡ್ಡ ಕೊಡುಗೆ ರಾಮದಾಸ್. ರಾಮದಾಸ್‌ನ ವ್ಯಕ್ತಿತ್ವದಲ್ಲಿ ಬಹಳ ಕಡೆ ಮಂಜಕ್ಕನನ್ನು ಕಾಣಬಹುದು. ಮುಖ್ಯವಾಗಿ ರಾಮದಾಸ್ ಮುಕ್ತವಾಗಿ ಬೆಳೆಯಲು ಸಹಾಯ ಮಾಡಿದ್ದರು. ರಾಮದಾಸ್‌ನ ವಿಚಾರ, ಹೋರಾಟಗಳಿಗೆ ಅಡ್ಡಿ ಮಾಡಿರಲಿಲ್ಲ. ಮೈಸೂರಿಗೆ ಹೋದ ಮೇಲೂ ಅಲ್ಲಿಯ ಎಲ್ಲಾ ಸಾಹಿತಿ ಕವಿಗಳ ಕಲಾವಿದರ ಸರ್ಕಲ್‌ನಲ್ಲೂ ಮಂಜಕ್ಕನ ಬಗ್ಗೆ ಗೌರವ. ಅವರ ಮನೆಯೂ ಅಷ್ಟೇ. ಯಾರೇ ಬರಲಿ ತಕ್ಷಣ ಅವರಿಗೆ ಊಟ ಉಪಚಾರ ಆಗಲೇಬೇಕು. ಮಂಜಕ್ಕ ತೀರಿಕೊಂಡ ಮೇಲೆ ತುಂಬಾ ಹಣ್ಣಾಗಿದ್ದು ನಿರ್ಮಲಾ ಅವರು. ನಿರ್ಮಲಾಗೆ ಮಂಜಕ್ಕ ತಾಯಿ ಇದ್ದ ಹಾಗೆ. ಅವರನ್ನು ಕುರಿತು ಒಂದು ಪುಸ್ತಕ ತರಲು ಪ್ರಯತ್ನಿಸುತ್ತಿದ್ದರು. ಮಂಜಕ್ಕ ಸಾಗರಕ್ಕೆ ಬಂದಾಗಲೆಲ್ಲಾ ತನ್ನ ಸೊಸೆ ಬಗ್ಗೆ ಬಹಳ ಹೆಮ್ಮೆಯಿಂದ ಹೇಳೋದೆ ಹೇಳೋದು. ನಾವೇ ಈ ಅತ್ತೆಯನ್ನು ತಮಾಷೆ ಮಾಡ್ತ ಇದ್ವಿ. ಮಂಜಕ್ಕನ ಸಾವಿನ ನಂತರ ನಿರ್ಮಲಾಗೆ ಸುಧಾರಿಸಿಕೊಳ್ಳಲು ಆಗಲಿಲ್ಲ. ಸ್ನೇಹಾಗೆ ನೋಡಿದ ತಕ್ಷಣ ನನಗೆ ಮಂಜಕ್ಕನ ನೆನಪು. ಸೊಸೆ ಮಹಾರಾಣಿ ಕಾಲೇಜಿನ ಕನ್ನಡ ಪ್ರೊಫೆಸರ್ ಅನ್ನುವ ಹೆಮ್ಮೆ ಮಂಜಕ್ಕನಿಗೆ. ರಾಮದಾಸ್‌ನ ಹಿಂದೆ ತುಂಬಾ ಗಟ್ಟಿಯಾಗಿ ನಿಂತವರು ಮಂಜಮ್ಮ, ನಿರ್ಮಲಾ ಮತ್ತು ಸ್ನೇಹ, ಈಗ ಓಂಕಾರ ಸಹ. ಇಂತಹ ಒಬ್ಬ ಹೋರಾಟಗಾರನ ಮನೆಯನ್ನು ಕಟ್ಟುವುದು ಸುಲಭವಲ್ಲ. ನಿರ್ಮಲಾ ಇದನ್ನು ತುಂಬಾ ಚೆನ್ನಾಗಿ ನೋಡಿಕೊಂಡಿದ್ದಾರೆ. ರಾಮದಾಸ್ ಹೊರಗೆ ಹೋದಾಗಲೆಲ್ಲಾ ಅವನು ಮನೆಗೆ ಬರುವ ತನಕ ನಿರ್ಮಲಾಗೆ ಟೆನ್‌ಷನ್ ಹೇಳತೀರದು.

ರಾಮದಾಸ್ ನಮ್ಮ ಸಂದರ್ಭದ ಬಲು ದೊಡ್ಡ ಹೋರಾಟಗಾರ. ಎಲ್ಲಿಯೇ ಅನ್ಯಾಯವಾಗಲಿ ಅಲ್ಲಿ ರಾಮದಾಸ್ ಇರಲೇಬೇಕು. ತಾತ್ವಿಕ ಘರ್ಷಣೆಗಳಲ್ಲಿ ರಾಮದಾಸ್

ಹೋರಾಟ ಮಾಡುವ ಪರಿಯೇ ಆಶ್ಚರ್ಯ. ಇಂತಹ ಹೋರಾಟ ಸಾಗರದ ನೆಲಕ್ಕೆ ಹೊಸದಲ್ಲ. ಕಾಗೋಡು ಸತ್ಯಾಗ್ರಹ ಸಮಯದಲ್ಲಿ ರಾಮದಾಸ್ ನನ್ನ ಹಾಗೆ ಒಬ್ಬ ಹೈಸ್ಕೂಲ್ ವಿದ್ಯಾರ್ಥಿ.

## ಕಾಗೋಡು ಸತ್ಯಾಗ್ರಹ ಮೆರವಣಿಗೆ

ಕಾಗೋಡು ಚಳವಳಿ ಸ್ವತಂತ್ರ ಭಾರತದ ಚಳವಳಿಗಳ ಇತಿಹಾಸದಲ್ಲಿ ಮೊದಲ ಹೆಜ್ಜೆಗಳಲ್ಲೊಂದು. ಕರ್ನಾಟಕ ಭೂಪಟದಲ್ಲಿ ಕಾಗೋಡು ಗ್ರಾಮವನ್ನು ಗುರುತಿಸುವುದು ಕಷ್ಟವಾದರೂ ಆ ಪುಟ್ಟ ಗ್ರಾಮ ಹಾರಿಸಿದ ಚಳವಳಿಯ ಕಿಡಿ ಮಾತ್ರ ಬಹು ಮಹತ್ವದ್ದು. ಕರ್ನಾಟಕದಲ್ಲಿ ಗೇಣಿದಾರ ತನ್ನ ಹಕ್ಕಿಗಾಗಿ ಉಳುವವನೆ ಹೊಲದೊಡೆಯ ಆಗಬೇಕೆಂದು ಆಗ್ರಹಿಸಿ ನಡೆಸಿದ ಪ್ರಥಮ ಹೋರಾಟ, ಸ್ವಾತಂತ್ರ್ಯದ ನಂತರದಲ್ಲಿ, ಸ್ವಾತಂತ್ರ್ಯ ಸಿಕ್ಕ ತಕ್ಷಣ ಎಡಪಂಥೀಯರಲ್ಲಿ ರೈತರನ್ನು ಸಂಘಟಿಸಲು ಪ್ರಥಮವಾಗಿ ಪ್ರಯತ್ನಿಸಿದ್ದು ಸಮಾಜವಾದಿಗಳು. ಸಮಾಜವಾದದ ಪ್ರಮುಖ ನೇತಾರ ಡಾ. ಲೋಹಿಯಾ ಅವರು ಒಬ್ಬ ಅಪ್ಪಟ ಚಿಂತಕ, ಅಸದೃಶ ನೇತಾರ, ಹಾಗೆಯೇ ಒಬ್ಬ ಬಂಡಾಯಗಾರ. ರಾಮದಾಸ್‌ಗೆ ಹೋರಾಟಗಳ ಕಲ್ಪನೆ ಆಗ ಇಲ್ಲದಿದ್ದರೂ ಒಬ್ಬ ವಿದ್ಯಾರ್ಥಿಗೆ ಇರಬಹುದಾದ ಅರಿವುಗಳಿಗಿಂತ ಹೆಚ್ಚಿನ ಅರಿವು ಇತ್ತು. ಲೋಹಿಯಾ, ಗೋಪಾಲಗೌಡ, ಜಾರ್ಜ್ ಫರ್ನಾಂಡೀಸ್ ಇವರ ಬಗ್ಗೆ ರಾಮದಾಸ್‌ಗೆ ಹೆಚ್ಚಿನ ಆಸಕ್ತಿ. ಸತ್ಯಾಗ್ರಹದ ಚಳವಳಿಗಾರರು ನಮ್ಮ ಮನೆ ಪಕ್ಕದಲ್ಲಿಯೇ ವರದಾ ಹೊಳೆ ದಡದ ಮೇಲಿರುವ ಸೊರಬ ಬಸ್ ಸ್ಟ್ಯಾಂಡಿನ ಮೂಲಕವೇ ಅವರ ಮೆರವಣಿಗೆಯನ್ನು ತರಬೇಕಾಗಿತ್ತು. ಅದು ಪ್ರತಿ ಸೋಮವಾರ ಹಾಗು ಗುರುವಾರ. ಈ ಚಳವಳಿಗಾರರ ಮೆರವಣಿಗೆಯನ್ನು ನೋಡುವ ಉತ್ಸಾಹ ನಮ್ಮದು. ರಾಮದಾಸ್ ಈ ಮೆರವಣಿಗೆಯನ್ನು ಕಾಯುವ ಪರಿ ಚೆನ್ನಾಗಿತ್ತು. ಅವರ ಘೋಷಣೆಗಳು ಸಹಾ ಅಷ್ಟೇ ಶಕ್ತಿಯುತ. ಒಮ್ಮೆ ಮೆರವಣಿಗೆಯಲ್ಲಿ 'ಇಂಕ್ವಿಲಾಬ್ ಜಿಂದಾಬಾದ್', 'ಉಳುವವನೇ ಹೊಲದೊಡೆಯ' - ಇಂತಹ ಘೋಷಣೆಗಳು ಮೊಳಗಿತ್ತೆಂದರೆ ಮನೆ ಮಂದಿಯೆಲ್ಲ ಒಮ್ಮೆಲೆ ರಸ್ತೆಯತ್ತ ಓಡಿ ಬರುತ್ತಿದ್ದರು. ಸಾವಿರಾರು ಹಳ್ಳಿಗರ, ಮುಖ್ಯವಾಗಿ ದೀವರ ಮೆರವಣಿಗೆಯ ಮುಂಚೂಣಿಯಲ್ಲಿ ನಿಂತು ಸಾಗರದ ಪ್ರಮುಖ ನೇತಾರ ಎಸ್.ಎಸ್. ಕುಮಟಾ ಅವರು ಘೋಷಣೆಗಳಿಗೆ ಕರೆಕೊಟ್ಟರೆ ಆ ಸತ್ಯಾಗ್ರಹಿಗಳು ಕೊಡುತ್ತಿದ್ದ ಉತ್ತರದ ಕೂಗಿನಲ್ಲಿ ಆ ಛಲ, ಆ ಹೋರಾಟ ಆ ಬೆಂಕಿಯ ಅನುಭವ ಆಗುತ್ತಿತ್ತು. ಈ ಘೋಷಣೆಗಳನ್ನು ಕೇರಿಯ ಹುಡುಗರು ಕೇಳಿಸಿಕೊಳ್ಳುತ್ತಿದ್ದರೂ ತೀವ್ರವಾಗಿ ಚಡಪಡಿಸುತ್ತಿದ್ದವನು ರಾಮದಾಸ್. ನಾವು ರಸ್ತೆಯ ಬದಿಯಲ್ಲಿ ಸುಮ್ಮನೆ ಕಣ್ಣುಬಿಟ್ಟು, ಮನಸ್ಸಿನಲ್ಲಿಯೇ ಘೋಷಣೆಗಳನ್ನು ಕೂಗುತ್ತಿದ್ದರೆ ರಾಮದಾಸ್ ಮಾತ್ರ ನಮ್ಮನ್ನೆಲ್ಲಾ ಬಿಟ್ಟು, ಆ ಮೆರವಣಿಗೆಯಲ್ಲಿ ಹೋಗ್ತಾ ಇದ್ದದ್ದು ನನಗೆ ಮುಖ್ಯ ಅನಿಸುತ್ತೆ. ಅವರ ಹಾಗೆ ಘೋಷಣೆಗಳನ್ನು ಕೂಗುತ್ತಾ ಅವತ್ತಿನ ಸಭೆಗಳಿಗೆ ಹೋಗೋದು, ನಂತರ ಶಾಲೆಗೆ ಹೋಗ್ತಾನೆ ಇರ್ಲಿಲ್ಲ. ಕೇವಲ ಒಬ್ಬ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದ ರಾಮದಾಸ್ ಸತ್ಯಾಗ್ರಹದ ಮೆರವಣಿಗೆ, ನಾಯಕರುಗಳಿಗೆ, ಸಭೆಗಳಿಗೆ

ಸ್ಪಂದಿಸುತ್ತಿದ್ದ ರೀತಿ ತುಂಬಾ ಕುತೂಹಲ. ಸತ್ಯಾಗ್ರಹಕ್ಕೆ ಸಂಬಂಧಪಟ್ಟಂತೆ ಯಾವುದೇ ಸಭಾ ಕಾರ್ಯಕ್ರಮ, ಮೆರವಣಿಗೆಯಲ್ಲಿ ರಾಮದಾಸ್ ಇರಲೇಬೇಕಾಗಿತ್ತು. ಇದರ ಪರಿಣಾಮ ನನಗೆ ಗೊತ್ತಾಗಿದ್ದು ನಾನು ಮೈಸೂರು ಹೋದಾಗಲೆಲ್ಲಾ ಈ ಸತ್ಯಾಗ್ರಹಿಗಳಲ್ಲಿ ಪ್ರಮುಖರಾಗಿದ್ದ ಕೆಲವರ ಬಗ್ಗೆ ಕೇಳ್ತಾ ಇದ್ದಾಗ - ಎಸ್.ಎಸ್. ಕುಮಟಾ, ಜಿ.ಆರ್.ಜಿ. ನಗರ್, ಕಾಗೋಡು ತಿಮ್ಮಪ್ಪ, ಹೆಚ್. ಗಣಪತಿಯಪ್ಪ, ವೆಂಕಟರಾವ್ - ಹೀಗೆ ಅನೇಕರ ಹೆಸರುಗಳನ್ನು ಹೇಳಿ ಸತ್ಯಾಗ್ರಹವನ್ನು ಮೆಲುಕು ಹಾಕುತ್ತಿದ್ದುದ್ದು ಗಮನಿಸಿರುವೆ. ಕಾಗೋಡು ಸತ್ಯಾಗ್ರಹದಲ್ಲಿ ರಾಮದಾಸ್ ಸಕ್ರಿಯವಾಗಿ ಯಾವ ಪಾತ್ರವನ್ನು ವಹಿಸದಿದ್ದರೂ ಅದು ಅವನ ಮೇಲೆ ಖಂಡಿತಾ ಪ್ರಭಾವ ಬೀರಿದೆ.

## ರಾಮದಾಸ್ ಮತ್ತು ಕನ್ನಡ ಚಳವಳಿ

ರಾಮದಾಸ್‌ಗೆ ಎಸ್.ಎಸ್.ಎಲ್.ಸಿ. ಯಲ್ಲಿ ಓದುತ್ತಿರುವಾಗಲೇ ಸಾಗರದಲ್ಲಿ ನಡೆಯುತ್ತಿದ್ದ ಸಣ್ಣ ಪುಟ್ಟ ಚಳವಳಿಗಳಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಆಸಕ್ತಿ ಸಹ ಇತ್ತು. ರಾಮದಾಸ್ ಸಾರ್ವಜನಿಕವಾಗಿ, ಸಾಗರದ ಯಾವ ಚಳವಳಿಯಲ್ಲಿಯೂ ನೇರವಾಗಿ ಭಾಗವಹಿಸಲಿಲ್ಲ. ಆದರೆ ವಿದ್ಯಾರ್ಥಿ ದೆಸೆಯಲ್ಲಿದ್ದ ರಾಮದಾಸ್‌ನ ಚಿತ್ತ ಮಾತ್ರ ಹೋರಾಟ, ಚಳವಳಿಗಳತ್ತ ಇತ್ತು ಅನ್ನುವದು ಬಹು ಸ್ಪಷ್ಟ. ರಾಮದಾಸ್‌ನನ್ನು ಬಲ್ಲ ಕೆಲವು ಆಪ್ತರಿಗೆ ಮಾತ್ರ ಇದು ಗೊತ್ತಿರುವ ಸತ್ಯ. ಆಗ ರಾಜ್ಯ ತುಂಬ ಕನ್ನಡ ಚಳವಳಿಗಳು. ಆ ಚಳವಳಿಯ ಬಹು ಸ್ಪಷ್ಟ ರೂಪರೇಷೆಗಳ ವಿವರ ನನ್ನ ನೆನಪಿನಲ್ಲಿ ಉಳಿದಿಲ್ಲ. ಸಾಗರದಲ್ಲೂ ಕನ್ನಡಕ್ಕಾಗಿ ಒಂದು ಮೆರವಣಿಗೆಯನ್ನು ನಡೆಸಬೇಕೆಂದು ಆಗಿನ ಸಾಗರದ ಹೋರಾಟಮಿತ್ರರಾಗಿದ್ದ ಎಸ್.ಎಸ್. ಕುಮಟಾ ಹಾಗೂ ಜಿ.ಆರ್.ಜಿ. ನಗರ ಅವರ ಆದೇಶ. ಜಿ.ಆರ್.ಜಿ ಅವರು ಸ್ವಾತಂತ್ರ್ಯ ಹೋರಾಟಗಾರರು ಅಲ್ಲದೆ ಕಾಗೋಡು ಸತ್ಯಾಗ್ರಹದಲ್ಲಿ ಬಹು ಮುಖ್ಯಪಾತ್ರ ವಹಿಸಿದವರಲ್ಲಿ ಒಬ್ಬರು. ಕುಮಟಾ ತುಂಬಾ ಒಳ್ಳೆಯ ಸಂಘಟಕ, ವಾಗ್ಮಿ, ಕಾಗೋಡು ಸತ್ಯಾಗ್ರಹದ ನಾಯಕರಲ್ಲಿ ಒಬ್ಬರು. ಇವರ ಸಂಗಡ ಹೋರಾಟ ಹಾಗೂ ಚಳವಳಿಯಲ್ಲಿ ಭಾಗವಹಿಸುತ್ತಿದ್ದ ಮತ್ತೊಬ್ಬ ನಾಯಕ ಬಿ.ಎಸ್. ಚಂದ್ರಶೇಖರ - ಇವರೆಲ್ಲಾ ಸೇರಿಕೊಂಡು ಕನ್ನಡ ಮೆರವಣಿಗೆಯನ್ನು ಏರ್ಪಡಿಸಿದ್ದರು. ನಮ್ಮ ಈ ಕನ್ನಡ ಮೆರವಣಿಗೆಯ ರೂಪರೇಷೆಗಳು ತಯಾರಾಗಿದ್ದು ಎಂದಿನಂತೆ ಸಾಗರ ಹೋಟೆಲ್‌ನಲ್ಲಿ. ಆಗ ಸಾಗರ ಹೋಟೆಲ್ ಸಮಾಜವಾದಿಗಳ ಒಂದು ಕೇಂದ್ರವಾಗಿತ್ತು. ಭಾನುವಾರದ ಕನ್ನಡ ಮೆರವಣಿಗೆಗಾಗಿ ನಮ್ಮ ಎಂದಿನ ಕ್ರಿಕೆಟ್ ಮ್ಯಾಚನ್ನು ಕ್ಯಾಪ್ಟನ್ ಸುಧಾಕರ ಪಂಡಿತ್ ಶನಿವಾರಕ್ಕೆ ಹಾಕಿಕೊಂಡು ಭಾನುವಾರ ಎಲ್ಲರೂ ಮೆರವಣಿಗೆಗೆ ಬರುವಂತೆ ಆದೇಶ ನೀಡಿದ್ದರು. ಮೆರವಣಿಗೆಗೆ ಸುಮಾರು 50 ಜನರ ನಿರೀಕ್ಷೆಯಿಂದ 25 ತಟ್ಟಿ, ಸ್ಲೋಗನ್ ಬ್ಯಾನರ್‌ಗಳು ಸಿದ್ಧವಾಗಿತ್ತು. ಮೆರವಣಿಗೆಯ ಲಾಂಚಿಂಗ್ ಪಾಯಿಂಟ್ ಸಾಗರ ಹೋಟೆಲ್ ಸರ್ಕಲ್.

ಭಾನುವಾರ ಸಂಜೆ 4ರ ಹೊತ್ತಿಗೆ ರಾಮದಾಸ್ ನನ್ನನ್ನು ಕನ್ನಡ ಮೆರವಣಿಗೆಗೆ ಕರೆದುಕೊಂಡು ಹೋದ. ನಾವು ಅಲ್ಲಿಗೆ ಹೋದಾಗ ಕುಮಟಾ, ಜಿ.ಆರ್.ಜಿ. ನಗರ, ಸುಧಾಕರ ಪಂಡಿತ್, ಶಿವಮೊಗ್ಗದ ಪಿ. ಪುಟ್ಟಯ್ಯ ಮತ್ತು ಚಿಂತಾಮಣಿ, ಪೇಪರ್ ವೆಂಕಟರಾಪ್, ಕೆ.ಎಚ್.ಎಸ್. ಸಾಗರ, ಕಮಲಾಕ್ಷ ಪಂಡಿತ್, ಬಿ.ಎಸ್. ಚಂದ್ರಶೇಖರ್ ಹೀಗೆ ಕೆಲವರು ಬಂದಿದ್ದರು. ಸಂಜೆ 5.30 ಆದರೂ ಸತ್ಯಾಗ್ರಹಿಗಳ ಸಂಖ್ಯೆ 16ಕ್ಕೆ ಏರಿಲ್ಲ. ಮೆರವಣಿಗೆ ಹೊರಡುವಂತಾಯಿತು. ನಾನೂ ಸೇರಿದಂತೆ ಒಂದಿಬ್ಬರು ಗುಸುಗುಸು ಪ್ರಾರಂಭಿಸಿದೆವು. 'ಜನವೇ ಇಲ್ಲ, ಹೇಗೆ ಹೋಗೋದು' ಅಂತ. ನಮ್ಮ ಹತ್ತಿರವೇ ಇದ್ದ ಬಿ.ಎಸ್. ಒಮ್ಮೆಲೆ "ಚಳವಳಿ ಮೆರವಣಿಗೆ ಅಂದರೆ ಮೈಸೂರು ದಸರಾ ಅಲ್ಲ. ನಾಲ್ಕೈದು ಜನರಿದ್ದರೂ ಸಾಕು" ಅಂತ ಹೇಳಿದಾಗ ನಾವೆಲ್ಲಾ ಗಪ್‌ಚಿಪ್. ನನಗೂ ಒಂದು ರೀತಿಯ ಕಸಿವಿಸಿ, ಭಯ. ಮನೆಯಲ್ಲಿ ಹೇಳಿರಲಿಲ್ಲ. ಹೇಳಿದರೂ ಬಿಡುತ್ತಿರಲಿಲ್ಲ. ರಾಮದಾಸ್ ಬಹಳ ಧೈರ್ಯ, ಸಂತೋಷದಿಂದಲೇ ಬಂದಿದ್ದ. ಒಬ್ಬೊಬ್ಬರು ಎರಡೆರಡು ತಟ್ಟಿ ಬ್ಯಾನರ್‌ಗಳನ್ನು ಹಿಡಿದುಕೊಳ್ಳಬೇಕಾಯಿತು. ಮೆರವಣಿಗೆ ಹೊರಟಿತು, ಕನ್ನಡದ ಘೋಷಣೆಗಳೊಡನೆ ರಾಜಬೀದಿಯಲ್ಲಿ ಮೆರವಣಿಗೆ. ಮೆರವಣಿಗೆ ಮುಗಿಯುವವರೆಗೂ ಸಂಖ್ಯೆ 17ಕ್ಕೆ ಏರಲಿಲ್ಲ. ಕೊನೆಯಲ್ಲಿ ಸಾಗರ ಹೋಟೆಲ್ ಸರ್ಕಲ್‌ನಲ್ಲಿ ಕುಮಟಾ, ಜಿ.ಆರ್.ಜಿ., ಬಿ.ಎಸ್. ಅವರ ಭಾಷಣ. ಸಂಜೆ ಮನೆಗೆ ಹೋದ ಮೇಲೆ ನನಗೆ ನಮ್ಮ ತಂದೆಯಿಂದ ಸರಿಯಾದ ಪೂಜೆಯಾಯಿತು. ನಮ್ಮ ಕೇರಿಯ ಹಿರಿಯರು, ಪುರಸಭಾ ಸದಸ್ಯರೂ ಆಗಿದ್ದ ರಶೀದ್ ಸಾಹೇಬರು ನಮ್ಮ ತಂದೆಯವರ ಹತ್ತಿರ "ನಿಮ್ಮ ಮಗ ಕೂಗಾಡುತ್ತಾ ರಸ್ತೆ ಮೆರವಣಿಗೆಯಲ್ಲಿ ಹೋಗ್ತಾ ಇದ್ದ" ಅನ್ನುವ ಸಂದೇಶ ತಲುಪಿಸಿದ್ದರು. ಪಾಪ, ಅವರು ಒಳ್ಳೆಯವರು ನಮ್ಮ ಕುಟುಂಬದ ಅಭಿಮಾನಿಗಳು ಸಹ. ಯಾವಾಗಲಾದರೊಮ್ಮೆ ನನಗೆ ಈ ರೀತಿಯ ಪೂಜೆಯಾದರೆ ರಾಮದಾಸ್‌ನ ಸಹಾನುಭೂತಿ ಇರ್ತಾ ಇತ್ತು. ಆದರೆ ಈ ಸಾರಿ ಮಾತ್ರ ನನ್ನನ್ನು ಪ್ರೀತಿಯಿಂದ ನೋಡಿ ನಕ್ಕಿದ್ದು ನನಗೆ ಮುಖ್ಯವಾಗಿತ್ತು. ರಾಮದಾಸ್‌ನ ಕನ್ನಡ ಚಳವಳಿ ನನ್ನ ಪಾಲಿಗೆ ಕನ್ನಡಕ್ಕಾಗಿ ಏಟು ತಿಂದ ಮೊದಲ ಕಾರ್ಯಕ್ರಮ. ಆಗಿನ ಯುವ ನಾಯಕರ ಸಂಗಡ ರಾಮದಾಸ್ ನಡೆಯುತ್ತಿದ್ದ ರೀತಿ ಸ್ಲೋಗನ್ ಕೂಗುತ್ತಿದ್ದ ಧ್ವನಿ ಮಾತ್ರ ನನ್ನ ಮನದಲ್ಲಿ ಇನ್ನೂ ಇದೆ. ಮೊನ್ನೆ, ಜುಲೈ 1ರಂದು ಮೈಸೂರಿನಲ್ಲಿ ನಡೆದ ರಾಮದಾಸ್ ನೆನಪಿನ ಕಾರ್ಯಕ್ರಮದ ಸಂದರ್ಭದಲ್ಲಿ ನಮ್ಮ ಈ ಕನ್ನಡ ಚಳವಳಿ ಮೆರವಣಿಗೆ ದೃಶ್ಯದ ಪ್ರಮುಖ ಪಾತ್ರಧಾರಿ ಶಿವಮೊಗ್ಗದ ಸಮಾಜವಾದಿ ಪುಟ್ಟಯ್ಯ ಈ ಘಟನೆ ನೆನಪಿಸಿದಾಗ ನೋವಿನ ನಡುವೆಯೂ ನಗಲಾರಂಭಿಸಿದೆವು.

## ಸಿಟ್ಟುಗಾರ ರಾಮದಾಸ್

ರಾಮದಾಸ್ ಬಹು ಸಿಟ್ಟುಗಾರ. ಆದರೆ ಆ ಸಿಟ್ಟಿಗೊಂದು ಅರ್ಥವಿತ್ತು. ಅನೇಕ ಸಲ ಮಂಜಕ್ಕನ ಸಂಗಡ ಸಿಟ್ಟು ಮಾಡಿಕೊಂಡು ಮರಹತ್ತಿ ಕೂತಿದ್ದನ್ನು ನೋಡಿದ್ದೇನೆ. ಮಂಜಕ್ಕ

ಸಹ ಅಷ್ಟೆ ರಾಮದಾಸ್ ಸಿಟ್ಟು ಮಾಡದ ಹಾಗೆ ಸಾಕಿದರು. ಚಿಕ್ಕಂದಿನಿಂದಲೇ ರಾಮದಾಸ್‌ನದು ಒಂದು ರೀತಿಯ ಜವಾಬ್ದಾರಿಯ ಸಿಟ್ಟು. ಆಟದಲ್ಲಿ ಯಾರಾದರೂ ಭಂಡ ಆಡಿದಾಗ, ಯಾರಾದರೂ ಸುಳ್ಳು ಹೇಳಿ ಮೋಸ ಮಾಡಲು ಹೋದರೆ ರಾಮದಾಸ್‌ನ ಸಿಟ್ಟು ನೆತ್ತಿಗೇರುತ್ತಿತ್ತು. ಆದರೆ ರಾಮದಾಸ್‌ನ ಪ್ರೀತಿ ಮತ್ತು ಸ್ನೇಹ ಅಷ್ಟೇ ಸೊಗಸು. ಒಮ್ಮೆ ರಸ್ತೆಯಲ್ಲಿ ಚಿನ್ನಿದಾಂಡು ಆಡುತ್ತಿರುವಾಗ ದಾರಿಹೋಕನೊಬ್ಬನ ಹಣೆಗೆ ಚಿನ್ನಿ ತಾಗಿ ಹಣೆಯ ಮೇಲೆ ಕಾಣುವಂತ ಒಂದು ಬೋಂಡವೆದ್ದ ಸೀನ್ ತುಂಬಾ ರಗಳೆಯಾಯಿತು. ಪಾಪ, ಅದನ್ನು ಹೊಡೆದವನು ತುಂಬ ಒಳ್ಳೆಯ ಹುಡುಗ. ಆ 'ಬೋಂಡಾ' ನೋಡಿ ಹುಡುಗ ಹೆದರಿ ಹೋಗಿದ್ದ. ನಾವೆಲ್ಲಾ ಕಂಗಾಲಾಗಿ ಅಪರಾಧಿಗಳ ಹಾಗೆ ನಿಂತಿದ್ದೀವಿ. ನಾವ್ಯಾರು ಅಲ್ಲಿಂದ ಕದಲದಂತೆ ಹೇಳಿ ರಾಮದಾಸ್ ಒದ್ದೆಬಟ್ಟೆಯಿಂದ ಆ ವ್ಯಕ್ತಿಯ ಹಣೆಯ ಮೇಲಿಟ್ಟು ಆರೈಕೆ ಮಾಡಲು ತೊಡಗಿದ್ದಾಗ ಯಾರೋ ನಾಲ್ಕೈದು ಜನ ದೊಡ್ಡವರು ಸೇರಿ ನಮಗೆಲ್ಲಾ ಬೈಯ್ಯಲಾರಂಭಿಸಿದರು. ರಾಮದಾಸ್ ಸುಮ್ಮನೆ ಇದ್ದ. ಅದರಲ್ಲಿ ಒಬ್ಬ ಮಾತ್ರ ಹುಡುಗರ ಅಪ್ಪ, ಅಮ್ಮಂದಿರ ಮೇಲೆ ತುಂಬ ಕೆಟ್ಟದಾಗಿ ಬೈಯ್ಯಲಾರಂಭಿಸಿದಾಗ ರಾಮದಾಸ್ ಅವನ ಮೇಲೆ ಸಿಟ್ಟುಗೊಂಡು ಅವನ ಶರ್ಟಿಗೆ ಕೈಹಾಕಿ "ನೋಡ್ರಿ, ನಮಗೆ ಬೈಯ್ಯರಿ, ಬೇಕಾದರೆ ಹೊಡಿರಿ, ನಮ್ಮ ಅಪ್ಪ-ಅಮ್ಮನ ಬಗ್ಗೆ ಏನಾದರೂ ಹೇಳಿದರೆ ಹುಷಾರು" ಅಂತ ಗುಡುಗಿದ. ಈ ಮಾತುಗಳು ನಮಗೆಲ್ಲಾ ಗೊತ್ತಿದ್ದರೂ ಹೇಳುವ ಧೈರ್ಯವಿರಲಿಲ್ಲ. ಪಾಪ, ಏಟು ತಿಂದವನು ಒಳ್ಳೆಯವನು ಹೋಗ್ಲಿಬಿಡ್ರಪ್ಪ, ಮೈದಾನಕ್ಕೆ ಹೋಗಿ ಆಡಿ ಅಂತ ಹೇಳಿ ಹೋದ. ರಾಮದಾಸ್‌ನ ಧೈರ್ಯ ಆ ರೀತಿಯದು. ಹೀಗಾಗಿ ರಾಮದಾಸ್‌ನ ಬಗ್ಗೆ ನಮಗೆಲ್ಲರಿಗೂ ತುಂಬ ಅಭಿಮಾನ. ನಮಗೆ ಅವನ ಸಿಟ್ಟು ಚೆನ್ನಾಗಿ ಗೊತ್ತಿತ್ತು. ಮೈಸೂರಿಗೆ ಹೋದ ಮೇಲೆ ಈ ಸಿಟ್ಟಿನ ಸಾಂದ್ರತೆ ಸಹಜವಾಗಿ ಜಾಸ್ತಿಯಾಯಿತು. ಬದುಕಿನುದ್ದಕ್ಕೂ ರಾಮದಾಸ್‌ನ ಸಿಟ್ಟುಗಳಿಗೆಲ್ಲಾ ಒಂದು ನೆಲೆಯಿದೆ, ಇತಿಹಾಸವಿದೆ. ಸಿಟ್ಟು ಬಂದಾಗ ರಾಮದಾಸ್ ಜ್ವಾಲಾಮುಖಿ. ಇದಕ್ಕೆ ಹತ್ತಾರು ಅಲ್ಲ, ನೂರಾರು ಉದಾಹರಣೆಗಳಿವೆ. ದೇವರಾಜ ಅರಸುರವರು ನಮ್ಮ ಮುಖ್ಯಮಂತ್ರಿಗಳಾದ ಕಾಲದಲ್ಲಿಯೇ ಡಿ.ವಿ. ಅರಸು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿದ್ದರು. ಡಿ.ವಿ. ಅರಸು ತಮ್ಮ ಕಛೇರಿ ಮತ್ತು ಬಂಗಲೆಯನ್ನು ಸುಂದರಗೊಳಿಸುವುದರಲ್ಲಿ ತಲ್ಲೀನರಾಗಿದ್ದರು. ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಯ ಹಣವನ್ನು ಸಹ ಲೆಕ್ಕಿಸದೆ ಅದನ್ನು ನೀರಿನಂತೆ ಖರ್ಚು ಮಾಡತೊಡಗಿದ್ದರು. ವಿದ್ಯಾರ್ಥಿಗಳು, ಅಧ್ಯಾಪಕರಲ್ಲಿ ಕೆಲವರು ಬಹಳ ಪ್ರಾಮಾಣಿಕವಾಗಿ ವಿರೋಧಿಸುತ್ತಲೇ ಬಂದರು. ಅರಸು ಅವರು ಬಗ್ಗಲೇ ಇಲ್ಲ. ಆಗ ರಾಮದಾಸ್ ಯುವರಾಜ ಕಾಲೇಜಿನಲ್ಲಿ ಅಧ್ಯಾಪಕ. ಈ ಬಗ್ಗೆ ರಾಮದಾಸ್‌ನ ಮನಸ್ಸು ಸಹ ಕುಲುಮೆಯಾಗಿತ್ತು. ಕುಲಸಚಿವರುಗಳ ವಿರುದ್ಧ ಗಂಗೋತ್ರಿಯಲ್ಲಿ ಎದ್ದ ಕಿಡಿ ತಕ್ಷಣ ಮೈಸೂರಿನ ಕಾಲೇಜುಗಳಿಗೆಲ್ಲಾ ಹರಡಿ ಒಮ್ಮೆಲೆ ಬೃಹತ್ ಮೆರವಣಿಗೆಯನ್ನು ನಡೆಸಿದರು. ಪ್ರತಿಭಟನೆ, ಧಿಕ್ಕಾರಗಳೆಲ್ಲವೂ ಒಮ್ಮೆಲೆ ಹೊರಬಂದವು. ಮೆರವಣಿಗೆ ಯುವರಾಜ ಕಾಲೇಜಿನ ಹತ್ತಿರ ಬಂದಾಗ ವಿದ್ಯಾರ್ಥಿಗಳನ್ನು ನೋಡಿ ಒಮ್ಮೆಲೆ ರಾಮದಾಸ್ ಅವರ ಸಂಗಡ ಸೇರಿಕೊಂಡು ಮೆರವಣಿಗೆಯನ್ನು ಶಾಂತಿಯುತವಾಗಿ ಸಾಗಿಸಲು ಪ್ರಯತ್ನಿಸಿದ, ಹುಡುಗರ ಹಾಗೂ

ಈ ಜೆಂಕಿ ಉಂಡೆಯು ಪ್ರತಿಭಟನೆ ಮೇಲಕ್ಕೇರಿದಂತೆ ಪೊಲೀಸರೂ ಸಹ ಅದನ್ನು ತಡೆಯಲಾಗಲಿಲ್ಲ. ಆಗ ಎಸ್.ಪಿ.ಯವರು ಲಾಠಿ ಚಾರ್ಜಿಗೆ ಅಪ್ಪಣೆ ಕೊಟ್ಟರು. ಲಾಠಿ ಚಾರ್ಜ್ ಪ್ರಾರಂಭವಾದಾಗ ವಿದ್ಯಾರ್ಥಿಗಳು ಕಂಗೆಟ್ಟರು, ಚದುರಿದರು. ಜೆಂಕಿಯಾದ ರಾಮದಾಸ್ ಒಮ್ಮೆಲೆ ಎಸ್.ಪಿ. ಅವರ ಕುತ್ತಿಗೆ ಪಟ್ಟಿ ಹಿಡಿದು "ಏನೋ ಎಸ್ಪಿ, ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜು ಮಾಡಸ್ತೀಯಾ. ಅವರ್ಯಾರು ಹಿಂಸೆ ಮಾಡ್ತಿಲ್ಲ, ಹಿಂಸೆ ಮಾಡ್ತಿರುವವರು ನೀವು, ಪೊಲೀಸರು" ಎಂದಾಗ ಆ ಗುಡುಗನ್ನು ಇಡೀ ಮೈಸೂರು ಕೇಳಿಸಿಕೊಂಡಿದೆ. ನಂತರ ಎಸ್.ಪಿ. ಮತ್ತು ಪೊಲೀಸರು ರಾಮದಾಸನ ಸಿಟ್ಟಿನ ಜೆಂಕಿಗೆ ಏನೂ ಮಾಡಲಾಗದೆ ಮೆರವಣಿಗೆಯನ್ನು ಶಾಂತಿಯುತವಾಗಿ ಎಸ್ಪಿ ಮತ್ತು ರಾಮದಾಸ್ ನೇತೃತ್ವದಲ್ಲಿಯೇ ಮುಂದುವರೆಸಿದರು. ಆಗಿನ ಮೈಸೂರಿನ ವಿದ್ಯಾರ್ಥಿಗಳಿಗೆಲ್ಲಾ ಇದೊಂದು ಮರೆಯಲಾರದ ಘಟನೆ.

ಅನೇಕ ಸಲ ರಾಮದಾಸ್‌ನ ಅತಿಯಾದ ಸಿಟ್ಟಿನಿಂದ ಗೆಳೆಯರು ಬೇಸತ್ತು ದೂರಹೋಗಿದ್ದುಂಟು. ರಾಮದಾಸ್‌ನ ಸಿಟ್ಟನ್ನು ಇತರರು ದುರುಪಯೋಗಮಾಡಿದ್ದೂ ಉಂಟು. ಆದರೂ ಇಲ್ಲೆಲ್ಲಿಯೋ ರಾಮದಾಸ್‌ನ ಸ್ವಾರ್ಥವಿರಲಿಲ್ಲ. ಒಮ್ಮೊಮ್ಮೆ ಸಮಚಿತ್ತ ಬೆಳಕಿನ ಏರುಪೇರು ಆಗಿಲ್ಲವೆಂತಲ್ಲ. ಇವೆಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡೇ ರಾಮದಾಸ್‌ನ ಹೋರಾಟ ಬದುಕನ್ನು ಕೂಡಿಕಳೆದ ಮೇಲೆ ಉಳಿಯುವ ಮೊತ್ತ ಬಹು ವಿಶೇಷ, ಬಹು ಅಪರೂಪ. ರಾಮದಾಸ್‌ನ ಈ ಜೆಂಕಿ ಯಾರನ್ನೂ ಸುಡಲಿಲ್ಲ, ಯಾವ ಸಂದರ್ಭವನ್ನೂ ಹಿಂಸೆಗೆ ತಿರುಗಿಸಲಿಲ್ಲ. ರಾಮದಾಸ್‌ನ ಜೆಂಕಿ ಪ್ರದರ್ಶನವನ್ನು ನಾನು ಹೆಚ್ಚಾಗಿ ನೋಡಲಿಲ್ಲ. ಎಲ್ಲವನ್ನೂ ಪತ್ರಿಕೆಯಲ್ಲಿಯೇ ಓದಿದ್ದು, ಕೇಳಿದ್ದು. ಒಬ್ಬ ವ್ಯಕ್ತಿಯ ಮೇಲೆ ಸಿಟ್ಟು ಮಾಡಿದರೂ ಆ ವ್ಯಕ್ತಿಯ ವ್ಯಕ್ತಿತ್ವಕ್ಕೆ ಬೆಲೆ ಕೊಡುವುದನ್ನು ನಾನು ಅನೇಕ ಸಲ ನೋಡಿದ್ದೆ. ಯು.ಆರ್. ಅನಂತಮೂರ್ತಿ ಮತ್ತು ರಾಮದಾಸ್‌ಗೂ ಘರ್ಷಣೆ ಆಗುತ್ತಿದ್ದ ಸಮಯದಲ್ಲಿ ನಾನು ಒಂದೆರಡು ದಿನ ರಾಮದಾಸ್ ಮನೆಯಲ್ಲಿದ್ದೆ. ಬೆಳಗ್ಗೆ ತಿಂಡಿಯ ಸಮಯದಲ್ಲಿ ಪೇಪರ್ ನೋಡ್ತಾ, 'ಅಲ್ಲಾ ರಾಮದಾಸ್, ಇಷ್ಟೆಲ್ಲಾ ಯಾಕೆ ಮಾಡ್ತ ಇದ್ದೀಯಾ ?' ಅಂದಾಗ, ತಕ್ಷಣ ಮಂಜಕ್ಕ 'ವಿಲ್ಲಿ, ನೀನಾದರೂ ಸ್ವಲ್ಪ ಹೇಳು ಅವನಿಗೆ' ಅಂತ ಹೇಳಿದೊಡನೆ ರಾಮದಾಸ್ ಘಟನೆಯ ಸ್ಪಷ್ಟ ಚಿತ್ರ ನನ್ನ ಮುಂದಿಟ್ಟ. 'ನೋಡು ಅನಂತಮೂರ್ತಿ ಅವರು ತುಂಬಾ ದೊಡ್ಡ ವ್ಯಕ್ತಿ. ಅವರ ಬಗ್ಗೆ ನನಗೆ ತುಂಬಾ ಗೌರವವಿದೆ. ದೇವನೂರು ಮಹಾದೇವ ಸೇರಿದಂತೆ ಅನೇಕ ದಲಿತ ಬರಹಗಾರರಿಗೆ ಅನಂತಮೂರ್ತಿ ಅವರು ಕೊಟ್ಟಷ್ಟು ಬೆಂಬಲ, ತೋರಿಸಿದ ಪ್ರೀತಿ, ಮತ್ಯಾವ ಮೇಲ್ವರ್ಗದ ಸಾಹಿತಿಯೂ ಕೊಟ್ಟಿಲ್ಲ. ನಾನದನ್ನು ಮರೆಯೊಲ್ಲ, ಆದರೆ... ಅಂತ ಹೇಳುವಾಗ ಮಂಜಕ್ಕ ನಿರ್ಮಲಾ ಮತ್ತು ನಾನು ಸುಮ್ಮನೆ ಕೇಳ್ತಾ ಇದ್ವಿ.'

ರಾಮದಾಸ್ ಮತ್ತು ಪ್ರಸನ್ನರವರ ಮಧ್ಯೆ ಕೆಲವು ಹಳೆಯ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದವು ಅನಿಸುತ್ತೆ. ಕಳೆದ ಸಾರಿ ರಾಮದಾಸ್ ಸಾಗರಕ್ಕೆ ಬಂದಾಗ ಪ್ರಸನ್ನರ ಚರಕ ನೋಡಲು ಹೊರಟೆವು. 'ಚರಕ'ವನ್ನು ಪೂರ್ತಿಯಾಗಿ ನೋಡಿದ ಮೇಲೆ ರಾಮದಾಸ್ ಬಹು ಸಂತೋಷದಿಂದ "ನೋಡು ಪ್ರಸನ್ನ, ಇಲ್ಲಿವರೆಗೆ ನಾನು ನಿನ್ನ ಮೇಲೆ ಮಾಡಿರುವ

ಎಲ್ಲಾ ಚಾರ್ಜುಗಳನ್ನು ವಾಪಸ್ಸು ತಗೊಂಡಿದ್ದೇನೆ. ತುಂಬಾ ಒಳ್ಳೆಯ ಕೆಲಸ ಮಾಡಿದ್ದಿ. Go ahead" ಅಂತ ಹೇಳಿದಾಗ ರಾಮದಾಸ್‌ನ ಕಣ್ಣುಗಳಲ್ಲಿ ಹೊಳವುಗಳು ಇದ್ದವು. ನಾವು ಮನೆಗೆ ವಾಪಸ್ಸು ಬರ್ತಾ ಇದ್ದಾಗ. "ನೋಡು ವಿಲ್ಲಿ, ನಾವೆಲ್ಲಾ ಬರೀ ಭಾಷಣ ಮಾಡ್ಕೊಂಡು ಓಡಾಡ್ತ ಬಂದ್ವಿ, ಈ ಮನುಷ್ಯ ಕೆಲಸ ಮಾಡಿ ತೋರಿಸಿದ" ಅಂತ ಹೇಳಿದ್ದು ಸಹ ರಾಮದಾಸ್.

ನನ್ನ ಮಿತ್ರ ಆಗಿನ ಪುಟ್ಟ ಚಾರ್ವಾಕ, ಪುಟ್ಟ ಹೋರಾಟಗಾರ, ನಿರ್ಭಿಡೆಯ ಹುಡುಗ, ಬಲಹೀನರ ಬಲ ರಾಮದಾಸ್‌ನೊಡನೆ ಕಳೆದ ನನ್ನ ಬಾಲ್ಯದ ದಿನಗಳು ನನ್ನ ಬಾಳಿನ ಬುತ್ತಿಯ ಅಗಳುಗಳು. ಅದೊಂದು ಕರಗದ ಕಲ್ಲುಸಕ್ಕರೆ. ಈ ಸಾರಿ ನನ್ನ ಪುಸ್ತಕವೊಂದರ ಬಿಡುಗಡೆಗೆ ಸಾಗರಕ್ಕೆ ಬರಲು ಒಪ್ಪಿದ್ದ. ರಾಮದಾಸ್ ತೇಜಸ್ವಿಯವರ ಸಾವಿನಿಂದ ಬರಲು ಆಗಲಿಲ್ಲ. ಆದರೆ ತಿಂಗಳೊಳಗೆ ರಾಮದಾಸ್‌ನನ್ನು ಈ ರೀತಿಯಲ್ಲಿ ನೋಡಲು ನಾನೇ ಹೋಗಬೇಕಾಯಿತೆನ್ನುವುದು ತೀರಾ ನೋವಿನ ಗಳಿಗೆ. ಅದು ನನ್ನನ್ನು ತೀರಾ ಅಲ್ಲಾಡಿಸಿದೆ. ರಾಮದಾಸ್‌ನ ಅಂತ್ಯದರ್ಶನದ ಸಂದರ್ಭವನ್ನು ಕೇಳಿ ನೋಡಿ ಮೂಕನಾದೆ. ಸಾಮಾನ್ಯವಾಗಿ ತೀರಿಕೊಂಡವರನ್ನು ನೋಡಿ ಬರುವುದು ಸಾಮಾನ್ಯ ಸಂಗತಿ. ಆದರೆ ಇದು ಮಾತ್ರ ಎಲ್ಲೆ ಮೀರಿತ್ತು. ಕಂಡರಿಯದ ವ್ಯಕ್ತಿಗಳು ಮನಮಿಡಿದದ್ದು, ಅದು ರಾಮದಾಸ್‌ನ ವ್ಯಕ್ತಿತ್ವ. ಸಾಗರದಿಂದ ತಕ್ಷಣ ಹೊರಟ ನನಗೆ ಅಂತ್ಯದರ್ಶನ ಸಿಗುತ್ತೋ ಇಲ್ಲವೋ ಎಂಬ ಆತಂಕದಲ್ಲಿದ್ದೆ. ಮೈಸೂರು ತಲುಪಿದಾಗ ಸಮಯ ಆಗಲೇ ಆಗಿತ್ತು. ಆಟೋ ಹತ್ತಿ ಕುವೆಂಪು ನಗರಕ್ಕೆ ಹೊರಟೆ. ಮಧ್ಯದಲ್ಲಿ ನನ್ನ ಆತಂಕಗಳನ್ನು ಗಮನಿಸಿದ ಆಟೋ ಡ್ರೈವರ್ ಯಾಕೆ ಸಾರ್, ಅಲ್ಲಿ ನೀವು ಎಲ್ಲಿಗೆ ಹೋಗಬೇಕು' ಅಂತ ಕೇಳಿದಾಗ ವಿಷಯ ತಿಳಿಸಿದೆ. 'ಕಷ್ಟ ಸಾರ್, ಈಗಾಗಲೆ ಬಾಡಿ ಅಲ್ಲಿಂದ ಹೋಗಿರಬೇಕು' ಅಂತ ನೇರವಾಗಿ ಚಿತಾಗಾರಕ್ಕೆ ತಿರುಗಿಸಿದ. 'ರಾಮದಾಸ್, ನಿಮಗೇನು ಗೊತ್ತೇನ್ರಿ' ಅಂತ ಕೇಳಿದಾಗ - 'ಅಷ್ಟು ದೊಡ್ಡ ಮನುಷ್ಯನ ಪರಿಚಯ ನಮಗೆಲ್ಲಿ ಸಾರ್ ! ನಮಗೆ ಕಷ್ಟಗಳು ಬಂದಾಗ ಅವರೇ ನಮ್ಮ ಹತ್ರ ಬರ್ತಾಯಿದ್ರು. ಈಗ ನಾವೆಲ್ಲಿಗೆ ಹೋಗಬೇಕು ಅಂತ ತಿಳಿಯುತ್ತಿಲ್ಲ. ನಿಮ್ಮ ದೆಸೆಯಿಂದ ನನಗೂ ಅವರ ಬಾಡಿ ನೋಡಲು ಅವಕಾಶ ಆಯ್ತು' ಅಂತ ಹೇಳುವಾಗ ಡ್ರೈವರ್ ಕಣ್ಣುಗಳು ಮಾತನಾಡುತ್ತಿದ್ದವು.

ಬಹುಶಃ, ಆ ಗಳಿಗೆಯಲ್ಲಿ ಇದ್ದ ಬಾಲ್ಯದ ಸ್ನೇಹಿತರೆಂದರೆ ಶಿವಮೊಗ್ಗದ ಸಮಾಜವಾದಿ ಗೆಳೆಯ ಪುಟ್ಟಯ್ಯ ಮತ್ತು ನಾನು. ನನ್ನ ಮೊದಲ ಗೆಳೆಯನನ್ನು ಕಟ್ಟಕಡೆಯಲ್ಲಿ ನೋಡಿದ್ದು ಸಹ ನಾನೇ. ಆ ಜನ ಸಮೂಹದಲ್ಲಿ ನುಸುಳಿಕೊಂಡು ಹೋಗಿ ನೋಡಿದಾಗ ರಾಮದಾಸ್ ನನ್ನನ್ನೇ ಕಾಯುತ್ತಿದ್ದ ಅಂತ ಅನಿಸಿತು. ತಕ್ಷಣವೇ ರಾಮದಾಸ್ ಚಿತಾಗಾರಕ್ಕೆ ಪ್ರವೇಶ ಮಾಡಿದ. ಅದೇನೋ ಒಮ್ಮೆಲೆ ಹಗುರನಾದೆ. ರಾಮದಾಸ್‌ನ ಹೋರಾಟದ ಸಿಲಬಸ್ ಪೂರ್ತಿ ಕವರ್ ಆಗಿರಲಿಲ್ಲ. ಅಷ್ಟರಲ್ಲಿಯೇ ಹೊರಟುಹೋದ. ಕವಿ, ಸಾಹಿತಿ, ವಿಮರ್ಶಕ, ಚಿಂತಕರು, ರಾಮದಾಸ್‌ನಿಗೆ ಪಾಠ ಹೇಳಿದ ಮೇಷ್ಟ್ರು, ಪಾಠ ಕೇಳಿಸಿಕೊಂಡ ವಿದ್ಯಾರ್ಥಿಗಳು, ಘೋಷಣೆಗಳಿಗೆ ಗುಡುಗಿದ ಪ್ರತಿಧ್ವನಿಗಳು, ಮಂತ್ರಿಗಳು ಶಾಸಕರು ಅಧಿಕಾರಿಗಳು, ಪರ-ವಿರೋಧ ಬರೆದ ಪತ್ರಿಕೆ, ಮಾಧ್ಯಮದವರು, ಕೋಮುಗಲಭೆಗಳಲ್ಲಿ ತತ್ತರಿಸಿ ಹೋದವರು, ದಲಿತಮಿತ್ರರು ಧರಣಿ ಜಾಥಾ

ಮೆರವಣಿಗೆಯಲ್ಲಿ ಓಡಾಡಿದ ಕೈಕಾಲುಗಳು, ಕೇವಲ ದೂರದಿಂದಲೇ ನೋಡಿ, ಕೇಳಿದ್ದ ಅಸದೃಶ್ಯ ಅಭಿಮಾನಿಗಳು - ಅಬ್ಬ, ರಾಮದಾಸ್, ನೀನು ಎಷ್ಟೊಂದು ಶ್ರೀಮಂತ !

ಕೊನೆಯ ಒಂದೆರಡು ವರ್ಷ ರಾಮದಾಸ್‌ನಿಗೆ ಸಿಟ್ಟು ಪದೆ ಪದೆ ಬರ್‍ತಾಯಿತ್ತು ಅಂತ ಮೈಸೂರಿನ ಮಿತ್ರರು ಹೇಳ್ತಾಯಿದ್ರು. ರಾಮದಾಸ್ ಬಹಳ ಜಗಳಗಂಟರಾಗುತ್ತಿದ್ದಾರೆ ಎಂಬ ಮಾತೂ ಇತ್ತು. ರಾಮದಾಸ್‌ನ ಪ್ರೀತಿಯ ಅಂತಃಕರಣ, ಸಿಟ್ಟಿನ ಪ್ರಖರತೆ ಮಂಜಕ್ಕ, ನಿರ್ಮಲಾ, ಸ್ನೇಹ ಹಾಗೂ ಎಲ್ಲಾ ಆಪ್ತರಿಗೂ ಚೆನ್ನಾಗಿ ಗೊತ್ತಿರುವ ಸಂಗತಿ. ರಾಮದಾಸ್ ದೀಪ, ಬೆಂಕಿ, ಪಂಜು ಎಲ್ಲವೂ ಹೌದು. ರಾಮದಾಸ್‌ನನ್ನು ಕುರಿತು ಡಿ.ಎಸ್. ನಾಗಭೂಷಣ್ ಬರೆಯುವಾಗ "... ತಮ್ಮ ವಿದ್ಯಾಗುರು ಜಿ.ಎಸ್.ಎಸ್. ಅವರ ಅಭಿನಂದನ ಗ್ರಂಥಕ್ಕೆ ಬರೆದ ಲೇಖನವೊಂದರಲ್ಲಿ ರಾಮದಾಸ್, ತನ್ನ ಗುರುಗಳು ಕತ್ತಲೆಯಲ್ಲಿ ದೀಪ ಹಿಡಿದು ಹೊರಟಿದ್ದಾರೆ, ನಾನು ಪಂಜು ಹಿಡಿದು ಹೊರಟಿರುವುದಾಗಿ ತನ್ನನ್ನು ತಾನೇ ಎಣಿಸಿಕೊಂಡಿದ್ದರು. ರಾಮದಾಸ್‌ಗೆ ಇದಕ್ಕಿಂತ ಸರಿಯಾದ ವರ್ಣನೆ ಮತ್ತೊಂದಿರಲಾರದು ! ಈ ಪಂಜು, ಆರಿ ಹೋಗಿದೆ. ಇನ್ನೆಲ್ಲಿ ಅಂಥ ಆ ತಾಪ, ಆ ಬೆಳಕು ? ("ಇನ್ನೆಲ್ಲಿ ಆ ತಾಪ, ಆ ಬೆಳಕು" - ಡಿ.ಎಸ್. ನಾಗಭೂಷಣ)". ನಾಗಭೂಷಣರ ಈ ಮಾತು ಪ್ರಿಯ ರಾಮದಾಸ್‌ನ ಬದುಕು, ದಾರಿ, ಹೋರಾಟಕ್ಕೆ ಇಟ್ಟ ಕನ್ನಡಿ.

# 'ಮದುವೆ ಗಂಡು' ಭೂಗತ!

ನಿರ್ಮಲಾ ರಾಮದಾಸ್

ಮಾನಸಗಂಗೋತ್ರಿಯ ಶಾಲೆಯಲ್ಲಿ ಕಲಿಯುತ್ತಿದ್ದ ನಮ್ಮ ಪುಟ್ಟ ಸ್ನೇಹಾ ಒಮ್ಮೆ ಮನೆಗೆ ಬರುತ್ತಿದ್ದಂತೆಯೇ ಅವಳ ಕುತೂಹಲಕ್ಕೆ ಕಾರಣವಾಗಿದ್ದ ಪ್ರಶ್ನೆಯನ್ನು ಮುಗ್ಧವಾಗಿ ರಾಮದಾಸ್‌ಬಳಿ ಕೇಳಿದಳು

"ಅಪ್ಪ, ಜಾತಿ ಎಂದರೆ ಏನಪ್ಪ?"

"ಅದೊಂದು ಮೂಢ ನಂಬಿಕೆ. ಜಾತಿ ಅಂತ ಏನೂ ಇಲ್ಲ"

"ಹಾಗಾದರೆ ನಮಗೆ ಜಾತಿ ಇಲ್ಲ!"

"ನಮಗ್ಯಾವ ಜಾತಿಯೂ ಇಲ್ಲ"

"ಮತ್ತೆ ಸ್ಕೂಲಲ್ಲಿ ಎಲ್ಲರೂ ನಿಮ್ಮ ಜಾತಿ ಯಾವುದೂಂತ ಕೇಳ್ತಾರೆ"

"ನಾವು ಮನುಷ್ಯರ ಜಾತಿ ಅಂತ ಹೇಳು"

ಜಾತಿಯ ಸೋಂಕಿಲ್ಲದ ಕುಟುಂಬದಲ್ಲಿ ಬೆಳೆಯುತ್ತಿದ್ದ ಸ್ನೇಹಾಳ ಮನಸ್ಸಿನಲ್ಲಿ ಶಾಲೆಯ ಪರಿಸರ ಗೊಂದಲವನ್ನು ಹುಟ್ಟು ಹಾಕಿತ್ತು. ಆಗ ಅಪ್ಪ ಕೊಟ್ಟ ಉತ್ತರದಿಂದ ಅವಳಿಗೆ ಅದೇನು ಅರ್ಥವಾಗಿತ್ತೋ ಗೊತ್ತಿಲ್ಲ. ಹಲವು ವರ್ಷಗಳ ಹಿಂದೆ ನಡೆದ ಅಪ್ಪ-ಮಗಳ ಈ ಮಾತುಕತೆಗೆ ನಮ್ಮ ಮದುವೆಯ ಪ್ರಸಂಗವೇ ಹಿನ್ನೆಲೆಯಾಗಿದೆ.

೧೯೭೪, ಚೈತ್ರ ವೈಶಾಖದ ಬಿರು ಬಿಸಿಲು. ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಪದವಿ ಪರೀಕ್ಷೆಗಳ ಕನ್ನಡ ಮೌಲ್ಯಮಾಪನ ಕಾರ್ಯದಲ್ಲಿ ನಿಂತು, ತುಂಬು ಕಂಠದಿಂದ ಮಾತನಾಡಿದ ಆ ದಿಟ್ಟ ಯುವಕನ ಕಣ್ಣುಗಳಲ್ಲಿ ಅಂತಃಕರಣದ ಸೆಳೆತವಿತ್ತು. ಬೇರೊಂದು ಕೊಠಡಿಯಲ್ಲಿ ಉತ್ತರ ಪತ್ರಿಕೆ ತಿದ್ದುತ್ತಿದ್ದ ಆತನನ್ನು ಮತ್ತೆ ಮತ್ತೆ ನೋಡುವ ಮಾತನಾಡಿಸುವ ಅದಮ್ಯ ಬಯಕೆಯಾಗುತ್ತಿತ್ತು. ಸಾಮಾನ್ಯ ಮಾತುಕತೆಯ ಒಳಗೂ ಆತನ ಎದೆನವಿರನ್ನು

ಮುಟ್ಟುತ್ತಿದ್ದೇನೆಂಬ ತೀವ್ರ ಅನಿಸಿಕೆಯಾಗುತ್ತಿತ್ತು. ಮನದ ಭಾವನೆಗಳನ್ನು ಯಾರೊಂದಿಗೂ ಹಂಚಿಕೊಳ್ಳಲಾಗದ ಸಂಕೋಚ. ಬೆಂಗಳೂರು ಮನೆಗೆ, ಕೋಲಾರದ ಕಾಲೇಜಿನ ಕೆಲಸಕ್ಕೆ ಮರಳಿದ ಮೇಲೆ ಸಹ ನುಗ್ಗಿ ಬರುತ್ತಿದ್ದವು, ನೆನಪುಗಳು.

೧೯೭೫, ಮೌಲ್ಯಮಾಪನಕ್ಕೆ ಕರೆ ಬರದಿದ್ದಾಗ ಏನೋ ಚಡಪಡಿಕೆ. ಕೊನೆಗೊಮ್ಮೆ ಕರೆ ಬಂದಾಗ ನೆಮ್ಮದಿಯ ನಿಟ್ಟುಸಿರು. ಹರಿವ ಕಾವೇರಿಯನ್ನು ದಾಟಿ, ನಿಶ್ಚಲ ಚಾಮುಂಡಿ ಬೆಟ್ಟದ ತಪ್ಪಲಿನ ಮೈಸೂರಿಗೆ ಬಂದಿಳಿದಾಗ ಹುಚ್ಚು ಮನಸ್ಸಿಗೆ ಅದೆಷ್ಟೋ ಹಿಗ್ಗು. ಆದರಾತ ಮೌಲ್ಯಮಾಪನ ಕೇಂದ್ರದಲ್ಲಿರಲಿಲ್ಲ.

ಕ್ರಾಫರ್ಡ್ ಭವನದಲ್ಲಿ ನೀರಸ ಮೌಲ್ಯಮಾಪನ ನಡೆದಿದ್ದಾಗ ನನ್ನ ಹಿತೈಷಿ ಗುರುಗಳೂ, ಆತನ ಸಹೋದ್ಯೋಗಿ ಮಿತ್ರರೂ ಆದ ಎಸ್. ಜೋರಲಿಂಗಯ್ಯನವರು ಅನಿರೀಕ್ಷಿತವಾಗಿ ಆತನ ಮದುವೆಯ ಪ್ರಸ್ತಾಪವನ್ನು ಮುಂದಿಟ್ಟರು. ಅಚ್ಚರಿ-ಸಂತೋಷ ಒಮ್ಮೆಲೇ ಒತ್ತರಿಸಿಕೊಂಡು ಬಂದು ಗೊಂದಲವಾಯಿತು. ಜಾತಿ ಮತಗಳಾಚೆಯ ಬೆಚ್ಚನೆಯ ಪ್ರೀತಿಯ ಕರೆ ಅಲ್ಲಿತ್ತು.

ಯೌವನ ಸಹಜ ಬಯಕೆಗಳು ತಂದ ನಸುಕಂಪನದ ಜೊತೆಯಲ್ಲೇ, ಜಾತಿ ವರ್ತುಲದೊಳಗೆ ಬೆಳೆದ ನಾನು ಅದನ್ನು ದಾಟಬಲ್ಲೆನೆ ಎಂಬ ಆತಂಕ, ಪ್ರೀತಿ ಸ್ಪಂದನದ ಜೊತೆಗೆ ಭವಿಷ್ಯವನ್ನು ಕುರಿತ ಭೀತಿ. ಮನದ ಕಣ್ಣಿನ ಮುಂದೆ, ಕಂಡು ಕೇಳಿದ್ದ ಅಂತರ್ಜಾತಿ ವಿವಾಹಿತರ ಮೆರವಣಿಗೆ. ಆ ಕ್ಷಣದಲ್ಲಿ ಆತನ ಜೊತೆಯಲ್ಲಿ ಹೆಜ್ಜೆಯಾಕಲು ನಿರ್ಧರಿಸಲು ಧೈರ್ಯ ತುಂಬಿಕೊಟ್ಟ ವ್ಯಕ್ತಿ ನಿರಂಜನರ 'ಅನುಪಮಾ'. ಅನಂತರದ ದಿನಗಳಲ್ಲಿ ಪ್ರತಿಸಂಜೆ ಜಾವಾ ಮೋಟಾರ್ ಬೈಕ್ ಕ್ರಾಫರ್ಡ್ ಭವನದ ಮೆಟ್ಟಿಲುಗಳ ಬಳಿ ಕಾದಿರುತ್ತಿತ್ತು.

ಆ್ಯನಿ ಬೆಸೆಂಟ್, ಥಿಯಾಸಫಿ ಮತ್ತು ಜಿಡ್ಡು ಕೃಷ್ಣಮೂರ್ತಿಯವರ ವಿಚಾರಗಳಿಗೆ ಸ್ಪಂದಿಸುತ್ತ ವಿಶ್ವಭ್ರಾತೃತ್ವದಲ್ಲಿ ನಂಬಿಕೆಯಿಟ್ಟಿದ್ದ ಅಣ್ಣಾವರು (ತಂದೆ) ನಮ್ಮ ಮದುವೆಯ ನಿರ್ಧಾರವನ್ನು ಅಕ್ಕರೆಯಿಂದ ಸ್ವಾಗತಿಸಿದರು. ತಮ್ಮ ಕುಲಸ್ಥರು 'ರಾಮಚಂದ್ರನ ಮಗಳು ಯಾರೊಂದಿಗೋ ಓಡಿ ಹೋದಳೆಂದು' ಆಡಿಕೊಳ್ಳಬಹುದೆಂಬ ಆತಂಕ ಹೆತ್ತ ತಾಯಿ ರಾಜಮ್ಮನವರನ್ನು ಕಾಡಿತ್ತು. ಆ ಕಾಲಕ್ಕೆ ಅವರಿದ್ದ ಮನಸ್ಥಿತಿಗೆ ಅದು ಸಹಜವೇ ಆಗಿತ್ತು. ಮನೆಮಗಳ ನಿರ್ಧಾರ ಗಟ್ಟಿಯಾದದ್ದೆಂದು ಖಚಿತವಾದಾಗ ತುಂಬು ಕುಟುಂಬದ ಇತರ ಸದಸ್ಯರು ತಮ್ಮ ಜಾತಿ ಹಣೆಪಟ್ಟಿಯನ್ನು ಮದುವೆ ಗಂಡಿಗೆ ಕಟ್ಟಿ ಅವಸರದಲ್ಲಿ ವಾಲಗ ಊದಿಸಿಬಿಡುವ ಇಷ್ಟವನ್ನೂ ವ್ಯಕ್ತಪಡಿಸಿದರು.

ಜಾತಿಯ ನೆಲೆ-ನಿರ್ಬಂಧಗಳಿಲ್ಲದೆ ತಾಯಿಯೊಬ್ಬರ ಪ್ರೀತಿಯಲ್ಲೇ ಬೆಳೆದಿದ್ದ ರಾಮದಾಸ್, ಸ್ವಂತ ಊರು-ಆಸ್ತಿಗಳಿಲ್ಲದ ಅಲೆಮಾರಿಗಳಂತೆ ಏಕಾಂಗಿಯಾಗಿ ಮೈಸೂರು ಸೇರಿದ್ದರು. ಅತ್ಯಂತ ದಾರುಣ ಪರಿಸ್ಥಿತಿಯಲ್ಲೂ ಮಗನನ್ನು ಜತನದಿಂದ ಕಾಪಾಡಿಕೊಂಡು ವಿದ್ಯಾವಂತನನ್ನಾಗಿ ಮಾಡಿದ್ದ ಮಂಜಮ್ಮನವರು ಮಗನ ಮದುವೆಗೆ ಕಾತರದಿಂದ ಕಾಯುತ್ತಿದ್ದರು. ಮಗನ ಯಾವ ಅಪೇಕ್ಷೆಯನ್ನೂ ಎಂದೂ ತಿರಸ್ಕರಿಸದಿದ್ದ ಅವರು ಮಗನ ಆಯ್ಕೆಯ ಬಾಳಸಂಗಾತಿಯನ್ನು

ಅತ್ಯಂತ ಸಂಭ್ರಮದಿಂದ ಸ್ವೀಕರಿಸಿದರು. ಧಾರ್ಮಿಕ ಸಂಪ್ರದಾಯಗಳನ್ನು, ಆಡಂಬರದ ಮದುವೆಗಳನ್ನು ತಿರಸ್ಕರಿಸಿದ್ದ ರಾಮದಾಸ್ ನಮ್ಮ ಕುಟುಂಬದವರ ಇಷ್ಟದಂತೆ ಮದುವೆಯಾಗುವುದು ಅಸಂಭವವಾಗಿತ್ತು. ಸರಳ, ಜಾತಿರಹಿತ ಮದುವೆಗೆ ಅಣ್ಣಾವರು ಸಂತೋಷದಿಂದ ಒಪ್ಪಿಗೆ ಕೊಟ್ಟರು. ಕುಟುಂಬದ ಇತರ ಆತ್ಮೀಯರೊಡನೆ ಮಾತಿನ ಘರ್ಷಣೆ. ಸಾವಿನ ಮಾತು, ನೋವಿನ ಮಾತು, ಆಡಬಾರದ ಮಾತುಗಳೆಲ್ಲ ತುಟಿಯಾಚೆ ನೆಗೆದಿದ್ದವು. ಒಲ್ಲದ ಮನ್ಸಿನಿಂದಲೇ ಒಪ್ಪಿಕೊಂಡರು.

ಪತ್ರಿಕೆಗಳಲ್ಲಿ ಮಾತ್ರ ಓದಿದ್ದ ಮೈಸೂರಿನ ಕನ್ನಡ ಬೆಳೆಸಿ-ಇಂಗ್ಲೀಷ್ ಇಳಿಸಿ, ನವ ನಿರ್ಮಾಣ ಕ್ರಾಂತಿ, ಸಮಾಜವಾದಿ ಯುವಜನ ಸಭಾ, ಜಾತಿ ವಿನಾಶ ಸಮ್ಮೇಳನ, ಬರಹಗಾರರ ಒಕ್ಕೂಟಗಳ ವಿವರಗಳನ್ನು ರಾಮದಾಸರ ಮಾತಿನಲ್ಲಿ ತಿಳಿದುಕೊಳ್ಳುತ್ತಾ ನಾನು ಗಟ್ಟಿಯಾಗ ತೊಡಗಿದ್ದೆ. ೧೯೭೫ರ ಆಗಸ್ಟ್ ೧೫ರಂದು ಎರಡು ಕುಟುಂಬಗಳ ಆಪ್ತ ಮಿತ್ರರ ಸಮ್ಮುಖದಲ್ಲಿ ಸರಳವಾಗಿ ಮದುವೆಯಾಗಲು ನಾವಿಬ್ಬರು ನಿರ್ಧರಿಸಿದ್ದೆವು. ಅಷ್ಟರಲ್ಲಿ ತುರ್ತು ಪರಿಸ್ಥಿತಿಯ ಭೀಕರ ಯಾತನೆಯ ದಿನಗಳು ಆರಂಭವಾಗಿ ಬಿಟ್ಟವು. ಮಾನಸಗಂಗೋತ್ರಿಯ ೮-೧೯ನಲ್ಲಿ ಮದುವೆಯ ನೆಪದಲ್ಲಿ ರಾಜಕೀಯ ಷಡ್ಯಂತ್ರವೇನಾದರೂ ರೂಪಿತವಾಗುತ್ತಿದೆಯೆಂಬ ಗುಮಾನಿ ದೇವರಾಜ ಅರಸು ಸರ್ಕಾರದ ಪೊಲೀಸ್ ಇಲಾಖೆಗೆ ಬಂದು ಬಿಟ್ಟಿತ್ತು. ಮೈಸೂರಿನಲ್ಲಿ ರಾಮದಾಸರ ಅನೇಕ ಗೆಳೆಯರು ಬಂಧಿತರಾದರು. ಮದುವೆಗೆ ಮುಂಚಿನ ರಾತ್ರಿ ಜಿ.ಎಚ್. ನಾಯಕರ ಮನೆಯಲ್ಲಿ 'ಮದುವೆ ಗಂಡು' ಭೂಗತನಾಗಿದ್ದುದರಿಂದ ಬೆಳಗ್ಗೆ ಮದುವೆ ನಿರಾತಂಕವಾಗಿ ನಡೆಯಿತು. ಮೈಸೂರು-ಕೋಲಾರದ ದಾರಿಯಲ್ಲಿ ಓಡಾಡುತ್ತ ವಾರಾಂತ್ಯದ ದಾಂಪತ್ಯ ನಡೆಸುತ್ತಿದ್ದ ದಿನಗಳಲ್ಲಿ ಪೊಲೀಸರು ನಮ್ಮ ಹಿಂದೆ ಬಿದ್ದದ್ದೂ ಉಂಟು.

ಐವತ್ತರ ಅಂಚಿನಲ್ಲಿ ಹಿಂದಿರುಗಿ ನೋಡಿದರೆ, ಮನಮೆಚ್ಚಿದವನನ್ನು ಪಡೆದುಕೊಳ್ಳುವ ತೀವ್ರ ತುಡಿತದಲ್ಲಿ ಜಾತಿರಹಿತ ಸರಳ ಮದುವೆಗೆ ತವರನ್ನು ಒಪ್ಪಿಸುವ ಉದ್ವೇಗದಲ್ಲಿ ಎಷ್ಟು ಎಳಸಾಗಿ ಒರಟಾಗಿ ವರ್ತಿಸಿದ್ದೆನಲ್ಲ ಎನಿಸುತ್ತದೆ. ಆದರೆ ತವರುಮನೆ ಅದನ್ನೆಲ್ಲಾ ಮನ್ನಿಸಿ ಆತ್ಮೀಯ ಸಂಬಂಧವನ್ನು ಉಳಿಸಿಕೊಂಡಿದೆ. ಬಯಲು ಸೀಮೆಯ ಈ ಹೆಣ್ಣನ್ನು ಮಲೆನಾಡ ಮಂಜಮ್ಮನವರು ತಾಯ ಮಮತೆಯಿಂದ ಅವಳೆಲ್ಲ ಗುಣಾವಗುಣಗಳೊಂದಿಗೆ ಇಡಿಯಾಗಿ ಒಪ್ಪಿಕೊಂಡಿದ್ದಾರೆ. ಆ ಹಿರಿಯರೆಲ್ಲರ ಪ್ರೀತಿ ಅಂತಃಕರಣ ದೊಡ್ಡದು.

ಕಳೆದ ಇಪ್ಪತ್ತೆರಡು ವರ್ಷಗಳಲ್ಲಿ ನಾವಿಬ್ಬರು ಸಾವಿರಾರು ಮೈಲಿಗಳನ್ನು ಮೋಟಾರ್ ಬೈಕ್‌ನಲ್ಲಿ ಸುತ್ತಿ ಸಂಭ್ರಮಿಸಿದ್ದೇವೆ. ಸಣ್ಣಪುಟ್ಟ ಕಾರಣಗಳಿಗೆ ದೊಡ್ಡದಾಗಿ ಜಗಳವಾಡಿದ್ದೇವೆ. ಮರುಕ್ಷಣದಲ್ಲೇ ಮೌನವಾಗಿ ಪರಸ್ಪರರಿಗೆ ಸ್ಪಂದಿಸಿದ್ದೇವೆ. ರಕ್ತ ಸಂಬಂಧಿಗಳಿಗಿಂತ ಆತ್ಮೀಯವಾಗಿ ಭಾವಿಸುವ ಗೆಳೆಯರ ದೊಡ್ಡ ಬಳಗ ನಮ್ಮ ಪಾಲಿಗಿದೆ. ಪಾರದರ್ಶಕ ವ್ಯಕ್ತಿತ್ವದ ನೇರ ನಿಷ್ಠುರ ನುಡಿಯ, ಪ್ರತಿಭಟನೆಯ ಸ್ವಭಾವದ ರಾಮದಾಸ್ ಅನೇಕ ಹೋರಾಟಗಳಲ್ಲಿ ಏಕಾಂಗಿಯಾಗಿ, 'ತಬ್ಬಲಿತನ'ವನ್ನು ಅನುಭವಿಸಿದ್ದಾರೆ. ಕುಟುಂಬದ ಎಲ್ಲ ಸದಸ್ಯರ ಪ್ರೀತಿಯಲ್ಲಿ, ತಾಯಿಯ ಅಪಾರ ಮಮತೆಯಲ್ಲಿ ಅದೆಲ್ಲವೂ ಅವರಿಗೆ ಸಹನೀಯವಾಗಿದೆ.

'ಜಾತಿ ಎಂದರೇನು?'ಎಂದು ಅಂದು ಪ್ರಶ್ನಿಸಿದ್ದ ಸ್ನೇಹಾಗೆ ಈಗ ಇಪ್ಪತ್ತರ ಹರೆಯ. ಅಂತರಜಾತಿಯ, ಅಂತರ ಧರ್ಮೀಯ, ಜಾತಿರಹಿತ ಮದುವೆಗಳಿಗೆ ಖುಷಿಯಾಗಿ ಸ್ಪಂದಿಸುವ ಅವಳನ್ನು ನೋಡುತ್ತ ನಡೆದು ಬಂದ ದಾರಿಯ ಕಡೆಗೆ ತಿರುಗಿದರೆ ನಮಗೆ ಹೆಮ್ಮೆಯಾಗುತ್ತದೆ; ಅವಳ ಉಲ್ಲಾಸದಲ್ಲಿ ಬದುಕಿನ ಪ್ರೀತಿ ಕಾಣುತ್ತದೆ.

# ವ್ಯಾಲ್ಯೂಯೇಷನ್ ಮದುವೆ

ಆರ್. ನಿರ್ಮಲ

ನಮ್ದು ಒಂಥರಾ ವ್ಯಾಲ್ಯೂಯೇಷನ್ ಮದುವೆ. ೧೯೭೪ರಲ್ಲಿ ನಾನು ವ್ಯಾಲ್ಯೂಯೇಷನ್‌ಗೆ ಬಂದಿದ್ದಾಗ ಇವರ ಭೇಟಿ ಆಯ್ತು. ಆಗ ಮೈಸೂರಲ್ಲಿ ನಮ್ಮ ಸೋದರತ್ತೆ ಮನೆಯಿತ್ತು. ಅಲ್ಲಿ ಉಳಕೊಂಡು ನಾನು ವ್ಯಾಲ್ಯೂಯೇಷನ್‌ಗೆ ಬರ್ತಾಯಿದ್ದೆ. ನಮ್ಮತ್ತೆ ಮನೆಯಿಂದ ಒಂದಿಷ್ಟು ರವೆ ಉಂಡೆ ಮಾಡ್ಕೊಂಡು ಬಂದು ವ್ಯಾಲ್ಯೂಯೇಷನ್‌ನಲ್ಲಿದ್ದವರಿಗೆಲ್ಲ ಕೊಡ್ತಾಯಿದ್ದೆ. ಇವ್ರು "ಏನ್ರೀ ಒಂದೇ ಏನ್ರಿ" ಅಂದ್ರು:ಅದಕ್ಕೆ ನಾನು "ಬೇಕಾದ್ರೆ ಇಷ್ಟೂ ತಗೊಳ್ಳಿ" ಅಂದೆ, ಹೀಗೆ ತಮಾಷೆ ಮಾಡ್ತಾಯಿದ್ರು. ವ್ಯಾಲ್ಯೂಯೇಷನ್ ರೂಂನಲ್ಲಿ ಪರಸ್ಪರ ನೋಡ್ತಾಯಿದ್ವಿ, ಅಲ್ಲೇ ಒಂದು ಕಡೆ ಸ್ಟೋರ್ ರೂಂ ಇತ್ತು. ಅಲ್ಲಿ ಕೂತು ಇವ್ರು ವ್ಯಾಲ್ಯೂ ಮಾಡ್ತಾಯಿರೋರು. ನಾನು ಪೇಪರನ್ನ ತರುವಾಗ ಮತ್ತು ವಾಪಸ್ ಕೊಡುವಾಗೆಲ್ಲ ಇವರನ್ನ ನೋಡ್ತಾಯಿದ್ದೆ. ಇವ್ರು ಕೂತಿರೋದ್ರಲ್ಲೇ ಏನೋ ಒಂದು ವಿಶಿಷ್ಟತೆ ಇರ್ತಾಯಿತ್ತು. ಮಹಾ ಧೈರ್ಯಸ್ಥರ ಹಾಗೆ, ಮಹಾ ಅಂತಃಕರಣ ಉಳ್ಳವರ ಹಾಗೆ ಇವರು ಕಾಣಿಸ್ತಾಯಿದ್ರು.

ಆ ವರ್ಷ ಇವರು ವ್ಯಾಲ್ಯೂಯೇಷನ್‌ಗೆ ಬಂದವರಿಗೆಲ್ಲ ಟೀ ಪಾರ್ಟಿ ಕೊಡ್ತೀನಿ ಅಂದ್ರು. ಅದು ಒಂದು ನೆಪ ಅಷ್ಟೇ! ಹಿಂದಿನ ಯಾವ ವರ್ಷಾನೂ ಆಥರದ್ದು ಇರಲಿಲ್ಲ. ಆ ಸಾರಿ ಮಾತ್ರ ಅರೆಂಜ್ ಮಾಡಿದ್ರು. ನನ್ನನ್ನ ಮಾತಾಡಿಸೋ ಸಲವಾಗೇ ಅರೇಂಜ್ ಮಾಡಿದ್ರು ಅಂತಾನೇ ಹೇಳಬೇಕು. ಅಲ್ಲಿಂದ ಮುಂದಿನ ವರ್ಷ ಬಂದಾಗ ಚೆನ್ನಾಗಿ ಮಾತಾಡ್ಸಿದ್ರು. ಹಿಂಗೇ ಹತ್ರ ಆದ್ವಿ. ಯಾವಾಗ್ಲೂ ತಮಾಷೆ ಮಾಡೋರು. ಎನ್. ಬೋರಲಿಂಗಯ್ಯನವರು ರಾಮದಾಸ್ ಅವರ ಕೊಲೀಗ್. ಅವರು, ಇವರು ನನ್ನನ್ನ ಮದ್ವೆ ಆಗೋ ವಿಚಾರಾನ ತಿಳಿಸಿದ್ರು. ಆಮೇಲೆ ನಾನು ಮದ್ವೆ ವಿಚಾರದಲ್ಲಿ ಇನ್ವಾಲ್ವ್ ಆದೆ. ನಾವಿಬ್ರೂ ವಿಚಾರವಾದಿಗಳ ತರಾ ಮದ್ವೆ ಆಗೋಣ ಅಂತಾ ಅನ್ನೋರು. ಪರಿಚಯ ಆದ ಒಂದು ವರ್ಷದ ನಂತರ ೧೯೭೫ ರಲ್ಲಿ ನಾವು ಮದ್ವೆ

ಆದ್ವಿ. ಮದುವೆಗೆ ಮುಂಚೇನೆ ಇವರು ತಮ್ಮ ಬಗ್ಗೆ, "ನಾನು ತುಂಬಾ ಸಿಟ್ಟಿನ, ತುಂಬಾ ಲಹರಿಯ ಮನುಷ್ಯ. ಇದಕ್ಕೆಲ್ಲ ಹೊಂದಿಕೊಂಡು ಬದುಕೋದಿಕ್ಕಾಗುತ್ತೇನ್ರಿ"ಅಂತಾ ಕೇಳಿದ್ರು. ಆಗ ನಾನು "ಆಗುತ್ತೋ ಇಲ್ವೋ ಗೊತ್ತಿಲ್ಲ. ಆದ್ರೆ ನಿಮ್ಮನ್ನ ಅರ್ಥ ಮಾಡ್ಕೊಂಡು ಬದ್ಕೋದಿಕ್ಕೆ ಖಂಡಿತಾ ಪ್ರಯತ್ನ ಪಡ್ತೀನಿ" ಅಂತಾ ಹೇಳ್ದೆ.

ವ್ಯಾಲ್ಯೂಯೇಷನ್ ರೂಂನಲ್ಲೇ ಮದ್ವೆ ನಿಶ್ಚಯ ಮಾಡಿದ್ವಿ. ನಮ್ಮ ಮನೆಯಲ್ಲಿ ಅಪ್ಪ ಏನೋ ಒಪ್ಕೊಂಡ್ರು. ಆದ್ರೆ ಅಮ್ಮ ಮತ್ತು ಅಕ್ಕ ಮಾತ್ರ ತುಂಬಾ ಹಿಂದೇಟು ಹಾಕಿದ್ರು. ಆಗ ನಮ್ಮ ಅಕ್ಕನ ಮಾವ "ಏನ್ರಮ್ಮಾ ಹಬ್ಬ ಆದಂಗೆ ಆಗುತ್ತೆ. ಮದ್ವೆ ಮಾಡಿಬಿಡಿ" ಅಂತೇಳಿ ನಮ್ಮಮ್ಮ ಮತ್ತು ಅಕ್ಕನ್ನ ಒಪ್ಸಿದ್ರು. ಮತ್ತೆ ನಮ್ಮ ಅಣ್ಣ, ಅಕ್ಕ ಎಲ್ರನ್ನೂ "ಏನ್ರೋ ತಂಗಿ ಮದ್ವೆಗೆ ಬರಲ್ಲಾ ಅಂತೀರಲ್ರೋ ನಡೀರೋ" ಅಂತೇಳಿ ಅವ್ರೇ ಕರ್ಕೊಂಡು ಬಂದ್ರು. ಹಿಂಗಾಗಿ ನಮ್ಮ ಮದ್ವೆ ಕೂಡಾ ಒಂದು ಹೋರಾಟಾನೇ ಆಗೋಯ್ತು. ಯಾಕೇಂದ್ರೆ ಸುತ್ತೆಲ್ಲ ಇಷ್ಟ ಇಲ್ಲದವರೇ ಹೆಚ್ಚು ಇದ್ರು. ಅವರ ನಡುವೆ ನಾವಿಬ್ರೂ ಮದ್ವೆ ಆದ್ವಿ. ಅದಕ್ಕೂ ಒಂದು ಧೈರ್ಯ ಬೇಕು. ಅಲ್ವಾ?

ಇವರಮ್ಮ ಮಾತ್ರ "ನನ್ನ ಮಗನ ಮದ್ವೆ ಆದ್ರೆ ಸಾಕು. ನಾನು ಎಲ್ಲಿಗಾದ್ರೂ ಹೊರಟು ಹೋಗ್ತೀನಿ. ಗಂಡ-ಹೆಂಡ್ತಿ ಚೆನ್ನಾಗಿ ಬದುಕಲಿ" ಅಂತಾ ಹೇಳೋರು. ಅವರಂತೂ ನನ್ನನ್ನ ತುಂಬಾ ಚೆನ್ನಾಗಿ ನೋಡ್ಕೊಂಡ್ರು. ಇನ್ನು ಇವರಿಗೆ ಸಿಟ್ಟು ಬಂದ್ರೆ ಮಾತ್ರ ಭಯಂಕರ. ಯಾರೂ ಊಹಿಸೋದಿಕ್ಕೇ ಸಾಧ್ಯವಿಲ್ಲ. ಅಷ್ಟು ಸಿಟ್ಟಿನ ಮನುಷ್ಯ. ಅಂಥಾ ಮನುಷ್ಯನ ಜೊತೆ ೩೩ವರ್ಷ ಬದುಕಿದ್ದೀನಲ್ಲಾ ಅಂತಾ ನನಗೆ ನಾನೇ ಬೆನ್ನು ತಟ್ಟಿಕೊಳ್ಳಬೇಕು.

ಎಂಥಾ ಕಷ್ಟದ ಸಂದರ್ಭಗಳು ಬಂದಾಗ್ಲೂ ನಾವು ಒಬ್ಬರಿಗೊಬ್ಬರು ಪರಸ್ಪರ ಪ್ರೀತಿಯಿಂದ್ಲೇ ಅರ್ಥ ಮಾಡ್ಕೊಂಡು ಬಗೆಹರಿಸ್ಕೊಳ್ಳೋದಿಕ್ಕೆ ಪ್ರಯತ್ನ ಪಡ್ತಾಯಿದ್ವಿ. ಅದೇ ನಮ್ಮ ಬದುಕು ಸುಗಮ ಆಗೋದಿಕ್ಕೆ ಸಾಧ್ಯವಾಯ್ತು.

**ಮೌಲ್ಯಮಾಪನ**

ಉತ್ತರ ಪತ್ರಿಕೆ ತಿದ್ದಲು ಬಂದ
ಈ ಊರ ಹುಡುಗ (ಪೋರ)
ಆ ಊರ ಹುಡುಗಿ (ಪೋರಿ)
ತುಂಟ ತನದಲಿ
ತುದಿಗಣ್ಣ ನೋಟದಲಿ
ಕೆಣಕಿ ಕಣ್ಣುಗಳು ಒಂದಾಗಿ
ನಡೆಸುತ್ತಿದ್ದಾರೆ.
ಬದುಕಿನ ಮೌಲ್ಯಮಾಪನ.

-ಆರ್. ನಿರ್ಮಲ

# ಸಿಟ್ಯಾಕೋ ಸಿಡುಕ್ಯಾಕೋ ನನ ರಾಮು...

ಆರ್. ನಿರ್ಮಲಾ

ನೇರನುಡಿಯ ನಿಷ್ಠುರ ರಾಮದಾಸ್ ಮೂವತ್ತೆರಡು ವರ್ಷಗಳ ಕೆಳಗೆ, ನನ್ನೊಡನೆ ಮಾತಿನಲ್ಲಿ ತೊಡಗಿದ್ದಾಗ ಹೇಳಿದರು: 'ನಾನು ಅತಿಕೋಪಿಷ್ಠ. ಮದುವೆಯಾಗ್ತಿರೇನ್ರಿ? ಸಾಮಾನ್ಯವಾಗಿ ನನಗೆ ಸಿಟ್ಟು ತಡೆಯಲು ಸಾಧ್ಯವಾಗುವುದಿಲ್ಲ'

ನಮ್ಮ ಮದುವೆಯಾದ ಮೇಲೆ ಅವರ ಸಿಟ್ಟಿನ ಬೃಹದ್ರೂಪವನ್ನು ಕಂಡು ಉಂಡದ್ದಾಯಿತು. ಬರೀ ಸಿಟ್ಟಿನಲ್ಲಿ ಜೀವನವನ್ನು ನೇಯ್ದು, ಅದನ್ನೇ ಹಾಸಿ ಹೊದ್ದುಕೊಂಡವರು ರಾಮ್. ಸಿಟ್ಟಿನಿಂದ ಅವರು ಪಡೆದದ್ದೇನು? ನಿಷ್ಠುರತೆ ಹೊರಗೆ, ಒಳಗೆ. ಆದರೆ ಅವರಿಗೆ ಹೆಂಗರುಳ ಅಂತರಂಗವಿತ್ತು. ಅದಕ್ಕಾಗಿಯೇ ಅವರ ನಿಜಸ್ವರೂಪವನ್ನು ಒಂದು ದಿನವಲ್ಲ;ಮೂವತ್ತೆರಡು ವರ್ಷಗಳು ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಹಾಗೆಯೇ ನಿಷ್ಠುರತೆ, ಅಂತಃಕರಣ ಒಟ್ಟಾಗಿ ತುಂಬಿದ್ದ ಅನುಕಂಪವನ್ನೂ ಕೂಡ.

ರಾಮದಾಸ್ ನಿಷ್ಠುರತೆ, ನ್ಯಾಯಯುತ ನಡವಳಿಕೆಯಿಂದ ಜನಪ್ರಿಯರಾದವರು. ಹೊರಗಿನ ಜನರ ಕಣ್ಣಲ್ಲಿ ಜಗಳಗಂಟ. ಕುಟುಂಬದ ಸದಸ್ಯರ ಜೊತೆಗೂ ಸಿಟ್ಟು. ಅಗಸ್ತ್ಯಮುನಿ ಸಮುದ್ರದ ನೀರನ್ನೆಲ್ಲ ಕುಡಿದ ಹಾಗೆ ಸಿಟ್ಟು!ಆದರೆ ಮದುವೆಗೆ ಮುಂಚೆ ಒಂದು ದಿನ ಆಲ್ಬಂ ತೋರಿಸುತ್ತಾ ಟೈಗರ್ ಎಂಬ ನಾಯಿಯ ಮರಣ ಕುರಿತು ಹೇಳಿದರು. ಕಣ್ಣಂಚಿನಲ್ಲಿ ನೀರು ತುಂಬಿತ್ತು. ಇಂತಹ ಅಂತಃಕರಣ ಅವರದು.

ಅವರು ಈಗ ಒಂದೆರಡು ವರ್ಷಗಳಿಂದ ಪದೇಪದೇ ಹೇಳುತ್ತಿದ್ದ ಒಂದು ವಾಕ್ಯ: 'ನನ್ನ ಸ್ವಭಾವಕ್ಕೆ ನಿರ್ಮಲಾ ನೀನಲ್ಲದೆ ಬೇರೆ ಯಾರಾದರೂ ಇದ್ದರೆ, ಏನಾಗುತ್ತಿತ್ತೋ!'

ಸಿಟ್ಯಾಕೋ ಸಿಡುಕ್ಯಾಕೋ ನನ ಜಾಣ
ಇಟ್ಟಾಯ್ತು ನಿನ ಮೇಲೆ ನನ ಪ್ರಾಣ

ಒಂದು ಕ್ಷಣದ ನೋವು, ದೀರ್ಘಕಾಲದ ನೆಮ್ಮದಿ. ಅವರಿಗೆ ಪ್ರತಿಯೊಂದೂ ಕೈಯಳತೆಯಲ್ಲಿ ಸಿಗಬೇಕು. ಸಿಕ್ಕದಿದ್ದರೆ ಆಕಾಶ ಭೂಮಿ ಒಂದಾಗುತ್ತಿತ್ತು. ತುಂಬಾ ಜನ ಕೇಳಿದ್ದೂ ಉಂಟು: 'ಮನೆಯಲ್ಲೂ ಇಷ್ಟೇ ನ್ಯಾಯ ನಿಷ್ಠುರತೆ ಇದ್ದರೆ ಹೇಗೆ?'ತೇಜಸ್ವಿ ಅಂಡಮಾನ್ ಪ್ರವಾಸ ಹೋಗಿದ್ದಾಗ ಬಸ್ಸಿನಲ್ಲಿ ನಡೆದ ಒಂದು ಘಟನೆಯನ್ನು ಹೇಳುತ್ತ 'ಜಗಳಗಂಟ ರಾಮದಾಸ್' ಎಂದಿದ್ದಾರೆ. 'ನಾನು ಒಂದೊಂದು ಭಾಷಣ ಮಾಡಿದಾಗಲೂ ಒಂದಿಷ್ಟು ಸ್ನೇಹಿತರು ದೂರವಾಗುತ್ತಾರೆ' ಎನ್ನುತ್ತಿದ್ದರು ರಾಮದಾಸ್. ಹುಡುಗರ ಜೊತೆ ಹುಡುಗರೇ ಆಗಿ ಬಿಡುತ್ತಿದ್ದರು ನನ್ನ ಮುದ್ದು ರಾಮ್.

# ಹುಡುಕುತ್ತಿದ್ದೇನೆ ಹುಡುಗಾ

ಆರ್. ನಿರ್ಮಲಾ

ತುಂಟು ಜಾವ ಹತ್ತಿ
ಮೈಗೆ ಮೈ ಮೆತ್ತಿ, ದಾರಿಯಲ್ಲದ ದಾರಿಯಲ್ಲಿ
ಗೊತ್ತು ಗುರಿಯಿಲ್ಲದಂತೆ ಅಲೆಯುತ್ತಿದ್ದೆವಲ್ಲ
ಕಪ್ಪು ಕೆದರುತಲೆಯ ಗುಂಗುರು ಕೂದಲು
ಆಗೆಷ್ಟು ಹೊಳಪಿತ್ತು
ನಾಳೆ ಅದೆಷ್ಟು ಹಗುರಾಗಿತ್ತು
ನೆತ್ತಿ ಸುಡು ಬಿಸಿಲು ಹಿತವಾಗಿತ್ತು
ಮರ-ನೆರಳು ರಂಗೋಲಿ ಬಿಡಿಸಿತ್ತು
ಬಳುಕು ಸೊಂಟ ಕಮಲದ ಕಣ್ಣು
ಸಂಪಿಗೆ ಮೂಗು ಬಿಳಿ ಮೈ
ಇಲ್ಲದಿದ್ದರು
ನಾನು ಹುಡುಗಿಯಾಗಿದ್ದೆ
ಕೊರಳಿಗೆ ಬಿತ್ತು ತಾಳಿ
ಅಪ್ಪ ಅಮ್ಮ ಅಣ್ಣ ತಮ್ಮ ಮನೆ ಮಂದಿ
ಆಪ್ತರು ಇಷ್ಟರು
ಬಂದು ಉಂಡವರು
ಚಪ್ಪರದ ಹಸಿರಂತೆ ನಕ್ಕಿದ್ದರು
ಹಾರು ಹಕ್ಕಿಯ ರೆಕ್ಕೆ ಗಾಳಿಯಲಿ ಈಜುತ್ತಿತ್ತು

ಈಗೀಗ ನಾವೇಕೆ ಹೀಗಾಗುತ್ತಿದ್ದೇವೆ
(ಎದೆಮುಟ್ಟಿ ಹೇಳಿದ ?)
ನಾನು ನಿನ್ನನ್ನು ನೀನು ನನ್ನನ್ನು ಎದೆಯುಬ್ಬರ
ಜಗ್ಗದೆ ಬಗ್ಗಿಸದೆ ಇರಲು ಅದೆಷ್ಟು
ಹೆಚ್ಚೆ ಕಿತ್ತಿಟ್ಟ ಹಾಗೆ ನೆತ್ತಿ ನೀರೊಡೆದ ಹಾಗೆ
ಪ್ರತಿದಿನವು ಕೂಡಿಸುವ ಬಗೆ
ನಾ ನಿನಗೆ ಬೆಪ್ಪಾಗಿ
ನಿನ್ನೆತ್ತರದೆದುರು ಕುಗ್ಗಿ
ಕೆಲವೊಮ್ಮೆ ಎದೆ ಹಿಗ್ಗಿ ಕಣ್ಣು ಹೊಳೆದು
ಬೆಳ್ಳಿಕೂದಲಿನಲ್ಲಿ ಬೆಳಕೊಳಗೆ ಬಿಸಿಲು
ಬಿಸಿಲೊಳಗೆ ನೆರಳು ಹುಡುಕಿದಂತೆ
ಹುಡುಕುತ್ತಿದ್ದೇನೆ ಹುಡುಗಾ,
ಮೊತ್ತ ಮೊದಲ ಕಾತರದ ಬಿಸಿಯಪ್ಪುಗೆಯ
ಗಟ್ಟಿ ಮುತ್ತಿನ ಹೊಳಪು

# ರಾಮನಾಗಲಿಲ್ಲ...

ಆರ್. ನಿರ್ಮಲ

ನಡುನೆತ್ತಿ ಸುಡುಬಿಸಿಲು ಚುರುಕು
ಉರಿವವನು ಕಾಣುತ್ತಿಲ್ಲ
ಅದೊಂದು ದಿನ
ಕೈತಪ್ಪಿ ಗಾಜೊಡೆದು
ಕೈ ಎತ್ತಿದಿರಿ.
ಹುಟ್ಟಿಂದ ಒರಟು ಬದುಕಲ್ಲಿ
ಬೆವರಿಳಿಸಿದ ನಿಮಗೆ
ರಕ್ತದೊತ್ತಡವಿದೆ, ಗೊತ್ತು. ಅವ-ಮಾನ ಎನಿಸಿದರು
ಬೇಕಲ್ಲ ಸಂಸಾರ ನೆಮ್ಮದಿ
ಸಿಟ್ಟು ದುಮ್ಮಾನ ನಿವೇದನ ಉದಾಸೀನ
ಎಲ್ಲ ಇರಲೇಬೇಕಲ್ಲ.
ಮಾನವತೆಯ ಮೂರ್ತಿ
ಸಂಪ್ರದಾಯ ವಿರೋಧಿ ಇನಿಯಾ
ಹುಟ್ಟಿದ್ದು ಹೆಣ್ಣು ಸಂಭ್ರಮ
ಹೆರಿಗೆ ನೋವೇ ಗೊತ್ತಿಲ್ಲದ ನನಗೆ
ವಂಶೋದ್ಧಾರಕ ಬೇಕೆಂದು ಬಯಸಲಿಲ್ಲ
ಪ್ರೇಮಿಸಿದಿರಿ, ಪುಲಕ ಹಂಚಿದಿರಿ.
ಆದರ್ಶಗಳ ಕರ್ಕಶತೆಯ ಬೆನ್ನುಹತ್ತಿ

ಸುಮ್ಮನೆ ಸೀತೆಯನು ಕೊಂದ
ರಾಮನಾಗಲಿಲ್ಲ.
ಆದರೂ ನಿಮ್ಮೊಡನೆ ನಿತ್ಯ ಉಸಿರಾಡುವಾಗ
ಕಸ್ತೂರ ಬಾ ನೆನಪಾಗುತ್ತಾರೆ.
ಜೀವದುಸಿರು ಕೊಟ್ಟಿದ್ದೀರಿ ನಲ್ಲ
ಕೊನೆವರೆಗು ಹಾಯಾಗಿ
ಒಂದಾಗಿ ಉಸಿರಾಡುತ್ತ ಇದ್ದುಬಿಡೋಣ.

## ಅವರ ಮಟ್ಟಿಗೆ ಪ್ರೈವೇಟ್ ಅನ್ನೋದೇ ಇರಲಿಲ್ಲ...

ಎನ್. ಆರ್. ಸ್ನೇಹಾ

ನಾನು ಹೈಸ್ಕೂಲ್‌ನಲ್ಲಿ ಓದುವಾಗ ಸ್ವಾತಂತ್ರ್ಯ ದಿನಾಚರಣೆಗೆ ಭಾಷಣ ಓದೋದು ಇರ್‍ತಾ ಇತ್ತು. ನಾನೂ ಮತ್ತು ನನ್ನ ಫ್ರೆಂಡ್ ಒಂಬತ್ತನೇ ಕ್ಲಾಸಲ್ಲಿದ್ದಾಗ ಓದಬೇಕು ಅಂತ ತೀರ್ಮಾನ ಆಯ್ತು. ಫ್ರೆಂಡ್ ಮನೆ ಕ್ವಾಟ್ರಸ್ಸಲ್ಲಿತ್ತು. ಮಧ್ಯಾಹ್ನ ಅವಳು ಊಟಕ್ಕೆ ಹೋದಾಗ ನಾನೂ ಅವರ ಮನೆಗೆ ಹೋದೆ. ಅವಳು ಸೀದಾ ಅವರ ಅಪ್ಪನ ಹತ್ರ ಹೋಗಿ "೧೫ಕ್ಕೆ ಭಾಷಣ ಮಾಡೋದಿದೆ. ಈ ವರ್ಷಾನೂ ಮಾಡ್ಬೇಕಂತೆ. ಒಂದು ಭಾಷಣ ಬರೆದುಕೊಡು" ಅಂದಳು. ಅದಕ್ಕೆ ಅವರಪ್ಪ 'ಆಯ್ತು ಅದಕ್ಕೇನಂತೆ, ಬರೆದುಕೊಡ್ತೀನಿ' ಅಂದರು.

ನಾನು ಸಾಯಂಕಾಲ ಸ್ಕೂಲ್ ಮುಗಿಸ್ಕೊಂಡು ಸೀದಾ ಮನೆಗೆ ಬಂದೆ. ನಮ್ಮಪ್ಪನ ಹತ್ರ ಬಂದು ಸ್ವಲ್ಪ ಮುಜುಗರ ಮಾಡ್ಕೊಂಡೇ 'ಭಾಷಣ ಬರೆದುಕೊಡು' ಅಂತ ಕೇಳಿದೆ. ಎಷ್ಟು ಸಿಟ್ಟು ಬಂದ್ಬಿಡ್ತು ಅವರಿಗೆ ಅಂದ್ರೆ "ನೀನು ಭಾಷಣ ಮಾಡಬೇಕಾಗಿರೋಳು. ಅದಕ್ಕೆ ನಾನು ಬರೆದುಕೊಡೋದಾ? ಅದೆಲ್ಲ ಸಾಧ್ಯಾನೇ ಇಲ್ಲ. ಪುಸ್ತಕಗಳಿದಾವೆ. ಬೇಕಾದರೆ ಕೇಳು ತಕ್ಕೊಡ್ತೀನಿ. ಓದು. ಸ್ವತಂತ್ರ ದಿನಾಚರಣೆ ಅಂದರೆ ಏನೂ ಅಂತ ಓದಿ ಪೇಪರ್ ಮಾಡು ಮೊದಲು. ಆಮೇಲೆ ತಗೊಂಡ್ ಬಾ. ಬೇಕಾದ್ರೆ ಕರೆಕ್ಷನ್ ಮಾಡ್ಕೊಡ್ತೀನಿ" ಅಂತ ಬಯ್ದೇ ಬಿಟ್ರು ಚೆನ್ನಾಗಿ. ನನಗೆ ಅಳೂನೆ ಬಂದಂಗೆ ಆಗ್‌ಬಿಟ್ತು. ಸರಿ, ಹೆಂಗೋ ಭಾಷಣ ಓದಿದೆ ಅನ್ನಿ.

ಅವಾಗ್ಲಿಂದಾನೂ ಹಂಗೇನೆ. ಚಿಕ್ಕ ಹುಡುಗಿ ಅಂತ ಹೇಳಿ Special Considerations ತೋರ್ಸಿದ್ದು ನನಗೆ ಯಾವತ್ತೂ ನೆನಪಿಲ್ಲ. ನಮಗಿಂತ ಬೇರೆಯವರ ಮಕ್ಕಳು ಸರಿ, ಅವರು ಪರ್ಫೆಕ್ಟ್ ಅನ್ನೋ ಭಾವನೆ ನಮ್ಮ ಅಪ್ಪನಲ್ಲಿ ಜಾಸ್ತೀನೇ ಇತ್ತು. ನನಗಂತೂ ಅದರ ಬಗ್ಗೆ ಸಿಟ್ಟು ಬಂದ್ಬಿಡೋದು. ಹೀನಾಮಾನ ಬೇರೆಯವರನ್ನ ಹೊಗಳೋರು. ನನ್ನನ್ನ ಮಾತ್ರ ಕ್ರಿಟಿಸೈಸ್ ಮಾಡ್ತಾನೇ ಇರ್‍ತಾರೆ: ಅಂತ ಇರಿಟೇಟ್ ಆಗೋದು.

ಮಹಾರಾಜ ಕಾಲೇಜಿನಲ್ಲಿ ನಾನು ಎರಡು ವರ್ಷ ಅವರ ಸ್ಟೂಡೆಂಟ್ ಆಗಿದ್ದೆ. ನನ್ನಲ್ಲಿ ಅವರು ಬರೀ ಒಬ್ಬ ವಿದ್ಯಾರ್ಥಿಯನ್ನ ಮಾತ್ರ ಕಂಡರೇ ಹೊರತು, ಕಣ್ಣಂಚಲ್ಲಿ ಕೂಡ ಮಗಳೂ ಅಂತ Extra care ತೋರಿಸಲಿಲ್ಲ. ನಾನು ಸಹ ಅದನ್ನು ಅಪೇಕ್ಷಿಸಲಿಲ್ಲ.

ನಿಮ್ಮದೆಲ್ಲ ರೆಡಿಮೇಡ್ ಬದುಕು. ಸ್ವಪ್ರಯತ್ನಪಟ್ಟು ಅವರಿಂದ ಆಚೆ ಬರಬೇಕು ಅನ್ನೋದು ಅವರ ಫಿಲಾಸಫಿ. ನಾವ್ಯಾರೂ ಬೇರೆಯವರಿಗಿಂತ ಸಪರೇಟ್ಆಗಿ, ಡಿಫರೆಂಟಾಗಿ ಅವರಿಗೆ ಕಾಣ್ತಾ ಇರಲಿಲ್ಲ. ಹೊರಗಿನವರಿಗೆ ಏನು ಹೇಳ್ತಾ ಇದ್ರೋ ಅದನ್ನೇ ನಮಗೂ ಬಂದು ಹೇಳ್ತಾ ಇದ್ರು. ಅವರ ಮಟ್ಟಿಗೆ ಯಾವುದೂ ಪ್ರೈವೇಟ್ ಅನ್ನೋದೆ ಇರಲಿಲ್ಲ. ಅವರು ಹೋರಾಟದಿಂದ ಬಂದಿರೋದ್ರಿಂದ ನಮ್ಮಲ್ಲೂ ಅದನ್ನೇ ಎಕ್ಸ್‌ಪೆಕ್ಟ್ ಮಾಡೋರು. ಅವರ ಬಾಲ್ಯ ಅವರಿಗೆ ತುಂಬಾ ಕಟುತನಾನ ತಂದುಬಿಟ್ಟಿತ್ತು.

ಅವರ ಅಮ್ಮಾನೂ ಅಷ್ಟೆ. ಅವರಿಬ್ಬರದು ಬದುಕೇ ಒಂಥರಾ ವಿಚಿತ್ರವಾದ್ದು. ಅವರಿಗೇ ಅರ್ಥ ಆಗಬೇಕು ಅದು. ನಮಗ್ಯಾರಿಗೂ ಅರ್ಥ ಆಗೊಲ್ಲ. ಅಜ್ಜಿಯ ಎಲ್ಲಾ ಗುಣಗಳು ಒಂಥರಾ ಯಥಾವತ್ತಾಗಿ ಇವರಿಗೆ ಬಂದಿತ್ತು. ಮತ್ತೆ ಅವರ ತಂದೆ ನೆನಪು ಬಹುಶಃ ಅವರಿಗೆ ಇತ್ತೋ ಇಲ್ವೋ ಗೊತ್ತಿಲ್ಲಪ್ಪ. ಅವರು ಯಾವತ್ತೂ ತಾತನ ಬಗ್ಗೆ ಮಾತಾಡ್ತಾನೆ ಇರ್ಲಿಲ್ಲ. ಅಜ್ಜೀನೂ ಅಷ್ಟೆ. ತಾತನ ಬಗ್ಗೆ ಒಂದ್ ದಿನಾನೂ ಅವರು ಹಿಂಗ್ ಇದ್ರು, ಇದನ್ನ ಮಾಡ್ತಾ ಇದ್ರು ಅಂತ ಹೇಳ್ಲಿಲ್ಲ. ಇಷ್ಟು ವರ್ಷದಲ್ಲಿ ನಮ್ಮ ತಂದೆ ಬಾಯಲ್ಲೂ ಕೇಳಲಿಲ್ಲ. ಅಜ್ಜಿ ಬಾಯಲ್ಲೂ ಕೇಳ್ಲಿಲ್ಲ. ಇಬ್ರು ಲೈಫಲ್ಲೂ ಅವರ ರೆಫರೆನ್ಸೇ ಇಲ್ಲ.

*   *   *

ಒಂದ್ಸಲ ನಮ್ಮ ಅಪ್ಪನ ಪರಿಚಯದೋರ ಮಗನ್ನ ನಾನು ನೋಡಬೇಕು ಅಂತ ಪ್ರಪೋಸಲ್ ಇತ್ತು. ಆ ಹುಡುಗ ಬರ್‍ತಾರೆ ಅಂತಾನೋ, ಅವರಪ್ಪ ಅಮ್ಮ ಬರ್‍ತಾರೆ ಅಂತಾನೋ ಇತ್ತು. ಒಂದಿನ ಫಿಕ್ಸ್ ಆಯ್ತು. ಅಷ್ಟೊತ್ತಿಗೆ ಕರೆಕ್ಟಾಗಿ ಮನೆಗೆ ಡಾ. ಶಿವರಾಮು ಬಂದ್ರು. ಈ ನಮ್ಮಪ್ಪಂಗೆ ಅವರು ಬಂದುಬಿಟ್ರು ಅಂದ್ರೆ ಎಂಥಾ ಪ್ರಪಂಚ ಅಂತೀರಿ. ಮಗಳ ಮದುವೆ ಮಾಡ್ಬೇಕು, ನೋಡ್ಬೇಕು, ನನ್ನ ಪ್ರೆಸೆನ್ಸ್ ಅಲ್ಲಿರಬೇಕು ಅಂತ ಇತ್ತಲ್ಲ. ಅದನ್ನೆಲ್ಲ ಮರ್‍ತೇ ಬಿಟ್ರು. 'ನೀನು ಹೋಗಿ ಅವರನ್ನ ಭೇಟಿ ಮಾಡ್ಕೊಂಡು ಬಂದ್ಬಿಡು ' ಅಂತಾ ಹೇಳೋದ!

ಕೇರ್ ಇದೆ, ಆದ್ರೆ ಎಕ್ಸ್‌ಪ್ರೆಸ್ ಮಾಡೋಕೆ ತಾನೂ ಅಲ್ಲಿರಬೇಕು ಅನ್ನೋದನ್ನ ಮರ್‍ತುಬಿಟ್ರು. ಇದನ್ನು ಕೇಳಿ ಆ ಹುಡುಗನ ಕಡೆಯವರಿಗೆ ಒಂಥಾರ ಮುನಿಸು ಮುರಿಸು ಆಗೋಯ್ತು. ಯಾಕೆ ನಿಮ್ಮಪ್ಪ ಬರಲಿಲ್ಲ ಅಂತ ಕೇಳಿದ್ರು. ಹಂಗೆ ಫ್ರೆಂಡ್ಸ್ ಅಂದ್ರೆ ಮುಗೀತು! ಇವರಿಗೆ ಎಲ್ಲ ಮರ್‍ತು ಹೋಗೋದು.

ಅಮ್ಮನ ಕಾಯಿಲೆ ಆದಾಗಿಂದಲೂ ನಾನು Un settled ಅಂತಾ ಭಾವನೆ ಇತ್ತಲ್ಲ. ಅಪ್ಪಿದ್ರೂನೂ " ಒಂದು ಪಕ್ಷ ಮದುವೆ ಆಗದೆ ಇದ್ರೂ ಪರವಾಗಿಲ್ಲ. ಇಂಡಿಪೆಂಡೆಂಟ್ ಆಗಿ ಇರಲಿ ಏನಂತೆ. ಪರವಾಗಿಲ್ಲ ಬಿಡು" ಅಂತಿದ್ರು. ಒಬ್ರು ಸ್ನೇಹಿತರತ್ರ "ಕಡ್ಲೆಕಾಯಿ ಮಾರೋನು

ಆಗಿರಲಿ ಬಿಡ್ರೀ, ಒಳ್ಳೆಯವನಾಗಿದ್ರೆ ಕೊಡೋಕೇನು" ಅಂತಾ ಇದ್ರು. ಅದಕ್ಕೆ ಅವರು "ನೀವು ನಿಮ್ಮ ಮಗಳಿಗೆ ಯಾಕೆ ಓದಿಸಬೇಕಾಗಿತ್ತು. ಕಡ್ಲೇಕಾಯಿ ಮಾರೋದೆ ಹೇಳಿಕೊಡಬೇಕಾಗಿತ್ತು. ಒಂದು ಆರು ತಿಂಗಳು ನನಗೆ ದತ್ತು ಕೊಟ್ಬಿಡಿ. ನಿಮ್ಮ ಮಗಳಿಗೆ ಗಂಡು ಹುಡುಕಿ ಮದುವೆ ಮಾಡಿ ಕೊಡ್ತೀನಿ" ಅಂತ ರೇಗಿಸೋರು.

**ನಾನು ದೆಹಲಿಯ ಕ್ಯಾಂಪ್‌ನಲ್ಲಿದ್ದಾಗ ಅಪ್ಪ ನನಗೆ ಬರೆದ ಪತ್ರ**

ಪ್ರೀತಿಯ ಸ್ನೇಹಾ,

ನಿನ್ನ ಕಾಗದದ ನಿರೀಕ್ಷೆಯಲ್ಲಿ ಎಲ್ಲ ಕಾಯುತ್ತಿದ್ದೆವು. ನಿನ್ನ ಕಾಗದ ನೋಡಿ ಎಲ್ಲರಿಗೂ ಖುಷಿಯಾಯಿತು.

ನಿನ್ನ ರೈಲು ಪ್ರಯಾಣ, ದೆಹಲಿಯ camp ಅನುಭವ, ನಿನ್ನ ಗೆಳತಿಯರು, ಅಲ್ಲಿಯ ಊಟ, ಪರಿಸರ ಇತ್ಯಾದಿ ನಿನಗೆ ಹೊಸ ಭಾವನೆಗಳನ್ನು ಉಂಟು ಮಾಡುತ್ತಿದೆಯಲ್ಲವೇ ?

ಇದೊಂದು ಒಳ್ಳೆಯ ಅವಕಾಶ. ಮನೆಯಿಂದ ಬಹಳ ದೂರ ಹೋದಾಗ , ಹೊರ ಜಗತ್ತು ಎಷ್ಟು ವಿಶಾಲವಾಗಿದೆ ಮತ್ತು ಎಷ್ಟು ವಿಭಿನ್ನವಾಗಿದೆ ಎಂಬ ತಿಳುವಳಿಕೆ ಉಂಟಾಗುತ್ತದೆ. ಮನೆಯಲ್ಲೇ ಕುಳಿತರೆ ಅನೇಕ ವಿಚಾರಗಳು ನಮಗೆ ಅರ್ಥವಾಗುವುದಿಲ್ಲ.

ನಮ್ಮ ಭಾರತ ಎಷ್ಟು ವೈವಿಧ್ಯತೆಯಿಂದ ಕೂಡಿದೆ ಎಂಬುದನ್ನು ನೀನು ಗಮನಿಸಬಹುದು. ಎಷ್ಟೊಂದು ಭಾಷೆಗಳು, ಎಷ್ಟೊಂದು ರೀತಿಯ ವೇಷ ಭೂಷಣಗಳು, ಊಟೋಪಚಾರಗಳು, ವಿಶಿಷ್ಟ ರೀತಿಯ ಸಾಂಸ್ಕೃತಿಕ ಆಚರಣೆಗಳು, ಧಾರ್ಮಿಕ- ಸಾಮಾಜಿಕ ನಡವಳಿಕೆಗಳು, ಇದನ್ನೇ ಬಹುರೂಪಿ ಸಂಸ್ಕೃತಿ ಎನ್ನುವುದು. ನಿನ್ನ Camp ನಲ್ಲಿ ಕೂಡ ಒಂದು ಪುಟ್ಟ ಭಾರತವನ್ನು ನೀವೆಲ್ಲ ಸೇರಿ ರೂಪಿಸಿರಬಹುದು.

ವಿದ್ಯಾರ್ಥಿನಿಯಾದ ನಿನಗೆ ಇದು ಕೂಡ ವಿದ್ಯಾರ್ಜನೆಯ ಬಹುಮುಖ್ಯವಾದ ಅಂಶವೆಂದು ತಿಳಿಯಬೇಕು. Campನ Collective life Individual life ಗಿಂತ ಎಷ್ಟೊಂದು ಭಿನ್ನವಾಗಿರುತ್ತದೆ. ತರಾವರಿ ನಡವಳಿಕೆಯ ಸ್ವಭಾವದ, ಅಭಿರುಚಿಯ ಸಹವಾಸಿಗಳು ನಿನ್ನ ಜೊತೆಯಲ್ಲಿದ್ದಾರೆ ಅಲ್ಲವೆ? ಈ ಬಗೆಯ ವಿಭಿನ್ನತೆಯಲ್ಲಿ ಸಹಬಾಳ್ವೆ ಕೂಡ ಒಂದು ಅದ್ಭುತ ಅನುಭವ. ಏಕಾಂಗಿಯಾಗಿ ಬಾಲ್ಯವನ್ನು ಕಳೆದ ನಿನಗೆ ಈ ಸಹಬಾಳ್ವೆಯ ಅನುಭವ ಅಗತ್ಯವಾಗಿತ್ತು. ನಮ್ಮ ಹಠ, ಅಹಂಕಾರ ಎಲ್ಲ ಇಂಥ ಕಡೆ ಪ್ರೀತಿಯಾಗಿ, ಸಹನೆಯಾಗಿ ಪರಿವರ್ತನೆಯಾಗಬೇಕು.

ಯಥಾಸ್ಥಿತಿಗಿಂತ ಚಲನೆ ಜೀವಂತ ವ್ಯಕ್ತಿಯ ಮುಖ್ಯ ಕ್ರಿಯೆಗಳಲ್ಲಿ ಒಂದು. ಚಲನೆ ಎಂದರೆ ಕೇವಲ ತಿರುಗಾಟವಲ್ಲ. ನಿರಂತರ ಪರಿವರ್ತನೆ. ಈ ರೀತಿಯ ಚಲನಶೀಲವಾದ ಪರಿವರ್ತನೆಯ ಹೋರಾಟವೇ ನಿಜವಾದ ಜೀವನ. ನೀನು ಪಾದರಸದಂತೆ ಲವಲವಿಕೆಯಿಂದ ಚಲಿಸುವ ವಿಚಾರವಂತ ಪ್ರಬುದ್ಧ ಮನುಷ್ಯಳಾಗಬೇಕೆಂಬುದು ನಮ್ಮೆಲ್ಲರ ಆಸೆ.

'Ready made' ಆಗಿರುವ ಜೀವನವನ್ನು ನಿರಾಕರಿಸುವುದನ್ನು ನೀನು ಕಲಿಯಬೇಕು. ಸ್ವಂತ ವಿಚಾರ ಮಾಡಬೇಕು, ಸ್ವಂತ ತೀರ್ಮಾನ ತೆಗೆದುಕೊಳ್ಳಬೇಕು. ಸ್ವಾಭಿಮಾನಿ ಮತ್ತು ಸ್ವಾವಲಂಬಿಯಾಗಿ ಬದುಕಬೇಕು. ಯಾವುದೇ ತೀರ್ಮಾನ ತೆಗೆದುಕೊಳ್ಳುವ ಮೊದಲು ಹತ್ತು ಸಾರಿ ಗಂಭೀರವಾಗಿ ಯೋಚಿಸಬೇಕು. ಇದನ್ನ ಯಾಕೆ ಬರೆಯುತ್ತಿದೇನೆಂದರೆ, ಮನೆಯಲ್ಲಿರುವುದು Ready made, ಜೀವನ ಹೊರಗಡೆ ಹೋದಾಗ ಅನೇಕ ವಿಚಾರಗಳು ತಿಳಿಯುತ್ತವೆ. ನಾವು ಬೇರೆ ಮನುಷ್ಯರಿಂದ ಕಲಿಯುವುದು ತುಂಬಾ ಇರುತ್ತದೆ.

ಮನೆಯಲ್ಲಿ ನೀನಿಲ್ಲದೆ ಎಲ್ಲರಿಗೂ ನಿನ್ನ Absenceನ ಅನುಭವವಾಗುತ್ತಿದೆ. ನಿಕ್ಕಿ - ಜೂಲಿ ಕೂಡ ನಿನಗಾಗಿ ಕಾಯುತ್ತಿದ್ದಾರೆ. ನಿಕ್ಕಿ, ಸ್ನೇಹಾ ಎಂದು ಕರೆದಕೂಡಲೇ ಆಕಡೆ ಈಕಡೆ ನಿನಗಾಗಿ ಹುಡುಕಾಡುತ್ತಾನೆ. ಈ ಮೂಕ ಪ್ರಾಣಿಗಳ ಪ್ರೀತಿ Attachment ಎಷ್ಟು ಮುಗ್ಧವಾದದ್ದು. ಈ ಕಾಗದ ಬರೆಯುವಾಗಲೂ ಕೂಡ ನಿಕ್ಕಿ ನನ್ನ ಮಂಚದ ಕೆಳಗೆ ನನ್ನನ್ನೇ ನೋಡುತ್ತಾ ಮಲಗಿದ್ದಾನೆ. ನಿಕ್ಕಿಯ ಪಳಪಳ ಹೊಳೆಯುವ ಕಣ್ಣುಗಳಲ್ಲಿ ಎಷ್ಟೊಂದು ಅವ್ಯಕ್ತ ಭಾವನೆಗಳು ತುಂಬಿ ತುಳುಕುತ್ತಿವೆ.

ಅಜ್ಜಿ ನಿನ್ನನ್ನು ದಿನಕ್ಕೆ ಹತ್ತಾರುಬಾರಿಯಾದರೂ ನೆನಪು ಮಾಡುತ್ತಾರೆ. ದಿನಗಳನ್ನು ಲೆಖ್ಖಹಾಕುತ್ತಾರೆ. ಈ ಭಾವನಾತ್ಮಕ ಪ್ರೀತಿಯ ಸಂಬಂಧ ಎಷ್ಟು ಪವಿತ್ರವಾದದ್ದು ಅಲ್ವಾ.

ದೂರ ಹೋದಾಗ ನಮ್ಮ ಊರು ಮನೆ ಎಲ್ಲಾ ನಮಗೆ ಹೆಚ್ಚು ನೆನಪಾಗುತ್ತವೆ ಮತ್ತು ನಮ್ಮ ಊರು ನಮಗೆ ನೆಮ್ಮದಿ ಕೊಡುವಷ್ಟು ಬೇರೆಲ್ಲೂ ಇದು ದೊರೆಯಲಾರದು. ಇದಕ್ಕೆ ಮುಖ್ಯಕಾರಣ ನಮ್ಮ Attachment ಮತ್ತು Settled life. ಇದಲ್ಲದೆ ಮೈಸೂರು ನಿಜಕ್ಕೂ ತುಂಬ ಸುಂದರವಾದ ನಗರ. ಈ ನಗರದಲ್ಲಿ ಇರುವ ನಾವು ಭಾಗ್ಯಶಾಲಿಗಳು ಅಲ್ಲವೇ? ದೂರಹೋದಾಗ ಇದು ಇನ್ನೂ ಸುಂದರವಾಗಿ ಕಾಣುತ್ತದೆ.

ಬೇರೆ ಊರು - ಕೇರಿಗಳನ್ನು ನೋಡಿದಾಗ ಒಂದು Camparitive idea. Contrast ಎಂದು ಈ ತಿಳುವಳಿಕೆ ಉಂಟಾಗುತ್ತದೆ.

ಅನಿತಾ ಅಮೆರಿಕಾದಿಂದ ಬಂದಿದ್ದಾಳೆ, ಅವರನ್ನೆಲ್ಲ ಊಟಕ್ಕೆ ಕರೆದಿದ್ದೆವು. ಸಂತೋಷದಿಂದ ಕಾಲ ಕಳೆದೆವು. ಎಲ್ಲರು ನಿನ್ನನ್ನು ನೆನಪು ಮಾಡಿಕೊಂಡರು. ಅನಿತಾಳಲ್ಲಿ ಎಷ್ಟೊಂದು ಆತ್ಮವಿಶ್ವಾಸ ಮೂಡಿದೆ. ಹುಡುಗಿಯರಲ್ಲಿ ಇಂಥ ಆತ್ಮವಿಶ್ವಾಸ, ನಿರ್ಭೀತಿ ಯಾವಾಗಲು ಇರಬೇಕು. ಧೈರ್ಯದಿಂದ ಜೀವನವನ್ನು ಎದುರಿಸುವ ಶಕ್ತಿ ಪಡೆದುಕೊಳ್ಳಬೇಕು.

ಮಾನವಿಗೂ ಮತ್ತು ನಿನ್ನ ಗೆಳತಿಯರಿಗೆಲ್ಲ ತಿಳಿಸು. ಇತರ ರಾಜ್ಯದ ಹುಡುಗಿಯರ ಜೊತೆ ಗೆಳೆತನ ಮಾಡಿಕೊಂಡು ಚೆನ್ನಾಗಿ ಬೆರೆಯಿರಿ. ಬಂದ ಮೇಲೆ ನಿನ್ನ ಅನುಭವ ಕೇಳಲು ನಾವು ಕುತೂಹಲದಿಂದ ಕಾಯುತ್ತಿದ್ದೇವೆ

ನಿನ್ನ ಪ್ರೀತಿಯ ಅಪ್ಪ
ಕೆ.ರಾಮದಾಸ್

# ಅಪ್ಪನನ್ನು ನೆನೆಯುತ್ತಾ, ಕೃತಜ್ಞತೆಯಿಂದ...

ಎಸ್.ಆರ್. ಸ್ನೇಹಾ

ಅಪ್ಪ ಎಂದೂ ಖಾಸಗಿ ವ್ಯಕ್ತಿ ಆಗಿರಲೇ ಇಲ್ಲ. ಹಾಗಾಗಿ ಮಗಳಾಗಿ, ಒಬ್ಬಳೇ ಮಗಳಾಗಿಯೂ ಕೂಡ ನನ್ನಲ್ಲಿ ಅತ್ಯಂತ ವಿಶೇಷವಾಗಿ ಹೇಳಿಕೊಳ್ಳಬೇಕೆನಿಸುವ ಖಾಸಗಿ ವಿಚಾರಗಳು ತುಂಬಾ ಕಡಿಮೆ. ಸಮಾಜಕ್ಕೆ ರಾಮದಾಸ್ ಹೇಗೆ ಕಾಣುತ್ತಿದ್ದರೋ ಮನೆಯವರಿಗೂ ಹಾಗೇ ಕಾಣುತ್ತಿದ್ದರು. ಎಂದೂ ಅವರ ವ್ಯವಹಾರದಲ್ಲಿ ಭಿನ್ನವಾದ ಗುಣಗಳು ಕಾಣಲೇ ಇಲ್ಲ. ಅವರಿಗೆ ಖಾಸಗಿ ಎನಿಸುವ ಜೀವನವೇ ಇರಲಿಲ್ಲ. ಕುಟುಂಬವೂ ಸಮಾಜದ ಅಂಗವೇ ಆಗಿತ್ತು. ಈ ಅವರ ನಡವಳಿಕೆ ಕೆಲವೊಮ್ಮೆ ಅಚ್ಚರಿಯನ್ನೂ ಕೆಲವೊಮ್ಮೆ ಮುಜುಗರವನ್ನೂ ತಂದರೂ ನನಗೆ ಅವರು ಹಾಗೆ ಇದ್ದಿದ್ದರ ಬಗ್ಗೆ ಹೆಮ್ಮೆ ಇದೆ. ದಿನದ ೨೪ ಗಂಟೆಗಳೂ ಸಮಾಜಮುಖಿಯಾಗಿ ಚಿಂತಿಸುವುದು, ಬದುಕುವುದು, ವ್ಯವಹರಿಸುವುದು ಸುಲಭವಲ್ಲ. ಸಮಾಜದ ವಿರೂಪಗಳಿಗೆ ಹೇಗೆ ಅವರು ನಿಷ್ಠುರವಾಗಿ ಪ್ರತಿಕ್ರಿಯಿಸುತ್ತಿದ್ದರೋ ಹಾಗೆಯೇ ಮನೆಯೊಳಗಿನ ಸಣ್ಣಪುಟ್ಟ ಗೊಂದಲಗಳಿಗೂ ಅಷ್ಟೇ ನಿಷ್ಠುರವಾಗಿ ಪ್ರತಿಕ್ರಿಯಿಸುತ್ತಿದ್ದರು. ಯುವಜನಾಂಗವನ್ನು ಕುರಿತ ಅವರ ಉತ್ತರಗಳು ಎಲ್ಲವೂ ನನಗೂ ಅನ್ವಯಿಸುತ್ತಿದ್ದವು. ಮಗಳಿಗಾಗಿ ಎಂದು ಅವರು ಎಂದೂ ಏನನ್ನೂ ಹೇಳುತ್ತಿರಲಿಲ್ಲ. 'ಪಾದರಸ'ಅವರ ಮೆಚ್ಚಿನ ಪದವಾಗಿತ್ತು. ಯುವಜನರು ಪಾದರಸದಂತೆ ಚಟುವಟಿಕೆಯಿಂದ, ಲವಲವಿಕೆಯಿಂದ ಜೀವನವನ್ನು ರೂಪಿಸಿಕೊಳ್ಳಬೇಕು ಎನ್ನುವುದು ಅವರ ನಿರಂತರ ಹಂಬಲ. ನನಗೂ ಅದನ್ನೇ ಪದೇಪದೇ ಹೇಳುತ್ತಿದ್ದರು.

ತನ್ನಂತೆ ತನ್ನ ಮಗಳೂ ಸ್ವಾಭಿಮಾನಿಯಾಗಿ ಬೆಳೆಯಬೇಕು ಎನ್ನುವುದು ಅವರಿಗೆ ಇದ್ದ ಆಸೆ. ತಮ್ಮೆಲ್ಲ ಮಾತುಗಳಲ್ಲಿ, ಕೆಲಸಗಳಲ್ಲಿ ಅವರು ಅದನ್ನೇ ಮತ್ತೆಮತ್ತೆ ವ್ಯಕ್ತಪಡಿಸುತ್ತಿದ್ದರು. ಮರ ಹತ್ತುವುದು, ಸೈಕಲ್ ಕಲಿಯುವುದು, ರಿಪೇರಿ ಕೆಲಸಗಳು, ಮರಗಿಡ, ಪ್ರಾಣಿಪಕ್ಷಿಗಳನ್ನು

ನೈಜವಾಗಿ ಪ್ರೀತಿಸುವುದು ಇವೆಲ್ಲವೂ ಅವರು ನಾನೂ ಮಾಡಬೇಕೆಂದು ಆಸೆಪಟ್ಟ ವಿಚಾರಗಳು. ಎಂದೂ ಅವರು ನನ್ನನ್ನು ಇದಾಗು, ಅದಾಗು, ಇದನ್ನೇ ಓದು, ಅದನ್ನೇ ಓದು, ಇದೇ ಕೆಲಸಕ್ಕೆ ಸೇರು ಎಂದು ಒತ್ತಾಯಿಸಲಿಲ್ಲ. ನನ್ನನ್ನು ಅವರು 'ರೂಪಿಸುತ್ತೇನೆ' ಎಂದು ಹೊರಡಲಿಲ್ಲ, ಬದಲಾಗಿ ನನ್ನನ್ನು ನಾನು ರೂಪಿಸಿಕೊಳ್ಳುವುದಕ್ಕೆ ಮುಕ್ತವಾಗಿ ದಾರಿಮಾಡಿಕೊಟ್ಟು ಗಮನಿಸುತ್ತಿದ್ದರು.

'ನಿಮ್ಮ ಅಪ್ಪನ ಹೆಸರು ಹೇಳಿ, ನಿಮ್ಮ ಕೆಲಸ ಸುಲಭವಾಗಿ ಆಗುತ್ತೆ' ಅಂತ ಹಲವಾರು ಸನ್ನಿವೇಶಗಳಲ್ಲಿ ನನಗೆ ಹಲವರು ಸಲಹೆ ನೀಡುತ್ತಿದ್ದರು. ಆದರೆ ಆ ರೀತಿಯ ವಿಚಾರಗಳು, ಸಾಧ್ಯತೆಗಳು ಅಥವಾ ಅದರ ಆವಶ್ಯಕತೆಯೇ ನನಗೆ ಬೀಳದಂತೆ ಅಪ್ಪ ನನ್ನನ್ನು ಅವೆಲ್ಲದರಿಂದ ದೂರವಾಗಿ, ಸ್ವಚ್ಛಂದವಾಗಿ ಬೆಳೆಯಲು ಬಿಟ್ಟಿದ್ದರು. ಇಲ್ಲಿಯವರೆಗೂ ಯಾವುದೇ ಸಂದರ್ಭದಲ್ಲಿಯೂ ಅವರ ಹೆಸರು ಹೇಳಿಕೊಂಡು ಕೆಲಸ ಗಿಟ್ಟಿಸಿಕೊಳ್ಳುವ ಪರಿಸ್ಥಿತಿಯನ್ನು ನಾನು ತಂದುಕೊಳ್ಳಲಿಲ್ಲ ಎಂಬುದು ಅವರಿಗೆ ಖುಷಿ ಕೊಟ್ಟಿತ್ತು. ಆದರೆ ಅದನ್ನು ಅವರೆಂದೂ ನನ್ನೆದುರಿಗೆ ವ್ಯಕ್ತಪಡಿಸಲಿಲ್ಲ. ಹೊಗಳಿದರೆ ಎಲ್ಲಿ ಮಗಳು ಅಟ್ಟಕ್ಕೇರಿ ಬಿಡುತ್ತಾಳೋ ಎನ್ನುವ ವಿಚಿತ್ರ ಭೀತಿ ಅವರಲ್ಲಿತ್ತು. ಹಾಗಾಗಿ ಹಲವಾರು ಸಂದರ್ಭಗಳಲ್ಲಿ ಅವರು ನನ್ನನ್ನು ಮೆಚ್ಚುವುದನ್ನು ಕೂಡ ಮರೆತುಬಿಡುತ್ತಿದ್ದರು!ಹೀಗಿತ್ತು ಅವರ ಸ್ವಾಭಿಮಾನಿ ಕಾಳಜಿ.

ಮಹಾರಾಜ ಕಾಲೇಜಿನಲ್ಲಿ ನಾನು ಎರಡು ವರ್ಷಗಳು ಅವರ ವಿದ್ಯಾರ್ಥಿನಿಯಾಗಿಯೂ ಇದ್ದೆ. ನನ್ನಲ್ಲಿ ಅವರು ಕೇವಲ ಒಬ್ಬ ವಿದ್ಯಾರ್ಥಿನಿಯನ್ನು ಮಾತ್ರ ಕಂಡರೇ ಹೊರತು, ಅವರ ಕಣ್ಣಂಚಿನಲ್ಲಿಯೂ ಎಂದೂ ನನ್ನನ್ನು ಅವರು ಮಗಳೆಂಬ ವಿಶೇಷ ಸೂಚನೆ ತೋರಲಿಲ್ಲ. ಅದನ್ನು ನಾನೂ ಅಪೇಕ್ಷಿಸಲಿಲ್ಲ.

ಅಪ್ಪ ನನಗೆ ಕೊಟ್ಟ ಅತ್ಯಮೂಲ್ಯ ಬಳುವಳಿ ಜಾತ್ಯತೀತತೆ. ಅವರಂತೆ ನನ್ನನ್ನೂ ಜಾತಿರಹಿತವಾಗಿ, ಕೇವಲ ಮನುಷ್ಯಳಾಗಿ ಗುರುತಿಸಿಕೊಳ್ಳಲು ಅವರು ಸಹಾಯ ಮಾಡಿದರು. ಅದಕ್ಕಾಗಿ ನಾನವರಿಗೆ ಸದಾ ಚಿರಋಣಿ. ನಮ್ಮಿಬ್ಬರ ನಡುವಿನ ಒಂದು ಬಲವಾದ ಸಮಾನ ಅಂಶವೆಂದರೆ ಇದು. ನಾವಿಬ್ಬರು ಸಂಪೂರ್ಣ ಜಾತ್ಯತೀತರು. ಈ ಕಾರಣ ನನ್ನ ಮದುವೆಯ ವಿಷಯ ಬಂದಾಗ ಸಹಜವಾಗಿ ಅಪ್ಪ ಸ್ವಲ್ಪ ಆತಂಕಕ್ಕೊಳಗಾದಂತೆ ತಳಮಳಿಸಿದ್ದರು. ಆದರೆ ಆಗಲೂ ನಾನು ರಾಜಿ ಆಗಿಬಿಡುವಷ್ಟು ಧೈರ್ಯಗೆಡಲಿಲ್ಲ. ನಮ್ಮ ನಿಲುವು ಸಡಿಲವಾಗಲಿಲ್ಲ. ಸಮಾನ ಮನಸ್ಕ ಓಂಕಾರ್ ಅವರನ್ನು ವರಿಸುವ ನನ್ನ ಸ್ವಂತ ನಿರ್ಧಾರ ಕೊನೆಗೆ ಅಪ್ಪನ ಆತಂಕಕ್ಕೆ ತೆರೆ ಎಳೆಯಿತು. ಅಳಿಯನನ್ನು ಮಗನಂತೆ ಕಂಡ ಅಪ್ಪನ ಸಲಿಗೆ ಮತ್ತು ಮಾವನನ್ನು ತನ್ನ ತಂದೆಯಂತೆಯೇ ನಡೆಸಿಕೊಂಡ ಅಳಿಯ-ಅವರಿಬ್ಬರ ನಡುವಿನ ಅನೌಪಚಾರಿಕವಾದ ಸಂಬಂಧ ನಮ್ಮ ಮನೆಗೆ, ಅಪ್ಪನಿಗೆ ಅತೀವ ತೃಪ್ತಿ ನೀಡಿತ್ತು.

ಅಪ್ಪನ ಮಾತುಗಳಲ್ಲಿ ಅವರ ಅದ್ಭುತ ಬಾಲ್ಯದ ದಿನಗಳು ರಂಗೇರುತ್ತಿದ್ದವು. ತಮ್ಮ ಎಳವೆಯಲ್ಲಿಯೇ ತನ್ನ ತಂದೆಯನ್ನು ಕಳೆದುಕೊಂಡು ತಾಯಿಯ ಕಣ್ಗಾವಲಿನಲ್ಲಿ, ಅತೀ ಅಕ್ಕರೆಯಲ್ಲಿ ಬೆಳೆದ ದಿನಗಳವು. ಕಾಡುಮೇಡುಗಳಲ್ಲಿ ಸ್ವಚ್ಛಂದ ಹಕ್ಕಿಯಂತೆ ಹಾರುತ್ತ ಕಾಲ

ಕಳೆದವರು. ಕೊನೆಯ ದಿನದವರೆಗೂ ಅವರು ತನ್ನ ಸ್ವಾತಂತ್ರ್ಯಕ್ಕೆ, ಸ್ವಾಭಿಮಾನಕ್ಕೆ ಚ್ಯುತಿಯಾಗದಂತೆಯೇ ಬದುಕಿದ್ದು ನಮಗೂ ಅವರಿಗೂ ನೆಮ್ಮದಿಯ ವಿಷಯ. ಪರಿಸರವೇ ಗುರುವಾಗಿ ಅದರಿಂದ ಅವರು ಕಲಿತ ನಿರ್ಭಿಡೆ ಹಾಗೂ ಸ್ವಾತಂತ್ರ್ಯ ಅವರ ವ್ಯಕ್ತಿತ್ವವನ್ನು ಗಟ್ಟಿಯಾಗಿ ರೂಪಿಸುವಲ್ಲಿ ನೆರವಾಗಿದ್ದವು. ಇಂದಿನ ಹೊಸ ಪೀಳಿಗೆಗೆ ಆ ರೋಮಾಂಚಕ ಬಾಲ್ಯ ದಕ್ಕುತ್ತಿಲ್ಲವಲ್ಲ ಎಂಬ ಸಂಗತಿ ಅವರನ್ನು ಸಂಕಟಕ್ಕೀಡು ಮಾಡಿತ್ತು.

ಮೈಸೂರು ಅವರ ವ್ಯಕ್ತಿತ್ವಕ್ಕೆ ಒಟ್ಟಾರೆಯಾಗಿ ಒಂದು ನಿರ್ದಿಷ್ಟ ರೂಪ ಕೊಟ್ಟಿತ್ತು. ಹಾಗಾಗಿ ಮೈಸೂರು ಅವರಿಗೆ ಅತ್ಯಂತ ಪ್ರಿಯವಾದ ಊರು. ಅಪರಿಚಿತನಾಗಿ, ಎಲ್ಲಿಂದಲೋ ಬಂದವನಂತೆ ಮೈಸೂರು ಸೇರಿದ ಅಪ್ಪನಿಗೆ ಲಂಕೇಶ್. ತೇಜಸ್ವಿ, ಶಾಮಣ್ಣ, ಶ್ರೀರಾಂ, ನಂಜುಂಡಸ್ವಾಮಿ ಮತ್ತು ಶಿವತೀರ್ಥನ್‌ರಂಥ ಆತ್ಮೀಯ ಗೆಳೆಯರ ಒಡನಾಟವಿತ್ತು. ಅದು ಅವರ ಗಟ್ಟಿ ವ್ಯಕ್ತಿತ್ವಕ್ಕೆ ಹೊಳಪು ನೀಡುತ್ತಾ ಬಂತು. ರಕ್ತ ಸಂಬಂಧಗಳಿಗಿಂತ ಅಪ್ಪನಿಗೆ ಗೆಳೆತನವೇ ಎಂದೂ ಮುಖ್ಯವಾಗಿತ್ತು. ಅವರು ಕೊನೆಯ ತನಕವೂ ಅದೇ ಗುಂಗಿನಲ್ಲಿದ್ದು ಸಂಭ್ರಮಿಸಿದರು. ತನ್ನೆಲ್ಲಾ ಹಳೆ-ಹೊಸ ಗೆಳೆಯರನ್ನು ಅಷ್ಟೇ ಕೃತಜ್ಞತೆಯಿಂದ ನೆನೆಯುತ್ತಿದ್ದರು.

ಅಮ್ಮನ ಅನಾರೋಗ್ಯ ಈ ಕಳೆದ ಕೆಲವು ವರ್ಷಗಳಿಂದ ಅಪ್ಪನನ್ನು ಜರ್ಜರಿತಗೊಳಿಸಿತ್ತು. ಹೊರನೋಟಕ್ಕೆ ಅವರು ತುಂಬಾ ಎಚ್ಚರಿಕೆಯಿಲ್ಲದ ವ್ಯಕ್ತಿಯಂತೆ ಕಂಡರೂ ಅಮ್ಮನನ್ನು ಅವರು ನೋಡಿಕೊಂಡ ರೀತಿ ಮಾತಿಗೆ ನಿಲುಕದ್ದು. ಎಲ್ಲೋ ಅಮ್ಮನ ಡಿಪ್ರೆಶನ್‌ಗೆ ತನ್ನ ಮುಂಗೋಪವೂ ಕಾರಣವಾಯಿತೇನೋ ಎಂದೂ ಅವರು ಮರುಗಿದ್ದರು. ಆದರೆ ಅದನ್ನು ಮೀರಿ ಅಮ್ಮನ ಮರುಜನ್ಮಕ್ಕೂ ಅವರೇ ಕಾರಣರಾದರು.

ಈ ಎಲ್ಲಾ ವಿಚಾರಗಳೂ ನನಗೆ ಖಾಸಗಿ ಎನಿಸುವುದೇ ಇಲ್ಲ. ಅಪ್ಪನ ಜೀವನದ ಇಡೀ ಭಾಗ ಪಾರದರ್ಶಕವಾಗಿತ್ತು. ಅವಿಸಿಟ್ಟ ವಿಚಾರಗಳು, ಸಂದರ್ಭಗಳು ಯಾವುದೂ ಇಲ್ಲ. ಹಾಗಾಗಿ ಇನ್ನೂ ಹೇಳುತ್ತಾ ಹೋಗುವುದಕ್ಕೆ ಹೆಚ್ಚೇನೂ ಇಲ್ಲ. ಅವರ ಸುತ್ತಲಿನ ಸಮಾಜ ಹೇಗೆ ಅವರನ್ನು ನೆನೆಯುತ್ತದೆಯೋ ಹಾಗೆಯೇ ಕುಟುಂಬದ ಸದಸ್ಯರಾಗಿ ನಾವೂ ಕೂಡ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

# ಉರಿವ ಒಲೆಗಳ ಮುಂದೆ: ಹೀಗೆ ನಿನ್ನ ಕಂಡೆ....

ಸವಿತಾ ನಾಗಭೂಷಣ

ಸಮಾಜವಾದಿಗಳ ಪತ್ನಿಯರ ಪಡಿಪಾಟಲು ಬಹು ವಿಚಿತ್ರವಾದದ್ದು. ಇನ್ನು ಸಮಾಜವಾದಿಯು ವಿಚಾರವಾದಿಯೂ ಆಗಿದ್ದರಂತೂ ಆ ಪಡಿಪಾಟಲು ಯಾವ ಬಗೆಯದು ಎಂದು ಹೇಳುವುದೇ ಬೇಡ. ಗಂಡಂದಿರ ಸಮಾಜವಾದ-ವಿಚಾರವಾದವೆಲ್ಲವನ್ನೂ ಹೆಂಡತಿಯರೇ ಆಚರಣೆಗೆ ತಂದು ಅವರ ಮಾನ-ಪ್ರತಿಷ್ಠೆಗಳನ್ನು ಕಾಪಾಡಬೇಕಾಗಿರುತ್ತದೆ! ಇಂತಹ ಸಂಕಷ್ಟಗಳೆಲ್ಲವನ್ನೂ ನುಂಗಿಟ್ಟುಕೊಂಡು ಅದನ್ನು ಆದಷ್ಟೂ ಆನಂದವಾಗಿ ಪರಿವರ್ತಿಸಿಕೊಳ್ಳಲು ಜೀವನ ಪೂರ್ತಾ ಹೆಣಗಿ ಕೊನೆಗೆ ಸೋತು ಹೋದ ನಿರ್ಮಲಾ ರಾಮದಾಸ್ ಇಷ್ಟು ಬೇಗನೆ ನಮ್ಮನ್ನು ಅಗಲಿ ಹೋಗಿದ್ದು ನಿಜವಾಗಿಯೂ ದುಃಖದ ಸಂಗತಿಯಾದರೂ, ಕಳೆದ ಹತ್ತು ವರ್ಷಗಳಲ್ಲಿ ಅವರು ಅನುಭವಿಸಿದ ಮಾನಸಿಕ ಹಾಗೂ ದೈಹಿಕ ಸಂಕಟಗಳ ದೃಷ್ಟಿಯಿಂದ ಒಂದು ರೀತಿಯಲ್ಲಿ ಒಳ್ಳೆಯದೇ ಎಂದರೆ ಯಾರೂ ತಪ್ಪು ತಿಳಿಯಲಾರರು ಎಂದು ನಾನು ಭಾವಿಸಿದ್ದೇನೆ. ಅವರ ಸಂಕಷ್ಟಗಳನ್ನು ಹತ್ತಿರದಿಂದ ಕಂಡಿದ್ದ ನನಗೆ ಅವರು ತೋರುತ್ತಿದ್ದ ಬದುಕುವ ಇಚ್ಛಾ ಶಕ್ತಿ ಹಾಗೂ ಅವರನ್ನು ಬದುಕಿಸಿಕೊಳ್ಳಲು ರಾಮದಾಸ್ ಕಷ್ಟಪಟ್ಟು ಸಂಘಟಿಸಿಕೊಳ್ಳುತ್ತಿದ್ದ ಸಂಕಲ್ಪ ಶಕ್ತಿ, ನನಗೆ ದಾಂಪತ್ಯದ ಆಳದ ಸತ್ಯವೊಂದನ್ನು ಪರಿಚಯಿಸಿತ್ತು.

ಮೇಲ್ನೋಟಕ್ಕೆ ಸಿಡುಕಿನ ಪ್ರತಿ ಮೂರ್ತಿಯಾಗಿರುತ್ತಿದ್ದ ರಾಮದಾಸ್ ಒಳಗೆ ಒಲುಮೆಯ ನದಿಯೇ ಆಗಿದ್ದರು. ನಿರ್ಮಲಾರ ತೀವ್ರ ಅನಾರೋಗ್ಯದ ದಿನಗಳಲ್ಲಿ ಅವರನ್ನು ಮಗುವಿನಂತೆ, 'ಏನು ಬೇಕು ಹೇಳಪ್ಪ... ನಿನಗೆ ಏನೆಲ್ಲ ಅನುಕೂಲ ಬೇಕೋ, ಚಿಕಿತ್ಸೆ ಬೇಕೋ ಅದನ್ನೆಲ್ಲ ಒದಗಿಸಿದ್ದೀನೋ ಇಲ್ವೋ ಹೇಳಪ್ಪಾ?' ಎಂದು ಗದ್ಗದಿತರಾಗಿ ಪತ್ನಿಯಿಂದ ಅರ್ಹತಾ ಪತ್ರ ಬೇಡುವ ಪ್ರಯತ್ನದಲ್ಲಿ ಅವರು ತಮ್ಮ ಮೂರು ದಶಕಗಳ ದಾಂಪತ್ಯ ಕುರಿತಂತೆ ಆತ್ಮ ನಿರೀಕ್ಷಣೆಯಲ್ಲಿ ತೊಡಗಿರುವಂತೆ ನನಗೆ ತೋರುತ್ತಿತ್ತು. ನಿರ್ಮಲಾ ಸಹ ಯಾವುದೇ ಕಹಿ

ನೆನಪಿನ ಸೋಂಕೂ ಇಲ್ಲದಂತೆ, ಪತಿಯ ಹೊಸ ರೀತಿಯ ಲಲ್ಲೆಯಿಂದ ತುಸು ನಾಚಿದಂತೆ ನಿಧಾನವಾಗಿ ಹೆಜ್ಜೆಯಿಡುತ್ತಾ ಹೊರ ಹೋಗುತ್ತಿದ್ದರು!

ಅತಿ ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದ ರಾಮದಾಸ್‌ರನ್ನು ಒಂಟಿ ಹೆಂಗಸಾಗಿ ಬಲು ಕಷ್ಟದಲ್ಲಿ ಸಾಕಿ ಸಲಹಿದ ಅವರ ತಾಯಿ ಮಂಜಮ್ಮನವರು, ಮದುವೆಯಾದ ಮೇಲೂ ಮಗನನ್ನು ಹೆಂಡತಿಯ ಗಂಡನನ್ನಾಗಿ ಬಿಡದೆ ತನ್ನ ಮಗನನ್ನಾಗಿಯೇ ಕಾಪಾಡಿದಂಥವರು! ರಾಮದಾಸ್‌ರ ಸಕಲ ಹುಚ್ಚಾಟಗಳನ್ನು ಸಹಿಸಿಕೊಂಡೇ ಅವರ ಎಲ್ಲ ಸುಖ ಸೌಕರ್ಯಗಳನ್ನು ನೋಡಿಕೊಂಡವರು. ಇದರಿಂದಾಗಿ ಎಲ್ಲ ಗೃಹ ಕೃತ್ಯದ ಜಂಜಾಟಗಳಿಂದ ಮುಕ್ತರಾಗಿದ್ದ ನಿರ್ಮಲಾ ತಮ್ಮ ಸಾಹಿತ್ಯಾಭಿರುಚಿಯನ್ನೂ, ಅಧ್ಯಾಪನ ವೃತ್ತಿಯನ್ನೂ ರೂಢಿಸಿಕೊಳ್ಳಲು ಸಹಾಯಕವಾಯಿತು. ರಾಮದಾಸ್‌ರ ಎಲ್ಲ ಹೋರಾಟಗಳಲ್ಲಿ ಸಾಥ್ ನೀಡುತ್ತಿದ್ದ ಆ ದಿನಗಳು ಅವರ ಅತ್ಯುತ್ತಮ ದಿನಗಳು. ಆಗ ರಾಮದಾಸ್ ಕಲ್ಲು ಬಂಡೆಯಂತೆ ಕಂಡರೆ, ಪಕ್ಕದಲ್ಲೇ ಇರುತ್ತಿದ್ದ ನಿರ್ಮಲಾ ನಮಗೆ ಕಲ್ಲು ಸಕ್ಕರೆಯಂತೆ ಕಾಣುತ್ತಿದ್ದರು-ಮಾತಿನಲ್ಲೂ, ವ್ಯಕ್ತಿತ್ವದಲ್ಲೂ, ಬರವಣಿಗೆಯಲ್ಲೂ.

ಆದರೆ ಮಂಜಮ್ಮ ನಿಧನರಾದ ಮೇಲೆ ಗೃಹ ಕೃತ್ಯದ ಎಲ್ಲ ಭಾರಗಳೂ ನಿರ್ಮಲಾರ ಮೇಲೆ ಬಿತ್ತು. ಅದಕ್ಕಿಂತ ಹೆಚ್ಚಾಗಿ ರಾಮದಾಸ್‌ರ ಆವೇಶ ಆಟಾಟೋಪಗಳು. ಸೂಕ್ಷ್ಮ ಪ್ರಕೃತಿಯ ನಿರ್ಮಲಾ, ರಾಮದಾಸ್‌ರ ಮಿತಿಯಿಲ್ಲದ ಒತ್ತಡಗಳನ್ನು ಎದುರಿಸಲಾಗದೆ ನಲುಗಿ ಹೋದರು. ರಾಮದಾಸ್ ಈ ಬಗ್ಗೆ ಎಚ್ಚೆತ್ತುಕೊಳ್ಳುವ ವೇಳೆಗೆ ಕಾಲ ಮಿಂಚಿಹೋಗಿತ್ತು. ಮನಸ್ಸು ಸ್ಥಿಮಿತ ತಪ್ಪಿ ಅವರ ಪಿತ್ತಕೋಶ ಆಘಾತಗೊಂಡಿತ್ತು. ರಕ್ತದಲ್ಲಿ ಸಕ್ಕರೆ ಮಿತಿ ಮೀರಿತ್ತು. ಪರಿತಾಪ-ಅನುತಾಪಗಳಿಂದ ಬಳಲಿದ ರಾಮದಾಸ್, ನಿರ್ಮಲಾರ ಅನಾರೋಗ್ಯ ಮರುಕಳಿಸಿದಾಗಲೆಲ್ಲಾ ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ ಆಸ್ಪತ್ರೆಗಳಿಗೆ ಅಲೆದೂ ಅಲೆದೂ ಸುಸ್ತಾದರು, ಹಣ್ಣಾದರು, ಮಣ್ಣಾದರು. ನನ್ನ ಪ್ರಕಾರ ಕೊನೆಗೂ ಗೆದ್ದಿದ್ದು ನಿರ್ಮಲಾರೇ: ಸಾಯುವ ವೇಳೆಗೆ ರಾಮದಾಸ್ ಕೊನೆಗೂ ತೊಟ್ಟು ಕಳಚಿದ್ದ ಹಣ್ಣಿನಂತಾಗಿದ್ದರು. ನಿರ್ಮಲಾ ಬಿಡಿ, ಅವರು ಯಾವಾಗಲೂ ಮಾಗಿದ ಹಣ್ಣೇ.

ನಿರ್ಮಲಾರ ಕೊನೆಯ ದಿನಗಳಲ್ಲಿ ಅವರಿಗೆ ತಾನು ಬರೆಯಬೇಕಾದುದನ್ನೆಲ್ಲ ಬರೆದಿಲ್ಲ ಎಂಬ ಚಿಂತೆ ಕಾಡುತ್ತಿದುದನ್ನು ನಾನು ಅನೇಕ ಬಾರಿ ಗಮನಿಸಿದ್ದೇನೆ. ಒಂದು ಹಳೆಯ ನೋಟ್ ಬುಕ್ಕಿನಲ್ಲಿ ಗದ್ಯ ಪದ್ಯಗಳೆರಡನ್ನೂ ಅವಸರವಸರವಾಗಿ ಬರೆದಿಡುತ್ತಿದ್ದರು. ಎರಡು ವರ್ಷಗಳ ಹಿಂದೆ ರಾಮದಾಸ್‌ರ ಕೋರಿಕೆ ಮೇರೆಗೆ ಅವುಗಳಲ್ಲಿನ ಒಂದಷ್ಟು ಪದ್ಯಗಳನ್ನು ಆರಿಸಿ ಜೋಡಿಸಿ ಪ್ರಕಟಣೆಗಾಗಿ ಲೋಹಿಯಾ ಪ್ರಕಾಶನಕ್ಕೆ ಅಣಿ ಮಾಡಿಕೊಟ್ಟಿದ್ದೆ. ರಾಮದಾಸ್ ಆ ಪುಸ್ತಕದ ಬಿಡುಗಡೆ ಸಮಾರಂಭವನ್ನು ಬಹು ಸಂಭ್ರಮದಿಂದ ಏರ್ಪಡಿಸಿದ್ದರು. ಆ ಪುಸ್ತಕದ ಹೆಸರು ಎಷ್ಟು ಅರ್ಥಪೂರ್ಣ ನೋಡಿ: 'ಉರಿವ ಒಲೆಗಳ ಮುಂದೆ'! ಇದಕ್ಕೂ ಕೆಲವು ವರ್ಷಗಳ ಹಿಂದೆ ಪ್ರಕಟವಾದ ಅವರ 'ಚಲ್ ಮೇರಿ ಲೂನಾ' ಲಲಿತ ಪ್ರಬಂಧ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನವೂ ಸಂದಿತ್ತು.

ನಿರ್ಮಲಾರ ಮನೆಯಲ್ಲಿ ನಾವು ಎಷ್ಟು ಬಾರಿ ತಂಗಿದ್ದೇವೆ, (ಮೈಸೂರಿಗೆ ಹೋದಾಗ ಅವರ ಮನೆಯಲ್ಲೇ ತಂಗಬೇಕೆಂಬುದು ರಾಮದಾಸ್‌ರ ಕಟ್ಟಾಜ್ಞೆಯಾಗಿತ್ತು. ಏಕೆಂದರೆ ಅವರಿಗೆ ಜಗಳಾಡುವ ನಾಗಭೂಷಣ್‌ರಂತಹ ಜನ ಬೇಕಿತ್ತು!) ಉಂಡಿದ್ದೇವೆ. ಹೊರ ಹೋಗಿ ಆನಂದಿಸಿದ್ದೇವೆ. ನಿರ್ಮಲಾ ಹೆಚ್ಚು ಮಾತಾಡುತ್ತಿರಲಿಲ್ಲವಾದರೂ, ಮನೆಗೆ ಬಂದ ಎಲ್ಲರ ಅಗತ್ಯಗಳನ್ನು ತಿಳಿದುಕೊಳ್ಳುವಷ್ಟು ಸೂಕ್ಷ್ಮವಾಗಿದ್ದರು. ನಾವು ಅವರ ಮನೆಯಲ್ಲಿ ತಂಗಿದಾಗಲೆಲ್ಲ ಬೆಳಗ್ಗೆ ಎದ್ದೊಡನೆ ತಮ್ಮ ಅನಾರೋಗ್ಯದ ನಡುವೆಯೂ ನಮ್ಮ ಕೋಣೆಗೆ ಚಹಾದೊಂದಿಗೆ ತಾವೇ ಬರುತ್ತಿದ್ದರು. ಹತ್ತು ನಿಮಿಷ ಕೂತು ಸಾಹಿತ್ಯ-ಸಂಸ್ಕೃತಿ-ಸ್ನೇಹಿತರು ಇತ್ಯಾ[illegible] ಬಗ್ಗೆ ಮಾತನಾಡಿದ ನಂತರವೇ ಮುಂದಿನ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದುದು ಅಂತಹ [illegible]ರಿತ ಸೌಜನ್ಯ ಅವರದ್ದು.

ನಿರ್ಮಲಾ, ಮಗಳು ಸ್ನೇಹಳೊಬ್ಬಳಿಗೇ ತಾಯಿಯಾಗಿರಲಿಲ್ಲ. ಕರ್ನಾಟಕದಾದ್ಯಂತ ಇರುವ ರಾಮದಾಸರ ಗೆಳೆಯರಿಗೂ, ಶತ್ರುಗಳಿಗೂ ತಾಯಿಯೋ, ಅಕ್ಕನೋ, ತಂಗಿಯೋ ಆಗಿದ್ದರು. ರಾಮದಾಸ್ ಹೋದ ನಂತರ ನಿರ್ಮಲಾ ಚೇತರಿಸಿಕೊಳ್ಳುತ್ತಿದ್ದಂತಿತ್ತು. ಆದರೆ ಈಗ ಇದ್ದಕ್ಕಿದ್ದಂತೆ ಹೀಗಾದದ್ದು ನಮಗಾದ ವೈಯುಕ್ತಿಕ ನಷ್ಟವಷ್ಟೇ ಅಲ್ಲ. ಕರ್ನಾಟಕದ ಅಳಿದುಳಿದಿರುವ ಸಮಾಜವಾದಿ ಬಳಗಕ್ಕೂ ಆದ ನಷ್ಟ. ಇವರ ವಂಶದ ಚಿಗುರನ್ನು ಹೊತ್ತಿರುವ ಸ್ನೇಹ ಹಾಗೂ ಓಂಕಾರ್‌ಗೆ ನಾವು ಧೈರ್ಯ ಹೇಳುವ ಅಗತ್ಯವಿಲ್ಲ. ಅವರಿಬ್ಬರೂ ನಿಜವಾಗಿ ಗಟ್ಟಿಗರು.

# ಗಟ್ಟಿ ಬದುಕು

**ಪಿ. ಓಂಕಾರ್**

ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಓದುತ್ತಿದ್ದಾಗ, ಕರ್ನಾಟಕದ ಸಂಘದಲ್ಲಿ ಸಾಹಿತ್ಯ ಸಂಬಂಧಿ ಕಾರ್ಯಕ್ರಮ. ಪಿ. ಲಂಕೇಶ್, ತೇಜಸ್ವಿ ಅವರ ಜತೆ ಕೆ. ರಾಮದಾಸ್ ಭಾಗವಹಿಸಿದ್ದರು. ಅದಾಗಲೇ ಲಂಕೇಶ್ ಪತ್ರಿಕೆಯ ಮೂಲಕ ಅವರ ವ್ಯಕ್ತಿತ್ವದ ಅರಿವು ನನಗಿತ್ತಾದರೂ, ನೋಡಿದ್ದು ಅದೇ ಮೊದಲು.

ಅದಾಗಿ ನಾಲ್ಕೈದು ವರ್ಷಗಳ ನಂತರ ಸ್ನಾತಕೋತ್ತರ ಪದವಿ ಮುಗಿಸಿ ಶಿವಮೊಗ್ಗದ ಸ್ಥಳೀಯ ಪತ್ರಿಕೆಯೊಂದರಲ್ಲಿ ಕೆಲಸಕ್ಕೆ ಸೇರಿದ್ದೆ. ಕುವೆಂಪು ರಂಗಮಂದಿರದಲ್ಲಿ ಆಯೋಜಿತವಾಗಿದ್ದ ವಿಚಾರ ಸಂಕಿರಣವೊಂದರಲ್ಲಿ ರಾಮದಾಸ್ ಭಾಷಣ. ಪುರೋಹಿತಶಾಹಿ ವ್ಯವಸ್ಥೆ; ಬ್ರಾಹ್ಮಣರ ವಿರುದ್ಧ ಹರಿಹಾಯ್ದ ರಾಮದಾಸ್ ಮಾತಿಗೆ ಪೂರಕವಾಗಿ 'ಜನಿವಾರವನ್ನು ಕಿತ್ತೊಗೆಯಿರಿ' ಎಂಬ ಯಾರದೋ ಮಾತನ್ನು ಕೋಟ್ ಮಾಡಿದರು. ಮರುದಿನ ಬಹುತೇಕ ಎಲ್ಲಾ ಪತ್ರಿಕೆಗಳಲ್ಲೂ ವರದಿ ಸರಿಯಾಗಿಯೇ ಬಂದಿತ್ತು. ಆದರೆ ತನ್ನೊಳಗಿನ ಬ್ರಾಹ್ಮಣ್ಯವನ್ನು ಜಾಗೃತಗೊಳಿಸಿಕೊಂಡ ಸ್ಥಳೀಯ ಪತ್ರಿಕೆಯೊಂದರ ವರದಿಗಾರ ಭಾಷಣವನ್ನು ತಿರುಚಿ 'ಜನಿವಾರವನ್ನು ಕಿತ್ತೊಗೆಯಿರಿ ಎಂದು ಬ್ರಾಹ್ಮಣರಿಗೆ ರಾಮದಾಸ್ ಕರೆ ನೀಡಿದರು' ಎಂಬರ್ಥದಲ್ಲಿ ವರದಿ ಬರೆದು ಆ ಸಮುದಾಯ ಉದ್ರೇಕಗೊಳ್ಳುವಂತೆ ಮಾಡಿದ್ದ.

ಅದರ ಬೆನ್ನಿಗೇ ಜಿಲ್ಲೆ; ರಾಜ್ಯದ ಬ್ರಾಹ್ಮಣ ಸಮುದಾಯ ರಾಮದಾಸ್ ವಿರುದ್ಧ ಸಿಡಿದು ಬಿದ್ದಿತು. ಗದ್ದಲ-ಹೇಳಿಕೆ ಸಮರವೇ ನಡೆಯಿತು. ರಾಮದಾಸ್ ಕೂಡ ದೀರ್ಘ ಪ್ರತಿಕ್ರಿಯೆ ನೀಡಿದ್ದರು. ಆಗಲೇ ಅವರ ನಿಖರ ನಿಲುವು, ದಿಟ್ಟತನವನ್ನು ನಾನು ಹತ್ತಿರದಿಂದ ನೋಡಿದ್ದು. ಒಂದು ದಿನ ಶಿವಮೊಗ್ಗದಲ್ಲಿ ಬ್ರಾಹ್ಮಣರ ಬೃಹತ್ ಪ್ರತಿಭಟನಾ ರ್‍ಯಾಲಿ. ಅಷ್ಟೊತ್ತಿಗಾಗಲೇ 'ಆ ಪತ್ರಿಕಾ ವರದಿಯಲ್ಲಿ ಸತ್ಯಾಂಶವಿಲ್ಲ' ಎಂಬುದು ಬ್ರಾಹ್ಮಣ ಸಮುದಾಯದ ಮುಖಂಡರಿಗೆ

ಮನವರಿಕೆಯಾಗಿತ್ತು. ತಪ್ಪು ವರದಿ ಪ್ರಕಟಿಸಿದ ಪತ್ರಿಕೆ ಪ್ರತಿಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸುವ ಮೂಲಕವೇ ಮೆರವಣಿಗೆ ಆರಂಭವಾಯಿತು. ಮಾತ್ರವಲ್ಲ ಸಮುದಾಯದ ಸಿಟ್ಟಿನಿಂದ ಬಚಾವಾಗುವಷ್ಟರಲ್ಲಿ ಆ ಪತ್ರಿಕೆಯ ಮಾಲೀಕರು ಸಾಕಷ್ಟು ಸೀರಿಳಿಸಿಕೊಂಡಿದ್ದರು.

ಅನಂತರ ನಾನು ಮೈಸೂರಿಗೆ ಬಂದು 'ಆಂದೋಲನ' ಪತ್ರಿಕೆ ಸೇರಿದ್ದು; ಅಲ್ಲಿ 'ಹಾಡುಪಾಡು' ರಾಮು ಪರಿಚಯವಾಗಿದ್ದು; ಅವರ ಮತ್ತು ಅವರ ಮನೆಯ ಮೂಲಕ ಸ್ನೇಹಾ ಗುರುತಾಗಿದ್ದು; ನಮ್ಮಿಬ್ಬರ ಮದುವೆಯ ಮೂಲಕ ಪ್ರಖರ ಚಿಂತಕ ರಾಮದಾಸ್ ಮತ್ತು ನಿರ್ಮಲಾ ಅವರಿಗೆ ನಾನು ಅಳಿಯನಾಗಿದ್ದು; ಅವರ ಪುಟ್ಟ ಕುಟುಂಬದಲ್ಲಿ ನಾನೂ ಒಬ್ಬನಾಗಿದ್ದು; ಕಷ್ಟ-ಸುಖ, ನೋವು-ನಲಿವಿನಲ್ಲಿ ಭಾಗಿಯಾಗಿದ್ದು ಎಲ್ಲಾ ಕನಸಿನಂತೆ.

ರಾಮದಾಸ್ ಶಿವಮೊಗ್ಗ ಜಿಲ್ಲೆಯ ಸಾಗರದವರೆಂಬುದು; ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ವಿದ್ಯಾರ್ಥಿಯಾಗಿದ್ದು; ತುಂಗಾ ತಟದ ಬೆಕ್ಕಿನ ಕಲ್ಮಠದಲ್ಲಿ ಆಶ್ರಯ ಪಡೆದದ್ದು ಈ ಎಲ್ಲವೂ ನನಗೆ ತಿಳಿದದ್ದು ಮದುವೆಯ ಸಂದರ್ಭದಲ್ಲೇ. ನಾನೂ ಹೊಸನಗರ - ಸಾಗರ ಮಧ್ಯದ ಹಳ್ಳಿಯವನು, ಸಹ್ಯಾದ್ರಿಯಲ್ಲೇ ಓದಿದ್ದು; ಬೆಕ್ಕಿನಕಲ್ಮಠವೇ ನನ್ನ ಓದಿಗೂ 'ಆಶ್ರಯ'ವಾಗಿದ್ದು ಒಂದರ್ಥದಲ್ಲಿ ಕಾಕತಾಳೀಯ. ಮಲೆನಾಡಿನ ಈ ನಂಟೇ ಇರಬೇಕು ಎಲ್ಲಿಂದಲೋ ಬಂದ ಅವರ ಕುಟುಂಬವನ್ನು, ಅತ್ತಲಿಂದಲೇ ಬಂದ ನಾನು ಸೇರಿಕೊಳ್ಳಲು ಕಾರಣವಾಗಿದ್ದು.

ಮೈಸೂರಿಗೆ ಬಂದ ನಂತರ ವೃತ್ತಿ ಸಂಬಂಧ ಅನೇಕ ಬಾರಿ ರಾಮದಾಸ್ ಜತೆ ದೂರವಾಣಿಯಲ್ಲಿ ಮಾತನಾಡಿದ್ದೆ. ಸಮಾರಂಭ-ವಿಚಾರ ಸಂಕಿರಣಗಳಲ್ಲಿ ಭಾಷಣ ಕೇಳಿದ್ದೆ; ಹೋರಾಟಗಳನ್ನು ಕಂಡಿದ್ದೆ. ಆದರೆ, ಮುಖಾಮುಖಿ ಮಾತನಾಡಿದ್ದು ರಾಮು ಮೂಲಕ ನಾನು-ಸ್ನೇಹಾ ಮದುವೆಯಾಗಲು ನಿರ್ಧರಿಸಿದ ನಂತರವೇ. ಮದುವೆಗೆ ಮುನ್ನ ಕೆಲವರು ರಾಮದಾಸ್ ಸಿಟ್ಟಿನ ಕುರಿತು ಹೇಳಿದ್ದರು. ಆ ಸಂಗತಿ ನನಗೆ ತಿಳಿದೇ ಇತ್ತಾದ್ದರಿಂದ ತಲೆಕೆಡಿಸಿಕೊಳ್ಳಲಿಲ್ಲ. ಲೋಕದ ಕಣ್ಣಿಗೆ ಅವರು ಬೆಂಕಿ. ಕೋಪದ ತಾಪ ಮನೆಯ ಒಳಗೂ ತಲ್ಲಣಕ್ಕೆ ಕಾರಣವಾಗದೆ ಇರಲಿಲ್ಲ. ಕೆಲವು ಸಾಂದರ್ಭಿಕ ಕೋಪಗಳ ಹೊರತು ಯಾವತ್ತೂ ನನ್ನ ವಿಷಯದಲ್ಲಿ ಹಾಗಾಗಲಿಲ್ಲ.

ಮದುವೆಗೆ ಮುಂಚೆ, ನಾನೊಮ್ಮೆ 'ನಮ್ಮೂರಿಗೆ ಹೋಗಿ ಬಂದ ನಂತರವೇ ಅಂತಿಮ ನಿರ್ಧಾರ ಕೈಗೊಳ್ಳೋಣ' ಎಂದೆ. ನಿರ್ಧಾರ ನನ್ನದೇ ಆದರೂ ಆರ್ಥಿಕ ಹಿನ್ನೆಲೆಯ ಕಾರಣಕ್ಕೆ ನನ್ನಲ್ಲೊಂದು ಅಳುಕು ಇದ್ದೇ ಇತ್ತು. ಆದರೆ, ರಾಮದಾಸ್ ಅಂಥದ್ದಕ್ಕೆಲ್ಲ ಆಸ್ಪದವನ್ನೇ ನೀಡಲಿಲ್ಲ. 'ಯಾವತ್ತಾದರೂ ಸುಮ್ಮನೆ ಹೋಗಿ ಬರೋಣ, ನೋಡಿ ಬಂದು ನಿರ್ಧರಿಸುವುದೇ ಬೇಕಿಲ್ಲ' ಎಂದರು. ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಮದುವೆಗೆ ಅರ್ಜಿ ಹಾಕಿಕೊಂಡ ನಂತರವೇ ನಮ್ಮೂರಿಗೆ ಹೋಗಿದ್ದು, ಅದಾದ ತಿಂಗಳ ನಂತರ ಕೆಲವೇ ಹಿತೈಷಿಗಳ ಎದುರು ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ವಿವಾಹ ನೋಂದಣಿ. ಅದಾಗಿ ತಿಂಗಳ ನಂತರ ಸಂತೋಷ ಕೂಟ. ರಾಮದಾಸ್ ಆಶಯ, ನಂಬಿದ ತತ್ತ್ವಗಳಿಗೆ ಚ್ಯುತಿಯಾಗಬಾರದೆಂಬ ಕಾರಣಕ್ಕೆ ಕಾರ್ಯಕ್ರಮ ಸರಳವಾಗಿರಲೆಂದು

ನಾವು ಅಂದುಕೊಂಡಿದ್ದೆವು. ಆದರೆ, ಅವರು ಕೂಟಕ್ಕೆ ಸಂಭ್ರಮ ತುಂಬಿದರು. ಇಂಥ ಮದುವೆಗಳ ಬಗ್ಗೆ ಗೊತ್ತಿಲ್ಲದ ನಮ್ಮ ಮನೆಯವರು ಬೇಸರಾಗಬಾರದೆಂಬುದು ಮತ್ತು ಎಲ್ಲಾ ಸ್ನೇಹಿತರ ಜತೆ ಕೂಡಿ ಊಟ ಮಾಡುವುದು ಅವರ ಉದ್ದೇಶ. ಇದೇ ಕಾರಣಕ್ಕೆ ಯಾವುದೇ ಸಂಪ್ರದಾಯಗಳಿರದಿದ್ದರೂ ನನ್ನ ಮನೆಯವರಿಗೆ, ನಮ್ಮೂರಿನಿಂದ ಬಂದವರಿಗೆ ಮದುವೆ ಇಷ್ಟವಾಯಿತು.

ನಂತರ ನಾನು ಅವರಿಗೆ ಅಳಿಯನಷ್ಟೆ ಆಗಲಿಲ್ಲ; ಮಗನಂತೆ ಕಂಡರು ಎಂಬುದು ನನ್ನ ಸುಕೃತ. ಅವರು ಮತ್ತು ಅತ್ತೆ ನಿರ್ಮಲ ಹರಿಸಿದ ಪ್ರೀತಿಯ ಮುಂದೆ ಜಾತಿ-ವಿಚಾರ-ನಿರೀಶ್ವರವಾದದಂತ ಸಂಗತಿಗಳು, ಆ ಎಲ್ಲವನ್ನೂ ನಂಬುವ ನನ್ನ ಮನೆಯವರಿಗೆ ಮುಖ್ಯ ಎನಿಸಲೇ ಇಲ್ಲ.

ರಾಮದಾಸ್ ಗಟ್ಟಿತನದ ಬದುಕನ್ನು ಕೊನೆಯ ನಾಲ್ಕು ವರ್ಷ ಹತ್ತಿರದಿಂದ; ಮನೆಯವನಾಗಿ ನೋಡಿದ್ದೇ ಅನನ್ಯ ಅನುಭವ. ಅದೆಷ್ಟೋ ಬೆಳಗ್ಗೆಯ 'ಟೀ ಚರ್ಚೆ'ಯಲ್ಲಿ ನನ್ನ ಅನುಮಾನಗಳನ್ನು ಪರಿಹರಿಸಿಕೊಂಡಿದ್ದೇನೆ. ಗೊತ್ತಿರುವ ಯಾವುದೇ ವಿಷಯವನ್ನು ನೋಡುತ್ತಿದ್ದ ಚಿಕಿತ್ಸಕ ದೃಷ್ಟಿಕೋನ, ತಮ್ಮ ತಿಳಿವಳಿಕೆಯ ಆಚೆಗಿನ ಸಂಗತಿಗಳನ್ನುಅರಿತುಕೊಳ್ಳಲು ವ್ಯಕ್ತಪಡಿಸುತ್ತಿದ್ದ ಮಗು ಸಹಜ ಕುತೂಹಲಗಳನ್ನು ಕಂಡು ಬೆರಗಾಗಿದ್ದೇನೆ. ಆದರೂ, ಅವರ ಚಿಂತನೆ, ಹೋರಾಟಗಳ ಕುರಿತು ಮಾತನಾಡುವಷ್ಟು ಅರ್ಹತೆ ನನ್ನದಲ್ಲ ಮತ್ತು ಆ ಎಲ್ಲಾ ಸಂಗತಿಗಳ ಕುರಿತು ಬಲ್ಲವರು ಬರೆದಿದ್ದಾರೆ ಕೂಡ.

ಹೋರಾಟದ ಬದುಕಿನ ಜತೆಗೇ ನನ್ನನ್ನು ಹೆಚ್ಚು ಸೆಳೆದದ್ದು ರಾಮದಾಸ್-ನಿರ್ಮಲಾ ಜೋಡಿಯಾ ಸುತ್ತಾಟದ ಗೀಳು. ಅನಾರೋಗ್ಯವನ್ನು ಕಟ್ಟಿಕೊಂಡೇ ಅವರು ಊರೂರು ಅಲೆದಿದ್ದಾರೆ, ಕಾಡು ಮೇಡು ಸುತ್ತಿದ್ದಾರೆ, ಬೆಟ್ಟ-ಗುಡ್ಡ ಹತ್ತಿದ್ದಾರೆ. ಸುತ್ತುವ ಸಾಹಸದ ವಿಷಯದಲ್ಲಿ ಅವರ ಜೀವನೋತ್ಸಾಹ ನಿರಂತರ ಚಿಲುಮೆಯಂತೆ.

ವಯಸ್ಸಿನಲ್ಲಿ ಸ್ನೇಹಿತರೊಡನೆ ನಡೆಸಿದ ಪರ್ಯಟನೆ, ಸಾಹಸ-ಪ್ರವಾಸದ ಅನುಭವಗಳ ಬಗ್ಗೆ ಮಾತಿಗೆ ಕುಂತರೆ ಅವರಿಗೆ ಪ್ರಯಾಸವೇ ಆಗುತ್ತಿರಲಿಲ್ಲ. ಹಲವು ರಸಪೂರ್ಣ, ನವಿರು ಅನುಭವಗಳು ಹರಟೆಯನ್ನು ರಸವತ್ತಾಗಿಸುತ್ತಿದ್ದವು. ನಾನು, ಸ್ನೇಹಾ ಪ್ರವಾಸ ಹೊರಟರೆ 'ಪೂರ್ವ ತಯಾರಿ'ಗೆ ಅಗತ್ಯ ಸೂಚನೆ, ಎಲ್ಲಿ ಏನು ನೋಡಬೇಕು; ತಾವು ಆ ಸ್ಥಳಕ್ಕೆ ಹೋದಾಗ ಏನೆಲ್ಲಾ ಆಯಿತು.... ಎಲ್ಲವನ್ನೂ ಹೇಳಿ ನಾವು ಹೋಗುವ ಸ್ಥಳದ ಕ್ಲುಪ್ತ ಮಾಹಿತಿಯನ್ನು ನೀಡುತ್ತಿದ್ದರು. ನಾವು ಹೊರಟಾಗ ತಾವೇ ಸುತ್ತಲು ಹೊರಟಷ್ಟು ಖುಷಿ ಅನುಭವಿಸುತ್ತಿದ್ದರು.

ಒಮ್ಮೆ ಹೀಗಾಯಿತು. ನಾನು ಸ್ನೇಹಾ ಊಟಿಗೆ ಹೊರಟಿದ್ದೆವು. ಅದನ್ನು ರಾಮದಾಸ್‌ಗೆ ಹೇಳಿದಾಗ ತಾವೂ ಬರುವ ಉತ್ಸಾಹ ತೋರಿದರು. ದಿನ ನಿಗದಿಯಾಗಿ; ಇನ್ನೇನು ನಾಳೆ ಹೊರಡಬೇಕೆಂದರೆ ಮುಂಚಿನ ದಿನ ಅತ್ತೆ ನಿರ್ಮಲಾ ಅವರ ಆರೋಗ್ಯ ತಪ್ಪಿತು. ಸರಿ, ಪ್ರವಾಸ ರದ್ದುಮಾಡುವುದೆಂದು ನಿರ್ಧರಿಸಿದೆವು. ಆದರೆ ರಾಮದಾಸ್ ಅದಕ್ಕೆ ಅವಕಾಶವನ್ನೇ ಕೊಡಲಿಲ್ಲ. 'ಇದೆಲ್ಲಾ ಇದ್ದದ್ದೇ; ನೀವಿಬ್ಬರು ಹೋಗಿಬನ್ನಿ' ಎಂದು ಪಟ್ಟು ಹಿಡಿದು ಹೊರಡಿಸಿದರು.

ನಾವು ಊಟಿಯಲ್ಲಿ ಒಂದು ರಾತ್ರಿ ಕಳೆದು ಮರುದಿನ ಇನ್ನೂ ಎದ್ದಿರಲಿಲ್ಲ; ಮನೆಯಿಂದ ಫೋನು, ರಾಮದಾಸ್ ಮಾತನಾಡುತ್ತಿದ್ದಾರೆ...' ನಿರ್ಮಲಾ ಚೆನ್ನಾಗಾಗಿದ್ದಾಳೆ. 11 ಗಂಟೆಗೆ ನಾವು ಇಲ್ಲಿಂದ ಹೊರಡುತ್ತೇವೆ. ಮಧ್ಯಾಹ್ನದ ಹೊತ್ತಿಗೆ ಅಲ್ಲಿರುತ್ತೇವೆ. ನೀವು ಉಳಿದುಕೊಂಡ ಹೋಟೆಲ್‌ನಲ್ಲಿ ನಮಗೊಂದು ರೂಂ ಕಾಯ್ದಿರಿಸಿ...'! ನಮಗೆ ಗಾಬರಿ. ಇಬ್ಬರೇ, ಆರೋಗ್ಯ ಬೇರೆ ಸರಿಯಿಲ್ಲ. ಕಾರಿನಲ್ಲಿ ಡ್ರೈವ್ ಮಾಡಿಕೊಂಡು ಬರುವುದೆಂದರೆ ? ಆದರೇನು ಬೇಡ ಎನ್ನುವಂತಿಲ್ಲ. ಮಧ್ಯಾಹ್ನದ ಆತಂಕದಲ್ಲೇ ಕಳೆದೆವು. ಆದರೆ, ಹೇಳಿದ್ದಕ್ಕಿಂತ 1 ಗಂಟೆ ಮೊದಲೇ ಬಂದು ಮತ್ತೊಂದು ಅಚ್ಚರಿ ನೀಡಿದರು. ಅವರು ಬಂದ ನಂತರ ನಮ್ಮ ಪೂರ್ವ ನಿರ್ಧಾರಿತ ಕಾರ್ಯಕ್ರಮಗಳೆಲ್ಲಾ ಬದಲಾದವು. ಅಲ್ಲೇ ಜನಜಂಗುಳಿಯ ಮಧ್ಯೆ ಸುತ್ತುವುದು ಅವರಿಗಿಷ್ಟವಿರಲಿಲ್ಲ. ಯಾವತ್ತೋ ಕೃಪಾಕರ-ಸೇನಾನಿಯವರು ಹೇಳಿದ್ದ 'ಅವಲಾಂಚೆ'ಗೆ ಹೋಗುವುದೆಂದು ನಿರ್ಧಾರವಾಯಿತು. ಅದು ದಟ್ಟ ಕಾಡೊಳಗಿನ ಜಾಗ. ಹೋಗಲು ಇಲಾಖೆ ಅನುಮತಿ ಕಡ್ಡಾಯ. ಕಚೇರಿಗಳ ಬಾಗಿಲು ಎಡತಾಕಿದಾಗ 'ಅಲ್ಲಿಗೆ ಹೋಗೋದು ಕಷ್ಟ ಉಳಿದಂತೆ ನಿಮ್ಮಿಷ್ಟ' ಎಂಬ ಉತ್ತರ. ಹಿಂತೆಗೆಯುವ ಪ್ರಶ್ನೆಯೇ ಇರಲಿಲ್ಲ. ಹೊರಟದ್ದಾಯಿತು ಕೆಲವು ಗಂಟೆಗಳ ಡ್ರೈವಿಂಗ್ ನಂತರ ಮುಖ್ಯರಸ್ತೆ ದಾಟಿ ಕಾಡಿನ ಜಾಡು ಹಿಡಿದರೆ ಸವಾಲಿನ ಮೇಲೆ ಸವಾಲು. ಎದುರಿನಿಂದ ಯಾವುದಾದರೂ ವಾಹನ ಬಂದರೆ ದಾರಿ ಬಿಡಲು ಅಕ್ಕಪಕ್ಕ ಜಾಗವಿಲ್ಲ. ಅಷ್ಟಕ್ಕೂ ಆ ದಾರಿಯಲ್ಲಿಸಂಚರಿಸುತ್ತಿದ್ದದ್ದು ಇಲಾಖೆಯ ಲಾರಿ, ಜೀಪುಗಳು ಮಾತ್ರ. ಕಾರು ಅತ್ಯಪರೂಪ. ಮಳೆ ಬಂದರಂತೂ ಸಂಚಾರವೇ ದುಸ್ತರ. ನಾವು ಹೋದಾಗಲೂ ಮಳೆ. ಕಿರಿದಾದ, ಗುಂಡಿ ಗೊಟರುಗಳ ರಸ್ತೆ ಪೂರ್ತಿ ಕೆಸರುಮಯ. ಸ್ಟಿಯರಿಂಗ್ ಬಲಕ್ಕೆ ತಿರುಗಿಸಿದರೆ ಕಾರು ಎಡಕ್ಕೆ ಜಾರುತ್ತಿತ್ತು. ಇಂಥ ದಾರಿಯಲ್ಲಿಸಾಗುತ್ತಿದ್ದುದು ನನಗೇಕೋ ಅಸಹನೀಯ ಎನಿಸತೊಡಗಿತು. ಎಲ್ಲಾದರೂ ಅರ್ಧದಾರಿಯಲ್ಲೇ ಎಡವಟ್ಟಾದರೆ ಎಂಬ ಆತಂಕ. ಅದನ್ನು ವ್ಯಕ್ತಪಡಿಸಿದೆ ಕೂಡ. ಆದರೆ, ಡ್ರೈವಿಂಗನ್ನು ಎಂಜಾಯ್ ಮಾಡುತ್ತಿದ್ದ ರಾಮದಾಸ್‌ಗೆ ಸಿಟ್ಟೇ ಬಂತು. 'ನೀವಿಬ್ರು ಬೇಕಾದ್ರೆ ಇಳ್ಕೊಳ್ಳಿ' ಎಂದು ಸಿಡುಕಿದರೆ. ನಾವಂತೂ ಹೋಗೇ ಹೋಗುತ್ತೇವೆ ಎಂಬ ದೃಢ ನಿಲುವಿತ್ತು ಅವರ ಧ್ವನಿಯಲ್ಲಿ.

ನಾನು 'ಆದದ್ದಾಗಲಿ..' ಎಂದು ಗಟ್ಟಿಮನಸ್ಸು ಮಾಡಿ ಕುಳಿತೆ. ಸುಮಾರು ಒಂದೂವರೆ ತಾಸಿನ ಹರಸಾಹಸ ನಂತರ ಗುರಿ ಮುಟ್ಟಿದೆವು. ಬೃಹತ್ ಗಾತ್ರದ ಮರಗಳು; ಝುಳು ಝುಳು ತೊರೆ; ನಿಸರ್ಗದ ಮಡಿಲಿನಲ್ಲಿ ಹರಿಯುತ್ತಿದ್ದ ತಿಳಿ ನೀರನ್ನು ಬಳಸಿಕೊಂಡು ನಿರ್ಮಿಸಿದ ವಿಶಿಷ್ಟಜಾತಿಯ ಮೀನು ಮರಿ ಸಾಕಣೆ ಕೇಂದ್ರ... ಎಲ್ಲವನ್ನೂ ನೋಡಿದ ನಂತರ ನಮ್ಮೊಳಗಿನ ಸಿಡುಕೆಲ್ಲಾ ಮಾಯವಾಗಿ ಮನಸ್ಸುಗಳು ಹಸುರಿನೊಳಗೆ ಹಸಿರಾದವು. ಅತ್ಯಂತ ರಮಣೀಯ ನಿಸರ್ಗವನ್ನು ನೋಡಿದ ಖುಷಿ ನಂತರದ ಹಲವು ದಿನ ನಮ್ಮ ಮೈ ಮನಗಳನ್ನು ಆವರಿಸಿತ್ತು. ವಾಪಸು ಅದೇ ಕೆಸರುಮಯ ರಸ್ತೆಯಲ್ಲೇ ಬಂದೆವಾದರೂ ಅದು ಕಷ್ಟ ಎನಿಸಲಿಲ್ಲ!

ಇದು ಒಂದು ಉದಾಹರಣೆ. ಅವರೊಂದಿಗೆ ಸುತ್ತಲು ಹೋದಾಗಲೆಲ್ಲ ಬಹುತೇಕ ಇಂಥವೇ ಅನುಭವ. ಆರೋಗ್ಯ ಸರಿ ಇದ್ದರೆ; ತಿರುಗಾಡುವ ಉಮೇದು ಬಂದರೆ 'ಬುತ್ತಿ'ಕಟ್ಟಿಕೊಂಡು

ಹೊರಡುವುದೇ. ಜನ ಸಂತೆ ಇಲ್ಲದ, ನಿಸರ್ಗದತ್ತ ರಮಣೀಯ ಸ್ಥಳಗಳಿಗೆ ಹೋಗುವುದು, ಪರಿಸರದ ಮಡಿಲಲ್ಲಿ ಕುಳಿತು ಉಂಡು, ಹಳೆಯ ಸುತ್ತಾಟಗಳ ವೈಭವವನ್ನು ಮೆಲುಕು ಹಾಕಿ ಖುಷಿ ಪಟ್ಟು ಮರಳುವುದು ಹೆಚ್ಚೂಕಡಿಮೆ ನಿರಂತರ. ಹೀಗೇ, ಒಮ್ಮೆ ನಾಲ್ವರ ಪಯಣ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ. ಮಳೆಯ ವಾತಾವರಣ. ಮಧ್ಯಾಹ್ನವಾದರೂ ಮಬ್ಬುಮಬ್ಬು ದೇಗುಲ ಸ್ವಲ್ಪ ದೂರದಲ್ಲಿದ್ದಾಗಲೇ ಕಾರು ರಸ್ತೆಯಿಂದಿಳಿದು ಮರ, ಗಿಡ, ಪೊದೆಗಳ ಮಧ್ಯೆ ಹೊರಟಿತು. ಒಂದಷ್ಟು ದೂರ ಸಾಗಿದ ನಂತರ ನಿಲುಗಡೆ; ಮುಂದೆ ಹೋಗಲು ಎಂಥದೇ ದಾರಿಯೂ ಇಲ್ಲ ಎಂಬ ಕಾರಣಕ್ಕೆ. ಅನತಿ ದೂರದಲ್ಲಿ ಕಾಡು ಕಣಿವೆ; ಮತ್ತೊಂದು ಬೆಟ್ಟ. ಕಾರಿಳಿದು, ನೀರು-ಊಟ ಹಿಡಿದು ಹೊರಟೆವು. ರಾಮದಾಸ್ ನಡೆದದ್ದೇ ದಾರಿ. ಕಡಿದಾದ ಬೆಟ್ಟ ಪ್ರದೇಶದಲ್ಲಿ ದಿಣ್ಣೆ, ತಗ್ಗು ಹತ್ತಿ ಇಳಿದು ಇದ್ದುದರಲ್ಲೇ ಸ್ವಲ್ಪ ಸಮತಟ್ಟು ಜಾಗವನ್ನು ಆಯ್ಕೆ ಮಾಡಿಕೊಂಡು ಕುಳಿತೆವು. ಎದುರು ಕಣ್ಣುಹಾಯಿಸಿದಷ್ಟೂ ಉದ್ದಕ್ಕೆ ಮೋಡ ತಬ್ಬಿದ ಬೆಟ್ಟ ಸಾಲು. ಕಾಡಡವಿಯ ನಿರಂತರ ಶಬ್ದಗಳ ಹೊರತು ನಿಶ್ಯಬ್ದ. 'ವನ ಭೋಜನ' ಮುಗಿಸಿ ಹೊರಡುವ ವೇಳೆಗೆ ಮಳೆ. ನಡೆದು ಕಾರು ತಲುಪುವಷ್ಟರಲ್ಲಿ ಒದ್ದೆಮುದ್ದೆ. ಅದೇ ಅಂದಿನ ಖುಷಿ; ಥ್ರಿಲ್. 'ಪ್ರವಾಸ ಯಾವತ್ತೂ ಅಡ್ವೆಂಚರಸ್ ಆಗಿರಬೇಕು; ಸಾಗುವ ದಾರಿಯಲ್ಲಿಸವಾಲುಗಳು ಎದುರಾದರೇನೇ ಥ್ರಿಲ್' ಎನ್ನುತ್ತಿದ್ದರು. ಹಾಗೆಯೇ ಪ್ರತಿ ಸುತ್ತಾಟವೂ ಇರುವಂತೆ ಮಾಡುತ್ತಿದ್ದರು.

* * *

ಬದುಕಿನ ವಿಷಯದಲ್ಲೂ ಹಾಗೆಯೇ. ಸವಾಲುಗಳಿಗೆ ಎದೆಯೊಡ್ಡಿ ನಡೆಯುವ ಗಟ್ಟಿತನ ಅವರದ್ದು. ಅನಿಸಿದ್ದನ್ನು ಯಾವ, ಯಾರ ಮುಲಾಜೂ ಇಲ್ಲದೆ ಹೇಳುವ ಧೈರ್ಯ ತೋರಿದವರು. ಯಾವುದೇ ಸಂದರ್ಭದಲ್ಲೂ; ಒಂದು ಕ್ಷಣಕ್ಕೂ ಸ್ವಹಿತವನ್ನು ಮುಂದೊಡ್ಡಲಿಲ್ಲ. ನೇರವಾಗಿ ಮಾತನಾಡುವ; ಒಪ್ಪಿತವಲ್ಲದ್ದನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುವ ಜಾಯಮಾನವೇ ಇರಬೇಕು ಸಮಾನ ಮನಸ್ಕರಲ್ಲೂ 'ಹಿತ-ಶತ್ರು ಸಮೂಹ' ಸೃಷ್ಟಿಯಾಗಿತ್ತು.

'ಆಚಾರ ಹೇಳಿ ಬದನೆಕಾಯಿ ತಿನ್ನುವ' ಕೆಲ ಅವಕಾಶವಾದಿ ವಿಚಾರವಾದಿಗಳಿಗೂ ರಾಮದಾಸ್ ಅವರನ್ನು ಕಂಡರೆ ಅಷ್ಟಕ್ಕಷ್ಟೇ. ಮುಂಗೋಪ, ಸಿಡುಕು ಸ್ವಭಾವ ಕಾರಣ ಹಲವರು ಹತ್ತಿರಾಗಲು ಹೆದರುತ್ತಿದ್ದರು; ಹತ್ತಿರಿದ್ದವರೂ ದೂರಾದರು ಎಂಬುದು ನಿಜವೇ. ಆದರೆ, ಅದಷ್ಟೇ ವಿರೋಧ, ಕುಹಕಕ್ಕೆ ಕಾರಣವಾಗಿರಲಿಲ್ಲ; ತಮ್ಮ 'ಬೂಟಾಟಿಕೆ'ಯನ್ನು ನೇರವಾಗಿ ಟೀಕಿಸುತ್ತಿದ್ದುದು ಕೆಲವರಿಗೆ ಸಹ್ಯವಾಗುತ್ತಿರಲಿಲ್ಲ ಎಂಬುದೂ ಸತ್ಯ.

ಆದರೆ, ರಾಮದಾಸ್ ಮಾತ್ರ ವಿಚಾರದ ಹೊರತು ಎಂದೂ ವೈಯಕ್ತಿಕವಾಗಿ ಯಾರನ್ನೂ ವಿರೋಧಿಸಿದ್ದನ್ನು ನಾನಂತೂ ಕಂಡಿಲ್ಲ. ಸಹಿಸದವರು ತಮ್ಮ ಬಗ್ಗೆ ತೀರಾ ಹಗುರವಾಗಿ ಮಾತನಾಡಿದ್ದು ಕಿವಿಗೆ ಬಿದ್ದರೂ ತಲೆ ಕೆಡಿಸಿಕೊಂಡವರಲ್ಲ. ಬದಲು, ತಮ್ಮನ್ನು ತಾವೇ 'ಹಂಗಿಸಿಕೊಂಡು' ನಗೆ ಉಕ್ಕಿಸುತ್ತಿದ್ದರು. ಯಾರೇ ಮತ್ತೊಬ್ಬರ ಬಗ್ಗೆ ವೈಯಕ್ತಿಕವಾಗಿ

ದೋಷಾರೋಪ ಮಾಡುತ್ತಿದ್ದರೆ ಕೇಳಿಸಿಕೊಳ್ಳುವ ಆಸಕ್ತಿ ತೋರುತ್ತಿರಲಿಲ್ಲ. ಹೇಳುವುದು, ಕಾಲೆಳೆಯುವುದು ಎಲ್ಲಾನೇರಾ ನೇರ. ಇದು ಒಮ್ಮೊಮ್ಮೆ 'ಅತಿರೇಕ'ಕ್ಕೆ ಹೋಗಿದ್ದೂ ಇದೆ. ಆವೇಶದಲ್ಲಿತಪ್ಪಾಗಿದ್ದರೆ ಮರುಕ್ಷಣವೇ ಒಪ್ಪಿಕೊಂಡಿದ್ದಾರೆ. ಆದರೆ, ಎಲ್ಲೂ ನಿಜಕ್ಕೆ ಅಪಚಾರ ಬಗೆದವರಲ್ಲ. ಜೀವ; ಜೀವನ ಪ್ರೀತಿಯಿಂದ ವಿಮುಖರಾಗಲಿಲ್ಲ.

ಸಿಡುಕು ಸ್ವಭಾವವನ್ನು ಸಹಿಸಿಕೊಂಡೂ ಅವರನ್ನು ನಿಷ್ಕಾರಣವಾಗಿ ಪ್ರೀತಿಸಿದವರ ಸಂಖ್ಯೆ ದೊಡ್ಡದು. ಕೊನೆ ಕೊನೆಗೆ ಸಮಾನ ವಯಸ್ಕರಿಗಿಂತ ಯುವಕರ ಸಖ್ಯವೇ ಅವರಿಗೆ ಹೆಚ್ಚು ಅಪ್ಯಾಯಮಾನವಾದಂತಿತ್ತು. ಅಲ್ಲಿ ಸದಾ ಆಶಾದಾಯಕವಾಗಿರುತ್ತಿದ್ದರು. 'ನಮ್ಮದೆಲ್ಲಮುಗೀತೂ ಕಂಡ್ರಿ, ಇನ್ನು ನಿಮ್ಮಂತ ಹುಡುಗರು ಮುಂದೆ ಬರಬೇಕು' ಅಂತ ಹುರಿದುಂಬಿಸುತ್ತಿದ್ದರು.

* * *

ಮನುಷ್ಯ ಸಹಜ ಕೆಲ ದೌರ್ಬಲ್ಯಗಳು ಅವರನ್ನು ಕಾಡದೆ ಬಿಡಲಿಲ್ಲ. 'ಧೂಮ-ಪಾನ'ದ ಅತಿಯ ವಿಷಯದಲ್ಲಿ ಯಾರೂ ಬುದ್ಧಿ ಹೇಳಲಾಗಲಿಲ್ಲ. ಹಿತ ಬಯಸಿ ಮಿತಿಯ ಸಲಹೆ ನೀಡಿದರೂ ಬೈಸಿಕೊಂಡವರೇ ಹೆಚ್ಚು. ಇಂಥ ಅತಿಗಳೇ ಅನಾರೋಗ್ಯಕ್ಕೆ ಕಾರಣವಾದವು ಎಂಬುದರ ಅರಿವು ಅವರಿಗೂ ಇತ್ತು. ಹಾಗಂತ, ಯಾವತ್ತೂ ಪಶ್ಚಾತ್ತಾಪ ಪಡಲಿಲ್ಲ. 'ಅದರಿಂದ ಸಂತೋಷ ಪಡೆದಿದ್ದೇನೆ, ಕಷ್ಟವನ್ನೂ ಅನುಭವಿಸಬೇಕು' ಎಂದು ಅದಕ್ಕೊಂದು ತಾತ್ತ್ವಿಕ ವಾದವನ್ನು ಆರೋಪಿಸುತ್ತಿದ್ದರು.

ದೈಹಿಕ ಅನಾರೋಗ್ಯ, ಹೃದಯ ಸಂಬಂಧಿ ತೊಂದರೆ ಅವರ ಹೋರಾಟದ ಚೈತನ್ಯವನ್ನು ಯಾವತ್ತೂ ಕಟ್ಟಿಹಾಕಲಿಲ್ಲ. ಆದರೆ ಅತ್ತೆ ನಿರ್ಮಲ ಅವರ ಆರೋಗ್ಯ ಅವರನ್ನು ಕಂಗೆಡಿಸಿದ್ದು ನಿಜ. 'ನನ್ನ ಕೋಪ-ತಾಪವೇ ಆಕೆಯ ಕಾಯಿಲೆಗೆ ಕಾರಣವಾಗಿಬಿಟ್ಟಿತೇ' ಎಂಬ ಅಳುಕೂ ಕಾಡುತ್ತಿತ್ತು; ಅನೇಕ ಸಂದರ್ಭ ಅದನ್ನು ವ್ಯಕ್ತಪಡಿಸಿದ್ದರು ಕೂಡ. ಕೊನೆಯ ಎರಡು-ಮೂರು ವರ್ಷವಂತೂ ನಿರಂತರ ಆಸ್ಪತ್ರೆ ಅಲೆದಾಟದಲ್ಲಿ ಹಣ್ಣಾಗಿದ್ದರು. ಕೆಲವೊಮ್ಮೆ ದಿಕ್ಕೇ ತೋಚದಂತ ಸ್ಥಿತಿ. ಈ ಮಧ್ಯೆಯೂ ಅನಾರೋಗ್ಯ ತಾಪತ್ರಯದಿಂದ 'ಬಿಡುವು' ಸಿಕ್ಕಾಗಲೆಲ್ಲ ಉತ್ಸಾಹದ ಬುಗ್ಗೆಗಳಂತೆ ಸುತ್ತಲು ಹೊರಡುತ್ತಿದ್ದುದು, ಸ್ವಭಾವ ವ್ಯತಿರಿಕ್ತವಾದರೂ ಒಬ್ಬರನೊಬ್ಬರು ಆರೈಕೆ ಮಾಡಿಕೊಳ್ಳುತ್ತಿದ್ದ, ಅನುಸರಿಸಿಕೊಳ್ಳುತ್ತಿದ್ದ ರೀತಿ ಅಪರೂಪದ್ದು.

ಸದಾ ಹೃದಯವಂತ; ಜೀವ ಪರ ಹೋರಾಟ ನಡೆಸಿದ ರಾಮದಾಸ್ ಶ್ವಾಸ ನಾಳದಲ್ಲಿ ಕ್ಯಾನ್ಸರ್ ಖಚಿತವಾಗುತ್ತಿದ್ದಂತೆ ಸಾವಿಗೆ ಅಭಿಮುಖವಾಗಿ, ಮನೆಯವರನ್ನೆಲ್ಲಾ ಆ ಕ್ಷಣಕ್ಕೆ ; ಅದರಾಚೆಗಿನ ಬದುಕಿಗೆ ಸಿದ್ಧಗೊಳಿಸಿದ ಬಗೆ ನನ್ನ ಮಟ್ಟಿಗಂತೂ ಅಚ್ಚರಿ. 'ಸಾವಿಗೆ ಹೆದರಲ್ಲ; ನರಳಾಟ ಇರಬಾರದು; ನನ್ನ ಸಾವು ಡಿಗ್ನಿಫೈಡ್ ಆಗಿರಬೇಕು' ಎಂದು ಹೇಳುತ್ತಲೇ ಪ್ರೊ. ರವಿವರ್ಮ ಕುಮಾರ್, ಡಾ.ಕೆ. ಮಹಾದೇವ್ ಮತ್ತಿತರ ಸ್ನೇಹಿತರು-ಹಿತೈಷಿಗಳ ಒತ್ತಾಯಕ್ಕೆ ಮಣಿದು ಚಿಕಿತ್ಸೆಗೆ ಒಡ್ಡಿಕೊಂಡರು.

ಕಿದ್ವಾಯಿ ಆಸ್ಪತ್ರೆಯಲ್ಲಿದ್ದಾಗ ಕ್ಯಾನ್ಸರ್ ಚಿಕಿತ್ಸೆಗೆ ಒಳಗಾದವರ ದೈಹಿಕ, ಮಾನಸಿಕ ಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದ್ದರು. ಕಿಮೋಥೆರಪಿಯಿಂದ ಕೂದಲು ಉದುರುವುದು, ದೇಹ ಹಿಂಡಿ ಹಿಪ್ಪೆಯಾಗುವುದನ್ನು ಕಂಡು ಒಳಗೊಳಗೆ ತಲ್ಲಣಿಸಿದ್ದರೂ ಗೊತ್ತುಮಾಡಲಿಲ್ಲ. ಆಸ್ಪತ್ರೆಯಿಂದ ಮನೆಗೆ ಬಂದ ಮರುದಿನವೇ ಸಣ್ಣಗೆ ಕ್ಷೌರ ಮಾಡಿಸಿಕೊಂಡರು. ಎರಡು ದಿನ ಲವಲವಿಕೆಯಿಂದ ಓಡಾಡಿದರು; ಸುಸ್ತು ತೋರಿಸಿಕೊಳ್ಳದೆ ನೋಡಲು ಬಂದ ಗೆಳೆಯರೊಡನೆ ಮಾತನಾಡಿದರು. ಒಂದು ದಿನ ಸ್ನೇಹಾಳನ್ನು ಕರೆದು 'ನೋಡು, ಅಪ್ಪ ಏನನ್ನೂ ಹೇಳದೆ ಹೋದ ಅಂದ್ಕೋಬೇಡ. ಇಲ್ಲಿ ಮನೆಯ ಕರೆಂಟ್ ಲೈನ್ ಹೋಗಿದೆ; ನೀರಿನ ಸಂಪರ್ಕ ಇಲ್ಲಿದೆ. ನೆಲ ಅಗೆಯುವಾಗ ಹುಷಾರಾಗಿರಿ...' ಎಂದು ಸಲಹೆ ನೀಡಿದರು. 'ನಿರ್ಮಲಾ ಆರೋಗ್ಯ ತುಂಬಾ ಡೆಲಿಕೇಟ್ ಆಗಿದೆ; ಚೆನ್ನಾಗಿ ನೋಡಕೊಳ್ಳಿ..' ಎಂದು ಪದೇ ಪದೆ ಹೇಳಿದರು. '...ಹಾಗೆಲ್ಲಾ ಯಾಕೆ ಯೋಚಿಸ್ತೀರಿ, ಎಲ್ಲಾಸರಿ ಹೋಗುತ್ತೆ' ಅಂತ ಧೈರ್ಯ ಹೇಳಿದರೆ 'ಕ್ಯಾನ್ಸರ್ ಅಷ್ಟು ಸುಲಭದ ಕಾಯಿಲೆ ಅಲ್ಲ. ಅದೂ ಈ ಹಂತದಲ್ಲಿವಾಸಿಯಾಗುತ್ತೆ ಅನ್ನೋದು ನಿಜವಲ್ಲ. ಎಲ್ಲಾದಿನ, ವಾರಗಳ ಲೆಕ್ಕ ಅಷ್ಟೆ. ವಾಸ್ತವವನ್ನು ಅರ್ಥ ಮಾಡಿಕೋ ಬೇಕು. ನೀವು ಎಲ್ಲದಕ್ಕೂ ರೆಡಿಯಾಗಿರಿ' ಎಂದು ನಮ್ಮನ್ನೇ ಸುಮ್ಮನಾಗಿಸಿದರು. ಅದಾದ ಮಾರನೇ ದಿನದ ಮುಂಜಾನೆ ತೀರಾ ಸುಸ್ತಾಗಿದ್ದರು. ಕಾಫಿ ಕೇಳಿ ಕುಡಿದರಾದರೂ, ಕೊನೆಯ ಗುಟುಕು ಅತ್ತೆ ನಿರ್ಮಲ ಅವರ ಕೈಯಲ್ಲೇ ಉಳಿಯಿತು. ಕ್ಯಾನ್ಸರ್ ರೋಗಕ್ಕೆ ದೇಹ ಪೀಡನೆಗೆ ಅವಕಾಶವನ್ನೇ ನೀಡದಂತೆ, ಎಂದಿನ ಮುಖ ಭಾವ-ಆಕೃತಿಯನ್ನು ನಮ್ಮೆಲ್ಲರ ನೆನಪಿನಲ್ಲುಳಿಸಿ ಹೊರಟುಹೋದರು ಮತ್ತು ಕಾಯಿಲೆಯನ್ನು ಸಾವಿನಲ್ಲಿಗೆದ್ದರು. ಕ್ಯಾನ್ಸರ್ ಖಚಿತವಾದ ದಿನವೇ ಅತ್ತೆ ಮತ್ತು ನಮ್ಮಿಬ್ಬರನ್ನು ಕೂರಿಸಿಕೊಂಡು ಹೇಳುವುದನ್ನೆಲ್ಲಹೇಳಿ 'ಸಾವಿನ ನಂತರ ದೇಹವನ್ನು ವಿದ್ಯುತ್ ಚಿತಾಗಾರಕ್ಕೆ ಒಯ್ದುಕೊಟ್ಟುಬಿಡಿ, ಯಾವುದೇ ಆಚರಣೆಗೆ ಅವಕಾಶ ಕೊಡಬೇಡಿ' ಅಂತ ತಾಕೀತು ಮಾಡಿ ದಂಗು ಬಡಿಸಿದ್ದರು. ಅಂತ್ಯಕ್ರಿಯೆಯನ್ನು ಅಂತೆಯೇ ನಡೆಸಿದ್ದು ನಮ್ಮಮಟ್ಟಿಗಿನ ಸಮಾಧಾನ. ಮಾತನಾಡಿಕೊಂಡಿದ್ದವರಂತೆ ಅದಾದ ಐದು ತಿಂಗಳಿಗೇ ಅತ್ತೆ ನಿರ್ಮಲ ಅವರ ಸರದಿ. ಅವರಿಬ್ಬರು ಕಟ್ಟಿಸಿಕೊಂಡು, ಬಾಳಿದ ಮನೆ ಅವರ ಕೊನೆಯ ಉಸಿರಿಗೂ ಸಾಕ್ಷಿಯಾಯಿತು.

* * *

ಈ ಎರಡು ವರ್ಷದಲ್ಲಿ ಅನೇಕರು, ಅನೇಕ ಸಂದರ್ಭದಲ್ಲಿ ಹೇಳಿದ್ದಾರೆ... 'ಇಂಥ ಸಂದರ್ಭದಲ್ಲಿ ರಾಮದಾಸ್ ಇರಬೇಕಿತ್ತು, ಅವರ ಪ್ರತಿಕ್ರಿಯೆ, ಸ್ಪಂದನ ನಿಜಕ್ಕೂ ಭಿನ್ನವಾಗಿರುತ್ತಿತ್ತು' ಎಂದು. ನಾನು, ಸ್ನೇಹಾ ಅನೇಕ ಬಾರಿ ಹಾಗೇ ಮಾತಾಡಿಕೊಂಡಿದ್ದೇವೆ. ಆದರೆ, ಮರುಕ್ಷಣವೇ ಕ್ಯಾನ್ಸರ್‌ನ ಮಾರಕ ಪರಿಣಾಮವನ್ನು ನೆನೆಸಿಕೊಂಡು ಆಗಲೇ 'ನಿರ್ಗಮಿಸಿದ್ದೇ' ಸೂಕ್ತವಾಯಿತು ಎಂದುಕೊಂಡಿದ್ದೇವೆ. ಆದರೂ, ಒಂದು ನೋವು ನಿರಂತರವಾಗಿ ನಮ್ಮಿಬ್ಬರನ್ನು ಕಾಡುತ್ತಿದೆ. ನಮ್ಮೊಂದಿಗೆ ಈಗ ಪುಟ್ಟ ಮಗಳಿದ್ದಾಳೆ. ಅವಳ ಆಟ; ಕೇಕೆ; ಪ್ರಫುಲ್ಲ ನಗುವನ್ನು ನೋಡಲು ಅವಳ ಅಜ್ಜಾ-ಅಜ್ಜಿ ಇಲ್ಲವಲ್ಲ ಎಂಬುದದು. ಮಕ್ಕಳನ್ನು

ಕಂಡರೆ ಇಬ್ಬರೂ ಮಕ್ಕಳಾಗಿಬಿಡುತ್ತಿದ್ದರು. ಅವರ ಸಂಗದ ಸುಖಗಳಿಂದ ತುಷಾರ ಕೂಡ ವಂಚಿತಳು.

'ಚಾರ್ವಾಕ'ದ ಹಿಂದಿನ ಮಾವಿನ ಮರ ಈ ಬಾರಿ ಫಸಲು ಬಿಟ್ಟಿದೆ. ಅಜ್ಜ-ಅಜ್ಜಿ ನೆಟ್ಟಗಿಡದ ಹಣ್ಣನ್ನು ಮೊಮ್ಮಗಳು ಚಪ್ಪರಿಸುತ್ತಿದ್ದಾಳೆ. ಅವರು ಬೆಳೆಸಿದ ಹಸುರಿನ ಕೆಳಗೆ; ಹೂವುಗಳನ್ನು, ಅಪರೂಪಕ್ಕೆ ಬರುವ ಹಕ್ಕಿಗಳನ್ನು ನೋಡಿ ಸಂಭ್ರಮಿಸುತ್ತಾಳೆ. ರಾತ್ರಿ ಅಂಗಳದಲ್ಲಿನಿಂತು ಚಂದಮಾಮನನ್ನು ಕರೆಯುತ್ತಾಳೆ. ಅವರ ಫೋಟೋ ನೋಡಿ 'ತಾತ-ಅಜ್ಜಿ' ಅಂತ ಗುರುತಿಸುತ್ತಾಳೆ.

# ಪ್ರತಿಬಿಂಬ

# ರಾಮದಾಸ್ ಅವರ ವೈಜ್ಞಾನಿಕ ದೃಷ್ಟಿ

**ಜೆ.ಆರ್. ಲಕ್ಷ್ಮಣರಾವ್**

ರಾಮದಾಸ್ ಅವರು ತಮ್ಮ ವಾಸಕ್ಕಾಗಿ ಮನೆಯನ್ನು ಕಟ್ಟಿಸಿಕೊಂಡಾಗ, ಆ ಮನೆಗೆ 'ಚಾರ್ವಾಕ' ಎಂಬ ಹೆಸರು ಕೊಟ್ಟರು. ರಾಮದಾಸ್ ಮತ್ತು ಅವರ ಪತ್ನಿ-ಇಬ್ಬರೂ ಕನ್ನಡ ಎಂ.ಎ.ಡಿಗ್ರಿ ಪಡೆದು, ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದವರು. ಕನ್ನಡ ಭಾಷೆ ಮತ್ತು ಕನ್ನಡ ಸಾಹಿತ್ಯಗಳಿಗೆ ಸಂಬಂಧಿಸದಿರುವ 'ಚಾರ್ವಾಕ' ಎಂಬ ಹೆಸರನ್ನು ಅವರು ತಮ್ಮ ಮನೆಗೆ ಆರಿಸಿಕೊಂಡುದು ಕುತೂಹಲದ ಸಂಗತಿ. ಸುಮಾರು ಎರಡೂವರೆ ಸಾವಿರ ವರ್ಷಗಳ ಕೆಳಗೆ, ಬುದ್ಧನ ಕಾಲಕ್ಕೂ ಹಿಂದೆ ಭಾರತದಲ್ಲಿ ಪ್ರಚಲಿತವಾಗಿತ್ತು ಎನ್ನಲಾದ ಭೌತವಾದೀ ತತ್ವಸಿದ್ಧಾಂತದ ಹೆಸರು ಅದು.

ಭೌತದ್ರವ್ಯ (matter) ಮತ್ತು ಪ್ರಜ್ಞೆ (Conscious) ಗಳಿಗಿರುವ ಸಂಬಂಧ ಬಹುಕಾಲದಿಂದಲೂ ತತ್ವಶಾಸ್ತ್ರದ ಬಹು ಮುಖ್ಯ ಪ್ರಶ್ನೆಯಾಗಿದೆ. ಆ ಎರಡರಲ್ಲಿ ಯಾವುದು ಮೊದಲು, ಯಾವುದು ಅದರಿಂದ ಜನಿಸುತ್ತದೆ ಎಂಬ ಪ್ರಶ್ನೆಗೆ ನಾನಾ ಬಗೆಯ ಉತ್ತರಗಳನ್ನು ಕೊಟ್ಟಿರುವ ಮತ್ತು ಕೊಡುತ್ತಿರುವ ತತ್ವಶಾಸ್ತ್ರಜ್ಞರನ್ನು ಸ್ಥೂಲವಾಗಿ ಎರಡು ಪಂಗಡಗಳಾಗಿ ವಿಂಗಡಿಸಬಹುದು. ಈ ಜಗತ್ತು ಮೂಲಭೂತವಾಗಿ ಭೌತದ್ರವ್ಯ ಸ್ವರೂಪದ್ದು, ಪ್ರಜ್ಞೆ ಮತ್ತು ಅದಕ್ಕೆ ಸಂಬಂಧಿಸಿದ ಮನಸ್ಸು, ಚಿಂತನೆ, ಭಾವನೆ ಮುಂತಾದವೆಲ್ಲ ಭೌತದ್ರವ್ಯದಿಂದ ಜನಿಸಿದಂಥವು ಎನ್ನುವವರನ್ನು ಭೌತವಾದಿಗಳೆಂದು ಕರೆಯುತ್ತಾರೆ. ಜಗತ್ತು ಮೂಲಭೂತವಾಗಿ ಪ್ರಜ್ಞೆಯ ಸ್ವರೂಪದ್ದು, ಇಂದ್ರಿಯಗೋಚರವಾದ ಭೌತದ್ರವ್ಯ ಪ್ರಭೇದಗಳೆಲ್ಲ ಅದರ ಪ್ರಕಟರೂಪಗಳು ಎನ್ನುವವರನ್ನು ಭಾವನಾವಾದಿಗಳೆಂದು ಕರೆಯುತ್ತಾರೆ. ಪೂರ್ವಕಾಲದಲ್ಲಿ ತತ್ವಶಾಸ್ತ್ರೀಯ ಜಿಜ್ಞಾಸೆ ಊಹಾತ್ಮಕ (speculative)ವಾಗಿದ್ದುದು ಸಹಜ. ಏಕೆಂದರೆ ಆಗ ಇನ್ನೂ ಶೈಶವಾವಸ್ಥೆಯಲ್ಲಿದ್ದ ವಿಜ್ಞಾನವು ಭೌತದ್ರವ್ಯ ಮತ್ತು ಪ್ರಜ್ಞೆಗಳನ್ನು ಕುರಿತಂತೆ ಖಚಿತ

ಅಭಿಪ್ರಾಯವನ್ನು ಕೊಡುವ ಸ್ಥಿತಿಯಲ್ಲಿರಲಿಲ್ಲ. ಆಧುನಿಕ ವಿಜ್ಞಾನ ಈಗ ಆ ಹಂತವನ್ನು ತಲುಪಿದೆ.

ನಮ್ಮ ಸುತ್ತಲೂ ಕಂಡುಬರುವ ಅಚೇತನ ಮತ್ತು ಚೇತನ ವಸ್ತುಪ್ರಪಂಚದ ಬಗ್ಗೆ ವಿಶ್ವಾಸಾರ್ಹವಾದ ಜ್ಞಾನವನ್ನು ಸಂಪಾದಿಸುವುದು ವಿಜ್ಞಾನದ ಗುರಿಯಷ್ಟೆ. ನಂಬಿಕೆಗೆ ಅರ್ಹವಾದ ಅಂಥ ಜ್ಞಾನವನ್ನು ಪಡೆಯುವ ಪ್ರಯತ್ನದಲ್ಲಿ ವಿಜ್ಞಾನ ಒಂದು ಪರಿಣಾಮಕಾರಿಯಾದ ವಿಧಾನವನ್ನು ರೂಪಿಸಿಕೊಂಡಿದೆ. ಇಂದು ವ್ಯಾಪಕವಾಗಿ ಬಳಸಲಾಗುತ್ತಿರುವ ಆ ವಿಜ್ಞಾನ ವಿಧಾನ ಸುಮಾರು ಮುನ್ನೂರು ನಾನ್ನೂರು ವರ್ಷಗಳ ಹಿಂದೆ ನಿರ್ದಿಷ್ಟ ರೂಪ ಪಡೆಯಿತು ಎನ್ನಬಹುದು. ಅದರ ನೆರವಿನಿಂದ ವಿಜ್ಞಾನವು ಅಲ್ಲಿಂದೀಚೆಗೆ ನಾಗಾಲೋಟದಲ್ಲಿ ಮುನ್ನಡೆಯುತ್ತಿರುವುದೂ ಅದನ್ನನುಸರಿಸಿ ಬಂದ ತಂತ್ರಜ್ಞಾನವು ಬೆರಗುಗೊಳಿಸುವಂಥ ಅದ್ಭುತಗಳನ್ನು ಸಾಧಿಸುತ್ತಿರುವುದೂ ಅಂಗೈ ಮೇಲಿನ ನೆಲ್ಲಿಕಾಯಿಯಂತೆ ಕಂಡುಬರುತ್ತಿದೆ. ಭೌತದ್ರವ್ಯ ಮತ್ತು ಪ್ರಜ್ಞೆಗಳ ವಿಷಯದಲ್ಲಿಯೂ ವಿಜ್ಞಾನವು ವಿಶ್ವಾಸಾರ್ಹವಾದ ತಿಳುವಳಿಕೆಯನ್ನು ನೀಡಿದೆ.

ಭೂಗ್ರಹದ ಮೇಲೆ ಕೋಟ್ಯಂತರ ವರ್ಷಗಳ ದೀರ್ಘಕಾಲ ಯಾವ ಬಗೆಯ ಜೀವಿಯೂ ಇರಲಿಲ್ಲವೆಂಬುದಕ್ಕೆ ಖಚಿತ ಸಾಕ್ಷ್ಯಾಧಾರಗಳು ದೊರಕಿವೆ. ಆ ಕಾಲದಲ್ಲಿ ಭೂಮಿಯ ಮೇಲೆ ಲಭ್ಯವಿದ್ದ ಪರಿಸರದಲ್ಲಿ ಜೀವಿಗಳ ದೇಹರಚನೆಯಲ್ಲಿ ಭಾಗವಹಿಸುವ ಮುಖ್ಯವಾದ ಎರಡು ರಾಸಾಯನಿಕಗಳಾದ ಪ್ರೋಟೀನು ಮತ್ತು ನ್ಯೂಕ್ಲಿಕ್ ಆಮ್ಲಗಳು ತಮಗೆ ತಾವೇ ಹೇಗೆ ರೂಪುಗೊಂಡಿರಬಹುದು ಎಂದು ಊಹಿಸಿ, ಅವು ಹಾಗೆ ರೂಪುಗೊಂಡಿರುವುದು ಸಾಧ್ಯ ಎಂಬುದನ್ನು ತಕ್ಕ ಪ್ರಯೋಗಗಳನ್ನು ಮಾಡಿ ನೋಡಿ ಖಚಿತ ಪಡಿಸಿಕೊಂಡಿದ್ದಾರೆ. ಆ ರಾಸಾಯನಿಕಗಳು ಒಂದರೊಡನೆ ಒಂದು ಕೂಡಿಕೊಂಡುದರ ಪರಿಣಾಮವಾಗಿ ಭೂಮಿಯ ಮೇಲೆ ಉದ್ಭವಿಸಿದ ಮೊತ್ತ ಮೊದಲ ಜೀವಿ ಸರಳಾತಿ ಸರಳವಾದ ಏಕಕೋಶ ಜೀವಿ, ಅಂದರೆ ಒಂದೇ ಒಂದು ಜೀವಕೋಶ ಉಳ್ಳ ಜೀವಿಯಾಗಿದ್ದಿರಬೇಕಷ್ಟೆ. ಆ ಜೀವಿ ಸಜೀವಿಗಳಿಗೆ ಸಹಜವಾದ ಸಂತಾನೋತ್ಪತ್ತಿ ಕ್ರಿಯೆಯಲ್ಲಿ ತೊಡಗಿ, ಅದರ ಸಂತತಿ ಬೆಳೆಯುತ್ತ ಹೋದಂತೆ, ಪೀಳಿಗೆಯಿಂದ ಪೀಳಿಗೆಗೆ ದೇಹರಚನೆ ಮತ್ತು ದೈಹಿಕ ಕ್ರಿಯೆಗಳು ಸಂಕೀರ್ಣವಾಗುತ್ತ ಹೋದುದರ ಫಲವಾಗಿ ಇಂದಿನ ಸಸ್ಯ ಸಾಮ್ರಾಜ್ಯ ಮತ್ತು ಪ್ರಾಣಿ ಸಾಮ್ರಾಜ್ಯಗಳು ಅಸ್ತಿತ್ವಕ್ಕೆ ಬಂದುವು ಎಂಬುದು ವಿಕಾಸ ಸಿದ್ಧಾಂತದ ಸಾರಾಂಶ. ಏಕಕೋಶ ಜೀವಿಯಿಂದ ಪ್ರಾರಂಭವಾದ ವಿಕಾಸ ಪ್ರಕ್ರಿಯೆಯ ಮನುಷ್ಯ ಜೀವಿಯನ್ನು ತಲಪುವ ಹಾದಿಯಲ್ಲಿನ ಬೇರೆ ಬೇರೆ ಹಂತಗಳ ಎಲ್ಲ ಜೀವಿಗಳ ಫಾಸಿಲ್‌ಗಳೂ, ಅಂದರೆ ಪಳೆಯುಳಿಕೆಗಳೂ ಶಿಲಾಸ್ತರಗಳಲ್ಲಿ ಅದೇ ಅನುಕ್ರಮದಲ್ಲಿ ದೊರೆತಿರುವುದು ವಿಕಾಸ ಸಿದ್ಧಾಂತಕ್ಕೆ ಪ್ರಬಲ ಸಾಕ್ಷ್ಯಾಧಾರವನ್ನು ಒದಗಿಸಿದೆ.

ವಿಜ್ಞಾನವು ಚೆಲ್ಲಿರುವ ಈ ಬೆಳಕಿನಲ್ಲಿ ಕಂಡುಬರುವಂತೆ, ಭೂಮಿಯ ಮೇಲೆ ಪ್ರಜ್ಞಾವಂತ ಜೀವಿ ಕಾಣಿಸಿಕೊಳ್ಳುವುದಕ್ಕೆ ಮುಂಚೆ ಭೌತದ್ರವ್ಯವಿದ್ದುದರಿಂದ ಕಾಲಾನುಕ್ರಮದ ದೃಷ್ಟಿಯಲ್ಲಿ ಭೌತದ್ರವ್ಯಕ್ಕೆ ಮೊದಲ ಸ್ಥಾನ ಎಂಬುದೂ, ಪ್ರಜ್ಞಾವಂತ ಜೀವಿ ಉತ್ಪತ್ತಿಯಾದುದು ಭೌತದ್ರವ್ಯದಿಂದ ಎಂಬ ಕಾರಣಕ್ಕಾಗಿಯೂ ಭೌತದ್ರವ್ಯಕ್ಕೇ ಮೊದಲ ಸ್ಥಾನ ಎಂಬುದೂ

ನಿರ್ವಿವಾದವಾದ ಸಂಗತಿ. ಆದುದರಿಂದ ವಿಜ್ಞಾನದ ಅಧ್ಯಯನವನ್ನು ಗಂಭೀರವಾಗಿ ಪರಿಗಣಿಸುವ ವ್ಯಕ್ತಿ ಭೌತವಾದಿಯಾಗುವುದು ಸಹಜ. ರಾಮದಾಸ್ ಅವರು ಕ್ರಮಬದ್ಧವಾಗಿ ವಿಜ್ಞಾನದ ಅಧ್ಯಯನವನ್ನು ಕೈಗೊಳ್ಳದಿದ್ದರೂ ವಿಜ್ಞಾನದ ನಿಲವನ್ನು ಮೈಗೂಡಿಸಿಕೊಂಡು ಕಟ್ಟಾ ಭೌತವಾದಿಯಾದುದು ಪ್ರಶಂಸನೀಯ.

ಅಷ್ಟು ಮಾತ್ರವಲ್ಲ. ರಾಮದಾಸ್ ಅವರು ಸಾರ್ವಜನಿಕ ವಿದ್ಯಮಾನಗಳಿಗೆ ಪ್ರತಿಕ್ರಿಯೆ ತೋರುವ[illegible]ಮಟ್ಟಿಗೆ ವೈಜ್ಞಾನಿಕ ಮನೋಭಾವವನ್ನು ತಳೆಯುತ್ತಿದ್ದರೆಂಬ ವಿಷಯವನ್ನು ಮೈಸೂರಿ[illegible]ನರೆಲ್ಲ ಬಲ್ಲರು. ವೈಜ್ಞಾನಿಕ ಮನೋಭಾವ ಎಂದರೆ ವಿಜ್ಞಾನಿಯೊಬ್ಬನು ತನ್ನ ಸಂಶೋಧನೆಯಲ್ಲಿ ವಿಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಲು ತಳೆಯಲೇಬೇಕಾಗುವ ಮನೋಭಾವ. ಆ ಮನೋಭಾವದ ಬಹುಮುಖ್ಯ ಲಕ್ಷಣ ವಸ್ತುನಿಷ್ಠೆ; ಅಂದರೆ, ವಿದ್ಯಮಾನಗಳನ್ನು ಪರಿಶೀಲಿಸುವಾಗ ಅದನ್ನು ತನ್ನ ಮೂಗಿನ ನೇರದಲ್ಲಿ ನೋಡದೆ, ಅದು ವಾಸ್ತವವಾಗಿ ಹೇಗಿದೆಯೋ ಹಾಗೆ ನೋಡುವುದು ಮೇಲ್ನೋಟಕ್ಕೆ ಕಾಣಿಸುವಷ್ಟು ಸುಲಭವೇನಲ್ಲ. ಪೂರ್ವಗ್ರಹ, ಅಂದರೆ ಪೂರ್ವಕಲ್ಪಿತ ಅಭಿಪ್ರಾಯಗಳು, ಸ್ವಹಿತಾಸಕ್ತಿ, ಸ್ವಪ್ರತಿಷ್ಠೆ, ಧಾರ್ಮಿಕ ನಂಬಿಕೆಗಳು, ಅಧಿಕಾರ ವಾಣಿ ಮುಂತಾದ ಅನೇಕ ಅಡಚಣೆಗಳು ವಸ್ತುನಿಷ್ಠೆಗೆ ಅಡ್ಡಿಬರುತ್ತವೆ. ಅವುಗಳನ್ನೆಲ್ಲ ಪ್ರಯತ್ನ ಪೂರ್ವಕವಾಗಿ ಹತ್ತಿಕ್ಕಿ, ವಿದ್ಯಮಾನವನ್ನು ಪರಿಶೀಲಿಸಬೇಕಾಗುತ್ತದೆ. ಅನೇಕ ವಿಜ್ಞಾನಿಗಳು ಸಹ ತಮ್ಮ ವೈಜ್ಞಾನಿಕ ಸಂಶೋಧನೆಯಲ್ಲಿ ಅಭ್ಯಾಸ ಬಲದಿಂದ ವಸ್ತುನಿಷ್ಠ ದೃಷ್ಟಿಯನ್ನು ತಳೆದು, ವೈಯಕ್ತಿಕ ವ್ಯವಹಾರದಲ್ಲಿ ಆ ದೃಷ್ಟಿ ತಳೆಯುವಲ್ಲಿ ವಿಫಲರಾಗುತ್ತಾರೆ. ಮೈಸೂರಿನಲ್ಲಿ ಸಾರ್ವಜನಿಕ ಪಶ್ನೆಗಳು ಉದ್ಭವಿಸಿದಾಗ ರಾಮದಾಸ್ ಅವರು ತಪ್ಪದೆ ಅವುಗಳಿಗೆ ಸ್ಪಂದಿಸಿ ಕಾರ್ಯೋನ್ಮುಖರಾಗುತ್ತಿದ್ದುದೂ ಆಗ ಬಹುಮಟ್ಟಿಗೆ ಪ್ರಾಮಾಣಿಕವಾಗಿ ವಸ್ತುನಿಷ್ಠ ದೃಷ್ಟಿಯನ್ನು ತಳೆಯುತ್ತಿದ್ದುದೂ ಮೈಸೂರಿನವರಿಗೆ ಗೊತ್ತು. ರಾಮದಾಸ್ ಅವರ ನಿಧನದಿಂದಾಗಿ ಮೈಸೂರಿನಲ್ಲಿ ಉಂಟಾಗಿರುವ ಶೂನ್ಯತೆಯನ್ನು ತುಂಬುವುದು ಕಷ್ಟಸಾಧ್ಯ.

# ಸ್ವಾಭಿಮಾನ

ಮೈಸೂರಿನಲ್ಲಿದ್ದಾಗ ವಿಚಾರವಾದಿ ಕೆ. ರಾಮದಾಸ್ ಭೇಟಿಯಾಗಿದ್ದರು. ಉಭಯಕುಶಲೋಪರಿ ಮಾಡುತ್ತಿದ್ದಾಗ ಅವರು 'ತಮ್ಮ ಪತ್ನಿಯು ಕರುಳು ಬೇನೆಯಿಂದ ಬಳಲುತ್ತಿದ್ದಾರೆ' ಎಂದು ತಿಳಿಸಿದ್ದರು. ನಾನು ಅವರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದ್ದೆ.

ನಂತರ ಶ್ರೀ ಮಠದ ಕಾರ್ಯಕರ್ತರಾದ ಜಯಶಂಕರ್‌ಗೆ 'ರಾಮದಾಸರಲ್ಲಿಗೆ ಹೋಗಿ ಔಷಧಿ ಖರ್ಚಿಗಾಗಿ ಹತ್ತು ಸಾವಿರ ರೂಗಳನ್ನು ಕೊಡಿ' ಎಂದು ಆದೇಶಿಸಿದ್ದೆ. ಅದರಂತೆ ಜಯಶಂಕರ್ ಹಣ ಕೊಡಲು ಹೋದಾಗ ರಾಮದಾಸ್ ಅವರು ಸೌಜನ್ಯದಿಂದಲೇ ಅದನ್ನು ನಿರಾಕರಿಸಿದ್ದರು.

ಅವರು ನನ್ನೊಡನೆ ಫೋನ್‌ನಲ್ಲಿ ಮಾತನಾಡುತ್ತಾ, 'ಸ್ವಾಮೀಜಿ, ನನಗೆ ನಿಮ್ಮ ಅಂತಃಕರಣ ಮತ್ತು ಪ್ರೀತಿಯು ಧೈರ್ಯ ತುಂಬಿದೆ. ನನಗೆ ಆರ್ಥಿಕ ತೊಂದರೆಯೇನೂ ಇಲ್ಲ. ನನಗೆ ಬೇಕಾಗಿರುವುದು ನಿಮ್ಮ ನೈತಿಕ ಬೆಂಬಲ ಅಷ್ಟೇ' ಎಂದು ಹೇಳಿದರು.

ಆ ವರೆಗೆ ಅವರ ನುಡಿಯನ್ನು ಮೆಚ್ಚಿದ್ದ ನಾನು, ಈಗ ಅವರ ನಡೆಯನ್ನೂ ಮೆಚ್ಚಿದೆ.

ವಿಚಾರವಂತರಿಗೆ ಕಷ್ಟ ಯಾವುದು ಗೊತ್ತೇ ?

ಸ್ವಾಭಿಮಾನವನ್ನು ಉಳಿಸಿಕೊಳ್ಳುವುದು.

ಅದಕ್ಕಾಗಿ ಅವರು ಕೊನೆಯ ಉಸಿರಿನ ತನಕ ಹೋರಾಡುತ್ತಾರೆ.

ದಿನಾಂಕ. 10.5.2005

(ಶ್ರೀ ಶಿವಮೂರ್ತಿ ಮುರುಘಾ ಶರಣರ
'ಜೇನು' ಕೃತಿಯಿಂದ)

## 'ಅವರು ಆಚೆಗೂ ಕೈ ಚಾಚಿದ್ದರೋ ಏನೋ'

ಯು.ಆರ್. ಅನಂತಮೂರ್ತಿ

ನಾವು ಮಾಡಿದ ಅಷ್ಟೂ ಸ್ಟ್ರಗಲ್‌ಗಳಲ್ಲಿ ನಾವು ಸೋತಿರೋದೇ.... ನಾವು ಗೆದ್ದಿರೋದು ಇಲ್ಲ. ಆದರೆ ನೋಡಿ, ವಿಚಾರಕ್ಕೆ ಒಂದು ಶಕ್ತಿ ಇರತ್ತೆ. ಅದೇನು ಅಂದರೆ, ಸದ್ಯದಲ್ಲಿ ಅದು ಸೋತ ಹಾಗೆ ಕಂಡಿರತ್ತೆ. ಆದರೆ ಆ ವಿಚಾರ ಜಗತ್ತಿನಲ್ಲಿ ಸಂಚರಿಸುತ್ತಾನೇ ಇರುತ್ತೆ. ಒಂದು ಹೊಸ ವಿಚಾರ ಹುಟ್ಟಿದರೆ ಅದು ಸಾಯುವುದೇ ಇಲ್ಲ.

ನಮ್ಮ ದೇಶದಲ್ಲಿ ಈ ವೈದಿಕ ಪರಂಪರೆ ಅಂತಾರಲ್ಲ ಅಷ್ಟೇ ಪ್ರಾಚೀನವಾದ ಇನ್ನೊಂದು ಪರಂಪರೆಯಿದೆ. ಅದು ಲೋಕಾಯತ ಪರಂಪರೆ. ಆ ಲೋಕಾಯತ ಪರಂಪರೆಯನ್ನು ನನ್ನ ಕಾಲದಲ್ಲಿ ಜೀವಂತವಾಗಿಟ್ಟ ಮನುಷ್ಯ ಅಂದರೆ ರಾಮದಾಸ್. ಲಂಕೇಶರಿಗಿಂತ ಹೆಚ್ಚಾಗಿ, ತೇಜಸ್ವಿಗಿಂತ ಹೆಚ್ಚಾಗಿ ಎಲ್ಲರಿಗಿಂತ ಹೆಚ್ಚಾಗಿ ಒಂದು ಥರ ಪ್ಯೂರ್ ಆದ ಒಂದು ಲೋಕಾಯತ ಪರಂಪರೆಯ ಮುಂದುವರಿಕೆ ರಾಮದಾಸ್. ಆದ್ದರಿಂದ ನಿರೀಶ್ವರವಾದಿ. 'ಚಾರ್ವಾಕ' ಅಂತ ಅವರ ಮನೆ ಹೆಸರು.

ಅವರ ಪರಿಣಾಮ ಏನು ಅಂದರೆ, ರಾಮದಾಸ್ ತನ್ನ ಎಲ್ಲಾ ಪ್ರಶ್ನೆಗಳನ್ನೂ ಅಂತಃಸಾಕ್ಷಿಯ ದೃಷ್ಟಿಯಿಂದ ಮಾತ್ರ ನೋಡತಾ ಇದ್ದರು. ಅವರಿಗೆ ಇದು ಸತ್ಯ ಎನ್ನುವುದಕ್ಕೆ ಹೊರಗಿನ ಪುರಾವೆಗಿಂತ ಹೆಚ್ಚಾಗಿ ಒಳಗಿನ ಅಂತಃಸಾಕ್ಷಿ ಮುಖ್ಯ ಆಗಿತ್ತು. ಇದರಿಂದ ಅವರು ಒಂದು ರೀತಿ ವಿಪರೀತಕ್ಕೆ ಹೋಗತಾ ಇದ್ದರು, ಅತಿಗೆ ಹೋಗತಾ ಇದ್ದರು.

ಒಂದೊಂದು ಸಾರಿ ನನಗೆ ಅನಿಸುತ್ತೆ, ಯಾರಿಗೆ ಒಂದು ಅತಿಗೆ ಹೋಗುವ ಧೈರ್ಯವಿರುತ್ತೋ ಅವನಿಗೆ ಕೆಲವು ಸಾಕ್ಷಾತ್ಕಾರಗಳು ಆಗುತ್ತವೆ. ನಾವು-ಅರ್ಧಂಬರ್ಧ ಇದ್ದವರಿಗೆ ಆ ಸಾಕ್ಷಾತ್ಕಾರ ಆಗುವುದೇ ಇಲ್ಲ. ರಾಮದಾಸ್‌ಗೆ ಈ ಸಾಕ್ಷಾತ್ಕಾರ ಆಗಿತ್ತು ಅಂತ ನನಗೆ ಹೋದವಾರ ಗೊತ್ತಾಯಿತು. ನಾನು ಅವರನ್ನು ನೋಡಕ್ಕೆ ಅಂತ ಬಂದಿದ್ದೆ. ಸುಮಾರು ಹೊತ್ತು ಮಾತಾಡಿದೆವು.

ಅವರು ಮಾಡಿದ ತಪ್ಪುಗಳನ್ನು ಅವರು ಹೇಳಿದರು. ನಮ್ಮ ಜಗಳಗಳನ್ನೆಲ್ಲಾ ನೆನಪು ಮಾಡಿಕೊಂಡರು. ಆ ಕಾಲದ ಮಂಥನ ನಡೆದಿತ್ತು.

ನಾನು ಅವರ ಹಾಗೆ ಯೋಚನೆ ಮಾಡುವವನಲ್ಲ. ಆದರೆ ಅವರು ಒಂದು ಮಾತು ಹೇಳಿ ನನ್ನನ್ನು ಬೆಚ್ಚಿಸಿಬಿಟ್ಟರು- 'ಸರ್ ನಾವು ಜೀವನವನ್ನ ಹೇಗೆ ಪ್ರೀತಿಸುತ್ತೇವ್ರೋ ಹಾಗೇ ಸಾವು ಹತ್ತಿರವಾದಾಗ ಅದನ್ನೂ ಒಂದು ಪ್ರೀತಿಯಿಂದ ಸಮಾಧಾನದಿಂದ ಅರ್ಥ ಮಾಡಿಕೋಬೇಕು' ಅಂದರು. ಹಾಗೆ ಅರ್ಥ ಮಾಡಿಕೊಂಡವರ ಹಾಗೇನೇ ತನಗೆ ಕ್ಯಾನ್ಸರ್ ಬಂದದ್ದು ಹೇಗೆ ಗೊತ್ತಾಯಿತು ಎಂಬುದನ್ನು ಎಷ್ಟು ವಿಶ್ಲೇಷಣೆ ಮಾಡಿ ಮಾತಾಡಿದರು ಎಂದರೆ, ಅದೇನೋ ಬೇರೆಯವನಿಗೆ ಆಗಿರೋದು ಅನ್ನುವ ಹಾಗೆ. ಆಗ ನನಗೆ ಅನ್ನಿಸಿತು ದೇವರನ್ನ ನಂಬಿದವರು ಮಹಾಸಂತರು, ಎಷ್ಟು ಆಧ್ಯಾತ್ಮಿಕ ಆಗತಾರೋ ದೇವರನ್ನ ನಂಬದೇ ಇರುವವರೂ ಅದಕ್ಕಿಂತ ಹೆಚ್ಚು ಆಧ್ಯಾತ್ಮಿಕ ಆಗಕ್ಕೆ ಸಾಧ್ಯ ಇದೆ ಅಂತ. ಇದನ್ನು ನಾನು ರಾಮದಾಸರಲ್ಲಿ ಕಂಡೆ. ಆತ ಮಹಾಹಟವಾದಿ, ಮಹಾ ಜಗಳಗಂಟ. ಆದರೆ ಅದನ್ನೆಲ್ಲ ತಕ್ಷಣ ಮರೆತುಬಿಡುತ್ತಿದ್ದರು. ಅವರಲ್ಲಿ ಬಹಳ ದೊಡ್ಡ ಪ್ರೀತಿಯಿತ್ತು. ಆ ಪ್ರೀತಿಯೆಲ್ಲ ಮಡುಗಟ್ಟಿ ನಿಂತಿದ್ದು ಅವರ ತಾಯಿಯಲ್ಲಿ. ಈ ಎದುರುಗಡೆ ಗಾರ್ಡನ್ ನೋಡಿ. ಅದರಲ್ಲಿರುವ ಒಂದೊಂದು ಗಿಡವನ್ನೂ ಬೆಳೆಸಿದ್ದು ಅವರಮ್ಮ. ಬಹಳ ದೊಡ್ಡ ತಾಯಿ ಅವರು.

ರಾಮದಾಸ್ ಮನಸ್ಸು ಕೆಲಸ ಮಾಡುತ್ತಿದ್ದ ಕ್ರಮ ಇದೆಯಲ್ಲ ಅದು ನನಗೆ ಅದ್ಭುತ ಅನಿಸುತ್ತೆ ಒಂದು ಉದಾಹರಣೆ ಕೊಡತೀನಿ. ಅವರು ದೊಡ್ಡ ತಪ್ಪು ಮಾಡಿದ್ದು ಅಂತ ನನಗೆ ಅನಿಸಿದ್ದುದು ನನ್ನ ಕಾದಂಬರಿ 'ಅವಸ್ಥೆ' ಬಂದಾಗ ಅದರಲ್ಲಿ ನಾನು ಒಬ್ಬ ಸಮಾಜವಾದಿಯ ಬಗ್ಗೆ ಮರ್ಯಾದೆ ಇಲ್ಲದೆ ನಡಕೊಂಡುಬಿಟ್ಟೆ ಅಂತ ಹೇಳಿ, ನಾನು ಎಲ್ಲಿ ಮಾತಾಡೋಕ್ಕೆ ನಿಂತರೂ ಅವರು ಎದ್ದು ನಿಂತು ಬಿಡೋರು- 'ನೀವು ಮಾತಾಡೋ ಹಾಗಿಲ್ಲ' ಅಂತ ಪ್ರತಿಭಟಿಸೋರು. ಆಮೇಲೆ ಬಹಳ ದಿನದ ನಂತರ 'ಸರ್ ಒಂದು ವಿಷಯದ ಬಗ್ಗೆ, ನನ್ನ ಬಗ್ಗೆ ನನಗೇ ನಾಚಿಕೆಯಾಗುತ್ತೆ. ನಿಮ್ಮ ಪುಸ್ತಕವನ್ನು ವಿರೋಧಿಸಿದ್ದರ ಬಗ್ಗೆ' ಅಂತ ಅಂದರು. ಅದನ್ನ ಎಷ್ಟು ಮಗುವಿನ ಹಾಗೆ ಹೇಳಿದರು ಅಂದರೆ, ಒಂದು ಮಗುವಿನ ಹಾಗೇ ಜಗಳ ಆಡಿದರು, ಮಗುವಿನ ಹಾಗೇ ಅದರ ಬಗ್ಗೆ ತಪ್ಪನ್ನು ಹೇಳಿಕೊಂಡರು. ಅದರಲ್ಲಿ ಪಾಪಭಾವನೆ ಇರತಿರಲಿಲ್ಲ. 'ನಾನು ಹೀಗೆ ಇರಬೇಕಾದರೆ ತಪ್ಪನ್ನು ಮಾಡೋಕೂ ಸಾಧ್ಯ ಇರಬೇಕು. ಅದನ್ನು ಸರಿ ಮಾಡಿಕೊಳ್ಳೋಕೂ ಸಾಧ್ಯ ಇರಬೇಕು'. ಅಗಾಧವಾದ ಪ್ರೀತಿಯ ಶಕ್ತಿ ಅದು.

ಆಮೇಲೆ ಅವರು ಕೆಲವರ ಜತೆ ಜಗಳ ಆಡುತಿದ್ದರಲ್ಲ, ಪ್ರತಿಭಟನೆ ಮಾಡುತ್ತಿದ್ದರಲ್ಲ ಯಾರನ್ನೂ ಮರ್ಯಾದೆ ಬಿಟ್ಟು ನಡೆಸಿಕೊಳ್ಳುತ್ತಿರಲಿಲ್ಲ. ಅದು ದೊಡ್ಡ ಶಕ್ತಿ. ಅವರು ತಮ್ಮ ಆಲೋಚನೆಗಳನ್ನು ಗಾಂಧಿಯಿಂದ-ಲೋಹಿಯಾರಿಂದ ಪಡೆದಿದ್ದರು.

ನಾನು ಒಂದೊಂದು ಸಾರಿ 'ದೇವರನ್ನ ಮತ್ತು ಅತೀತವಾದದ್ದನ್ನ ಇಷ್ಟು ನಿರಾಕರಣೆ ಮಾಡುವುದಾದರೆ ನಿನಗೆ ಕಾವ್ಯ ಸಿಗೋದಿಲ್ಲ' ಅಂತಾಯಿದ್ದೆ. ಕವಿಗಳಿಗೆ ಒಂದು ದೌರ್ಬಲ್ಯ ಏನಪ್ಪಾ ಅಂದರೆ ತನ್ನ ಲೋಕದ ಆಚೆಗೆ ಕೈ ಚಾಚೋದು. ಇವರೂ ಚಾಚಿದ್ದರೋ ಏನೋ.

ಚಾಚಿದ್ದರೆ ಅದು ಬೌದ್ಧರು ಚಾಚಿದ ಹಾಗೆ ಅಂತ ಕಾಣುತ್ತೆ. ಯಾಕೆಂದರೆ ದುಃಖ ಅನ್ನೋದು ಒಂದು ಇದೆ ಅಂತನ್ನೋದು ಅವರಿಗೆ ಗೊತ್ತಿತ್ತು. ನಾವು ಮಾಡಿದ ಅಷ್ಟೂ ಸ್ಟ್ರಗಲ್‌ಗಳಲ್ಲಿ ನಾವು ಸೋತಿರೋದೇ; ನಾವು ಗೆದ್ದಿರೋದು ಇಲ್ಲ. ಆದರೆ ನೋಡಿ, ವಿಚಾರಕ್ಕೆ ಒಂದು ಶಕ್ತಿ ಇರುತ್ತೆ. ಅದೇನು ಅಂದರೆ, ಸದ್ಯದಲ್ಲಿ ಅದು ಸೋತ ಹಾಗೆ ಕಂಡಿರತ್ತೆ. ಆದರೆ ಆ ವಿಚಾರ ಜಗತ್ತಿನಲ್ಲಿ ಸಂಚರಿಸುತ್ತಾನೇ ಇರುತ್ತೆ. ಒಂದು ಹೊಸ ವಿಚಾರ ಹುಟ್ಟಿದರೆ ಅದು ಸಾಯುವುದೇ ಇಲ್ಲ. ಲೋಕಾಯತದವರು ಸಾವಿರದೈನೂರು ವರ್ಷದಿಂದ ಹುಟ್ಟು ಹಾಕಿದ ಒಂದು ಬೀಜ ಈಗ ಇಲ್ಲಿ, ಕುವೆಂಪುನಗರದಲ್ಲಿ, ಈ ಮನೆಯಲ್ಲಿ, ಇಷ್ಟು ದಿನ ಜೀವಂತವಾಗಿತ್ತು ಅಂದರೆ ಏನರ್ಥ? ನನಗೆ ಇದು ಅದ್ಭುತ ಅನಿಸುತ್ತೆ.

ಭಾರತ ಒಂದು ದೊಡ್ಡ ನಾಗರಿಕತೆ ಅನ್ನೋದಾದರೆ ಅಲ್ಲಿ ರಾಮದಾಸ್‌ಗೆ ಅವಕಾಶ ಇರೋದರಿಂದ, ಕರ್ನಾಟಕದಲ್ಲಿ ಅವರಿಗೆ ಅವಕಾಶ ಇರೋದರಿಂದ. ಇಂಥ ಅವಕಾಶಗಳೇ ಇರದ ಕರ್ನಾಟಕ ಇದಾಗಿಬಿಟ್ಟರೆ ನನಗೆ ಈ ದೇಶಾನ ಪ್ರೀತಿಸೋಕೇ ಸಾಧ್ಯ ಇಲ್ಲ.

ಆದ್ದರಿಂದ ನನಗೆ ಯಾರ ಜತೆ ಸತತವಾಗಿ ಜಗಳವನ್ನ ಇಟ್ಟುಕೊಂಡೂ, ಭಿನ್ನಾಭಿಪ್ರಾಯವನ್ನ ಇಟ್ಟುಕೊಂಡೂ ಆತನ ಹಟಮಾರಿತನದ ವಿರುದ್ಧ ಹೋರಾಡತ್ತಾ ಆಗೀಗ ಅವರನ್ನ ಟೀಕಿಸುತ್ತಾ ಇದ್ದರೂ ಮಾರನೆಯ ದಿನಕ್ಕೆ ರಾಮದಾಸ್ ಇಲ್ಲದಿದ್ದರೆ ಇದನ್ನು ಯಾರ ಹತ್ತಿರ ಹೇಳೋದು ಅನ್ನಿಸಿಬಿಡತ್ತೆ.

# ಪ್ರಾಣಮಿತ್ರನ ಕೆಲವು ನೆನಪುಗಳು

**ಕೆ.ಪಿ.ಪೂರ್ಣಚಂದ್ರ ತೇಜಸ್ವಿ**

ಇನ್ನು ಜಗಳದಲ್ಲಿ ಗೆಳೆಯ ರಾಮದಾಸರ ಸಹಾಯ ತಗೊಂಡರಂತೂ ನಮ್ಮ ಯಾವ ವೈರಿಯಿಂದಲೂ ಒದಗದಷ್ಟು ತೊಂದರೆಗಳು ಖಾತರಿ. ತರಲೆ, ಜಗಳಗಳಲ್ಲಿ ರಾಮದಾಸ್ ಇದ್ದಕ್ಕಿದ್ದಂತೆ ನುಗ್ಗಿ ನಮ್ಮ ವಕಾಲತ್ ವಹಿಸಿ ಪರಿಸ್ಥಿತಿ ಕ್ರಿಮಿನಲ್ ಕೇಸುಗಳವರೆಗೆ ಬಿಗಡಾಯಿಸಿದ ಅನೇಕ ದೃಷ್ಟಾಂತಗಳನ್ನು ನಾನು ಕೊಡಬಲ್ಲೆ. ವೈಯಕ್ತಿಕ ಜಗಳಗಳಿಗೆ ಒಂದು ಸೈದ್ಧಾಂತಿಕ ಸ್ವರೂಪವನ್ನು ಆರೋಪಿಸಿ ಅದನ್ನು ಆದರ್ಶಗಳ ಯುದ್ಧವನ್ನಾಗಿ ಪರಿವರ್ತಿಸುವುದು ರಾಮದಾಸ್‌ಗೆ ಕರಗತವಾಗಿರುವ ಕಲೆ. ಹಾಗಾಗಿ ರಾಮದಾಸ್ ನಮ್ಮ ಪರವಾಗಿ ಜಗಳಕ್ಕೆ ಇಳಿದರೆ ವೈರಿಗಳಿಗೆ ಗಾಬರಿಯಾಗುವುದಕ್ಕಿಂತ ಹೆಚ್ಚಾಗಿ ಮಿತ್ರರಿಗೆ ನಡುಕ ಶುರುವಾಗಿರುತ್ತದೆ.

ಅಣ್ಣ (ಕುವೆಂಪು ) ಮಾಡಿದ ಮೊಟ್ಟಮೊದಲ ಸರಳವಿವಾಹ ಎಂದರೆ ನನ್ನದೇ. ನನ್ನ ಮದುವೆಯ ಅನಂತರ ಅಣ್ಣ ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ನನ್ನೆಲ್ಲಾ ಮಿತ್ರರೂ ಮದುವೆಯಾಗಿದ್ದಲ್ಲದೆ, ನೂರಾರು ಜನರ ಮದುವೆಯನ್ನು ನೆರವೇರಿಸಿದರು. ಗೆಳೆಯ ರಾಮದಾಸ್ ಮಾಡಿಸಿರುವ ಮದುವೆಗಳಿಗಂತೂ ಲೆಕ್ಕವೇ ಇಲ್ಲವೆಂದು ಹೇಳಬಹುದು. ರಾಮದಾಸ್ ಗಾಂಧೀ ಭವನದಲ್ಲಿ ಯುವಕರಿಗೆಲ್ಲಾ ಮದುವೆ ಮಾಡಿಸಿ ಸಹಾಯ ಮಾಡಿದ್ದರಿಂದಲೇ ಈಗ ವಿಶ್ವವಿದ್ಯಾನಿಲಯದಿಂದ ಅವರನ್ನು ಹೊರಹಾಕಲು ಪ್ರಯತ್ನ ನಡೆಯುತ್ತಿರುವುದು.

* * *

ಅಣ್ಣನಿಗೆ ಮೀನೆಂದರೆ ತುಂಬಾ ಇಷ್ಟ. ಮೊನ್ನೆ ಮೊನ್ನೆಯವರೆಗೂ ನಾನು -ರಾಮದಾಸ್ ಮೀನು ಹಿಡಿಯಲು ಗಾಳ ತಗೊಂಡು ಹೊರಟರೆ ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಕೆಲವರು ಕುತೂಹಲದಿಂದ ಕೇಳುತ್ತಿದ್ದರು. ಮೈಸೂರಿನ ಎಲ್ಲಾ ನಮ್ಮ ಬಂಧುಮಿತ್ರರೂ ನಾನು -

ರಾಮದಾಸ್ ಗಾಳ ಹಿಡಿದುಕೊಂಡು ಮೀನು ಹಿಡಿಯಲು ಸುತ್ತುವುದನ್ನು ಜಿಗುಪ್ಸೆ ಮತ್ತು ತಿರಸ್ಕಾರದಿಂದ ನೋಡುತ್ತಿದ್ದರು. ಆಗ ನಮಗೆ ಇಬ್ಬರೇ ಇಬ್ಬರಿಂದ ಬೇಷರತ್ ಬೆಂಬಲ ದೊರಕಿದ್ದು: ಒಬ್ಬರು ಕುವೆಂಪು, ಇನ್ನೊಬ್ಬರು ರಾಮದಾಸ್ ಅಮ್ಮ ಮಂಜಮ್ಮ.

* * *

ಒಂದು [illegible] ನಾನು ರಾಮದಾಸ್ ಸ್ಕೂಟರ್ ಮತ್ತು ಮೋಟಾರು ಸೈಕಲ್ಲಿನಲ್ಲಿ ಕಾರವಾರಕ್ಕೆ ಹೋಗು[illegible] ಮಧ್ಯೆ ಹೀಗೇ ಇಬ್ಬರು ಸ್ಕೂಟರ್ ನಿಲ್ಲಿಸಿಕೊಂಡು ನಿಂತಿದ್ದರು. ಇಬ್ಬರೂ ಬಹಳ [illegible]ಟಾಪಾಗಿ ಡ್ರೆಸ್ ಮಾಡಿಕೊಂಡು ನಾಜೂಕಾಗಿದ್ದರು. ನಾವು ನಮ್ಮ ವಾಹನಗಳನ್ನು ನಿಲ್ಲಿಸಿ ಏನು ತೊಂದರೆ ಎಂದು ಕೇಳಿದೆವು. ಸ್ಕೂಟರ್ ಚಕ್ರ ಪಂಚೇರಾಗಿದೆ ಎಂದು, ಮೆಕ್ಯಾನಿಕ್ ಕರೆತರಲು ಭಟ್ಕಳದವರೆಗೆ ಒಬ್ಬರನ್ನು ಕರೆದುಕೊಂಡು ಹೋಗಲು ಆಗುತ್ತದೆಯೇ ಎಂದು ಕೇಳಿದರು. ಅವರ ಸ್ಕೂಟರಿನಲ್ಲಿ ಸ್ಟೆಪ್ನಿ ಸಹ ಇತ್ತು. ನಾನು ಅವರಿಗೆ ಚಕ್ರ ಬದಲಿಸಲು ಗೊತ್ತಿಲ್ಲವೆಂದು ತಿಳಿದು ನ[illegible] ಬಳಿ ಚಕ್ರ ಬಿಚ್ಚಲು ಬೇಕಾದ್ದೆಲ್ಲಾ ಸಲಕರಣೆಗಳಿದ್ದಾವೆಂದೂ, ಚಕ್ರ ಬದಲಿಸಲು ನಾವು ನಿಮಗೆ ಸಹಾಯ ಮಾಡುತ್ತೇವೆಂದೂ ಹೇಳಿದೆವು. ಆದರೆ ಅವರಿಬ್ಬರೂ ಹಾಗೆ ಹೇಳಿದ ನಮ್ಮನ್ನು ತಿರಸ್ಕಾರದಿಂದ ನೋಡಿ, ಸ್ವತಃ ರಿಪೇರಿ ಮಾಡಿಕೊಳ್ಳುವ ನಮ್ಮ ಸಲಹೆಗೆ ಒಪ್ಪದೆ "ಭಟ್ಕಳದವರೆಗೆ ನಮಗೆ ಡ್ರಾಪ್ ಕೊಡಿ ಸಾಕು. ಅಲ್ಲಿ ನಮ್ಮ ಮೆಕ್ಯಾನಿಕ್ ಇದ್ದಾನೆ. ಅವನನ್ನು ಕರಕೊಂಡು ಬಂದು ಗಾಡಿ ರೆಡಿ ಮಾಡಿಸುತ್ತೇವೆ" ಎಂದು ಹೇಳಿದರು. ಅವರ ಗತ್ತುಗಾರಿಕೆ ನೋಡಿ ನಮ್ಮಿಬ್ಬರಿಗೂ ತುಂಬಾ ಸಿಟ್ಟು ಬಂತು.

ರಾಮದಾಸ್ ಬಹಳ ತಣ್ಣಗೆ ಅವರದೇ ಗತ್ತುಗಾರಿಕೆ ಅನುಕರಿಸಿ ಹೇಳಿದರು:" ಇಲ್ಲ, ನಾವು ಹಾಗೆ ಯಾರಿಗೂ ಡ್ರಾಪ್ ಕೊಡುವುದಿಲ್ಲ. ಬೇಕಾದರೆ ಸ್ಕೂಟರ್ ಸರಿ ಮಾಡಿಕೊಳ್ಳಲು ಸಹಾಯ ಮಾಡುತ್ತೇವೆ ಅಷ್ಟೇ"ಎಂದು.

ಆ ಮುಠ್ಠಾಳರಿಬ್ಬರೂ ಪ್ರಾಣ ಹೋದರೂ ಗತ್ತು ಬಿಡಬಾರದೆಂದು ತೀರ್ಮಾನಿಸಿದ್ದರೆಂದು ಕಾಣುತ್ತದೆ. "ಹಾಗಾದರೆ ಸರಿ!"ಎಂದು ಉತ್ತರಿಸಿ ಮತ್ತೆ ಅದೇ ಗತ್ತಿನಲ್ಲಿ ರಣಬಿಸಿಲಿನಲ್ಲಿ ಕೈಕಟ್ಟಿಕೊಂಡು ನಿಂತರು. ನಾವು ನಮ್ಮ ವಾಹನಗಳನ್ನು ಸ್ಟಾರ್ಟ್ ಮಾಡಿಕೊಂಡು ಕಾರವಾರದ ಕಡೆ ಮುಂದುವರಿದೆವು. ಆ ಅವಿವೇಕಿಗಳಿಬ್ಬರ ಮನೋಭಾವ ಎಂಥದ್ದೋ ನನಗೆ ಇವತ್ತಿಗೂ ಅರ್ಥವಾಗಿಲ್ಲ. ಅವರಿಬ್ಬರ ಗತ್ತಿಗೆ ಸರಿಯಾಗಿ ಮುಯ್ಯಿ ತೀರಿಸಿದ ಸಮಾಧಾನ ಮಾತ್ರ ನಮಗಿದೆ.

೧೯೬೫-೬೬ ರಲ್ಲಿ ನಾನು ಮಹಾರಾಜ ಕಾಲೇಜಿನಲ್ಲಿ ಮೊದಲನೇ ಬಿ.ಎ ತರಗತಿಯಲ್ಲಿದ್ದೆ. ರಾಮದಾಸ್ ಆಗ ಎರಡನೇ ಬಿ.ಎ. ಯಲ್ಲಿದ್ದರು. ಶ್ರೀಕೃಷ್ಣ ಆಲನಹಳ್ಳಿ, ಕಾಳೇಗೌಡ ನಾಗವಾರ, ಪಿ.ಕೆ. ರಾಜಶೇಖರ್, ಕೆ. ಭೈರವಮೂರ್ತಿ ಇವರೆಲ್ಲ ರಾಮದಾಸ್‌ರ ಸಹಪಾಠಿಯಾಗಿದ್ದರು; ಕನ್ನಡವನ್ನು ಮುಖ್ಯ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿದ್ದರು. ನಾನು ಕೂಡ ಕನ್ನಡವನ್ನು ಮುಖ್ಯ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿದ್ದೆ. ಹೀಗೆ ನಾವೆಲ್ಲ ಒಂದೇ ಇಲಾಖೆಗೆ ಸೇರಿದವರಾಗಿದ್ದರಿಂದ ಸಹಜವಾಗೇ ಹತ್ತಿರದ ಒಡನಾಟ ಉಂಟಾಗಲು ಕಾರಣವಾಯಿತು.

(ಅಣ್ಣನನೆನಪು ಪುಸ್ತಕದಿಂದ)

# ವಿಚಾರವಾದಿ ಸಂಘಟಕ

ಎಸ್.ಆರ್. ವಿಜಯಶಂಕರ

ಪ್ರೊಫೆಸರ್ ಕೆ. ರಾಮದಾಸ್ ಕಳೆದವಾರ (19-06-2007) ಮೈಸೂರಿನಲ್ಲಿ ತೀರಿಕೊಂಡಾಗ ಅವರಿಗೆ 66 ವರುಷಗಳು. ಅವರ ಸಾವಿನಿಂದ ಅಧಿಕಾರ ರಾಜಕಾರಣದ ಎದುರು ತಾತ್ವಿಕ-ವೈಚಾರಿಕ ರಾಜಕಾರಣ / ಹೋರಾಟ ಮಾಡುವುದನ್ನು ತೋರಿಸಿಕೊಟ್ಟ ನಮ್ಮ ಕಾಲದ ಒಂದು ಚೇತನ ಇಲ್ಲವಾಯಿತು. ಅವರ ಹೆಸರಲ್ಲಿ ಈ ತನಕ ಒಂದೇ ಒಂದು ಪುಸ್ತಕವೂ ಪ್ರಕಟವಾಗಿಲ್ಲ. ಅವರು ಕನ್ನಡದ ಅನೇಕ ದೊಡ್ಡ ಸಾಹಿತಿಗಳಿಗೆ ಹತ್ತಿರದ ಸ್ನೇಹಿತರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಅವರು ಪ್ರಕಟಿಸಿದ ಸಂದರ್ಶನಗಳು, ಬರೆದ ಲೇಖನಗಳು, ವರದಿಯಾದ ಭಾಷಣಗಳನ್ನು ಒಟ್ಟು ಮಾಡಿ ಪುಸ್ತಕಗಳನ್ನು ಹೊರತರಬಹುದಿತ್ತು. ಆದರೆ ತಮ್ಮ ಹೆಸರಲ್ಲಿ ಪುಸ್ತಕ ಪ್ರಕಟಿಸುವುದರಲ್ಲೇ ಅವರಿಗೆ ಆಸಕ್ತಿ ಇರಲಿಲ್ಲ. ಸಮಾಜವಾದಿ ಯುವಜನ ಸಭಾದಲ್ಲಿದ್ದ ಅವರ ಅನೇಕ ಹತ್ತಿರದ ಗೆಳೆಯರು ಮಂತ್ರಿಗಳಾಗಿದ್ದಾರೆ. ರಾಮದಾಸ್ ಅವರಿಗೆ ಎಂದೂ ತಾನು ಅಧಿಕಾರದಲ್ಲಿ ಇರಬೇಕು ಎಂದು ಅನಿಸಲೇ ಇಲ್ಲ. ಕರ್ನಾಟಕದಾದ್ಯಂತ ಕೆ. ರಾಮದಾಸ್ ಅಂದರೆ ವಿಚಾರವಾದಿ, ಪ್ರಗತಿಪರ ಚಿಂತಕ, ಎಲ್ಲಿ ಯಾರ ಎದುರುಬೇಕಾದರೂ ಧೈರ್ಯವಾಗಿ ಮಾತನಾಡಬಲ್ಲ ಹೋರಾಟಗಾರ ಎಂದೇ ಜನರ ತಿಳುವಳಿಕೆ.

ನಮ್ಮ ರಾಜ್ಯದಾದ್ಯಂತ ಪ್ರತಿ ಊರಲ್ಲೂ ಎಂಬಂತೆ ಅವರು ಮಾತನಾಡಿದ್ದಾರೆ. ನಮ್ಮ ನಾಡಿನ ಎಲ್ಲಾ ಜಿಲ್ಲೆಗಳಲ್ಲೂ ಪ್ರಗತಿಪರ ಹೋರಾಟಕ್ಕೆ ಚಾಲನೆ ನೀಡಿದ್ದಾರೆ. ಸಾವಿರಾರು ಭಾಷಣಗಳನ್ನು ಮಾಡಿದ್ದಾರೆ. ಪ್ರತಿಭಟನೆ ಎಂಬುದಕ್ಕೆ ಕೆ. ರಾಮದಾಸ್ ಎಂಬ ಇನ್ನೊಂದು ಹೆಸರಿಡಬಹುದು. ಆದರೂ ಅವರು ತಮ್ಮ ಹೆಸರಲ್ಲೊಂದು ಪುಸ್ತಕ ತರಬಯಸಲಿಲ್ಲ. ಅಧಿಕಾರ ಮನೆ ಬಾಗಿಲಲ್ಲಿ ನಿಂತಾಗಲೂ ಅದನ್ನು ಪಡೆಯುವುದು ಮುಖ್ಯ ಎಂದು ಅವರಿಗೆ ಅನಿಸಲೇ ಇಲ್ಲ. ತನಗೆ ಸರಿ ಅನಿಸಿದ್ದನ್ನು ಯಾರ ವಿರುದ್ಧವೇ ಆದರೂ ನೇರವಾಗಿ ಹೇಳುತ್ತಿದ್ದರು,

ಪ್ರತಿಭಟಿಸುತ್ತಿದ್ದರು. ಪ್ರಜಾಪ್ರಭುತ್ವದ ಜೀವಾಳವನ್ನು ತಮ್ಮ ವೈಚಾರಿಕ, ತಾತ್ವಿಕ, ನೈತಿಕ ಭಿನ್ನಮತಗಳಲ್ಲಿ ಉಳಿಸಿ ಬೆಳೆಸಿದರು.

ಮಾಜಿ ಉಪ ಮುಖ್ಯಮಂತ್ರಿ ಸಮಾಜವಾದಿ ಯುವಜನ ಸಭಾದ ಹಿಂದಿನ ನಾಯಕ ಸಿದ್ಧರಾಮಯ್ಯ ಅವರು ಕೆ. ರಾಮದಾಸ್ ಅವರಿಗೆ ಬಹು ಹತ್ತಿರದ ಸ್ನೇಹಿತರು. ಮೈಸೂರಲ್ಲಿ ಇದ್ದವರಿಗಂತೂ ಈ ಇಬ್ಬರೂ ಎಂತಹ ಹತ್ತಿರದ ಸ್ನೇಹಿತರೆಂದು ಹೇಳಬೇಕಾಗಿಲ್ಲ. ಸಿದ್ಧರಾ [illegible] ರಾಜಕೀಯದಲ್ಲಿ ಮಾಜಿ ಪ್ರಧಾನಿ ದೇವೇಗೌಡರ ವಿರುದ್ಧ ಸಿಡಿದೆದ್ದು ಅಹಿಂದ (ಅಲ್ಪ ಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು) ಚಳವಳಿಯನ್ನು ಸಂಘಟಿಸುತ್ತಾ ಇದ್ದಾಗ ರಾಮದಾಸ್ ಸಹಮತದಿಂದ ಇದ್ದರು. ಆದರೆ ಆ ಬಳಿಕ ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿದಾಗ ಸಾರ್ವಜನಿಕವಾಗಿ ಅದರ ವಿರುದ್ಧ ತಮ್ಮ ತಾತ್ವಿಕ ವಿರೋಧ ವ್ಯಕ್ತಪಡಿಸಿದರು. ಸ್ನೇಹ ಬೇರೆ. ಆದರೆ ಇದು ತಾತ್ವಿಕ ಹೋರಾಟ. ಮುಂದೆ ಮುಖ್ಯಮಂತ್ರಿ ಆದರೂ ಆಗಬಹುದಾದ ಅಧಿಕಾರ ರಾಜಕೀಯದಲ್ಲಿ ಸಕ್ರಿಯವಾಗಿರುವ ತನ್ನ ಮಿತ್ರನ ಸ್ನೇಹ ಉಳಿಸಿಕೊಂಡು ಮುಂದೆ ಲಾಭಗಳಿಸಬಹುದು ಎಂದು ಅವರಿಗೆ ಅನಿಸಲಿಲ್ಲ. ತತ್ವಬದ್ಧರಾಗಿ ಸಿದ್ಧರಾಮಯ್ಯರನ್ನು ವಿರೋಧಿಸಲು ಅವರಿಗೆ ಗೆಳೆತನ ಅಡ್ಡಿ ಬರಲಿಲ್ಲ.

ಮಾಜಿಮಂತ್ರಿ ಹಿಂದಿನ ಸಮಾಜವಾದಿ ಯುವಜನ ಸಭಾದ ಮತ್ತೊಬ್ಬ ಗೆಳೆಯ ಎಚ್. ವಿಶ್ವನಾಥ ಕೊಳ್ಳೇಗಾಲದ ಸಮೀಪದ ದೇವಾಲಯ ಒಂದರ ಬಳಿ ಧಾರ್ಮಿಕ ನಂಬುಗೆಯಲ್ಲಿ ಪ್ರಾಣಿಬಲಿ ನೀಡಿದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ ಎಂದು ಸುದ್ದಿಯಾದಾಗ ಕೆ. ರಾಮದಾಸ್ ಅದನ್ನು ಪ್ರತಿಭಟಿಸಿದರು. ಪ್ರಾಣಿಬಲಿ ನೀಡುವ ಅಂಥ ಶ್ರದ್ಧೆ ಮತ್ತು ಅದನ್ನು ಬೆಂಬಲಿಸಿದ ತನ್ನ ಸ್ನೇಹಿತರಿಗೆ ಒಟ್ಟಾಗಿ ವಿರೋಧ. ಇಂದು ಅಧಿಕಾರದಲ್ಲಿ ಇರುವವರನ್ನು ಅಥವಾ ಅಧಿಕಾರದ ಹತ್ತಿರ ಹೋಗಬಲ್ಲವರನ್ನು ಓಲೈಸುತ್ತಾ ವ್ಯವಸ್ಥೆಯ ಲಾಭ ಪಡೆಯುವುದರತ್ತವೇ ಗಮನ ಇರುವ ಅನೇಕ ಬರಹಗಾರರನ್ನು ನಾವು ಕಾಣುತ್ತೇವೆ. ಇದರ ನಡುವೆ, ಸರಳವಾಗಿ ತಮ್ಮ ತಾತ್ವಿಕ ನಿಷ್ಠೆಯಂತೆ ನಡೆದುಕೊಂಡು ಯಾವ ಲಾಭವನ್ನೂ ಲೆಕ್ಕಿಸದೆ ರಾಮದಾಸ್ ಸಾರ್ವಜನಿಕವಾಗಿ ತಾವು ನಂಬಿದ ನೈತಿಕ ಮೌಲ್ಯಗಳನ್ನು ಎತ್ತಿಹಿಡಿದರು. ಅದಕ್ಕಾಗಿ ನಿಜವಾದ ಅರ್ಥದಲ್ಲಿ ಕೊನೆ ಉಸಿರಿರುವವರೆಗೂ ಹೋರಾಡಿದರು.

ಪ್ರೊ. ಕೆ. ರಾಮದಾಸ್ ಅವರಿಗೆ ಡಾ. ಯು. ಆರ್. ಅನಂತಮೂರ್ತಿಯವರೊಡನೆ ಹತ್ತಿರದ ಒಡನಾಟ. ಈಗ ನಾಲ್ಕಾರು ವರ್ಷಗಳ ಹಿಂದೆ ಅನಂತಮೂರ್ತಿಯವರು ನಾರಾಯಣ ಹೃದಯಾಲಯಕ್ಕೆ ಚಿಕಿತ್ಸೆಗಾಗಿ ಸೇರಿ ಅನಾರೋಗ್ಯ ಗುಣವಾದ ಬಳಿಕ ಹಿಂದಿರುಗಿದರು. ಮೈಸೂರಿನಿಂದ ಕೆ.ರಾಮದಾಸ್ ಸಪತ್ನೀಕರಾಗಿ ಬೆಂಗಳೂರಿನ ಅನಂತಮೂರ್ತಿಯವರ ಮನೆಗೆ ಬಂದು ಅವರ ಆರೋಗ್ಯ ವಿಚಾರಿಸಿಕೊಂಡು ಪುನಃ ಮೈಸೂರಿಗೆ ಹಿಂತಿರುಗಿದ್ದರು. ಆ ದಿನ ಕಾಕತಾಳೀಯವಾಗಿ ನಾನೂ ಅನಂತಮೂರ್ತಿಯವರ ಮನೆಗೆ ಆರೋಗ್ಯ ವಿಚಾರಿಸಲು ಹೋಗಿದ್ದುದರಿಂದ ರಾಮದಾಸ್ ಅವರನ್ನು ಅಲ್ಲಿ ಮುಖತಃ ಕಂಡು ಮಾತನಾಡಿದ್ದೆ.

ಆದರೆ ನನಗಿನ್ನೂ ನೆನಪಿದೆ. 1978ರ ಕೊನೆಯಲ್ಲಿ ಅನಂತಮೂರ್ತಿಯವರ ಅವಸ್ಥೆ ಕಾದಂಬರಿ ಪ್ರಕಟವಾದಾಗ ಅನಂತಮೂರ್ತಿಯವರು ಸಮಾಜವಾದಿಗಳಿಗೆ ಅವಮಾನ ಮಾಡಿದರು; ಸಮಾಜವಾದಿ ನಾಯಕ ಗೋಪಾಲ ಗೌಡರ ಸ್ಫೂರ್ತಿಯಿಂದ ರಚಿತವಾದ ಕೃಷ್ಣಪ್ಪ ಪಾತ್ರದಿಂದ ಸಮಾಜವಾದಿ ನಾಯಕರಿಗೂ ಅವಮಾನವಾಗಿದೆ ಎಂದು ರಾಮದಾಸ್ ನಂಬಿದ್ದರು. ಆ ಸಂದರ್ಭದಲ್ಲಿ ಅನಂತಮೂರ್ತಿಯವರ ಭಾಷಣಗಳಲ್ಲೆಲ್ಲಾ ಕೆ. ರಾಮದಾಸ್ ಎದ್ದು ನಿಂತು ಪ್ರತಿಭಟಿಸುತ್ತಿದ್ದರು. ಅನಂತಮೂರ್ತಿಯವರ ಬಗೆಗಿನ ಗೌರವದ ಎದುರು ಈ ಪ್ರತಿಭಟನೆ ಹಿಂದೆ ಬೀಳಲಿಲ್ಲ.

ಮೈಸೂರು ಕುವೆಂಪು ನಗರದಲ್ಲಿರುವ ಕೆ. ರಾಮದಾಸ್ ಅವರ ಮನೆಯ ಹೆಸರು 'ಚಾರ್ವಾಕ'. ರಾಮದಾಸ್ ತೀರಿಕೊಂಡಾಗ ಅವರಿಗೆ ತಮ್ಮ ಅಂತಿಮ ನಮನ ಸಲ್ಲಿಸಲು ಬೆಂಗಳೂರಿನಿಂದ ಡಾ. ಯು.ಆರ್. ಅನಂತಮೂರ್ತಿಯವರು ತಮ್ಮ ಪತ್ನಿ ಎಸ್ತರ್ ಜೊತೆ ಮೈಸೂರಿಗೆ ಹೋಗಿದ್ದರು. ಆ ಸಂದರ್ಭದಲ್ಲಿ ಅನಂತಮೂರ್ತಿಯವರು ಹೇಳಿದ ಒಂದು ಮಾತು : ಒಂದು ವಿಚಾರಕ್ಕೆ ಅಥವಾ ಐಡಿಯಾಕ್ಕೆ ಸಾವು ಎಂಬುದಿಲ್ಲ. ಸಾವಿರಾರು ವರುಷಗಳ ಹಿಂದೆ ಲೋಕಾಯತರು ಹೇಳಿದ ನಿರೀಶ್ವರವಾದ ಸಾಯಲಿಲ್ಲ. ಅವರ ವಿಚಾರಗಳು ರಾಮದಾಸರಲ್ಲಿ, ಈ ಮನೆ 'ಚಾರ್ವಾಕ'ದಲ್ಲಿ ಬದುಕಿತ್ತು. ಅವರು ರಾಜ್ಯದಾದ್ಯಂತ ಪಸರಿಸಿದ ವಿಚಾರವಾದಿ ಚಿಂತನೆಗಳಲ್ಲಿ ಅದು ಇನ್ನೂ ಬದುಕಿರುತ್ತದೆ.

ಅವರು ವಿಚಾರಗಳನ್ನು ಕೇವಲ ಇತರರಿಗೆ ಹೇಳಿದವರಲ್ಲ. ತಾವೂ ಅದನ್ನು ನಂಬಿ ನಡೆದವರು. ತಮಗೆ ಶ್ವಾಸಕೋಶದ ಕ್ಯಾನ್ಸರ್ ಇದೆ. ಇನ್ನು ಹೆಚ್ಚು ದಿನ ಬದುಕುವವರಲ್ಲ ಎಂದು ತಿಳಿದಾಗ ತಮ್ಮ ಮನೆಯವರೊಡನೆ (ಪತ್ನಿ ನಿರ್ಮಲಾ, ಮಗಳು ಸ್ನೇಹಾ, ಅಳಿಯ ಓಂಕಾರ್) ತಮ್ಮ ನಿಧನದ ನಂತರ ಯಾವುದೇ ಧಾರ್ಮಿಕ ವಿಧಿ ವಿಧಾನಗಳಿಲ್ಲದೆ ತಮ್ಮ ಅಂತ್ಯ ಸಂಸ್ಕಾರ ನಡೆಸಬೇಕೆಂದು ಹೇಳಿದರು. ಮನೆಯವರು ಅವರ ಇಚ್ಛೆಯಂತೆ ಮೈಸೂರಿನ ಚಾಮುಂಡಿ ತಪ್ಪಲಿನ ವಿದ್ಯುತ್ ಚಿತಾಗಾರದಲ್ಲಿ ಯಾವುದೇ ಧಾರ್ಮಿಕ ವಿಧಿ ವಿಧಾನಗಳಿಲ್ಲದೆ ಶವ ಸಂಸ್ಕಾರ ನಡೆಸಿದರು.

ಶಿವಮೊಗ್ಗ ಜಿಲ್ಲೆಯ ಸಾಗರ ಕಡೆಯವರಾದ ಕೆ. ರಾಮದಾಸ್ ಎಳವೆಯಲ್ಲೆ ತಮ್ಮ ತಂದೆ ಶಿವರಾಮಯ್ಯನವರನ್ನು ಕಳಕೊಂಡಿದ್ದರು. ಸರ್ಕಾರಿ ಆಸ್ಪತ್ರೆಯಲ್ಲಿ ದಾದಿಯಾಗಿದ್ದ ಅವರ ತಾಯಿ ಮಂಜಮ್ಮ ಮಗ ರಾಮದಾಸನನ್ನು ಬೆಳೆಸಿದರು. ತಮ್ಮ ಮೊದಲ ಹಂತದ ವಿದ್ಯಾಭ್ಯಾಸವನ್ನು ರಿಪ್ಪನ್‌ಪೇಟೆ, ಸಾಗರದಲ್ಲಿ ಪೂರೈಸಿದ ರಾಮದಾಸ್ ತಮ್ಮ ಇಂಟರ್ ಮೀಡಿಯಟ್ ವಿದ್ಯಾಭ್ಯಾಸವನ್ನು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಪಡೆದರು. ಆಗ ಅಲ್ಲಿ ಅವರಿಗೆ ಪಿ. ಲಂಕೇಶ್ ಅಧ್ಯಾಪಕರಾಗಿದ್ದರು. ಆ ಬಳಿಕ ಮೈಸೂರಿಗೆ ಬಂದು ಮಹಾರಾಜ ಕಾಲೇಜಿನಲ್ಲಿ ಬಿ.ಎ. (ಆನರ್ಸ್) ಓದಿದ ರಾಮದಾಸ್ ಮೈಸೂರಿನಲ್ಲೆ ಅಧ್ಯಾಪಕರಾಗಿ ನೆಲೆನಿಂತರು.

ಡಾ. ರಾಮಮನೋಹರ ಲೋಹಿಯಾ ಅವರ ಸಮಾಜವಾದಿ ವಿಚಾರಗಳಿಂದ ಪ್ರೇರೇಪಿತರಾದ ರಾಮದಾಸ್ ಸಮಾಜವಾದಿ ಯುವಜನ ಸಭಾದ ಸಕ್ರಿಯ ಸದಸ್ಯರಾದರು. ಕಿಶನ್ ಪಟ್ನಾಯಕ್, ಜಯಪ್ರಕಾಶ ನಾರಾಯಣ ಮುಂತಾದವರಿಂದ ಪ್ರಭಾವಿತರಾದರು. ಪ್ರಸಿದ್ಧ ಸಾಹಿತಿಗಳಾದ ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ ಮೊದಲಾದವರಿಗೆ ಹತ್ತಿರದ ಸ್ನೇಹಿತರಾಗಿದ್ದರು. ರೈತ ಸಂಘದ ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿ ಅವರ ನಿಕಟವರ್ತಿಗಳಾಗಿದ್ದರು. ಕೊನೆಯವರೆಗೂ ಕರ್ನಾಟಕ ಪ್ರಗತಿರಂಗದ ಮೈಸೂರು ಶಾಖೆಯ ನಾಯಕತ್ವವಹಿಸಿದರು. ರೈತ ಸಂಘದ ಚಳವಳಿಗಳು, ಬಂಡಾಯ ಸಂಘಟನೆಗಳಲ್ಲಿ ಬಹು ಕ್ರಿಯಾಶೀಲರಾಗಿ ಭಾಗವಹಿಸಿದರು.

ಪ್ರಜಾಪ್ರಭುತ್ವದಲ್ಲಿ ಭಿನ್ನಮತವನ್ನು ಹೇಳಲು ಹಿಂಜರಿಯಬಾರದು ಎಂದು ಅವರು ನಂಬಿದ್ದರು. ತಮ್ಮ ಪ್ರತಿಭಟನೆಯಲ್ಲಿ ಅವರು ಪೊಲೀಸರಿಂದ ಎಷ್ಟು ಸಲ ಬಂಧನಕ್ಕೆ ಒಳಗಾಗಿರಬಹುದು ಎಂದು ಲೆಕ್ಕವಿಡಲೂ ಸಾಧ್ಯವಿಲ್ಲ. ಗೋಕಾಕ್ ಚಳವಳಿ, ಜಾಗತಿಕ ಕನ್ನಡ ಸಮ್ಮೇಳನದ ವಿರುದ್ಧ ಪ್ರತಿಭಟನೆ (1985) ಇತ್ಯಾದಿ ಅವುಗಳಲ್ಲಿ ಕೆಲವು.

ಡಾ. ಶಂಕರದಯಾಳ ಶರ್ಮ ಅವರು ರಾಷ್ಟ್ರಪತಿಗಳಾಗಿದ್ದಾಗ ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿದ್ದರು. ರಾಷ್ಟ್ರದ ಸಂವಿಧಾನದ ಅತ್ಯುನ್ನತ ಸ್ಥಾನದಲ್ಲಿರುವವರು ಧಾರ್ಮಿಕ ಅಂಧ ಶ್ರದ್ಧೆಗಳನ್ನು ಬೆಂಬಲಿಸಬಾರದು ಎಂದು ರಾಮದಾಸ್ ಆ ಭೇಟಿಯ ವಿರುದ್ಧ ಪ್ರದರ್ಶನ ಪ್ರತಿಭಟನೆ ನಡೆಸಿದರು. ಆಶ್ರಮದ ಧಾರ್ಮಿಕ ವಿಧಿ ವಿಧಾನಗಳಲ್ಲಿ ರಾಷ್ಟ್ರಪತಿಗಳು ಭಾಗವಹಿಸುವುದು ಯಾಕೆ ತಪ್ಪು ಎಂದು ಭಾಷಣಗಳನ್ನು ಮಾಡಿದರು. ಹಿಂದೆ ಬಾಬು ರಾಜೇಂದ್ರ ಪ್ರಸಾದರು ಭಾರತದ ರಾಷ್ಟ್ರಪತಿಗಳಾಗಿದ್ದಾಗ ಕಾಶಿಯಲ್ಲಿ ಗಂಗಾನದಿ ನೀರಿನಿಂದ ಬ್ರಾಹ್ಮಣರ ಕಾಲು ತೊಳೆದು ಪೂಜೆ ಮಾಡಿದ್ದರು. ಆಗ ಡಾ. ರಾಮ ಮನೋಹರ ಲೋಹಿಯಾ ಅವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಷ್ಟ್ರದ ಸಂವಿಧಾನ ಮುಖ್ಯಸ್ಥರು ಯಾಕೆ ಬ್ರಾಹ್ಮಣರ ಕಾಲು ತೊಳೆಯುವ ಆಚರಣೆಗಳನ್ನು ಮಾಡಬಾರದು, ಅದು ಯಾಕೆ ಪ್ರಜಾಪ್ರಭುತ್ವದ ಸಮಾನತೆಯ ತತ್ವಕ್ಕೆ ವಿರೋಧವಾಗಿದೆ ಎಂದು ವಿವರಿಸಿ, ಭಾಷಣಗಳನ್ನು ಮಾಡಿ ಬಾಬು ರಾಜೇಂದ್ರ ಪ್ರಸಾದರು ಮಾಡಿದ ಕೆಲಸವನ್ನು ಖಂಡಿಸಿ ಪ್ರತಿಭಟಿಸಿದ್ದರು.

ರಾಮದಾಸ್ ತಾವು ಸ್ವತಃ ಅಂತರಜಾತೀಯ ವಿವಾಹವಾದವರು. ಜಾತಿ ನಿರ್ಮೂಲನೆಗೆ ಅಂತರಜಾತೀಯ ವಿವಾಹ ಅನಿವಾರ್ಯ ಎಂದವರು ಹೇಳುತ್ತಿದ್ದರು. ತಾವು ಮುಂದೆ ನಿಂತು ತಮ್ಮ ಸಂಘಟನೆಗಳ ಮೂಲಕ ಅಂತರಜಾತೀಯ ವಿವಾಹವಾಗುವ ಯಾರಿಗೇ ಆದರೂ ಬೆಂಗಾವಲಾಗಿ ನಿಲ್ಲುತ್ತಿದ್ದರು. ಸಮಾಜ, ಕುಟುಂಬದವರು ಜಾತಿಯ ಅಥವಾ ಧರ್ಮದ ಹೊರಗೆ ಮದುವೆಯಾಗುವವರ ವಿರುದ್ಧ ಹೋದಾಗ ಹಾಗೆ ಮದುವೆಯಾಗುವವರಿಗೆ ರಾಮದಾಸ್ ಒಬ್ಬರು ಆಪ್ತಬಾಂಧವ.

ಅವರು ತಮ್ಮ 'ಮಾನವ ಮಂಟಪ'ದ ಮೂಲಕ ಎಷ್ಟೋ ಅಂತರಜಾತೀಯ ವಿವಾಹಗಳನ್ನು ನಡೆಸಿದ್ದಾರೆ. ಅವುಗಳಲ್ಲಿ ಅನೇಕವನ್ನು ತಮ್ಮ ಮನೆಯಲ್ಲೆ ನಡೆಸಿದ್ದಾರೆ. ಅಂತರಜಾತೀಯ ವಿವಾಹವೊಂದು ಆಗಬೇಕಾದಾಗ ಎಷ್ಟೋಬಾರಿ ಅವರ ಮನೆ ಟರೇಸಿನ ಮೇಲೆ ಒಂದು ಶಾಮಿಯಾನ ಹಾಕಿಸಿ ಅವರ ಸ್ನೇಹಿತರೆಲ್ಲಾ ಸೇರಿ ಮದುವೆ ಮಾಡಿಸಿ ಬಿಡುತ್ತಿದ್ದರು. ಅಂತರಜಾತೀಯ ವಿವಾಹವೆಂದರೆ ಗಂಡು ಹೆಣ್ಣುಗಳಿಬ್ಬರು ಸಮಾಜದಿಂದ ಪ್ರತ್ಯೇಕವಾಗಿ ಕೇವಲ ರಿಜಿಸ್ಟ್ರಾರ್ ಆಫೀಸಿನಲ್ಲಿ ಸಹಿ ಹಾಕಿ ಮದುವೆಯಾಗುವುದು ಎಂದು ಅರ್ಥವಲ್ಲ. ನಾವು ಈ ಸಮಾಜದ ಭಾಗವಾಗಿ ನಿಮ್ಮ ಸ್ನೇಹಿತರು, ನಿಮ್ಮ ಅಂತರಜಾತೀಯ ವಿವಾಹದಲ್ಲಿ ನಿಮ್ಮ ಜೊತೆಗೆ ಇದ್ದೇವೆ ಎಂಬ ಧೈರ್ಯವನ್ನು ಮಾನವ ಮಂಟಪ ವಿವಾಹಗಳ ಮೂಲಕ ರಾಮದಾಸ್ ತುಂಬುತ್ತಿದ್ದರು. ಅದು ಅವರ ನಾಯಕತ್ವದ ಗುಣ.

ಪ್ರೊಫೆಸರ್ ಕೆ. ರಾಮದಾಸ್ ಬೆಳಗಿನ ಜಾವ ಮೈಸೂರಲ್ಲಿ ತೀರಿಕೊಂಡರು ಎಂದು ಆಕಾಶವಾಣಿಯ ಗೆಳೆಯ ಡಾ. ಶಿವರಾಮ ಪೈಲೂರು ಎಸ್‌ಎಂಎಸ್ ಮಾಡಿ ತಿಳಿಸಿದಾಗ ಮನಸ್ಸು ಮೌನವಾಯಿತು. ರಾಮದಾಸ್ ಅವರ ಜೊತೆ ಒಡನಾಡಿದ ಹಿಂದಿನ ಅನೇಕ ನೆನಪುಗಳು ಓಡೋಡಿ ಬಂತು.

1975-78ನೇ ಇಸವಿಗಳಲ್ಲಿ ನಾನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದಿದವ. ನನ್ನ ಎರಡನೇ ಭಾಷೆ ಸಂಸ್ಕೃತ. ಹಾಗಾಗಿ ಕನ್ನಡ ಅಧ್ಯಾಪಕರಾಗಿದ್ದ ರಾಮದಾಸ್ ಅವರ ನೇರ ವಿದ್ಯಾರ್ಥಿ ಅಲ್ಲ. ಆದರೆ ನಾನಾಗ ಮೈಸೂರಲ್ಲಿ ಯಾವ ಭಾಷಣ/ಡಿಬೇಟ್ ಸ್ಪರ್ಧೆಗಳಿಗೆ ಹೋದರೂ ಬಹುಮಾನ ಗೆಲ್ಲುತ್ತಿದ್ದ ಡಿಬೇಟರ್. ಮಹಾರಾಜ ಕಾಲೇಜು ಸೆಂಟಿನರಿ ಹಾಲ್‌ನಲ್ಲಿ ನಡೆದ ವಿಶ್ವವಿದ್ಯಾನಿಲಯ ಮಟ್ಟದ ಡಿಬೇಟ್ ಸ್ಪರ್ಧೆಗಳಿಂದಾಗಿ ನನಗೆ ಮೊದಲು ರಾಮದಾಸ್ ಅವರ ಪರಿಚಯವಾದದ್ದು. ಅವರು ಕೆಲವಾರು ಕನ್ನಡ ಡಿಬೇಟುಗಳಿಗೆ ಜಡ್ಜ್ ಆಗಿ ಬಂದಿದ್ದರು.

ಎಮರ್ಜೆನ್ಸಿ ಕಾಲದಲ್ಲಿ ಮಹಾರಾಜ ಕಾಲೇಜಿನ ಒಳಗೆ ಎಮರ್ಜೆನ್ಸಿ ವಿರೋಧಿಸಿ ಕರಪತ್ರಗಳನ್ನು ಹರಡಲಾಗುತ್ತಿತ್ತು. ಗುಪ್ತವಾಗಿ ಯಾರೋ ಅದನ್ನು ಎಲ್ಲಾ ಕಡೆ ಹಾಕಿ ಹೋಗುತ್ತಿದ್ದರು. ಅದರ ಹಿಂದೆ ರಾಮದಾಸ್ ಕೈವಾಡವಿದೆ ಎಂದು ಪೊಲೀಸರಿಗೆ ಅನುಮಾನ ಬಂತು. ಆ ಸಂದರ್ಭದಲ್ಲಿ ಒಮ್ಮೆ ಪೊಲೀಸರು ಅವರನ್ನು ವಿಚಾರಣೆ ಮಾಡಿದಾಗ "ಏನು ಮಾಡ್ತೀರ್‌ರೀ, ಎರೆಸ್ಟ್ ಮಾಡ್ತೀರಾ? ಮಾಡಿರೀ" ಎಂದು ಬಹಳ ಗಟ್ಟಿಯಾಗಿ ರಾಮದಾಸ್ ಹೇಳಿದ್ದು ಇನ್ನೂ ನಿನ್ನೆಯೋ ಎಂಬ ಹಾಗೆ ಕಿವಿಯಲ್ಲಿದೆ. ಆ ಬಳಿಕ ನಾವು ಕೆಲವು ಗೆಳೆಯರು ಸೇರಿ ಕೈ ಬರಹದಲ್ಲಿ ಬಹಳ ಗುಪ್ತವಾಗಿ ಎಮರ್ಜೆನ್ಸಿ ವಿರುದ್ಧ ಪುಟ್ಟ ಪತ್ರಿಕೆ ತರುತ್ತಿದ್ದೆವು. ಅನೇಕ ಸಕ್ರಿಯ ಆರ್.ಎಸ್.ಎಸ್. ಕಾರ್ಯಕರ್ತರೂ ಆಗ ಈ ಕೆಲಸಗಳಲ್ಲಿ ಜೊತೆಗಿರುತ್ತಿದ್ದರು. ಅನುಶಾಸನ ಪರ್ವ ಎಂಬ ಹೆಸರಿನ ಕಾರ್ಬನ್ ಕಾಪಿ ಇಟ್ಟು ಕೈಬರಹದಲ್ಲಿ ತರುತ್ತಿದ್ದ ಪತ್ರಿಕೆಯನ್ನು ಯಾರಿಗೆಲ್ಲ ಕೊಡಬಹುದು ಎಂದು ಕೆಲವರ ಸಂಪರ್ಕ ರಾಮದಾಸ್ ನೀಡಿದ್ದರು.

1977ರಲ್ಲಿ ಚುನಾವಣೆ ಘೋಷಣೆಯಾಯಿತು. ಆ ಸಂದರ್ಭದಲ್ಲಿ ನಾನು, ಗೆಳೆಯ ತಿಮ್ಮಪ್ಪಭಟ್ಟ (ಈಗ ಕನ್ನಡದ ಹಿರಿಯ ಪತ್ರಕರ್ತ) ಮೊದಲಾದವರು ಸೇರಿಕೊಂಡು ಸ್ಟೂಡೆಂಟ್ಸ್

ಫಾರ್ ಡೆಮಾಕ್ರಸಿ (Students for Democracy) ಎಂಬ ಗುಂಪೊಂದನ್ನು ನಿರ್ಮಿಸಿಕೊಂಡು ಸಾರ್ವಜನಿಕ ಕ್ಷೇತ್ರದಲ್ಲಿ ತೊಡಗಿಕೊಂಡೆವು. ಜನತಾ ಬೆಂಬಲ, ಎಮರ್ಜೆನ್ಸಿ ಕಾಂಗ್ರೆಸ್ ವಿರುದ್ಧ ಭಾಷಣ ಮಾಡುತ್ತಿದ್ದೆವು. ವಿದ್ಯಾರ್ಥಿಗಳ ಒಂದು ದೊಡ್ಡ ಜಾತಾ, ಟೌನ್‌ಹಾಲ್‌ನಲ್ಲಿ ಬಹುದೊಡ್ಡ ಸಭೆ ಏರ್ಪಡಿಸಿದ್ದೆವು. ನಾವು ಏರ್ಪಡಿಸಿದ ಟೌನ್‌ಹಾಲ್ ಮೈದಾನದಲ್ಲಿ ನಡೆದ ಒಂದು ಬೃಹತ್ ಸಮಾವೇಶದಲ್ಲಿ ಆಗ ಯಾವುದೋ ಸಂದರ್ಭಕ್ಕೆ ಮೈಸೂರಿಗೆ ಬಂದಿದ್ದ ಪ್ರಸಿದ್ಧ ವಕೀಲ ಶಾಂತಿ ಭೂಷಣ ಕೂಡಾ ಭಾಷಣ ಮಾಡಿದ್ದರು.

ಸ್ಟೂಡೆಂಟ್ಸ್ ಫಾರ್ ಡೆಮಾಕ್ರಸಿ ಸಂಘಟನೆ ಹಿಂದೆ ನಮ್ಮ ಬೆಂಬಲಕ್ಕೆ ಕೆ. ರಾಮದಾಸ್ ನಿಂತಿದ್ದರು. ಕರಪತ್ರಗಳನ್ನು ಹೇಗೆ ಅಚ್ಚು ಮಾಡಬೇಕು ಎಂಬುದರಿಂದ ಪ್ರಾರಂಭಿಸಿ ಒಂದು ಕೂಟವನ್ನು ಕಟ್ಟಿ ಬೆಳೆಸಲು ಅನೇಕ ಪ್ರೋತ್ಸಾಹ ನಿರ್ದೇಶನಗಳನ್ನು ನೀಡುತ್ತಿದ್ದರು. ಟೌನ್‌ಹಾಲ್ ಮೈದಾನದ ಜಾತಾ, ಹಾಗೂ ಬೃಹತ್ ಸಂಖ್ಯೆಯಲ್ಲಿ ಜನ ಸೇರಿದ ಸಭೆಗಾಗಿ ಎಲ್ಲೆಲ್ಲಿಂದಲೋ ಸಂಗ್ರಹಿಸಿ ಪೋಸ್ಟರ್‌ಗಳನ್ನು, ಬ್ಯಾನರ್‌ಗಳನ್ನು ನೀಡಿದ್ದು ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಜಾತಾ ಹೋಗುವಾಗ ಅನುಸರಿಸಬೇಕಾದ ಶಿಸ್ತಿನ ಬಗ್ಗೆ ಅವರು ವಿವರಿಸಿದ್ದು ಇತ್ಯಾದಿಗಳು ಒಂದು ಅನುಭವ. ಆ ಬಳಿಕ ಒಮ್ಮೆ ನಾವು ಭಾಷಣ ಮಾಡಿದಾಗ ಸಭೆಯಲ್ಲಿ ಕಿರುಚಬಾರದು, ಸಮಾಧಾನದಿಂದ ಹೇಗೆ ವಿಚಾರ ಮಂಡನೆ ಮಾಡಬೇಕೆಂದು ನಮಗೆಲ್ಲಾ ವಿವರಿಸಿದ್ದರು.

ಎಮರ್ಜೆನ್ಸಿಯನ್ನು ಬೆಂಬಲಿಸಿದ್ದ ಪ್ರೊಫೆಸರ್ ಶ್ರೀಮಾಲಿಯವರನ್ನು ವಿಸಿಟಿಂಗ್ ಪ್ರೊಫೆಸರ್ ಆಗಿ ಆಗಿನ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಿ.ವಿ. ಅರಸ್ ಆಹ್ವಾನಿಸಿದ್ದರು. ನಾವು ಅನೇಕ ವಿದ್ಯಾರ್ಥಿಗಳು ಅದನ್ನು ವಿರೋಧಿಸಿದೆವು. ಡಿ.ವಿ. ಅರಸ್ ಅವರು ಶ್ರೀಮಾಲಿ ನೇಮಕವನ್ನು ರದ್ದು ಪಡಿಸಲು ಒಪ್ಪಲಿಲ್ಲ. ಅದು ಮುಂದೆ ಡಿ.ವಿ. ಅರಸ್ ವಿರುದ್ಧದ ಚಳವಳಿಯಾಗಿ ವಿ.ವಿ.ಯಲ್ಲಿ ಹಬ್ಬಿತು. ವಿದ್ಯಾರ್ಥಿಗಳ ಆ ಹೋರಾಟದಲ್ಲಿ ಟಿ.ಪಿ. ಅಶೋಕ, ಎ.ಆರ್. ನಾಗಭೂಷಣ, ಸಿ.ಎನ್. ಸಂಜಯ, ಕಾಳಚನ್ನೇಗೌಡ, ಶ್ರೀಕಂಠ, ರಮೇಶ್, ತಿಮ್ಮಪ್ಪಭಟ್ಟ ನಾನು ಮೊದಲಾದ ಅನೇಕರಿದ್ದೆವು. ಟಿ.ಪಿ. ಅಶೋಕ, ಎ.ಆರ್.ನಾಗಭೂಷಣ (ಈಗ ಈ ಇಬ್ಬರೂ ಪ್ರಸಿದ್ಧ ಕನ್ನಡ ವಿಮರ್ಶಕರು) ಮೊದಲಾದವರೆಲ್ಲಾ ರ್‍ಯಾಂಕ್ ಸ್ಟೂಡೆಂಟ್ಸ್. ಪ್ರತಿಭಾವಂತ ವಿದ್ಯಾರ್ಥಿಗಳೂ ಚಳವಳಿಗೆ ಇಳಿದಿದ್ದಾರೆ ಎಂಬುದರಿಂದಲೇ ಎಮರ್ಜೆನ್ಸಿ ಪರವಾಗಿದ್ದ ಶ್ರೀಮಾಲಿಯವರನ್ನು "ಗೋ ಬ್ಯಾಕ್ ಶ್ರೀಮಾಲಿ" ಎಂದಾಗ ಆ ಚಳವಳಿ ಎಲ್ಲರ ಗಮನ ಸೆಳೆಯಿತು.*

---

* ಆ ಸಂದರ್ಭದಲ್ಲಿ ಕೆಲವಾರು ಅಧ್ಯಾಪಕರುಗಳೂ 'ಗೋಬ್ಯಾಕ್ ಶ್ರೀಮಾಲಿ' ಚಳವಳಿಯನ್ನು ಬೆಂಬಲಿಸಿದ್ದರು. ಪ್ರೊ.ಜಿ.ಎಚ್. ನಾಯಕ, ಡಾ. ಬಿ. ದಾಮೋದರರಾವ್, ಡಾ. ಅನಂತಮೂರ್ತಿ ಮುಂತಾದ ಮಾನಸ ಗಂಗೋತ್ರಿಯ ಅಧ್ಯಾಪಕ ವರ್ಗದ ಹಲವರು ಈ ಚಳವಳಿಯನ್ನು ಬೆಂಬಲಿಸಿದ್ದರು. ಪ್ರೊ. ಎಚ್.ಎಚ್. ಅಣ್ಣಾಯ್ಯಗೌಡರು ಹೆಚ್ಚು ಕಮ್ಮಿ ಇಂಗ್ಲಿಷ್ ವಿಭಾಗದ ಅಧ್ಯಾಪಕರೆಲ್ಲಾ ನಮ್ಮ ಚಳವಳಿ ಪರವಾಗಿದ್ದರು. ಡಾ. ಹಾ. ಮಾ. ನಾಯಕ ಮೊದಲಾದವರು ಡಿ.ವಿ. ಅರಸರ ಬೆಂಬಲಕ್ಕಿದ್ದರು.

ಟಿ.ಪಿ. ಅಶೋಕ ಮೊದಲಾದವರನ್ನು ಪೊಲೀಸರು ಬಂಧಿಸಿದರು. ಆ ಸಂದರ್ಭದಲ್ಲಿ ನನ್ನ ಮೇಲೂ ಪೊಲೀಸರು ದಾಖಲಿಸಿದ ಅನೇಕ ಮೊಕದ್ದಮೆಗಳಿಗಾಗಿ ನಾನೂ ಮುಂದೆ ಕೆಲವಾರು ವರುಷ ನ್ಯಾಯಾಲಯಗಳಿಗೆ ಅಲೆಯಬೇಕಾಯಿತು. ಆ ಸಂದರ್ಭದಲ್ಲಿ ರಾಮದಾಸ್ ಪೊಲೀಸ್ ಕೇಸು ಹಾಕಿದಾಗ ಏನು ಮಾಡಬೇಕು, ಯಾವ ರೀತಿ ಅದನ್ನು ಎದುರಿಸಬೇಕು ಇತ್ಯಾದಿ ತಿಳಿಸುತ್ತಿದ್ದರು. ಅವಶ್ಯಬಿದ್ದಾಗ ವಕೀಲರ ಸಹಾಯ ಒದಗಿಸಲೂ ಮುಂದಾಗುತ್ತಿದ್ದರು. ಆ ಬಳಿಕ ನಮ್ಮನ್ನೆಲ್ಲಾ (ವಿದ್ಯಾರ್ಥಿ ನಾಯಕರುಗಳನ್ನು) ಆಗಿನ ಮುಖ್ಯ ಮಂತ್ರಿಗಳಾಗಿದ್ದ ದೇವರಾಜ ಅರಸರು ಒಮ್ಮೆ ಕರೆಸಿ ಮಾತಾಡಿದರು. ಆ ಸಭೆಗೆ ಹೋಗುವ ಮೊದಲು ಆ ರೀತಿಯ ಮೀಟಿಂಗ್‌ಗಳಲ್ಲಿ ನಮ್ಮ ವಿಚಾರಗಳಿಗೆ ಬದ್ಧರಾಗಿದ್ದು ನಮ್ಮ ವಾದವನ್ನು ಹೇಗೆ ಮಂಡಿಸಬೇಕೆಂದು ನನಗೆ ರಾಮದಾಸ್ ವಿವರಿಸಿದ್ದು ಇನ್ನೂ ನೆನಪಿದೆ. ನಾವೆಲ್ಲಾ ಮುಖ್ಯಮಂತ್ರಿಗಳ ಜೊತೆ ಮಾತಾಡಿದ್ದು ಅದೇ ಮೊದಲ ಸಲ. ಆ ಸಭೆಯಲ್ಲಿ ದೇವರಾಜ ಅರಸರು ಶೇಕ್ಸ್‌ಪಿಯರ್ ನಾಟಕಗಳಿಂದ ಹಲವಾರು ಪ್ರಶ್ನೆಗಳನ್ನು ಕೇಳಿದ್ದರು. ವಿದ್ಯಾರ್ಥಿನಾಯಕರ ಮುಂದಾಳತ್ವ ವಹಿಸಿದ ಟಿ.ಪಿ. ಅಶೋಕ ಅದನ್ನೆಲ್ಲಾ ಬಹಳ ಉಲ್ಲಾಸದಿಂದ ಉತ್ತರಿಸಿದ್ದರು. ನೀವೆಲ್ಲಾ ಹೋಗಿ ಚಳವಳಿ ವಿಚಾರ ಮಾತಾಡಿದಿರೋ ಅಥವಾ ಸಾಹಿತ್ಯ ಸಭೆ ನಡೆಸಿದಿರೋ ಎಂದು ರಾಮದಾಸ್ ನಕ್ಕಿದ್ದು ಇನ್ನೂ ನಿನ್ನೆ ನಡೆದಂತೆ ನೆನಪಿನಲ್ಲಿದೆ.

ಅವರು ನಮ್ಮ ನಡುವೆಯೇ ಬದುಕಿ ಸಂಸಾರ ಮಾಡಿಕೊಂಡು ಸ್ನೇಹಿತರ ಜೊತೆ ಇದ್ದುಕೊಂಡು ಎಷ್ಟೆಲ್ಲ ಕೆಲಸ ಮಾಡಿಬಿಟ್ಟರು. ವ್ಯವಸ್ಥೆಯ ಪ್ರಲೋಭನೆಗಳನ್ನು ಮೀರಿ, ನಿರಂತರವಾಗಿ ವ್ಯವಸ್ಥೆಯ ದೋಷಗಳ ವಿರುದ್ಧ ಪ್ರತಿಭಟನೆ ಮಾಡುತ್ತಾ ಪ್ರಜಾಪ್ರಭುತ್ವದ ಮೂಲ ಸತ್ವವನ್ನು ಬೆಳೆಸುತ್ತಾ ಹೋದರು.

ಎಷ್ಟೊಂದು ವಿಚಾರಗಳ ಬಗ್ಗೆ ಎಷ್ಟು ತೀಕ್ಷ್ಣವಾಗಿ ಅವರು ಪ್ರತಿಭಟಿಸಿದ್ದಾರೆ ಎಂಬುದು ನೆನಪಾದಾಗಲೇ ಆಶ್ಚರ್ಯವಾಗುತ್ತದೆ. ಅದನ್ನು ನಡೆಸಲು ಬೇಕಾದ ಮಾನಸಿಕ ದೈಹಿಕ ತ್ರಾಣ ಸುಲಭ ಸಾಧ್ಯವಿಲ್ಲ. ಆ ತ್ರಾಣ ಅವರ ಪ್ರಾಣದಲ್ಲಿದ್ದ ತಾತ್ವಿಕ ನಂಬುಗೆಗಳಿಂದಲೇ ಬಂದದ್ದಿರಬೇಕು. ಅವರು ವಿರೋಧಿಸಿದ್ದನ್ನೆಲ್ಲಾ ನಾವು ಒಪ್ಪದೇ ಇರಬಹುದು. ಆದರೆ ವಿರೋಧವನ್ನು ನಿರಂತರವಾಗಿ ಎತ್ತಿಹಿಡಿವ ತ್ರಾಣ ಅವರಿಗಿತ್ತು ಎಂಬುದೇ ದೊಡ್ಡದು.

ಉನ್ನತ ವಿದ್ಯಾಭ್ಯಾಸದಲ್ಲಿ ಮೀಸಲಾತಿ ಇರಕೂಡದು ಎಂದು ಇತ್ತೀಚೆಗೆ ನಡೆದ ಪ್ರತಿಭಟನೆಗಳ ಸಂದರ್ಭದಲ್ಲಿ ಮೈಸೂರಿನಲ್ಲಿ ಜಿಲ್ಲಾ ಕಮ್ಯುನಿಸ್ಟ್ ಪಾರ್ಟಿ ಮತ್ತು ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್(ಎ.ಐ.ಟಿ.ಯು.ಸಿ.) ಜಂಟಿಯಾಗಿ ಒಂದು ಸೆಮಿನಾರ್ ಏರ್ಪಡಿಸಿತ್ತು. ಅದರಲ್ಲಿ ಮಾತನಾಡುತ್ತಾ ರಾಮದಾಸ್ ಅವರು ಬಹುರಾಷ್ಟ್ರೀಯ ಕಂಪನಿಗಳ ಬೆಂಬಲಿಗರು ಮತ್ತು ಖಾಸಗಿ ಕ್ಷೇತ್ರದ ಕೈಗಾರಿಕೆಗಳು ಮೀಸಲಾತಿ ವಿರೋಧಿ ಚಳವಳಿಗಳ ಹಿಂದೆ ಇದೆ ಎಂದು ಆರೋಪಿಸಿದರು. ಉನ್ನತ ವಿದ್ಯಾಭ್ಯಾಸ ನೀಡುವ ಕೇಂದ್ರಗಳಲ್ಲಿ ಉತ್ತಮ ಗುಣಮಟ್ಟ ಇರಬೇಕು ಎಂದ ಅವರು ಹಣಕ್ಕೆ ಸೀಟುಗಳನ್ನು ಮಾರುವುದರಿಂದ ಗುಣಮಟ್ಟ ಕುಸಿಯುತ್ತದೆ, ಮೀಸಲಾತಿಯಿಂದ ಅಲ್ಲ ಎಂದು ವಾದಿಸಿದರು. ದೇಶದಾದ್ಯಂತ

22.5 ಕೋಟಿಗೂ ಅಧಿಕ ದಲಿತರು ಮತ್ತು ಹಿಂದುಳಿದ ಜನಾಂಗದವರು ಇದ್ದಾರೆ. ಅವರಲ್ಲಿ ಮೀಸಲಾತಿಯಿಂದ ಸ್ವಾತಂತ್ರ್ಯಾನಂತರ ಈವರೆಗೆ 30 ಲಕ್ಷ ಜನರು ಮಾತ್ರ ಉಪಯೋಗ ಪಡೆದಿದ್ದಾರೆ. ತುಳಿತಕ್ಕೆ ಒಳಗಾದ ಜನಾಂಗಗಳಿಗೆ ಹಣಕೊಟ್ಟು ಪಡೆಯುವ ವಿದ್ಯಾಭ್ಯಾಸ ಸಾಧ್ಯವಿಲ್ಲ. ಆದ್ದರಿಂದ ಮೀಸಲಾತಿ ಅನಿವಾರ್ಯ ಎಂದವರು ವಾದಿಸಿದರು.

ಇನ್ನೊಂದು ನೆನಪು. ಒಡನಾಡಿ ಸಂಸ್ಥೆ ಲೈಂಗಿಕವಾಗಿ ಶೋಷಣೆಗೆ ಒಳಗಾದ ಹೆಣ್ಣುಮಕ್ಕಳ ಮತ್ತು ಅವರ ಸಂತತಿಗೆ ಇರಬೇಕಾದ ಸಮಾನತೆಯ ಪರವಾಗಿ ಒಂದು ಕಾರ್ಯಕ್ರಮ ಹಮ್ಮಿಕೊಂಡಿತ್ತು. ಆ ಸಭೆಯಲ್ಲಿ ಮಾತನಾಡುತ್ತಾ ರಾಮದಾಸ್ ಅವರು ವೇಶ್ಯಾವಾಟಿಕೆಯನ್ನು ಕಾನೂನು ಬದ್ಧಗೊಳಿಸುವುದರಿಂದ ಉಂಟಾಗಬಹುದಾದ ಸಾಮಾಜಿಕ ಅನಾಹುತಗಳ ಬಗ್ಗೆ ಮಾತನಾಡಿದರು.

ಬೊಂಬಾಯಿ, ಕಲ್ಕತ್ತ, ಚೆನ್ನೈ ಮೊದಲಾದ ನಗರಗಳಲ್ಲಿ ವೇಶ್ಯಾವಾಟಿಕೆಯನ್ನು ಕಾನೂನು ಬದ್ಧಗೊಳಿಸುವುದರಿಂದ ಬಡ ಅಮಾಯಕ ಹೆಣ್ಣು ಮಕ್ಕಳ ಶೋಷಣೆ ಇನ್ನೂ ಹೆಚ್ಚಾಗಬಹುದು ಎಂದರು. ಅದನ್ನು ಕಾನೂನು ಬದ್ಧಗೊಳಿಸುವುದರಿಂದ ವೇಶ್ಯೆಯರ ಕೆಲಸ ಒಂದು ದೊಡ್ಡ ಪ್ರಮಾಣದ ಉದ್ಯಮವಾಗಿ ಮಾರ್ಪಾಡುಗೊಳ್ಳಬಹುದು ಎಂದವರು ಅಭಿಪ್ರಾಯಪಟ್ಟರು. ಇದು ಲೈಂಗಿಕ ಪ್ರವಾಸೋದ್ಯಮ (Sex Tourism) ವನ್ನು ಬೆಳೆಸುತ್ತದೆ. ಲೈಂಗಿಕ ಪ್ರವಾಸೋದ್ಯಮದಿಂದ ಹೆಚ್ಚಾಗುವ ವಿದೇಶಿ ಪ್ರವಾಸಿಗರು ಮತ್ತು ಅದರಿಂದ ಉಂಟಾಗುವ ಹೆಚ್ಚಿನ ಆದಾಯದ ಪರವಾಗಿ ವಾದಿಸುವ ಉದ್ಯಮಿಗಳನ್ನು ಕಟುವಾಗಿ ಖಂಡಿಸಿದ ರಾಮದಾಸ್ ಲೈಂಗಿಕ ಪ್ರವಾಸೋದ್ಯಮದಿಂದ ಸಮಾಜ ಸ್ವಾಸ್ಥ್ಯಕ್ಕೆ ಎಂತಹ ಹಾನಿಯಾಗಬಹುದು ಎಂದು ಪ್ರತಿಪಾದಿಸಿದರು.

ಬರ್ಟೆಂಡ್ ರಸೆಲ್ಲರ 'ಮ್ಯಾರೇಜ್ ಅಂಡ್ ಮಾರಲ್ಸ್' (Marriage and Morals ಮದುವೆ ಮತ್ತು ನೀತಿ) ಪುಸ್ತಕದಲ್ಲಿ ಅವರು ಮದುವೆಯೆಂಬ ವ್ಯವಸ್ಥೆಯೇ ಸಮಾಜದಲ್ಲಿ ಹೇಗೆ ವೇಶ್ಯಾವಾಟಿಕೆ ಎಂಬ ಸಂಸ್ಥೆಯಿಂದಾಗಿ ರಕ್ಷಿಸಲ್ಪಟ್ಟಿದೆ, ಅನಿಯಂತ್ರಿತ ಶಕ್ತಿಗಳಿಗೆ ವೇಶ್ಯಾವಾಟಿಕೆಯಲ್ಲಿ ಹೊರದಾರಿ ಇಲ್ಲದಿದ್ದರೆ ಮದುವೆಯೆಂಬ ವ್ಯವಸ್ಥೆ (Institution of Marriage) ಯಾವ ಅನಾಹುತಗಳನ್ನು ಎದುರಿಸಬೇಕಾಗುತ್ತಿತ್ತು ಎಂದು ಒಂದು ಸಂದರ್ಭದಲ್ಲಿ ವಿವರಿಸುತ್ತಾರೆ. ಅದು ವೇಶ್ಯಾವಾಟಿಕೆಯ ಪರವಾಗಿರುವ ವಾದವಲ್ಲ. ವಸ್ತುಸ್ಥಿತಿಯ ವಿಶ್ಲೇಷಣೆ. ರಾಮದಾಸ್ ಅವರು ಲೈಂಗಿಕ ಶೋಷಣೆಯೇ ಉದ್ಯಮವಾಗುವ ಅಪಾಯದ ಕುರಿತು ಮಾತನಾಡಿದಾಗ ರಸೆಲ್ ಕಾಲದಲ್ಲಿ ಲೈಂಗಿಕ ಪ್ರವಾಸೋದ್ಯಮದ ಕಲ್ಪನೆ ಈಗ ಇರುವಂತೆ ಇರಲಿಲ್ಲ ಎಂದು ನೆನಪಾಯಿತು. ಥ್ಯಾಲ್ಯಾಂಡ್‌ನ ರಾಜಧಾನಿ ಬ್ಯಾಂಕಾಕ್ ಅಂತಾರಾಷ್ಟ್ರೀಯ ಲೈಂಗಿಕ ಪ್ರವಾಸೋದ್ಯಮದ ಜನಪ್ರಿಯ ಕೇಂದ್ರ. ಕಮ್ಮಿ ಖರ್ಚು ಹೆಚ್ಚಿನ ಸೇವೆ ಎಂಬುದು ಅಲ್ಲಿನ ವ್ಯಾಪಾರದ ಘೋಷಣೆ. ಬೆಂಗಳೂರಿನಿಂದ ವಾರದ ಅಂತ್ಯದಲ್ಲಿ ಬ್ಯಾಂಕಾಕ್‌ಗೆ ಹೋಗಿಬರುವ ಸಾಕಷ್ಟು ಸಂಖ್ಯೆಯ ಜನರಿದ್ದಾರೆ ಎಂದೊಂದು ಅಂಕಿ ಅಂಶ ಹೇಳುತ್ತದೆ. ವೇಶ್ಯಾವಾಟಿಕೆಗೆ ಕಾನೂನು ಬದ್ಧ ಲೈಸೆನ್ಸ್ ನೀಡುವುದು ಲೈಂಗಿಕ ಶೋಷಣೆ ಬೃಹತ್

ಉದ್ಯಮವಾಗಿ ಬೆಳೆಯಲು ನಾಂದಿ ಎಂದು ರಾಮದಾಸ್ ಕಂಡರು. ಶೋಷಣೆಗೆ ಕಾನೂನು ಬದ್ಧ ಒಪ್ಪಿಗೆ ನೀಡುವುದು, ಅದನ್ನು ಮುಂದೆ ನೈತಿಕವಾಗಿ ಒಪ್ಪಿಕೊಳ್ಳಬಹುದಾದ ಒಂದು ವ್ಯವಸ್ಥೆಯನ್ನು ನಿರ್ಮಿಸುವುದರ ವಿರುದ್ಧ ಅವರು ದನಿ ಎತ್ತಿದರು.

ಅದು ರಾಮದಾಸ್ ಯೋಚಿಸುವ ಕ್ರಮ. ತಕ್ಷಣದ ಪ್ರತಿಕ್ರಿಯೆ ಅದರ ಜೀವಾಳ. ವೇಶ್ಯಾವೃತ್ತಿಗೆ ಲೈಸೆನ್ಸ್ ನೀಡದಿರುವುದರಿಂದ ಅದು ಇಲ್ಲವಾಗುತ್ತದೆಯೇ ಎಂಬುದು ಪ್ರಶ್ನೆಯಲ್ಲ. ಲೈಸೆನ್ಸ್ ಜೊತೆ ಸಿಗುವ ವೈದ್ಯಕೀಯ ಲಾಭ ಇತ್ಯಾದಿಗಳಿದ್ದರೂ ಅವರು ಅದರ ಶೋಷಣೆಯ ನೆಲೆಗಳನ್ನು ಗುರುತಿಸುವ ಕ್ರಮ ಹೀಗೆ. ಇಲ್ಲಿ ಅದರ ಪರ ವಿರೋಧದ ಚರ್ಚೆ ನನ್ನ ಉದ್ದೇಶವಲ್ಲ. ಅವರ ಚಿಂತನಾಕ್ರಮ ಹೇಗೆಂದು ಸೂಚಿಸಲು ಇದನ್ನು ಹೇಳಬೇಕಾಯಿತು. ಹೋರಾಟ ಪ್ರತಿಭಟನೆಗಳ ಮೂಲಕ ಸಂಘಟಿತವಾದ ಶೋಷಣೆ ಮಾಡುವ ವ್ಯವಸ್ಥೆ ವಿರುದ್ಧ ನಿರಂತರವಾಗಿ ಹೋರಾಡುವುದು ಅನಿವಾರ್ಯ ಎಂದವರು ತಿಳಿದಿದ್ದರು. ಪ್ರಜಾಪ್ರಭುತ್ವದಲ್ಲಿ ಅದು ವಿಚಾರ ಹಾಗೂ ಜನಾಭಿಪ್ರಾಯಗಳ ಸಂಘಟಿತ ರೂಪವಾಗಿ ಬೆಳೆಯಬೇಕು. ಹಾಗೆ ಬೆಳೆಸಿ ದೊಡ್ಡ ಸಂಘಟನೆಯನ್ನು ಕಟ್ಟಲು ಸಾಧ್ಯವಾಗದೇ ಇದ್ದಾಗಲೂ ಅಭಿಪ್ರಾಯ, ವಿಚಾರಗಳ ನೆಲೆಯಲ್ಲಿ ಅಂತಹ ಚಿಂತನೆಗಳನ್ನು ಸಾಯಲು ಬಿಡಬಾರದು. ವ್ಯವಸ್ಥೆ ಏನನ್ನು ಬೇಕಾದರೂ ನುಂಗಿ ನೀರು ಕುಡಿಯಲು ಸಾಧ್ಯ ಎಂದು ತಿಳಿಯಲು ಬಿಡಬಾರದು. ತಾನಿಲ್ಲದಾಗಲೂ ವೇದಿಕೆ ಖಾಲಿಯಾಗಬಾರದು. ವಿಚಾರಗಳನ್ನು ಬೆಳೆಸುವ ಮೂಲಕ ಸತ್ಯಶೋಧನೆ, ಅದಕ್ಕಾಗಿ ಚಿಕ್ಕ ಪುಟ್ಟ ಗ್ರೂಪ್‌ಗಳನ್ನು ಕಟ್ಟುತ್ತಾ ಇರಬೇಕು. ವಿಚಾರ ಸಾಯದೆ ಬೆಳೆಯಬೇಕು ಎನ್ನುತ್ತಿದ್ದರು.

ಅಂದರೆ ಪವರ್ ಪಾಲಿಟಿಕ್ಸ್ ಅಥವಾ ಅಧಿಕಾರದ ರಾಜಕೀಯದಿಂದ ಬೇರೆಯಾಗಿಯೂ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವುದು, ವಿಚಾರಗಳನ್ನು ಬೆಳೆಸುವುದು, ಸಮಾಜವಾದದ ಮೂಲತತ್ವಗಳನ್ನು ಉಳಿಸಿಕೊಳ್ಳುವುದು ಹೇಗೆಂಬುದನ್ನು ಅವರು ತಮ್ಮ ಹೋರಾಟಗಳ ಮೂಲಕ ತೋರಿಸಿ ಕೊಟ್ಟರು. ಅಧಿಕಾರದ ರಾಜಕೀಯದಲ್ಲಿ ಭ್ರಷ್ಟತೆ ನುಗ್ಗುತ್ತದೆ. ವ್ಯವಸ್ಥೆ ತನ್ನ ಲಾಭಕ್ಕೆ ಅದನ್ನು ಬಳಸಿಕೊಳ್ಳುತ್ತದೆ. ಶೋಷಣೆಯ ವಿರುದ್ಧ ಹೋರಾಡುವವ ಈ ಭ್ರಷ್ಟತೆಯ ವಿರುದ್ಧವೂ ನಿಲ್ಲಬೇಕಾಗುತ್ತದೆ. ಆಗ ಇಂದಿನ ವ್ಯವಸ್ಥೆಯಲ್ಲಿ ಒಂದು ಮಹತ್ ಸಂಘಟನೆ ಆಗದೇ ಹೋಗಬಹುದು. ಆದರೆ ವಿಚಾರಗಳನ್ನು ಮುಂದಿಟ್ಟು ಹೋರಾಡಬಲ್ಲ; ಭಿನ್ನಮತಗಳನ್ನು, ಭಿನ್ನ ವಿಚಾರಗಳನ್ನು ಧೈರ್ಯವಾಗಿ ಹೇಳಬಲ್ಲ ಚಿಕ್ಕಪುಟ್ಟ ಗ್ರೂಪ್‌ಗಳನ್ನು ಕಟ್ಟುತ್ತಾ ಹೋಗಬೇಕು. ಅದು ಇಂದು ವಿಚಾರಗಳನ್ನು ಶೋಷಣೆಯ ವಿರುದ್ಧದ ಹೋರಾಟಗಳನ್ನೂ ಮುಂದುವರಿಸುತ್ತಾ ಹೋಗುವ ಕ್ರಮ ಎಂದವರು ತಿಳಿದಿದ್ದರು. ಆದ್ದರಿಂದಲೇ ಪ್ರೊ. ಕೆ. ರಾಮದಾಸ್ ನಮ್ಮ ಕಾಲದ ಮುಖ್ಯ ವಿಚಾರವಾದಿ ನಾಯಕರು.

ಭಾರತ ಸ್ವಾತಂತ್ರ್ಯಾನಂತರ ಒಂದು ಕಡೆ ಮಹಾತ್ಮಾ ಗಾಂಧಿ ಪ್ರತಿಪಾದಿಸಿದ ತತ್ವಗಳ ಕಡೆಗೂ ಮತ್ತೊಂದು ಕಡೆಯಿಂದ ಕಾರ್ಲ್‌ಮಾರ್ಕ್ಸ್ ಹೇಳಿದ ಶೋಷಣೆಯ ಸತ್ಯದ ಕಡೆಗೂ ಎಳೆಯಲ್ಪಟ್ಟಿದೆ. ಈ ಎರಡೂ ಆಕರ್ಷಣೆಗಳನ್ನು ಸಮನ್ವಯಗೊಳಿಸಲು ಪ್ರಯತ್ನಿಸಿರುವುದೇ ನಮ್ಮ ಸ್ವಾತಂತ್ರ್ಯೋತ್ತರ ರಾಜಕೀಯ, ಆರ್ಥಿಕ ಚರಿತ್ರೆ, ನೆಹರೂ ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ

ಇದನ್ನು ಸರಿದೂಗಿಸಲು ಪ್ರಯತ್ನಿಸಿದರು. ಕಮ್ಯುನಿಸ್ಟ್‌ರಿಂದ ದೂರವಾಗಿ ಗಾಂಧಿಯ ಒಟ್ಟಿಗೂ ಸೇರದೆ ಸೋಶಲಿಸ್ಟರು ಇಬ್ಬರನ್ನೂ ತಮ್ಮ ತತ್ವಗಳಲ್ಲಿ ಒಟ್ಟು ಮಾಡಲು ಪ್ರಯತ್ನಿಸಿದರು.

ಮಹಾತ್ಮಾಗಾಂಧಿ ವಿಚಾರದ, ತತ್ವದ, ನೀತಿಯ ಪ್ರತಿಪಾದಕರು. ಸಂಘಟನೆ, ಸಾಮಾಜಿಕ, ರಾಜಕೀಯ ಹೋರಾಟ ಅದರ ಒಂದು ಮುಖ. ಚೌರಿಚೌರಾದಲ್ಲಿ ಹಿಂಸೆ ನಡೆದಿರುವುದು ಖಾತ್ರಿಯದಾಗ ಅದು ಅಹಿಂಸಾತತ್ವಕ್ಕೆ ವಿರೋಧ ಎಂದು ಗಾಂಧೀಜಿ ಚಳವಳಿಯನ್ನೇ ನಿಲ್ಲಿಸಿದರು. ತತ್ವ ಹಾಗೂ ವಿಚಾರಗಳನ್ನು ಬಿಟ್ಟು ಸಮಾಜ, ಹೋರಾಟ ಅವರಿಗೆ ದೊಡ್ಡದಲ್ಲ.

ಗಾಂಧೀಜಿಯವರ ತತ್ವಬದ್ಧತೆಯ ಗುಣವನ್ನು ಸೋಶಲಿಸ್ಟರು ತಮ್ಮಲ್ಲಿ ಆಹ್ವಾನಿಸಿಕೊಂಡಿದ್ದರು. ಆದ್ದರಿಂದ ಅವರು ಅನೇಕಸಲ ಸಂಘಟನೆಗಳನ್ನು ಒಡೆದಿದ್ದಾರೆ. ಅಧಿಕಾರವನ್ನು ಕಳಕೊಂಡಿದ್ದಾರೆ. ರಾಮದಾಸ್ ಅವರು ಸೋಶಲಿಸ್ಟರ ಈ ವೈಚಾರಿಕ ತತ್ವ ಬದ್ಧತೆಯಿಂದ ಪ್ರಭಾವಿತರಾದವರು. ಆದ್ದರಿಂದ ಚಿಕ್ಕ ಪುಟ್ಟ ಗ್ರೂಪ್‌ಗಳಾದರೂ ಸರಿ ತತ್ವವನ್ನು, ವಿಚಾರಗಳನ್ನೂ ಬಿಟ್ಟುಕೊಡಬಾರದು ಎಂದು ನಂಬಿದ್ದರು.

ಈ ಕಾರಣದಿಂದ ಅವರು ಅರಾಜಕತಾವಾದಿ (Anarchist) ಅಲ್ಲ. ದೇವರಲ್ಲಿ ನಂಬಿಕೆ ಇಲ್ಲ. ಅಧಿಕಾರದಲ್ಲಿ ಭ್ರಷ್ಟರಾಗಕೂಡದು. ಯಾವುದೇ ಶೋಷಣೆಯಾದರೂ ಅದನ್ನು ಪ್ರತಿಭಟಿಸಬೇಕು. ಹೀಗೆ ತನ್ನೊಳಗಿನ ತಳಮಳಗಳಿಂದ ಕುದಿಯುತ್ತಿದ್ದವರು. ಅವರು ಹೊರಗೆ ಸದಾ ಕೈಯಲ್ಲಿ ಸುಡುವ ಸಿಗರೇಟು ಇದ್ದ ಹಾಗೆ ಅವರ ಒಳಗೂ ಅನ್ಯಾಯದ ವಿರುದ್ಧದ ಸಿಟ್ಟಿನ ಜ್ವಾಲಾಮುಖಿಯೇ ಇತ್ತು. ಅದು ಅವರ ನೈತಿಕ ನಂಬಿಕೆಗಳಿಂದ ಪ್ರಜ್ವಲಿಸುತ್ತಿತ್ತು.

ವೈಚಾರಿಕ ಅಥವಾ ಐಡಿಯಾ ಮಟ್ಟಿನ ಕೆಲಸಗಳಲ್ಲಿ ಮೂರ್ತಿಭಂಜನ ಬಹುಶಕ್ತಿಶಾಲಿಯಾಗುತ್ತದೆ. ಆದರೆ ಸಾಮಾಜಿಕ ಕ್ರಿಯೆಗಳಲ್ಲಿ ತೊಡಗಿದಾಗ ಅದು ಸಂಘಟನೆಯ ಅನೇಕ ಸಮಸ್ಯೆಗಳನ್ನು ಒಡ್ಡುತ್ತದೆ. ಅದಕ್ಕಾಗಿಯೇ ಅವರು ಚಿಕ್ಕಪುಟ್ಟ ಗ್ರೂಪ್‌ಗಳನ್ನು ಬೆಳೆಸಬೇಕು ಎನ್ನುತ್ತಿದ್ದರೂ ಅವೆಲ್ಲಾ ವಿಚಾರಗಳ ಆಚೆ ಸಂಘಟಿತ ಸಾಮಾಜಿಕ ಶಕ್ತಿಯಾಗಿ ಬೆಳೆಯುವಲ್ಲಿ ಸಮಸ್ಯೆಗಳಿದ್ದವು. ಒಂದು ದೊಡ್ಡ ಸಾಮಾಜಿಕ ಕಾರಣವಿದ್ದಾಗ ಅದು ಬೆಳೆಯುತ್ತಿದ್ದ ಹಾಗೆ ಉಳಿದ ಸಂದರ್ಭದಲ್ಲಿ ಬೆಳೆಯುತ್ತಿರಲಿಲ್ಲ. ಆದ್ದರಿಂದ ರಾಮದಾಸ್ ನಿರಂತರವಾಗಿ ವಿಚಾರಗಳ ಅನಿವಾರ್ಯತೆ ಹಾಗೂ ಸಂಘಟನೆಗಳ ಆವಶ್ಯಕತೆಗಳ ತಾಕಲಾಟಗಳಲ್ಲಿ ತೊಳಲಾಡಿದರು. ಒಬ್ಬ ವಿಚಾರವಾದಿಯಾಗಿ ಸಮಾಜದಲ್ಲಿ ತೊಡಗಿ ತಮ್ಮದೇ ಆದ ಪರಿಹಾರಗಳನ್ನು ಕಂಡುಕೊಂಡರು.

ಮೈಸೂರಿನಲ್ಲಿ ನನ್ನ ಅನೇಕ ಸ್ನೇಹಿತರು 'ಲಂಕೇಶ್ ಪತ್ರಿಕೆ' ಪ್ರಾರಂಭವಾದ ಬಳಿಕದ ರಾಮದಾಸ್ ಅವರು ಆ ಹಿಂದಿನ ರಾಮದಾಸ್ ಅಲ್ಲ ಎನ್ನುತ್ತಿದ್ದಾಗ ನನಗೆ ಸಂಘಟನೆಯ, ಮನುಷ್ಯ ಸ್ವಭಾವದ ಸಮಸ್ಯೆಗಳು ನೆನಪಾಗುತ್ತಿತ್ತು. ಅವರ ಪ್ರತಿಭಟನೆಗಳು ಕೀರ್ತಿ ಮೋಹದಷ್ಟು ಸರಳವಾದ್ದು ಅಲ್ಲ. ಅವರ ಹೋರಾಟಗಳ ಹಿಂದೆ ಕ್ರಿಯಾಶೀಲ ಮನಸ್ಸಿನ ಸೃಜನಶೀಲ ಒತ್ತಡವಿತ್ತು ಎಂಬುದನ್ನು ನಾವು ಮರೆಯಬಾರದು. ಅಧಿಕಾರ ಮೋಹದ ರಾಜಕಾರಣಕ್ಕೂ ಕ್ರಿಯಾಶೀಲ ವಿಚಾರಪರ ನಾಯಕತ್ವಕ್ಕೂ ಬಹುಮತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇರುವ

ವ್ಯತ್ಯಾಸಗಳನ್ನು ನಾವು ಗಮನಿಸಬೇಕು. ನನಗೆ ರಾಮದಾಸ್ ಅವರೊಡನಿದ್ದ ಒಡನಾಟ ಲಂಕೇಶ್ ಪತ್ರಿಕೆ ಪ್ರಾರಂಭವಾಗುವ ಮೊದಲಿನದ್ದು. ನನ್ನ ವಿದ್ಯಾರ್ಥಿದಿನಗಳ ಕಾಲದ್ದು. ಮೂವತ್ತು ವರುಷಗಳ ಬಳಿಕವೂ ನನ್ನಲ್ಲಿ ಅದು ಉಳಿದು ಭಾವನಾತ್ಮಕವಾಗಿ ಬೆಳೆದಿದೆ.

ನಾವೆಲ್ಲಾ ಸಾಹಿತ್ಯ ಬರಹಗಳಲ್ಲಿ ತೊಡಗಿರುವವರು. ಬರಹ ಮತ್ತು ಕ್ರಿಯೆಗಳ ಸಂಬಂಧವೇನು? ಇಡೀ ಜೀವಮಾನ ಇಷ್ಟು ದೊಡ್ಡ ಕೆಲಸ ಮಾಡಿ ಪ್ರಜಾಪ್ರಭುತ್ವದ ಮೂಲ ಸತ್ವವನ್ನು ತಮ್ಮ ಪ್ರತಿಭಟನೆ ಹೋರಾಟಗಳ ಮೂಲಕ ಜೀವಂತವಾಗಿಟ್ಟ ಪ್ರೊ.ಕೆ. ರಾಮದಾಸ್ ಏನು ಹೇಳಿದರು ಎಂದು ಕೇಳಿದರೆ ತೆಗೆದು ತೋರಿಸಲು ಒಂದು ಪುಸ್ತಕ ಇಲ್ಲ. ಆದರೆ ನಮ್ಮ ಹಾಗಿರುವ ಸಾವಿರಾರು ಜನರ ಮನಸ್ಸಲ್ಲಿ ಅವರು ಇದ್ದಾರೆ. ಹತ್ತಾರು ಪುಸ್ತಕಗಳನ್ನು ಬರೆದವರು ಕೆಲವರು ಇಂದು ನೂರಾರು ಜನರ ಮನಸ್ಸಲ್ಲೂ ಇಲ್ಲ. ಭಾಷೆಯಲ್ಲಿ ಉಳಿಯುತ್ತೇನೆಂಬ ಕಲ್ಪನೆಯ ವ್ಯಾಮೋಹವನ್ನು ಧಿಕ್ಕರಿಸಿದ ಪ್ರತಿಭಟನಾಕಾರರಾಗಿಯೂ ಪ್ರೊ. ಕೆ. ರಾಮದಾಸ್ ನನ್ನ ನೆನಪಲ್ಲಿ ಇದ್ದಾರೆ. ಸಂಸಾರಸ್ಥನಾಗಿದ್ದುಕೊಂಡೂ ಸಮಾಜಕ್ಕೆ ಮಾಡಬಹುದಾದ್ದನ್ನು ನಮಗೆ ತೋರಿಸಿ ಕೊಟ್ಟವರು ಅವರು. ವ್ಯವಹಾರ ಲಾಭದೆಡೆ ಗಮನವೇ ಇಲ್ಲದೆ ಸದಾ ತೀವ್ರ ಭಾವನೆಗಳಲ್ಲಿ ಕುದಿಯುತ್ತಿದ್ದರು. ಆ ಚೇತನವನ್ನು ಹತ್ತಿರದಿಂದ ದೂರದಿಂದ ನೋಡುವ ಅವಕಾಶ ಪಡೆದವರು ನಾವು. ಅವರ ಚೇತನಕ್ಕೆ ಗೌರವ ಪೂರ್ವಕ ವಂದನೆಗಳು.

# ಪ್ರಗತಿರಂಗದ ಮನಸ್ಸುಗಳು

ಬಿ. ಚಂದ್ರೇಗೌಡ

ಕರ್ನಾಟಕದ ಸಾಂಸ್ಕೃತಿಕ ಸಂದರ್ಭದಲ್ಲಿ, ಲಂಕೇಶ್ ಪತ್ರಿಕೆ ಪ್ರಕಟಣೆ ಹೇಗೆ ಒಂದು ಘಟನೆಯೊ ಹಾಗೆಯೇ ಪ್ರಗತಿರಂಗದ ಪ್ರಾರಂಭವೂ ಕೂಡ ಒಂದು ಮಹತ್ವದ ಘಟನೆಯಾಗಿ ಉಳಿದಿದೆ.

ಪ್ರಗತಿರಂಗದ ಸಭೆಗಳು ಶುರುವಾದದ್ದು ಹೀಗೆ. ಪತ್ರಿಕೆ ಹೊರಬಂದ ಮೇಲೆ ಸರಿಯಾಗಿ ಎಂಟು ವರ್ಷ ಕುಳಿತು ಬರೆದ ಲಂಕೇಶರಿಗೆ ಜನರ ಬಳಿಗೋಗುವಂತಹ ಚಡಪಡಿಕೆ ಶುರುವಾಗಿತ್ತು. ಇದಕ್ಕೆ ಪೂರಕವಾಗಿ ಜನತಾ ಸರಕಾರದ ಮಂತ್ರಿಗಳು, ತಮ್ಮ ಹಿಂದಿನ ಸಂಸ್ಥಾ ಕಾಂಗ್ರೆಸಿನ ಚಾಳಿಯಂತೆ ಯಥಾಸ್ಥಿತಿ ಗುಣಗಳನ್ನು ಮೈಗೂಡಿಸಿಕೊಂಡು ಮರೆತು ಹೋಗಿದ್ದರು. ಅವರಿಗೆ ಎಷ್ಟೇ ಬೈದು ಟೀಕೆ ಮಾಡಿದ್ದರೂ ತಾವು ಬಂದ ಕೆಲಸವಾಯ್ತು, ನಮ್ಮ ಸಾಲಗಳೂ ತೀರಿದವು ಭವಿಷ್ಯಕ್ಕೆ ಯಾವ ತೊಂದರೆಯೂ ಆಗದಂತೆ ಆಸ್ತಿ ಮಾಡಿಕೊಂಡೂ ಆಯ್ತು ಎಂಬಂತಾಗಿದ್ದರು. ಇದನ್ನು ಗ್ರಹಿಸಿದ್ದ ಲಂಕೇಶ್ ಉರಿದು ಹೋಗಿದ್ದರು. ಅಲ್ಲದೆ ಇವರ ವಿರುದ್ಧ ಬೀದಿಗೆ ಹೋಗುವುದೇ ಸರಿಯೆಂಬಂತಾಗಿದ್ದರು. ಆ ಸಮಯದಲ್ಲೇ ಒಬ್ಬ ಹೆಣ್ಣುಮಗಳಿಗೆ ಊರವರಿಂದ ಅನ್ಯಾಯವಾಗಿದೆ ಎಂದು ತಿಳಿದು ಪ್ರತಿಭಟಿಸಲೆಂದು ನಾಗತಿಹಳ್ಳಿಗೆ ಬಂದರು. ಆ ಹೆಣ್ಣು ಮಗಳು ನನ್ನೂರ ಸೊಸೆಯಾಗಿ ಬಂದಿದ್ದಳು. ಆಕೆಯ ಗಂಡ ತೀರಿಹೋದ ನಂತರ ತವರೂರಲ್ಲಿ ಜೀವನ ಮಾಡುವುದು ದುಸ್ತರವಾಯ್ತು. ಊರವರ ಕಿರುಕುಳದಿಂದ ತತ್ತರಿಸಿದ ಆಕೆಗೆ ದಲಿತ ಸಂಘರ್ಷ ಸಮಿತಿ ಮತ್ತು ಮಹಿಳಾ ಸಂಘಟನೆಗಳು ಬೆಂಬಲ ನೀಡಿದವು. ಅಲ್ಲದೆ ನಾಗತಿಹಳ್ಳಿಯಲ್ಲಿ ಪ್ರತಿಭಟನಾ ಸಭೆಯನ್ನ ಇಟ್ಟುಕೊಂಡವು. ಈ ಸಭೆಗೆ ಬಂದ ಲಂಕೇಶ್, ಊರವರಿಗೆ ಬೈದು ಅವರ ಜವಾಬ್ದಾರಿಗಳನ್ನು ಅರಿವು ಮಾಡಿಕೊಟ್ಟು, ಕಡೆಗೆ ಊರ ಮುಂದೆ ತಮ್ಮಿಂದ ಟೀಕಿಸಿಕೊಂಡವರಿಂದಲೇ ಎಳನೀರು ಕುಡಿದು ಎಲ್ಲರನ್ನು ಒಂದು ಮಾಡಿದರು ಅನ್ನಬಹುದು. ಆಗ ದೂರದ ಶಿವಮೊಗ್ಗದಲ್ಲಿದ್ದ ನಾನು ಮೇಷ್ಟು ತಮ್ಮ ಸಂಪಾದಕರ

ಕೊಠಡಿಯಿಂದ ಈಚೆ ಬಂದು ಒಬ್ಬ ಹೆಣ್ಣುಮಗಳ ತೊಂದರೆ ನಿವಾರಿಸಿದ್ದರ ಬಗ್ಗೆ ಅಭಿನಂದಿಸಿ ಪತ್ರ ಬರೆದೆ. ಅದಕ್ಕೆ ಅವರಿಂದ ಉತ್ತರವೂ ಬಂತು. "ನಾನು ನಿರೀಕ್ಷಿಸಿರುವುದಕ್ಕಿಂತ ಜನಗಳು ನಮ್ಮ ಬೆಂಬಲಕ್ಕಿದ್ದಾರೆ, ಈ ದಳದವರು ಜನರ ವಿಶ್ವಾಸ ಕಳೆದುಕೊಂಡಿದ್ದಾರೆ, ಮೂರನೇ ಶಕ್ತಿಯೊಂದರ ಅಗತ್ಯ ಈಗ ತುಂಬಾ ಇದೆ. ನೀನೊಂದಿಷ್ಟು ತಿರುಗಾಡಿ ಆಸಕ್ತರನ್ನು ಸಂಪರ್ಕಿಸಿ ಸಭೆ ಏರ್ಪಡಿಸು ನಮ್ಮ ಅಭಿಪ್ರಾಯ ಹೇಳುತ್ತಾ ಹೋಗೋಣ. ಒಳ್ಳೆಯ ಜಾಗದಲ್ಲಿ ಒಂದು ಮೈಕ್ ಇದ್ದರೆ ಸಾಕು" ಎಂದು ಕಾಗದ ಬರೆದರು. ಲಂಕೇಶ್ ಬೀದಿಗೆ ಹೊರಟ ಆ ಸಮಯದಲ್ಲಿ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಸರಕಾರವಾಗಲೇ, ಬಾಟ್ಲಿಂಗ್ ಹಗರಣ, ರೇವಜೀತು ಮಧುವನ, ಕ್ಯಾಪಿಟೇಷನ್ ಹಗರಣವನ್ನೆಲ್ಲಾ ನಡೆಸಿ. ಸರಕಾರವನ್ನ ನಡೆಸಲು ಲಿಕ್ಕರ್ ಲಾಬಿಯನ್ನೆ ವಿಸ್ತರಿಸಿ ಹಾಳಾಗಿ ಹೋಗಿದ್ದರು. ಪತ್ರಿಕೆಯ ಪ್ರದಾನ ವರದಿಗಾರರಾಗಿದ್ದ ರವೀಂದ್ರ ರೇಷ್ಮೆ ಈ ಎಲ್ಲಾ ಹಗರಣಗಳ ತನಿಖಾವರದಿಯನ್ನು ನಿರಂತರವಾಗಿ ದಾಖಲಿಸುತ್ತ ಸರಕಾರವನ್ನೆ ಅಲ್ಲಾಡಿಸುತ್ತಿದ್ದರು. ಹೆಚ್ಚು ಕಡಿಮೆ ವಿರೋಧ ಪಕ್ಷ ಸತ್ತು ಹೋಗಿತ್ತು. ಅಂತಹ ಸಮಯದಲ್ಲಿ ಪ್ರಗತಿರಂಗದ ಸಭೆಗಳು ಆರಂಭವಾದವು.

ನಾವು ಮೊದಲು ಏರ್ಪಡಿಸಿದ್ದ ಸಭೆ ಚಿತ್ರದುರ್ಗ ಜಿಲ್ಲೆಯ ತಾಳಿಕಟ್ಟೆಯಲ್ಲಿ ೩೧-೩-೧೯೮೮ರಂದು ಜರುಗಿತು. ಆ ಊರಿನ ಯುವಕರ ಮುಂದಾಳಾದ ಈ ಚಂದ್ರ ಯಾವ ಸವಲತ್ತುಗಳೂ ಇಲ್ಲದ ಸಮ್ಮೂರಿನಲ್ಲಿ ಐದು ಸಾರಾಯಿ ಅಂಗಡಿಗಳಿವೆ. ಊರು ಸಂಪೂರ್ಣ ನಾಶದತ್ತ ಹೊರಟಿದೆ ಎಂದು ಲಂಕೇಶರಿಗೆ ಪತ್ರ ಬರೆದ ಕೂಡಲೇ ಮೇಷ್ಟ್ರು ಆ ಊರಿನಲ್ಲಿ ಸಭೆ ಏರ್ಪಡಿಸಲು ಹೇಳಿದರು. ಆ ಸಭೆಗೆ ಲಂಕೇಶ್ ರಾಮದಾಸ್ ಹೇಳಿದ ಸಮಯಕ್ಕೆ ಸರಿಯಾಗಿ ಬಂದರು. ಹೊಳಲ್ಕೆರೆಯಿಂದ ಚಂದ್ರಶೇಖರ ತಾಳ್ಯ ಬಂದರು. ಆ ದಿನ ಲಂಕೇಶ್ ಮಾತನಾಡಿದ್ದು ಆ ಹಳ್ಳಿಗರಿಗೆ ಏನೊಂದೂ ಅರ್ಥವಾಗದಿದ್ದರೂ ಹೆಗಡೆ ದೇವೇಗೌಡ ಎಂಬುವರು ಏನೋ ಮಾಡಬಾರದ್ದನ್ನು ಮಾಡಿದ್ದಾರೆ ಎಂಬುದಷ್ಟೆ ಅರ್ಥವಾಯ್ತು. ಅದು ಪ್ರಗತಿರಂಗದ ಪ್ರಥಮ ಸಭೆಯಾದ್ದರಿಂದ ರಾಮದಾಸರ ದನಿ ವಿಶೇಷವಾಗಿ ಮೊಳಗಿತು. ನಿರಂತರ ಹೋರಾಟದ ಆ ದನಿಗಾಗಲೇ ಖಚಿತತೆ ಲಭಿಸಿತ್ತು. ಪ್ರಾಪ್ತವಯಸ್ಸಿಗೇ ಮುದುಕರಾದಂತೆ ಕಾಣುತ್ತಿದ್ದ ತಾಳಿಕಟ್ಟೆ ಹುಡುಗರನ್ನು ಬಡಿದೆಬ್ಬಿಸುವಂತಿದ್ದ ಆ ದನಿಗೆ ಎಲ್ಲರ ಕಣ್ಣು ಮಿನುಗಿದವು. ಆ ಊರ ಜನರು ಮಾಡಿಸಿದ್ದ ಹೋಳಿಗೆ ಊಟದ ನಂತರ ಆ ಸಭೆಯ ರೂವಾರಿಯಾದ ಈ ಚಂದ್ರನನ್ನ ಕರೆದು ಲಂಕೇಶ್‌ರು, ಮುಂದೆ ಪ್ರಗತಿರಂಗದ ಸಂಚಾಲಕನಾಗಿ ಆಫೀಸಿನಲ್ಲಿರು ಎಂದು ಸೂಚಿಸಿದ್ದರು! ಆ ನಂತರ ಅಜ್ಜಂಪುರದಲ್ಲಿ ನಾನು ಎರಡನೇ ಸಭೆ ಏರ್ಪಡಿಸಿದೆ. ಅಲ್ಲಿ ಲಂಕೇಶ್ ಭಾಷಣ ಮಾಡುತ್ತಿರ ಬೇಕಾದರೆ ಒಬ್ಬ, ನೀವು ಸಕ್ರಿಯವಾಗಿ ಬಂದು ನಮ್ಮ ನಾಯಕರಾಗಿ, ನಾವು ನಿಮ್ಮ ಹಿಂದೆ ಬರುತ್ತೇವೆ ಎಂದ ಇಂತಹ ಮಾತುಗಳಿಂದ ಸ್ಫೂರ್ತಿಗೊಂಡ ಲಂಕೇಶ್ ಹೋಗತೊಡಗಿದರು. ಅವರ ಜೊತೆ ಯಾರು ಬರದಿದ್ದರೂ ರಾಮದಾಸ್ ಖಾಯಮ್ಮಾಗಿ ಇರುತ್ತಿದ್ದರು. ಬೀರೂರಿನಲ್ಲಿ ವೀರಭದ್ರಪ್ಪ ಒಂದು ಸಭೆಮಾಡಿದರು. ತರೀಕೆರೆಯಲ್ಲಿ ಅಂಚೆ

ನಾಗಭೂಷಣ ಒಂದು ಸಭೆಮಾಡಿ ಲಂಕೇಶ್ ಭಾಷಣ ಮುಗಿಸಿದ ನಂತರ ಹತ್ತಿರಬಂದು, "ನಿಮ್ಮ ಈ ಪ್ರಯತ್ನ ಒಂದು ಭ್ರಮೆ ಅನ್ನಿಸಿಲ್ಲವೆ" ಎಂದರು -ಲಂಕೇಶ್‌ಗೆ ರೇಗಿ ಕಳಿಸಿದರು.

ಪ್ರಗತಿರಂಗದ ಸಭೆಗಳು ಶಿವಮೊಗ್ಗ ಜಿಲ್ಲೆಗೂ ವ್ಯಾಪಿಸುತ್ತಿದ್ದಂತೆ ರೈತ ನಾಯಕರಾದ ಕೆ.ಟಿ. ಗಂಗಾಧರ್ "ಅಲ್ರೀ ನಾವು ಸುಸ್ತಾಗಿ ಸುಮ್ಮನಾಗ್ತಾಯಿರುವಾಗ ಈ ಲಂಕೇಶ್ ತೇಜಸ್ವಿ ಬೀದಿಗೆ ಬಂದು ಸಭೆ ಮಾಡ್ತಾಯಿದಾರಲ್ಲಾ ನಿಮ್ಮ ಕತೆ ಏನು ವಾಪಸ್ ಹ್ಯಂಗೋಯ್ತ್ರಿ" ಎಂದು ಉದ್ಗಾರ ತೆಗೆದರು. ಕಡಿದಾಳು ಶಾಮಣ್ಣನವರೂ, ಕೂಡ ಈ ಬಗ್ಗೆ ಲಂಕೇಶರಿಗೆ ಪತ್ರ ಬರೆದು ಬೈಸಿಕೊಂಡು, ಓಹೊ ಇವರ ಅಮಲು ಇಳಿಯುವವರೆಗೆ ಇವರನ್ನು ಮಾತನಾಡಿಸುವುದೇ ಇಲ್ಲ ಎಂದು ಸುಮ್ಮನಾಗಿದ್ದರು.

ಪ್ರಗತಿರಂಗದ ದನಿ ಒಂದು ಪ್ರಬಲವಾದ ಪ್ರತಿಭಟನಾ ದನಿಯಾಗಲು ಅಡ್ಡಿಯಾದ ಇನ್ನೊಂದು ತೊಡಕೆಂದರೆ, ರೈತ ಸಂಘರ್ಷ ರಾಜಕಾರಣ, ಆಗಲೆ 'ಕನ್ನಡ ದೇಶ' ಎಂಬ ಪಕ್ಷ ಸ್ಥಾಪಿಸಿಕೊಂಡಿದ್ದ ಪ್ರೊ. ನಂಜುಂಡ ಸ್ವಾಮಿಯವರು ಮತದಾರರ ಅಭ್ಯರ್ಥಿ ನಿಲ್ಲಿಸುತ್ತೇವೆಂದು ಹೇಳಿದ್ದರು. ದಲಿತ ಸಂಘದವರು ಅಭ್ಯರ್ಥಿಯನ್ನ ಹಾಕಿದ್ದ ಜಾಗದಲ್ಲಿ ನಮ್ಮ ಅಭ್ಯರ್ಥಿಯನ್ನು ನಿಲ್ಲಿಸುವುದಿಲ್ಲ ಎಂದು ದಲಿತ ಸಂಘರ್ಷದ ಮೂಗಿಗೆ ತುಪ್ಪ ಸವರಿದ ರಾಮಕೃಷ್ಣ ಹೆಗಡೆ ಆಗಲೇ ದಲಿತ ಕವಿ ಸಿದ್ದಲಿಂಗಯ್ಯನವರನ್ನು ಎಂ.ಎಲ್.ಸಿ. ಮಾಡಿ ಅವರ ಆರಾಧ್ಯ ದೈವವಾಗಿದ್ದರು. ಇದ್ಯಾವುದನ್ನು ಸೀರಿಯಸ್ಸಾಗಿ ಪರಿಗಣಿಸದ ಲಂಕೇಶ್ ರಾಜ್ಯದ ಮೂಲೆ ಮೂಲೆಯಲ್ಲಿ ಜರುಗುತ್ತಿದ್ದ ಪ್ರಗತಿರಂಗದ ಸಭೆಗಳಿಗೆ ತಿರುಗತೊಡಗಿದರು. ಅಷ್ಟರಲ್ಲಾಗಲೇ ಪ್ರಗತಿರಂಗದ ಸಂಚಾಲಕರಾಗಿ ಕೆ. ರಾಮದಾಸ್, ಹೆಚ್.ಎಲ್. ಕೇಶವಮೂರ್ತಿ, ಡಾ.ಶ್ರೀನಿವಾಸಗೌಡ, ಪೂರ್ಣಚಂದ್ರತೇಜಸ್ವಿ ನೇಮಕಗೊಂಡಿದ್ದರು. ತೇಜಸ್ವಿಯವರು ಮಾತ್ರ ಬಲವಂತಕ್ಕೆ ಕಟ್ಟುಬಿದ್ದು ಕೆಲವು ಸಭೆಗಳಿಗೆ ಬರುತ್ತಿದ್ದರು. ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ಜೊತೆಗಿದ್ದವರೇ ರಾಜಕಾರಣ ಮಾಡುತ್ತಿದ್ದಾರೆ. ಅವರನ್ನೇ ತಿದ್ದಿ ತೀಡಿ ಕೆಲಸ ಮಾಡಿಸುವುದು ಬಿಟ್ಟು, ನಾವು ಬೀದಿಗಿಳಿಯುವುದು ತಪ್ಪು ಮಾತಲ್ಲ, ರಾಜಕಾರಣಕ್ಕೆ ಒಂದು ಅರ್ಥಮೂಲದ ಆಯಾಮವೂ ಇದೆ, ಅದನ್ಹೇಗೆ ಮಾಡುವುದೆಂದು ವಾದಿಸುತ್ತಿದ್ದರು. ಇದಕ್ಕೆ ಸಮರ್ಪಕ ಉತ್ತರ ಕೊಡುತ್ತಿದ್ದ ಲಂಕೇಶ್, ಕಾಡಿನಿಂದ ಒಂಟಿ ಸಲಗವನ್ನು ಈಚೆಗೆ ಎಳೆದು ತಂದಂತೆ, ಕೆಲವೇ ಕೆಲವು ಸಭೆಗಳಿಗೆ ತೇಜಸ್ವಿಯವರನ್ನು ಎಳೆದು ಕಡೆಗೆ ಸುಮ್ಮನಾದರು. ಪ್ರಗತಿರಂಗವನ್ನು ಗಂಭೀರವಾಗಿ ಪರಿಗಣಿಸಿದ ಕೆಲವರು, ತಮಗೆ ತಾವೇ ಸಂಚಾಲಕರಾಗಿ ಕೆಲಸ ಮಾಡತೊಡಗಿದರು. ಚಿಕ್ಕಮಗಳೂರು ಎಸ್ಟೇಟೊಂದರಲ್ಲಿ ವೈದ್ಯರಾಗಿದ್ದ ಡಾ.ತಾರಾನಾಥ ಆ ಕೆಲಸ ಬಿಟ್ಟು ದಾವಣಗೆರೆಯಲ್ಲೊಂದು ಶಾಪ್ ಇಟ್ಟು ದಾವಣಗೆರೆ ಗದಗ ಕಡೆ ಪ್ರಗತಿರಂಗದ ಸಭೆ ಏರ್ಪಡಿಸತೊಡಗಿದರು,

ಚಿಕ್ಕಮಗಳೂರು ಕಡೆ ಅಜ್ಜಂಪುರದ ಶಶಿಕಲಾ, ಶೃಂಗೇರಿ ಶಾರದ, ಸಿರಿಮನೆ ನಾಗರಾಜ್, ಕಲ್ಕುಳಿ ವಿಠ್ಠಲ ಹೆಗಡೆ ಮುಂತಾದವರು ಸಕ್ರಿಯವಾಗಿ ಪ್ರಗತಿರಂಗದ ಕೆಲಸ ಮಾಡತೊಡಗಿದರು. ದಾವಣಗೆರೆಯಲ್ಲಿ ಷಣ್ಮುಖಪ್ಪ ಸೀನೋಜಿ, ಈಶ್ವರಪ್ರಸಾದ್, ಇಮ್ತಿಯಾಜ್

ಮುಂತಾದವರೆಲ್ಲಾ ಸಭೆ ಏರ್ಪಡಿಸುತ್ತಿದ್ದರೆ, ತುಮಕೂರು ಕಡೆ ಪ್ರೇಮಲೀಲಾ, ಕಲ್ಕೆರೆ, ವಿವೇಕ್, ರಾಮಚಂದ್ರ, ಮೈಸೂರು ಕಡೆಯಲ್ಲಿ ಸ್ವಾಮಿ ಆನಂದ, ಉಗ್ರನರಸಿಂಹೇಗೌಡ, ಲತಾ, ಮಹೇಶ್, ಆಟೋ ಚಲುವೇಗೌಡ, ಚಾಮರಾಜನಗರದ ಡಿ. ಸಿಲ್ವಾ, ಹುಣಸೂರು ಕಡೆ ಸೋಮಶೇಖರ್, ಕನಕಪುರದ ಕಡೆ ಕಾಂತರಾಜ್, ಪಾರ್ವತೀಶ್, ಸಿದ್ದೇಗೌಡ, ಲಕ್ಷ್ಮೀಪತಿ, ಕೆ.ಆರ್. ಪೇಟೆಯ ಕಡೆ ಗೋವಿಂದರಾಜ್, ಭದ್ರಾವತಿ ಕಡೆಯಲ್ಲಿ ಟಿ.ಎನ್ ರಂಗೇಗೌಡ, ಜಗನ್ನಾಥ್, ಪರಿಸರ ಶಿವರಾಂ ಹೀಗೆ ಕರ್ನಾಟಕದ ಬುದ್ಧಿಜೀವಿ ವಲಯದ ಯುವ ಸಮೂಹವೇ ಪ್ರಗತಿರಂಗ ಕಟ್ಟುವುದಕ್ಕಾಗಿ ಉತ್ಸಾಹದಿಂದ ಓಡಾಡತೊಡಗಿದರು. ಇಂತಹ ತರುಣ ಪಡೆಯ ದೆಸೆಯಿಂದಾಗಿ ಬಹುತೇಕ ಎಲ್ಲಾ ಜಿಲ್ಲೆಗಳಲ್ಲೂ ಸಭೆಗಳಾದ ನಂತರ, ಲಂಕೇಶರು ಬಿಡದ ಪಟ್ಟಿನಿಂದ ಕುಳಿತು, ಪ್ರಗತಿರಂಗದ ಪ್ರಣಾಳಿಕೆ ತಯಾರು ಮಾಡಿದರು. ಆ ಪ್ರಣಾಳಿಕೆ ಇವತ್ತಿನ ಎಲ್ಲ ಸಮಸ್ಯೆಗಳಿಗೆ ಧನ್ವಂತರಿ ಚಿಕಿತ್ಸೆಯಂತೆ ಪರಿಹಾರ ಸೂಚಿಸಿದೆ. ಈ ನಾಡಿನ ಸಂಪತ್ತು ಸರ್ವ ಹಂಚಿಕೆ ಪಡೆದರೆ ಸಾಮಾನ್ಯ ಕುಟುಂಬವೂ ಒಂದು ಮಾರುತಿ ಕಾರಿನಲ್ಲಿ ಓಡಾಡಬಹುದೆಂದು ಲಂಕೇಶ್ ಹೇಳುತ್ತಿದ್ದರು. ಅಂತಹ ಹೇಳಿಕೆಗೆ ದಾಖಲೆಯೊದಗಿಸಿದಂತೆ ಪ್ರಣಾಳಿಕೆ ರೂಪುಗೊಂಡಿತ್ತು. ಹೇಗೆ ಶಿಕ್ಷಣ ಸಂಸ್ಥೆ ಮತ್ತು ಉದ್ಯೋಗಕ್ಕೂ ನೇರ ಸಂಬಂಧವಿರಬೇಕು ಸರಕಾರದ ಆದಾಯ ಹೇಗೆ ಹಂಚಿಕೆಯಾಗಬೇಕು, ಗ್ರಾಮಗಳ ಉತ್ಪಾದನೆ ಪಟ್ಟಣಕ್ಕೆ ಹರಿದು ಬಂದು ಅಲ್ಲಿಯ ಹಣ ಹಳ್ಳಿಗಳಿಗೆ ಹೇಗೆ ತಲುಪಬೇಕು ಎಂಬ ಕರಾರುವಾಕ್ ವಿವರವೇ ಪ್ರಣಾಳಿಕೆಯಲ್ಲಿತ್ತು. ಪ್ರಗತಿರಂಗದ ಪ್ರಣಾಳಿಕೆ ಹೊರಬಂದ ನಂತರ ಇಡೀ ನಾಡಿನ ಬುದ್ಧಿಜೀವಿ ವಲಯಗಳಿಂದ ಮೆಚ್ಚುಗೆ ವ್ಯಕ್ತವಾಯಿತು. ಆಗ ಕೊಂಡಜ್ಜಿ, ಮೇಲುಕೋಟೆ ಮುಂತಾದ ಕಡೆ ಪ್ರಗತಿರಂಗದ ಕಾರ್ಯಗಾರದ ಕಮ್ಮಟಗಳೂ ನಡೆದವು ಅಷ್ಟರಲ್ಲಿ ಪ್ರಗತಿರಂಗವನ್ನೆ ಪ್ರತಿಸ್ಪರ್ಧಿ ಎಂದು ಪರಿಗಣಿಸಿದ್ದ ರೈತ ಸಂಘದ ನಾಯಕರಾದ ಪ್ರೊ. ನಂಜುಂಡಸ್ವಾಮಿಯವರು ಪ್ರಣಾಳಿಕೆಯನ್ನು ಅದೊಂದು ರಾಜಕೀಯ ಲೇಖನ ಎಂದು ಟೀಕಿಸಿದರು. ಇದಕ್ಕೆ ಉತ್ತರವಾಗಿ ಲಂಕೇಶ್ ಒಂದು ವೃತ್ತಿ ಮಾಡುವ ವರ್ಗದಿಂದಲೇ ರಾಜಕಾರಣ ಸಾಧ್ಯವಿಲ್ಲ, ರೈತ ಸಂಘದವರು ಪ್ರಗತಿರಂಗದ ಸರಕಾರ ಬಂದಾಗ ಅದರಲ್ಲಿ ಕೃಷಿ ವಿಭಾಗ ನೋಡಿಕೊಳ್ಳ ಬಹುದೆಂದು ಗೇಲಿಮಾಡಿವರು. ಈ ಇಬ್ಬರೂ ನಾಯಕರ ಹೇಳಿಕೆ ಟೀಕೆಗಳಿಂದ ರೈತ ಸಂಘ ಮತ್ತು ಪ್ರಗತಿರಂಗದ ಕಾರ್ಯಕರ್ತರಿಗೆ ತುಂಬಾ ಬೇಸರವಾಗುತ್ತಿತ್ತು. ಏಕೆಂದರೆ ಲಂಕೇಶರ ಅಭಿಮಾನಿಗಳು ರೈತ ಸಂಘದಲ್ಲೂ, ನಂಜುಂಡಸ್ವಾಮಿಯವರ ಅಭಿಮಾನಿಗಳು ಪ್ರಗತಿರಂಗದಲ್ಲೂ ಇದ್ದರು. ನಡುವೆ ಇದ್ದ ದಲಿತ ಸಂಘದ ನಾಯಕರು ಹೇಗಾದರೂ ಮಾಡಿ ನಾವೆಲ್ಲಾ ಒಟ್ಟು ಸೇರಿ ರಾಜಕಾರಣ ಆರಂಭಿಸೋಣ ಎಂಬ ಚರ್ಚೆ ಆರಂಭಿಸಿದರು. ಅದಕ್ಕಾಗಿ ನಂಜನಗೂಡಿನಲ್ಲಿ, ೧೯೮೮ ರ ಅಕ್ಟೋಬರ್ ಎರಡರಂದು ಸಭೆ ಮಾಡಲು ತೀರ್ಮಾನಿಸಿದರು, ಆದರೆ ಅದೇ ದಿನ ಶೃಂಗೇರಿಯಲ್ಲಿ ಪುರೋಹಿತಶಾಹಿಗಳ ಕಪಿಮುಷ್ಠಿ ವಿರುದ್ಧ ಸಭೆ ಇಟ್ಟುಕೊಂಡು ಅಲ್ಲಿ ರಾಮದಾಸ್ ತೇಜಸ್ವಿ, ವಡ್ಡರ್ಸೆ ರಘುರಾಮ ಶೆಟ್ಟರು ಮಾತನಾಡುವ ಕಾರ್ಯಕ್ರಮವಿದ್ದ ಕಾರಣಕ್ಕೆ, ನಂಜನಗೂಡಿಗೆ ಪ್ರಗತಿರಂಗದ ಸಂಚಾಲಕರು ಹೋಗಲಾಗಲಿಲ್ಲ. ಆ ಕಾರಣಕ್ಕೆ ಒಂದು ಐತಿಹಾಸಿಕ ಸಂಧಾನದ

ಸಭೆ ಸೇರದೆ ಎಲ್ಲರೂ ಮೂರು ದಿಕ್ಕಾದರು. ಇದರ ನಡುವೆ. ಪುರೋಹಿತಶಾಹಿಗಳು ವ್ಯವಸ್ಥಿತ ಸಂಚಿನಿಂದ ರಾಮಮಂದಿರದ ಸಮಸ್ಯೆ ಕೈಗೆತ್ತಿಕೊಂಡು, ಮತೀಯದೊಂದಿಯೊಂದಿಗೆ ಹೋರಾಡತೊಡಗಿದ್ದರು. ಅದರ ಅಪಾಯವನ್ನರಿತ ಲಂಕೇಶ್, ಕೋಮುವಾದಿಗಳ ವಿರುದ್ಧ ನೇರ ಹೋರಾಟವನ್ನೇ ಆರಂಭಿಸಿದರು. ಮತೀಯ ಶಕ್ತಿಗಳ ನಿಗ್ರಹಕ್ಕೆಂದು ರಾಮದಾಸರ ಧ್ವನಿ ಇನ್ನು ಬಿರುಸಾಗಿ ಮೊಳಗತೊಡಗಿತು. ಲಂಕೇಶ್ ರಾಮದಾಸರ ಜೋಡಿ ನಾಡಿನಾದ್ಯಂತ ಸಾವಿರಾರು ಕಿಲೋ ಮೀಟರ್ ಪ್ರಯಾಣ ಮಾಡಿ ಭಾಷಣ ಮಾಡಿದರು.

ಇನ್ನೇನು ಚುನಾವಣೆ ಹತ್ತಿರ ಬರುತ್ತಿದೆ ಎಂಬ ಸಮಯಕ್ಕೆ ಸರಿಯಾಗಿ ಬೆಂಗಳೂರಲ್ಲಿ ಪ್ರಗತಿರಂಗದ ಶಕ್ತಿ ಪ್ರದರ್ಶನ ಮಾಡಬೇಕೆಂಬ ಹುಮ್ಮಸ್ಸು ಎಲ್ಲರಲ್ಲೂ ಉಂಟಾಯಿತು. ಆದ್ದರಿಂದ ರಾಜ್ಯಮಟ್ಟದ ಸಮಾವೇಶವೊಂದು ಬೆಂಗಳೂರಲ್ಲಿ ಜರುಗಿತು. ನಾಡಿನ ಮೂಲೆ ಮೂಲೆಯಿಂದ ಸಾವಿರಾರು ಜನ ಯುವ ಕಾರ್ಯಕರ್ತರು ಹರಿದು ಬಂದರು. ಬಳ್ಳಾರಿಯ ಅಬ್ರಹಾಂ ಒಬ್ಬರೇ ರೈಲಿನಲ್ಲಿ ಮೂರು ಸಾವಿರ ಜನರನ್ನು ಕರೆತಂದಿದ್ದರು!

ಶಿವಮೊಗ್ಗದ ಕಡೆ ಲಂಕೇಶ್ ಊರಿನ ಆಸುಪಾಸಿನಿಂದ ಬರುವ ಆಸಕ್ತಿಯವರನ್ನು ನಾವೂ ಎರಡು ಲಾರಿಗಳಲ್ಲಿ ತುಂಬಿಕೊಂಡು ಬಂದಿದ್ದೆವು. ಆ ಲಾರಿಯಲ್ಲಿ ಲಂಕೇಶರ ಸಂಬಂಧಿಕರೇ ಇದ್ದು ಅವರೆಲ್ಲಾ "ಬಂಗಾರಪ್ಪನಿಗೆ ಜೈ" ಎಂದು ಕೂಗುತ್ತಿದ್ದರು. ಹೆದರಿದ ನಾವು ಆ ಕೂಗನ್ನು ಬಂದ್ ಮಾಡಿಸಿ "ಮೂರನೇ ರಾಜಕೀಯ ಶಕ್ತಿಗೆ ಜೈ ಎನ್ನಿ" ಎಂದು ಬದಲಾಯಿಸಿಕೊಟ್ಟೆವು. ತಿರುಗಿನೋಡುವಷ್ಟರಲ್ಲಿ, "ಮೂರನೇ ರಾಜಕಾರಣಿಗೆ ಜೈ" ಎಂದು ಕೂಗುತ್ತಿದ್ದರು. ಅವರ ಗಂಟಲು ಬೇರೆ ದೊಡ್ಡದು. ಅಂತೂ ಅವರನ್ನು ತಿದ್ದಲಾಗಲಿಲ್ಲ. ತಿದ್ದಲು ಹೋದರೆ, ಈಸತಿ ಲಂಕೇಶ್ ಗೆಲ್ತನಾ, ಎಂದು ಕೇಳುತ್ತಿದ್ದರು.

ನಮ್ಮ ಆಗಿನ ಸಂದರ್ಭದಲ್ಲಿ ಪ್ರಗತಿರಂಗವೆಂಬ ಪಕ್ಷ ಚುನಾವಣೆಗೆ ನಿಂತು ಗೆಲ್ಲುವುದಾಗಲಿ ಅಧಿಕಾರದಲ್ಲಿ ಪಾಲ್ಗೊಳ್ಳುವುದಾಗಲಿ ಇಂತಹ ಯಾವ ಆಲೋಚನೆಗಳೂ ಇರಲಿಲ್ಲ. ವೃತ್ತಿರಾಜಕಾರಣಿಗಳನ್ನ ಹಿಗ್ಗಾ ಮುಗ್ಗ ಟೀಕಿಸಿ ಲಂಕೇಶ್, ರಾಮದಾಸ್, ಕೇಶವಮೂರ್ತಿಯವರು ಮಾಡಿದ ಭಾಷಣ ಕೇಳಿ ಸಂಜೆಯ ಪತ್ರಿಕಾ ಗೋಷ್ಠಿಯಲ್ಲಿ ಎಲ್ಲವನ್ನು ಅಳೆದು ಸುರಿದು ಬರಖಾಸ್ತಾಗುತ್ತಿದ್ದೆವು. ಸೂಕ್ಷ್ಮವಾಗಿ ನೋಡಿದರೆ ಆಗ ಆಡಳಿತದಲ್ಲಿದ್ದ ಜನತಾಪಾರ್ಟಿಯ ಕತೆ ಮುಗಿದು, ಕಾಂಗ್ರೆಸ್ ಬೆಳೆಯತೊಡಗಿತ್ತು. ಇದಕ್ಕೆ ಪ್ರಗತಿರಂಗದ ಸಭೆಗಳು ಕಾರಣವಾಗುತ್ತಿದ್ದವು.

ಅದೇ ಸಮಯದಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟುತ್ತೇವೆಂದು ಪುರೋಹಿತಶಾಹಿಗಳು ನಾಡಿನ ಮೂಲೆ ಮೂಲೆಯಿಂದ ಇಟ್ಟಿಗೆ ಮೆರವಣಿಗೆ ಮಾಡುತ್ತ ಹೊರಟರು. ಈ ವಿಷಯ ಲಂಕೇಶರನ್ನು ತುಂಬಾ ಕೆರಳಿಸಿತು. ಆ ಅವಿವೇಕಿಗಳ ಕೃತ್ಯವನ್ನು ರೈತಸಂಘದವರು, ದಲಿತ ಸಂಘದವರು, ಮತ್ತು ನಾವು ಸೇರಿ ತಡೆಯೋಣ, ಅದು ಚೆಡ್ಡಿಗಳ ಮೂಲಸ್ಥಾನವಾದ ಶಿವಮೊಗ್ಗದಿಂದಲೇ ಆರಂಭವಾಗಲಿ ಎಂದು ತೀರ್ಮಾನಿಸಿದರು. ಅಲ್ಲದೆ ಈ ಕಾರ್ಯಕ್ಕಾಗಿ ಸಂಧಾನಕಾರರಾಗಿ ರಾಮದಾಸ್ ಮತ್ತು ಕೇಶವಮೂರ್ತಿ ಯವರನ್ನು ರೈತ

ಸಂಘದ ಮುಖಂಡರ ಬಳಿಗೆ ಕಳುಹಿಸಿದರು. ಶಿವಮೊಗ್ಗಕ್ಕೆ ಬಂದ ರಾಮದಾಸ್, ಕೇಶವಮೂರ್ತಿಯವರು ಸುಂದರೇಶ್‌ರನ್ನು ಭೇಟಿ ಮಾಡಲು ಹೋದರು. ನಂಜುಂಡಸ್ವಾಮಿಯವರ ಒಪ್ಪಿಗೆಯಿಲ್ಲದೆ ನಾವು ಇಟ್ಟಿಗೆ ವಿರುದ್ಧದ ಚಳವಳಿಯಲ್ಲಿ ನಿಮ್ಮೊಡನೆ ಕೈಜೋಡಿಸಲಾಗುತ್ತಿಲ್ಲ ಎಂದು ಅಸಹಾಯಕತೆ ತೋಡಿಕೊಂಡ ಸುಂದರೇಶ್, ಕೂಡಲೇ ವ್ಯಗ್ರರಾಗಿ, ಯಾವನ್ರಿ ಅವನು ರಾಜ್ಯಪಾಲ ಏನು ಮಾಡ್ತ ಕುಂತವನೆ ಎಂದು ಬೈದರು. ಕಡೆಗೆ ಪ್ರಗತಿರಂಗದಿಂದಲೇ ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ ಎಂಬ ಘೋಷಣೆಯೊಂದಿಗೆ ಶಿವಮೊಗ್ಗದಲ್ಲಿ ಮೆರವಣಿಗೆ ಮಾಡಿ ಸಭೆ ಏರ್ಪಾಡಾಗಿತ್ತು. ಇದು ಪ್ರಗತಿರಂಗದ ಕಡೆಯ ಸಭೆ. ಏಕೆಂದರೆ ಆಗ ಚುನಾವಣೆ ಘೋಷಣೆಯಾಗಿ, ಜನತಾದಳ, ಕಾಂಗ್ರೆಸ್, ಬಿ.ಜೆ.ಪಿಗಳು ಹೆಂಡ ಹಣದ ಥೈಲಿಯೊಂದಿಗೆ ಚುನಾವಣೆಗೆ ಸಜ್ಜಾಗಿ ನಿಂತವು. ಅವರ ಭರಾಟೆ ಎದುರು ಬರಿಗೈಲಿ ಕೇವಲ ಪ್ರಣಾಳಿಕೆ ಹಿಡಿದು ಹೊರಟಿದ್ದ ಪ್ರಗತಿರಂಗ ಚುನಾವಣೆಯಿಂದ ಹಿಂದೆ ಸರಿಯುವ ಘೋಷಣೆ ಮಾಡಿತು. ಈ ಹೇಳಿಕೆಯನ್ನು ರಾಮದಾಸರು ಸಹಿಮಾಡಿಕೊಟ್ಟರು. ಅದನ್ನು ಎಲ್ಲ ಪತ್ರಿಕೆಗಳಿಗೂ ತಲುಪಿಸಿ ನಾನು ಶಿವಮೊಗ್ಗಕ್ಕೆ ಬಂದೆ.

ತಮ್ಮದೇ ಪೂರ್ವಗ್ರಹ ಮತ್ತು ಕುಟಿಲೋಪಾಯಗಳಿಂದ ಪಟ್ಟಭದ್ರ ಹಿತಾಸಕ್ತಿಗಳ ಪೋಷಕರಂತಿದ್ದ ಪತ್ರಿಕೆಗಳಿಗೆ ಪ್ರಗತಿರಂಗ ಸಕಾರಣ ನೀಡಿ ಚುನಾವಣೆಯಿಂದ ಹಿಂದೆ ಸರಿದದ್ದೂ ಒಂದು ಕುಚೋದ್ಯದ ಸಂಗತಿಯಾಗಿತ್ತು!

ಪ್ರಗತಿರಂಗದ ಎಲ್ಲಾಮನಸ್ಸುಗಳು ಜಾಗೃತ ಸಾಹಿತ್ಯ ಸಮಾವೇಶದಲ್ಲಿ ಪಾಲ್ಗೊಂಡು ಬರಖಾಸ್ತಾದವು. ಸಾಹಿತ್ಯ ಪರಿಷತ್ ತನ್ನ ಅಸಂಬದ್ಧ ನಡವಳಿಕೆ ಮತ್ತು ಜಾತ್ರೆಗಳಿಂದ ಹಾಸ್ಯಾಸ್ಪದವಾಗಿದ್ದ ಸಂದರ್ಭದಲ್ಲಿ, ಬೆಂಗಳೂರಲ್ಲಿ ಏರ್ಪಟ್ಟ ಜಾಗೃತ ಸಾಹಿತ್ಯ ಸಮಾವೇಶದ ರ್‍ಯಾಲಿಯಲ್ಲಿ ಬಹುತೇಕ ಪ್ರಗತಿರಂಗದ ಮನಸ್ಸುಗಳೆಲ್ಲಾ ಭಾಗವಹಿಸಿದ್ದವು. ಹಾಗಾಗಿ ಅದೊಂದು ಅರ್ಥಪೂರ್ಣ ಸಾಹಿತ್ಯ ಸಮ್ಮೇಳನವಾಗಿತ್ತು. ಅಂತಹ ಕಾಲದ ಒತ್ತಡ ಈಗಲೂ ಇದೆ. ಆ ಮನಸ್ಸುಗಳೂ ಇವೆ. ಆದರೆ ಲಂಕೇಶ್‌ರಂತಹವರೇ ಇಲ್ಲದಂತಾಗಿದೆ.

ಪ್ರಗತಿರಂಗ ಸಕ್ರಿಯ ರಾಜಕಾರಣದಿಂದ ಹಿಂದೆ ಸರಿದಿದ್ದರಿಂದ ಮತ್ತು ಅದೊಂದು ವಿಫಲ ಪ್ರಯತ್ನವೆಂಬ ಯಾವ ನೋವೂ ಕೂಡ ಲಂಕೇಶರಲ್ಲಾಗಲಿ ಅದರ ಸಂಚಾಲಕರಲ್ಲಾಗಲಿ ಉಂಟಾಗಲೇಯಿಲ್ಲ. ಅವರೆಲ್ಲಾ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ತಮ್ಮ ಇತಿ ಮಿತಿಗಳನ್ನು ಮೀರಿ ಒಂದು ದಿಟ್ಟ ಹೋರಾಟ ಕೊಟ್ಟಿದ್ದರು. ಅಂತಹ ಹೋರಾಟದ ಮನಸ್ಸುಗಳು ಈಗ ನಾಡಿನ ತುಂಬಾ ಇವೆ. ಅವುಗಳನ್ನು ಕೇಂದ್ರೀ ಕರಿಸಿ ಹೊಸ ರಾಜಕಾರಣದ ಗಾಳಿ ಬೀಸುವಂತೆ ಮಾಡುವುದು ಕಾಲಕ್ಕೆ ಸೇರಿದೆ ಅಥವಾ ಕಾಲಗರ್ಭದಲ್ಲಿದೆ ಎನ್ನಬಹುದು.

# ಕನ್ನಡ ಕಲಿಗಳ ಮೇಲೆ ಗುಂಡೂ ಪ್ರಹಾರ

ಎಚ್.ಎಲ್. ಕೇಶವಮೂರ್ತಿ

**[ಗೋಕಾಕ್ ಚಳವಳಿಯಲ್ಲಿ ಭೂಗತರಾಗಿದ್ದ ಸಮಯದಲ್ಲಿ ಕೆ.ರಾಮದಾಸ್ ಅವರನ್ನು ಲಂಕೇಶ್‌ಪತ್ರಿಕೆ ಸಂಪರ್ಕಿಸಿದಾಗ ಹೇಳಿದ್ದು; ಕಂಡದ್ದು]**

ನೋಡಿ ದಿಗ್ಭ್ರಮೆ ಆಯ್ತು. ಎಲ್ಲಿ ನೋಡಲಿ ಶಸ್ತ್ರಸಜ್ಜಿತ ಪೊಲೀಸು! ಅವರ ವ್ಯಾನು, ಜೀಪಿನ ತರಾತುರಿಯ ಓಡಾಟ. ಪ್ರಮುಖ ಪೊಲೀಸ್ ಕಾರ್ಯಚರಣೆಯ ಭ್ರಮೆ ಮೂಡಿಸುವ ಸ್ಥಿತಿ. ಮೈಸೂರಿನ ಸರಸ್ವತಿಪುರಂ ಬಡಾವಣೆ ಇಡೀ ಸ್ಮಶಾನ ಮೌನ ಆವರಿಸಿತ್ತು. ಎಲ್ಲರ ಮನದಲ್ಲೂ ಭೀತಿ ತುಂಬಿತ್ತು. ತುರ್ತುಪರಿಸ್ಥಿತಿಯಲ್ಲೂ ಕಾಣಲಾಗದ, ಪ್ರಜಾಪ್ರಭುತ್ವದ ಎಲ್ಲ ಮೌಲ್ಯಗಳನ್ನು ಧಿಕ್ಕರಿಸಿ ಪೊಲೀಸರು ನಿರ್ಮಿಸಿದ ಈ ಭಯಾನಕ ಪರಿಸ್ಥಿತಿಗೆ ಕಾರಣ ಕನ್ನಡಕ್ಕಾಗಿ ಹೋರಾಡಿದ, ಕನ್ನಡಕ್ಕಾಗಿ ಚಳವಳಿ ಹೂಡಿದ ಜನರ ಬೇಟೆ! ಈ ಉಸಿರು ಕಟ್ಟಿಸುವ ವಸ್ತುಸ್ಥಿತಿಯ ಹಿಂದೆ ಮೈ ನಡುಗಿಸುವ ಕ್ರೂರತನ, ಹೇಸಿಗೆ ತರುವ ವಂಚನೆ ಇದೆ.

ಇದೆಲ್ಲ ಪ್ರಾರಂಭವಾದದ್ದು ಹೀಗೆ. ೧೯ರ ಸಂಜೆ ಗುಂಡೂರಾಯರ ಸರ್ಕಾರ ಒಂದು ಭಾಷಾ ಸೂತ್ರ ಕೊಡ್ತು. ಯಾರದೋ ಒಂದಿಬ್ಬರ ಮರ್ಜಿಗಾಗಿ ಸರ್ಕಾರ ತಳೆದ ಈ ಹಲ್ಕಾ ನಿಲುವು ಬಹಳ ಜನರಿಗೆ ಹಿಡಿಸಲಿಲ್ಲ. ಮುಂದಿನ ಕಾರ್ಯಕ್ರಮದ ಬಗ್ಗೆ ಚರ್ಚಿಸಲು ೨೦ರ ಸಂಜೆ ಬನುಮಯ್ಯ ಕಾಲೇಜಿನಲ್ಲಿ ಕಾರ್ಯಕರ್ತರು ಸೇರಿದರು. ಸಭೆ ಗೋಪ್ಯವಾಗಿ ನಡೆಯಬೇಕಿತ್ತು. ಆದರೆ ಹಾಗೆ ಆಗದಂತೆ ಕೈವಾಡ ನಡೀತು. ಹಿಂದಿನ ದಿನ ಗೋಕಾಕ್ ವರದಿ ಪರ ಚಳವಳಿ ಹೂಡಿ ಸುಮಾರು ೬೦೦ಜನ ಪೊಲೀಸ್ ಠಾಣೆ ಸೇರಿದ್ರು.

ಅಂದಿನ ಸಂಜೆ ಜಿಲ್ಲಾ ಪೊಲೀಸ್ ಅಧಿಕಾರಿ ಕಾರಿನಲ್ಲೇ ಕ್ರಿಯಾಸಮಿತಿ ಅಧ್ಯಕ್ಷ ವಿ. ಹೆಚ್. ಗೌಡ ಹಾಗೂ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಬಂದ್ರು, ಜಿಲ್ಲಾ ಪೊಲೀಸ್ ಅಧಿಕಾರೀನೂ ಇದ್ರು. ಚಳವಳಿಗಾರರಿಗೆ ಬನುಮಯ್ಯ ಕಾಲೇಜಿನಲ್ಲಿ ಸಭೆ ಇರುವ ಸಂಗತಿಯನ್ನು ಭೈರಪ್ಪ

ತಿಳಿಸಿದ್ರು. ೩೫ನೇ ವಿಧಿ ಜಾರೀಲಿ ಇರೋದ್ರಿಂದ ಹಾಗೆ ಮಾಡೋದು ಬೇಡ ಅಂತ ಕೆಲವರು ಸೂಚಿಸಿದ್ರು. ಅದಕ್ಕೆ ಪಕ್ಕದಲ್ಲೇ ಇದ್ದ ವಿ.ಎಚ್.ಗೌಡ, ಎಸ್.ಪಿ. ಸಾಹೇಬ್ರು ಒಪ್ಪಿದ್ದಾರೆ. ಅಲ್ಲೇ ಸಭೆ ನಡೆಸಬಹುದು ಅಂದ್ರು. ಎಸ್.ಪಿ.ಯೂ ಕೋಲೆ ಬಸವನ ಅವತಾರ ಮಾಡಿದ್ರು.

ಸಭೆ ಪ್ರಾರಂಭ ಆಯ್ತು. ಸಭಿಕರಲ್ಲಿ ಹಲವರಿಗೆ ವಿ.ಹೆಚ್.ಗೌಡರೇ ಅಧ್ಯಕ್ಷರಾಗಲಿ ಎನ್ನುವ ಅಭಿಪ್ರಾಯ ಇತ್ತು. ಅದುವರೆವಿಗೂ ಕ್ರಿಯಾಸಮಿತಿ ಅಧ್ಯಕ್ಷರಾಗಿದ್ದ ಗೌಡರಿಗೆ ದಿಢೀರನೆ ಕಣ್ಣುಬೇನೆ ಕಾಣಿಸಿಕೊಳ್ತು. ಹಾಮಾನಾ, ಹಂಪನಾ ಚೇಲನಾದ ಆತ 'ನನಗೆ ಹುಶಾರಿಲ್ಲ, ಬೇರೆ ಯಾರಾದ್ರೂ ಆಗ್ಲಿ 'ಅಂತ ಜಾರಿಕೊಂಡ. ಮುಂದಿನ ಸರದಿ ಭೈರಪ್ಪಗೆ ಬಂತು. ಪ್ರಸವ ಪ್ರವೀಣ ಭೈರಪ್ಪ ಎದ್ದು ನಿಂತು 'ನಾನು ಕಾದಂಬರಿಕಾರ. ತುರ್ತುಸ್ಥಿತೀಲಿ ನಾನು ನನ್ನ ಪಾಡಿಗೆ ಇದ್ದದ್ದಕ್ಕೆ ಪರ್ವ ದಂತಹ ಮಹಾಕೃತಿ ರಚಿಸಿದೆ. ಇಲ್ದೆ ಇದ್ರೆ ಕನ್ನಡ ಸಾಹಿತ್ಯ ಬರಡಾಗ್ತಿರ್ಲಿಲ್ವೆ?' ಅಂತ ಪ್ರಶ್ನೆಹಾಕಿದ್ರು. ಬಂಜೆಯಾಗಿದ್ದ ಕನ್ನಡ ತಾಯಿಗೆ ಗರ್ಭಕೊಟ್ಟ ಈ ಪುಣ್ಯಾತ್ಮ ಮುಂದುವರಿದು 'ನಾಳೆಯಿಂದ ನಾನು ಇನ್ನೊಂದು ಕಾದಂಬರಿ ಬರೆಯೋಕೆ ಪ್ರಾರಂಭಿಸ್ತೀನಿ. ಆದ್ದರಿಂದ ನಾನು ಅಧ್ಯಕ್ಷ ಆಗಲಾರೆ' ಅಂದ. ಪ್ರಸವಕ್ಕೆ ರೆಡಿಯಾಗಿದ್ದ ತುಂಬು ಗರ್ಭಿಣೀನ ಯಾರೂ ಬಲವಂತಿಸಲಿಲ್ಲ.

## ಸಾಹೇಬ್ರು ಕರೀತವ್ರೆ

ಕನ್ನಡಕ್ಕಾಗಿ ಹೋರಾಡ್ತೀನಿ, ಹಾರಾಡ್ತೀನಿ ಅಂತ ಕೂಗಾಡಿ ಪತ್ರಿಕೇಲಿ ಹೆಸರು, ಫೋಟೋ ಹಾಕಿಸಿಕೊಂಡ ಎಲ್ಲ ಪ್ರಚಾರಪ್ರಿಯ ಕಲಿಗಳೂ ನಸುಗುನ್ನಿ ಕಾಯಿ ತರಹ ಜಾರಿಕೊಂಡ್ರು. ಕೊನೆಗೆ ಅಧ್ಯಕ್ಷಗಿರಿ ಪ. ಮಲ್ಲೇಶ್ ಕೊರಳಿಗೆಬಿತ್ತು. ಪ. ಮಲ್ಲೇಶ್ ಎದ್ದುನಿಂತು 'ನಾಳೆ ಮೈಸೂರು ಬಂದ್' ಅಂದ್ರು. ಅಷ್ಟರಲ್ಲಿ ಪೊಲೀಸು ವ್ಯಾನು ಸಭೆ ನಡೆಯುತ್ತಿದ್ದ ಕೊಠಡಿಯ ಬಾಗಿಲಿಗೆ ಬಂತು. ದಡದಡ ಸಭಾಮಂದಿರಕ್ಕೆ ನುಗ್ಗಿದ ಪೊಲೀಸಿನವರು ಸಿಕ್ಕ ಸಿಕ್ಕವರನ್ನೆಲ್ಲ ಕುರಿಗಳ ತರಹ ವ್ಯಾನಿಗೆ ದಬ್ಬಿದ್ರು. ಲಕ್ಷ್ಮೀಪುರಂ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಬಿ.ಪಿ. ಸುರೇಶ್ ಅನ್ನೊ ಖೂಳ ತಾನೇ ನವಾಬ ಅನ್ನೊ ರೀತೀಲಿ ಮೆರ್ದ. ತಾನು ತಿನ್ತಾ ಇರೋದು ಇದೇ ಜನಗಳ ಅನ್ನ ಅನ್ನೋದನ್ನ ಮರ್‍ತ. ಚಳವಳಿಗಾರರ ಕತ್ತಿನಪಟ್ಟಿ ಹಿಡ್ದು ಹೀನಾಮಾನ ಬಯ್ತಾ ವ್ಯಾನಿಗೆ ದಬ್ದ. ಯುವ ವಕೀಲ ಮಹೇಶ್ ಇದನ್ನ ಪ್ರತಿಭಟಿಸಿದಾಗ ಕತ್ತಿನ ಪಟ್ಟಿ ಸೇವೆಯ ಜೊತೆಗೆ ಲಾಠಿ ಏಟೂ ಬಿತ್ತು. ಬಸ್ಸಿನಲ್ಲಿ ಜಾಗ ಕಾಯ್ದಿರಿಸಿ, ಕಾಲ ಕಳೆಯೋಕೇಂತ ಅಲ್ಲಿಗೆ ಬಂದಿದ್ದ ಬಿಜಾಪುರದ ದಳವಾಯಿ ಅನ್ನೊಬಡಪಾಯಿಗೂ ಇದೇ ಆಯ್ತು. ಬಸ್ಸಿನ ಚೀಟಿನ ತೋರ್ಸಿದ್ರೂ ಬಿಡ್ದೆ ವ್ಯಾನಿಗೆ ದಬ್ಬಿದ್ರು.

ಇದೆಲ್ಲದರ ನಡುವೆಯೂ ಒಂದು ಪವಾಡ ನಡೆಯಿತು. ಕನ್ನಡದ ಕಲಿಗಳಾದ ವಿ. ಹೆಚ್. ಗೌಡ. ಎಸ್.ಎಲ್.ಭೈರಪ್ಪ, ಜಿ.ಹೆಚ್. ನಾಯಕ ಮುಂತಾದವರು ತಮ್ಮ ಚೇಲಾಗಳ ಜೊತೆ ಅದಾವುದೊ ಮಾಯದಲ್ಲಿ ಸಭಾ ಕೊಠಡಿಯಿಂದ ಹೊರಕ್ಕೆ ತೂರಿಕೊಂಡಿದ್ರು. ಬನುಮಯ್ಯ

ಕಾಲೇಜಿನ ಆವರಣದಲ್ಲಿಯೇ,ಅವರೆಲ್ಲ ಪೊಲೀಸ್ ಪಡೆಗೆ ಕಾಣುವಂತೆ, ನಿಂತಿದ್ದರೂ ಅವರಾರ ಬಂಧನವೂ ಆಗಲಿಲ್ಲ. ಚಳವಳಿಗಾರರನ್ನೆಲ್ಲ ಒಮ್ಮೆಲೆ ಹಿಡಿಯಲು ಸಹಕರಿಸಿದ ಅವರಿಗೆ ಇದು ಸರ್ಕಾರದ ಬಳುವಳಿ ಇದ್ದರೂ ಇರಬಹುದು.

ಚಳವಳಿಗಾರರನ್ನು ಬಿರಿಯುವಂತೆ ಹೊತ್ತಿದ್ದ ಎಂಟು ಹತ್ತು ವ್ಯಾನು ಯಾವ ಯಾವುದೋ ದಿಕ್ಕಿಗೆ ಓಡಿದವು. ಒಂದು ಡಿ.ಐ.ಆರ್.ಗೆ ಬಂತು. ವ್ಯಾನಿನಲ್ಲಿದ್ದ ಇಬ್ಬರು ಪೊಲೀಸರು ಕೆಳಕ್ಕೆ ಹಾರಿ ಸರಕ್ಕನೆ ಬಾಗಿಲು ಮುಚ್ಚಿ ಬೀಗ ಹಾಕಿದ್ರು. 'ಬೀಗ ಯಾಕಾಕ್ತೀರ್ರಿ ನಾವೇನು ಕಳ್ರ?' ಅಂದದ್ದಕ್ಕೆ ಬಂದ ಉತ್ತರ 'ಕುಂತ್ಕಳ್ರಲೆ ತೆಪ್ಗೆ. ಏನ್ಮಾಡೋದೂಂತ ನಮಗ್‌ಗೊತ್ತಿದೆ'. ಐದು ಹತ್ತು ನಿಮಿಷ ಕಳೀತು, ಬಾಗಿಲು ತೆಗೀಲಿಲ್ಲ. ವ್ಯಾನಿನಲ್ಲಿ ೨೫ಜನ ಇದ್ರು. ಒಬ್ಬರನ್ನೊಬ್ಬರು ಒತ್ತಿ ಕುಳಿತು ನಿಂತು ಇದ್ರು. ಅಸಾಧ್ಯ ಸೆಖೆ. ಬೆವರು ಕಿತ್ತು ಹರಿಯುತ್ತಿತ್ತು. ಉಸಿರು ಕಟ್ಟಿದ ಹಾಗಾಗುತ್ತಿತ್ತು. ಸದ್ಯ ಕೆಳಕ್ಕೆ ಇಳಿದರೆ ಜೀವ ಬಂದೀತು ಅನ್ನಿಸುವ ಸ್ಥಿತಿ. ಪೊಲೀಸನವರು ಮಾತ್ರ ಆರಾಮಾಗಿ ಹರಟೆ ಕೊಚ್ತ ನಿಂತಿದ್ರು. ಒಬ್ಬನಿಗೆ ತಡೆಯಲಾಗಲಿಲ್ಲ. ಅಲ್ಲಿಂದಲೇ ಅಬ್ಬರಿಸಿದ್ರು: 'ರೀ ಪೊಲೀಸ್ನೋರೆ, ಇನ್ನು ಹದಿನೈದು ನಿಮಿಷಗಳಲ್ಲಿ ಬಾಗಿಲು ತೆಗೆದರೆ ಸರಿ. ಇಲ್ದಿದ್ರೆ ಪರಿಸ್ಥಿತಿ ನೆಟ್ಟಗಾಗೊಲ್ಲ.' ಅವರ ಅಬ್ಬರ ಕೆಲ್ಸ ಮಾಡ್ತು. ಪೊಲೀಸನವರು ಕಾರ್ಯೋನ್ಮುಖರಾದ್ರು. ಆದರೂ ಬೀಗದಕೈ ಇಲ್ಲ. ಲೈಟಿಲ್ಲ ಅಂತ ಸುಮಾರು ಹೊತ್ತು ಸತಾಯಿಸಿದ್ರು ಬಂದೂಕಧಾರಿಗಳಾದ ನಾಲ್ಕು ಪೊಲೀಸ್ ಪೇದೆಗಳು ವ್ಯಾನಿನ ಬಾಗಿಲ ಬಳಿ ನಿಂತ್ಕಂಡ್ರು. 'ಎಲ್ರೂ ಕೈ ಮೇಲಕ್ಕೆತ್ತಿ ಇಳೀಬೇಕು' ಬೀಗ ತೆಗೆಯುತ್ತಾ ಗರ್ಜಿಸಿದ ಒಬ್ಬ. ಚಳವಳಿಗಾರರನ್ನ ದರೋಡೆಕೋರರನ್ನ ಕಾಯುವಂತೆ ಕಾಯ್ತ ಒಂದು ದೊಡ್ಡ ಹಾಲಿನೊಳಕ್ಕೆ ತಂದ್ರು. ತಕ್ಷಣ ಆ ಹಾಲಿನ ಬಾಗಿಲು ಹಾಕಿ, ಬೀಗ ಹಚ್ಚಿ , ಹೊರಗಿನಿಂದ ಬಾಗಿಲಿಗೆ ಎರಡು ಅಡ್ಡ ಪಟ್ಟಿ ಜಡಿದ್ರು. ಈ ಎಲ್ಲ ಅವಮಾನಗಳನ್ನು ಸಹಿಸುತಿದ್ರೂ ಕೊಂಚ ನಿರಾಳವಾಗಿ ಉಸಿರಾಡಲು ಅವಕಾಶ ಸಿಕ್ತಲ್ಲ ಅಂತ ಅವರೆಲ್ಲ ಹಾಲಿನಲ್ಲಿ ನೆಲದ ಮೇಲೆ ಉರುಳಿಕೊಳ್ಳಿದ್ರು.

ಮತ್ತೆ ಕುತ್ತು ಬಂತು. ಒಬ್ಬ ಪೊಲೀಸು ಪ್ರತ್ಯಕ್ಷ ಆದ. ಚಳವಳಿಗಾರನೊಬ್ಬನ ಹೆಸರು ಹಿಡಿದು ಕೂಗ್ದ 'ಸಾಹೇಬ್ರು ಕರಿತಾವ್ರೆ' ಅಂತ ಹೇಳಿ ಹೊರಗೆ ನಿಂತಿದ್ದ ಜೀಪಿನಲ್ಲಿ ಕರ್ಕೊಂಡೋದ. ಎಲ್ಲಿಗೆ? ಯಾಕೆ? ಇಂತಹ ಪ್ರಶ್ನೆಗಳಿಗೆಲ್ಲ ಒಂದೇ ಉತ್ತರ-'ನಂಗೊತ್ತಿಲ್ಲ, ಮೇಲ್ನೋರು ಹೇಳವ್ರೆ'. ಚಳವಳಿಗಾರರನ್ನ ಕರೆದುಕೊಂಡು ಹೋದದ್ದು ಎಸ್.ಪಿ. ರೇವಣ ಸಿದ್ದಯ್ಯ ಹತ್ತಿರ ಅಲ್ಲ. ಅವರ ಆಜ್ಞೆ ಮೇರೆಗೆ ಯಾವು ಯಾವುದೋ ಠಾಣೆಗೆ.

ಪೊಲೀಸ್ ಠಾಣೆಯಲ್ಲಿ ಒಬ್ಬ ಸಾಧಾರಣ ಖೈದಿಯನ್ನ ತಪಾಸಣೆ ಮಾಡುವಂತೆ ಇವರಿಗೂ ಮಾಡಿದ್ರು. ಈ ಎಲ್ಲ ಹಿಂಸೆಗಳ ನಡುವೆಯೂ ಚಳವಳಿಗಾರರ ಸ್ಥೈರ್ಯ ಕುಗ್ಗಿರಲಿಲ್ಲ. ಠಾಣೆಯಲ್ಲಿ ಕೇಳಿದ ಪ್ರಶ್ನೆಗೆ ತಮ್ಮದೇ ಧಾಟಿಯಲ್ಲಿ ಉತ್ತರಿಸಿದರು.

"ಹೆಸರು?"

"ಕನ್ನಡ"

"ಹೆಹೆಹೆ...ಸರ್ರ್ಯಾಗೇಳಿಸಾ"

"ಸರ್ಯಾಗೇ ಹೇಳ್ತಿದೀನಿ"

"ಊರು?"

"ಕರ್ನಾಟಕ"

ಹೆಡ್ ಕಾನ್‌ಸ್ಟೇಬಲ್‌ಗೆ ಹುಚ್ಚಿಡ್ದಂಗಾಯ್ತು. ತನ್ನ ಶಿಷ್ಯನಿಗೆ ಕೇಳ್ದ-

"ಏನ್ಲಾ ಮಾಡೋದು?"

"ಅವ್ರೇಳ್ದಂಗೆ ಬರ್ಕಳಿ"

"ಅವ್ನಾಕಿರೋ ಪ್ಯಾಂಟು ಯಾವ್ದು ನೋಡು"

"ಕಾಕಿ ಇದ್ದಂಗದೆ ಸಾ"

"ಇದ್ದಂಗದೆ ಅಂತೀಯಲ್ಲ. ಸರ್ಯಾಗ್ನೋಡು"

ಪೇದೆ ಹತ್ತಿರ ಹೋದ, ತನ್ನ ಪ್ಯಾಂಟಿನ, ಚಳವಳಿಗಾರನ ಪ್ಯಾಂಟಿನ ಬಣ್ಣ ಹೋಲಿಸಿದ.

"ವಸಿ ಯಾತ್ವಾಸ ಇರಂಗದೆ"

"ಮಿಲ್ಟ್ರಿ ಕಾಕಿ ಇರ್ಬೇಕು ಸಾ"

"ಒಳಕ್ಕಾಕು ಇವನ್ನ"

ಚಳವಳಿಗಾರನನ್ನ ಹಾಕಿದ್ದು ಸುಮಾರು 3'X4' ಇದ್ದ ಸೆಲ್‌ಗೆ. ಚಳವಳಿಗಾರ ಪ್ರತಿಭಟಿಸಿದ. 'ಸೆಲ್‌ಗಾಕೋಕೆ ನಾನು ಕದ್ದಿಲ್ಲ,' ಅಂದ. 'ಮ್ಯಾಲ್ನೋರ್ಗೇಳಿ' ಅಂದ ಪೇದೆ. ಸೆಲ್ ಬಾಗಿಲು ಮುಚ್ಚಿ ಬೀಗ ಹಾಕ್ದ.

ಕೋಪ ಅವಮಾನದಿಂದ ಇಡೀ ದೇಹ ಕಂಪಿಸ್ತು. ಅಸಹಾಯಕತೆಯಿಂದ ನಿಂತಿದ್ದ ಅವನಿಗೆ ಹೇಲು ಉಚ್ಚೆಯ ವಾಸನೆ ಬಗ್ಗನೆ ಮೂಗಿಗೆ ಬಡೀತು. ಸುತ್ತ ಕಣ್ಣಾಡಿಸಿದ. ಒಂದು ಮೂಲೆಯಲ್ಲಿ ಪುಟ್ಟ ಕಕ್ಕಸ್ಸಿತ್ತು. ಅದರ ಮೇಲೆಲ್ಲ ಹೇಲು ಹರಡಿತ್ತು ವಾಕರಿಕೆ ಬರುವಂತಾಯ್ತು. ತನ್ನೆಲ್ಲ ಶಕ್ತಿ ಒಂದು ಗೂಡಿಸಿ ಕೂಗಿದ 'ಗಬ್ಬು ವಾಸ್ನೆ ಹೊಡೀತಿದೆ. ನಂಗೆ ತಡೆಯೋಕಾಗೋಲ್ಲ.'

ವಾಸನೆ ಕಡಿಮೆ ಮಾಡೋಕೆ ಫಿನೈಲ್ ಇರ್ಲಿಲ್ಲ. ಪೇದೆ ಬಕೀಟಿನಲ್ಲಿ ನೀರು ತಂದ, ಪಟ್ ಅಂತ ಕಕ್ಕಸ್ಸಿಗೆ ಎರುಚ್ದ. ಮೂರು ನಾಲ್ಕು ಬಕೀಟು ನೀರನ್ನು ಹಿಂಗೆ ಎರಚಿದ್ದರ ಪರಿಣಾಮ ಒಂದು ಕಡೆ ಮಾತ್ರ ಇದ್ದ ಹೇಲು ಇಡೀ ಸೆಲ್‌ಗೆ ಹರಡ್ಕಂತು. ಒಣಗಿದ್ದ ನೆಲ ತೇವ ಆಯ್ತು. ಕುಳಿತುಕೊಳ್ಳಲೂ ಜಾಗ ಇಲ್ಲದಂತಾಯ್ತು. ಸುಮಾರು ಹೊತ್ತು ನಿಂತೇ ಇದ್ದ, ಸುಸ್ತಾಯ್ತು. ಮೆಲ್ಲಗೆ ಗೋಡೆ ಒರಗಿಕೊಂಡ. ಗೋಡೆನ ಆಧುನಿಕ ಚಿತ್ರಕಲೆ ಅಲಂಕರಿಸಿತ್ತು. ತಿಗಣೆಗಳನ್ನು ಹೊಸಕಿ ಕೊಂದದ್ದರ ಪರಿಣಾಮವಾಗಿ ಇಡೀ ಗೋಡೆಯಲ್ಲಿ ರಕ್ತದ ಕಲೆ ಇತ್ತು. ಪಂಚೇಂದ್ರಿಯಗಳಿಗೂ ಶಿಕ್ಷೆಆಗಲಿ ಎಂದೇ ಅಂತಹ ಕೊಠಡಿಯಲ್ಲಿ ಕೂಡಿ ಹಾಕಿದಂತಿತ್ತು. ನಿಂತು, ಒರಗಿ ಸಾಕಾದ ಚಳವಳಿಗಾರ ಒಂದು ಮೂಲೆಯಲ್ಲಿ ಕುಕ್ಕರುಗಾಲಿನಲ್ಲಿ ಕುಕ್ಕರಿಸಿದ. ಎದುರು ಸೆಲ್‌ನಲ್ಲಿ 14-15ರ ಹುಡುಗಿ ಜೋರಾಗಿ ಅಳ್ತಾ ಇತ್ತು. ಕಣ್ಣು ಮುಚ್ಚಲು ಸಾಧ್ಯವಾಗದ ಆ ಸ್ಥಿತಿಯಲ್ಲಿ ಮುತ್ತುತ್ತಿದ್ದ ತಿಗಣೆ, ಸೊಳ್ಳೆಗಳಿಂದ ತಪ್ಪಿಸಿಕೊಳ್ಳಲೇ ಭಯಂಕರ ಹೋರಾಟಮಾಡಬೇಕಾಯ್ತು.

ಬೆಳಗಿನ ಜಾವ ಇಡೀರಾತ್ರಿ ನಿದ್ದೆಗೆಟ್ಟಿದ್ದ ಅವನಿಗೆ ಆಗತಾನೆ ಠಾಣೆಗೆ ಬಂದಿದ್ದ ಪೇದೆಯೊಬ್ಬನ ಸುಪ್ರಭಾತಬಂತು -"ಯಾವನ್ಲಾ ನೀನು?"

"ಮರ್‍ಯಾದೆ ಕೊಟ್ಮಾತಾಡು. ಹಿಂಗೆಲ್ಲ ಮಾತಾಡಿದ್ರೆ ಸರಿ ಇರೊಲ್ಲ"

"ಓಹೊಹೊ ಮರ್‍ಯಾದೆ ಪಡ್ಯಾಕೆ ನೀನು ಇಲ್ಲಿಗೆ ಬಂದಿದ್ದೀಯಾ?"

-ಈ ಲೇವಡಿಗೆ ಉತ್ತರಿಸುವ ಕಸುವನ್ನ ಕಳೆದುಕೊಂಡಿದ್ದ ಚಳವಳಿಗಾರ.

ಬೆಳಗ್ಗೆ ಏಳರ ಸಮಯಕ್ಕೆ ಟೀ ಕೇಳಿದ. ಕೊಡಲಿಲ್ಲ. ಕಕ್ಕಸ್ಸಿಗೆ ಹೋಗಬೇಕು ಅಂದ ಅಲ್ಲೆ ಹೋಗು ಅಂದ್ರು. ಎದುರ ಸೆಲ್‌ನಲ್ಲಿ ಬೆಳೆದ ಹುಡುಗಿ ಇದೆ. ಆಕೆಯ ಎದುರಿನಲ್ಲಿ ಕಕ್ಕಸ್ಸಿಗೆ ಕೂರುವುದು ಹೇಗೆ? ಅಸಾಧ್ಯ ಕೋಪ ಬಂತು. 'ನಿಮಗೇನು ಮಾನಮರ್‍ಯಾದೆ ಇಲ್ವ? ಹೆಂಗಸರ ಮುಂದೆಲ್ಲ ಹೇಗೆ ಕೂರೋದು? ಮನುಷ್ಯತ್ವನೇ ಇಲ್ಲದೋರು ನೀವು' ಅಂತ ಜೋರು ಮಾಡಿದ. ಜೋರಿಗೆ ಬೆಲೆ ಬಂತು. ಹೊರಕ್ಕೆ ಹೋಗಿ ಬಂದು ಸೆಲ್‌ಗೋಡೆ ಒರಗಿ ಕುಳಿತ. ಇಬ್ಬರು ಪೇದೆಗಳು ಪ್ರತ್ಯಕ್ಷ ಆದ್ರು, ಯಾಕೇಂತ ಕೇಳ್ದ, 'ಫೋಟೋ ತೆಗುಸ್ಬೇಕು' ಅಂದ್ರು. 'ನಾನು ಕಳ್ಳ ಅಲ್ಲ. ಬರೋಲ್ಲ' ಅಂದ. ಅವರಿಬ್ಬರೂ ಗೂಳಿ ತರ ಸೆಲ್‌ಗೆ ನುಗ್ಗಿದ್ರು. ಅವನ್ನ ಅನಾಮತ್ ಎತ್ತಿ ಹೊರಕ್ಕೆ ತಂದು ಕ್ಲಿಕ್ ಅನ್ಸಿದ್ರು, ಮತ್ತೆ ಸೆಲ್ಲಿಗೆ ತಳ್ಳಿದ್ರು.

ಹನ್ನೆರಡು ಘಂಟೆಯ ಸುಮಾರಿಗೆ ಕಲಸಿದ ಸಾರನ್ನ ತಂದ್ರು. ಅದನ್ನ ಹಾಕಿದ್ದ ತಟ್ಟೆ ನೋಡಿದ್ರೇ ವಾಕರಿಕೆ ಬರ್‍ತಿತ್ತು. ಅನ್ನ ನಿರಾಕರಿಸಿದ, ಉಪವಾಸ ಕೈಗೊಂಡ. ಸಂಜೆ4-30ಕ್ಕೆ ಕೋರ್ಟಿಗೆ ಕರೆದುಕೊಂಡು ಬಂದ್ರು. ಬಿಡುಗಡೆ ಆಗಲು ಜಾಮೀನು ಬೇಕಿತ್ತು. ಆ ಹೊತ್ತಿನಲ್ಲಿ ಜಾಮೀನು ಸಿಗುವಂತಿರಲಿಲ್ಲ. 1,000ರೂಪಾಯಿಯ ಸ್ವಂತ ಮುಚ್ಚಳಿಕೆ ಮೇಲೆ ಬಿಟ್ರು. ಮಾರನೆ ಬೆಳಿಗ್ಗೆ 10.30ಕ್ಕೆ ಮತ್ತೆ ಮುನ್ಸಿಫ್ ಕೋರ್ಟಿಗೆ ಬರಲು ಹೇಳಿದ್ರು. ಅಷ್ಟು ಮಾತ್ರ ಅಲ್ಲ. ಮೂವರು ಚಳವಳಿಗಾರರು ಪ್ರತಿದಿನ ಸಂಜೆ ಪೊಲೀಸ್ ಠಾಣೆಗೆ ಹೋಗಿ ಸಹಿ ಹಾಕಬೇಕೆಂದು ಹೇಳಿದ್ರು. ಸಮಾಜದ್ರೋಹಿಗಳಿಗೆ, ಪುಂಡುಪೋಕರಿಗಳಿಗೆ ಮಾತ್ರ ಮೀಸಲಾಗಿದ್ದ ಈ ಪದ್ಧತಿ, ಪೊಲಿಸ್ ಜಿಲ್ಲಾಧಿಕಾರಿಯ ಮೆಹನತ್ತಿನಿಂದಾಗಿ ಸಭ್ಯರಿಗೂ ಬಂತು.

ಮಾರನೆ ದಿನ. ಸುಮಾರು ಇಪ್ಪತ್ತು ಚಳವಳಿಗಾರರು ಕೋರ್ಟಿನ ಬಳಿ ಬಂದ್ರು. ಇಡೀ ಕೋರ್ಟಿನ ಸುತ್ತ ಶಸ್ತ್ರಸಜ್ಜಿತ ಪೊಲೀಸು. ಅವರ ವ್ಯಾನು ಜೀಪು! ಪ್ರತಿಯೊಬ್ಬ ಚಳವಳಿಗಾರನನ್ನು ಹಿಂಬಾಲಿಸಲು ಇಬ್ಬರು ಮಫ್ತಿ ಪೊಲೀಸು. ಕೋರ್ಟ್‌ಹಾಲ್ ಗೋಗಲಿ, ಕ್ಯಾಂಟೀನ್‌ಗೋಗಲಿ, ಉಚ್ಚೆ ಹುಯ್ಯಲೋಗಲಿ ಆ ಭೂತಗಳು ಬೆಂಬಿಡುತ್ತಿರಲಿಲ್ಲ. ಮತ್ತೆ ತಮ್ಮನ್ನ ಯಾವುದಾದರೂ ಕಾರಣದ ಮೇಲೆ ಬಂಧಿಸಿ. ಹಿಂಸಿಸುವುದರಲ್ಲಿ ಅನುಮಾನವಿರಲಿಲ್ಲ. ಇದಕ್ಕೆ ಪೂರಕವಾಗಿ ಚಾರ್ಜ್‌ಶೀಟಿನಲ್ಲಿ ಬಂಧಿತರ ಹೆಸರನ್ನು ನಂತರ ತಿಳಿಸುವುದಾಗಿ ನಮೂದಿಸಲಾಗಿತ್ತು. ದಿಗಿಲು ಬೀಳಿಸುವ ಈ ವಾತಾವರಣದಲ್ಲೂ ಯುವಕ ಲಾಯರೊಬ್ಬರಿಗೆ ಯಾರೋ ಪರಿಸ್ಥಿತಿ ತಿಳಿಸಿದ್ರು. ಕೋರ್ಟುಗಳಿಗೆ ರಜ ಇದ್ದುದರಿಂದ ಹೆಚ್ಚು ವಕೀಲರುಗಳಿರಲಿಲ್ಲ. ಇದ್ದವರೆಲ್ಲ ಕ್ಷಣಮಾತ್ರದಲ್ಲಿ ಸೇರಿ ಬಾರ್ ಅಸೋಸಿಯೇಷನ್ ಸಭೆ ಕರುದ್ರು. ನಾಗರೀಕ ಹಕ್ಕುಗಳ ದಮನ ಕೋರ್ಟಿನ ಆವರಣದಲ್ಲೇ ನಡೆಯುತ್ತಿರುವುದನ್ನು ಖಂಡಿಸಿ ನಿರ್ಣಯ ಮಾಡಿದ್ರು.

## ದಿಗ್ಭ್ರಮೆ !

ಇಡೀ ವಕೀಲ ವೃಂದ ನ್ಯಾಯಾಧೀಶರ ಮುಂದೆ ಹೋಗಿ ಪರಿಸ್ಥಿತಿಯ ಗಂಭೀರತೆಯನ್ನು ವಿವರಿಸಿದರು. ಪೊಲೀಸರ ಕುಟಿಲತೆಯ ಅರಿವೇ ಇಲ್ಲದ ನ್ಯಾಯಾಧೀಶರಿಗೆ ದಿಗ್ಭ್ರಮೆ ಆಯ್ತು. ತಕ್ಷಣವೇ ಅಲ್ಲಿಂದ ಹೋಗುವಂತೆ ಪೊಲೀಸರಿಗೆ ಅಜ್ಞೆ ಮಾಡಿದರು. ಒಬ್ಬೊಬ್ಬ ವಕೀಲರು ನಿಂತು ಅವರನ್ನೆಲ್ಲ ಕ್ಷೇಮವಾಗಿ ಮನೆ ತಲುಪಿಸುವ ಜವಾಬ್ದಾರಿ ವಹಿಸಿಕೊಂಡರು. ಇಷ್ಟೆಲ್ಲಾ ಆದರೂ ಮಫ್ತಿ ಪೊಲೀಸರು ಅಲ್ಲೇ ಇದ್ದರು. ಕೋರ್ಟಿನ ಹತ್ತಿರವೇ ಇದ್ದ ಪೊಲೀಸ್‌ಪಡೆ ಸ್ವಲ್ಪ ದೂರ ಹೋಗಿ ನಿಂತಿತಷ್ಟೆ. ಇಷ್ಟೆಲ್ಲ ಹತ್ತು ಹದಿನೈದು ನಿಮಿಷಗಳಲ್ಲಿ ನಡೆಯಿತು. ಈ ಗಲಿಬಿಲಿಯಲ್ಲಿ ಪೊಲೀಸರ ಗಮನ ಕೊಂಚ ಬೇರೆಡೆ ಹರಿದಿತ್ತು. ಈ ಸಮಯ ಬಿಟ್ಟರೆ ಬೇರೆ ಸಿಗೋಲ್ಲ. ವಕೀಲರುಗಳ, ನ್ಯಾಯಾಧೀಶರ ನೆರವಿದ್ದರೂ ಯಾವುದಾದರೂ ನೆಪದಿಂದ ಮತ್ತೆ ಬಂಧಿಸಿ ಹಿಂಸಿಸುವುದರಲ್ಲಿ ಸಂಶಯ ಇಲ್ಲ ಅನ್ನಿಸಿತು ಚಳವಳಿಗಾರರಿಗೆ. ತಕ್ಷಣ ಕಾರ್ಯೋನ್ಮುಖರಾದರು. ಪ್ರಾಣಭಯದಿಂದ ತತ್ತರಿಸುತ್ತಿದ್ದ ಅವರಿಗೆ ಯಾವ ಗೋಡೆ ಎಷ್ಟು ಎತ್ತರ ಎಂಬುದರ ಪರಿವೆಯೇ ಬರಲಿಲ್ಲ. ಮಿಂಚಿನಂತೆ ಮಾಯ ಆದರು. ಗೋಡೆ ಹಾರಲು ಕೊಂಚ ತಡಮಾಡಿದ ಮಳಲಿ ವಸಂತಕುಮಾರ್ ಮತ್ತೆ ಪೊಲೀಸರ ವಶ ಆದ್ರು. ಅವರು ಎಲ್ಲಿದ್ದಾರೆ ಎಂಬುದು ಯಾರಿಗೂ ತಿಳಿದಿಲ್ಲದಿರಲಿಲ್ಲ.

ಈಗ ಪರದಾಟದ ಸರದಿ ಪೊಲೀಸಿನವರದಾಯ್ತು. ಪ್ರತಿಯೊಬ್ಬ ಚಳವಳಿಗಾರನ ಮನೆಯ ಮುಂದೆಯೂ ಇಬ್ಬರು ಮೂವರು ಕಾವಲು. ಕನಿಷ್ಠಪಕ್ಷ ಅರ್ಧಘಂಟೆಗೊಮ್ಮೆ ಜೀಪಿನಲ್ಲಿ ಅವರ ಮನೆಯ ಮುಂದೆ ಸುಳಿವ ಪೊಲೀಸ್ ಅಧಿಕಾರಿ; ಅವನ ಪ್ರಶ್ನೆ '...ಬಂದ್ರ?' ದುಡಿಯುತ್ತಿರುವ ಗಂಡಸು ನಾಪತ್ತೆಯಾಗಿದ್ದಾನಲ್ಲ ಎಂದು ಕೊರಗುತ್ತಿರುವ ಮನೆಮಂದಿಗೆ ಪೊಲೀಸರ ಈ ಕ್ರೂರ ಪ್ರಶ್ನೆ; ಕಿರುಕುಳ.

## ನೊಂದ ಕರುಳಿನ ಪ್ರಶ್ನೆ

ಇದ್ದ ಒಬ್ಬನೇ ಮಗ, ಧಿಡೀರನೆ ಕಣ್ಮರೆಯಾದದ್ದನ್ನು ತಿಳಿದು ಪೊಲೀಸರು ಆತನಿಗೆ ಕೊಟ್ಟ ಕಿರುಕುಳ ಕೇಳಿ ನೊಂದ ತಾಯಿಯೊಬ್ಬಳ ಪ್ರಶ್ನೆ;

"ನನ್ಮಗನ್ನ ಅರೆಸ್ಟ್ ಮಾಡಿದಾರೆ ಅಂತ ಪೇಪರ್ನಲ್ಲಿ ಬಂದಿದೆ. ಪೊಲೀಸ್ನೋರೇ ಬಂದು ಎಲ್ಲಿ ಅಂತ ಕೇಳ್ತಿದಾರೆ. ಅವ್ನ ಸಾಯ್ಸಿಗೀಯ್ಸಿ ಏನಾದ್ರೂ ಹಿಂಗೆ ಕೇಳ್ತಿದಾರಾ?"

ಗಳಗಳ ಕಣ್ಣೀರು ಸುರಿಸುತ್ತ ಕೇಳುವ ಕರುಳಿನ ಪ್ರಶ್ನೆಗೆ ಉತ್ತರ ಏನು?

"ಇಷ್ಟೊಂದು ಪೊಲೀಸ್ನೋರು ತಿರುಗಿದ್ರೂ, ಕಿರುಕುಳ ಕೊಡ್ತಿದ್ರೂ ಎಲ್ರೂ ಸುಮ್ನಿದಾರೆ. ನಮ್ಮನೆ ಹತ್ರ ಸುಳಿಯೋಕೆ ಭಯ ಬೀಳ್ತಿದಾರೆ. ಯಾರಿಗೂ ಬೇಡವಾದ ಕನ್ನಡ ಇವರಿಗೆ ಮಾತ್ರ ಯಾಕೆ ಬೇಕಿತ್ತು. ಅವರ ಮಕ್ಕಳಿಗೆ ತೊಂದರೆ ಆದ ಹಾಗೆ ನಮ್ಮ ಮಕ್ಕಳಿಗೂ ಆಗ್ತಿತ್ತು. ಸುಮ್ನಿದ್ರಾಗ್ತಿರ್ಲಿಲ್ವ?"

ಗಂಡನ ದಾರಿ ಕಾಯ್ತಾ ಕುಳಿತಿರುವ ಒಬ್ಬಾಕೆಯ ಪ್ರಶ್ನೆ.

ಈ ದುಃಖ, ಪ್ರಶ್ನೆಗಳಿಗೆ ಉತ್ತರ ಏನು? ಎಲ್ಲಿ? ಇಡೀ ಮೈಸೂರಿನಲ್ಲಿ ಒಂದು ಸುದ್ದಿ ಇದೆ. ಗುಂಡೂರಾವ್ ಮಾನಸ ಗಂಗೋತ್ರಿಗೆ ಬಂದಿದ್ದಾಗ ಈ ಚಳವಳಿಗಾರರು ಆತ ಭಾಷಣ ಮಾಡದಂತೆ ತಡೆದು ಘೇರಾವೊ ಮಾಡಿದ್ರು. ತನಗೆ ಅವಮಾನ ಆಯ್ತೂಂತ ಗುಂಡೂರಾವ್ ಪೊಲೀಸ್ ಜಿಲ್ಲಾಧಿಕಾರಿ ರೇವಣಸಿದ್ದಯ್ಯ, ಸಹ ಪೊಲೀಸ್ ಅಧಿಕಾರಿ ಷಫಿ ಸಿದ್ನಾಳ್ ಹಾಗೂ ಸರ್ಕಲ್ ಇನ್‌ಸ್ಪೆಕ್ಟರ್ ವಿಶ್ವೇಶ್ವರಯ್ಯ ಅವರನ್ನ ಕರ್‍ಸಿ ಛೀಮಾರಿ ಹಾಕಿದ್ರು. ತಮ್ಮ ಮೇಲೆ ಬಂದಿರೋ ಕಳಂಕ ಕಳ್ಕಂಡು ಗುಂಡೂರಾಯರ ಕೃಪಾದೃಷ್ಟಿಗೆ ಪಾತ್ರರಾಗಬೇಕೂಂತ ಹೀಗೆಲ್ಲ ಮಾಡ್ತಿದಾರೆ.

ಪೊಲೀಸಿನವರಿಗೆ ಸಂಬಳ ಕೊಡೋರು ಜನ. ಗುಂಡೂರಾವ್ ಅವರಪ್ಪನ ಮನೆಯಿಂದ ತಂದು ಕೊಡ್ತಿಲ್ಲ. ಯಾರದೋ ಮಾತಿಗೆ ಕಟ್ಟುಬಿದ್ದು, ಅವರ ಮುಲಾಜಿಗಾಗಿ ಸಭ್ಯ ಚಳವಳಿಗಾರರನ್ನ ಕಳ್ಳಕಾಕರ ತರಹ ನಡೆಯಿಸಿಕೊಳ್ಳಬಾರದು. ಇಲ್ಲವದಾಲ್ಲಿ ಇಡೀ ಜನಸ್ತೋಮ ಪೊಲೀಸಿನವರ ವಿರುದ್ಧ ದಂಗೆ ಏಳುವುದು ಅನಿವಾರ್ಯ ಆದೀತು.

# ಪ್ರಗತಿರಂಗದ ಒಂಟಿ ಕುದುರೆ

**ವಸಂತ್ ಮೊಟಾಲಿಯ**

ರಾಮದಾಸ್ ಯಾವತ್ತೂ ಆತ್ಮ ಸಾಕ್ಷಿ ಕೊಂದುಕೊಂಡವರಲ್ಲ. ತಮಗೆ ಅನ್ನಿಸಿದ್ದನ್ನು ನೇರವಾಗಿ ಹೇಳಿಬಿಡುವ ನಿಷ್ಠೂರತೆ ಅವರಲ್ಲಿತ್ತು. ಲಂಕೇಶ್‌ರ ಒಡನಾಡಿಗಳಾದ ನಂಜುಂಡಸ್ವಾಮಿ, ತೇಜಸ್ವಿ ನಿರ್ಗಮನದ ಆತಂಕದ ಖಿನ್ನತೆಗಳನ್ನು ಕನವರಿಸುತ್ತಿರುವಾಗಾಲೇ ನಮ್ಮ ಒಡನಾಟದ ಸಂಗಾತಿ, ಅಪ್ಪಟ ವಿಚಾರವಾದಿ ಪ್ರೊ. ರಾಮದಾಸ್ ನಿರ್ಗಮಿಸಿರುವುದು ನಮ್ಮ ಖಿನ್ನತೆಯನ್ನು ಇಮ್ಮಡಿಗೊಳಿಸಿದೆ. ಈ ನಾಲ್ವರ ಬೌದ್ಧಿಕಶಕ್ತಿಯ ಅನನ್ಯತೆಯನ್ನು ಯಾರೂ ತುಂಬಲಾಗುವುದಿಲ್ಲ.

ವಿಸ್ಮಯದ ಹಕ್ಕಿ ಪೂರ್ಣಚಂದ್ರ ತೇಜಸ್ವಿ, ರೆಕ್ಕೆ ಬಡಿದುಕೊಳ್ಳುತ್ತಲೇ ಕಣ್ಮರೆಯಾಗಿದ್ದು ಇನ್ನೂ ಅರಗಿಸಿಕೊಳ್ಳಲಾಗಿಲ್ಲ. ಆವತ್ತು ಕಣ್ಣ ಕೊನೆಯಲ್ಲಿ ಹರಿದ ತೇವದ ಪಸೆ ಆರಿಯೇ ಇಲ್ಲ. ಈಗ ಮತ್ತೊಂದು ಅನಿಷ್ಟದ ಘಳಿಗೆ ಅನಿರೀಕ್ಷಿತವಾಗಿ ಬಂದು ಹೋಗಿದೆ. ಪ್ರೊ. ಕೆ.ರಾಮದಾಸ್ ಕೂಡ ಭವಲೋಕದ ಕೊಂಡಿ ಕಳಚಿ ಟಾಟಾ ಹೇಳಿ ಹೊರಟುಬಿಟ್ಟಿದ್ದಾರೆ.

## ಪ್ರಗತಿರಂಗದ ಕೊನೆಯ ಕೊಂಡಿ

ಕನ್ನಡ ನಾಡಿಗೆ ಶಿವಮೊಗ್ಗ ಜಿಲ್ಲೆ ಕೊಟ್ಟ ಕೊಡುಗೆ ಅಗಣಿತ. ನಾಡಿನ ಪ್ರಗತಿಪರ ಹೋರಾಟಗಳೆಲ್ಲಾ ಹುಟ್ಟಿಕೊಂಡಿದ್ದೇ ಇಲ್ಲಿ. ಶಾಂತವೇರಿ ಗೋಪಾಲಗೌಡ, ನಂಜುಂಡಸ್ವಾಮಿ ತನಕ ಸಮಾಜವಾದಿ ಚಳವಳಿ ಬಿತ್ತಿ ಬೆಳೆದ ಜಿಲ್ಲೆಯದು.

ಪ್ರಗತಿಪರ ಚಿಂತನೆಗಳಿಗಂತೂ ಶಿವಮೊಗ್ಗ ತವರೇ ಆಗಿತ್ತು. ವಿಶ್ವಮಾನವ ಸಂದೇಶದ ಕುವೆಂಪು, ಪ್ರಗತಿಪರ ಚಳವಳಿಯ ಹಾರ್ಟು ಅಂತಲೇ ಹೆಸರಾದ ಲಂಕೇಶ್ ಮೇಷ್ಟ್ರು, ಮೌನ ಗಾರುಡಿಗ ತೇಜಸ್ವಿ ಸಾಲಿನಲ್ಲೇ ನಿಲ್ಲೋರು ನಮ್ಮ ಪ್ರೊಫೆಸರ್ ರಾಮದಾಸ್.

ದೂರದ ಸಾಗರ ಹುಟ್ಟಿದೂರಾದರೂ ಬದುಕು ಸೆಳೆದುಕೊಂಡು ಬಂದಿದ್ದು ಮೈಸೂರಿಗೆ. ಇಲ್ಲಿನ ಅವರ ಮನೆ ಈ ನಾಡಿನ ಎಲ್ಲಾ ಪ್ರಗತಿಪರ ಚಳವಳಿಗೂ ಸಾಕ್ಷಿಯಾಗಿ ನಿಂತಿದೆ. ರಾಜ್ಯದ ಎಲ್ಲಾ ಹಿರಿಕಿರಿಯ ಪ್ರಗತಿಪರ ಸಂಘಟನೆಗಳು ನೇರವಾಗಿ ರಾಮದಾಸ್‌ರೊಂದಿಗೆ ಸಂಪರ್ಕದಲ್ಲಿದ್ದವು. ಅವಕ್ಕೆಲ್ಲಾ ರಾಮದಾಸ್ ಅಕ್ಷರಶಃ ಜೀವಸೆಲೆಯಾಗಿದ್ದರು.

### ರಾಮದಾಸ ಅಲ್ಲ ಲಂಕೇಶದಾಸ...

ಹಾಗಂತ ಒಮ್ಮೆ ಚಂಪಾ ರಾಮದಾಸ್ ವಿರುದ್ಧ ಮಾತನಾಡಿದ್ದರು. ಇದಕ್ಕೆ ಕಾರಣವೂ ಇಲ್ಲದಿಲ್ಲ. ರಾಮದಾಸ್ ಲಂಕೇಶ್‌ರನ್ನು ಅತ್ಯಂತ ಆಪ್ತವಾಗಿ ಪ್ರೀತಿಸುತ್ತಿದ್ದರು. ಅಕ್ಷರಶಃ ಲಂಕೇಶರ ಹಿಂಬಾಲಕರೂ ಆಗಿದ್ದರು. ಅಷ್ಟೇ ಅಲ್ಲ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಒಂದೊಮ್ಮೆ ಲಂಕೇಶರ ವಿದ್ಯಾರ್ಥಿಯೂ ಆಗಿದ್ದರು. ಚಂಪಾರ ಆ ಮಾತನ್ನು ರಾಮದಾಸ್ ಬಹಳ ಹೆಮ್ಮೆಯಿಂದಲೇ ಸ್ವೀಕಾರ ಮಾಡಿದ್ದರು.

ಹೌದು ನಾನು ಲಂಕೇಶರ ಶಿಷ್ಯನೇ.... ಅವರು ನನ್ನ ಮಾನಸ ಗುರುಗಳು. ಇದರಲ್ಲಿ ಅತಿಶಯವೇನಿದೆ? ಅಂತ ಅವರೇ ಪ್ರಶ್ನೆ ಮಾಡಿದ್ದರು. ಲಂಕೇಶರು ಪ್ರಗತಿರಂಗ ಮಾಡಿ ರಾಜ್ಯದ ಮೂಲೆ ಮೂಲೆಗೆ ಸಂಘಟನಾತ್ಮಕವಾಗಿ ಪ್ರವಾಸ ಮಾಡಿದರು. ಆವಾಗೆಲ್ಲಾ ರಾಮದಾಸ್‌ರು ಜೊತೆಯಲ್ಲಿರಲೇಬೇಕು. ಅದಕ್ಕಾಗಿ ತಮ್ಮೆಲ್ಲಾ ಕೆಲಸ ಕಾರ್ಯಗಳನ್ನು ಬದಿಗಿಟ್ಟು ತಮ್ಮನ್ನು ತಾವೇ ಅರ್ಪಿಸಿಕೊಂಡರು. ಆ ನಂತರ ಸ್ವಾರ್ಥ ರಾಜಕಾರಣದ ನೆರಳಿನಲ್ಲಿ ಪ್ರಗತಿರಂಗ ಏಗಲಾಗಲಿಲ್ಲ. ಲಂಕೇಶರು ಪ್ರಗತಿರಂಗಕ್ಕೊಂದು ವಿರಾಮ ಹಾಕಿ ಪತ್ರಿಕೆಯತ್ತ ಗಮನ ಹರಿಸಿದರು. ಆದರೆ ರಾಮದಾಸ್ ಮಾತ್ರ ತಮ್ಮ ಬದುಕಿನ ತೀರಾ ಕೊನೆಯ ದಿನಗಳವರೆಗೂ ತಮ್ಮೆಲ್ಲಾ ಹೇಳಿಕೆಗಳನ್ನು ಪ್ರಗತಿರಂಗದ ಬ್ಯಾನರಿನಿಂದಲೇ ಕೊಡುತ್ತಿದ್ದರು. ಇದು ಪ್ರಗತಿರಂಗದ ಬಗ್ಗೆ ಅವರಿಗಿದ್ದ ಕಾಳಜಿಯನ್ನು ತೋರಿಸುತ್ತದೆ.

### ಕರ್ನಾಟಕದ ಜಾರ್ಜ್‌ಫರ್ನಾಂಡಿಸ್....

ಕರ್ನಾಟಕದವರೇ ಆದ ಮಾಜಿ ರಕ್ಷಣಾ ಸಚಿವ ಜಾರ್ಜ್‌ಫರ್ನಾಂಡಿಸ್‌ಗೂ ರಾಮದಾಸ್‌ರಿಗೂ ಬಹಳ ಹಳೇ ಗೆಳೆತನ. ತುರ್ತು ಪರಿಸ್ಥಿತಿಯ ದಿನಗಳಲ್ಲಿ ಇಂದಿರಾ ಗಾಂಧಿಯವರನ್ನು ಹೀನಾಮಾನವಾಗಿ ತೆಗಳುತ್ತಿದ್ದ ಜಾರ್ಜ್‌ರ ಭಾಷಣ ಅಂದಿನ ದಿನಗಳಲ್ಲಿ ಫೈರ್‌ಬ್ರಾಂಡ್ ಅಂತಲೇ ಜನಪ್ರಿಯವಾಗಿತ್ತು. ಅವರ ಭಾಷಣಗಳಿಗೆ ಸಾವಿರಾರು ಜನ ಗುಂಪುಗಟ್ಟುತ್ತಿದ್ದರು.

ಒಮ್ಮೆ ರಾಮದಾಸ್ ಅವರಿಗೆ "ರ್‍ರೀ ಜಾರ್ಜ್ ನೀವು ತುಂಬಾ ಚೆನ್ನಾಗಿ ಮಾತಾಡ್ತಿರ್‍ರೀ" ಅಂದರಂತೆ. ಸೇರಿಗೆ ಸವ್ವಾ ಸೇರಿನಂತೆ ಜಾರ್ಜ್ ಕೂಡ ರಾಮ್‌ದಾಸ್‌ಗೆ, "ನೀವೂ ಚೆನ್ನಾಗಿ ಬೈತೀರಂತೆ, ನೀವು ಕರ್ನಾಟಕದ ಜಾರ್ಜ್‌ಫರ್ನಾಂಡಿಸ್" ಎಂದಾಗ ರಾಮದಾಸರೇನೂ ಬೀಗಲಿಲ್ಲ.

ಲಂಕೇಶ್ ಪತ್ರಿಕೆಯೇನೋ ಶಾಶ್ವತ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸಿತು. ಹಾಗೆಯೇ ರಾಮದಾಸ್ ಕೂಡ ಶಾಶ್ವತ ವಿರೋಧಿ ನಾಯಕರಾಗಿಯೇ ಗುರುತಿಸಿಕೊಂಡರು. ಹಾಗಾಗಿ ಸರ್ಕಾರಗಳು ಅವರಿಗಾಗಿ ಹಲವಾರು ಆಮಿಷಗಳ ಬಲೆ ಹಾಕಿದರೂ ತಮ್ಮ ವ್ಯಕ್ತಿತ್ವಕ್ಕೆ ಕುಂದು ತಂದುಕೊಳ್ಳಲಿಲ್ಲ. ಆ ಕಾರಣದಿಂದ ಅವರ ದನಿಯಲ್ಲಿ ಯಾವುದೇ ಹಂಗಿಗೂ ಅವಕಾಶಗಳಿರಲಿಲ್ಲ. ದೇವೇಗೌಡರು ಪ್ರಧಾನಮಂತ್ರಿಯಾಗಿದ್ದಾಗ ಬಹಿರಂಗ ಸಭೆಯೊಂದರಲ್ಲಿ ಅವರ ತಾರಾತಿಗಡಿತನವನ್ನು ಪ್ರಶ್ನೆ ಮಾಡುತ್ತಲೇ ಮುಠ್ಠಾಳ ಪ್ರಧಾನಮಂತ್ರಿ ಅಂತ ಹೀಗಳೆದಿದ್ದರು. ಅಂಥದ್ದೊಂದು ನೈತಿಕ ಸ್ಥೈರ್ಯ ರಾಮದಾಸರಿಗಲ್ಲದೇ ಮತ್ತಾರಿಗೆ ಬರಲು ಸಾಧ್ಯ?!

### ರಾಷ್ಟ್ರಪತಿಯನ್ನೂ ಖಂಡಿಸಿದ ರಾಮದಾಸ್....

ನೆಟ್ಟಗೆ ನಿಲ್ಲಲೂ ಆಗದೇ ಕುಂಟುಕೊಂಡೇ ಸಾಗುತ್ತಿದ್ದ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಗೆ ಸ್ವಾಮಿ, ಬಾಬಾ ಕಾಲುಗಳಿಗೆ ಪಲ್ಟಿ ಹೊಡೆಯುವ ರೋಗ ಗಡದ್ದಾಗಿಯೇ ಇತ್ತು. ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಬರುವ ಕಾರ್ಯಕ್ರಮಗಳಿದ್ದವು. ತಕ್ಷಣ ರಾಮದಾಸ್ ಅದನ್ನು ಪ್ರತಿಭಟಿಸಿದರು. ಮೈಸೂರಿನ ಪ್ರಗತಿಪರಯುವಕರನ್ನೆಲ್ಲಾ ಕಲೆ ಹಾಕಿಕೊಂಡು ಆಶ್ರಮದ ಮುಂದೆ ಧರಣಿ ಕುಳಿತರು.

ರಾಷ್ಟ್ರದ ಪ್ರಥಮಪ್ರಜೆ, ಯಕಃಶ್ಚಿತ್‌ಸ್ವಾಮೀಜಿಯ ಕಾಲಿಗೆ ಬೀಳೋದು ಶತಕೋಟಿ ಭಾರತೀಯರಿಗೆ ಮಾಡಬಹುದಾದ ಅವಮಾನ ಅಂತ ಜಾಲಾಡಿದರು. ರಾಷ್ಟ್ರಪತಿ ಗಣಪತಿ ಸಚ್ಚಿದಾನಂದನ ಕಾಲಿಗೆ ಬಿದ್ದು ಈ ದೇಶದ ಬೌದ್ಧಿಕ ದಾರಿದ್ರ್ಯಕ್ಕೆ ಕನ್ನಡಿ ಹಿಡಿದುಬಿಟ್ಟರು.

ಹಾಗೆಯೇ ವಿಶ್ವಕನ್ನಡ ಸಮ್ಮೇಳನವನ್ನೂ ವಿರೋಧಿಸಿ ಬಂಧನಕ್ಕೊಳಗಾದರು. ಬರಗಾಲ ರೈತರನ್ನು ಹುರಿದು ಮುಕ್ಕುತ್ತಿರುವಾಗ, ಕೋಟಿಗಟ್ಟಲೆ ಖರ್ಚು ಮಾಡಿ ಸಮ್ಮೇಳನ ಮಾಡೋ ಅಗತ್ಯವೇನಿದೆ ಎಂಬ ಅವರ ಪ್ರಶ್ನೆಗೆ ಮಾನಗೆಟ್ಟ ಸರ್ಕಾರ ಬಂಧನದ ಮೂಲಕ ಉತ್ತರ ಹೇಳಿತ್ತು. ಹೀಗೆ ಜೀವ ವಿರೋಧಿ, ಸಮಾಜ ವಿರೋಧಿ ಚಟುವಟಿಕೆಗಳು ಯಾರಿಂದಲೇ ಆಗಲಿ ವಿರೋಧಿಸೋಕೆ ಮೈಸೂರಿನ ಚಾರ್ವಾಕದಲ್ಲೊಂದು ದನಿ ಸಿದ್ಧವಾಗಿಯೇ ಇರುತ್ತಿತ್ತು.

### ಚಳವಳಿಗಳ ಜೀವ....

ಈ ರಾಜ್ಯದ ಯಾವುದೇ ಪ್ರಮುಖ ಚಳವಳಿ ಇರಲಿ. ಅದರ ಬಗ್ಗೆ ಬರೆಯುವಾಗ ರಾಮದಾಸ್‌ರ ಹೆಸರು ಪ್ರಸ್ತಾಪವಾಗದಿದ್ದರೆ ಅದು ಅಪೂರ್ಣವಾದಂತೆಯೇ ಸರಿ. ತುರ್ತುಪರಿಸ್ಥಿತಿಯ ದಿನಗಳಲ್ಲಿ ಅವರು ತೋರಿದ ಮಹಾನ್ ದಾರ್ಷ್ಟ್ಯತನ, ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ರೀತಿ ಎಂಥಹವರನ್ನು ಬೆಚ್ಚಿ ಬೀಳಿಸುವಂಥದ್ದು. ಆಮೇಲೆ ರಾಮಕೃಷ್ಣ ಹೆಗಡೆ ಸರ್ಕಾರ ರೇವಜಿತು ಹಗರಣ ನಡೆಸಿದಾಗಲೂ ಇವರು ಸರ್ಕಾರದ ವಿರುದ್ಧ ಮುರಕೊಂಡು

ಬಿದ್ದರು. ಮೈಸೂರಿನಲ್ಲಿ ದೊಡ್ಡದೊಂದು ಪ್ರತಿಭಟನೆಯನ್ನೇ ನಡೆಸಿದ್ದರು.

ಗೋಕಾಕ್ ಚಳವಳಿಗೆ ರಾಜ್‌ಕುಮಾರ್ ಬಂದರು ಎಂಬ ಕಾರಣದಿಂದ ಸಂಪೂರ್ಣ ಅವರೇ ಆವರಿಸಿಕೊಂಡು ಬಿಟ್ಟರು. ಆದರೆ ಅದರ ಹಿಂದಿನ ಚಾಲನಾ ಶಕ್ತಿಗಳಲ್ಲಿ ರಾಮದಾಸ್‌ರೂ ಒಬ್ಬರು ಅನ್ನೋದು ಹಗಲಿನಂಥಾ ಸತ್ಯ.

ಒಮ್ಮೆ ಹೀಗಾಯ್ತು, ಲಕ್ಷ್ಮಿ ಅನ್ನೋ ಒಬ್ಬ ಹೆಣ್ಮಗಳು ಶ್ರೀಮಂತ ಪ್ರಭಾವಿಗಳೊಬ್ಬರ ಮನೇಲಿ ಕೆಲಸ ಮಾಡ್ತಿದ್ಳು. ಏನಾಯಿತೋ ಏನೋ ಆ ಹುಡುಗಿ ಅವರ ಮನೇಲೇ ಅನುಮಾನಾಸ್ಪದವಾಗಿ ಸತ್ತು ಹೋದಳು. ಆಗ ಮೈಸೂರಿನ ಒಡನಾಡಿ ಸಂಘಟನೆ ಲಕ್ಷ್ಮಿಯ ಶವವನ್ನು ಜಿಲ್ಲಾಧಿಕಾರಿ ಕಚೇರಿ ಮುಂದೆ ಇಟ್ಟು ಪ್ರತಿಭಟನೆ ಆರಂಭಿಸಿತ್ತು. ಅದರ ನೇತೃತ್ವ ಮತ್ತದೇ ರಾಮದಾಸರದು.

ಪರಿಸ್ಥಿತಿ ಹತೋಟಿ ಮೀರುತ್ತಿದೆ ಅಂತ ಪೊಲೀಸರು ಬಂದರು. ಅವತ್ತಿನ ಕಮಿಷನರ್ ಚಂದ್ರಶೇಖರ್ ರಾಮದಾಸರೊಂದಿಗೆ ಮಾತಿಗೆ ಮಾತು ಬೆಳೆಸಿ ತಳ್ಳಿಬಿಟ್ಟ. ಇದು ರಾಮದಾಸ್‌ರನ್ನು ಮತ್ತಷ್ಟು ಕೆರಳಿಸಿಬಿಟ್ಟಿತು. ಯಾಕ್ರೀ ತಳ್ತೀರಿ? ಬಾಯಿ ಬಿಟ್ಟು ಮಾತಾಡಿ ಅಂತ ಜಾಡಿಸಿದರು. ಒಕ್ಕಲಿಗ ಅಧಿಕಾರಿ ಚಂದ್ರಶೇಖರ್‌ಗೆ ಅದೊಂದು ಮಾತು ಮರ್ಮಘಾತ ನೀಡಿದಂತಾಯಿತೋ ಏನೋ ಅನಾವಶ್ಯಕವಾಗಿ ಲಾಠಿಚಾರ್ಜ್ ಮಾಡಿಸಿಬಿಟ್ಟ. ರಾಮದಾಸ್‌ರ ಮೇಲೆ ಕಾನೂನುಭಂಗ ಕೇಸನ್ನೂ ಹಾಕಲಾಯಿತು. ಸಹಜವಾಗಿಯೇ ಕೆರಳಿದ ರಾಮದಾಸ್, ಏನಯ್ಯ ಕೇಸುಹಾಕಿ ಹೆದರಿಸೋಕೆ ನೋಡ್ತೀಯಾ?ನಡೆದ ಘಟನೆಗೆಲ್ಲಾ ನೀನೇ ಕಾರಣ ಅಂತ ನೀರಿಳಿಸಿದರು.

ಅದಕ್ಕೆ ಜಾತಿ ಬಣ್ಣ ಕಟ್ಟಲಾಯಿತು. ಕುವೆಂಪು ಹೆಸರನ್ನು ಆಸ್ತಿ ಮಾಡಿಟ್ಟು ಕೊಂಡಿರುವ ದೇಜಗೌ ತನಕ ವಿಷಯ ಮುಟ್ಟಿತು. ನಮ್ಮವನಿಗೇ ಹೀಗೆ ಮಾಡ್ತಾನಾ ರಾಮದಾಸ ಅಂತ ದೇಜಗೌ ಘರ್ಜಿಸಿದ್ದೇ ಬಂತು, ಕನ್ನೇಗೌಡನ ಕೊಪ್ಪಲಿನ ಒಕ್ಕಲಿಗ ಹೈಕಳೆಲ್ಲಾ ಒಟ್ಟಾಗಿ ಬಿಟ್ಟರು. ರಾಮದಾಸರ ಮೇಲೆ ಹಲ್ಲೆ ನಡೆಸಲು ಎಲ್ಲಾ ಭೂಮಿಕೆ ಸಿದ್ಧವಾಗಿ ಹೋಗಿತ್ತು! ಆದರೆ ಅವತ್ತು ರಾಮದಾಸ್ ಕುಟುಂಬ ಸಮೇತ ನಾಪತ್ತೆಯಾಗಿದ್ದರು. ಅವರಿಗೆ ಒಕ್ಕಲಿಗ ವಿರೋಧಿ ಎಂಬ ಹಣೆಪಟ್ಟಿ ಹಚ್ಚಲಾಯಿತು. ಆ ಕೇಸಂತೂ ತೀರಾ ಇತ್ತೀಚಿನವರೆಗೆ ನಡೆಯುತ್ತಲೇ ಇತ್ತು. ಅದಕ್ಕಾಗಿ ಕೋರ್ಟಿಗೆ ತಿರುಗಿ ತಿರುಗಿಯೇ ರಾಮದಾಸ್ ಬಸವಳಿದು ಹೋಗಿದ್ದರು.

ಮಾನವ ಮಂಟಪ ಎಂಬ ಸೂರಿನಡಿಯಲ್ಲಿ ಸಾವಿರಾರು ಅಂತರ್ಜಾತಿ ಮದುವೆಗಳನ್ನು ಮಾಡಿಸಿ ಸೈ ಅನಿಸಿಕೊಂಡರು. ರಾಜ್ಯದ ಯಾವುದೇ ಮೂಲೆಯಲ್ಲಿ ಪ್ರೇಮಿಗಳಿಗೆ ತೊಡಕುಂಟಾದರೆ ನೆನಪಾಗುತ್ತಿದ್ದದ್ದೇ ಮಾನವ ಮಂಟಪ. ಅವರೆಲ್ಲರಿಗೂ ತಂದೆಯಾಗಿ ತಾಯಿಯಾಗಿ ನಿಂತು ಮದುವೆ ನೆರವೇರಿಸಿ ಕೊಡುತ್ತಿದ್ದರು. ಕುವೆಂಪುರವರ ಮಂತ್ರ ಮಾಂಗಲ್ಯ ಅಭಿಯಾನವನ್ನು ಅಭೂತಪೂರ್ವವಾಗಿ ಹಬ್ಬಿಸಿದ ಕೀರ್ತಿ ಅವರದು. ಇಂಥವರ ಮೇಲೂ ಒಕ್ಕಲಿಗ ಲಾಬಿ ಜಾತಿ ಹೇಸಿಗೆಯನ್ನು ಬಳಿಯುವ ವಿಫಲ ಪ್ರಯತ್ನವನ್ನು ನಡೆಸಿದ್ದು ತೀರಾ ಅಕ್ಷಮ್ಯ.

## ಗುರುವಿನ ವಿರುದ್ಧ ಶಿಷ್ಯನ ದನಿ...

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡಬೇಕು ಅಂತ ಮೈಸೂರಲ್ಲಿ ದೇಜಗೌ ಉಪವಾಸ ಸತ್ಯಾಗ್ರಹ ಕುಳಿತ ಸಂದರ್ಭ. ರಾಮದಾಸರಿಗೆ ಇದ್ದಕ್ಕಿದ್ದಂತೇ ಆತಂಕ ಆರಂಭವಾಯ್ತು. ದೇಜಗೌ ಹೇಳಿಕೇಳಿ ರಾಮದಾಸರಿಗೆ ಮೇಷ್ಟ್ರು. ವಯಸ್ಸಾಗಿದೆ, ಉಪವಾಸದಿಂದ ಅವರ ಆರೋಗ್ಯ ಏರುಪೇರಾಗಬಹುದೆಂಬ ಕಾಳಜಿಯಿಂದ ಗುರುವಿನ ಬಳಿ ಬಂದು ದಯಮಾಡಿ ಉಪವಾಸ ವಾಪಸ್ ತೆಗೆದುಕೊಳ್ಳಿ. ನಿಮ್ಮ ಆರೋಗ್ಯ ಸೂಕ್ಷ್ಮವಾಗಿದೆ ಅಂತ ಭಿನ್ನವಿಸಿಕೊಂಡರು.

ಅಲ್ಲಿದ್ದ ಜನ ರಾಮದಾಸ್‌ರನ್ನು ಕನ್ನಡಕ್ಕೆ ಶಾಸ್ತ್ರಿಯ ಭಾಷೆಯ ಸ್ಥಾನ ನೀಡುವುದರ ಬಗ್ಗೆ ಒಂದಷ್ಟು ಮಾತನಾಡಿ ಅಂತ ಕೇಳಿಕೊಂಡರು. ಅವರ ನಿರೀಕ್ಷೆಗಳೆಲ್ಲಾ ರಾಮದಾಸರು ಧರಣಿ ಪರವಾಗಿ ಮಾತನಾಡುತ್ತಾರೆ ಎಂಬುದೇ ಆಗಿತ್ತು. ಆದರೆ ರಾಮದಾಸ್ ಯಾವತ್ತೂ ಆತ್ಮಸಾಕ್ಷಿ ಕೊಂದುಕೊಂಡವರಲ್ಲ. ತಮಗೆ ಅನ್ನಿಸಿದ್ದನ್ನು ನೇರವಾಗಿ ಹೇಳಿಯೇ ಬಿಡುವ ನಿಷ್ಠೂರತೆ ಅವರ ರಕ್ತದಲ್ಲೇ ಇತ್ತು. ಸರಿ ಆರಂಭಿಸಿದರು, ತಮ್ಮ ಎದೆಯಾಳದ ಅಭಿಪ್ರಾಯಗಳನ್ನು ಯಾವುದೇ ಹಿಂಜರಿಕೆಗಳಿಗೆ ಅವಕಾಶಗಳಿಲ್ಲದಂತೆ ಹರಿಸುತ್ತಲೇ ಸಾಗಿದರು.

ಕನ್ನಡವನ್ನು ಶಾಸ್ತ್ರೀಯ ಭಾಷೆ ಮಾಡಿದ ಮಾತ್ರಕ್ಕೆ ಕನ್ನಡದ ಉದ್ಧಾರವಾಗುವುದಿಲ್ಲ. ಒಂದಷ್ಟು ಕೋಟಿ ರೂಪಾಯಿಗಳ ಫಂಡು, ಪ್ರಶಸ್ತಿಗಳಿಂದ ಕನ್ನಡ ಕಟ್ಟುವಂತಿದ್ದರೆ ನಮ್ಮ ಎಲ್ಲಾ ಅಕಾಡೆಮಿಗಳಿಂದ ಕನ್ನಡ ಉಚ್ಛ್ರಾಯ ಸ್ಥಿತಿಗೆ ತಲುಪಬೇಕಿತ್ತು. ಹಾಗೆ ಆಗಿಲ್ಲವೆಂದರೆ ಅದರಲ್ಲೇ ದೋಷ ಇದೆ. ಯಾವುದೇ ಭಾಷೆ ಉದ್ಧಾರವಾಗಬೇಕಿದ್ದರೆ ಭಾಷೆಯ ಜನರೇ ಹೆಚ್ಚು ಹೆಚ್ಚಾಗಿ ಉಪಯೋಗಿಸಬೇಕು. ಕನ್ನಡತನವನ್ನು ಬೆಳೆಸಿಕೊಳ್ಳಬೇಕು. ಅದು ಆಗದಿದ್ದರೆ ಇಂಥ ಮುಷ್ಕರಗಳೆಲ್ಲ ವೇಸ್ಟು ಅಂತ ಮುಖದ ಮೇಲೆ ಹೊಡೆದಂತೆ ಹೇಳಿಬಿಟ್ಟರು. ಅಷ್ಟಕ್ಕೇ ಒಂದಷ್ಟು ಬಾಲಗಳು ದನಿ ಹರಕೊಳ್ಳಲಾರಂಭಿಸಿದವು. ಕರ್ನಾಟಕ ರಕ್ಷಣಾ ವೇದಿಕೆ ಹೆಸರಿನಲ್ಲಿ ಮೈಸೂರಿನಲ್ಲಿ ಅಂಗಡಿ ತೆರೆದುಕೊಂಡು ಕುಳಿತಿರುವ ಮೋಹನ್ ಕುಮಾರ್‌ಗೌಡ ಎಂಬ ಹಸುಳೆ, ಏಕಾಏಕಿ ರಾಮದಾಸರಿಗೆ ಹೊಡೆಯಲು ಕೈ ಎತ್ತಿಕೊಂಡು ಹೋದ.

ಅಲ್ಲಿಯೇ ಇದ್ದ ಕೇಂದ್ರದ ಮಾಜಿ ಮಂತ್ರಿ ಶ್ರೀನಿವಾಸಪ್ರಸಾದ್ ಅಡ್ಡ ಬಂದರು. ಅವರು ಹೇಳೋದು ನಿಮಗಿಷ್ಟ ಇಲ್ಲದಿರಬಹುದು. ಆದರೆ ಇದು ಅಭಿಪ್ರಾಯ ಸ್ವಾತಂತ್ರ್ಯ. ಅದನ್ನು ನೀವು ಪ್ರಶ್ನೆ ಮಾಡಲಾಗದು ಅಂತ ಆಕ್ಷೇಪಿಸಿದರು. ಅವರೊಂದಿಗೆ ಅಲ್ಲಿದ್ದ ದಲಿತರ ಗುಂಪೂ ದನಿ ಎತ್ತಿತು. ಆಗ ಮೋಹನ್ ಕುಮಾರ್‌ಗೌಡ ಎಂಬ ಕನ್ನಡದ ಕಟ್ಟಾಳು ತೆಪ್ಪಗಿರಬೇಕಾಯಿತು.

ಹೀಗೆ ರಾಮದಾಸರು ಅನ್ನಿಸಿದ್ದನ್ನು ಹೇಳುತ್ತಿದ್ದರು. ಹೇಳಿದ್ದನ್ನೇ ಮಾಡುತ್ತಿದ್ದರು. ಅಂಥಾ ಪ್ರಾಮಾಣಿಕ ವಿಚಾರವಾದಿ ಭವಿಷ್ಯದಲ್ಲಂತೂ ನಮಗೆ ಸಿಕ್ಕಲಾರ. ಅವರಷ್ಟು ಪ್ರಾಮಾಣಿಕವಾಗಿ ಇನ್ಯಾರೂ ಬಾಳೋಕೆ ಸಾಧ್ಯವಿಲ್ಲ.

# ರಾಮದಾಸ್ ಮತ್ತು ಗೋಕಾಕ್ ಚಳವಳಿ

ಪ್ರೊ. ಶಿವರಾಮು ಕಾಡನಕುಪ್ಪೆ

ನಮ್ಮ ದೇಶದಲ್ಲಿ ಪದವೀಧರನಾಗುವ ಯುವಕ ಭಾರತದ ಚರಿತ್ರೆಯನ್ನೇ ಓದದೆ ಇರುವ ಸಾಧ್ಯತೆಯಿದೆ. ಸಾಮಾನ್ಯ ಪದವಿಶಿಕ್ಷಣದ ಬಗ್ಗೆ ಪೋಷಕರು ಮತ್ತು ಸರ್ಕಾರಕ್ಕೆ ಈಗಿರುವ ಅನಾದರ ಧೋರಣೆಯನ್ನು ನೋಡಿದರೆ ಈ ದೇಶದ ಭವಿಷ್ಯತ್ತಿನ ಪ್ರಜೆಗಳಿಗೆ ತಮ್ಮ ದೇಶದ ಚರಿತ್ರೆಯ ಅರಿವು ಮೂಡದೆ ಹೋಗುವ ಅಪಾಯವಿದೆ. ಅರ್ಥಸಂಪಾದನೆಗೆ ಸಾಧನವಾಗುವ ವಿದ್ಯೆಯೇ ವಿದ್ಯೆ, ಉಳಿದ ಶಿಕ್ಷಣ ರೂಪಗಳು ಕೆಲಸಕ್ಕೆ ಬಾರದವು ಎಂಬ ಭೋಗಮೂಲ ದೃಷ್ಟಿಯಿಂದ ಸಮಾಜದ ಅಂತಃಸತ್ತ್ವವನ್ನು ನಿಧಾನವಾಗಿ ನಾಶಮಾಡುವ ಹಂತದಲ್ಲಿ ಜನಾಂಗವನ್ನು ರೂಪಿಸುತ್ತಿದ್ದೇವೆ. ಈ ಭೋಗಮೂಲ ಶಿಕ್ಷಣನೀತಿ, ದೂರದೃಷ್ಟಿಯಿಲ್ಲದ ಕ್ಷಣಿಕ ಲೋಭದ ಕಾರಣದಿಂದಾಗಿ ನಮ್ಮ ಜನ ಬೌದ್ಧಿಕ ದಾಸ್ಯದತ್ತ ಸಾಗುವ ಹಾದಿಯಲ್ಲಿದ್ದಾರೆ. ಇಂತಹ ಹೆಜ್ಜೆಗಳು ವಿದ್ಯೆ ಕಲಿಯುವ ಹಾದಿಯಲ್ಲಿ ಹಿಂದಿನಿಂದಲೂ ನಡೆದು ಬಂದಿರುವುದನ್ನು ಗುರುತಿಸಬಹುದು.

ಭಾಷಾ ಕಲಿಕೆ ಮೂಲತಃ ಸಾಂಸ್ಕೃತಿಕ ಅರಿವನ್ನು ವಿಸ್ತರಿಸುವ ಸಾಧನವೆಂದು ಅರಿಯುತ್ತೇವೆ. ಆದರೆ ನಮ್ಮ ಬುದ್ಧಿವಂತ ಮನಸ್ಸುಗಳು ಆ ಸಾಂಸ್ಕೃತಿಕ ಅರಿವನ್ನು ಕೂಡ ಲೆಕ್ಕಾಚಾರದ ತೊಡಗಿಸುವಿಕೆಯಲ್ಲಿ, ಲೌಕಿಕ ಅನುಕೂಲಕ್ಕೆ ಬಳಸಿಕೊಳ್ಳುವ ಹುನ್ನಾರದಲ್ಲಿ ನಿರಂತರವಾಗಿ ಬಳಸಿಕೊಂಡಿರುವುದನ್ನು ಅರಿಯಬಹುದಾಗಿದೆ. ಈ ಹುನ್ನಾರದ ಪ್ರಮುಖ ಅಸ್ತ್ರವಾಗಿ ಬಳಕೆಯಾಗಿರುವ ಭಾಷೆಯೆಂದರೆ ಸಂಸ್ಕೃತ. ಭಾರತದಲ್ಲಿ ಎಂದೂ ಆಡು ಭಾಷೆಯಾಗಿರದ, ಆದರೆ ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಧಾರ್ಮಿಕ ಭಾಷೆಯಾಗಿ ಸುಮಾರು ಎರಡು ಸಾವಿರ ವರ್ಷಗಳಿಂದ ಸಾಮಾಜಿಕವಾಗಿ ಪರಮೋಚ್ಚ ಸ್ಥಾನವನ್ನು ಗಳಿಸಿರುವ ಸಂಸ್ಕೃತ ನಿರಂತರವಾಗಿ ಸವಲತ್ತುಗಳನ್ನು ಪಡೆಯುವ ಸಾಧನವಾಗಿ ಕೆಲಸಮಾಡಿದೆ. ಸಂಸ್ಕೃತ ಕಲಿಕೆ ಸಾಮಾಜಿಕ

ಸ್ಥಾನಮಾನವನ್ನು ಹೆಚ್ಚಿಸುವ ಜೊತೆಗೆ ಭೌತಿಕವಾದ ಅನೇಕ ಅನುಕೂಲಗಳನ್ನು ತಂದುಕೊಡುತ್ತಿತ್ತು. ಜೊತೆಗೆ ಮತ್ತೊಂದು ತಂತ್ರಗಾರಿಕೆಯೂ ಸಂಸ್ಕೃತ ಕಲಿಕೆಯ ಹಿಂದೆ ಕೆಲಸಮಾಡುತ್ತಿತ್ತು. ದೇಶಭಾಷೆಗಳನ್ನು ಸಮಾಜದ ಎಲ್ಲ ಜಾತಿವರ್ಗಗಳ ಜನರು ಕಲಿಯುತ್ತಿದ್ದರು. ಅವರಿಗೆ ಶತಮಾನಗಳಿಂದ ಸಂಸ್ಕೃತ ಪ್ರವೇಶವಿಲ್ಲದ ಭಾಷೆಯಾಗಿತ್ತು. ಆದರೆ ಸಮಾಜದ ಮೇಲ್ಜಾತಿಯವರಾದ ಬ್ರಾಹ್ಮಣ-ವೈಶ್ಯರು ಮಾತ್ರ ಅಭ್ಯಾಸ ಮಾಡಬೇಕಾಗಿದ್ದ - ಮಾಡುತ್ತಿದ್ದ ಸಂಸ್ಕೃತ ಅಂಕಗಳಿಕೆಯ ಸಾಧನವಾಗಿಯೂ ಕೆಲಸ ಮಾಡುವಂತಾದದ್ದು ಈ ತಂತ್ರಗಾರಿಕೆಯ ಫಲವೇ. ಇಂಜಿನಿಯರಿಂಗ್, ಮೆಡಿಕಲ್ ಮತ್ತಿತರ ವೃತ್ತಿಶಿಕ್ಷಣಗಳಿಗೆ ಪ್ರವೇಶ ದೊರಕಿಸಿಕೊಡಲು ಬಹುಪಾಲು ಈ ಸಂಸ್ಕೃತ ಭಾಷೆಯ ಅಂಕಗಳಿಕೆಯೇ ಕೆಲಸ ಮಾಡುತ್ತಿತ್ತು.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಮೇಲ್ಜಾತಿಯ ಜನರು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣದಲ್ಲಿ ಕನ್ನಡವನ್ನು ಓದುತ್ತಲೇ ಇರಲಿಲ್ಲ. ಇವರ ಜೊತೆಗೆ ನಾನಾ ಕಾರಣಗಳಿಂದ ಕರ್ನಾಟಕಕ್ಕೆ ವಲಸೆ ಬಂದ ಅನ್ಯಭಾಷಿಕರು ಕನ್ನಡ ಭಾಷೆಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಅವರ ಭಾಷೆ ಓದಿನ ಪರಿಶ್ರಮ ಹೀಗಿತ್ತು. ಸಂಸ್ಕೃತ+ಇಂಗ್ಲಿಷ್ + ಹಿಂದಿ ಅಥವಾ ಅನ್ಯಭಾಷಿಕರ ಮಾತೃಭಾಷೆ + ಇಂಗ್ಲಿಷ್ + ಹಿಂದಿ (ಉದಾ- ತಮಿಳು + ಇಂಗ್ಲಿಷ್ + ಹಿಂದಿ; ಮರಾಠಿ + ಇಂಗ್ಲಿಷ್ + ಹಿಂದಿ - ಇತ್ಯಾದಿ...) ಈ ಪರಿಶ್ರಮ ಸೂತ್ರಕ್ಕೆ ಅವರು ನೀಡುತ್ತಿದ್ದ ಮತ್ತು ಶಿಕ್ಷಣ ತಜ್ಞರು, ಉದಾರವಾದಿ ದೇಶಭಕ್ತರು ಪ್ರತಿಪಾದಿಸುತ್ತಿದ್ದ ಕಾರಣ ಸಮಗ್ರ ಭಾರತೀಯತೆಯನ್ನು ವೈಭವೀಕರಿಸುವ ರೀತಿಯದ್ದಾಗಿತ್ತು. ಇದು ಭಾರತೀಯತೆ ಮತ್ತು ವ್ಯಕ್ತಿಯ ಆಯ್ಕೆಯ ಸ್ವಾತಂತ್ರ್ಯ ಹಾಗೂ ಅಲ್ಪಸಂಖ್ಯಾತರ ಹಿತ ಕಾಪಾಡುವ ದೃಷ್ಟಿಯ ನೆಪದಲ್ಲಿ ದೇಶಭಾಷೆಗಳನ್ನು ತುಳಿದು ತಾವು ಮೇಲೇರುವ ಹುನ್ನಾರವೇ ಆಗಿತ್ತು.

ಚರಿತ್ರೆಯ ಅಧ್ಯಯನದ ವಿಷಯದಲ್ಲಿ ಆಗಿರುವ ಲೋಪ ಮತ್ತು ಅನಾದರ ದೃಷ್ಟಿಯೇ ಕನ್ನಡ ಭಾಷಾ ಕಲಿಕೆಯ ವಿಷಯದಲ್ಲೂ ಆಗಿದೆ. ತಲತಲಾಂತರಗಳಿಂದ ಕನ್ನಡ ನೆಲದಲ್ಲಿಯೇ ಹುಟ್ಟಿ, ನೆಲೆಸಿ, ಬಾಳಿ ಬದುಕಿದರೂ ಈ ನೆಲದ ಭಾಷೆಯನ್ನು ಕಲಿಯದೆ ಹೋಗುವ ದುರಂತ ಮತ್ತು ದ್ರೋಹದ ಕೆಲಸವನ್ನು ಅನ್ಯಭಾಷಿಕರು ನಡೆಸುತ್ತಾ ಬರುತ್ತಿದ್ದರು. ಕರ್ನಾಟಕದಲ್ಲಿ ಹುಟ್ಟಿ ಬೆಳೆದವರು ಕನಿಷ್ಠ ಒಂದು ಭಾಷೆಯನ್ನಾಗಿಯಾದರೂ ಕನ್ನಡವನ್ನು ಕಲಿಯಬೇಕೆನ್ನುವ - ಆ ರೀತಿ ಕಲಿತರೆ ತಾವಿರುವ ನೆಲದ ಬದುಕು - ಸಂಸ್ಕೃತಿಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆಯೆನ್ನುವ ದೃಷ್ಟಿಯಿಂದ ಪ್ರಾಥಮಿಕ - ಪ್ರೌಢಶಿಕ್ಷಣದ ಹಂತದಲ್ಲಿ ಅಭ್ಯಾಸಮಾಡುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಡ್ಡಾಯವಾಗಿ ಕನ್ನಡ ಭಾಷೆಯನ್ನು ಕಲಿಯಬೇಕೆಂದು ಒತ್ತಾಯಿಸಿ ನಡೆಸಿದ ಕನ್ನಡಿಗರ ಹೋರಾಟವೇ ಗೋಕಾಕ್ ಚಳವಳಿ.

* * *

ವಿನಾಯಕ ಕೃಷ್ಣ ಗೋಕಾಕ ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಬಹುದೊಡ್ಡ ಹೆಸರು. ಪ್ರಾಥಮಿಕ ಹಂತದಿಂದ ಪ್ರೌಢಶಾಲಾ ಹಂತದವರೆಗೆ ಕರ್ನಾಟಕ ರಾಜ್ಯದಲ್ಲಿ ವ್ಯಾಸಂಗ ಮಾಡುವ

ಮಕ್ಕಳ ಭಾಷಾಕಲಿಕೆಯ ಸ್ವರೂಪ ಹೇಗಿರಬೇಕು ? ತ್ರಿಭಾಷಾ ಸೂತ್ರದಲ್ಲಿ ಕನ್ನಡದ ಸ್ಥಾನ ಹೇಗಿರಬೇಕು? ಅದು ಇರಬೇಕೆ, ಬೇಡವೆ ? ಅದು ಕಡ್ಡಾಯವಾಗಿರಬೇಕೆ ? ಐಚ್ಛಿಕವಾಗಿರಬೇಕೆ? - ಎಂಬಿತ್ಯಾದಿ ವಿಷಯಗಳನ್ನು ಅಧ್ಯಯನ ಮಾಡಿ ವರದಿ ನೀಡಲು ವಿನಾಯಕ ಕೃಷ್ಣ ಗೋಕಾಕರ ಅಧ್ಯಕ್ಷತೆಯಲ್ಲಿ ಉಪಸಮಿತಿಯನ್ನು ಕರ್ನಾಟಕ ಸರ್ಕಾರ ರಚಿಸಿತು. ಈ ಸಮಿತಿಯು ರಾಜ್ಯಾದ್ಯಂತ ಸಂಚರಿಸಿ ಜನಾಭಿಪ್ರಾಯ, ಶಿಕ್ಷಣ ತಜ್ಞರು ಅಭಿಪ್ರಾಯ ಮತ್ತು ಜಾಗತಿಕ ಮಟ್ಟದಲ್ಲಿರುವ ಜನಪರವಾದ ಶಿಕ್ಷಣಪದ್ಧತಿಗಳ ಸ್ವರೂಪಗಳನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯೇ ಮುಂದೆ 'ಗೋಕಾಕ್ ವರದಿ'ಯೆಂದು ಚಾರಿತ್ರಿಕ ಮಹತ್ವ ಪಡೆಯಿತು.

'ಕರ್ನಾಟಕದಲ್ಲಿ ವ್ಯಾಸಂಗ ಮಾಡುವ ಪ್ರತಿಯೊಂದು ಮಗುವೂ ಕಡ್ಡಾಯವಾಗಿ, ಪ್ರಥಮ ಭಾಷೆಯನ್ನಾಗಿ ಕನ್ನಡವನ್ನು ಅಧ್ಯಯನ ಮಾಡಬೇಕು' - ಎಂಬುದು ಗೋಕಾಕ್ ವರದಿಯ ಮೂಲ ಸೂಚನೆಯಾಗಿತ್ತು. ಈ ವರದಿಯನ್ನು ಅನುಷ್ಠಾನಕ್ಕೆ ತರುವುದನ್ನು ಅನ್ಯಭಾಷಾ ಅಲ್ಪಸಂಖ್ಯಾತರು ವಿರೋಧಿಸಿದರು. ನಾವು ಸ್ವತಂತ್ರ ಭಾರತದ ಪ್ರಜೆಗಳು, ನಮಗಿಷ್ಟ ಬಂದ ಭಾಷೆಯನ್ನು ಅಧ್ಯಯನ ಮಾಡುವ ಸ್ವಾತಂತ್ರ್ಯವಿದೆ; ನಮಗೆ ಬೇಕಾದ ಭಾಷೆಯನ್ನು ನಮ್ಮ ಮಕ್ಕಳಿಗೆ ಕಲಿಸುತ್ತೇವೆ. 'ಕನ್ನಡವನ್ನೇ ಕಲಿಯಬೇಕು' ಎಂದು ಹೇಳುವ ಹಕ್ಕು ನಿಮಗಿಲ್ಲ ಎಂದು ವಾದಿಸಿ ಅವರು ನ್ಯಾಯಾಲಯದ ಮೆಟ್ಟಿಲೇರಿದರು. ನಮ್ಮ ಅನೇಕ ಬುದ್ಧಿಜೀವಿಗಳು, ರಾಷ್ಟ್ರೀಯವಾದಿಗಳು - ಮುಖ್ಯವಾಗಿ ಹಿಂದಿ, ಸಂಸ್ಕೃತ, ಇಂಗ್ಲಿಷ್ ಭಾಷೆಗಳನ್ನು ಭೋಗಮೂಲ ನೆಲೆಗಳಲ್ಲಿ ಬಳಸಿಕೊಳ್ಳಲು ಯತ್ನಿಸುತ್ತಿದ್ದವರು - ಅವರ ಪರವಾಗಿ ನಿಂತರು. ಪ್ರಜಾವಾಣಿ ಪತ್ರಿಕಾ ಬಳಗ ಕೂಡ ಅವರ ಪರವಾಗಿ ನಿಂತು ಅಭಿಪ್ರಾಯ ರೂಪಿಸಲು ಯತ್ನಿಸಿತು. ಆಗಿನ ಕರ್ನಾಟಕದ ಗುಂಡೂರಾವ್ ಸರ್ಕಾರ ಈ ಒತ್ತಡಗಳಿಗೆ ಮಣಿಯಿತು. ಗೋಕಾಕ್ ವರದಿಯನ್ನು ಜಾರಿಗೆ ತರಲು ಹಿಂಜರಿಯಿತು.

ಆಗ ಕರ್ನಾಟಕದ ಜನತೆ ಗೋಕಾಕ್ ವರದಿಯನ್ನು ಶಿಕ್ಷಣ ಕ್ರಮದಲ್ಲಿ ಜಾರಿಗೊಳಿಸುವಂತೆ ನಡೆಸಿದ ಐತಿಹಾಸಿಕ ಚಳವಳಿಯನ್ನು ಗೋಕಾಕ್ ಚಳವಳಿಯೆಂದು ಮುಂದೆ ಗುರುತಿಸಲಾಯಿತು. ಇಪ್ಪತ್ತನೆಯ ಶತಮಾನದ ಪ್ರಮುಖ ಚಳವಳಿಗಳಿಗೆ ಉಗಮ ನೆಲೆಯಾಗಿ ಮೈಸೂರು ಕೆಲಸ ಮಾಡಿದೆ. ಅಂತೆಯೇ ಗೋಕಾಕ್ ಚಳವಳಿಗೂ ಮೈಸೂರು ಮೊದಲ ಹೆಜ್ಜೆ ಇಟ್ಟು ಕರ್ನಾಟಕಕ್ಕೆ ಮಾದರಿಯಾಯಿತು. ಆಗ ಮೈಸೂರು ಜಿಲ್ಲಾ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ವಿ.ಎಚ್. ಗೌಡರು ಕಾರ್ಯನಿರ್ವಹಿಸುತ್ತಿದ್ದರು. ಆಗ ಅವರ ಆತ್ಮೀಯ ಗೆಳೆಯರಾಗಿದ್ದವರು ಪ. ಮಲ್ಲೇಶ್‌ರವರು. ಇವರಿಬ್ಬರ ಜೋಡಿ ಜನಪರ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪ್ರಸಿದ್ಧವಾಗಿತ್ತು. ಮಲ್ಲೇಶ್ ಸಮಾಜವಾದಿ ಚಳವಳಿಯ ಹಿನ್ನಲೆಯಿಂದ ಬೆಳೆದಿದ್ದರು; ಗೋಕಾಕ್ ಚಳವಳಿಯನ್ನು ಮೈಸೂರಿನ ಸಾಹಿತಿಗಳು, ಕನ್ನಡ ಚಳವಳಿಗಾರರು, ಕನ್ನಡ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಪ್ರಾರಂಭ ಮಾಡಿದರು. ಮೈಸೂರಿನ ಕೇಂದ್ರ ಸ್ಥಾನದಲ್ಲಿರುವ ತಾತಯ್ಯನ ಪ್ರತಿಮೆಯ ಮುಂದೆ ಗೋಕಾಕ್ ವರದಿಯ ಜಾರಿಯನ್ನು ಒತ್ತಾಯಿಸಿ ಧರಣಿ ಸತ್ಯಾಗ್ರಹವನ್ನು

ಆರಂಭಿಸಲಾಯಿತು. ಸರದಿಯಂತೆ ಪ್ರತಿದಿನ ಕೆಲವು ಸಾಹಿತಿಗಳು ಧರಣಿಯಲ್ಲಿ ಭಾಗವಹಿಸತೊಡಗಿದರು. ಈ ಐತಿಹಾಸಿಕ ಚಳವಳಿಯನ್ನು ಮಹಾಕವಿ ಕುವೆಂಪು ಅವರು ಉದ್ಘಾಟಿಸಿ, ಅದಕ್ಕೊಂದು ಸ್ಪಷ್ಟವಾದ ತಾತ್ವಿಕ ದೃಷ್ಟಿಯನ್ನೊದಗಿಸಿದರು. ಅವರ ಭಾಗವಹಿಸುವಿಕೆ ಹೋರಾಟಗಾರರಿಗೆ ಸ್ಫೂರ್ತಿಯನ್ನು ತಂದುಕೊಟ್ಟಿತು. ಈ ಧರಣಿ ಸತ್ಯಾಗ್ರಹದಲ್ಲಿ ಸಾಹಿತಿಗಳು ಸರದಿಯಂತೆ ಬಂದು ಭಾಗವಹಿಸಿ ಹೋಗುತ್ತಿದ್ದರು. ಆದರೆ ಚಳವಳಿಯ ಕಾವು, ತೀವ್ರತೆ ದಿನೇ ದಿನೇ ಏರುವಂತೆ ನೋಡಿಕೊಂಡವರು ಪ್ರಗತಿಪರ ಮತ್ತು ಕನ್ನಡಪರ ಹೋರಾಟಗಾರರು. ದಲಿತ ಸಂಘರ್ಷ ಸಮಿತಿ, ಜನಕಲಾ ಮಂಡಳಿ, ಸಮುದಾಯ ಮುಂತಾದ ಸಂಘಟನೆಗಳು ಈ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವು. ಮೈಸೂರಿನ ಈ ಹೋರಾಟದಲ್ಲಿ ನಿರಂತರವಾಗಿ ಭಾಗವಹಿಸಿದವರು ಮುಖ್ಯವಾಗಿ ಕೆ. ರಾಮದಾಸ್, ಸ. ರಮೇಶ, ಹೊರೆಯಾಲ ದೊರೆಸ್ವಾಮಿ, ನಾಗರಾಜೇಗೌಡ, ಪ. ಮಲ್ಲೇಶ, ಮೂಗೂರು ನಂಜುಂಡಸ್ವಾಮಿ, ಸ.ರ. ಸುದರ್ಶನ, ಕುಕ್ಕರಹಳ್ಳಿಯ ಹುಡುಗರಾದ ಮಹದೇವಪ್ಪ, ದಯಾನಂದ, ತುಕಾರಾಮ, ಕೃಷ್ಣಮೂರ್ತಿ ಮುಂತಾದವರು. ಕನ್ನಡ ಚಳವಳಿಯ ಹೋರಾಟಗಾರರ ಭಾಗವಹಿಸುವಿಕೆ ಮತ್ತು ಅವರ ಭಾವತನ್ಮಯತೆಯನ್ನು ನೆನೆಯಲೇಬೇಕು. ಇವರ ಜೊತೆಯಲ್ಲಿ ಕಟ್ಟಾ ಕಮ್ಯುನಿಷ್ಟರಾದ ಡಾ. ರಾಮಲಿಂಗಂ ಮತ್ತು ಅವರ ಕಾಮ್ರೇಡ್‌ಗಳ ದಿಟ್ಟತನವನ್ನು ಮರೆಯಲಾಗದು.

ಈ ನಡುವೆ ಬೆಂಗಳೂರಿನ ಸಾಹಿತಿ - ಬುದ್ಧಿಜೀವಿಗಳ ನಡುವೆ ಕನ್ನಡ ಕಲಿಕೆಯ ಬಗ್ಗೆ ಭಿನ್ನಾಭಿಪ್ರಾಯ ತಲೆದೋರಿತು. ಕೆಲವರು ಸರ್ಕಾರದ ಪರವಾಗಿ ನಿಂತರೆ, ಕೆಲವರು ಚಳವಳಿಯ ಪರ ನಿಂತರು. ಹಾ.ಮಾ.ನಾಯಕ್, ಹಂಪನಾಗರಾಜಯ್ಯ, ಎಚ್.ಎಲ್. ನಾಗೇಗೌಡ, ಜಿ. ನಾರಾಯಣ ಮುಂತಾದವರು ಚಳವಳಿಯ ತೀವ್ರತೆಯನ್ನು ವಿರೋಧಿಸಿ, ಅದು ಸೌಮ್ಯವಾಗಿರಬೇಕೆಂದೂ ಸರ್ಕಾರದ ಪರವಾಗಿರುವುದು ಕಾಲೋಚಿತ ನ್ಯಾಯವೆಂದು ವಾದಿಸಿದರು. ಆಗ ಹಂಪ ನಾಗರಾಜಯ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸಹಜವಾಗಿಯೇ ಜಿಲ್ಲಾ ಸಾಹಿತ್ಯ ಪರಿಷತ್ತಿನ ಘಟಕಗಳು ಚಳವಳಿಯಿಂದ ಹಿಂತೆಗೆದವು. ಹಾ.ಮಾ.ನಾಯಕರ ಸ್ನೇಹಿತರಾದ ಮೈಸೂರಿನ ವಿ.ಎಚ್. ಗೌಡರು ಮೈಸೂರಿನಲ್ಲಿ ಚಳವಳಿಯನ್ನು ಹಿಂತೆಗೆದುಕೊಂಡರು. ಗೌಡರ ಮಿತ್ರರಾದ ಜಿ.ಎಚ್. ನಾಯಕರು, ಹಿ.ಶಿ. ರಾಮಚಂದ್ರೇಗೌಡ ಮುಂತಾದವರು ತಾತ್ವಿಕವಾದ ಕಾರಣಗಳನ್ನು ನೀಡಿ ಚಳವಳಿಯಿಂದ ದೂರಸರಿದರು. ಈ ಸಂದರ್ಭದಲ್ಲಿ ಮೈಸೂರಿನ ಅನೇಕ ಸಾಹಿತಿಗಳು ಚಳವಳಿ ಮಾಡುವುದು ತಮ್ಮ ಕೆಲಸವಲ್ಲವೆಂದೂ ಅದು ಶಿಕ್ಷಣ ತಜ್ಞರು ಕುಳಿತು ಚಿಂತಿಸಬೇಕಾದ ಕೆಲಸವೆಂದೂ ಹೇಳಿ ಮನೆಗಳಲ್ಲೇ ಉಳಿದರು.

ಆಗ ಮೈಸೂರಿನಲ್ಲಿ ಚಳವಳಿ ನಿಂತು ಹೋಗುವ ಸಾಧ್ಯತೆಯಿತ್ತು. ಆದರೆ ಇಲ್ಲಿನ ಕನ್ನಡ ಚಳವಳಿಗಾರರು ಮತ್ತು ಪ್ರಗತಿಪರ ಸಂಘಟನೆಗಳ ಹೋರಾಟಗಾರರು ಗೋಕಾಕ್ ಚಳವಳಿಯನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡರು. ಅದಕ್ಕೊಂದು ತಾತ್ವಿಕ ಮುಖವನ್ನು ಹೋರಾಟದ ಮೊನಚನ್ನೂ

ತಂದುಕೊಟ್ಟರು. ಅದರ ನಾಯಕತ್ವವನ್ನು ಮೇಲ್ನೋಟಕ್ಕೆ ಪ. ಮಲ್ಲೇಶ, ಸ.ರ. ಸುದರ್ಶನ, ಸ.ರಮೇಶ ಮುಂತಾದವರು ವಹಿಸಿದಂತೆ ಕಂಡುಬಂದರೂ ಒಂದು ಬಗೆಯ ಸಮುದಾಯ ನಾಯಕತ್ವ ಎದ್ದು ಕಾಣುತ್ತಿತ್ತು. ಚಳವಳಿಯನ್ನು ತಾತಯ್ಯನ ಪ್ರತಿಮೆಯಿಂದ ಮೈಸೂರಿನ ಕೇರಿಕೇರಿಗಳಿಗೆ ತೆಗೆದುಕೊಂಡು ಹೋಗಲಾಯಿತು. ಜನ ಸೇರುವ ಸ್ಥಳಗಳಲ್ಲಿ ಬೀದಿ ನಾಟಕಗಳು ನಡೆದವು. ಹೋರಾಟದ ಹಾಡುಗಳು ಮೊಳಗಿದವು. ನಡುನಡುವೆ ಕನ್ನಡ ಭಾಷೆ ಕಲಿಕೆಯ ಅನಿವಾರ್ಯತೆ - ಆವಶ್ಯಕತೆಯ ಬಗೆಗೆ ಭಾಷಣಗಳು ಇರುತ್ತಿದ್ದವು. ದಿನೇ ದಿನೇ ಚಳವಳಿಗೆ ಕಾವು ಬರತೊಡಗಿತು. ಮೈಸೂರು ಈ ವಿಷಯದಲ್ಲೂ ಇತರೆಡೆ ಆದರ್ಶವಾಯಿತು. ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಗಳಲ್ಲೂ ಚಳವಳಿ ವ್ಯಾಪಿಸತೊಡಗಿತು.

ಈ ಸಂದರ್ಭದಲ್ಲಿಯೇ ಆಗಿನ ಮುಖ್ಯಮಂತ್ರಿ ಗುಂಡೂರಾವ್‌ರವರು ಮೈಸೂರಿನ ಮಾನಸ ಗಂಗೋತ್ರಿಯ ರೇಷ್ಮೆ ಅಧ್ಯಯನ ವಿಭಾಗದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆಂದು ನಮಗೆ ತಿಳಿದು ಬಂತು. ಬೆಳಿಗ್ಗೆ 10.30ಕ್ಕೆ ಕಾರ್ಯಕ್ರಮ. ನಾವು ಚಳವಳಿಗೆ ಒಂದು ಬಗೆಯ ತೀವ್ರತೆಯನ್ನು ತರಲು ನಿರ್ಧರಿಸಿದ್ದೆವು. ಅದಕ್ಕೊಂದು ಸರಿಯಾದ ಸಂದರ್ಭಕ್ಕಾಗಿ ಕಾಯುತ್ತಿದ್ದೆವು. ಆ ಸಂದರ್ಭ ಬಂದಿತ್ತು, ನಾವು ಚಳವಳಿಗಾರರು ನೂರಾರು ಜನ ಮೊದಲೇ ಸಮಾರಂಭದ ವಿವಿಧ ಭಾಗದಲ್ಲಿ ಚದುರಿದಂತೆ ಕುಳಿತುಕೊಂಡೆವು. ಸುಮಾರು 10.45 ಅಥವಾ 11 ಗಂಟೆಯ ಹೊತ್ತಿಗೆ ಮುಖ್ಯಮಂತ್ರಿಗಳು ಬಂದು ಆಸೀನರಾದರು. ಕಾರ್ಯಕ್ರಮ ಉದ್ಘಾಟನೆ ಮಾಡಲು ಮುಖ್ಯಮಂತ್ರಿಗಳು ಎದ್ದರು. ಇಡೀ ಸಭೆ ಬೆಕ್ಕಸ ಬೆರಗಾಗುವಂತೆ ರಾಮದಾಸರ ಧಿಕ್ಕಾರ ಎಂದು ಕೂಗುವ ಧ್ವನಿ ಕೇಳಿ ಬಂತು. ಚಳವಳಿಗಾರರು ಕೂಡಲೇ ಎದ್ದು ಜೊತೆಗೂಡಿ 'ಧಿಕ್ಕಾರ ಧಿಕ್ಕಾರ' ಎಂದು ಕೂಗಿದರು. ಶ್ರೀಮತಿ ಮೀರಾನಾಯಕ್, ರಾಜಶೇಖರ ಕೋಟಿ, ರಾಮದಾಸ ವೇದಿಕೆಯತ್ತ ನುಗ್ಗಿದರು. ಎಲ್ಲಿದ್ದರೋ ಏನೋ ಅನ್ನುವಂತೆ ಮುಗಿಬಿದ್ದ ಪೊಲೀಸರು ಭಯಂಕರವಾಗಿ ಲಾಠಿಚಾರ್ಜು ಮಾಡಿದರು. ಸಭೆ ನೂಕುನುಗ್ಗಲು ಅರಚಾಟ ಚೀರಾಟಗಳಿಂದ ತುಂಬಿ ಹೋಯಿತು. ಪೊಲೀಸರ ರಕ್ಷಣೆಯಲ್ಲಿ ಮುಖ್ಯಮಂತ್ರಿಗಳು ಕಾರನ್ನೇರಿ ಹೊರಟರು. ಮೀರಾನಾಯಕ, ಕೋಟಿ, ರಾಮದಾಸರನ್ನು ಸೇರಿದಂತೆ ನೂರಾರು ಹೋರಾಟಗಾರರನ್ನು ಬಂಧಿಸಲಾಯಿತು.

ಪ. ಮಲ್ಲೇಶ, ಸ.ರಮೇಶ, ಸ.ರ. ಸುದರ್ಶನ ಮುಂತಾದವರ ಮತ್ತೊಂದು ಚಳವಳಿಗಾರರ ತಂಡವನ್ನು ಪಠ್ಯಪುಸ್ತಕ ಮುದ್ರಣಾಲಯದ ಬಳಿ ಬಂಧಿಸಲಾಯಿತು.

ಚಳವಳಿ ಅಂದು ವಿದ್ಯಾರ್ಥಿಗಳ, ಯುವಕರ ಕೈ ಸೇರಿ ಅಹಿಂಸಾತ್ಮಕ ಸ್ವರೂಪವನ್ನು ಪಡೆಯಿತು. ಗಂಗೋತ್ರಿಯ ಸಾವಿರಾರು ವಿದ್ಯಾರ್ಥಿಗಳು, ಬಂಧನದಿಂದ ತಪ್ಪಿಸಿಕೊಂಡ ನೂರಾರು ಕನ್ನಡ ಕಾರ್ಯಕರ್ತರು ಬೃಹತ್ ಮೆರವಣಿಗೆ ತೆಗೆದರು. ಆ ಮೆರವಣಿಗೆಯು ಗೋಕಾಕ್ ಚಳವಳಿಯನ್ನು ಜಾರಿಗೆ ತರುವಂತೆ ಒತ್ತಾಯಿಸಿ ಘೋಷಣೆ ಕೂಗುತ್ತಾ, ಬಂಧಿತ ಕಾರ್ಯಕರ್ತರನ್ನು ಕೂಡಲೇ ಬಿಡುಗಡೆ ಮಾಡುವಂತೆ ಒತ್ತಾಯಿಸುತ್ತಾ ಗಂಗೋತ್ರಿಯಿಂದ ಹೊರಟು ಸರಸ್ವತಿಪುರದ ಕಾಂತರಾಜೇ ಅರಸ್ ರಸ್ತೆಯಲ್ಲಿದ್ದ ಪೊಲೀಸ್ ಠಾಣೆಯ ಮುಂದೆ ಬಂದು ಧರಣಿ ಕುಳಿತಿತು.

ಈ ಧರಣಿ ಸತ್ಯಾಗ್ರಹ ತೀವ್ರವಾಗತೊಡಗಿತು. ಆಗ ಮೈಸೂರಿನ ಎಸ್‌ಪಿ ಆಗಿದ್ದ ರೇವಣಸಿದ್ಧಯ್ಯ (ಈಗಿನ ರಾಜಕಾರಣಿ)ನವರು ಸ್ಥಳಕ್ಕೆ ಬಂದು ಧರಣಿ ನಿರತರಾದವರ ಜೊತೆ ಮಾತುಕತೆ ನಡೆಸಿದರು. ಬಂಧಿತರನ್ನು ಬಿಡುಗಡೆ ಮಾಡುವುದಾಗಿಯೂ ಧರಣಿಯನ್ನು ಹಿಂತೆಗೆದುಕೊಳ್ಳಬೇಕೆಂದು ಕೋರಿದರು. ಬರೀ ಮಾತಿಗೆ ಸತ್ಯಾಗ್ರಹಿಗಳು ಜಗ್ಗಲಿಲ್ಲ. ರೇವಣಸಿದ್ಧಯ್ಯ ಕೂಡಲೇ ಬಂಧಿತರನ್ನು ಬಿಡುಗಡೆ ಮಾಡುವಂತೆ ಆಜ್ಞೆ ಮಾಡಿದರು. ಧರಣಿ ಸತ್ಯಾಗ್ರಹವನ್ನು ಹಿಂತೆಗೆಯಲಾಯಿತು.

ಈ ಘಟನೆ ರಾಜ್ಯಮಟ್ಟದ ಸುದ್ದಿಯಾಯಿತು. ಧಾರವಾಡದಿಂದ ಚಂಪಾ, ಪಾಪು, ಕಣವಿ, ಕಲ್ಬುರ್ಗಿ ಮುಂತಾದ ಗೆಳೆಯರು ಮೈಸೂರಿನ ಗೆಳೆಯರನ್ನು ಸಂಪರ್ಕಿಸಿದರು. ಅಲ್ಲಿ ರಾಜ್ಯಮಟ್ಟದ ಕನ್ನಡ ಕ್ರಿಯಾ ಸಮಿತಿ ರಚಿತವಾಯಿತು. ರಾಜ್ಯದ ಪ್ರತಿ ಜಿಲ್ಲೆ, ತಾಲ್ಲೂಕು, ಹೋಬಳಿ ಹಾಗೂ ಮುಖ್ಯ ಊರುಗಳಲ್ಲಿ ಕ್ರಿಯಾ ಸಮಿತಿಯ ಶಾಖೆಗಳು ಪ್ರಾರಂಭಗೊಂಡವು. ಜನ ಸ್ವಯಂಪ್ರೇರಿತರಾಗಿ ಚಳವಳಿಗೆ ದುಮುಕಿದರು. ಅಹಿಂಸಾತ್ಮಕ ಜನಪರ ಚಳವಳಿಯೊಂದು ಜೀವಭಾವಧಾರೆಯಾಗಿ ಹರಿಯತೊಡಗಿತು.

ಮೈಸೂರಿನಲ್ಲಿ ಪದೇ ಪದೇ ಬಂಧನಗಳಾಗತೊಡಗಿದವು. ಸಾವಿರಾರು ಜನರು ಬಂಧನಕ್ಕೆ ಹಾತೊರೆದು ಬರುತ್ತಿದ್ದರು. ಜಾಕಿ ಕ್ವಾರ್ಟಸ್, ರಿಸರ್ವ್ ಪೊಲೀಸ್ ವಿಭಾಗದ ಆವರಣಗಳಲ್ಲಿ ಬಂಧಿತರನ್ನು ತುಂಬುತ್ತಿದ್ದರು. ಅಲ್ಲಿಯೂ ಕಾರ್ಯಕರ್ತರು ಹಾಡುತ್ತಿದ್ದರು; ಸ್ಥಳದಲ್ಲೇ ನಾಟಕ ರಚನೆಯಾಗಿ ಅಭಿನಯಿಸಲ್ಪಡುತ್ತಿದ್ದವು. ಇದರಲ್ಲಿ ಪೊಲೀಸರು ಕೂಡ ಭಾಗಿಗಳಾಗುತ್ತಿದ್ದರು. ಈ ನಡುವೆ ನಾನು, ರಾಮದಾಸ್ ಮುಖ್ಯ ಭಾಷಣಕಾರರಾಗಿ ಪರಿವರ್ತಿತರಾಗಿದ್ದೆವು. ಕೊಡಗಿನ ಗೆಳೆಯರು ಕೊಡಗು ಜಿಲ್ಲೆಯಲ್ಲಿ ಭಾಷಣಕ್ಕೆಂದು ನಮ್ಮನ್ನು ಕರೆದೊಯ್ದರು. ಕೊಡಗಿನ ಮೂರು ತಾಲ್ಲೂಕುಗಳ ಮುಖ್ಯ ಊರುಗಳಲ್ಲಿ ಗೋಕಾಕ್ ಚಳವಳಿಯ ಉದ್ದೇಶವನ್ನು ಕುರಿತು ನಾವು ಮಾತನಾಡಿ ಚಳವಳಿಗೆ ಒಂದು ತಾತ್ವಿಕ ಸ್ವರೂಪವನ್ನು ತರಲು ಯತ್ನಿಸಿದೆವು.

ರಾಜ್ಯದಲ್ಲಿ ಚಳವಳಿ ಪಡೆದುಕೊಳ್ಳುತ್ತಿದ್ದ ಕಾವು ಮುಖ್ಯಮಂತ್ರಿಗಳಿಗೆ ತಲೆನೋವಾಗಿ ಪರಿಣಮಿಸಿತ್ತು. ಜೊತೆಗೆ ಮೈಸೂರಿನ ಸಮಾರಂಭದಲ್ಲಿ ಅವರಿಗಾದ ಅವಮಾನ ಅವರನ್ನು ವ್ಯಘ್ರರನ್ನಾಗಿಸಿತ್ತು. ಮೈಸೂರಿನ ಚಳವಳಿಗಾರರ ಮೇಲೆ ಉಗ್ರಕ್ರಮ ಜರುಗಿಸುವಂತೆ ಅವರು ಇಲ್ಲಿನ ಎಸ್‌ಪಿ ಅವರಿಗೆ ಅಪ್ಪಣೆ ಮಾಡಿದರು. ಇಂಥ ಒಂದು ದಿನ ಸಂಜೆ 7ರ ಸಮಯದಲ್ಲಿ ನಾವು ಮೈಸೂರಿನ ಡಿ. ಬನುಮಯ್ಯ ಕಾಲೇಜಿನ ಕೊಠಡಿಯೊಂದರಲ್ಲಿ ಸಭೆ ಸೇರಿ ಮುಂದಿನ ಚಳವಳಿಯ ಕಾರ್ಯತಂತ್ರವನ್ನು ರೂಪಿಸುತ್ತಿದ್ದೆವು. ಇದ್ದಕ್ಕಿದ್ದಂತೆ ಪೊಲೀಸರು ನಮ್ಮನ್ನು ಸುತ್ತುವರಿದು ಬಂಧಿಸಿದರು. ಕೊಠಡಿಯೊಂದರಲ್ಲಿ ಚರ್ಚೆಯಲ್ಲಿದ್ದ ನಮಗೆ ಪೊಲೀಸರು ಬರುವ ಸುಳಿವು ಸಿಕ್ಕಿರಲಿಲ್ಲ. ತಪ್ಪಿಸಿಕೊಳ್ಳಲು ಸಾಧ್ಯವೂ ಇರಲಿಲ್ಲ. ಆದಿನ ರಾತ್ರಿ ನಮ್ಮೆಲ್ಲರನ್ನು ಒಟ್ಟಿಗೆ ಇಟ್ಟಿರಲಿಲ್ಲ. ಮೈಸೂರು ನಗರದ ವಿವಿಧ ಪೊಲೀಸ್ ಠಾಣೆಗಳ ಸೆಲ್‌ಗಳಲ್ಲಿ ಕಳ್ಳರು, ಕಾಕರ ಜೊತೆ ಇಟ್ಟರು. ಹೇಲು ಉಚ್ಚೆಗಳ ವಾಸನೆಯಲ್ಲಿ ರಾತ್ರಿ ಕಳೆಯಲಾಯಿತು. ಬೆಳಗಾದರೂ ನಮ್ಮನ್ನು ನ್ಯಾಯಾಲಯಕ್ಕೆ ಕರೆತರಲಿಲ್ಲ. ಅಂದು ಸಂಜೆ 4.30 ಹೊತ್ತಿಗೆ ನಮ್ಮನ್ನು

ನ್ಯಾಯಾಲಯಕ್ಕೆ ಕರೆತರಲಾಯಿತು. ನ್ಯಾಯಾಲಯದಲ್ಲಿ ವಕೀಲರುಗಳು ಆಗಲೇ ಮನೆಗಳಿಗೆ ಹೋಗಿದ್ದರು. ಆದರೆ ಆಪತ್ತಿಗಾದವನ ನೆಂಟನೆಂಬಂತೆ ಶಿವಬಸಪ್ಪ ಎಂಬ ವಕೀಲರು ನಮಗೆ ದೊರೆತರು. ಅವರು ನಮ್ಮನ್ನು ಜಾಮೀನಿನ ಮೇಲೆ ಬಿಡಿಸಿದರು.

ಆದರೆ ಅದೇ ವೇಳೆ ಅತ್ಯಂತ ಚುರುಕಾಗಿ, ಅತ್ಯಂತ ನಾಟಕೀಯವಾಗಿ ಘಟನೆಯೊಂದು ಜರುಗಿ ಹೋಯಿತು. ನ್ಯಾಯಾಲಯದಲ್ಲಿ ಜಾಮೀನಿನ ಮೇಲೆ ಬಿಡುಗಡೆಗೊಂಡು, ಕೋರ್ಟ್ ಹಾಲ್‌ನಿಂದ ಹೊರಬಂದು, ನ್ಯಾಯಾಲಯದ ಆವರಣದಲ್ಲಿ ನಿಂತಿರುವ ಕ್ಷಣದಲ್ಲೇ ಮತ್ತೆ ಪೊಲೀಸರು ನಮ್ಮನ್ನು ಬಂಧಿಸಲು ಹವಣಿಸಿದರು. ಗಂಗೋತ್ರಿಯಲ್ಲಿ ಮುಖ್ಯಮಂತ್ರಿಯವರ ಮೇಲೆ ಹಲ್ಲೆ ಮಾಡಿದ ಆರೋಪವನ್ನು ನಮ್ಮ ಮೇಲೆ ಹೊರಿಸಲಾಗಿತ್ತು. ನಾವು ಅಲ್ಲಿಂದ ಪೊಲೀಸರಿಂದ ತಪ್ಪಿಸಿಕೊಂಡು ಓಡಿದೆವು. ಮಲ್ಲೇಶ್, ರಾಮಲಿಂಗಂ ಒಂದು ಕಡೆ, ಸುದರ್ಶನ, ರಮೇಶ ಒಂದು ಕಡೆ, ಮಳಲಿ ವಸಂತಕುಮಾರ್ ಒಂದು ಕಡೆ ಓಡಿ ಪರಾರಿಯಾದರು. ನಾನು ಗೆಳೆಯರ ಸ್ಕೂಟರ್ ಏರಿ ಪೃಥ್ವಿ ಉದ್ಯಮ ಕೇಂದ್ರ ಸೇರಿದೆ. ರಾಮದಾಸ್ ಕೋರ್ಟ್‌ನ ಹಿಂಭಾಗದ ಗೋಡೆಯನ್ನು ಹಾರಿ ರೈಲ್ವೆಸ್ಟೇಷನ್ ದಾರಿ ಹಿಡಿದು ಬೆಂಗಳೂರು ಸೇರಿದರು.

ಮುಂದಿನ ಮೂರ್‍ನಾಲ್ಕು ದಿನಗಳು ನಮಗೆ ಭಯಂಕರವಾಗಿದ್ದವು. ನಮ್ಮ ಮನೆಗಳನ್ನು ಶೋಧಿಸಲಾಯಿತು; ನಮ್ಮ ಹೆಂಡತಿ ಮಕ್ಕಳನ್ನು ಪ್ರಶ್ನಿಸಲಾಯಿತು; ನಮ್ಮ ಗೆಳೆಯರನ್ನು ಹೆದರಿಸಲಾಯಿತು. ಮೈಸೂರಿನ ಗೆಳೆಯರ ಮೇಲೆ ಸರ್ಕಾರ ಮತ್ತು ಪೊಲೀಸರು ನಡೆಸುತ್ತಿರುವ ಹಲ್ಲೆಯನ್ನು ಪತ್ರಿಕೆಗಳು ಖಂಡಿಸಿದವು. ನಾಡಿನ ಪ್ರಜ್ಞಾವಂತರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಇದಕ್ಕೆ ಹೆದರಿದ ಸರ್ಕಾರ ಪೊಲೀಸರನ್ನು ಸುಮ್ಮನಿರುವಂತೆ ಸೂಚನೆ ನೀಡಿತು.

ಮತ್ತೆ ಮುಂದಿನದು ಇತಿಹಾಸ. ಬೆಂಗಳೂರಿಗೆ ಹೋದ ರಾಮದಾಸ್ ಏಕೋ ನಮ್ಮ ಚಳವಳಿ ಜೊತೆ ಬೆಸೆದುಕೊಳ್ಳಲೇ ಇಲ್ಲ. ಅಲ್ಲಿಯವರೆಗೆ ಲಂಕೇಶ್‌ರನ್ನು ವಿರೋಧಿಸುತ್ತಿದ್ದ ರಾಮದಾಸ್ - ರಾಮದಾಸ್‌ರನ್ನು ಡಂಬಾಯಗಾರನೆಂದು ಟೀಕಿಸುತ್ತಿದ್ದ ಲಂಕೇಶ್ ಆತ್ಮೀಯರಾದರು. ಲಂಕೇಶ್ ಪತ್ರಿಕೆಯಲ್ಲಿ ರಾಮದಾಸ್ ಬಗ್ಗೆ ಒಳ್ಳೆಯ ಮಾತುಗಳು ಬಂದವು.

ಈ ಜನಪರ ಚಳವಳಿಗೆ ಧುಮುಕುವಂತೆ ಅಖಿಲ ಕರ್ನಾಟಕ ಕನ್ನಡ ಕ್ರಿಯಾಸಮಿತಿ ಡಾ. ರಾಜಕುಮಾರರನ್ನು ಕೋರಿತು. ರಾಜಕುಮಾರರ ಪ್ರವೇಶದಿಂದ ಚಳವಳಿ ತೀವ್ರಗೊಂಡು ಕರುನಾಡಿನ ಮನೆಮನೆಗೂ ವ್ಯಾಪಿಸಿತು. ಜನತೆಯ ಒತ್ತಾಯಕ್ಕೆ ಸರ್ಕಾರ ಮಣಿಯಿತು. ಗೋಕಾಕ್ ವರದಿಯನ್ನು ಅದರ ಆಶಯದೊಂದಿಗೆ ಜಾರಿಗೆ ತರಲು ಒಪ್ಪಿತು. ಆದರೆ ಅಲ್ಪಸಂಖ್ಯಾತ ಭಾಷಿಕರ ಸಂವಿಧಾನಾತ್ಮಕ ಹಕ್ಕು ಎಂಬ ನೆಪ ಹೂಡಿ ಕನ್ನಡ ಭಾಷೆಯನ್ನು ಪ್ರಥಮ ಕಡ್ಡಾಯ ಭಾಷೆಯಾಗಿರಬೇಕೆಂಬ ನಿಯಮವನ್ನು ಸಡಿಲಗೊಳಿಸಿತು. ಮೂರು ಭಾಷೆಯಲ್ಲಿ ಕನಿಷ್ಠ ಒಂದಾಗಿಯಾದರೂ ಇರಬೇಕೆಂದು ಸೂಚಿಸಿತು. ಈಗ ಕನ್ನಡ ನಾಡಿನಲ್ಲಿ ಓದುವ ಮಕ್ಕಳು ಕನಿಷ್ಠ ದ್ವಿತೀಯ, ತೃತೀಯ ಭಾಷೆಯನ್ನಾಗಿಯಾದರೂ ಕನ್ನಡವನ್ನು ಕಲಿಯುತ್ತಿದ್ದಾರೆ. ಇದು ಗೋಕಾಕ್ ಚಳವಳಿಯ ಹೋರಾಟದ ಫಲ; ರಾಮದಾಸ್‌ರಂಥ ಸಮಾಜಮುಖಿ ಕನಸುಗಾರರ ದುಡಿಮೆಯ ಫಲ.

# ಆ ನದಿ ಮಾಯವಾಯಿತೇ...

ಎಸ್.ಕೆ. ಹನುಮಂತಯ್ಯ

ಅಂದು ಮುಂಜಾನೆ ವಾಕಿಂಗ್ ಮುಗಿಸಿ ಮನೆಗೆ ಕಾಲಿಟ್ಟೆ. 'ರಾಮದಾಸ್ ಹೋದರಂತೆ...'ಎಂದಳು ಶೈಲಜ. ಅವಳ ದನಿ ಭಾರವಾಗಿತ್ತು. ನನಗೆ ಮಾತುಗಳು ಹೊರಡಲಿಲ್ಲ. ಕಣ್ಣುಗಳು ತುಂಬಿಬಂದವು. ಅನೇಕ ನೆನಪುಗಳು ಕಣ್ಣಿನಾಳದಿಂದ ಮೆಲ್ಲಗೆ ಎದ್ದು ಎತ್ತಲೋ ಮೌನ ಮೆರವಣಿಗೆ ಹೊರಟವು.

ಈಗ್ಗೆ ಒಂಭತ್ತು ವರ್ಷಗಳ ಹಿಂದೆ ನಾನೂ ಶೈಲಜ ಪ್ರೀತಿಸಿ ಮದುವೆಯಾಗಲು ನಿರ್ಧರಿಸಿದ್ದೆವು. ನಾನು ದಲಿತ, ಅವಳು ಲಿಂಗಾಯ್ತ. ಇಬ್ಬರದೂ ಒಂದೇ ಊರು. ಜಾತಿಯೇ ದೇವರೆಂದು ನಂಬಿದ ನಮ್ಮ ಊರಿನ ಇತಿಹಾಸದಲ್ಲಿ ಯಾರೂ ನಡೆಯದ ಹಾದಿಗೆ ಹೆಜ್ಜೆಯಿಟ್ಟಿದ್ದೆವು.

ಆಗ ತಾನೆ ಎಂ.ಎ ಮುಗಿಸಿದ್ದ ನಮಗೆ ಪ್ರೀತಿಯ ಹೊರತಾಗಿ ಬೇರೆ ಉದ್ಯೋಗವಿರಲಿಲ್ಲ. ಸಾಹಿತ್ಯದ ವಿದ್ಯಾರ್ಥಿಗಳಾಗಿದ್ದರಿಂದ ನಮಗೆ ಜಾತಿ, ಧರ್ಮ, ಸಂಪ್ರದಾಯಗಳನ್ನು ಉಲ್ಲಂಘಿಸುವುದು ಮಹತ್ವದ ಸಾಧನೆಯೆನಿಸಿತ್ತು. ಹೇಗಾದರೂ ಸಾಹಸ ಮಾಡಿ ನಾವಿಬ್ಬರೂ ಮದುವೆಯಾಗಬೇಕು. ನಂತರ ನಮ್ಮನ್ನು ಕೊಂದರೂ ಪರವಾಗಿಲ್ಲ ಎಂಬ ಅಚಲ ನಿರ್ಣಯ ನಮ್ಮದಾಗಿತ್ತು. ಇಂಥ ಸಂದರ್ಭದಲ್ಲಿ ನಮ್ಮ ಜಾತಿವಿರೋಧಿ ಪ್ರೇಮದಂಗೆಗೆ ಆಸರೆಯಾಗಿ ಕಂಡದ್ದು ಮೈಸೂರಿನ 'ಮಾನವ ಮಂಟಪ' ಅಂತರ್ಜಾತಿ ಒಲವಿನ ವಿವಾಹ ವೇದಿಕೆ.

ಒಂದು ರಾತ್ರಿ ಮೈಸೂರಿಗೆ ಬಸ್ ಹತ್ತಿದೆವು. ಹಿಂದೆ ಯಾರೋ ನಮ್ಮನ್ನು ಬೇಟೆಯಾಡಲು ಹಿಂಬಾಲಿಸುತ್ತಿರಬಹುದು ಎಂಬ ಭೀತಿ ಬಸ್ಸಿನ ವೇಗದಂತೆಯೇ ಕಾಡುತ್ತಿತ್ತು. ಮಧ್ಯರಾತ್ರಿ ಹೊತ್ತಿಗೆ ಮೈಸೂರು ತಲುಪಿದೆವು. ಆ ರಾತ್ರಿ ಯಾಕೋ ಭಯ ಹುಟ್ಟಿಸುತ್ತಿತ್ತು. ನಮ್ಮ ಬಳಿ ಹಣ ಇರಲಿಲ್ಲ. ಉಟ್ಟ ಬಟ್ಟೆಯಲ್ಲೇ ಊರು ಬಿಟ್ಟ ಸ್ಥಿತಿ, ನಿರುದ್ಯೋಗ, ಜಾತಿ ಮೀರುವ ಅಗಾಧ ಕನಸು, ಆ ರಾತ್ರಿ ಬಸ್ ನಿಲ್ದಾಣದಲ್ಲೇ ಮಲಗಿದಂತೆ ಎಚ್ಚೆತ್ತು ಹಗಲಿಗಾಗಿ ಕಾದೆವು.

ಆ ಬೆಳಗು ಹೊಸತಾಗಿ ಕಂಡಿತು. ಮಗುತನ ಕಳೆಯಲು ಮೂಡಿದ ಗಡ್ಡ, ಮೀಸೆಯಂತೆ ಸಂಸಾರಿಗಳಾಗುವ ಘಟ್ಟ ವಿಚಿತ್ರ ಆತಂಕವನ್ನೂ ಆನಂದವನ್ನೂ ಸೃಷ್ಟಿಸಿತು.

ಕವಿ ಎಚ್.ಗೋವಿಂದಯ್ಯನವರ ಸಲಹೆಯಂತೆ ಸ್ವಾಮಿ ಆನಂದ್‌ರನ್ನು ಭೇಟಿಯಾದೆವು. ಅವರ ಮನೆಯಲ್ಲೇ ಉಳಿದೆವು. ಒಂದು ದಿನ ಕಳೆಯಿತು. ಎರಡು ದಿನ ಕಳೆಯಿತು. ಮದುವೆ ನಡೆಯಲಿಲ್ಲ. ನಮಗೆ ಕಳವಳವಾಗತೊಡಗಿತು. ಸ್ವಾಮಿ ಆನಂದ್‌ರನ್ನು ಕೇಳಿದಾಗ ಅವರು, 'ಪ್ರೊ. ಕೆ.ರಾಮದಾಸ್ ಅವರ ಬಳಿಗೆ ಹೋಗೋಣ, ಅವರು ಏನು ಹೇಳುವರೋ ಹಾಗೆ ಮಾಡೋಣ'ಎಂದರು.

ಕುವೆಂಪುನಗರದ ಪಂಚಮಂತ್ರ ರಸ್ತೆಯ 'ಚಾರ್ವಾಕ' ಹೆಸರಿನ ಮನೆಗೆ ಹೋದೆವು. ಕೂಡಲೇ ಪ್ರೊ.ಕೆ.ರಾಮದಾಸ್ ಒಳಗಿನಿಂದ ಬಂದರು. ನೋಡಲು ಯೋಧನಂತೆ ಕಂಡರು. ನನ್ನ ಕೈ ಕಾಲು ಕಂಪಿಸಿ ಬೆವರಲಾರಂಭಿಸಿದೆ. ನಮಗೆ ಕೂರಲು ಕುರ್ಚಿ ಹಾಕಿದರು. ನಮ್ಮನ್ನು ಗಂಭೀರವಾಗಿ ದಿಟ್ಟಿಸುತ್ತ, ಯಾವ ಊರು? ಯಾವ ಜಾತಿ? ಯಾವಾಗಿನಿಂದ ಪ್ರೀತಿಸುತ್ತಿದ್ದೀರಿ? ಉದ್ಯೋಗ ಇದೆಯಾ? ಇತ್ಯಾದಿ ಪ್ರಶ್ನೆಗಳನ್ನು ಕೇಳಿದರು. ನಾವು ತೊದಲುತ್ತ ಉತ್ತರಿಸಿದೆವು. ಸ್ವಾಮಿ ಆನಂದ್ ನಮ್ಮ ಪರವಾಗಿ ಭರವಸೆಯ ಮಾತನ್ನಾಡಿದರು.

ರಾಮದಾಸ್‌ರವರು, 'ನೋಡಿ, ಸುಮ್ನೆ ಪ್ರೀತಿ ಅಂತ ಬಂಡೆಗೆ ತಲೆ ಚಚ್ಕೋಬ್ಯಾಡಿ. ಏನೂ ಕೆಲ್ಸ ಇಲ್ಲ ಅಂತೀರ, ಹೆಂಗೆ ಜೀವ್ನ ನಡೆಸ್ತೀರಾ? ಸುಮ್ನೆ ನಿಮ್ಮ ಊರಿಗೆ ಹೋಗ್ಬಿಡಿ' ಎಂದು ಸಿಗರೇಟ್ ಎಳೆಯುತ್ತ ನಮ್ಮ ಕಣ್ಣುಗಳನ್ನು ಗಾಢವಾಗಿ ನೋಡತೊಡಗಿದರು. ನನಗೆ ಅವರ ಮುಖದಲ್ಲಿ ಅಸಂಖ್ಯಾತ ತಾಯಂದಿರ ವಾತ್ಸಲ್ಯ ಮಡುಗಟ್ಟಿರುವಂತೆ ಕಂಡಿತು. ಕಠೋರವಾದ ಪ್ರಾಮಾಣಿಕತೆ, ನೈತಿಕತೆ, ವೈಚಾರಿಕತೆ ಹಾಗೂ ಅಪ್ಪಟ ಜಾತ್ಯತೀತತೆಯ ಪ್ರಭೆಯೊಂದು ನಮ್ಮನ್ನು ಪರೀಕ್ಷಿಸುತ್ತಿರುವಂತೆ ಭಾಸವಾಯಿತು. ಧೈರ್ಯದಿಂದ 'ಸಾರ್ ನಾವು ಏನಾದರೂ ಕೆಲಸ ಮಾಡಿ ಬದುಕ್ತೀವಿ. ನಮಗೆ ಮದ್ವೆ ಮಾಡಿ ಸಾರ್' ಎಂದು ಪ್ರಾರ್ಥಿಸಿದೆವು. ನಮ್ಮ ಮಾತನ್ನು ಆಲಿಸಿ ಮುಗುಳ್ನಕ್ಕ ಅವರು ಮದುವೆ ಏರ್ಪಡಿಸಲು ಸ್ವಾಮಿ ಆನಂದ್‌ಗೆ ತಿಳಿಸಿದರು. ದೊಡ್ಡ ಪರೀಕ್ಷೆಯಲ್ಲಿ ತೇರ್ಗಡೆಯಾದಂಥ ಸಂಭ್ರಮ ನಮ್ಮದಾಯಿತು.

ಮಾನವ ಮಂಟಪದಲ್ಲಿ ನಮ್ಮ ವಿವಾಹ ಕಾರ್ಯಕ್ರಮ ಏರ್ಪಾಟಾಯಿತು. ಪ್ರೊ.ರಾಮದಾಸ್ ಅವರೇ ಅಧ್ಯಕ್ಷತೆ ವಹಿಸಿದ್ದರು. ಕುವೆಂಪು ಅವರ 'ಮಂತ್ರ ಮಾಂಗಲ್ಯ'ದ ನಿಯಮದಂತೆ ಸರಳ ವಿವಾಹವಾದೆವು. ಆ ಕಾರ್ಯಕ್ರಮದಲ್ಲಿ ರಾಮದಾಸ್ ಅವರು ಆಡಿದ ಮಾತು ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿತು. ನಮ್ಮೊಳಗಿನ ಭಯವನ್ನು ಕಳೆದು, ಸಾಮಾಜಿಕ ಬದಲಾವಣೆಯ ಬಗ್ಗೆ ಕನಸುವಂತೆ ಮಾಡಿತು. ದುಃಖದಲ್ಲಿ ಕಂಗೆಟ್ಟಂತಿದ್ದ ನಮ್ಮ ಮುಖ ನೋಡಿದ ಅವರು, 'ನೋಡಿ, ಈ ದೇಶದಲ್ಲಿ ಪ್ರೀತಿ ಮಾಡೋದೇ ಅಪರಾಧ. ಏನೋ ಪಾಪ ಮಾಡಿದವರಂತೆ ಈ ಹುಡುಗ, ಹುಡುಗಿ ಆತಂಕ ಅನುಭವಿಸುತ್ತಿದ್ದಾರೆ. ಇದಕ್ಕೆಲ್ಲ ಯಾರು ಕಾರಣ?ಜೀವಕ್ಕಿಂತ ಜಾತೀನೇ ಮುಖ್ಯ ಅಂತ ಅನೇಕರು ನಂಬಿದ್ದಾರೆ. ಈ ಜಾತಿಯ ಬೆಂಕಿ, ಬುದ್ಧನಂಥವರು ಹುಡುಕಿದ ಪ್ರೇಮವನ್ನು ಸುಡುತ್ತಿದೆ. ಜಡ ಸಂಪ್ರದಾಯ, ಆರ್ಥಿಕ ಹಾಗೂ

ಧಾರ್ಮಿಕ ಅಹಂಕಾರಗಳು ತಂದೆ ತಾಯಿಯರ ರೂಪ ಪಡೆದು ಅಂತರ್ಜಾತೀಯ ಪ್ರೇಮಿಗಳನ್ನು ಬಲಿ ತೆಗೆದುಕೊಳ್ಳುತ್ತಿವೆ. ಪ್ರತಿಯೊಬ್ಬರಲ್ಲೂ ಇಂಥ ಅಮಾನುಷ ಜಾತಿಯ ವಿರುದ್ಧ ದಂಗೆ ಮೂಡಬೇಕು'ಎಂದು ತೀವ್ರತೆಯಿಂದ ಮಾತನಾಡಿದರು.

ಅವರ ಒಂದೊಂದು ನುಡಿಯಲ್ಲೂ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಲೋಹಿಯಾ, ಕುವೆಂಪುರಂಥವರು ಮೂಡಿಬಂದಂತಾಯಿತು. ಒಂದು ಮಾನವೀಯ ಆಂದೋಲನದ ಪರಂಪರೆಯನ್ನು ತಮ್ಮ ಆಂತರ್ಯವನ್ನಾಗಿಸಿಕೊಂಡಂತೆ ಕಂಡ ರಾಮದಾಸ್, ಅಂದು ನಮ್ಮೊಳಗೆ ಪ್ರಗತಿಪರ ಹಾಗೂ ವೈಚಾರಿಕ ಪರಂಪರೆಯ ಭಾಗವಾಗಿ ಬದುಕುವ ಸುಖದ ಬಗ್ಗೆ ಮತ್ತು ತುರ್ತಿನ ಬಗ್ಗೆ ಸ್ಪಷ್ಟತೆ ಮೂಡಿಸಿದರು.

ವಿವಾಹದ ಮರುದಿನ ನನಗೆ ರಾಮದಾಸ್ ಅವರೂ ಶೈಲಜಳಿಗೆ ದೇವನೂರ ಮಹಾದೇವ ಅವರೂ ಪೋಷಕರಾಗಿ ಸಹಿ ಹಾಕಿ ನಮ್ಮ ವಿವಾಹದ ನೋಂದಣಿ ಮಾಡಿಸಿದರು. ಅಂದು ಅವರಿಬ್ಬರಲ್ಲಿ ನಾವು ತಾಯಿ, ತಂದೆ, ಬಂಧು ಬಳಗವನ್ನೆಲ್ಲ ಕಂಡ ಧನ್ಯತೆ ಅನುಭವಿಸಿದೆವು. ಅನಾಥಪ್ರಜ್ಞೆ ಅಳಿದ ನಿರಾಳತೆ ನಮಗಾಯಿತು.

ನೂರಾರು ಪ್ರೇಮಿಗಳಿಗೆ ಅಂತರ್ಜಾತೀಯ ವಿವಾಹವೇರ್ಪಡಿಸಿದ ರಾಮದಾಸ್, ಸದಾ ಜಾತ್ಯತೀತ ಮತ್ತು ಹಿಂಸಾತೀತ ಸಮಾಜ ನಿರ್ಮಾಣದ ಬಗ್ಗೆ ಧ್ಯಾನಿಸುತ್ತಿದ್ದ ವಿಶಿಷ್ಟ ವ್ಯಕ್ತಿ. ಅಂತರ್ಜಾತಿ ವಿವಾಹಿತರ ಗುರು ಹಿರಿಯರಲ್ಲಿ ಒಬ್ಬರಂತಿದ್ದ ಅವರು, ಜಾತಿ ವಿರೋಧಿ ಪ್ರೇಮದಂಗೆಗೆ ಸ್ಫೂರ್ತಿಯಾದವರು.

ಸಮಕಾಲೀನ ಸಂದರ್ಭದಲ್ಲಿ ಕ್ರೂರ ಜಾತಿ, ಧರ್ಮ, ದೇವರು, ಪ್ರಭುತ್ವಗಳಲ್ಲಿ ಒಂದಕ್ಕಾದರೂ ಶರಣಾಗದವರು ವಿರಳ. ಈ ನಾಲ್ಕು ಶಕ್ತಿ ಕೇಂದ್ರಗಳಿಗೆ ರಾಜಿಯಾಗಿ, ಹುಸಿ ಆದರ್ಶಗಳನ್ನು ಮಾಧ್ಯಮಗಳಲ್ಲಿ ಎರಚುತ್ತ ರಾರಾಜಿಸುವವರೇ ಅಧಿಕ. ಆದರೆ ಇಂಥ ನೆಲೆಗಳ ವಿರುದ್ಧ ನಿಷ್ಠುರವಾದ ದನಿಯೆತ್ತಿ ಕೊನೆವರೆಗೂ ಭ್ರಷ್ಟರಾಗದೆ ಬದುಕಿದವರು ರಾಮದಾಸ್. ಯಾವುದೇ ಬಗೆಯ ಜಾತಿವಿನಾಶದ ಜೀವನಶೈಲಿಗಳನ್ನು ತಮ್ಮ ವೈಯಕ್ತಿಕ ಹಾಗೂ ಕೌಟುಂಬಿಕ ಪದರದೊಳಗೆ ಇಳಿಯದಂತೆ ಎಚ್ಚರವಹಿಸಿ, ಪ್ರಗತಿಪರತೆ, ಜಾತ್ಯತೀತತೆಯನ್ನು ನಟಿಸುವಂಥ ಅವಕಾಶವಾದಿಗಳ ನಡುವೆ ನುಡಿದಂತೆ ನಡೆದವರು ರಾಮದಾಸ್. ತಾವು ನಂಬಿದ ಮೌಲ್ಯಗಳನ್ನು ಮಲಿನವಾಗದಂತೆ ಕಾಯ್ದುಕೊಂಡ ಅವರ ಬದುಕೇ ಒಂದು ಸಾಮಾಜಿಕ ಹಾಗೂ ವೈಚಾರಿಕ ಆಂದೋಲನದ ಚರಿತ್ರೆ.

ವೈಯಕ್ತಿಕ ವಿಕಾಸದ ಲಿಖಿತ ಮಾದರಿಯನ್ನು ಜಿಗಿದು, ಸಾಮೂಹಿಕ ವಿಕಾಸದ ಮೌಖಿಕ ಶಕ್ತಿಯಾಗಿ ಬೆಳೆದವರು ರಾಮದಾಸ್. ತಮ್ಮ ಒಟ್ಟು ಆಯಷ್ಯದಲ್ಲಿ ಬಹುಭಾಗ ಮಾನವೀಯ ಮೌಲ್ಯಗಳಿಗೆ ಪಾಲುಕೊಟ್ಟಂಥ ಅವರು, ನಿಷ್ಕ್ರಿಯ ಸಾಮಾಜಿಕ ಅನುಕಂಪದ ನೆಲೆಯನ್ನು ಧಿಕ್ಕರಿಸಿ, ಕ್ರಿಯಾಶೀಲ ಹೋರಾಟಗಳಿಗೆ ಏಕಾಂಗಿಯಾದರೂ ಧುಮುಕಿದವರು.

ನನ್ನ ತಲೆಮಾರಿನ ಕೆಲವು ಗೆಳೆಯರು ಮೈಸೂರಿಗೆ ಹೋದಾಗಲೆಲ್ಲ ಅವರನ್ನು ಭೇಟಿ ಮಾಡುತ್ತಿದ್ದೆವು. ಯುವಕರ ಜೊತೆ ಮಾತನಾಡುವುದೆಂದರೆ ಅವರಿಗೆ ತೀವ್ರರೋಮಾಂಚನದ

ಸಂಗತಿಯಾಗಿತ್ತು. ಅವರೊಡನೆ ಮಾತನಾಡಿದಾಗೆಲ್ಲ ಮೈತುಂಬ ಚಳವಳಿಯ ಚಿಲುಮೆ ಹರಿದಾಡಿದಂತಾಗುತ್ತಿತ್ತು. ಆ ಜೀವದಲ್ಲಿ ಯಾವ ನದಿ ಅಡಗಿತ್ತು!

ಕಳೆದ ಕೆಲವು ತಿಂಗಳ ಹಿಂದೆ 'ಊರು ಕೇರಿ'ಗೆ ಅವರನ್ನು ಸಂದರ್ಶಿಸಲು ಹೋಗಿದ್ದೆ. ಬೆಳಗಿನಿಂದ ಸಂಜೆ ತನಕ ನಮ್ಮೊಡನೆ ಮಾತನಾಡಿದರು. ಅಂದು ಬಾಲ್ಯ ಕಾಲದಿಂದ ವರ್ತಮಾನದ ತನಕ ಅವರ ಆತ್ಮಕಥೆಯೊಳಗೆ ಜಾತಿ ವಿರೋಧಿ ಪ್ರೇಮದಂಗೆಯ ನದಿಯೊಂದು ಮಾನವೀಯತೆಯ ನೊರೆ ಚೆಲ್ಲಿ ಭೋರ್ಗರೆದದ್ದು ಕೇಳಿಸಿತು. ಈಗ ಆ ನದಿ ಮಾಯವಾಯಿತೆ? ಇಲ್ಲ, ಈ ನೆಲದ ಕೆಟ್ಟ ಜಾತಿ, ಧರ್ಮ, ಪ್ರಭುತ್ವ, ದೇವರು ಭ್ರಷ್ಟತೆಗಳನ್ನು ವಿರೋಧಿಸುತ್ತ, ಬುದ್ಧನನ್ನು ಹುಡುಕುವ ಸಹಸ್ರಾರು ಕಣ್ಣುಗಳಲ್ಲಿ ಅದು ಲೀನವಾಯಿತು.

# ಎದೆಗಾರ ಕೆ. ರಾಮದಾಸ್

**ಕೆ.ಶಶಿಕುಮಾರ್**

ಸಾಮಾಜಿಕ ವ್ಯವಸ್ಥೆಯಲ್ಲಿ ಅನ್ಯಾಯ, ಅಕ್ರಮಗಳು ಕಂಡು ಬಂದಾಗ, ದೌರ್ಜನ್ಯ, ದಬ್ಬಾಳಿಕೆ ಮೇಲುಗೈ ಪಡೆಯುತ್ತಿದೆ ಅನ್ನಿಸಿದಾಗ ಪ್ರೊ.ಕೆ ರಾಮದಾಸ್ ಅವರು ಅದನ್ನು ದಿಟ್ಟತನದಿಂದ ಎದುರಿಸಿ ಮೆಟ್ಟಿ ನಿಲ್ಲುತ್ತಿದ್ದ ರೀತಿ ಅನನ್ಯವಾದದ್ದು. ಅಂಥ ಕೆಲವು ಘಟನೆಗಳ ತುಣುಕುಗಳು ಇಲ್ಲಿವೆ. ಮೂರು ವರ್ಷಗಳ ಹಿಂದೆ ಪ್ರಭಾವಿ ವ್ಯಕ್ತಿಯೊಬ್ಬರ ಮನೆಯಲ್ಲಿ ಕೆಲಸ ಮಾಡಿ ಕೊಂಡಿದ್ದ ಲಕ್ಷ್ಮಿ ಎಂಬ ಬಡಬಾಲಕಿ ಆತ್ಮಹತ್ಯೆ ಮಾಡಿಕೊಂಡು ಸಾವಿಗೀಡಾಗಿದ್ದಳು. ಇದು ಆತ್ಮಹತ್ಯೆಯೋ? ಕೊಲೆಯೋ? ಎಂಬ ಬಗ್ಗೆ ಸಾದ್ಯಂತ ತನಿಖೆಯಾಗಬೇಕು. ಬಾಲಕಿ ಲಕ್ಷ್ಮಿ ಆತ್ಮಹತ್ಯೆ ಮಾಡಿಕೊಂಡು ಸಾವಿಗೀಡಾಗಿದ್ದರೂ ಆಕೆಯ ಮಾಲೀಕರು ನೀಡುತ್ತಿದ್ದ ಕಿರುಕುಳವೇ ಆತ್ಮಹತ್ಯೆಗೆ ಕಾರಣ ಎಂಬುದು ಮೇಲ್ನೋಟಕ್ಕೇ ಕಂಡುಬರುತ್ತಿದೆ. ಆದ್ದರಿಂದ ಸದರಿ ಮಾಲೀಕರನ್ನು ಬಂಧಿಸಿ ಕಾನೂನು ಪ್ರಕಾರ ವಿಚಾರಣೆಗೊಳಪಡಿಸಬೇಕು. ಇಡೀ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂಬ 'ಹಕ್ಕೊತ್ತಾಯ'ಗಳನ್ನು (ರಾಮದಾಸ್ ಅವರು 'ಬೇಡಿಕೆ' ಎನ್ನಲು ಬಯಸುತ್ತಿರಲಿಲ್ಲ) ಮಂಡಿಸಿ ಪ್ರಗತಿಪರ ಸಂಘಟನೆಗಳು ಲಕ್ಷ್ಮಿಯ ಶವವನ್ನು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಇಟ್ಟುಕೊಂಡು ಪ್ರತಿಭಟನೆ ನಡೆಸಿದವು.

ಆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಪ್ರೊ.ಕೆ. ರಾಮದಾಸ್ ಅವರು ಪ್ರತಿಭಟನಾಕಾರರನ್ನು ತಮ್ಮ ಭಾಷಣದಿಂದ ಉತ್ತೇಜಿಸಿ ಹೋರಾಟಕ್ಕೆ ಬಿಗು ತಂದಿದ್ದರು.

ತಮ್ಮ ಮನವೊಲಿಸಲು ಬಂದ ಅಂದಿನ ಪೊಲೀಸ್ ಆಯುಕ್ತ ಸಿ.ಚಂದ್ರಶೇಖರ್ ಅವರ ಪ್ರಯತ್ನಗಳಿಗೆ ಬಗ್ಗದ ಪ್ರತಿಭಟನಾಕಾರರು, ತಮ್ಮ ನೋವಿನ ಭಾವನೆಗಳಿಗೆ ಆಡಳಿತದಿಂದ ಸೂಕ್ತ ಸ್ಪಂದನೆ ದೊರಕುವವರೆಗೂ ಶವ ಸಂಸ್ಕಾರ ಮಾಡುವುದಿಲ್ಲ ಎಂದು ಖಡಕ್ಕಾಗಿ ಹೇಳಿದರು.

ಇದರಿಂದ ಪೊಲೀಸ್ ಅಧಿಕಾರಿಗಳ ಅಸಮಾಧಾನ ಆ ಚಳವಳಿಯ ಪ್ರೇರಕ ಶಕ್ತಿಯಾಗಿದ್ದ ಪ್ರೊ.ಕೆ. ರಾಮದಾಸ್ ಅವರೆಡೆಗೆ ತಿರುಗಿತು. ಆಗ ಆಯುಕ್ತರು ರಾಮದಾಸ್ ಅವರ ಮೇಲೆ ಒತ್ತಡ ಹೇರಲು ಯತ್ನಿಸಿದರೂ ಅದರಲ್ಲಿ ಫಲ ಕಾಣಲಿಲ್ಲ.

ಅವರಿಬ್ಬರ ನಡುವಿನ ಮಾತುಕತೆ ಸಂದರ್ಭದಲ್ಲಿ ಆಯುಕ್ತರ ಒತ್ತಡದಿಂದ ಸಿಡಿಮಿಡಿಗೊಂಡ ಪ್ರೊ. ರಾಮದಾಸ್ ಅವರು, ಆಯುಕ್ತರತ್ತ ತೋರು ಬೆರಳು ತೋರಿಸಿ ಕೆಲವು ಮಾತುಗಳನ್ನಾಡಿದರು. ಅಷ್ಟಕ್ಕೇ ತಾಳ್ಮೆ ಕಳೆದುಕೊಂಡ ಕೆಲವು ಇನ್ಸ್‌ಪೆಕ್ಟರ್‌ಗಳು, ರಾಮದಾಸ್ ಸೇರಿದಂತೆ ಅಲ್ಲಿದ್ದ ಪ್ರತಿಭಟನಾಕಾರರ ಮೇಲೆ ಮುಗಿಬಿದ್ದು ಲಾಠಿ ಪ್ರಹಾರ ನಡೆಸಿದಾಗ ಹಲವರಿಗೆ ತೀವ್ರ ಪೆಟ್ಟಾಯಿತು.

ಈ ಸುದ್ದಿ ತಿಳಿದು ರಾಮದಾಸ್ ಅವರ ನೂರಾರು ವಿದ್ಯಾರ್ಥಿಗಳು, ಹಿತೈಷಿಗಳು, ಅಭಿಮಾನಿಗಳು 'ನಮ್ಮ ಮೇಷ್ಟ್ರಿಗೇ ಲಾಠಿ ಎತ್ತಿದ ಈ ಪೊಲೀಸರಿಂದ ನಮಗೆ ರಕ್ಷಣೆಯುಂಟೆ? ಈ ದೌರ್ಜನ್ಯವನ್ನು ಖಂಡಿಸಲೇಬೇಕು'ಎಂದು ಕೆರಳಿ ನಿಂತಾಗ ಸ್ವತಃ ರಾಮದಾಸ್ ಅವರು ಈ ಯುವಶಕ್ತಿಯನ್ನು ನಿಯಂತ್ರಿಸಿ ತಾಳ್ಮೆ ಕಳೆದುಕೊಳ್ಳದಂತೆ ತಿಳಿ ಹೇಳಿದ್ದರು. ಆ ಮೂಲಕ ದೌರ್ಜನ್ಯವನ್ನು ಸಾತ್ವಿಕ ಹೋರಾಟದ ಮೂಲಕವೂ ಹತ್ತಿಕ್ಕಬಹುದು ಎಂಬ ನೀತಿ ಪಾಠ ಹೇಳಿದ್ದರು.

ಒಂದು ಹಂತದಲ್ಲಿ ಒಡನಾಡಿ ಸೇವಾ ಸಂಸ್ಥೆ ವಿರುದ್ಧ ಕೆಲವು ಪೊಲೀಸರೇ ಚಿತಾವಣೆ ನಡೆಸಲಾರಂಭಿಸಿದ್ದ ಸಂದರ್ಭದಲ್ಲಿ ಆ ಸಂಸ್ಥೆಯ ಪರವಾಗಿ ನಿಂತು. ಅದಕ್ಕೆ ನೈತಿಕ ಬೆಂಬಲ ನೀಡಿದ್ದ ಪ್ರೊ.ಕೆ.ರಾಮದಾಸ್ ಅವರು, ಪೊಲೀಸ್‌ವ್ಯವಸ್ಥೆಯೊಳಗಿನ ಭ್ರಷ್ಟತೆ , ಅಕ್ರಮಗಳ ವಿರುದ್ಧ ಕಿಡಿಕಾರುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದ್ದರು. ಹಾಗೆಂದು ಅವರು ಪೊಲೀಸ್ ವ್ಯವಸ್ಥೆಯನ್ನು ನಿರಂತರವಾಗಿ ವಿರೋಧಿಸಲಿಲ್ಲ. ಪೊಲೀಸರಿಂದ ಒಳ್ಳೆಯ ಕಾರ್ಯಗಳು ನಡೆದಾಗ ಅದನ್ನು ನೇರವಾಗಿ ಪ್ರಶಂಸಿದ್ದರು.

ರಾಜ್ಯ ಉಚ್ಚ ನ್ಯಾಯಾಲಯದ ಕೆಲವು ನ್ಯಾಯಾಧೀಶರು ನಗರದ ಹಿನಕಲ್‌ನಲ್ಲಿರುವ ರೂಸ್ಟ್ ಹೋಟೆಲ್‌ನಲ್ಲಿ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿದ್ದರು ಎಂಬ ಆರೋಪಗಳು ಕೇಳಿ ಬಂದಾಗ ಆ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆದಿತ್ತು.

ಅದರ ವಿಚಾರಣೆಗೆಂದು ನಗರಕ್ಕೆ ಆಗಮಿಸಿದ್ದ ಮುಂಬಯಿ ಉಚ್ಚ ನ್ಯಾಯಾಲಯದ ನ್ಯಾಯಧೀಶರಾದ ಸಿ.ಕೆ.ಠಕಾರ್ ಅವರ ಮುಂದೆ ಹಾಜರಾದ ಹಲವರು, ಗುಪ್ತ ಸಮಾಲೋಚನೆ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು.

ಆ ವಿಚಾರಣೆಗೆ ಹಾಜರಾಗಿದ್ದ ಕೆ.ರಾಮದಾಸ್ ಅವರು, ತಾವು ಗುಪ್ತವಾಗಿ ಸಮಾಲೋಚಿಸುವ ಅಗತ್ಯವಿಲ್ಲ. ಮುಕ್ತವಾಗಿಯೇ ತಮ್ಮ ಅಭಿಪ್ರಾಯ ತಿಳಿಸುವುದಾಗಿ ಹೇಳಿದರಲ್ಲದೆ, 'ನ್ಯಾಯಾಧೀಶರು ಅಕ್ರಮ ಚಟುವಟಿಕೆಗಳಲ್ಲಿ ತೊಡಗಿದ್ದರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಅದು ನಡೆದಿದೆ ಎನ್ನುವುದಾದರೆ ನ್ಯಾಯಾಂಗಕ್ಕೆ ಬಗೆದ

ಅಪಚಾರವಾಗುತ್ತದೆ. ಅಂಥ ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನಿಸಿದರೆ ಅದಕ್ಕಿಂತ ದೊಡ್ಡದಾದ ಸಂವಿಧಾನ ದ್ರೋಹ ಮತ್ತೊಂದಿಲ್ಲ'ಎಂದು ಬಹಿರಂಗ ಹೇಳಿಕೆ ನೀಡಿದ್ದರು.

ಬಾಲಕಿ ಲಕ್ಷ್ಮಿ ಸಾವಿನ ಪ್ರಕರಣ ಮತ್ತು ಇತರ ಕೆಲವು ಬೆಳವಣಿಗೆಗಳು ಬಗ್ಗೆ ವಿಚಾರ ಮಂಥನ ನಡೆಸಲು ನಗರದ ಹೋಟೆಲ್ ಗೋವರ್ಧನ್ ಸಭಾಂಗಣದಲ್ಲಿ ಪ್ರಗತಿಪರ ಸಂಘಟನೆಗಳು ಸಭೆ ಸೇರಿದ್ದಾಗ ಪೊಲೀಸ್ ಇಲಾಖೆಯ ಗುಪ್ತಚಾರ ದಳದವರು ಸಭಾಂಗಣಕ್ಕೆ ನುಸುಳಿ ಮಾಹಿತಿ ಸಂಗ್ರಹಿಸಲು ಕುಳಿತಿದ್ದರು.

ಈ ಸಭೆಗೆ ಪೊಲೀಸರ ಭಾಗವಹಿಸುವಿಕೆ ನಮಗೆ ಅಗತ್ಯವಿಲ್ಲ. ದಯವಿಟ್ಟು ಎಲ್ಲಾ ಹೊರ ಹೋಗಿ ಎಂದು ಪ್ರೊ.ರಾಮದಾಸ್ ವಿನಂತಿಸಿದಾಗ, ಕೆಲವು ಪೊಲೀಸರು ಜಾಗ ಖಾಲಿ ಮಾಡಿದ್ದರು.

ಆದರೆ ಓರ್ವ ಪೊಲೀಸ್ ಗುಪ್ತಚಾರ ಹಠಕ್ಕೆ ಬಿದ್ದವನಂತೆ ತಾನೂ ಯಾವುದೋ ಸಂಘಟನೆಯ ಕಾರ್ಯಕರ್ತಎಂಬಂತೆ 'ಪೋಸು'ನೀಡುತ್ತಾ ಕುಳಿತಿದ್ದ. ಆದರೆ ಪ್ರೊ.ರಾಮದಾಸ್ ಅವರ ಹದ್ದಿನ ಕಣ್ಣು ಆತನನ್ನು ಕೆಲವೇ ಕ್ಷಣದಲ್ಲಿ ಪತ್ತೆಹಚ್ಚಿ ಬಿಟ್ಟಿತ್ತು.

'ರ್‍ರೀ...ನೀವೇ...ಏಳಿ ಮೇಲೆ....ಎದ್ ನಿಂತ್ಕೊಳ್ರೀ... ಸ್ಟ್ಯಾಂಡ್ ಅಪ್ ಐ ಸೇ...' ಎಂದು ಥೇಟ್ ಸ್ಕೂಲ್ ಮಾಸ್ಟರ್ ಹಾಗೆ ಗದರಿಸಿದ ರಾಮದಾಸ್ ಅವರ ಗಡಸು ಧ್ವನಿಗೆ, ನೇರ ಮಾತಿಗೆ ಬೆದರಿ ಎದ್ದು ನಿಂತ ಆ ಗುಪ್ತಚಾರ ಎದ್ದು ಬಿದ್ದು ಹೊರಕ್ಕೆ ತೆರಳಿದ ಘಟನೆ ಆ ಸಭೆಯಲ್ಲಿದ್ದವರು ಎಂದಿಗೂ ಮರೆಯಲಾರದಂಥದ್ದು.

ಹೀಗೆ ಅನ್ಯಾಯ, ಅಕ್ರಮ, ಅಶಿಸ್ತು, ಅವ್ಯವಸ್ಥೆ ಕಂಡಾಗ ಅದನ್ನು ಖಂಡಿಸಿ ನೇರವಾಗಿ ಹೋರಾಟಕ್ಕಿಳಿಯುತ್ತಿದ್ದ ಪ್ರೊ.ಕೆ.ರಾಮದಾಸ್ ಅವರು, ಅವುಗಳಿಗೆಲ್ಲಾ ಕಾರಣರಾದವರು ಯಾರೇ ಆಗಿದ್ದರೂ, ಆತ ಎಂಥ ಪ್ರಭಾವಿ-ಶಕ್ತಿವಂತನಾಗಿದ್ದರೂ ಅದನ್ನು ಲೆಕ್ಕಕ್ಕಿಟ್ಟುಕೊಳ್ಳದೆ ಅತ್ಯಂತ ನಿಷ್ಠುರ ರೀತಿಯಲ್ಲಿ ಮಾತನಾಡಿ ಅವರ ಮುಖದಲ್ಲಿ ನೀರಿಳಿಯುವಂತೆ ಮಾತನಾಡಬಲ್ಲ ಶಕ್ತಿ ಹೊಂದಿದ್ದರು.

ತಮ್ಮ ಸ್ಥಾನದ ಘನತೆಗೆ ತಕ್ಕಂತೆ ನಡೆದುಕೊಳ್ಳದ ರಾಜ್ಯದ ಮುಖ್ಯಮಂತ್ರಿಗಳು, ದೇಶದ ಪ್ರಧಾನ ಮಂತ್ರಿಗಳನ್ನೂ ಬಿಡದೆ ಟೀಕಿಸುವ ಮೂಲಕ ನಾವೆಲ್ಲರೂ ಸಮಾನರು ಎಂಬ ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿಹಿಡಿದ ಪ್ರೊಫೆಸರ್ ಅವರು,ಅನ್ಯಾಯ, ಅಕ್ರಮಗಳ ವಿರುದ್ಧ ಹೋರಾಡಲು ಎಲ್ಲರಿಗೂ ಹಕ್ಕಿದೆ ಎಂದು ಸಾರಿದರಲ್ಲದೆ ಆ ಹಕ್ಕನ್ನು ಒಂದು ಕರ್ತವ್ಯದ ಹಾಗೆ ಪರಿಗಣಿಸಿ 'ದಿಟ್ಟತನದಿಂದ ಹೋರಾಡಿ' ಎಂಬ ಸಂದೇಶವನ್ನು ಎಲ್ಲರೆದೆಗೆ ನಾಟಿಸಿದ್ದಾರೆ.

ಸಾಮಾಜಿಕ ಕಾಳಜಿಯುಳ್ಳ, ಮೌಲ್ಯಗಳಿಗಾಗಿ ಹೋರಾಡುವ ಮನೋಬಲವುಳ್ಳ ವ್ಯಕ್ತಿ ಶುದ್ಧ ಹಸ್ತನೂ, ಪ್ರಾಮಾಣಿಕನೂ ಆಗಿದ್ದರೆ ಆತನ ಬಲ ನೂರ್ಪಟ್ಟು ಹೆಚ್ಚಬಲ್ಲದು. ಆತನ ಎದೆಗಾರಿಕೆ ಸಾವಿರಾರು ಜನರಿಗೆ ಸ್ಫೂರ್ತಿ ತುಂಬಬಲ್ಲದು, ಆತನ ನೇರ ನಿಷ್ಠುರ ಮಾತುಗಳು ಲಕ್ಷಾಂತರ ಜನರನ್ನು ಬಡಿದೆಬ್ಬಿಸಿ, ಜಾಗೃತಿ ಮೂಡಿಸಬಲ್ಲವು ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಪ್ರೊ.ಕೆ. ರಾಮದಾಸ್ ಅವರಿಲ್ಲದೆ ಈ ಶಾಪಗ್ರಸ್ತ ಸಮಾಜ, ತಪ್ತ ಸಮುದಾಯಗಳು ತಮ್ಮ ಧ್ವನಿಯನ್ನೇ ಕಳೆದುಕೊಂಡಂತೆ ಭಾಸವಾಗುತ್ತಿದೆ.

# ದಲಿತ, ರೈತ ಚಳವಳಿಯ ಒಡನಾಡಿ

**ನೆಂಪೆ ದೇವರಾಜ್**

ಈತನಿಗೆ ಪ್ರಪಂಚದ ಸಾಹಿತ್ಯ ಗೊತ್ತಿತ್ತು. ಆದರೆ ಒಂದಕ್ಷರವನ್ನೂ ದಾಖಲಿಸಲಿಲ್ಲ. ರಾಜ್ಯಾದ್ಯಂತ ಈ ಮನುಷ್ಯನಿಗೆ ಅಭಿಮಾನಿಗಳಿದ್ದರು, ಶಿಷ್ಯರಿದ್ದರು. ಆದರೆ ರಾಜಕಾರಣ ಮಾಡಬೇಕೆನಿಸಲಿಲ್ಲ. ವಿಚಾರವಾದಿಯಾಗಿದ್ದರು. ಆದರೆ ದುಷ್ಟತನ ಇರಲಿಲ್ಲ. ತಾಯ್ತನದ ಪ್ರೀತಿ ಶಿಷ್ಯರ ಮೇಲಿತ್ತು. ವ್ಯವಸ್ಥೆಯ ವಿರುದ್ಧದ ಆಕ್ರೋಶವನ್ನು ತನ್ನ ಸ್ವಾರ್ಥಕ್ಕಾಗಿ ಎಂದೂ ಬಳಸಿ ಕೊಳ್ಳಲಿಲ್ಲ. ಆ ಕಾರಣದಿಂದಲೇ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ಸಾಹಿತಿಗಳೂ, ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರುಗಳೂ, ಹೋರಾಟದ ಮೂಸೆಯಿಂದ ಬಂದು ಮಂತ್ರಿಗಳಾದರೂ, ಹಾದಿ ಬೀದಿಯ ಹೋರಾಟಗಾರರೂ ರಾಮದಾಸ್ ಎದುರು ಬಗ್ಗಿ ನಿಲ್ಲುತ್ತಿದ್ದರು. ಅವರು ನೀಡುವ ಅಭಿಪ್ರಾಯಕ್ಕಾಗಿ ಕಿವಿಗೊಟ್ಟು ಕೇಳುತ್ತಿದ್ದರು. ಮೈಸೂರಿನ ಸಾಂಸ್ಕೃತಿಕ ಚಳವಳಿಗಳ ವಲಯ ಹಾಗೂ ಸಾಹಿತ್ಯಕ ಲೋಕ ರಾಮದಾಸ್‌ರವರ ಜನಪರ ನಿಲುವಿನ ಭಾಷಣಗಳಿಂದ ಒಂದಲ್ಲಾ ಒಂದು ರೀತಿಯಿಂದ ಪ್ರಭಾವಿತಗೊಂಡಿರಲೇಬೇಕು. ಇಂದಿನ ಸಾಹಿತ್ಯಕ ವಲಯದಲ್ಲಿ ಮುಂಚೂಣಿಯಲ್ಲಿರುವ ಬಂಜಗೆರೆ ಜಯಪ್ರಕಾಶ್, ಅಬ್ದುಲ್ ರಷೀದ್, ಮೊಗಳ್ಳಿ ಗಣೇಶ್‌ರವರ ಜನಪರತೆಯ ಹಿಂದೆ ರಾಮದಾಸ್‌ರವರ ವಿಚಾರ ಪ್ರಚೋದಿತ ಭಾಷಣಗಳಿವೆ. ಇಂತಹ ನೂರಾರು ಸಾವಿರಾರು ಪ್ರಗತಿಪರರ ಸೃಷ್ಟಿಯಲ್ಲಿ ರಾಮದಾಸ್ ಶ್ರಮವಿದೆ.

ಮೊನ್ನೆ, ಬೆಂಗಳೂರಿಗೆ ಹೋದ ಸಂದರ್ಭದಲ್ಲಿ ರಾಮದಾಸ್ ಕಿದ್ವಾಯಿ ಆಸ್ಪತ್ರೆಗೆ ದಾಖಲಾದ ವಿಷಯವನ್ನು ರಾಮಮನೋಹರ ಶಾಂತವೇರಿ ತಿಳಿಸಿದರು. ಮತ್ತೊಮ್ಮೆ ಅವರನ್ನು ನೋಡಿಬರೋಣ ಎಂಬ ಮಾತನ್ನೂ ಆಡಿದ್ದರು. ಆದರೆ ನಾನು ಆ ದಿನವೇ ಊರಿಗೆ ಹಿಂತಿರುಗಬೇಕಾದ್ದರಿಂದ ಹೋಗಲಾಗಲಿಲ್ಲ. ಈ ದಿನ (ಜೂನ್ ೧೯, ೨೦೦೭) ಅವರ ಸಾವಿನ ಸುದ್ದಿ ಕೇಳಿದಾಕ್ಷಣದಿಂದ ಮೈಸೂರಿನ ನನ್ನ ದಿನಗಳೆಲ್ಲ ನೆನಪಾಗತೊಡಗಿದವು.

ಎಂ.ಎ. ಕ್ಲಾಸಿಗೆ ಸೇರಿದ ಮೂರ್‍ನಾಲ್ಕು ದಿನಗಳಲ್ಲೇ ಮೈಸೂರಿನಿಂದ ನಂಜನಗೂಡಿನವರಗೆ ಹಮ್ಮಿಕೊಂಡಿದ್ದ ಪಾದಯಾತ್ರೆಯ ನೇತೃತ್ವ ವಹಿಸಿದ್ದು, ಇದೇ ಬಂಜಗೆರೆ, ಹೊನಕರೆ ನಂಜುಂಡೇಗೌಡ, ಮೊಗಳ್ಳಿ ಗಣೇಶ್, ಅಂತೆಯೇ ಕುದುರೆಮುಖ ಅರಣ್ಯದಲ್ಲಿ ಪೊಲೀಸ್ ಗುಂಡಿಗೆ ಬಲಿಯಾದ ಸಾಕೇತ್‌ರಾಜನ್ ಇವರೆಲ್ಲರ ಕ್ರಾಂತಿಗೀತೆಗಳೂ, ಅಲ್ಲಲ್ಲಿ ನಡೆಸಿದ ಸಭೆಗಳು, ಆ ಸಭೆಗಳಲ್ಲಿ ಕೆ. ರಾಮದಾಸ್ ಮಾಡಿದ ಭಾಷಣಗಳು ನಮ್ಮಂತವರನ್ನು ಅದೆಷ್ಟು ಪ್ರಚೋದಿಸಿಲ್ಲ.

ರೈತ ಚಳವಳಿ ಮುಂಚೂಣಿಯಲ್ಲಿದ್ದ ಅವಧಿಯಲ್ಲಿ ಪ್ರೊ ಎಂ.ಡಿ. ನಂಜುಂಡಸ್ವಾಮಿ ಹಾಗೂ ರಾಮದಾಸ್‌ರವರು ಒಂದೇ ವೇದಿಕೆಯಲ್ಲಿ ಸೇರುತ್ತಿರಲಿಲ್ಲ. ಪರಸ್ಪರರ ನಡುವೆ ಮಾತುಕತೆಯೇ ಇಲ್ಲದಷ್ಟು ಸಂಬಂಧ ಬಿಗಡಾಯಿಸಿತ್ತು. ಆಗ ರೈತ ಚಳುವಳಿಯ ಜೊತೆ ಸತತ ಸಂಪರ್ಕವಿಟ್ಟುಕೊಂಡಿದ್ದ ನಾನು, ಸತೀಶ್ ಮಾಳಿಕೊಪ್ಪ, ವೆಂಕಟೇಶ್ ಪ್ರಸಾದ್ ಇವರಿಬ್ಬರನ್ನೂ ಸೇರಿಸಬೇಕೆಂದು ಹಟತೊಟ್ಟಿದ್ದೆವು. ಆದರೆ ಕಡೆಗೂ ಹೊಸ ಕರ್ನಾಟಕ ಕಟ್ಟುವ ಆಲೋಚನೆಯ ನಮ್ಮ ಅಂದಿನ ಕನಸು ನನಸಾಗಲೇ ಇಲ್ಲ. ಲಂಕೇಶ್, ನಂಜುಂಡಸ್ವಾಮಿಯವರ ನಡುವೆ ಸೇತುವೆಯಾಗ ಬಹುದಾಗಿದ್ದ ರಾಮದಾಸ್‌ರವರೂ ಇಲ್ಲವಾಗಿದ್ದಾರೆ.

ಮೊನ್ನೆ ಮೊನ್ನೆಯಷ್ಟೇ ಪೂರ್ಣಚಂದ್ರ ತೇಜಸ್ವಿಯವರ ಅಗಲಿಕೆಯಿಂದ ಉಂಟಾದ ದುಃಖದಿಂದ ಪೂರ್ಣ ಜರ್ಜರಿತರಾಗಿ ಕುಪ್ಪಳ್ಳಿಗೆ ಬಂದಿದ್ದರು. ರಾಮದಾಸ್ ಕುಪ್ಪಳ್ಳಿಯ "ಹೇಮಾಂಗಣ" ಸಭಾಂಗಣದ ಮೆಟ್ಟಿಲುಗಳನ್ನು ಇಳಿಯುವಾಗ ಒಂದೊಂದು ಮೆಟ್ಟಿಲುಗಳೂ ಭಾರವಾಗುತ್ತಿದ್ದುದನ್ನು ಅಲ್ಲಿ ನೆರೆದಿದ್ದ ನೂರಾರು ಶಿಷ್ಯರು ಗಮನಿಸುತ್ತಿದ್ದರು. ಇಷ್ಟು ಬೇಗ ತೇಜಸ್ವಿಯವರ ಅಗಲಿಕೆಯ ದುಃಖ ಅವರನ್ನೂ ಕೆಲವೇ ದಿನಗಳಲ್ಲಿ ಬಲಿ ತೆಗೆದುಕೊಳ್ಳುತ್ತದೆ ಎಂದು ಯಾರೊಬ್ಬರೂ ಊಹಿಸಿರಲಿಲ್ಲ.

ಕರ್ನಾಟಕದ ಮಟ್ಟಿಗೆ ದಲಿತ ಹೋರಾಟ ಹಾಗೂ ರೈತ ಹೋರಾಟ ಇವೆರಡೂ ಮುಂಚೂಣಿಗೆ ಬರುವಲ್ಲಿ ರಾಮದಾಸ್‌ರ ಕೊಡುಗೆ ಅಪಾರವಾದುದು. ತನ್ನ ದಿಟ್ಟ ಹಾಗೂ ನೇರ ನಡವಳಿಕೆಗಳಿಂದ ರಾಜ್ಯಾದ್ಯಂತ ಶಿಷ್ಯರನ್ನು ಪಡೆದುಕೊಂಡಿದ್ದಾರೆ. ಮೈಸೂರಿನ ರಾಮಸ್ವಾಮಿ ಸರ್ಕಲ್‌ನಿಂದ ರಾಮದಾಸ್ ಕೊಡುತ್ತಿದ್ದ ಕರೆ ಇಡೀ ಕರ್ನಾಟಕವನ್ನು ತಲ್ಲಣಗೊಳಿಸುತ್ತಿತ್ತು. ಅಪೂರ್ವ ವಾಗ್ಮಿಯಾಗಿದ್ದ ರಾಮದಾಸ್ ಪದೇ ಪದೇ ಮನುಷ್ಯತ್ವಕ್ಕಾಗಿ, ಮಾನವೀಯ ಧರ್ಮಕ್ಕಾಗಿ ತುಡಿಯುತ್ತಿದ್ದರು. ಮೈಸೂರು ವಿವಿಯಲ್ಲಿ ರಾಮದಾಸ್‌ರವರು ಯಾವ ಜಾತಿಯವರು ಎಂಬುದಕ್ಕೆ ಸಂಬಂಧಿಸಿದಂತೆ ಅವ ಶಿಷ್ಯವರ್ಗದಲ್ಲಿ ಹುಡುಕಾಟ ನಡೆಯುತ್ತಿತ್ತು. ಆದರೂ ರಾಮದಾಸ್ ಯಾವ ಜಾತಿ ಎಂಬುದು ಗೊತ್ತಾಗಲೇ ಇಲ್ಲ. ಆದರೆ ಮನುಷ್ಯ ಜಾತಿ ತಾನೆಂಬುದನ್ನು ಸಾಬೀತುಪಡಿಸಿದರು. ಜಾತಿಯ ಈ ಪ್ರಶ್ನೆಯನ್ನು ರಾಮದಾಸ್‌ರವರಿಗೆ ಹಾಕಿ ಬೈಸಿಕೊಂಡವರಲ್ಲಿ ನಾನೂ ಒಬ್ಬ. ತೀರ್ಥಹಳ್ಳಿಯ ಮಲ್ನಾಡ್ ಕ್ಲಬ್‌ಗೆ ರಾಮದಾಸ್

ಬಂದಿದ್ದರು. ಕಡಿದಾಳು ದಯಾನಂದ್, ಬಿ.ಕೆ. ಹರ್ಷ, ಮುದ್ದುಕೃಷ್ಣ, ಮುಂತಾದವರ ನಡುವೆ ನಡೆಯುತ್ತಿದ್ದ ಗಹನವಾದ ಚರ್ಚೆಯಲ್ಲಿ ಮಧ್ಯೆ ಮಾತಾಡಿ ಬೈಸಿಕೊಂಡಿದ್ದೆ. ಇನ್ನೆಂದೂ ಜಾತಿಯ ಬಗ್ಗೆ ಮಾತಾಡದೆ ಇರುವುದನ್ನು ರಾಮದಾಸ್ ಕಲಿಸಿಕೊಟ್ಟರು. ಇಂದಿಗೂ ರಾಮದಾಸ್‌ರವರನ್ನು ಕೆಲವರು ಒಕ್ಕಲಿಗರೆಂದೂ, ಬ್ರಾಹ್ಮಣರೆಂದೂ, ಅಗಸರೆಂದೂ ತಿಳಿದುಕೊಂಡು ತಮ್ಮಷ್ಟಕ್ಕೆ ತಾವು ರಾಮದಾಸ್‌ರವರ ಜೊತೆ ಕಾಲ ಕಳೆದವರೆಷ್ಟೋ ಮಂದಿ. ಎಂತಹ ಸಂದರ್ಭದಲ್ಲೂ ಜಾತಿಯ ಸವಲತ್ತನ್ನು ಸಂಘಟನೆಗಾಗಲಿ, ಪದವಿಗಾಗಲಿ, ಒಲಿಸಿಕೊಳ್ಳುವುದಕ್ಕಾಗಲಿ ಬಳಸಿಕೊಳ್ಳದೆ ಅದನ್ನು ನಗಣ್ಯಗೊಳಿಸಿದ ರಾಮದಾಸ್ ರೀತಿ ಭಾರತೀಯ ಸಂದರ್ಭದಲ್ಲಿ ಅಧ್ಯಯನ ಯೋಗ್ಯ ವಿಚಾರ. ವಠಾರಗಳ ಸೃಷ್ಟಿಕರ್ತರ ವಿರುದ್ಧ ಭಯಂಕರವಾಗಿ ಇವರಷ್ಟು ಕಿಡಿಕಾರಿದ, ಮತ್ತೊಬ್ಬ ವ್ಯಕ್ತಿಯನ್ನು ನಾನು ನೋಡಿಲ್ಲ. ಕ್ಯಾಂಪಸ್ಸುಗಳಲ್ಲಿ ಒಂದೇ ಜಾತಿಯ, ಒಂದೇ ಪ್ರದೇಶದ ಹುಡುಗರು ಸೇರಿಕೊಂಡು ಅದೇ ಆಧಾರದಲ್ಲಿ ಲಾಬಿ ಮಾಡುತ್ತಿದ್ದ ವಿದ್ಯಾರ್ಥಿಗಳ ಹಾಗೂ ಉಪನ್ಯಾಸಕರ ವಿರುದ್ಧದ ದೊಡ್ಡದಾದ ಧ್ವನಿ ಇವರಾಗಿದ್ದರು. ಮಂಡ್ಯ, ಹಾಸನದ ಗೌಡರ ಹುಡುಗರು ರಾಮದಾಸ್‌ರ ಜಾತ್ಯತೀತ ನಿಲುವಿನ ವಿರುದ್ಧ 'ಗೌಡರ ವಿರೋಧಿ ರಾಮದಾಸ್' ಎಂದು ಹುಯಿಲು ಎಬ್ಬಿಸಿದ್ದೂ ಉಂಟು. ರಾಮದಾಸ್‌ರ ಕ್ಲಾಸಿನಲ್ಲಿ ಅನೇಕ ಬಾರಿ ಗಲಾಟೆಗಳೂ ಆಗಿದ್ದವು. ಇಂತಹ ಗಲಾಟೆಗಳನ್ನೆಲ್ಲಾ ನೇರವಾಗಿಯೇ ನಿಭಾಯಿಸುತ್ತಿದ್ದ ರೀತಿ ವಿಸ್ಮಯ ಉಂಟು ಮಾಡುವಂತದ್ದು. ದಲಿತ ಸಂಘರ್ಷ ಸಮಿತಿಯ ಹುಟ್ಟಿಗೆ ಕಾರಣಕರ್ತರಾಗಿದ್ದ ರಾಮದಾಸ್, ದಲಿತ ಮುಖಂಡರೆನಿಸಿಕೊಂಡ ಕೆಲವರು ವಸೂಲಾತಿ, ಬ್ಲಾಕ್ ಮೇಲ್‌ಗಳಲ್ಲಿ ತೊಡಗುತ್ತಿದ್ದುದನ್ನು ನೋಡಿ ಸುಮ್ಮನೆ ಕೂತವರಲ್ಲ. ಅವರುಗಳ ವಿರುದ್ಧ ಅಭಿಪ್ರಾಯ ರೂಪಿಸುವ ನಾಯಕತ್ವ ಜನ್ಮದತ್ತವಾಗಿಯೇ ಲಭಿಸಿತ್ತು. ದಲಿತರ ಹೆಸರಿನಲ್ಲಿ ರಾಜಕೀಯ ಮಾಡುವವರಿಗೂ ರಾಮದಾಸ್‌ರ ನಿಷ್ಠುರತೆ ನುಂಗಲಾರದ ತುತ್ತಾಗಿತ್ತು.

ಕರ್ನಾಟಕ ಕಂಡ ಅಪೂರ್ವ ರೈತ ನಾಯಕ ಎನ್.ಡಿ. ಸುಂದರೇಶ್ ನಿಧನರಾದಾಗ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಲೋಕದಲ್ಲಿ ತಲ್ಲಣಗಳನ್ನು ಸೃಷ್ಟಿಸಿದ್ದ ಪಿ. ಲಂಕೇಶ್ ನಿಧನರಾದಾಗ, ರೈತರಲ್ಲಿ ಹಾಗೂ ದುಡಿಯುವ ವರ್ಗದಲ್ಲಿ ಸ್ವಾಭಿಮಾನ ತುಂಬಿದ ಅದ್ಭುತ ವೈಜ್ಞಾನಿಕ ಹೋರಾಟಗಾರ ನಂಜುಂಡಸ್ವಾಮಿ ನಿಧನರಾದಾಗ, ಒಂಟಿ ಒಂಟಿಯಾಗುತ್ತಲೇ ಹೋದ ರಾಮದಾಸ್‌ಗೆ ತಮ್ಮ ಜೀವದ ಗೆಳೆಯ ತೇಜಸ್ವಿಯವರ ನಿಧನದ ದುಃಖಕ್ಕೆ ಬೇರಾವುದೂ ಸಾಟಿಯಾಗಲಿಲ್ಲವೆಂದು ಬಹುಬೇಗ ದೂರಾದರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ತಮ್ಮ ವಿದ್ಯಾರ್ಥಿಗಳನ್ನುದ್ದೇಶಿಸಿ ಕನ್ನಡವನ್ನು ಕಡೆಕಡೆದು, ಅರೆ ಅರೆದು ಬರಸಿಡಿಲಿನಂತೆ ರೋಮಾಂಚನಗೊಳಿಸುವ ರಾಮದಾಸ್ ಉಪನ್ಯಾಸಕರಿಗೆ ಮಾದರಿಯಾಗುತ್ತಾರೆ. ಮಾನಸ ಗಂಗೋತ್ರಿಯ ಗಾಂಧಿಭವನದ ಸುತ್ತ ಕುಳಿತ ವಿದ್ಯಾರ್ಥಿಗಳಿಗೆ ಹೊಸ ಹೊಸ ವಿಚಾರಗಳನ್ನು ಮೈದಡವಿ ಹೇಳುವ, ಎಚ್ಚರಿಸುವ, ಸಂಘಟಿಸುವ

ಬದಲಾವಣೆಯ ಹರಿಕಾರನಾಗಿ ಕಾಣಿಸುತ್ತಾರೆ. ಎಲ್ಲಾ ಜಾತಿಗಳ, ಧರ್ಮಗಳ,. ಪುರೋಹಿತಶಾಹಿಯ ಕಡು ಟೀಕಾಕಾರನಾಗಿ ಮನುಷ್ಯ ಸಂಬಂಧಗಳನ್ನು ಬೆಸೆಯುವ, ಹರಿದ ಬಿರಿದ ಹೃದಯಗಳಿಗೆ ಸಾಂತ್ವನ ಹೇಳುವ ಮಹಾತ್ಮನಾಗುತ್ತಾನೆ. ಒಟ್ಟಿನಲ್ಲಿ ರಾಮದಾಸ್‌ರ ಅಗಲಿಕೆ ಇಷ್ಟು ಬೇಗ ಆಗುತ್ತದೆ ಎಂಬ ಊಹೆ ಇರಲೇಇಲ್ಲ. ಇದ್ದಿದ್ದರೆ ಕೊನೆಯದೆಂಬಂತೆ ರಾಮಮನೋಹರ ಶಾಂತವೇರಿಯವರೊಂದಿಗೆ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಗೆ ಹೋಗಿ ಬರುತ್ತಿದ್ದೆ.

# ನೈತಿಕ ಬದುಕು

ಟೀ.ಜ. ರಾಜೀವ್

ನೈತಿಕ ಬದುಕು ಎಂಬುದು ಸಂಪೂರ್ಣ ದಿವಾಳಿಯೆದ್ದು ಹೋಗಿರುವ, ಆದರೆ ಆರೋಗ್ಯವಂತ ಸಮಾಜದಂತೆ ಕಾಣುವ 'ಅನಾರೋಗ್ಯ ಪೀಡಿತ' ವ್ಯವಸ್ಥೆಯಲ್ಲಿ ಬದುಕುತ್ತಿದ್ದರೂ, ಅದೊಂದು ಬಾಧೆ, ಸಮಸ್ಯೆ ಎನಿಸಿದ ವಿಶಿಷ್ಟ ಕಾಲ ಘಟ್ಟದಲ್ಲಿ ನಾವಿದ್ದೇವೇನೋ ಎಂದು ಒಮ್ಮೊಮ್ಮೆ ಅನಿಸಿಬಿಡುತ್ತದೆ.

ಒಳ್ಳೆಯದೋ, ಕೆಟ್ಟದ್ದೋ; ಸತ್ಯವೋ, ಅಸತ್ಯವೋ - ಏನು ಬೇಕಾದರೂ ಮಾಡು, ನುಡಿ; ಆದರೆ, ಅದನ್ನು ಪ್ರಾಮಾಣಿಕವಾಗಿ, ಮಾಡು ಎಂಬುದೇ ಆಧುನಿಕ ಬದುಕಿನ ನೀತಿಯಾಗಲಾರಂಭಿಸಿದೆ!. ಈ ಮಾರ್ಗದಲ್ಲಿಯೇ ಮೇಲೆ ಬಂದು, ಅದನ್ನೇ ಉಪದೇಶ ಮಾಡುವ ಮಂದಿ ನಮ್ಮ ನಡುವಿನ ಆದರ್ಶಪ್ರಾಯ ವ್ಯಕ್ತಿಗಳಾಗುತ್ತಿದ್ದಾರೆ. 'ನೀನು ನಿನ್ನ ವೃತ್ತಿಯನ್ನು ಪ್ರೀತಿಸಬೇಕೆ ವಿನಾ, ಕೆಲಸ ನೀಡಿರುವ ನಿನ್ನ ಸಂಸ್ಥೆಯನ್ನಲ್ಲ. ನೀನು ಗೆಲ್ಲಲು ಪ್ರಯತ್ನಿಸು, ಉಳಿದವರು ಗೆದ್ದರೆಷ್ಟು-ಬಿದ್ದರೆಷ್ಟು?' - ಎಂದು ಆಣಿಮುತ್ತು ನೀಡುವ ಮಹಾನುಭಾವರು ನಮ್ಮ ನಡುವಿನ ಸಾಧಕರು, ಮಾರ್ಗದರ್ಶಕರು.

ಇಂಥ ಮಾತುಗಳನ್ನೇ ನಂಬಿರುವ ಮತ್ತು ಅದನ್ನೇ ಪಾಲಿಸುತ್ತಿರುವವರ ಸಂಖ್ಯೆ ಎಲ್ಲ ಕ್ಷೇತ್ರದಲ್ಲೂ ಹೆಚ್ಚುತ್ತಿದೆ. ಇಂಥವರು ಸಮಾಜದ ದೃಷ್ಟಿಯಲ್ಲಿ - 'ಬದುಕಲು ಕಲಿತಿರುವವರು' (ರಾಮಕೃಷ್ಣ ಆಶ್ರಮದವರು ಬದುಕಲು ಕಲಿಯಿರಿ ಎಂದು ಎರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅದೇ ಹೆಸರು ಈ ರೀತಿ ಬಳಕೆಯಾಗುತ್ತಿರುವುದು ಎಂಥಾ ವಿಪರ್ಯಾಸ ನೋಡಿ !)

ಮೇಷ್ಟ್ರಾಗಿದ್ದುಕೊಂಡು ತೋಟ-ತುಗಡಿ, ಬಡ್ಡಿ-ಗಿಡ್ಡಿ ವ್ಯವಹಾರ ಇಲ್ಲವೇ ಅಕ್ರಮವಾಗಿ ಮನೆ ಪಾಠ ಮಾಡಿ ಹಣ ಮಾಡುವವನು, ಎಂಜಿನಿಯರ್ ಆದ ಮೂರು ವರ್ಷಕ್ಕೆ ಮೂರು ಮಹಡಿ ಮನೆ ಕಟ್ಟುವವನು, ಪೊಲೀಸ್ ಇನ್ಸ್‌ಪೆಕ್ಟರ್ ಆದ ಎರಡೇ ವರ್ಷಕ್ಕೆ ಎರಡು ಸೈಟು

ಮಾಡಿಕೊಳ್ಳುವವನು, ಡಾಕ್ಟರ್ ಆದ ಒಂದೇ ವರ್ಷಕ್ಕೆ ನರ್ಸಿಂಗ್ ಹೋಂ ಆರಂಭಿಸುವಷ್ಟು ದುಡ್ಡು ಮಾಡುವವನು, ಪತ್ರಕರ್ತನೆಂಬ ಪ್ರಭಾವ ಬಳಸಿ ಮೇಲೆ ಬರುವವನು, ರಿಯಲ್ ಎಸ್ಟೇಟ್ ದಂಧೆಗಿಳಿದು ಹತ್ತಾರು ಎಕರೆ ಭೂಮಿ ನುಂಗುವವನು.... ಹೀಗೆ ಬಹುಬೇಗ ಹಣ-ಕೀರ್ತಿ ಸಂಪಾದಿಸಿಕೊಳ್ಳುವವರೇ 'ಬದುಕಲು ಕಲಿತಿರುವವರು !' (ಶಾಸಕ-ಸಂಸದರಾದ ಒಂದು ಅವಧಿಯಲ್ಲಿ ಕೋಟ್ಯಾಧಿಪತಿ ಆಗುವ ಭ್ರಷ್ಟ ರಾಜಕಾರಣಿಗಳ ಮಾತು ಬೇರೆ) ಇಂಥವರ ನಡುವೆಯೂ ನೈತಿಕವಾಗಿ ಬದುಕು ಸಾಗಿಸುತ್ತಿರುವ ಒಂದಿಷ್ಟು ಮಂದಿ, ಮೇಲೆ ಕಾಣಿಸಿದ ಎಲ್ಲ ಕ್ಷೇತ್ರದಲ್ಲೂ ಇದ್ದಾರೆ. ಆಯ್ಕೆ ಮಾಡಿಕೊಂಡ ಇಲ್ಲವೇ ತಮಗೆ ಒದಗಿ ಬಂದಿರುವ ತಮ್ಮದೇ ಬದುಕಿನ ಬಗ್ಗೆ ಸುತ್ತಮುತ್ತಲ ವ್ಯವಸ್ಥೆ ಬಗ್ಗೆ ಸದಾ ಹಿಡಿಶಾಪ ಹಾಕುತ್ತಾ, ಬಾಳ್ವೆ ನಡೆಸುತ್ತಿರುವ ಇಂಥ ವರ್ಗ, ಆಗೊಮ್ಮೆ-ಈಗೊಮ್ಮೆ ಮಾನಸಿಕ ಖಿನ್ನತೆಗೆ ಜಾರುತ್ತದೆ. ಈ ವರ್ಗದ ಜನ ತಮ್ಮದೇ ಬದುಕಿನ ನಡೆಯ ಬಗ್ಗೆ ಆಗಾಗ ಪಶ್ಚಾತ್ತಾಪ ಪಡುತ್ತಿರುತ್ತಾರೆ.

ಇಂಥವರನ್ನು ಕಂಡಾಗಲೆಲ್ಲಾ ನನಗೆ ಮತ್ತೆ-ಮತ್ತೆ ನೆನಪಾಗುವುದು ಪ್ರೊ. ಕೆ. ರಾಮದಾಸ್. ನನಗೂ ಆಗಾಗ 'ಬದುಕಲು ಕಲಿಯಬೇಕು' ಎಂದೆನಿಸಿದ್ದುಂಟು. ಅಂಥ ಸಂದರ್ಭದಲ್ಲೆಲ್ಲಾ ರಾಮದಾಸ್ ಬದುಕು ನನ್ನನ್ನು ಎಚ್ಚರಿಸಿದೆ. ಮಾನಸಿಕ ಖಿನ್ನತೆಯಿಂದ ಪಾರು ಮಾಡಿದೆ !

ಅವರು ಬಯಸಿದ್ದರೆ, ಅವರ ಶಕ್ತಿ - ಸಾಮರ್ಥ್ಯದ ಮಿತಿಯಲ್ಲಿ ಅತ್ಯಂತ ಉನ್ನತ ಪದವಿ, ಹುದ್ದೆಗಳನ್ನು ಅಲಂಕರಿಸಬಹುದಿತ್ತೇನೋ. ವ್ಯವಸ್ಥೆಯೊಂದಿಗೆ ರಾಜಿಯಾಗಿ, ಅತ್ಯುತ್ತಮವಾದ ಹಾಗೂ ಶ್ರೀಮಂತವಾದ ಲೌಕಿಕ ಬದುಕನ್ನೇ ಬದುಕಬಹುದಿತ್ತೇನೋ.

ಆದರೆ, ರಾಮದಾಸ್ ಆ ಮಾರ್ಗವನ್ನು ತುಳಿಯಲೇ ಇಲ್ಲ. ಬದಲಿಗೆ ಅನ್ಯಾಯ - ಭ್ರಷ್ಟಾಚಾರದ ವಿರುದ್ಧ ಸದಾ ಪ್ರತಿಭಟಿಸುತ್ತ, ನೈಜ ಹೋರಾಟಗಾರನಾಗಿ; ಅದೇ ಕಾಲಕ್ಕೆ ಕನಿಷ್ಠ ಘನತೆಯಿಂದ ಕೂಡಿದ ಸಮಾಜದ ಮಧ್ಯಮ ವರ್ಗದ ತಂದೆ - ಪಾಲಕರಾಗಿ ಬದುಕಿದರು.

ತಮ್ಮ ಜಾತಿ - ಕುಲ - ಪ್ರಾಂತ್ಯ ಯಾವುದೆಂಬ ಸಂಗತಿಯನ್ನು (ಅವರ ದೃಷ್ಟಿಯಲ್ಲಿ ಇವು ಸಾಮಾಜಿಕ ಅನಿಷ್ಟಗಳು) ಸಮಾಧಿ ಮಾಡಿ, ನಿಜ ಅರ್ಥದಲ್ಲಿ ಜಾತ್ಯತೀತರಾಗಿ, ವಿಶ್ವಮಾನವರಾಗಿ ಬದುಕಿದ್ದು ಸಾಮಾನ್ಯ ಸಂಗತಿಯಲ್ಲ. ಜಾತ್ಯತೀತರಾಗಿರುವ ಅನೇಕ ಮಹಾನ್ ವ್ಯಕ್ತಿಗಳು ಎಲ್ಲ ಕಾಲಕ್ಕೂ ಇರುತ್ತಾರೆ; ಈಗಲೂ ನಮ್ಮ ನಡುವೆ ಇದ್ದಾರೆ. ಆದರೆ, ಈ ಎಲ್ಲ ವ್ಯಕ್ತಿಗಳ ಜಾತಿ ಯಾವುದು ಎಂಬುದಕ್ಕೆ ಪುರಾವೆ ಸಿಕ್ಕಿದೆ ಮತ್ತು ಒಂದಲ್ಲ - ಒಂದು ಸಂದರ್ಭದಲ್ಲಿ ಅದು ಯಾವುದಾದರೊಂದು ರೂಪದಲ್ಲಿ ಪ್ರಕಟವಾಗುತ್ತಲೇ ಇರುತ್ತದೆ (ಹಾಗಾಗಿಯೇ ಬಸವಣ್ಣ, ಕನಕದಾಸ, ಕುವೆಂಪು ಅವರಂಥ ವ್ಯಕ್ತಿತ್ವಗಳನ್ನು ಕೂಡಾ ಜಾತಿವಂತರು ಬಿಟ್ಟಿಲ್ಲ). ರಸ್ತೆ ಬದಿಯ ಚರಂಡಿಯಲ್ಲಿ 'ಹುಟ್ಟಿದ' ಅನಾಥರಿಗೂ ಜಾತಿ ಆರೋಪಿಸುವ ಮಹಾನ್ ದೇಶ ನನ್ನದು. ಇಂಥ ಸಮಾಜದಲ್ಲಿ ತನ್ನ ಜಾತಿ ಯಾವುದೆಂಬುದಕ್ಕೆ ಎಳ್ಳಷ್ಟು ಪುರಾವೆ ಸಿಗದಂತೆ ಬದುಕಿ ತೋರಿಸಿದ್ದು, ನಾನು ಕಂಡಂತೆ ರಾಮದಾಸ್ ಒಬ್ಬರೇ.

ಸಾಮಾನ್ಯವಾಗಿ ಸಮಾಜವಾದಿಗಳೆಂದರೆ ಸೋಗಲಾಡಿಗಳು ಎಂಬುದು ಕಾಲೆಳೆಯುವವರ ಮಾತು. ಬಹಳಷ್ಟು ಸಂದರ್ಭದಲ್ಲಿ ಸಮಾಜವಾದಿ ತತ್ತ್ವ ಹೇಳುತ್ತಲೇ ಆಡಂಬರದ ಜೀವನ

ನಡೆಸುವ ಸಮಾಜವಾದಿಗಳೇ ನಮ್ಮ ನಡುವೆ ಹೆಚ್ಚಿದ್ದಾರೆ. ಆದರೆ, ರಾಮದಾಸ್ ಅದಕ್ಕೆ ಅಪವಾದವಾಗಿ ನಿಂತರು. ಸಾಧ್ಯವಾದಷ್ಟು ಸಮಾಜವಾದಿಯಂತೆ ಬದುಕಿದರು.

(ಇಷ್ಟಾದರೂ-ಸಮಾಜವಾದಿಯೊಬ್ಬ ಪರಿಪೂರ್ಣವಾಗಿ ಸಮಾಜವಾದಿಯಂತೆ ಬದುಕಲಿಲ್ಲವೇಕೆ ಎಂಬ ಪ್ರಶ್ನೆಯನ್ನು ಸಮಾಜ ಆಗಾಗ ಮುಂದಿಡುತ್ತಲೇ ಇರುತ್ತದೆ. ಇದು ಸಿನಿಕತನದ ಪ್ರಶ್ನೆ. ನನ್ನ ತಿಳಿವಳಿಕೆ ಪ್ರಕಾರ - ನೀತಿವಂತ ಬದುಕಿನಲ್ಲಿ ಪರಿಪೂರ್ಣತೆ ಎಂಬುದು ಇರುವುದಿಲ್ಲ. ನೀತಿ ಮರೆತು, ವ್ಯವಸ್ಥೆಯ ಲೋಪ-ದೋಷಗಳ ಲಾಭ ಪಡೆಯುತ್ತಾ ಬದುಕುವ ಮಂದಿ, ಎಲ್ಲರನ್ನೂ ತಮ್ಮ ವರ್ತುಲಕ್ಕೆ ಸೇರಿಸಿಕೊಳ್ಳಲು ಇಂಥ ಪರಿಪೂರ್ಣತೆಯ ಸಿನಿಕತನವನ್ನು ಎತ್ತುತ್ತಲೇ ಇರುತ್ತಾರೆ)

ಇಂಥ ಕಾರಣಗಳಿಂದಾಗಿಯೇ, ರಾಮದಾಸ್ ನೈತಿಕ ಶಕ್ತಿ ತುಂಬುವ ವ್ಯಕ್ತಿತ್ವವಾಗುತ್ತಾರೆ. ಈ ರೀತಿ ಬದುಕಬಹುದು ಎಂಬುದಕ್ಕೆ ಮಾದರಿಯಾಗಿ ನಿಲ್ಲುತ್ತಾರೆ.

* * *

ಯಾರು ಅನ್ಯಾಯವನ್ನು ಪ್ರತಿಭಟಿಸಲು, ಇತರ ಎಲ್ಲ ಮಾರ್ಗಗಳು ಮುಗಿದಾಗ ಪ್ರಯತ್ನಿಸದೇ ಸುಮ್ಮನೇ ಇರುತ್ತಾನೆಯೋ ಅವನು ಅನ್ಯಾಯಕ್ಕೆ ಕಾರಣಕರ್ತರಾದವರಲ್ಲಿ ಒಬ್ಬನಾಗುತ್ತಾನೆ ಎಂದಿದ್ದರು ಲೋಹಿಯಾ. ಬದುಕಿರುವವರೆಗೂ ಅನ್ಯಾಯಕ್ಕೆ ಹೀಗೆ ಕಾರಣಕರ್ತರಾಗದಂತೆ ಲೋಹಿಯಾ ಬಾಳಿ ಬದುಕಿದರು ಎಂಬುದನ್ನು ಅವರನ್ನು ಓದಿ ಬಲ್ಲೆ. ಸತ್ತರೂ ಚಿಂತೆಯಿಲ್ಲ, ಸರಕಾರಿ ಆಸ್ಪತ್ರೆ ಬಿಟ್ಟು ಬೇರೆಲ್ಲೂ ಚಿಕಿತ್ಸೆ ಪಡೆಯುವುದಿಲ್ಲ ಎಂದು, ಸರಕಾರಿ ಆಸ್ಪತ್ರೆಯಲ್ಲೇ ಕಣ್ಮುಚ್ಚಿದ ಲೋಹಿಯಾ ಈ ಹೊತ್ತಿಗೂ ನನಗೆ ಸೋಜಿಗವೆ. ಅಂಥ ಲೋಹಿಯಾ ಅವರ ಅನೇಕ ಗುಣ - ವ್ಯಕ್ತಿತ್ವಗಳನ್ನು ರಾಮದಾಸ್ ಅವರಲ್ಲಿ ನೋಡಿದ್ದೇನೆ.

ಪ್ರಾಣಿಬಲಿ ನಿಷೇಧಿಸುವಂತ ಕಾನೂನು ರೂಪಿಸುವ ಸಚಿವರೇ ಜಾತ್ರೆಯಲ್ಲಿ ಕುರಿ ಬಲಿ ನೀಡಿದ್ದಾರೆ ಎಂದು ಗೊತ್ತಾದ ಕೂಡಲೇ, ಅವರು ಸುಮ್ಮನೆ ಕೂರಲಿಲ್ಲ. ಹೋರಾಟಕ್ಕಿಳಿದರು. ಸಚಿವರ ವಿರುದ್ಧ ಪ್ರತಿಭಟಿಸಲು ತನ್ನೊಂದಿಗೆ ಯಾರೂ ಬರದೇ ಇದ್ದಾಗ, ತುಂಬಿದ ಸಭೆಯಲ್ಲಿ ಏಕಾಂಗಿಯಾಗಿ ಪ್ರತಿಭಟಿಸಿದರು. ಸಚಿವರನ್ನು ತರಾಟೆಗೆ ತೆಗೆದುಕೊಂಡು ಅವರ ಸಾತ್ವಿಕ ಸಿಟ್ಟಿನ ಪರಿ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ.

ರಾಜ್ಯದ ಯಾವುದೇ ಮೂಲೆಯಲ್ಲಿ ಅನ್ಯಾಯ ನಡೆದರೂ ಕರ್ನಾಟಕ ಪ್ರಗತಿ ರಂಗದ ಸಂಚಾಲಕರ ಹೆಸರಿನಲ್ಲಿ ಅವರ ಪ್ರತಿಭಟನೆ ದಾಖಲು ಆಗಿಬಿಡುತ್ತಿತ್ತು. ಜಾತೀಯತೆ, ಭ್ರಷ್ಟಾಚಾರದ ವಿರುದ್ಧ ಅವರು ಸದಾ ಬೆಂಕಿ. ಪ್ರತಿಭಟನೆಗೆ ಯಾರೂ ಬರದಿದ್ದರೆ, ಏಕಾಂಗಿಯಾಗಿ ಪ್ರತಿಭಟಿಸುತ್ತಿದ್ದರು.

ಕಾವೇರಿ ನದಿ ನೀರಿನ ಹಂಚಿಕೆ ವಿವಾದವನ್ನು ಬಗೆಹರಿಸಲು ರಚನೆಯಾಗಿದ್ದ ನ್ಯಾಯಾಧಿಕರಣ 2007ರಲ್ಲಿ ಫೆಬ್ರವರಿಯಲ್ಲಿ ತನ್ನ ಅಂತಿಮ ತೀರ್ಪು ನೀಡಿದಾಗ, ಕರ್ನಾಟಕಕ್ಕೆ ನಿರೀಕ್ಷೆಯಂತೆ ಮಹಾ ಮೋಸವಾಗಿತ್ತು. ನನಗೆ ಈಗಲೂ ಆ ದಿನ ನೆನಪಿದೆ. ತೀರ್ಪು ಪ್ರಕಟವಾದ ತಕ್ಷಣ,

ಮೈಸೂರು ಸೀಮೆಯಲ್ಲಿ ಪ್ರತಿಭಟನೆಗಳ ಸರಣಿ ಸ್ಫೋಟವಾಗುವುದು ಹೆಚ್ಚು-ಕಡಿಮೆ ಪತ್ರಕರ್ತರಿಗೆಲ್ಲಾ ತಿಳಿದೇ ಇತ್ತು. ಹಾಗಾಗಿ, ನಾವೆಲ್ಲರೂ ಆ ದಿನದ ಪ್ರತಿಭಟನೆ-ಹೋರಾಟಗಳನ್ನು ವರದಿ ಮಾಡಲೆಂದೇ ನಗರದ ಕೃಷ್ಣರಾಜ ವೃತ್ತದಲ್ಲಿ ಕಾದು ಕುಳಿತಿದ್ದೆವು. ತಮಿಳುನಾಡಿಗೆ 419ಟಿಎಂಸಿ ಅಡಿ; ರಾಜ್ಯಕ್ಕೆ 270 ಟಿಎಂಸಿ ಅಡಿ ನೀರು ಇದು ರಾಜ್ಯಕ್ಕೆ ಆದ ಅನ್ಯಾಯ ಎಂದು ಟಿವಿ ವಾಹಿನಿಯಲ್ಲಿ ಫ್ಲ್ಯಾಶ್ ನ್ಯೂಸ್ ಬಿತ್ತರವಾಗುತ್ತಿದ್ದಂತೆಯೇ, ಕನ್ನಡ ಹೋರಾಟಗಾರರು ತಡ ಮಾಡದೆ ಬೀದಿಗಿಳಿದರು.

ಆದರೆ, ಈ ತೀರ್ಪಿನಿಂದ ರಾಜ್ಯಕ್ಕೆ ಯಾವ ರೀತಿ ಅನ್ಯಾಯವಾಗಿದೆ, ಅದರ ಪರಿಣಾಮ ಏನು - ಎತ್ತ ಎಂಬುದನ್ನು ತಿಳಿದು, ಹೋರಾಟ ಮುನ್ನಡೆಸುವ ನಾಯಕರೇ ಅಲ್ಲಿರಲಿಲ್ಲ. ಗಿರೀಶ್ ಕಾರ್ನಾಡ್, ಅನಂತಮೂರ್ತಿಯಂಥ ಸಾಹಿತಿಗಳು-ಬುದ್ಧಿಜೀವಿಗಳು ಟಿವಿ ರೂಂಗಳಲ್ಲಿ ಕುಳಿತು, ತಮ್ಮ ಬುದ್ಧಿಗೆ ತೋಚಿದಂತೆ ಏನೇನೋ ಅಪದ್ಧ ಮಾತನಾಡುತ್ತಿರುವ ವೇಳೆಯಲ್ಲಿ, ರಾಮದಾಸ್ ಕೆ.ಆರ್. ವೃತ್ತದಲ್ಲಿ ಪ್ರತಿಭಟನೆಗೆ ಇಳಿದಿದ್ದರು. ಹಾಗೆ ನೋಡಿದರೆ-ಕಾವೇರಿ ಹೋರಾಟದಲ್ಲಿ ಬಹಳ ವಿವೇಚನೆಯಿಂದ ಕೂಡಿದ ವಿಚಾರ ಮಂಡಿಸುತ್ತಲೇ, ಬೀದಿಗಿಳಿದು ಹೋರಾಟ ನಡೆಸಿದ ಮೈಸೂರಿನ ಏಕೈಕ ಚಿಂತಕ - ಬುದ್ಧಿಜೀವಿ ರಾಮದಾಸ್ ಒಬ್ಬರೇ !

'ತಮಿಳಿಗರಿಗೆ ಸರಿಯಾಗಿ ಬುದ್ಧಿ ಕಲಿಸಬೇಕು; ಅವರನ್ನು ಇಲ್ಲಿ ಇರಲು ಬಿಡಬಾರದು...' ಎಂದೆಲ್ಲಾ ಕರೆ ನೀಡಿ, ಮನೆಯಲ್ಲಿಯೇ ಅಡಗಿ ಕುಳಿತಿದ್ದ ಖ್ಯಾತ ಕಾದಂಬರಿಕಾರರು, ಸಾಹಿತಿಗಳ ನಡುವೆ ರಾಮದಾಸ್ ವಿಭಿನ್ನವಾಗಿ, ಅನುಕರಣೀಯ ಮಾದರಿಯಾಗಿ ಕಂಡು ಬಂದರು.

ಅನ್ಯಾಯವನ್ನು ಯಾರು ಮಾಡುತ್ತಾರೆ, ಆತನ ಜಾತಿ ಯಾವುದು, ಅವನ ಹಿನ್ನೆಲೆ ಏನು, ಸಮಾಜದಲ್ಲಿ ಅವನೆಷ್ಟು ಪ್ರಭಾವಿ ಎಂಬ ಸಂಗತಿಗಳನ್ನು ಅವರು ಪರಿಶೀಲಿಸುತ್ತಲೇ ಇರಲಿಲ್ಲ.

ಮಂತ್ರಿ, ಸ್ವಾಮೀಜಿ, ಅಧಿಕಾರಿ, ಸಿನಿಮಾ ನಟ-ನಟಿಯರು, ಸಾಹಿತಿಗಳು, ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರು, ಬುದ್ಧಿಜೀವಿಗಳು... ಹೀಗೆ ತಪ್ಪು ಮಾಡಿದ ಎಲ್ಲರೂ ರಾಮದಾಸ್ ಪ್ರತಿಭಟನೆಗೆ ತುತ್ತಾಗಿದ್ದಾರೆ.

ಬಾಲ ಕಾರ್ಮಿಕರನ್ನು ಮನೆಯಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದ ಪತ್ರಿಕಾ ಸಂಪಾದಕರ ವಿರುದ್ಧ ಪ್ರತಿಭಟಿಸಿದ ರಾಮದಾಸ್, ಮರುದಿನ ಬೆಳಿಗ್ಗೆ ಪತ್ರಕರ್ತರ ಪರವಾಗಿ ಬೀದಿಗಿಳಿದು ಹೋರಾಟ ನಡೆಸಿದ್ದಾರೆ. ಬಾಲ ಕಾರ್ಮಿಕರ ಸಮಸ್ಯೆ ಬಗ್ಗೆ ಐಷಾರಾಮಿ ಹೋಟೆಲ್‌ನಲ್ಲಿ ವಿಚಾರ ಸಂಕಿರಣ ಆಯೋಜಿಸಿದ್ದ ಒಡನಾಡಿ ಸಂಘಟಕರಿಗೆ ಅವರದ್ದೆ ವೇದಿಕೆಯಲ್ಲಿ ಕಿವಿ ಹಿಂಡಿದ್ದಾರೆ. ಆಹ್ವಾನ ಪತ್ರಿಕೆಯಲ್ಲಿ ಕನ್ನಡಕ್ಕೆ ಪ್ರಾಮುಖ್ಯತೆ ನೀಡದ ರಾಜ್ಯಮಟ್ಟದ ಜನಪ್ರಿಯ ಪತ್ರಿಕೆಯ ಸಂಪಾದಕರೂ ಅವರ ಪ್ರತಿಭಟನೆಗೆ ತುತ್ತಾಗಿದ್ದಾರೆ. ಕುವೆಂಪು ಪ್ರತಿಮೆಗೆ ಹಾರ ಹಾಕಿ, ಊದಿನ ಕಡ್ಡಿ ಬೆಳಗಿದ ವಿಶ್ರಾಂತ ಕುಲಪತಿಯೂ ಅವರ ಆಕ್ರೋಶಕ್ಕೆ ಸಿಕ್ಕಿ ನಲುಗಿದ್ದಾರೆ.

ಜಾತಿಯೊಂದರ ಸ್ವಾಮೀಜಿಯನ್ನು ಪೂಜಿಸುವ - ಆರಾಧಿಸುವ ಮಠದ ನೂರಾರು ಭಕ್ತರ ಮುಂದೆ, ಅವರ ಸ್ವಾಮೀಜಿಯನ್ನು ಕೂರಿಸಿಕೊಂಡೇ, ಮಠದ ವ್ಯವಸ್ಥೆಯನ್ನು ಗುರು

ಪರಂಪರೆಯನ್ನು ಖಂಡಿಸಿ ಮಾತನಾಡಿದ - ನೇರ ನಿಷ್ಠುರವಾದಿ ವಿಚಾರವಾದಿ ರಾಮದಾಸ್ ಅವರಂಥವರನ್ನು ಎಲ್ಲಿ ನೋಡಲು ಸಾಧ್ಯ ?

ಇಂದಿಗೂ ಬಹಳಷ್ಟು ವಿಚಾರವಾದಿಗಳು ರಾಮದಾಸ್ ರೀತಿ ಅನ್ಯಾಯ - ಕಂದಾಚಾರದ ವಿರುದ್ಧ ಮಾತನಾಡುತ್ತಾರೆಯಾದರೂ, ಅವರ ಮಾತನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಏಕೆಂದರೆ ಆ ರೀತಿ ಮಾತನಾಡಲು ನೈತಿಕತೆ ಇರಬೇಕು. ಆಗ ಮಾತ್ರ ಆಡಿದ ಮಾತಿಗೆ ತೂಕವೂ ಇರುತ್ತದೆ, ಬೆಲೆಯೂ ಇರುತ್ತದೆ.

ನಮ್ಮ ನಡುವಿನ ಅನೇಕ ವಿಚಾರವಾದಿಗಳು, ಸಾಹಿತಿಗಳಲ್ಲಿರುವ ಬಹುದೊಡ್ಡ ದೌರ್ಬಲ್ಯ ಅದು. ಪ್ರಗತಿಪರ ವಿಚಾರ ಬೋಧಿಸುತ್ತಲೇ, ಸೋಗಲಾಡಿ ಜೀವನ ನಡೆಸುತ್ತಿರುತ್ತಾರೆ. ಇಂಥವರ ನಡುವೆ ರಾಮದಾಸ್ ದ್ವೀಪದಂತೆ ಕಾಣುತ್ತಿದ್ದರು. ವಿಚಾರವಾದಿ-ಬುದ್ಧಿಜೀವಿ ಎಂಬ ಸಾಮಾಜಿಕ ಜವಾಬ್ದಾರಿಯ (ಸಮಾಜದ ಶಾಸಕ) ಮರ್ಯಾದೆಯನ್ನು ಎತ್ತಿಹಿಡಿದಿದ್ದರು.

* * *

ಜಗತ್ತಿನ ಯಾವುದೇ ಮೂಲೆಯಲ್ಲಿ ಅನ್ಯಾಯ ನಡೆದರೂ, ರಾಮದಾಸ್ ಅದನ್ನು ಖಂಡಿಸಿ ಪ್ರತಿಕ್ರಿಯಿಸುತ್ತಿದ್ದರು. ಕೆಲವೊಮ್ಮೆ ಅವರು ಪ್ರತಿಕ್ರಿಯೆ ನೀಡಲು ಹೋರಾಟಗಾರರಿಗೆ, ಪತ್ರಕರ್ತರಿಗೆ ಸಿಗಲಿಲ್ಲ ಎಂದರೆ, ಅವರ ಹೆಸರನ್ನು ಬಳಸಿಕೊಂಡು ಅಪೇಕ್ಷಣೀಯವಾದ ಯಾವುದೇ ಭಾಷೆಯಲ್ಲಿ ಖಂಡಿಸಬಹುದಿತ್ತು. ಅಷ್ಟರ ಮಟ್ಟಿಗೆ ಪತ್ರಕರ್ತರಿಗೆ ಸ್ವಾತಂತ್ರ್ಯ ನೀಡಿದ್ದರು. ಒಮ್ಮೊಮ್ಮೆ ಜಾಗತಿಕ ಮಟ್ಟದಲ್ಲಿ ಸದ್ದಿಲ್ಲದೆ ನಡೆಯುತ್ತಿದ್ದ ಬೌದ್ಧಿಕ ಅನ್ಯಾಯಗಳು, ರಾಮದಾಸ್ ಪ್ರಸ್ತಾಪಿಸಿದಾಗಲೇ ನಮಗೆಲ್ಲಾ ಗೊತ್ತಾಗುತ್ತಿತ್ತು.

2001ರಲ್ಲಿ ಡರ್ಬನ್‌ನಲ್ಲಿ ನಡೆದ ಜನಾಂಗೀಯ ವಾದ ಕುರಿತು ಸಂಯುಕ್ತ ರಾಷ್ಟ್ರಗಳ ಸಮಾವೇಶದಲ್ಲಿ ಭಾರತದ ಜಾತಿ ತಾರತಮ್ಯವನ್ನು ಸೇರಿಸಿದ ವಿಚಾರಕ್ಕೆ ಅಂದಿನ ಕೇಂದ್ರ ಸರಕಾರ ತಕರಾರು ವ್ಯಕ್ತಪಡಿಸಿತ್ತು. ಇದು ಇನ್ನೂ ದೊಡ್ಡ ಸುದ್ದಿಯಾಗಿರಲಿಲ್ಲ. ಅದೊಂದು ದಿನ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಚಿಕ್ಕದಾಗಿ ಪ್ರಕಟಗೊಂಡಿತ್ತು. ಅದೇ ದಿನ ಸಂಜೆ ರಾಮದಾಸ್ ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾರತ ಸರಕಾರದ ನಿಲುವನ್ನು ವಿರೋಧಿಸಿ ಮಾತನಾಡಿದ್ದರು. ನನಗೆ, ಆ ಹೊತ್ತಿಗೆ ಆ ಬೆಳವಣಿಗೆಯೇ ಗೊತ್ತಿರಲಿಲ್ಲ. ಅವರ ಭಾಷಣಗಳನ್ನು ವರದಿ ಮಾಡಲು, ನೆರೆದಿದ್ದೇನೆ ಎಂಬುದಾದರೂ ಅರ್ಥವಾಗಬೇಕಲ್ಲವೇ. ಕಡೆಗೆ ರಾಮದಾಸ್ ಅವರಿಗೆ ಫೋನ್ ಮಾಡಿ ವಿಷಯ ತಿಳಿದುಕೊಂಡು ಸುದ್ದಿ ಮಾಡಿದ್ದೆ. ಮುಂದೆ ಇದೇ ವಿಷಯ ದೊಡ್ಡ ವಿವಾದವಾಗಿ, ಅಂದಿನ ಕೇಂದ್ರ ಸಚಿವ ಶ್ರೀನಿವಾಸಪ್ರಸಾದ್ ಸರಕಾರದ ನಿಲುವನ್ನು ಖಂಡಿಸಿ, ಪ್ರಧಾನಿ ವಾಜಪೇಯಿಗೆ ಪತ್ರ ಬರೆದಿದ್ದರು.

10 ವರ್ಷದಿಂದ ಪತ್ರಿಕೋದ್ಯಮದಲ್ಲಿ ಕೆಲಸ ಮಾಡುತ್ತಿರುವ ನಾನು ರಾಮದಾಸ್ ಅವರನ್ನು ಬಲು ಹತ್ತಿರದಿಂದ ನೋಡಿದ್ದೇನೆ. ಕೆಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಹೊಂದಿ ನನ್ನ ವರದಿ - ಲೇಖನಗಳಲ್ಲಿ ಅವರ ಕಾಲೆಳೆದಿದ್ದೇನೆ. ಕೆಲವೊಮ್ಮೆ ಅವರನ್ನು ಟೀಕಿಸಿದ್ದೇನೆ. ಕಡೆಗೆ

ಅವರ ಪ್ರಭಾವಕ್ಕೆ ಒಳಗಾಗಿ ಮಾರ್ಗದರ್ಶನ ಪಡೆದಿದ್ದೇನೆ. ವೃತ್ತಿಯಲ್ಲಿ ವೈಯಕ್ತಿಕ ಬದುಕಿನಲ್ಲಿ ಅನೇಕ ಸಮಸ್ಯೆಗಳು, ಸಂದಿಗ್ಧತೆಗಳು ಎದುರಾದಾಗ ಅವರಲ್ಲಿ ಪರಿಹಾರ ಕಂಡುಕೊಂಡಿದ್ದೇನೆ.

ಕಾಲೇಜು ದಿನಗಳಲ್ಲಿ ಕಲಿಯುವಾಗ ಸುಮಾರು 3-4 ವರ್ಷಗಳ ಕಾಲ ಬಲಪಂಥೀಯ ಸಂಘಟನೆ ಎವಿಬಿಪಿಯಲ್ಲಿ ಸಕ್ರಿಯ ಕಾರ್ಯಕರ್ತನಾಗಿದ್ದವನು ನಾನು. ಇದೇ ಕಾರಣದಿಂದಲೋ-ಏನೋ, ಪತ್ರಕರ್ತನಾಗಿ ವೃತ್ತಿ ಆರಂಭಿಸಿದ ಮೊದಲ 3-4 ವರ್ಷ ರಾಮದಾಸ್ ಬಗ್ಗೆ ತಕರಾರು ಇಟ್ಟುಕೊಂಡೇ ಇದ್ದೆ. ರಾಮದಾಸ್ ಪತ್ರಿಕಾಗೋಷ್ಠಿ ಇದೆ ಎಂದರೆ, ಪೂರ್ವ ತಯಾರಿಯೊಂದಿಗೆ ಹೋಗಿ ಪ್ರಶ್ನೆಗಳ ಮಳೆ ಸುರಿಸುತ್ತಿದ್ದೆ. ಆದರೆ, ಯಾವತ್ತು ಪ್ರಶ್ನೆಗಳ ಮೂಲಕ ಅವರನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಲು ಸಾಧ್ಯವಾಗಲಿಲ್ಲ.

ಅದೇ ಸಂದರ್ಭದಲ್ಲಿ ರಾಮದಾಸ್ ಅವರನ್ನು ವ್ಯಂಗ್ಯ ಮಾಡಿ, 'ಪಾಠ ಮಾಡದೇ ಪ್ರೊಫೆಸರ್ ಆದ ರಾಮದಾಸ್' ಎಂದು ಲೇಖನ ಬರೆದಿದ್ದೆ ('ಇವ್ರು ಇರೋದೇ ಹೀಗೆ' ಎಂಬ ಶೀರ್ಷಿಕೆಯ ತಮಾಷೆ ಅಂಕಣವದು).

ರಾಮದಾಸ್ ತರಗತಿಯಲ್ಲಿ ಪಾಠ ಮಾಡಿದ್ದೇ ಕಡಿಮೆ. ಪ್ರೊಫೆಸರ್ ಎಂದು ಕರೆಸಿಕೊಳ್ಳುವ ನೈತಿಕತೆ ಇಲ್ಲ ಎಂಬುದು ಅವರ ಬಗ್ಗೆ ಇದ್ದ ಆಕ್ಷೇಪ. ಆ ಲೇಖನ ಬರೆಯುವ ಕಾಲಕ್ಕೆ ನನಗೂ ಅದು ಸರಿ ಎನಿಸಿತ್ತು. ಆದರೆ, ನಾನಂದುಕೊಂಡಿದ್ದ ಅಭಿಪ್ರಾಯ ಸರಿಯಲ್ಲ ಎಂದು ಕೆಲವೇ ದಿನಗಳಲ್ಲಿ ಅರ್ಥವಾಯಿತು.

ಮುಂದೊಂದು ದಿನ ರಾಮದಾಸ್‌ಗೆ ನನ್ನ ಹಿನ್ನೆಲೆಯನ್ನು ವಿವರಿಸಲು ಯತ್ನಿಸಿದಾಗ, 'ಯಾರನ್ನೂ ಕೂಡ ಪತ್ರಕರ್ತ ಸರಳವಾಗಿ ಒಪ್ಪಬಾರದು. ಎಲ್ಲರನ್ನು ಪ್ರಶ್ನಿಸಬೇಕು. ಎಲ್ಲರ ಕುರಿತು ಪೂರ್ವಗ್ರಹವಲ್ಲದ ಗುಮಾನಿ ಹೊಂದಿರಬೇಕು' ಎಂದು ಹೇಳಿದ್ದರು. ನನ್ನ ಸಂಘಟನೆಯ ಹಿನ್ನೆಲೆಯನ್ನು ಆಲಿಸಲು ಅವರಿಗೆ ಆಸಕ್ತಿಯೇ ಇರಲಿಲ್ಲ. (ಇದಾದ ಬಳಿಕ - ನಾನು ಕೆಲಸ ಮಾಡಿದ ಸಂಘಟನೆ, ಜಾತಿಯ ನೆಲೆಯನ್ನು ನೋಡಿ ಗುಮಾನಿಸುವ ಕುಬ್ಜ ಮನಸ್ಸುಗಳನ್ನು ಕಂಡು ಮರುಕ ಪಟ್ಟಿದ್ದೇನೆ) ಮುಂದೆ ನಿಜಕ್ಕೂ ರಾಮದಾಸ್ ನನ್ನ ಪಾಲಿನ ಪ್ರೊಫೆಸರ್ ಆಗಿದ್ದರು. ವ್ಯಂಗ್ಯವಾಗಿ ಬರೆದ ಶೀರ್ಷಿಕೆ, ನನ್ನ ಮಟ್ಟಿಗೆ ನಿಜವಾಯಿತು. ನನ್ನಂತೆ ಸಾವಿರಾರು ಮಂದಿಗೆ ಅವರು ನಿಜವಾದ ಅರ್ಥದಲ್ಲಿ ಪ್ರೊಫೆಸರ್ರ್ರ !

# ಗೆಳೆಯ ಕೆ. ರಾಮದಾಸ್

**ಕಡಿದಾಳು ಶಾಮಣ್ಣ**

ಪ್ರೊ. ಕೆ. ರಾಮದಾಸ್‌ರವರು ನನಗೆ ಮೊದಲು ಪರಿಚಯವಾದದ್ದು ಮೈಸೂರು ನೂರಡಿ ರಸ್ತೆಯ ಸಣ್ಣ ವ್ಯಾಪಾರಿ ಹೊನ್ನಯ್ಯನವರ ಅಂಗಡಿಯಲ್ಲಿ. ನಾನು ಅವರು ಬಾಳೆಹಣ್ಣು ಕೊಂಡು ತಿನ್ನುವಾಗ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದೆವು. ಇಬ್ಬರೂ ಹೊನ್ನಯ್ಯನವರಲ್ಲಿ ಸಾಲ ಹೇಳಿದ್ದುಂಟು. ಆ ಸಮಯದಲ್ಲಿ ಮಾತನಾಡುತ್ತ ನಾವುಗಳು ಯಾವ ಊರಿನವರೆಂತಲೂ ನಮ್ಮ ಊರು, ಕೇರಿ, ತಂದೆ, ತಾಯಿ ಯಾರು ಯಾರೆಂದು ವಿವರಣೆ ತಿಳಿಯುವ ಕುತೂಹಲದಲ್ಲಿ ನಾನೇ ಮೇಲೆ ಬಿದ್ದು ಎಲ್ಲವನ್ನೂ ತಿಳಿಯಲು ಕೇಳುತ್ತಿದ್ದೆ. ರಾಮದಾಸ್ ತಾನು ಸಾಗರದವನೆಂದು ತಿಳಿಸುತ್ತಿದ್ದರೆ ನಾನು ತೀರ್ಥಹಳ್ಳಿಯ ಕಡಿದಾಳುನವನೆಂತಲೂ, ರೈತಾಪಿ ಕುಟುಂಬದಿಂದ ಬಂದವನೆಂತಲೂ ತಿಳಿಸುತ್ತಿದ್ದೆ. ಜೊತೆಗೆ ನಾನು ಮಹಾರಾಜ ಕಾಲೇಜು ಹಾಸ್ಟಲಿನಲ್ಲಿದ್ದೇನೆ. ನೀವೆಲ್ಲಿದ್ದೀರಿ ಎಂದು ಹೇಳಿ ಮುಂದೆ ಅವರೂ ಎಲ್ಲಿದ್ದೀರಿ ಎಂದು ಕೇಳುವ ಮೊದಲೇ ಬರ್ತೀನಿ ಎಂದು ಹೇಳಿ ನೂರಡಿ ರಸ್ತೆಯಲ್ಲಿ ಕೆಳಗಡೆ ಹೊರಟು ಹೋಗುತ್ತಿದ್ದರು. ರಾಮ್‌ದಾಸ್ ಎಲ್ಲಿ ಉಳಿದುಕೊಂಡಿದ್ದಾರೆಂದು ಕೇಳಲಿಲ್ಲವಲ್ಲ ಎಂದು ಮನಸ್ಸಿನಲ್ಲಿ ಅಂದುಕೊಂಡು ಸುಮ್ಮನಾಗುತ್ತಿದ್ದೆ.

ಆ ದಿನಗಳಲ್ಲಿ ರಾಮದಾಸ್‌ರವರನ್ನು ಮರೆಯಲಾಗದ ಒಂದು ಸ್ವಾರಸ್ಯಕರ ಘಟನೆ ನಡೆದದ್ದು ಈಗಲೂ ನೆನಪಾಗುತ್ತದೆ ಮತ್ತು ಆ ನೆನಪು ತಡೆಯಲಾಗದ ನಗುವನ್ನೂ ತರುತ್ತದೆ. ಅದೇನೆಂದ್ರೆ ರಾಮದಾಸ್‌ರವರಿಗೆ ಮಲಬದ್ಧತೆಯ ತೊಂದ್ರೆಯಾಗಿ ಶ್ರೀರಾಮ್ ಅವರ ಹತ್ತಿರ ಹೇಳಿಕೊಂಡಾಗ ಅವರು ಅಲ್ಲೇ ಹತ್ತಿರದಲ್ಲಿ ಒಬ್ಬನು ಆಯುರ್ವೇದ ಚಂದ್ರಬಾನ್‌ಸಿಂಗ್ ಎಂಬ ಡಾಕ್ಟರ್ ಹತ್ರ ಕರೆದುಕೊಂಡು ಹೋಗಿ ಸಾಸಿವೆ ಗಾತ್ರದ ಜ್ಯಾಪಾಳ ಮಾತ್ರೆಗಳನ್ನು ಕೊಡಿಸಿದ್ದರು. ಕೇವಲ ಸಾಸಿವೆ ಗಾತ್ರದ ಈ ಮಾತ್ರೆಗಳು ಅದೆಂತಾ ಬೇಧಿ ಮಾಡಿಸುತ್ತವೆ ಎಂದು ಹಗುರವಾಗಿ

ಹೇಳುತ್ತ ನಾನು ನಕ್ಕಿದ್ದೆ. ರಾಮ್‌ದಾಸ್ ಶ್ರೀರಾಂರವರ ರೂಮಲ್ಲೇ ಆ ಮಾತ್ರೆಯನ್ನು ನುಂಗಲು ನೀರನ್ನು ಕೇಳಿ ತೆಗೆದುಕೊಂಡು ಆ ಜ್ಯಾಪಾಳ ಮಾತ್ರೆಗಳನ್ನು ಸೇವಿಸಿದ್ದರು. ಡಾಕ್ಟರ್‌ರವರು ಸ್ಪಷ್ಟವಾಗಿ ಹೇಳಿದ್ದು ನನಗೆ ನೆನಪಿದೆ. ಮಾತ್ರೆ ತೆಗೆದುಕೊಂಡು ಒಂದೆರಡು ಸಾರಿ ಬೇಧಿಯಾದ ಮೇಲೆ ಮಜ್ಜಿಗೆ ಕುಡಿಯಲು ಹೇಳಿದ್ದರು. ಆದ್ರೆ ರಾಮ್‌ದಾಸ್ ಆ ಕೆಲ್ಸ ಮಾಡಲಿಲ್ಲ. ಆದ್ದರಿಂದ ಅವರಿಗೆ ಬೇಧಿ ನಿಲ್ಲದೆ ವಿಪರೀತ ಸುಸ್ತಾಗಿ ಹೋಗಿದ್ದ ವಿಚಾರ ಮತ್ತು ಅದೇ ಆಯುರ್ವೇದ ಡಾಕ್ಟರ್ ಹತ್ರ ಬೇಧಿ ನಿಲ್ಲಲು ಸಾಸಿವೆ ಗಾತ್ರದ ಮಾತ್ರೆ ತಂದು ತಿನ್ನಬೇಕಾಯ್ತೆಂದು ನಾಲ್ಕಾರು ದಿನಗಳ ನಂತ್ರ ಅದೇ ನೂರಡಿ ರಸ್ತೆ ಹೊನ್ನಯ್ಯನವರ ಅಂಗಡಿಹತ್ರ ನಾವು ಸೇರಿದಾಗ ಶ್ರೀರಾಂರವರಿಂದ ನನಗೆ ಮತ್ತು ತೇಜಸ್ವಿಯವರಿಗೆ ವಿಷಯ ತಿಳಿಯಿತು. ಅಂತೂ ಹೇಳಿಕೊಂಡು ನಗಲು ನಮ್ಮಿಬ್ಬರಿಗೆ ವಿಷಯ ಸಿಕ್ಕಹಾಗಾಯ್ತು. ನಾಲ್ಕಾರು ದಿನಗಳ ನಂತ್ರ ರಾಮದಾಸ್ ಸಿಕ್ಕಾಗ "ಏನ್ ರಾಮದ್ಹಾಸ್ ಜ್ಯಾಪಾಳ ಮಾತ್ರೆ ಡಾಕ್ಟರ್ ಸರಿಯಾಗಿ ಹೇಳಿದ್ದುದು ನಾನು ಕೇಳಿಸಿಕೊಂಡಿದ್ದೆ. ರೂಂ ಗೆ ಹೋಗಿ ಮಾತ್ರೆಯನ್ನು ನೀರಿನೊಡನೆ ತೆಗೆದುಕೊಳ್ಳಿ ಎರಡು ಸಾರಿ ಬೇಧಿಯಾದ ನಂತ್ರ ಮಜ್ಜಿಗೆ ಸರಿಯಾಗಿ ಕುಡಿಯಿರಿ ಮತ್ತು ಮಜ್ಜಿಗೆ ಅನ್ನ ಊಟಮಾಡಿ ಅಂದ್ರೆ ನೀವು ಹಾಗೆ ಮಾಡಿದ್ದಿರಾ" ಎಂದುದಕ್ಕೆ "ರೀ ಶಾಮಣ್ಣ ನಾನಿರುವ ಹಾಸ್ಟೆಲ್ ಹೆಸರು ಮೈಸೂರು ಮುನಿಸಿಪಾಲಿಟಿ ಹಾಸ್ಟೆಲ್. ಅಲ್ಲಿ ಯಾವನು ಮಜ್ಜಿಗೆ, ಮಜ್ಜಿಗೆ ಅನ್ನ ಮಾಡಿಕೊಡ್ತಾರೆ ಹೇಳಿ ! ಅವರು ಹಾಕಿದ್ದು ತಿಂದು ತೆಪ್ಪಗೆ ಕಾಲೇಜಿಗೆ ಹೋಗಬೇಕು." ನಮ್ಮ ಮುನಿಸಿಪಾಲಿಟಿ ಹಾಸ್ಟಲು ನಿಮ್ಮ ಮಹಾರಾಜ ಕಾಲೇಜು ಹಾಸ್ಟೆಲ್ ಅಂದು ತಿಳಿದುಕೊಂಡಿದ್ದೀರ" ಎಂದು ಬೈದಿದ್ದರು.

ಅವರ ಜ್ಯಾಪಾಳ ಮಾತ್ರೆ ಘಟನೆ ನಡೆದ ವಾರದಲ್ಲೇ ರಾಮದಾಸ್ ಹಾಸ್ಟೆಲಿನವರು ಬೇರೊಬ್ಬ ಹುಡುಗನ ವಿಚಾರದಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಂಡಾಗ, ತನ್ನ ಜೊತೆಗೆ ನಾಲ್ಕಾರು ಹುಡುಗರನ್ನು ಸೇರಿಸಿಕೊಂಡು ಮುನಿಸಿಪಲ್ ಹಾಸ್ಟೆಲ್ ಮೇನೇಜ್‌ಮೆಂಟ್ ವಿಚಾರದಲ್ಲಿ ಪತ್ರಿಕೆಯಲ್ಲಿ ಬರುವಂತೆ ಗಲಾಟೆ ಮಾಡಿದರೆಂದು ಅದೇ ಹಾಸ್ಟೆಲಿನ ಬೇರೆ ಹುಡುಗರಿಂದ ತಿಳಿದುಕೊಂಡಿದ್ದೆ. ಈ ಕಾರಣದಿಂದ ರಾಮದಾಸ್ ಅವರನ್ನು ಹಾಸ್ಟೆಲಿನಿಂದ ಹೊರಹಾಕಬಹುದೆಂದು ನಾವೆಲ್ಲ ತಿಳಿದಿದ್ದೆವು. ಆದ್ರೆ ಹಾಗೇನೂ ಆಗಲಿಲ್ಲ ಎಂದು ತಿಳಿದು ಸಮಾಧಾನವಾಗಿತ್ತು. ಆ ದಿನಗಳಿಂದಲೇ ರಾಮದಾಸ್ ಅನ್ಯಾಯದ ವಿರುದ್ಧ ಬೆಂಕಿಯ ಚೂರಾಗಿ ಬಿಡುತ್ತಿದ್ದರೆಂದು ಅರ್ಥವಾಗಿತ್ತು. ಇಡೀ ಮುನಿಸಿಪಾಲಿಟಿ ಹಾಸ್ಟೆಲ್ ಮೈಸೂರು ಇದರಲ್ಲಿ ಊಟ ಮಾಡಿಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದ ಎಲ್ಲಾ ಹುಡುಗರನ್ನು ಸಂಘಟಿಸಿಕೊಂಡು ಒಟ್ಟಾರೆಯಾಗಿ ಅದೇ ಹಾಸ್ಟೆಲ್ ಆಡಳಿತ ಮಂಡಳಿಯ ಮೇಲೆ ಪ್ರತಿಭಟನೆ ನಡೆಸಿದ್ದನ್ನು ತಿಳಿದ ಮೇಲೆ ನಮ್ಮ ಜೊತೆ ಹೊನ್ನಯ್ಯನವರ ಅಂಗಡಿಯಲ್ಲಿ ಕೇವಲ ಬಾಳೆಹಣ್ಣು ತಿಂದು ನಮ್ಮಂತೆ ಕಾಲೇಜ್ ಆವರಣದಲ್ಲಿ ಹರಟೆ ಹೊಡೆದುಕೊಂಡಿರುವ ವಿದ್ಯಾರ್ಥಿ ಅಲ್ಲವೆಂದು ಮನವರಿಕೆಯಾಗಿತ್ತು.

ಅನ್ಯಾಯದ ವಿರುದ್ಧ ಹೋರಾಟದ ಮನೋಭಾವ ಬೆಳೆಸಿಕೊಳ್ಳಲು ರಾಮದಾಸ್‌ರಿಗೆ ತೀರ್ಥಹಳ್ಳಿ - ಸಾಗರ, ಸೊರಬ, ಶಿಕಾರಿಪುರ ತಾಲ್ಲೂಕುಗಳಲ್ಲಿ ಗೇಣಿದಾರರ ಹೋರಾಟ ನಡೆದದ್ದೇ

ಮುಖ್ಯ ಕಾರಣವೆಂದು ನಾನು ಭಾವಿಸಿದ್ದೇನೆ. ಶಾಲೆಗೆ ಹೋಗುವ ಹುಡುಗನಾಗಿದ್ದಾಗಿನಿಂದಲೂ ಭೂ ಹೋರಾಟದ ಘಟನೆಗಳನ್ನು ಸೋಷಲಿಸ್ಟ್ ಯಾನೆ ಸಮಾಜವಾದಿ ಪಕ್ಷ ನಡೆಸುತ್ತಿದ್ದುದರ ಪರಿಣಾಮವಾಗಿ ರಾಮದಾಸ್‌ನಂತವರು ತಮ್ಮ ಕಣ್ಣೆದುರು ನಡೆಯುತ್ತಿರುವ ಅನ್ಯಾಯಗಳನ್ನು ಸಹಿಸಿಕೊಳ್ಳದೆ ಅದರ ವಿರುದ್ಧ ಜನರನ್ನು ಸಂಘಟಿಸಿ ಪ್ರತಿಭಟಿಸಿರುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ತಮ್ಮ ಮನೋಭಾವ ರೂಢಿಸಿಕೊಳ್ಳಲು ಸಾಧ್ಯವಾಗಿತ್ತು. ನಾನೂ ಅಂತಹ ಸಮಾಜವಾದಿ ಸಿದ್ಧಾಂತದಂತೆ ನಡೆದು, ಸಮಾಜವಾದಿ ಪಕ್ಷದ ಮುಖಂಡನೆನ್ನಿಸಿಕೊಡು, ಮೂರು ಸಾರಿ ಚುನಾವಣೆಯಲ್ಲಿ ಗೆದ್ದು ಕರ್ನಾಟಕ ಶಾಸನ ಸಭೆಗೆ ಶಾಸಕನಾಗಿ ಪ್ರತಿನಿಧಿಸಿದ್ದ ಶಾಂತವೇರಿ ಗೋಪಾಲಗೌಡರ ತಾಲ್ಲೂಕಿನ (ತೀರ್ಥಹಳ್ಳಿ ತಾ)ವನಾದ್ದರಿಂದ ರಾಮದಾಸ್ ಕ್ರಾಂತಿಕಾರಿಯಾಗಿ ಬೆಳೆದುಬರಲು ಸಾಧ್ಯವಾಯ್ತು. ಮೈಸೂರಿನ ಅಂಬಳೆ ಅಣ್ಣಯ್ಯ ಪಂಡಿತರ ಹೆಸರಿನ ಕಟ್ಟಡದಲ್ಲಿ ನಡೆಯುತ್ತಿದ್ದ ಮೈಸೂರು ಮುನಿಸಿಪಲ್ ಹಾಸ್ಟೆಲ್‌ನಲ್ಲಿ ಇದ್ದಾಗ (ಮುನಿಸಿಪಾಲಿಟಿ ಹಾಸ್ಟೆಲ್)

ಈ ಮಧ್ಯೆ ನಾನು ಬೊಂಬಾಯಿಗೆ ಅಲಿಅಕ್ಬರ್‌ಖಾನ್‌ರವರಲ್ಲಿ ಸರೋದ್ ಕಲಿಯಲಿಕ್ಕೆ ಹೋದಾಗ ರಾಮದಾಸ್‌ರವರ ತಾಯಿ ಕೆ.ಆರ್. ಆಸ್ಪತ್ರೆಯಲ್ಲಿ ನರ್ಸ್ ಕೆಲಸ ಮಾಡುತ್ತಿದ್ದ ದಿನಗಳಲ್ಲಿ ಮೈಸೂರಿನ ಸರಸ್ವತೀಪುರಂ 4ನೇ ಮೇನ್‌ನಲ್ಲೊಂದು ಬಾಡಿಗೆ ಮನೆ ಮಾಡಿಕೊಂಡು ರಾಮದಾಸ್‌ರವರನ್ನು ಮುನಿಸಿಪಾಲಿಟಿ ಹಾಸ್ಟೆಲಿನಿಂದ ಬಿಡುಗಡೆ ಮಾಡಿಸಿದ್ದರು. ಮಹಾರಾಜ ಕಾಲೇಜಿನಲ್ಲಿ ಬಿ.ಎ. ಮುಗಿಸಿ ಗಂಗೋತ್ರಿಯಲ್ಲಿ ಕನ್ನಡ ಎಂ.ಎ. ಮುಗಿಸಿದರು. ಓದುವಾಗ ಪ್ರತಿಭಾವಂತ ವಿದ್ಯಾರ್ಥಿ ಎಂದೇ ಅನ್ನಿಸಿಕೊಂಡಿದ್ದರು. ಎಂ.ಎ. ಮುಗಿಯುತ್ತಿದ್ದಂತೆ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ವೃತ್ತಿಯನ್ನು ಹಿಡಿದು ಗಂಗೋತ್ರಿಯ ಟೀಚರ್ಸ್ ಕ್ವಾರ್ಟರ್ಸ್‌ನಲ್ಲಿ ತಾಯಿ ಮಂಜಮ್ಮ ಮತ್ತು ಮಗ ಠಿಕಾಣಿ ಹೂಡಿದ್ದು ನನಗೆ ನೆನಪಿದೆ. ಅವರ ತಾಯಿ ಕೆ.ಆರ್ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡಿ ಕಡೆಗೂ ಕೆ.ಆರ್. ಆಸ್ಪತ್ರೆಯಲ್ಲೇ ನಿವೃತ್ತಿ ಹೊಂದಿದರು. ಆದ್ರೆ ಮಂಜಮ್ಮನವರು ಕೇವಲ ಆಸ್ಪತ್ರೆಯಲ್ಲಿ ನರ್ಸ್ ಆಗಿರಲಿಲ್ಲ. ಅವರಿಗೆ ಪರಿಚಯವಾದ ಎಲ್ಲರಿಗೂ ತನ್ನ ಕೈಲಾದ ಸೇವೆಯನ್ನು ಮಾಡುತ್ತಿದ್ದರು. ಅವರ ತಾಯಿಯ ಎಲ್ಲಾ ಗುಣಗಳೂ ರಾಮದಾಸ್‌ರವರಲ್ಲಿ ಕಾಣಬಹುದಾಗಿತ್ತು. ತಾವು ನಂಬಿದ ಸೈದ್ಧಾಂತಿಕ ಮೌಲ್ಯಗಳನ್ನು ಎಂದೂ ಬಿಟ್ಟುಕೊಡದವರಾಗಿದ್ದರು. ಎಷ್ಟೇ ದೊಡ್ಡವರಾಗಿರಲಿ ಎಷ್ಟೇ ಚಿಕ್ಕವರಾಗಿರಲಿ ತನಗೆ ಸರಿಬರುವವರಲ್ಲವೆಂದು ಕಂಡುಬಂದರೆ ಅಂತವರಿಂದ ದೂರವಿರುತ್ತಿದ್ದರು. ಅಂತವರನ್ನು ಸಾರ್ವಜನಿಕವಾಗಿ ಟೀಕಿಸುವ ಹಕ್ಕನ್ನು ಚಲಾಯಿಸುತ್ತಿದ್ದರು. "Please no compromise" ಅಂದೇ ಬಿಡುತ್ತಿದ್ದರು.

ಮೈಸೂರಿನ ಮಾನಸ ಗಂಗೋತ್ರಿ ಉಪಾಧ್ಯಾಯರುಗಳ ವಾಸದ ಮನೆಯ ಸಮುಚ್ಚಯದಲ್ಲಿ ರಾಮದಾಸ್ ವಾಸವಾಗಿದ್ದಾಗ, ಅವರ ಮನೆಯ ಹತ್ತಿರದಲ್ಲೇ ನನ್ನ ಹೆಂಡತಿ ಶ್ರೀದೇವಿಯ ಅಣ್ಣ ಸೈಕಾಲಜಿ ಪ್ರೊಫೆಸರ್ ಹೆಚ್.ಎಸ್. ಈಶ್ವರ್‌ರವರ ಮನೆಯೂ ಇದ್ದುದರಿಂದ ನಾವು ಊರಿಂದ ಹೋದಾಗ ಪ್ರಾರಂಭದಲ್ಲಿ ನಮ್ಮ ಕೈಚೀಲಗಳನ್ನು ಈಶ್ವರ್ ಮನೆಯಲ್ಲಿಡುತ್ತಿದ್ದವೇ ಹೊರತು ಮತ್ತೆ ಪೂರ್ಣ ಸಮಯ ರಾಮದಾಸ್‌ರವರ ಮನೆಯಲ್ಲಿ ಕಳೆಯುತ್ತಿದ್ದೆವು.

ರಾಮ್‌ದಾಸ್ ತಾಯಿ ಮಂಜಮ್ಮನವರು ದಿನಕ್ಕೆ ಅದೆಷ್ಟು ಲೋಟ ಟಾ ಮಾಡಿ ನಮಗೆಲ್ಲ ಕೊಡುತ್ತಿದ್ದರೆಂತಲೂ, ಊಟದ ಹೊತ್ತಲ್ಲಿ ಅಡಿಗೆ ಮಾಡಿ ಬಡಿಸುತ್ತಿದ್ದರೆಂದು ನೆನಪು ಮಾಡಿದರೆ ಹುಡುಗಾಟದಲ್ಲಿ ಯಾರು ಯಾರಿಗೆ ಎಷ್ಟೆಷ್ಟು ತೊಂದ್ರೆಯನ್ನು ಕೊಡುತ್ತಿದ್ದೆವೆಂದು ಈಗ ನೆನಪಾಗುತ್ತದೆ. ಸದ್ಯ ಆಗ ರಾಮ್‌ದಾಸ್‌ರವರ ಮದುವೆಯಾಗಿತ್ತು. ನಿರ್ಮಲರವರು ರಾಮದಾಸ್‌ರನ್ನು ಮದುವೆಯಾದ ನಂತ್ರ ಮಂಜಮ್ಮನವರಿಗೆ ಮನೆಯ ಕಡೆಯ ಕೆಲ್ಸಕಾರ್ಯಗಳ ಹೊರೆ ತುಂಬಾ ಕಡಿಮೆಯಾಗಿತ್ತೆಂದು ಕಂಡುಬರುತ್ತಿತ್ತು. ನಿರ್ಮಲರವರ ಸ್ವಭಾವವೂ ತಾಯಿ ಮಗನಂತೆಯೇ ಇದ್ದುದರಿಂದ ಸರಿಹೋಗಿತ್ತು. ನಿರ್ಮಲರವರು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದವರು ರಾಮದಾಸ್ ನಿರ್ಮಲ ಇಬ್ಬರೂ ಪರೀಕ್ಷೆಯ ಪ್ರಶ್ನೆಪತ್ರಿಕೆಗಳ ವ್ಯಾಲ್ಯುಏಷನ್‌ಗೆ ಒಟ್ಟಿಗೆ ಸೇರುತ್ತಿದ್ದಾಗ ಪರಿಚಯವಾಗಿ, ಪ್ರೇಮವಾಗಿ ಮದುವೆಯೂ ಆಯ್ತೆಂದು ರಾಮ್‌ದಾಸ್ ಬಾಯಿಂದಲೇ ಕೇಳಿ ತಿಳಿದುಕೊಂಡೆ.

ಕರ್ನಾಟಕ ರಾಜ್ಯ ರೈತ ಸಂಘ ಪ್ರಾರಂಭವಾದ ನಂತರ ನಾನು ಸಂಪೂರ್ಣ ರೈತ ಸಂಘದಲ್ಲಿ ತೊಡಗಿಕೊಂಡಿದ್ದರಿಂದ ಚಳವಳಿ, ಹೋರಾಟ, ಜೈಲು ಇದರ ದೆಸೆಯಿಂದ ಮೈಸೂರಿಗೆ ಹೋಗುವುದು ರಾಮದಾಸ್, ಶ್ರೀರಾಮ್, ಜಿ.ಹೆಚ್. ನಾಯ್ಕರು, ರಾಮಚಂದ್ರೇಗೌಡ್ರು, ಕೆ.ಸಿ. ಬಸವರಾಜ್ ಮುಂತಾದ ಸ್ನೇಹಿತರೊಡನೆ ಸಂಪರ್ಕ ಅಪರೂಪವಾಯಿತು. ಜೊತೆಗೆ ನನ್ನ ವ್ಯವಸಾಯದ ಫಜೀತಿಗಳು. ಆದರೂ ರಾಮದಾಸ್ ನಿರ್ಮಲವರು, ಅವರ ಊರು ಹೊಸನಗರದ ರಿಪ್ಪನ್‌ಪೇಟೆಯಾದ್ದರಿಂದ ಊರಿನ ಕಡೆ ಬಂದಾಗಲೆಲ್ಲ ಭಗವತೀಕೆರೆಗೆ ಬಾರದೆ ಹೋಗುತ್ತಿರಲಿಲ್ಲ. ಜೊತೆಗೆ ಡಾ. ಶಿವರಾಂ, ಆಶಾ ದಂಪತಿಗಳು ರಾಮದಾಸ್, ನಿರ್ಮಲ ಹಾಗೂ ಮಂಜಮ್ಮನವರಿಗೆ ತುಂಬಾ ಹತ್ತಿರವಾದ್ದರಿಂದ ಮತ್ತು ಅವರಿಗೆಲ್ಲಾ ವೈದ್ಯಕೀಯ ಸಲಹೆ ಶಿವರಾಂರವರೇ ಕೊಡುತ್ತಿದ್ದುದರಿಂದ ಆಗ ಶಿವಮೊಗ್ಗದ ಶಿವರಾಂರವರ ಮನೆಗೆ ಬರುತ್ತಿದ್ದವರು ಭಗವತೀಕೆರೆಗೂ ಬಂದು ನಮ್ಮೊಡನೆ ಸ್ವಲ್ಪ ಕಾಲ ಕಳೆದು ಹೋಗುವುದನ್ನು ರೂಡಿಮಾಡಿಕೊಂಡಿದ್ದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ರಾಮದಾಸ್ ಮಹಾರಾಣಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನಿರ್ಮಲ ತಮ್ಮ ಸೇವೆ ಸಲ್ಲಿಸುತ್ತಿದ್ದರೂ ರೈತ ಸಂಘದ ಚಳವಳಿಯಲ್ಲಿ ಮತ್ತು ದಲಿತ ಚಳವಳಿಯಲ್ಲಿ ಕಾರ್ಯಕರ್ತರಿಗೆ ಹೊರಗಿನಿಂದಲೇ ಸಲಹೆ ಸಹಕಾರ ಕೊಡುತ್ತ ಉತ್ತೇಜನ ನೀಡುತ್ತಿದ್ದರು. ಎಂ.ಡಿ.ಎನ್, ಪೂಚಂತೆ, ದೇವನೂರು ಮಹಾದೇವ ಮುಂತಾದವರು ಮೈಸೂರಿನ ರಾಮದಾಸರ ಮನೆಯಲ್ಲಿ ಆಗಾಗ ಸೇರುತ್ತ ಚರ್ಚಿಸುತ್ತ ಉಪಯುಕ್ತವಾದ ಸಲಹೆ ಸಹಕಾರಗಳನ್ನು ನಿರೀಕ್ಷಿಸುತ್ತಿದ್ದರು. ನಮ್ಮ ಮಕ್ಕಳಾದ ಡಾ. ಉಲೂಪಿ, ಲಾಜವಂತಿ, ರಾಮದಾಸ್, ನಿರ್ಮಲರವರ ಮಗಳಾದ ಸ್ನೇಹ ಇವರ ಸಂಪರ್ಕ ಒಂದೇ ಕುಟುಂಬದವರಂತೆ ಬೆಳೆಯಿತು.

ಲಂಕೇಶ್ ಪತ್ರಿಕೆ ಪ್ರಾರಂಭವಾದ ಮೇಲೆ ನಮ್ಮೆಲ್ಲರ ಮೇಲೆ ವಿವಿಧ ರೀತಿಯ ಪರಿಣಾಮವನ್ನು ಬೀರಿತು. 'ಪ್ರಗತಿರಂಗ' ಎಂಬ ರಾಜಕೀಯ ಪಕ್ಷದ ಹೆಸರಿನಡಿಯಲ್ಲಿ ಅಸೆಂಬ್ಲಿ ಚುನಾವಣೆಯಲ್ಲಿ ಕೆಲವು ಕ್ಯಾಂಡಿಡೇಟ್ ನಿಲ್ಲಿಸಿ ಕೆಲಸ ಮಾಡುವಾಗ ರಾಮದಾಸ್ ಮುಂದಾಳತ್ವ

ವಹಿಸಿ ಕರ್ನಾಟಕದಾದ್ಯಂತ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರಿಂದ ಒಂದು ರೀತಿಯಲ್ಲಿ ರಾಜ್ಯನಾಯಕರೇ ಆದರು.

ನಿರ್ದಾಕ್ಷಿಣ್ಯವಾಗಿ ಮತ್ತು ತುಂಬಾ ತೀಕ್ಷ್ಣವಾಗಿ ಸಭೆಗಳಲ್ಲಿ ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯಗಳ ವಿರುದ್ಧವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ರಾಮದಾಸ್ ಕರ್ನಾಟಕದ ಪ್ರಖ್ಯಾತ ಚಿಂತಕರೇ ಆದರು. ಇದರ ಜೊತೆಗೆ ಬರವಣಿಗೆ ಮಾಡದಿದ್ದುದು ಭಾಷೆಗಾದ ಕೊರತೆ ಎಂದೇ ನಾನು ಪರಿಗಣಿಸುತ್ತೇನೆ.

ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ರಾಮದಾಸ್‌ರವರು ಮಾನಸ ಗಂಗೋತ್ರಿಯ ಗಾಂಧಿಭವನವನ್ನು ವಿಶ್ವವಿದ್ಯಾನಿಲಯದ ಆಡಳಿತ ವರ್ಗ ನ್ಯಾಯವಾದ ಕಾರ್ಯಕ್ರಮ ನಡೆಸಲು ಅಡೆ ತಡೆ ಮಾಡಿದಾಗ ಆಡಳಿತದವರ ವಿರುದ್ಧ ಪ್ರತಿಭಟಿಸಿದ ರಾಮದಾಸ್ ಸಹಕಾರಕ್ಕೆ ತನ್ನ ವಿಶ್ವವಿದ್ಯಾನಿಲಯ ಸಹಪಾಟಿಗಳು ಬೆಂಬಲ ಕೊಡದೆ ಹಿಂದಿನಿಂದ ದ್ರೋಹ ಬಗೆದದ್ದು ರಾಮದಾಸರಿಗೆ ತುಂಬಾ ಮಾನಸಿಕ ನೋವನ್ನು ತಂದಿತು. ಈ ಹೋರಾಟಕ್ಕೆ MDNರವರು ಬರುತ್ತೇನೆಂದು ತಿಳಿಸಿ ಸರಿಯಾದ ಕಾಲದಲ್ಲಿ ನಾಪತ್ತೆಯಾದದ್ದೂ ರಾಮದಾಸ್‌ರವರಿಗೆ ಬಹುವಾದ ನೋವು ಉಂಟು ಮಾಡಿತ್ತು. ಆ ಸಮಯ ನಾನು ಮೈಸೂರಿಗೆ ಹೋದಾಗ "ನಿಮ್ಮ ಸಂಘದ ಮುಖಂಡರ ಸಹವಾಸ ಸಾಕು ಮಾರಾಯಿರ" ಎಂದಿದ್ದರು. ಮಾನಸ ಗಂಗೋತ್ರಿ ಗಾಂಧಿಭವನದ ಪ್ರಸಂಗದಲ್ಲಿ ಉಪಕುಲಪತಿಗಳೂ ತಮ್ಮ ಕೈಲಿದ್ದ ಅಧಿಕಾರದ ಬ್ರಹ್ಮಾಸ್ತ್ರವನ್ನು ರಾಮದಾಸ್ ಮೇಲೆ ಪ್ರಯೋಗಿಸಿದ್ದು ನನಗೆ ಗೊತ್ತಿದೆ. ಯಾರು ಯಾರನ್ನು ನಂಬಿದ್ದರೋ ಅವರೆಲ್ಲರೂ ದೂರ ಸರಿದಿದ್ದರು. ಈ ಮದ್ಯೆ ನಿಜವಾದ ಗಾಂಧಿವಾದಿಗಳಿಗೆ ಕಾರ್ಯಕ್ರಮ ಮಾಡಲಿಕ್ಕೆ ಗಾಂಧಿ ವಿರೋಧಿಗಳು ಗಾಂಧಿಭವನಕ್ಕೆ ಹಾಕಿದ ತಂತಿ ಬೇಲಿ ಕೀಳಲಿಕ್ಕೆ ನ್ಯಾಯಯುತವಾದ ಚಳವಳಿಯಿಂದ ಸಾಧ್ಯವಾಗಲಿಲ್ಲವಲ್ಲ ಎಂದು ನೊಂದುಕೊಳ್ಳುವಂತಾಗಿದ್ದರು. ಆದರೆ ಅವರ ಪ್ರೀತಿಯ ಶಿಷ್ಯಂದಿರು ಮತ್ತು ಸರಿಯಾಗಿ ರಾಮದಾಸ್ ಏನೆಂದು ತಿಳಿದವರು ಅವರಿಗೆ ಹತ್ತಿರವಾಗಿಯೇ ಇದ್ದರು.

ಇದರ ಜೊತೆಗೆ ಪ್ರಾರಂಭದಿಂದಲೂ ತುಂಬಾ ಆತ್ಮೀಯರಾಗಿ ಪರಸ್ಪರ ಹಚ್ಚಿಕೊಂಡಿದ್ದ ತೇಜಸ್ವಿಯವರೊಂದಿಗೂ ಸೈದ್ಧಾಂತಿಕ ಭಿನ್ನಾಭಿಪ್ರಾಯವನ್ನು ಎದುರಿಸಬೇಕಾಯ್ತು. ಇದನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿ ಗೊಂದಲದಲ್ಲಿ ಸಿಕ್ಕಿ ಒಳಗೊಳಗೇ ನೊಂದುಕೊಳ್ಳುತ್ತ ಆ ಸಿಟ್ಟು ಎಲ್ಲಾದರೂ ಹೊರ ಹೊಮ್ಮಲೇಬೇಕಾದಾಗ ಮನೆಯೊಳಗೆ ತಾಯಿ ಮಂಜಮ್ಮ, ಹೆಂಡತಿ ನಿರ್ಮಲ, ಜೊತೆಗೆ ಮಗಳು ಸ್ನೇಹಾ ಸಹ ಬೇಸರಪಟ್ಟುಕೊಳ್ಳುವಂತೆ ಮಾತನಾಡಿಬಿಡುತ್ತಿದ್ದರು. ಜೊತೆಗೆ ಸಿಗರೇಟುಗಳು ಹೆಚ್ಚಿಗೆ ಖರ್ಚಾಗಿಬಿಡುತ್ತಿದ್ದವು. ಆ ಸಮಯದಲ್ಲಿ ದೂರದಲ್ಲಿರುವ ನಮ್ಮಂತವರಿಗೆ ಅವರ ದುಂಡನೆಯ ಅಕ್ಷರದಲ್ಲಿ ಉದ್ದವಾದ ಪತ್ರ ಬರೆಯುತ್ತಿದ್ದರು. ಅವರ ಪ್ರೀತಿಯ ಡಾಕ್ಟರ್ ಶಿವರಾಮ್‌ರವರನ್ನು ಕಂಡು ಮಾತಾಡಿಸಿಕೊಂಡು ಹೋಗುವುದು ಅವರ ರೂಢಿಯಾಗಿತ್ತು. ಆ ದಿನಗಳು ರಾಮ್‌ದಾಸ್‌ರವರ ಅತ್ಯಂತ ಕಷ್ಟದ ದಿನಗಳೆಂದು ನಾನು ಭಾವಿಸಿಕೊಂಡಿದ್ದೇನೆ. ನಮಗೆ ಅವರು ಪತ್ರ ಬರೆದರೆಂದರೆ ಏನೋ ಹೇಳಲಾಗದ

ಕಷ್ಟದಲ್ಲಿರಬಹುದೆಂದು ನಾನು, ನನ್ನ ಹೆಂಡತಿ ಶ್ರೀದೇವಿ ಮೈಸೂರು ಕಡೆ ಹೋಗಿ ಅವರೆಲ್ಲರನ್ನೂ ವಿಚಾರಿಸಿಕೊಂಡು "ಹ್ಯಾಂಗಿದೆ ನಿಮ್ಮ ಸಂಘದ ಹಡಗು, ಇನ್ನು ಯಾವ ಬಂಡೆಗೂ ಡ್ಯಾಷ್ ಹೊಡೆದಿಲ್ಲವೋ" ಎಂದು ಅವರದ್ದೇ ಆದ ಸ್ಟೈಲ್‌ನಲ್ಲಿ ಮುಗುಳುನಗುತ್ತ ಅನಂತ್ರ ನಿಧಾನಕ್ಕೆ ಕಣ್ಣಲ್ಲಿ ನೀರು ಬರುವಷ್ಟರ ಮಟ್ಟಿಗೆ ಜೋರಾಗಿ ನಗಲು ಪ್ರಾರಂಭಿಸಿ ಖುಷಿಯಾಗಿ ಬಿಡುತ್ತಿದ್ದರು. ನೋಡಿ ಏನು ನಿಮ್ಮ ಪ್ರೋಗ್ರಾಂ. ಹೇಳಿ ಎಲ್ಲಿಗಾದರೂ ಹೋಗಿ ಬನ್ನಿ, ಬೇಕಿದ್ದರೆ ನಾನೇ ಬಿಟ್ಟುಬರ್‍ತೀನಿ. ಆದ್ರೆ ಸಂಜೆ ಹೊತ್ತಿಗೆ ಬಂದು ಬಿಡಿ ಇಲ್ಲೇ ಉಳಿದು ನಾಳೆ ಹೋಗಬಹುದೆಂದು ಹೇಳಿ ಅವರ ತೀರ್ಮಾನ ಹೇಳಿಬಿಡುತ್ತಿದ್ದರು. ಮತ್ತೆ ಅದಕ್ಕೆ ತಪ್ಪುವ ಹಾಗೆ ಇಲ್ಲವೇ ಇಲ್ಲ. ರಾಮದಾಸ್ ತಾಯಿಯವರು ತೀರಿಕೊಂಡ ನಂತ್ರದಲ್ಲಿ ಸುಮಾರಾಗಿ ಅನಾರೋಗ್ಯದ್ದಿಂದಿದ್ದ ಅವರ ಹೆಂಡತಿ ನಿರ್ಮಲರನ್ನು ಬಿಟ್ಟು ಮನೆಯಿಂದ ದೂರ ಎಲ್ಲಿಗೂ ಹೋಗುತ್ತಿರಲಿಲ್ಲ. ಜೊತೆಜೊತೆಗೆ ಅವರ ಆರೋಗ್ಯವೂ ಹದಗೆಡುತ್ತ ಬಂತು. ಡಾ. ಪ್ರಭುಶಂಕರ್‌ರವರು ನಮಗೆ ಬಂದು ಹೋಗಿ, ರಾಂದಾಸ್‌ರಿಗೆ ಕ್ಯಾನ್ಸರ್ ಆಗಿದೆ, ಕಿಮೋತೆರಪಿ ಕೊಡಿಸಲು ಬೆಂಗಳೂರಿಗೆ ಕರೆದುಕೊಂಡು ಹೋಗುವ ಮೊದಲು ನೀವು ನೋಡಿಕೊಂಡು ಹೋಗಿ ಎಂದು ತಿಳಿಸಿದರು. ಜರೂರಾಗಿ ನಾವೂ ಹೋದೆವು. ರಾಂದಾಸ್‌ರವರಿಗೆ ನಮ್ಮ ಕೆಲವರ ಜೊತೆ ಕಾಸಮೋಪಾಲಿಟನ್ ಹೋಟೆಲಿನಲ್ಲಿ ಎಲ್ಲರಿಗೂ ಬೇಕಾದುದನ್ನು ಕೊಡಿಸಿದ್ದರು. ಅಂದು ಸಂತೋಷವಾಗಿ ಖುಷಿಯಾಗಿದ್ದರು. ಮಾರನೆಯ ದಿನ ನಮ್ಮನ್ನು ರೈಲಿಗೆ ಬಿಡುವಾಗ ಸೇನಾನಿ, ಶ್ರೀರಾಮದಾಸರಿಗೆ ಆದಷ್ಟು ಬೇಗ ಕಿಮೋ ಪ್ರಾರಂಭಿಸಬೇಕಂತೆ. ಕಷ್ಟ ಎಂದು ತೆರಪಿ ಕೊಡುವ ಡಾಕ್ಟರ್ ಹೇಳಿದರೆಂದು ಕೃಪಾಕರ ಸೇನಾನಿ ಇಬ್ಬರೂ ತಿಳಿಸಿದರು.

ಭಾರವಾದ ಹೃದಯದಿಂದಲೇ ಬೆಂಗಳೂರಿಗೆ ರೈಲಿನಲ್ಲಿ ಹೊರಟೆವು. ಬೆಂಗಳೂರಿಂದ ಶಿವಮೊಗ್ಗ ತಲುಪುತಿದ್ದಂತೆ ಗೆಳೆಯ ರಾಮದಾಸ್ ಇನ್ನಿಲ್ಲವೆಂಬ ವರ್ತಮಾನ ತಲುಪಿತು. ಗೆಳೆಯ ಸಂಗಪ್ಪನವರನ್ನೂ ಕರೆದುಕೊಂಡು ನಾನು ಶ್ರೀದೇವಿ ರಾಂದಾಸ್‌ರವರ ಅಂತಿಮ ದರ್ಶನ ಪಡೆಯಲು ಮೈಸೂರಿಗೆ ಹೊರಟೆವು.

# ಪತ್ರಿಕೆಗಳಲ್ಲಿ ರಾಮದಾಸ್

## ಪ್ರಕಟಣೆಯ ಕೃಪೆಗಾಗಿ

ದಿನಾಂಕ. ೨೨.೧೨.೨೦೦೩

ಶ್ರೀ ವೈ.ಕೆ. ಮುದ್ದುಕೃಷ್ಣ
ಸದಸ್ಯ ಕಾರ್ಯದರ್ಶಿ
ರಾಷ್ಟ್ರಕವಿ ಕುವೆಂಪು ಶತಮಾನೋತ್ಸವ ಸಮಿತಿ (ಉಪಸಮಿತಿ)
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಬೆಂಗಳೂರು ೫೬೦ ೦೦೨

ಮಾನ್ಯರೆ

ನಿಮ್ಮ ಪತ್ರ ಸಂ. ಕಸನಿ ೪೪ ಉತ್ಸವ ೨೦೦೩-೨೦೦೪ ದಿನಾಂಕ ೧೮.೧೨.೨೦೦೩ಕ್ಕೆ ಉತ್ತರಿಸುತ್ತಿದ್ದೇನೆ. ಕನ್ನಡ ಭಾಷೆಯ ಮಾನವತಾ ಪರಂಪರೆಯ ಉತ್ತುಂಗ ಕವಿ ಮತ್ತು ವಿಶ್ವಮಾನವ ದಾರ್ಶನಿಕ ರಾಷ್ಟ್ರಕವಿ ಅವರ ಶತಮಾನೋತ್ಸವ ನಡೆಯುತ್ತಿರುವುದು ನನಗೆ ಹೆಮ್ಮೆಯ ಸಂಗತಿ.

ಕುವೆಂಪು ಅವರ ಮಾನವೀಯ ಆಶಯಗಳಿಗೆ ಮತ್ತು ಸ್ವಾಭಿಮಾನಿಯಾದ ಪ್ರಬುದ್ಧ ಕರ್ನಾಟಕ ಕಟ್ಟುವ ಕನಸುಗಳಿಗೆ ಯಾವ ರೀತಿಯಲ್ಲೂ ಸ್ಪಂದಿಸದೆ ಇರುವ ಕರ್ನಾಟಕ ಸರ್ಕಾರ, ಅಪಾರವಾದ ದುಂದುವೆಚ್ಚದಲ್ಲಿ ಆಲಂಕಾರಿಕವಾದ ಕುವೆಂಪು ಶತಮಾನೋತ್ಸವವನ್ನು ವೈಭವದಿಂದ ಆಚರಿಸಲು ಸನ್ನದ್ಧವಾಗಿರುವುದು ನಮ್ಮ ಮುಂದಿನ ವಿಪರ್ಯಾಸವಾಗಿದೆ. ಇಂತಹ ವಿಚಾರಗಳಲ್ಲಿ ಕುವೆಂಪು ಅವರಿಂದ ನೇರವಾಗಿ ಪ್ರಭಾವಿತನಾದ ನಾನು ಭಾಗಿಯಾಗಲು ಸಾಧ್ಯವಿಲ್ಲ.

ಆದ್ದರಿಂದ ಸರ್ಕಾರಿ ಕಾರ್ಯಕ್ರಮದ ನಿಮ್ಮ ಆಹ್ವಾನವನ್ನು ವಿನಯಪೂರ್ವಕವಾಗಿ ನಿರಾಕರಿಸುತ್ತೇನೆ. ದಯಮಾಡಿ ಕ್ಷಮಿಸಿ. ನಿಮ್ಮ ವಿಶ್ವಾಸಕ್ಕಾಗಿ ವಂದನೆಗಳು.

ಕೆ. ರಾಮದಾಸ್

# ಕರ್ನಾಟಕ ಪ್ರಗತಿರಂಗ

## ರಾಜಕೀಯ ಸಾಂಸ್ಕೃತಿಕ ವೇದಿಕೆ

ಪತ್ರಿಕಾ ಹೇಳಿಕೆ

ದಿನಾಂಕ. ೨೨.೧೨.೨೦೦೩

**ಶಿವರಾತ್ರೀಶ್ವರ ಜಯಂತಿ : ಧಾರ್ಮಿಕ ಮಾರುಕಟ್ಟೆಯ ಪ್ರದರ್ಶನ**

ಮೈಸೂರಿನಲ್ಲಿ ನಡೆಯುತ್ತಿರುವ ಶಿವರಾತ್ರೀಶ್ವರ ಜಯಂತಿಯ ವೈಭವದ ಆಚರಣೆಯ ಆಡಂಬರದ ಉತ್ಸವದ ಕಾರ್ಯಕ್ರಮದ ವಿದ್ಯಮಾನಗಳು ರಾಜಕಾರಣಿಗಳು ಮತ್ತು ಮಠಾಧಿಪತಿಗಳು ಸ್ವಹಿತಾಸಕ್ತಿಯಿಂದ ಪರಸ್ಪರ ಓಲೈಸುವ ದುಂದುವೆಚ್ಚದ ಮಾರುಕಟ್ಟೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪ್ರದರ್ಶನವಾಗಿದೆ. ತೀವ್ರವಾದ ಬರಗಾಲದ ಬೇಗೆಯಿಂದ ತತ್ತರಿಸಿರುವ ಗ್ರಾಮೀಣ ಪ್ರದೇಶದ ಜನರು ಬದುಕಿನ ಭರವಸೆಯನ್ನು ಕಳೆದುಕೊಂಡು ಸರಣಿ ಆತ್ಮಹತ್ಯೆಗೆ ಬಲಿಯಾಗುತ್ತಿರುವ ಸಂದರ್ಭದಲ್ಲಿ ದೀನ-ದುರ್ಬಲರ ಸೇವೆಗಾಗಿ ಸ್ಥಾಪಿತವಾದ ಧಾರ್ಮಿಕ ಸಂಸ್ಥೆಗಳು ಪರಸ್ಪರ ಪೈಪೋಟಿಯಿಂದ ಇಂತಹ ವೈಭವದ ಶಕ್ತಿ ಪ್ರದರ್ಶನದ ಉತ್ಸವಗಳನ್ನು ನಡೆಸುತ್ತಿರುವುದು ಅಸಂಗತವಾಗಿದೆ.

ಶರಣ ಸಂಸ್ಕೃತಿಯ ಕಾಯಕ ಮತ್ತು ದಾಸೋಹ ಪರಂಪರೆಯ ಭಾಗವಾಗಿ ಸಮುದಾಯದ ಸಾಮಾಜಿಕ ಕಲ್ಯಾಣ, ಸಾಮಾಜಿಕ ಪರಿವರ್ತನೆ ಮತ್ತು ಆಧ್ಯಾತ್ಮಿಕ ಅರಿವಿನ ಸುದೀರ್ಘ ಸೇವೆಯಲ್ಲಿ ನಿರತವಾದ ಮಠಗಳು, ಅವುಗಳ ಮೂಲ ಆಶಯದಿಂದ ವಿಮುಖವಾಗಿ ಮಾರುಕಟ್ಟೆಯ, ಸರಕು ಸಂಸ್ಕೃತಿಯ ಪ್ರದರ್ಶನವಾಗಿ ಪರಿವರ್ತನೆಗೊಂಡಿರುವುದು, ಅವುಗಳ ನೈತಿಕಶಕ್ತಿಯನ್ನು ಉಡುಗಿಸಿ, ಪಾವಿತ್ರ್ಯಕ್ಕೆ ಕಳಂಕ ತಂದಿದೆ. ಶರಣರು ಕಂಡ ಕನಸುಗಳನ್ನು ಹುಸಿಗೊಳಿಸಿದೆ. ಜಂಗಮರೂಪಿಯಾದ ಮಠಗಳು ಈ ರೀತಿ ಸ್ಥಾವರವಾಗುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ.

ದೇಶದಲ್ಲಿ ಧಾರ್ಮಿಕ ವೈಷಮ್ಯಗಳು ಮತ್ತು ಜಾತಿಘರ್ಷಣೆಗಳು ಹೆಚ್ಚುತ್ತಿರುವ ಸಮಾಜದಲ್ಲಿ, ಧಾರ್ಮಿಕ ಸಂಸ್ಥೆಯ ವೇದಿಕೆಗಳು ರಾಜಕಾರಣಿಗಳ ರಾಜಕೀಯ ಹುನ್ನಾರಕ್ಕೆ ಬಲಿಯಾಗುತ್ತಿರುವುದು ಅವುಗಳ ಸಾಮಾಜಿಕ ಹೊಣೆಗಾರಿಕೆಯನ್ನು ದುರ್ಬಲಗೊಳಿಸಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದುರ್ಬಲ ಸಮುದಾಯದ ಕಲ್ಯಾಣಕ್ಕಾಗಿ ಏರ್ಪಡಿಸಿದ ಸ್ವಾಸ್ಥ್ಯ ಮೇಳಗಳು ಕೂಡ ಮಠಾಧಿಪತಿಗಳ ದರ್ಬಾರಿನಲ್ಲಿ ನಡೆಯುತ್ತಿರುವುದು ಸರಕಾರಗಳ ಶರಣಾಗತಿಯನ್ನು ಪ್ರತಿಬಿಂಬಿಸುತ್ತದೆ. ಇಂತಹ ತತ್ಕಾಲೀನ ಪ್ರದರ್ಶನಗಳನ್ನು ನಡೆಸಲು ಅಪಾರ ಹಣವನ್ನು ಮತ್ತು ಮಾನವ ಸಂಪನ್ಮೂಲವನ್ನು ಅಪವ್ಯಯಗೊಳಿಸುವುದನ್ನು ನಿಲ್ಲಿಸಿ, ದುರ್ಬಲರಿಗೆ ನೆರವಾಗುವ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಮಠಗಳು ಆದ್ಯತೆ ನೀಡಬೇಕೆಂದು ಕರ್ನಾಟಕ ಪ್ರಗತಿರಂಗ ಒತ್ತಾಯಪಡಿಸುತ್ತದೆ.

ಕೆ. ರಾಮದಾಸ್

ಸಂಚಾಲಕ

# ಅಜ್ಞಾತ ಲಂಕೇಶ್‌ರಿಗೊಂದು ಅಲೌಕಿಕ ಪತ್ರ

ಪ್ರೀತಿಯ ಲಂಕೇಶ್ ಅವರಿಗೆ,

ನೀವು ಅಮೂರ್ತರಾಗಿ ಎರಡು ವರ್ಷಗಳಾಗುತ್ತಿವೆ. ನೀವು ಬಿಟ್ಟುಹೋದ ಶೂನ್ಯದಲ್ಲಿ ಅನುರಣಿತವಾಗಿರುವ ನೆನಪುಗಳಲ್ಲಿ ನಿಮ್ಮ ಕಟ್ಟಾ ವಿರೋಧಿಗಳು ಮತ್ತು ನಿಮ್ಮ ಪ್ರೀತಿಯ ಅಭಿಮಾನಿಗಳು ನಿಮ್ಮನ್ನು ಹಂಬಲಿಸುತ್ತಿರುವುದನ್ನು ನಾನು ಗಮನಿಸುತ್ತಿದ್ದೇನೆ.

ನಿಮ್ಮ ಜೊತೆಯಲ್ಲಿ ಬ್ರಾಂಡ್ ಆದ ನಾನು, ನಿಮ್ಮ ಶಿಷ್ಯನಾಗಿ, ನಿಮ್ಮ ಒಡನಾಡಿಯಾಗಿ ಈಗ ಏಕಾಂಗಿಯಾಗಿ ವಿಚಿತ್ರ ತಳಮಳದಲ್ಲಿ ನೀವು ಬಿಟ್ಟುಹೋದ ಶೂನ್ಯದಲ್ಲಿ ನಿಮ್ಮ ದನಿಯ ಅಂತಃಸಾಕ್ಷಿಯನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದೇನೆ. ನಾನು ಮಾತ್ರವಲ್ಲ ನಿಮ್ಮ ಒಡನಾಟ ಕಳೆದುಕೊಂಡ, ನಿಮ್ಮ ದನಿಯನ್ನು ಮತ್ತೆ ಕೇಳಲಾಗದ, ನಿಮ್ಮ ಹೊಸ ಚಿಂತನೆ, ಬರವಣಿಗೆಗಳನ್ನು ಓದಲಾಗದ ಅನೇಕರು ಈ ತಬ್ಬಲಿತನವನ್ನು ಅನುಭವಿಸುತ್ತಿದ್ದಾರೆ. 'ಈಗ ಲಂಕೇಶ್ ಇರಬೇಕಾಗಿತ್ತು' ಎಂದು ಮತ್ತೆ ಮತ್ತೆ ಕನವರಿಸುತ್ತಾರೆ. ಈ ರೀತಿ ನಿಮ್ಮ ಚುಂಬಕ ಶಕ್ತಿಯ ಕೇಂದ್ರವನ್ನು ಕಳೆದುಕೊಂಡು ಚೆಲ್ಲಾಪಿಲ್ಲಿಯಾದವರಂತೆ ವರ್ತಿಸುತ್ತಾರೆ. ಅವರ ಪ್ರಶ್ನೆಗಳಿಗೆ ಉತ್ತರಿಸುವ ಶಕ್ತಿ ಇಲ್ಲದ ನಾನು ಸುಮ್ಮನಾಗುತ್ತೇನೆ. ಹೀಗೆ ವ್ಯಕ್ತಿ ಮತ್ತು ಅವ್ಯಕ್ತವಾದ ಭಾವನೆಗಳ ಮೂಲಕ ಕರ್ನಾಟಕದ ಮನಸ್ಸುಗಳಲ್ಲಿ ಅಜ್ಞಾತರಾದ ನಿಮ್ಮ ಜೊತೆಯ ಜಗಳ ಮತ್ತು ಪ್ರೀತಿ ನಿರಂತರವಾಗಿ ನಡೆಯುತ್ತಿದೆ.

ಕೆಲವು ತಿಂಗಳುಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಎರಡು ಸಾಹಿತ್ಯ ಸಮಾರಂಭಗಳಲ್ಲಿ ನಾನು ಭಾಗವಹಿಸಿದ್ದೆ. ಈ ಎರಡೂ ಕಾರ್ಯಕ್ರಮಗಳಲ್ಲಿ ವಿಚಿತ್ರವಾದ ಮತ್ತು ಉತ್ಕಟವಾದ ಎರಡು ರೀತಿಯ ಪ್ರತಿಕ್ರಿಯೆಗಳನ್ನು ನಾನು ಎದುರಿಸಬೇಕಾಯಿತು.

ಹಿರಿಯ ಕವಿಗಳೂ ನಮಗೆ ಆಪ್ತರೂ ಆದ ಡಾ.ಜಿ.ಎಸ್. ಶಿವರುದ್ರಪ್ಪ ಅವರನ್ನು ಗೌರವಿಸಲು ಅವರ ಶಿಷ್ಯರು - ಅಭಿಮಾನಿಗಳು 'ಹಣತೆ' ಎಂಬ ಅಭಿನಂದನಾ ಗ್ರಂಥವನ್ನು ಅವರಿಗೆ ಸಮರ್ಪಿಸಲು ಲೋಹಿಯಾ ಪ್ರಕಾಶನದ ಚೆನ್ನಬಸವಣ್ಣ ಸಮಾರಂಭವನ್ನು

ಆಯೋಜಿಸಿದ್ದರು. ಆ ಸಮಾರಂಭದಲ್ಲಿ ಡಾ.ಜಿ.ಎಸ್.ಎಸ್. ಅವರನ್ನು ಕುರಿತು ಮಾತನಾಡುತ್ತಾ, ಸಾಂದರ್ಭಿಕವಾಗಿ ನಿಮ್ಮ ನಿರ್ಗಮನದ ನಂತರ ಕೆಲವು ಸಾಹಿತಿಗಳ ಹೇಡಿತನದ ವರ್ತನೆಯನ್ನು ಖಂಡಿಸಿ, ನೀವಿದ್ದಾಗ ಬಿಲಸೇರಿಕೊಂಡ ಇವರೆಲ್ಲ, ಈಗ ಸಾಂಸ್ಕೃತಿಕ ವೀರರಂತೆ ಬೊಗಳೆ ಹೊಡೆಯುತ್ತಿರುವ ರೀತಿಯನ್ನು ವಿವರಿಸಿದೆ. ಇದರಿಂದ ನಿಮ್ಮನ್ನು ಪ್ರೀತಿಸುತ್ತಿದ್ದ ಅನೇಕರಿಗೆ ಖುಷಿಯಾಯಿತು. ನಿಮ್ಮ ಹೆಸರೆತ್ತಿದರೆ ಈಗಲೂ ಹೇಡಿಗಳಂತೆ ವರ್ತಿಸುವ ಕೆಲವರು ನನ್ನ ಭಾಷಣದಲ್ಲಿ ನಿಮ್ಮ ಪ್ರಸ್ತಾಪ ಮಾಡಿದ್ದಕ್ಕೆ ತೀವ್ರವಾಗಿ ಆಕ್ಷೇಪಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿದ್ದ ಚಂಪಾ ಎಂಬ ಮಿರ್ಚಿ ಮೆಣಸಿನಕಾಯಿ ಸಾಹಿತಿಗೂ ನನಗೂ ಈ ವಿಚಾರದಲ್ಲಿ ವಾಗ್ವಾದ ನಡೆಯಿತು. ಅಪ್ಪಟ ಜಂಗಮನಂತೆ ಉಳ್ಳಾಗಡ್ಡಿ ರೂಪದಲ್ಲಿದ್ದ ಚಂಪಾ ಎಲ್ಲರಿಗೂ ಹಲ್ಲುಗಿಂಜುತ್ತಾ ಕೈ ಮೈ ಹಿಸುಕುತ್ತಾ ಅಲ್ಲಿ ಮತಯಾಚಿಸಲು ಬಂದಿದ್ದರು. ಕೊನೆಗೆ ಈ ಚಂಪಾ ಎಂಬ ಉಳ್ಳಾಗಡ್ಡಿ ಸಾಹಿತ್ಯ ಪರಿಷತ್ತು ಚುನಾವಣೆಯಲ್ಲಿ ಪಲ್ಟೀ ಹೊಡೆದು ಕೋಸಂಬರಿಯೊಬ್ಬ ಗೆದ್ದು ಸಾಹಿತ್ಯ ಪರಿಷತ್ತಿನ ಬಾಳೆ ಎಲೆಯನ್ನು ಅಲಂಕರಿಸಿದ. ಈಗ ಚಂಪಾ ಮತ್ತೆ ಮಿರ್ಚಿ ಮೆಣಸಿನಕಾಯಿಯಾಗಿ ದಾರಿ ಮಗ್ಗುಲ ಚಹಾದಂಗಡಿ ಸೇರಿಯಾಗಿದೆ. ಕೋಸಂಬರಿ ಉತ್ಸವ ಸಾಹಿತ್ಯ ಪರಿಷತ್ತಿನಲ್ಲಿ ವಿಜೃಂಭಣೆಯಿಂದ ನಡೆಯುವಂತಾಗಿದೆ.

ನಿಡುಮಾಮಿಡಿ ಸ್ವಾಮಿಯವರ ನಾಯಕತ್ವದಲ್ಲಿ ಬೆಂಗಳೂರಿನ ಪುರಭವನದಲ್ಲಿ ನಡೆದ ಬಹುಜನೋದಯ ಸಾಹಿತ್ಯ ಸಮ್ಮೇಳನದ ಸಮಾರೋಪ ಭಾಷಣ ಮಾಡಲು ಹೋಗಿದ್ದೆ. ಅಲ್ಲಿಸಮಕಾಲೀನ ಸಾಹಿತ್ಯದ ಸ್ಥಿತಿಗತಿಗಳ ಬಗ್ಗೆ ಮಾತನಾಡಿದೆ. ಕಾರ್ಯಕ್ರಮ ಮುಗಿದ ಮೇಲೆ ಗಂಡ-ಹೆಂಡತಿ ಇಬ್ಬರು ನನ್ನೊಂದಿಗೆ ಮಾತನಾಡಲು ಕಾಯುತ್ತಿದ್ದರು. ನಾನು ನಿಮ್ಮ ಹೆಸರನ್ನು ಭಾಷಣದಲ್ಲಿ ಪ್ರಸ್ತಾಪಿಸದಿರುವುದಕ್ಕೆ ನನ್ನ ಮೇಲೆ ಅವರಿಬ್ಬರಿಗೂ ಅಸಾಧ್ಯ ಕೋಪ ಬಂದಿತ್ತು. 'ಬೆಳಗ್ಗೆಯಿಂದ ನಿಮ್ಮ ಭಾಷಣ ಕೇಳುವುದಕ್ಕಾಗಿಯೇ ನಾವು ಕಾಯುತ್ತಿದ್ದೆವು. ಲಂಕೇಶರ ಪ್ರೀತಿಯ ಒಡನಾಡಿಯಾದ ನೀವು, ಅವರ ಬಗ್ಗೆ ಮಾತನಾಡದಿರುವುದು ದೊಡ್ಡ ಅಪಚಾರ. ನಿಮ್ಮ ಭಾಷಣದಿಂದ ನಮಗೆ ನಿರಾಶೆಯಾಗಿದೆ, ಎಂದು ತೀವ್ರವಾಗಿ ಆಕ್ಷೇಪಿಸಿದರು. ನಾನು ಕೊಟ್ಟ ಯಾವ ಸಮಜಾಯಿಸಿಯನ್ನು ಅವರು ಒಪ್ಪಲು ತಯಾರಿರಲಿಲ್ಲ. ನಾನು ಅಪರಾಧಿಯಂತೆ ವಿಚಲಿತನಾಗಿ ಬಿಟ್ಟೆ.

ಈಚೆಗೆ ಶಿವಮೊಗ್ಗದಲ್ಲಿ ತುಂಗ-ಭದ್ರ ಉಳಿಸಿ, ಕುದುರೆ ಮುಖ ಗಣಿಗಾರಿಕೆ ವಿರೋಧಿ ಒಕ್ಕೂಟದ ಚಳವಳಿಯ ಕಾರ್ಯಕರ್ತರ ಶಿಬಿರಕ್ಕೆ ಹೋಗಿದ್ದೆ. ಕಡಿದಾಳು ಶಾಮಣ್ಣ ಮತ್ತು ನಿಮ್ಮ ಪ್ರೀತಿಯ ಅನೇಕ ಗೆಳೆಯರು ಅಲ್ಲಿಗೆ ಬಂದಿದ್ದರು.

ಕೊಪ್ಪಳದಿಂದ ಬಂದಿದ್ದ ಪ್ರೊ.ಎಚ್.ಎಸ್. ಪಾಟೀಲರು ಮಾತನಾಡುತ್ತಾ ನಾವು ಕರ್ನಾಟಕ ಪ್ರಗತಿರಂಗ ಕಟ್ಟಿಕೊಂಡು ಕೊಪ್ಪಳ ಮತ್ತು ಸುತ್ತಮುತ್ತಲ ಊರಿನಲ್ಲಿ ನಡೆಸಿದ ಸಭೆಗಳನ್ನು, ತಿರುಗಾಟವನ್ನು ಪ್ರಸ್ತಾಪಿಸಿದರು. ಈಗ ಕರ್ನಾಟಕಕ್ಕೆ ಲಂಕೇಶರು ನಿರ್ಗಮಿಸಿದ ಶೂನ್ಯ ಅರ್ಥವಾಗುತ್ತಿದೆಯೆಂದು ನಿಮ್ಮ ನೆನಪು ಮಾಡಿ ಮಾತನಾಡಿದರು.

ನಾನು ಈಗ ಕರ್ನಾಟಕ ಪ್ರಗತಿರಂಗದ ಸಂಘಟನೆಗಾಗಿ ನಿಮ್ಮ ಜೊತೆಯಲ್ಲಿ ತಿರುಗುತ್ತಿದ್ದ ದಿನಗಳ ಸಂಭ್ರಮವನ್ನು ನೆನಪು ಮಾಡಿಕೊಳ್ಳುತ್ತಿದ್ದೆ. ಆ ರೀತಿಯ ತಿರುಗಾಟದಲ್ಲಿ ನಾವಿಬ್ಬರು ಊರೂರುಗಳನ್ನು ಸುತ್ತುತ್ತಿದ್ದಾಗ ನೀವು ಮಾಡುತ್ತಿದ್ದ 'ಜೋಕ್'ಗಳೆಲ್ಲ ನೆನಪಾಗತೊಡಗಿದವು.

ಅದರಲ್ಲಿ ಕೆಂಗಲ್ ಹನುಮಂತಯ್ಯನವರ ಪ್ರಕರಣ ಮುಖ್ಯವಾದದ್ದು. ಅದು ನಮ್ಮ ಪ್ರಗತಿರಂಗದ ವಿಡಂಬನೆಯೂ ಆಗಿತ್ತು. ಕೆಂಗಲ್ ಹನುಮಂತಯ್ಯ ಮುಖ್ಯಮಂತ್ರಿಯಾಗಿದ್ದಾಗ 'ಸಂಸ್ಕೃತಿ ಪ್ರಸಾರ' ಎಂಬ ಸರ್ಕಾರಿ ಕಾರ್ಯಕ್ರಮ ! 'ಏನ್ರೀ, ನಮ್ಮ ಸರ್ಕಾರದ ಬಗ್ಗೆ ಜನಾಭಿಪ್ರಾಯ ಹೇಗಿದೆ ?! 'ಸ್ವಾಮಿ, ಹನುಮಂತಯ್ಯನವರ ದರ್ಬಾರು ಅಂದ್ರೆ, ದರ್ಬಾರು, ರಾಮರಾಜ್ಯ'ವೆನ್ನುತ್ತಾರೆ ಸ್ವಾಮಿ. ಹನುಮಂತಯ್ಯ 'ಅಲ್ರೀ ಅದು ನಿಮ್ಮ ಅಭಿಪ್ರಾಯ'! ನಿಜವಾದ ಜನಾಭಿಪ್ರಾಯ ಹೇಳ್ರೀ, ಸಂಕೋಚಪಡಬೇಡಿ! ಕಾರ್ಯದರ್ಶಿ! ಅದೇ ಸ್ವಾಮಿ, ಅದೇನೂಂದ್ರೆ... ಹನುಮಂತಯ್ಯ ಹೇಳ್ರೀ ಪರ್ವಾ ಇಲ್ಲ. ಹೆದರಬೇಡಿ, 'ಎಲ್ಲಾ ಸರಿ ಹನುಮಂತಯ್ಯನಿಗೆ ಹೆಂಗಸರ ಚಾಳಿ' ಕೆಲವರು ಅಂತಾರೆ ಬುದ್ಧಿ. ಹನುಮಂತಯ್ಯ ಗಾಬರಿಯಾಗಿ 'ಹೌದೇನ್ರೀ ಹಂಗಂತ್ತಾರಾ, ಹಾಗಾದ್ರೆ ಅದನ್ನ ನಿಮ್ಮಲ್ಲೇ ಇಟ್ಕೊಳ್ಳಿ' ಎಂದರಂತೆ.

ಇದೇ ಕೆಂಗಲ್ ಹನುಮಂತಯ್ಯ ಕಾಂಗ್ರೆಸ್‌ಪಕ್ಷ ಬಿಟ್ಟು 'ಸುರಾಜ್ಯ ಪಕ್ಷ' ಕಟ್ಟಿ ಚುನಾವಣಾ ಪ್ರಚಾರದಲ್ಲಿ ತೊಡಗಿದಾಗ ಅದೇ ಆಪ್ತಕಾರ್ಯದರ್ಶಿಯವರನ್ನು ಕೇಳಿದ್ದು: 'ಏನ್ರೀ ನಮ್ಮ ಪಕ್ಷದ ಬಗ್ಗೆ ಜನ ಏನ್ ಹೇಳ್ತಾರೆ. 'ಸ್ವಾಮಿ, ಹನುಮಂತಯ್ಯನವರ 'ಸುರಾಜ್ಯ ಪಕ್ಷ'ದ ಮುಂದೆ ಕಾಂಗ್ರೆಸ್ ಗೋತಾ ಹೊಡೆಯುತ್ತೆ ಅಂತಾರೆ' ಬುದ್ಧಿ. ಅದು ಇರ್ಲಿರೀ, ನಿಮ್ಮ ಅಭಿಪ್ರಾಯಬೇಡ. ಜನಸಾಮಾನ್ಯರು ಏನಾಂತರೆ ಹೇಳ್ರೀ ಅಂದರಂತೆ ಹನುಮಂತಯ್ಯ. ಆಪ್ತ ಕಾರ್ಯದರ್ಶಿ ಅತ್ಯಂತ ಸಂಕೋಚದಿಂದ 'ಹನುಮಂತಯ್ಯನಿಗೆ ಇದೇನು ಕೆಟ್ಟ ಬುದ್ಧಿ ಬಂತು. ಕಾಂಗ್ರೆಸ್ ಬಿಟ್ಟು ತೆಪ್ಪಗಿರದೇ ಸುರಾಜ್ಯ ಪಕ್ಷ ಯಾಕೆ ಬೇಕಾಗಿತ್ತು. ಠೇವಣಿ ಬರಲ್ಲ ಅಂತಾರೆ ಬುದ್ಧಿ'. ಅದಕ್ಕೆ ಹನುಮಂತಯ್ಯ 'ಹೌದಾ, ಹಂಗಾಂತ್ತಾರ, ಯಾರಿಗೂ ಹೇಳಬೇಡಿ. ನಿಮ್ಮಲ್ಲೇ ಇಟ್ಕೊಳ್ಳಿ' ಎನ್ನುತ್ತಿದ್ದರಂತೆ - ಇದು ನಾವಿಬ್ಬರೂ ಖುಷಿಪಡುತ್ತಿದ್ದ ಓಡಾಟದ ಸವಿನೆನಪು. ಪ್ರಗತಿರಂಗದ ಕಥೆಯೆಲ್ಲಾ ನೆನಪಾಗುತ್ತದೆ. ಎಷ್ಟೊಂದು ಪ್ರಕರಣಗಳು. ಕಾಲ ಮಿಂಚಿನಂತೆ ಮಾಯವಾಯಿತು.

ಈಗ ಕರ್ನಾಟಕ ಗತಿ ಏನಾಗಿದೆ ? ಬೆಂಗಳೂರು ಹೈಟೆಕ್ ಭ್ರಮೆಯಲ್ಲಿ ಸಂಭ್ರಮಿಸುತ್ತಿದೆ. ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸರ್ಕಾರ ದಿನಕ್ಕೊಬ್ಬರು ವಿದೇಶಿ ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸಲು ಮೇಕಪ್ ಮಾಡಿಕೊಂಡು ಟ್ರಾವೆಲ್ ಏಜೆಂಟರಂತೆ ವರ್ತಿಸುತ್ತಿದೆ.

ಕರ್ನಾಟಕದ ರೈತರು ಮಾಡಿಕೊಳ್ಳುತ್ತಿರುವ ಸರಣಿ ಆತ್ಮಹತ್ಯೆಯಿಂದ ಸ್ಮಶಾನಗಳು ವಿಸ್ತರಿಸುತ್ತಿವೆ. ವಿದ್ಯುತ್ತಿನ ಕೊರತೆ, ನೀರಿನ ಕೊರತೆ, ನ್ಯಾಯಬೆಲೆಯ ಕೊರತೆ, ಬೀಜ - ಗೊಬ್ಬರ ಎಲ್ಲದರಲ್ಲೂ ವಂಚನೆ ತಾಂಡವವಾಡುತ್ತಿದೆ. ಕರ್ನಾಟಕದ ಗುಡ್ಡ-ಬೆಟ್ಟ-ನದಿ ಮುಂತಾದ ಸಂಪನ್ಮೂಲಗಳು ಲೂಟಿಯಾಗುತ್ತಿವೆ. ಸಣ್ಣ ಕೈಗಾರಿಕೆಗಳ ಸ್ಮಶಾನ ನಿರ್ಮಾಣವಾಗುತ್ತಿದೆ. ದಲಿತರು, ದುರ್ಬಲರು, ನಿರುದ್ಯೋಗಿಗಳು ಆತಂಕಕ್ಕೆ ಒಳಗಾಗಿದ್ದಾರೆ.

ಭಜರಂಗದಳ, ಆರ್.ಎಸ್.ಎಸ್ ಸಂಘಪರಿವಾರದ ಕುತಂತ್ರಗಳಿಂದ ಕರ್ನಾಟಕ ಕೋಮುವಾದೀಕರಣಕ್ಕೆ ಒಳಗಾಗಿದೆ.

ರಾಜಕೀಯ ಗಬ್ಬೆದ್ದು ಹೋಗಿದೆ. ಆಳುವಪಕ್ಷ - ವಿರೋಧಪಕ್ಷ ಎಲ್ಲ ಸೇರಿ ಪರಸ್ಪರ ಸಹಕಾರದಿಂದ ಲೂಟಿಯಲ್ಲಿ ತೊಡಗಿದ್ದಾರೆ. ವಿಧಾನಸೌಧಕ್ಕೆ ಕಬ್ಬಿಣದ ಬೇಲಿ Readyಯಾಗುತ್ತಿದೆ. ಕೋಕಾ-ಪೋಟೊದಂತಹ ಕರಾಳ ಕಾನೂನುಗಳು ಪ್ರಜಾಪ್ರಭುತ್ವವನ್ನು ಶರಪಂಜರವಾಗಿ ರೂಪಾಂತರಿಸಿದೆ.

ಇತ್ತ Divorce ಮಾಡಿಕೊಂಡಿದ್ದ ಕರ್ನಾಟಕದ ಪ್ರಾಚೀನ ರಾಜಕಾರಣಿಗಳಾದ ರಾಮಕೃಷ್ಣ ಹೆಗ್ಡೆ ಮತ್ತು ಎಚ್.ಡಿ. ದೇವೇಗೌಡರು ತಮ್ಮ ರಾಜಕೀಯ ತೆವಲುಗಳಿಗಾಗಿ ರಾಜಿಮಾಡಿಕೊಂಡು ಹೊಸ ರಾಜಕಾರಣಕ್ಕೆ ಅಲಂಕಾರಮಾಡಿಕೊಡು ಸಂಭ್ರಮಿಸುತ್ತಿರುವುದು 'ರೋಮಾನ್ಸ್' ರಾಜಕೀಯ ಕಾಮ ಕುತೂಹಲಕ್ಕೆ ಕಾರಣವಾಗಿ ರಂಜನೀಯವಾಗಿದೆ. ಸಾಹಿತ್ಯ ಸಮ್ಮೇಳನದ ಜಾತ್ರೆಯಲ್ಲಿ ಮಜ್ಜಿಗೆ ಹುಳಿ, ಕೋಸಂಬರಿ, ಪಾಯಸದ ನಿರೀಕ್ಷೆಯಲ್ಲಿ ಕೆಲವು ಸಾಹಿತಿಗಳು ಅದರ ಒಗ್ಗರಣೆಯ ಪರಿಮಳದಿಂದಲೇ ಪುಲಕಿತರಾಗಿದ್ದಾರೆ. ಇದನ್ನೆಲ್ಲ ನೋಡಲು ನೀವು ಮಾತ್ರ ಇಲ್ಲದಿರುವುದು ನಮ್ಮ ವಿಷಾದಕ್ಕೆ ಅಂತ್ಯವೇ ಇಲ್ಲದಂತಾಗಿದೆ.

ನೀವು ವಿರಮಿಸಿದ ಮೇಲೆ ಒಮ್ಮೆ ನಿಮ್ಮ ಪ್ರೀತಿಯ ತೋಟದಲ್ಲಿ ಲಂಕೇಶ್ ಪತ್ರಿಕೆಯ ಬಳಗದವರು ನಮ್ಮನೆಲ್ಲ ಕರೆದು ನಿಮ್ಮನ್ನು ಸ್ಮರಿಸಲು ಗೌರಿ, ಅಜಿತ್ ಉಸ್ತುವಾರಿಯಲ್ಲಿ ಸ್ಮರಣ ಕಾರ್ಯಕ್ರಮ ನಡೆಸಿದರು. ನೀವು ವಿರಮಿಸಿದ ನಿಮ್ಮ ಪ್ರೀತಿಯ ಮಾವಿನ ಮರದ ನೆರಳಿನಲ್ಲಿರುವ ಸಮಾಧಿಯ ಮುಂದೆ ಆ ಮುಸ್ಸಂಜೆಯಲ್ಲಿ ನಾವೆಲ್ಲ ಮೌನವಾಗಿ ನಿಂತಿದ್ದೆವು. ನನಗೆ ನೀಲಾಂಜನದ ದೀಪ ಬೆಳಗಲು ಹೇಳಿದರು. ನಾನು ದೀಪ ಹತ್ತಿಸಿ ಅದರ ಮಂದ ಬೆಳಕಿನಲ್ಲಿ ಅಲ್ಲಿ ನಿಂತಿದ್ದವರನ್ನೆಲ್ಲ ಗಮನಿಸಿದೆ. ನಿಮ್ಮ ಜೊತೆಯಲ್ಲಿ ಒಡನಾಡಿದ ಅನೇಕ ಹಳೇಮುಖಗಳು ಅಗೋಚರವಾಗಿದ್ದವು. ಹೊಸ ಮುಖಗಳು ಮಿನುಗುತ್ತಿದ್ದವು. ನಾನು ಮೌನವಾಗಿ ನಿಂತಿದ್ದೆ.

ಅಜ್ಞಾತರಾದ ನೀವು ಸುತ್ತಲೂ ಬೀಸುತ್ತಿದ್ದ ತಣ್ಣನೆಯ ಗಾಳಿಯಲ್ಲಿ ಅಂತರ್ಗತರಾದಂತೆ ಭಾಸವಾಯಿತು.

ನಿಮ್ಮ ಪ್ರೀತಿಯ
ಕೆ. ರಾಮದಾಸ್

## ಇಂಗ್ಲಿಷ್ ಕಲಿಕೆಯ ದಾಹ : ತಾಯಿಬೇರಿಗೆ ಕೊಡಲಿಪೆಟ್ಟು

ದಿನಾಂಕ. ೩೦.೫.೨೦೦೫

ಪ್ರಾಥಮಿಕ ಶಾಲೆಯ ಒಂದನೇ ತರಗತಿಯಿಂದ ಇಂಗ್ಲಿಷ್ ಭಾಷೆಯ ಕಲಿಕೆಯನ್ನು ಆರಂಭಿಸಬೇಕೆಂದು ಕೆಲವರು ಸರ್ಕಾರದ ಮೇಲೆ ಒತ್ತಡ ಹೇರುತ್ತಿರುವುದು ಅಘಾತಕಾರಿಯಾದ ಹುನ್ನಾರವಾಗಿದೆ. ಇದರಿಂದ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮಾನ ಅವಕಾಶ ಉಂಟಾಗುತ್ತದೆಂದು ತರ್ಕಿಸುತ್ತಿರುವುದು ಅವೈಜ್ಞಾನಿಕವಾದ ವಾದವಾಗಿದೆ.

ಮಾರುಕಟ್ಟೆಯ ವ್ಯಾಪಾರಿ ಭಾಷೆಯಾಗಿ ಪರಿವರ್ತನೆಯಾಗಿರುವ ಇಂಗ್ಲಿಷನ್ನು ಕಿಶೋರಾವಸ್ಥೆಯ ಮುಗ್ಧ ಮಕ್ಕಳ ಮೇಲೆ ಬಲಾತ್ಕಾರವಾಗಿ, ಕಡ್ಡಾಯವಾಗಿ ಹೇರುವುದು ಮಕ್ಕಳ ಸ್ವಾಭಾವಿಕ ಬೆಳವಣಿಗೆಯನ್ನು ಪಲ್ಲಟಗೊಳಿಸುತ್ತದೆ.

ಮಕ್ಕಳ ಬೆಳವಣಿಗೆಯ ಸಹಜ ಪರಿಸರದ ತಾಯಿಬೇರಿಗೆ ಕೊಡಲಿ ಇಟ್ಟಂತಾಗುತ್ತದೆ ಮತ್ತು ಅವರನ್ನು ಮಾರಾಟದ ಸರಕುಗಳನ್ನಾಗಿ ರೂಪಾಂತರಿಸುವ ಅತ್ಯಂತ ಕ್ರೂರವಾದ ಕ್ರಮವಾಗುತ್ತದೆ.

ಇಂಗ್ಲಿಷ್ ಬೋಧನೆಯಿಂದ ಸಮಾನ ಅವಕಾಶ ಉಂಟಾಗುತ್ತದೆನ್ನುವ ಭ್ರಮೆಯು ತದ್ವಿರುದ್ಧವಾದ ಗತಿಯಲ್ಲಿ ಚಲಿಸಿ, ಜಾತಿಪದ್ಧತಿಯಂತೆ ಶಾಶ್ವತವಾದ ಅಮಾನವೀಯವಾದ ಅಸಮಾನತೆಯ ಇನ್ನೊಂದು ಅಂತರಕ್ಕೆ ಕಾರಣವಾಗುತ್ತದೆ.

ಈ ಅಸ್ವಾಭಾವಿಕವಾದ ಕಲಿಕೆಯ ವಿಧಾನದಿಂದ ಸಹಜ ಪರಿಸರದ ಸಂಬಂಧವನ್ನು ಪ್ರತ್ಯೇಕಿಸುವ ಅಪಾಯವನ್ನು ಮೂರ್ತಗೊಳಿಸುತ್ತದೆ.

ಇಂಗ್ಲಿಷ್ ಬೋಧನೆಯನ್ನೇ ಬಂಡವಾಳ ಮಾಡಿಕೊಂಡಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು ನಾಯಿಕೊಡೆಗಳಂತೆ ಬೆಳೆಯುತ್ತಿರುವುದು ಮತ್ತು ಸರ್ಕಾರ ಇದಕ್ಕೆ ಕುಮ್ಮಕ್ಕು ನೀಡುತ್ತಿರುವುದರಿಂದ ಸರ್ಕಾರಿ ಶಾಲೆಗಳು ಕಳಪೆಯಾಗಿ ನಿರ್ಗತಿಕರಿಗೆ ಮಾತ್ರ ಮೀಸಲಾಗಿರುವುದು. ಶಿಕ್ಷಣ ಕ್ಷೇತ್ರದ ಪತನಕ್ಕೆ ಕಾರಣವಾಗಿದೆ. ಶಿಕ್ಷಣದ ವ್ಯಾಪಾರೀಕರಣದಿಂದ ಶಿಕ್ಷಣದ ಆಶಯವು

ವ್ಯಾಪಾರೀಕರಣವಾಗಿ ಸ್ಥಿತ್ಯಂತರವಾಗಿದೆ. ಇಂತಹ ವ್ಯಾಪಾರೀಕರಣದ ಹುನ್ನಾರದಿಂದ ಶೋಷಿತವರ್ಗದ ಮಕ್ಕಳು ಸಮಾನ ಶಿಕ್ಷಣ ಅವಕಾಶದಿಂದ ವಂಚಿತರಾಗುವ ಪರಿಸ್ಥಿತಿಯನ್ನು ನಿರ್ಮಿಸಿದೆ.

ಪ್ರಾಥಮಿಕ ಶಿಕ್ಷಣದ ಬಗ್ಗೆ ಡಾ.ಎಚ್.ನರಸಿಂಹಯ್ಯ ಮತ್ತು ಬರಗೂರು ರಾಮಚಂದ್ರಪ್ಪ ನೀಡಿರುವ ವರದಿಗಳನ್ನು ಸರ್ಕಾರ ನಿರ್ಲಕ್ಷಿಸಿರುವುದು ಮತ್ತು ಈ ಬಗ್ಗೆ ಖಚಿತವಾದ ಶಿಕ್ಷಣ ನೀತಿಯನ್ನು ರೂಪಿಸದಿರುವುದು ಇಂತಹ ವಿವಾದಕ್ಕೆ ಕಾರಣವಾಗಿದೆ.

ಪ್ರಾಥಮಿಕ ಹಂತದ ಸಮಾನ ಶಿಕ್ಷಣ ನೀಡುವುದು ಸರ್ಕಾರದ ಸಂವಿಧಾನಾತ್ಮಕ ಕರ್ತವ್ಯವಾಗಿರುವುದರಿಂದ ಏಕರೂಪದ ಶಿಕ್ಷಣ ನೀತಿಯನ್ನು ರೂಪಿಸಿ ಸುಗ್ರೀವಾಜ್ಞೆಯ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಕೂಡಲೇ ರಾಷ್ಟ್ರೀಕರಿಸಿ ಪ್ರಾಥಮಿಕ ಶಿಕ್ಷಣದಲ್ಲಿ ಸಮಾನತೆಯನ್ನು ಸ್ಥಾಪಿಸಬೇಕೆಂದು ಕರ್ನಾಟಕ ಪ್ರಗತಿರಂಗ ಒತ್ತಾಯಪಡಿಸುತ್ತದೆ.

# ಮುಲ್ಲಾಗಳ ಬಹಿಷ್ಕಾರವನ್ನು ಮೀರಿದ ಮಾನವೀಯತೆ

**ಕೆ. ರಾಮದಾಸ್**
**ಚಾರ್ವಾಕ**
**೯೮೬, ಪಂಚಮಂತ್ರರಸ್ತೆ**
**ಕುವೆಂಪುನಗರ, ಮೈಸೂರು ೫೭೦ ೦೨೩**

**ದಿನಾಂಕ. ೮.೭.೨೦೦೦**

ಪ್ರೀತಿಯ ಗೌರಿ ಲಂಕೇಶ್,

ಬಾನು ಮುಷ್ತಾಕ್ ಅವರಿಗೆ ಹಾಸನದಲ್ಲಿ ಮುಲ್ಲಾಗಳ ಸಾಮಾಜಿಕ ಬಹಿಷ್ಕಾರದ ಬಗ್ಗೆ ಪತ್ರಿಕೆ ಮುಖಪುಟದ ಮುಖ್ಯವರದಿಯಾಗಿ ಪ್ರಕಟಿಸಿರುವುದು ಸರಿಯಾಗಿದೆ. ಇಂತಹ ಮಾನವೀಯ ಕಾಳಜಿಯ ನಿರ್ಭೀತ ನಿಲುವುಗಳ ಮೂಲಕ ಎಲ್ಲ ರೀತಿಯ ಧಾರ್ಮಿಕ ಮೂಲಭೂತವಾದಿ ಭಯೋತ್ಪಾದನೆಯನ್ನು ವಿರೋಧಿಸಿರುವ ಲಂಕೇಶ್ ಪತ್ರಿಕೆಗೆ 20 ವರ್ಷಗಳ ಸಾಮಾಜಿಕ ಶಕ್ತಿ ಪ್ರಾಪ್ತವಾಗಿದೆ. ಈ ಶಕ್ತಿ ಕುಂಠಿತವಾಗದಂತೆ ಮುನ್ನಡೆಸುತ್ತಿರುವ ನಿಮ್ಮೆಲ್ಲರ ಆತ್ಮವಿಶ್ವಾಸವನ್ನು ಅಭಿನಂದಿಸುತ್ತೇನೆ.

ಲಂಕೇಶ್ ಪತ್ರಿಕೆ ರೂಪಿಸಿದ ವಿಚಾರವಂತ ಲೇಖಕಿಯರಲ್ಲಿ ಬಾನು ಮುಷ್ತಾಕ್ ಮತ್ತು ಸಾರಾ ಅಬೂಬಕರ್ ಮನ್ನಣೆ ಪಡೆದ ಲೇಖಕಿಯರಾಗಿದ್ದಾರೆ. ಈ ಹಿಂದೆ ಸಾರಾ ಅಬೂಬಕರ್ ಕೂಡ ಮೂಲಭೂತವಾದಿಗಳ ಭಯೋತ್ಪಾದನೆಯನ್ನು ಎದುರಿಸಬೇಕಾಯಿತು.

ಈಗ ಬಾನುಮುಷ್ತಾಕ್ ಮತ್ತು ಅವರ ಕುಟುಂಬದವರಿಗೆ ಮುಲ್ಲಾಗಳು ಬಹಿಷ್ಕಾರ ಹಾಕಿರುವುದು ಆತಂಕದ ಸಂಗತಿಯಾಗಿದೆ. ಬಾನು ಮುಷ್ತಾಕ್ ಅವರ ಕುಟುಂಬದ ಆತಂಕದ ಕ್ಷಣಗಳಲ್ಲಿ ಲಂಕೇಶರು ಈಗ ನಮ್ಮ ಜೊತೆಯಲ್ಲಿದ್ದರೆ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡುವ ಧಾರ್ಮಿಕ ಪಾಳೇಗಾರಿಕೆಯ ಈ ಭಯೋತ್ಪಾದನೆಯನ್ನು ಸಹಿಸುತ್ತಿರಲಿಲ್ಲ. "ಬನ್ನಿ ಹಾಸನಕ್ಕೆ ಹೋಗಿ ಒಂದು ದಿನ ಮೌನವಾಗಿ ಸತ್ಯಾಗ್ರಹ ಮಾಡಿ ಪ್ರತಿಭಟಿಸೋಣ"ವೆನ್ನುತ್ತಿದ್ದರು.

ಪತ್ರಿಕೆ ಬಾನು ಮುಷ್ತಾಕ್ ಅವರ ಕುಟುಂಬದ ಬೆಂಬಲಕ್ಕೆ ನಿಂತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಜಗತ್ತಿನ ಎಲ್ಲ ಧರ್ಮಗಳು ಪುರೋಹಿತಶಾಹಿಯನ್ನು ಸೃಷ್ಟಿಸಿಕೊಂಡು ಮೂಲಭೂತವಾದಿ ಜೀವವಿರೋಧಿ ಭಯೋತ್ಪಾದನೆಯ ಸಂಘಟನೆಗಳಾಗಿ ಪರಿವರ್ತನೆ ಹೊಂದಿರುವುದು ಆಧುನಿಕ ಜಗತ್ತಿನ ದುರಂತವಾಗಿದೆ. ತನ್ನ ಧರ್ಮ ಮತ್ತು ಅದರ ಆಚರಣೆಗಳನ್ನು ವಿಮರ್ಶಿಸಿಕೊಳ್ಳಲು ಮತ್ತು ಸಂವಾದಿಸಲು ನಿರಾಕರಿಸುವ ಪುರೋಹಿತಶಾಹಿ ಮಾನವೀಯವಾದ ತನ್ನ ಧರ್ಮದ ಅಂತಃಸಾಕ್ಷಿಯನ್ನು ಕೊಲ್ಲುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡುತ್ತದೆ. ಇಂತಹ ಪುರೋಹಿತಶಾಹಿಯನ್ನು ಪ್ರೋತ್ಸಾಹಿಸುವ ಸಮಾಜ ಕ್ರೂರವಾಗುತ್ತದೆ.

ಬಾನು ಮುಷ್ತಾಕ್ ಅವರಿಗೆ ಮುಲ್ಲಾಗಳು ಬಹಿಷ್ಕಾರ ಹಾಕಿರುವುದನ್ನು ಬಹಿರಂಗವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿ, ಪ್ರಶ್ನಿಸಿರುವ ಡಾ. ಮಮ್ತಾಜ್ ಅಲಿಖಾನ್, ಬಿ.ಎಂ. ಬಶೀರ್, ಶಿಜು.ಪಾಷ, ಕೆ. ಷರೀಫಾ ಮತ್ತು ಬಿ.ಎಂ. ರಶೀದ್ ಇಸ್ಲಾಂ ಧರ್ಮದಲ್ಲಿ ಸಮಾನತೆ ಮತ್ತು ಮಾನವೀಯತೆಗೆ ಸಾವಿಲ್ಲವೆಂಬುದನ್ನು ಸಾಬೀತುಪಡಿಸಿದ್ದಾರೆ. ಇಂತಹ ವಿಚಾರವಂತರು ಇರುವವರೆಗೂ ಯಾವ ಧರ್ಮವೂ ಮಾನವೀಯತೆಯ ಸರಹದ್ದುಗಳನ್ನು ಕುಬ್ಜಗೊಳಿಸಲಾರದು. ಬಾನುಮುಷ್ತಾಕ್ ಕುಟುಂಬದವರು ಏಕಾಂಗಿಯಾಗಲಾರರು. ನಾವೆಲ್ಲ ಅವರ ಜೊತೆಯಲ್ಲಿದ್ದೇವೆ.

## ಬಿ.ಎಂ.ಐ.ಸಿ. ಕಾರಿಡಾರ್ ಎಕ್ಸ್‌ಪ್ರೆಸ್ ಹೆದ್ದಾರಿಗೆ ಭೂಗಳ್ಳರ ಲಗ್ಗೆ

ಬೆಂಗಳೂರು-ಮೈಸೂರು ನಡುವೆ ನಿರ್ಮಿಸಬೇಕೆಂದಿರುವ ಕಾರಿಡಾರ್ ಎಕ್ಸ್‌ಪ್ರೆಸ್ ಹೆದ್ದಾರಿ ಮತ್ತು ಅದರ ಉಪನಗರಗಳ ಯೋಜನೆ ವಿವಾದದ ಬಿರುಗಾಳಿಯನ್ನು ಎಬ್ಬಿಸಿದೆ. ಸುಮಾರು 20 ಸಾವಿರ ಎಕರೆ ಕೃಷಿಭೂಮಿಯನ್ನು ಆಕ್ರಮಿಸುವ 2 ಸಾವಿರ ಕೋಟಿ ರೂಗಳ ನಿರ್ಮಾಣ ವೆಚ್ಚದ ಈ ಪಂಚತಾರಾ ಯೋಜನೆಯಿಂದ ಬೆಂಗಳೂರು, ಮಂಡ್ಯ ಮತ್ತು ಮೈಸೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಕ್ಕೆ ಸೇರಿದ ಸುಮಾರು 2 ಲಕ್ಷ ಜನರು ತಮ್ಮ ಈಗಿನ ನೆಲೆಗಳನ್ನು ಕಳೆದುಕೊಳ್ಳುತ್ತಾರೆ. ಸುಮಾರು 111 ಕಿ.ಮೀ. ಉದ್ದದ ಈ ಹೆದ್ದಾರಿಗೆ ಜನ-ಜಾನುವಾರುಗಳು ಪ್ರವೇಶಿಸಲಾಗದಂತೆ ಇಕ್ಕೆಲಗಳಲ್ಲೂ ಎತ್ತರದ ಅಡ್ಡಗೋಡೆಗಳನ್ನು ನಿರ್ಮಿಸಲಾಗುವುದರಿಂದ ಈ ಹೆದ್ದಾರಿ ಹಾದುಹೋಗುವ ಗ್ರಾಮಾಂತರ ಪ್ರದೇಶದ ಜನ-ಜಾನುವಾರುಗಳ ತಿರುಗಾಟಕ್ಕೆ ಅಡೆ-ತಡೆ ಉಂಟಾಗುತ್ತದೆ. ಯೋಜನೆಯಲ್ಲಿ ಇದಕ್ಕೆಲ್ಲ ಔಪಚಾರಿಕ ಪರಿಹಾರಗಳನ್ನು ಸೂಚಿಸಲಾಗಿದೆ.

ಕರ್ನಾಟಕ ಸರ್ಕಾರ ಮತ್ತು ನೈಸ್ ಕಂಪನಿ (ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್) ನಡುವೆ ಈ ಹೆದ್ದಾರಿ ನಿರ್ಮಾಣದ ಒಪ್ಪಂದವಾಗಿ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕಾಗಿದೆ. ಈ ಬೃಹತ್ ಪ್ರಮಾಣದ ಯೋಜನೆಯ ಕೆಲವು ಪ್ರಮುಖ ಮಾಹಿತಿಗಳು ಸಾರ್ವಜನಿಕರಿಗೆ ಲಭ್ಯವಾಗಿಲ್ಲ. ಯೋಜನೆಯ ಸಂಪೂರ್ಣ ಮಾಹಿತಿಯನ್ನು ಬಹಿರಂಗಪಡಿಸಬೇಕೆಂದು ಸಾರ್ವಜನಿಕ ಒತ್ತಾಯವಿದ್ದರೂ ಅದನ್ನು ನಿರಾಕರಿಸಿ ಕರ್ನಾಟಕ ಸರ್ಕಾರ ಮತ್ತು ನೈಸ್ ಕಂಪನಿ ರಹಸ್ಯವಾಗಿಟ್ಟಿರುವುದು ಅನೇಕ ರೀತಿಯ ಅನುಮಾನಗಳಿಗೆ ಮತ್ತು ಗಂಭೀರ ಆರೋಪಗಳಿಗೆ ಎಡೆಮಾಡಿಕೊಟ್ಟಿದೆ. ಒಂದು ಹೆದ್ದಾರಿ ಯೋಜನೆಗೆ ಸಂಬಂಧಿಸಿದ ಮಾಹಿತಿಗಳನ್ನು ಬಹಿರಂಗಪಡಿಸಲು ನಿರಾಕರಿಸುವ ಸರ್ಕಾರ, ಪ್ರಜಾಪ್ರಭುತ್ವದ ಶಿಷ್ಟಾಚಾರಗಳಿಗೆ ಅನುಗುಣವಾಗಿ ಪಾರದರ್ಶಕ ಆಡಳಿತ ನಡೆಸುವುದಾಗಿ ಘೋಷಿಸಿಕೊಂಡಿರುವ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸರ್ಕಾರದ ಅನುಚಿತವಾದ ಈ ನಯವಂಚನೆ ಅಸಂಬದ್ಧವಾಗಿ ಕಾಣುತ್ತದೆ.

ಈ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಪರಿಸರ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣ ಪತ್ರ (ಎನ್.ಒ.ಸಿ) ಪಡೆಯಲು ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಮೈಸೂರು, ಮಂಡ್ಯ ಮತ್ತು ಬೆಂಗಳೂರುಗಳಲ್ಲಿ ಸಾರ್ವಜನಿಕ ವಿಚಾರಣಾ ಸಭೆಗಳನ್ನು ಏರ್ಪಡಿಸಲಾಗಿತ್ತು.

'ಸಂತೆ ಸೇರುವುದಕ್ಕೆ ಮೊದಲೇ ಕಳ್ಳರು ಸೇರಿದ್ದರು' ಎಂಬ ಗಾದೆಯ ಮಾತಿನಂತೆ ಮೈಸೂರು, ಮಂಡ್ಯ ಮತ್ತು ಬೆಂಗಳೂರಿನಲ್ಲಿ ಲ್ಯಾಂಡ್ ಮಾಫಿಯ ಸಂಬಂಧ ಹೊಂದಿದ ರಾಜಕಾರಣಿಗಳನ್ನು ಸೇರಿಕೊಂಡು ಲಾಬಿಮಾಡಿ ಸಭೆಯಲ್ಲಿ ಯೋಜನೆಯ ಪರವಾಗಿ ಅಭಿಪ್ರಾಯ ರೂಪಿಸಲು ಮತ್ತು ಆಕ್ಷೇಪಿಸುವ ಸಾರ್ವಜನಿಕರ ಅಭಿಪ್ರಾಯಗಳನ್ನು ದಮನ ಮಾಡಲು ತಯಾರಿ ನಡೆಸಲಾಗಿತ್ತು. ಭೂಗಳ್ಳರ ಸಂತೆಯಂತೆ ನಡೆದ ವಿಚಾರಣಾ ಸಭೆಗಳಲ್ಲಿ ದಬ್ಬಾಳಿಕೆ, ಗೂಂಡಾಗಿರಿ ನಡೆಸಲಾಯಿತು.

ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸರ್ಕಾರದ ತಾಕೀತಿನಂತೆ ವರ್ತಿಸಿದ ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲಾಧಿಕಾರಿಗಳು ನೈಸ್ ಕಂಪನಿಯ ಏಜೆಂಟರಂತೆ ಸಾರ್ವಜನಿಕ ವಿಚಾರಣಾ ಸಭೆಗಳ ಶಾಸನಬದ್ಧ ಶಿಷ್ಟಾಚಾರಗಳನ್ನು ಉಲ್ಲಂಘಿಸಿ ಸಭೆಯ ಕಲಾಪಗಳನ್ನು ಭೂಗಳ್ಳರ ಸಂತೆಯ ಕಲಾಪಗಳಂತೆ ನಡೆಸಿರುವುದು ಈ ಯೋಜನೆಯ ವಿವಾದವನ್ನು ಉದ್ರಿಕ್ತಗೊಳಿಸಿದೆ.

ಪ್ರೊ.ಎಂ.ಡಿ. ನಂಜುಂಡಸ್ವಾಮಿ ಮತ್ತು ಪುಟ್ಟಣ್ಣಯ್ಯ ನಾಯಕತ್ವದ ಕರ್ನಾಟಕ ರಾಜ್ಯ ರೈತಸಂಘಗಳು ಗ್ರಾಮಾಂತರ ಪ್ರದೇಶದ ಜನರಿಗೆ ಪೂರ್ಣ ಮಾಹಿತಿ ಇಲ್ಲದ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಏರ್ಪಾಡಾಗದ ಈ ವಿಚಾರಣಾ ಸಭೆಗಳನ್ನು ಅಸಿಂಧುವೆಂದು ಬಹಿಷ್ಕಾರ ಹಾಕಿದೆ. ಅನೇಕ ಪರಿಸರ ಸಂಘಟನೆಗಳು ಇದೇ ನಿಲುವನ್ನು ತಾಳಿವೆ.

ಈ ಯೋಜನೆಯ ಅವಕಾಶಗಳನ್ನು ಲಪಟಾಯಿಸಲು ಎಲ್ಲ ರಾಜಕೀಯ ಪಕ್ಷಗಳ ಭೂಗಳ್ಳ ರಾಜಕಾರಣಿಗಳು ಮತ್ತು ಲ್ಯಾಂಡ್ ಡೆವಲಪರ್ಸ್ ಮಾಫಿಯಾ ಎಕ್ಸ್‌ಪ್ರೆಸ್ ಹೆದ್ದಾರಿಗೆ ಲಗ್ಗೆ ಹಾಕಿದೆ. ಹಿರಿಯ ಗಾಂಧಿವಾದಿ ಮತ್ತು ಸರ್ವೋದಯ ನಾಯಕರಾದ ಹೆಚ್.ಎಸ್. ದೊರೆಸ್ವಾಮಿಯವರನ್ನು ಯಾವ ಸಂಕೋಚವೂ ಇಲ್ಲದೆ ಬಂಧಿಸಿ ವಿಚಾರಣೆಯ ಕಪಟ ನಾಟಕವಾಡಿರುವ ಸರ್ಕಾರದ ನಡವಳಿಕೆ ದಬ್ಬಾಳಿಕೆಯ ರಾಜಕೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದೆ. ಇದರಲ್ಲಿ ಭ್ರಷ್ಟ ರಾಜಕಾರಣಿಗಳೆಲ್ಲ ಶಾಮೀಲಾಗಿರುವುದು ಭೂಗಳ್ಳರ ಮಾಫಿಯಾ ಲಾಬಿಯನ್ನು ಬಲಪಡಿಸಿದೆ.

ಕೆ. ರಾಮದಾಸ್
ಮೈಸೂರು

ಪತ್ರಿಕಾ ಹೇಳಿಕೆ

## ಜಾತಿ ಸಂಖ್ಯೆ ಆಧಾರಿತ ಮೀಸಲಾತಿಗೆ ವಿರೋಧ

ದಿನಾಂಕ. ೩.೮.೧೯೯೪

ಮೈಸೂರು

ಜಾತಿ ಜನಸಂಖ್ಯೆ ಆಧಾರಿತ ಮೀಸಲಾತಿಯನ್ನು ರೂಪಿಸಬೇಕೆಂದು ರಾಜ್ಯ ರೈತ ಸಂಘದ ಅಧ್ಯಕ್ಷರಾದ ಪ್ರೊ.ಎಂ.ಡಿ. ನಂಜುಂಡಸ್ವಾಮಿಯವರು ಒತ್ತಾಯ ಮಾಡಿರುವುದನ್ನು ಕರ್ನಾಟಕ ಪ್ರಗತಿರಂಗ ತೀವ್ರವಾಗಿ ವಿರೋಧಿಸುತ್ತದೆ.

ಎಲ್ಲ ಜಾತಿಗಳಿಗೂ ಅವುಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಸಾರಾಸಗಟಾಗಿ ವಿಸ್ತರಿಸಬೇಕೆನ್ನುವ ವಾದ, ಜಾತಿ ವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವ ಮತ್ತು ಸಾಮಾಜಿಕ ನ್ಯಾಯ ಸಿದ್ಧಾಂತವನ್ನು ಪಲ್ಲಟಗೊಳಿಸುವ ಪ್ರತಿಗಾಮಿ ಧೋರಣೆಯಾಗಿದೆ.

ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜಾತಿಗಳು ಮತ್ತು ಅಸಂಘಟಿತವಾದ ಅತ್ಯಂತ ದುರ್ಬಲ ವರ್ಗಗಳು ಮಾತ್ರ ಮೀಸಲಾತಿಯಿಂದ ದೊರೆಯುವ ಅವಕಾಶಗಳಿಂದ ಮೇಲ್ಗತಿಯ ಚಲನೆಯನ್ನು ಪಡೆದು ಸಮಾನತೆಯನ್ನು ಸಾಧಿಸಬೇಕೆಂಬ ಸಂವಿಧಾನದ ಆಶಯಕ್ಕೆ ಪ್ರೊ. ನಂಜುಂಡಸ್ವಾಮಿಯವರ ಸೂತ್ರ ಸಂಗತವಾಗುವುದಿಲ್ಲ.

ಪ್ರೊ. ನಂಜುಂಡಸ್ವಾಮಿಯವರ ಮೀಸಲಾತಿ ಸೂತ್ರದಿಂದ ಜಾತಿಗಳ ಒಳಮುಖ ಚಲನೆ ಸಾಧ್ಯವಾದರೂ ಜಾತಿ ಮುಕ್ತವಾದ ಸಮಾನತೆಯ ಕಡೆಗಿನ ಚಲನಶೀಲತೆಯನ್ನು ಅದು ಶಾಶ್ವತವಾಗಿ ನಿರ್ಬಂಧಿಸುವುದರಿಂದ ಮೀಸಲಾತಿಯ ಆಶಯವನ್ನೇ ಹುಸಿಗೊಳಿಸುತ್ತದೆ.

ದೇವರಾಜ ಅರಸು ಸರ್ಕಾರದ ನಂತರ ಬಂದ ಎಲ್ಲ ಸರ್ಕಾರಗಳು, ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಸಂಘಟಿತವಾದ ಪ್ರಬಲ ಜಾತಿಗಳ ಸಂಖ್ಯಾಬಲದ ಒತ್ತಡಕ್ಕೆ ಶರಣಾಗತವಾಗಿ ಅತ್ಯಂತ ದುರ್ಬಲರಿಗೆ ಸಲ್ಲಬೇಕಾದ ಮೀಸಲಾತಿಯ ತತ್ವವನ್ನೇ ಬಲಿಗೊಡುತ್ತಾ

ಬಂದಿರುವುದು ಸಮಯಸಾಧಕ ರಾಜಕಾರಣದ ದುರಂತವಾಗಿದೆ. ಈಗ ವೀರಪ್ಪ ಮೊಯಿಲಿಯವರ ಸರ್ಕಾರ ಮೀಸಲಾತಿಯನ್ನು ಅಪಹಾಸ್ಯಕ್ಕೆ ಗುರಿಮಾಡಿದೆ.

ಮೀಸಲಾತಿಯ ವರದಿಗಳನ್ನು ಸಿದ್ಧಪಡಿಸುವ ಆಯೋಗಗಳು ಅಂತರ್ಜಾತೀಯ ಮದುವೆಗಳ ಕುಟುಂಬಗಳನ್ನು ಮೀಸಲಾತಿಯ ವ್ಯಾಪ್ತಿಯೊಳಗೆ ಪ್ರತ್ಯೇಕವಾಗಿ ಗುರುತಿಸದಿರುವುದು ವಿಷಾದದ ಸಂಗತಿಯಾಗಿದೆ. ಅಂತರ್ಜಾತೀಯ ಕುಟುಂಬಗಳಿಗೆ ಕನಿಷ್ಠ ಶೇ. 2ರಷ್ಟಾದರೂ ಮೀಸಲಾತಿಯ ಅವಕಾಶವನ್ನು ಕಲ್ಪಿಸಬೇಕೆಂದು ಪ್ರಗತಿರಂಗ ಒತ್ತಾಯಪಡಿಸುತ್ತದೆ.

ಸರ್ಕಾರಿ ವಲಯದ ಆರ್ಥಿಕ ದಿವಾಳಿಯಿಂದ ಮತ್ತು ತೀವ್ರಗತಿಯಲ್ಲಿ ಸಾಗುತ್ತಿರುವ ಖಾಸಗೀಕರಣದ ಪ್ರಭಾವದಿಂದ ಮೀಸಲಾತಿಯ ಅವಕಾಶಗಳು ಸೀಮಿತಗೊಳ್ಳುತ್ತಿರುವುದು ಆತಂಕದ ವಿಷಯವಾಗಿದೆ. ಈ ಕೆಲವೇ ಕೆಲವು ಸೀಮಿತ ಅವಕಾಶಗಳನ್ನು ಬಲಾಢ್ಯರು ಲಪಟಾಯಿಸದಂತೆ ತಡೆಯುವುದು ಸಮಾನತೆ ಮತ್ತು ಸಾಮಾಜಿಕ ನ್ಯಾಯದಲ್ಲಿ ವಿಶ್ವಾಸ ಹೊಂದಿರುವ ಎಲ್ಲರ ನೈತಿಕ ಜವಾಬ್ದಾರಿಯಾಗಿದೆ.

ಕೆ. ರಾಮದಾಸ್<br>ಸಂಚಾಲಕ<br>ಕರ್ನಾಟಕ ಪ್ರಗತಿರಂಗ



F

# ರಾಷ್ಟ್ರೀಯ ಏಕತೆಗಾಗಿ ಕೋಮುವಾದ ವಿರೋಧಿ ಜನಪರ ಸಮಾವೇಶ

ದಿನಾಂಕ. ೨೯.೧೧.೧೯೯೨

ಕೆ. ರಾಮದಾಸ್
ಸಂಚಾಲಕ
ಕರ್ನಾಟಕ ಪ್ರಗತಿರಂಗ

ದಿನಾಂಕ. ೨೯.೧೧.೧೯೯೨ ರಂದು ಖ್ಯಾತ ಲೇಖಕ ಶ್ರೀ ದೇವನೂರು ಮಹಾದೇವ ಅವರ ಅಧ್ಯಕ್ಷತೆಯಲ್ಲಿ ನಡೆದ "ರಾಷ್ಟ್ರೀಯ ಏಕತೆಗಾಗಿ ಕೋಮುವಾದ ವಿರೋಧಿ ಜನಪರ ಸಮಾವೇಶ"ದಲ್ಲಿ ಈ ಕೆಳಗಿನ ನಿರ್ಣಯಗಳನ್ನು ಸ್ವೀಕರಿಸಲಾಯಿತು.

ನಿರ್ಣಯಗಳು

1. ಅಯೋಧ್ಯೆಯ ವಿವಾದಗ್ರಸ್ತ ಸ್ಥಳದಲ್ಲಿ ಈ ಡಿಸೆಂಬರ್ ೬ರಂದು ಕರಸೇವೆಯ ಮೂಲಕ ರಾಮ ಮಂದಿರವನ್ನು ನಿರ್ಮಿಸುತ್ತೇವೆಂದು ಮತ್ತು ಈ ನಿರ್ಮಾಣ ಕಾರ್ಯವನ್ನು ಜಗತ್ತಿನ ಯಾವ ಶಕ್ತಿಯು ತಡೆಯಲಾಗುವುದಿಲ್ಲವೆಂದು ಹಿಟ್ಲರ್‌ನ ಫ್ಯಾಸಿಸ್ಟ್ ಪರಿಭಾಷೆಯಲ್ಲಿ ವಿಶ್ವ ಹಿಂದೂ ಪರಿಷತ್ ಘೋಷಿಸಿರುವುದು ಭಾರತದ ಸಂವಿಧಾನಕ್ಕೆ ಗಂಡಾಂತರಕಾರಿಯಾದ ಸವಾಲಾಗಿದೆ.

   ಭಾರತದ ಜಾತ್ಯತೀತ ರಾಷ್ಟ್ರೀಯತೆಯನ್ನು ಮತ್ತು ಪ್ರಜಾಪ್ರಭುತ್ವವನ್ನು ಮತಾಂಧತೆಯ ಷಡ್ಯಂತ್ರದ ಮೂಲಕ ನಾಶಪಡಿಸಿ, ಫ್ಯಾಸಿಸ್ಟ್ ಸ್ವರೂಪದ ಪ್ರಭುತ್ವವನ್ನು ನಿರ್ಮಿಸಲು ವಿಶ್ವ ಹಿಂದೂ ಪರಿಷತ್, ಆರ್.ಎಸ್.ಎಸ್ ಮತ್ತು ಬಿ.ಜೆ.ಪಿ.ಯಂತಹ ಮತಾಂಧ ಸಂಘಟನೆಗಳು ಕೋಮುವಾದವನ್ನು ವಿಜೃಂಭಿಸುತ್ತವೆ

   ಅಯೋಧ್ಯೆಯ ಬಾಬರಿ ಮಸೀದಿ - ರಾಮಮಂದಿರ ವಿವಾದವನ್ನು ಪರಸ್ಪರ ಮಾತುಕತೆಯ ಮುಖಾಂತರ ಅಥವಾ ನ್ಯಾಯಾಲಯದ ತೀರ್ಮಾನಕ್ಕೆ ಅನುಗುಣವಾಗಿ ಬಗೆಹರಿಸಿಕೊಳ್ಳಬೇಕೆಂಬ ರಾಷ್ಟ್ರೀಯ ಅಭಿಪ್ರಾಯವನ್ನು ತಿರಸ್ಕರಿಸುವುದರ ಮೂಲಕ,

ಈ ಸಂಘಟನೆಗಳು ಕೋಮು ಘರ್ಷಣೆಯ ದಳ್ಳುರಿಯ ಅಂತರ್ಯುದ್ಧದ ಭಯಾನಕ ಪರಿಸ್ಥಿತಿಯನ್ನು ನಿರ್ಮಿಸಿವೆ.

ಭಾರತದ ಸಂವಿಧಾನ, ನ್ಯಾಯಾಲಯ ಮತ್ತು ರಾಷ್ಟ್ರೀಯ ಅಭಿಮತ ತಿರಸ್ಕರಿಸಿ, ಕರಸೇವೆ ನಡೆಸಲು ಸನ್ನದ್ಧವಾಗಿರುವ ವಿಶ್ವ ಹಿಂದೂ ಪರಿಷತ್, ಆರ್.ಎಸ್.ಎಸ್ ಮತ್ತು ಭಾರತೀಯ ಜನತಾ ಪಕ್ಷವನ್ನು ಕೂಡಲೇ ಕೇಂದ್ರ ಸರ್ಕಾರ ನಿಷೇಧಿಸಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ.

2. ಭಾರತದ ಸಂವಿಧಾನ ಉಲ್ಲಂಘಿಸುತ್ತಿರುವ ವಿಶ್ವ ಹಿಂದೂ ಪರಿಷತ್ ಮತ್ತು ಆರ್.ಎಸ್.ಎಸ್.ಗಳನ್ನು ಬೆಂಬಲಿಸಿ ಅಯೋಧ್ಯೆಯಲ್ಲಿ ಕರಸೇವೆಗೆ ಅವಕಾಶ ಮಾಡಿಕೊಡುತ್ತಿರುವ ಬಿ.ಜೆ.ಪಿ.ಯ ಉತ್ತರ ಪ್ರದೇಶದ ಸರ್ಕಾರ, ನ್ಯಾಯಾಲಯದ ಆದೇಶವನ್ನು ಪರಿಪಾಲಿಸುವ ಭರವಸೆಯು ಕಪಟನಾಟಕವಾಗಿರುವುದರಿಂದ ತಕ್ಷಣ ಆ ಸರ್ಕಾರವನ್ನು ವಜಾಮಾಡಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ.
3. ಅಯೋಧ್ಯೆಯಲ್ಲಿ ಡಿಸೆಂಬರ್ 6ರಂದು ಕರಸೇವೆ ನಡೆಸಲು ಹೋಗುತ್ತಿರುವ ವಿಶ್ವಹಿಂದೂ ಪರಿಷತ್, ಆರ್.ಎಸ್.ಎಸ್ ಮತ್ತು ಬಿ.ಜೆ.ಪಿ. ಕಾರ್ಯಕರ್ತರನ್ನು ಮುಂಜಾಗ್ರತ ಕ್ರಮವಾಗಿ ಆಯಾ ರಾಜ್ಯಗಳಲ್ಲೇ ಬಂಧಿಸಲು ರಾಜ್ಯಗಳಿಗೆ ಆದೇಶ ನೀಡಬೇಕೆಂದು ಈ ಸಭೆಯು ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸುತ್ತದೆ.
4. ಭಾರತದ ಸಂವಿಧಾನವನ್ನು ಯಾವುದೇ ಸಂದರ್ಭದಲ್ಲಿ ಉಲ್ಲಂಘನೆಯಾಗಲು ಬಿಡುವುದಿಲ್ಲವೆಂಬ ದೃಢ ನಿಲುವು ತಾಳಿರುವ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರನ್ನು ಮತ್ತು ರಾಷ್ಟ್ರೀಯ ಏಕತಾ ಮಂಡಳಿಯ ನಿರ್ಧಾರವನ್ನು ಈ ಸಭೆಯು ಪ್ರಶಂಸಿಸುತ್ತದೆ. ಜಾತ್ಯತೀತ ರಾಷ್ಟ್ರೀಯತೆಯನ್ನು ಮತ್ತು ಭಾರತದ ಸಂವಿಧಾನವನ್ನು ಸಂರಕ್ಷಿಸಲು ಕೇಂದ್ರ ಸರ್ಕಾರ ಕೈಗೊಳ್ಳುವ ಕ್ರಮಗಳನ್ನು ಈ ಸಭೆಯು ಬೆಂಬಲಿಸುತ್ತದೆ.
5. ಜಾತ್ಯತೀತ ರಾಷ್ಟ್ರೀಯತೆ ಮತ್ತು ಕೋಮು ಸೌಹಾರ್ದತೆಯ ರಾಷ್ಟ್ರೀಯ ವಾತಾವರಣವನ್ನು ನಿರ್ಮಿಸಲು ಸಾರ್ವಜನಿಕ ಜೀವನದಲ್ಲಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಈ ಸಭೆಯು ಒತ್ತಾಯಪಡಿಸುತ್ತದೆ.

ಜಾತ್ಯತೀತ ರಾಷ್ಟ್ರೀಯತೆಯಲ್ಲಿ ನಂಬಿಕೆ ಹೊಂದಿರುವ ರಾಜಕೀಯ ಪಕ್ಷಗಳು ಮತ್ತು ಪ್ರಗತಿಪರ ಸಂಘಟನೆಗಳು ಒಗ್ಗಟ್ಟಿನಿಂದ ಜನಾಭಿಪ್ರಾಯ ರೂಪಿಸಲು ನೆರವಾಗಬೇಕೆಂದು ಈ ಸಭೆಯು ವಿನಂತಿಸಿಕೊಳ್ಳುತ್ತದೆ.

# 'ಬ್ರಾಹ್ಮಣ ಸಭಾದ ಅಪ್ರಬುದ್ಧ ಖಂಡನೆಗೆ ವಿಷಾದ'

ಕೆ. ರಾಮದಾಸ್ ದಿನಾಂಕ. ೭.೧೦.೧೯೯೪
ಸಂಚಾಲಕ
ಜಾತ್ಯಾತೀತ ಸಂಘಟನೆಗಳ ಒಕ್ಕೂಟ
ಮೈಸೂರು

ಮೈಸೂರಿನಲ್ಲಿ ನಡೆದ ಬ್ರಾಹ್ಮಣರ ಸಮ್ಮೇಳನದ ವಿದ್ಯಮಾನಗಳ ಬಗ್ಗೆ ನಾನು ವ್ಯಕ್ತಪಡಿಸಿದ ಟೀಕೆಯ ಆಶಯಗಳನ್ನು ಬ್ರಾಹ್ಮಣ ಸಭಾದವರು ಜವಾಬ್ದಾರಿಯಿಂದ ಪರಿಶೀಲನೆ ಮಾಡದೆ, ವೈಯಕ್ತಿಕ ಪ್ರಚಾರಕ್ಕಾಗಿ ಸ್ವಾರ್ಥ ಸಾಧನೆಗಾಗಿ ಬ್ರಾಹ್ಮಣ ಜನಾಂಗವನ್ನು, ಅವರ ಸಂಘ-ಸಂಸ್ಥೆಗಳನ್ನು ಟೀಕಿಸುತ್ತಿದ್ದೇನೆಂದು ಅಪ್ರಬುದ್ಧವಾಗಿ ತೀರ್ಮಾನಿಸಿರುವುದು ವಿಷಾದದ ಸಂಗತಿಯಾಗಿದೆ.

ಜಾತಿಯ ವೇದಿಕೆಗಳನ್ನು ಸಮಯಸಾಧಕತನದಿಂದ ದುರ್ಬಳಕೆ ಮಾಡಿಕೊಂಡು ವಿಜೃಂಭಿಸುತ್ತಿರುವ ಕೆಲವು ರಾಜಕಾರಣಿಗಳ ಮತ್ತು ಕೆಲವು ಮಠಾಧೀಶರುಗಳ ವಿಪರ್ಯಾಸದ ಮಾತುಗಳಿಂದ ಉಂಟಾಗಬಹುದಾದ ಅಪಾಯದ ಬಗ್ಗೆ ಚುನಾವಣೆಯ ಸಂದರ್ಭದಲ್ಲಿ ಜನರ ಗಮನಕ್ಕೆ ತರಲು ಪ್ರಯತ್ನಮಾಡಿದ್ದೇನೆ.

ಬೆಂಗಳೂರಿನಲ್ಲಿ ನಡೆದ ಒಕ್ಕಲಿಗರ ಮೆರವಣಿಗೆಯ ಸಂದರ್ಭದಲ್ಲಿ ಆದಿ ಚುಂಚನಗಿರಿ ಜಗದ್ಗುರುಗಳು, 'ದೇಶದ ಮಂತ್ರಿಯಾಗಬೇಡಿ, ರಾಜ್ಯದ ಮಂತ್ರಿಗಳಾಗಬೇಡಿ, ಒಕ್ಕಲಿಗ ಜಾತಿಯ ಮಂತ್ರಿಗಳಾಗಿ' ಎಂದು ಅವಿವೇಕದಿಂದ ಮಾತನಾಡಿದ್ದರ ಬಗ್ಗೆ ನಾನು ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ.

ಬ್ರಾಹ್ಮಣರ ಸಮ್ಮೇಳನದ ವೇದಿಕೆಯಿಂದ ಮಾತನಾಡಿದ ಮಂತ್ರಿ ಎಸ್.ರಮೇಶ್ ಅವರು, ಮಂತ್ರಿಯಾಗುವಾಗ ಜಾತ್ಯತೀತ ಸಂವಿಧಾನದ ಘನತೆ-ಗೌರವ ಕಾಪಾಡುವ ಪ್ರತಿಜ್ಞೆ ಸ್ವೀಕರಿಸಿ, ಬ್ರಾಹ್ಮಣರೆಲ್ಲ ಪಕ್ಷಾತೀತರಾಗಿ 'ಬ್ರಾಹ್ಮಣ ಅಭ್ಯರ್ಥಿ'ಯನ್ನೇ ಆಯ್ಕೆ ಮಾಡಬೇಕೆಂದು ಹೇಳಿರುವುದು ಮತ್ತು ವಿಧಾನಸಭೆಯಲ್ಲಿ ಮೀಸಲಾತಿ ನೀತಿಗೆ ಒಪ್ಪಿಗೆ ಸೂಚಿಸಿ, ಇಲ್ಲಿ ಅದನ್ನು

ಅಪಹಾಸ್ಯ ಮಾಡಿರುವುದು ಪ್ರಜಾಪ್ರಭುತ್ವಕ್ಕೆ ಗಂಡಾಂತರಕಾರಿಯಲ್ಲವೇ ? ಸ್ವಾಭಿಮಾನವಿರುವ ಯಾವ ಜಾತಿಯವರೂ ಇಂತಹ ವಿಪರ್ಯಾಸದ ಧೋರಣೆಗಳನ್ನು ಸಮರ್ಥಿಸಿಕೊಳ್ಳುವುದು ಸಾಧ್ಯವಿಲ್ಲ.

ಜಾತಿ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ವಿರೋಧಿಸುತ್ತಿರುವ ನನ್ನನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬ್ರಾಹ್ಮಣ ವಿರೋಧಿ, ಒಕ್ಕಲಿಗ ವಿರೋಧಿ, ವೀರಶೈವ ವಿರೋಧಿ, ದಲಿತ ವಿರೋಧಿ ಇತ್ಯಾದಿಯಾಗಿ ಗ್ರಹಿಸುತ್ತಿರುವುದು ಅಪ್ಪಟ ಮೂಢನಂಬಿಕೆಯಾಗಿದೆ.

ಬ್ರಾಹ್ಮಣ ಸಭಾದವರು ನಾನು ಟೀಕೆ-ಟಿಪ್ಪಣಿಗಳನ್ನು ಮಾಡದೆ ಬಾಯಿಮುಚ್ಚಿಕೊಂಡು ಸುಮ್ಮನಿರಬೇಕೆಂದು ನನಗೆ ಬೆದರಿಕೆ ಹಾಕಿರುವುದು ನನ್ನ ಅದಮ್ಯವಾದ ದನಿಯನ್ನು ಉಡುಗಿಸಲಾರದು.

ದಯಮಾಡಿ ಬ್ರಾಹ್ಮಣ ಸಭಾದವರು, ನನ್ನಂತಹವರ ವಿರುದ್ಧ ಹೋರಾಟ ಮಾಡಲು ತಮ್ಮ ಸಂಘಟನಾತ್ಮಕ ಶಕ್ತಿಯನ್ನು ಅಪವ್ಯಯ ಮಾಡದೆ ನಮ್ಮನ್ನೆಲ್ಲ ಈ ವ್ಯವಸ್ಥೆಯ ಕರುಣಾಜನಕ ಸ್ಥಿತಿಯಲ್ಲಿಟ್ಟಿರುವ ಜಾತಿ ವಿನಾಶಕ್ಕಾಗಿ ಮತ್ತು ಸಮಾನತೆಯ ಆಶಯಕ್ಕಾಗಿ ಬಳಸಿದರೆ ಆ ಸಂಘಟನೆಗೆ ಗೌರವ ಬರುತ್ತದೆ.

# ಸರ್ಕಾರಿ ಖರ್ಚಿನಲ್ಲಿ ಪ್ರಧಾನಮಂತ್ರಿ ತೀರ್ಥಯಾತ್ರೆಗೆ ಖಂಡನೆ

**ಪತ್ರಿಕಾ ಹೇಳಿಕೆ**

**ಪ್ರೊ.ಕೆ. ರಾಮದಾಸ್**
**ಸಂಚಾಲಕ, ಕರ್ನಾಟಕ ಪ್ರಗತಿರಂಗ**
**ರಾಜಕೀಯ ಸಾಂಸ್ಕೃತಿಕ ವೇದಿಕೆ**
**# ೯, ಪೂರ್ವ ಆಂಜನೇಯ**
**ದೇವಸ್ಥಾನದ ರಸ್ತೆ ಬಸವನಗುಡಿ, ಬೆಂಗಳೂರು -೪**

ದಿನಾಂಕ. ೧೫.೧೨.೧೯೯೩

ಇದೇ ಡಿಸೆಂಬರ್ ೧೮ರಂದು ಪ್ರಧಾನಮಂತ್ರಿ ಪಿ.ವಿ. ನರಸಿಂಹರಾವ್ ಅವರು ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ಕೊಡುವ ಉದ್ದೇಶದಿಂದಲೇ ಸಕಲ ಸರ್ಕಾರಿ ಸವಲತ್ತುಗಳನ್ನು ಉಪಯೋಗಿಸಿಕೊಂಡು ತೀರ್ಥಯಾತ್ರೆಗೆ ಬರುತ್ತಿರುವುದು ಪ್ರಧಾನಮಂತ್ರಿಯ ಸ್ಥಾನಕ್ಕೆ ಸಲ್ಲದ ವರ್ತನೆಯಾಗಿದೆ.

ಪ್ರಧಾನಮಂತ್ರಿ ಪಿ.ವಿ. ನರಸಿಂಹರಾವ್ ಅವರು ತಮ್ಮ ವೈಯಕ್ತಿಕ ಧಾರ್ಮಿಕ ಶ್ರದ್ಧೆಯನ್ನು ಅಧಿಕೃತ ಕಾರ್ಯಕ್ರಮವಾಗಿ ಸರ್ಕಾರೀಕರಣಗೊಳಿಸುತ್ತಿರುವುದು ಜಾತ್ಯತೀತ ಸ್ಥಾನದ ದುರ್ಬಳಕೆಯಾಗಿದೆ.

ಭೂಕಂಪ, ಅತಿವೃಷ್ಟಿಗಳಿಂದ ಸಂತ್ರಸ್ತವಾದ ಪ್ರದೇಶಗಳಿಗೆ ಭೇಟಿಕೊಡಲು ಸಮಯವಿಲ್ಲದ ಪ್ರಧಾನ ಮಂತ್ರಿಗಳು, ತೀರ್ಥಯಾತ್ರೆಗಾಗಿ ಸಾಮಾಜಿಕವಾಗಿ ಯಾವ ಮಹತ್ತ್ವವೂ ಇಲ್ಲದ ಗಣಪತಿ ಸಚ್ಚಿದಾನಂದ, ಚಂದ್ರಸ್ವಾಮಿ ಮತ್ತು ಸಾಯಿಬಾಬಾರಂತಹ ನಕಲಿ ಸ್ವಾಮಿಗಳ ಸುತ್ತ ಸುತ್ತಲು ಕಾಲ ಮತ್ತು ಸಂಪನ್ಮೂಲಗಳ ಅಪವ್ಯಯ ಮಾಡುತ್ತಿರುವುದು ಖಂಡನೀಯವಾಗಿದೆ.

ಪಿ.ವಿ. ನರಸಿಂಹರಾವ್ ಅವರು ಜಾತ್ಯತೀತ ರಾಷ್ಟ್ರದ ಪ್ರಧಾನ ಮಂತ್ರಿಯಾಗಿರುವುದು ಮತ್ತು ಜಾತ್ಯತೀತ ಪಕ್ಷವೆಂದು ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

# ಕಾರಂತರ ವಿಚಾರಗಳ ಪರಿಹಾರವಾಗದ ಅನುಮಾನಗಳು

ಕೆ. ರಾಮದಾಸ್ ದಿನಾಂಕ. ೧೩.೩.೧೯೯೩
'ಚಾರ್ವಾಕ'
೯೮೬, ಪಂಚಮಂತ್ರ ರಸ್ತೆ
ಕುವೆಂಪು ನಗರ, ಮೈಸೂರು ೫೭೦ ೦೨೩

ಪ್ರಕಟಣೆಯ ಕೃಪೆಗಾಗಿ

ಗೆ,
ಮಾನ್ಯ ಸಂಪಾದಕರು
'ಪ್ರಜಾವಾಣಿ'
ಬೆಂಗಳೂರು

ಅಯೋಧ್ಯೆಯ ವಿದ್ಯಮಾನಗಳ ಬಗ್ಗೆ ಡಾ.ಕೆ. ಶಿವರಾಮ ಕಾರಂತರು ವ್ಯಕ್ತಪಡಿಸಿದ ವಿಚಾರಗಳ ಬಗ್ಗೆ ವಿವಾದ ನಡೆಯುತ್ತಿದ್ದ ಸಂದರ್ಭದಲ್ಲಿ ಕಾರಂತರ ಲೇಖನ (ಪ್ರಜಾವಾಣಿ ೧೧.೩.೧೯೯೩) ಪ್ರಕಟವಾಗಿರುವುದು ಅರ್ಥಪೂರ್ಣವಾಗಿದೆ. ಈ ಲೇಖನ, ಹಿರಿಯರಾದ ಕಾರಂತರ ಪ್ರಬುದ್ಧ ವಿಚಾರವಂತಿಕೆಯಲ್ಲಿ ನಮ್ಮ ಗೌರವವನ್ನು ಹೆಚ್ಚಿಸಿದೆಯಾದರೂ, ಕೆಲವು ಅನುಮಾನಗಳು ಪರಿಹಾರವಾಗದೆ ಉಳಿದಿವೆ.

ಡಾ. ಶಿವರಾಮ ಕಾರಂತರು, "ನಾನು ಸಾಂಪ್ರದಾಯಿಕ ಮತೀಯ ನಂಬಿಕೆಯವನಲ್ಲ. ನಾನು ನಾಸ್ತಿಕ, ದೇವರು ಏನೆಂದೇ ತಿಳಿಯದವ. ತಿಳಿಯದ್ದನ್ನು ನಂಬಲಾರದವ" ಎಂದು ಖಡಾಖಂಡಿತವಾಗಿ ಹೇಳಿ, "ಹಿಂದೂ ಜನರ ಒಂದು ಗುಂಪು ಬಂದು ನನ್ನ ಸಹಿ ಕೇಳಿದಾಗ ಅವರ ಹಕ್ಕನ್ನು ಒಪ್ಪಿ ಸಹಿ ಹಾಕಿದ್ದೇನೆ" (ಮಸೀದಿಯ ವಿಚಾರವನ್ನು ಹೊಡೆದು ಹಾಕಿ) ಎಂದು ಹೇಳಿರುವುದು ಮನವರಿಕೆಯಾಗುವುದಿಲ್ಲ ಮತ್ತು ಇದನ್ನು ಸಂವಿಧಾನಾತ್ಮಕ ಹಕ್ಕೆಂದು ಸರಳವಾಗಿ ತೇಲಿಸಿ ಹೇಳಿರುವುದು ಅತಾರ್ಕಿಕವಾದವಾಗಿ ಕಾಣುತ್ತದೆ.

೧೯೭೦ರಲ್ಲಿ ಕಾರಂತರು ಬರೆದ 'ನಮ್ಮ ಜನಸತ್ತೆ ಹಿಡಿದ ಹಾದಿ' (ನೋಡಿ : ಬಿಡಿ ಬರಹಗಳು: ಪು. ೩೬೩-೩೬೪) ಎಂಬ ಲೇಖನದಲ್ಲಿ ಹೇಳಿದ ಕೆಲವು ವಿಚಾರಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು: "ಪ್ರತಿಯೊಬ್ಬರೂ ತನ್ನ ಹಕ್ಕನ್ನು ಜುಲುಮಿನಿಂದಲೂ ದಿಟ್ಟತನದಿಂದಲೋ ಮುಂದಿಡತೊಡಗಿ ಲಾಭಗಳಿಸುತ್ತಿರುವ ಕಾಲಕ್ಕೆ ಹಕ್ಕಿನ ಜತೆಯಲ್ಲೇ ಸಾರ್ವಜನಿಕ ಹೊಣೆಗಾರಿಕೆ ನಮಗಿದೆ ಎಂಬುದನ್ನು ಎಲ್ಲರೂ ಮರೆಯುವಂತೆ ಕಾಣುತ್ತದೆ. ವ್ಯಕ್ತಿ ವ್ಯಕ್ತಿಗಳೊಳಗಿನ, ಗುಂಪುಗುಂಪುಗಳೊಳಗಿನ, ವ್ಯಕ್ತಿ ಮತ್ತು ರಾಷ್ಟ್ರದೊಳಗಿನ, ಹಕ್ಕುಗಳಿಗೆ ಘರ್ಷಣೆ ಬಂದಾಗ ಯಾವುದು ಪ್ರಾಮುಖ್ಯ ? ಯಾವ ಮಾತು ನಡೆಯಬೇಕು - ಎಂಬ ವಿವೇಕ ನಮ್ಮಿಂದ ಅಳಿದು ಹೋಗಿದೆ. ಪ್ರಜಾಪ್ರಭುತ್ವದಲ್ಲಿ ನನ್ನ ಹಕ್ಕಿಗೆ ಇರುವಷ್ಟೆ ಮನ್ನಣೆ ಇನ್ನೊಬ್ಬರದಕ್ಕೂ ಇದೆ ಎಂಬ ಭಾವನೆ ನಮ್ಮಿಂದ ಅಳಿಯುತ್ತಿದೆ. ನಾವು ನಮಗಾಗಿ ಬಯಸುತ್ತಿರುವ ಸ್ವಾತಂತ್ರ್ಯವನ್ನು ನಮ್ಮ ಅಭಿಪ್ರಾಯ ವಿರೋಧಿಸುವ ಅನ್ಯರಿಗೆ ಕೊಡಲು ಸಿದ್ಧರಿಲ್ಲ" ಎಂದು ಹೇಳಿರುವುದು ಸಮಂಜಸವಾಗಿದೆ.

ಅಯೋಧ್ಯೆಯ ವಿವಾದ ಕೇವಲ ಹಿಂದೂಗಳ ಅಥವಾ ಮುಸ್ಲಿಮರ ಮಂದಿರ-ಮಸೀದಿ ನಿರ್ಮಾಣದ ಸಂವಿಧಾನಾತ್ಮಕ ಹಕ್ಕಿನ ಪ್ರಶ್ನೆಯಾಗಿ ಈ ವಿವಾದ, ಭಾರತದ ಬಹು ಸಂಸ್ಕೃತಿಯ-ಸಹಬಾಳ್ವೆಯ ತಳಪಾಯವನ್ನು ಬುಡಮೇಲು ಮಾಡಿರುವುದು ಮತ್ತು ಸಂವಿಧಾನಾತ್ಮಕ ಪ್ರಜಾತಂತ್ರದ ನೆಮ್ಮದಿಯನ್ನು ಕಂಗೆಡಿಸಿರುವುದು ಕಾರಂತರಿಗೆ ತಿಳಿಯದ ವಿಚಾರವೇನಲ್ಲ.

ಸಂವಿಧಾನ, ನ್ಯಾಯಾಲಯ ಮತ್ತು ನಿಷ್ಪಕ್ಷಪಾತ ಇತಿಹಾಸಕಾರರ ಅಭಿಪ್ರಾಯ ಆಧರಿಸಿದ ಪಂಚಾಯಿತಿಯ ಮೂಲಕ ಈ ವಿವಾದವನ್ನು ವಿಧಾಯಕವಾಗಿ ಬಗೆಹರಿಸಿಕೊಳ್ಳಬಹುದಾದ ಸಾಧ್ಯತೆಗಳನ್ನು ಉಲ್ಲಂಘಿಸಿ, ಮತಾಂಧತೆಯ 'ಸಮೂಹಸನ್ನಿ'ಯ ಬಲಪ್ರಯೋಗದಿಂದ ರಾಜಕೀಯ ಧಾರ್ಮಿಕ ಅಧಿಕಾರವನ್ನು ಲಪಟಾಯಿಸುವ ತಂತ್ರವನ್ನು, ಕಾರಂತರು ಸರಳವಾಗಿ ಸಂವಿಧಾನಾತ್ಮಕ ಹಕ್ಕು ಎಂದು ಹೇಳಿರುವುದು, ಇನ್ನೊಂದು ಗುಂಪಿನ ಸಂವಿಧಾನಾತ್ಮಕ ಹಕ್ಕಿನ ಮೇಲಿನ ಆಕ್ರಮಣವನ್ನು ಸಮರ್ಥಿಸಿದಂತಾಗುತ್ತದೆ.

ಚುನಾವಣಾ ರಾಜಕಾರಣದ ಕುತಂತ್ರಗಳನ್ನು ಪ್ರಸ್ತಾಪಿಸಿರುವ ಕಾರಂತರು, ತಾವು ೧೯೫೭ರಲ್ಲಿ ಪ್ರಜಾಸಮಾಜವಾದೀ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದಾಗ, ಕಾಂಗ್ರೆಸ್ ಪಕ್ಷದವರು ಧರ್ಮಸ್ಥಳದ ದೇವರ ಹೆಸರಿನಲ್ಲಿ ಕಾಯಿ ಮುಟ್ಟಿಸಿದ್ದನ್ನು ಮತ್ತು ಮುಸ್ಲಿಮರನ್ನು ಪಾಕಿಸ್ತಾನಕ್ಕೆ ರವಾನಿಸುತ್ತೇವೆಂದು ಬೆದರಿಸಿ ಓಟು ಸಂಪಾದಿಸಿದ್ದನ್ನು ನೆನಪು ಮಾಡಿಕೊಂಡರೂ, ಆರ್.ಎಸ್.ಎಸ್ ಪರಿವಾರದವರ ಸಹಿಸಂಗ್ರಹಣೆಯ ತಂತ್ರವು ಇದೇ ರೀತಿಯದ್ದಾಗಿದೆ ಎಂಬುದನ್ನು ಗಮನಿಸದಿರುವುದು ಆಶ್ಚರ್ಯವಾಗಿ ಕಾಣುತ್ತದೆ.

೧೯೫೮'ಲ್ಲಿ ಕಾರಂತರು ಬರೆದ - 'ರಾಜಕಾರಣ ಮತ್ತು ವ್ಯಕ್ತಿತ್ವ' (ನೋಡಿ: ಬಿಡಿಬರಹಗಳು: ಪು. ೩೬೯) ಎಂಬ ಲೇಖನದ ಕೆಲವು ಅಂಶಗಳು ಈಗಿನ ಪರಿಸ್ಥಿತಿಗೆ ಪ್ರಸ್ತುತವಾಗಿವೆ - "ಎಲ್ಲಿ ಪ್ರಜೆಯು ಮೂಕನಾಗಿರುತ್ತಾನೆಯೋ, ವಿಚಾರಹೀನನಾಗಿರುತ್ತಾನೆಯೋ ಅಲ್ಲಿ ಗೊಂಬೆಗಳೆಲ್ಲಾ ದೇವರುಗಳೇ. ಇಂಥಲ್ಲಿ ದೈವತ್ವಸಿದ್ಧಿ ಬಹುಸುಲಭ. ಅಜ್ಞಾನ, ಭಕ್ತಿಗಳ ಲಾಭಗಳೆಲ್ಲ ಈ ದೇವರುಗಳಿಗೆ ದೊರೆಯುತ್ತದೆ. ರಾಜಕೀಯ ಇಂದು ನಮ್ಮ ದೇವರಾಗಿರುತ್ತದೆ. ಕುರುಡು

ನಂಬಿಕೆ, ಕುರುಡು ವಿಶ್ವಾಸಗಳ ತಳಹದಿಯಲ್ಲೇ ಈ ವ್ಯಾಪಾರ ಬೆಳೆಯುತ್ತಿದೆ. ಮತಗಳಿಗಿದ್ದ ಪೂರ್ವಯುಗಗಳ ಅಂಧಶ್ರದ್ಧೆಗಳ ಬೆಂಬಲಗಳು ಇನ್ನಷ್ಟು ಅಧಿಕ ಪ್ರಮಾಣದಲ್ಲಿ ಇಂದು ರಾಜಕೀಯ ಕ್ಷೇತ್ರದಲ್ಲೂ ಕಾಲಿರಿಸಿದೆ. ಈ ಪ್ರವೃತ್ತಿ ದಿನದಿನ ಬೆಳೆಯುತ್ತಿದೆ. ಅದರಿಂದ ಲಾಭ ಬಯಸುವವರು ಎಂದೂ ಈ ಪ್ರವೃತ್ತಿಯನ್ನು ತಡೆಯರು. ತಡೆಯುವುದು ಅವರ ಹಿತಕ್ಕಲ್ಲ. ಭಾರತದ ರಾಜಕೀಯ ಇಂದು ಮೂರ್ತಿ ಪೂಜಕರಿಂದಲೂ ತಕ್ಕುದಾದ ಮಣ್ಣಿನ ವಿಗ್ರಹಗಳಿಂದಲೂ ನಿರ್ಮಾಣಗೊಂಡಿರುವುದರಲ್ಲಿ ಯಾವ ಸೋಜಿಗವೂ ಇಲ್ಲ" ಈ ರೀತಿ ಅಭಿಪ್ರಾಯ ಹೊಂದಿರುವ ಕಾರಂತರ ಸಹಿಯನ್ನು ಸಂಪಾದಿಸಿರುವ ಆರ್.ಎಸ್.ಎಸ್. ಪರಿವಾರದವರು, ಕಾರಂತರೇ ಹೇಳಿರುವಂತೆ - "ಅಲ್ಲಿ ದೇವಸ್ಥಾನ ಬೇಕೇ ಬೇಡವೇ ? ಎಂಬುದಕ್ಕೆ ನನ್ನ ಒಪ್ಪಿಗೆ ಬೇಕಿಲ್ಲವಾದರೂ ನನ್ನನ್ನು ಈ ಪ್ರಕರಣದಲ್ಲಿ ಎಳೆದು ತರುವ ಸಲುವಾಗಿ ಇಲ್ಲಿಗೆ ಬಂದು ಸಹಿ ಪಡೆದಿದ್ದಾರೆ." ಹೆಸರಿನ ಪ್ರಭಾವವನ್ನು ತಮ್ಮ ಪ್ರಚಾರ ಸಾಧನವನ್ನಾಗಿ ಬಳಸಿಕೊಳ್ಳಲು ಎಂಬ ಅರಿವು ಕಾರಂತರಿಗೆ ಗೊತ್ತಾಗದೇ ಹೋದದ್ದು ಹೇಗೆ ?

೧೯೮೬ರಲ್ಲಿ ಕಾಂಗ್ರೆಸ್ಸಿನ ಕೇಂದ್ರ ಸರ್ಕಾರ ಅಯೋಧ್ಯೆಯಲ್ಲಿ ದೇಗುಲದ ಶಿಲಾನ್ಯಾಸಕ್ಕೆ ಅನುಮತಿ ಕೊಟ್ಟು ಸಂದರ್ಭದ ರಾಜಕೀಯ ಲಾಭಕ್ಕಾಗಿ ಅನುಸರಿಸಿದ ಚತುರ ನೀತಿಯಿಂದಾಗಿಯೇ ಮುಂದಿನ ಪ್ರಮಾದಗಳು ನಡೆದವು ಎಂದು ಕಾರಂತರು ತರ್ಕಿಸಿರುವುದು ಸರಿಯಾದದ್ದಾದರೂ ೧೯೯೨ರ ಡಿಸೆಂಬರ್ ೬ರಂದು ಸಂಭವಿಸಿದ ವಿದ್ಯಮಾನಗಳು ಕೂಡ ಅಂತಹದ್ದೇ ರಾಜಕೀಯ ಲಾಭದ ಚತುರ ನೀತಿಯ ತಂತ್ರವೆಂದು ಕಾರಂತರು ಪರಿಭಾವಿಸಿದಂತೆ ಕಾಣುವುದಿಲ್ಲ.

ಆರ್.ಎಸ್.ಎಸ್. ಪರಿವಾರದ ಜೊತೆಯಲ್ಲಿ ಸೇರಿಕೊಂಡಿರುವ ಬಾಳಠಾಕ್ರೆಯ ಶಿವಸೇನೆ ಈ ಸಂದರ್ಭದ ಹಿಂಸಾಚಾರದ ಭಯೋತ್ಪಾದನೆಯ, ಮೂಲಕ ಬೊಂಬಾಯಿಯಲ್ಲಿ ನೆಲೆಸಿದ್ದ ಕನ್ನಡಿಗರನ್ನು, ತಮಿಳರನ್ನು, ತೆಲುಗರನ್ನು ಎತ್ತಂಗಡಿ ಮಾಡಲು ಬಳಸಿಕೊಂಡಿರುವುದು ಕಾರಂತರಿಗೆ ಸ್ಪಷ್ಟವಾಗಿ ಗೋಚರಿಸದಿರುವುದು ವಿಷಾದದ ಸಂಗತಿಯಾಗಿದೆ.

ತುರ್ತು ಪರಿಸ್ಥಿತಿಯ ಸರ್ವಾಧಿಕಾರದ ವಿರುದ್ಧ ಪ್ರತಿಭಟಿಸಿದ ಮತ್ತು ಪರಿಸರ ವಿನಾಶದ ಕೈಗಾ ಯೋಜನೆಯ ವಿರುದ್ಧ ಹೋರಾಡಿದ ಕಾರಂತರು, ಮತಾಂಧತೆಯ 'ಸಮೂಹ ಸನ್ನಿ'ಯ ಒತ್ತಡಕ್ಕೆ ದೇಶವೇ ತತ್ತರಿಸುತ್ತಿರುವ ಕಾಲದಲ್ಲಿ ವಿವೇಕದ ಮಾತುಗಳನ್ನು ಹೇಳಲು ಹಿಂಜರಿಯಬಾರದು.

ಡಾ. ಶಿವರಾಮ ಕಾರಂತರಂತಹ ಪ್ರಬುದ್ಧ ಹಿರಿಯರು ಅಮಾಯಕ ಜೀವಹಾನಿಯ ದುರಂತಕ್ಕೆ ಯಾವುದೇ ರೀತಿಯಲ್ಲಿ ಸಮರ್ಥನೆ ದೊರೆಯದಂತೆ ನೋಡಿಕೊಳ್ಳುವದು ನೈತಿಕ ಜವಾಬ್ದಾರಿಯಾಗಿದೆ ಎಂಬುದನ್ನು ಅತ್ಯಂತ ವಿನಮ್ರತೆಯಿಂದ ನಿವೇದಿಸುತ್ತೇನೆ. ಕಾರಂತರ ಲೇಖನದ ಬಹುಪಾಲು ವಿಚಾರಗಳು ಈ ಆಶಯಗಳನ್ನು ಹೊಂದಿರುವುದು ಹೆಮ್ಮೆಯ ಸಂಗತಿಯಾಗಿದೆ.

ಕೆ. ರಾಮದಾಸ್
ಸಂಚಾಲಕ

# ಸಾಯಿಬಾಬಾ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲು ಒತ್ತಾಯ

**ಕೆ.ರಾಮದಾಸ್**
**ಸಂಚಾಲಕ**
**ಕರ್ನಾಟಕ ಪ್ರಗತಿರಂಗ, ಮೈಸೂರು**

**ದಿನಾಂಕ. ೧೪.೬.೧೯೯೩**

ಜೂನ್ ೬ರಂದು ಪುಟ್ಟಪರ್ತಿಯ ಪ್ರಶಾಂತಿ ನಿಲಯದಲ್ಲಿ ಅತ್ಯಂತ ನಿಗೂಢ ಸನ್ನಿವೇಶದಲ್ಲಿ ನಡೆಯಿತೆನ್ನಲಾಗಿರುವ ಸಾಯಿಬಾಬಾ ಹತ್ಯೆಯ ಪ್ರಯತ್ನದ ಪ್ರಕರಣ, ಪ್ರಶಾಂತಿ ನಿಲಯದ ಅವ್ಯವಹಾರಗಳ ವಿರುದ್ಧ ಎದ್ದ ಆಂತರಿಕ ಬಂಡಾಯವನ್ನು ದಮನ ಮಾಡುವ ತಂತ್ರದ ಕಟ್ಟುಕತೆಯಾಗಿದೆ.

ಪ್ರಶಾಂತಿ ನಿಲಯದಲ್ಲಿ ಸಾಯಿಬಾಬಾ ಅವರ ಖಾಸಗಿ ವಲಯದ ನಿಕಟ ವರ್ತಿಗಳಾಗಿದ್ದ, ಯುವಕರ ಹತ್ಯಾಕಾಂಡದಲ್ಲಿ ಸಾಯಿಬಾಬಾ ಮತ್ತು ಅವರ ಸೋದರ ಜಾನಕಿರಾಮ್ ಮುಂತಾದವರ ನಿಗೂಢ ಕೈವಾಡವಿರುವುದು ಸಂಭವನೀಯವಾಗಿರುವುದರಿಂದ ಕೂಡಲೇ ಅವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಬೇಕೆಂದು ಕರ್ನಾಟಕ ಪ್ರಗತಿರಂಗ ಒತ್ತಾಯಪಡಿಸುತ್ತದೆ.

ಪೊಲೀಸರಿಂದ ಹತ್ಯೆ ಮಾಡಲ್ಪಟ್ಟರೆಂದು ಹೇಳಲಾಗಿರುವ ಯುವಕರ ಕುಟುಂಬ ವರ್ಗದವರ ಹೇಳಿಕೆಗಳನ್ನು ಮತ್ತು ಪೊಲೀಸ್ ಕಾರ್ಯಾಚರಣೆಯ ವಿದ್ಯಮಾನಗಳನ್ನು ಗಮನಿಸಿದರೆ, ಯುವಕರ ಸಾವಿಗೆ ಚಾಕು, ಚೂರಿ, ಸೈನೇಡ್ ಮತ್ತು ಬಾಂಬುಗಳ ಸುಳ್ಳು ಪುರಾವೆಗಳ ಮೂಲಕ ಹತ್ಯಾಕಾಂಡವನ್ನು ಸಮರ್ಥಿಸಲು, ಪೊಲೀಸರ ಕಪಟ ನಾಟಕದ ತನಿಖೆ ಷಾಮೀಲಾದಂತೆ ಕಂಡುಬರುತ್ತದೆ.

ಸರ್ಕಾರದ ಉನ್ನತ ಅಧಿಕಾರ ವರ್ಗಕ್ಕೆ ಸೇರಿದ ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು, ಸಾಯಿಬಾಬಾ ಅವರ ಹಿತಾಸಕ್ತಿಗಳನ್ನು ಕಾಪಾಡಲು ಕಾಳಜಿ

ವಹಿಸಿರುವುದರಿಂದ ಪ್ರಶಾಂತಿ ನಿಲಯದಲ್ಲಿ ಸಂಭವಿಸಿದ ಹತ್ಯಾಕಾಂಡದ ಸತ್ಯಸಂಗತಿಗಳು ಹೊರ ಬರುವಂತೆ ಕಾಣುವುದಿಲ್ಲ.

ಕೇಂದ್ರ ಗೃಹಸಚಿವ ಎಸ್.ಬಿ. ಚವಾಣ್ ಅವರು ತಮ್ಮ ಖುದ್ದು ಉಸ್ತುವಾರಿಯಲ್ಲಿ ಭಾರಿಯಾದ ಬಿಗಿ ಭದ್ರತಾ ಏರ್ಪಾಡು ಮಾಡಿರುವುದು ಮತ್ತು ವಿಶೇಷ ಪೊಲೀಸ್ ವ್ಯವಸ್ಥೆಯನ್ನು ಮಾಡಿರುವುದನ್ನು ಗಮನಿಸಿದರೆ ಪ್ರಶಾಂತಿ ನಿಲಯದ ವಿರುದ್ಧ ಹುಟ್ಟಿದ ವ್ಯಾಪಕ ಬಂಡಾಯವನ್ನು ದಮನ ಮಾಡುವ ಕ್ರಮದಂತೆ ತೋರುತ್ತದೆ.

ಪ್ರಕರಣದ ಬಗ್ಗೆ ಸಾಯಿಬಾಬ ಮೌನವಾಗಿರುವುದು ಮತ್ತು ಅವರ ಸೋದರ ವರ್ಗದವರು ಪ್ರಶಾಂತಿ ನಿಲಯದ ಉಸ್ತುವಾರಿಯಲ್ಲಿ ತೊಡಗಿರುವುದು ಅವ್ಯವಹಾರಗಳ ಮತ್ತು ಬಂಡಾಯದ ಅನುಮಾನವನ್ನು ದೃಢಪಡಿಸುತ್ತದೆ.

ಕಳೆದ ನಾಲ್ಕು ವರ್ಷಗಳಿಂದ ಕಾಡುಗಳ್ಳ ವೀರಪ್ಪನ್ ನಡೆಸುತ್ತಿರುವ ಹತ್ಯಾಕಾಂಡದ ಬಗ್ಗೆ ಇಷ್ಟು ಕಾಳಜಿ ವ್ಯಕ್ತಪಡಿಸದ ಸರ್ಕಾರದ ವರಿಷ್ಠರು ಸಾಯಿಬಾಬಾ ಹತ್ಯೆಯ ಪ್ರಕರಣದ ಬಗ್ಗೆ ತೋರಿಸುತ್ತಿರುವ ಆಸಕ್ತಿ ಆಶ್ಚರ್ಯವನ್ನು ಉಂಟುಮಾಡುತ್ತದೆ.

ಕೆ. ರಾಮದಾಸ್

# ಒಂದು ಸಂಕ್ಷಿಪ್ತ ವರದಿ

ಜಾತ್ಯತೀತ ಸಂಘಟನೆಗಳ ಒಕ್ಕೂಟ
ಮೈಸೂರು

ದಿನಾಂಕ. ೧೦.೨.೯೪

ಎಲ್ಲರಿಗೂ ನಮಸ್ಕಾರ,

ಹಿರಿಯರಾದ ಶ್ರೀ ಎಸ್. ನಿಜಲಿಂಗಪ್ಪನವರೆ, ಮಾನ್ಯ ಸಚಿವರಾದ ಶ್ರೀ ಅರ್ಜುನ ಸಿಂಗ್ ಅವರೆ, ಆಹ್ವಾನಿತ ಗಣ್ಯರೆ, ಮಹಿಳೆಯರೆ, ಮಹನೀಯರೆ,

I request honourable Minister Sri Arjun singh kindly to go through the English version of this report, as I am presenting it in Kannada.

ಜಾತ್ಯತೀತ ಸಂಘಟನೆಗಳ ಒಕ್ಕೂಟದ ಒಂದೂವರೆ ವರ್ಷದ ಚಟುವಟಿಕೆಗಳ ಈ ಸಂಕ್ಷಿಪ್ತ ವರದಿಯನ್ನು ನಿಮ್ಮೆಲ್ಲರ ಮುಂದಿಡಲು ನನಗೆ ಹೆಮ್ಮೆಯಾಗುತ್ತಿದೆ.

ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಒಡೆಯುವುದಕ್ಕೆ ಎರಡು ತಿಂಗಳು ಮೊದಲು ಕೊಡಗಿನ ಸೋಮವಾರ ಪೇಟೆಯ ಮಸೀದಿಯೊಂದರ ಮೇಲೆ ಹಾರಿಸಲಾಯಿತೆನ್ನಲಾದ ಪಾಕಿಸ್ತಾನದ ಧ್ವಜ ಪ್ರಕರಣ ಬಿ.ಜೆ.ಪಿ, ಆರ್.ಎಸ್.ಎಸ್ ಪರಿವಾರದವರಿಂದ ವಿಜೃಂಭಿತವಾಗಿ - ದಾಂಧಲೆಯಾಗಿ ಮೈಸೂರಿನ ನ್ಯಾಯಾಲಯಕ್ಕೆ ವರ್ಗಾಯಿಸಲ್ಪಟ್ಟು - ವಿಚಾರಣೆಗೆ ಬಂದ ಅಕ್ಟೋಬರ್ ೩, ೯೨ರಂದು ಆರೋಪಿಗಳ ಪರವಾಗಿ ವಕೀಲರಾಗಿ ಬಂದಿದ್ದ ಧೀಮಂತ ಹೋರಾಟಗಾರ ಶಾಸಕ ಶ್ರೀ ಎ.ಕೆ. ಸುಬ್ಬಯ್ಯನವರ ಮೇಲೆ ಪೊಲೀಸರು - ಪತ್ರಕರ್ತರ ಸಮ್ಮುಖದಲ್ಲಿ ನ್ಯಾಯಾಲಯದ ಆವರಣದಲ್ಲೇ ಆರ್.ಎಸ್.ಎಸ್ - ಬಿ.ಜೆ.ಪಿ ಮತಾಂಧರಿಂದ ಹಲ್ಲೆಯ ಪ್ರಯತ್ನ ನಡೆಯಿತು.

ಈ ಹಲ್ಲೆಯ ಪ್ರಕರಣವೇ ಸೆಕ್ಯೂಲರ್ ಫ್ರಂಟ್‌ನ ಸಂಸ್ಥಾಪನೆಗೆ ನಾಂದಿಯಾಯಿತು. ಘಟನೆಗೆ ಸ್ಪಂದಿಸಿದ ಮೈಸೂರಿನ ಎಲ್ಲ ಜಾತ್ಯತೀತ ಪಕ್ಷಗಳು, ಜನಪರ ಸಂಘಟನೆಗಳು ಸಾಹಿತಿ

- ಕಲಾವಿದರು ಜೊತೆಯಾಗಿ ಮತಾಂಧತೆಯ ವಿರುದ್ಧ ಹೋರಾಡಲು ಮತ್ತು ಭಾರತದ ಜಾತ್ಯತೀತ ರಾಷ್ಟ್ರೀಯ ಏಕತೆಯನ್ನು ಕಾಪಾಡಲು ದೇಶದಲ್ಲೇ ಮೊಟ್ಟಮೊದಲ ಜಾತ್ಯತೀತ ವೇದಿಕೆಯಾಗಿ ಸೆಕ್ಯೂಲರ್ ಫ್ರೆಂಟ್ ರೂಪಿತವಾಯಿತು. ಅಕ್ಟೋಬರ್ ೮, ೧೯೯೨ರಂದು ಮೈಸೂರಿನ ನ್ಯಾಯಾಲಯಕ್ಕೆ ಬಂದ ಶ್ರೀ ಸುಬ್ಬಯ್ಯನವರಿಗೆ ಬೆಂಬಲ ಸೂಚಿಸಲಾಯಿತಲ್ಲದೆ ಮತಾಂಧತೆಯನ್ನು ಖಂಡಿಸಲು ಮೆರವಣಿಗೆ ನಡೆಸಲಾಯಿತು.

ನವಂಬರ್ ೨೯, ೧೯೯೨ರಂದು ಖ್ಯಾತ ಲೇಖಕ ಶ್ರೀ ದೇವನೂರು ಮಹಾದೇವ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಏಕತೆಗಾಗಿ ಕೋಮುವಾದ ವಿರೋಧಿ ಜನಪರ ಸಮಾವೇಶ ನಡೆಸಲಾಯಿತು. ಖ್ಯಾತ ಸಾಹಿತಿ ಶ್ರೀ ಫಕೀರ್ ಮಹಮದ್ ಕಟ್ಪಾಡಿ ಉದ್ಘಾಟಿಸಿದ ಸಮಾವೇಶದಲ್ಲಿ ಶ್ರೀ ಎ.ಕೆ. ಸುಬ್ಬಯ್ಯ ಪ್ರಧಾನ ಭಾಷಣ ಮಾಡಿದರು. ಜನತಾ ದಳದ ಮಹಾ ಕಾರ್ಯದರ್ಶಿ ಶ್ರೀ ಸಿದ್ಧರಾಮಯ್ಯ, ಶಾಸಕ ವೈ.ಕೆ. ರಾಮಯ್ಯ ಮುಂತಾದವರು ಭಾಗವಹಿಸಿದ್ದರು.

ಡಿಸೆಂಬರ್ ೬ರ ಗಡುವು ಹತ್ತಿರವಾದಂತೆ ಮೈಸೂರಿನ ಗೋಡೆಗಳ ಮೇಲೆ ಮತಾಂಧತೆಯ ವಿಷಬೀಜ ಬಿತ್ತುವ ಬರವಣಿಗೆ ಕಾಣಲು ತೊಡಗಿದ ಕೂಡಲೇ ಪ್ರತಿಭಟಿಸಲಾಯಿತಲ್ಲದೆ ಮೈಸೂರಿನ ಶಾಂತಿ ಕಾಪಾಡಲು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಪೋಲಿಸ್ ಕಮೀಷನರ್ ಅವರನ್ನು ಒತ್ತಾಯಪಡಿಸಲಾಯಿತಲ್ಲದೆ ಬಾಬರಿ ಮಸೀದಿ ಒಡೆಯುವುದರ ವಿರುದ್ಧ ಡಿಸೆಂಬರ್ ೬ರಂದು ಬೆಳಗ್ಗೆ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಡಿಸೆಂಬರ್ ೬ರ ನಂತರ ಮೈಸೂರು ನಗರ ಕೋಮುಗಲಭೆಯಿಂದ ತತ್ತರಿಸಿ ಹೋಯಿತು. ಅನೇಕ ಅಮಾಯಕರು ಮತಾಂಧತೆಗೆ ಬಲಿಯಾದರು. ಗಲಭೆಯನ್ನು ನಿಯಂತ್ರಿಸಲು ಉನ್ನತ ಪೊಲೀಸ್ ಅಧಿಕಾರಿಗಳನ್ನು ಬದಲಾಯಿಸಿ, ದಕ್ಷ ಪೊಲೀಸ್ ಅಧಿಕಾರಿಗಳನ್ನು ನೇಮಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದರಿಂದ, ಪೋಲಿಸ್ ವ್ಯವಸ್ಥೆಯಲ್ಲಿ ಬದಲಾವಣೆಯಾಗಿ ಗಲಭೆ ನಿಯಂತ್ರಣಕ್ಕೆ ಬಂದಿತು.

ಕೋಮುಸೌಹಾರ್ದತೆ ಮತ್ತು ಶಾಂತಿಯನ್ನು ಕಾಪಾಡಲು ಸೋದರ ಸಂಘಟನೆಯಾದ ಮಾನವ ಸೌಹಾರ್ದ ಸಮಿತಿಯ ಜೊತೆಯಲ್ಲಿ ಡಿಸೆಂಬರ್ ೨೯, ೧೯೯೨ರಂದು ಮೈಸೂರಿನ ಸಾಹಿತಿ-ಕಲಾವಿದರ ಸಹಕಾರದಿಂದ ರೂಪಿಸಲಾಯಿತು. ಡಾ.ಯು.ಆರ್. ಅನಂತಮೂರ್ತಿ ಪ್ರೊ.ಷೇಕ್ ಅಲಿ, ಡಾ. ಚದುರಂಗ ಮೈಸೂರಿನ ರಂಗ ಕಲಾವಿದರು ಭಾಗವಹಿಸಿ ಶಾಂತಿಗಾಗಿ ಜನತೆಯನ್ನು ಪ್ರಾರ್ಥಿಸಲಾಯಿತು.

ಜನವರಿ ೧, ೧೯೯೩ರಂದು ಸಹಸ್ರಾರು ಜನರ ಶಾಂತಿ ಮೆರವಣಿಗೆಯನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಂ.ಎನ್. ಜೋಯಿಸ್ ಅವರ ನಾಯಕತ್ವದಲ್ಲಿ ನಡೆಸಲಾಯಿತು. ಅನೇಕ ಧಾರ್ಮಿಕ ಮುಖಂಡರು, ರಾಜ್ಯದ ಹಿರಿಯ ರಾಜಕೀಯ ಮುಖಂಡರಾದ ಶ್ರೀ ಹೆಚ್.ಡಿ. ದೇವೇಗೌಡರು, ಎಂ.ವಿ. ಕೃಷ್ಣರಾವ್ ಮುಂತಾದ ಗಣ್ಯರು ಭಾಗವಹಿಸಿದ್ದರು.

ಫೆಬ್ರವರಿ ೨೧, ೧೯೯೩ರಂದು ಜಾತ್ಯತೀತ ಸಂವಿಧಾನ ಮತ್ತು ಮತಾಂಧತೆಯ ಸವಾಲುಗಳು ಎಂಬ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಫ್ರಂಟ್‌ಲೈನ್ ಪತ್ರಿಕೆಯ ಸಂಪಾದಕರಾದ ಶ್ರೀ ಎನ್. ರಾಮ್ ಅವರು ಆಶಯ ಭಾಷಣ ಮಾಡಿದರು. ಶ್ರೀ ವಿ. ಶ್ರೀನಿವಾಸಪ್ರಸಾದ್, ಶ್ರೀ ಕೋ. ಚೆನ್ನಬಸಪ್ಪ, ಶ್ರೀ ಎ.ಕೆ. ಸುಬ್ಬಯ್ಯ, ಪ್ರೊ. ಬಷೀರ್ ಹುಸೇನ್ ಮುಂತಾದವರು ಪಾಲ್ಗೊಂಡಿದ್ದ ಈ ಸಂಕಿರಣ ಅಪಾರ ಜನ ಮನ್ನಣೆ ಪಡೆಯಿತು.

ಆಗಸ್ಟ್ ೨೯, ೧೯೯೩ರಂದು ಮೈಸೂರಿನ ಶ್ರೀ ಸುತ್ತೂರು ಶಿವರಾತ್ರಿ ದೇಶೀಕೇಂದ್ರ ಸ್ವಾಮಿಜಿಯವರ ಅಧ್ಯಕ್ಷತೆಯಲ್ಲಿ ಸದ್ಭಾವನಾ ಸಮಾವೇಶ ರೂಪಿಸಲಾಗಿತ್ತು. ಮಾಜಿ ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿಯವರ ಉದ್ಘಾಟನಾ ಭಾಷಣವನ್ನು ಶ್ರೀ ಕೋ. ಚೆನ್ನಬಸಪ್ಪ ಅವರು ಮಂಡಿಸಿದರು. ಕುವೆಂಪು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ. ಗಜೇಂದ್ರಗಡ್ ಅವರು ಪ್ರಧಾನ ಭಾಷಣ ಮಾಡಿದರು.

ಡಿಸೆಂಬರ್ ೬, ೧೯೯೩ರಂದು ಹಿರಿಯ ಗಾಂಧಿವಾದಿ ಪ್ರೊ.ಬಿ.ಆರ್. ಪ್ರಾಣೇಶರಾವ್ ಅವರ ಅಧ್ಯಕ್ಷತೆಯಲ್ಲಿ ಜಾತ್ಯತೀತ ಸಂವಿಧಾನ ಸಂರಕ್ಷಣಾ ದಿನವನ್ನು ಆಚರಿಸಲಾಯಿತು. ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಶ್ರೀ ಎಂ.ಸಿ. ನಾಣಯ್ಯ, ಶಾಸಕರಾದ ಶ್ರೀ ಎ.ಕೆ. ಸುಬ್ಬಯ್ಯ, ಶ್ರೀ ಡಿ.ಬಿ. ಚಂದ್ರೇಗೌಡ, ಶ್ರೀ ಕೋ. ಚೆನ್ನಬಸಪ್ಪ ಮತ್ತು ಕನ್ನಡ ಸಂಸ್ಕೃತಿ ಸಚಿವರಾದ ಶ್ರೀ ಹೆಚ್. ವಿಶ್ವನಾಥ್ ಅವರು ಭಾಗವಹಿಸಿದ್ದರು.

ಜಾತ್ಯತೀತ ಪಕ್ಷಗಳ - ಜನಪರ ಸಂಘಟನೆಗಳ ಸಾಹಿತಿ-ಕಲಾವಿದರ ಅಪೂರ್ವವಾದ ಸಂಮಿಲನದಿಂದ ಮತ್ತು ಜನತೆಯ ಸಹಕಾರದಿಂದ ಸೆಕ್ಯೂಲರ್ ಫ್ರಂಟ್ ಬೆಸೆಯಲ್ಪಟ್ಟು ಪ್ರೀತಿ-ವಿಶ್ವಾಸಗಳಿಂದ ಭಾರತದ ಮುಂದಿನ ಭವಿಷ್ಯದ ಪುಟ್ಟಮಾದರಿಯಾಗಿ ಕೆಲಸಮಾಡಿದೆ. ಈ ರಾಷ್ಟ್ರೀಯ ಸಂಕಲ್ಪವನ್ನು ಎಲ್ಲ ಜಾತ್ಯತೀತ ರಾಜಕೀಯ ಪಕ್ಷಗಳು ರಾಷ್ಟ್ರೀಯ ಮಟ್ಟದಲ್ಲಿ ರೂಪಿಸಬೇಕೆಂಬುದು ನಮ್ಮ ಹಂಬಲವಾಗಿದೆ. ಈ ಸಮಾವೇಶ ಈ ಸಂಕಲ್ಪಕ್ಕೆ ನಾಂದಿಯಾಗಲಿ ಎಂದು ಹಾರೈಸುತ್ತೇನೆ ಮತ್ತು ಇದಕ್ಕಾಗಿ ಶ್ರಮಿಸಿದ ಎಲ್ಲರ ಸಹಕಾರವನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

# ವಿಚಾರಣಾ ತಂಡದ ವರದಿ

ಕರ್ನಾಟಕ ವಿಚಾರವಾದಿ ಒಕ್ಕೂಟ ದಿನಾಂಕ. ೨.೩.೧೯೯೨
ಮೈಸೂರು

ಮೈಸೂರಿನ ಕುವೆಂಪುನಗರದ ಶ್ರೀ ಎಲ್. ಸುಬ್ಬಯ್ಯನವರ ಮನೆಯಲ್ಲಿ ಈಚೆಗೆ ಇದ್ದಕ್ಕಿದ್ದಂತೆ ನಡೆಯಿತೆನ್ನಲಾದ ಬೆಂಕಿಯ ಪ್ರಕರಣ ಮತ್ತು ಈ ಮನೆಯ ಸುತ್ತಮುತ್ತಲಿನ ಮನೆಗಳ ಮೇಲೆ ಕಲ್ಲುಬೀಳುವ ಘಟನೆಗಳನ್ನು 'ಭಾನಾಮತಿ' ಪ್ರಕರಣವೆಂದೂ, ಭೂತ ಚೇಷ್ಟೆಯೆಂದೂ, ದೈವಲೀಲೆಯ ಪ್ರಕರಣವೆಂದೂ ಪ್ರಚಾರ ಪಡೆದಿರುವುದರಿಂದ ಕರ್ನಾಟಕ ವಿಚಾರವಾದಿ ಒಕ್ಕೂಟ ಈ ಘಟನೆಗಳ ಬಗ್ಗೆ ವೈಜ್ಞಾನಿಕ ತನಿಖೆ ನಡೆಸಲು ತೀರ್ಮಾನಿಸಿತು.

ಈ ತನಿಖೆಯ ಮೊದಲ ಹಂತವಾಗಿ ದಿನಾಂಕ. ೨೮.೨.೧೯೯೨ರಂದು ಒಕ್ಕೂಟದ ಕೆ. ರಾಮದಾಸ್ ಅವರು ಕೆಲವು ಪತ್ರಿಕಾ ಪ್ರತಿನಿಧಿಗಳ ಜೊತೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ, ಪತ್ರಕರ್ತರ ಮತ್ತು ಪೊಲೀಸರ ಸಮ್ಮುಖದಲ್ಲಿ ಮನೆಯವರನ್ನು ವಿಚಾರಣೆ ಮಾಡಿ, ಸುಟ್ಟ ವಸ್ತುಗಳನ್ನು ಪರಿಶೀಲಿಸಿ ಕೆಲವು ಮಾಹಿತಿಗಳನ್ನು ಸಂಗ್ರಹಿಸಿ, ಮನೆಯಲ್ಲಿ ಬೆಂಕಿ ಕಾಣಿಸಿತೆನ್ನಲಾದ ಬಾಗಿಲಿಗೆ ಮತ್ತೊಂದು ಪರದೆಯನ್ನು ಕಟ್ಟಿಸಿ ಅದನ್ನು ಎಚ್ಚರದಿಂದ ಗಮನಿಸುವಂತೆ ತಿಳಿಸಿ ಬಂದರು. ಮನೆಯಲ್ಲಿ ಪೊಲೀಸ್ ಕಾವಲು ಏರ್ಪಾಡಾಗಿತ್ತು.

ದಿನಾಂಕ. ೨೮.೨.೧೯೯೨ರಿಂದ ಈವರೆಗೂ ಆ ಮನೆಯಲ್ಲಿ ಯಾವುದೇ ರೀತಿಯ ಘಟನೆಗಳು ಸಂಭವಿಸಿಲ್ಲವೆಂದು ವಿಚಾರಣೆಯಿಂದ ತಿಳಿದುಬಂದಿದೆ.

ಕರ್ನಾಟಕ ವಿಚಾರವಾದಿ ಒಕ್ಕೂಟ, ಈಗ ಅಲ್ಲಿ ನಿಗೂಢ ಅಥವಾ ಪ್ರತ್ಯಕ್ಷ ಸ್ವರೂಪದ ಘಟನೆಗಳು ನಡೆಯುತ್ತಿಲ್ಲವಾದ್ದರಿಂದ ವೈಜ್ಞಾನಿಕ ತನಿಖೆಯ ಅಗತ್ಯವಿಲ್ಲವೆಂಬ ತೀರ್ಮಾನಕ್ಕೆ ಬಂದಿದೆ. ಈ ಘಟನೆಗಳ ಬಗ್ಗೆ ಸಂಗ್ರಹಿಸಲಾದ ಸಾಮಾನ್ಯ ಮಾಹಿತಿಗಳು ಮತ್ತು ವಿಚಾರಣೆಯ

ಆಧಾರದ ಮೇಲೆ ಇದೊಂದು ಸಾಮಾನ್ಯ ಘಟನೆ ಎಂದು ಭಾವಿಸಿ, ವಿಚಾರಣಾ ತಂಡ ಈ ಕೆಳಗಿನ ತೀರ್ಮಾನಕ್ಕೆ ಬಂದಿದೆ.

ಘಟನೆ ನಡೆಯಿತೆನ್ನಲಾದ ಮನೆಯವರ ಹೇಳಿಕೆಗಳಲ್ಲಿರುವ ವೈರುಧ್ಯಗಳಿಂದ ಮತ್ತು ಸುಟ್ಟಬಟ್ಟೆಗಳು, ಕಾಗದಗಳು, ಪರದೆಗಳನ್ನು ಪರಿಶೀಲಿಸಿದ ನಂತರ ಇದು ಯಾರದೋ ಕಿಡಿಗೇಡಿತನದ ಕುಚೇಷ್ಟೆಯ ಪ್ರಕರಣವೆಂಬ ತೀರ್ಮಾನಕ್ಕೆ ಬಂದಿದ್ದೇವೆ. ಈ ಸಾಮಾನ್ಯ ಘಟನೆಯ ಪ್ರಚಾರ ಪಡೆದು, ಜನರಲ್ಲಿ ರೂಢಿಗತವಾಗಿ ಬಂದಿರುವ ಮೂಢ ನಂಬಿಕೆಗಳು, ಇದನ್ನು ಭೂತಚೇಷ್ಟೆ, ಪವಾಡ, ದೈವಲೀಲೆ, ಭಾನಾಮತಿ ಪ್ರಕರಣವೆಂದು ವಿಜೃಂಭಿಸಲು ಕಾರಣವಾಗಿವೆ.

ಇದು ಭೂತಚೇಷ್ಟೆಯಾಗಲಿ, ಪವಾಡವಾಗಲಿ, ದೈವಲೀಲೆಯಾಗಲಿ ಅಥವಾ ಭಾನಾಮತಿಯಾಗಲಿ ಆಗಿರದೆ ಮನುಷ್ಯನ ಕುಚೇಷ್ಟೆಯ ನಿಗೂಢ ಪ್ರಕರಣವಾಗಿದೆ. ಪೊಲೀಸರ ಕಾವಲು ಬಿಗಿಯಾದ ನಂತರ ಈ ಘಟನೆಗಳು ಪ್ರತ್ಯಕ್ಷವಾಗಿ ನಡೆಯದಿರುವುದು ನಮ್ಮ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಪೊಲೀಸರ ಸಮ್ಮುಖದಲ್ಲಾಗಲಿ ಅಥವಾ ವಿಚಾರಣಾ ತಂಡದ ಸಮ್ಮುಖದಲ್ಲಾಗಲಿ ಅಥವಾ ಪತ್ರಕರ್ತರ ಸಮ್ಮುಖದಲ್ಲಾಗಲಿ ಈ ಘಟನೆಗಳು ನಡೆಯದಿರುವುದರಿಂದ ಈ ಪ್ರಕರಣ ವೈಜ್ಞಾನಿಕ ತನಿಖೆಗೆ ಅರ್ಹವಾಗಿಲ್ಲವೆಂದು ನಾವು ಭಾವಿಸಿದ್ದೇವೆ. ಎಲ್ಲೇ ಆಗಲಿ, ಅಲೌಕಿಕ ಘಟನೆಗಳು ಯಾವ ರೀತಿಯಲ್ಲೂ ನಡೆಯಲು ಸಾಧ್ಯವಿಲ್ಲವೆಂಬುದು ನಮ್ಮ ಅಭಿಪ್ರಾಯ.

ಈಗ ನಿಂತಿರುವ ಈ ಘಟನೆಗಳು ಯಾವ ಮಂತ್ರ-ತಂತ್ರದ ಬಲದಿಂದಾಗಲಿ ನಿಂತಿರದೆ ಪೊಲೀಸರ ಬಿಗಿಯಾದ ಕಾವಲಿನ ಭೀತಿಯಿಂದ ನಿಂತಿದೆ ಎನ್ನುವುದರಲ್ಲಿ ಯಾವ ಅನುಮಾನವು ನಮಗೆ ಕಂಡುಬಂದಿಲ್ಲ.

ಜಗತ್ತಿನಲ್ಲಿ ವಿಜ್ಞಾನಕ್ಕೆ ಗೊತ್ತಿಲ್ಲದ ಅನೇಕ ನೈಸರ್ಗಿಕ ವಿಚಾರಗಳು ಇವೆಯಾದರೂ, ಕಾರ್ಯ-ಕಾರಣ ಸಂಬಂಧವಿಲ್ಲದ ಪವಾಡಗಳಾಗಲಿ, ಭೂತ ಚೇಷ್ಟೆಗಳಾಗಲಿ, ದೈವಲೀಲೆಗಳಾಗಲಿ ನಡೆಯುವುದು ಸಾಧ್ಯವಿಲ್ಲವೆಂದು ನಾವು ಖಚಿತವಾಗಿ ಹೇಳುತ್ತೇವೆ. ಆದ್ದರಿಂದ ಸಾರ್ವಜನಿಕರು ಇಂತಹ ಘಟನೆಗಳನ್ನು ಅತಿಮಾನುಷ ಘಟನೆಗಳೆಂದು ಭಾವಿಸದೆ, ಮೌಢ್ಯಗಳಿಗೆ ಆಸ್ಪದ ಕೊಡದೆ ವೈಜ್ಞಾನಿಕ ಮನೋಧರ್ಮ ರೂಪಿಸಿಕೊಳ್ಳಬೇಕೆಂದು ವಿನಂತಿಸುತ್ತೇವೆ.

ಈ ಘಟನೆಗಳ ಬಗ್ಗೆ ವಿಚಾರಣಾ ತಂಡ ದಿನಾಂಕ. ೨.೩.೯೯ರಂದು ಎಲ್ಲ ಮಾಹಿತಿಗಳನ್ನು ಕೂಲಂಕಷವಾಗಿ ಚರ್ಚಿಸಿ ಈ ವರದಿಯನ್ನು ಸಿದ್ಧಪಡಿಸಿದೆ. ಈ ಹಿಂದೆ ಉತ್ತರ ಕರ್ನಾಟಕದ ಕೆಲವು ಊರುಗಳಲ್ಲಿ ನಡೆಯಿತೆನ್ನಲಾದ 'ಭಾನಾಮತಿ' ಪ್ರಕರಣಗಳ ಬಗ್ಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಶ್ರೀ ಹೆಚ್. ನರಸಿಂಹಯ್ಯನವರು ನೇಮಿಸಿದ್ದ ವೈಜ್ಞಾನಿಕ ತನಿಖೆಯ ತಂಡದ ವರದಿಯ ಅಂಶಗಳನ್ನು ನಾವು ಈ ಸಂದರ್ಭದಲ್ಲಿ ಮಾನದಂಡವಾಗಿ ಬಳಸಿಕೊಂಡಿದ್ದೇವೆ.

ವಿಚಾರಣಾ ತಂಡದಲ್ಲಿ ಪ್ರೊ.ಜೆ.ಆರ್. ಲಕ್ಷ್ಮಣರಾವ್ (ಕರ್ನಾಟಕ ವಿಜ್ಞಾನ ಪರಿಷತ್ತು,) ಕೆ. ರಾಮದಾಸ್ (ಕರ್ನಾಟಕ ವಿಚಾರವಾದಿ ಒಕ್ಕೂಟ,) ಪ್ರೊ.ಕೆ. ಶ್ರೀನಿವಾಸನ್ (ನಿವೃತ್ತ ಪ್ರಾಧ್ಯಾಪಕರು), ಡಾ. ವಿ. ಲಕ್ಷ್ಮೀನಾರಾಯಣ, (ಪಿ.ಯು.ಸಿ.ಎಲ್)ಪ್ರೊ. ಜಿ.ಹೆಚ್. ನಾಯಕ್ (ಕನ್ನಡ ಅಧ್ಯಯನ ಸಂಸ್ಥೆ) ಇವರು ಭಾಗವಹಿಸಿದ್ದರು.

ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ಭಾನಾಮತಿ ಪ್ರಕರಣಗಳ ಬಗ್ಗೆ ವೈಜ್ಞಾನಿಕ ತನಿಖೆ ನಡೆಸಿದ ತಂಡದ ವರದಿಯಲ್ಲಿ ಈ ಕೆಳಗಿನ ಅಂಶಗಳನ್ನು ಈ ಘಟನೆಗಳಿಗೆ ಕಾರಣವೆಂದು ತೀರ್ಮಾನಿಸಿದೆ.

1. ಮನೋರೋಗದಿಂದ ನರಳುವ ವ್ಯಕ್ತಿಗಳು ತಮಗೆ ಗೊತ್ತಿಲ್ಲದೆಯೇ ನಡೆಸುವ ಕೈಚಳಕಗಳು.
2. ಸುಲಭವಾಗಿ ಜನರಿಂದ ಹಣಕೀಳಲು ಉಂಟುಮಾಡುವ ಭಯೋತ್ಪಾದಕ ತಂಡಗಳ ಕಿಡಿಗೇಡಿಗಳು ಉಂಟುಮಾಡುವ ನಿಗೂಢ ಘಟನೆಗಳು.
3. ದೈಹಿಕ ರೋಗಗಳಿಂದ ನರಳುವ ವ್ಯಕ್ತಿಗಳಿಂದ ಹಣಕೀಳಲು ಮಾಡುವ ಘಟನೆಗಳು.

*(ನೋಡಿ: 'ಭಾನಾಮತಿ' - ಡಾ.ಸಿ.ಆರ್. ಚಂದ್ರಶೇಖರ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು)

1. ಪ್ರೊ.ಜೆ.ಆರ್. ಲಕ್ಷ್ಮಣರಾವ್ (ಸಹಿ )
2. ಪ್ರೊ.ಕೆ. ಶ್ರೀನಿವಾಸನ್ "
3. ಪ್ರೊ. ಜಿ.ಹೆಚ್. ನಾಯಕ್ "
4. ಡಾ. ವಿ. ಲಕ್ಷ್ಮೀನಾರಾಯಣ "
5. ಕೆ. ರಾಮದಾಸ್ "

# ಮೌಢ್ಯಪ್ರಸಾರದ ಕುಂಭಮೇಳಕ್ಕೆ ಸರ್ಕಾರಿ ಹಣದ ಅಪವ್ಯಯಕ್ಕೆ ಖಂಡನೆ

ಕೆ. ರಾಮದಾಸ್ ದಿನಾಂಕ. ೧೫.೨.೧೯೯೫

ಕರ್ನಾಟಕ ಪ್ರಗತಿರಂಗ : ರಾಜಕೀಯ ಸಾಂಸ್ಕೃತಿಕ ವೇದಿಕೆ
# ೯, ಪೂರ್ವ ಆಂಜನೇಯ
ದೇವಸ್ಥಾನದ ರಸ್ತೆ ಬಸವನಗುಡಿ, ಬೆಂಗಳೂರು -೪

ತಿ. ನರಸೀಪುರದಲ್ಲಿ ನಡೆಯುತ್ತಿರುವ ಮಹಾಕುಂಭಮೇಳವೆಂಬ ಧಾರ್ಮಿಕ ಭ್ರಾಂತಿಯ ಕಾರ್ಯಕ್ರಮಕ್ಕೆ ಕರ್ನಾಟಕ ಸರ್ಕಾರ ೧೨ ಲಕ್ಷ ರೂಪಾಯಿ ಜನಸಾಮಾನ್ಯರ ತೆರಿಗೆಯ ಹಣವನ್ನು ಅಪವ್ಯಯ ಮಾಡುತ್ತಿರುವುದು ಮತ್ತು ಸರ್ಕಾರಿ ವ್ಯವಸ್ಥೆಯ ಉಸ್ತುವಾರಿಯಲ್ಲಿ ಮೌಢ್ಯಪ್ರಸಾರದ ಈ ಕಾರ್ಯಕ್ರಮ ನಡೆಸುತ್ತಿರುವುದನ್ನು ಕರ್ನಾಟಕ ಪ್ರಗತಿರಂಗ ತೀವ್ರವಾಗಿ ಖಂಡಿಸುತ್ತದೆ.

ಸಾಮಾಜಿಕ ಮತ್ತು ಧಾರ್ಮಿಕ ಅಂಧಾನುಚರಣೆಯ ಬಗ್ಗೆ ಜನಜಾಗೃತಿಯಲ್ಲಿ ತೊಡಗಬೇಕಾದ ಜಗದ್ಗುರುಗಳು, ಮಹಾಕುಂಭಮೇಳದ ಮೂಲಕ ಧಾರ್ಮಿಕ ಅಂಧಶ್ರದ್ಧೆಯನ್ನು ಬಿತ್ತುತ್ತಿರುವುದು ವಿಷಾದದ ಸಂಗತಿಯಾಗಿದೆ.

ಬೇಸಿಗೆಯ ಕಾಲದಲ್ಲಿ, ಲಕ್ಷಾಂತರ ಜನ ಸೀಮಿತ ಪ್ರದೇಶದಲ್ಲಿ ನದಿಯ ನೀರನ್ನು ಬಳಸುವುದರಿಂದ, ಕಾಲರಾ ಮುಂತಾದ ಜಲವಾಹಕ ಸಾಂಕ್ರಾಮಿಕ ರೋಗಗಳು ಹರಡುವ ಅಪಾಯವನ್ನು ಪರಿಗಣಿಸದೆ, ಕುಂಭಮೇಳ ನಡೆಸುವುದು ಹುಂಬತನದ ಕೆಲಸವಾಗಿದೆ. ಇದು ಕುಂಭಮೇಳದ ಹೆಸರಿನಲ್ಲಿ ನಡೆಯುತ್ತಿರುವ 'ಮಹಾಹುಂಬ ಮೇಳ'ವಾಗಿ ಕಾಣುತ್ತದೆ.

ಸುತ್ತಮುತ್ತಲ ಕೈಗಾರಿಕೆಗಳಿಂದ ಕಾವೇರಿ-ಕಪಿಲ ನದಿಗಳಲ್ಲಿ ಉಂಟಾಗುತ್ತಿರುವ ಅಪಾಯಕಾರಿ ಜಲಮಾಲಿನ್ಯದ ಬಗ್ಗೆ ಕಾಳಜಿ ಇಲ್ಲದ ಜಗದ್ಗುರುಗಳು ಮತ್ತು ಸರ್ಕಾರ, ಮಹಾಕುಂಭಮೇಳದ ಮೂಲಕ ಕಾವೇರಿ-ಕಪಿಲ ನದಿಗಳ ಪಾವಿತ್ರ್ಯವನ್ನು ಸಾರುತ್ತಿರುವುದು ಹಾಸ್ಯಾಸ್ಪದವಾಗಿ ಕಾಣುತ್ತದೆ.

(ಕೆ. ರಾಮದಾಸ್)

## ಹೇ, ರಾಮ್

ದಿನಾಂಕ. 11.3.2002

ಹೇ ರಾಮ್, ಹೇ ರಹೀಂ, ಹೇ ಜೀಸಸ್

ಎಲ್ಲಿದ್ದೀರಿ ನೀವು, ಕೇಳುವುದಿಲ್ಲವೇ ಆರ್ತಸ್ವರಗಳು ಕಾಣುವುದಿಲ್ಲವೇ ಭುಗಿಲೆದ್ದ ದಳ್ಳುರಿ, ಭಸ್ಮವಾದ ದೇಹಗಳು. ನಿಮ್ಮ ವಾರಸುದಾರರು ನಡೆಸಿರುವ ಮಾರಣ ಹೋಮ ಏಕೆ ಸುಮ್ಮನಿದ್ದೀರಿ, ಸತ್ತವರಂತೆ.

ಎಲ್ಲಾ ದುಷ್ಕೃತ್ಯಗಳು ವ್ಯಕ್ತವಾಗುತ್ತಿವೆ ನಿಮ್ಮ ನಾಮಾಂಕಿತದ ಘೋಷಣೆಯಲ್ಲಿ, ನಿಮ್ಮ ಭಕ್ತರೆಂಬ ಮುಖವಾಡಧಾರಿಗಳು ಹಠ ಹಿಡಿದಿದ್ದಾರೆ, ತಲೆ ಬುರುಡೆಗಳಿಂದ ಮಂದಿರ, ಮಸೀದಿ, ಚರ್ಚುಗಳನ್ನು ಕಟ್ಟಲೇಬೇಕೆಂದು, ಕಟ್ಟತೊಡಗಿದ್ದಾರೆ ಶಾಶ್ವತ ನರಮೇಧದ ಬಲಿಪೀಠಗಳನ್ನು.

ಯಾವ ದೇವಲೋಕಗಳಲ್ಲಿ ಅಡಗಿದ್ದೀರಿ ನೀವು, ಎಲ್ಲಿ ಹೋಯಿತು, ನೀವು ಕಲಿಸಿದ ಪ್ರೀತಿ-ಕರುಣೆಗಳ ಪಾಠ, ನರಹಂತಕ ಸೈತಾನರ ಕೈಯಲ್ಲಿ ನಿಷ್ಕ್ರಿಯವಾಗಿದೆ ನಿಮ್ಮ ಧರ್ಮಗ್ರಂಥ. ಶನಿ ಸಂತಾನವಾಗುತ್ತಿದೆ ನಿಮ್ಮ ಭಕ್ತರ ಪಂಥ.

ಅಯೋಧ್ಯೆಯಲ್ಲಿ ಕೇಳುತ್ತಿದೆ ನಿರಂತರ ಹಾಹಾಕಾರ. ಈದ್ಗಾ ಮೈದಾನದಲ್ಲಿ ಚೀತ್ಕಾರ, ಇಗರ್ಜಿಗಳಲ್ಲಿ ಅಡಗಿಕೊಂಡಿದೆ ಅಶಾಂತ ಧ್ಯಾನ. ನಿಮ್ಮ ಭಕ್ತರ ಸಂತೆಯಲಿ ವಿಕಾರ ಲಾಂಛನಗಳ ಮೇಳ, ನಿಮ್ಮ ಸಂತರ ಮುಖದಲ್ಲಿ ಹೆಪ್ಪುಗಟ್ಟಿದೆ ರಕ್ತ.

ನೀವು ಸೃಷ್ಟಿಸಿದ ಈಡೆನ್ ಗಾರ್ಡನ್‌ಗಳಲ್ಲಿ, ಬೃಂದಾವನಗಳಲ್ಲಿ, ಅತ್ತರಿನ ಸುವಾಸನೆಯ ಚಮನ್‌ಗಳಲ್ಲಿ ಸೈತಾನರ ದಾಳಿ, ಮತ್ತೆ ಏಳುತ್ತಿವೆ ಶಿಲುಬೆಗಳು, ಕಂಸ ಶಿಲೆಗಳ ಸಮಾಧಿಗಳು ಇದರ ವಾರಸುದಾರರು ನೀವಲ್ಲವೇ ಹೇಳಿ ?

ಹಾಗಾದರೆ ಹೇಳಿ, ಏಕೆ ಸುಮ್ಮನಿದ್ದೀರಿ, ದೆವ್ವಗಳ ಹಾಗೆ ನಿಮ್ಮ ಅನಂತ ಅವತಾರಗಳ ಹಾವಳಿಯಲ್ಲಿ ನೀವು ಸೃಷ್ಟಿಸಿದ ಕನಸುಗಳೆಲ್ಲ ಭಸ್ಮವಾಯಿತು ಏಕೆ ? ಈಗಲಾದರೂ ಹೇಳಿ, ನೀವು ಎಲ್ಲಿದ್ದೀರೆಂದು ? ನೀವು ಇರುವುದು ನಿಜವಾಗಿದ್ದಲ್ಲಿ ಈಗ ಇರಬೇಕಾಗಿತ್ತು ನೀವು ಇಲ್ಲಿ. ಈ ಕಾರ್ಗತ್ತಲ ಸಮಯದಲಿ ಕರುಣಾಳು ಬೆಳಕಿನಂತೆ.

ಎಲ್ಲೆಲ್ಲೂ ಕೇಳುತ್ತಿದೆ, ಗಾಂಧಿಯ ತುಟಿಯಲಿ ಉಕ್ತವಾದ ಆರ್ತಸ್ವರ, ಹೇ ರಾಮ್, ಶಿಲುಬೆಗೇರಿದ್ದ ಕ್ರಿಸ್ತನ ರೋದನ, ಗೋರಿಯಾದ ಪೈಗಂಬರನ ಅಲ್ಲಾಹೋ, ಇದಕ್ಕೆಲ್ಲ ಉತ್ತರಿಸಬೇಕಾದವರು ಯಾರು ಹೇಳಿ, ಈ ಧರೆಹತ್ತಿ ಉರಿಯುವ ಸಮಯದಲ್ಲಿ.

ವಾಲ್ಮೀಕಿಯಂತೆ 'ಮಾ ನಿಷಾದ'ವೆಂದು ಉದ್ಗರಿಸಬೇಕಲ್ಲವೇ ನೀವು. ಈ ಕಾರ್ಗತ್ತಲೆಯ ಹಾಹಾಕಾರದಲಿ ಸನ್ಮತಿಯ ಹಣತೆಯನು ಬೆಳಗಲಾದರು ಬನ್ನಿ, ಹೇ ರಾಮ್

ಕೆ. ರಾಮದಾಸ್

# ಡಾ. ಅನಂತಮೂರ್ತಿ ಸ್ಪರ್ಧೆ : ಪ್ರಗತಿರಂಗದ ಬೆಂಬಲ

ದಿನಾಂಕ. 18.3.2006

ಕರ್ನಾಟಕ ಪ್ರಗತಿರಂಗ ರಾಜಕೀಯ ಸಾಂಸ್ಕೃತಿಕ ವೇದಿಕೆ
# ೯, ಪೂರ್ವ ಆಂಜನೇಯ ದೇವಸ್ಥಾನದ ರಸ್ತೆ
ಬಸವನಗುಡಿ, ಬೆಂಗಳೂರು -೪

ರಾಜ್ಯಸಭೆಯ ಚುನಾವಣೆಯಲ್ಲಿ ಕರ್ನಾಟಕ ನಾಲ್ಕು ರಾಜ್ಯದ ಸ್ಥಾನಗಳಲ್ಲಿ ನಾಲ್ಕನೇ ಸ್ಥಾನಕ್ಕೆ ಹೊರರಾಜ್ಯದ ಶ್ರೀಮಂತ ಉದ್ಯಮಿ ರಾಜೀವ್ ಚಂದ್ರಶೇಖರ್ ಅವರನ್ನು ಆಯ್ಕೆ ಮಾಡಲು ಹೊರಟಿರುವ ಜೆ.ಡಿ.ಎಸ್ ಮತ್ತು ಬಿ.ಜೆ.ಪಿ ಕ್ರಮವನ್ನು ವಿರೋಧಿಸಿ ಖ್ಯಾತ ಸಾಹಿತಿ ಡಾ.ಯು.ಆರ್. ಅನಂತಮೂರ್ತಿಯವರು ಸ್ವಾಭಿಮಾನಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವುದನ್ನು ಕರ್ನಾಟಕ ಪ್ರಗತಿರಂಗ ನೈತಿಕವಾಗಿ ಬೆಂಬಲಿಸುತ್ತದೆ.

ಕರ್ನಾಟಕದ ಅಭಿವೃದ್ಧಿಗಾಗಿ ಕೆಲಸಮಾಡುವುದಾಗಿ ಘೋಷಿಸಿಕೊಂಡು ಅಧಿಕಾರಕ್ಕೆ ಬಂದಿರುವ ಜೆ.ಡಿ.ಎಸ್, ಬಿ.ಜೆ.ಪಿ ಮೈತ್ರಿ ಕೂಟ ಕರ್ನಾಟಕಕ್ಕೆ ಯಾವ ರೀತಿಯಲ್ಲೂ ಸಂಬಂಧವಿಲ್ಲದ ರಾಜೀವ್ ಚಂದ್ರಶೇಖರ್ ಅವರಿಗೆ ರಾಜ್ಯ ಸಭಾ ಸ್ಥಾನವನ್ನು ಮಾರಾಟ ಮಾಡುತ್ತಿರುವುದು ಕರ್ನಾಟಕಕ್ಕೆ ಬಗೆದ ದ್ರೋಹವಾಗಿದೆ.

ಈ ಪಕ್ಷಗಳು ತಮ್ಮ ಪಕ್ಷದ ಶಾಸಕರ ಮತದಾನದ ಹಕ್ಕನ್ನು ಮಾರುಕಟ್ಟೆಯಲ್ಲಿ ಬಿಕರಿ ಇಟ್ಟಿರುವುದು ಶಾಸಕರ ಘನತೆ, ಗೌರವ ಮತ್ತು ರಾಜಕೀಯ ನಿರ್ಧಾರಕ್ಕೆ ಅವಹೇಳನ ಮಾಡುವ ಕ್ರಮವಾಗಿದೆ. ರಾಜಕೀಯ ಪಕ್ಷಗಳ ಭ್ರಷ್ಟ ನಡವಳಿಕೆಯಿಂದ ಪ್ರಜಾಪ್ರಭುತ್ವ ತಲೆತಗ್ಗಿಸುವಂತಾಗಿದೆ.

ಡಾ.ಯು.ಆರ್. ಅನಂತಮೂರ್ತಿಯವರು ತಮ್ಮ ಸ್ಪರ್ಧೆಯ ಮೂಲಕ ಈ ಭ್ರಷ್ಟ ನಡವಳಿಕೆಗೆ ಪ್ರತಿರೋಧ ವ್ಯಕ್ತಪಡಿಸಿರುವುದು ಮತ್ತು ಕರ್ನಾಟಕದ ಸ್ವಾಭಿಮಾನವನ್ನು ಎತ್ತಿಹಿಡಿದಿರುವುದು ಸಮರ್ಥನೀಯವಾದ ಕ್ರಮವಾಗಿದೆ.

(ಕೆ. ರಾಮದಾಸ್)

# ಪ್ರಗತಿಪರ ಸಂಘಟನೆಗಳಿಂದ ಗುಜರಾತ್ ಮುಖ್ಯಮಂತ್ರಿ ನರೇಂದ್ರಮೋದಿ ಕಾರ್ಯಕ್ರಮಕ್ಕೆ ಸಾಂಕೇತಿಕ ಪ್ರತಿಭಟನೆಗೆ ನಿರ್ಧಾರ

ದಿನಾಂಕ. 20.4.2004

ಪ್ರಗತಿಪರ ಸಂಘಟನೆಗಳ ಒಕ್ಕೂಟ, ಮೈಸೂರು

ಗುಜರಾತ್ ಮುಖ್ಯಮಂತ್ರಿ ನರೇಂದ್ರಮೋದಿಯವರು ಕೋಮುವಾದಿ ಹಿಂಸಾಚಾರವನ್ನು ಪ್ರಚೋದಿಸುತ್ತಿರುವುದು ಮತ್ತು ಜಾತ್ಯತೀತ ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿ ವರ್ತಿಸುತ್ತಿರುವುದು ಖಂಡನೀಯವಾದ ಸಂಗತಿಯಾಗಿದೆ.

ಗುಜರಾತಿನ ಹಿಂಸಾಕಾಂಡದ ಬೆಸ್ಟ್ ಬೇಕರಿ ಪ್ರಕರಣದಲ್ಲಿ ಗುಜರಾತ್ ಸರ್ಕಾರ ಮೋದಿಯವರ ಆದೇಶದಂತೆ ವರ್ತಿಸಿ ಅಮಾನವೀಯವಾದ ಬರ್ಬರ ಹಿಂಸಾಚಾರವನ್ನು ನಡೆಸಿರುವುದು ಅತ್ಯಂತ ಹೇಯವಾದ ಘಟನೆಯಾಗಿದೆ. ಇದರಿಂದ ಇಡೀ ರಾಷ್ಟ್ರವೇ ತಲೆತಗ್ಗಿಸುವಂತೆ ಆಗಿರುವುದು ಸರ್ವವಿದಿತವಾದ ಸಂಗತಿಯಾಗಿದೆ.

ಈ ಬಗ್ಗೆ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಗುಜರಾತ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಇಷ್ಟೆಲ್ಲ ಆದರೂ ಮೋದಿ ಸರ್ಕಾರ ರಾಜೀನಾಮೆ ನೀಡದೆ ಅಧಿಕಾರದಲ್ಲಿ ಮುಂದುವರಿದಿರುವುದು ಪ್ರಜಾಪ್ರಭುತ್ವದ ಅವಹೇಳನಕಾರಿಯಾದ ಪ್ರಸಂಗವಾಗಿದೆ.

ಕರ್ನಾಟಕವನ್ನು ಮತ್ತೊಂದು ಗುಜರಾತ್ ಮತ್ತು ಅಯೋಧ್ಯೆಯನ್ನಾಗಿ ಪರಿವರ್ತಿಸುವುದಾಗಿ ಹೇಳುವ ಬಿ.ಜೆ.ಪಿ ಯ ಪ್ರಚಾರಕ್ಕೆ ಹಿಂಸಾಚಾರದ ಪ್ರಚೋದನೆ ನೀಡಲು ದಿನಾಂಕ. [illegible] ರಂದು ಮೈಸೂರಿಗೆ ಬರುತ್ತಿರುವ ನರೇಂದ್ರ ಮೋದಿಯವರ ನರಹಂತಕ [illegible]ವನ್ನು ಪ್ರತಿಭಟಿಸಲು ಮೈಸೂರಿನ ಪ್ರಗತಿಪರ ಸಂಘಟನೆಗಳು ತೀರ್ಮಾನಿಸಿವೆ.

ದಿನಾಂಕ. ೨೧.೪.೨೦೦೪ರಂದು ಬೆಳಗ್ಗೆ ೧೧ ಗಂಟೆಗೆ ಮೈಸೂರಿನ ಅರಮನೆ ಮುಂಭಾಗದಲ್ಲಿ ಸಾಂಕೇತಿಕವಾದ ಕಪ್ಪುಬಾವುಟದ ಪ್ರದರ್ಶನದ ಮೂಲಕ ನರೇಂದ್ರಮೋದಿಯವರಿಗೆ ಪ್ರತಿಭಟನೆ ವ್ಯಕ್ತಪಡಿಸಲಾಗುವುದು. ಪ್ರಗತಿಪರರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

(ಕೆ. ರಾಮದಾಸ್)

# ಮಠ-ಮಾನ್ಯಗಳಿಗೆ ಸರ್ಕಾರಿಭೂಮಿ : ವಿಶ್ವನಾಥ್ ನಿಲುವಿಗೆ ಬೆಂಬಲ

ಕೆ.ರಾಮದಾಸ್ ದಿನಾಂಕ. ೧೯.೧೦.೨೦೦೩

ಮೈಸೂರಿನ ಅಪೊಲೋ ಆಸ್ಪತ್ರೆಗೆ ಸರ್ಕಾರಿ ಭೂಮಿಯನ್ನು ಮಂಜೂರು ಮಾಡುವ ಪ್ರಸ್ತಾಪವನ್ನು ಈಚೆಗೆ ನಡೆದ ಸಚಿವ ಸಂಪುಟದ ಸಭೆಯಲ್ಲಿ ತೀವ್ರವಾಗಿ ವಿರೋಧಿಸಿ ದಿಟ್ಟತನದ ನಿಲುವನ್ನು ವ್ಯಕ್ತಪಡಿಸಿರುವ ಸಹಕಾರಿ ಸಚಿವ ಹೆಚ್. ವಿಶ್ವನಾಥ್ ಅವರ ಅಭಿಪ್ರಾಯವನ್ನು ಕರ್ನಾಟಕ ಪ್ರಗತಿರಂಗ ಸಂಪೂರ್ಣವಾಗಿ ಸಮರ್ಥಿಸುತ್ತದೆ ಮತ್ತು ತನ್ನ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತದೆ.

ಬೆಂಗಳೂರು-ಮೈಸೂರಿನಂತಹ ದೊಡ್ಡ ನಗರಗಳ ಅಮೂಲ್ಯವಾದ ಭೂಮಿಯನ್ನು ಆಕ್ರಮಿಸುತ್ತಿರುವ ಮಠ-ಮಾನ್ಯದಂತಹ ಧಾರ್ಮಿಕ ಸಂಸ್ಥೆಗಳು ಧರ್ಮ ಮತ್ತು ಶಿಕ್ಷಣದ ಸಾರ್ವಜನಿಕ ಸೇವೆಯ ಹೆಸರಿನಲ್ಲಿ, ಮೂಲ ಆಶಯವನ್ನು ವಂಚಿಸುವ ಲಾಭದಾಯಕವಾದ ಉದ್ಯಮವನ್ನಾಗಿ ಪರಿವರ್ತಿಸಿಕೊಂಡು ಶಾಪಿಂಗ್ ಕಾಂಪ್ಲೆಕ್ಸ್ ಇತ್ಯಾದಿಗಳನ್ನು ನಿರ್ಮಿಸಿಕೊಂಡು ಶ್ರೀಮಂತವಾಗುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

ಬೆಂಗಳೂರು-ಮೈಸೂರಿನಂತಹ ದೊಡ್ಡ ನಗರಗಳ ಅಮೂಲ್ಯ ಭೂಪ್ರಪದೇಶದಲ್ಲಿ ಧಾರ್ಮಿಕ ಮುಖವಾಡದ ಸಾರ್ವಜನಿಕ ಸೇವೆಯ ವೈಭವದ ಆಶ್ರಮಗಳನ್ನು ಸ್ಥಾಪಿಸಿಕೊಂಡು, ಶ್ರೀಮಂತವರ್ಗ ಮತ್ತು ಬಲಾಢ್ಯ ರಾಜಕಾರಣಿಗಳನ್ನು ತೃಪ್ತಿಪಡಿಸುತ್ತಿರುವುದು, ಧರ್ಮದ ಹೆಸರಿನಲ್ಲಿ ಸರ್ಕಾರ ಮತ್ತು ಸಾರ್ವಜನಿಕರನ್ನು ವಂಚಿಸುವ ಹುನ್ನಾರವಾಗಿದೆ. ಇದರಿಂದ ಬಡವರಿಗಾಗಲಿ, ದೀನದಲಿತ, ದುರ್ಬಲರಿಗಾಗಲಿ ದೊರೆಯುತ್ತಿರುವುದು ಯಕಃಶ್ಚಿತ್ ಸೇವೆಯೆಂಬ ನಯವಂಚಕ ಕಪಟನಾಟಕ.

ಮೈಸೂರಿನಲ್ಲಿ ಅನೇಕ ಬಡವರ ಭೂಮಿಯನ್ನು ಆಕ್ರಮಿಸಿ ಭವ್ಯವಾಗಿ ನಿರ್ಮಿಸಲಾಗಿರುವ ಬಿ.ಜಿ.ಎಸ್. ಅಪೊಲೋ ಆಸ್ಪತ್ರೆ ಬಡವರಿಗೆ ಪರಕೀಯವಾಗಿದೆ. ಇದೊಂದು ಕಂಪನಿಯ ಹೈಟೆಕ್

ಆಸ್ಪತ್ರೆಯಾಗಿದ್ದು ಬಡವರು - ದುರ್ಬಲರು ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದು ಗಗನ ಕುಸುಮವಾಗಿದೆ.

ದೀನ-ದಲಿತ ದುರ್ಬಲರ ಶಿಕ್ಷಣ ಮತ್ತು ಸೇವೆಯ ಹೆಸರಿನಿಂದ ಸರ್ಕಾರದಿಂದ ಮಂಜೂರಾದ ಅಮೂಲ್ಯ ಭೂಮಿಯನ್ನು ದುರ್ಬಳಕೆ ಮಾಡಿಕೊಂಡು ಶಾಪಿಂಗ್ ಕಾಂಪ್ಲೆಕ್ಸ್‌ನ್ನು ನಿರ್ಮಿಸಿರುವುದು ಇಂತಹ ಅಕ್ರಮಗಳಿಗೆ ಸಾಕ್ಷಿಯಾಗಿದೆ.

ಸರ್ಕಾರ ಪ್ರಭಾವಿ ಧಾರ್ಮಿಕ ಸಂಸ್ಥೆಗಳ ಮರ್ಜಿ ಹಿಡಿಯಲು ಈ ರೀತಿ ಸಾರ್ವಜನಿಕ ಸೇವೆಗಾಗಿ ಮೀಸಲಾದ ಅಮೂಲ್ಯ ಭೂಮಿಯನ್ನು ಮಂಜೂರು ಮಾಡುತ್ತಾ ಹೋದರೆ ಸಚಿವ ವಿಶ್ವನಾಥ ಹೇಳಿದಂತೆ ಸರ್ಕಾರವೇ ತನ್ನ ಬಳಕೆಗೆ ಬೇಕಾದ ಭೂಮಿಯನ್ನು ಪಡೆಯಲು ಮಠಮಾನ್ಯಗಳಿಗೆ ಅರ್ಜಿ ಹಾಕಬೇಕಾದ ಹೀನಾಯ ಸ್ಥಿತಿ ಉಂಟಾಗುವುದರಲ್ಲಿ ಅನುಮಾನವಿಲ್ಲ. ವಿಶ್ವನಾಥರ ಎಚ್ಚರಿಕೆಯ ಮಾತುಗಳನ್ನು ಸರ್ಕಾರ ಗಂಭೀರವಾಗಿ ಸ್ವೀಕರಿಸಿ, ಎಚ್ಚರಿಕೆ ವಹಿಸುವುದು ಸಮಂಜಸವಾಗಿದೆ. ಸಾರ್ವಜನಿಕ ಆಸ್ತಿಯ ಟ್ರಸ್ಟಿಯಾದ ಸರ್ಕಾರ ದುರ್ಬಲವಾಗಿ, ಮಠ ಮಾನ್ಯಗಳು ಸರ್ಕಾರದ ಮೇಲೆ ಸವಾರಿ ಮಾಡಲು ಅವಕಾಶ ಕೊಡುವುದು ಸಂವಿಧಾನಾತ್ಮಕ ಕರ್ತವ್ಯದ ಉಲ್ಲಂಘನೆಯಾಗುತ್ತದೆ.

ಇದೇ ರೀತಿ ಚಾಮರಾಜನಗರದಲ್ಲಿ ಪಶುಸಂಗೋಪನ ಸಚಿವ ಎಂ. ಮಹಾದೇವು ಅವರು ಸಾರ್ವಜನಿಕರ ಆಕ್ಷೇಪ ಮತ್ತು ನ್ಯಾಯಾಲಯದ ನಿರ್ದೇಶನವನ್ನು ಉಲ್ಲಂಘಿಸಿ ಸಾರ್ವಜನಿಕ ಉದ್ಯಾನವನದ ಅಮೂಲ್ಯವಾದ ಮರಗಳನ್ನು ರಾತ್ರೋರಾತ್ರಿ ಕಡಿದುಹಾಕಿಸಿ ನಿರ್ನಾಮ ಮಾಡಿ ದೇವಸ್ಥಾನಕ್ಕೆ ರಸ್ತೆ ನಿರ್ಮಿಸಲು ತೊಡಗಿರುವುದು ಬೇಲಿಯೇ ಹೊಲ ಮೇಯುವ ಘೋರ ಅಪರಾದವಾಗಿದೆ. ಇಂತಹ ಜನವಿರೋಧಿ ಧೋರಣೆಯನ್ನು ಕರ್ನಾಟಕ ಪ್ರಗತಿರಂಗ ಉಗ್ರವಾಗಿ ಖಂಡಿಸುತ್ತದೆ.

# ಕುವೆಂಪು ಅಂತ್ಯಸಂಸ್ಕಾರದ ಸಲ್ಲದ ವಿವಾದ

**ಕೆ. ರಾಮದಾಸ್**

ಕರ್ನಾಟಕದ ಹೆಮ್ಮೆಯ ಮತ್ತು ಕನ್ನಡಿಗರ ಪ್ರೀತಿಯ ಕವಿ ಕುವೆಂಪು ಅವರು ನಿಧನರಾದ ಶೋಕತಪ್ತ ಗಂಭೀರ ಸನ್ನಿವೇಶದಲ್ಲಿ 'ಉದಯರವಿ'ಯ ಸಮ್ಮುಖದಲ್ಲಿ ಕನ್ನಡ ಚಳವಳಿಗಾರರೆಂದು ಹೇಳಲಾದ ಕೆಲವರು ವರ್ತಿಸಿದ ರೀತಿ ಮತ್ತು ಇವರನ್ನು ಬೆಂಬಲಿಸಿದ ಕೆಲವು ಸಾಹಿತಿಗಳ ನಡವಳಿಕೆ ವಿಷಾದದ ಸಂಗತಿಯಾಗಿದೆ. 'ಉದಯರವಿ'ಯ ಮುಂದೆ ಘೋಷಣೆ ಕೂಗುತ್ತಾ, ಚಪ್ಪಾಳೆ ತಟ್ಟುತ್ತಾ ಕೆಲವರು ಅಸಹನೀಯವಾಗಿ ವರ್ತಿಸುತ್ತಿರುವುದನ್ನು ಗಮನಿಸಿದ ನಾನು ಆಕ್ಷೇಪ ವ್ಯಕ್ತಪಡಿಸಿದ್ದು ನಿಜ. ಕುವೆಂಪು ಅಂತ್ಯಸಂಸ್ಕಾರದ ವಿಚಾರವನ್ನು ಕುವೆಂಪು ಆಶಯ ಮತ್ತು ಕುಟುಂಬ ವರ್ಗದವರ ನಿರ್ಧಾರಕ್ಕೆ ಬಿಟ್ಟು ಕುವೆಂಪು ಅವರನ್ನು ಗೌರವಿಸೋಣವೆಂದು ಸೂಚಿಸಿದಾಗ "ಇದನ್ನು ಹೇಳಲು ನೀವು ಯಾರು, ಕುವೆಂಪು ಅವರು ಇದನ್ನೆಲ್ಲ ಬರೆದಿಟ್ಟಿದ್ದರೆ ತಂದು ತೋರಿಸಿ" ಎಂದು ಗೇಲಿಮಾಡಿದರು. ನಾನು ಮತ್ತೆ ಅವರೊಂದಿಗೆ ಚರ್ಚಿಸದೆ ನಿರ್ಗಮಿಸಿದೆ.

ಕುವೆಂಪು ಅವರ ಅಂತ್ಯಕ್ರಿಯೆ ಮೈಸೂರಿನಲ್ಲಿ ನಡೆಸಬೇಕೇ ಅಥವಾ ಕುಪ್ಪಳ್ಳಿಯ ಕವಿಶೈಲದಲ್ಲಿ ನಡೆಸಬೇಕೇ ಎಂದು ತೇಜಸ್ವಿಯವರು ತಮ್ಮ ಕುಟುಂಬ ವರ್ಗದಲ್ಲಿ ಸಮಾಲೋಚಿಸುತ್ತಿದ್ದ ಸಂದರ್ಭದಲ್ಲಿ ದೇಜಗೌ ನಡೆಸುತ್ತಿರುವ ಖಾಸಗಿ ಟ್ರಸ್ಟಿನ ಜಮೀನಿನಲ್ಲಿ ಕುವೆಂಪು ಅವರ ಅಂತ್ಯಕ್ರಿಯೆ ನಡೆಸಬೇಕೆಂಬ ದೇಜಗೌ ಮತ್ತು ಅವರ ಬೆಂಬಲಿಗರ ಇಂಗಿತವನ್ನು ಕೆ.ಎಸ್. ಭಗವಾನ್ ಅವರು ನನ್ನ ಜೊತೆಯಲ್ಲಿ ಪ್ರಸ್ತಾಪಿಸಿದ್ದಲ್ಲದೆ ತೇಜಸ್ವಿಯವರ ಗಮನಕ್ಕೂ ತಂದರು. ಖಾಸಗಿ ಸ್ಥಳದಲ್ಲಿ ಕುವೆಂಪು ಅವರ ಅಂತ್ಯಕ್ರಿಯೆ ನಡೆಸುವುದರಿಂದ ಉಂಟಾಗಬಹುದಾದ ಇತಿ-ಮಿತಿಗಳನ್ನು ಪರಿಗಣಿಸಿ ತೇಜಸ್ವಿ ಮತ್ತು ಕುಟುಂಬ ವರ್ಗದವರು ಈ ಸೂಚನೆಯನ್ನು ನಿರಾಕರಿಸಿದರು.

ಕುವೆಂಪು ಅವರ ಅಂತ್ಯಕ್ರಿಯೆ ಕುವೆಂಪು ಅವರ ಆಶಯ ಮತ್ತು ಕುಟುಂಬವರ್ಗದವರ ನಿರ್ಧಾರಕ್ಕೆ ಬಿಡಲು ಎಲ್ಲರೂ ಒಪ್ಪುವುದಾದರೆ ಕುಪ್ಪಳ್ಳಿಯ 'ಕವಿಶೈಲ'ದಲ್ಲೇ ನಡೆಸುವುದಾಗಿ

ತೇಜಸ್ವಿಯವರು ತಮ್ಮ ಖಚಿತವಾದ ನಿರ್ಧಾರವನ್ನು ವ್ಯಕ್ತಪಡಿಸಿದರು. ಅಂತ್ಯಕ್ರಿಯೆ ವಿಚಾರದಲ್ಲಿ ತಾವಾಗಲಿ, ಕುಟುಂಬ ವರ್ಗದವರಾಗಲಿ ತಮ್ಮ ನಿರ್ಧಾರವೇ ಅಂತಿಮವಾದದ್ದೆಂದು ಭಾವನಾತ್ಮಕವಾದ ಹಠ-ಪ್ರತಿಷ್ಠೆಗಳನ್ನು ಹೊಂದಿಲ್ಲವೆಂದೂ, ಕುವೆಂಪು ಅವರಿಗೆ ಚ್ಯುತಿಯಾಗದಂತೆ ಸರ್ಕಾರವೇ ಮೈಸೂರಿನಲ್ಲೇ ಸಾರ್ವಜನಿಕ ಸ್ಥಳದಲ್ಲಿ ಅಂತ್ಯಕ್ರಿಯೆ ನಡೆಸಲು ಮುಂದೆ ಬಂದರೆ ತಮ್ಮ ಅಭ್ಯಂತರವೇನೂ ಇಲ್ಲವೆಂದು, ತಾವಾಗಲಿ - ಕುಟುಂಬ ವರ್ಗದವರಾಗಲಿ ಯಾರನ್ನ ಆಗಲಿ ಯಾಚಿಸುವುದಿಲ್ಲ. ಈ ಅಭಿಪ್ರಾಯವನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಮೈಸೂರಿನ ಜಿಲ್ಲಾಧಿಕಾರಿಗಳಾದ ತ.ಮ. ವಿಜಯಭಾಸ್ಕರ್ ಅವರನ್ನು ನಾನು ಕೇಳಿಕೊಂಡೆ. ಅವರು ನೀವೇ ಒಂದು ಸೂಕ್ತ ಸ್ಥಳವನ್ನು ತಿಳಿಸಿದರೆ ಸರ್ಕಾರದ ಗಮನಕ್ಕೆ ತರಲು ಅನುಕೂಲವಾಗುತ್ತದೆಂದು ಹೇಳಿದರು. ನಾನು ಮತ್ತೆ ತೇಜಸ್ವಿ ಮುಂತಾದವರೊಂದಿಗೆ ಸಮಾಲೋಚಿಸಿ, ಮೈಸೂರಿನಲ್ಲಿ ಅಂತ್ಯಕ್ರಿಯೆ ನಡೆಸುವುದಾದರೆ 'ಮಾನಸ ಗಂಗೋತ್ರಿ' ಆವರಣವೆ ಸೂಕ್ತವಾದದ್ದೆಂದು ಸೂಚಿಸಿದೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಮಾನಸ ಗಂಗೋತ್ರಿಯಲ್ಲಿ ಅಂತ್ಯಕ್ರಿಯೆ ನಡೆಸಲು ಸರ್ಕಾರ ಮತ್ತು ವಿಶ್ವವಿದ್ಯಾನಿಲಯದ ಅನುಮತಿ ಅಗತ್ಯವಾಗಿತ್ತು. ಕುಲಪತಿ ಮಾದಯ್ಯನವರು ತುರ್ತುಕೆಲಸದ ಮೇಲೆ ಆದಿನ ಬೆಳಿಗ್ಗೆಯೇ ಪೂನಾಕ್ಕೆ ಹೊರಟು ಹೋಗಿದ್ದಾರೆಂದು ತಿಳಿಯಿತು. ಕುಲಸಚಿವ ಶ್ರೀ ಮೋನಪ್ಪ ತಮ್ಮ ನಿಸ್ಸಹಾಯಕತೆಯನ್ನು ವ್ಯಕ್ತಪಡಿಸಿದರು. ಸರ್ಕಾರವೇ ಈ ಬಗ್ಗೆ ತೀರ್ಮಾನಿಸಬೇಕೆಂದು ತಿಳಿಸಿದರು. ಬೆಂಗಳೂರಿನಲ್ಲಿ ಸಂಪುಟದ ಸಭೆ ನಡೆಯುತ್ತಿರುವುದರಿಂದ ಸರ್ಕಾರದ ನಿರ್ಧಾರವು ವ್ಯಕ್ತವಾಗಲಿಲ್ಲ.

ಈ ಹಂತದಲ್ಲಿ ಹಿರಿಯರಾದ ಡಾ. ಚದುರಂಗ, ಡಾ.ಹಾ.ಮಾ.ನಾಯಕರು ಮಾನಸ ಗಂಗೋತ್ರಿಯಲ್ಲಿ ಅಂತ್ಯಕ್ರಿಯೆ ನಡೆಯುವುದು ಸಮಂಜಸವಲ್ಲ. 'ಕವಿಶೈಲ'ವೇ ಸೂಕ್ತವಾದ ಸ್ಥಳವೆಂದು ಸೂಚಿಸಿದರು. ಮತ್ತೆ ತೇಜಸ್ವಿಯವರು ಎಲ್ಲರೊಂದಿಗೆ ಸಮಾಲೋಚಿಸಿ 'ಕವಿಶೈಲ'ದಲ್ಲೇ ಮರುದಿನ ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಸಲು ತೀರ್ಮಾನಿಸಿದರು.

ಮೈಸೂರು ನಗರಪಾಲಿಕೆಯ ಮೇಯರ್ ಎಂ.ವಿ. ವೆಂಕಟರಾಜು ಮತ್ತು ನಗರಪಾಲಿಕೆಯ ಆಯುಕ್ತ ಕೆ. ಶಿವರಾಮ್ ಅವರು ಕುವೆಂಪು ಅವರ ಪಾರ್ಥಿವ ಶರೀರದ ಅಂತಿಮ ಯಾತ್ರೆಗೆ ನಗರ ಪಾಲಿಕೆಯ ವಿಶೇಷ ಮಿನಿಬಸ್ ವ್ಯವಸ್ಥೆ ನೀಡಲು ಮುಂದಾದರು. ನಗರಪಾಲಿಕೆಯ ಈ ನೆರವನ್ನು ಸ್ವೀಕರಿಸಲಾಯಿತು. ಕವಿಶೈಲದಲ್ಲಿ ಕುವೆಂಪು ಅವರ ಅಂತ್ಯ ಮಲೆನಾಡಿನ ನಿಸರ್ಗದ ಮಡಿಲಲ್ಲಿ ಅತ್ಯಂತ ಗೌರವದಿಂದ ನೆರವೇರಿಸಲಾಯಿತು.

ಕುವೆಂಪು ಅವರ ಅಂತ್ಯಕ್ರಿಯೆಗೆ ಮೊದಲೇ ಅವರ ಚಿತಾಭಸ್ಮದ ಬಗ್ಗೆ ಪ್ರೊ. ದೇ.ಜ.ಗೌ, ಹೆಚ್.ಎಂ. ಚನ್ನಯ್ಯ ಮತ್ತು ಕೆ.ಎಸ್. ಭಗವಾನರ ಜೊತೆಯಲ್ಲಿ ಅಗ್ರಿಮೆಂಟ್ ಮಾಡಿಕೊಂಡು ಚಿತಾಭಸ್ಮವನ್ನು ಕಾಂಟ್ರಾಕ್ಟ್ ಹಿಡಿದಿರುವುದು ವಿಲಕ್ಷಣ ಸಂಗತಿಯಾಗಿದೆ. ವಿಚಾರವಾದಿ ಒಕ್ಕೂಟದ ಅಧ್ಯಕ್ಷರಾದ ಕೆ.ಎಸ್. ಭಗವಾನ್‌ರವರು ಈ ವಿದ್ಯಮಾನಕ್ಕೆ ಪಾಲುದಾರರಾಗಿರುವುದು ಚೋದ್ಯದ ಸಂಗತಿಯಾಗಿದೆ.

## 'ಸಾಂಸ್ಕೃತಿಕ ಅವನತಿ ಮತ್ತು ಸಾಹಿತ್ಯದ ವಿದ್ಯಮಾನಗಳು'

ಕೆ.ರಾಮದಾಸ್
'ಚಾರ್ವಾಕ'
೯೮೬, ಪಂಚಮಂತ್ರರಸ್ತೆ
ಕುವೆಂಪುನಗರ, ಮೈಸೂರು ೨೩

ಗೆ, ದಿನಾಂಕ. ೧೦.೧.೧೯೯೮
ಸಂಪಾದಕರು
'ಆಂದೋಲನ' ಪತ್ರಿಕೆ
ಮೈಸೂರು

ಮಾನ್ಯರೆ,

೨೦ನೇ ಶತಮಾನ ತನ್ನ ಪೂರ್ವಾರ್ಧದಲ್ಲಿ ಉಂಟುಮಾಡಿದ ರೋಮಾಂಚನದ ದಿನಗಳ ಗತಿಶೀಲತೆ, ಅದರ ಉತ್ತರಾರ್ಧದಲ್ಲಿ ಅವನತಿಯ ಹಾದಿಯಲ್ಲಿ ಸಾಗುತ್ತಾ ಮರೀಚಿಕೆಯಂತೆ ಹತಾಶೆಯಲ್ಲಿ ಮುಕ್ತಾಯವಾಗುತ್ತಿರುವುದು ಎಂಥಹ ವಿಪರ್ಯಾಸವಾಗಿದೆ.

ಈ ಶತಮಾನ ತನ್ನ ಮಹೋನ್ನತ ಆಶಯವಾಗಿ ರೂಪಿಸಿದ ಗಾಂಧಿ, ಲೋಹಿಯಾ, ಜೆ.ಪಿ. ಅಂಬೇಡ್ಕರ್ ಮುಂತಾದವರೆಲ್ಲ ಕಣ್ಮರೆಯಾಗಿರುವುದರ ಜೊತೆಗೆ ಅವರ ಚಿಂತನೆಗಳು ಅಪ್ರಸ್ತುತವಾಗಿರುವುದು ಮತ್ತು ಅವರ ವಾರಸುದಾರರೆಂದು ಹೇಳಿಕೊಂಡವರೆಲ್ಲ ಖಳನಾಯಕರಾಗಿ ಪರಿವರ್ತನೆಯಾಗಿರುವುದು ಕಾಲದ ಕಲಿತನವಾಗಿದೆ.

ಮಾರುಕಟ್ಟೆಯ ಸಂಸ್ಕೃತಿಯ ಆಕ್ರಮಣಶೀಲತೆಯ ಅಬ್ಬರಕ್ಕೆ ಎಲ್ಲ ಮೌಲ್ಯಗಳು ಬಲಿಯಾಗುತ್ತಿರುವುದು ಎಂಥಹ ದುರಂತ. ಗಬ್ಬೆದ್ದು ಹೋಗಿರುವ ರಾಜಕೀಯ ಕ್ಷೇತ್ರದ ಸಮಯ

ಸಾಧಕತನದ ಒತ್ತಡಕ್ಕೆ ಒಳಗಾದ ಶಿಕ್ಷಣ, ಸಾಹಿತ್ಯ, ಸಂಗೀತ, ಕಲಾ ಮತ್ತು ಕ್ರೀಡಾ ಕ್ಷೇತ್ರಗಳು ನಿರ್ಲಜ್ಜ ಸಂವೇದನೆಗೆ ರೂಪಾಂತರವಾಗಿರುವುದು ಅಂತಃಸಾಕ್ಷಿಯ ಅವಸಾನದ ಸಂಕೇತವಾಗಿದೆ.

ಇದಕ್ಕೆ ನಮ್ಮ ಸಾಹಿತ್ಯ-ಸಾಂಸ್ಕೃತಿಕ ವಿದ್ಯಮಾನಗಳೇ ಸಾಕ್ಷಿಯಾಗಿವೆ. ಈ ಶತಮಾನದ 'ಸಾಂಸ್ಕೃತಿಕ ಆಶಯಗಳಾಗಿ ರೂಪಿಸಲ್ಪಟ್ಟ ಪರಂಪರೆಯ ಸೃಷ್ಟಿಕರ್ತರಾದ ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ, ಅಡಿಗ ಮುಂತಾದವರೆಲ್ಲ ತಮ್ಮ ಜೀವಮಾನವೆಲ್ಲ ತಪಸ್ಸಿನಂತೆ ಅತ್ಯಂತ ಜತನದಿಂದ ಕಾಪಾಡಿದ ಸಾಂಸ್ಕೃತಿಕ ಮೌಲ್ಯಗಳು ಅವರೆಲ್ಲ ನಿರ್ಗಮಿಸುತ್ತಿದ್ದಂತೆ ಸಾಂಸ್ಕೃತಿಕ ಪುಡಾರಿಗಳ ಕೈವಶವಾಗಿ ಪತನವಾಗುತ್ತಿರುವುದು ದುರಂತವಾಗಿದೆ.

ನೂರಾರು ಪ್ರಶಸ್ತಿಗಳ, ಬಿರುದು ಬಾವಲಿಗಳ, ಸನ್ಮಾನಗಳ ಮತ್ತು ಸರ್ಕಾರಿ ಸವಲತ್ತುಗಳ ಮರ್ಜಿಯಲ್ಲಿ ಚಿನ್ನದ ಲಂಗೋಟಿಗಳ ವ್ಯಾಮೋಹದಲ್ಲಿ ಸೃಜನಶೀಲತೆಯ ಸೂಕ್ಷ್ಮವಾದ ಲಜ್ಜೆ ಮತ್ತು ಸಂಕೋಚಗಳು ನಿರ್ಲಜ್ಜೆಯಾಗಿ ವಿಜೃಂಭಿಸುತ್ತಿರುವುದು ಸಾಂಸ್ಕೃತಿಕ ಅವನತಿಯಾಗಿದೆ.

ಈ ರೀತಿಯ ವಿದ್ಯಮಾನಗಳಲ್ಲಿ ಪರಸ್ಪರ ಸಹಕರಿಸುತ್ತಿರುವ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಪಂಥದ ಫಲಾನುಭವಿಗಳೆಲ್ಲ ಒಟ್ಟಾಗಿ ಪತನದ ಹಾದಿಯನ್ನು ಸಮರ್ಥಿಸಿಕೊಳ್ಳುತ್ತಿರುವುದು ಸೋಜಿಗವಾಗಿದೆ.

ಶಿವರಾಮ ಕಾರಂತರು ಕಣ್ಮರೆಯಾದ ಕೂಡಲೇ ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ತಿನವರಿಗೆ ವೃತ್ತಿ ರಾಜಕಾರಣಿ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರ ಸಾಹಿತ್ಯ ನೆನಪಾಗಿರುವುದು ಸ್ವಾರಸ್ಯದ ಸಂಗತಿಯಾಗಿದೆ. ರಾಜಕೀಯದ ನಡುವೆ ಸಾಹಿತಿಯಾಗಲು ಪ್ರಯತ್ನಿಸುತ್ತಿರುವ ಮೊಯಿಲಿಯವರ ಸಾಹಿತ್ಯ ಸಂಕಿರಣದಲ್ಲಿ ವರ್ತಮಾನದ ಸಾಹಿತಿಗಳೆಲ್ಲ ಶಿಫಾರಸು ಮಾಡಲು ಬರುತ್ತಿರುವುದು ಕನ್ನಡ ಸಾಹಿತ್ಯದ ಸ್ಥಿತ್ಯಂತರದ ಕುರುಹು ಆಗಿದೆ. ಕೋಗಿಲೆಯ ಗೂಡಿನಲ್ಲಿ ಕಾಗೆಗಳು ಮರಿಯೊಡೆಯುತ್ತಿರುವ ಕಾಲದ ಕಲಿತನಕ್ಕೆ ಬೆರಗಾದೆನಯ್ಯಾ !

# ವಿವೇಚನಾರಹಿತ ಉನ್ಮಾದ

ಗೆ,

ಶ್ರೀ ಸಿ.ವಿ.ಎಲ್.ಶಾಸ್ತ್ರಿ ದಿನಾಂಕ. 18.9.1997

ಅಧ್ಯಕ್ಷರು

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ

ಬೆಂಗಳೂರು

ಮಾನ್ಯರೆ

ನಿಮ್ಮ ೬.೯.೧೯೯೭ರ ಪತ್ರದಲ್ಲಿ ಉಲ್ಲೇಖಿತವಾಗಿರುವ ಸ್ವಕಪೋಲಕಲ್ಪಿತ ವಿಚಾರಗಳಿಗೂ, ನಾನು ಶಿವಮೊಗ್ಗದಲ್ಲಿ ಬಹುಮತ ಸಂಘಟನೆಯ ಉದ್ಘಾಟನಾ ಭಾಷಣದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೂ ಸಂಬಂಧವಿಲ್ಲದಿರುವುದರಿಂದ ಅವುಗಳಿಗೆಲ್ಲ ನಾನು ಉತ್ತರಿಸಬೇಕಾಗಿಲ್ಲ.

ನಮ್ಮ ಸಮಾಜದ ಅವಿಭಾಜ್ಯ ಅಂಗವಾಗಿರುವ ಬ್ರಾಹ್ಮಣ ಸಮುದಾಯದ ಪರವಾಗಿ ನೀವು ಬರೆದಿರುವ ಪತ್ರಕ್ಕೆ ಸೌಜನ್ಯದಿಂದ ಉತ್ತರಿಸುತ್ತಿದ್ದೇನೆ.

ಶಿವಮೊಗ್ಗದ 'ನಾವಿಕ'ದಂತಹ ಕೆಲವು ಪತ್ರಿಕೆಗಳು ಮತಾಂಧತೆಯನ್ನು ಪ್ರಚೋದಿಸುವ, ಕಿಡಿಗೇಡಿತನದ ಪೂರ್ವಾಗ್ರಹಪೀಡಿತ ವಿಕೃತ ವರದಿಯನ್ನು ಪ್ರಕಟಿಸಿ ಬ್ರಾಹ್ಮಣ ಸಮುದಾಯಕ್ಕೆ ನೋವನ್ನು ಉಂಟುಮಾಡುತ್ತಿರುವುದು ಮತ್ತು ನನಗೆ ಬ್ರಾಹ್ಮಣದ್ವೇಷದ ಕಳಂಕವನ್ನು ತರುವಂತೆ ಪ್ರಚಾರ ಮಾಡುತ್ತಿರುವುದು ಆಘಾತವನ್ನುಂಟುಮಾಡಿದೆ. ಇದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ.

ಶಿವಮೊಗ್ಗದಲ್ಲಿ ನಾನು ಮಾಡಿದ ಭಾಷಣದ ವಸ್ತುನಿಷ್ಠ ವರದಿಗಳು ಬಹುಪಾಲು ಸ್ಥಳೀಯ ಪತ್ರಿಕೆಗಳಲ್ಲಿ ಮತ್ತು ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೂ ಅದನ್ನು ಗಮನಿಸದೆ

ಇರುವುದು ಮತ್ತು ವಿಕೃತ ವರದಿಗಳನ್ನು ಮಾತ್ರ ಗಮನಿಸಿ ಬ್ರಾಹ್ಮಣ ಸಂಘಟನೆಗಳು ನನ್ನ ವಿರುದ್ಧ ಕೆಂಡಕಾರುತ್ತಾ ಪ್ರತಿಭಟಿಸುತ್ತಿರುವುದು ದಿಗ್ಭ್ರಮೆಯನ್ನುಂಟುಮಾಡಿದೆ. ಇಂತಹ ವಿವೇಚನಾ ರಹಿತವಾದ ಉನ್ಮಾದಕ್ಕೆ ನಾನು ಜವಾಬ್ದಾರನಲ್ಲ.

ನಿಮ್ಮ ಪತ್ರದಲ್ಲಿ ಉಲ್ಲೇಖಿತವಾದಂತೆ ನಾನು ಭಾಷಣ ಮಾಡಿಲ್ಲವೆಂದು ಪತ್ರಿಕೆಗಳಲ್ಲಿ ಸ್ಪಷ್ಟೀಕರಣ ನೀಡಿರುವುದನ್ನು ನೀವು ಗಮನಿಸಿರಬಹುದೆಂದು ತಿಳಿದಿದ್ದೇನೆ. ಆದ್ದರಿಂದ ನಾನು ಕ್ಷಮೆ ಕೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ನಾನು ಶಿವಮೊಗ್ಗದಲ್ಲಿ ಮಾಡಿದ ಭಾಷಣದ ವಸ್ತುನಿಷ್ಠ ವರದಿ (Indian express: ೩.೯.೧೯೯೭) ಮತ್ತು ನನ್ನ ಸ್ಪಷ್ಟೀಕರಣ (ಕನ್ನಡ ಪ್ರಭ : ೯.೯.೧೯೯೭)ವನ್ನು ಈ ಪತ್ರದೊಂದಿಗೆ ನಿಮ್ಮ ತಿಳವಳಿಕೆಗಾಗಿ ಕಳಿಸಿದ್ದೇನೆ.

ವಂದನೆಗಳು

ನಿಮ್ಮ ವಿಶ್ವಾಸದ
(ಕೆ. ರಾಮದಾಸ್)

## ಸಮೂಹ ಮಾಧ್ಯಮದ ನೈತಿಕತೆಯ ಪ್ರಶ್ನೆಗಳು

ಮೊನ್ನೆ ಮೈಸೂರಿನ ಪತ್ರಕರ್ತ ಮಿತ್ರರೊಬ್ಬರು ಇದ್ದಕ್ಕಿದ್ದಂತೆ ಫೋನ್ ಮಾಡಿದರು. "ಏನ್ರೀ ಸಮಾಚಾರ" ಎಂದೆ. "ಸಾರ್ ನಿಮ್ಮ ಹತ್ರ ಒಂದು ವಿಚಾರ ಪ್ರಸ್ತಾಪಿಸಬೇಕು" ಎಂದರು. "ಏನ್ ಹೇಳಿ" ಎಂದೆ.

"ನಾವು ಮೈಸೂರಿನ ಪತ್ರಕರ್ತರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ವಿಚಾರಣಾ ಸಭೆಯಲ್ಲಿ ನಡೆದ ಗೂಂಡಾಗಿರಿಯನ್ನು ಪ್ರತಿಭಟಿಸಿ, ಸಭೆಯ ಕಲಾಪಗಳನ್ನು ಬಹಿಷ್ಕರಿಸಿದ್ದು ನಿಮಗೆ ಗೊತ್ತಿದೆ. ಮಂಡ್ಯದಲ್ಲಿ ಏನಾಯಿತು ಗೊತ್ತಾಸಾರ್" ಎಂದರು. "ಏನಾಯಿತು ಗೊತ್ತಿಲ್ಲ, ಹೇಳಿ" ಎಂದೆ. ಅವರು ಉದ್ವೇಗದಿಂದ ಮಾತನಾಡುತ್ತಿದ್ದರು.

ಮಂಡ್ಯದಲ್ಲಿ ಕಾರಿಡಾರ್ ವಿಚಾರಣಾ ಸಭೆ ನಡೆಯುವುದಕ್ಕೆ ಎರಡು ದಿನ ಮೊದಲು ನೈಸ್ ಕಂಪನಿಯವರು ಪತ್ರಿಕಾಗೋಷ್ಠಿ ಕರೆದು, ಅಲ್ಲಿಗೆ ಬಂದಿದ್ದ ಪತ್ರಕರ್ತರಿಗೆಲ್ಲ ತಲಾ ಒಂದೊಂದು ಬೆಲೆಬಾಳುವ 'ರಿಸ್ಟ್‌ವಾಚ'ನ್ನು 'ಗಿಫ್ಟ್' ಅಂತ ಹೇಳಿ ಕೊಟ್ಟರಂತೆ. ಯಾರು ನಿರಾಕರಿಸದೆ 'ಗಿಫ್ಟ್' ಸ್ವೀಕರಿಸಿ ಖುಷಿಯಾದರಂತೆ. ನನ್ನ ಮಿತ್ರರ ಕೈಯನ್ನು ಅಲಂಕರಿಸಿದ್ದ ನಂದಿ ಕಂಪನಿಯ ರಿಸ್ಟ್‌ವಾಚುಗಳನ್ನು ನೋಡಿ ಬೇಸರವಾಯಿತು. ನನ್ನ ವೃತ್ತಿ ಬಾಂಧವರ ಈ ರೀತಿಯ ವರ್ತನೆಯನ್ನು ನೋಡಿ ತುಂಬ ನಿರಾಶನಾಗಿದ್ದೇನೆ. ಏನು ಮಾಡುವುದು ಸಾರ್" ಎಂದು ಈ ಸೂಕ್ಷ್ಮ ಸ್ವಭಾವದ ಪತ್ರಕರ್ತ ಮಿತ್ರರು ವಿಷಾದ ವ್ಯಕ್ತಪಡಿಸಿದರು.

ಇದನ್ನೆಲ್ಲ ಹೇಗೆ ಪ್ರತಿಭಟಿಸುವುದು ನನಗೂ ತಿಳಿಯಲಿಲ್ಲ. "ಎಲ್ಲ ವೃತ್ತಿಗಳೂ ಆರ್ಥಿಕ ಪ್ರಲೋಭನೆಯಿಂದ ಮತ್ತು ಮುಲಾಜು-ಮರ್ಜಿ, ರಾಗ-ದ್ವೇಷಗಳಿಂದ ಭ್ರಷ್ಟವಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಪತ್ರಿಕೋದ್ಯಮವು ಬಲಿಯಾಗುತ್ತಿರುವುದು ಆಶ್ಚರ್ಯದ ಸಂಗತಿಯಲ್ಲ. ಆದರೂ ನನಗೂ ಇದು ಆತಂಕದ ಸಂಗತಿಯಾಗಿದೆ" ಎಂದು ಅವರನ್ನು ಅಸಹಾಯಕತೆಯಿಂದ ಸಮಾಧಾನಪಡಿಸಿದೆ.

ಪ್ರಜಾಪ್ರಭುತ್ವದಲ್ಲಿ ಸಮೂಹ ಮಾಧ್ಯಮದ ವೃತ್ತಿಧರ್ಮದ ನೈತಿಕ ಪಾವಿತ್ರ್ಯದ ಶಕ್ತಿ ಉಡುಗಿಹೋದರೆ ಇಡೀ ವ್ಯವಸ್ಥೆಯೇ ನಿರಂಕುಶವಾಗಿಬಿಡುತ್ತದೆ. ಪ್ರಜಾಪ್ರಭುತ್ವದಲ್ಲಿ ಸಮೂಹ

ಮಾಧ್ಯಮಗಳು ಯಾಂತ್ರಿಕ ವರದಿಯ ಅಂಕಣಗಳಾಗದೆ, ಸಾಮಾಜಿಕ ಜೀವನದ ಕಾವಲು ಕಾಯುವ ಜಾಗೃತದಳದಂತೆ ಕ್ರಿಯಾಶೀಲವಾದ ಪಾತ್ರವನ್ನು ವೃತ್ತಿಧರ್ಮದ ಕರ್ತವ್ಯವೆಂದು ಪಾಲಿಸಬೇಕಾಗುತ್ತದೆ. ನೈತಿಕವಾಗಿ ಪತನವಾದ ಪತ್ರಿಕೋದ್ಯಮ ಕೇವಲ ವ್ಯಾಪಾರೀಕರಣದ ದಂಧೆಯಾಗಿಬಿಡುತ್ತದೆ.

ಇಂತಹ ಸ್ಥಿತಿಯಲ್ಲಿದ್ದ ಪತ್ರಿಕೋದ್ಯಮವನ್ನು ಪ್ರವೇಶಿಸಿದ ಲಂಕೇಶರು ಕನ್ನಡ ಪತ್ರಿಕೋದ್ಯಮಕ್ಕೆ ಕ್ರಿಯಾಶೀಲತೆಯ ಹೊಸ ಆಯಾಮವನ್ನು ರೂಪಿಸಿದರು. ಲಂಕೇಶ್ ಪತ್ರಿಕೆಯ ನೈತಿಕತೆಯನ್ನು ಕಾಪಾಡುವುದಕ್ಕಾಗಿ ಆರ್ಥಿಕ ಪ್ರಲೋಭನೆಯ ಜಾಹೀರಾತುಗಳನ್ನು ನಿರಾಕರಿಸಿ ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿ, ರಾಜಕೀಯ - ಸಾಮಾಜಿಕ ಪಾಳೇಗಾರಿಕೆಯನ್ನು ಪ್ರತಿಭಟಿಸಿದರು. ರಂಜನೆ, ಬೋಧನೆ ಮತ್ತು ಪ್ರಚೋದನೆಯ ಆಶಯಗಳ ಮೂಲಕ ಲಂಕೇಶ್ ಪತ್ರಿಕೆಗೆ ಗುರಿ ಮತ್ತು ದಾರಿಯ ಪಾವಿತ್ರ್ಯವನ್ನು ತಂದುಕೊಟ್ಟರು.

ಆದ್ದರಿಂದಲೇ ಕರ್ನಾಟಕದಲ್ಲಿ ತನ್ನ ಅನನ್ಯ ಹೋರಾಟದ ಮೂಲಕ ಏಕಾಂಗಿಯಾದ ಲಂಕೇಶ್ ಪತ್ರಿಕೆಯನ್ನು ರಾಜಕೀಯ ದಬ್ಬಾಳಿಕೆಯ ಮೂಲಕ ಮತ್ತು ನ್ಯಾಯಾಲಯಗಳ ಮೂಲಕ ದಮನ ಮಾಡುವ ಎಲ್ಲ ಪ್ರಯತ್ನಗಳು ವಿಫಲಗೊಂಡು ತನ್ನ ಜೀವಂತಿಕೆಯನ್ನು ಕಾಪಾಡಿಕೊಳ್ಳಲು ಪತ್ರಿಕೆಗೆ ಸಾಧ್ಯವಾಗಿದೆ.

ಈಗ ಪತ್ರಿಕೋದ್ಯಮದ ಗತಿ ಇನ್ನೂ ತೀವ್ರವಾಗಿದೆ. ರಾಜಕೀಯ ಆಕರ್ಷಣೆಯಂತೆ ಪತ್ರಿಕೋದ್ಯಮವು ಖ್ಯಾತಿ ಮತ್ತು ಆರ್ಥಿಕ ಪ್ರಲೋಭನೆಗಳ ಆಕರ್ಷಣೆಯನ್ನು ಉಂಟು ಮಾಡುತ್ತಿರುವುದರಿಂದ ಬಹುರೂಪಿ ಪತ್ರಕರ್ತರು ಸೃಷ್ಟಿಯಾಗಿದ್ದಾರೆ. ಪತ್ರಿಕೋದ್ಯಮವು ರೂಪಾಂತರವಾಗುತ್ತಿದೆ. ಯಥಾಸ್ಥಿತವಾದಿ ಪತ್ರಿಕೋದ್ಯಮ, ಸಾಮಾಜಿಕ ಧರ್ಮಯುದ್ಧದ ಪತ್ರಿಕೋದ್ಯಮ ಮತ್ತು ಭಯೋತ್ಪಾದಕತೆಯ ಕರಾಳ ಪತ್ರಿಕೋದ್ಯಮವೆಂದು ಕರೆಯಬಹುದಾದ ಪತ್ರಿಕೆಗಳು ಪ್ರಕಟವಾಗುತ್ತಿವೆ. ಇದರ ಜೊತೆಗೆ ಅಪ್ಪಟ ವ್ಯಾಪಾರೀಕರಣದ ಟಿ.ವಿ ಚಾನಲ್ ಪತ್ರಿಕೋದ್ಯಮ ಸಾಮಾಜಿಕ ಒತ್ತಡಕ್ಕೆ ಕಾರಣವಾಗಿದೆ.

ಸಮೂಹ ಮಾಧ್ಯಮದ ನೈತಿಕತೆಯ ಅನುಮಾನಗಳು ಮತ್ತು ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವ ಜವಾಬ್ದಾರಿಯನ್ನು ಪತ್ರಕರ್ತರು ತಮ್ಮ ವೃತ್ತಿ ಧರ್ಮದ ಸಾಕ್ಷಿಪ್ರಜ್ಞೆಯ ಮೂಲಕ ಬಗೆಹರಿಸಿಕೊಳ್ಳಬೇಕಾಗುತ್ತದೆ.

ಬೇಲಿಯೇ ಹೊಲ ಮೇಯುವ ಸ್ಥಿತಿಗೆ ನಮ್ಮ ಸಮೂಹ ಮಾಧ್ಯಮಗಳು ಪರಿವರ್ತನೆಯಾದರೆ ಪ್ರಜಾಪ್ರಭುತ್ವ ಪಾಳೇಗಾರಿಕೆಯಾಗುವ ದುರಂತವನ್ನು ನಾವು ನೋಡಬೇಕಾಗುತ್ತದೆ. ಆತ್ಮವಂಚನೆ ಮಾಡಿಕೊಳ್ಳಲು ನಿರಾಕರಿಸುವ ಪತ್ರಕರ್ತರು ನೈತಿಕತೆಯ ಕ್ರಿಯಾಶೀಲತೆಯಿಂದ ಈ ದುರಂತ ಸಂಭವಿಸದಂತೆ ಕಾವಲು ಕಾಯುತ್ತಾರೆಂಬ ಭರವಸೆ ನನಗಿದೆ.

ಕೆ. ರಾಮದಾಸ್

# ನಂದಿಗ್ರಾಮ - ಛತ್ತೀಸ್‌ಗಡ ಹಿಂಸಾಚಾರ

**ಕೆ. ರಾಮದಾಸ್**
**'ಚಾರ್ವಾಕ'**
**ಕುವೆಂಪುನಗರ, ಮೈಸೂರು -೨೩**

**ದಿನಾಂಕ 16.3.2007**

**ಕ್ರಾಸ್ ಫೈರ್ : ಕಿಲ್ಲಿಂಗ್ ಫೀಲ್ಡ್ ಹಂತಕರು**

ಪಶ್ಚಿಮ ಬಂಗಾಳದಲ್ಲಿ ಹೂಗ್ಲಿ ಜಿಲ್ಲೆಯ ಸಿಂಗೂರ್ ಪ್ರದೇಶದಲ್ಲಿ ಟಾಟಾ ಕಂಪನಿಯ 'ಸಣ್ಣ ಕಾರು' ತಯಾರಿಕ ಘಟಕಕ್ಕೆ ಪಶ್ಚಿಮ ಬಂಗಾಳದ ಎಡರಂಗದ ಕಮ್ಯುನಿಸ್ಟ್ ಸರ್ಕಾರ ದಬ್ಬಾಳಿಕೆಯಿಂದ ಬಡರೈತರ ಸಾವಿರಾರು ಎಕರೆ ಭೂಮಿಯನ್ನು ವಶಪಡಿಸಿಕೊಂಡಿದೆ. ಭೂ ವಂಚಿತ ರೈತರ ಹೋರಾಟವನ್ನು ದಮನ ಮಾಡುತ್ತಿದೆ.

ಈಗ ಮಿಡ್ನಾಪುರ ಜಿಲ್ಲೆಯ ನಂದಿಗ್ರಾಮದ ರೈತರ ಭೂಮಿಯನ್ನು ವಶಪಡಿಸಿಕೊಂಡು, ಇಂಡೋನೇಷ್ಯಾದ ಸಲೀಂ ಗ್ರೂಪ್ ಕಂಪನಿಗೆ ಕೊಡಲು ಸನ್ನದ್ಧವಾಗಿರುವ ಸರ್ಕಾರದ ಭೂಸ್ವಾಧೀನ ಕ್ರಮಕ್ಕೆ ರೈತರು ಉಗ್ರ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾರೆ. ಸಿಂಗೂರ್-ನಂದಿ ಗ್ರಾಮದಲ್ಲಿ ರೈತರು ಸಿಡಿದೆದ್ದು ನಿರಂತರ ಹೋರಾಟ ನಡೆಸುತ್ತಿದ್ದಾರೆ.

ಕಾರ್ಮಿಕರ, ಬಡರೈತರ, ದೀನದಲಿತರ ಹೆಸರಿನಲ್ಲಿ ಮತಯಾಚಿಸಿ ಬ್ಯಾಲೆಟ್ ಮೂಲಕ ೩೦ ವರ್ಷಗಳಿಂದಲೂ ಸತತವಾಗಿ ಅಧಿಕಾರ ನಡೆಸುತ್ತಿರುವ ೨೫ ವರ್ಷಗಳ ಕಾಲ ಜ್ಯೋತಿಬಸು, ೫ ವರ್ಷಗಳಿಂದ ಬುದ್ಧದೇವ ಭಟ್ಟಾಚಾರ್ಯ ಮುಖ್ಯಮಂತ್ರಿಗಳಾಗಿ ಅಧಿಕಾರ ಚಲಾಯಿಸಿದ್ದಾರೆ. ಬಡಜನತೆಯ ಅಭಿವೃದ್ಧಿ, ಪ್ರಗತಿಯ ತುತ್ತೂರಿ ಊದಿದ್ದಾರೆ. ಪ್ರಭುತ್ವದಲ್ಲಿ ವಿಜೃಂಭಿಸಿದ್ದಾರೆ.

ಕಮ್ಯುನಿಸ್ಟ್ ಸರ್ಕಾರ ರೂಪಾಂತರವಾಗಿದೆ. ಕಮ್ಯುನಿಸ್ಟ್ ದೇಹದಲ್ಲಿ ಬಂಡವಾಳಶಾಹಿಯ ಸೈತಾನನ ಆತ್ಮ ಪರಕಾಯ ಪ್ರವೇಶ ಮಾಡಿದೆ. ಬಂಡವಾಳಶಾಹಿಯ ಜೀತಗಾರನಂತೆ ವರ್ತಿಸುತ್ತಾ,

ದಬ್ಬಾಳಿಕೆ ಪ್ರಾರಂಭಿಸಿದೆ. ಅಭಿವೃದ್ಧಿಯ ಮಂತ್ರ ಜಪಿಸುತ್ತಿದೆ. ಬ್ಯಾಲೆಟ್ ಶಕ್ತಿಯನ್ನು ಬುಲೆಟ್ ಶಕ್ತಿಯಾಗಿ ಪರಿವರ್ತಿಸಿಕೊಂಡಿದೆ.

ಬಡಜನರ ಆಶೋತ್ತರಗಳಿಗೆ ಸ್ಪಂದಿಸುವ ಬದಲು, ಅದನ್ನು ದಮನ ಮಾಡಲು ಬಂದೂಕ್ ಬಳಸಿ ಗೋಲಿಬಾರ್ ಮಾಡಿ ಪ್ರಭುತ್ವದ ಶಕ್ತಿಯನ್ನು ಪ್ರದರ್ಶಿಸುತ್ತಿದೆ. ನಂದಿಗ್ರಾಮದಲ್ಲಿ ೧೮ ಜನ ಆಹುತಿಯಾಗಿದ್ದಾರೆ. ಅಸಂಖ್ಯಾತ ಜನ ತಲ್ಲಣಗೊಂಡಿದ್ದಾರೆ. ಪ್ರಭುತ್ವದ ಸಂಘಟಿತ ಹಿಂಸೆಯಿಂದ ತತ್ತರಿಸಿದ್ದಾರೆ.

ಕಮ್ಯುನಿಸ್ಟರದು ಚಿಂತಕರ ಚಾವಡಿಯ ಸರ್ಕಾರ. ಇದರ ವಕ್ತಾರರು ಇದೊಂದು ಆಕಸ್ಮಿಕ ಘಟನೆ. ಅದಕ್ಕೆ ನಮ್ಮ ಸಂತಾಪವಿದೆ. ಈ ಹಿಂಸಾಚಾರಕ್ಕೆ ನಕ್ಸಲೀಯರು, ಕೋಮುವಾದಿಗಳು, ಮಮತಾ ಬ್ಯಾನರ್ಜಿಯಂತಹ ಪಟ್ಟಭದ್ರ ರಾಜಕಾರಣಿಗಳ ಸಂಚು. ಪ್ರತಿಗಾಮಿ ರಾಜಕೀಯ ಕುತಂತ್ರವೆಂದು ಮಂತ್ರ ಜಪಿಸಿ ಬಕಧ್ಯಾನದಲ್ಲಿ ನಿರತರಾಗಿದ್ದಾರೆ. ದ್ವೈತ ಸಿದ್ಧಾಂತದ ಮೂಲಕ ಹಿಂಸಾಚಾರವನ್ನು ಸಮರ್ಥಿಸುತ್ತಾರೆ. ಇದು ಕಮ್ಯುನಿಸ್ಟರ ಪತನದ ಮುನ್ಸೂಚನೆ. ಚೈನಾ ಮಾದರಿಯ ಕಾರ್ಯತಂತ್ರ. 'ಬುದ್ಧದೇವರ' ಬುದ್ಧಿ ಹರಾಜಾಗಿದೆ. ಬುದ್ಧನು ಮಾಯ, ದೇವನು ಮಾಯ.

ಛತ್ತೀಸಗಡದ ನಕ್ಸಲ್‌ರ ಹಿಂಸಾಚಾರದ ಪಂಚಾಂಗವೇ ಬೇರೆ. ಪ್ರಭುತ್ವದ ಸಂಘಟಿತ ಹಿಂಸಾಚಾರದ ವಿರುದ್ಧ ಜನಪರವಾದ ಬುಲೆಟ್ ಕ್ರಾಂತಿಯ ಅಟ್ಟಹಾಸ. ೫೫ ಪೊಲೀಸರ ಬರ್ಭರ ಹತ್ಯೆ. ಜನಕ್ರಾಂತಿಯನ್ನು ದಮನ ಮಾಡಲು ಬಂದ ಪ್ರಭುತ್ವದ ಕಾವಲು ಪಡೆಯ ದಮನ. ಧೀಮಂತಿಕೆಯ ಹಿಂಸಾಚಾರ. ಕ್ರಾಂತಿಯ ಯಶಸ್ವಿ ಕಾರ್ಯಾಚರಣೆ. AK47 ಬಂದೂಕಿಗೆ ಕೆಂಪು ಬಾವುಟ ಕಟ್ಟಿಕೊಂಡು ಸಮವಸ್ತ್ರಧಾರಿಗಳಾಗಿ 'ರೆಡ್‌ಬ್ಯಾಂಡ್' ಕ್ರಾಂತಿಯ ಪಡೆ ತಮ್ಮ ಬಲಿಗಾಗಿ ಕಾಯುತ್ತಾರೆ. ನೆಲಬಾಂಬುಗಳು, ಗ್ರೇನೇಡ್‌ಗಳು ಇವರ ಸೈದ್ಧಾಂತಿಕ ಸಂಗಾತಿಗಳು.

ಬಡಜನತೆಯ ವಿಮೋಚನೆಗಾಗಿ ಬ್ಯಾಲೆಟ್ ವಿರುದ್ಧ ಬುಲೆಟ್. ಜನಾಂದೋಲನಗಳನ್ನು ಹುಸಿ ಹೋರಾಟಗಳೆಂದು ಭಾವಿಸಿರುವ ಇವರು ಹಿಂಸೆಗೆ ಹಿಂಸೆ, ಸೇಡಿಗೆ ಸೇಡು ಕ್ರಾಂತಿಯ ಜಾಡು ಎನ್ನುವ ಭ್ರಮಾತ್ಮಕ ರೋಮಾಂಚನದಲ್ಲಿ ಸೂಯಿಸೈಡ್ ಸ್ಕ್ವಾಡ್ (ಆತ್ಮಹತ್ಯಾದಳ)ವೆಂಬ ವಾಸ್ತವವನ್ನು ನಿರ್ಲಕ್ಷಿಸಿ, ಅಮಾಯಕರನ್ನು ಕೊಲ್ಲುತ್ತಾರೆ. ಹತಾಶೆಯ ಸಂದರ್ಭಗಳಲ್ಲಿ ರೈಲು, ಬಸ್, ಗ್ರಾಮಾಂತರ ಪ್ರದೇಶಗಳ ಮೇಲೆ ದಾಳಿ ಮಾಡಿ ಖುಷಿಪಡುತ್ತಾರೆ. ತಮ್ಮ ನಾಯಕ ಸಾಕೇತ್‌ರಾಜನ್ ಎನ್‌ಕೌಂಟರ್ ಸಾವಿಗೆ, ಪಾವಗಡದ ಪೊಲೀಸರನ್ನು ಕೊಂದು ಸೇಡು ತೀರಿಸಿಕೊಳ್ಳಲಾಯಿತು.

ಪಾಕಿಸ್ತಾನಕ್ಕೆ ಹೊರಟಿದ್ದ ಸಮಜೋತಾ ಎಕ್ಸ್‌ಪ್ರೆಸ್ ರೈಲಿನ ದಾಳಿಯಲ್ಲಿ ನಡೆದ ಭಯೋತ್ಪಾದಕರ ಮಾರಣಹೋಮ ತಂತ್ರವೆಂದು ಸಮರ್ಥಿಸುತ್ತಾರೆ. ಪಾಶವೀ ಹಿಂಸಾಚಾರದ ವಿಕೃತ ಸಿದ್ಧಾಂತ. ಅಮಾನವೀಯ ಕ್ರೌರ್ಯದ ವೈಭವೀಕರಣವನ್ನು ತಮ್ಮ ಸಂಘಟನೆಯ ಸಾಧನೆಯಾಗುತ್ತದೆ.

ಸದ್ದಾಂಹುಸೇನ್ ಮರಣದಂಡನೆಯ ಸಂದರ್ಭದ ಬೆಂಗಳೂರು ಘಟನೆಯನ್ನು ನೆನಪಿಸಿಕೊಳ್ಳಿ. ಈ ಉನ್ಮಾದದಲ್ಲಿ ಶಿವಾಜಿ ನಗರದ ಸುತ್ತಮುತ್ತಲೂ ಹಿಂಸಾಚಾರ ನಡೆಯಿತು. ಪೊಲೀಸರು ಗೋಲಿಬಾರ್ ಮಾಡಿದರು. ಕ್ರಾಸ್‌ಫೈರ್‌ನಲ್ಲಿ ೧೩ ವರ್ಷದ ಬಾಲಕನೊಬ್ಬ ಸತ್ತ. ಅವನ ಹೆಸರು ಅಬ್ದುಲ್ ಇರಬಹುದು. ಯಾರಿಗೂ ಅವನ ಹೆಸರು ಸರಿಯಾಗಿ ತಿಳಿದಿರಲಿಲ್ಲ. ಅವನೊಬ್ಬ ತಂದೆ-ತಾಯಿ ಇಲ್ಲದ ಅನಾಥ ಬಾಲಕ. ಶಿವಾಜಿ ನಗರದ ಟೀಶಾಪ್ ಒಂದರಲ್ಲಿ ಕೆಲಸ ಮಾಡುತ್ತಿದ್ದ. ಹಿಂದೂಗಳಿಗೆ ಮುಸ್ಲಿಮರಿಗೆ, ಪೊಲೀಸರಿಗೆ ಬಂದ ಗಿರಾಕಿಗಳಿಗೆ ಟೀ ವಿತರಿಸುತ್ತಿದ್ದ ಪುಟ್ಟಬಾಲಕ.

ಅಮಾಯಕ ಬಾಲಕ ಗೋಲಿಬಾರ್‌ಗೆ ಬಲಿಯಾದ. ಅವನ ಹೆಣಕ್ಕೆ ವಾರಸುದಾರರಿರಲಿಲ್ಲ. ಮೂರುದಿನ ಕಳೆದು ಪೊಲೀಸರೇ ದಫನ್ ಮಾಡಿದರು. ಈ ಬಾಲಕನ ಸಾವಿಗೆ ಯಾರು ಹೊಣೆ?

ಇದು ಕ್ರಾಸ್ ಫೈರ್ ಕಿಲ್ಲಿಂಗ್ ಫೀಲ್ಡ್. ಭಾರತದ ಹೆಬ್ಬಾಗಿಲಿಗೆ ಬಂದುನಿಂತಿದೆ. ದಬ್ಬಾಳಿಕೆ, ಹಿಂಸೆ-ಪ್ರತಿಹಿಂಸೆ ಮತ್ತು ಅಭಿವೃದ್ಧಿ ಪ್ರಗತಿ, ವಿಮೋಚನೆ ಕೊನೆಗೆ ಗ್ಯಾಂಗ್‌ವಾರ್ ಹಿಂಸೆಯ ಪರಿಭಾಷೆ ಒಂದೇ ಜೀವಬಲಿ ಮತ್ತು ಭಯೋತ್ಪಾದನೆ ನಿರಂತರ ಮಾರಣ ಹೋಮ.

# ಪತ್ರಿಕಾ ಟಿಪ್ಪಣಿ

**ಪ್ರಗತಿಪರ ಸಂಘಟನೆಗಳ ಒಕ್ಕೂಟ ಮೈಸೂರು**

ದಿನಾಂಕ. ೧೩.೨.೧೯೯೮

೫೦ ವರ್ಷಗಳ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಆಶಯಗಳು ಅವನತಿಯ ಹಾದಿಯಲ್ಲಿ ಸಾಗುತ್ತಾ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಆತಂಕದ ಸ್ಥಿತಿಗೆ ತಲುಪಿರುವುದು ಅತ್ಯಂತ ನಿರ್ಣಾಯಕವಾದ ಸವಾಲಾಗಿದೆ.

ಭಾರತದ ಜಾತ್ಯತೀತವಾದ ಜನತಂತ್ರದ ವ್ಯವಸ್ಥೆಯನ್ನು ರಾಜಕೀಯ ಪರಿಜ್ಞಾನದ ಕುಶಲತೆಯಿಂದ ಮತ್ತು ಪ್ರಯೋಗಶೀಲತೆಯಿಂದ ಕಾಪಾಡಿದ ಜನ ಸಮಷ್ಠಿಯ ಇಚ್ಛಾಶಕ್ತಿಯನ್ನು ಈ ಲೋಕಸಭಾ ಚುನಾವಣೆ ರಾಜಕೀಯ ಪಕ್ಷಗಳ ಸಮಯ ಸಾಧಕತನದ ಅನೈತಿಕ ಅಧಿಕಾರದ ಲಂಪಟತ್ವದಿಂದ ಗೊಂದಲಮಯವಾದ ಬಿಕ್ಕಟ್ಟಿಗೆ ಒಳಪಡಿಸಿರುವುದು ಪ್ರಜ್ಞಾವಂತ ಮತದಾರರ ವಿವೇಚನೆ ಮತ್ತು ಅಂತಃಸಾಕ್ಷಿಗೆ ಎದುರಾಗಿರುವ ವಿಷಯ ಪರಿಸ್ಥಿತಿಯನ್ನು ನಿರ್ಮಿಸಿದೆ.

ಗಾಂಧಿ, ಜೆ.ಪಿ, ಲೋಹಿಯಾ ಮತ್ತು ಅಂಬೇಡ್ಕರ್ ರೂಪಿಸಿದ ಸಾಮಾಜಿಕ, ಆರ್ಥಿಕ ಸಮಾನತೆಯ ಆಶಯಗಳು ಕಣ್ಮರೆಯಾಗಿ ಕೋಮುವಾದ ಮತ್ತು ಜಾತಿವಾದಗಳು ಸಚ್ಚಾರಿತ್ರ್ಯವಿಲ್ಲದ ರಾಜಕೀಯ ಭ್ರಷ್ಟತೆಯಾಗಿ ವಿಜೃಂಭಿಸುತ್ತಿರುವುದು ರಾಷ್ಟ್ರೀಯ ದುರಂತವಾಗಿದೆ. ಎಲ್ಲ ರಾಜಕೀಯ ಪಕ್ಷಗಳು ಇದರಲ್ಲಿ ಸಮಾನ ಪಾಲುದಾರರಾಗಿರುವುದು ಇಂದಿನ ಸಂದಿಗ್ಧ ಪರಿಸ್ಥಿತಿಗೆ ಕಾರಣವಾಗಿದೆ.

ಈ ವಿಷಮ ಪರಿಸ್ಥಿತಿಯಲ್ಲಿ ನಮ್ಮ ರಾಜಕೀಯ ಆಯ್ಕೆಯ ಮಾನದಂಡಗಳನ್ನು ನಿರ್ಧರಿಸುವುದು ಗಂಭೀರವಾದ ಮತ್ತು ಜಟಿಲವಾದ ಹೊಣೆಗಾರಿಕೆಯಾಗಿದೆ. ಸಾಮಾಜಿಕ ನೆಮ್ಮದಿ ಮತ್ತು ರಾಷ್ಟ್ರೀಯ ಸಮಗ್ರತೆಯ ಕಾಳಜಿಯಿಂದ ರಾಜಕೀಯ ವಿದ್ಯಮಾನಗಳನ್ನು ಮಾನವೀಯ ವಿವೇಕದಿಂದ ತೀರ್ಮಾನಿಸಬೇಕಾಗಿದೆ.

ಭ್ರಷ್ಟಾಚಾರ ಮತ್ತು ಅಧಿಕಾರ ಲಂಪಟತ್ವದ ಸಮಯಸಾಧಕತನದ ರಾಜಕೀಯವನ್ನು ನ್ಯಾಯಾಂಗದ ಕ್ರಿಯಾಶೀಲತೆ ಮತ್ತು ಜನಾಭಿಪ್ರಾಯದ ಮಾಧ್ಯಮಗಳ ಒತ್ತಡದಿಂದ ಮತ್ತು ಜನಪರ ಹೋರಾಟಗಳ ಒತ್ತಡದಿಂದ ಸರಿಪಡಿಸುವ ಸಾಧ್ಯತೆಗಳ ಮುಕ್ತ ಅವಕಾಶಗಳಿಂದ ನಿಯಂತ್ರಿಸಲು ಮುಕ್ತ ಅವಕಾಶವಿದೆ.

## ಆದಿಚುಂಚನಗಿರಿ ಸ್ವಾಮೀಜಿಯವರ ವೈಭವದ ಷಷ್ಟಬ್ಧಿ ಆಚರಣೆ ಸಾಮಾಜಿಕ ಭ್ರಷ್ಟತೆಗೆ ಮನ್ನಣೆ

ಕರ್ನಾಟಕ ಪ್ರಗತಿರಂಗ, ಮೈಸೂರು ದಿನಾಂಕ. ೨೮.೨.೨೦೦೪

ಸಮಾಜದ ದೀನ-ದುರ್ಬಲರ ಸೇವೆಗಾಗಿ ಸ್ಥಾಪಿತವಾಗಿರುವ ಆದಿಚುಂಚನಗಿರಿ ಮಠದ ಬಾಲಗಂಗಾಧರ ಸ್ವಾಮೀಜಿಯವರು ಶೈಕ್ಷಣಿಕ-ಸಾಮಾಜಿಕ ಕ್ಷೇತ್ರದಲ್ಲಿ ಸೇವಾನಿರತರಾಗಿ ಗೌರವಕ್ಕೆ ಭಾಜನರಾಗಿರುವುದು ಮತ್ತು ಸಾಮಾಜಿಕ ಮನ್ನಣೆಗೆ ಪಾತ್ರರಾಗಿರುವುದು ಪ್ರಶಂಸನೀಯವಾದ ಸಂಗತಿಯಾಗಿದೆ.

ಸರ್ವಸಂಗ ಪರಿತ್ಯಾಗಿಯಾಗಿ ಸಂನ್ಯಾಸ ಸ್ವೀಕರಿಸಿ, ಸರಳ ಜೀವನ ಮಾರ್ಗಿಯಾಗಿ ಸಮಾಜಕ್ಕೆ ನೈತಿಕ ಜೀವನದ ಮಾದರಿಯಾಗಿರುವ ಬಾಲಗಂಗಾಧರ ಸ್ವಾಮೀಜಿಯವರಿಗೆ ಅವರ ಷಷ್ಟ್ಯಬ್ಧಿ ಸಮಾರಂಭವನ್ನು ಅತ್ಯಂತ ದುಂದುವೆಚ್ಚದಲ್ಲಿ ವೈಭವದಿಂದ ಆಚರಿಸಲಾಗುತ್ತಿರುವುದು ಅವರ ಆಧ್ಯಾತ್ಮಿಕ ಜೀವನ ವಿಧಾನಕ್ಕೆ ತದ್ವಿರುದ್ಧವಾದ ಕ್ರಮವಾಗಿದೆ.

ಆಧ್ಯಾತ್ಮಿಕ ವ್ಯಕ್ತಿತ್ವದ ಸ್ವಾಮೀಜಿಯವರು ಚಿನ್ನದ ಕಿರೀಟಕ್ಕೆ ತಲೆಬಾಗಿರುವುದು, ಸುವರ್ಣ ರುದ್ರಾಕ್ಷಿ, ನವರತ್ನ ಕಂಠೀಹಾರ, ರಜತಪಾದುಕೆ, ರಜತ ತುಲಾಭಾರದಂತಹ ವೈಭವದ ಗೌರವವನ್ನು ಸ್ವೀಕರಿಸಲು ಸಮ್ಮತಿಸಿರುವುದು ಅವರ ಆಧ್ಯಾತ್ಮಿಕ ಆಚರಣೆಯನ್ನು ಕುಂಠಿತಗೊಳಿಸುವ ಕ್ರಮವಾಗಿದೆ.

ಸಮಾಜಕ್ಕೆ ನೈತಿಕತೆಯ ನೀತಿ ಬೋಧಿಸಬೇಕಾದ ಸ್ವಾಮೀಜಿಯವರು ಇಂತಹ ಸಾಮಾಜಿಕ ಭ್ರಷ್ಟತೆಯ ಆಚರಣೆಯಲ್ಲಿ ಭಾಗಿಯಾಗಿ ಅದರ ಪಾಲುದಾರರಾಗುತ್ತಿರುವುದು ವಿಷಾದದ ಸಂಗತಿಯಾಗಿದೆ. ಸ್ವಾಮೀಜಿಯವರ ಷಷ್ಟ್ಯಬ್ಧಿ ಸಮಾರಂಭ ರಚನಾತ್ಮಕವಲ್ಲದ ವಿಪರ್ಯಾಸದಲ್ಲಿ ನಡೆಯುತ್ತಿರುವುದು ಧಾರ್ಮಿಕ ಅವನತಿಗೆ ಸಾಕ್ಷಿಯಾಗಿದೆ.

**ಕೆ. ರಾಮದಾಸ್**

## 'ಚದುರಂಗ' - ೮೦ರ ಹೊಸ್ತಿಲಲ್ಲಿರುವ ಬಂಡಾಯಗಾರ

ಕನ್ನಡದ ಹಿರಿಯ ಸಾಹಿತಿ ಚದುರಂಗರಿಗೆ ಈ ಡಿಸೆಂಬರ್ ಕಳೆದರೆ ೮೦ನೆಯ ವರ್ಷ ಕಾಲಿಡುತ್ತದೆ. ಅರಮನೆಯ ವೈಭವದ ವಿಲಾಸ ಜೀವನವನ್ನು ನಿರಾಕರಿಸಿ, ತಾವು ಹುಟ್ಟಿ-ಬೆಳೆದ ಕಲ್ಲಹಳ್ಳಿಯ ಮಣ್ಣಿನ ವಾಸನೆಗೆ ಮರುಳಾದ ಬಂಡಾಯಗಾರ.

ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ ಅದಮ್ಯ ಹಂಬಲದಿಂದಲೇ ಹಳ್ಳಿಯ ಬದುಕನ್ನು ಪ್ರೀತಿಸಿದ - ಚದುರಂಗ, ಗಾಂಧಿ, ಮಾರ್ಕ್ಸ್ ಮತ್ತು ಎಂ.ಎನ್‌ರಾಯ್ ಮಾನವತಾ ವಾದದ ಪ್ರಭಾವಗಳಿಗೆ ಒಳಗಾದರೂ ಯಾವುದಕ್ಕೂ ಯಾಂತ್ರಿಕವಾಗಿ ಬದ್ಧರಾಗದ ಮುಕ್ತ ಮಾನವ ಪ್ರೀತಿಯ ಬರಹಗಾರ. ಚದುರಂಗರ ಜೀವನ ಶೈಲಿಯಾಗಲಿ ಅಥವಾ ಅವರ ಸಾಹಿತ್ಯದ ಲಯವಾಗಲಿ ಸಿದ್ಧಾಂತಗಳ ಪರಿಭಾಷೆಯಿಂದ ಮುಕ್ತವಾಗಿದೆ.

'ಚದುರಂಗ' ಸೃಜನಶೀಲ ಕತೆಗಾರರಾಗಿ ಬರವಣಿಗೆ ಆರಂಭಿಸಿ ೫೦ ವರ್ಷಗಳು ಕಳೆದಿವೆ. ಪ್ರಗತಿಶೀಲ ಚಳವಳಿಯ ಅಬ್ಬರದ ಕಾಲದಲ್ಲಿ ಅ.ನ.ಕೃ., ತ.ರಾ.ಸು, ನಿರಂಜನ, ಕಟ್ಟೀಮನಿಯವರ ಸಹವಾಸದ ಒತ್ತಡದಲ್ಲಿದ್ದರೂ ಕಮರ್ಷಿಯಲ್ ಬರವಣಿಗೆಯ ಚಪಲಚಿತ್ತತೆಯ ಸೋಂಕು ಚದುರಂಗರಿಗೆ ಅಂಟಿಕೊಳ್ಳಲಿಲ್ಲ.

ಸಾಮಾಜಿಕ-ಪರಿವರ್ತನೆಯ ಆಶಯದಲ್ಲಿ ಮೂರ್ತಗೊಂಡ ಜನಪರ ಚಳವಳಿಯಾಗಿ ಭಾವಿಸಿದ ಪ್ರಗತಿಶೀಲ ಸಾಹಿತ್ಯ ಚಳವಳಿಗೆ ಆಕರ್ಷಿತರಾದ ಚದುರಂಗ, ಅದು ದಾರಿತಪ್ಪಿ ಭ್ರಮಾತ್ಮಕವೆನಿಸಿದಾಗ ಅದರಿಂದ ಹಿಂದೆ ಸರಿದರೂ, ಇದರಿಂದ ತಮ್ಮ ಪ್ರಾರಂಭದ ಕತೆಗಳ ಮೇಲೆ ಉಂಟಾದ ಪ್ರಭಾವವನ್ನು ಮರೆಮಾಚುವುದಿಲ್ಲ. ಅ.ನ.ಕೃಷ್ಣರಾಯರ ಮಾಂತ್ರಿಕ ಬರವಣಿಗೆಯ ಅದ್ಭುತ ಮೋಡಿಯನ್ನು ನೆನಪು ಮಾಡುತ್ತಾ, ಚಿತ್ರದುರ್ಗದ ಇತಿಹಾಸವನ್ನು ಆಧರಿಸಿ ತ.ರಾ.ಸು ಬರೆದ ಕಾದಂಬರಿಗಳನ್ನು ಗೌರವಿಸುತ್ತಾರೆ. ಅವರ ಮೊದಲ ಕಥಾಸಂಕಲನಕ್ಕೆ ಅ.ನ.ಕೃ ಮುನ್ನುಡಿ ಬರೆದಿರುವುದನ್ನು ಬಹಳ ಹೆಮ್ಮೆಯಿಂದಲೇ ಸ್ಮರಿಸುತ್ತಾರೆ.

ಪ್ರಗತಿಶೀಲ ಚಳವಳಿಯ ಮೋಡಿಯಿಂದ ಹೊರಬಂದ ಚದುರಂಗ, ನವೋದಯದ ಕುವೆಂಪು, ಮಾಸ್ತಿ, ಕಾರಂತರ ಕೃತಿಗಳಲ್ಲಿ ವ್ಯಕ್ತವಾದ ಹಳ್ಳಿಯ ಬದುಕಿನ ಚಿತ್ರಣದ ಪ್ರಭಾವದಿಂದ

ಉತ್ತೇಜಿತರಾಗಿ 'ಸರ್ವಮಂಗಳ', 'ಉಯ್ಯಾಲೆ' ಕಾದಂಬರಿಗಳನ್ನು ಬರೆದರು. 'ಸರ್ವಮಂಗಳ' (೧೯೫೦) ಅವರ ಮೊದಲ ಕಾದಂಬರಿ ಅದು ಪ್ರಕಟವಾದ ಹತ್ತು ವರ್ಷಗಳ ನಂತರ 'ಉಯ್ಯಾಲೆ' (೧೯೬೦) ಎರಡನೆಯ ಕಾದಂಬರಿ ಪ್ರಕಟವಾಯಿತು. ಮೂರನೆಯ ಕಾದಂಬರಿ 'ವೈಶಾಖ' (೧೯೮೧) ಬರೆಯಲು ಚದುರಂಗ ೨೦ ವರ್ಷಗಳು ಕಾಯಬೇಕಾಯಿತು.

ಬಂಡಾಯಗಾರನಾಗಿ ಕಲ್ಲಹಳ್ಳಿಯ ರೈತಾಪಿ ಜೀವನವನ್ನು ಪ್ರೀತಿಸಿದ ಚದುರಂಗ, ತಮ್ಮ ಪ್ರೀತಿಯ ಜೀವನಸಂಗಾತಿ ದೊಡ್ಡಮಣ್ಣಿಯವರ ಬೆಂಬಲದಿಂದ ಆರ್ಥಿಕ-ಸಾಮಾಜಿಕ ಸವಾಲುಗಳನ್ನು ದಿಟ್ಟತನದಿಂದ ನಿಭಾಯಿಸಿದರೂ, ಈ ಒತ್ತಡದ ಮನಃಸ್ಥಿತಿಯಲ್ಲಿ ಬರವಣಿಗೆಯ ಅವಕಾಶಗಳಿಂದ ವಂಚಿತರಾಗಬೇಕಾಯಿತು. ವಾರಕ್ಕೊಮ್ಮೆ ಮಾತ್ರ ಹುಣಸೂರಿನಿಂದ ಪತ್ರಿಕೆಗಳನ್ನು ತಂದು ಇರಬೇಕಾದ ಹಳ್ಳಿಯ ಪರಿಸರದಲ್ಲಿ ಚದುರಂಗರ ಜೀವನದ ವರ್ಷಗಳು ಉರುಳಿದವು. ಬರವಣಿಗೆಗಿಂತ ಬದುಕು ದೊಡ್ಡದೆಂದು ತಿಳಿದಿರುವ ಚದುರಂಗರು ಕನ್ನಡದ ಮಹತ್ವದ ಸಾಹಿತಿಯಾಗಿರುವುದು ಈ ವಿಷಯದಿಂದಲೇ ಎಂಬುದರಲ್ಲಿ ಅನುಮಾನವಿರಲಾರದು.

ಚದುರಂಗರು ಕಲ್ಲಹಳ್ಳಿಯಿಂದ ಮೈಸೂರಿಗೆ ಹಿಂತಿರುಗಿ 34 ವರ್ಷಗಳು ಕಳೆದಿವೆ. ತಮ್ಮ ಏಕೈಕ ಪುತ್ರ ವಿಕ್ರಮನ ಭವಿಷ್ಯದ ಕನಸುಗಳಿಗಾಗಿ ಅನಿವಾರ್ಯವಾಗಿ ತಮ್ಮ ಪ್ರೀತಿಯ ಹಳ್ಳಿಯನ್ನು ತೊರೆಯಬೇಕಾಯಿತು. ವಿಕ್ರಮ ಬೆಳೆದು ಯುವಕನಾಗುವ ಹೊತ್ತಿಗೆ, ಚದುರಂಗರ ಜೀವನದ ಜೊತೆಗಾತಿ ದೊಡ್ಡಮ್ಮಣ್ಣಿಯವರು ಕ್ಯಾನ್ಸರ್‌ಗೆ ಬಲಿಯಾಗಿ ಆಘಾತ ಅನುಭವಿಸಬೇಕಾಯಿತು. ದೊಡ್ಡಮ್ಮಣ್ಣಿಯವರ ಪ್ರಸ್ತಾಪ ಬಂದಾಗಲೆಲ್ಲ ಚದುರಂಗರ ಕಣ್ಣು ತುಂಬಿ ಬರುತ್ತದೆ.

ಸಮಕಾಲೀನ ಕನ್ನಡ ಸಾಹಿತ್ಯ ಮುಖ್ಯವಾಹಿನಿಯಿಂದ ದೂರ ಸರಿದು ಅಜ್ಞಾತರಾದ ಚದುರಂಗ, ೨೦ ವರ್ಷಗಳ ನಂತರ 'ವೈಶಾಖ'ದಂತಹ ಹೊಸ ಸಂವೇದನೆಯ ಕಾದಂಬರಿ ಬರೆದು ಬತ್ತಿಹೋಗದ ತಮ್ಮ ಸೃಜನಶೀಲತೆಯ ಜೀವಂತಿಕೆಯನ್ನು ದಾಖಲಿಸಿದರು. ಈ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯ ಗೌರವ ಪಡೆದ ಚದುರಂಗ ಕನ್ನಡದ ವಿಶಿಷ್ಟ ಸಾಹಿತಿಯಾಗಿ ಮಾನ್ಯರಾಗಿದ್ದಾರೆ.

ಮಂಡ್ಯದ ೬೩ನೆಯ ಸಾಹಿತ್ಯ ಸಮ್ಮೇಳನದ ನಿರ್ವಿವಾದಿತ ಅಧ್ಯಕ್ಷರಾಗಿ ಹೊನಲು ಬೆಳಕಿನಲ್ಲಿ ಉತ್ಸವ ಮೂರ್ತಿಯಾಗಿ ಮಿಂಚಿ ಒಂದು ವರ್ಷ ಸಮೀಪಿಸುತ್ತಿರುವ ಮತ್ತು ೮೦ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಪತ್ರಿಕೆಯ ಪರವಾಗಿ ಮಾತುಕತೆಗೆ ತೊಡಗಿದಾಗ ಚದುರಂಗರ ಜೀವನದ ಮತ್ತು ಸಾಹಿತ್ಯಾಭಿವ್ಯಕ್ತಿಯ ನೆನಪುಗಳು ಈ ರೀತಿಯಲ್ಲಿ ಎಳೆಎಳೆಯಾಗಿ ಬಿಚ್ಚತೊಡಗಿದವು.

ನಾನು ಸಾಂದರ್ಭಿಕ ಮಾತುಕತೆಯ ಇಂಗಿತ ವ್ಯಕ್ತಪಡಿಸಿದಾಗ ಸಂಕೋಚದಿಂದ ಮುದುಡುವ ಚದುರಂಗ ಬನ್ನಿ ಅನೌಪಚಾರಿಕವಾಗಿ ಮಾತನಾಡೋಣವೆಂದರು. ಈ ಮಾತುಕತೆಯಲ್ಲಿ ಭಾಗಿಯಾಗಲು ದೇವನೂರು ಮಹಾದೇವ ಅವರನ್ನು ಕರೆದಾಗ ಮಹಾದೇವ ಪ್ರೀತಿಯಿಂದ ನಮ್ಮ ಜೊತೆಗೆ ಸೇರಿಕೊಂಡರು. ಸ್ವಲ್ಪ ಹೊತ್ತಿನ ನಂತರ ಚದುರಂಗರ ಮಗ ವಿಕ್ರಮ ಕೂಡ ನಮ್ಮ ಚರ್ಚೆಯಲ್ಲಿ ಭಾಗಿಯಾದರು.

***. ಯು.ಆರ್. ಅನಂತಮೂರ್ತಿಯವರಿಗೆ ಜ್ಞಾನಪೀಠ, ಗಿರೀಶ್‌ಕಾರ್ನಾಡ್‌ರಿಗೆ ಸಾಹಿತ್ಯ ಅಕಾಡೆಮಿ, ಬಿ.ವಿ. ಕಾರಂತರಿಗೆ ಕಾಳಿದಾಸ್ ಸಮ್ಮಾನ್ ಇತ್ಯಾದಿ ಪ್ರಶಸ್ತಿಗಳು ನಮ್ಮ ಅಭಿಮಾನ ಪಡಗರಕ್ಕೆ ಕಾರಣವಾಗಿವೆ. ಇದರಿಂದ ಸೃಜನಶೀಲತೆಯು ಮೇಲೆ ಯಾವ ರೀತಿಯು ಪರಿಣಾಮವಾಗಬಹುದು ಸಾರ್.**

ನೋಡಿ, ಸೃಜನಶೀಲತೆ ಒಂದು ರೀತಿ ಲೇಖಕನ ಅಂತರಂಗದ ಕ್ರಿಯೆ. ಪ್ರಶಸ್ತಿ, ಉತ್ಸವ, ಸನ್ಮಾನ ಇವಕ್ಕೂ ಸೃಜನಶೀಲತೆಗೂ ನೇರವಾದ ಸಂಬಂಧವಿಲ್ಲ. ಆದರೆ ಇವು ಬರಹಗಾರನಿಗೆ ಕಲಾವಿದನಿಗೆ ಅವನ ಸೃಜನಶೀಲತೆಯ ಸಾಂಸ್ಕೃತಿಕ ಸಾಮಾಜಿಕ ಪ್ರಶಂಸೆಯಾಗಿ ಅವನ ಸೃಜನಶೀಲತೆಯನ್ನು ಉತ್ತೇಜಿಸಬಲ್ಲವು. ನಮ್ಮಲ್ಲಿ ಜ್ಞಾನಪೀಠ ಪ್ರಶಸ್ತಿ ೬ ಜನರಿಗೆ ಬಂದಿದೆ ಎಂಬ ಅಭಿಮಾನಕ್ಕೆ ಕಾರಣವಾದಂತೆ, ಇಂತಹ ಪ್ರಶಸ್ತಿಗೆ ಅರ್ಹರಾದವರು ನಮ್ಮಲ್ಲಿ ಇನ್ನೂ ಹಲವರಿದ್ದಾರೆ ಎಂಬುದರ ಕಡೆಗೂ ನಮ್ಮ ಗಮನ ಸೆಳೆಯುತ್ತದೆ.

***. ಸಾಹಿತ್ಯ ಸಮ್ಮೇಳನವನ್ನು ಉತ್ಸವ, ಸಂತೆ ಇತ್ಯಾದಿಯಾಗಿ ಕರೆಯುತ್ತಾರೆ. ಸಮ್ಮೇಳನಾದ್ಯಕ್ಷರಾದ ನಿಮ್ಮ ಅನುಭವ ಯಾವ ರೀತಿಯದು.**

ನನ್ನನ್ನು ಮಂಡ್ಯದ ೬೩ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನೆಂದು ಘೋಷಿಸಿದಾಗ ನಾನು ತುಂಬ ಸಂಕೋಚಪಟ್ಟೆ. ಸ್ವಭಾವದಿಂದಲೇ ನಾನು ಉತ್ಸವ, ಮೆರವಣಿಗೆಗೆ ಒಗ್ಗದ ಮನುಷ್ಯ. ಈ ವಯಸ್ಸಿನಲ್ಲಿ ಇದೆಲ್ಲ ಯಾಕೆ ಅನಿಸಿತು. ಪ್ರೀತಿಯ ಒತ್ತಾಯಕ್ಕೆ ಮಣಿಯಬೇಕಾಯಿತು. ಮೆರವಣಿಗೆಗೆ ತಂದು ನಿಲ್ಲಿಸಿದ್ದರು. ದಸರಾ ದರ್ಬಾರ್ ತಿರಸ್ಕರಿಸಿದ ನಾನು ಇದೆಲ್ಲ ಬೇಡವೆಂದೆ. ಸಾಹಿತ್ಯ ಪರಿಷತ್ತಿನವರು ನನಗೆ ತೊಂದರೆಯಾಗದಂತೆ ನೋಡಿಕೊಂಡರು. ಹೆಚ್ಚು ಬರವಣಿಗೆ ಮಾಡದ ನನ್ನನ್ನು ಮಂಡ್ಯದ ಜನರು ಗೌರವಿಸಿದ ರೀತಿ, ಕನ್ನಡಿಗರ ಅಪಾರ ಪ್ರೀತಿಯಿಂದ ನಾನು ಸಂತೋಷಪಟ್ಟೆ. ಇದೊಂದು ಸಾಂಸ್ಕೃತಿಕ ಕ್ರಿಯೆ ಎಂಬ ಅನುಭವ ಉಂಟಾಯಿತು.

*** ನೀವು ಬರವಣಿಗೆ ಆರಂಭಿಸಿದ ಪ್ರಗತಿಶೀಲ ಕಾಲದ ವಾತಾವರಣ ಹೇಗಿತ್ತು ?**

ಬಹಳ ಕಷ್ಟದ ಕಾಲ ಕಣಪ್ಪ, ಅವತ್ತಿಂದು. ಇಲ್ಲೊಂದು ಸ್ವಾರಸ್ಯ ಮುಖ್ಯವಾಗಿ ಹೇಳ್ತೀನಿ. ನನಗೆ ತುಂಬ ಆರ್ಥಿಕವಾಗಿ ತೊಂದ್ರೆ ಇತ್ತು. ಸರ್ವಮಂಗಳ ಕಾದಂಬರಿ ಬರೆದು ಕುವೆಂಪು ಅವರಿಗೆ ಒಂದು ಪ್ರತಿ ಕೊಟ್ಟೆ. ಅವರು ಓದಿ ಮೆಚ್ಚಿಕೊಂಡ್ರು. "ಚದುರಂಗ, ನೀವು ಪ್ರಗತಿಶೀಲರು ಬರೆದು ಜೀವನ ಮಾಡ್ತೀವಿ ಅಂತ ಹೊರಟ್ಟಿದ್ದೀರಲ್ಲ. ಇದು ಯಾವ ಹುಚ್ಚು ನಾವೆಲ್ಲ ಉದ್ಯೋಗದಲ್ಲಿದ್ದು ಬರೀತಿದ್ದೇವೆ" ಅಂದ್ರು. ನಾನು ಸುಮ್ಮನಿದ್ದೆ 'ಸರ್ವಮಂಗಳ' - ಪಠ್ಯಪುಸ್ತಕ ಮಾಡಬಹುದು. ನೀವು ತೀ.ನಂ.ಶ್ರೀ, ಡಿ.ಎಲ್.ಎನ್ ಅವರಿಗೆ ಒಂದು ಮಾತು ಹೇಳಿ ಅಂದ್ರು. ನಾನು ಆಗುಂಬೆಗೆ ಸೂರ್ಯಾಸ್ತ ನೋಡಲು ಹೋದಾಗ ಅಲ್ಲಿ ಆಕಸ್ಮಿಕವಾಗಿ ಭೇಟಿಯಾದ ತೀ.ನಂ.ಶ್ರೀ ಮತ್ತು ಡಿ.ಎಲ್.ಎನ್. ಸರ್ವಮಂಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಪಠ್ಯಪುಸ್ತಕ ಮಾಡಲು ಚೆನ್ನಾಗಿದೆ ಎಂದರು. ಮೀಟಿಂಗ್ ಆದ ಮೇಲೆ ಕುವೆಂಪು ಮನೆಗೆ ಹೋದೆ. ಕುವೆಂಪು ಸ್ವಲ್ಪ ನಿಧಾನಿಸಿ ಹೇಳಿದ್ರೂ 'ಚದುರಂಗ, ನಿಮ್ಮ ಸರ್ವಮಂಗಳ ಪಠ್ಯಪುಸ್ತಕವಾಗಲಿಲ್ಲ.

ಪ್ರಮಾದವಾಯಿತು. ಮೀಟಿಂಗ್‌ನಲ್ಲಿ ಡಿ.ಎಲ್.ಎನ್, ತೀ.ನಂ.ಶ್ರೀ ಸೂಚಿಸಲಿ ಅಂತ ನಾನು ಸುಮ್ಮನಿದ್ದೆ. ಹೇಗೂ ಪುಟ್ಟಪ್ಪನವರು ಸೂಚಿಸಬಹುದು ಅಂತ ಅವರು ಸುಮ್ಮನಾದ್ರು. ನಾವು ಮಾತನಾಡದೆ ಪ್ರಮಾದವಾಯಿತು. ಕುವೆಂಪು ಸ್ವಲ್ಪ ಹೊತ್ತು ಸುಮ್ಮನಿದ್ದು, ಹೇಳಿದ್ರೂ - "ಒಳ್ಳೆ ವಿಚಾರ ಬಂದಾಗ ಮಾತನಾಡದೆ ಮೌನವಾಗಿದ್ರೆ ಎಂತಹ ಪ್ರಮಾದವಾಗಬಲ್ಲದು ಎಂಬುದನ್ನು ನಾನು ಇದರಿಂದ ಪಾಠ ಕಲಿತೆ" ಅಂತ ಪರಿತಪಿಸಿದರು. ಆಮೇಲೆ ಪಠ್ಯಪುಸ್ತಕವಾಯಿತು.

ಅ.ನ.ಕೃ, ತ.ರಾ.ಸು ಎಲ್ಲ ಆರ್ಥಿಕ ಆಧಾರ ಇಲ್ಲದೆ ಹಣಕ್ಕಾಗಿ ಪ್ರಕಾಶಕರು ಕೇಳಿದ ಕಾದಂಬರಿ ಬರೆಯಬೇಕಾಯಿತು. ಈಗಿನಂತೆ ಬರವಣಿಗೆಗೆ ಆಗ ಪ್ರೋತ್ಸಾಹ ಅಷ್ಟಾಗಿ ಇರಲಿಲ್ಲ.

***. ನಿಮ್ಮ ಹಳ್ಳಿ ಜೀವನದ ಯಾವುದಾದ್ರು ಸ್ವಾರಸ್ಯದ ವಿಚಾರ ಹೇಳಿ. -**

ಒಂದು ತಮಾಷೆ ನಡೀತು, ಕೇಳಿ. ನನ್ನ ಮಗ ವಿಕ್ರಮ ಹುಟ್ಟಿದ ಸಂದರ್ಭ. ನನ್ನ ಹೆಂಡ್ತಿ ಬಾಣಂತಿತನ ಮಾಡೋಕೆ ಯಾರು ಹೆಂಗಸರು ಇರಲಿಲ್ಲ. ಯಾರೋ ಸ್ನೇಹಿತರು, "ಮೈಸೂರಿನಲ್ಲಿ ಒಬ್ಬರು ಲಿಂಗಾಯಿತ ಸ್ವಾಮಿ ಇದಾರೆ. ಅವರನ್ನ ಕೇಳಿದರೆ ಯಾರನ್ನಾದ್ರು ಏರ್ಪಾಡು ಮಾಡ್ತಾರೆ" ಅಂತ ಅವರ ಹತ್ರ ಕರಕ್ಕೊಂಡು ಹೋದ್ರು. ಸ್ವಾಮಿಗಳಿಗೆ ನನ್ನ ಕಷ್ಟ ಹೇಳ್ಕೊಂಡೆ. "ಆಗಲಿ ಅದಕ್ಕೇನಂತೆ, ಒಂದು ವಾರ ಬಿಟ್ಟು ಬನ್ನಿ, ರೆಡಿ ಮಾಡಿ ಇಡ್ತೀನಿ" ಅಂದ್ರು. ಒಂದು ವಾರ ಬಿಟ್ಟುಹೋದೆ. ಒಬ್ಬಳು ಕಟ್ಟುಮಸ್ತಾದ ಹೆಂಗಸನ್ನು ಕರೆಸಿದ್ರು. ಈಕೆಯನ್ನು ಕರೆದುಕೊಂಡು ಹೋಗಿ ಅಂದ್ರು. ಸಂಬಳ ಏನು ಕೊಡಬೇಕು ಅಂದೆ. ಅದೆಲ್ಲ ನೀವೇ ನೋಡಿ ಕೊಡಿ ಅಂದ್ರು. ಸರಿ ಆಕೆಯನ್ನು ಕರೆದುಕೊಂಡು ಶಿವರಾಮ ಪೇಟೆಗೆ ಹೋಗಿ, ಹೊಸ ಸೀರೆ-ರವಿಕೆ ಎಲ್ಲ ಕೊಡ್ಸಿ ಕಲ್ಲಹಳ್ಳಿಗೆ ಕರೆತಂದೆ. ಎರಡು-ಮೂರು ದಿನ ಕಳೀತು. ನಾಲ್ಕನೇ ದಿನ ನಮ್ಮ ಹಳ್ಳಿ ರೈತರೆಲ್ಲ ಕುಳಿತಿರುವಾಗ ನೀರಿನ ಕೊಡ ತಂದು ಜೋರಾಗಿ ನೆಲಕ್ಕೆ ಕುಕ್ಕಿ "ಅಲ್ಲ ಕಣ್ರಯ್ಯಾ, ಇವಯ್ಯ ನನ್ನ ಕರಕೊಂಡು ಬಂದು ಮಡಕಣ್ತಾನೆ" ಅಂತ ತಿಳಿಕಂಡಿದ್ದೆ. ನೋಡ್ಕೊಬೇಕಂತೆ ತೆಗಿತೆಗಿ ಅಂತ ಹೇಳಿ ಹೊರಟೇ ಹೊದ್ಲು ಚದುರಂಗರಿಗೆ ತಮ್ಮ ಕಲ್ಲಹಳ್ಳಿಯ ಜೀವನದ ಪ್ರಸ್ತಾಪ ಬಂದರೆ ತಲ್ಲೀನತೆಯಿಂದ ಒಂದೊಂದೇ ಪ್ರಸಂಗಗಳನ್ನು ಹೇಳುತ್ತಾ ಮೈಮರೆತು ಬಿಡುತ್ತಾರೆ. ಹಳ್ಳಿಯಲ್ಲಿ ದೂರದ ಬಾವಿಯಿಂದ ನೀರು ಹೊತ್ತುಹೊತ್ತು ಸಾಕಾಗಿ ಮನೆಯ ಒಳಾಂಗಣದಲ್ಲೇ ಬಾವಿಯೊಂದನ್ನು ತೆಗಿಸಲು ಹೋಗಿ ಮನೆಯೇ ಕುಸಿದು ಬೀಳುವ ಪರಿಸ್ಥಿತಿ ಬಂದಾಗ ಆಗ ಮುಖ್ಯಮಂತ್ರಿಯಾಗಿದ್ದ ತಮ್ಮ ಸ್ನೇಹಿತ ದೇವರಾಜ ಅರಸು ಇದನ್ನು ನೋಡಿ ಗಾಬರಿಯಾಗಿ, ಕೊನೆಗೆ ಇಂಜನಿಯರ್‌ಗಳನ್ನು ಕರೆಸಿ ಬಾವಿ ಮುಚ್ಚಿಸಿದ ಕಷ್ಟಕಾರ್ಪಣ್ಯವನ್ನು ವಿವರವಾಗಿ ನಿರೂಪಿಸಿದರು.

ಹೀಗೆ ಚದುರಂಗ ಅವರ 'ವೈಶಾಖ' ಕಾದಂಬರಿಯಲ್ಲಿ ಸವಿಸ್ತಾರವಾದ ವಿವರಗಳಲ್ಲಿ ವ್ಯಕ್ತವಾಗುವ ಪಾತ್ರಗಳ ಸಂಭಾಷಣೆಯಂತೆ ಒಂದೊಂದನ್ನೇ ಬಿಡಿಬಿಡಿಯಾಗಿ ಹೇಳುತ್ತಾ ಹೋಗುತ್ತಾರೆ. ಇದೇ ಅವರ ಕಥನ ಶಕ್ತಿಯಾಗಿ ಕಾಣುತ್ತದೆ.

'ವೈಶಾಖ' ಕಾದಂಬರಿಯ ಮೇಲೆ ನವ್ಯ-ಬಂಡಾಯ-ದಲಿತ ಚಳವಳಿಗಳ ಪ್ರಭಾವ ಇರಬಹುದೇ- ನವ್ಯ ಸಾಹಿತ್ಯದ ಗೋಪಾಲ ಕೃಷ್ಣ ಅಡಿಗ ನನ್ನ ಆತ್ಮೀಯ ಸ್ನೇಹಿತರಾಗಿದ್ದರು. ಆದರೆ ನವ್ಯದ ಪ್ರಭಾವ ನನ್ನ ಮೇಲೆ ಅಷ್ಟಾಗಿ ಆಗಿಲ್ಲ. ನವ್ಯರ ಭಾಷಾ ಪ್ರಯೋಗ ನನ್ನನ್ನು ಬೆರಗುಮಾಡಿತು. ನವೋದಯದ ಪ್ರಭಾವವೇ ನನ್ನ ಮೇಲೆ ಹೆಚ್ಚಾಗಿರಬಹುದು. 'ವೈಶಾಖ' ಬರೆಯಲು ನನಗೆ ದಲಿತ ಜನಾಂಗದ ನಿಕಟವಾದ ಸಂಪರ್ಕವೇ ಮುಖ್ಯ ಕಾರಣ. ಅವರ ಜೀವನವನ್ನು ನಾನು ಅನುಭವಿಸುವಷ್ಟು ಹತ್ತಿರದಿಂದ ನೋಡುವ ಅವಕಾಶ ನನಗೆ ದೊರೆಯಿತು. ದಲಿತ ಕುಟುಂಬವೊಂದು ನನ್ನ ಮನೆಯ ಹಿಂಭಾಗದಲ್ಲಿ ವಾಸಮಾಡಲು ನಾನು ಅವಕಾಶ ಮಾಡಿಕೊಟ್ಟೆ. ಈ ಹತ್ತಿರದ ಸಂಬಂಧವೇ ವೈಶಾಖದ ಪ್ರೇರಣೆ. ಇದು ಹಳ್ಳಿಯ ಎಲ್ಲ ಜಾತಿಗಳ ಅನುಭವದ ಮೊತ್ತ ಅಷ್ಟೆ. ದೇವನೂರು ಮಹಾದೇವನ ಪ್ರಭಾವ ನನ್ನ ಮೇಲೆ ಇದ್ದೇ ಇದೆ. ಅದೇ ರೀತಿ ಎಲ್ಲ ಸಾಹಿತ್ಯ ಚಳವಳಿಗಳ ಒಳ್ಳೆಯದನ್ನು ನಾನು ಸ್ವೀಕರಿಸಿದ್ದೇನೆ. ಈ ಚಳವಳಿಗಳು ಆಯಾ ಕಾಲದ ಒತ್ತಡದ ಪರಿಣಾಮವಾದ್ದರಿಂದ ಅವುಗಳನ್ನು ತಿರಸ್ಕರಿಸಬೇಕಾಗಿಲ್ಲ. ಒಂದು ಸಾಹಿತ್ಯ ಕೃತಿಯನ್ನು ಒಳ್ಳೆಯ ಕೃತಿ - ಸಾಮಾನ್ಯ ಕೃತಿ ಎಂದು ಗುರುತಿಸಬೇಕೇ ಹೊರತು ಸಾಹಿತ್ಯ ಚಳವಳಿಗಳ ವರ್ಗೀಕರಣದ ಮಾನದಂಡ ನನಗೆ ಸರಿಕಾಣುವುದಿಲ್ಲ.

ಚದುರಂಗ ೨೦ ವರ್ಷಗಳ ನಂತರ ಬರೆಯಲು ಹೋದಾಗ ಉಂಟಾದ ಚಡಪಡಿಕೆ ಕಳವಳ ಬರೆಯಲು ನನ್ನಿಂದ ಸಾಧ್ಯವಾಗಲಾರದು ಎಂಬ ಅಳುಕು - 'ಇಲಿಬೋನು' ಅಸಂಗತ ನಾಟಕ ಬರೆದಾಗ ಹುಟ್ಟಿದ ಬರವಣಿಗೆಯ ವಿಶ್ವಾಸ 'ವೈಶಾಖ' ಬರೆಯಲು ಸಾಧ್ಯವಾದ ಹೆಂಡತಿಯ ಜೊತೆಯ ಜಗಳದ ಒತ್ತಡದ ಪರಿಣಾಮವೆಂಬುದನ್ನು ಸ್ವಾರಸ್ಯವಾಗಿ ತಿಳಿಸಿದರು. ದೇವನೂರು ಮಹಾದೇವ, ಸಾರ್ ಹೆಂಡತಿಯ ಜಗಳದ ವಿಚಾರ ವಿವರಿಸೋದು ಅಪಾಯ. ತಮ್ಮ ಗಂಡನೂ ಬರೆಯಲಿ ಎಂದು ಜಗಳ ತೆಗೆದು ತೊಂದರೆಯಾಗಬಹುದೆಂದು ತಮಾಷೆ ಮಾಡಿದರು.

*** ಆಯಾ ಜಾತಿಯ ಲೇಖಕರು ತಮ್ಮ ಜಾತಿಯ ಅನುಭವಗಳನ್ನು ಬರೆದಾಗ ಮಾತ್ರ ಅಥೆಂಟಿಕ್, ಒರಿಜಿನಲ್ ಆಗುತ್ತೆ ಅನ್ನುವ ವಾದ ಸರಿಯೇ.**

ಇದನ್ನು ನಾನು ಒಪ್ಪೋಲ್ಲ. ಹೆಂಗಸರು-ಗಂಡಸರ ವಿಚಾರ ಬರೆಯಕಾಗೊಲ್ಲ. ಹಾಗಾದರೆ, ಷೇಕ್ಸ್‌ಪಿಯರ್, ಟಾಲ್‌ಸ್ಟಾಯ್, ಕುವೆಂಪು, ಮಾಸ್ತಿ, ಕಾರಂತ ಎಲ್ಲ ಬರೆದಿರುವುದು ಹೇಗೆ - ಇದು ಅನುಭವದ ಪ್ರಶ್ನೆ. ಎಲ್ಲ ದಲಿತ ಲೇಖಕರು ಮಹಾದೇವನ ಥರಾ ಬರೆಯೋಕೆ ಸಾಧ್ಯವೇ? ಈ ತರ್ಕ ಮನುಷ್ಯ ಮನುಷ್ಯನಾಗಿ ನೋಡುವ, ಗ್ರಹಿಸುವ, ಅನುಭವಿಸುವ ಸಂವೇದನೆಗಳನ್ನೇ ಪ್ರಶ್ನಿಸುತ್ತದೆ. ಈ ವಾದ ಸಮಂಜಸವಾಗಿ ಕಾಣುವುದಿಲ್ಲ.

*** ಸಾಹಿತ್ಯ - ಸಾಂಸ್ಕೃತಿಕ ಕ್ಷೇತ್ರದಲ್ಲಿ ನಿಮಗಿರುವ ಹೆಮ್ಮೆ ಮತ್ತು ಆತಂಕ ಯಾವುದು ?**

ಸಾಹಿತಿಗಳ ನಿರ್ಲಜ್ಜತೆ ಮತ್ತು ಗುಂಪುಗಾರಿಕೆ ನನಗೆ ಆತಂಕ ಉಂಟುಮಾಡಿದೆ. ಇದರಿಂದ ಚರ್ಚೆ-ಸಂವಾದ ಪ್ರೀತಿ ಎಲ್ಲ ನಿಂತು ಹೋಗಿದೆ. ಕುವೆಂಪು ಯಾವತ್ತೂ ಯಾರ ಬಗ್ಗೆಯೂ ಕೀಳಾಗಿ ಮಾತನಾಡಿದವರಲ್ಲ. ಅ.ನ.ಕೃ ಹತ್ತಿರ ಮಾತನಾಡಿದಾಗಲೂ ಅಷ್ಟೆ. ಅವರು ಯಾರ ಬಗ್ಗೆಯು ಲಘುವಾಗಿ ಮಾತನಾಡಲಿಲ್ಲ. ನಾವು ಸುಮ್ಮನೆ ಕೆರೆದು ಕೆರೆದು ಗಾಯ

ಮಾಡಿಕೊಳ್ಳುತ್ತಿದ್ದೇವೆ. ಸಾಹಿತಿಗಳ ನಡುವಣ ಈ ಗೋಡೆಗಳನ್ನು ಕೆಡವಿ ಹಾಕಬೇಕು. ಇದು ನಮ್ಮ ನೈತಿಕ ಜವಾಬ್ದಾರಿ.

ಹೆಮ್ಮೆ ಏನು ಅಂದ್ರೆ, ನಮ್ಮ ಸಾಹಿತ್ಯ ಪ್ರಬುದ್ಧವಾಗಿ ಬೆಳೆಯುತ್ತಿದೆ. ಹುಲುಸಾದ ಬೆಳೆ ಬರುತ್ತಿದೆ. ನಮ್ಮ ಕನ್ನಡ ಸಾಹಿತ್ಯ ಬೇರೆ ಭಾಷೆಗಳ ಸಾಹಿತ್ಯಕ್ಕಿಂತ ಒಂದು ತೂಕ ಹೆಚ್ಚು ಅನ್ನುವ ಹೆಮ್ಮೆಯಾಗುತ್ತದೆ.

*** ರ ುವಾಗಿ-ಸಾಮಾಜಿಕವಾಗಿ ನಿಮ್ಮ ಹೆಮ್ಮೆ - ಆತಂಕ ಯಾವುದು ?**

ರಾಜಕೀಯವಾಗಿ ಪ್ರಜಾಪ್ರಭುತ್ವ ಗಟ್ಟಿಯಾಗುತ್ತಿರುವುದು ಹೆಮ್ಮೆಯಾದರೆ, ಹೆಂಡ-ಹಣದ ಮೂಲಕ ಜನಪ್ರತಿನಿಧಿಯಾಗುವ ಭ್ರಷ್ಟತೆ ಆತಂಕ ತಂದಿದೆ. ಸಾಮಾಜಿಕವಾಗಿ ಗ್ರಾಮಾಂತರ ಪ್ರದೇಶದ ದೀನ-ದಲಿತರ ಜಾಗೃತಿಯಾಗುತ್ತಿರುವುದು ಹೆಮ್ಮೆಯಾದರೆ, ಅದೇ ರೀತಿ ಹಳ್ಳಿಗಳಲ್ಲಿ ಕುಡಿತ ಹೆಚ್ಚುತ್ತಿರುವುದು, ಕೊಳಕು ರಾಜಕೀಯದಿಂದ ಹಳ್ಳಿಗಳು ನಾಶವಾಗುತ್ತಿರುವುದು ನನಗೆ ತುಂಬ ಆತಂಕ ಉಂಟುಮಾಡಿದೆ.

ಚದುರಂಗ ಈಗ ಹೊಸ ಕಾದಂಬರಿ ಬರೆಯುವುದರಲ್ಲಿ ನಿರತರಾಗಿದ್ದು ೨೦೦ ಪುಟ ಬರೆದು ಮುಗಿಸಿದ್ದಾರೆ. ಇನ್ನೂ ೧೦೦ ಪುಟವಾಗಬಹುದೆಂದು ಅಂದಾಜಿದೆ. ಮರಕ್ಕೂ - ಮನುಷ್ಯನಿಗೂ ಸಂಬಂಧದ ವಸ್ತು. ಈ ಕಾದಂಬರಿಯಲ್ಲಿ ಬರುವ ಕಾಲೂರ ಎಲ್ಲೂ ಕಾಲೂರಲಾಗುವುದೇ ಇಲ್ಲ. ಕೊನೆಗೆ ಅವನು ಮರವೇ ಆಗಿಬಿಡುವ ಕಥೆ.

ಕಳೆದ ದಸರಾದ ಸಂದರ್ಭದಲ್ಲಿ ಪ್ಲೇಗು ರೋಗದ ಸೋಂಕಿನ ಭೀತಿಯಿಂದ ಜನ ತತ್ತರಿಸಿದಾಗ ದಸರಾ ಉತ್ಸವ ನಿಲ್ಲಿಸಬೇಕೆಂದು ಚದುರಂಗ ಜನಪರ ನಿಲುವಿನಿಂದ ಪ್ರತಿಭಟಿಸಿದರು. ದಸರಾ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ತಮ್ಮ ಹತ್ತಿರದ ಸಂಬಂಧಿ ಡಿ. ಜಯದೇವರಾಜ ಅರಸು ಅವರ ದಸರಾ ನಡೆಸಲೇಬೇಕೆಂಬ ಅಭಿಪ್ರಾಯಕ್ಕೆ ಸೊಪ್ಪು ಹಾಕಲಿಲ್ಲ.

ಚದುರಂಗರ ಸಾಹಿತ್ಯ ಸಮ್ಮೇಳನಾಧ್ಯಕ್ಷ ಭಾಷಣದ ಈ ಭಾಗ ಗಮನಾರ್ಹವಾಗಿದೆ - "ಮನುಷ್ಯ ಪ್ರೀತಿಯನ್ನು ಉಳಿಸುವುದಕ್ಕಾಗಿಯೇ ಬೆಳೆಸುವುದಕ್ಕಾಗಿಯೇ ಸಾಹಿತಿಯಾದವನು ಎಂದೂ ಎಲ್ಲಾ ಕಾಲದಲ್ಲೂ ವ್ಯವಸ್ಥೆಯ ವಿರೋಧಿಯಾಗಿಯೇ ಉಳಿಯುತ್ತಾನೆ. ಜಡ್ಡುಗಟ್ಟಿ ಅಮಾನವೀಯವಾಗಿ ನಡೆದುಕೊಳ್ಳುವುದು ವ್ಯವಸ್ಥೆಯ ಹುಟ್ಟುಗುಣ. ಅಂಥ ವ್ಯವಸ್ಥೆಯ ವಿರುದ್ಧ ಬಂಡೇಳುವುದು ಸಾಹಿತಿಗೂ ಅಷ್ಟೇ ಅನಿವಾರ್ಯ. ಮನುಷ್ಯತ್ವವನ್ನು ಹಾಳುಗೆಡುಹುವ ವ್ಯವಸ್ಥೆಯ ಜತೆಗೆ ಕಾರಣಕ್ಕಾಗಿ ರಾಜಿಮಾಡಿಕೊಂಡ ಕ್ಷಣ ಸಾಹಿತಿ ಸಾಯುತ್ತಾನೆ. ಸಾಹಿತಿ ಸ್ವರ್ಗವನ್ನು ಬಯಸುವುದಿಲ್ಲ, ಯಾಕೆಂದರೆ, ಸ್ವರ್ಗದಲ್ಲಿ ಅವನಿಗೆ ಕೆಲಸವೇ ಇಲ್ಲ."

ಈಗಲೂ ಮಾನವೀಯ ನಿಲುವಿನ ನಿಷ್ಕಳಂಕ ಬಂಡಾಯಗಾರರಾದ ಚದುರಂಗ ಸಂಕೋಚ, ಸಭ್ಯತೆ-ಸಜ್ಜನಿಕೆಯ ವಿನಯವಂತಿಕೆಯಿಂದ ಮುದುಡಿಕೊಳ್ಳುವ ದೊಡ್ಡವ್ಯಕ್ತಿ.

ಚದುರಂಗರ ಜೊತೆಯಲ್ಲಿ ಮಾತನಾಡುತ್ತಾ ಕುಳಿತರೆ ಕಾಲ ಸರಿಯುವುದು ಅರಿವಿಗೆ ಬರುವುದಿಲ್ಲ. ಅವರ ಪ್ರೀತಿಯ ಮಗ ವಿಕ್ರಮ ಮತ್ತು ಸೊಸೆ ವಿಜಯಲಕ್ಷ್ಮಿ 'ಹೊತ್ತಾಯಿತು' ಊಟಕ್ಕೆ ಬನ್ನಿ ಎಂದು ಆತ್ಮೀಯವಾಗಿ ಕರೆದಾಗ ನಮ್ಮ ಕಥಾಪ್ರಸಂಗವನ್ನು ಮುಗಿಸಬೇಕಾಯಿತು.

ಈ ಜನವರಿ ೧.೧೯೯೫ ಮೈಸೂರಿನಲ್ಲಿ ಚದುರಂಗರ ಹುಟ್ಟುಹಬ್ಬ ಏರ್ಪಾಡಾಗಿದೆ. ಪತ್ರಿಕೆಯ ಪರವಾಗಿ ನಮ್ಮ ಆಶಯಗಳನ್ನು ಈ ಮೂಲಕ ವ್ಯಕ್ತಪಡಿಸುತ್ತೇವೆ.

# 'ಹಾಲಿನ ಪವಾಡ : ಹಾಸ್ಯಾಸ್ಪದ ಸಮೂಹ ಸನ್ನಿ'

ದಿನಾಂಕ. ೨೨.೯.೧೯೯೫

ಗಣೇಶನ ಮೂರ್ತಿಗಳು ಮತ್ತು ಇತರ ದೇವರ ವಿಗ್ರಹಗಳು ಇದ್ದಕ್ಕಿದ್ದಂತೆ ಭಕ್ತಾದಿಗಳು ಅರ್ಪಿಸುತ್ತಿರುವ ಹಾಲು ಕುಡಿಯುತ್ತಿರುವುದಾಗಿ ಹಬ್ಬಿರುವ ಪವಾಡದ ವದಂತಿಗಳು ದೈವೀಭಕ್ತಿಯ ಅತ್ಯಂತ ಹಾಸ್ಯಾಸ್ಪದವಾದ 'ಸಮೂಹ ಸನ್ನಿ'ಯ ದಾಖಲೆಯಾಗಿದೆ.

ಗಣೇಶನಿಗೆ ಅತ್ಯಂತ ಪ್ರಿಯವಾದ ಭಕ್ಷ್ಯಗಳೆಂದು ಭಾವಿಸಲಾಗಿರುವ ಕಡಬು, ಚಕ್ಕುಲಿ, ಕೊಡುಬಳೆ ಇತ್ಯಾದಿ ಘನಪದಾರ್ಥಗಳನ್ನು ತಿರಸ್ಕರಿಸಿ, ಹಾಲಿನಂಥ ದ್ರವಪದಾರ್ಥಗಳನ್ನು ಮಾತ್ರ ಸ್ವೀಕರಿಸುವ ದೈವಲೀಲೆ ನಮ್ಮ ಸುಶಿಕ್ಷಿತ ವಿದ್ಯಾವಂತ ಜನರಿಗೂ ಅರ್ಥವಾಗದಿರುವುದು ಅವಿವೇಕದ ಪರಮಾವಧಿಯಾಗಿದೆ. ದೈವೀಶಕ್ತಿಯೆಂದು ಭ್ರಮಿಸಲಾಗಿರುವ ಈ ಅವಿವೇಕದ ಮೌಢ್ಯ ಪ್ರಸಾರಕ್ಕೆ ದೂರದರ್ಶನಾದಿಯಾದ ಸಮೂಹ ಮಾಧ್ಯಮಗಳು ಭಾರೀ ಪ್ರಚಾರ ನೀಡುತ್ತಿರುವುದು ಖಂಡನೀಯವಾಗಿದೆ.

ಮಕ್ಕಳು ಮರಿ ಕುಡಿಯಬೇಕಾದ ಹಾಲು ಮೊಸರುಗಳನ್ನು ಗಣಪತಿ ಇತ್ಯಾದಿಗಳೆಲ್ಲ ಲಪಟಾಯಿಸುತ್ತಿರುವುದು ಸತ್ಯಸಂಗತಿಯಾದಲ್ಲಿ ಈ ದೇವರುಗಳನ್ನೆಲ್ಲ ಉಚ್ಚಾಟಿಸಲು ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕೆಂದು ಪ್ರಗತಿರಂಗ ಒತ್ತಾಯಪಡಿಸುತ್ತದೆ.

೨೧ನೆಯ ಶತಮಾನಕ್ಕೆ ಕಾಲಿಡುತ್ತಿರುವ ಉನ್ನತ ವೈಜ್ಞಾನಿಕ ಯುಗದಲ್ಲಿ ಭಾರತೀಯರ ದೈವಭಕ್ತಿ ಇಂತಹ ಹೀನಾಯವಾದ ಸ್ಥಿತಿಗೆ ಇಳಿದಿರುವುದು ಮತ್ತು 'ದೇವರು' ಮೌಢ್ಯದ ಕೇಂದ್ರವಾಗುತ್ತಿರುವುದು ಭಾರತದ ದುರಂತವಾಗಿದೆ.

ವೈಜ್ಞಾನಿಕ ಪ್ರಜ್ಞೆ ರೂಪಿಸದ ಶಿಕ್ಷಣ ಮತ್ತು ವೈಚಾರಿಕ ಸಂಸ್ಕೃತಿಯ ಅಭಾವವೇ ಈ ಅವಿವೇಕದ ಮರುಳುತನಕ್ಕೆ ಕಾರಣವಾಗಿದೆ.

ಸರ್ಕಾರ ಕೂಡಲೇ ಇಂತಹ ಮೂಢನಂಬಿಕೆಗಳನ್ನು ನಿವಾರಿಸಲು ಈ ಘಟನೆಯ ಬಗ್ಗೆ ವೈಜ್ಞಾನಿಕ ಪರೀಕ್ಷೆಗಳನ್ನು ಏರ್ಪಡಿಸಬೇಕೆಂದು ಪ್ರಗತಿರಂಗ ಒತ್ತಾಯಪಡಿಸುತ್ತದೆ. ಅಲ್ಲದೆ

ಕರ್ನಾಟಕ ವಿಜ್ಞಾನ ಪರಿಷತ್ತು ಮತ್ತು ಭಾರತೀಯ ಜ್ಞಾನ ವಿಜ್ಞಾನ ಜಾಥಾ ಈ ಬಗ್ಗೆ ಜನಜಾಗೃತಿಯ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ವಿನಂತಿಸುತ್ತದೆ.

ಕೆ. ರಾಮದಾಸ್

## ಪತ್ರಿಕಾ ಹೇಳಿಕೆ

ದಿನಾಂಕ. ೧೮.೪.೧೯೯೬

ಲೋಕಸಭಾ ಚುನಾವಣೆಯ ಸಮೀಕ್ಷೆ ನಡೆಸಲು ಚಾಮರಾಜ ಕ್ಷೇತ್ರದ ಚಿನ್ನದಗುಡಿ ಹುಂಡಿಗೆ ಬಂದಿದ್ದ ಲಂಕೇಶ್ ಪತ್ರಿಕೆಯ ವರದಿಗಾರರ ಜೊತೆಯಲ್ಲಿ ತೋಟಗಾರಿಕೆ ಮಂತ್ರಿ ಡಿ.ಟಿ. ಜಯಕುಮಾರ್ ಮತ್ತು ಅವರ ಬೆಂಬಲಿಗರು ಅಸಭ್ಯವಾಗಿ ವರ್ತಿಸಿ ಭಯೋತ್ಪಾದನೆ ಮಾಡಿರುವುದು ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆದ ಹಲ್ಲೆಯಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪರ ಕಾಳಜಿಯನ್ನಿಟ್ಟುಕೊಂಡು ಕಾವಲು ಕಾಯುವ ಕೆಲಸ ಮಾಡುತ್ತಿರುವ ಪತ್ರಿಕೆಗಳನ್ನು ಈ ರೀತಿಯ ಬೆದರಿಕೆಗಳಿಂದ ದಮನ ಮಾಡಲಾಗುವುದಿಲ್ಲವೆಂಬ ಕನಿಷ್ಠ ಪರಿಜ್ಞಾನವು ಇಲ್ಲದ ರಾಜಕಾರಣಿಗಳು ಠೇಂಕಾರದಿಂದ ವರ್ತಿಸುವುದು ಖಂಡನೀಯವಾಗಿದೆ.

ಪ್ರಜಾತಂತ್ರದ ಶಿಷ್ಟಾಚಾರಗಳನ್ನು ಪರಿಪಾಲಿಸಬೇಕಾದ ಡಿ.ಟಿ. ಜಯಕುಮಾರರಂತಹ ಮಂತ್ರಿಗಳು, ಅದರ ಪರಿಜ್ಞಾನವಿಲ್ಲದ ತಮ್ಮ ಹಿಂಬಾಲಕರ ಜೊತೆಯಲ್ಲಿ ಈ ರೀತಿ ಅಸಭ್ಯವಾಗಿ ವರ್ತಿಸಿರುವುದು ಅಪರಾಧೀಕರಣದ ಕಡೆಗೆ ಚಲನೆ ಪಡೆಯುತ್ತಿರುವ ನಮ್ಮ ರಾಜಕೀಯ ವ್ಯವಸ್ಥೆಯ ದುರಂತವಾಗಿದೆ.

ಇದೇ ರೀತಿ ಪತ್ರಿಕೆಗಳ ಮೇಲೆ ಹಲ್ಲೆಗಳು ಪ್ರಾರಂಭವಾದರೆ ಇಡೀ ಜನತಂತ್ರ ವ್ಯವಸ್ಥೆ ಗೂಂಡಾಗಿರಿಗೆ ಹಸ್ತಾಂತರವಾಗುವುದರಲ್ಲಿ ಅನುಮಾನವಿಲ್ಲ.

ಆದ್ದರಿಂದ ಈ ಹೇಯ ಘಟನೆಯನ್ನು ಪ್ರಜಾಪ್ರಭುತ್ವ ಮತ್ತು ಪತ್ರಿಕಾ ಸ್ವಾತಂತ್ರ್ಯದಲ್ಲಿ ಕಾಳಜಿ ಇರುವ ಎಲ್ಲರು ಖಂಡಿಸಬೇಕಾಗಿದೆ.

ಕೆ. ರಾಮದಾಸ್

## 'ಅಭಿವ್ಯಕ್ತಿ ಸ್ವಾತಂತ್ರ್ಯದ ಪಾವಿತ್ರ್ಯಕ್ಕಾಗಿ ಪ್ರತಿಭಟನೆ'

ದಿನಾಂಕ. ೧೫.೫.೧೯೯೫

ಗೆ,
ಮಾನ್ಯ ಸಂಪಾದಕರು
ಆಂದೋಲನ
ಮೈಸೂರು

ಮಾನ್ಯರೆ,

ಈಚೆಗೆ ಹೆಚ್.ಡಿ. ಕೋಟೆಯಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯ ಸಮಾರಂಭದ ವರದಿ (ಆಂದೋಲನ: ೧೧.೫.೧೯೯೫) ಮತ್ತು ಡಾ. ಭ. ನಾಗರಾಜ್ ಪತ್ರಕ್ಕೆ (೧೩.೫.೧೯೯೫) ಪ್ರತಿಕ್ರಿಯಿಸುತ್ತಿದ್ದೇನೆ.

ಅಂಬೇಡ್ಕರ್ ಜಯಂತಿಯ ಆಶಯಕ್ಕೆ ಅನುಚಿತವಾದ ರೀತಿಯಲ್ಲಿ ಮನುಸ್ಮೃತಿ ಮತ್ತು ಆರ್.ಎಸ್.ಎಸ್‌ನ ದಲಿತೋದ್ಧಾರದ ಬಗ್ಗೆ ಆ ಸಂಘಟನೆಯ ಕೆಟ್ಟ ಚಾಳಿಯಂತೆ ಸುಳ್ಳುಗಳ ಕಂತೆ - ಪುರಾಣಗಳನ್ನು ಬಿಚ್ಚತೊಡಗಿದ ಪ್ರಭುರಾಜೇ ಅರಸ್ ಎಂಬ ವಕೀಲರ ಭಾಷಣ, ಸಹನೆ - ಸಂದರ್ಭಗಳ ಎಲ್ಲೆ ಮೀರಿದಾಗ ನಾನು ಪ್ರತಿಭಟನೆ ವ್ಯಕ್ತಪಡಿಸಿರುವುದು ನಿಜ. ನನ್ನಂತೆ ಅಸಹನೆಗೆ ಒಳಗಾದ ಅನೇಕರ ಪ್ರತಿಕ್ರಿಯೆಯಿಂದ ಸಂಘಟಕರ ಸೂಚನೆಯಂತೆ ಅವರು ಭಾಷಣ ನಿಲ್ಲಿಸಬೇಕಾಯಿತು. ಇನ್ನು ಅವರ ಜೊತೆಯಲ್ಲಿ ವಾಗ್ವಾದಕ್ಕೆ ಇಳಿಯುವ ಪ್ರಸಂಗವೇ ಬರಲಿಲ್ಲ.

ಈ ರೀತಿಯಲ್ಲಿ ತಮ್ಮ ಸಹಚಿಂತಕರೊಬ್ಬರ ಭಾಷಣ ಮೊಟಕ್ಕಾಗಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿರುವುದು ಡಾ. ಭ.ನಾಗರಾಜ್ ಮನಸ್ಸಿಗೆ ನೋವಾಗಿರುವುದನ್ನು ಉಪಶಮನಮಾಡುವಷ್ಟು ಸಜ್ಜನಿಕೆಯಾಗಲಿ ಸಹನೆಯಾಗಲಿ ನನ್ನಲಿಲ್ಲವೆಂಬುದು ನನ್ನ ನಿಕಟ ಪರಿಚಯವಿರುವ ಅವರಿಗೇ ಚೆನ್ನಾಗಿ ಗೊತ್ತಿದೆ. ಡಾ. ನಾಗರಾಜ್ ಬಯಸಿದ ನಾಗರಿಕ ಸಮಾಜದ

ಸಜ್ಜನಿಕೆಯ ನಡವಳಿಕೆಯ ಶಿಷ್ಟಾಚಾರಗಳಲ್ಲಿ ನನಗೆ ನಂಬಿಕೆ ಇಲ್ಲ. ನಾನು ಪರಿಸ್ಥಿತಿಯ ಒತ್ತಡಕ್ಕೆ ಅನುಗುಣವಾಗಿ ವರ್ತಿಸುತ್ತಿರುವ ಮನುಷ್ಯ.

ಆದ್ದರಿಂದ, ಬೆಂಕಿ ಹಚ್ಚಲು ಮುಕ್ತ ಅವಕಾಶ ಕಲ್ಪಿಸಿ ಆಮೇಲೆ ಅದನ್ನು ಆರಿಸಬೇಕೆನ್ನುವ ಅಭಿವ್ಯಕ್ತಿ ಸ್ವಾತಂತ್ರ್ಯದ ತರ್ಕದಲ್ಲಿ ನನಗೆ ಕಿಂಚಿತ್ತೂ ನಂಬಿಕೆ ಇಲ್ಲ. ಏಕೆಂದರೆ ಹೀಗಾದರೆ ಗಾಂಧಿ ಜಯಂತಿಯ ಕಾರ್ಯಕ್ರಮದಲ್ಲಿ ಗೋಡ್ಸೆಯ ಸಮರ್ಥನೆಗೂ ಸ್ವಾತಂತ್ರ್ಯವಿರಬೇಕೆನ್ನುವ ವಾದವನ್ನೂ ಒಪ್ಪುವ ಅಸಂಬದ್ಧತೆಯನ್ನೂ ಕೂಡ ಒಪ್ಪಬೇಕಾಗುತ್ತದೆ.

ಸಾಮಾಜಿಕವಾಗಿ 'ಅಗ್ನಿ ಶಾಮಕದಳ'ಕ್ಕೆ ಸೇರಿರುವ ನಾನು, ಬೆಂಕಿಯ ಕಿಡಿ ಕಂಡ ಕೂಡಲೇ ಆರಿಸುವ ಕೆಲಸ ಮಾಡಿದ್ದೇನೆ. 'Prevention is always better than cure ಅಲ್ಲವೇ ಡಾಕ್ಟ್ರೇ.

ಪ್ರಜಾಪ್ರಭುತ್ವದ ಆರೋಗ್ಯ ಕಾಪಾಡುವ ಕರ್ತವ್ಯದಿಂದ ವ್ಯಕ್ತವಾದ ನನ್ನ ಪ್ರತಿಭಟನೆಯಿಂದ ಅಭಿವ್ಯಕ್ತಿ ಸ್ವಾತಂತ್ರ್ಯದ ಪಾವಿತ್ರ್ಯವನ್ನು ಉಳಿಸಲು ಪ್ರಯತ್ನಿಸಿದ್ದೇನೆ.

ಕೆ. ರಾಮದಾಸ್

# ಸರ್ಕಾರಿ ಕಛೇರಿಗಳು ಮತ್ತು ಸಚಿವ ವಿಶ್ವನಾಥರ (ಬಕ) ಧ್ಯಾನ ಕೇಂದ್ರಗಳು

ದಿನಾಂಕ. ೨೫.೪.೨೦೦೦

ಮಾನ್ಯರೆ,

ನಮ್ಮ ಮೈಸೂರು ಜಿಲ್ಲೆಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಎಚ್. ವಿಶ್ವನಾಥ್ ಅವರು ಸರ್ಕಾರಿ ಕಛೇರಿಗಳಲ್ಲಿ, ಅನಿಯಂತ್ರಿತವಾಗಿ ದಂಧೆಯ ರೂಪದಲ್ಲಿ ಲಂಚ ರುಸುವತ್ತುಗಳನ್ನು ನಿಯಂತ್ರಿಸಲು, ಸರ್ಕಾರದ ಎಲ್ಲ ಕಛೇರಿಗಳಲ್ಲೂ 'ಧ್ಯಾನ ಕೇಂದ್ರ'ಗಳನ್ನು ಸ್ಥಾಪಿಸಬೇಕೆಂಬ ತಮ್ಮ ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ.

ಸರ್ಕಾರ ಮತ್ತು ವೈದ್ಯಾಧಿ ಅಧಿಕಾರ ವರ್ಗದವರ ನಿರಂತರ ಪ್ರಯತ್ನದಿಂದ ಮೈಸೂರಿನ ಕೆ.ಆರ್. ಆಸ್ಪತ್ರೆ ಸ್ವರ್ಗದ ಹೆಬ್ಬಾಗಿಲಿನಂತಿರುವುದನ್ನು ಗುರುತಿಸಿದ ಕರುಣಾಮಯಿಗಳಾದ ಪ್ರಜಾಪಿತ ಬ್ರಹ್ಮಕುಮಾರಿಯವರ ಈಶ್ವರಿ ವಿಶ್ವವಿದ್ಯಾನಿಲಯದವರು ರೋಗಿಗಳಿಗೆ ನೆರವಾಗಲು ಧ್ಯಾನಕೇಂದ್ರವನ್ನು ಸ್ಥಾಪಿಸಿ, ಸಚಿವ ವಿಶ್ವನಾಥ್ ಅವರಿಂದ ಅದರ ಉದ್ಘಾಟನೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಮಾತನಾಡುತ್ತಾ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಲು ಸರ್ಕಾರಿ ಕಛೇರಿಗಳಲ್ಲಿ ಇಂತಹ 'ಧ್ಯಾನಕೇಂದ್ರ'ಗಳನ್ನು ಸ್ಥಾಪಿಸಬೇಕೆಂದು ಹೇಳಿರುವುದು ಅದ್ಭುತವಾದ ಸಲಹೆಯಾಗಿದೆ.

ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಅಧಿಕಾರ ಸ್ವೀಕರಿಸಿದ ಮರುಕ್ಷಣದಲ್ಲೇ ಕರ್ನಾಟಕದ ಜನತೆಯ ಕಲ್ಯಾಣವನ್ನು ಭಗವಾನ್ ಸತ್ಯಸಾಯಿಬಾಬಾ ಅವರ ಉಸ್ತುವಾರಿಗೆ ಬಿಟ್ಟು, ತಣ್ಣಗೆ ಕಂಪ್ಯೂಟರ್ ಮುಂದೆ ಧ್ಯಾನಸ್ಥರಾಗಿ ಕುಳಿತಿರುವಾಗ ತಮ್ಮ ಕ್ಯಾಬಿನೆಟ್ ಸಚಿವರಾದ ವಿಶ್ವನಾಥ್ ಅವರ ಈ ಸಲಹೆಯನ್ನು ಸ್ವೀಕರಿಸುವುದರಲ್ಲಿ ಅನುಮಾನವಿಲ್ಲ.

ಸರ್ಕಾರಿ ಲಂಚದ ಪಿಡುಗನ್ನು ನಿವಾರಿಸಲು ಲೋಕಾಯುಕ್ತ ಮುಂತಾದ ಸರ್ಕಾರಿ ಕ್ರಮಗಳಿಂದ ಪ್ರಯತ್ನಿಸಿ ಲಂಚ-ರುಸುವತ್ತುಗಳನ್ನು ತಡೆಯಲಾಗದೆ, ಸುಸ್ತಾಗಿ ಕುಳಿತಿದ್ದ ಸರ್ಕಾರಕ್ಕೆ ಸಚಿವ ವಿಶ್ವನಾಥ್ ಅವರ ಈ ಅಮೂಲ್ಯವಾದ ಸಲಹೆಯಿಂದ ಇಮ್ಮಡಿ ಲಾಭವಾಗುವುದರಲ್ಲಿ ಸಂಶಯವಿಲ್ಲ. ಕಾಸು-ಕರಿಮಣಿಗಳ ಖರ್ಚಿಲ್ಲದೆ ಈ ಧ್ಯಾನಕೇಂದ್ರಗಳನ್ನು ಸರ್ಕಾರಿ ಕಛೇರಿಗಳಲ್ಲಿ ಸ್ಥಾಪಿಸುವುದು ಸರ್ಕಾರದ ಔಚಿತ್ಯಪೂರ್ಣವಾದ ಕ್ರಮವೆಂದು ಜನಬೆಂಬಲ ದೊರೆಯುತ್ತದೆ.

ನಮ್ಮ ಕಸಬುದಾರಿ ರಾಜಕಾರಣಿಗಳಲ್ಲಿ ಒಬ್ಬರಾದ ಸಚಿವ ಎಚ್. ವಿಶ್ವನಾಥ್ ಅವರು ಈ ರೀತಿಯ 'ಒರಿಜಿನಲ್ ಐಡಿಯಾ'ಗಳಿಂದ, ಕಾರ್ಲ್‌ಮಾರ್ಕ್ಸ್‌ನಂತೆ ಬಾಲ್ಡಿಯಾಗಿರುವ ಅವರು ನಮ್ಮ ಸಮಾಜದಲ್ಲಿ 'ಕ್ಷಿಪ್ರಕ್ರಾಂತಿ'ಯನ್ನುಂಟು ಮಾಡಲು ಸತತವಾಗಿ ಚಿಂತಿಸುತ್ತಿದ್ದಾರೆ.

ಈಗಾಗಲೇ ಶಿಕ್ಷಣ ಕ್ಷೇತ್ರದಲ್ಲಿ ಈ ರೀತಿಯ ಚಿಂತನೆಗಳಿಂದ ಕ್ರಾಂತಿ ಮಾಡುವ ವೀರ ಸಂಕಲ್ಪದಲ್ಲಿ ತೊಡಗಿರುವ ವಿಶ್ವನಾಥ್ ಅವರು ಶಾಲೆಗಳು ನಡೆಯುವ ಸಮಯವನ್ನೇ ಬದಲಾಯಿಸಿ ಅಧ್ಯಾಪಕ ವರ್ಗದವರನ್ನು ಮತ್ತು ವಿದ್ಯಾರ್ಥಿಗಳನ್ನು ಅನ್ಯ ಕಸಬುಗಳಲ್ಲಿ ನಿರತರಾಗಲು ಅವಕಾಶ ಕಲ್ಪಿಸುವ ಕ್ರಾಂತಿಕಾರಿ ಯೋಜನೆಯೊಂದನ್ನು ಸಿದ್ಧಪಡಿಸಿದ್ದಾರೆ. ಅಧ್ಯಾಪಕ ವೃತ್ತಿಯಲ್ಲಿರುವ ಗಂಡ-ಹೆಂಡತಿಯರನ್ನು ಬೇರೆ ಬೇರೆಯಾಗಿ ದೂರದ ಊರುಗಳಿಗೆ ವರ್ಗಾಯಿಸುವುದರ ಮೂಲಕ ವಿದ್ಯಾರ್ಥಿಗಳನ್ನು ಬಚಾವು ಮಾಡಲು ತಮ್ಮ ಸ್ವಾನುಭವದಿಂದ ಸರ್ಕಾರದ ನೀತಿಯನ್ನು ರೂಪಿಸಿರುವುದು ಅವರ ದಿವ್ಯಜ್ಞಾನಕ್ಕೆ ಸಾಕ್ಷಿಯಾಗಿದೆ.

ಇದಲ್ಲದೆ ಸರ್ಕಾರದ ಅನುದಾನವನ್ನು ಪಡೆಯುತ್ತಿರುವ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಕೆಲವು ಮಠ-ಮಾನ್ಯಗಳು ನಡೆಸುತ್ತಿರುವ ವಿದ್ಯಾಸಂಸ್ಥೆಗಳು ಬೇನಾಮಿಯಾಗಿ ಸರ್ಕಾರದ ಹಣವನ್ನು ಲಪಟಾಯಿಸುತ್ತಿರುವುದನ್ನು ತಡೆಯಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

# 'ಪ್ರೊ. ಭಗವಾನ್ ವಿಚಾರವಾದಿ ಎನಿಸಿಕೊಳ್ಳಲು ನಾಲಾಯಕ್'

ಪತ್ರಿಕಾ ವರದಿ

ಮೈಸೂರು, ಮಾರ್ಚ್-೨- 'ಪ್ರೊ. ಭಗವಾನ್ ಅವರೂ ವಿಚಾರವಾದಿ ಎನಿಸಿಕೊಳ್ಳಲು ನಾಲಾಯಕ್ಕು.... !'

-ಹೀಗೆಂದು ಹೇಳಿದವರು ಪ್ರೊ. ಕೆ. ರಾಮದಾಸ್. ಸಚಿವ ವಿಶ್ವನಾಥ್ ಅವರನ್ನು ಸಚಿವರಾಗಲು ನಾಲಾಯಕ್ಕು ಎಂದು ತಾವು ಕುರಿಬಲಿ ಪ್ರಕರಣದಲ್ಲಿ ಹೇಳಿರುವುದನ್ನು ಪ್ರೊ. ಭಗವಾನ್ ಅವರು ಖಂಡಿಸಿ ಹೇಳಿಕೆ ನೀಡಿರುವುದರ ಬಗ್ಗೆ ಇಂದು ಪತ್ರಿಕಾ ಗೋಷ್ಠಿಯಲ್ಲಿ ಪ್ರಶ್ನಿಸಿದಾಗ, ನಾಲಯಕ್ಕು ಎಂಬ ಪದ ಇಂಗ್ಲಿಷ್‌ನ 'ಅನ್‌ಫಿಟ್' ಎಂಬುದಕ್ಕೆ ಸಮಾನಾಂತರ ಎಂದರಲ್ಲದೆ, ಪ್ರೊ. ಭಗವಾನ್ ಅವರ ಹೇಳಿಕೆಗೆ ತರಾಟೆ ತೆಗೆದುಕೊಂಡರು.

ಭಗವಾನ್ ಅವರು ವೇದಿಕೆಯಲ್ಲಿ ಜನರಿಗೆ ಪ್ರಗತಿಪರ ಚಿಂತನೆಗಳನ್ನು ಪರಿಬಿಡುತ್ತಾ, ತೆರೆಮರೆಯಲ್ಲಿ ಸ್ವಾಮೀಜಿಗಳ ಕೃಪೆ ಪಡೆಯಲು ಯತ್ನಿಸುತ್ತಾರೆ. ಶಾಸಕ ಶಂಕರಲಿಂಗೇಗೌಡರು ದೇವಸ್ಥಾನ ಕಟ್ಟಿದಾಗ ಅಲ್ಲಿ ಸನ್ಮಾನವನ್ನೂ ಮಾಡಿಸಿಕೊಂಡು ಬಂದರು ಎಂದು ವ್ಯಂಗ್ಯವಾಡಿದ ರಾಮದಾಸ್, ಪ್ರೊ. ಭಗವಾನ್ ಸಹ ವಿಚಾರವಾದಿ, ಪ್ರಗತಿಪರ ಎನಿಸಿಕೊಳ್ಳುವುದಕ್ಕೆ ನಾಲಾಯಕ್ಕು ಎಂದರು.

ಪ್ರೊ. ಭಗವಾನ್ ಅವರು ಒಂದು ಕಾಲದಲ್ಲಿ ಪ್ರಗತಿಪರ ಸಂಘಟನೆಯ ಭಾಗವಾಗಿದ್ದರು. ಪ್ರಗತಿಪರ ಧೋರಣೆ ಹೊಂದಿದ್ದರು. ಆದರೆ ಕೆಲವು ವರ್ಷಗಳಿಂದ ಅವರು ಪ್ರಗತಿಪರರಿಂದ ಬಹುದೂರ ಸರಿದು ಪಟ್ಟಭದ್ರರೊಂದಿಗೆ ಕೈಜೋಡಿಸಿದ್ದಾರೆಂದು ಅವರು ಟೀಕಿಸಿದರು.

# ಸರ್ಕಾರದ ಮೇಲೆ ಮಠಗಳ ಸವಾರಿ

ಈಚೆಗೆ ಬೆಂಗಳೂರಿನಲ್ಲಿ ನಡೆದ ಸಿದ್ಧಗಂಗಾ ಸ್ವಾಮೀಜಿಯವರ 'ಗುರುವಂದನಾ' ಕಾರ್ಯಕ್ರಮದಲ್ಲಿ, ಕರ್ನಾಟಕದ ಮುಖ್ಯಮಂತ್ರಿ (ಹೈಟೆಕ್) ಎಸ್.ಎಂ. ಕೃಷ್ಣ ತಮ್ಮ ಸಚಿವ ಸಂಪುಟದ ಮಂತ್ರಿ ಎಚ್. ವಿಶ್ವನಾಥ್‌ರ ವರ್ತನೆಯ ಬಗ್ಗೆ ಸಾರ್ವಜನಿಕವಾಗಿ ಸರ್ಕಾರದ ಪರವಾಗಿ ಮಠಾಧಿಪತಿಗಳ ಕ್ಷಮೆಯಾಚಿಸಿರುವುದು ಮತ್ತು ಸರ್ಕಾರವನ್ನು ಜಗದ್ಗುರುಗಳಿಗೆ ಶರಣಾಗುವಂತೆ ಮಾಡಿರುವುದು, ಜಾತ್ಯತೀತ ಸರ್ಕಾರಕ್ಕೆ ಮಾಡಿದ ಅವಮಾನ ಮಾತ್ರವಲ್ಲ, ಜನಕೋಟಿಯ ಸ್ವಾಭಿಮಾನಕ್ಕೆ ಮಾಡಿದ ವಿಶ್ವಾಸದ್ರೋಹ.

ಜಾತ್ಯತೀತ ಪಕ್ಷವೆಂದು ಢೋಂಗಿ ಹೊಡೆಯುವ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯ ವರ್ತನೆಯನ್ನು ಆ ಪಕ್ಷದ ಶಾಸಕರು ಪ್ರಶ್ನಿಸದೇ ತೆಪ್ಪಗಿರುವುದು ಸಾಮಾನ್ಯ ಸಂಗತಿಯಲ್ಲ. ಜಾತಿವಾದವನ್ನೇ ರಾಜಕೀಯದ ಮೂಲ ಬಂಡವಾಳ ಮಾಡಿಕೊಂಡಿರುವ ರಾಜಕೀಯ ಪಕ್ಷಗಳು ಸರ್ಕಾರದ ಸ್ಥಾನ-ಮಾನಗಳನ್ನು ಈ ರೀತಿಯ ಅವಮಾನಕ್ಕೆ ಈಡುಮಾಡುತ್ತಿರುವುದು ನಮ್ಮ ಜನತಂತ್ರ ವ್ಯವಸ್ಥೆಯ ಅಸೀಮ ದುರಂತವಾಗಿದೆ.

ಪ್ರಾಥಮಿಕ ಶಿಕ್ಷಣ ಸಚಿವ ಎಚ್. ವಿಶ್ವನಾಥ್ ಅವರು ಸರ್ಕಾರದ ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಅಕ್ರಮಗಳನ್ನು ತಡೆಯುವ ಪ್ರಸ್ತಾಪದಲ್ಲಿ ಕೆಲವು ಮಠಗಳು ಮಾರ್ವಾಡಿಗಳಂತೆ ವರ್ತಿಸುತ್ತವೆಂದು ಹೇಳಿರುವುದು ಮತ್ತು ಕಡತಗಳನ್ನು ತೆಗೆದುಕೊಂಡು ಮಠದಲ್ಲಿ ತಮ್ಮನ್ನು ಭೇಟಿಯಾಗಬೇಕೆಂದು ತರಳಬಾಳು ಜಗದ್ಗುರುಗಳ ಆಜ್ಞಾಪನೆಯನ್ನು ನಿರಾಕರಿಸಿರುವುದು ಘೋರವಾದ ಅಪರಾಧವೆಂದು ಮುಖ್ಯಮಂತ್ರಿಗಳು ಭಾವಿಸಿದಂತೆ ಕಾಣುತ್ತದೆ. ವಿಶ್ವನಾಥ್ ಅವರು ಸರ್ಕಾರದ ಘನತೆ-ಗೌರವಗಳನ್ನು ಕಾಪಾಡುವ ಕೆಲಸ ಮಾಡಿರುವುದು ಪ್ರಶಂಸನೀಯವಾಗಿದೆ. ತಮ್ಮ ಮಂತ್ರಿ ಮಂಡಲದ ಸಚಿವರನ್ನು ಸಮರ್ಥಿಸಬೇಕಾದ ಮುಖ್ಯಮಂತ್ರಿ ವಿಶ್ವನಾಥ್‌ರ ತೇಜೋವಧೆ ಮಾಡಿರುವುದು ಅವರ ಕುಬ್ಜತೆಗೆ ಸಾಕ್ಷಿಯಾಗಿದೆ. ಇದರಿಂದ ಜಾತಿಬಲ ಮತ್ತು ಧನಬಲದ ಠೇಂಕಾರದಿಂದ ಸಂವಿಧಾನಾತೀತವಾದ

ಶಕ್ತಿಗಳಂತೆ ವರ್ತಿಸುತ್ತಿರುವ ಮಠ-ಮಾನ್ಯಗಳು ಸರ್ಕಾರದ ಮೇಲೆ ಸವಾರಿ ಮಾಡಲು ಅವಕಾಶ ಕೊಟ್ಟಂತಾಗಿದೆ.

ಈ ಪ್ರಕರಣದ ಬಗ್ಗೆ ಶಾಸನ ಸಭೆಗಳಲ್ಲಿ ಎಂ.ಸಿ.ನಾಣಯ್ಯನಂತಹವರು ಮಾತ್ರ ಧೀಮಂತವಾಗಿ ಮಾತನಾಡಿ ವಿಶ್ವನಾಥ್ ಅವರನ್ನು ಸಮರ್ಥಿಸಿರುವುದು ಹೆಮ್ಮೆಯ ಸಂಗತಿಯಾದರೂ ಉಳಿದವರು ತೆಪ್ಪಗಿರುವುದು ಜಾತಿ ವ್ಯವಸ್ಥೆಗೆ ಪ್ರಜಾತಂತ್ರ ಮತ್ತು ಜಾತ್ಯತೀತತೆ ಬಲಿಯಾಗುತ್ತಿರುವುದಕ್ಕೆ ಸಾಕ್ಷಿಯಾಗಿದೆ.

೧೯೬೦ರಲ್ಲಿ ನಾನು ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಪಿ.ಯು.ಸಿ ಓದುತ್ತಿದ್ದಾಗ ನನಗೆ ನೆಲೆಯೆ ಇರಲಿಲ್ಲ. ತುಂಗಾನದಿಯ ಸೇತುವೆಯ ದಡದಲ್ಲಿರುವ ಬೆಕ್ಕಿನ ಕಲ್ಲು ಮಠದ ವಿದ್ಯಾರ್ಥಿ ನಿಲಯದಲ್ಲಿ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ - ವಸತಿ ದೊರೆಯುತ್ತದೆಂದು ನನ್ನ ಸಹಪಾಠಿಗಳಿಂದ ದೊರೆತ ಮಾಹಿತಿಯಂತೆ ನಾನು ಆಶ್ರಯ ಬಯಸಿ ಅಲ್ಲಿಗೆ ಹೋದಾಗ ನನ್ನ ಜಾತಿ, ಕುಲ, ಗೋತ್ರ ಇತ್ಯಾದಿ ಯಾವುದನ್ನೂ ಪ್ರಶ್ನಿಸದೆ ಅನಾಯಾಸವಾಗಿ ನನಗೆ ಪ್ರವೇಶ ನೀಡಲಾಯಿತು. ಆ ಮಠದ ಸ್ವಾಮೀಜಿಯನ್ನು ನಾನು ನೋಡಲೇ ಇಲ್ಲ. ಯಾರ ಪಾದಗಳಿಗೂ ನಮಸ್ಕರಿಸಲೇ ಇಲ್ಲ. ಬೆಕ್ಕಿನ ಕಲ್ಲು ಮಠದ ವಿದ್ಯಾರ್ಥಿ ನಿಲಯದ ಆಶ್ರಯ ನನ್ನ ಜೀವನದ ದಿಕ್ಕನ್ನೇ ಬದಲಾಯಿಸಿಬಿಟ್ಟಿತು. ಈಗಲೂ ನಾನು ಬೆಕ್ಕಿನ ಕಲ್ಲು ಮಠಕ್ಕೆ ಋಣಿಯಾಗಿದ್ದೇನೆ. ಈ ವಿದ್ಯಾರ್ಥಿ ನಿಲಯದಲ್ಲಿ ಆಗ ವೀರಶೈವ ವಿದ್ಯಾರ್ಥಿಗಳಿಗಿಂತಲೂ ದಲಿತರು, ಹಿಂದುಳಿದ ವರ್ಗದ ಮತ್ತು ಮುಸ್ಲಿಂ - ಕ್ರಿಶ್ಚಿಯನ್ ಅಲ್ಪಸಂಖ್ಯಾತರ ವರ್ಗದ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿದ್ದರು.

ಕರ್ನಾಟಕದಲ್ಲಿ ಇಂತಹ ಮಠಮಾನ್ಯಗಳು ಈ ರೀತಿಯಲ್ಲಿ ಜಾತ್ಯಾತೀತವಾಗಿ ಅಸಂಖ್ಯಾತ ಬಡ ವಿದ್ಯಾರ್ಥಿಗಳಿಗೆ ಆಶ್ರಯಕೊಟ್ಟು ಶಿಕ್ಷಣ ಪಡೆಯಲು ನೆರವಾಗಿರುವುದು ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಮಹತ್ವದ ಪಾತ್ರ ವಹಿಸಿರುವುದು ಅದ್ಭುತವಾದ ಸೇವೆಯಾಗಿದೆ. ಬಸವಣ್ಣನವರ ಸಾಮಾಜಿಕ ಕ್ರಾಂತಿಯ ಆದರ್ಶಗಳನ್ನು ಈ ಮಠಗಳು ಮುಂದಿಟ್ಟುಕೊಂಡಿದ್ದವು. ಇಲ್ಲಿಯ ಸ್ವಾಮಿಗಳು ತಮ್ಮ ನೈತಿಕ ಬಲ ಮತ್ತು ಸಾಮಾಜಿಕ ಸೇವೆಯ ಶಕ್ತಿಯಿಂದ ಸರ್ಕಾರಕ್ಕೆ ಮತ್ತು ಸಮಾಜಕ್ಕೆ ಆದರ್ಶಪ್ರಾಯರಾಗಿದ್ದರು. ಆಗ ಈ ಮಠಗಳು ಜಾತಿಯ ಕೇಂದ್ರವಾಗುವ ಅಥವಾ ರಾಜಕೀಯ ಅಧಿಕಾರವನ್ನು ನಿಯಂತ್ರಿಸಲು ಹಂಬಲಿಸುತ್ತಿರಲಿಲ್ಲ. ಆದರೆ ಅದಕ್ಕೂ ಮಿಗಿಲಾಗಿ ನೈತಿಕ ಅಧಿಕಾರವನ್ನು ಹೊಂದಿದ್ದವು. ಈ ಯಾವ ಮಠಗಳು ಶ್ರೀಮಂತವಾಗಿರಲಿಲ್ಲ. ರೈತರು ಕೊಡುವ ದವಸ ಧಾನ್ಯಗಳಿಂದ ವಿದ್ಯಾರ್ಥಿ ನಿಲಯಗಳು ನಡೆಯುತ್ತಿದ್ದವು. ಸರ್ಕಾರ ಮತ್ತು ಸಾಮಾಜಿಕ ಮನ್ನಣೆ ಪಡೆದಿದ್ದವು.

ಕಳೆದ ಒಂದೆರಡು ದಶಕಗಳಲ್ಲಿ ಕರ್ನಾಟಕದ ಮಠಮಾನ್ಯಗಳ ಸಾಮಾಜಿಕ ಸ್ಥಾನ-ಮಾನಗಳ ಚಹರೆಯೇ ಬದಲಾಗಿ ಹೋಗಿದೆ. ಕ್ಯಾಪಿಟೇಷನ್ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಿಕೊಂಡು ಸಮಾಜ ಸೇವೆಯ ಹೆಸರಿನಲ್ಲಿ ಶಿಕ್ಷಣವನ್ನು ವ್ಯಾಪಾರವನ್ನಾಗಿ ಪರಿವರ್ತಿಸಿಕೊಂಡು ಲಾಭದಾಯಕ ಉದ್ಯಮವನ್ನಾಗಿ ಮಾಡಿಕೊಂಡಿರುವ ಕೆಲವು ಪ್ರತಿಷ್ಠಿತ

ಮಠಗಳ ಕಪ್ಪುಹಣ, ಧನಬಲ ಮತ್ತು ನಿರ್ಲಜ್ಜ ಜಾತಿಬಲದ ಶ್ರೀಮಂತಿಕೆಯಿಂದ ಬಲಾಢ್ಯವಾಗಿ, ಪಂಚತಾರಾ ವೈಭವದಲ್ಲಿ ಮೆರೆಯುತ್ತಿವೆ. ಜಗದ್ಗುರುಗಳು ರಾಜ-ಮಹಾರಾಜರಂತೆ ದರ್ಬಾರು ನಡೆಸುವುದು, ಅರಮನೆಯಂತಹ ಭವ್ಯ ಸೌಧಗಳನ್ನು ನಿರ್ಮಿಸಿಕೊಂಡು ಸಿಂಹಾಸನಾರೂಢರಾಗಿರುವುದು, ಚಿನ್ನದ ಕಿರೀಟಧಾರಿಗಳಾಗಿ ಹೆಲಿಕಾಪ್ಟರ್, ಹವಾನಿಯಂತ್ರಿತ ಬೆಂಚ್ ಕಾರುಗಳಲ್ಲಿ ವಿಹರಿಸುವುದು ಇತ್ಯಾದಿ ವಿಚಾರಗಳಲ್ಲಿ ಮಠಗಳಲ್ಲಿ ಪೈಪೋಟಿ ನಡೆಯುತ್ತಿದೆ. ತಮ್ಮ ಜಾತಿಯ ಭ್ರಷ್ಟ ರಾಜಕಾರಣಿಗಳನ್ನು ಮತ್ತು ಅಧಿಕಾರಿಗಳನ್ನು ಬಳಸಿಕೊಂಡು ರಾಜಕೀಯವನ್ನು ನಿಯಂತ್ರಿಸಲು ಪ್ರಯತ್ನಿಸುವುದು ಮತ್ತು ಸಂವಿಧಾನಾತೀತ ಶಕ್ತಿ ಕೇಂದ್ರಗಳಾಗಿ ಸರ್ಕಾರದ ವಿದ್ಯಮಾನಗಳಲ್ಲಿ ಹಸ್ತಕ್ಷೇಪ ಮಾಡುವುದು ಕೆಲವು ಮಠಾಧಿಪತಿಗಳ ಮುಖ್ಯ ಕಾರ್ಯಕ್ಷೇತ್ರವಾಗಿದೆ. ಅನೇಕ ಮಠಾಧಿಪತಿಗಳು ಛಾಯಾ ಮಂತ್ರಿಮಂಡಲ ರಚಿಸಿಕೊಂಡು ಸರ್ಕಾರದ ಮೇಲೆ ಸವಾರಿ ಮಾಡಬಯಸುತ್ತಿರುವುದು ರಹಸ್ಯದ ಸಂಗತಿಯಾಗಿಲ್ಲ.

ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಾಗ ಖಾಸಗಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಶುಲ್ಕದ ಪಿಡುಗು ಹದ್ದುಮೀರಿ ಉಲ್ಬಣವಾಗುತ್ತಿದ್ದದನ್ನು ಸರ್ಕಾರದ ನಿಯಂತ್ರಣಕ್ಕೆ ಒಳಪಡಿಸಲು ಪ್ರಯತ್ನಿಸಿದಾಗ ತರಳಬಾಳು ಜಗದ್ಗುರುಗಳ ನಾಯಕತ್ವದಲ್ಲಿ ಸರ್ಕಾರದ ವಿರುದ್ಧ ಸಮರ ಸಾರಲಾಯಿತು. ಅತಿ ಹಿಂದುಳಿದ ವರ್ಗಕ್ಕೆ ಸೇರಿದ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರನ್ನು ಅನುಚಿತವಾದ ಮಾತುಗಳಿಂದ ಅವಮಾನ ಮಾಡಲಾಯಿತು. ತಮ್ಮ ಪಕ್ಷದ ಶಾಸಕರ ಅಥವಾ ಬೇರೆ ಪಕ್ಷದ ಶಾಸಕರ ಮಂತ್ರಿಗಳ ಬೆಂಬಲವಿಲ್ಲದೆ ಏಕಾಂಗಿಯಾಗಿ ವೀರಪ್ಪಮೊಯಿಲಿಯವರು ಅಸಹಾಯಕತೆಯಿಂದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು.

ಜನತಾದಳದ ಮುಖ್ಯಮಂತ್ರಿ ಜೆ.ಎಚ್. ಪಟೇಲರ ಕಾಲದಲ್ಲಿ ಭೂ ಮಂಜೂರಾತಿಯ ವಿಚಾರದಲ್ಲಿ ಆದಿ ಚುಂಚನಗಿರಿ ಮಠಕ್ಕೆ ಸರ್ಕಾರದ ನೋಟೀಸ್ ಜಾರಿಯಾಯ್ತೆಂದು ದೊಡ್ಡ ಹಗರಣವನ್ನೇ ಸೃಷ್ಟಿಸಲಾಯಿತು. ತಮ್ಮ ಬೌದ್ಧಿಕ ಚಮತ್ಕಾರದಿಂದ ಸರ್ಕಾರವನ್ನು ಸಮರ್ಥಿಸಿಕೊಳ್ಳುತ್ತಿದ್ದ ಜೆ.ಎಚ್.ಪಟೇಲರು ಚುಂಚನಗಿರಿ ಜಗದ್ಗುರುಗಳ ಬೇಷರತ್ ಕ್ಷಮಾಪಣೆ ಕೇಳಿ ಇಬ್ಬರು ಅಸಹಾಯಕ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಸರ್ಕಾರ ತಲೆತಗ್ಗಿಸುವಂತೆ ಮಾಡಿದರು.

ಈಗ ವಿಶ್ವನಾಥ್ ಪ್ರಕರಣದಲ್ಲಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮಠಾಧಿಪತಿಗಳಿಗೆ ಶರಣಾಗಿರುವುದು ಜಾತ್ಯಾತೀತ ಪ್ರಜಾತಂತ್ರ ವ್ಯವಸ್ಥೆಯ ದುರಂತವಾಗಿದೆ. ಸರ್ಕಾರದ ಜಾತ್ಯತೀತತೆಯ ಶಕ್ತಿ ಉಡುಗಿ, ಜಾತಿಬಲದ ಸಂವಿಧಾನಾತೀತರೆಂದು ಭಾವಿಸಿಕೊಂಡಿರುವ ಮಠಾಧಿಪತಿಗಳು ಸರ್ಕಾರದ ಮೇಲೆ ಸವಾರಿ ಮಾಡಲು ಮುಕ್ತ ಅವಕಾಶ ಪ್ರಾಪ್ತವಾಗಿದೆ.

ಕರ್ನಾಟಕದಲ್ಲಿ ಮಠಮಾನ್ಯಗಳು ತಮ್ಮ ಸಮಾಜಸೇವೆಯ ಲಕ್ಷ್ಮಣರೇಖೆಯನ್ನು ಉಲ್ಲಂಘಿಸಿ, ಸರ್ಕಾರವನ್ನು ದುರ್ಬಲಗೊಳಿಸಲು ಪ್ರಯತ್ನಿಸುವುದು ಮತ್ತು ಸರ್ಕಾರ ಜಾತಿಬಲ

ಮತ್ತು ಧನಬಲದ ಮಠಗಳಿಗೆ ಶರಣಾಗುತ್ತಿರುವುದು ಸಾಮಾಜಿಕ ವಿಪ್ಲವಕ್ಕೆ ಪ್ರಚೋದನೆ ನೀಡುತ್ತಿದೆ. ಇಂತಹ ಅನೈತಿಕ ಮತ್ತು ಅಪವಿತ್ರ ಮೈತ್ರಿಯಿಂದ ಸಾಮಾಜಿಕ ಸಮತೋಲನ ನಿರ್ನಾಮವಾಗಿ ಸಂಘರ್ಷಕ್ಕೆ ದಾರಿಯಾಗುತ್ತದೆ. ಬದನವಾಳು, ಉಮ್ಮತ್ತೂರು, ಉದ್ಬೂರು ಮತ್ತು ಈಗ ಚಿಂತಾಮಣಿಯ ಕಂಬಾಲಪಲ್ಲಿಯಂತಹ ಗ್ರಾಮಾಂತರದ ಅಮಾಯಕ ಜನರನ್ನು ಈ ಜಾತಿಬಲಕ್ಕೆ ಬಲಿಪಶುವನ್ನಾಗಿ ಮಾಡಲಾಗುತ್ತಿದೆ.

ಮತಾಂಧರಾದ ಸಂಘಪರಿವಾರದವರು ಎನ್.ಡಿ.ಎ ಸರ್ಕಾರದ ಮೇಲೆ ಸವಾರಿ ಮಾಡುತ್ತಿರುವುದು ಮತ್ತು ಕರ್ನಾಟಕದ ಕಾಂಗ್ರೆಸ್ ಪಕ್ಷದ ಜಾತ್ಯತೀತ ಸರ್ಕಾರದ ಮೇಲೆ ಮಠ-ಮಾನ್ಯಗಳು ಸವಾರಿ ಮಾಡುತ್ತಿರುವುದು ಭಾರತದ ಜನತಂತ್ರ ವ್ಯವಸ್ಥೆಯ ಘೋರ ವಿಷಾದವಾಗಿದೆ.

## 'ದಯಾ ಮರಣ'ದ ಸಮರ್ಥನೆ : ವೈದ್ಯ ವೃತ್ತಿ - ಧರ್ಮದ ಆತ್ಮಹತ್ಯೆಯ ವಾದ

ಮಾನ್ಯರೆ,

ಕೆಲವು ದಿನಗಳ ಹಿಂದೆ ಜೆ.ಎಸ್.ಎಸ್ ಆಸ್ಪತ್ರೆಯ ಆವರಣದಲ್ಲಿ ಶರಣ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ್ದ 'ಮರಣವೇ ಮಹಾನವಮಿ' ಎಂಬ ವಿಚಾರ ಸಂಕಿರಣದಲ್ಲಿ ವ್ಯಕ್ತವಾದ ಕೆಲವು ಅಸಂಬದ್ಧವಾದ ವಿಚಾರಗಳ ಬಗ್ಗೆ ನಾನು ತಮ್ಮ ಪತ್ರಿಕೆಯಲ್ಲಿ (೩೧.೮.೯೯) ವ್ಯಕ್ತಪಡಿಸಿದ ಭಿನ್ನಾಭಿಪ್ರಾಯಗಳ ಬಗ್ಗೆ ಕೆಲವರು ಪ್ರತಿಕ್ರಿಯಿಸಿದ್ದಾರೆ.

ಮೈಸೂರಿನ ಕೆ.ಆರ್. ಆಸ್ಪತ್ರೆಯ ಹಿರಿಯ ನೇತ್ರ ತಜ್ಞರಾದ ಡಾ.ಎಚ್.ಆರ್. ಮಣಿಕರ್ಣಿಕಾ ಅವರು 'ದಯಾಮರಣ ಸಾವು ನೋವಿನಲ್ಲಿರುವ ರೋಗಿಗಳಿಗೆ ಆಶಾಕಿರಣ'ವೆಂದು (೧೬.೯.೯೯) ಜೀವಹತ್ಯೆಯ ಸಿದ್ಧಾಂತ (Euthanasia)ವನ್ನು ಸಮರ್ಥಿಸಿರುವುದು ವೈದ್ಯ ವೃತ್ತಿಧರ್ಮದ (Professional Ethics) ಆತ್ಮಹತ್ಯೆಯ ವಾದವಾಗಿದೆ. ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಈ ಬಗ್ಗೆ ವಾದ ವಿವಾದಗಳು ನಡೆಯುತ್ತಿವೆಯಾದರೂ 'ದಯಾ ಮರಣ'ವನ್ನು ಮಾನವ ಹಕ್ಕೆಂದು ಜಗತ್ತಿನ ಯಾವ ದೇಶವೂ ಮಾನ್ಯ ಮಾಡಿಲ್ಲ.

ಬದುಕಿನಿಂದ ನಿರ್ಗಮಿಸುವ ಸಹಜ ಸ್ಥಿತಿಯನ್ನು ಸ್ವಾಭಾವಿಕ ಮರಣವೆಂದು ಕರೆಯಲಾಗಿದೆ. ಸಂಭವಿಸಿದ ಜೀವಕ್ಕೆ ಮೃತ್ಯುಂಜಯ ಸತ್ವ ಅಸಂಭವವಾಗಿರುವುದರಿಂದ ಸ್ವಾಭಾವಿಕ ಜೀವನ ಅಂತ್ಯಗೊಳ್ಳುವ ರೀತಿ ಅನಂತಮುಖಿಯಾಗಿವೆ ಮತ್ತು ಅನಿರೀಕ್ಷಿತವಾಗಿವೆ.

ಬದುಕು ಇನ್ನೂ ಇರುವಾಗಲೇ ಆಧ್ಯಾತ್ಮಿಕ ಅಥವಾ ಧಾರ್ಮಿಕ ಪ್ರಭಾವದಿಂದ ಬಯಸಿದಾಗ ಅನಾಯಾಸವಾಗಿ ಸಾಯಬಯಸುವುದನ್ನು ಇಚ್ಛಾಮರಣವೆಂದು ಭ್ರಮಾತ್ಮಕತೆಯಿಂದ ಕೆಲವರು ಕರೆಯುತ್ತಾರೆ. ರೋಗ-ರುಜಿನಗಳ ದಾರುಣವಾದ ಯಾತನಾಮಯ ಜೀವನ ಉಂಟಾದಾಗ ಇದರಿಂದ ವಿಮೋಚನೆಯಾಗಲು ವ್ಯಕ್ತವಾಗುವ ಸಾವಿನ ಬಯಕೆಯನ್ನು ವೈದ್ಯಕೀಯ ಪರಿಭಾಷೆಯಲ್ಲಿ 'ದಯಾಮರಣ'ವೆಂದು ಕರೆಯಲಾಗಿದೆ. ಆರ್ಥಿಕ, ಸಾಮಾಜಿಕ ಮತ್ತು ಮಾನಸಿಕ

ಒತ್ತಡಗಳ ದುರ್ಬಲ ಕ್ಷಣಗಳಲ್ಲಿ ಹತಾಶೆಯಿಂದ ಜೀವನವನ್ನು ಅಂತ್ಯಗೊಳಿಸುವುದನ್ನು ಸಾಮಾಜಿಕ ಪರಿಭಾಷೆಯಲ್ಲಿ ಆತ್ಮಹತ್ಯೆಯೆಂದು ಕರೆಯಲಾಗುತ್ತಿದೆ. ಈ ಎಲ್ಲ ಅಸ್ವಾಭಾವಿಕ ಸಾವಿನ ಅರ್ಥ ಒಂದೇ. ಅದು ಬಲಾತ್ಕಾರದ ಜೀವಹತ್ಯೆ. ಇದನ್ನು ಸ್ವಾಭಾವಿಕವಾದ ಮಾನವ ಹಕ್ಕೆಂದು ಹೇಗೆ ಪರಿಗಣಿಸಲು ಸಾಧ್ಯ ?

ವೈದ್ಯಕೀಯ ವಿಜ್ಞಾನ ಬೆಳೆದಿರುವುದು ಮತ್ತು ವೈದ್ಯ ವೃತ್ತಿ ಇರುವುದು ಜೀವದ ರಕ್ಷಣೆಗಾಗಿಯೇ ಹೊರತು ಜೀವಹತ್ಯೆಗಾಗಿ ಅಲ್ಲ. ವೈದ್ಯ ವೃತ್ತಿಯಲ್ಲಿರುವ ಡಾ. ಮಣಿಕರ್ಣಿಕಾ ಅವರು ನೇತ್ರ ತಜ್ಞರಾಗಿ, ದೃಷ್ಟಿಹೀನರಾಗಿ ಅಂಧಕಾರದಲ್ಲಿರುವ ರೋಗಿಗಳಿಗೆ ಬೆಳಕಿನ ದೃಷ್ಟಿಯ ಆಶಾಕಿರಣವನ್ನು ನೀಡುವ ಆಶಾವಾದದ ಪವಿತ್ರ ಕೆಲಸದಲ್ಲಿ ತೊಡಗಿರುವಾಗ ದಯಾಮರಣವನ್ನು ಆಶಾಕಿರಣವೆಂದು ತಿಳಿದಿರುವುದಾದರು ಹೇಗೆ ?

ಕ್ಯಾನ್ಸರ್, ಏಡ್ಸ್ ಮುಂತಾದ ಗುಣಪಡಿಸಲಾಗದ ರೋಗಗಳಿಂದ ನರಳುತ್ತಿರುವ ಸಾವಿನ ದವಡೆಯಲ್ಲಿರುವ ರೋಗಿಗಳನ್ನು ಅವರ ಜೀವನದ ಅಂತ್ಯಕಾಲದವರೆಗೂ ಅವರನ್ನು ಬದುಕಿಸುವ ಪ್ರಯತ್ನ ಮಾಡುವುದು ವೈದ್ಯ ವೃತ್ತಿಯ ಧರ್ಮ. ಆಸ್ಪತ್ರೆಗಳಿರುವುದೆ ಇಂಥವರನ್ನು ರಕ್ಷಿಸುವುದಕ್ಕಾಗಿ ಅಲ್ಲವೇ ? ವೈದ್ಯ ವಿಜ್ಞಾನದ ಬೆಳವಣಿಗೆಯಾಗುತ್ತಿರುವುದು, ಆಧುನಿಕ ಸಂಶೋಧನೆಗಳು ನಡೆಯುತ್ತಿರುವುದು ಬದುಕಿನ ಭರವಸೆಯ ಜೀವರಕ್ಷಣೆಯ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುವುದಕ್ಕಾಗಿಯಲ್ಲವೇ ?

ದಯಾಮರಣದ ಲಕ್ಷ್ಮಣ ರೇಖೆಯ ಮಾನದಂಡವನ್ನು ಗುರುತಿಸುವವರು ಯಾರು ? ವೈದ್ಯರು ತೀರ್ಮಾನಗಳನ್ನು ಕೈಗೊಳ್ಳುತ್ತಾರೆಂದಾದರೆ, ರೋಗ ಲಕ್ಷಣಗಳನ್ನು ಗುರುತಿಸುವ ಅವರ ಗ್ರಹಿಕೆಯೇ ತಪ್ಪಾಗುವ ಸಾಧ್ಯತೆಗಳಿಲ್ಲವೇ ? ರೋಗಿಯೇ ತೀರ್ಮಾನಿಸುವುದೆಂದಾರೆ ಅದೊಂದು ಹತಾಶ ಕ್ಷಣದ ತೀರ್ಮಾನವಾಗಿ ಬಿಡಬಹುದು. ಇದಕ್ಕಿಂತಲೂ ಅಪಾಯಕಾರಿಯಾದದ್ದೆಂದರೆ ವೈದ್ಯವೃತ್ತಿಯೇ ವ್ಯಾಪಾರೀಕರಣದ ಅನೈತಿಕತೆಯ ಕಡೆಗೆ ತಿರುಗುತ್ತಿರುವುದರಿಂದ ಆಸ್ತಿ-ಪಾಸ್ತಿಗಳ ದಾಹಕ್ಕೆ ಒಳಗಾದ ಬಂಧು-ಬಾಂಧವರ ಆಮಿಷಗಳಿಗೆ ದಯಾಮರಣ ಜೀವಹತ್ಯೆಗೆ ಅವಕಾಶ ಕಲ್ಪಿಸಬಹುದು. ಅಂಗಾಂಗಗಳ ಅಪಹರಣ ಮಾಡುವ ಚೋರರಿಗೆ ದಯಾಮರಣ ವರವಾಗಿ ಬಿಡಬಹುದು. ಇಂತಹ ಅನೈತಿಕ ಮಾರ್ಗಗಳಿಗೆ ಅವಕಾಶ ಕಲ್ಪಿಸುವ ದಯಾಮರಣವನ್ನು ಮಾನ್ಯ ಮಾಡುವುದಾದರು ಹೇಗೆ ?

ಡಾ. ಮಣಿಕರ್ಣಿಕಾ ಅವರ ದಯಾಮರಣ ವಾದದ ತಾರ್ಕಿಕತೆಯನ್ನು ವಿಸ್ತರಿಸುತ್ತಾ ಹೋದರೆ ಜೀವಹತ್ಯೆಯ ಸರಣಿಯೇ ಎದುರಾಗುತ್ತದೆ. ಆಜೀವದುದ್ದಕ್ಕೂ ಅಂಗವಿಕಲರಾಗಿ ದಾರುಣವಾದ ಸ್ಥಿತಿಯಲ್ಲಿರುವ ಮಕ್ಕಳು, ವಯೋವೃದ್ಧರಾಗಿ ಅಸಹಾಯಕತೆಯಿಂದ ತೊಳಲಾಡುತ್ತಿರುವವರು, ಭಯಾನಕವಾದ ಮಾನಸಿಕ ರೋಗಗಳಿಗೆ ಬಲಿಯಾದವರು, ಆರ್ಥಿಕ-ಸಾಮಾಜಿಕ ಒತ್ತಡದಿಂದ ದುರ್ಬಲರಾಗಿ ನರಳುತ್ತಿರುವವರು, ಬದುಕಿನಿಂದ ಹತಾಶರಾದವರು ಮತ್ತು ಅನೇಕ ರೀತಿಯ ಹತಾಶರಾದವರು ಮತ್ತು ಅನೇಕ ರೀತಿಯ ಆಕಸ್ಮಿಕಗಳಿಂದ ಸಾವಿನ

ದವಡೆಯಲ್ಲಿ ಸಿಕ್ಕವರು ದಯಾಮರಣದ ಹೆಸರಿನಲ್ಲಿ ಜೀವಹತ್ಯೆಯನ್ನು ಸ್ವೀಕರಿಸಬೇಕಾಗುತ್ತದೆ. ಬದುಕಿನ ಭರವಸೆಯನ್ನು ಕಳೆದುಕೊಳ್ಳಬೇಕಾಗುತ್ತದೆ.

ಕೆಲವು ವರ್ಷಗಳ ಹಿಂದೆ ವಾಹನ ಅಪಘಾತಕ್ಕೆ ಒಳಗಾದ, ಆಂಧ್ರಪ್ರದೇಶದಲ್ಲಿ ಮಂತ್ರಿಯಾಗಿದ್ದ ಪಿ.ವಿ.ಜಿ. ರಾಜು ಅವರು ಅನೇಕ ತಿಂಗಳು ಕಾಲ ಕೋಮಾದ ಸ್ಥಿತಿಯಲ್ಲಿದ್ದು ನಂತರ ಚಿಕಿತ್ಸೆಯಿಂದ ಚೇತರಿಸಿಕೊಂಡು ಸಹಜ ಸ್ಥಿತಿಯ ಜೀವನ ನಡೆಸಿದರು. (ಇದೇ ರೀತಿಯ ಪ್ರಕರಣದಲ್ಲಿ ನಟ ಅಮಿತಾಬ್ ಬಚನ್ ಬಚಾವಾಗಿ ಈಗಲೂ ಸಕ್ರಿಯ ಜೀವನ ನಡೆಸುತ್ತಿರುವುದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು.)

ಮೈಸೂರಿನಲ್ಲೇ ನಡೆದ ಇತ್ತೀಚಿನ ಡಾ. ವಿಜಯಾ ದಬ್ಬೆಯವರ ಪ್ರಕರಣವೇ ನಮ್ಮ ಮುಂದಿದೆ. ವಾಹನ ಅಪಘಾತದಿಂದ ತಲೆಗೆ ಪೆಟ್ಟಾಗಿ ಕೋಮಾ ಸ್ಥಿತಿಯ ಸಾವಿನ ದವಡೆಯಲ್ಲಿ ಸಿಕ್ಕ ವಿಜಯಾ ದಬ್ಬೆಯವರನ್ನು ಹತಾಶೆ ಕ್ಷಣದಲ್ಲೂ ಕೂಡ ತಜ್ಞವೈದ್ಯರ ಶಸ್ತ್ರಚಿಕಿತ್ಸೆಯಿಂದ ಸಾವಿನಿಂದ ಬಚಾವಾಗಿ ಕ್ರಮೇಣ ಚೇತರಿಸಿಕೊಳ್ಳುತ್ತಾ ಸಹಜ ಸ್ಥಿತಿಗೆ ಮರಳುತ್ತಿರುವುದು ವೈದ್ಯ ವೃತ್ತಿಯ ಬದುಕಿನ ಭರವಸೆಯ ಆಶಾಕಿರಣವಾಗಿದೆ. ಇವೆಲ್ಲ ದಯಾಮರಣದಂತಹ ಹತಾಶೆಯ ಜೀವಹತ್ಯೆಯ ಆತುರದ ಕ್ರಮಗಳನ್ನು ಅಲ್ಲಗಳೆಯುತ್ತವೆ.

ಬದುಕಿನ ಅರ್ಥ ಮತ್ತು ಸಾರ್ಥಕತೆ ಇರುವುದು ಬದುಕಿನ ಭರವಸೆಯ ಹೋರಾಟದಲ್ಲಲ್ಲದೆ ಅದರ ನಿರಾಕರಣೆಯ ಹೇಡಿತನದ ನಿರ್ಗಮನದಲ್ಲಲ್ಲ. ಆಸೆಯೇ ಜೀವನ, ನಿರಾಶೆಯೇ ಮರಣ. ಜೀವ ರಕ್ಷಣೆಯ ಭರವಸೆಗಾಗಿಯೇ ಸ್ಥಾಪಿಸಲ್ಪಟ್ಟಿರುವ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ 'ಮರಣವೇ ಮಹಾನವಮಿ'ಯೆಂದು ದಯಾಮರಣವನ್ನು ಅಲ್ಲಿ ಬೋಧಿಸುವುದಾದರೆ ಬಾಣದ ಗುರುತನ್ನು ಸ್ಮಶಾನದ ಕಡೆಗೆ ತಿರುಗಿಸಬೇಕಾಗುತ್ತದೆ.

ಜಗದ್ಗುರುಗಳೆಲ್ಲ ಹೈಟೆಕ್ ಆಸ್ಪತ್ರೆಗಳನ್ನು ಸ್ಥಾಪಿಸುವುದರ ಬದಲು ಎಲೆಕ್ಟ್ರಿಕ್ ಕ್ರಿಮೆಟೋರಿಯಂಗಳನ್ನು ತೆರೆಯಬೇಕಾಗುತ್ತದಲ್ಲವೇ, ಡಾ. ಮಣಿಕರ್ಣಿಕಾ ಅವರೆ ? ಆಯ್ಕೆಯನ್ನು ನಿಮ್ಮ ಅಂತಃಸಾಕ್ಷಿಗೆ ಬಿಟ್ಟಿದ್ದೇನೆ.

# ಇಚ್ಛಾಮರಣದ ಸಮರ್ಥನೆ ಆತ್ಮಹತ್ಯೆಯ ವೈಭವೀಕರಣ ಸಲ್ಲದು

**ಕೆ. ರಾಮದಾಸ್**

ಮಾನ್ಯರೆ,

ಈಚೆಗೆ ಮೈಸೂರಿನಲ್ಲಿ ಶರಣಸಾಹಿತ್ಯ ಪರಿಷತ್ ಮತ್ತು ಲಿವ್ ವೆಲ್-ಲೀವ್ ವೆಲ್ ಸೊಸೈಟಿಯ ವತಿಯಿಂದ ಏರ್ಪಡಿಸಲಾಗಿದ್ದ 'ಮರಣವೇ ಮಹಾನವಮಿ'ಎಂಬ ವಿಚಾರ ಸಂಕಿರಣದಲ್ಲಿ ಶರಣ ಸಾಹಿತ್ಯದ ಪರಿಷತ್ತಿನ ಅಧ್ಯಕ್ಷರಾದ ಗೊ.ರು. ಚೆನ್ನಬಸಪ್ಪನವರು ಸಾವಿನಿಂದ ಸಡಗರ ಸಿಗುವುದಾದರೆ ಇಚ್ಛಾಮರಣ ತಪ್ಪಲ್ಲವೆಂದು ಹೇಳಿರುವುದು ಆತ್ಮಹತ್ಯೆಯ ವೈಭವೀಕರಣದ ಮತ್ತು ಜೀವನ ನಿರಾಕರಣೆಯ ಅವಿವೇಕದ ಅಭಿಪ್ರಾಯವಾಗಿದೆ. ಈ ರೀತಿಯ ಭ್ರಮೆಗಳಿಂದ ಹುಟ್ಟು-ಸಾವುಗಳಂತಹ ನೈಜ ನೈಸರ್ಗಿಕ ಆಕಸ್ಮಿಕಗಳನ್ನು ಧಾರ್ಮಿಕ ಪರಿಭಾಷೆಯ ಮೂಲಕ ವೈಭವೀಕರಿಸುವುದು ಅಪಾಯಕಾರಿ ಪರಿಣಾಮವನ್ನುಂಟುಮಾಡುತ್ತದೆ.

ಈ ವಿಚಾರ ಸಂಕಿರಣಕ್ಕೆ 'ಮರಣವೇ ಮಹಾನವಮಿ' ಎಂದು ಶರಣ ಸಾಹಿತ್ಯ ಪರಿಷತ್ತಿನವರು ಕರೆದಿರುವುದು ಬಸವಣ್ಣನವರಿಗೆ ಮಾಡಿದ ಅಪಚಾರವಾಗಿದೆ. ತನ್ನ ಮಹೋನ್ನತ ಹೋರಾಟದಿಂದ ತನ್ನನ್ನು ಹಿಮ್ಮೆಟ್ಟಿಸಲು ಪಟ್ಟಭದ್ರರು ನಡೆಸುತ್ತಿದ್ದ ಭಯೋತ್ಪಾದನೆಯನ್ನು ಪ್ರತಿಭಟಿಸಲು ಮತ್ತು ಹೋರಾಟದ ತತ್ವ ನಿಷ್ಠೆಯನ್ನು ದೃಢೀಕರಿಸಲು ಬಸವಣ್ಣ-

ನಾಳೆ ಬಪ್ಪುದು ನಮಗಿಂದೆ ಬರಲಿ,
ಇದಕಾರಂಜುವರು, ಇದಕಾರಳಕುವರು ?
ಜಾತಸ್ಯ ಮರಣಂ ಧ್ರುವಂ.
ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯಾ.
ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯಾ
ಮರಣವೇ ಮಹಾನವಮಿ -

ಈ ರೀತಿ ದೃಢ ನಿರ್ಧಾರದಿಂದ ಸಾವಿನ ಭಯೋತ್ಪಾದನೆಗೆ ಮುಖಾಮುಖಿಯಾಗಿ ತನ್ನ ಹೋರಾಟದ ನಿರ್ಭೀತ ಸಂಕಲ್ಪವನ್ನು ಘೋಷಿಸಿದ. ಬಸವಣ್ಣನ ಹೋರಾಟದ ನಿರ್ಭೀತತೆಯ

ಆಶಯವನ್ನು ಶರಣ ಸಾಹಿತ್ಯ ಪರಿಷತ್ತಿನವರು ಇಚ್ಛಾಮರಣದ ಸಾವಿನ ಸಡಗರವೆಂದು ಭ್ರಮಿಸಿರುವುದು ಅಸಂಬದ್ಧವಾಗಿದೆ.

ಹುಟ್ಟು-ಸಾವುಗಳ ನಿಸರ್ಗ ಸಹಜವಾದ ಕ್ರಿಯೆಗಳನ್ನು ಜೈವಿಕ ವಿದ್ಯಮಾನಗಳೆಂದು ಗ್ರಹಿಸಲಾರದವರು ಸಾವಿನ ಭೀತಿಯಿಂದ ತಪ್ಪಿಸಿಕೊಳ್ಳಲು ಜನ್ಮಾಂತರ, ಕರ್ಮಸಿದ್ಧಾಂತ, ಪಾಪ-ಪುಣ್ಯ, ಹಣೆಬರಹ, ವಿಧಿವಾದ ಇತ್ಯಾದಿ ಪರಿಕಲ್ಪನೆಗಳ ಮೂಲಕ ಅವಾಸ್ತವ ಧಾರ್ಮಿಕ ಪರಿಭಾಷೆಯನ್ನು ರೂಪಿಸಿದರು. ಇವುಗಳನ್ನು ವೈಭವೀಕರಿಸಿ ಜೀವನವನ್ನು ನಿರಾಕರಿಸಲು ಪ್ರಚೋದಿಸಿದರು. ಶಂಕರಾಚಾರ್ಯರ ಜಗತ್‌ಮಿಥ್ಯ ಬ್ರಹ್ಮಸತ್ಯ ಸಿದ್ಧಾಂತ ಜೈನರ ಸಲ್ಲೇಖನಗಳು ಜೀವನದ ನಿರಾಕರಣೆಯ ನೈತ್ಯಾತ್ಮಕತೆಯ ಜೀವ ವಿರೋಧಿ ನಿಲುವಿನಿಂದ ಕೂಡಿವೆ. ಬಸವಣ್ಣ ಜೀವ ವಿಮುಖತೆಯ ಸಿದ್ಧಾಂತಗಳನ್ನು ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ ಅಯ್ಯಾ ಎಂದು ವಿಡಂಬಿಸಿದ.

ಸಾವಿಗಿಂತ, ಸಾವಿನ ಭೀತಿಯಿಂದ ಬೆದರುಗೊಂಬೆಗೆ ಬೆದರಿ ಬಿಡುವಂತೆ ಸಾವಿನ ವಾಸ್ತವತೆಯಿಂದ ತಪ್ಪಿಸಿಕೊಳ್ಳಲು ಸಾವು ಸಂಭವಿಸಿದಾಗ ಸ್ವರ್ಗಸ್ಥರಾದರು. ಲಿಂಗೈಕ್ಯರಾದರು, ವೈಕುಂಠವಾಸಿಗಳಾದರು, ಕೈಲಾಸವಾಸಿಗಳಾದರು, ಪರಂಧಾಮವನ್ನೈದಿದರು ಇತ್ಯಾದಿಯಾಗಿ ವೈಭವೀಕರಣದ ಪರಿಭಾಷೆಯನ್ನು ನಾವು ಬಳಸುತ್ತೇವೆ. ಎಂಥ ನೀಚ ಕೆಲಸ ಮಾಡಿದವನು ಸತ್ತಾಗಲೂ ನರಕವಾಸಿಯಾದನೆಂದು ಕರೆಯಲಾಗುವುದಿಲ್ಲ.

ಕೆಲವು ವರ್ಷಗಳ ಹಿಂದೆ ಬಿಳಿಗಿರಿ ರಂಗನ ಬೆಟ್ಟದಲ್ಲಿ ಆಶ್ರಮವಾಸಿಯಾದ ಇಳಿವಯಸ್ಸಿನ ಸ್ವಾಮಿಯೊಬ್ಬರು ಮೋಕ್ಷಗಾಮಿಯಾದ ಇಚ್ಛಾಮರಣದ ಭವ್ಯತೆಯಿಂದ ಭ್ರಮಿತರಾಗಿ ತನ್ನ ಮರಣಕಾಲದ ದಿನವನ್ನು ನಿರ್ಧರಿಸಿ, ತಾವೇ ತಮ್ಮ ಸಮಾಧಿಯ ನಾಮಫಲಕದಲ್ಲಿ ನಿರ್ಗಮಿಸುವ ದಿನಾಂಕ ಇತ್ಯಾದಿಗಳನ್ನು ಬರೆಸಿಕೊಂಡು ಪತ್ರಿಕೆಗಳಲ್ಲಿ ಪ್ರಚಾರ ಮಾಡಿ ಆಹಾರ ತ್ಯಾಗ ಮಾಡಿ ಸಾವಿಗಾಗಿ ಕಾಯತೊಡಗಿದರು. ನಿಗದಿತ ಕಾಲಕ್ಕೆ ಸರಿಯಾಗಿ ಸಾವು ಸಂಭವಿಸದೆ ಸತಾಯಿಸತೊಡಗಿತು. ನಾವು ಕೆಲವರು ಈ ರೀತಿ ಆತ್ಮಹತ್ಯೆ ಮಾಡಿಕೊಳ್ಳಬಾರದೆಂದು ಮಾಡಿದ ವಿನಂತಿಯನ್ನು ಅವರು ಪರಿಗಣಿಸಲಿಲ್ಲ. ಸ್ವಾಮೀಜಿಯವರ ಆತ್ಮಹತ್ಯೆಯನ್ನು ತಡೆಯಬೇಕೆಂದು ಮಾಡಿದ ಒತ್ತಾಯವನ್ನು ಇದು ಧಾರ್ಮಿಕ ವಿಧಿಯೆಂದು ಭಾವಿಸಿದ ಸರ್ಕಾರ ಬೇಜವಾಬ್ದಾರಿಯಿಂದ ವರ್ತಿಸಿತು. ಸ್ವಾಮೀಜಿ ಕೆಲವು ದಿನಗಳ ದೀರ್ಘ ನಿರೀಕ್ಷೆಯ ನಂತರ ಮೃತರಾದರು. ಈ ಆತ್ಮಹತ್ಯೆಯ ಪ್ರಸಂಗವನ್ನು ಇಚ್ಛಾಮರಣದ ಸಾವಿನ ಸಡಗರವೆಂದು ಕರೆಯಬಹುದೆ ? ಇದನ್ನು 'ಮರಣವೇ ಮಹಾನವಮಿ' ಎಂದು ಸಂಭ್ರಮಿಸಬಹುದೆ ?

ಬದುಕಿನ ಪಾವಿತ್ರ್ಯವಿರುವುದು ಬದುಕುವ ಕ್ರಿಯೆಯಲ್ಲಿ ಬದುಕಿನ ಮಹತ್ವದ ಸ್ವಾರಸ್ಯವಿರುವುದು ಪುರುಷ ಪ್ರಯತ್ನದ ನಿರಂತರ ಹೋರಾಟದಲ್ಲಿ. ಬದುಕಿನ ಸಡಗರವಿರುವುದು ಅದರ ಅರ್ಥಪೂರ್ಣ ಸಾಧ್ಯತೆಗಳ ಅನ್ವೇಷಣೆಯಲ್ಲಿ ಅಲ್ಲವೇ ? ಅದಿಲ್ಲದಿದ್ದರೆ ಆರ್ಥಿಕ, ಸಾಮಾಜಿಕ ಮತ್ತು ಶಾರೀರಿಕ ಸಂಕಷ್ಟಗಳ ಪರಿಸ್ಥಿತಿಯ ಒತ್ತಡದಲ್ಲಿ ದಾರುಣವಾಗಿ ತೊಳಲಾಡುವ

ಮನುಷ್ಯರು ಬದುಕಿನ ನೆಮ್ಮದಿಗೆ ಹಂಬಲಿಸುತ್ತಾರೆ. ಕುರುಡರು, ಕುಂಟರು, ಹೆಳವರು, ಮೂಗರು ತಮ್ಮ ಅಂಗವಿಕಲತೆಯನ್ನು ಮೀರಿ ಬದುಕನ್ನು ಪ್ರೀತಿಸಲು ಹೋರಾಡುತ್ತಾರೆ.

ಈ ವಿಚಾರ ಸಂಕಿರಣದಲ್ಲಿ 'ನೆಮ್ಮದಿಯಾಗಿ ಬದುಕಿರಿ; ನೆಮ್ಮದಿಯಾಗಿ ನಿರ್ಗಮಿಸಿ' ಎಂಬ ಆಶಯವನ್ನು ಅರ್ಥಪೂರ್ಣವಾಗಿ ಗ್ರಹಿಸಿದ ಪ್ರೊ.ಸಿ.ಕೆ.ಎನ್. ರಾಜರವರು 'ಹುಟ್ಟಿದ ಪ್ರತಿಯೊಬ್ಬ ಮಾನವನಿಗೂ ಸಾವು ಬರುವುದು ನಿಶ್ಚಿತ. ಆದ್ದರಿಂದ ಸಾವಿನ ಬಗ್ಗೆ ಚಿಂತಿಸುವುದಕ್ಕಿಂತ ಉತ್ತಮವಾಗಿ ಬದುಕುವ ಬಗ್ಗೆ ಚಿಂತಿಸಬೇಕು' ಎಂದು ಹೇಳಿರುವುದು ಸಮಂಜಸವಾಗಿದೆ.

ಸುತ್ತೂರು ಸ್ವಾಮಿಗಳ ಸಮ್ಮುಖದಲ್ಲಿ ನಡೆದಿರುವ ವಿಚಾರ ಸಂಕಿರಣ, ರೋಗ-ರುಜಿನಗಳಿಂದ ಬಾಧೆ ಪಡುವ, ಸಾವಿನ ಅಂಚಿನಲ್ಲಿರುವವರ ಜೀವವನ್ನು ಕಾಪಾಡಲು ಕಟ್ಟಿಸಿರುವ ಜೆ.ಎಸ್.ಎಸ್ ಆಸ್ಪತ್ರೆಯ ಆವರಣದಲ್ಲಿ ಏರ್ಪಡಿಸಿರುವುದು ಎಂತಹ ವಿಪರ್ಯಾಸವಲ್ಲವೆ ?

ಪುರಂದರದಾಸರು ಹೇಳಿದಂತೆ ಸಾವನ್ನು ಹಂಬಲಿಸಬಾರದು. ಬದುಕನ್ನು ಪ್ರೀತಿಸಬೇಕು, ಈಸಬೇಕು - ಇದ್ದು ಜೈಸಬೇಕು.

-ಕೆ. ರಾಮದಾಸ್

# ಮೊಯಿಲಿ ಸರ್ಕಾರದ ದಸರಾ ದೊಂಬರಾಟ

'ಕೊಟ್ಟ' - ಎಂಬ ಕಾದಂಬರಿ ಬರೆದು ಕರ್ನಾಟಕದ ಜನರಿಗೆ ಕೈಕೊಟ್ಟ ವೀರಪ್ಪ ಮೊಯಿಲಿ ಸರ್ಕಾರ ಮೀಸಲಾತಿ ಪ್ರಸಂಗದಲ್ಲಿ ಎಲ್ಲರಿಂದಲೂ ಉಗಿಸಿಕೊಂಡಿರುವುದನ್ನು ಒರೆಸಿಕೊಳ್ಳುವ ಪ್ರಯತ್ನದಲ್ಲಿರುವಾಗಲೇ ಮೈಸೂರು ದಸರಾ ಎಂಬ ದೊಂಬರಾಟ ನಡೆಸಿ ಮತ್ತೆ ಉಗಿಸಿಕೊಂಡು ಅಪಹಾಸ್ಯಕ್ಕೆ ಈಡಾದ ಪ್ರಸಂಗ ಸ್ವಾರಸ್ಯವಾಗಿದೆ.

ಕಳೆದ ವರ್ಷದ ಭೂಕಂಪದಿಂದಾಗಿ ದಸರಾವನ್ನು ಸರಳವಾಗಿ ಆಚರಿಸುವುದಾಗಿ ಹೇಳಿ ಜನತೆಯನ್ನು ವಂಚಿಸಿದಂತೆ, ಈ ವರ್ಷ ಕೂಡ ದಸರಾವನ್ನು ಸರಳವಾಗಿ ಆಚರಿಸುವುದಾಗಿ ಘೋಷಿಸಿದ ವೀರಪ್ಪ ಮೊಯಿಲಿ ಸರ್ಕಾರ ಅದರ ಸಿದ್ಧತೆಯಲ್ಲಿ ತೊಡಗಿರುವಾಗ ದಸರಾ ಅತಿಥಿಯಂತೆ ಪ್ಲೇಗು ವಕ್ಕರಿಸಿತು. ಬೆಂಗಳೂರು, ಮೈಸೂರು ಮತ್ತು ಮಂಡ್ಯಗಳಲ್ಲಿ ಪ್ಲೇಗಿನ ಸೋಂಕಿನಿಂದ ಜನ ಸಾಯುತ್ತಿದ್ದಾರೆಂಬ ಸುದ್ದಿಯಿಂದಾಗಿ ಭೀತಿಯಿಂದ ಜನ ಆತಂಕಪಟ್ಟರು. ದಸರಾದ ಹಿನ್ನಲೆಯಲ್ಲಿ ಪ್ಲೇಗು ಸೋಂಕಿನ ಅಪಾಯವಿದೆ ಎಂದು ಮೈಸೂರು ನಗರ ಪಾಲಿಕೆಯ ಸದಸ್ಯರು ದಸರಾ ರದ್ದು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಮೈಸೂರಿನ ಸಂಘ-ಸಂಸ್ಥೆಗಳು, ಬುದ್ಧಿಜೀವಿಗಳು, ಸಾಹಿತಿಗಳು, ಪರಿಸರವಾದಿಗಳು, ಗಣ್ಯನಾಗರಿಕರು ಮತ್ತು ವೈದ್ಯರು ದಸರಾ ರದ್ದುಪಡಿಸಬೇಕೆಂಬ ಒತ್ತಾಯಕ್ಕೆ ಬೆಂಬಲ ನೀಡಿದರು. ಪತ್ರಿಕೆಗಳ ಮೂಲಕ ವ್ಯಕ್ತವಾದ ಜನಾಭಿಪ್ರಾಯಕ್ಕೆ ಗಲಿಬಿಲಿಗೊಂಡ ವೀರಪ್ಪ ಮೊಯಿಲಿ ದಸರಾಕ್ಕೂ ಪ್ಲೇಗಿಗೂ 'ಎತ್ತಣಿಂದೆತ್ತ ಸಂಬಂಧವಯ್ಯಾ' ಎಂದು ಗದ್ಯಪದ್ಯಗಳೆರಡರಲ್ಲೂ ಚಿಂತಿಸಲು ಹೋಗಿ ಮತ್ತಷ್ಟು ಗೊಂದಲವಾಗಿ ಕ್ಯಾಬಿನೆಟ್ ಮೀಟಿಂಗ್ ಮಾಡಿದರು. 'ಕರ್ನಾಟಕದಲ್ಲಿ ಪ್ಲೇಗು ಇಲ್ಲವೇ ಇಲ್ಲ. ಆದ್ದರಿಂದ ದಸರಾ ರದ್ದುಮಾಡುವುದಿಲ್ಲ' ಎಂದು ತೀರ್ಮಾನಿಸಿ ಆಕಾಶವಾಣಿ, ದೂರದರ್ಶನ, ಪತ್ರಿಕೆಗಳ ಮೂಲಕ ಪ್ಲೇಗು ಇಲ್ಲವೇ ಇಲ್ಲವೆಂದು ಮೇಲೆ ಅಧಿಕೃತ ವಕ್ತಾರ ಡಾ. ಪರಮೇಶ್ವರರ ಮೂಲಕ ಡಂಗುರ ಸಾರಿಸಲಾಯಿತು.

ಇತ್ತ ಮೈಸೂರಿನಲ್ಲಿ, ಮಂಡ್ಯದಲ್ಲಿ ಪ್ಲೇಗು ಹರಡುತ್ತಿದೆ ಎಂಬ ಸುದ್ದಿಗಳಿಂದ ಭೀತರಾದ ಜನ ದಸರಾ ರದ್ದು ಮಾಡಬೇಕೆಂದು ಚಳವಳಿ ನಡೆಸಲು ಬೀದಿಗಿಳಿದರು. ಹಿರಿಯ ಸಾಹಿತಿ ಡಾ.

ಚಮರಂಗರು ಸೇರಿದಂತೆ ಅನೇಕ ಗಣ್ಯರು ಯಾರ ಮುಲಾಜು ಇಲ್ಲದೆ ಬೀದಿಗಿಳಿದು ಚಳವಳಿಯನ್ನು ಬೆಂಬಲಿಸಿದರು.

ದಸರಾದಲ್ಲಿ ಮಿಂಚುವ ಮತ್ತು ಮೇಯುವ ಕಾರ್ಯಕ್ರಮದ ರಿಹರ್ಸಲ್ ಮಾಡುತ್ತಿದ್ದ ಕೆಲವು ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಗಾಬರಿಯಾಯಿತು. 'ಬಂದಿದ್ದೆಲ್ಲ ಬರಲಿ, ದಸರಾ ನಡೆದೇ ನಡೆಯಲಿ' 'ಸತ್ತರೆ ವೀರಸ್ವರ್ಗ; ಇದ್ದರೆ ದಸರಾದಲ್ಲಿ ಮಿಂಚುವ ಭಾಗ್ಯ' ಎಂಬ ಸನಾತನ ಪರಂಪರೆಯ ಧ್ಯೇಯದಿಂದ ಮೊಯಿಲಿಗೆ ದಸರಾ ನಡೆಸಲೇ ಬೇಕೆಂದು ಬೇತಾಳಗಳಂತೆ ಬೆನ್ನು ಹತ್ತಿದರು.

ಮೈಸೂರು ಮೇಯರ್ ವಿ. ವೆಂಕಟರಾಜು ಎಂಬ ಬಾಲಕ ಕಮೀಷನರ್ ಶಿವರಾಮ್ ಮುಂದೆ ಮಿಂಚಲು ಅವಕಾಶವಿಲ್ಲದೆ ಮಂಕಾಗಿ ದಸರಾದಲ್ಲಾದರೂ ಕುದುರೆ ಸವಾರಿಯ ಮೂಲಕವಾದರೂ ಮಿಂಚೋಣವೆಂದು ಒಂದು ತಿಂಗಳಿಂದ ಬೆಳಗಿನ ಜಾವ ಎದ್ದು, ಕುದುರೆ ಸವಾರಿಯ ರಿಹರ್ಸಲ್ ಮಾಡಿ ಮಾಡಿ, ಮೈ ಕೈಯೆಲ್ಲ ನೋವಾಗಿ ಸೊರಗಿದ್ದನ್ನು ಜಂಬೂಸವಾರಿಯ ದಿನದ ಕುದುರೆ ಸವಾರಿಯಲ್ಲಿ ಮಿಂಚಿ ಪರಿಹರಿಸಿಕೊಳ್ಳುವ ಮಹತ್ವಾಕಾಂಕ್ಷೆ ಉಂಟಾಗಿತ್ತು. ದಸರಾ ರದ್ದು ಮಾಡಬೇಕೆಂಬ ತೀರ್ಮಾನಕ್ಕೆ ನಾನು ಬದ್ಧನಲ್ಲವೆಂದು ದಸರಾ ನಡೆಸಲೇಬೇಕೆಂಬ ಗುಂಪಿಗೆ ಕುದುರೆ ಸವಾರಿಯ ಚಪಲದಿಂದ ಬೆಂಬಲ ವ್ಯಕ್ತಪಡಿಸಬೇಕಾಯಿತು.

ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಜಯದೇವರಾಜಅರಸು ಎಂಬ ಪ್ರಾಚೀನ ಕಾಲದ ಕಾಂಗ್ರೆಸ್ ಮನುಷ್ಯ 'ಬಂದಿದ್ದೆಲ್ಲ ಬರಲಿ, ವಸ್ತು ಪ್ರದರ್ಶನ ಮಾತ್ರ ನಡೀಲಿ' ಎಂದು ಚೀರಾಡುತ್ತಾ ದಸರಾ ನಡೆಸಲೇಬೇಕೆಂದು ಹಟಹಿಡಿದರು.

## ಧರ್ಮಕಾರಣ ವಿರೋಧಕ್ಕೆ ಖಂಡನೆ

ಡಾ.ಪಿ.ವಿ. ನಾರಾಯಣ ಅವರ ಕಾದಂಬರಿ 'ಧರ್ಮಕಾರಣ'ಕ್ಕೆ ವ್ಯಕ್ತವಾಗುತ್ತಿರುವ ಪ್ರತಿಭಟನೆ ಮತ್ತು ಬೆದರಿಕೆಯನ್ನು ಖಂಡಿಸಿ ದಿನಾಂಕ. 23.3.1997ರಂದು ಮೈಸೂರಿನಲ್ಲಿ ನಡೆದ 'ಲೋಹಿಯಾ ಚಿಂತನೆ - ಗೋಪಾಲಗೌಡ ಸ್ಮರಣೆ' ವಿಚಾರ ಸಂಕಿರಣದ ಸಂದರ್ಭದಲ್ಲಿ ಸ್ವೀಕರಿಸಿದ ಖಂಡನಾ ನಿರ್ಣಯ.

ಡಾ. ಪಿ.ವಿ. ನಾರಾಯಣ ಅವರ ಕಾದಂಬರಿ 'ಧರ್ಮಕಾರಣ'ಕ್ಕೆ ಕೆಲವು ಪುರೋಹಿತಶಾಹಿ ಮತಾಂಧರಿಂದ ವ್ಯಕ್ತವಾಗುತ್ತಿರುವ ಪ್ರತಿಭಟನೆ ಮತ್ತು ಬೆದರಿಕೆಗಳು ಖೊಮೇನಿವಾದದ ಪ್ರತಿಬಿಂಬವಾಗಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಭಾವನಾತ್ಮಕವಾದ ಮತಾಂಧತೆಯನ್ನು ಪ್ರಚೋದಿಸಿ ಭಯೋತ್ಪಾದನೆಯ ಪರಿಸ್ಥಿತಿಯನ್ನು ನಿರ್ಮಿಸುತ್ತಿರುವುದು ಅನಾಗರಿಕವಾದ ಕ್ರಮವಾಗಿದೆ.

ಜಾತಿಹೀನರ ಮನೆಯ ಜ್ಯೋತಿಯಾಗಿ ಬೆಳಗಿದ ಶಿವಶರಣರ ವಚನ ಕ್ರಾಂತಿಯ ಆಶಯಗಳನ್ನು ಜಾತಿ - ಮತಾಂಧತೆಯ ಸೋಂಕಿಗೆ ನಿರ್ಬಂಧಿಸುತ್ತಿರುವುದು, ನಿರ್ಭೀತ ಅಭಿವ್ಯಕ್ತಿ

ಸ್ವಾತಂತ್ರ್ಯ ಹಾಗೂ ವಿಚಾರ ಸ್ವಾತಂತ್ರ್ಯವನ್ನು ಸಾರಿದ ವೀರಶೈವ ಧರ್ಮಕ್ಕೆ ಬಗೆಯುತ್ತಿರುವ ದ್ರೋಹವಾಗಿದೆ.

ಕರ್ನಾಟಕದ ಸಮಸ್ತ ಕನ್ನಡಿಗರಿಗೆ ಸೇರಿದ 'ವಚನ ವಾಙ್ಮಯ'ವನ್ನು ಸೃಜನಶೀಲತೆ ಮತ್ತು ಸಾಂಸ್ಕೃತಿಕ ಸಂವಾದಗಳಿಂದ ವಿಮುಖವಾಗುವಂತೆ ಬೆದರಿಕೆ ಒಡ್ಡುತ್ತಿರುವುದನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ.

ಇಂತಹ ಅವಿವೇಕದ ಪ್ರತಿಭಟನೆಯನ್ನು ಖಂಡಿಸಿ ಕನ್ನಡ ಸಾರಸ್ವತ ಲೋಕದ ಗೌರವವನ್ನು ಉಳಿಸಲು ಪ್ರಯತ್ನಿಸಿರುವ ಹಿರಿಯ ಕವಿಗಳಾದ ಡಾ.ಜಿ.ಎಸ್. ಶಿವರುದ್ರಪ್ಪನವರಿಗೆ ಕ್ಷಮೆ ಕೇಳುವಂತೆ ಬೆದರಿಕೆ ಹಾಕಿರುವುದು ಅವಿವೇಕದ ಪರಮಾವಧಿಯಾಗಿದೆ. ಈ ರೀತಿಯ ಅವಿವೇಕದಿಂದ ಹಿಂದೆಗೆಯಬೇಕೆಂದು ಈ ಸಭೆ ಒತ್ತಾಯಪಡಿಸುತ್ತದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳನ್ನು ನಿರಾಕರಿಸುವುದರ ಮೂಲಕ ಡಾ.ಪಿ.ವಿ. ನಾರಾಯಣ ಮತ್ತು ಪ್ರೊ.ಜೆ.ಆರ್. ಲಕ್ಷ್ಮಣರಾವ್ ಅವರು ಅಭಿವ್ಯಕ್ತಿ ಸ್ವಾತಂತ್ರ್ಯದ ಹಿರಿಮೆಯನ್ನು ಎತ್ತಿಹಿಡಿದಿರುವುದನ್ನು ಈ ಸಭೆಯು ಅಭಿನಂದಿಸುತ್ತದೆ.

# ಕುಲಪತಿಯವರ ವರ್ತನೆಯಿಂದ ವಿಶ್ವವಿದ್ಯಾನಿಲಯಕ್ಕೆ ಕಳಂಕ

ದಿನಾಂಕ. ೩೧.೧೨.೨೦೦೬

ಮೈಸೂರಿನ ಪಾರಂಪರಿಕ ಕಾಲೇಜುಗಳಾದ ಮಹಾರಾಜ ಮತ್ತು ಯುವರಾಜ ಕಾಲೇಜುಗಳ ಮುಂಭಾಗದ ಉದ್ಯಾನವನಗಳ ಮರಗಳನ್ನು ಕಡಿದು, ಅದೇ ಪ್ರದೇಶದಲ್ಲಿ 2 ಕೋಟಿ ವೆಚ್ಚದಲ್ಲಿ ಯುವರಾಜ ಕಾಲೇಜಿನ ವಜ್ರಮಹೋತ್ಸವ ಸ್ಮಾರಕ ಸಭಾಂಗಣ ಪ್ರಯೋಗಾಲಯವನ್ನು ನಿರ್ಮಾಣ ಮಾಡುತ್ತಿರುವುದು ಯಾವ ಮಾನದಂಡಗಳಿಂದಲು ಸಮರ್ಥಿಸಲು ಸಾಧ್ಯವಿಲ್ಲ.

ಈ ಕಾಮಗಾರಿಯನ್ನು ತಕ್ಷಣ ನಿಲ್ಲಿಸಬೇಕೆಂದು ವ್ಯಕ್ತವಾದ ಆಕ್ಷೇಪಗಳಿಗೆ, ಈ ಯೋಜನೆಯನ್ನು ಸಾರ್ವಜನಿಕ ವಿಚಾರಣೆಗೆ ಒಳಪಡಿಸಬೇಕೆಂದು ಸಲ್ಲಿಸಿದ ಮನವಿಯನ್ನು ಉದ್ಧಟತನದಿಂದ ತಿರಸ್ಕರಿಸಲಾಗಿದೆ. ಈ ಮನವಿ ಸಲ್ಲಿಸಲು ನಮ್ಮ ಜೊತೆಯಲ್ಲಿ ಆಗಮಿಸಿದ ಯುವರಾಜ ಕಾಲೇಜಿನ ಪರಂಪರೆಗೆ ಸೇರಿದ ಪ್ರಾಧ್ಯಾಪಕರಾಗಿದ್ದ ಪ್ರೊ.ಜೆ.ಆರ್. ಲಕ್ಷ್ಮಣರಾವ್ ಮತ್ತು ಪ್ರೊ.ಕೆ. ಶ್ರೀನಿವಾಸನ್ ಅವರ ಪ್ರಾಮಾಣಿಕ ಕಾಳಜಿಯನ್ನು ಗೌರವಿಸದೆ ಅವರನ್ನು ವೈಯಕ್ತಿಕವಾಗಿ ಹೀನಾಯವಾಗಿ ನಿಂದಿಸಿರುವುದು ಮತ್ತು ಗಾಂಧಿವಾದಿಗಳಿಂದಲೇ ದೇಶ ಹಾಳಾಗುತ್ತಿದೆ ಎಂದು ಸಾರಾಸಗಟಾಗಿ ಗಾಂಧಿವಾದಿಗಳನ್ನು ಅವಹೇಳನ ಮಾಡಿರುವುದು, ಕುಲಪತಿಯ ಸ್ಥಾನದ ಘನತೆಗೆ ಕವಡೆ ಕಿಮ್ಮತ್ತಿಲ್ಲದಂತೆ ಮಾಡಿದೆ. ಕುಲಪತಿಯ ಈ ಅಸಭ್ಯ ವರ್ತನೆಯನ್ನು ಸಂಸ್ಕೃತಿಹೀನತೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಪಾಪಪ್ರಜ್ಞೆಯಿಂದ ಮುಕ್ತರಾಗಲು ಸಾರ್ವಜನಿಕರಿಂದ ಕ್ಷಮೆಯಾಚಿಸಿ, ವಿಶ್ವವಿದ್ಯಾನಿಲಯದ ಘನತೆ ಗೌರವಗಳನ್ನು ಕಾಪಾಡಬೇಕೆಂದು ಒತ್ತಾಯಪಡಿಸುತ್ತೇವೆ.

ಮರಗಳನ್ನು ಕಡಿಯಲು ಅರಣ್ಯ ಇಲಾಖೆಯವರು ಒಪ್ಪಿಗೆ ನೀಡಲು ಹಿಂಜರಿಕೆ ವ್ಯಕ್ತಪಡಿಸಿದಾಗ ವೃಕ್ಷ ಪಂಚಾಯಿತಿಯವರೆಂದು ಹೇಳಲಾದ ಕೆಲವರನ್ನು ಶಾಮೀಲು ಮಾಡಿಕೊಂಡು ಮರಗಳ ಹನನ ಮಾಡಿರುವುದು ಅಕ್ಷಮ್ಯ ಅಪರಾಧವಾಗಿದೆ. ಅರಣ್ಯ ಇಲಾಖೆ ತನ್ನ ಅನುಶಾಸನ ಕರ್ತವ್ಯವನ್ನು ಹಸ್ತಾಂತರ ಮಾಡಿರುವುದು ಅಕ್ರಮವಾಗಿದೆ. ಮರಗಳ

ಪಂಚಾಯಿತಿದಾರರು (Tree court) ತಮ್ಮನ್ನು ಸಮರ್ಥಿಸಿಕೊಳ್ಳಲಾಗದೆ ಅಮಾಯಕ ಮರಗಳನ್ನು ಕಡಿಯುವ ಮೊದಲು ಸಾರ್ವಜನಿಕ ವಿಚಾರಣೆಗೆ ಒಳಪಡಿಸದಿರುವುದು ಏಕಪಕ್ಷೀಯವಾದ ಅಕ್ರಮವಾದ ದುಷ್ಕೃತ್ಯವಾಗಿದೆ.

ಪಾರಂಪರಿಕ ಪ್ರದೇಶದ ಈ ಮರಗಳು, ಕೇವಲ ಮರಗಳಾಗಿರದೆ ಮಹಾರಾಜ ಮತ್ತು ಯುವರಾಜ ಕಾಲೇಜಿನ ಚಾರಿತ್ರಿಕ ಬೆಳವಣಿಗೆಯ ಸ್ಮೃತಿಗಳು, ಈ ಪರಂಪರೆಯ ಕನಸುಗಳು, ಶೈಕ್ಷಣಿಕ ಆಶಯಗಳು ಎಂಬ ಅರಿವಿಲ್ಲದೆ ಮರಗಳನ್ನು ಬಲಿಕೊಡಲಾಗಿದೆ.

ವಿದ್ಯಾರ್ಥಿಗಳ ಆಯಾ ಕಾಲದ ಶೈಕ್ಷಣಿಕ ಅಭಿವೃದ್ಧಿಯ ಮೂಲಸೌಕರ್ಯ ಒದಗಿಸಲು ಯಾರ ವಿರೋಧವು ಇರಲು ಸಾಧ್ಯವಿಲ್ಲ. ಅಭಿವೃದ್ಧಿಯೆಂದರೆ ಸ್ಮೃತಿ ನಾಶವಲ್ಲವೆನ್ನುವ ಕನಿಷ್ಠ ತಿಳವಳಿಕೆಯು ಅಭಿವೃದ್ಧಿಯ ಮತಿಭ್ರಮಣೆಯಾದವರಿಗೆ ಇಲ್ಲದಿರುವುದು ಶೈಕ್ಷಣಿಕ ದುರಂತ.

## 'ಕನ್ನಡದ ಅಲೆಮಾರಿಗೆ ಜ್ಞಾನಪೀಠ ಪ್ರಶಸ್ತಿಯ ನೆಲೆ'

ಕೆ. ರಾಮದಾಸ್

೭ನೆಯ ತಾರೀಖು ಬುಧವಾರ ಸಂಜೆ ನಾನು ಮತ್ತು ಗೆಳೆಯ ಬಿ.ಎಸ್. ಶ್ರೀರಾಮ್ ಮೂಡಿಗೆರೆಗೆ ಹೋದವರು, ಬರುವ ದಾರಿಯಲ್ಲಿ ಹಾಸನದ ಮುಸ್ತಾಕ್ ಅವರ ಕನ್ನಡಕದ ಅಂಗಡಿಯಲ್ಲಿ ಕುಳಿತಿದ್ದೆವು. 'ಜನತಾ ಮಾಧ್ಯಮ'ದ ವೆಂಕಟೇಶ್‌ಮೂರ್ತಿ, ಫೋನ್ ಮಾಡಿ ಅನಂತಮೂರ್ತಿಯವರಿಗೆ 'ಜ್ಞಾನಪೀಠ ಪ್ರಶಸ್ತಿ' ಘೋಷಿತವಾದ ಸುದ್ದಿ ತಿಳಿಸಿದಾಗ ಅನಿರೀಕ್ಷಿತವಾದ 'ಥ್ರಿಲ್' ನಮಗಾಯಿತು.

ಮರುದಿನ ಪತ್ರಿಕೆಗಳಲ್ಲಿ ನಮ್ಮ ಹೆಮ್ಮೆಯ ಲೇಖಕ ಡಾ.ಯು.ಆರ್. ಅನಂತಮೂರ್ತಿಯವರು ತರಾವರಿ ಪೋಸುಗಳಲ್ಲಿ ಮಿಂಚುತ್ತಿದ್ದರು. ನಮ್ಮ ಪ್ರೀತಿಯ ಒಡನಾಟದ, ಕನ್ನಡದ ಪ್ರತಿಭಾಶಾಲಿ ಲೇಖಕರು ಮತ್ತು ವೈಚಾರಿಕ ಚಿಂತಕರಾದ ಅನಂತಮೂರ್ತಿಯವರ ಮೂಲಕ ೭ನೆಯ ಜ್ಞಾನಪೀಠ ಪ್ರಶಸ್ತಿ ಕನ್ನಡ ಭಾಷೆಗೆ ದಕ್ಕಿರುವುದು ಸಂಭ್ರಮದ ಸಂಗತಿ. ತೇಜಸ್ವಿ, ಲಂಕೇಶ್, ದೇವನೂರು ಮಹಾದೇವ ಅವರಿಗೆಲ್ಲ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಾಗ ಇದೇ ಬಗೆಯ ಸಂತೋಷ - ಸಂಭ್ರಮ ನಮಗೆ ಪ್ರಾಪ್ತವಾಗಿತ್ತು.

ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ, ಗೋಕಾಕ್ ಹೀಗೆ ಈ ತಲೆಮಾರಿನ ಕನ್ನಡದ ಹಿರಿಯ ವಯೋವೃದ್ಧರ ಕೃತಿಗಳಿಗೆ ದಕ್ಕುತ್ತಿದ್ದ 'ಜ್ಞಾನಪೀಠ ಪ್ರಶಸ್ತಿ' ಹದಿಹರೆಯದ ಯೌವನಿಗರಂತೆ ಮಿಂಚುವ ೬೨ ವರ್ಷದ ಅನಂತಮೂರ್ತಿಯವರಿಗೆ ಇದ್ದಕ್ಕಿದ್ದಂತೆ 'ಜನರಲ್' ಆಗಿ ಬಂದಿರುವುದು ಹೆಮ್ಮೆಯ ಜೊತೆಯಲ್ಲಿ ಗಲಿಬಿಲಿಗೂ ಕಾರಣವಾಗಿ ಕೆಲವರಿಗೆ ತಬ್ಬಿಬ್ಬಾಗಿದೆ.

ಈಚೆಗೆ ಪ್ರಕಟವಾದ ಅನಂತಮೂರ್ತಿಯವರ ಹೊಸ ಕಾದಂಬರಿ 'ಭವ'ದ ಜಿಜ್ಞಾಸೆ ನಡೆಯುತ್ತಿರುವ ಸಂದರ್ಭದಲ್ಲಿ ಈ ಅತ್ಯುನ್ನತ ಪ್ರಶಸ್ತಿ ಬಂದಿರುವುದು ಗಮನಾರ್ಹವಾಗಿದೆ.

ಅನಂತಮೂರ್ತಿಯವರಿಗೆ ಎಂದೋ ಬರಬೇಕಾಗಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿಯು ಅಧ್ಯಕ್ಷರಾಗಿ ಆ ಪ್ರಶಸ್ತಿಗಳನ್ನು ವಿತರಣೆ ಮಾಡುತ್ತಿರುವುದು ಮಹತ್ವದ ಸಂಗತಿಯಾಗಿದೆ.

೬೦ರ ದಶಕದಲ್ಲಿ ನಾವು ಮಹಾರಾಜ ಕಾಲೇಜಿಗೆ ವಿದ್ಯಾರ್ಥಿಗಳಾಗಿ ಬಂದಾಗ, ಮೈಸೂರಿನ 'ಕಾಫಿ ಹೌಸ್'ನಲ್ಲಿ ಗೋಪಾಲಕೃಷ್ಣ ಅಡಿಗರು ಕೇಂದ್ರವಾಗಿದ್ದ 'ಬೌದ್ಧಿಕ ಕೂಟ' ವಿಸರ್ಜನೆಯಾಗಿತ್ತು. ಅಡಿಗರು ಸಾಗರ ಕಾಲೇಜಿನ ಪ್ರಿನ್ಸಿಪಾಲರಾಗಿ ಹೊರಟು ಹೋಗಿದ್ದರು. ಅನಂತಮೂರ್ತಿಯವರು ಇಂಗ್ಲೆಂಡಿನಲ್ಲಿದ್ದರು.

ಅನಂತಮೂರ್ತಿಯವರು ಇಂಗ್ಲೆಂಡಿನ ಬರ್ಮಿಂಗ್ ಹ್ಯಾಮ್‌ನಿಂದಲೇ 'ಕನ್ನಡ ಮಾಧ್ಯಮ'ವನ್ನು ಸಮರ್ಥಿಸಿ 'ಪ್ರಜಾವಾಣಿ'ಗೆ ಬರೆದ ಲೇಖನಗಳು ಆಕರ್ಷಕವಾಗಿದ್ದವು. ಡಾ. ರಾಮಮನೋಹರ ಲೋಹಿಯಾ ಮತ್ತು ಶಾಂತವೇರಿ ಗೋಪಾಲಗೌಡರ ನಿಕಟವರ್ತಿಯಾಗಿ ಅನಂತಮೂರ್ತಿಯವರು ಕಾಗೋಡು ರೈತರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರೆಂಬುದು, ಸಮಾಜವಾದಿ ಚಿಂತನೆ ಮತ್ತು ಚಳವಳಿಯ ಆಶಯ ಹೊಂದಿದ್ದ ನಮಗೆ, ಅವರ ಬಗ್ಗೆ ಅಭಿಮಾನವನ್ನು ಮೂಡಿಸಲು ಕಾರಣವಾಯಿತು.

ಅನಂತಮೂರ್ತಿಯವರು ಇಂಗ್ಲೆಂಡಿನಿಂದ ಮೈಸೂರಿಗೆ ಹಿಂತಿರುಗಿದ ಮೇಲೆ, ಅವರ ಆಕರ್ಷಕ ಮಾತುಗಾರಿಕೆ, ಆತ್ಮೀಯ ಪರಿಭಾಷೆ, ವೈಚಾರಿಕ ಚಿಂತನೆಯ ಗಮನ ಸೆಳೆಯುವ ವ್ಯಕ್ತಿತ್ವ ನಮ್ಮನ್ನು ಹತ್ತಿರಕ್ಕೆ ಸೆಳೆಯಿತು. ಈಗಲೂ ಇದೇ ಗುಣಗಳು ಅವರಲ್ಲಿ ಉಳಿದಿವೆ. ಅನಂತಮೂರ್ತಿ ಆಗಿನಿಂದಲೂ ನಮ್ಮ ಮುಂದೆ 'ಮಾಯಾಜಿಂಕೆ'ಯಾಗಿ ಸಾಹಿತ್ಯ-ಸಾಂಸ್ಕೃತಿಕ ವಲಯದಲ್ಲಿ ಕಂಗೊಳಿಸುತ್ತಿದ್ದಾರೆ. ನಿರಂತರವಾಗಿ ಹಿಡಿಯಲಾಗದ - ಬಿಡಲಾಗದ, ದೂರ ಹೋದರೆ ಹತ್ತಿರ ಬರುವ, ಹತ್ತಿರ ಹೋದರೆ ದೂರ ಸರಿಯುವ ಸಂಕೀರ್ಣ ವ್ಯಕ್ತಿತ್ವ.

'ನವ್ಯ ಕಾವ್ಯ'ದ ಬ್ರಹ್ಮ ಗೋಪಾಲಕೃಷ್ಣ ಅಡಿಗರ ಅನುವರ್ತಿಯಾದ ಅನಂತ ಮೂರ್ತಿಯವರು, ಅಡಿಗರು ಸೃಷ್ಟಿಸಿದ ಪ್ರಭಾವಳಿಯಲ್ಲಿ 'ಸಂಸ್ಕಾರ', 'ಪ್ರಶ್ನೆ', 'ಭಾರತೀಪುರ', 'ಅವಸ್ಥೆ', 'ಪ್ರಜ್ಞೆ ಮತ್ತು ಪರಿಸರ' ಮೂಲಕ ನವ್ಯದ ವಿಜೃಂಭಣೆಯ ಕಾಲದಲ್ಲಿ 'ಸೂಪರ್ ಸ್ಟಾರ್' ಆಗಿ ಮಿಂಚಿದರು.

ಸಮಾಜವಾದಿಗಳ ಒಡನಾಡಿಯಾಗಿದ್ದ ಅನಂತಮೂರ್ತಿಯವರು ಸಮಾಜವಾದಿ ಪಕ್ಷದ ಮೇಲ್‌ಸ್ತರದ ನಾಯಕರ ನಿಕಟವರ್ತಿಯಾಗಿ ರಾಜಕೀಯ ಪ್ರಭಾವದ ಕಕ್ಷೆಯಲ್ಲಿ ಸಕ್ರಿಯವಾಗಿದ್ದರು. 'ಸಮಾಜವಾದಿ ಯುವಜನ ಸಭಾ'ದ ಕೆಳಸ್ತರದಲ್ಲಿದ್ದ ನಮಗೂ ಅವರಿಗೂ ಆಗಾಗ ಭಿನ್ನಾಭಿಪ್ರಾಯಗಳು, ವಿವಾದಗಳು ಮುಖಾಮುಖಿಯಾಗತೊಡಗಿದವು.

ಬೆಂಗಳೂರಿನ ಸೆಮಿನಾರುಗಳಲ್ಲಿ, ಮೈಸೂರಿನ ಜಾತಿ ವಿನಾಶ ಸಮ್ಮೇಳನ, ಬರಹಗಾರರ ಒಕ್ಕೂಟದ ಸಂದರ್ಭಗಳಲ್ಲಿ ಇದು ಬಹಿರಂಗವಾಗತೊಡಗಿತು. ಅನಂತಮೂರ್ತಿಯವರ 'ನವ್ಯ ನಿಷ್ಠೆ ಮತ್ತು ಸಮಾಜವಾದಿ ನಿಷ್ಠೆ'ಗಳ ದ್ವಂದ್ವಗಳು ಮೂರ್ತವಾಗತೊಡಗಿದವು. ನವ್ಯದ ಪ್ರಭಾವಳಿ ಮಂಕಾಗತೊಡಗಿದಂತೆ 'ಪರಕೀಯ ಪ್ರಜ್ಞೆ', 'ಅನಾಥ ಪ್ರಜ್ಞೆಗಳ' ಗೊಂದಲಗಳಲ್ಲಿ ಸಿಕ್ಕಿಬಿದ್ದ ಅನಂತಮೂರ್ತಿ ಊರಿಂದೂರಿಗೆ ಸುತ್ತಾಡತೊಡಗಿದರು. ಎಲ್ಲೂ ನೆಲೆನಿಲ್ಲದ ಅವರು

ರಾಷ್ಟ್ರೀಯ - ಅಂತಾರಾಷ್ಟ್ರೀಯ ಸೆಮಿನಾರುಗಳ ಮನುಷ್ಯನಾಗಿ ಮೇಲ್‌ಸ್ತರದ ಬೌದ್ಧಿಕ ವಲಯದ ವಿಹಾರಿಯಾಗಿ ಪರಿವರ್ತನೆಯಾದರು.

ಕರ್ನಾಟಕದ ಜೆ.ಪಿ. ಚಳವಳಿ ಅನಂತಮೂರ್ತಿಯವರಿಗೆ ಜಾತಿವಾದಿಗಳ ನಾಯಕತ್ವದ ಚಳವಳಿಯಾಗಿ ಕಂಡಿತು. ಜಾತಿವಿನಾಶ ಸಮ್ಮೇಳನ ಬ್ರಾಹ್ಮಣ ವಿರೋಧಿಯಾಗಿ ಕಂಡಿತು. ರೈತ ಚಳವಳಿ ಶ್ರೀಮಂತ ರೈತರ 'ಕುಲಕ್‌ಲಾಬಿ'ಯಂತೆ ತೋರಿತು. ಕನ್ನಡ ಭಾಷೆಯ ಗೋಕಾಕ್ ಚಳವಳಿ 'ಸಮೂಹ ಸನ್ನಿ'ಯಾಗಿ ಕಂಡಿತು. ದಲಿತ ಚಳವಳಿಗೆ ಮಾತ್ರ ಅನಂತಮೂರ್ತಿ 'ಟ್ಯಾಕ್ಟಿಕಲ್' ಸಹಾನುಭೂತಿ ವ್ಯಕ್ತಪಡಿಸಿದಂತೆ ಕಾಣುತ್ತದೆ.

## 'ಕುರಿಬಲಿ' ಪ್ರಕರಣವನ್ನು ಮುಚ್ಚಿಹಾಕಲು ಜಾತಿ ನಿಂದನೆಯ ಆರೋಪದ ವ್ಯವಸ್ಥಿತ ಸಂಚು

ದಿನಾಂಕ. 19.2.2001ರಂದು ಮಾನಸ ಗಂಗೋತ್ರಿಯ ಲಲಿತಕಲಾ ಕಾಲೇಜಿನಲ್ಲಿ ನಡೆದ 'ಮಾನವ ಸೇವೆಯಲ್ಲಿ ಮಾನವಶಾಸ್ತ್ರ' ವಿಚಾರ ಸಂಕಿರಣದ ಉದ್ಘಾಟನೆಯ ಸಂದರ್ಭದಲ್ಲಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಚ್. ವಿಶ್ವನಾಥ್ ಅವರನ್ನು ಉದ್ಘಾಟನಾ ಭಾಷಣದ ಪೂರ್ವದಲ್ಲಿ ನಾನು, ಶಿವನಸಮುದ್ರದ ಮಾರಿಗುಡಿಯಲ್ಲಿ ಸಚಿವರಿಂದ ನಡೆಸಲಾಯಿತೆನ್ನಲಾದ 'ಕುರಿಬಲಿ' ಪ್ರಕರಣದ ವರದಿಯನ್ನು ಕುರಿತು ಸಾರ್ವಜನಿಕವಾಗಿ ಕೇಳಿದ ಸ್ಪಷ್ಟೀಕರಣದ ಪ್ರಶ್ನೆಗಳು ರೂಪಾಂತರಗೊಂಡು, ನಾನು ಸಚಿವರ ಜಾತಿನಿಂದನೆಮಾಡಿ ಏಕವಚನದಲ್ಲಿ ಅವರನ್ನು ಅವಹೇಳನ ಮಾಡಿರುವುದಾಗಿ ಮತ್ತು ಶಿಷ್ಟಾಚಾರ ಉಲ್ಲಂಘಿಸಿರುವುದಾಗಿ ಮಹಾಮಾನವತಾವಾದಿ ಕನಕದಾಸರ ಹೆಸರಿನ ಮತ್ತು ಇನ್ನೂ ಕೆಲವು ಸಂಘಟನೆಗಳು, ಕಾಂಗ್ರೆಸ್ಸಿನ ಕೆಲವು ಪದಾಧಿಕಾರಿಗಳು ಆರೋಪಿಸಿದ್ದಾರೆ.

ಸಚಿವ ವಿಶ್ವನಾಥ್ ಅವರೊಡನೆ ನಾನು ಪ್ರಸ್ತಾಪಿಸಿದ ಬಹುಮುಖ್ಯವಾದ ಸಾರ್ವಜನಿಕ ಸಂವಾದವನ್ನು ಮತ್ತು ಸಚಿವರ ಅನುಶಾಸನ ಬದ್ಧತೆಯ ಪ್ರಶ್ನೆಯನ್ನು ಜಾತಿನಿಂದನೆಯ ಪ್ರಕರಣವಾಗಿ ಪರಿವರ್ತಿಸಿ ಹುಯಿಲೆಬ್ಬಿಸುತ್ತಿರುವುದು 'ಕುರಿಬಲಿ' ಪ್ರಕರಣವನ್ನು ಮುಚ್ಚಿಹಾಕುವ ಮತ್ತು ಸಚಿವರನ್ನು ಮುಖಾಮುಖಿಯಾಗಿ ಸಾರ್ವಜನಿಕವಾಗಿ ಪ್ರಶ್ನಿಸಿದ ನನ್ನ ಪ್ರಜಾಸತ್ತಾತ್ಮಕ ನಡವಳಿಕೆಯನ್ನು ವಿಕೃತಗೊಳಿಸಿ ಈ ವಿವಾದದಲ್ಲಿ ನನ್ನನ್ನೇ 'ಬಲಿಪಶು' ಮಾಡುವ ವ್ಯವಸ್ಥಿತ ಸಂಚಿನ ಹುನ್ನಾರವಾಗಿದೆ.

ಕಳೆದ ನಾಲ್ಕು ದಶಕಗಳಿಂದಲೂ ನಾನು ಗುರುತಿಸಿಕೊಂಡಿರುವ ಸಾಮಾಜಿಕ ಪರಿವರ್ತನೆಯ, ನನ್ನ ಪ್ರಾಮಾಣಿಕವಾದ ಹೋರಾಟಕ್ಕೆ, ಜಾತಿನಿಂದನೆಯ ಸೋಂಕನ್ನು ಲೇಪಿಸಿ, ನನ್ನ ಬೌದ್ಧಿಕ ಮತ್ತು ಸಾಮಾಜಿಕ ಕ್ರಿಯಾಶೀಲತೆಯನ್ನು ದಮನಮಾಡಲು ಸಂಘಟಿತ ಪ್ರಯತ್ನ ಮಾಡುತ್ತಿರುವುದು ನನಗೆ ಆಘಾತವನ್ನುಂಟುಮಾಡಿದೆ.

ನಾನು ಮತ್ತು ಸಚಿವ ಹೆಚ್. ವಿಶ್ವನಾಥ್ ಅವರು ಕಳೆದ ಮೂವತ್ತು ವರ್ಷಗಳಿಂದಲೂ ಪರಸ್ಪರ ಪರಿಚಯ ಉಳ್ಳವರಾಗಿದ್ದು ಕೆಲವು ಸಂದರ್ಭಗಳಲ್ಲಿ ಸಮಾಜವಾದ ಜನಪರ ಕಾಳಜಿಗಾಗಿ ಪರಸ್ಪರ ಸ್ಪಂದಿಸಿದ್ದೇವೆ. ಅದೇ ರೀತಿ ನಮ್ಮ ನಡುವಿನ ಭಿನ್ನ ಅಭಿಪ್ರಾಯಗಳಿಗಾಗಿ ಪರಸ್ಪರ ವಿಚಾರಿಸಿದ್ದೇವೆ. ಈ ಘಟನೆ ಕೂಡ ಅಂತಹ ಪರಸ್ಪರ ಸಹಮತವಿಲ್ಲದ ಒಂದು ಸಾರ್ವಜನಿಕ ವಿವಾದದ ಪ್ರಕರಣವಾಗಿದೆ. ಅವರು ಸಚಿವರಾಗಿ - ನಾನು ಪ್ರಜೆಯಾಗಿ ನಡೆಸಿದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಸಾರ್ವಜನಿಕ ಸಂವಾದವಾಗಿದೆ.

1975ರಲ್ಲಿ ಜಯಪ್ರಕಾಶ್ ನಾರಾಯಣರ 'ಸಂಪೂರ್ಣ ಕ್ರಾಂತಿ'ಯ ರಾಷ್ಟ್ರೀಯ ಚಳವಳಿಯಲ್ಲಿ ನಾವು ಅತ್ಯಂತ ನಿಕಟವರ್ತಿಗಳಾಗಿ ಗೆಳೆಯರ ಜೊತೆಯಲ್ಲಿ ಪ್ರಯಾಣಿಸಿ ದೆಹಲಿಯಲ್ಲಿ ಜೆ.ಪಿಯವರನ್ನು ಭೇಟಿಯಾಗಿ ಕರ್ನಾಟಕದಲ್ಲಿ ನವ ನಿರ್ಮಾಣ ಕ್ರಾಂತಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಒಡನಾಟ ಹೊಂದಿದ್ದೇವೆ.

ಎಚ್. ವಿಶ್ವನಾಥ್ ಅವರು ಕರ್ನಾಟಕ ಮಹತ್ವದ ರಾಜಕೀಯ ಮುಖಂಡರಾಗಿರುವುದರಿಂದ ಮತ್ತು ವಿವಿಧ ಸರ್ಕಾರಗಳಲ್ಲಿ ಸಚಿವರಾಗಿ ಮಹತ್ವ ಸ್ಥಾನದಲ್ಲಿರುವುದರಿಂದ ಅವರ ಕಾರ್ಯ ವೈಖರಿಯ ವೈರುಧ್ಯಗಳನ್ನು ಮತ್ತು ಸಾಮಾಜಿಕ ಕಾಳಜಿಯ ಉತ್ತಮ ಕಾರ್ಯಗಳನ್ನು ಸಮಯೋಚಿತವಾಗಿ ಮಾಧ್ಯಮಗಳ ಮೂಲಕ ಟೀಕಿಸಿ ಪ್ರಶಂಸಿಸಿ ಚರ್ಚಿಸಿದ್ದೇನೆ.

1997ರಲ್ಲಿ ಎಚ್. ವಿಶ್ವನಾಥ್ ಅವರು ಕೆ.ಆರ್. ನಗರದಲ್ಲಿ ತಮ್ಮ ಮಗಳ ಮದುವೆಯನ್ನು ಸಾಮೂಹಿಕ ವಿವಾಹಗಳ ಜೊತೆಯಲ್ಲಿ ಅತ್ಯಂತ ಸರಳವಾಗಿ ನೆರವೇರಿಸಿದಾಗ, ಅನೇಕರು ಅದನ್ನು 'ರಾಜಕೀಯ ಕಪಟ ನಾಟಕ'ವೆಂದು ಟೀಕಿಸುತ್ತಿದ್ದ ಸಂದರ್ಭದಲ್ಲಿ ನಾನು ಅವರ ಕಾರ್ಯವನ್ನು ಪ್ರಶಂಸಿಸಿ 'ಸಾಮಾಜಿಕ ಪರಿವರ್ತನೆ'ಯ ಮಹತ್ವದ ಹೆಜ್ಜೆಯೆಂದು ಮಾಧ್ಯಮಗಳ ಮೂಲಕ ಬೆಂಬಲ ವ್ಯಕ್ತಪಡಿಸಿದ್ದೇನೆ.

ಎಚ್. ವಿಶ್ವನಾಥ್ ಅವರು ಪ್ರಾಥಮಿಕ - ಪ್ರೌಢಶಿಕ್ಷಣ ಮಂತ್ರಿಗಳಾಗಿ ಕೈಗೊಂಡ ಕೆಲವು ಮಹತ್ತ್ವದ ಕ್ರಮಗಳನ್ನು ವಿರೋಧಿಸಿ ಕೆಲವು ಮಠಾಧಿಪತಿಗಳು ಸಂವಿಧಾನಾತೀತ ವ್ಯಕ್ತಿಗಳಂತೆ ವರ್ತಿಸಿದಾಗ ಸಚಿವರು ಸರ್ಕಾರದ ಘನತೆ - ಗೌರವಗಳನ್ನು ಕಾಪಾಡಿದ್ದನ್ನು 5.4.2000ರ ಲಂಕೇಶ್ ಪತ್ರಿಕೆಯಲ್ಲಿ 'ಸರ್ಕಾರದ ಮೇಲೆ ಮಠಗಳ ಸವಾರಿ' ಎಂಬ ಶೀರ್ಷಿಕೆಯಲ್ಲಿ ಲೇಖನ ಬರೆದು ಪ್ರಶಂಸೆ ವ್ಯಕ್ತಪಡಿಸಿದ್ದೇನೆ. ಆ ಸಂದರ್ಭದಲ್ಲಿ ಮಠಾಧಿಪತಿಗಳ ವಿರೋಧ ಕಟ್ಟಿಕೊಂಡು ರಾಜಕೀಯವಾಗಿ ವಿಶ್ವನಾಥ್ ಅವರು ತೇಜೋವಧೆಗೆ ಒಳಗಾದ ಸಂದರ್ಭದಲ್ಲಿ, ಈಗ ನನ್ನ ವಿರುದ್ಧ ಹುಯಿಲಿಡುತ್ತಿರುವ ಸಂಘಟನೆಗಳಾಗಲಿ ಅಥವಾ ಅವರ ಪಕ್ಷದವರಾಗಲಿ ಚಕಾರವೆತ್ತದೆ ತೆಪ್ಪಗಿದ್ದರೆಂಬುದನ್ನು ವಿಷಾದದಿಂದ ಉಲ್ಲೇಖಿಸಬಯಸುತ್ತೇನೆ.

ಕರ್ನಾಟಕದ ಪ್ರಾಥಮಿಕ-ಪ್ರೌಢ ಶಿಕ್ಷಣ ಸಚಿವರಾದ ಎಚ್. ವಿಶ್ವನಾಥ್ ಅವರು 'ಒಂದು ಸಾವಿರ ಶಾಲೆಗಳಿಗೆ ಕಂಪ್ಯೂಟರ್ ಶಿಕ್ಷಣದ ಆಧುನೀಕರಣ' ಮತ್ತು 'ಸಮುದಾಯದತ್ತ ಶಾಲೆ' ಎಂಬ ಮಹತ್ವ ಕಾರ್ಯಕ್ರಮದ ಮೂಲಕ ಶಿಕ್ಷಣದಲ್ಲಿ ಕ್ರಾಂತಿಕಾರಿ ಬದಲಾವಣೆ

ತರಬಯಸುತ್ತಿರುವ ಸಂದರ್ಭದಲ್ಲಿ ಶಿಕ್ಷಣ ಸಚಿವರಿಗೆ 'ವೈಚಾರಿಕ ಬುದ್ಧಿ' ಮತ್ತು 'ವೈಜ್ಞಾನಿಕ ದೃಷ್ಟಿ'ಯ ಸಾಮಾಜಿಕ ಪರಿವರ್ತನೆಯ ಆಶಯದ ಪರಿಸರ ಅಗತ್ಯವೆಂಬ ಪರಿಕಲ್ಪನೆಯ ಅರಿವಿಲ್ಲದಿರುವುದು 'ಕುರಿಬಲಿ'ಯ ಪ್ರಕರಣಕ್ಕೆ ಅವರು ನೀಡಿದ ಅಸಂಗತ ಸ್ಪಷ್ಟೀಕರಣದಿಂದ ಸಾಬೀತಾಗುತ್ತದೆ.

'ಕುರಿಬಲಿ' ಪ್ರಕರಣವನ್ನು ವಿಚಾರವಾದಿಗಳು ಸಾಬೀತುಪಡಿಸಬೇಕೆಂದು ಧಾರವಾಡದಲ್ಲಿ ನೀಡಿದ ಸ್ಪಷ್ಟೀಕರಣದಲ್ಲಿ ಸವಾಲು ಹಾಕಿದ್ದಾರೆ (ದಿನಾಂಕ 21.2.2001 : ವಿಜಯ ಕರ್ನಾಟಕ) ಇದೇ ಹೇಳಿಕೆಯಲ್ಲಿ "ಈ ದೇವಸ್ಥಾನದಲ್ಲಿ ಬಲಿ ಕೊಡುವುದು ಅನಾದಿಕಾಲದಿಂದಲೂ ನಡೆದುಕೊಂಡು ಬಂದಿದೆ. ಬಲಿಕೊಡಬೇಡಿ ಎಂದರೆ ನಮ್ಮನ್ನು ಬಲಿ ತೆಗೆದುಕೊಳ್ಳುತ್ತಾರೆ" ಎಂದು ತಿಳಿಸಿದ್ದಾರೆ. ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ಅಧಿಕಾರಿಗಳು ನೀಡಿರುವ ಪರಸ್ಪರ ವೈರುಧ್ಯದ ಹೇಳಿಕೆಗಳು "ಕುರಿಬಲಿ" ಪ್ರಕರಣದ ಅನುಮಾನಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿವೆ.

'ಪ್ರಾಣಿಬಲಿ' ಪ್ರತಿಬಂಧಕ ಕಾನೂನು ಜಾರಿಯಲ್ಲಿರುವಾಗ ನಿರಂತರವಾಗಿ 'ಪ್ರಾಣಿಬಲಿ' ನಡೆಯುವ ಶಿವನಸಮುದ್ರದ ಮಾರಿಗುಡಿಗೆ ಈ ಬಗ್ಗೆ ತಿಳುವಳಿಕೆ ಇದ್ದೂ ಸಚಿವರು 'ನಮಸ್ಕಾರ ಮಾಡಲು ಹೋಗಿದ್ದೆ' ಎಂದು ಹೇಳಿರುವುದು ಮತ್ತು 'ಬಲಿ' ತಪ್ಪಿಸಲು ಸಾಧ್ಯವಿಲ್ಲವೆಂದು ತಿಳಿಸಿರುವುದು ಪರೋಕ್ಷವಾಗಿ ಅನುಶಾಸನ ಬದ್ಧತೆಯ ಉಲ್ಲಂಘನೆಯಾಗುತ್ತದೆ.

ನಮ್ಮ ಸಮಾಜದ ಜಾತಿಪದ್ಧತಿ, ಮೂಢನಂಬಿಕೆ ಮತ್ತು ಧಾರ್ಮಿಕ ನಂಬಿಕೆಗಳ ಮತಮೌಢ್ಯಗಳ ಪರಿಣಾಮವಾಗಿ ತಾಂಡವವಾಡುತ್ತಿರುವ ಅಮಾನವೀಯವಾದ ಸಾಮಾಜಿಕ-ಧಾರ್ಮಿಕ ದುರಾಚಾರಗಳಾದ 'ಬೆತ್ತಲೆಸೇವೆ', 'ದೇವದಾಸಿ (ಬಸವಿ) ಪದ್ಧತಿ', 'ಬಾಲ್ಯವಿವಾಹ', ವರದಕ್ಷಿಣೆ ಪದ್ಧತಿ, ಬಾಲಕಾರ್ಮಿಕ ಪದ್ಧತಿ, ಜೀತಪದ್ಧತಿ, ಸತೀ ಪದ್ಧತಿ ಮತ್ತು ಪ್ರಾಣಿಬಲಿ ಪದ್ಧತಿ ಮುಂತಾದ ಅಮಾನವೀಯದ ಕ್ರೌರ್ಯದ ಅನಿಷ್ಟಗಳನ್ನು ತಡೆಯಲು ಸ್ವಾತಂತ್ರ್ಯಪೂರ್ವಕಾಲದಿಂದಲೂ ಸರ್ಕಾರ ಮತ್ತು ಸಮಾಜ ಸುಧಾರಕ ವ್ಯಕ್ತಿಗಳು, ಸಂಘಟನೆಗಳು ಮಾಡಿದ ಹೋರಾಟದ ಫಲವಾಗಿ ಪ್ರತಿಬಂಧಕ ಶಾಸನಗಳನ್ನು ಜಾರಿಗೆ ತರಲಾಗಿದೆ.

ಶಿಕ್ಷಣ ಸಚಿವರಾದ ಎಚ್. ವಿಶ್ವನಾಥ್ ಅವರು "ಇದನ್ನೆಲ್ಲ ತಡೆಯಲು ಹೋದರೆ ಆ ಜನ ನಮ್ಮನ್ನೇ ಬಲಿ ತೆಗೆದುಕೊಳ್ಳುತ್ತಾರೆ" ಎಂದು ಸರ್ಕಾರದ ಅನುಶಾಸನವನ್ನು ಜಾರಿಗೆ ತರಲು ಭೀತಿ ವ್ಯಕ್ತಪಡಿಸಿರುವುದು 'ಪ್ರಾಣಿಬಲಿ'ಗೆ ನೀಡಿದ ಸಮರ್ಥನೆಯಾಗುತ್ತದೆ.

ಈ 'ಕುರಿಬಲಿ'ಯ ಪ್ರಕರಣದ ಬಗ್ಗೆ ಪಿ.ಯು.ಸಿ.ಎಲ್‌ನಂತಹ ಸ್ವಯಂ ಸೇವಾ ಸಂಘಟನೆಗಳ ಅಥವಾ ಡಾ. ಎಚ್. ಸುದರ್ಶನ್‌ರಂತಹ ವ್ಯಕ್ತಿಗಳ ಸತ್ಯಶೋಧಕ ಸಮಿತಿಯಿಂದ ತನಿಖೆ ನಡೆಯುವುದು ಅಗತ್ಯವಾಗಿದೆ.

ನಾನು ಶಿಕ್ಷಣ ಸಚಿವರಾದ ವಿಶ್ವನಾಥ್ ಅವರನ್ನು ಜಾತಿನಿಂದನೆ ಮಾಡಿ ಅವಹೇಳನ ಮಾಡಿದ್ದೇನೆಂಬ ಆರೋಪದ ಬಗ್ಗೆ ಸಚಿವ ವಿಶ್ವನಾಥ್ ಅವರೇ ಸಾರ್ವಜನಿಕವಾಗಿ ತಿಳಿಸಿದರೆ ಈ ಬಗ್ಗೆ ಬೇಷರತ್ ಕ್ಷಮೆ ಯಾಚಿಸಲು ನಾನು ಸಿದ್ಧನಾಗಿದ್ದೇನೆಂದು ತಿಳಿಸಬಯಸುತ್ತೇನೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಂತ್ರಿಯಾಗಲಿ - ಪ್ರಜೆಯಾಗಲಿ ಪರಿಪಾಲಿಸಬೇಕಾದ ಶಿಷ್ಟಾಚಾರವೆಂದರೆ ಸಂವಿಧಾನದ ಅನುಶಾಸನ ಬದ್ಧತೆಯ ಪರಿಪಾಲನೆಯ ಬದ್ಧತೆ. ಇದಕ್ಕೆ ಆದ್ಯತೆ ಇಲ್ಲದಿದ್ದರೆ ಎಲ್ಲ ಶಿಷ್ಟಾಚಾರಗಳು ಕೇವಲ ಆಲಂಕಾರಿಕವಾದ ಭ್ರಮಾತ್ಮಕತೆಯಾಗಿ ಸರ್ಕಾರದ ವಿದ್ಯಮಾನಗಳೆಲ್ಲ ಔಪಚಾರಿಕವಾಗುತ್ತದೆ.

ಪಟ್ಟಭದ್ರರನ್ನು ಅವರ ಭ್ರಷ್ಟತೆ ಮತ್ತು ಅನಾಚಾರಗಳಿಂದ ಸಂರಕ್ಷಿಸಲು ಜಾತಿವಾದವನ್ನು 'ರಕ್ಷಾಕವಚ'ವನ್ನಾಗಿ ಸಮರ್ಥವಾಗಿ ಬಳಸಿಕೊಳ್ಳುತ್ತಾ ಬರುತ್ತಲೇ ಇರುವುದರಿಂದ ಬುದ್ಧ, ಬಸವ, ಕನಕದಾಸ, ಗಾಂಧಿ ಮತ್ತು ಅಂಬೇಡ್ಕರ್ ಮುಂತಾದ ಮಹಾನ್ ಮಾನವತಾವಾದಿಗಳ ಸಾಮಾಜಿಕ ಪರಿವರ್ತನೆಯ ಹೋರಾಟಗಳೆಲ್ಲ ನಿಷ್ಕ್ರಿಯವಾಗಿ, ಈಗ ಜಾತಿವಾದದ ವಿಜೃಂಭಣೆಯ ಸಮೂಹಸನ್ನಿಗೆ ಭಾರತದ ಜಾತ್ಯತೀತ ಪ್ರಜಾಪ್ರಭುತ್ವದ ಆಶಯವೇ 'ಬಲಿ'ಯಾಗುತ್ತಿರುವುದು ದಾರುಣವಾದ ದುರಂತವಾಗಿದೆ.

### ಪೊಲೀಸ್ ಪ್ರಕಟಣೆ

ಈ ಮೂಲಕ ಸಮಸ್ತ ಗ್ರಾಮಸ್ಥರಿಗೆ ತಿಳಿಯಪಡಿಸುವುದೇನೆಂದರೆ ಊರಿನಲ್ಲಿ ದಂಡಿಮಾರಮ್ಮನ ಹಬ್ಬವನ್ನು ದಿನಾಂಕ. .........ದಂದು ಆಚರಿಸುತ್ತೀರಿ. ಹಬ್ಬದ ಸಮಯದಲ್ಲಿ ನೀವು ಕುರಿ, ಕೋಳಿ ಮತ್ತು ಕೋಣಗಳನ್ನು ದೇವರ ಹೆಸರಿನಲ್ಲಿ ಬಲಿ ಕೊಡುವ ಪದ್ಧತಿಯು ಬೆಳೆಸಿಕೊಂಡು ಬಂದಿರುತ್ತೀರಿ ಎಂದು ತಿಳಿದುಬಂದಿತ್ತು.

ನಾವುಗಳು 2001ನೇ ಇಸವಿಗೆ ಕಾಲಿಟ್ಟರೂ ಸಹ ಮೂಢನಂಬಿಕೆಯು ಬೆಳೆಸಿಕೊಂಡು ಬಂದಿರುತ್ತೇವೆ. ಯಾವ ದೇವರೂ ಸಹಾ ಪ್ರಾಣಿ ಬಲಿಯನ್ನು ಕೇಳುವುದಿಲ್ಲ. ಈ ಪದ್ಧತಿಯು ಮೂಢನಂಬಿಕೆಯಾಗಿರುತ್ತದೆ ಕಾನೂನು ರೀತಿ ಅಪರಾಧವಾಗುತ್ತದೆ.

ಪ್ರಾಣಿಬಲಿಯು ಅನಿಮಲ್ ಸ್ಯಾಕ್ರಿಫೈಸ್ ಆಕ್ಟ್ ಕಲಂ 3, 4, ಮತ್ತು 5, 6 ಪ್ರಕಾರ ಅಪರಾಧವಾಗುತ್ತದೆ. ಈ ಅಪರಾಧಕ್ಕೆ ೬ ತಿಂಗಳು ಸಜಾ ಹಾಗೂ 500/- ರೂ ದಂಡ ಇರುತ್ತದೆ.

ಆದ್ದರಿಂದ ಯಾರೂ ಸಹ ಪ್ರಾಣಿ ಬಲಿಯನ್ನು ಕೊಟ್ಟು ಶಿಕ್ಷೆಗೆ ಗುರಿಯಾಗಬೇಡಿ. ಈ ತಿಳವಳಿಕೆ ಮೀರಿ ಮಾಡಿದ್ದಲ್ಲಿ ಸಂಬಂಧಪಟ್ಟವನ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತದೆ.

ಬಿ.ಎಸ್. ಯಶಗೋಳ್
ಪೊಲೀಸ್ ಉಪಾಧೀಕ್ಷಕರು
ಮೈಸೂರು ಗ್ರಾಮಾಂತರ ವಿಭಾಗ, ಮೈಸೂರು

# ಅನಗತ್ಯ ವಿವಾದ

ಕೆ. ರಾಮದಾಸ್

ಮೈಸೂರಿನ ಸ್ಥಳೀಯ ಪತ್ರಿಕೆಯೊಂದು ಅನಗತ್ಯ ವಿವಾದವೊಂದನ್ನು ಸೃಷ್ಟಿಸಿದೆ. ಶಿವನ ಸಮುದ್ರದ ಮಾರಿಗುಡಿಯಲ್ಲಿ ಪ್ರಾಣಿಬಲಿ ಅನಾದಿಕಾಲದಿಂದಲೂ ನಡೆದುಕೊಂಡು ಬಂದಿದೆ. ಬಲಿಕೊಡಬೇಡಿ ಎಂದು ಹೇಳಿದರೆ ಆ ಜನ ನಮ್ಮನ್ನೇ ಬಲಿ ತೆಗೆದುಕೊಂಡು ಬಿಡುತ್ತಾರೆ" ಎಂದು ಹೇಳಿರುವುದು ದಿನಾಂಕ. ೨೧.೨.೨೦೦೧ರ ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ಪತ್ರಿಕೆಗಳಲ್ಲಿ ವರದಿಯಾಗಿದೆ.

ಕುರಿಬಲಿಯ ವಿವಾದವನ್ನು ಕುರಿತು ಶಿಕ್ಷಣ ಸಚಿವರು ನೀಡುತ್ತಿರುವ ಈ ರೀತಿಯ ಸಮಜಾಯಿಷಿಯ ಹೇಳಿಕೆಗಳಿಂದ ಅವರು ಕುರಿಬಲಿಯನ್ನು ಕೊಟ್ಟಿಲ್ಲವೆಂದು ನಿರಾಕರಿಸಿ ಸ್ಪಷ್ಟೀಕರಣ ಕೊಟ್ಟರೂ ಪರೋಕ್ಷವಾಗಿ ಪ್ರಾಣಿಬಲಿಯ ಕಾನೂನು ಬಾಹಿರ ಮೌಢ್ಯವನ್ನು ಸಮರ್ಥಿಸುತ್ತಿರುವುದು ವ್ಯಕ್ತವಾಗುತ್ತಿದೆ.

ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಅತ್ಯಂತ ಮಹತ್ವದ ಖಾತೆಯ ಕ್ಯಾಬಿನೆಟ್ ಸಚಿವರಾದ ಹೆಚ್. ವಿಶ್ವನಾಥ್ ಅವರು ಕುರಿಬಲಿಕೊಡುವ ಮಾರಮ್ಮನ ಭಕ್ತರಿಗೆ ಭೀತರಾಗಿ "ನಮ್ಮನ್ನೇ ಬಲಿಕೊಡುತ್ತಾರೆ" ಎಂದು ಹೇಳಿರುವುದು ಸರ್ಕಾರದ ಶಾಸನಗಳನ್ನು ಅನುಷ್ಠಾನಗೊಳಿಸಲಾಗದ ದುರ್ಬಲ ಸರ್ಕಾರದ ನಿಷ್ಕ್ರಿಯತೆಯನ್ನು ಸಾಬೀತು ಮಾಡುತ್ತದೆ. ಅನುಶಾಸನ ಬದ್ಧತೆಯ ಸಂಕಲ್ಪಶಕ್ತಿ ಇಲ್ಲದ ಸಚಿವರು ಜನಪರ ಕಾಳಜಿಯ ಕ್ರಿಯಾಶೀಲ ಸರ್ಕಾರವನ್ನು ನಡೆಸುವುದಾದರೂ ಹೇಗೆ ? ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಕ್ರಾಂತಿಕಾರಿಯಾದ ಕಾರ್ಯಕ್ರಮಗಳನ್ನು ಜಾರಿಗೆ ತರುವುದಾದರೂ ಹೇಗೆ ?

ಕರ್ನಾಟಕದ ಒಂದು ಸಾವಿರ ಸರ್ಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣದ 'ಮಾಹಿತಿ ಸಿಂಧು' ಯೋಜನೆಯನ್ನು ಜಾರಿಗೊಳಿಸುತ್ತಿರುವ ವಿಶ್ವನಾಥ್ ಅವರು, 'ಸಮುದಾಯದತ್ತ ಶಾಲೆ' ಎಂಬ ಕಾರ್ಯಕ್ರಮ ನಡೆಸುತ್ತಿರುವ ಸಂದರ್ಭದಲ್ಲಿ ಶಾಲೆಯ ಮಕ್ಕಳ ಶಿಕ್ಷಣದಲ್ಲಿ 'ವೈಚಾರಿಕ ಪ್ರಜ್ಞೆ' ಮತ್ತು 'ವೈಜ್ಞಾನಿಕ ಮನೋಧರ್ಮ' ರೂಪಿಸಲು ಮತ್ತು ಗ್ರಾಮೀಣ ಸಮುದಾಯವನ್ನು

ಜಾತಿ, ಮತ-ಧರ್ಮಗಳ ಮೂಢನಂಬಿಕೆಗಳಿಂದ ವಿಮೋಚನೆಗೊಳಿಸುವ ಸಂಕಲ್ಪಶಕ್ತಿ ಶಿಕ್ಷಣ ಸಚಿವರ ಸಾಮಾಜಿಕ ಹೊಣೆಗಾರಿಕೆಯಾಗಿದೆ.

ಶಿಕ್ಷಣ ಸಚಿವರೇ ಯಜ್ಞ-ಯಾಗಾದಿಗಳನ್ನು ಮಾಡುತ್ತಾ ಗೊತ್ತಿದ್ದೂ ಗೊತ್ತಿದ್ದು ಪ್ರಾಣಿವಧೆ ನಡೆಯುತ್ತಿದ್ದ ಮಾರಿಗುಡಿಗೆ ಜಿಲ್ಲಾಧಿಕಾರಿಗಳನ್ನು ಮತ್ತು ಜಿಲ್ಲಾ ಪೊಲೀಸ್ ಅಧಿಕಾರಿಗಳನ್ನು ಜೊತೆಯಲ್ಲಿ ಕರೆದುಕೊಂಡು "ಮಾರಮ್ಮನಿಗೆ ಪೂಜೆ ಸಲ್ಲಿಸಲು ಹೋಗಿದ್ದೆ" ಎಂದು ಹೇಳುತ್ತಿರುವುದು "ಸಮುದಾಯದತ್ತ ಶಾಲೆ" ಎಂದರೆ "ಮಾರಿಗುಡಿಗೆ ದಾರಿ" ವೈಜ್ಞಾನಿಕ ಶಿಕ್ಷಣದ "ಆಹುತಿ" ಎಂಬ ಶೈಕ್ಷಣಿಕ ಸಿದ್ಧಾಂತ ಸ್ಥಾಪಿತವಾಗುತ್ತದೆ.

ಈ ಹಿಂದೆ ದಿವಂಗತ ಬಿ. ರಾಚಯ್ಯನವರು ಗೃಹಮಂತ್ರಿಯಾಗಿದ್ದಾಗ ಅವರ ದೃಢಸಂಕಲ್ಪ ಶಕ್ತಿಯ ಬಲದಿಂದ ಚಂದ್ರಗುತ್ತಿಯ 'ಬೆತ್ತಲೆಸೇವೆ' ಮತ್ತು ಸವದತ್ತಿ ಎಲ್ಲಮ್ಮನ ದೇವಾಲಯದ 'ದೇವದಾಸಿ' ಪದ್ಧತಿಯನ್ನು ನಿಷೇಧಿಸಿರುವುದು ಸಚಿವರು ಜ್ಞಾಪಿಸಿಕೊಳ್ಳಬೇಕಾಗಿತ್ತು.

ಕರ್ನಾಟಕದ ಹೈಟೆಕ್ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ವಾಸ್ತು, ಸಾಯಿಬಾಬಾ ಮತ್ತು ಜಗದ್ಗುರುಗಳ ಕೃಪೆಯಿಂದ ದಕ್ಷ ಮತ್ತು ಪಾರದರ್ಶಕ ಸರ್ಕಾರ ನಡೆಸುತ್ತಿರುವಾಗಲೇ ಅವರ ಸಚಿವ ಸಂಪುಟದ ಮಂತ್ರಿ ಟಿ. ಜಾನ್ ತನ್ನ ಧಾರ್ಮಿಕ ನಂಬಿಕೆಯ ಮೌಢ್ಯದ ಮಾತುಗಳಿಂದ ರಾಜಿನಾಮೆ ಕೊಟ್ಟು ನಿರ್ಗಮಿಸಬೇಕಾಯಿತು.

ಶಿವನ ಸಮುದ್ರದ ಮಾರಮ್ಮನಿಗೆ ಪೂಜೆ ಸಲ್ಲಿಸಿ ಕೈ ಮುಗಿದು ಬಂದ ಶಿಕ್ಷಣ ಸಚಿವ ವಿಶ್ವನಾಥರು ಮಾಜಿ ಸಚಿವ ಜಾನ್ ಅವರ ಅನುಕರಣೆ ಮಾಡುವ ಅಗತ್ಯವಿರಲಿಲ್ಲ.

ಮಾರಿ ಹಬ್ಬದ ದುರಂತವನ್ನು ಚಿತ್ರಿಸಿದ ಬಸವಣ್ಣನವರ ವಚನದ ಈ ಎರಡು ಸಾಲುಗಳು

"ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು"

ಶಿಕ್ಷಣ ಸಚಿವರ ನೆನಪಿನಲ್ಲಿದ್ದಿದ್ದರೆ ಮಾರಿಹಬ್ಬದ ಸಮೂಹಸನ್ನಿಗೆ ಅವರು ಒಳಗಾಗುತ್ತಿರಲಿಲ್ಲ. ನಾನು ಸ್ಪಷ್ಟೀಕರಣ ಕೇಳುವ ಪ್ರಸಂಗವೇ ನಡೆಯುತ್ತಿರಲಿಲ್ಲ.

## ಕುರಿಬಲಿ : ವಿಚಾರವಾದಿಗಳು ಸಾಬೀತುಪಡಿಸಲಿ

ಧಾರವಾಡ, ಫೆ. 20 - ಕೊಳ್ಳೇಗಾಲ ತಾಲೂಕಿನ ಶಿವನಸಮುದ್ರದ ಮಾರಿಕಾಂಬಾ ದೇವಸ್ಥಾನದಲ್ಲಿ ನಾನು ಕುರಿ ಬಲಿಕೊಟ್ಟು ಊಟ ಮಾಡಿ ಬಂದೆ ಎಂದು ಕೆಲವು ಡೋಂಗಿ ಸಮಾಜವಾದಿಗಳು ಹಾಗೂ ವಿಚಾರವಾದಿಗಳು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಪ್ರೌಢಶಿಕ್ಷಣ ಸಚಿವ ಎಚ್. ವಿಶ್ವನಾಥ್ ಆರೋಪಿಸಿದರು.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು ನಾನೇನಾದರೂ ಬಲಿ ಕೊಟ್ಟಿದ್ದರೆ ಕಪಟ ವಿಚಾರವಾದಿಗಳು ಸಾಬೀತುಪಡಿಸಲಿ ಎಂದು ಅವರು ಸವಾಲು ಹಾಕಿದರು. ಸೋಮವಾರ ದಿ. 19ರಂದು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಪ್ರೊ. ಕೆ. ರಾಮದಾಸ್ ಅವರ ಜತೆ ನಡೆದ ಮಾತಿನ ಘರ್ಷಣೆ ಕುರಿತು ವಿವರಿಸಿದರು.

ನಾನು ಕಳೆದ 9ರಂದು ಶಿವನಸಮುದ್ರಕ್ಕೆ ತೆರಳಿ ಮಾರಿಕಾಂಬಾ ದೇವಿಯ ದರ್ಶನ ಮಾಡಿ ಬಂದಿದ್ದು ನಿಜ, ಆದರೆ ಯಾವುದೇ ಬಲಿ ಕೊಟ್ಟಿಲ್ಲ ಹಾಗೂ ಊಟ ಸಹ ಮಾಡಲಿಲ್ಲ. ಮೈಸೂರಿನ ಸ್ಥಳೀಯ ಪತ್ರಿಕೆಯೊಂದು ಅನಗತ್ಯವಾಗಿ ಈ ಸಂಬಂಧ ವಿವಾದ ಸೃಷ್ಟಿಸಿದೆ. ಅಲ್ಲಿ ಈ ಪತ್ರಿಕೆಯ ವರದಿಗಾರನು ಬಂದಿರಲಿಲ್ಲ ಎಂದು ಸಚಿವರು ಹೇಳಿದರು.

ಪ್ರಕಟವಾದ ತಕ್ಷಣ ನಾನು ಈ ಕುರಿತು ಸ್ಪಷ್ಟೀಕರಣ ನೀಡಬೇಕಿತ್ತು, ಕೊಡದೇ ಇರುವುದರಿಂದ ಈ ವಿವಾದ ಸೃಷ್ಟಿಯಾಯಿತು. 19ರಂದು ಲಲಿತಕಲಾ ಕಾಲೇಜಿನ ಸಭಾಂಗಣದಲ್ಲಿ ಮಾನವಶಾಸ್ತ್ರ ಕುರಿತು ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ರಾಮದಾಸ್ ನನ್ನನ್ನು ಪ್ರಶ್ನಿಸಿದ್ದರು. ನಾಲಾಯಕ್ ಮಂತ್ರಿ ಎಂದು ಕರೆದರು. ನಾನೂ ಅವರನ್ನು ನಾಲಾಯಕ್ ವಿಚಾರವಾದಿ ಎಂದು ಕರೆದೆ ಎಂದು ವಿಶ್ವನಾಥ್ ಘಟನೆಯನ್ನು ವಿವರಿಸಿದರು.

'ಈ ದೇವಸ್ಥಾನದಲ್ಲಿ ಬಲಿಕೊಡುವುದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಬಲಿ ಕೊಡಬೇಡಿ ಎಂದರೆ ಆ ಜನ ನಮ್ಮನ್ನು ಬಲಿ ತೆಗೆದುಕೊಳ್ಳುತ್ತಾರೆ' ಎಂದರು. ನಮ್ಮದು ಜಾತ್ಯತೀತ ರಾಷ್ಟ್ರ. ನಾವು ನಂಬಿದ ಧರ್ಮ, ನಂಬಿಕೆ ಹಾಗೂ ಆಚರಣೆ ಉಳಿಸಿಕೊಳ್ಳಲು ಹಕ್ಕಿದೆ. ಅದನ್ನು ಕೇಳಲು ಇವರ್‍ಯಾರು ಎಂದು ವಿಶ್ವನಾಥ್ ಪ್ರಶ್ನಿಸಿದರು.

ವಿಚಾರವಾದಿಗಳ ಮನೆಯಲ್ಲಿಯೇ ಎಷ್ಟೋ ಅನಾಚಾರಗಳು ನಡೆಯುತ್ತವೆ. ಅದರ ಬಗ್ಗೆ ಮಾತನಾಡದ ಇವರು, ಡೋಂಗಿ ವಿಚಾರವಾದಿಗಳಲ್ಲವೇ ? ಎಂದರು. ನನ್ನ ರಕ್ಷಣಾ ಸಿಬ್ಬಂದಿ ರಾಮದಾಸ್ ಅವರ ಕೊರಳಪಟ್ಟಿಗೆ ಕೈಹಾಕಿದ್ದಾರೆ ಎನ್ನುವುದು ಶುದ್ಧ ಸುಳ್ಳು, ಜೋರಾಗಿ ಮಾತನಾಡುತ್ತಿದ್ದ ಅವರನ್ನು ಆತ ಸಮಾಧಾನ ಮಾಡಲು ಮುಂದಾದ ಎಂದರು.

ರಾಮದಾಸ್, ಪತ್ರಕರ್ತ ರಾಜಶೇಖರ್ ಕೋಟಿ ಹಾಗೂ ನಾನು 30 ವರ್ಷಗಳಿಂದ ಸ್ನೇಹಿತರು. ಅವರು ನನ್ನನ್ನು ಚೆನ್ನಾಗಿ ಬಲ್ಲರು. ಅನೇಕ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ್ದಾರೆ. ಸ್ನೇಹಿತರೇ ಯಾಕೆ ನನ್ನ ಮೇಲೆ ತಿರುಗಿ ಬೀಳುತ್ತಿದ್ದಾರೆ ಎಂದು ಅರ್ಥವಾಗುತ್ತಿಲ್ಲ. ಬಹುಶಃ ನನ್ನ ಗ್ರಹಚಾರ ಸರಿಯಾಗಿಲ್ಲ ಎಂದು ವಿಷಾದಿಸಿದರು.

ನನಗೆ ಯಾವುದೇ ಶತ್ರುಗಳಿಲ್ಲ. ಬೇಕಾದರೆ ನಾಳೆಯೇ ರಾಮದಾಸ್ ಮನೆಗೆ ಹೋಗಿ ಮಾತನಾಡಿಸಿ ಸಂಬಂಧ ಸರಿಪಡಿಸಿಕೊಳ್ಳುತ್ತೇನೆ ಎಂದು ಸಚಿವರು ಹೇಳಿದರು.

## ರಾಮದಾಸ್ ವಜಾಕ್ಕೆ ಕುರುಬರ ಒತ್ತಾಯ

ಮೈಸೂರು, ಫೆ. 21 - 'ಕುರಿಬಲಿ' ಪ್ರಕರಣ ಸೃಷ್ಟಿಸಿ, ಕುರುಬ ಜನಾಂಗದ ಸಚಿವ ಎಚ್. ವಿಶ್ವನಾಥ್ ಅವರಿಗೆ ಕಳಂಕ ಹಚ್ಚಲು ಪ್ರೊ. ಕೆ. ರಾಮದಾಸ್ ಯತ್ನಿಸುತ್ತಿದ್ದಾರೆ. ತಕ್ಷಣ ಸೇವೆಯಿಂದ ವಜಾ ಮಾಡಬೇಕು ಎಂದು ನಗರದ ವಿವಿಧ ಕುರುಬ ಸಂಘಗಳು ಮುಖ್ಯಮಂತ್ರಿ ಮತ್ತು ರಾಜ್ಯಪಾಲರನ್ನು ಒತ್ತಾಯಿಸಿವೆ.

ಮಾನಸಗಂಗೋತ್ರಿಯಲ್ಲಿ ಸೋಮವಾರ ನಡೆದ 'ಮನುಕುಲದಲ್ಲಿ ಮಾನವಶಾಸ್ತ್ರ ವಿಚಾರ ಸಂಕಿರಣದ' ಉದ್ಘಾಟನಾ ಸಮಾರಂಭದಲ್ಲಿ 'ಕುರಿಬಲಿ' ಕೊಟ್ಟಿದ್ದಾರೆಂಬ ಸತ್ಯಕ್ಕೆ ದೂರವಾದ ಆರೋಪವನ್ನು ಶಿಕ್ಷಣ ಸಚಿವ ಎಚ್. ವಿಶ್ವನಾಥ್ ಮೇಲೆ ಹೊರಿಸುವಾಗ ಕುರುಬ ಜನಾಂಗದ ಬಗ್ಗೆ ಕ್ಷುಲ್ಲಕವಾಗಿ ಮಾತನಾಡಿರುವ ರಾಮದಾಸ್ ವರ್ತನೆ ಖಂಡನೀಯ ಎಂದು ಶ್ರೀಭಕ್ತ ಕನಕದಾಸರ ಜಯಂತೋತ್ಸವ ಸಮಿತಿಯ ಕಾರ್ಯಕಾರಿ ಸಮಿತಿ ಸದಸ್ಯ ಎಸ್. ಕರಿಯಪ್ಪ, ನಗರದ ಬೀರೇಶ್ವರ ಕುರುಬ ಸಂಘದ ಕಾರ್ಯದರ್ಶಿ ಆರ್. ಲಿಂಗರಾಜು ಆರೋಪಿಸಿದ್ದಾರೆ.

ಹಿಂದುಳಿದ ಕುರುಬ ಸಮಾಜದ ರಾಜಕೀಯ ಏಳಿಗೆಯನ್ನು ಸಹಿಸದೆ ಹಾಗೂ ಪ್ರಗತಿಪರ ಧೋರಣೆಯುಳ್ಳ ವಿಶ್ವನಾಥ್ ಅವರ ದಿಟ್ಟ ನಿಲುವು ಸಹಿಸದೆ, ರಾಮದಾಸ್ ವಿಚಾರವಾದಿ ಹೆಸರಿನಲ್ಲಿ ಎಲ್ಲೆ ಮೀರಿ ನಡೆದುಕೊಂಡಿದ್ದಾರೆ. ಆದ್ದರಿಂದ ರಾಮದಾಸ್ ಅವರು ವಿಶ್ವನಾಥ್ ಹಾಗೂ ಕುರುಬ ಜನಾಂಗದ ಕ್ಷಮೆ ಯಾಚಿಸಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

ಕುರುಬಾರಹಳ್ಳಿಯ ಕನಕ ಯುವವೇದಿಕೆ ಅಧ್ಯಕ್ಷ ಜೆ. ಪ್ರಕಾಶ್ ರಸ್ತೆ ತಡೆ ನಡೆಸುವ ಬೆದರಿಕೆ ಹಾಕಿದ್ದಾರೆ.

ಸ್ವತಃ ಮಾಂಸಾಹಾರಿಯಾಗಿರುವ ರಾಮದಾಸ್ ಅವರಿಗೆ ಬೇರೆಯವರು ಮಾಂಸಾಹಾರ ಮಾಡಿದ ಬಗ್ಗೆ ಟೀಕಿಸುವ ನೈತಿಕ ಹಕ್ಕಿಲ್ಲ ಎಂದು ಮೈಸೂರು ನಾಗರಿಕ ವಿಕಾಸ ಬಳಗದ ಸಂಚಾಲಕ ಎಂ. ಸೋಮಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮದಾಸ್ ಮೇಲೆ ಸೂಕ್ತ ಕ್ರಮ ಜರುಗಿಸಬೇಕು ಎಂದು ಮಂಗಳವಾರ ನಡೆದ ಬಳಗದ ಸಭೆಯಲ್ಲಿ ಸರ್ವಾನುಮತ ನಿರ್ಣಯ ಅಂಗೀಕರಿಸಲಾಯಿತು ಎಂದು ಅವರು ತಿಳಿಸಿದ್ದಾರೆ.

ಸಚಿವ ವಿಶ್ವನಾಥ್ ಅವರನ್ನು ಏಕವಚನದಲ್ಲಿ ಸಂಬೋಧಿಸಿ ಬಹಿರಂಗ ಅವಮಾನ ಮಾಡಿರುವ ರಾಮದಾಸ್ ಸರ್ಕಾರಿ ಸೇವಾ ಉಲ್ಲಂಘನೆ ಮಾಡಿದ್ದಾರೆ ಎಂದು ಆರೋಪಿಸಿ ಕರ್ನಾಟಕ ಪ್ರದೇಶ ದಲಿತ ಜಾಗೃತಿ ಸಮಿತಿ ಪ್ರತಿಭಟನೆ ನಡೆಸಿದೆ. ರಾಮದಾಸ್ ಅವರನ್ನು ಜಿಲ್ಲೆಯಿಂದ ಗಡೀಪಾರು ಮಾಡಬೇಕು. ಆತನ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು ಎಂದು ಮುಖ್ಯಮಂತ್ರಿಗಳಲ್ಲಿ ಒತ್ತಾಯಿಸಿದ್ದಾರೆ.

**ಸಂ. ಎಡಿಎಂ 6ಸಿಆರ್ 36:8-99**

**ಧಾರ್ಮಿಕ ದತ್ತಿ ಆಯುಕ್ತರ ಕಛೇರಿ**
**ಚಾಮರಾಜಪೇಟೆ**
**ಬೆಂಗಳೂರು - 18, ದಿನಾಂಕ 26.9.98**

## ಸುತ್ತೋಲೆ

ವಿಷಯ : ಮುಜರಾಯಿ ಇಲಾಖೆಯ ಆಯುಧ ಪೂಜೆಯ ಸಂದರ್ಭದಲ್ಲಿ ಪ್ರಾಣಿಬಲಿ ಮಾಡದಂತೆ

ದಸರಾ ಆಯುಧ ಪೂಜಾ ಸಂದರ್ಭದಲ್ಲಿ ಕರ್ನಾಟಕ ಮುಜರಾಯಿ ದೇವಾಲಯಗಳಲ್ಲಿ ಕಾನೂನಿಗೆ ವಿರುದ್ಧವಾಗಿ ಪ್ರಾಣಿಬಲಿ ನೀಡುತ್ತಿರುವುದಾಗಿ ಅಖಿಲ ಭಾರತ ಪ್ರಕಟಿ... ಸಂಘದವರು ದಿನಾಂಕ. 23.9.98ರ ಮನವಿಯಲ್ಲಿ ದೂರಿದ್ದಾರೆ. ಕರ್ನಾಟಕದ ಪ್ರಾಣಿಬಲಿಗಳ ಪ್ರತಿಬಂಧಕ ಅಧಿನಿಯಮ 1959 ಸೆಕ್ಷನ್ 3,4 ಮತ್ತು 5ರ ರೀತ್ಯಾ ದೇವಾಲಯಗಳಲ್ಲಿ ಪ್ರಾಣಿಬಲಿ ನೀಡುವುದನ್ನು ಪ್ರತಿಬಂಧಿಸಲಾಗಿದೆ. ಅದರಿಂದಾಗಿ ರಾಜ್ಯದ ಯಾವುದೇ ಮುಜರಾಯಿ ದೇವಾಲಯಗಳಲ್ಲಿ ಆಯುಧಪೂಜೆ ಅಥವಾ ಇನ್ನಿತರೆ ಯಾವುದೇ ಸಂದರ್ಭದಲ್ಲಿ ಪ್ರಾಣಿಬಲಿಯನ್ನು ಮಾಡದಂತೆ ಸೂಕ್ತ ವ್ಯವಸ್ಥೆ ಮಾಡಲು ಹಾಗೂ ಈ ತತ್ಸಂಬಂಧದಲ್ಲಿ ತಮ್ಮ ಜಿಲ್ಲೆಯ ವ್ಯಾಪ್ತಿಗೆ ಬರುವ ಎಲ್ಲಾ ತಹಶೀಲ್ದಾರ್‌ರವರುಗಳಿಗೆ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಹಾಗೂ ಇಂತಹ ಪ್ರಕರಣಗಳು ಗಮನಕ್ಕೆ ಬಂದ ಕೂಡಲೇ ಸಂಬಂಧಪಟ್ಟ ಆರಕ್ಷಕ ಠಾಣೆಗಳಲ್ಲಿ ಅಂತಹ ಘಟನೆಗಳಿಗೆ ಕಾರಣರಾದವರ ಮೇಲೆ ದೂರು ದಾಖಲು ಮಾಡುವಂತೆ ತಿಳಿಸಲು ಈ ಮೂಲಕ ಎಲ್ಲಾ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ.

ಧಾರ್ಮಿಕ ದತ್ತಿ ಆಯುಕ್ತರ ಪರವಾಗಿ

ಕರ್ನಾಟಕ ಪ್ರಗತಿರಂಗ, ಮೈಸೂರು

ದಿನಾಂಕ. 3.2.2004

## ಪ್ರೊ.ಎಂ.ಡಿ.ಎನ್. ನಿಧನ :

### ಹಸಿರು ಟವಲ್ಲಿನ ಕ್ರಾಂತಿಕಾರಿಯ ಕಣ್ಮರೆ ಪ್ರಗತಿರಂಗದ ಕಂಬನಿ

ಜನಪರ ಚಿಂತನೆಯ ಗುರು ಮತ್ತು ರೈತಚಳವಳಿಯ ನಾಯಕರಾಗಿದ್ದ ಪ್ರೊ.ಎಂ.ಡಿ. ನಂಜುಂಡಸ್ವಾಮಿಯವರ ನಿಧನದಿಂದ ಹಸಿರು ಟವಲ್ಲಿನ ಕ್ರಾಂತಿಕಾರಿಯೊಬ್ಬರ ಕಣ್ಮರೆಯಾದಂತಾಗಿದೆ. ಕರ್ನಾಟಕ ಪ್ರಗತಿರಂಗ ಪ್ರೊ.ಎಂ.ಡಿ.ಎನ್ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

ಕರ್ನಾಟಕದಲ್ಲಿ ಅನೇಕ ಪ್ರಗತಿಪರ ಚಳವಳಿಗಳ ರೂವಾರಿಯಾಗಿದ್ದ ಪ್ರೊ.ಎಂ.ಡಿ.ಎನ್. ಅವರು ಡಾ. ಲೋಹಿಯಾ ಚಿಂತನೆಯನ್ನು ಅನೇಕ ಆಯಾಮಗಳಲ್ಲಿ ವಿಸ್ತರಿಸಿ ಹೊಸ ತಲೆಮಾರಿನ ಸಮಾಜವಾದಿ ಚಳವಳಿ, ವಿಚಾರವಾದಿ ಚಳವಳಿ ಮತ್ತು ಜೆ.ಪಿ. ಚಳವಳಿಯಲ್ಲಿ ಮುಂಚೂಣಿಯ ನಾಯಕರಾಗಿ ಅನೇಕ ಜನಪರ ಹೋರಾಟಗಳನ್ನು ರೂಪಿಸಿದರು. ದಲಿತ ಚಳವಳಿ ಪ್ರಚೋದಕರಾಗಿ ಅಂತಿಮವಾಗಿ ರೈತ ಚಳವಳಿಯನ್ನು ಅದರ ಉತ್ತುಂಗಕ್ಕೆ ಏರಿಸಿ, ಹಸಿರು ಟವಲ್ಲಿನ ಕ್ರಾಂತಿಕಾರರಾಗಿ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದರು. ಜಾಗತೀಕರಣಕ್ಕೆ ಮುಖಾಮುಖಿಯಾಗಿ ಅಂತಾರಾಷ್ಟ್ರೀಯ ಪರ್ಯಾಯ ರೂಪಿಸುವ ಜಾಗತಿಕ ವೇದಿಕೆಗಳಲ್ಲಿ ಕರ್ನಾಟಕದ ರೈತ ಚಳವಳಿಯನ್ನು ವಿಸ್ತರಿಸಲು ಕ್ರಿಯಾಶೀಲವಾಗಿ ತೊಡಗಿಸಿಕೊಂಡು, ಜಾಗತೀಕರಣದ ಅಪಾಯವನ್ನು ಎದುರಿಸಲು ಕರ್ನಾಟಕ ರೈತಪಡೆಯನ್ನು ಎಚ್ಚರಗೊಳಿಸಿದ್ದರು.

ಪ್ರೊ.ಎಂ.ಡಿ.ಎನ್. ಅವರ ಚಿಂತನೆಗಳಿಂದ ಮತ್ತು ಚಳವಳಿಗಳಿಂದ ಕರ್ನಾಟಕದ ಒಂದು ತಲೆಮಾರು ವಿಚಾರ ಕ್ರಾಂತಿಯಿಂದ ಪ್ರಭಾವಿತವಾಯಿತು. ಅವರ ಪ್ರಭಾವಳಿಯಿಂದ ಪ್ರಭಾವಿತರಾದವರಲ್ಲಿ ಖ್ಯಾತ ಲೇಖಕರಾದ ಪೂರ್ಣಚಂದ್ರತೇಜಸ್ವಿ, ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಪ್ರೊ. ಚಂದ್ರಶೇಖರ ಪಾಟೀಲ, ಖ್ಯಾತ ಕಲಾವಿದ ಕೆ.ಟಿ. ಶಿವಪ್ರಸಾದ್, ಖ್ಯಾತ ನಿರ್ದೇಶಕ ಕೆ.ಎಂ. ಶಂಕರಪ್ಪ, ಕಡಿದಾಳು ಶಾಮಣ್ಣ, ಖ್ಯಾತ ಪತ್ರಕರ್ತ ರಾಜಶೇಖರ ಕೋಟಿ, ರೈತನಾಯಕ ಕೆ.ಎಸ್. ಪುಟ್ಟಣ್ಣಯ್ಯ, ಮಾಜಿ ಉಪ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂತಾದವರು ಸೇರಿರುವುದು ನಂಜುಂಡಸ್ವಾಮಿಯವರ ಚಿಂತನೆಯ ಪ್ರಖರತೆಗೆ ಸಾಕ್ಷಿಯಾಗಿದೆ. ಶಾಸಕರಾಗಿದ್ದ ನಂಜುಂಡಸ್ವಾಮಿ ವಿಧಾನಸಭೆಯ ಕಲಾಪದಲ್ಲಿ ನಡೆಸಿದ ಚರ್ಚೆ ಸ್ಮರಣೀಯವಾದದ್ದು.

ಇಂತಹ ಹಸಿರು ಟವಲ್ಲಿನ ಧೀಮಂತ ಕ್ರಾಂತಿಕಾರಿಯ ಕಣ್ಮರೆಯಿಂದ ಜನಪರ ಚಳವಳಿಗಳು ಗುರುವನ್ನು ಕಳೆದುಕೊಂಡಷ್ಟು ತಬ್ಬಲಿತನಕ್ಕೆ ಒಳಗಾಗಿವೆ.

**ಕೆ. ರಾಮದಾಸ್**

# ಮುಖಾಮುಖಿ

# ಅಧಿಕಾರದ ಆಸೆ ಬೇಡ

ಸಂ: ಆರ್.ಟಿ. ವಿಠ್ಠಲಮೂರ್ತಿ

ಪ್ರಗತಿ ರಂಗದ ಸಂಚಾಲಕರಾಗಿ ಲಂಕೇಶರೊಂದಿಗೆ ಧ್ವನಿಗೂಡಿಸಿದ ಪ್ರೊ. ರಾಮದಾಸ್ ಅವರಿಗೆ ದಲಿತ ವರ್ಗದ ಬಗೆಗಿನ ಕಾಳಜಿ ಅಪಾರವಾದದ್ದು. ದಲಿತ ಚಳವಳಿಯ ಮರುಹುಟ್ಟು ಅನಿವಾರ್ಯದ್ದು ಎನ್ನುವಾಗ ಅವರಲ್ಲಿ ಒಂದು ಬಗೆಯ ಸ್ಪಷ್ಟತೆ ಮತ್ತು ನಿಷ್ಠೂರತೆ ಕಾಣುತ್ತದೆ.

ಜಾಗತೀಕರಣ ಮತ್ತು ಉಲ್ಬಣಗೊಳ್ಳುತ್ತಿರುವ ಜಾತಿ ಪದ್ಧತಿಯ ಸಾಮಾಜಿಕ ಕ್ರೌರ್ಯಕ್ಕೆ ಸಿಕ್ಕಿಕೊಂಡಿರುವ ಶೋಷಿತ ವರ್ಗದ ಹೋರಾಟ ಅಂತ್ಯೋದಯ ಚಳವಳಿಯಾಗಿ ರೂಪಾಂತರವಾಗ ಬೇಕೆಂಬ ವಿಚಾರದಲ್ಲಿ ಅವರು ಯು. ಆರ್. ಅನಂತಮೂರ್ತಿಯವರ ನಿಲುವಿಗೆ ಸಹಮತ ವ್ಯಕ್ತಪಡಿಸುತ್ತಾರೆ.

* ಉದಾರೀಕರಣ ಧೋರಣೆಯ ಇಂದಿನ ವ್ಯವಸ್ಥೆಯಲ್ಲಿ ದಲಿತ ಚಳವಳಿ ಮರುಹುಟ್ಟು ಪಡೆಯಬೇಕೆಂಬ ಅಭಿಪ್ರಾಯ ವ್ಯಾಪಕವಾಗಿದೆ. ನಿಮ್ಮ ಅಭಿಪ್ರಾಯವೇನು?

ದಲಿತ ಚಳವಳಿಯ ಮರುಹುಟ್ಟು ಅನಿವಾರ್ಯವಾದದ್ದು. ಜಾಗತೀಕರಣದ ಒತ್ತಡದಲ್ಲಿ ಇಂತಹ ಚಳವಳಿಯೊಂದು ಮತ್ತೆ ಮೂರ್ತವಾಗಲು ಕನವರಿಸುತ್ತಿದೆ. ಎಲ್ಲ ಚಳವಳಿಗಳ ಹಿನ್ನೆಲೆಯಲ್ಲಿ ಆ ಕಾಲದ ಒತ್ತಡದ ಅದಮ್ಯ ಆಕಾಂಕ್ಷೆಯೊಂದು ಇರುತ್ತದೆ. ದಲಿತ ಚಳವಳಿ ಮರುಹುಟ್ಟು ಪಡೆಯುವಾಗ ವರ್ತಮಾನದ ಆಶಯವನ್ನು ಸರಿಯಾಗಿ ಗುರುತಿಸಬೇಕು. ಅದಕ್ಕೆ ಅನುಗುಣವಾಗಿ ಅದರ ಗುರಿ ಮತ್ತು ದಾರಿಗಳನ್ನು ರೂಪಿಸಬೇಕು.

* ಈ ಬಗ್ಗೆ ಸಹಮತವಿದ್ದರೆ ಮರುಹುಟ್ಟು ಪಡೆಯುವ ಚಳವಳಿಯ ಸ್ವರೂಪ ಹೇಗಿರಬೇಕು? ಅದರ ಮುಖ್ಯ ಗುರಿ ಏನಾಗಬೇಕು?

ಸಮಾನತೆ ಮತ್ತು ಮಾನವೀಯತೆ ಅದರ ಮುಖ್ಯ ಗುರಿಯಾಗಿರಬೇಕು. ಜಾಗತೀಕರಣ ಮತ್ತು ಉಲ್ಬಣಗೊಳ್ಳುತ್ತಿರುವ ಜಾತಿಪದ್ಧತಿಯ ಸಾಮಾಜಿಕ ಕ್ರೌರ್ಯಕ್ಕೆ ಸಿಕ್ಕಿಕೊಂಡು ಬಲಿಯಾಗುತ್ತಿರುವ ಶೋಷಿತ ವರ್ಗದ ಅಂತ್ಯೋದಯ ಚಳವಳಿಯಾಗಿ ರೂಪಾಂತರವಾಗಬೇಕು. ಈ ಸಂದರ್ಭದಲ್ಲಿ ಡಾ. ಯು.ಆರ್. ಅನಂತಮೂರ್ತಿಯವರು ವ್ಯಕ್ತಪಡಿಸಿರುವ ಅನೇಕ

ವಿಚಾರಗಳಲ್ಲಿ ನನ್ನ ಸಹಮತವಿದೆ. ದಲಿತ ಚಳವಳಿಯ ನೆಲೆಯನ್ನು ಜಾಗತೀಕರಣದ ಹಿನ್ನೆಲೆಯಲ್ಲಿ ವಿಸ್ತರಿಸಿಕೊಳ್ಳುವುದು ಅನಿವಾರ್ಯವಾಗಿದೆ. ಅಸ್ಪೃಶ್ಯತೆಯ ಜೊತೆಯಲ್ಲೇ ನಗರ ಪ್ರದೇಶದಲ್ಲಿ ಅತ್ಯಂತ ಹೀನಾಯವಾದ ಕೆಳಸ್ತರದಲ್ಲಿರುವ ಜಲಗಾರರು, ಕೊಳಚೆ ನಿವಾಸಿಗಳು, ಶೋಷಿತ ಸ್ತ್ರೀಯರು, ಆದಿವಾಸಿಗಳು, ಗಿರಿಜನರು, ಅಸಂಘಟಿತ ಅತಿಶೂದ್ರರು ಮತ್ತು ಅನಾಥರಾಗಿರುವ ಅಲ್ಪಸಂಖ್ಯಾತ ವರ್ಗಗಳನ್ನು ಶೋಷಿತರ ಅಂತ್ಯೋದಯ ಚಳವಳಿಯ ವ್ಯಾಪ್ತಿಯಲ್ಲಿ ಒಳಗೊಳ್ಳಬೇಕಾಗುತ್ತದೆ.

ಈಗ ಆರ್ಥಿಕ ಕ್ರೌರ್ಯ ಮತ್ತು ಜಾತಿ ಪದ್ಧತಿಯ ಸಾಮಾಜಿಕ ಕ್ರೌರ್ಯ, ಒಂದೇ ನಾಣ್ಯದ ಎರಡು ಮುಖಗಳಾಗಿರುವುದರಿಂದ ಸಾಮಾಜಿಕ ನ್ಯಾಯದ ಜೊತೆಯಲ್ಲಿ ಆರ್ಥಿಕ ನ್ಯಾಯವನ್ನೂ ಬೆರೆಸಿ, ಚಳವಳಿಯನ್ನು ಈ ಕಾಲದ ಆಶಯಕ್ಕೆ ಅನುಗುಣವಾಗಿ ರೂಪಿಸಬೇಕಾಗುತ್ತದೆ. ಆದ್ದರಿಂದಲೇ ದಲಿತ ಚಳವಳಿ ಶೋಷಿತ ವರ್ಗಗಳ ಅಂತ್ಯೋದಯ ಚಳವಳಿಯಾಗಿ ಅದರ ಗುರಿ ಮತ್ತು ಸ್ವರೂಪದಲ್ಲಿ ಬದಲಾವಣೆಯಾಗಬೇಕು.

*** ಇವತ್ತು ಎಡ-ಬಲದ ಸಮಸ್ಯೆ ಕಾಣಿಸಿಕೊಂಡಿದೆ. ಈ ಸಮಸ್ಯೆಯನ್ನು ಪರಿಹರಿಸಲು ಒಳ ಮೀಸಲಾತಿ ಕಲ್ಪಿಸಿಕೊಡಬೇಕು ಎಂಬುದು ಒಂದು ವಾದ. ಮತ್ತೊಂದು ವಾದದ ಪ್ರಕಾರ ಮುಂದಿನ ಐದು ವರ್ಷಗಳ ಕಾಲ ಮೀಸಲಾತಿ ಸವಲತ್ತು ಕೇವಲ ಎಡಗೈನವರಿಗೆ ದಕ್ಕಬೇಕು ಎಂಬುದು, ನಿಮ್ಮ ಅಭಿಪ್ರಾಯವೇನು?**

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಹಿನ್ನೆಲೆಯಲ್ಲಿ ಮೀಸಲಾತಿ ಭ್ರಮಾತ್ಮಕವಾಗಿದೆ. ಮೀಸಲಾತಿಯ ಅವಕಾಶಗಳು ಸೀಮಿತಗೊಂಡು ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳು ಖಾಸಗಿ ಕ್ಷೇತ್ರಕ್ಕೆ ಹಸ್ತಾಂತರವಾಗಿರುವುದರಿಂದ ಈ ಸೀಮಿತ ಅವಕಾಶಗಳಿಗೆ ಪೈಪೋಟಿ ನಡೆಯುತ್ತಿದೆ. ಈಗ ಬೇಕಾಗಿರುವುದು ಒಳ ಮೀಸಲಾತಿಯಲ್ಲ, ತಳ ಮೀಸಲಾತಿ. ಮೀಸಲಾತಿಯ ಬಗ್ಗೆ ಸಾಂಪ್ರದಾಯಿಕವಾಗಿ ಚಿಂತಿಸುವವರು ಇಂತಹ ಅನರ್ಥಕಾರಿಯಾದ ವಿವಾದದ ಬಿಕ್ಕಟ್ಟನ್ನು ನಿರ್ಮಿಸಿಕೊಂಡಿದ್ದಾರೆ. ಬದುಕುವ ಮೂಲಭೂತ ಹಕ್ಕಿನ ಅವಕಾಶದಿಂದಲೇ ವಂಚಿತವಾಗಿರುವ ಕೆಳಸ್ತರದ ಶೋಷಿತರಿಗೆ ಮೀಸಲಾತಿಯನ್ನು ಮೀಸಲಾಗಿಡುವ ಬಗ್ಗೆ ಗಂಭೀರವಾಗಿ ಮತ್ತು ಮಾನವೀಯವಾಗಿ ಚಿಂತಿಸಬೇಕು. ಇಲ್ಲದಿದ್ದರೆ ಈ ಬಿಕ್ಕಟ್ಟು ಇನ್ನೂ ಉಲ್ಬಣವಾಗಿ ವಿಷಮಸ್ಥಿತಿಗೆ ತಲುಪಿಸುತ್ತದೆ. ಮೀಸಲಾತಿಯ ಅವಸಾನದ ಸ್ಥಿತಿಯಲ್ಲಿ ಹೀಗಾಗುವುದು ಸಹಜ. ಈ ವಿಷಮ ಸ್ಥಿತಿಯಿಂದ ಬಚಾವಾಗಲು ಚಿಂತಿಸಬೇಕು. ಮೀಸಲಾತಿಯ ಸಾಂಪ್ರದಾಯಿಕ ಆಕಾಂಕ್ಷೆ ದಲಿತರಲ್ಲಿ ಆಂತರಿಕ ಜಾತಿವಾದವನ್ನು ಸ್ಥಿರಗೊಳಿಸುತ್ತದೆ. ಮತ್ತು ಜಾತಿ ವಿನಾಶದ ಸಂಕಲ್ಪವನ್ನು ದುರ್ಬಲಗೊಳಿಸುತ್ತದೆ. ಆದ್ದರಿಂದ ಆವರ್ತನಗೊಳ್ಳುವ ಚಲನಶೀಲವಾದ ಮೀಸಲಾತಿ ನೀತಿ ಜಾರಿಗೆ ತರಬೇಕು ಮತ್ತು ಸರ್ಕಾರಿ ಸವಲತ್ತುಗಳನ್ನು ಪಡೆದಿರುವ ಖಾಸಗಿ ಕ್ಷೇತ್ರಕ್ಕೂ ಮೀಸಲಾತಿ ವಿಸ್ತರಣೆಯಾಗುವುದು ಅಗತ್ಯವಾಗಿದೆ.

ಪ್ರಜಾಪ್ರಭುತ್ವದಲ್ಲಿ ರಾಜಕೀಯವನ್ನು ಗೌಣವೆಂದು ಹೇಳಲಾಗುವುದಿಲ್ಲ. ಆದರೆ ಎಲ್ಲಾ ರಾಜಕೀಯ ಪಕ್ಷಗಳು ಈಗ ಸಮಯ ಸಾಧಕ ರಾಜಕಾರಣದಲ್ಲಿ ನಿರತವಾಗಿರುವುದರಿಂದ ಅವುಗಳಿಗೆ ಸ್ಥಿರವಾದ ಸೈದ್ಧಾಂತಿಕ ಬದ್ಧತೆ ಇಲ್ಲ.

ಭಾರತದ ಜಾತಿ ಪದ್ಧತಿಯನ್ನು ಸಾಮಾಜಿಕ ಪರಿವರ್ತನೆಯನ್ನು ಜಡಗೊಳಿಸುವ ಹುನ್ನಾರ ಹೊಂದಿರುವ ಸಂಘ ಪರಿವಾರದ ಬಿಜೆಪಿಯನ್ನು ಸಾರಾಸಗಟಾಗಿ ತಿರಸ್ಕರಿಸಬೇಕು. ಸಕ್ರಿಯ ರಾಜಕಾರಣದ ಆಕಾಂಕ್ಷೆ ಹೊಂದಿರುವ ದಲಿತರು ತಮಗೆ ಹತ್ತಿರದ ಬಿಜೆಪಿಯೇತರ ರಾಜಕೀಯ ಪಕ್ಷಗಳನ್ನು ನೇರವಾಗಿ ಸೇರಿಕೊಳ್ಳಬೇಕು. ರಾಜಕೀಯ ಪಕ್ಷಗಳ ಜೊತೆ ಒಡನಾಡುತ್ತಾ ಚಳವಳಿಯನ್ನು ರೂಪಿಸುವುದು ಸಾಧ್ಯವಿಲ್ಲ. ರಾಜಕೀಯವೆಂದರೆ ನಿರಂತರವಾದ ಕಾಂಪ್ರಮೈಸ್ ಮತ್ತು ಅಧಿಕಾರ ಪ್ರಲೋಭನೆಯಾಗಿ ಬಿಡುವುದರಿಂದ ಚಳವಳಿ ಇದರಿಂದ ದೂರ ಇರಬೇಕಾಗುತ್ತದೆ.

ಯ[illegible] ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಅದನ್ನು ಜನಪರವಾಗಿರುವಂತೆ ಮಾಡುವ ನೈತಿಕ ತಾಕತ್ತನ್ನು ಪಡೆಯಲು ಅದು ಪ್ರೆಷರ್ ಗ್ರೂಪ್ ಆಗಿರಬೇಕಾಗುತ್ತದೆ. ಪ್ರೆಷರ್ ಗ್ರೂಪ್ ಅನ್ನುವುದಕ್ಕಿಂತ ಪ್ರೆಷರ್ ಫೋರ್ಸ್ ಎಂದು ಕರೆಯುವುದು ಸೂಕ್ತ. ಇದರಿಂದ ಯಾವ ಗೊಂದಲ ಮತ್ತು ಅನುಮಾನಗಳಿಲ್ಲದೆ ಗುರಿ ಮತ್ತು ದಾರಿಗಳ ಪಾವಿತ್ರ್ಯವನ್ನು ಉಳಿಸಿಕೊಳ್ಳಲು, ಚಳವಳಿಯ ನಿರಂತರತೆಯನ್ನು ಕಾಪಾಡಲು ಸಾಧ್ಯವಾಗುತ್ತದೆ.

*** ದಲಿತ ಚಳವಳಿ ಜನತಾ ಪಕ್ಷಕ್ಕೆ ಬೆಂಬಲ ನೀಡುವವರೆಗೂ ರಾಜಕೀಯ ಪಕ್ಷಗಳು ಅದರ ಬಗ್ಗೆ ಒಂದು ಎಚ್ಚರಿಕೆಯನ್ನಿಟ್ಟು ಕೊಂಡಿದ್ದವು. ಆದರೆ ನಂತರದ ದಿನಗಳಲ್ಲಿ ಅಂತಹ ಎಚ್ಚರಿಕೆ ಕಾಣಲಿಲ್ಲ. ಇದು ಚಳವಳಿ ದುರ್ಬಲಗೊಂಡ ಲಕ್ಷಣ ಅಲ್ಲವೇ?**

ಯಾವುದೇ ಚಳವಳಿಯ ರಾಜಕೀಯ ಒಡನಾಟ ಚಳವಳಿಯನ್ನು ದುರ್ಬಲಗೊಳಿಸುತ್ತದೆ. ರಾಜಕೀಯ ಪಕ್ಷಗಳು ಚಳವಳಿಗಳನ್ನು ತಮ್ಮ ಹಿತಾಸಕ್ತಿಗೆ ಬಳಸಿಕೊಂಡು 'ಯೂಸ್ ಅಂಡ್ ಥ್ರೋ' ಪಾಲಿಸಿಯಂತೆ ಸಿಪ್ಪೆ ಮಾಡಿ ಎಸೆಯುತ್ತವೆ. ದಲಿತ ಚಳವಳಿಗೆ ತತ್ತರಿಸುತ್ತಿದ್ದ ಸರ್ಕಾರಗಳು ಈಗ ನಿರ್ಭೀತವಾಗಿವೆ. ಜನತಾ ಪಕ್ಷದ ಸ್ಪರ್ಶ ದಲಿತ ಚಳವಳಿ ನುಚ್ಚು ನೂರಾಗಲು ಕಾರಣವಾಯಿತು.

*** ಸರ್ವಾಧಿಕಾರಿ ಧೋರಣೆಯ ವಿರುದ್ಧ ಹೋರಾಡಲೆಂದು ನೀವು ಜನತಾ ಪಕ್ಷಕ್ಕೆ ಬೆಂಬಲ ನೀಡಿದಿರಿ. ಆದರೆ ಕರ್ನಾಟಕದ ನೆಲೆಗಟ್ಟಿನಲ್ಲಿ ಜನತಾ ಪಕ್ಷದ ಸ್ಥಾಪಕ ಶಕ್ತಿಗಳೇನಿದ್ದವೋ, ಅವೇ ದಲಿತರನ್ನು ಶೋಷಿಸಿದ ಶಕ್ತಿಗಳಾಗಿದ್ದವು. ಹೀಗಿರುವಾಗ ಭೂಸುಧಾರಣಾ ಕಾಯ್ದೆಯ ಮೂಲಕ ಪರಿಶಿಷ್ಟರಿಗೆ ಒಂದಷ್ಟು ಶಕ್ತಿ ತುಂಬಿದ ಕಾಂಗ್ರೆಸ್ ವಿರುದ್ಧ ಜನತಾ ಪಕ್ಷಕ್ಕೆ ಬೆಂಬಲ ನೀಡಿದ್ದು ಸಿದ್ಧಾಂತ ವಿರೋಧಿ ಆಗಲಿಲ್ಲವೇ?**

ವಂಶಪಾರಂಪರ್ಯದ ಚಾಳಿ ಬೆಳೆಸಿಕೊಂಡಿರುವ ಕಾಂಗ್ರೆಸ್ಸಿನಲ್ಲಿ, ಆಂತರಿಕ ಪ್ರಜಾಪ್ರಭುತ್ವಕ್ಕೆ ಅವಕಾಶವೇ ಇಲ್ಲದಿರುವುದರಿಂದ ಅದು ತನ್ನ ನಿರಂಕುಶ ಆಳ್ವಿಕೆಯ ಅಹಂಕಾರದಲ್ಲಿ ಸರ್ವಾಧಿಕಾರಿಯಾದಾಗ ಒಗ್ಗೂಡಿ ಪ್ರತಿಭಟಿಸುವುದು ಮುಖ್ಯ ಆದ್ಯತೆಯಾಗಿತ್ತು. ಸ್ವಾತಂತ್ರ್ಯವಿಲ್ಲದಿದ್ದರೆ ಶೋಷಿತ ವರ್ಗಗಳು ನಿರಂತರ ಗುಲಾಮಗಿರಿಯಲ್ಲಿರಬೇಕಾಗುತ್ತದೆ. ಆ ಸಂದರ್ಭದಲ್ಲಿ ಜೆ.ಪಿ. ಚಳವಳಿಯನ್ನು ಸಕ್ರಿಯವಾಗಿ ಬೆಂಬಲಿಸಿದೆವು. ಅದೇ ರೀತಿ ಆಗಿನ ಕಾಂಗ್ರೆಸ್ಸಿನ ದುರಾಡಳಿತವನ್ನು ಕೊನೆಗೊಳಿಸಲು ಜನತಾ ಪಕ್ಷವನ್ನು ಬೆಂಬಲಿಸಿದ್ದು ತಾತ್ವಿಕವಾಗಿ ಸರಿಯಾದ ಕ್ರಮವಾಗಿದೆ.

ಕರ್ನಾಟಕದಲ್ಲಿ ದಿವಂಗತ ಡಿ. ದೇವರಾಜ ಅರಸು ಅವರು ಮುಖ್ಯಮಂತ್ರಿ ಯಾಗಿದ್ದರಿಂದ ಅವರ ಜನಪರವಾದ ಸಂಕಲ್ಪ ಬಲದಿಂದ ಶೋಷಿತ ವರ್ಗಗಳಿಗೆ ಸಾಮಾಜಿಕ ನ್ಯಾಯ

ದೊರೆಯಿತು. ಮತ್ತು ಭೂಸುಧಾರಣೆಯಂತಹ ಕ್ರಾಂತಿಕಾರಿ ಕೆಲಸ ಸಾಧ್ಯವಾಯಿತು. ಈ ಸಾಧನೆಯ ಕೀರ್ತಿ ದಿವಂಗತ ದೇವರಾಜ ಅರಸು ಅವರಿಗೆ ಸಲ್ಲುತ್ತದೆಯೇ ಹೊರತು ಕಾಂಗ್ರೆಸ್ ಪಕ್ಷಕ್ಕಲ್ಲ. ಆದ್ದರಿಂದ ದಲಿತ ಚಳವಳಿಯ ನಿರ್ಧಾರ ಸೈದ್ಧಾಂತಿಕ ವೈರುಧ್ಯವೆಂದು ಹೇಳಲಾಗುವುದಿಲ್ಲ.

*** ಈವತ್ತು ಅಖಿಲ ಭಾರತ ಮಟ್ಟದಲ್ಲಿ ದಲಿತರ ಪರವಾದ ದೊಡ್ಡ ಪಕ್ಷವಾಗಿ ಕಾಣುತ್ತಿರುವುದು ಕಾನ್ಸಿರಾಂರ ಬಹುಜನ ಸಮಾಜ ಪಕ್ಷ. ಬೇರೆಡೆ ಅದರ ಪ್ರಭಾವ ಕಡಿಮೆಯಾದರೂ, ಒಟ್ಟಾರೆ ಅರ್ಥದಲ್ಲಿ ಇದನ್ನು ಹೇಳುತ್ತಿದ್ದೇನೆ. ಇಂತಹ ಒಂದು ಪಕ್ಷದೊಂದಿಗೆ ದಲಿತ ಚಳವಳಿ ಕೈ ಜೋಡಿಸಲು, ಆ ಮೂಲಕ ರಾಜಕೀಯ ಅಧಿಕಾರದತ್ತ ನಡೆಯಲು ಸಾಧ್ಯ ಇಲ್ಲವೇ?**

ಕಾನ್ಸಿರಾಂ ಅವರ 'ಬಹುಜನ ಸಮಾಜ ಪಕ್ಷ'ದಕ್ಷಿಣ ಭಾರತದಲ್ಲಿ ರಾಜಕೀಯ ಶಕ್ತಿಯಾಗಿ ನೆಲೆಯಾಗುವ ಸಾಧ್ಯತೆ ಕಾಣುತ್ತಿಲ್ಲ. ಆದರೂ ಚಳವಳಿ ಮತ್ತು ರಾಜಕೀಯ ಪಕ್ಷವನ್ನು ಭಿನ್ನ ನೆಲೆಗಳಲ್ಲೇ ಪ್ರತ್ಯೇಕಿಸುವುದು ಒಳ್ಳೆಯದು. ಇಲ್ಲದಿದ್ದರೆ ಬಿಜೆಪಿ ಮತ್ತು ಆರ್.ಎಸ್.ಎಸ್‌ನಂತೆ ಅನೇಕ ವೈರುಧ್ಯಗಳಿಂದ ಮತ್ತು ಬಿಕ್ಕಟ್ಟುಗಳಿಂದ ಮುಗ್ಗರಿಸಬೇಕಾಗುತ್ತದೆ. ದಲಿತ ಚಳವಳಿಗೆ ರಾಜಕೀಯ ಅಧಿಕಾರದ ಆಕಾಂಕ್ಷೆ ಇದ್ದರೆ 'ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ' ಯ ಸಂಕಟ ಅನುಭವಿಸಬೇಕಾಗುತ್ತದೆ.

*** ದಲಿತ ಚಳವಳಿಗೆ ಜನತಾ ಪಕ್ಷದಿಂದ ಆಘಾತವಾಗಿದೆ. ಹಾಗೆಯೇ ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್‌ನಿಂದ ಆಘಾತವಾಗಿದೆ ಎಂಬ ಭಾವನೆಗಳು ವ್ಯಕ್ತವಾಗುತ್ತಿವೆ. ಇಂತಹದೊಂದು ಸ್ಥಿತಿಯಲ್ಲಿ ದಲಿತ ಚಳವಳಿ ಸಂದರ್ಭಕ್ಕನುಸಾರವಾದ, ಅಂದರೆ ದಲಿತರ ಹಿತಾಸಕ್ತಿಗೆ ಪೂರಕವಾದ ಹೆಜ್ಜೆಯಿಡಬೇಕು ಅನ್ನುತ್ತೀರಾ?**

ಜನತಾ ಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳೆರಡೂ 'ಸಾಮಾಜಿಕ ನ್ಯಾಯ ಸಿದ್ಧಾಂತ'ಕ್ಕೆ ಬದ್ಧವಾಗಿಲ್ಲ. ದಲಿತ ಚಳವಳಿಯ ನಾಯಕತ್ವ ರಾಜಕೀಯ ಅಧಿಕಾರದ ಆಕಾಂಕ್ಷೆಯನ್ನು ಶಾಶ್ವತವಾಗಿ ತೊರೆಯಬೇಕು. ವೈಯಕ್ತಿಕ ಆಕಾಂಕ್ಷೆಯನ್ನು ತ್ಯಾಗ ಮಾಡುವ ಮತ್ತು ಮಾನವೀಯ ಕಾಳಜಿಗೆ ತುಡಿಯುವ, ಪ್ರಬುದ್ಧವಾಗಿ ಚಿಂತಿಸುವ, ಯಾವ ಮರ್ಜಿ-ಮುಲಾಜುಗಳಿಗೂ ಮಣಿಯದ ನಿಷ್ಠುರ ವರ್ತನೆಯ ನಾಯಕತ್ವ ಇದ್ದರೆ ಸಮಯೋಚಿತವಾದ ರಾಜಕೀಯ ನೀತಿಯನ್ನು ರೂಪಿಸಬಹುದು.

ದಲಿತ ಚಳವಳಿಯ ದೊಡ್ಡ ಬಿಕ್ಕಟ್ಟು ಚುನಾವಣೆ. ಪ್ರತಿ ಚುನಾವಣೆ ಬಂದಾಗಲೂ ದಲಿತ ಚಳವಳಿಯ ಬಿಕ್ಕಟ್ಟು ಉಲ್ಬಣಿಸುತ್ತದೆ. ರಾಜಕೀಯ ಪಕ್ಷಗಳು ಉಂಟು ಮಾಡುವ ಪ್ರಲೋಭನೆಯನ್ನು ತಡೆದುಕೊಳ್ಳುವುದು ಕಷ್ಟವಾಗುತ್ತದೆ. ಇಂದಿನ ರಾಜಕೀಯ ವಿದ್ಯಮಾನದ ಆಕರ್ಷಣೆ ಎಷ್ಟು ಪ್ರಬಲವಾಗಿದೆ ಎಂದರೆ ವಿಧಾನಸೌಧದ ವ್ಯಾಮೋಹ ಎಲ್ಲರನ್ನೂ ರಾಜಕೀಯ ಆಕಾಂಕ್ಷೆಯತ್ತ ಚುಂಬಕ ಶಕ್ತಿಯಾಗಿ ಸೆಳೆದುಬಿಡುತ್ತದೆ ಮತ್ತು ಅನೈತಿಕಗೊಳಿಸುತ್ತದೆ. ಈ ಅಪಾಯದಿಂದ ದಲಿತ ಚಳವಳಿ ಪಾರಾಗಬೇಕು.

ಚುನಾವಣೆ ಸಂದರ್ಭದಲ್ಲಿ ದಲಿತ ಚಳವಳಿ ನ್ಯಾಯಬದ್ಧ ಚುನಾವಣೆ ನಡೆಯುವಂತೆ ಅಕ್ರಮಗಳನ್ನು ತಡೆಯಲು ಕಾವಲು ಪಡೆಯಾಗಿ ಕೆಲಸ ಮಾಡಬೇಕು. ಅಧಿಕೃತವಾಗಿ ತಾನು ತಟಸ್ಥವಾಗಿದ್ದು ಜನರಿಗೆ ರಾಜಕೀಯ ವಿವೇಕಕ್ಕೆ ಅನುಸಾರವಾಗಿ ಮತ ಚಲಾಯಿಸುವ ಸ್ವಾತಂತ್ರ್ಯವನ್ನು ಯಥಾವತ್ತಾಗಿ ಬಿಟ್ಟು ಬಿಡಬೇಕು. ಚುನಾವಣೆಯ ಪೂರ್ವದಲ್ಲಿ ರಾಜಕೀಯ ಪ್ರಜ್ಞೆ ರೂಪಿಸುವ ಕಾರ್ಯವನ್ನು ವಿವೇಚನೆಯಿಂದ ಮಾಡಬೇಕು.

*** ದಲಿತ ಚಳವಳಿ ಸಂಪೂರ್ಣವಾಗಿ ಅಂಬೇಡ್ಕರ್ ವಾದದ ನೆಲೆಗಟ್ಟಿನ ಮೇಲೆ ನಿಲ್ಲಬೇಕು ಎಂಬ ವಾದಗಳಿವೆ. ಹಾಗೆಯೇ ಗಾಂಧಿ-ಲೋಹಿಯಾ ವಿಚಾರಧಾರೆಗಳೂ ಮಿಳಿತಗೊಳ್ಳಬೇಕು ಎಂಬ ಅಭಿಪ್ರಾಯಗಳಿವೆ. ನಿಮಗೆ ಏನನ್ನಿಸುತ್ತದೆ?**

ಡಾ.ಅಂಬೇಡ್ಕರ್ ಚಿಂತನೆಯೇ ದಲಿತ ಚಳವಳಿಯ ಮುಖ್ಯ ಕೇಂದ್ರವಾಗಿತ್ತು. ಅಂಬೇಡ್ಕರರ 'ಸಾಮಾಜಿಕ ನ್ಯಾಯ ಸಿದ್ಧಾಂತ', ವಿಚಾರವಾದ, ಜಾತಿ ವಿನಾಶ ಮತ್ತು ಮಾನವತಾವಾದ, ಪ್ರಜಾಪ್ರಭುತ್ವ ಮತ್ತು ಅಹಿಂಸೆಯನ್ನು ದಲಿತ ಚಳವಳಿ ಸೈದ್ಧಾಂತಿಕವಾಗಿ ಸ್ವೀಕರಿಸಿತ್ತು. ಆದರೆ ಕಾಲಕ್ರಮೇಣ ಜಾತಿವಿನಾಶ, ವಿಚಾರವಾದ ಮತ್ತು ಮಾನವತಾ ಕಾಳಜಿಗಳು ತಮ್ಮ ಆದ್ಯತೆಯನ್ನು ಕಳೆದುಕೊಳ್ಳುತ್ತಾ ಚಳವಳಿಯ ಸೈದ್ಧಾಂತಿಕ ನೆಲೆಗಳಲ್ಲಿ ಅಸಮತೋಲನ ವ್ಯಕ್ತವಾಯಿತು.

ಡಾ. ಅಂಬೇಡ್ಕರ್ ವಿಚಾರಧಾರೆಯ ಜೊತೆಯಲ್ಲಿ ಬುದ್ಧ, ಬಸವ, ಗಾಂಧಿ, ಲೋಹಿಯಾ, ಪೆರಿಯಾರ್ ಅವರ ಚಿಂತನೆಗಳನ್ನು ಬೆಸೆಯಬಹುದು. ಇದು ದಲಿತ ಚಳವಳಿಯ ಪರಿಭಾಷೆಯನ್ನು ಬದಲಾಯಿಸಲು ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸಲು ತಾತ್ವಿಕ ನೆಲೆಯಾಗುತ್ತದೆ. ಈ ರೀತಿ ಬೆಸೆಯುವಿಕೆಯಿಂದಲೇ ದಲಿತ ಚಳವಳಿಯ ಮರುಹುಟ್ಟಿಗೆ ನವೀನ ರೂಪ ಪ್ರಾಪ್ತವಾಗುತ್ತದೆ.

*** ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದ ಅಥವಾ ಇನ್ನಾವುದೋ ಕಾರಣಗಳಿಂದ ಚಳವಳಿಯ ನಾಯಕರು ಭಿನ್ನ ನೆಲೆಗಳಲ್ಲಿ ಸರಿದು ನಿಂತಿದ್ದಾರೆ. ಅವರನ್ನು ಒಂದೇ ವೇದಿಕೆಗೆ ತರುವ, ಕನಿಷ್ಠ ಪಕ್ಷ ವಿಷಯಾಧಾರಿತ ಒಗ್ಗೂಡುವಿಕೆಗೆ ಸಹಮತ ವ್ಯಕ್ತಪಡಿಸುವಂತೆ ನೋಡಿಕೊಳ್ಳುವ ಕೆಲಸ ಸಾಧ್ಯವಿಲ್ಲವೇ?**

ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಗಿಂತ ವೈಯಕ್ತಿಕ ಭಿನ್ನಾಭಿಪ್ರಾಯಗಳೇ ಹೆಚ್ಚಿರುವುದನ್ನು ನಾನು ಗಮನಿಸಿದ್ದೇನೆ. ಈಗ ವಿಘಟಿತವಾಗಿರುವ ದಲಿತ ಚಳವಳಿಯನ್ನು ಯಥಾವತ್ತಾಗಿ ಒಂದುಗೂಡಿಸಲು ಹೋದರೆ ಅದಕ್ಕೆ ಹಳೆಯ ನೆನಪುಗಳ ಕಾಟ ಪ್ರಾರಂಭವಾಗುತ್ತದೆ. ಈಗಿರುವ ಒಡೆದ ಕನ್ನಡಿಯನ್ನು ಮತ್ತೆ ಜೋಡಿಸಿದರೂ ಭಗ್ನರೂಪವೇ ಕಾಣುತ್ತದೆ.

ದಲಿತ ಚಳವಳಿಯ ಭಿನ್ನ ನೆಲೆಗಳನ್ನು ವಿಸರ್ಜಿಸಿ, ಶೋಷಿತ ವರ್ಗದ ಅಂತ್ಯೋದಯ ಚಳವಳಿಯನ್ನಾಗಿ ರೂಪಾಂತರ ಮಾಡಬೇಕೆನ್ನುವುದು ನನ್ನ ಅಭಿಮತ. ಇಂತಹ ಮಹತ್ವಾಕಾಂಕ್ಷೆಯ ಕ್ರಿಯೆಗಾಗಿ ವರ್ತಮಾನದ ಅಪೇಕ್ಷೆಯೊಂದು ಕಾಯುತ್ತಿದೆ. ಅದಕ್ಕೆ ಅನುಗುಣವಾಗಿ ಸ್ಪಂದಿಸುವುದು ದಲಿತ ಚಳವಳಿಗಾರರ ಜವಾಬ್ದಾರಿಯಾಗಿದೆ.

**('ದಲಿತ ಚಳವಳಿಯ ನಾಳೆಗಳು' ಕೃತಿಯಿಂದ)**

# ದಾರಿ ತಪ್ಪುತ್ತಿರುವ ಸಾಮಾಜಿಕ ನ್ಯಾಯ ಆಂದೋಲನ

ವಿಚಾರವಾದಿ ಎಂದೇ ಹೆಸರು ಪಡೆದಿರುವ ಪ್ರೊ.ಕೆ.ರಾಮದಾಸ್ ಅವರು ಬಹುಮತ ಸಂಘಟನೆಯ ಆರಂಭದ ಉದ್ಘಾಟಕರು, ಹಾಗೂ ಪುರೋಹಿತಶಾಹಿಗಳ ಜುಟ್ಟು ಜನಿವಾರಗಳ ವಿವಾದದಲ್ಲಿ ಕರ್ನಾಟಕದಲ್ಲಿ ಖ್ಯಾತಿ ಪಡೆದವರು. ಅವರೊಂದಿಗೆ 'ಬಹುಮತ' ಪತ್ರಿಕೆ ನಡೆಸಿದ ಮಾತುಕತೆಯ ಸಾರಂಶ ಈ ಸಂದರ್ಶನ.

**ಬಹುಮತ : ತ್ವರಿತಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚದ ಇಂದಿನ ದಿನಗಳಲ್ಲಿ ಹಿಂದುಳಿದವರೂ ಸಹ ಯಾವ ವೇಗದಲ್ಲಿ ಬದಲಾವಣೆಯಾಗಬೇಕು ಅಂತ ಬಯಸ್ತೀರಾ? ಮತ್ತು ಬದಲಾವಣೆಯ ಸ್ವರೂಪದ ಬಗ್ಗೆ ಸ್ವಲ್ಪ ಹೇಳ್ತೀರಾ.**

**ಪ್ರೊ. ಕೆ. ರಾಮದಾಸ್ :** ಪ್ರಪಂಚದಲ್ಲಿ ಇವಾಗ ಆಗ್ತಾ ಇರೋ ಬದಲಾವಣೆ, ಆರ್ಥಿಕ ಬದಲಾವಣೆ, ಮಾರುಕಟ್ಟೆಯ ಬದಲಾವಣೆ ಅಷ್ಟೇ ಆದ್ರೇ. ಸಾಮಾಜಿಕ ವಿದ್ಯಮಾನಗಳಲ್ಲಿ ಯಾವ ಪ್ರಮಾಣದ ಗತಿ ಇರಬೇಕಾಗಿತ್ತೋ, ಅದರ ತೀವ್ರತೆ ಕಡಿಮೆಯಾಗ್ತಾ ಹೋಗ್ತಾ ಇದೆ. ಅಷ್ಟೆ ಅಲ್ಲದೇ ಒಂದು ಕೇಂದ್ರದ ಕಡೆ ತುಡಿಯಬೇಕಾದ ಸಮಾಜ ಇವತ್ತು ವಿಘಟಿತವಾಗಿ ಮತ್ತು ಜಾತಿ ಕೇಂದ್ರಿತ ತುಡಿತಕ್ಕೂ ಒಳಗಾಗುತ್ತಿದೆ. ಇದು ನನ್ನ ದೃಷ್ಟಿಯಲ್ಲಿ ಒಂದು "ಕೌಂಟರ್ ರೆವಲ್ಯೂಷನ್". ಅಂದ್ರೇ ಒಂದು 'ಪ್ರತಿ ಕ್ರಾಂತಿ'. ನಾವು ಯಾವುದನ್ನ ಕ್ರಾಂತಿ ಅಂತಾ ಬಯಸಿದ್ದೆವೋ. ಅದಕ್ಕೆ ತದ್ವಿರುದ್ಧವಾದ ಒಂದು ಪ್ರತಿಕ್ರಾಂತಿ ಸೋಶಿಯಲ್ ಸೆಕ್ಟಾರ್‌ನಲ್ಲಿ ಆಗ್ತಾ ಇದೆ. ಆರ್ಥಿಕವಾಗಿ ಬದಲಾವಣೆಯಲ್ಲಿ ಕೆಳಸ್ತರದಲ್ಲಿರುವಂತಹ ಶೋಷಿತ ವರ್ಗಕ್ಕೆ ಯಾವ ತೆರನಾದ ಪ್ರಯೋಜನ ಆಗ್ತಾ ಇಲ್ಲಾ. ಮೇಲ್ವರ್ಗದ ಜನಗಳಿಗೆ ಒಂದು ಬಹಳ ಅತಿ ಆಕರ್ಷಕವಾದ ಮಾರುಕಟ್ಟೆ ನಿರ್ಮಾಣವಾಗುತ್ತಿದೆ. ಆದುದರಿಂದ ಇದೊಂದು ಕಡೆಗೆ ಆರ್ಥಿಕ ಕ್ಷೇತ್ರದಲ್ಲಿ ಕ್ಷಿಪ್ರ ಕ್ರಾಂತಿಯಾಗಿದೆ. ಸಾಮಾಜಿಕ ಕ್ಷೇತ್ರದಲ್ಲಿ ಇದು ಪ್ರತಿಕ್ರಾಂತಿಯಾಗಿದೆ. ಎರಡು ಕ್ರಾಂತಿಗಳು ಏಕ ಕಾಲದಲ್ಲಿ ನಡೀತಾ ಇದೆ. ಆದ್ದರಿಂದಲೇ ನಮ್ಮ ಮುಂದೆ ಈವತ್ತು ದ್ವಂದ್ವ ಇದೆ. ಯಾವುದು...,? ಮಾರ್ಕ್ಸ್‌ವಾದಿಗಳ ಚಿಂತನೆಯ ಪ್ರಕಾರ, ಆರ್ಥಿಕ ವಿದ್ಯಾಮಾನಗಳಿಂದ ಸಾಮಾಜಿಕ ವಿದ್ಯಮಾನಗಳ ಮೇಲೆ ಬಹಳ ಬೇಗ ಬದಲಾವಣೆಯಾಗಿ ಬಿಟ್ಟು ಈ ಸಮಾಜ

ಬದಲಾಗುತ್ತೇ ಎನ್ನುವ ಒಂದು ಭ್ರಮೆ ಇತ್ತಲ್ಲಾ ಅದೂ ಕೂಡ ಈಗ ಹುಸಿಯಾಗಿದೆ, ಏಕೆಂದರೆ ರಷ್ಯಾದಲ್ಲಿ ಮತ್ತು ಯುರೋಪ್‌ನಲ್ಲಿ ಆಗಿರೋ ಬದಲಾವಣೆಗಳನ್ನ ನೋಡಿದರೇ ಮಾರ್ಕ್ಸ್ ಏನು ಹೇಳಿದರು ಅದೂ ಕೂಡ ನಿಜವಾಗಿಲ್ಲ. ಅಂದರೆ ಪ್ರಪಂಚದ ಕಾರ್ಮಿಕ ವರ್ಗವೆಲ್ಲಾ, ಬಡವರೆಲ್ಲಾ ಒಗ್ಗಟ್ಟಾಗಿ ಒಂದು ಕ್ರಾಂತಿ ಮಾಡಬೇಕಿತ್ತು ಅದು ಹೊರಟೋಗಿ ಪ್ರಪಂಚದ ಶ್ರೀಮಂತರೆಲ್ಲಾ ಒಗ್ಗಟ್ಟಾಗಿದ್ದಾರೆ. The World People Organisation, World Trade Organisation; So World Trade Organisation ನ ಒಂದು ಅಂತಿಮ ಆಶಯವೇನೆಂದರೇ ಬಂಡವಾಳಶಾಹಿ ಶಕ್ತಿಗಳು ಮಾರುಕಟ್ಟೆಯ ಮೇಲೆ ಹಿಡಿತ ಸಾಧಿಸುವುದು, ಅದನ್ನು ಮಾಡಿ ಬಿಟ್ಟಿದ್ದಾವೆ.

**ಬ: ಈಗ ಎಲ್.ಪಿ.ಜಿ. ಅಂತಾ ಏನೋ ಕರೀತಾರೆ ಗ್ಲೋಬಾಲೈಜೆಷನ್, ಪ್ರೈವೇಟೈಜೇಷನ್ ಅಂತಾ ಏನ್ ಹೇಳ್ತಾರೆ, ಇದು ಹಿಂದುಳಿದವರ ದೃಷ್ಟಿಯಲ್ಲಿ ಮಾರಕ ಅಂತಿರೋ ಅಥವಾ ಪೂರಕ ಅಂತಾ ಕರೀತೀರೋ?**

**ರಾ:** ಇದು ಮಾರಕ ಪೂರಕ ಅನ್ನೋ ಪ್ರಶ್ನೆ ದಾಟಿ ಹೊರಟೋಗಿಬಿಟ್ಟಿದೆ. ಯಾಕೆಂದರೆ, ಹಿಂದುಳಿದ ವರ್ಗದಲ್ಲಿ ಯಾವ ಶ್ರೀಮಂತವರ್ಗ ಇದೆಯೋ ಅವರಿಗೆ ಇದು ಪೂರಕ, ಯಾರು ಬಡವರಿದ್ದಾರೆ ಅವರಿಗೆ ಮಾರಕವಾದದ್ದು. ಆದ್ದರಿಂದ ಒಂದೇ ಜಾತಿಯೊಳಗಡೆ ಇರುವಂತಾ ವರ್ಗ ಏನಿದೆ ಬಡವ ಮತ್ತು ಶ್ರೀಮಂತ, ಶ್ರೀಮಂತನಾದವನು ಅದರ ಪರವಾಗಿರುತ್ತಾನೆ. ಹಾಗಾಗಿ ಹೋರಾಟ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಒಂದೇ ಜಾತಿಯೊಳಗಡೆ ಈ ದ್ವಂದ್ವ ಇದೆ. ಆದ್ದರಿಂದಲೇ ಒಂದೇ ಜಾತಿಯೊಳಗಡೇನೇ ಒಂದು ಸಾಂಸ್ಕೃತಿಕ ವೆಸ್ಟರ್ನೈಜೇಶನ್ ನಡೆದುಕೊಂಡು ಹೋಗ್ತಾ ಇದೆ. ನೀವು ನೋಡಿ, ಆಫೀಸರ್ ಅವರೂ ಇವರೂ ಎಲ್ಲಾ ಹಿಂದುಳಿದ ವರ್ಗದಿಂದ ಬಂದೋರು ಇದಾರಲ್ಲಾ, ಆವರು ಹೇಗೆ ಮೇಲಿನ ಸ್ತರಕ್ಕೆ ಬಂದಾಕ್ಷಣ ಹೇಗಾಗಿಬಿಡ್ತಾರೆ? ಪಾಶ್ಚಾತ್ಯೀಕರಣಗೊಂಡು ಬಿಡ್ತಾರೆ, ನಾವು ಇದನ್ನ ಭಾರತೀಯವಾಗಿ ಹೇಳೋದಾದ್ರೇ 'ಬ್ರಾಹ್ಮಣೀಕರಣ', 'ನವ ಬ್ರಾಹ್ಮಣೀಕರಣ' ಎನ್ನುತ್ತೇವೆ.

**ಬ: ಆರ್ಥಿಕ ಪ್ರಗತಿ ಜೋರಾಗಿ ನಡೀತಾ ಇದೆ, ಅಷ್ಟೇ ವೇಗದಲ್ಲಿ ಸಾಮಾಜಿಕ ಪ್ರಗತಿ ಹಿನ್ನಡೆ ಸಾಧಿಸ್ತಾ ಇದೆ ಅಂದ್ರೇ ಇದಕ್ಕೆ ಏನು ಕಾರಣ ಹೇಳ್ತೀರಾ?**

**ರಾ:** ಇದಕ್ಕೆ ಮುಖ್ಯವಾದ ಕಾರಣ ನನಗನ್ನಿಸೋದು, 'ಐ ಮೇ ಬಿ ರಾಂಗ್' 'ಐ ಡೋಂಟ್ ನೋ,' ವಿಸ್ಮೃತಿ ಉಂಟಾಗಿ ಬಿಟ್ಟಿದೆ, ಪ್ರತಿಯೊಂದರಲ್ಲೂ ಒಂದು ವಿಸ್ಮತಿ ನೆನಪುಗಳನ್ನೇ ಅಳಿಸಿಹಾಕಿಬಿಡುತ್ತೆ, ನೀನೆಲ್ಲಿಂದಾ ಬಂದೀ, ಯಾಕ್ ಬಂದೀ, ಯಾಕ್ ಓದಿದೀ ಈ ನೆನಪುಗಳನ್ನೇ ಅಳಿಸಿ ಬಿಟ್ಟು ನಿಮಗೆ ಒಂದು ಹ್ಯಾಂಗ್ ಓವರ್ ಆಗಿದೆ.

ಹಾಗಾಗಿಯೇ ಹೊಸ ಹೊಸ ಕಾರುಗಳು, ಹೊಸ ಹೊಸ ಮೋಟಾರ್ ಸೈಕಲ್‌ಗಳು, ಹೊಸ ಎಲೆಕ್ಟ್ರಾನಿಕ್ಸ್ ಕಮಾಡಿಟಿ, ಮಾರುಕಟ್ಟೆಯಲ್ಲಿ ರಾಶಿ ರಾಶಿ ಬಂದು ಬೀಳ್ತಾ ಇದೆ, ಕಂಪ್ಯೂಟರ್ಸ್, ನಮ್ಮ ಹುಡುಗರೆಲ್ಲಾ ಕಂಪ್ಯೂಟರ್ ಇಂಜಿನಿಯರ್ಸ್ ಆಗ್ಬೇಕು ಅಮೆರಿಕಾಗೆ ಹೋಗ್ಬೇಕು ಈ ಗುಂಗಿನಲ್ಲಿ ಯಾವ ವರ್ಗಗಳು ಅವಕಾಶದಿಂದ ಫಲಾನುಭವಿಗಳಾಗಿದ್ದಾರೆ, ಆ ವರ್ಗಗಳು

ಕೂಡ ಅದಕ್ಕೆ ಹೊರಟು ಹೋಗಿದ್ದಾರೆ. ಹೋರಾಟ ಮಾಡೋರು ಯಾರು? ಪಾಪ, ಹೊಟ್ಟೆಗಿಲ್ಲದವ, ಕೂಲಿ ಮಾಡುವವ ಅವನು ಹೋರಾಟ ಮಾಡ್ತಾನೋ? ಅವನ ಹೊಟ್ಟೆಪಾಡ ನೋಡ್ಕೋತಾನೋ, ಇದಕ್ಕಾಗಿ ಹೋರಾಡ್ತಾನೋ? ಮಾಡಬೇಕಾದವರು ನಾನು, ನೀವು ನಾವಿಲ್ಲಿ ಕೊಚ್ಕಂಡು ಹೊರಟು ಹೋಗ್ತಾ ಇದ್ದೀವಿ.

ಅಂದ್ರೇ ಈ ಹಿಂದುಳಿದವರೂ ಕೂಡ ಮೇಲಿನ ಸ್ತರದವರ ಜೊತೆ ಸೇರ್ಕೊಳ್ತಾ ಇರೋದ್ರಿಂದ, ಈ ಹಿಂದುಳಿದವರ ಸಂಘಟನೆಗಳು ಛಿದ್ರಗೊಳ್ತಾ ಇವೆ. 'ಲೀಡರ್‌ಶಿಪ್' ಇವತ್ತು ಮುಂದುವರಿದವರ ಕೈಲಿದೆ, ಕೆಳಸ್ತರದವರಲಿಲ್ಲ.

ಬ: 47ನೇ ಇಸವಿ ನಂತರದ ಭಾರತದಲ್ಲಿ ಬ್ರಾಹ್ಮಣರು ಮತ್ತು ಇತರ ಜಾತಿಯವರು ಒಂದು ಕಾಲದಲ್ಲಿ ಮುಂದುವರದಿದ್ರು ಮುಂದುವರೀತಾನೇ ಇದಾರೆ, ಆನಂತರದಲ್ಲಿ ಧಾರ್ಮಿಕ ವಲಯದಲ್ಲಿ ಕ್ರಿಶ್ಚಿಯನ್, ಮುಸ್ಲಿಂಮರು ಕೂಡ ಸಂಘಟನೆಗಳನ್ನು ಕಟ್ಟಿಕೊಂಡು ಮುಂದುವರಿಯೋದಿಕ್ಕೆ ದಾಪುಗಾಲು ಹಾಕ್ತಾ ಇದಾರೆ. ಹಾಗೆನೇ ದಲಿತರೂ ಕೂಡ, ಹೆಚ್ಚಿನ ಸಂಖ್ಯೆಯಲ್ಲಿರೋರು ಕೂಡ ಸಂಘಟನೆಗಳ ಮೂಲಕ ಮುಂದು ಮುಂದೆ ಹೋಗ್ತಾ ಇದ್ದಾರೆ. ಆದ್ರೂ ಕೂಡ ಈ ಹಿಂದುಳಿದ ಜಾತಿಯವರು ಯಾತಕ್ಕೆ ಒಗ್ಗಟ್ಟಾಗ್ತಾ ಇಲ್ಲಾ ?

ರಾ: ಹಿಂದುಳಿದವರ ಒಗ್ಗಟ್ಟಿಗೆ ಮುಖ್ಯವಾದ ಕಾರಣವೇ ಜಾತಿ, ಜಾತಿವ್ಯವಸ್ಥೆ. ಅಲ್ಲೇನೇ ನನಗೂ ಮತ್ತು ಹಾವನೂರ್‌ರವರಿಗೂ ಭಿನ್ನಾಭಿಪ್ರಾಯ ಇರೋದು, ಹಾವನೂರ್ ಏನ್ ಹೇಳ್ತಾರೆ ಅಂದ್ರೇ, ಜಾತಿ ಒಳಗಡೇನೇ ಸಮಾನತೆಯನ್ನು ತರಲಿಕ್ಕೆ ಪ್ರಯತ್ನಿಸಬೇಕೇ ಹೊರತು, ಜಾತಿ ರಹಿತ ಸಮಾಜ ಸಾಧ್ಯ ಇಲ್ಲಾ. ಜಾತಿಗಳಲ್ಲೊಂದು ಲೈನ್ ಇದೆ. ಒಂದು ಮಾನದಂಡ ಇದೆ. ಪ್ರತಿಯೊಬ್ಬರೂ ಅದಕ್ಕೆ ಬಂದು ಅಲ್ಲಿ ಸಮಾನತೆ ಬರಬೇಕು, ನಾನೇಳ್ತೀನೀ ಅಂದ್ರೇ ಎಲ್ಲವೂ ಒಂದು ಪಾಯಿಂಟ್‌ಗೆ ಬಂದ ಮೇಲೆ ಜಾತಿ ಹೋಗ್ಬೇಕು. ಅವರು ಹೇಳೊದು ಅದು ಆಗೋದಿಲ್ಲಾ ಅದು ಆಗಲೂ ಬಾರದು ಅಂತಾ.

ನಾನು ಸಾಕಷ್ಟು ಜನ ಹಿಂದುಳಿದ ನಾಯಕರ ಜೊತೆ ಚರ್ಚಿಸಿದ್ದೇನೆ. ಸಿದ್ಧರಾಮಯ್ಯ (ಮಾಜಿಮಂತ್ರಿ) ಮುಂತಾದವರ ಜೊತೆ ಕೂಡ. ಅವರವರ ಜಾತಿಯವರು ಅವರಿಗೆ ಪ್ರತಿಕ್ರಿಯಿಸುತ್ತಾರೇ ಹೊರತು ಬೇರೆಯವರು ಪ್ರತಿಕ್ರಿಯಿಸೋದಿಲ್ಲಾ. ಅಥವಾ ಅವರು ಮಾಡುವ ಅಪ್ರೋಚನಲ್ಲೇನೇ ಜಾತಿಗೆ ಮಾತ್ರ ಸೀಮಿತವಾದ ರೀತಿನಲ್ಲೇ ಇರಬೇಕು. ಅದರಿಂದ ಆಚೆಗೆ, ಅಂದ್ರೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷಗಳಿಂದ ಟಿಕೇಟ್ ಕೊಡುವುದು ಇರಬಹುದು, ಇನ್ನ್ಯಾವುದೇ ಇರಬಹುದು. ಅಲ್ಲಿ ನೋಡಿದಾಗ ಜಾತಿಯವರದೇ ಒತ್ತಡ, ಜಾತಿಯವರದೇ 'ಲೀಡರ್ ಶೀಪ್' ಇರುತ್ತದೆ. ಆದ್ರೆ ದೇವರಾಜ ಅರಸು ಮಾತ್ರ ಅದನ್ನ ಮೀರಲಿಕ್ಕೆ ಸಾಧ್ಯವಾಯ್ತು. ಅರಸು ಅವರದು ಮೈನಾರಿಟಿ ಜಾತಿ, ಆತನಿಗೆ ತನ್ನ ಸ್ವಂತ ಲಾಭ ಏನೂ ಇರಲಿಲ್ಲ ಆರ್ಥಿಕ ಅಥವಾ ಸಾಮಾಜಿಕ ಪ್ರಲೋಭನೇ ಏನೂ ಅವರಲ್ಲಿ ಇರಲಿಲ್ಲ. ತನ್ನ ಜನಾಂಗ ತಗೊಂಡೋಗ್ಬೇಕು ಅನ್ನೋತರದ್ದೇನೂ ಅರಸರಲ್ಲಿರಲಿಲ್ಲ. ಆತನಿಗೊಂದು 'ಪೊಲಿಟಿಕಲ್ ವಿಲ್' ಇತ್ತಷ್ಟೇ, ಅದನ್ನು ಹಿಂದುಳಿದ ವರ್ಗಗಳಿಗೆ ಬಳಸಿಕೊಂಡಿದ್ದರಿಂದ ಏನಾಯ್ತು. ಈ

ವರ್ಗಗಳು ಒಂದು ಕೇಂದ್ರದ ಕಡೆ ತುಡಿಯೋದಿಕ್ಕೆ ಸಾಧ್ಯವಾಯ್ತು. ದೇವರಾಜ ಅರಸು ಸತ್ತನಂತರ ಮತ್ತೆ ಅದು ಕೆಳಗೆ ಬೀಳ್ತು. ಆ ತರದ 'ಲೀಡರ್ ಶೀಪ್' ಇಂದು ಕರ್ನಾಟಕದಲ್ಲಿ ಇಲ್ಲ. ಯಾರಿದಾರೇ ಹೇಳು ? ಜಾತಿನಾಯಕರುಗಳಿದ್ದಾರೇ ಹೊರತು, ಹಿಂದುಳಿದ ವರ್ಗಗಳ ನಾಯಕ ಅಂತೇಳಿ ಗುರ್ತಿಸಬಹುದಾದವನು ಯಾರು ಇಲ್ಲ. ಈ ನಮ್ಮ ಸಿದ್ಧರಾಮಯ್ಯ ಇರಬಹುದು, ಇನ್ಯಾರೇ ಇರಬಹುದು. ಇವರ ಜೊತೆ ಪೂರ್ತಿ ಹಿಂದುಳಿದ ಜನ ಬಂದಿಲ್ಲಾ. ಆದ್ದರಿಂದ, ಸಾಮಾಜಿಕ ನ್ಯಾಯ ಅಂತಾ ಸಿದ್ಧಾಂತ ಇದೆಯಲ್ಲಾ ಅದನ್ನೇ ಕೇಂದ್ರವಾಗಿಟ್ಟುಕೊಂಡು, ಪ್ರತಿಯೊಂದು ಜಾತಿಗೂ ಸಾಮಾಜಿಕ ನ್ಯಾಯ ಬೇಕಲ್ವೇ, ಆದ್ದರಿಂದ ಪ್ರತಿಯೊಂದು ಜಾತಿಯೂ ಜಾತಿರಹಿತವಾಗಿ ತುಡಿಬೇಕು. ಜಾತಿಯನ್ನ, ಇಟ್ಕಂಡು ತುಡಿಯಾಕಾಗೋಲ್ಲಾ. ಬಸವಣ್ಣನವರ ಕಾಲದಲ್ಲಿ ಏನಾಯ್ತು. ಇವರು ಎಲ್ಲರಿಗೂ ಲಿಂಗಲಾಂಛನ ಮಾಡಿದ್ರು ಏಕೇ? ಸಮಾನತೆಗೋಸ್ಕರ, ಅದೊಂದು ಲಾಂಛನ ಗುರ್ತುಅಷ್ಟೇ. ಆಗೇನಾಯ್ತು ಲಿಂಗ ಲಾಂಛನ ಮಾಡಿಕೊಂಡೋರು ಕುರುಬರು, ಕುರುಬರಾಗೇ ಉಳಿದರು. ಕ್ಷೌರಿಕರು ಕ್ಷೌರಿಕರಾಗಿ ಉಳ್ಕೊಂಡ್ರು ಬಡಗಿ ಬಡಗಿ, ಕುಂಬಾರ ಕುಂಬಾರ ಹೀಗೆ ಎಲ್ಲರೂ ಹಾಗೆ ಉಳ್ಕೊಂಡ್ರು, ಕುಂಬಾರ ಲಿಂಗಾಯ್ತರೇ ಬೇರೆ, ಬಡಗಿ ಲಿಂಗಾಯ್ತರೇ ಬೇರೆ, ಹೀಗೆ ಬೇರೆ ಬೇರೆ ಹೊಸ ಜಾತಿಗಳಾಗಿ ಉಳ್ಕೊಂಡ್ರು. ಮರ್ಜ್ ಆಗಲೇ ಇಲ್ಲಾ.

ಕೊನೇ ಪಕ್ಷ ಅಂತರಜಾತಿ ಮದುವೆಗಳಿಗಾದರೂ ಹೆಚ್ಚಿನ ಆದ್ಯತೆ ಕೊಡಬೇಕು, ಅವುಗಳಿಂದ ಮಾತ್ರ ಸಾಧ್ಯ ಅಂತಾ ಲೋಹಿಯಾನು ಗುರುತಿಸಿದ್ದರು. ಗಾಂಧೀನೂ ಗುರ್ತಿಸಿದ್ದರು, ಅಂಬೇಡ್ಕರ್ ಇವರೆಲ್ಲಾ ಗುರ್ತಿಸಿದ್ದರು. ಟೈಂ ತೆಗೆದುಕೊಂಡರೂ ಪರವಾಗಿಲ್ಲ. ಈ ಅಂತರಜಾತಿ ವಿವಾಹಗಳು ನಡೀಬೇಕು ಆಗ ಮಾತ್ರ ಜಾತಿ ಅಂತರ ಕಮ್ಮಿ ಸಾಧ್ಯವಾಗುವುದು.

**ಬ: ಈ ಹಿಂದುಳಿದ ಜಾತಿಯವರನ್ನ ಒಂದೇ ಎಳೆಯಲ್ಲಿ ಪೋಣಿಸಿ ಒಗ್ಗೂಡಿಸಲಿಕ್ಕೆ ಈಗ ಕರ್ನಾಟಕದಲ್ಲಿ ಯಾರಾದರೂ ಸಮರ್ಥ ನಾಯಕರು ಇದ್ದಾರೆಯೇ?**

ರಾ: ಈಗ ಇದ್ದುದರಲ್ಲಿ ಸಿದ್ಧರಾಮಯ್ಯನಿಗೆ (ಮಾಜಿಮಂತ್ರಿ) ಆ ಕೆಪಾಸಿಟಿ ಇದೆ. ನಾನೂ ಹೇಳ್ತಾ ಇದ್ದೀನಿ, ಆದ್ರೇ ಆತ ಮಾಡ್ತಾ ಇಲ್ಲಾ. ಕುರುಬರು ನಮ್ಮ ಜಾತಿಯವನು ಅಂತಾ ನಿನ್ನನ್ನ ಬಿಟ್ಟು ಹೋಗೋದಿಲ್ಲಾ, ಆದ್ರೇ ನೀನು, ಕುರುಬರನ್ನು ಹೊರತು ಪಡಿಸಿದ ಹಿಂದುಳಿದ ಅಸಂಘಟಿತ ಜಾತಿಗಳಿವೆ. ಅವುಗಳನ್ನು ಗುರುತಿಸಿ; ಅಲ್ಲಿ ಹತ್ತುಹತ್ತು ಜನ ಹುಡುಗರನ್ನ ಗುರ್ತಿಸಿ, ಅವರನ್ನ ಒಂದೊಂದು ಜಿಲ್ಲೆಯಲ್ಲಿ ಒಂದು ಗುಂಪುಮಾಡಿ ರಾಜ್ಯದಲ್ಲಿ ಒಂದು ಒಕ್ಕೂಟ ಮಾಡಿ, ಹಿಂದುಳಿದವರ ಒಕ್ಕೂಟ, ಅದಕ್ಕೆ ಸಾಮೂಹಿಕ ನಾಯಕತ್ವ ಕ್ರಿಯೇಟ್ ಮಾಡಿ. ಒಬ್ಬನೇ ನಾಯಕ ಅಂತಾದರೇ ಕುರುಬರ ನಾಯಕ ನಾನೇಕೆ ಹೋಗೋಣ ಅನ್ನೊ ಮನೋಭಾವನೇ ಬರುತ್ತೆ. ಹಾಗಾಗಿ ಸಾಮೂಹಿಕ ನಾಯಕತ್ವ ನಿರ್ಮಾಣ ಮಾಡಬೇಕು ಎಲ್ಲಾ ಜಾತಿಯವರಲ್ಲೂ ಒಬ್ಬೊಬ್ಬ ನಾಯಕನನ್ನು ನೇಮಿಸಿ ಈಗಗಾಲೇ ಬಂದಿರುವ ಹಿಂದುಳಿದ ವರ್ಗಗಳ ಆಯೋಗಗಳ ವರದಿಯನ್ನು ಆಧಾರವಾಗಿಟ್ಟುಕೊಂಡು ಒಂದು ಕಾಮನ್ ಅಜೆಂಡಾ ಇಟ್ಕೊಂಡು ಕೆಲಸ ಮಾಡಬೇಕು.

**ಬ: ತಾವು ಹಿಂದುಳಿದವರು ಅಂತಾ ಗುರ್ತಿಸಲು ಯಾವುದನ್ನ ಮಾನದಂಡವಾಗಿ ಇಟ್ಟುಕೊಳ್ಳಲು ಬಯಸುತ್ತೀರಿ?**

ರಾ: ಮೊದಲನೆಯದಾಗಿ ಸಾಮಾಜಿಕ ಮಾನದಂಡವೇ, ಅಂದ್ರೇ ಜಾತಿಯನ್ನೇ ಆಧಾರವಾಗಿಟ್ಟುಕೊಳ್ಳಬೇಕಾಗುತ್ತವೆ. ಇಲ್ಲಿ ಬ್ರಾಹ್ಮಣನಿಗೂ ಅವಮಾನವಿದೆ, ಜಾತಿ ವ್ಯವಸ್ಥೆಯಲ್ಲಿ. ಕುಮಾರವ್ಯಾಸನ ಕಾಲದಲ್ಲಿಂದಲೂ ಬ್ರಾಹ್ಮಣರನ್ನು ಬಯ್ಯುತ್ತಾ ಬಂದಿದ್ದಾರೆ. ಭಾಷೆಯ ಒಳಗಡನೇ ಈ ಅವಮಾನ ಗರ್ಭೀಕೃತವಾಗಿಬಿಟ್ಟಿದೆ. ಈಗ ನಾವು ಮಾತಿನ ಮಧ್ಯೆ ಕ್ಷೌರಿಕನನ್ನ ಅವಮಾನಿಸುತ್ತೇವೆ.

**ಬ: ಹಾಗಾದರೆ ಜಾತಿ ಹೋಗಲ್ವ?**

ರಾ: ಹೊಗುತ್ತೇ ಆದರೆ, ಜಾತಿಯನ್ನ ತೊಡೆದುಹಾಕಲು ಬೇಕಾದ ಸಾಮೂಹಿಕ ಸಂಕಲ್ಪ ನಿರ್ಮಾಣವಾಗಬೇಕು ಅಷ್ಟೆ.

**ಬ: ಸಾಮೂಹಿಕ ಸಂಕಲ್ಪ ನಿರ್ಮಾಣವಾಗಬೇಕಾದರೆ ಹಾಕಿ ಕೊಳ್ಳಬೇಕಾದ ಕಾರ್ಯಕ್ರಮಗಳಾವುವು?**

ರಾ: ಕಾರ್ಯಕ್ರಮ ಅಂದರೆ, ಮೊದಲನೆಯದಾಗಿ ಶಿಕ್ಷಣ, ಉದ್ಯೋಗ, ರಾಜಕೀಯ ವ್ಯವಸ್ಥೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಭಾಗವಹಿಸುವಿಕೆಯಲ್ಲಿ ಈಕ್ವಲ್ ಪಾರ್ಟಿಸಿಪೇಶನ್ ಅಂಡ್ ಈಕ್ವಲ್ ಶೇರ್ ಇರುತ್ತದೆ. ಮತ್ತೆ ಕಲ್ಚರಲ್ ಚೇಂಜ್ ಅಂದ್ರೆ ಈ ಮದುವೆಗಳು ಇತ್ಯಾದಿ ಇಲ್ಲಿ ಇನ್ನೊಂದು ನೆನಪಿರಬೇಕು ಪ್ರತಿ ಜಾತಿಯೂ ತನ್ನದೇ ಆದ ಜಾನಪದ ಸಂಸ್ಕೃತಿಯನ್ನ ಹೊಂದಿರುತ್ತದೆ. ಇದನ್ನ ನಾವು ನಾಶಮಾಡಬೇಕಾದ ಅಗತ್ಯವೇನಿಲ್ಲ. ಆದ್ರೇ ಈ ದೇವರು, ದೇವಸ್ಥಾನ, ಮಠ, ಎಲ್ಲವೂ ಈ ಮಠಕ್ಕೆ ಬಂದಾಕ್ಷಣ ಜಾತಿ ಜಾಗೃತವಾಗ್ತದೆ. ಜಾತಿ ತನ್ನ ಚಲನಾ ಶಕ್ತಿಯನ್ನು ಕಳೆದುಕೊಳ್ಳುತ್ತದೆ.

**ಬ: ಶೋಷಿತರು ಶೋಷಣೆಯ ಹೆಸರಲ್ಲಿ ಮಠ ಕಟ್ಟಿಕೊಳ್ಳುತ್ತಿದ್ದಾರಲ್ಲಾ ಇದು ಹೇಗೆ?**

**ರಾ:** ಅದು ಕೌಂಟರ್ ರೆವಲ್ಯೂಷನ್, ನನ್ನ ಪ್ರಕಾರ ಈಗೆ ಹಿಂದುಳಿದ ಜಾತಿಗಳು, ಉದಾ. ಕುರುಬರು, ಕನಕದಾಸರ ಹೆಸರಲ್ಲಿ ಮಠ ಕಟ್ಟಿಕೊಂಡಿದ್ದಾರೆ. ಅವರೀಗ ಬ್ಯಾಕ್‌ವರ್ಡ್ ಕ್ಲಾಸ್‌ನ ಮೂವ್‌ಮೆಂಟ್‌ನಲ್ಲಿ ಭಾಗವಹಿಸುವ ನೈತಿಕ ಹಕ್ಕುಗಳನ್ನೇ ಕಳೆಕೊಂಡು ಬಿಟ್ಟಿದಾರೆ. ಈ ಪೇಜಾವರ ಸ್ವಾಮಿಗಳೇನಿದಾರೇ ಇವರು ಬೇರೆಯವರನ್ನ ಇವರ ವಿರುದ್ಧ ಎತ್ತಿ ಕಟ್ಟುವುದಕೋಸ್ಕರ, ಅಲ್ಲಿ ಕನಕನ ಪೀಠಸ್ಥಾಪನೆ ಮಾಡುತ್ತೇನೆ ಎಂದೇಳಿ ಅವನಿಗೊಂದು ಕುರ್ಚಿಹಾಕಿ ಗೌರವಕೊಟ್ಟಂಗೆ ಮಾಡಿದ್ದಾನೆ.

**ಬ: ಜಾತಿ ವಿನಾಶಕ್ಕೆ ಹೋದ್ರೇ, ಬದುಕಿನ ಜೊತೆಗೆ ಧರ್ಮ ಅನ್ನೋದು ತಳಕು ಹಾಕಿಕೊಂಡಿದೆ, ಇದಕ್ಕೇನು ಹೇಳ್ತೀರಾ?**

ರಾ: ಒಂದು ಕಡೆ ಧಾರ್ಮಿಕ ವ್ಯವಸ್ಥೆ ಪರ್ಯಾಯ ರೂಪಿಸಬೇಕು, ಧರ್ಮವೇ ಇಲ್ಲಾ ಅಂದ್ರೇ ಜನ ಗಾಬರಿಗೊಳ್ತಾರೆ. ಅವರು ಅದನ್ನ ಬಿಟ್ಟು ಬರಲಿಕ್ಕೆ ತಯಾರಿಲ್ಲ. ದೇವರೇ ಇಲ್ಲ, ಧರ್ಮಾನೂ ಇಲ್ಲ ಅಂದ್ರೆ ಕಷ್ಟ, ಹಾಗಾಗಿ ಇವುಗಳಿಗೆ ಪರ್ಯಾಯಗಳನ್ನು ನಾವು ಯೋಚ್ನೆ

ಮಾಡಬೇಕು. ನನಗನ್ನಿಸೋದು ಬುದ್ಧ, ಬಸವಣ್ಣ ಇವರನ್ನ ಮತ್ತೇ ಹೆಚ್ಚಾಗಿ ರಿವೈಸ್ ಮಾಡಬೇಕು. ಅವರ ಐಡೆಂಟಿಟಿನಲ್ಲಿ, ನಿನಗೆ ಬೇಕೆನಪ್ಪ ಬಸವಣ್ಣನ ಮಾಡಿಕೋ, ಬುದ್ಧನ ಮಾಡಿಕೋ, ಗಾಂಧಿನ ಮಾಡಿಕೋ ಅಂಬೇಡ್ಕರ್ ಮಾಡಿಕೋ, ನೀನು ಈ ದೇವರಗಳನ್ನೆಲ್ಲಾ ಬಿಟ್ಟಾಕು ಅಂತ ಹೇಳ ಬೇಕಾಗುತ್ತೆ.

**ಬ: ಅಂಬೇಡ್ಕರ್ ಅವರು ಜನರಿಗೆ ಧರ್ಮದ ಆವಶ್ಯಕತೆ ಇದೆ ಎಂದಿದ್ದಾರಲ್ಲಾ?**

ರಾ: ಹೌದು, ಸಾಮಾನ್ಯ ಮನುಷ್ಯನ ದೃಷ್ಟಿಯಲ್ಲಿ ದೇವರು ಧರ್ಮದ ಅಗತ್ಯವನ್ನು ಅದರ ಆವಶ್ಯಕತೆಯನ್ನು ಅವರು ಗುರ್ತಿಸಿದರು. ವಿದ್ಯಾವಂತರಾದವರು ತಮ್ಮ ಬಿಡುವಿನ ವೇಳೆಯನ್ನ ಪುಸ್ತಕ ಓದುವ ಅಥವ ಇತರ ಕೆಲಸಗಳಲ್ಲಿ ತನ್ನ ಮನಸ್ಸನ್ನು ಕೇಂದ್ರೀಕರಿಸಬಯಸಿದರೆ, ಈ ಸಾಮಾನ್ಯ ಮನುಷ್ಯ ತನ್ನ ಮಕ್ಕಳು ಹೆಂಡ್ತಿರೊಂದಿಗೆ ದೇವರನ್ನ ಹುಡ್ಕೊಂಡು ಧರ್ಮಸ್ಥಳ, ತಿರುಪತಿ ಹೀಗೆ ಹೋಗ ಬೇಕಾಗುತ್ತೆ. ಇಂತವರಿಗೆ ದೇವರೇ ಇಲ್ಲಾ ಅಂದ್ರೇ ಅವನು ಹುಚ್ಚು ಹಿಡ್ಕೊಂಡು ಅಳಲಿಕ್ಕೆ ಪ್ರಾರಂಭಿಸುತ್ತಾನೆ.

ನಾನೊಂದು ಸಂದರ್ಭದಲ್ಲಿ ನೋಡಿದ್ದೆ ಸಾಯಿಬಾಬನ ಪವಾಡದ ಮಾಯಾಜಾಲ ಬಯಲುಗೊಳಿಸಿದಾಗ ಬಂದಿದ್ದ ಹೆಂಗಸ್ರೆಲ್ಲಾ ಗೊಳೋ ಅಂತಾ ಅಳಲಿಕ್ಕೆ ಪ್ರಾರಂಭಿಸಿದರು. ಏನಪ್ಪಾ ದೇವರಿಂದ ಮನಃ ಶಾಂತಿ ಸಿಕ್ತಾ ಇತ್ತು. ಈಗ ಅದು ಇಲ್ಲಾ ಅಂತೇಳಿ ಅಳದನ್ನ ಕಂಡ ನಮಗೆ ನಮ್ಮಿಂದ ಏನಾದ್ರೂ ತಪ್ಪಾಯಿತೇ ಅಂತಾ ಹೆದರಿಕೊಳ್ಳುವಂತಾ ಸಂದರ್ಭವಿತ್ತು. ಅಂದ್ರೇ ಅಂಬೇಡ್ಕರ್ ಧರ್ಮ ಅನ್ನೋದಕ್ಕೆ ನೀಡಿರುವ ವಿವರಣೆಯೆ ಬೇರೆ, 'ಮಾನಸಿಕವಾಗಿ' ಧರ್ಮ ಒಂದು ಆಂತರಿಕ ತುಡಿತವಷ್ಟೇ "ಧರ್ಮ ಈಸ್ ಎನ್ ಇನ್‌ಟ್ರಾಕ್ಷನ್", ಹಾಗೇ ಬೌದ್ಧರಲ್ಲಿ ಬುದ್ಧ ಎಲ್ಲೂ ದೇವರು ಅಂತೇಳಿಲ್ಲಾ.

**ಬ: ಸಾರ್, ಶಿವಮೊಗ್ಗ ಅನೇಕ ಚಳವಳಿಗಳ ತವರೂರು ಅಂತಾ ನಿಮಗೂ ಗೊತ್ತು. ಸಮಾಜವಾದಿ ಚಳವಳಿ ಬಂತು, ನಂತರದಲ್ಲಿ ದಲಿತ ಸಂಘ ಚಳವಳಿ ಬಂತು, ಆನಂತರದಲ್ಲಿ ರೈತ ಸಂಘ ಚಳವಳಿ ಬಂತು. ಅದೇ ನಿಟ್ಟಿನಲ್ಲಿ ಈಗ ಬಹುಮತ ಸಂಘಟನೇ ಅಂತಾ ಪ್ರಾರಂಭವಾಗಿ ಅದು ಚಳವಳಿಯನ್ನ ರೂಪಿಸ್ತಾ ಇದೆ. ಇದು ಯಾವ ಮಟ್ಟದಲ್ಲಿ ಜನಗಳ ಮೇಲೆ ಪ್ರಭಾವ ಬೀರಿದೆ ಅಂತಾ ತಮ್ಮ ಅನಿಸಿಕೆ? ರಾಜ್ಯದಲ್ಲಿ ಮತ್ತು ಶಿವಮೊಗ್ಗದ ಸುತ್ತು ಮುತ್ತಾ ಇದು ಏನ್ ಪ್ರಭಾವ ಬೀರಿದೆ ಅಂತೀರಾ?**

ರಾ: ಶಿವಮೊಗ್ಗ "ಒಂದು ಕಾಲದಲ್ಲಿ ಎಲ್ಲಾ ಹೋರಾಟಗಳ ಮಾತೃಭೂಮಿಯಂತಿತ್ತು". ನಾವೆಲ್ಲಾ ಪ್ರಭಾವಿತರಾಗಿರೋದು ಈ ಜಾಗದಲ್ಲಿನೇ, ಆದ್ರೇ, ಮತ್ತೆ ಇಲ್ಲಿ ಪುರೋಹಿತಶಾಹಿ ಶಕ್ತಿಗಳು ಬಹಳ ಜಾಗೃತವಾಗಿವೆ. ಅವು ಅಧಿಕಾರವನ್ನ ಹಿಡ್ಕಂಡ್ ಕೂತಿದಾವೆ, ಆದರೆ ನೈಜವಾಗಿ ಶಿವಮೊಗ್ಗದಲ್ಲಿ ಹಿಂದುಳಿದ ವರ್ಗಗಳೇ ಹೆಚ್ಚಾಗಿರೋದು. ಆದ್ರೇ ಈ ಹಿಂದುಳಿದವರನ್ನ ಪುರೋಹಿತಶಾಹಿ ಹೊಡ್ಕೊಂಡು ಬಿಟ್ಟಿದೆ. ಶಿಕಾರಿಪುರ, ಶಿವಮೊಗ್ಗ, ಸೊರಬ ಈ ಸ್ಥಳಗಳಲ್ಲಿ ಹೆಚ್ಚಾಗಿ ಬ್ಯಾಕ್‌ವರ್ಡ್‌ಕ್ಲಾಸ್ ಪೀಪಲ್ಸ್ ಇದ್ದಾರೆ. ಆದ್ರೇ ಈ ಬಿ.ಜೆ.ಪಿ. ತರದವರು, ಆರ್.ಎಸ್.ಎಸ್. ನಲ್ಲಿ ಅಂದ್ರೇ ಈಶ್ವರಪ್ಪ, ಯಡಿಯೂರಪ್ಪ ಇವರೆಲ್ಲಾ ಹಿಂದುಳಿದ

ವರ್ಗದಿಂದ ಬಂದವರೇ, ಇವರನ್ನ ಹಿಡ್ಕೊಂಡ್ರೆ ನಾವು ರಾಜಕೀಯ ಮಾಡಬಹುದೆಂದು ಯೋಚ್ನೆ ಮಾಡಿದರು, ಮತ್ತು ಪ್ರಗತಿಪರವಾಗಿ ಯೋಚನೆ ಮಾಡುವಂತ ವ್ಯಕ್ತಿಗಳು ಅಂದ್ರೇ ಈ ನಮ್ಮ ಜೆ.ಎಚ್. ಪಟೇಲ್‌ರಂತವರು ಎಲ್ಲಾ ಪರಿವರ್ತನೆ ಆಗಿ, ಅವರಿಗೆ ಬೇಕಾದ ರೀತಿಯಲ್ಲಿ ಸಮಯಸಾಧಕ ರಾಜಕಾರಣ ಮಾಡಿದರ ಪರಿಣಾಮ ಏನಾಯ್ತು, ಹಾವು ಹೊಡೆದು ಹದ್ದಿಗೆ ಹಾಕಿದಂತಾಯ್ತು.

ಒಂದು ಕಾಲದಲ್ಲಿ ಸಮಾಜವಾದಿ ಶಕ್ತಿ ಎಷ್ಟು ಜೀವಂತವಾಗಿತ್ತು ಇಲ್ಲಿ. ಆದ್ದರಿಂದ ಈ ಹಿನ್ನಲೆಯಲ್ಲಿ ಈ ಸಂಘಟನೆ ಪ್ರಾರಂಭವಾದಾಗ ಅಂದರೆ ಬಹುಮತ ಸಂಘಟನೆಯನ್ನ ಹಾಲಪ್ಪ ಪ್ರಾರಂಭ ಮಾಡಿದಾಗ ನಾನೂನು ಬಂದಿದ್ದೆ. ಆದರೆ ಈ ಬಹುಮತ ಸಂಘಟನೆ ಒಂದು ಹೋರಾಟದ ರೂಪದಲ್ಲಿಲ್ಲ. ಇದು ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಬೌದ್ಧಿಕವಾಗಿ ಆಲೋಚನೆ ಮಾಡುವಂತಹ ಒಂದು ಶಕ್ತಿತಂದುಕೊಡೋ ಒಂದು ಫೋರಂ ಆಗಿ ಕೆಲಸ ಮಾಡ್ತಾ ಇದೆ. ಇವರ ಪತ್ರಿಕೆ ಮೂಲಕ, ಸೆಮಿನಾರ್‌ಗಳ ಮೂಲಕ ಆಲೋಚನೆ ಮಾಡೋ ಶಕ್ತಿ ಕೊಡ್ತಾ ಇದೆಯೆ ಹೊರತು, ಅದಕ್ಕೆ ಹೋರಾಟ ಮಾಡುವಂತಾ ಶಕ್ತಿ ಇನ್ನೂ ಬಂದಿಲ್ಲಾ. ಈ ಶಕ್ತಿ ಬರಬೇಕಾದರೆ ಬೌದ್ಧಿಕ ಕ್ರಿಯಾಶೀಲತೆ ಬೇಕು. ಬೌದ್ಧಿಕತೆ ಬೇರೆ, ಬೌದ್ಧಿಕ ಕ್ರಿಯಶೀಲತೆ ಬೇರೆ.

**ಬ: ಬಹುಮತ ಸಂಘಟನೆ ಹೋರಾಟದ ಸಂಘರ್ಷಣೆಯಾಗಿ ರೂಪಗೊಳ್ಳಬೇಕಾದರೆ ಬೌದ್ಧಿಕ ತಯಾರಿ ಮೊದಲ ಹಂತ. ಕ್ರಿಯಾಶೀಲತೆಯ ಚಾಲನೆ ಎರಡನೇ ಹಂತ. ಈ ಎರಡೂ ಏಕ ಕಾಲದಲ್ಲಿ ನಡೀತಾ ಇದೆಯಲ್ಲ?**

ರಾ: ಹೌದು ಎರಡೂ ಬೇಕು.

**ಬ: ಒಂದು ನಿಟ್ಟಿನಲ್ಲಿ ಈ ಬಹುಮತ ಸಂಘಟಕರು ಜಾತಿ ಆಧಾರಿತ ಜನಗಣತಿಬೇಕೆಂದು ಹೋರಾಟ ಮಾಡಿದರು. ಇದು ಕ್ರಿಯಾಶೀಲತ ಅಲ್ಲವೆ?**

ರಾ: ಈ ವಿಚಾರ ಅಂದರೆ ಬಹುಮತ ಸಂಘಟನೆ ಎತ್ತಿದ ವಿಚಾರ. ಆಲ್ ಇಂಡಿಯಾ ಲೆವೆಲ್‌ನಲ್ಲೇ ಫೋಕಸ್ ಆಯ್ತು, ಆಮೇಲೆ. ನಾನು ರವಿವರ್ಮಕುಮಾರ್ ಹತ್ತಿರ ಈ ಬಗ್ಗೆ ಮಾತಾಡಿದೆ, ಮೈಸೂರಿನಲ್ಲೂ ಈ ವಿಚಾರವಾಗಿ ಸೆಮಿನಾರ್ ಆಯ್ತು ಆಗ್ಬೇಕೇ, ಬೇಡ್ವೇ ಅಂತಾ. ಇನ್ಸಿಟಿಟ್ಯೂಟ್ ಆಫ್ ಸೋಶಿಯಲ್ ಚೇಂಜ್ ಅಂತಾ ಮದ್ರಾಸ್‌ನಲ್ಲಿದೆ. ಇದು ಅಲ್ಲಿನ ಒಂದು ಆರ್ಗ್‌ನೈಜೇಶನ್. ನಮ್ಮ ಸ್ನೇಹಿತರೇ ಅದಕ್ಕೆ ಡೈರಕ್ಟರ್ ಆಗಿದ್ದಾರೆ ನಟರಾಜ್ ಅಂತ. ಬ್ರಾಹ್ಮಿನ್ ಓರಿಯಂಟೆಡ್ ಅದು. ಅವರು ಇದನ್ನ ಸೆನ್ಸಸ್‌ನವರ ಮೇಲೆ ಹಾಕಿದರು. ಸೆನ್ಸಸ್ ಆಫೀಸರ್ಸ್ ಮತ್ತು ಕೆಲವು ಬುದ್ಧಿಜೀವಿಗಳು ಸೆಮಿನಾರ್ ಮಾಡಿದರು. ಅಲ್ಲಿಗೆ ನಾವು ಹೋಗಿದ್ದೆವು. ಅದನ್ನ ಗಮನಿಸಿದಾಗ ಅದು ಆಗದ ಹಾಗೆ ಲಾಬಿ ನಡೀತಾ ಇದೆ. ಹಾಗಾಗಿ ಅದು ಸಾಧ್ಯವಾಗದೇ ಹೋಯಿತು. ತಮಾಷೆ ಅಂದ್ರೆ ಜಾತಿ ಆಧಾರಿತ ಜನಗಣತಿ ಮಾಡಬಾರದು ಅನ್ನೋದನ್ನ ಹೇಳೋದಕ್ಕೇನೆ ಈ ಸೆಮಿನಾರ್ ಮಾಡಿದ್ದು. ಅಲ್ಲಿ ಬೇಕೆ ಬೇಡವೆ ಅನ್ನೋ ಪ್ರಶ್ನೆ ಚಿಹ್ನೆ ಇಟ್ಟುಕೊಂಡು ಸೆಮಿನಾರ್ ನಡೆಸಿದರು. ಇಲ್ಲಿ ಏನು ಸಮಸ್ಯೆ ಇದೆ ಅಂದ್ರೇ

ಚುನಾವಣೆ ಸಂದರ್ಭದಲ್ಲಿ ದಲಿತ ಚಳವಳಿ ನ್ಯಾಯಬದ್ಧ ಚುನಾವಣೆ ನಡೆಯುವಂತೆ ಅಕ್ರಮಗಳನ್ನು ತಡೆಯಲು ಕಾವಲು ಪಡೆಯಾಗಿ ಕೆಲಸ ಮಾಡಬೇಕು. ಅಧಿಕೃತವಾಗಿ ತಾನು ತಟಸ್ಥವಾಗಿದ್ದು ಜನರಿಗೆ ರಾಜಕೀಯ ವಿವೇಕಕ್ಕೆ ಅನುಸಾರವಾಗಿ ಮತ ಚಲಾಯಿಸುವ ಸ್ವಾತಂತ್ರ್ಯವನ್ನು ಯಥಾವತ್ತಾಗಿ ಬಿಟ್ಟು ಬಿಡಬೇಕು. ಚುನಾವಣೆಯ ಪೂರ್ವದಲ್ಲಿ ರಾಜಕೀಯ ಪ್ರಜ್ಞೆ ರೂಪಿಸುವ ಕಾರ್ಯವನ್ನು ವಿವೇಚನೆಯಿಂದ ಮಾಡಬೇಕು.

*** ದಲಿತ ಚಳವಳಿ ಸಂಪೂರ್ಣವಾಗಿ ಅಂಬೇಡ್ಕರ್ ವಾದದ ನೆಲೆಗಟ್ಟಿನ ಮೇಲೆ ನಿಲ್ಲಬೇಕು ಎಂಬ ವಾದಗಳಿವೆ. ಹಾಗೆಯೇ ಗಾಂಧಿ-ಲೋಹಿಯಾ ವಿಚಾರಧಾರೆಗಳೂ ಮಿಳಿತಗೊಳ್ಳಬೇಕು ಎಂಬ ಅಭಿಪ್ರಾಯಗಳಿವೆ. ನಿಮಗೆ ಏನನ್ನಿಸುತ್ತದೆ?**

ಡಾ.ಅಂಬೇಡ್ಕರ್ ಚಿಂತನೆಯೇ ದಲಿತ ಚಳವಳಿಯ ಮುಖ್ಯ ಕೇಂದ್ರವಾಗಿತ್ತು. ಅಂಬೇಡ್ಕರರ 'ಸಾಮಾಜಿಕ ನ್ಯಾಯ ಸಿದ್ಧಾಂತ', ವಿಚಾರವಾದ, ಜಾತಿ ವಿನಾಶ ಮತ್ತು ಮಾನವತಾವಾದ, ಪ್ರಜಾಪ್ರಭುತ್ವ ಮತ್ತು ಅಹಿಂಸೆಯನ್ನು ದಲಿತ ಚಳವಳಿ ಸೈದ್ಧಾಂತಿಕವಾಗಿ ಸ್ವೀಕರಿಸಿತ್ತು. ಆದರೆ ಕಾಲಕ್ರಮೇಣ ಜಾತಿವಿನಾಶ, ವಿಚಾರವಾದ ಮತ್ತು ಮಾನವತಾ ಕಾಳಜಿಗಳು ತಮ್ಮ ಆದ್ಯತೆಯನ್ನು ಕಳೆದುಕೊಳ್ಳುತ್ತಾ ಚಳವಳಿಯ ಸೈದ್ಧಾಂತಿಕ ನೆಲೆಗಳಲ್ಲಿ ಅಸಮತೋಲನ ವ್ಯಕ್ತವಾಯಿತು.

ಡಾ. ಅಂಬೇಡ್ಕರ್ ವಿಚಾರಧಾರೆಯ ಜೊತೆಯಲ್ಲಿ ಬುದ್ಧ, ಬಸವ, ಗಾಂಧಿ, ಲೋಹಿಯಾ, ಪೆರಿಯಾರ್ ಅವರ ಚಿಂತನೆಗಳನ್ನು ಬೆಸೆಯಬಹುದು. ಇದು ದಲಿತ ಚಳವಳಿಯ ಪರಿಭಾಷೆಯನ್ನು ಬದಲಾಯಿಸಲು ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸಲು ತಾತ್ವಿಕ ನೆಲೆಯಾಗುತ್ತದೆ. ಈ ರೀತಿ ಬೆಸೆಯುವಿಕೆಯಿಂದಲೇ ದಲಿತ ಚಳವಳಿಯ ಮರುಹುಟ್ಟಿಗೆ ನವೀನ ರೂಪ ಪ್ರಾಪ್ತವಾಗುತ್ತದೆ.

*** ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದ ಅಥವಾ ಇನ್ನಾವುದೋ ಕಾರಣಗಳಿಂದ ಚಳವಳಿಯ ನಾಯಕರು ಭಿನ್ನ ನೆಲೆಗಳಲ್ಲಿ ಸರಿದು ನಿಂತಿದ್ದಾರೆ. ಅವರನ್ನು ಒಂದೇ ವೇದಿಕೆಗೆ ತರುವ, ಕನಿಷ್ಠ ಪಕ್ಷ ವಿಷಯಾಧಾರಿತ ಒಗ್ಗೂಡುವಿಕೆಗೆ ಸಹಮತ ವ್ಯಕ್ತಪಡಿಸುವಂತೆ ನೋಡಿಕೊಳ್ಳುವ ಕೆಲಸ ಸಾಧ್ಯವಿಲ್ಲವೇ?**

ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಗಿಂತ ವೈಯಕ್ತಿಕ ಭಿನ್ನಾಭಿಪ್ರಾಯಗಳೇ ಹೆಚ್ಚಿರುವುದನ್ನು ನಾನು ಗಮನಿಸಿದ್ದೇನೆ. ಈಗ ವಿಘಟಿತವಾಗಿರುವ ದಲಿತ ಚಳವಳಿಯನ್ನು ಯಥಾವತ್ತಾಗಿ ಒಂದುಗೂಡಿಸಲು ಹೋದರೆ ಅದಕ್ಕೆ ಹಳೆಯ ನೆನಪುಗಳ ಕಾಟ ಪ್ರಾರಂಭವಾಗುತ್ತದೆ. ಈಗಿರುವ ಒಡೆದ ಕನ್ನಡಿಯನ್ನು ಮತ್ತೆ ಜೋಡಿಸಿದರೂ ಭಗ್ನರೂಪವೇ ಕಾಣುತ್ತದೆ.

ದಲಿತ ಚಳವಳಿಯ ಭಿನ್ನ ನೆಲೆಗಳನ್ನು ವಿಸರ್ಜಿಸಿ, ಶೋಷಿತ ವರ್ಗದ ಅಂತ್ಯೋದಯ ಚಳವಳಿಯನ್ನಾಗಿ ರೂಪಾಂತರ ಮಾಡಬೇಕೆನ್ನುವುದು ನನ್ನ ಅಭಿಮತ. ಇಂತಹ ಮಹತ್ವಾಕಾಂಕ್ಷೆಯ ಕ್ರಿಯೆಗಾಗಿ ವರ್ತಮಾನದ ಅಪೇಕ್ಷೆಯೊಂದು ಕಾಯುತ್ತಿದೆ. ಅದಕ್ಕೆ ಅನುಗುಣವಾಗಿ ಸ್ಪಂದಿಸುವುದು ದಲಿತ ಚಳವಳಿಗಾರರ ಜವಾಬ್ದಾರಿಯಾಗಿದೆ.

**('ದಲಿತ ಚಳವಳಿಯ ನಾಳೆಗಳು' ಕೃತಿಯಿಂದ)**

# ದಾರಿ ತಪ್ಪುತ್ತಿರುವ ಸಾಮಾಜಿಕ ನ್ಯಾಯ ಆಂದೋಲನ

ವಿಚಾರವಾದಿ ಎಂದೇ ಹೆಸರು ಪಡೆದಿರುವ ಪ್ರೊ.ಕೆ.ರಾಮದಾಸ್ ಅವರು ಬಹುಮತ ಸಂಘಟನೆಯ ಆರಂಭದ ಉದ್ಘಾಟಕರು, ಹಾಗೂ ಪುರೋಹಿತಶಾಹಿಗಳ ಜುಟ್ಟು, ಜನಿವಾರಗಳ ವಿವಾದದಲ್ಲಿ ಕರ್ನಾಟಕದಲ್ಲಿ ಖ್ಯಾತಿ ಪಡೆದವರು. ಅವರೊಂದಿಗೆ 'ಬಹುಮತ' ಪತ್ರಿಕೆ ನಡೆಸಿದ ಮಾತುಕತೆಯ ಸಾರಂಶ ಈ ಸಂದರ್ಶನ.

**ಬಹುಮತ : ತ್ವರಿತಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚದ ಇಂದಿನ ದಿನಗಳಲ್ಲಿ ಹಿಂದುಳಿದವರೂ ಸಹ ಯಾವ ವೇಗದಲ್ಲಿ ಬದಲಾವಣೆಯಾಗಬೇಕು ಅಂತ ಬಯಸ್ತೀರಾ? ಮತ್ತು ಬದಲಾವಣೆಯ ಸ್ವರೂಪದ ಬಗ್ಗೆ ಸ್ವಲ್ಪ ಹೇಳ್ತೀರಾ.**

**ಪ್ರೊ. ಕೆ. ರಾಮದಾಸ್ :** ಪ್ರಪಂಚದಲ್ಲಿ ಇವಾಗ ಆಗ್ತಾ ಇರೋ ಬದಲಾವಣೆ, ಆರ್ಥಿಕ ಬದಲಾವಣೆ, ಮಾರುಕಟ್ಟೆಯ ಬದಲಾವಣೆ ಅಷ್ಟೇ ಆದ್ರೇ. ಸಾಮಾಜಿಕ ವಿದ್ಯಮಾನಗಳಲ್ಲಿ ಯಾವ ಪ್ರಮಾಣದ ಗತಿ ಇರಬೇಕಾಗಿತ್ತೋ, ಅದರ ತೀವ್ರತೆ ಕಡಿಮೆಯಾಗ್ತಾ ಹೋಗ್ತಾ ಇದೆ. ಅಷ್ಟೆ ಅಲ್ಲದೇ ಒಂದು ಕೇಂದ್ರದ ಕಡೆ ತುಡಿಯಬೇಕಾದ ಸಮಾಜ ಇವತ್ತು ವಿಘಟಿತವಾಗಿ ಮತ್ತು ಜಾತಿ ಕೇಂದ್ರಿತ ತುಡಿತಕ್ಕೂ ಒಳಗಾಗುತ್ತಿದೆ. ಇದು ನನ್ನ ದೃಷ್ಟಿಯಲ್ಲಿ ಒಂದು "ಕೌಂಟರ್ ರೆವಲ್ಯೂಷನ್". ಅಂದ್ರೇ ಒಂದು 'ಪ್ರತಿ ಕ್ರಾಂತಿ'. ನಾವು ಯಾವುದನ್ನ ಕ್ರಾಂತಿ ಅಂತಾ ಬಯಸಿದ್ದೆವೋ. ಅದಕ್ಕೆ ತದ್ವಿರುದ್ಧವಾದ ಒಂದು ಪ್ರತಿಕ್ರಾಂತಿ ಸೋಶಿಯಲ್ ಸೆಕ್ಟಾರ್‌ನಲ್ಲಿ ಆಗ್ತಾ ಇದೆ. ಆರ್ಥಿಕವಾಗಿ ಬದಲಾವಣೆಯಲ್ಲಿ ಕೆಳಸ್ತರದಲ್ಲಿರುವಂತಹ ಶೋಷಿತ ವರ್ಗಕ್ಕೆ ಯಾವ ತೆರನಾದ ಪ್ರಯೋಜನ ಆಗ್ತಾ ಇಲ್ಲಾ. ಮೇಲ್ವರ್ಗದ ಜನಗಳಿಗೆ ಒಂದು ಬಹಳ ಅತಿ ಆಕರ್ಷಕವಾದ ಮಾರುಕಟ್ಟೆ, ನಿರ್ಮಾಣವಾಗುತ್ತಿದೆ. ಆದುದರಿಂದ ಇದೊಂದು ಕಡೆಗೆ ಆರ್ಥಿಕ ಕ್ಷೇತ್ರದಲ್ಲಿ ಕ್ಷಿಪ್ರ ಕ್ರಾಂತಿಯಾಗಿದೆ. ಸಾಮಾಜಿಕ ಕ್ಷೇತ್ರದಲ್ಲಿ ಇದು ಪ್ರತಿಕ್ರಾಂತಿಯಾಗಿದೆ. ಎರಡು ಕ್ರಾಂತಿಗಳು ಏಕ ಕಾಲದಲ್ಲಿ ನಡೀತಾ ಇದೆ. ಆದ್ದರಿಂದಲೇ ನಮ್ಮ ಮುಂದೆ ಈವತ್ತು ದ್ವಂದ್ವ ಇದೆ. ಯಾವುದು...,? ಮಾರ್ಕ್ಸ್‌ವಾದಿಗಳ ಚಿಂತನೆಯ ಪ್ರಕಾರ, ಆರ್ಥಿಕ ವಿದ್ಯಾಮಾನಗಳಿಂದ ಸಾಮಾಜಿಕ ವಿದ್ಯಮಾನಗಳ ಮೇಲೆ ಬಹಳ ಬೇಗ ಬದಲಾವಣೆಯಾಗಿ ಬಿಟ್ಟು, ಈ ಸಮಾಜ

ಬದಲಾಗುತ್ತೇ ಎನ್ನುವ ಒಂದು ಭ್ರಮೆ ಇತ್ತಲ್ಲಾ ಅದೂ ಕೂಡ ಈಗ ಹುಸಿಯಾಗಿದೆ, ಏಕೆಂದರೆ ರಷ್ಯಾದಲ್ಲಿ ಮತ್ತು ಯುರೋಪ್‌ನಲ್ಲಿ ಆಗಿರೋ ಬದಲಾವಣೆಗಳನ್ನ ನೋಡಿದರೇ ಮಾರ್ಕ್ಸ್ ಏನು ಹೇಳಿದರು ಅದೂ ಕೂಡ ನಿಜವಾಗಿಲ್ಲ. ಅಂದರೆ ಪ್ರಪಂಚದ ಕಾರ್ಮಿಕ ವರ್ಗವೆಲ್ಲಾ, ಬಡವರೆಲ್ಲಾ ಒಗ್ಗಟ್ಟಾಗಿ ಒಂದು ಕ್ರಾಂತಿ ಮಾಡಬೇಕಿತ್ತು ಅದು ಹೊರಟೋಗಿ ಪ್ರಪಂಚದ ಶ್ರೀಮಂತರೆಲ್ಲಾ ಒಗ್ಗಟ್ಟಾಗಿದ್ದಾರೆ. The World People Organisation, World Trade Organisation; So World Trade Organisation ನ ಒಂದು ಅಂತಿಮ ಆಶಯವೇನೆಂದರೇ ಬಂಡವಾಳಶಾಹಿ ಶಕ್ತಿಗಳು ಮಾರುಕಟ್ಟೆಯ ಮೇಲೆ ಹಿಡಿತ ಸಾಧಿಸುವುದು, ಅದನ್ನು ಮಾಡಿ ಬಿಟ್ಟಿದ್ದಾವೆ.

**ಬ: ಈಗ ಎಲ್.ಪಿ.ಜಿ. ಅಂತಾ ಏನೋ ಕರೀತಾರೆ ಗ್ಲೋಬಾಲೈಜೆಷನ್, ಪ್ರೈವೇಟೈಜೇಷನ್ ಅಂತಾ ಏನ್ ಹೇಳ್ತಾರೆ, ಇದು ಹಿಂದುಳಿದವರ ದೃಷ್ಟಿಯಲ್ಲಿ ಮಾರಕ ಅಂತಿರೋ ಅಥವಾ ಪೂರಕ ಅಂತಾ ಕರೀತೀರೋ?**

**ರಾ:** ಇದು ಮಾರಕ ಪೂರಕ ಅನ್ನೋ ಪ್ರಶ್ನೆ ದಾಟಿ ಹೊರಟೋಗಿಬಿಟ್ಟಿದೆ. ಯಾಕೆಂದರೆ, ಹಿಂದುಳಿದ ವರ್ಗದಲ್ಲಿ ಯಾವ ಶ್ರೀಮಂತವರ್ಗ ಇದೆಯೋ ಅವರಿಗೆ ಇದು ಪೂರಕ, ಯಾರು ಬಡವರಿದ್ದಾರೆ ಅವರಿಗೆ ಮಾರಕವಾದದ್ದು. ಆದ್ದರಿಂದ ಒಂದೇ ಜಾತಿಯೊಳಗಡೆ ಇರುವಂತಾ ವರ್ಗ ಏನಿದೆ ಬಡವ ಮತ್ತು ಶ್ರೀಮಂತ, ಶ್ರೀಮಂತನಾದವನು ಅದರ ಪರವಾಗಿರುತ್ತಾನೆ. ಹಾಗಾಗಿ ಹೋರಾಟ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಒಂದೇ ಜಾತಿಯೊಳಗಡೆ ಈ ದ್ವಂದ್ವ ಇದೆ. ಆದ್ದರಿಂದಲೇ ಒಂದೇ ಜಾತಿಯೊಳಗಡೇನೇ ಒಂದು ಸಾಂಸ್ಕೃತಿಕ ವೆಸ್ಟ್ರನೈಜೇಶನ್ ನಡೆದುಕೊಂಡು ಹೋಗ್ತಾ ಇದೆ. ನೀವು ನೋಡಿ, ಆಫೀಸರ್ ಅವರೂ ಇವರೂ ಎಲ್ಲಾ ಹಿಂದುಳಿದ ವರ್ಗದಿಂದ ಬಂದೋರು ಇದಾರಲ್ಲಾ, ಅವರು ಹೇಗೆ ಮೇಲಿನ ಸ್ತರಕ್ಕೆ ಬಂದಾಕ್ಷಣ ಹೇಗಾಗಿಬಿಡ್ತಾರೆ? ಪಾಶ್ಚಾತ್ಯೀಕರಣಗೊಂಡು ಬಿಡ್ತಾರೆ, ನಾವು ಇದನ್ನ ಭಾರತೀಯವಾಗಿ ಹೇಳೋದಾದ್ರೇ 'ಬ್ರಾಹ್ಮಣೀಕರಣ', 'ನವ ಬ್ರಾಹ್ಮಣೀಕರಣ' ಎನ್ನುತ್ತೇವೆ.

**ಬ: ಆರ್ಥಿಕ ಪ್ರಗತಿ ಜೋರಾಗಿ ನಡೀತಾ ಇದೆ, ಅಷ್ಟೇ ವೇಗದಲ್ಲಿ ಸಾಮಾಜಿಕ ಪ್ರಗತಿ ಹಿನ್ನಡೆ ಸಾಧಿಸ್ತಾ ಇದೆ ಅಂದ್ರೇ ಇದಕ್ಕೆ ಏನು ಕಾರಣ ಹೇಳ್ತೀರಾ?**

**ರಾ:** ಇದಕ್ಕೆ ಮುಖ್ಯವಾದ ಕಾರಣ ನನಗನ್ನಿಸೋದೂ, 'ಐ ಮೇ ಬಿ ರಾಂಗ್' 'ಐ ಡೋಂಟ್ ನೋ,' ವಿಸ್ಮೃತಿ ಉಂಟಾಗಿ ಬಿಟ್ಟಿದೆ, ಪ್ರತಿಯೊಂದರಲ್ಲೂ ಒಂದು ವಿಸ್ಮತಿ ನೆನಪುಗಳನ್ನೇ ಅಳಿಸಿಹಾಕಿಬಿಡುತ್ತೆ, ನೀನೆಲ್ಲಿಂದಾ ಬಂದೀ, ಯಾಕ್ ಬಂದೀ, ಯಾಕ್ ಓದಿದೀ ಈ ನೆನಪುಗಳನ್ನೇ ಅಳಿಸಿ ಬಿಟ್ಟು ನಿಮಗೆ ಒಂದು ಹ್ಯಾಂಗ್ ಓವರ್ ಆಗಿದೆ.

ಹಾಗಾಗಿಯೇ ಹೊಸ ಹೊಸ ಕಾರುಗಳು, ಹೊಸ ಹೊಸ ಮೋಟಾರ್ ಸೈಕಲ್‌ಗಳು, ಹೊಸ ಎಲೆಕ್ಟ್ರಾನಿಕ್ಸ್ ಕಮಾಡಿಟಿ, ಮಾರುಕಟ್ಟೆಯಲ್ಲಿ ರಾಶಿ ರಾಶಿ ಬಂದು ಬೀಳ್ತಾ ಇದೆ, ಕಂಪ್ಯೂಟರ್ಸ್, ನಮ್ಮ ಹುಡುಗರೆಲ್ಲಾ ಕಂಪ್ಯೂಟರ್ ಇಂಜಿನಿಯರ್ಸ್ ಆಗ್ಬೇಕು ಅಮೆರಿಕಾಗೆ ಹೋಗ್ಬೇಕು ಈ ಗುಂಗಿನಲ್ಲಿ ಯಾವ ವರ್ಗಗಳು ಅವಕಾಶದಿಂದ ಫಲಾನುಭವಿಗಳಾಗಿದ್ದಾರೆ, ಆ ವರ್ಗಗಳು

ಕೂಡ ಅದಕ್ಕೆ ಹೊರಟು ಹೋಗಿದ್ದಾರೆ. ಹೋರಾಟ ಮಾಡೋರು ಯಾರು? ಪಾಪ, ಹೊಟ್ಟೆಗಿಲ್ಲದವ, ಕೂಲಿ ಮಾಡುವವ ಅವನು ಹೋರಾಟ ಮಾಡ್ತಾನೋ? ಅವನ ಹೊಟ್ಟೆಪಾಡ ನೋಡ್ಕೋತಾನೋ, ಇದಕ್ಕಾಗಿ ಹೋರಾಡ್ತಾನೋ? ಮಾಡಬೇಕಾದವರು ನಾನು, ನೀವು ನಾವಿಲ್ಲಿ ಕೊಚ್ಕಂಡು ಹೊರಟು ಹೋಗ್ತಾ ಇದ್ದೀವಿ.

ಅಂದ್ರೇ ಈ ಹಿಂದುಳಿದವರೂ ಕೂಡ ಮೇಲಿನ ಸ್ತರದವರ ಜೊತೆ ಸೇರ್ಕೊಳ್ತಾ ಇರೋದ್ರಿಂದ, ಈ ಹಿಂದುಳಿದವರ ಸಂಘಟನೆಗಳು ಛಿದ್ರಗೊಳ್ತಾ ಇವೆ. 'ಲೀಡರ್‌ಶಿಪ್' ಇವತ್ತು ಮುಂದುವರಿದವರ ಕೈಲಿದೆ, ಕೆಳಸ್ತರದವರಲಿಲ್ಲ.

**ಬ: 47ನೇ ಇಸವಿ ನಂತರದ ಭಾರತದಲ್ಲಿ ಬ್ರಾಹ್ಮಣರು ಮತ್ತು ಇತರ ಜಾತಿಯವರು ಒಂದು ಕಾಲದಲ್ಲಿ ಮುಂದುವರದಿದ್ರು ಮುಂದುವರೀತಾನೇ ಇದಾರೆ, ಆನಂತರದಲ್ಲಿ ಧಾರ್ಮಿಕ ವಲಯದಲ್ಲಿ ಕ್ರಿಶ್ಚಿಯನ್, ಮುಸ್ಲಿಂಮರು ಕೂಡ ಸಂಘಟನೆಗಳನ್ನು ಕಟ್ಟಿಕೊಂಡು ಮುಂದುವರಿಯೋದಿಕ್ಕೆ ದಾಪುಗಾಲು ಹಾಕ್ತಾ ಇದಾರೆ. ಹಾಗೆನೇ ದಲಿತರೂ ಕೂಡ, ಹೆಚ್ಚಿನ ಸಂಖ್ಯೆಯಲ್ಲಿರೋರು ಕೂಡ ಸಂಘಟನೆಗಳ ಮೂಲಕ ಮುಂದು ಮುಂದೆ ಹೋಗ್ತಾ ಇದ್ದಾರೆ. ಆದ್ರೂ ಕೂಡ ಈ ಹಿಂದುಳಿದ ಜಾತಿಯವರು ಯಾತಕ್ಕೆ ಒಗ್ಗಟ್ಟಾಗ್ತಾ ಇಲ್ಲಾ ?**

**ರಾ:** ಹಿಂದುಳಿದವರ ಒಗ್ಗಟ್ಟಿಗೆ ಮುಖ್ಯವಾದ ಕಾರಣವೇ ಜಾತಿ, ಜಾತಿವ್ಯವಸ್ಥೆ. ಅಲ್ಲೇನೇ ನನಗೂ ಮತ್ತು ಹಾವನೂರ್‌ರವರಿಗೂ ಭಿನ್ನಾಭಿಪ್ರಾಯ ಇರೋದು, ಹಾವನೂರ್ ಏನ್ ಹೇಳ್ತಾರೆ ಅಂದ್ರೇ, ಜಾತಿ ಒಳಗಡೇನೇ ಸಮಾನತೆಯನ್ನು ತರಲಿಕ್ಕೆ ಪ್ರಯತ್ನಿಸಬೇಕೇ ಹೊರತು, ಜಾತಿ ರಹಿತ ಸಮಾಜ ಸಾಧ್ಯ ಇಲ್ಲಾ. ಜಾತಿಗಳಲ್ಲೊಂದು ಲೈನ್ ಇದೆ. ಒಂದು ಮಾನದಂಡ ಇದೆ. ಪ್ರತಿಯೊಬ್ಬರೂ ಅದಕ್ಕೆ ಬಂದು ಅಲ್ಲಿ ಸಮಾನತೆ ಬರಬೇಕು, ನಾನೇಳ್ತೀನೀ ಅಂದ್ರೇ ಎಲ್ಲವೂ ಒಂದು ಪಾಯಿಂಟ್‌ಗೆ ಬಂದ ಮೇಲೆ ಜಾತಿ ಹೋಗ್ಬೇಕು. ಅವರು ಹೇಳೊದು ಅದು ಆಗೋದಿಲ್ಲಾ ಅದು ಆಗಲೂ ಬಾರದು ಅಂತಾ.

ನಾನು ಸಾಕಷ್ಟು ಜನ ಹಿಂದುಳಿದ ನಾಯಕರ ಜೊತೆ ಚರ್ಚಿಸಿದ್ದೇನೆ. ಸಿದ್ಧರಾಮಯ್ಯ (ಮಾಜಿಮಂತ್ರಿ) ಮುಂತಾದವರ ಜೊತೆ ಕೂಡ. ಅವರವರ ಜಾತಿಯವರು ಅವರಿಗೆ ಪ್ರತಿಕ್ರಿಯಿಸುತ್ತಾರೇ ಹೊರತು ಬೇರೆಯವರು ಪ್ರತಿಕ್ರಿಯಿಸೋದಿಲ್ಲಾ. ಅಥವಾ ಅವರು ಮಾಡುವ ಅಪ್ರೋಚನಲ್ಲೇನೇ ಜಾತಿಗೆ ಮಾತ್ರ ಸೀಮಿತವಾದ ರೀತಿನಲ್ಲೇ ಇರಬೇಕು. ಅದರಿಂದ ಆಚೆಗೆ, ಅಂದ್ರೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷಗಳಿಂದ ಟಿಕೇಟ್ ಕೊಡುವುದು ಇರಬಹುದು, ಇನ್ನ್ಯಾವುದೇ ಇರಬಹುದು. ಅಲ್ಲಿ ನೋಡಿದಾಗ ಜಾತಿಯವರದೇ ಒತ್ತಡ, ಜಾತಿಯವರದೇ 'ಲೀಡರ್ ಶೀಪ್' ಇರುತ್ತದೆ. ಆದ್ರೆ ದೇವರಾಜ ಅರಸು ಮಾತ್ರ ಅದನ್ನ ಮೀರಲಿಕ್ಕೆ ಸಾಧ್ಯವಾಯ್ತು. ಅರಸು ಅವರದು ಮೈನಾರಿಟಿ ಜಾತಿ, ಆತನಿಗೆ ತನ್ನ ಸ್ವಂತ ಲಾಭ ಏನೂ ಇರಲಿಲ್ಲ ಆರ್ಥಿಕ ಅಥವಾ ಸಾಮಾಜಿಕ ಪ್ರಲೋಭನೇ ಏನೂ ಅವರಲ್ಲಿ ಇರಲಿಲ್ಲ. ತನ್ನ ಜನಾಂಗ ತಗೊಂಡೋಗ್ಬೇಕು ಅನ್ನೋತರದ್ದೇನೂ ಅರಸರಲ್ಲಿರಲಿಲ್ಲ. ಆತನಿಗೊಂದು 'ಪೊಲಿಟಿಕಲ್ ವಿಲ್' ಇತ್ತಷ್ಟೇ, ಅದನ್ನು ಹಿಂದುಳಿದ ವರ್ಗಗಳಿಗೆ ಬಳಸಿಕೊಂಡಿದ್ದರಿಂದ ಏನಾಯ್ತು. ಈ

ವರ್ಗಗಳು ಒಂದು ಕೇಂದ್ರದ ಕಡೆ ತುಡಿಯೋದಿಕ್ಕೆ ಸಾಧ್ಯವಾಯ್ತು. ದೇವರಾಜ ಅರಸು ಸತ್ತನಂತರ ಮತ್ತೆ ಅದು ಕೆಳಗೆ ಬೀಳ್ತು. ಆ ತರದ 'ಲೀಡರ್ ಶೀಪ್' ಇಂದು ಕರ್ನಾಟಕದಲ್ಲಿ ಇಲ್ಲ. ಯಾರಿದಾರೇ ಹೇಳು ? ಜಾತಿನಾಯಕರುಗಳಿದ್ವಾರೇ ಹೊರತು, ಹಿಂದುಳಿದ ವರ್ಗಗಳ ನಾಯಕ ಅಂತೇಳಿ ಗುರ್ತಿಸಬಹುದಾದವನು ಯಾರು ಇಲ್ಲ. ಈ ನಮ್ಮ ಸಿದ್ಧರಾಮಯ್ಯ ಇರಬಹುದು, ಇನ್ಯಾರೇ ಇರಬಹುದು. ಇವರ ಜೊತೆ ಪೂರ್ತಿ ಹಿಂದುಳಿದ ಜನ ಬಂದಿಲ್ಲಾ. ಆದ್ದರಿಂದ, ಸಾಮಾಜಿಕ ನ್ಯಾಯ ಅಂತಾ ಸಿದ್ಧಾಂತ ಇದೆಯಲ್ಲಾ ಅದನ್ನೇ ಕೇಂದ್ರವಾಗಿಟ್ಟುಕೊಂಡು, ಪ್ರತಿಯೊಂದು ಜಾತಿಗೂ ಸಾಮಾಜಿಕ ನ್ಯಾಯ ಬೇಕಲ್ವೇ, ಆದ್ದರಿಂದ ಪ್ರತಿಯೊಂದು ಜಾತಿಯೂ ಜಾತಿರಹಿತವಾಗಿ ತುಡಿಬೇಕು. ಜಾತಿಯನ್ನ, ಇಟ್ಕಂಡು ತುಡಿಯಾಕಾಗೋಲ್ಲಾ. ಬಸವಣ್ಣನವರ ಕಾಲದಲ್ಲಿ ಏನಾಯ್ತು. ಇವರು ಎಲ್ಲರಿಗೂ ಲಿಂಗಲಾಂಛನ ಮಾಡಿದ್ರು ಏಕೇ? ಸಮಾನತೆಗೋಸ್ಕರ, ಅದೊಂದು ಲಾಂಛನ ಗುರ್ತುಅಷ್ಟೇ. ಆಗೇನಾಯ್ತು ಲಿಂಗ ಲಾಂಛನ ಮಾಡಿಕೊಂಡೋರು ಕುರುಬರು, ಕುರುಬರಾಗೇ ಉಳಿದರು. ಕ್ಷೌರಿಕರು ಕ್ಷೌರಿಕರಾಗಿ ಉಳ್ಕೊಂಡ್ರು ಬಡಗಿ ಬಡಗಿ, ಕುಂಬಾರ ಕುಂಬಾರ ಹೀಗೆ ಎಲ್ಲರೂ ಹಾಗೆ ಉಳ್ಕೊಂಡ್ರು, ಕುಂಬಾರ ಲಿಂಗಾಯ್ತರೇ ಬೇರೆ, ಬಡಗಿ ಲಿಂಗಾಯ್ತರೇ ಬೇರೆ, ಹೀಗೆ ಬೇರೆ ಬೇರೆ ಹೊಸ ಜಾತಿಗಳಾಗಿ ಉಳ್ಕೊಂಡ್ರು. ಮರ್ಜ್ ಆಗಲೇ ಇಲ್ಲಾ.

ಕೊನೇ ಪಕ್ಷ ಅಂತರಜಾತಿ ಮದುವೆಗಳಿಗಾದರೂ ಹೆಚ್ಚಿನ ಆದ್ಯತೆ ಕೊಡಬೇಕು, ಅವುಗಳಿಂದ ಮಾತ್ರ ಸಾಧ್ಯ ಅಂತಾ ಲೋಹಿಯಾನು ಗುರುತಿಸಿದ್ದರು. ಗಾಂಧೀನೂ ಗುರ್ತಿಸಿದ್ದರು, ಅಂಬೇಡ್ಕರ್ ಇವರೆಲ್ಲಾ ಗುರ್ತಿಸಿದ್ದರು. ಟೈಂ ತೆಗೆದುಕೊಂಡರೂ ಪರವಾಗಿಲ್ಲ. ಈ ಅಂತರಜಾತಿ ವಿವಾಹಗಳು ನಡೀಬೇಕು ಆಗ ಮಾತ್ರ ಜಾತಿ ಅಂತರ ಕಮ್ಮಿ ಸಾಧ್ಯವಾಗುವುದು.

**ಬ: ಈ ಹಿಂದುಳಿದ ಜಾತಿಯವರನ್ನ ಒಂದೇ ಎಳೆಯಲ್ಲಿ ಪೋಣಿಸಿ ಒಗ್ಗೂಡಿಸಲಿಕ್ಕೆ ಈಗ ಕರ್ನಾಟಕದಲ್ಲಿ ಯಾರಾದರೂ ಸಮರ್ಥ ನಾಯಕರು ಇದ್ದಾರೆಯೇ?**

ರಾ: ಈಗ ಇದ್ದುದರಲ್ಲಿ ಸಿದ್ಧರಾಮಯ್ಯನಿಗೆ (ಮಾಜಿಮಂತ್ರಿ) ಆ ಕೆಪಾಸಿಟಿ ಇದೆ. ನಾನೂ ಹೇಳ್ತಾ ಇದ್ದೀನಿ, ಆದ್ರೇ ಆತ ಮಾಡ್ತಾ ಇಲ್ಲಾ. ಕುರುಬರು ನಮ್ಮ ಜಾತಿಯವನು ಅಂತಾ ನಿನ್ನನ್ನ ಬಿಟ್ಟು ಹೋಗೋದಿಲ್ಲಾ, ಆದ್ರೇ ನೀನು, ಕುರುಬರನ್ನು ಹೊರತು ಪಡಿಸಿದ ಹಿಂದುಳಿದ ಅಸಂಘಟಿತ ಜಾತಿಗಳಿವೆ. ಅವುಗಳನ್ನು ಗುರುತಿಸಿ; ಅಲ್ಲಿ ಹತ್ತುಹತ್ತು ಜನ ಹುಡುಗರನ್ನ ಗುರ್ತಿಸಿ, ಅವರನ್ನ ಒಂದೊಂದು ಜಿಲ್ಲೆಯಲ್ಲಿ ಒಂದು ಗುಂಪುಮಾಡಿ ರಾಜ್ಯದಲ್ಲಿ ಒಂದು ಒಕ್ಕೂಟ ಮಾಡಿ, ಹಿಂದುಳಿದವರ ಒಕ್ಕೂಟ, ಅದಕ್ಕೆ ಸಾಮೂಹಿಕ ನಾಯಕತ್ವ ಕ್ರಿಯೇಟ್ ಮಾಡಿ. ಒಬ್ಬನೇ ನಾಯಕ ಅಂತಾದರೇ ಕುರುಬರ ನಾಯಕ ನಾನೇಕೆ ಹೋಗೋಣ ಅನ್ನೊ ಮನೋಭಾವನೇ ಬರುತ್ತೆ. ಹಾಗಾಗಿ ಸಾಮೂಹಿಕ ನಾಯಕತ್ವ ನಿರ್ಮಾಣ ಮಾಡಬೇಕು ಎಲ್ಲಾ ಜಾತಿಯವರಲ್ಲೂ ಒಬ್ಬೊಬ್ಬ ನಾಯಕನನ್ನು ನೇಮಿಸಿ ಈಗಗಾಲೇ ಬಂದಿರುವ ಹಿಂದುಳಿದ ವರ್ಗಗಳ ಆಯೋಗಗಳ ವರದಿಯನ್ನು ಆಧಾರವಾಗಿಟ್ಟುಕೊಂಡು ಒಂದು ಕಾಮನ್ ಅಜೆಂಡಾ ಇಟ್ಕೊಂಡು ಕೆಲಸ ಮಾಡಬೇಕು.

**ಬ: ತಾವು ಹಿಂದುಳಿದವರು ಅಂತಾ ಗುರ್ತಿಸಲು ಯಾವುದನ್ನ ಮಾನದಂಡವಾಗಿ ಇಟ್ಟುಕೊಳ್ಳಲು ಬಯಸುತ್ತೀರಿ?**

ರಾ: ಮೊದಲನೆಯದಾಗಿ ಸಾಮಾಜಿಕ ಮಾನದಂಡವೇ, ಅಂದ್ರೇ ಜಾತಿಯನ್ನೇ ಆಧಾರವಾಗಿಟ್ಟುಕೊಳ್ಳಬೇಕಾಗುತ್ತದೆ. ಇಲ್ಲಿ ಬ್ರಾಹ್ಮಣನಿಗೂ ಅವಮಾನವಿದೆ, ಜಾತಿ ವ್ಯವಸ್ಥೆಯಲ್ಲಿ. ಕುಮಾರವ್ಯಾಸನ ಕಾಲದಲ್ಲಿಂದಲೂ ಬ್ರಾಹ್ಮಣರನ್ನು ಬಯ್ಯುತ್ತಾ ಬಂದಿದ್ದಾರೆ. ಭಾಷೆಯ ಒಳಗಡನೇ ಈ ಅವಮಾನ ಗರ್ಭೀಕೃತವಾಗಿಬಿಟ್ಟಿದೆ. ಈಗ ನಾವು ಮಾತಿನ ಮಧ್ಯೆ ಕ್ಷೌರಿಕನನ್ನ ಅವಮಾನಿಸುತ್ತೇವೆ.

**ಬ: ಹಾಗಾದರೆ ಜಾತಿ ಹೋಗಲ್ವ?**

ರಾ: ಹೊಗುತ್ತೇ ಆದರೆ, ಜಾತಿಯನ್ನ ತೊಡೆದುಹಾಕಲು ಬೇಕಾದ ಸಾಮೂಹಿಕ ಸಂಕಲ್ಪ ನಿರ್ಮಾಣವಾಗಬೇಕು ಅಷ್ಟೆ.

**ಬ: ಸಾಮೂಹಿಕ ಸಂಕಲ್ಪ ನಿರ್ಮಾಣವಾಗಬೇಕಾದರೆ ಹಾಕಿ ಕೊಳ್ಳಬೇಕಾದ ಕಾರ್ಯಕ್ರಮಗಳಾವುವು?**

ರಾ: ಕಾರ್ಯಕ್ರಮ ಅಂದರೆ, ಮೊದಲನೆಯದಾಗಿ ಶಿಕ್ಷಣ, ಉದ್ಯೋಗ, ರಾಜಕೀಯ ವ್ಯವಸ್ಥೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಭಾಗವಹಿಸುವಿಕೆಯಲ್ಲಿ ಈಕ್ವಲ್ ಪಾರ್ಟಿಸಿಪೇಶನ್ ಅಂಡ್ ಈಕ್ವಲ್ ಶೇರ್ ಇರುತ್ತದೆ. ಮತ್ತ ಕಲ್ಚರಲ್ ಚೇಂಜ್ ಅಂದ್ರೆ ಈ ಮದುವೆಗಳು ಇತ್ಯಾದಿ ಇಲ್ಲಿ ಇನ್ನೊಂದು ನೆನಪಿರಬೇಕು ಪ್ರತಿ ಜಾತಿಯೂ ತನ್ನದೇ ಆದ ಜಾನಪದ ಸಂಸ್ಕೃತಿಯನ್ನ ಹೊಂದಿರುತ್ತದೆ. ಇದನ್ನ ನಾವು ನಾಶಮಾಡಬೇಕಾದ ಅಗತ್ಯವೇನಿಲ್ಲ. ಆದ್ರೇ ಈ ದೇವರು, ದೇವಸ್ಥಾನ, ಮಠ, ಎಲ್ಲವೂ ಈ ಮಠಕ್ಕೆ ಬಂದಾಕ್ಷಣ ಜಾತಿ ಜಾಗೃತವಾಗ್ತದೆ. ಜಾತಿ ತನ್ನ ಚಲನಾ ಶಕ್ತಿಯನ್ನು ಕಳೆದುಕೊಳ್ಳುತ್ತದೆ.

**ಬ: ಶೋಷಿತರು ಶೋಷಣೆಯ ಹೆಸರಲ್ಲಿ ಮಠ ಕಟ್ಟಿಕೊಳ್ಳುತ್ತಿದ್ದಾರಲ್ಲಾ ಇದು ಹೇಗೆ?**

ರಾ: ಅದು ಕೌಂಟರ್ ರೆವಲ್ಯೂಷನ್, ನನ್ನ ಪ್ರಕಾರ ಈಗೆ ಹಿಂದುಳಿದ ಜಾತಿಗಳು, ಉದಾ. ಕುರುಬರು, ಕನಕದಾಸರ ಹೆಸರಲ್ಲಿ ಮಠ ಕಟ್ಟಿಕೊಂಡಿದ್ದಾರೆ. ಅವರೀಗ ಬ್ಯಾಕ್‌ವರ್ಡ್ ಕ್ಲಾಸ್‌ನ ಮೂವ್‌ಮೆಂಟ್‌ನಲ್ಲಿ ಭಾಗವಹಿಸುವ ನೈತಿಕ ಹಕ್ಕುಗಳನ್ನೇ ಕಳೆಕೊಂಡು ಬಿಟ್ಟಿದಾರೆ. ಈ ಪೇಜಾವರ ಸ್ವಾಮಿಗಳೇನಿದಾರೇ ಇವರು ಬೇರೆಯವರನ್ನ ಇವರ ವಿರುದ್ಧ ಎತ್ತಿ ಕಟ್ಟುವುದಕೋಸ್ಕರ, ಅಲ್ಲಿ ಕನಕನ ಪೀಠಸ್ಥಾಪನೆ ಮಾಡುತ್ತೇನೆ ಎಂದೇಳಿ ಅವನಿಗೊಂದು ಕುರ್ಚಿಹಾಕಿ ಗೌರವಕೊಟ್ಟಂಗೆ ಮಾಡಿದ್ದಾನೆ.

**ಬ: ಜಾತಿ ವಿನಾಶಕ್ಕೆ ಹೋದ್ರೇ, ಬದುಕಿನ ಜೊತೆಗೆ ಧರ್ಮ ಅನ್ನೋದು ತಳಕು ಹಾಕಿಕೊಂಡಿದೆ, ಇದಕ್ಕೇನು ಹೇಳ್ತೀರಾ?**

ರಾ: ಒಂದು ಕಡೆ ಧಾರ್ಮಿಕ ವ್ಯವಸ್ಥೆ ಪರ್ಯಾಯ ರೂಪಿಸಬೇಕು, ಧರ್ಮವೇ ಇಲ್ಲಾ ಅಂದ್ರೇ ಜನ ಗಾಬರಿಗೊಳ್ತಾರೆ. ಅವರು ಅದನ್ನ ಬಿಟ್ಟು ಬರಲಿಕ್ಕೆ ತಯಾರಿಲ್ಲ. ದೇವರೇ ಇಲ್ಲ, ಧರ್ಮಾನೂ ಇಲ್ಲ ಅಂದ್ರೆ ಕಷ್ಟ ಹಾಗಾಗಿ ಇವುಗಳಿಗೆ ಪರ್ಯಾಯಗಳನ್ನು ನಾವು ಯೋಚ್ತೆ

ಮಾಡಬೇಕು. ನನಗನ್ನಿಸೋದು ಬುದ್ಧ, ಬಸವಣ್ಣ ಇವರನ್ನ ಮತ್ತೇ ಹೆಚ್ಚಾಗಿ ರಿವೈಸ್ ಮಾಡಬೇಕು. ಅವರ ಐಡಂಟಿಟಿನಲ್ಲಿ, ನಿನಗೆ ಬೇಕೆನಿಸಪ್ಪ ಬಸವಣ್ಣನ ಮಾಡಿಕೋ, ಬುದ್ಧನ ಮಾಡಿಕೋ, ಗಾಂಧಿನ ಮಾಡಿಕೋ ಅಂಬೇಡ್ಕರ್ ಮಾಡಿಕೋ, ನೀನು ಈ ದೇವರಗಳನ್ನೆಲ್ಲಾ ಬಿಟ್ಟಾಕು ಅಂತ ಹೇಳ ಬೇಕಾಗುತ್ತೆ.

**ಬ: ಅಂಬೇಡ್ಕರ್ ಅವರು ಜನರಿಗೆ ಧರ್ಮದ ಆವಶ್ಯಕತೆ ಇದೆ ಎಂದಿದ್ದಾರಲ್ಲಾ?**

ರಾ: ಹೌದು, ಸಾಮಾನ್ಯ ಮನುಷ್ಯನ ದೃಷ್ಟಿಯಲ್ಲಿ ದೇವರು ಧರ್ಮದ ಅಗತ್ಯವನ್ನು ಅದರ ಆವಶ್ಯಕತೆಯನ್ನು ಅವರು ಗುರ್ತಿಸಿದರು. ವಿದ್ಯಾವಂತರಾದವರು ತಮ್ಮ ಬಿಡುವಿನ ವೇಳೆಯನ್ನ ಪುಸ್ತಕ ಓದುವ ಅಥವ ಇತರ ಕೆಲಸಗಳಲ್ಲಿ ತನ್ನ ಮನಸ್ಸನ್ನು ಕೇಂದ್ರೀಕರಿಸಬಯಸಿದರೆ, ಈ ಸಾಮಾನ್ಯ ಮನುಷ್ಯ ತನ್ನ ಮಕ್ಕಳು ಹೆಂಡ್ತಿರೊಂದಿಗೆ ದೇವರನ್ನ ಹುಡ್ಕೊಂಡು ಧರ್ಮಸ್ಥಳ, ತಿರುಪತಿ ಹೀಗೆ ಹೋಗ ಬೇಕಾಗುತ್ತೆ. ಇಂತವರಿಗೆ ದೇವರೇ ಇಲ್ಲಾ ಅಂದ್ರೇ ಅವನು ಹುಚ್ಚು ಹಿಡ್ಕೊಂಡು ಅಳಲಿಕ್ಕೆ ಪ್ರಾರಂಭಿಸುತ್ತಾನೆ.

ನಾನೊಂದು ಸಂದರ್ಭದಲ್ಲಿ ನೋಡಿದ್ದೆ ಸಾಯಿಬಾಬನ ಪವಾಡದ ಮಾಯಾಜಾಲ ಬಯಲುಗೊಳಿಸಿದಾಗ ಬಂದಿದ್ದ ಹೆಂಗಸ್ರೆಲ್ಲಾ ಗೊಳೋ ಅಂತಾ ಅಳಲಿಕ್ಕೆ ಪ್ರಾರಂಭಿಸಿದರು. ಏನಪ್ಪಾ ದೇವರಿಂದ ಮನಃ ಶಾಂತಿ ಸಿಕ್ತಾ ಇತ್ತು. ಈಗ ಅದು ಇಲ್ಲಾ ಅಂತೇಳಿ ಅಳದನ್ನ ಕಂಡ ನಮಗೆ ನಮ್ಮಿಂದ ಏನಾದ್ರೂ ತಪ್ಪಾಯಿತೇ ಅಂತಾ ಹೆದರಿಕೊಳ್ಳುವಂತಾ ಸಂದರ್ಭವಿತ್ತು. ಅಂದ್ರೇ ಅಂಬೇಡ್ಕರ್ ಧರ್ಮ ಅನ್ನೋದಕ್ಕೆ ನೀಡಿರುವ ವಿವರಣೆಯೆ ಬೇರೆ, 'ಮಾನಸಿಕವಾಗಿ' ಧರ್ಮ ಒಂದು ಆಂತರಿಕ ತುಡಿತವಷ್ಟೇ "ಧರ್ಮ ಈಸ್ ಎನ್ ಇನ್‌ಟ್ರಾಕ್ಷನ್", ಹಾಗೇ ಬೌದ್ಧರಲ್ಲಿ ಬುದ್ಧ ಎಲ್ಲೂ ದೇವರು ಅಂತೇಳಿಲ್ಲಾ.

**ಬ: ಸಾರ್, ಶಿವಮೊಗ್ಗ ಅನೇಕ ಚಳವಳಿಗಳ ತವರೂರು ಅಂತಾ ನಿಮಗೂ ಗೊತ್ತು. ಸಮಾಜವಾದಿ ಚಳವಳಿ ಬಂತು, ನಂತರದಲ್ಲಿ ದಲಿತ ಸಂಘ ಚಳವಳಿ ಬಂತು, ಆನಂತರದಲ್ಲಿ ರೈತ ಸಂಘ ಚಳವಳಿ ಬಂತು. ಅದೇ ನಿಟ್ಟಿನಲ್ಲಿ ಈಗ ಬಹುಮತ ಸಂಘಟನೇ ಅಂತಾ ಪ್ರಾರಂಭವಾಗಿ ಅದು ಚಳವಳಿಯನ್ನ ರೂಪಿಸ್ತಾ ಇದೆ. ಇದು ಯಾವ ಮಟ್ಟದಲ್ಲಿ ಜನಗಳ ಮೇಲೆ ಪ್ರಭಾವ ಬೀರಿದೆ ಅಂತಾ ತಮ್ಮ ಅನಿಸಿಕೆ? ರಾಜ್ಯದಲ್ಲಿ ಮತ್ತು ಶಿವಮೊಗ್ಗದ ಸುತ್ತು ಮುತ್ತಾ ಇದು ಏನ್ ಪ್ರಭಾವ ಬೀರಿದೆ ಅಂತೀರಾ?**

ರಾ: ಶಿವಮೊಗ್ಗ "ಒಂದು ಕಾಲದಲ್ಲಿ ಎಲ್ಲಾ ಹೋರಾಟಗಳ ಮಾತೃಭೂಮಿಯಂತಿತ್ತು". ನಾವೆಲ್ಲಾ ಪ್ರಭಾವಿತರಾಗಿರೋದು ಈ ಜಾಗದಲ್ಲಿನೇ, ಆದ್ರೇ, ಮತ್ತೆ ಇಲ್ಲಿ ಪುರೋಹಿತಶಾಹಿ ಶಕ್ತಿಗಳು ಬಹಳ ಜಾಗೃತವಾಗಿವೆ. ಅವು ಅಧಿಕಾರವನ್ನ ಹಿಡ್ಕಂಡ್ ಕೂತಿದಾವೆ, ಆದರೆ ನೈಜವಾಗಿ ಶಿವಮೊಗ್ಗದಲ್ಲಿ ಹಿಂದುಳಿದ ವರ್ಗಗಳೇ ಹೆಚ್ಚಾಗಿರೋದು. ಆದ್ರೇ ಈ ಹಿಂದುಳಿದವರನ್ನ ಪುರೋಹಿತಶಾಹಿ ಹೊಡ್ಕೊಂಡು ಬಿಟ್ಟಿದೆ. ಶಿಕಾರಿಪುರ, ಶಿವಮೊಗ್ಗ, ಸೊರಬ ಈ ಸ್ಥಳಗಳಲ್ಲಿ ಹೆಚ್ಚಾಗಿ ಬ್ಯಾಕ್‌ವರ್ಡ್‌ಕ್ಲಾಸ್ ಪೀಪಲ್ಸ್ ಇದ್ದಾರೆ. ಆದ್ರೇ ಈ ಬಿ.ಜೆ.ಪಿ. ತರದವರು, ಆರ್.ಎಸ್.ಎಸ್. ನಲ್ಲಿ ಅಂದ್ರೇ ಈಶ್ವರಪ್ಪ, ಯಡಿಯೂರಪ್ಪ ಇವರೆಲ್ಲಾ ಹಿಂದುಳಿದ

ವರ್ಗದಿಂದ ಬಂದವರೇ, ಇವರನ್ನ ಹಿಡ್ಕೊಂಡ್ರೆ ನಾವು ರಾಜಕೀಯ ಮಾಡಬಹುದೆಂದು ಯೋಚಿಸಿ ಮಾಡಿದರು, ಮತ್ತು ಪ್ರಗತಿಪರವಾಗಿ ಯೋಚನೆ ಮಾಡುವಂತ ವ್ಯಕ್ತಿಗಳು ಅಂದ್ರೇ ಈ ನಮ್ಮ ಜೆ.ಎಚ್. ಪಟೇಲ್‌ರಂತಪರು ಎಲ್ಲಾ ಪರಿವರ್ತನೆ ಆಗಿ, ಅವರಿಗೆ ಬೇಕಾದ ರೀತಿಯಲ್ಲಿ ಸಮಯಸಾಧಕ ರಾಜಕಾರಣ ಮಾಡಿದರ ಪರಿಣಾಮ ಏನಾಯ್ತು, ಹಾವು ಹೊಡೆದು ಹದ್ದಿಗೆ ಹಾಕಿದಂತಾಯ್ತು.

ಒಂದು ಕಾಲದಲ್ಲಿ ಸಮಾಜವಾದಿ ಶಕ್ತಿ ಎಷ್ಟು ಜೀವಂತವಾಗಿತ್ತು ಇಲ್ಲಿ. ಆದ್ದರಿಂದ ಈ ಹಿನ್ನಲೆಯಲ್ಲಿ ಈ ಸಂಘಟನೆ ಪ್ರಾರಂಭವಾದಾಗ ಅಂದರೆ ಬಹುಮತ ಸಂಘಟನೆಯನ್ನ ಹಾಲಪ್ಪ ಪ್ರಾರಂಭ ಮಾಡಿದಾಗ ನಾನೂನು ಬಂದಿದ್ದೆ. ಆದರೆ ಈ ಬಹುಮತ ಸಂಘಟನೆ ಒಂದು ಹೋರಾಟದ ರೂಪದಲ್ಲಿಲ್ಲ. ಇದು ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಬೌದ್ಧಿಕವಾಗಿ ಆಲೋಚನೆ ಮಾಡುವಂತಹ ಒಂದು ಶಕ್ತಿತಂದುಕೊಡೋ ಒಂದು ಫೋರಂ ಆಗಿ ಕೆಲಸ ಮಾಡ್ತಾ ಇದೆ. ಇವರ ಪತ್ರಿಕೆ ಮೂಲಕ, ಸೆಮಿನಾರ್‌ಗಳ ಮೂಲಕ ಆಲೋಚನೆ ಮಾಡೋ ಶಕ್ತಿ ಕೊಡ್ತಾ ಇದೆಯೆ ಹೊರತು, ಅದಕ್ಕೆ ಹೋರಾಟ ಮಾಡುವಂತಾ ಶಕ್ತಿ ಇನ್ನೂ ಬಂದಿಲ್ಲಾ. ಈ ಶಕ್ತಿ ಬರಬೇಕಾದರೆ ಬೌದ್ಧಿಕ ಕ್ರಿಯಾಶೀಲತೆ ಬೇಕು. ಬೌದ್ಧಿಕತೆ ಬೇರೆ, ಬೌದ್ಧಿಕ ಕ್ರೀಯಶೀಲತೆ ಬೇರೆ.

**ಬ: ಬಹುಮತ ಸಂಘಟನೆ ಹೋರಾಟದ ಸಂಘರ್ಷಣೆಯಾಗಿ ರೂಪಗೊಳ್ಳಬೇಕಾದರೆ ಬೌದ್ಧಿಕ ತಯಾರಿ ಮೊದಲ ಹಂತ. ಕ್ರಿಯಾಶೀಲತೆಯ ಚಾಲನೆ ಎರಡನೇ ಹಂತ. ಈ ಎರಡೂ ಏಕ ಕಾಲದಲ್ಲಿ ನಡೀತಾ ಇದೆಯಲ್ಲ?**

ರಾ: ಹೌದು ಎರಡೂ ಬೇಕು.

**ಬ: ಒಂದು ನಿಟ್ಟಿನಲ್ಲಿ ಈ ಬಹುಮತ ಸಂಘಟಕರು ಜಾತಿ ಆಧಾರಿತ ಜನಗಣತಿಬೇಕೆಂದು ಹೋರಾಟ ಮಾಡಿದರು. ಇದು ಕ್ರಿಯಾಶೀಲತೆ ಅಲ್ಲವೆ?**

ರಾ: ಈ ವಿಚಾರ ಅಂದರೆ ಬಹುಮತ ಸಂಘಟನೆ ಎತ್ತಿದ ವಿಚಾರ. ಆಲ್ ಇಂಡಿಯಾ ಲೆವೆಲ್‌ನಲ್ಲೇ ಫೋಕಸ್ ಆಯ್ತು, ಆಮೇಲೆ, ನಾನು ರವಿವರ್ಮಕುಮಾರ್ ಹತ್ತಿರ ಈ ಬಗ್ಗೆ ಮಾತಾಡಿದೆ, ಮೈಸೂರಿನಲ್ಲೂ ಈ ವಿಚಾರವಾಗಿ ಸೆಮಿನಾರ್ ಆಯ್ತು ಆಗ್ಬೇಕೇ, ಬೇಡ್ವೇ ಅಂತಾ, ಇನ್ಸಿಟಿಟ್ಯೂಟ್ ಆಫ್ ಸೋಶಿಯಲ್ ಚೇಂಜ್ ಅಂತಾ ಮದ್ರಾಸ್‌ನಲ್ಲಿದೆ. ಇದು ಅಲ್ಲಿನ ಒಂದು ಆರ್ಗ್‌ನೈಜೇಶನ್. ನಮ್ಮ ಸ್ನೇಹಿತರೇ ಅದಕ್ಕೆ ಡೈರಕ್ಟರ್ ಆಗಿದ್ದಾರೆ ನಟರಾಜ್ ಅಂತ. ಬ್ರಾಹ್ಮಿನ್ ಓರಿಯಂಟೆಡ್ ಅದು. ಅವರು ಇದನ್ನ ಸೆನ್ಸಸ್‌ನವರ ಮೇಲೆ ಹಾಕಿದರು. ಸೆನ್ಸಸ್ ಆಫೀಸರ್ಸ್ ಮತ್ತು ಕೆಲವು ಬುದ್ಧಿಜೀವಿಗಳು ಸೆಮಿನಾರ್ ಮಾಡಿದರು. ಅಲ್ಲಿಗೆ ನಾವು ಹೋಗಿದ್ದೆವು. ಅದನ್ನ ಗಮನಿಸಿದಾಗ ಅದು ಆಗದ ಹಾಗೆ ಲಾಬಿ ನಡೀತಾ ಇದೆ. ಹಾಗಾಗಿ ಅದು ಸಾಧ್ಯವಾಗದೇ ಹೋಯಿತು. ತಮಾಷೆ ಅಂದ್ರೆ ಜಾತಿ ಆಧಾರಿತ ಜನಗಣತಿ ಮಾಡಬಾರದು ಅನ್ನೋದನ್ನ ಹೇಳೋದಕ್ಕೇನೆ ಈ ಸೆಮಿನಾರ್ ಮಾಡಿದ್ದು. ಅಲ್ಲಿ ಬೇಕೆ ಬೇಡವೆ ಅನ್ನೋ ಪ್ರಶ್ನೆ ಚಿಹ್ನೆ ಇಟ್ಟುಕೊಂಡು ಸೆಮಿನಾರ್ ನಡೆಸಿದರು. ಇಲ್ಲಿ ಏನು ಸಮಸ್ಯೆ ಇದೆ ಅಂದ್ರೇ

ನಾನು ಪ್ರಾಥಮಿಕ ಶಾಲೆಗೆ ಹೋಗುವಾಗ ಮನೆಯಲ್ಲಿ ಜಡೆ ಹೆಣೆದು ಹೂ ಮುಡಿಸಿ ಟೋಪಿ ತೊಡಿಸೋರು. ಓಲೇನೂ ಇಡೋರು. ಒಂದು ಸಲ ಯಾರೋ ಒಬ್ಬ ನನ್ನನ್ನು ಕರೆದು ಕಬ್ಬು ಬೇಕಾ ಅಂದ. ನನಗೆ ಕಬ್ಬು ಕಂಡ್ರೆ ತುಂಬಾ ಆಸೆ ಆಗೋದು. ಕೊಡು ಎಂದೆ. ಅದಕ್ಕವನು ನಿನ್ನ ಓಲೆ ಕೊಡು ಕಬ್ಬು ಕೊಡ್ತೀನಿ ಎಂದ. ಕೊಟ್ಟೆ. ಮನೆಗೆ ಹೋದೆ. ಅಪಾರವಾಗಿ ಹೊಡೆದರು. ಅಂದಿನಿಂದ ಚಿನ್ನ ಬಿಟ್ಟೆ.

## ಮಳೆಗಾಲ ಮತ್ತು ಛತ್ರಿ ಪ್ರಸಂಗ

ಮಲೆನಾಡಿನಲ್ಲಿ ಶಾಲೆಗಳು ಮತ್ತು ಮಳೆಗಾಲ ಜೊತೆಯಾಗಿ ಪ್ರಾರಂಭವಾಗುತ್ತವೆ. ನಾನು ಚಡ್ಡಿ ಹಾಕಿಕೊಂಡು ಸ್ಲೇಟು-ಬಳಪ, ಮಗ್ಗಿ ಪುಸ್ತಕ ಎಲ್ಲ ಸಿದ್ಧಮಾಡಿಕೊಂಡು ಶಾಲೆಗೆ ಹೋಗಲು ತಯಾರಿ ನಡೆಯಿತು. ಛತ್ರಿ ಮಾತ್ರ ಇರಲಿಲ್ಲ. ನಮ್ಮ ಮನೆಯಲ್ಲಿದ್ದ ಹಳೆಯ ಛತ್ರಿಯೊಂದು ಬಳಸಲಾಗದಷ್ಟು ಶಿಥಿಲವಾಗಿತ್ತು. ಕಬ್ಬಿಣದ ಕಡ್ಡಿಯ ಕೊಡೆಗಳು ನಮ್ಮ ಆರ್ಥಿಕಸ್ಥಿತಿಗೆ ಎಟುಕದಷ್ಟು ದುಬಾರಿಯಾಗಿದ್ದವು. ಯಾವ ನಿರ್ದಿಷ್ಟ ವರಮಾನವು ಇಲ್ಲದ ನನ್ನ ತಾಯಿಯವರಿಗೆ ಜೀವನ ಯಾಚನೆಯೇ ಕಷ್ಟದಾಯಕವಾಗಿತ್ತು. ಸೋದರಮಾವನ ನೆರವು ಮತ್ತು ಸೂಲಗಿತ್ತಿಯಾಗಿ ಕೇರಿಯ ನೆರೆಹೊರೆಯಲ್ಲಿನ ಬಾಣಂತಿತನದ ಕೆಲಸ ಇಂತಹ ಅರೆಕಾಲಿಕ ಕೆಲಸಗಳಿಂದ ಅಲ್ಪಸ್ವಲ್ಪ ಆದಾಯ ಬರುತಿತ್ತು. ವಾಸಕ್ಕೊಂದು ಪುರಾತನ ಕಾಲದ ಸಣ್ಣ ಮನೆ ಇತ್ತು.

ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ನಾನು ಶಾಲೆಗೆ ಹೊರಟಿದ್ದೆ. ಪ್ರೀತಿಯ ಮಗ ಶಾಲೆಗೆ ಸೇರಿದ್ದರಿಂದ ಪುಲಕಿತರಾಗಿದ್ದ ತಾಯಿಯವರು ಪುಡಿಕಾಸು ಜೋಡಿಸಿ ಕರಾವಳಿಯ ಕಡೆಯಿಂದ ಮಾರಾಟಕ್ಕೆ ಬರುತ್ತಿದ್ದ ತಾಳೆಗರಿಯ ದೇಶೀಯ ಮಾಡೆಲ್ ಛತ್ರಿಯೊಂದನ್ನು ನಮ್ಮ ಊರಿನ ಸಂತೆಯಲ್ಲಿ ಕೊಡಿಸಿದರು. ಅದು ದೊಡ್ಡ ಗಾತ್ರದ ಅಣಬೆ ಆಕೃತಿಯ ಛತ್ರಿ. ಅದನ್ನು ಕಂಪನಿ ಛತ್ರಿಗಳಂತೆ ಮಡಿಚಲು ಆಗುತ್ತಿರಲಿಲ್ಲ. ಆದರೂ ನನ್ನ ಸ್ವಂತ ಛತ್ರಿಯನ್ನು ನೋಡಿ ನನಗೆ ಖುಷಿಯಾಯಿತು. ಅದರ ತೂಕ ಸ್ವಲ್ಪ ಹೆಚ್ಚಾಗಿತ್ತು.

ನನ್ನ ತಾಳೆಗರಿಯ ಹೊಸ ಛತ್ರಿಯನ್ನು ಗದೆಯಂತೆ ಹೆಗಲಮೇಲೆ ಇಟ್ಟುಕೊಂಡು ಅದನ್ನು ಗಿರಿಗಟ್ಲೆಯಂತೆ ತಿರುಗಿಸುತ್ತಾ ಶಾಲೆಗೆ ಹೋಗತೊಡಗಿದೆ. ನಮ್ಮ ಶಾಲೆಗೆ ಕೆಲವು ಹುಡುಗರು ಮಾತ್ರ ಇಂತಹ ಛತ್ರಿಗಳನ್ನು ತರುತ್ತಿದ್ದರು. ಬಹುಪಾಲು ಹುಡುಗರು ಸೂರ್ಯ ಮಾರ್ಕಿನ ಕಂಪನಿ ಕೊಡೆಗಳನ್ನು ತರುತ್ತಿದ್ದರು. ರೈನ್‌ಕೋಟ್‌ಗಳನ್ನು ಹಾಕಿಕೊಂಡು ಯಾರೂ ಬರುತ್ತಿರಲಿಲ್ಲ. ಸುತ್ತಮುತ್ತಲಹಳ್ಳಿಯ ಹುಡುಗರು ದೇಶಿಯ ರೈತ ಕೋಟ್‌ಕಂಬಳಿಯ ಕೊಪ್ಪೆಯನ್ನು ಬುರ್ಖಾದಂತೆ ಹಾಕಿಕೊಂಡು ಬರುತ್ತಿದ್ದರು. ಅದು ಮಲೆನಾಡಿನ ಬಿರುಮಳೆ-ಚಳಿಯನ್ನು ತಡೆಯಲು ಸರಿಯಾದ ಸಾಧನವಾಗಿತ್ತು. ಪೇಟೆಯವರು ಮಾತ್ರ ಕಂಬಳಿಕೊಪ್ಪೆಯನ್ನು ಬಳಸುವುದನ್ನು ತಮ್ಮ ಸ್ಥಾನ-ಗದ್ದೆಗಳಲ್ಲಿ ಕೆಲಸ ಮಾಡುವವರು ಕಂಬಳಿಕೊಪ್ಪೆಯ ಮೇಲೆ ತಾಳೆಗರಿಯ ಗೊರಬುಗಳನ್ನು ಬಳಸುತ್ತಿದ್ದರು.

## ಕದನ ಕುತೂಹಲ

ನಾನು ಶಾಲೆಗೆ ಹೋಗಲು ಶುರುಮಾಡಿದ ಒಂದೆರಡು ದಿನಗಳಲ್ಲಿ ನನ್ನ ತಾಳೆಗರಿ ಛತ್ರಿಯು ಗಂಡಾಂತರಗಳು ಅನುಭವಕ್ಕೆ ಬರತೊಡಗಿದವು. ಮಡಿಚಿಡಲಾಗದ ಆ ಛತ್ರಿಯನ್ನು ಶಾಲೆಯ ಜಗುಲಿಯ ಮೇಲೆ ಇಡಬೇಕಾಗುತ್ತಿತ್ತು. ಜೋರಾಗಿ ಗಾಳಿ ಬೀಸಿದರೆ ಅವು ಎಲ್ಲೆಲ್ಲೋ ಹಾರಿಹೋಗಿ ಜಖಂ ಆಗುವ ಸಾಧ್ಯತೆ ಇದ್ದರಿಂದ ಈ ನಮ್ಮ ಛತ್ರಿಗಳನ್ನು ಗೋಡೆಯ ಮರೆಯಲ್ಲಿ ಕಿಟಕಿಯ ಸರಳುಗಳಿಗೆ ಹಗ್ಗದಿಂದ ಕಟ್ಟಬೇಕಾಗಿತ್ತು. ಶಾಲೆಗೆ ಹೋಗುವಾಗ - ಬರುವಾಗ ಸೂರ್ಯಮಾರ್ಕಿನ ಕಂಪನಿ ಕೊಡೆಗಳ ಹುಡುಗರು ನಮ್ಮ ಛತ್ರಿಗಳಿಗೆ ಗುನ್ನ ಹೊಡೆದು ತೂತು ಮಾಡುವ ಭೀತಿಯಿಂದ ಅವರಿಂದ ತಪ್ಪಿಸಿಕೊಳ್ಳಲು ಅಪಾಯ ಉಂಟಾಗದಂತೆ ಆಜುಬಾಜು ಯಾರೂ ಇಲ್ಲದಿರುವ ದೂರದಲ್ಲಿ ನಡೆದಾಡಬೇಕಾಗಿತ್ತು. ಶಾಲೆಯ ಪಾಠಕ್ಕಿಂತ ಛತ್ರಿಯ ರಕ್ಷಣೆಯೇ ದೊಡ್ಡ ಸವಾಲಾಯಿತು. ಈ ರೀತಿ ನಾಜೂಕಿನ ಛತ್ರಿಯ ಸಹವಾಸ ನನ್ನ ಹೇಡಿತನದ ಲಕ್ಷಣದಂತೆ ಕಾಣತೊಡಗಿತು. ಶಾಲೆಯ ರಣರಂಗದಲ್ಲಿ ಹೆಚ್ಚುದಿನ ಈ ಅವಮಾನವನ್ನು ಸಹಿಸುವುದಾದರು ಹೇಗೆ? ನನ್ನಲ್ಲೂ ಕದನ ಕುತೂಹಲ ಮೂರ್ತವಾಗುತ್ತಿತ್ತು.

ದೇಶಿ ಛತ್ರಿಗಳ ಹುಡುಗರಿಗೂ ಸೂರ್ಯಮಾರ್ಕ್ ಛತ್ರಿಯ ಹುಡುಗರಿಗೂ ಅವ್ಯಕ್ತವಾಗಿದ್ದ ಕದನ ಕುತೂಹಲ ಮೂರ್ತವಾಗತೊಡಗಿತು. ನನ್ನ ತಾಳೆಗರಿ ಛತ್ರಿಗೆ ಗುನ್ನಾ ಬೀಳಲು ಶುರುವಾಯಿತು. ಹೀಗೆ ನಡೆಯುತ್ತಿದ್ದ ಸಣ್ಣಪುಟ್ಟ ಘರ್ಷಣೆಗಳು ಬರುಬರುತ್ತಾ ಕುರುಕ್ಷೇತ್ರದ ಗದಾಯುದ್ಧದಂತೆ ತೀವ್ರ ಸ್ವರೂಪ ಪಡೆದು ನಮ್ಮ ತಾಳೆಗರಿಯ ಛತ್ರಿಗಳು ತೊಡೆಮುರಿದು ಬಿದ್ದ ದುರ್ಯೋಧನ ಧರೆಗೋಳಿದಂತೆ ಹರಿದು ಚಿಂದಿಯಾಗಿ ಅವಸಾನ ಹೊಂದುತ್ತಿದ್ದವು. ಅವುಗಳನ್ನು ರಿಪೇರಿ ಮಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಸೂರ್ಯಮಾರ್ಕಿನ ಕಂಪನಿ ಕೊಡೆಗಳ ಆಕ್ರಮಣಕ್ಕೆ ನಮ್ಮ ದೇಶಿ ಛತ್ರಿಗಳು ಆಹುತಿಯಾಗುತ್ತಿದ್ದವು. ಶಾಲೆಯಿಂದ ಹಿಂದಿರುಗಿ ಮನೆಗೆ ಬರುವಾಗ ನಮ್ಮ ಛತ್ರಿಗಳಿಗೆ ಉಂಟಾದ ದುರಂತದ ಮತ್ತು ನಮ್ಮ ಸ್ವಾಭಿಮಾನಕ್ಕೆ ಒದಗಿದ ದುಃಸ್ಥಿತಿಯ ಕಣ್ಣೀರನ್ನು ತಡೆಯಲಾಗುತ್ತಿರಲಿಲ್ಲ. ಗಾಯದ ಮೇಲೆ ಬರೆ ಎಳೆದಂತೆ ಛತ್ರಿಯನ್ನು ಜೋಪಾನವಾಗಿಟ್ಟುಕೊಳ್ಳದ ನನ್ನ ದುರ್ನಡತೆಗೆ ನಿರ್ದಯವಾಗಿ ತಾಯಿಯವರು ಛೀಮಾರಿ ಹಾಕುತ್ತಿದ್ದರು. ನನಗೆ ಶಾಲೆಯ ಸಹವಾಸವೇ ಬೇಡವಾಯಿತು.

ಸೂರ್ಯಮಾರ್ಕಿನ ಕಂಪನಿ ಕೊಡೆ ಇಲ್ಲದೆ ನಾನು ಶಾಲೆಗೆ ಹೋಗುವುದಿಲ್ಲವೆಂದು ಹಠ ಹಿಡಿದು ಕುಳಿತುಬಿಟ್ಟೆ. ಅಸಹಾಯಕರಾದ ತಾಯಿಯವರು ಅದಷ್ಟು ಬೇಗನೆ ಹೊಸ ಛತ್ರಿ ಕೊಡಿಸುವುದಾಗಿ, ಅಲ್ಲಿಯವರೆಗೂ ಮೇಡಂ ಮಕ್ಕಳ ಜೊತೆಯಲ್ಲಿ ಅವರ ಛತ್ರಿಯಲ್ಲಿ ನನ್ನನ್ನೂ ಕರೆದುಕೊಂಡು ಶಾಲೆಗೆ ಹೋಗುವಂತೆ ತಾತ್ಕಾಲಿಕ ವ್ಯವಸ್ಥೆ ಮಾಡಿರುವುದಾಗಿ ನನ್ನನ್ನು ಪುಸಲಾಯಿಸಿ ಮತ್ತೆ ನಾನು ಶಾಲೆಗೆ ಹೋಗುವಂತಾಯಿತು. ಪರಾಶ್ರಯದ ಛತ್ರಿಯಲ್ಲಿ ತಲೆತೂರಿಸಿಕೊಂಡು ಛತ್ರಿ ಹಿಡಿದ ಗೆಳೆಯನ ಮರ್ಜಿಯಲ್ಲಿ ಶಾಲೆಗೆ ಹೋಗುವುದು ನನಗೆ ಅಷ್ಟು ಹಿತಕರವಾಗಿರಲಿಲ್ಲ. ಗಾಳಿ ಮಳೆಯ ಇರಚಲು ಹೊಡೆದಾಗ ಮೈಯಲ್ಲ ತೊಯ್ಯು

ತೊಪ್ಪೆಯಾಗಿ ಚಳಿ ಹತ್ತಿ ನಡುಕ ಉಂಟಾಗುತ್ತಿತ್ತು. ದುಬಾರಿಯಾದ ಸೂರ್ಯ ಮಾರ್ಕಿನ ಛತ್ರಿ ಕೊಡಿಸಲು ತಾಯಿಯವರಿಗೆ ತಕ್ಷಣ ಹಣ ಹೊಂದಿಸಲು ಸಾಧ್ಯವಾಗಲಿಲ್ಲ. ನಾನು ಅದನ್ನೆಲ್ಲ ಗಮನಿಸುವಷ್ಟು ಪ್ರಬುದ್ಧನಾಗಿರಲಿಲ್ಲ . ಪರಾಶ್ರಯದ ಛತ್ರಿಯಲ್ಲಿ ಶಾಲೆಗೆ ಹೋಗಲು ನಾನು ನಿರಾಕರಿಸತೊಡಗಿದೆ. ಪ್ರತಿದಿನ ಬೆಳಿಗ್ಗೆ ಶಾಲೆಗೆ ಹೋಗುವ ಸಮಯ ಬಂದಾಗ ನಾನು ತಕರಾರು ಮಾಡುತ್ತಿದ್ದೆ. ಶಾಲೆಗೆ ಹೋಗುವುದನ್ನು ತಪ್ಪಿಸಿಕೊಳ್ಳಲು ಇದೊಂದು ಪ್ರಬಲವಾದ ಕಾರಣವಾಗಿತ್ತು. ನನ್ನನ್ನು ಓದಿಸಲೇಬೇಕೆಂದು ಹಠ ಹಿಡಿದುಕೊಂಡಿದ್ದ ತಾಯಿಯವರು ಮೇಡಂ ಜಲಜಾಕ್ಷಮ್ಮನವರ ಸಹಾಯ ಯಾಚಿಸಿ ಅವರ ಪರಿಚಿತರ ಬಟ್ಟೆ ಅಂಗಡಿಯಿಂದ ಕಂತಿನ ಮೇಲೆ ಸೂರ್ಯಮಾರ್ಕಿನ ಹೊಸ ಛತ್ರಿಯನ್ನು ನನಗೆ ತಂದುಕೊಟ್ಟರು.

ಸೂರ್ಯಮಾರ್ಕಿನ ಹೊಸ ಛತ್ರಿ ನನ್ನ ಹೆಮ್ಮೆಗೆ ಕಾರಣವಾಯಿತು. ನಮ್ಮ ಕೇರಿಯಲ್ಲೇ ವಾಸವಾಗಿದ್ದ ಸಿನಿಮಾ ಪೋಸ್ಟರ್ ಬರೆಯುವ ಪೆಯಿಂಟರ್ ಮುತ್ತಣ್ಣನಿಂದ ನನ್ನ ಹೊಸ ಛತ್ರಿಯ ಹೊರಭಾಗದಲ್ಲಿ ಇಂಗ್ಲಿಷ್‌ನಲ್ಲೂ, ಒಳಭಾಗದಲ್ಲಿ ಕನ್ನಡದಲ್ಲೂ ಫಳಫಳ ಹೊಳೆಯುವ ಸಿಲ್ವರ್ ಪೇಯಿಂಟ್‌ನಲ್ಲಿ ಅತ್ಯಂತ ಸುಂದರವಾದ ಅಕ್ಷರಗಳಲ್ಲಿ ಚಿತ್ರರಂಜಿತವಾಗಿ ನನ್ನ ನಾಮಾಂಕಿತವನ್ನು ಬರೆಸಿಕೊಂಡು ಮಳೆ ಇಲ್ಲದಿದ್ದರೂ ಛತ್ರಿಯನ್ನು ಮಡಚದೆ ಠೀವಿಯಿಂದಲೇ ಮತ್ತೆ ಶಾಲೆಗೆ ಹೋಗತೊಡಗಿದೆ. ಶಾಲೆಯಲ್ಲಿ ಕಾಟಾಚಾರಕ್ಕೆ ಕುಳಿತಿದ್ದು ತರಗತಿಯ ಕಿಟಕಿಯ ಸರಳಿಗೆ ನೇತುಹಾಕಿದ್ದ ನನ್ನ ಛತ್ರಿಯನ್ನು ಗಮನಿಸುತ್ತಾ ಶಾಲೆ ಬಿಡುವ ಗಂಟೆ ಹೊಡೆಯುವುದನ್ನು ಕಾಯುತ್ತಿದ್ದೆ.

ಶಾಲೆಗೆ ಹೋಗಲು ನಾನಾತರದ ತಕರಾರು ಮಾಡುತ್ತಿದ್ದ ನಾನು ನನ್ನ ಛತ್ರಿಯನ್ನು ಹಿಡಿದು ಗಮ್ಮತ್ತಿನ ಹುಮ್ಮಸ್ಸಿನಲ್ಲಿ ಶಾಲೆಗೆ ಹೋಗತೊಡಗಿದೆ. ನನ್ನ ಸಡಗರವನ್ನು ಕಂಡು ತಾಯಿಯಿವರಿಗೂ ಖುಷಿಯಾಗಿತ್ತು. ಛತ್ರಿಯ ಚಮತ್ಕಾರ ಶಾಲೆಯ ಆಕರ್ಷಣೆಗೆ ಪ್ರಚೋದನೆಯಾಯಿತು. ಹೊಸ ಛತ್ರಿಯ ಗರಿಗರಿ ಬಟ್ಟೆಯ ಮೇಲೆ ಬೀಳುತ್ತಿದ್ದ ಮಳೆಯ ಹನಿಗಳು ಉದುರಿದ ಮುತ್ತಿನ ಹನಿಗಳಂತೆ ಜಾರುವುದು ಬೆರಗು ಹುಟ್ಟಿಸುತ್ತಿತ್ತು. ಸೂರ್ಯ ಮಾರ್ಕಿನ ಛತ್ರಿಯ ಒಡನಾಟ ನನ್ನ ಶಾಲಾ ದಿನಗಳ ಸಂಭ್ರಮಕ್ಕೆ ಕಾರಣವಾಯಿತು.

ಚಿಕ್ಕಂದಿನಿಂದಲೂ ಕಪಿಚೇಷ್ಟೆಯಲ್ಲಿ ನಿರತನಾಗಿದ್ದ ನನಗೆ ಬಾಲ್ಯದ ಗೆಳೆಯನೊಬ್ಬನಿದ್ದ. ಅವನ ಹೆಸರು ಖಲಂದರ್. ಮುಸ್ಲಿಂ ಸಮುದಾಯದವನು. ಅವರ ತಂದೆ ತಾಯಿ ಬಡವರಾಗಿದ್ದರು. ಅಕ್ಕಿ ತೌಡನ್ನು ಕೇರಿ ಅಳಿದುಳಿದ ನುಚ್ಚನ್ನು ಆಯ್ದು ಅನ್ನ ಮಾಡಿ ಊಟ ಮಾಡುತ್ತಿದ್ದರು. ಖಲಂದರ್ ಹಣ್ಣು ಕದಿಯೋದ್ರಲ್ಲಿ ನಿಸ್ಸೀಮನಾಗಿದ್ದ. ನಾನು ಸದಾ ಅವನ ಜೊತೆ ಹೋಗ್ತಿದ್ದೆ. ಒದು ದಿನ ಚಕ್ಕೋತ ಹಣ್ಣು ಕೀಳಲು ಮರ ಹತ್ತಿದ. ಕಾಲು ಜಾರಿ ಕೆಳಗೆ ಬಿದ್ದು ಸತ್ತ.

ಖಲಂದರ್ ಸಾವು ನನ್ನನ್ನು ಸದಾ ಕಾಡುವಂತಾಯಿತು. ನಾನು ಎಸ್.ಎಸ್.ಎಲ್.ಸಿ.ಯಲ್ಲಿ ಅನುತ್ತೀರ್ಣನಾದೆ. ಆಗ ಅಲ್ಲಿ ಇಲ್ಲಿ ಕೂಲಿಗೆ ಹೋಗಲು ಪ್ರಾರಂಭಿಸಿದೆ. ತಾಯಿಯವರ ಪ್ರೀತಿಯ ನೆರಳಿನಲ್ಲಿ ಹೇಗೋ ನಾನು ಅನೇಕ ಕವಲುದಾರಿಗಳನ್ನು ತಟಾಯಿಸಿಕೊಂಡು

ಎಸ್‌ಎಸ್‌ಎಲ್‌ಸಿ ಗಂಡಾಂತರವನ್ನು ದಾಟಿ ಪಿಯುಸಿಗೆ ಬಂದೆ. ಈ ನಡುವೆ ನನ್ನ ತಾಯಿಗೆ ನರ್ಸ್ ಕೆಲ್ಸ ಸಿಕ್ತು. ಆಗ ಜೀವನ ಸುಧಾರಿಸಿತು. ತಾಯಿಗೆ ವರ್ಗವಾದಂತೆಲ್ಲ ಆ ಊರು ಈ ಊರುಗಳ ಪರಿಚಯವಾಗತೊಡಗಿತು.

## ಲೋಹಿಯಾ ಚಿಂತನೆಯ ಸುಂಟರಗಾಳಿ

ಆಗ ೬೦ರ ದಶಕದ ನೆಹರೂ ಯುಗದ ಮಹಿಮೆಯ ಕಾಲ. ನೆಹರೂವಿನ ವೈಭವೀಕರಣ ಮತ್ತು ನೆಹರೂ ನಿಂದನೆಯ ಕಾಲ. ಇಂತಹ ಪರ್ವ ಕಾಲದಲ್ಲಿ ಪಿಯುಸಿ ಓದಲು ನಾನು ಶಿವಮೊಗ್ಗಾದ ಸಹ್ಯಾದ್ರಿ ಕಾಲೇಜಿಗೆ ಸೇರಿಕೊಂಡೆ. ಶಿವಮೊಗ್ಗ ಜಿಲ್ಲೆ ಸಮಾಜವಾದಿಗಳ ಹೋರಾಟದ ಪ್ರತಿಘಟನೆಯ ತವರು ಮನೆಯಾಗಿತ್ತು. ಲೋಹಿಯಾ ಚಿಂತನೆಯ ಸುಂಟರಗಾಳಿಯ ಸುಳಿಗೆ ಸಿಕ್ಕವರ ಬುದ್ಧಿ-ಮನಸ್ಸುಗಳ ಹೊಸ ಕನಸುಗಳ ವೈಹಾಳಿಯಲ್ಲಿ ಲಗ್ಗೆ ಹಾಕಲು ಹಂಬಲಿಸುತ್ತಿದ್ದ ಕಾಲ. ಈ ವೈಹಾಳಿಯ ಮುಂಚೂಣಿಯಲ್ಲಿದ್ದ ಶಾಂತವೇರಿ ಗೋಪಾಲಗೌಡರು, ಜೆ.ಎಚ್. ಪಟೇಲರು ಮತ್ತು ಅವರ ಒಡನಾಡಿಗಳೆಲ್ಲ ಕ್ರಾಂತಿಕಾರಿಗಳಂತೆ ಕಂಗೊಳಿಸುತ್ತಿದ್ದರು.

ಮಲೆನಾಡಿನಲ್ಲಿ ತುಂಟ ಹುಡುಗನಾಗಿ ಬೆಳೆದಿದ್ದ ನಾನು, ಶಿವಮೊಗ್ಗದ ಪರಿಸರದ ಪ್ರಚೋದನೆಯಿಂದ ಪ್ರಭಾವಿತನಾದೆ. ನನ್ನ ತುಂಟನ ರೂಪಾಂತರವಾಗಿ ನನ್ನೊಳಗೂ ಒಬ್ಬ ಭಾರತ ಜನನಿಯ ತನುಜಾತನಾದ 'Angry young man' ಮೂರ್ತನಾಗತೊಡಗಿದ. 'ಏನಾದರು ಮಾಡುತಿರು ತಮ್ಮ, ನೀನು ಸುಮ್ಮನಿರಬೇಡ'ವೆಂಬಂತೆ ನಾನು ವರ್ತಿಸತೊಡಗಿದೆ.

ಇದೇ ಕಾಲದಲ್ಲಿ ಪಿ. ಲಂಕೇಶರು ಸಹ್ಯಾದ್ರಿ ಕಾಲೇಜಿನಲ್ಲಿ ನಮಗೆ ಇಂಗ್ಲಿಷ್ ಮೇಷ್ಟ್ರರಾಗಿದ್ದರು. ಮಿರಿಮಿರಿ ಮಿಂಚುತ್ತಿದ್ದ ಲಂಕೇಶರು, ಅವರ ಹೆಸರಿನ ವೈಚಿತ್ರ್ಯಕ್ಕೆ ಅನುಗುಣವಾಗಿ ಔಪಚಾರಿಕತೆಗಳನ್ನು ಉಲ್ಲಂಘಿಸುವ ಅವರ ರೀತಿ-ನೀತಿಗಳ ವಿವಾದಾಸ್ಪದ ನಡವಳಿಕೆಯಿಂದ, ಅಶಾಂತರಾಗಿ ಸ್ವಾತಂತ್ರ್ಯೋತ್ತರ ಭಾರತದ 'Angry young man'ನ ಲಕ್ಷಣಗಳಿಂದ ಅಧ್ಯಾಪಕ ವರ್ಗದಲ್ಲೇ 'ರೆಬಲ್‌ಸ್ಟಾರ್ 'ನಂತೆ ವಿಜೃಂಭಿಸುತ್ತಾ ನಮಗೆ ಆಪ್ತರಾದರು. ಇತರರಿಗಿಂತ ವಿಭಿನ್ನವಾಗಿ ಕಾಣುತ್ತಿದ್ದ ಅವರು ಆಗಲೇ ಬರಹಗಾರರಾಗಿ ಗುರುತಿಸಿಕೊಂಡಿದ್ದರು. ನೋಡುವುದಕ್ಕೆ ಸುಂದರವಾಗಿದ್ದರು. ಆಕರ್ಷಕ ವ್ಯಕ್ತಿತ್ವ. ಅವರು ಪಾಠ ಮಾಡುತ್ತಿರುವಾಗ ಯಾರಾದ್ರು ಕಾರಿಡಾರಿನಲ್ಲಿ ಓಡಾಡಿದ್ರೆ ಪಾಠ ನಿಲ್ಲಿಸೋರು. ಅವರಿಗೆ ಗಲಾಟೆ ಅಂದ್ರೆ ಆಗುತ್ತಿರಲಿಲ್ಲ.

ಒಂದು ದಿನ ಲಂಕೇಶ್ ತರಗತಿ ತೆಗೆದುಕೊಂಡಿದ್ರು. ಕೆಲವರು ಗಲಾಟೆ ಮಾಡ್ತಿದ್ರು. ಪ್ರಿನ್ಸಿಪಾಲ್ ಧಾವಿಸಿ ಬಂದ್ರು. ಲಂಕೇಶರನ್ನು 'ಯಾಕೆ ಗಲಾಟೆ ಮಾಡಿಸ್ತಿದ್ದೀರಿ' ಎಂದು ಕೇಳಿದ್ರು. ಲಂಕೇಶರಿಗೆ ಎಲ್ಲಿತ್ತೋ ಸಿಟ್ಟು.... 'ರೀ, ಇದು ನನ್ನ ಕ್ಲಾಸು, ಇಲ್ಲಿ ನಿಮಗೇನು ಕೆಲ್ಸ, ಗೆಟೌಟ್!' ಅಂದ್ರು;ಕೆಲವರು ಲಂಕೇಶ್ ಯಾವಾಗ್ಲೂ ಹುಡುಗೀರ್ ಕಡೆ ನೋಡ್ತಿರ್ತಾರೆ ಅನ್ನೋ ಆರೋಪ ಮಾಡ್ತಿದ್ರು.

### ಮಹಾಗುರುವಿನ ಸಾವು ಮತ್ತು ಬುದ್ಧ

ಹನುಮಂತಪ್ಪ ಅಂಥ ಇನ್ನೊಬ್ಬ ಮೇಷ್ಟ್ರಿದ್ದರು. ಅವರು ರಾಜ್ಯಶಾಸ್ತ್ರ ಪಾಠ ಮಾಡ್ತಿದ್ರು. ಚಮ್ಮಾರ ಜನಾಂಗದವರು. ಲಂಕೇಶರ ಆಪ್ತ ಸ್ನೇಹಿತರು. ಅವರೆ ನನ್ನನ್ನು ಕಾಲೇಜಿಗೆ ಸೇರಿಸಿದ್ದು. ತುಂಬಾ ಉಪಕಾರಿ ಮನೋಭಾವ ಅವರದು. ಒಮ್ಮೆ ಅವರು ಎನ್‌ಸಿಸಿ ಅಧಿಕಾರಿಯಾಗಿ ಆಯ್ಕೆಯಾದರು. ಕರ್ತವ್ಯದ ಮೇಲೆ ಪೂನಾಕ್ಕೆ ಹೋದರು. ಅಲ್ಲಿನ ಹೊಳೆಯಲ್ಲಿ ಸಹಪಾಠಿಗಳ ಜೊತೆ ಸ್ನಾನ ಮಾಡ್ತಿದ್ರು. ಇದ್ದಕ್ಕಿದ್ದಂತೆ ಸಹಪಾಠಿಗಳು ಹೊಳೆಯಲ್ಲಿ ಕೊಚ್ಕಂಡು ಹೊರಟರು. ಅವರನ್ನು ಕಾಪಾಡಲು ಹೋಗಿ ಹನುಮಂತಪ್ಪನವರೂ ಕೊಚ್ಚಿಕೊಂಡು ಹೋದರು.

ಆ ಮಹಾಗುರುವಿನ ಸಾವು ನನ್ನಮೇಲೆ ದಟ್ಟ ಪ್ರಭಾವ ಬೀರಿತು. ನಾನು ಕಾಲೇಜಿಗೆ ಬಂದಾಗ ಆಕಸ್ಮಿಕವಾಗಿ ಬುದ್ಧನ ಪರಿಚಯವಾಯಿತು. ಬುದ್ಧ ನನಗೆ ಇಷ್ಟವಾದ. ನನ್ನ ಮನೆಯ ದೇವರುಗಳನ್ನು ಸುಟ್ಟು, ಬುದ್ಧನನ್ನು ಮನದಲ್ಲಿ ಸ್ಥಾಪಿಸಿಕೊಂಡೆ.

ನಾನು ಓದುತ್ತಿರುವಾಗ ಗೋಪಾಲಗೌಡರನ್ನು, ರಾಮಮನೋಹರ ಲೋಹಿಯಾ ಅವರನ್ನು ನೋಡಿದ್ದೆ. ನನ್ನ ಕಣ್ಣುಗಳಲ್ಲಿ ಅವರು ಈಗಲೂ ಬೆಳಕು. ೧೯೪೮ ರಲ್ಲಿ ಹಿಂದೂ ಧರ್ಮದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಮಹಾತ್ಮಗಾಂಧಿಯನ್ನು, ಹಿಂದೂ ಧರ್ಮದವನೇ ಆದ ಗೋಡ್ಸೆ ಕೊಂದಾಗ ನಾನು ಸೀಮೆ ಎಣ್ಣೆ ತರಲು ಅಂಗಡಿ ಕಡೆ ಹೊರಟಿದ್ದೆ. ಎಲ್ಲಾ ಅಂಗಡಿಗಳು ಮುಚ್ಚಿದ್ದವು. ಎಲ್ಲರ ಕಣ್ಣಲ್ಲು ನೀರಾಡುತ್ತಿತ್ತು. ಒಬ್ಬ ಮಹಾತ್ಮನ ವ್ಯಕ್ತಿತ್ವ ಇಡೀ ಸಮುದಾಯದಲ್ಲಿ ಬೇರುಬಿಟ್ಟ ಕುರುಹು ಎಲ್ಲೆಡೆ ಗೋಚರಿಸುತ್ತಿತ್ತು.

ನಾನು ಕಾಲೇಜಿಗೆ ಸೇರಿದಾಗ ಶಿವಮೊಗ್ಗದಲ್ಲಿ ಬೆಕ್ಕಿನಕಲ್ಲುಮಠ ಅಂತ ಇತ್ತು. ಅಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರು, ಗೌಡರು, ಲಿಂಗಾಯತರು, ಕುರುಬರು, ಸಮಗಾರರು ಹೀಗೆ ವಿವಿಧ ಜಾತಿಯ ಹುಡುಗರು ಒಟ್ಟಿಗೆ ಇದ್ದರು. ಹಾಗಾಗಿ ನಾನು ಬೆಕ್ಕಿನಕಲ್ಲುಮಠದ ವಿದ್ಯಾರ್ಥಿ ನಿಲಯದಲ್ಲಿ ಆಶ್ರಯ ಪಡೆದಿದ್ದರೂ ಧಾರ್ಮಿಕತೆಯಿಂದ ಮುಕ್ತವಾದ ಸೆಕ್ಯುಲರ್ ಪರಿಸರದ ಒಡನಾಟದಿಂದ ಅನಿರ್ಬಂಧಿತವಾದ ಮತ್ತು ನಿರ್ಭೀತವಾದ ಬೌದ್ಧಿಕ ಲಹರಿಯಲ್ಲಿ ನಿರಂಕುಶಮತಿಯಾಗಿ ವಿಹರಿಸುವ ಅವಕಾಶ ಪ್ರಾಪ್ತವಾಯಿತು.

ಈ ಲಹರಿಯಲ್ಲಿ ತಲ್ಲೀನನಾಗಿರುವಾಗಲೆ ಪಿಯುಸಿಯ ಒಂದು ವರ್ಷ ಕಳೆದು ಹೋಯಿತು. ಓದುವುದಕ್ಕೆ ತಯಾರಾಗುವ ಮೊದಲೇ ಪರೀಕ್ಷೆ ಬಂದುಬಿಟ್ಟಿತು. ಪರೀಕ್ಷೆ ಮುಗಿಸಿಕೊಂಡು ನನ್ನ ತಾಯಿಯವರಿದ್ದ ಹಳ್ಳಿಗೆ ಹಿಂತಿರುಗಿದೆ. ನನ್ನ ಪಿಯುಸಿ ವಿದ್ಯಾಭ್ಯಾಸದ ಬಗ್ಗೆ ಅವರು ಪುಲಕಿತರಾಗಿದ್ದರು. ನನ್ನ ತುಂಟತನ ಮರೆಯಾಗಿ, ಅದು ಅಶಾಂತ ಚಿತ್ತವಾಗಿ ರೂಪಾಂತರವಾಗಿರುವುದನ್ನು ಅವರು ಗಮನಿಸಲೇ ಇಲ್ಲ.

### ಪುಂಡರ ಊರು-ಪರದೇಶಿ ಸಂಚಾರ

ಮಲೆನಾಡಿನ ಪುಟ್ಟಹಳ್ಳಿ ಅಂಬಾರ ಗೋಡ್ಲುವಿನಲ್ಲಿ ನರ್ಸಮ್ಮನಾಗಿ ದೀರ್ಘಕಾಲ ನೆಲೆಸಿದ್ದ ನನ್ನ ತಾಯಿಯವರನ್ನು, ಅಚಾನಕವಾಗಿ ಬಯಲುಸೀಮೆಯ ಸೆರಗಿನಲ್ಲಿ ಹೊನ್ನಾಳಿಯ ಆಸ್ಪತ್ರೆಗೆ

ವರ್ಗಾಯಿಸಲಾಯಿತು. ಪುಟ್ಟಹಳ್ಳಿಯಲ್ಲಿ ಅಲ್ಪವೆಚ್ಚದಲ್ಲಿ ನಿರಾತಂಕವಾಗಿ ಸಾಗುತ್ತಿದ್ದ ಜೀವನಕ್ಕೆ ಸಂಚಕಾರ ಬಂದಿತ್ತು. ಅನೇಕರು ಹೊನ್ನಾಳಿಯನ್ನು ಪುಂಡರ ಊರೆಂದು, ಅಲ್ಲಿಯ ಜನ ತುಂಬ ಒರಟರೆಂದು ದಿನಕ್ಕೊಂದು ಕೊಲೆ, ಹೊಡೆದಾಟ, ಬಡಿದಾಟ ನಡೆಯುವ ಸ್ಥಳವೆಂದು ತಾಯಿಯವರಿಗೆ ಗಾಬರಿ ಹುಟ್ಟಿಸಿದ್ದರು. ಅವರು ಚಿಂತಾಕ್ರಾಂತರಾದರು.

ಹೊನ್ನಾಳಿಗೆ ಹೋಗುವುದು ಅನಿವಾರ್ಯವಾಗಿತ್ತು. ಪ್ರಚಂಡ ಆತ್ಮವಿಶ್ವಾಸ ಮತ್ತು ಧೈರ್ಯಸ್ಥೆಯಾದ ತಾಯಿಯವರು ಹೊನ್ನಾಳಿಗೆ ಹೋಗುವುದರಿಂದ ಮಗನ ಕಾಲೇಜು ವ್ಯಾಸಂಗಕ್ಕೆ ಅನುವಾಗಬಹುದೆಂದು ಭಾವಿಸಿದ್ದರು. ನಮ್ಮ ಹುಟ್ಟೂರಿನಿಂದ ಮಲೆನಾಡಿನ ಹಳ್ಳಿಯನ್ನು ತೊರೆದು ಕಣ್ಣೀರಿಡುತ್ತಲೇ ಹೊನ್ನಾಳಿಗೆ ವಲಸೆ ಹೊರಟೆವು.

ಹೊನ್ನಾಳಿಗೆ ಬಂದು ನಾವು ನೆಲೆಸುವ ಹೊತ್ತಿಗೆ ಸರಿಯಾಗಿ ನನ್ನ ಪಿಯುಸಿ ಫಲಿತಾಂಶ ಪ್ರಕಟವಾಯಿತು. ನಾನು ಫೇಲಾಗಿದ್ದೆ. ನನ್ನ ಬಗ್ಗೆ ನನ್ನ ತಾಯಿಯವರು ಕಟ್ಟಿಕೊಂಡು ಬಂದಿದ್ದ ಕನಸುಗಳೆಲ್ಲ ಭಗ್ನವಾಗಿದ್ದವು. ಅವರು ಕಣ್ಣೀರಿಟ್ಟು, ಗೋಳಾಡಿದರು. ನಾನು ಅಪರಾಧಿಯಂತೆ ಪೆಚ್ಚುಮೋರೆ ಹಾಕಿಕೊಂಡು ತೆಪ್ಪಗೆ ಕುಳಿತುಬಿಟ್ಟೆ. " ಆಸ್ತಿ, ಮನೆ, ಮಠ ಯಾವುದು ಇಲ್ಲದ ನಮಗೆ ವಿದ್ಯಾಭ್ಯಾಸದ ಆಸರೆಯೂ ಇಲ್ಲದಿದ್ದರೆ ಬೀದಿಪಾಲಾಗಿ ಬದುಕಬೇಕಾಗುತ್ತದೆನ್ನುವುದನ್ನು ನೆನಪಿಟ್ಟುಕೊ" ಎಂದು ಪರಿಪರಿಯಾಗಿ ಬುದ್ಧಿ ಹೇಳಿ, "ಓದುವುದನ್ನು ತಾತ್ಸಾರ ಮಾಡಬೇಡ" ಎಂದು ತಾಕೀತು ಮಾಡಿದರು. ಅವರು ಗೋಳಾಡುವುದನ್ನು ನೋಡಿ, ನಾನು ಪಾಪಪ್ರಜ್ಞೆಯಿಂದ ಬೆಂದು ಹೋದೆ.

ನನ್ನ ದಾರುಣವಾದ ಸ್ಥಿತಿಯನ್ನು ಗಮನಿಸಿದ ಕರುಣಾಮಯಿಯಾದ ನನ್ನ ತಾಯಿಯವರ ಮನಸ್ಸು ಕರಗಿತು. "ಫೇಲಾದರೇನಂತೆ ಪ್ರಪಂಚ ಮುಳುಗಿ ಹೋಗಿಲ್ಲ. ಎಂತೆಂತಹ ಶ್ರೀಮಂತರ ಮಕ್ಕಳೇ ಫೇಲಾಗುತ್ತಾರೆ, ನೀನು ತಬ್ಬಲಿಯಾಗಿ ಬೆಳೆದವನು. ಕಷ್ಟಪಟ್ಟು ಓದಿದರೆ ಮುಂದಿನ ಪರೀಕ್ಷೆಯಲ್ಲಿ ಖಂಡಿತಾ ಪಾಸಾಗುತ್ತೀಯ, ಚಿಂತಿಸಬೇಡ" ಎಂದು ನನ್ನನ್ನು ಸಮಾಧಾನ ಮಾಡಿ ಪ್ರೋತ್ಸಾಹಿಸಿದರು. ಅವರ ಅದಮ್ಯವಾದ ಜೀವನೋತ್ಸಾಹ ನನ್ನನ್ನು ಉತ್ತೇಜಿಸಿತು. ನನ್ನ ಪಾಪಪ್ರಜ್ಞೆ ಮರೆಯಾಯಿತು. ಓದುವ ಏಕಾಗ್ರತೆ ಮಾತ್ರ ಉಂಟಾಗಲಿಲ್ಲ.

ಹೊನ್ನಾಳಿಯ ಪರಿಸರವೇ ನನಗೆ ಪರಕೀಯವಾಗಿತ್ತು. ಶಿವಮೊಗ್ಗದ ಬೌದ್ಧಿಕ ಒತ್ತಡವಾಗಲಿ ಅಥವಾ ಮಲೆನಾಡಿನ ನೈಸರ್ಗಿಕ ಪರಿಸರವಾಗಲಿ ಇಲ್ಲದೆ ನಾನು ಏಕಾಂಗಿಯಾಗಿ ಬಿಟ್ಟೆ. ತಾಲ್ಲೂಕು ಕೇಂದ್ರವಾದರೂ ಹೊನ್ನಾಳಿ ಪುಟ್ಟ ಊರು. ತುಂಗಭದ್ರಾ ನದಿ ಹರಿಯುತ್ತಿದ್ದರೂ ನನ್ನ ಪಾಲಿಗೆ ಆ ಊರು ಜಡವಾಗಿತ್ತು. ಸದಾಕಾಲ ಮನೆಯಲ್ಲಿ ಕುಳಿತಿರಲಾರದ ನಾನು, ಪರಕೀಯನಂತೆ ಊರಿನ ಬೀದಿಗಳನ್ನು ಸುತ್ತತೊಡಗಿದೆ.

ಅಪ್ಪಟ ರೈತಾಪಿ ಜನರ ಊರಾಗಿದ್ದ ಹೊನ್ನಾಳಿಯ ವಿದ್ಯಮಾನಗಳಲ್ಲಿ ಪ್ರಕ್ಷುಬ್ಧತೆಯ ಲಕ್ಷಣಗಳಿಲ್ಲದಿದ್ದರೂ, ಮಾರಿಜಾತ್ರೆಗಳ ರೌದ್ರತೆ, ಗರಡಿ ಮನೆಗಳ ದರ್ಬಾರು, ಪೈಲ್ವಾನರುಗಳ ದಾದಾಗಿರಿಯ ಜಿಟಾಪಟಿಯಿಂದ -ಆಗಾಗ ನಡೆಯುತ್ತಿದ್ದ ಮಾರಾಮಾರಿಗಳಿಂದ ಹೊನ್ನಾಳಿಯ ಖ್ಯಾತಿ ಮತ್ತು ಅಪಖ್ಯಾತಿಗಳು ಜೋಕಾಲಿಯಾಡುತ್ತಿದ್ದವು. 'ಹೊನ್ನಾಳಿ ಹೊಡೆತ' ವೆಂದರೆ

ಗರಡಿಮನೆಗಳ ತಾಲೀಮಿನ ವಿಭಿನ್ನ ಪಟ್ಟುಗಳ ಪರಸೆಗಳೆಂದು ಜನ ತಿಳಿದಿದ್ದರೂ ಸರ್ಕಾರಿ ಅಧಿಕಾರಿಗಳು ಮಾತ್ರ ಭೀತಿಯಿಂದ ನಡುಗುತ್ತಿದ್ದರು.

## ಮೊಟ್ಟ ಮೊದಲ ಪ್ರತಿಭಟನೆ

ಈ ಊರಿನಲ್ಲಿ ನನ್ನ ಪಾಲಿಗೆ ಯಮಗಂಡ ಕಾಲ ಬರುತ್ತದೆಂದು ನಾನು ತಿಳಿದಿರಲಿಲ್ಲ. ಪ್ರತಿದಿನ ಸಂಜೆ ಹೋಟೆಲೊಂದರಲ್ಲಿ ಚಹಾ ಕುಡಿದು ಅಲ್ಲಿ ಬರುತ್ತಿದ್ದ ಪೇಪರ್‌ಗಳನ್ನು ಓದುತ್ತಿದ್ದೆ. ಅದರ ಮಾಲೀಕರು ಮತ್ತು ಅಲ್ಲಿಗೆ ಬರುತ್ತಿದ್ದ ಅವರ ಸ್ನೇಹಿತರ ಪರಿಚಯವಾಗಿ ಒಡನಾಟ ಪ್ರಾರಂಭವಾಯಿತು. ಅವರಲ್ಲಿ ಕೆಲವರು ಶಾಲಾ ಮಾಸ್ತರರು ಇದ್ದರು. ಮಾಲೀಕರಾದ ಪರಮೇಶ್ವರಯ್ಯನವರನ್ನು ಎಲ್ಲರೂ 'ಸ್ವಾಮಿಯೋರು'ಎಂದು ಅಡ್ಡ ಹೆಸರಿನಿಂದಲೇ ಕರೆಯುತ್ತಿದ್ದರು. ಅವರಿಗೆ ನಾಡು-ನುಡಿಗಳ ಬಗ್ಗೆ ಅಪಾರ ಕಾಳಜಿ ಇತ್ತು. ಸ್ವಾಮಿಯೋರ ಹೋಟೆಲ್ ನನ್ನ ಕಾಲಹರಣದ ಅಡ್ಡೆಯಾಯಿತು. ಒಮ್ಮೆ ಅವರು ಆಗಸ್ಟ್ ೧೫ ರಂದು ಪುರಭವನದಲ್ಲಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮವಿದೆ. ಭಾಗವಹಿಸುವಂತೆ ತಿಳಿಸಿ, ನನಗೊಂದು ಆಹ್ವಾನಪತ್ರಿಕೆ ಕೊಟ್ಟರು. ಆಗಸ್ಟ್೧೫ ರಂದು ೮ ಗಂಟೆಗೆ ಪುರಭವನದ ಮುಂಭಾಗದಲ್ಲಿ ಆ ಪ್ರದೇಶದ ಸ್ವಾತಂತ್ರ್ಯ ಹೋರಾಟಗಾರರಾದ ಮಂತ್ರಿಗಳಿಂದ ಧ್ವಜಾರೋಹಣ ಕಾರ್ಯಕ್ರಮ ನಿಗದಿಯಾಗಿತ್ತು. ನಾನು ಸಮಯಕ್ಕೆ ಸರಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಪುರಭವನಕ್ಕೆ ಹೋದೆ. ಕೆಲವು ಶಾಲಾ ಬಾಲಕರು, ಕೆಲವೇ ಕೆಲವು ಆಸಕ್ತ ನಾಗರಿಕರು ಮತ್ತು ಪೊಲೀಸರು ಮಂತ್ರಿಗಳ ಆಗಮನದ ನಿರೀಕ್ಷೆಯಲ್ಲಿದ್ದರು.

ನಿಗದಿತ ಸಮಯ ಕಳೆದು ಎಷ್ಟು ಹೊತ್ತಾದರೂ ಮಂತ್ರಿಗಳು ಸುಳಿಯಲೇ ಇಲ್ಲ. ಅಲ್ಲಿಗೆ ಬಂದಿದ್ದ ಜನ ಅತ್ಯಂತ ತಾಳ್ಮೆಯಿಂದ ಪಾರ್ಕಿನಲ್ಲಿ ಸಂಭಾಷಣೆಯಲ್ಲಿ ತೊಡಗಿದ್ದರು. ಸೋನೆ ಮಳೆ ಸಣ್ಣಗೆ ಬೀಳಲಾರಂಭಿಸಿತು. ಪಾರ್ಕಿನಲ್ಲಿದ್ದ ಜನ ಚದುರಿ, ಪುರಭವನದಲ್ಲಿ ಹೋಗಿ ಆಶ್ರಯ ಪಡೆದರು. ಜನರ ನಡುವೆ ನಿಂತಿದ್ದ ನನ್ನ ಮನಸ್ಸು ಕಂಪಿಸತೊಡಗಿತು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ, ಅದರ ಫಲಾನುಭವಿಗಳಾದ ಈ ಮಂತ್ರಿಗಳಿಗೆ ಅಧಿಕಾರದ ಅಮಲಿನಲ್ಲಿ ಆ ದಿನಗಳ ರೋಮಾಂಚನದ ಕ್ಷಣಗಳೇ ಮರೆತು ಹೋಗಿರುವುದು ಸ್ವಾತಂತ್ರ್ಯೋತ್ತರ ಭಾರತದ ದುರಂತ. ಇಂತಹವರಿಗಾಗಿ ಕಾಯುವುದು, ಗೌರವಿಸುವುದು, ಅವರ ಮಾತುಗಳಿಗೆ ಚಪ್ಪಾಳೆ ತಟ್ಟುವುದು ಎಂತಹ ಅವಮಾನದ ಕೆಲಸವೆನಿಸತೊಡಗಿತು. ತುಂತುರು ಮಳೆಯ ತಣ್ಣನೆಯ ಗಾಳಿಯಲ್ಲೂ ಮೈ ಬಿಸಿಯಾಯಿತು. ಇಲ್ಲಿಂದ ಹೊರಟು ಬಿಡೋಣವೆನ್ನುವಷ್ಟರಲ್ಲಿ ಮಂತ್ರಿಗಳ ಆಗಮನವಾಯಿತು. ಆಗ ಗಂಟೆ ೯.೩೦ ಆಗಿತ್ತು. ಒಂದೂವರೆ ಗಂಟೆ ತಡವಾಗಿ ಬಂದಿದ್ದರೂ ಅವರ ಹಸನ್ಮುಖದಲ್ಲಿ ವಿಷಾದದ ಛಾಯೆ ಇರಲಿಲ್ಲ. ಅಧಿಕಾರಿಗಳು ಛತ್ರಿ ಹಿಡಿದು ಸಚಿವರನ್ನು ಬರಮಾಡಿಕೊಂಡರು.

ಸಭೆ ಪ್ರಾರಂಭವಾಯಿತು. ತಹಶೀಲ್ದಾರರು ಮಂತ್ರಿ ಮಹಾಶಯರನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ದೀನ ದಲಿತರ ಸೇವೆಗೆ ಕಂಕಣಬದ್ಧರಾದವರೆಂದು

ಪುಂಖಾನುಪುಂಖವಾಗಿ ಹಾಡಿ ಹೊಗಳಿ ಪುಷ್ಪ ಮಾಲಾರ್ಪಣೆ ಮಾಡಿ, ಸಿಂಪೆಹಣ್ಣು ಕೊಟ್ಟು ಕೈ ಕುಲುಕಿದರು. ಈ ದೇಶಾವರಿಯ ವಿದ್ಯಮಾನ ಮುಗಿದು, ಮಂತ್ರಿಗಳ ಸ್ವಾತಂತ್ರ್ಯೋತ್ಸವ ಸಂದೇಶವನ್ನು ಆಲಿಸಲು ಸಭಿಕರು ಕಾತರರಾಗಿದ್ದರು.

ನನ್ನೊಳಗೆ ಅವಿತುಕೊಂಡಿದ್ದ 'Angry young man' ನನ್ನನ್ನು ತೆಪ್ಪಗಿರಲು ಬಿಡಲಿಲ್ಲ. ನಾನು ವೇದಿಕೆಯ ಮುಂಭಾಗಕ್ಕೆ ತೆರಳಿ, ವಿಳಂಬವಾಗಿ ಆಗಮಿಸಿ ರಾಷ್ಟ್ರ ಧ್ವಜಾರೋಹಣವನ್ನು ಅಗೌರವಿಸಿದ್ದಕ್ಕಾಗಿ ಸಭೆಯ ಕ್ಷಮೆ ಯಾಚಿಸಬೇಕೆಂದು ಆರ್ಭಟಿಸಿದೆ. ಅನಿರೀಕ್ಷಿತವಾದ ನನ್ನ ಆಕ್ಷೇಪದಿಂದ ಸಭೆ ತಬ್ಬಿಬ್ಬಾಯಿತು. " ಯಾವನಲೇ ಅವನು, ಸುಮ್ಮನೇ ಕೂರಲೇ, ತಲಿ ನೆಟ್ಟಗಿಲ್ಲೇನು" ಎಂದು ಕೆಲವರು ನನ್ನ ಕಡೆಗೆ ಧಾವಿಸಿದರು. ನಾನು ವಿಚಲಿತನಾಗದೆ ಕಲ್ಲಿನಂತೆ ನಿಂತೇ ಇದ್ದೆ. ತಹಶೀಲ್ದಾರರು ಪೊಲೀಸರಿಗೆ ಸೂಚನೆ ನೀಡಿ, "ಅವನನ್ನು ಎಳೆದು ಹೊರಗ್ಹಾಕ್ರಿ" ಎಂದು ತಾಕೀತು ಮಾಡಿದರು. ಪೊಲೀಸರು ಬಂದು ನನ್ನ ಕೈ ಹಿಡಿದು ಎಳೆಯುತ್ತಿದ್ದಂತೆ ಸಭೆಯಲ್ಲಿ ಗದ್ದಲವಾಯಿತು. "ಅಲ್ರೀ, ಹುಡುಗ ಕೇಳಿದ್ರಾಗ ತಪ್ಪಾರು ಏನೈತಿ", "ಬರೋಬರಿ ಕೇಳ್ಯಾನ ಬಿಡ್ರೀ ಅವನ" ಎಂದು ಸಭಿಕರಲ್ಲಿ ಕೆಲವರು ನನ್ನ ಬೆಂಬಲಕ್ಕೆ ನಿಂತರು. ವಾದ ವಿವಾದಗಳಿಂದ ಸಭೆಯಲ್ಲಿ ಕೋಲಾಹಲವಾಯಿತು. ಒಳಗಿನ ಗದ್ದಲ, ಧ್ವನಿವರ್ಧಕದ ಮೂಲಕ ಹೊರಗಡೆ ಮೊಳಗತೊಡಗಿತು. ಕದನ-ಕುತೂಹಲಿಗಳಾದ ಜನರು ಒಳಗೆ ಇಣುಕತೊಡಗಿದರು.

ನನ್ನ ತಾಯಿಯವರು ಕೆಲಸ ಮಾಡುತ್ತಿದ್ದ ಆಸ್ಪತ್ರೆ ಪುರಭವನದ ಪಕ್ಕದಲ್ಲೇ ಇತ್ತು. ಈ ಗದ್ದಲದಲ್ಲಿ ನನ್ನನ್ನು ಗುರುತಿಸಿದ ಆಸ್ಪತ್ರೆಯ ನೌಕರನೊಬ್ಬ " ಅಯ್ಯೋ ಮಂಜಮ್ಮನವರೆ, ನಿಮ್ಮ ಮಗನಿಗೆ ಹಿಗ್ಗಾ-ಮುಗ್ಗಾ ಹೊಡೆಯುತ್ತಿದ್ದಾರೆ. ಏನೋ ಗಲಾಟೆ ಕಣ್ರೀ" ಎಂದು ಹೇಳಿದ. ಭೀತಿಯಿಂದ ತಲ್ಲಣಿಸಿದ ತಾಯಿಯವರು, ಗದ್ದಲದ ನಡುವೆ ಸಭಾಂಗಣದಲ್ಲಿ ನಿಂತಿದ್ದ ನನ್ನ ಕಡೆಗೆ ನುಗ್ಗಿ ಬಂದರು. " ಅವನು ನನ್ನ ಮಗ, ಬಿಡ್ರಿ ಅವನ್ನ" ಎಂದು ದಾರುಣವಾದ ಆರ್ತಸ್ವರದಲ್ಲಿ ಮೊರೆ ಇಟ್ಟರು. "ಈ ಹುಡುಗ, ನಿಮ್ಮ ಮಗ ಏನ್ರಮ್ಮ, ಕರಕೊಂಡು ಹೋಗ್ರಿ" ಎಂದು ನನ್ನನ್ನು ದಬ್ಬಿದರು.

ನನ್ನ ತಾಯಿಯವರಿಗೆ ಆವೇಶ ಬಂದಾಗಿತ್ತು. " ಈ ಊರಿನ ಉಸಾಬರಿ ನಿನಗ್ಯಾಕ್ಲೋ, ಯಾರ ತಂಟೆ- ತಕರಾರಿಗೆ ಹೋಗಬ್ಯಾಡ ಅಂತ ನಾನು ಹೇಳಿರಿಲಿಲ್ವಾ" ಎನ್ನುತ್ತಾ ಸಿಟ್ಟಿನಿಂದ ನನ್ನ ಕೆನ್ನೆಗೊಂದು ಏಟು ಬಾರಿಸಿ, "ಇದು ಪುಂಡರ ಊರು, ನಾವು ಪರದೇಶಿಗಳು ನಡಿ ಮನೆಗೆ" ಎಂದು ಲಗಾಮು ಹಾಕಿದ ಹೋರಿಯನ್ನು ಎಳೆದೊಯ್ಯುವಂತೆ ನನ್ನ ಕೈಹಿಡಿದು ದರದರನೆ ಎಳೆದುಕೊಂಡು ಹೊರಟರು. ಅಪ್ರಜ್ಞಾಪೂರ್ವಕವಾಗಿ ಅವರು ಆಡಿದ ನಿಂದನಾತ್ಮಕವಾದ ಮಾತುಗಳನ್ನು ಜನ ಗಮನಿಸಿರಲಿಲ್ಲ.

ಭಾರತ ಜನನಿಯ ತನುಜಾತನಾದ ನನ್ನ ಮೊಟ್ಟಮೊದಲ ಸಾರ್ವಜನಿಕ ಪ್ರತಿಭಟನೆ ನನ್ನ ತಾಯಿಯವರ ಮಧ್ಯಪ್ರವೇಶದಿಂದ ಭಗ್ನವಾಯಿತು. ನನಗೆ ಆ ಕ್ಷಣದಲ್ಲಿ ಮುಖಭಂಗವಾದರೂ ನಾನೊಬ್ಬ ಪ್ರತಿಭಟನಾಕಾರನಾಗಿ ಹೊಸ್ನಾಳಿಯಲ್ಲಿ ಅಪಾಯಕಾರಿಯಾದ ಅಖಾಡಕ್ಕೆ ಇಳಿದಿದ್ದೆ.

ನಾನು ಪ್ರಾಥಮಿಕ ಶಾಲೆಗೆ ಹೋಗುವಾಗ ಮನೆಯಲ್ಲಿ ಜಡೆ ಹೆಣೆದು ಹೂ ಮುಡಿಸಿ ಟೋಪಿ ತೊಡಿಸೋರು. ಓಲೇನೂ ಇಡೋರು. ಒಂದು ಸಲ ಯಾರೋ ಒಬ್ಬ ನನ್ನನ್ನು ಕರೆದು ಕಬ್ಬು ಬೇಕಾ ಅಂದ. ನನಗೆ ಕಬ್ಬು ಕಂಡ್ರೆ ತುಂಬಾ ಆಸೆ ಆಗೋದು. ಕೊಡು ಎಂದೆ. ಅದಕ್ಕವನು ನಿನ್ನ ಓಲೆ ಕೊಡು ಕಬ್ಬು ಕೊಡ್ತೀನಿ ಎಂದ. ಕೊಟ್ಟೆ. ಮನೆಗೆ ಹೋದೆ. ಅಪಾರವಾಗಿ ಹೊಡೆದರು. ಅಂದಿನಿಂದ ಚಿನ್ನ ಬಿಟ್ಟೆ.

## ಮಳೆಗಾಲ ಮತ್ತು ಛತ್ರಿ ಪ್ರಸಂಗ

ಮಲೆನಾಡಿನಲ್ಲಿ ಶಾಲೆಗಳು ಮತ್ತು ಮಳೆಗಾಲ ಜೊತೆಯಾಗಿ ಪ್ರಾರಂಭವಾಗುತ್ತವೆ. ನಾನು ಚಡ್ಡಿ ಹಾಕಿಕೊಂಡು ಸ್ಲೇಟು-ಬಳಪ, ಮಗ್ಗಿ ಪುಸ್ತಕ ಎಲ್ಲ ಸಿದ್ಧಮಾಡಿಕೊಂಡು ಶಾಲೆಗೆ ಹೋಗಲು ತಯಾರಿ ನಡೆಯಿತು. ಛತ್ರಿ ಮಾತ್ರ ಇರಲಿಲ್ಲ. ನಮ್ಮ ಮನೆಯಲ್ಲಿದ್ದ ಹಳೆಯ ಛತ್ರಿಯೊಂದು ಬಳಸಲಾಗದಷ್ಟು ಶಿಥಿಲವಾಗಿತ್ತು. ಕಬ್ಬಿಣದ ಕಡ್ಡಿಯ ಕೊಡೆಗಳು ನಮ್ಮ ಆರ್ಥಿಕಸ್ಥಿತಿಗೆ ಎಟುಕದಷ್ಟು ದುಬಾರಿಯಾಗಿದ್ದವು. ಯಾವ ನಿರ್ದಿಷ್ಟ ವರಮಾನವು ಇಲ್ಲದ ನನ್ನ ತಾಯಿಯವರಿಗೆ ಜೀವನ ಯಾಚನೆಯೇ ಕಷ್ಟದಾಯಕವಾಗಿತ್ತು. ಸೋದರಮಾವನ ನೆರವು ಮತ್ತು ಸೂಲಗಿತ್ತಿಯಾಗಿ ಕೇರಿಯ ನೆರೆಹೊರೆಯಲ್ಲಿನ ಬಾಣಂತಿತನದ ಕೆಲಸ ಇಂತಹ ಅರೆಕಾಲಿಕ ಕೆಲಸಗಳಿಂದ ಅಲ್ಪಸ್ವಲ್ಪ ಆದಾಯ ಬರುತಿತ್ತು. ವಾಸಕ್ಕೊಂದು ಪುರಾತನ ಕಾಲದ ಸಣ್ಣ ಮನೆ ಇತ್ತು.

ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ನಾನು ಶಾಲೆಗೆ ಹೊರಟಿದ್ದೆ. ಪ್ರೀತಿಯ ಮಗ ಶಾಲೆಗೆ ಸೇರಿದ್ದರಿಂದ ಪುಲಕಿತರಾಗಿದ್ದ ತಾಯಿಯವರು ಪುಡಿಕಾಸು ಜೋಡಿಸಿ ಕರಾವಳಿಯ ಕಡೆಯಿಂದ ಮಾರಾಟಕ್ಕೆ ಬರುತ್ತಿದ್ದ ತಾಳೆಗರಿಯ ದೇಶೀಯ ಮಾಡೆಲ್ ಛತ್ರಿಯೊಂದನ್ನು ನಮ್ಮ ಊರಿನ ಸಂತೆಯಲ್ಲಿ ಕೊಡಿಸಿದರು. ಅದು ದೊಡ್ಡ ಗಾತ್ರದ ಅಣಬೆ ಆಕೃತಿಯ ಛತ್ರಿ. ಅದನ್ನು ಕಂಪನಿ ಛತ್ರಿಗಳಂತೆ ಮಡಿಚಲು ಆಗುತ್ತಿರಲಿಲ್ಲ. ಆದರೂ ನನ್ನ ಸ್ವಂತ ಛತ್ರಿಯನ್ನು ನೋಡಿ ನನಗೆ ಖುಷಿಯಾಯಿತು. ಅದರ ತೂಕ ಸ್ವಲ್ಪ ಹೆಚ್ಚಾಗಿತ್ತು.

ನನ್ನ ತಾಳೆಗರಿಯ ಹೊಸ ಛತ್ರಿಯನ್ನು ಗದೆಯಂತೆ ಹೆಗಲಮೇಲೆ ಇಟ್ಟುಕೊಂಡು ಅದನ್ನು ಗಿರಿಗಟ್ಲೆಯಂತೆ ತಿರುಗಿಸುತ್ತಾ ಶಾಲೆಗೆ ಹೋಗತೊಡಗಿದೆ. ನಮ್ಮ ಶಾಲೆಗೆ ಕೆಲವು ಹುಡುಗರು ಮಾತ್ರ ಇಂತಹ ಛತ್ರಿಗಳನ್ನು ತರುತ್ತಿದ್ದರು. ಬಹುಪಾಲು ಹುಡುಗರು ಸೂರ್ಯ ಮಾರ್ಕಿನ ಕಂಪನಿ ಕೊಡೆಗಳನ್ನು ತರುತ್ತಿದ್ದರು. ರೈನ್‌ಕೋಟ್‌ಗಳನ್ನು ಹಾಕಿಕೊಂಡು ಯಾರೂ ಬರುತ್ತಿರಲಿಲ್ಲ. ಸುತ್ತಮುತ್ತಲಹಳ್ಳಿಯ ಹುಡುಗರು ದೇಶಿಯ ರೈತ ಕೋಟ್‌ಕಂಬಳಿಯ ಕೊಪ್ಪೆಯನ್ನು ಬುರ್ಖಾದಂತೆ ಹಾಕಿಕೊಂಡು ಬರುತ್ತಿದ್ದರು. ಅದು ಮಲೆನಾಡಿನ ಬಿರುಮಳೆ-ಚಳಿಯನ್ನು ತಡೆಯಲು ಸರಿಯಾದ ಸಾಧನವಾಗಿತ್ತು. ಪೇಟೆಯವರು ಮಾತ್ರ ಕಂಬಳಿಕೊಪ್ಪೆಯನ್ನು ಬಳಸುವುದನ್ನು ತಮ್ಮ ಸ್ಥಾನ-ಗದ್ದೆಗಳಲ್ಲಿ ಕೆಲಸ ಮಾಡುವವರು ಕಂಬಳಿಕೊಪ್ಪೆಯ ಮೇಲೆ ತಾಳೆಗರಿಯ ಗೊರಬುಗಳನ್ನು ಬಳಸುತ್ತಿದ್ದರು.

ನಾನು ಶಾಲೆಗೆ ಹೋಗಲು ಶುರುಮಾಡಿದ ಒಂದೆರಡು ದಿನಗಳಲ್ಲಿ ನನ್ನ ತಾಳೆಗರಿ ಛತ್ರಿಯ ಗಂಡಾಂತರಗಳು ಅನುಭವಕ್ಕೆ ಬರತೊಡಗಿದವು. ಮಡಿಚಿಡಲಾಗದ ಆ ಛತ್ರಿಯನ್ನು ಶಾಲೆಯ ಜಗುಲಿಯ ಮೇಲೆ ಇಡಬೇಕಾಗುತ್ತಿತ್ತು. ಜೋರಾಗಿ ಗಾಳಿ ಬೀಸಿದರೆ ಅವು ಎಲ್ಲೆಲ್ಲೋ ಹಾರಿಹೋಗಿ ಜಖಂ ಆಗುವ ಸಾಧ್ಯತೆ ಇದ್ದರಿಂದ ಈ ನಮ್ಮ ಛತ್ರಿಗಳನ್ನು ಗೋಡೆಯ ಮರೆಯಲ್ಲಿ ಕಿಟಕಿಯ ಸರಳುಗಳಿಗೆ ಹಗ್ಗದಿಂದ ಕಟ್ಟಬೇಕಾಗಿತ್ತು. ಶಾಲೆಗೆ ಹೋಗುವಾಗ - ಬರುವಾಗ ಸೂರ್ಯಮಾರ್ಕಿನ ಕಂಪನಿ ಕೊಡೆಗಳ ಹುಡುಗರು ನಮ್ಮ ಛತ್ರಿಗಳಿಗೆ ಗುನ್ನ ಹೊಡೆದು ತೂತು ಮಾಡುವ ಭೀತಿಯಿಂದ ಅವರಿಂದ ತಪ್ಪಿಸಿಕೊಳ್ಳಲು ಅಪಾಯ ಉಂಟಾಗದಂತೆ ಅಜುಬಾಜು ಯಾರೂ ಇಲ್ಲದಿರುವ ದೂರದಲ್ಲಿ ನಡೆದಾಡಬೇಕಾಗಿತ್ತು. ಶಾಲೆಯ ಪಾಠಕ್ಕಿಂತ ಛತ್ರಿಯ ರಕ್ಷಣೆಯೇ ದೊಡ್ಡ ಸವಾಲಾಯಿತು. ಈ ರೀತಿ ನಾಜೂಕಿನ ಛತ್ರಿಯ ಸಹವಾಸ ನನ್ನ ಹೇಡಿತನದ ಲಕ್ಷಣದಂತೆ ಕಾಣತೊಡಗಿತು. ಶಾಲೆಯ ರಣರಂಗದಲ್ಲಿ ಹೆಚ್ಚುದಿನ ಈ ಅವಮಾನವನ್ನು ಸಹಿಸುವುದಾದರು ಹೇಗೆ? ನನ್ನಲ್ಲೂ ಕದನ ಕುತೂಹಲ ಮೂರ್ತವಾಗುತ್ತಿತ್ತು.

ದೇಶಿ ಛತ್ರಿಗಳ ಹುಡುಗರಿಗೂ ಸೂರ್ಯಮಾರ್ಕ್ ಛತ್ರಿಯ ಹುಡುಗರಿಗೂ ಅವ್ಯಕ್ತವಾಗಿದ್ದ ಕದನ ಕುತೂಹಲ ಮೂರ್ತವಾಗತೊಡಗಿತು. ನನ್ನ ತಾಳೆಗರಿ ಛತ್ರಿಗೆ ಗುನ್ನಾ ಬೀಳಲು ಶುರುವಾಯಿತು. ಹೀಗೆ ನಡೆಯುತ್ತಿದ್ದ ಸಣ್ಣಪುಟ್ಟ ಘರ್ಷಣೆಗಳು ಬರುಬರುತ್ತಾ ಕುರುಕ್ಷೇತ್ರದ ಗದಾಯುದ್ಧದಂತೆ ತೀವ್ರ ಸ್ವರೂಪ ಪಡೆದು ನಮ್ಮ ತಾಳೆಗರಿಯ ಛತ್ರಿಗಳು ತೊಡೆಮುರಿದು ಬಿದ್ದ ದುರ್ಯೋಧನ ಧರೆಗೊಳಿದಂತೆ ಹರಿದು ಚಿಂದಿಯಾಗಿ ಅವಸಾನ ಹೊಂದುತ್ತಿದ್ದವು. ಅವುಗಳನ್ನು ರಿಪೇರಿ ಮಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಸೂರ್ಯಮಾರ್ಕಿನ ಕಂಪನಿ ಕೊಡೆಗಳ ಆಕ್ರಮಣಕ್ಕೆ ನಮ್ಮ ದೇಶಿ ಛತ್ರಿಗಳು ಆಹುತಿಯಾಗುತ್ತಿದ್ದವು. ಶಾಲೆಯಿಂದ ಹಿಂದಿರುಗಿ ಮನೆಗೆ ಬರುವಾಗ ನಮ್ಮ ಛತ್ರಿಗಳಿಗೆ ಉಂಟಾದ ದುರಂತದ ಮತ್ತು ನಮ್ಮ ಸ್ವಾಭಿಮಾನಕ್ಕೆ ಒದಗಿದ ದುಃಸ್ಥಿತಿಯ ಕಣ್ಣೀರನ್ನು ತಡೆಯಲಾಗುತ್ತಿರಲಿಲ್ಲ. ಗಾಯದ ಮೇಲೆ ಬರೆ ಎಳೆದಂತೆ ಛತ್ರಿಯನ್ನು ಜೋಪಾನವಾಗಿಟ್ಟುಕೊಳ್ಳದ ನನ್ನ ದುರ್ನಡತೆಗೆ ನಿರ್ದಯವಾಗಿ ತಾಯಿಯವರು ಛೀಮಾರಿ ಹಾಕುತ್ತಿದ್ದರು. ನನಗೆ ಶಾಲೆಯ ಸಹವಾಸವೇ ಬೇಡವಾಯಿತು.

ಸೂರ್ಯಮಾರ್ಕಿನ ಕಂಪನಿ ಕೊಡೆ ಇಲ್ಲದೆ ನಾನು ಶಾಲೆಗೆ ಹೋಗುವುದಿಲ್ಲವೆಂದು ಹಠ ಹಿಡಿದು ಕುಳಿತುಬಿಟ್ಟೆ. ಅಸಹಾಯಕರಾದ ತಾಯಿಯವರು ಆದಷ್ಟು ಬೇಗನೆ ಹೊಸ ಛತ್ರಿ ಕೊಡಿಸುವುದಾಗಿ, ಅಲ್ಲಿಯವರೆಗೂ ಮೇಡಂ ಮಕ್ಕಳ ಜೊತೆಯಲ್ಲಿ ಅವರ ಛತ್ರಿಯಲ್ಲಿ ನನ್ನನ್ನೂ ಕರೆದುಕೊಂಡು ಶಾಲೆಗೆ ಹೋಗುವಂತೆ ತಾತ್ಕಾಲಿಕ ವ್ಯವಸ್ಥೆ ಮಾಡಿರುವುದಾಗಿ ನನ್ನನ್ನು ಪುಸಲಾಯಿಸಿ ಮತ್ತೆ ನಾನು ಶಾಲೆಗೆ ಹೋಗುವಂತಾಯಿತು. ಪರಾಶ್ರಯದ ಛತ್ರಿಯಲ್ಲಿ ತಲೆತೂರಿಸಿಕೊಂಡು ಛತ್ರಿ ಹಿಡಿದ ಗೆಳೆಯನ ಮರ್ಜಿಯಲ್ಲಿ ಶಾಲೆಗೆ ಹೋಗುವುದು ನನಗೆ ಅಷ್ಟು ಹಿತಕರವಾಗಿರಲಿಲ್ಲ. ಗಾಳಿ ಮಳೆಯ ಇರಚಲು ಹೊಡೆದಾಗ ಮೈಯಲ್ಲ ತೊಯ್ದು

ತೊಪ್ಪೆಯಾಗಿ ಚಳಿ ಹತ್ತಿ ನಡುಕ ಉಂಟಾಗುತ್ತಿತ್ತು. ದುಬಾರಿಯಾದ ಸೂರ್ಯ ಮಾರ್ಕಿನ ಛತ್ರಿ ಕೊಡಿಸಲು ತಾಯಿಯವರಿಗೆ ತಕ್ಷಣ ಹಣ ಹೊಂದಿಸಲು ಸಾಧ್ಯವಾಗಲಿಲ್ಲ. ನಾನು ಅದನ್ನೆಲ್ಲ ಗಮನಿಸುವಷ್ಟು ಪ್ರಬುದ್ಧನಾಗಿರಲಿಲ್ಲ . ಪರಾಶ್ರಯದ ಛತ್ರಿಯಲ್ಲಿ ಶಾಲೆಗೆ ಹೋಗಲು ನಾನು ನಿರಾಕರಿಸತೊಡಗಿದೆ. ಪ್ರತಿದಿನ ಬೆಳಿಗ್ಗೆ ಶಾಲೆಗೆ ಹೋಗುವ ಸಮಯ ಬಂದಾಗ ನಾನು ತಕರಾರು ಮಾಡುತ್ತಿದ್ದೆ. ಶಾಲೆಗೆ ಹೋಗುವುದನ್ನು ತಪ್ಪಿಸಿಕೊಳ್ಳಲು ಇದೊಂದು ಪ್ರಬಲವಾದ ಕಾರಣವಾಗಿತ್ತು. ನನ್ನನ್ನು ಓದಿಸಲೇಬೇಕೆಂದು ಹಠ ಹಿಡಿದುಕೊಂಡಿದ್ದ ತಾಯಿಯವರು ಮೇಡಂ ಜಲಜಾಕ್ಷಮ್ಮನವರ ಸಹಾಯ ಯಾಚಿಸಿ ಅವರ ಪರಿಚಿತರ ಬಟ್ಟೆ ಅಂಗಡಿಯಿಂದ ಕಂತಿನ ಮೇಲೆ ಸೂರ್ಯಮಾರ್ಕಿನ ಹೊಸ ಛತ್ರಿಯನ್ನು ನನಗೆ ತಂದುಕೊಟ್ಟರು.

ಸೂರ್ಯಮಾರ್ಕಿನ ಹೊಸ ಛತ್ರಿ ನನ್ನ ಹೆಮ್ಮೆಗೆ ಕಾರಣವಾಯಿತು. ನಮ್ಮ ಕೇರಿಯಲ್ಲೇ ವಾಸವಾಗಿದ್ದ ಸಿನಿಮಾ ಪೋಸ್ಟರ್ ಬರೆಯುವ ಪೆಯಿಂಟರ್ ಮುತ್ತಣ್ಣನಿಂದ ನನ್ನ ಹೊಸ ಛತ್ರಿಯ ಹೊರಭಾಗದಲ್ಲಿ ಇಂಗ್ಲಿಷ್‌ನಲ್ಲೂ, ಒಳಭಾಗದಲ್ಲಿ ಕನ್ನಡದಲ್ಲೂ ಫಳಫಳ ಹೊಳೆಯುವ ಸಿಲ್ವರ್ ಪೇಯಿಂಟ್‌ನಲ್ಲಿ ಅತ್ಯಂತ ಸುಂದರವಾದ ಅಕ್ಷರಗಳಲ್ಲಿ ಚಿತ್ರರಂಜಿತವಾಗಿ ನನ್ನ ನಾಮಾಂಕಿತವನ್ನು ಬರೆಸಿಕೊಂಡು ಮಳೆ ಇಲ್ಲದಿದ್ದರೂ ಛತ್ರಿಯನ್ನು ಮಡಚದೆ ಠೀವಿಯಿಂದಲೇ ಮತ್ತೆ ಶಾಲೆಗೆ ಹೋಗತೊಡಗಿದೆ. ಶಾಲೆಯಲ್ಲಿಕಾಟಾಚಾರಕ್ಕೆ ಕುಳಿತಿದ್ದು ತರಗತಿಯ ಕಿಟಕಿಯ ಸರಳಿಗೆ ನೇತುಹಾಕಿದ್ದ ನನ್ನ ಛತ್ರಿಯನ್ನು ಗಮನಿಸುತ್ತಾ ಶಾಲೆ ಬಿಡುವ ಗಂಟೆ ಹೊಡೆಯುವುದನ್ನು ಕಾಯುತ್ತಿದ್ದೆ.

ಶಾಲೆಗೆ ಹೋಗಲು ನಾನಾತರದ ತಕರಾರು ಮಾಡುತ್ತಿದ್ದ ನಾನು ನನ್ನ ಛತ್ರಿಯನ್ನು ಹಿಡಿದು ಗಮ್ಮತ್ತಿನ ಹುಮ್ಮಸ್ಸಿನಲ್ಲಿ ಶಾಲೆಗೆ ಹೋಗತೊಡಗಿದೆ. ನನ್ನ ಸಡಗರವನ್ನು ಕಂಡು ತಾಯಿಯವರಿಗೂ ಖುಷಿಯಾಗಿತ್ತು. ಛತ್ರಿಯ ಚಮತ್ಕಾರ ಶಾಲೆಯ ಆಕರ್ಷಣೆಗೆ ಪ್ರಚೋದನೆಯಾಯಿತು. ಹೊಸ ಛತ್ರಿಯ ಗರಿಗರಿ ಬಟ್ಟೆಯ ಮೇಲೆ ಬೀಳುತ್ತಿದ್ದ ಮಳೆಯ ಹನಿಗಳು ಉದುರಿದ ಮುತ್ತಿನ ಹನಿಗಳಂತೆ ಜಾರುವುದು ಬೆರಗು ಹುಟ್ಟಿಸುತ್ತಿತ್ತು. ಸೂರ್ಯ ಮಾರ್ಕಿನ ಛತ್ರಿಯ ಒಡನಾಟ ನನ್ನ ಶಾಲಾ ದಿನಗಳ ಸಂಭ್ರಮಕ್ಕೆ ಕಾರಣವಾಯಿತು.

ಚಿಕ್ಕಂದಿನಿಂದಲೂ ಕಪಿಚೇಷ್ಟೆಯಲ್ಲಿ ನಿರತನಾಗಿದ್ದ ನನಗೆ ಬಾಲ್ಯದ ಗೆಳೆಯನೊಬ್ಬನಿದ್ದ. ಅವನ ಹೆಸರು ಖಲಂದರ್. ಮುಸ್ಲಿಂ ಸಮುದಾಯದವನು. ಅವರ ತಂದೆ ತಾಯಿ ಬಡವರಾಗಿದ್ದರು. ಅಕ್ಕಿ ತೌಡನ್ನು ಕೇರಿ ಅಳಿದುಳಿದ ನುಚ್ಚನ್ನು ಆಯ್ದು ಅನ್ನ ಮಾಡಿ ಊಟ ಮಾಡುತ್ತಿದ್ದರು. ಖಲಂದರ್ ಹಣ್ಣು ಕದಿಯೋದ್ರಲ್ಲಿ ನಿಸ್ಸೀಮನಾಗಿದ್ದ. ನಾನು ಸದಾ ಅವನ ಜೊತೆ ಹೋಗ್ತಿದ್ದೆ. ಒದು ದಿನ ಚಕ್ಕೋತ ಹಣ್ಣು ಕೀಳಲು ಮರ ಹತ್ತಿದ. ಕಾಲು ಜಾರಿ ಕೆಳಗೆ ಬಿದ್ದು ಸತ್ತ.

ಖಲಂದರ್ ಸಾವು ನನ್ನನ್ನು ಸದಾ ಕಾಡುವಂತಾಯಿತು. ನಾನು ಎಸ್.ಎಸ್.ಎಲ್.ಸಿ.ಯಲ್ಲಿ ಅನುತ್ತೀರ್ಣನಾದೆ. ಆಗ ಅಲ್ಲಿ ಇಲ್ಲಿ ಕೂಲಿಗೆ ಹೋಗಲು ಪ್ರಾರಂಭಿಸಿದೆ. ತಾಯಿಯವರ ಪ್ರೀತಿಯ ನೆರಳಿನಲ್ಲಿ ಹೇಗೋ ನಾನು ಅನೇಕ ಕವಲುದಾರಿಗಳನ್ನು ತಟಾಯಿಸಿಕೊಂಡು

ಎಸ್‌ಎಸ್‌ಎಲ್‌ಸಿ ಗಂಡಾಂತರವನ್ನು ದಾಟಿ ಪಿಯುಸಿಗೆ ಬಂದೆ. ಈ ನಡುವೆ ನನ್ನ ತಾಯಿಗೆ ನರ್ಸ್ ಕೆಲ್ಸ ಸಿಕ್ತು. ಆಗ ಜೀವನ ಸುಧಾರಿಸಿತು. ತಾಯಿಗೆ ವರ್ಗವಾದಂತೆಲ್ಲ ಆ ಊರು ಈ ಊರುಗಳ ಪರಿಚಯವಾಗತೊಡಗಿತು.

## ಲೋಹಿಯಾ ಚಿಂತನೆಯ ಸುಂಟರಗಾಳಿ

ಆಗ ೬೦ರ ದಶಕದ ನೆಹರೂ ಯುಗದ ಮಹಿಮೆಯ ಕಾಲ. ನೆಹರೂವಿನ ವೈಭವೀಕರಣ ಮತ್ತು ನೆಹರೂ ನಿಂದನೆಯ ಕಾಲ. ಇಂತಹ ಪರ್ವ ಕಾಲದಲ್ಲಿ ಪಿಯುಸಿ ಓದಲು ನಾನು ಶಿವಮೊಗ್ಗಾದ ಸಹ್ಯಾದ್ರಿ ಕಾಲೇಜಿಗೆ ಸೇರಿಕೊಂಡೆ. ಶಿವಮೊಗ್ಗೆ ಜಿಲ್ಲೆ ಸಮಾಜವಾದಿಗಳ ಹೋರಾಟದ ಪ್ರತಿಭಟನೆಯ ತವರು ಮನೆಯಾಗಿತ್ತು. ಲೋಹಿಯಾ ಚಿಂತನೆಯ ಸುಂಟರಗಾಳಿಯ ಸುಳಿಗೆ ಸಿಕ್ಕವರ ಬುದ್ಧಿ-ಮನಸ್ಸುಗಳ ಹೊಸ ಕನಸುಗಳ ವೈಹಾಳಿಯಲ್ಲಿ ಲಗ್ಗೆ ಹಾಕಲು ಹಂಬಲಿಸುತ್ತಿದ್ದ ಕಾಲ. ಈ ವೈಹಾಳಿಯ ಮುಂಚೂಣಿಯಲ್ಲಿದ್ದ ಶಾಂತವೇರಿ ಗೋಪಾಲಗೌಡರು, ಜೆ.ಎಚ್. ಪಟೇಲರು ಮತ್ತು ಅವರ ಒಡನಾಡಿಗಳೆಲ್ಲ ಕ್ರಾಂತಿಕಾರಿಗಳಂತೆ ಕಂಗೊಳಿಸುತ್ತಿದ್ದರು.

ಮಲೆನಾಡಿನಲ್ಲಿ ತುಂಟ ಹುಡುಗನಾಗಿ ಬೆಳೆದಿದ್ದ ನಾನು, ಶಿವಮೊಗ್ಗದ ಪರಿಸರದ ಪ್ರಚೋದನೆಯಿಂದ ಪ್ರಭಾವಿತನಾದೆ. ನನ್ನ ತುಂಟನ ರೂಪಾಂತರವಾಗಿ ನನ್ನೊಳಗೂ ಒಬ್ಬ ಭಾರತ ಜನನಿಯ ತನುಜಾತನಾದ 'Angry young man' ಮೂರ್ತನಾಗತೊಡಗಿದ. 'ಏನಾದರು ಮಾಡುತಿರು ತಮ್ಮ, ನೀನು ಸುಮ್ಮನಿರಬೇಡ'ವೆಂಬಂತೆ ನಾನು ವರ್ತಿಸತೊಡಗಿದೆ.

ಇದೇ ಕಾಲದಲ್ಲಿ ಪಿ. ಲಂಕೇಶರು ಸಹ್ಯಾದ್ರಿ ಕಾಲೇಜಿನಲ್ಲಿ ನಮಗೆ ಇಂಗ್ಲಿಷ್ ಮೇಷ್ಟ್ರಾಗಿದ್ದರು. ಮಿರಿಮಿರಿ ಮಿಂಚುತ್ತಿದ್ದ ಲಂಕೇಶರು, ಅವರ ಹೆಸರಿನ ವೈಚಿತ್ರ್ಯಕ್ಕೆ ಅನುಗುಣವಾಗಿ ಔಪಚಾರಿಕತೆಗಳನ್ನು ಉಲ್ಲಂಘಿಸುವ ಅವರ ರೀತಿ-ನೀತಿಗಳ ವಿವಾದಾಸ್ಪದ ನಡವಳಿಕೆಯಿಂದ, ಅಶಾಂತರಾಗಿ ಸ್ವಾತಂತ್ರ್ಯೋತ್ತರ ಭಾರತದ 'Angry young man'ನ ಲಕ್ಷಣಗಳಿಂದ ಅಧ್ಯಾಪಕ ವರ್ಗದಲ್ಲೇ 'ರೆಬಲ್‌ಸ್ಟಾರ್ 'ನಂತೆ ವಿಜೃಂಭಿಸುತ್ತಾ ನಮಗೆ ಆಪ್ತರಾದರು. ಇತರರಿಗಿಂತ ವಿಭಿನ್ನವಾಗಿ ಕಾಣುತ್ತಿದ್ದ ಅವರು ಆಗಲೇ ಬರಹಗಾರರಾಗಿ ಗುರುತಿಸಿಕೊಂಡಿದ್ದರು. ನೋಡುವುದಕ್ಕೆ ಸುಂದರವಾಗಿದ್ದರು. ಆಕರ್ಷಕ ವ್ಯಕ್ತಿತ್ವ. ಅವರು ಪಾಠ ಮಾಡುತ್ತಿರುವಾಗ ಯಾರಾದ್ರು ಕಾರಿಡಾರಿನಲ್ಲಿ ಓಡಾಡಿದ್ರೆ ಪಾಠ ನಿಲ್ಲಿಸೋರು. ಅವರಿಗೆ ಗಲಾಟೆ ಅಂದ್ರೆ ಆಗುತ್ತಿರಲಿಲ್ಲ.

ಒಂದು ದಿನ ಲಂಕೇಶ್ ತರಗತಿ ತೆಗೆದುಕೊಂಡಿದ್ರು. ಕೆಲವರು ಗಲಾಟೆ ಮಾಡ್ತಿದ್ರು. ಪ್ರಿನ್ಸಿಪಾಲ್ ಧಾವಿಸಿ ಬಂದ್ರು. ಲಂಕೇಶರನ್ನು 'ಯಾಕೆ ಗಲಾಟೆ ಮಾಡಿಸ್ತಿದ್ದೀರಿ' ಎಂದು ಕೇಳಿದ್ರು. ಲಂಕೇಶರಿಗೆ ಎಲ್ಲಿತ್ತೋ ಸಿಟ್ಟು.... 'ರೀ, ಇದು ನನ್ನ ಕ್ಲಾಸು, ಇಲ್ಲಿ ನಿಮಗೇನು ಕೆಲ್ಸ, ಗೆಟೌಟ್!' ಅಂದ್ರು;ಕೆಲವರು ಲಂಕೇಶ್ ಯಾವಾಗ್ಲೂ ಹುಡುಗೀರ್ ಕಡೆ ನೋಡ್ತಿರ್ತಾರೆ ಅನ್ನೋ ಆರೋಪ ಮಾಡ್ತಿದ್ರು.

## ಮಹಾಗುರುವಿನ ಸಾವು ಮತ್ತು ಬುದ್ಧ

ಹನುಮಂತಪ್ಪ ಅಂಥ ಇನ್ನೊಬ್ಬ ಮೇಷ್ಟ್ರಿದ್ದರು. ಅವರು ರಾಜ್ಯಶಾಸ್ತ್ರ ಪಾಠ ಮಾಡ್ತಿದ್ರು. ಚಮ್ಮಾರ ಜನಾಂಗದವರು. ಲಂಕೇಶರ ಆಪ್ತ ಸ್ನೇಹಿತರು. ಅವರೆ ನನ್ನನ್ನು ಕಾಲೇಜಿಗೆ ಸೇರಿಸಿದ್ದು. ತುಂಬಾ ಉಪಕಾರಿ ಮನೋಭಾವ ಅವರದು. ಒಮ್ಮೆ ಅವರು ಎನ್‌ಸಿಸಿ ಅಧಿಕಾರಿಯಾಗಿ ಆಯ್ಕೆಯಾದರು. ಕರ್ತವ್ಯದ ಮೇಲೆ ಪೂನಾಕ್ಕೆ ಹೋದರು. ಅಲ್ಲಿನ ಹೊಳೆಯಲ್ಲಿ ಸಹಪಾಠಿಗಳ ಜೊತೆ ಸ್ನಾನ ಮಾಡ್ತಿದ್ರು. ಇದ್ದಕ್ಕಿದ್ದಂತೆ ಸಹಪಾಠಿಗಳು ಹೊಳೆಯಲ್ಲಿ ಕೊಚ್ಚಿಕೊಂಡು ಹೊರಟರು. ಅವರನ್ನು ಕಾಪಾಡಲು ಹೋಗಿ ಹನುಮಂತಪ್ಪನವರೂ ಕೊಚ್ಚಿಕೊಂಡು ಹೋದರು.

ಆ ಮಹಾಗುರುವಿನ ಸಾವು ನನ್ನಮೇಲೆ ದಟ್ಟ ಪ್ರಭಾವ ಬೀರಿತು. ನಾನು ಕಾಲೇಜಿಗೆ ಬಂದಾಗ ಆಕಸ್ಮಿಕವಾಗಿ ಬುದ್ಧನ ಪರಿಚಯವಾಯಿತು. ಬುದ್ಧ ನನಗೆ ಇಷ್ಟವಾದ. ನನ್ನ ಮನೆಯ ದೇವರುಗಳನ್ನು ಸುಟ್ಟು, ಬುದ್ಧನನ್ನು ಮನದಲ್ಲಿ ಸ್ಥಾಪಿಸಿಕೊಂಡೆ.

ನಾನು ಓದುತ್ತಿರುವಾಗ ಗೋಪಾಲಗೌಡರನ್ನು, ರಾಮಮನೋಹರ ಲೋಹಿಯಾ ಅವರನ್ನು ನೋಡಿದ್ದೆ. ನನ್ನ ಕಣ್ಣುಗಳಲ್ಲಿ ಅವರು ಈಗಲೂ ಬೆಳಕು. ೧೯೪೮ ರಲ್ಲಿ ಹಿಂದೂ ಧರ್ಮದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಮಹಾತ್ಮಗಾಂಧಿಯನ್ನು, ಹಿಂದೂ ಧರ್ಮದವನೇ ಆದ ಗೋಡ್ಸೆ ಕೊಂದಾಗ ನಾನು ಸೀಮೆ ಎಣ್ಣೆ ತರಲು ಅಂಗಡಿ ಕಡೆ ಹೊರಟಿದ್ದೆ. ಎಲ್ಲಾ ಅಂಗಡಿಗಳು ಮುಚ್ಚಿದ್ದವು. ಎಲ್ಲರ ಕಣ್ಣಲ್ಲು ನೀರಾಡುತ್ತಿತ್ತು. ಒಬ್ಬ ಮಹಾತ್ಮನ ವ್ಯಕ್ತಿತ್ವ ಇಡೀ ಸಮುದಾಯದಲ್ಲಿ ಬೇರುಬಿಟ್ಟ ಕುರುಹು ಎಲ್ಲೆಡೆ ಗೋಚರಿಸುತ್ತಿತ್ತು.

ನಾನು ಕಾಲೇಜಿಗೆ ಸೇರಿದಾಗ ಶಿವಮೊಗ್ಗದಲ್ಲಿ ಬೆಕ್ಕಿನಕಲ್ಲುಮಠ ಅಂತ ಇತ್ತು. ಅಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರು, ಗೌಡರು, ಲಿಂಗಾಯತರು, ಕುರುಬರು, ಸಮಗಾರರು ಹೀಗೆ ವಿವಿಧ ಜಾತಿಯ ಹುಡುಗರು ಒಟ್ಟಿಗೆ ಇದ್ದರು. ಹಾಗಾಗಿ ನಾನು ಬೆಕ್ಕಿನಕಲ್ಲುಮಠದ ವಿದ್ಯಾರ್ಥಿ ನಿಲಯದಲ್ಲಿ ಆಶ್ರಯ ಪಡೆದಿದ್ದರೂ ಧಾರ್ಮಿಕತೆಯಿಂದ ಮುಕ್ತವಾದ ಸೆಕ್ಯುಲರ್ ಪರಿಸರದ ಒಡನಾಟದಿಂದ ಅನಿರ್ಬಂಧಿತವಾದ ಮತ್ತು ನಿರ್ಭೀತವಾದ ಬೌದ್ಧಿಕ ಲಹರಿಯಲ್ಲಿ ನಿರಂಕುಶಮತಿಯಾಗಿ ವಿಹರಿಸುವ ಅವಕಾಶ ಪ್ರಾಪ್ತವಾಯಿತು.

ಈ ಲಹರಿಯಲ್ಲಿ ತಲ್ಲೀನನಾಗಿರುವಾಗಲೆ ಪಿಯುಸಿಯ ಒಂದು ವರ್ಷ ಕಳೆದು ಹೋಯಿತು. ಓದುವುದಕ್ಕೆ ತಯಾರಾಗುವ ಮೊದಲೇ ಪರೀಕ್ಷೆ ಬಂದುಬಿಟ್ಟಿತು. ಪರೀಕ್ಷೆ ಮುಗಿಸಿಕೊಂಡು ನನ್ನ ತಾಯಿಯವರಿದ್ದ ಹಳ್ಳಿಗೆ ಹಿಂತಿರುಗಿದೆ. ನನ್ನ ಪಿಯುಸಿ ವಿದ್ಯಾಭ್ಯಾಸದ ಬಗ್ಗೆ ಅವರು ಪುಲಕಿತರಾಗಿದ್ದರು. ನನ್ನ ತುಂಟತನ ಮರೆಯಾಗಿ, ಅದು ಅಶಾಂತ ಚಿತ್ತವಾಗಿ ರೂಪಾಂತರವಾಗಿರುವುದನ್ನು ಅವರು ಗಮನಿಸಲೇ ಇಲ್ಲ.

## ಪುಂಡರ ಊರು-ಪರದೇಶಿ ಸಂಚಾರ

ಮಲೆನಾಡಿನ ಪುಟ್ಟಹಳ್ಳಿ ಅಂಬಾರ ಗೋಡ್ಲುವಿನಲ್ಲಿ ನರ್ಸಮ್ಮನಾಗಿ ದೀರ್ಘಕಾಲ ನೆಲೆಸಿದ್ದ ನನ್ನ ತಾಯಿಯವರನ್ನು, ಅಚಾನಕವಾಗಿ ಬಯಲುಸೀಮೆಯ ಸೆರಗಿನಲ್ಲಿ ಹೊನ್ನಾಳಿಯ ಆಸ್ಪತ್ರೆಗೆ

ವರ್ಗಾಯಿಸಲಾಯಿತು. ಪುಟ್ಟಹಳ್ಳಿಯಲ್ಲಿ ಅಲ್ಪವೆಚ್ಚದಲ್ಲಿ ನಿರಾತಂಕವಾಗಿ ಸಾಗುತ್ತಿದ್ದ ಜೀವನಕ್ಕೆ ಸಂಚಕಾರ ಬಂದಿತ್ತು. ಅನೇಕರು ಹೊನ್ನಾಳಿಯನ್ನು ಪುಂಡರ ಊರೆಂದು, ಅಲ್ಲಿಯ ಜನ ತುಂಬ ಒರಟರೆಂದು ದಿನಕ್ಕೊಂದು ಕೊಲೆ, ಹೊಡೆದಾಟ, ಬಡಿದಾಟ ನಡೆಯುವ ಸ್ಥಳವೆಂದು ತಾಯಿಯವರಿಗೆ ಗಾಬರಿ ಹುಟ್ಟಿಸಿದ್ದರು. ಅವರು ಚಿಂತಾಕ್ರಾಂತರಾದರು.

ಹೊನ್ನಾಳಿಗೆ ಹೋಗುವುದು ಅನಿವಾರ್ಯವಾಗಿತ್ತು. ಪ್ರಚಂಡ ಆತ್ಮವಿಶ್ವಾಸ ಮತ್ತು ಧೈರ್ಯಸ್ಥೆಯಾದ ತಾಯಿಯವರು ಹೊನ್ನಾಳಿಗೆ ಹೋಗುವುದರಿಂದ ಮಗನ ಕಾಲೇಜು ವ್ಯಾಸಂಗಕ್ಕೆ ಅನುವಾಗಬಹುದೆಂದು ಭಾವಿಸಿದ್ದರು. ನಮ್ಮ ಹುಟ್ಟೂರಿನಿಂದ ಮಲೆನಾಡಿನ ಹಳ್ಳಿಯನ್ನು ತೊರೆದು ಕಣ್ಣೀರಿಡುತ್ತಲೇ ಹೊನ್ನಾಳಿಗೆ ವಲಸೆ ಹೊರಟೆವು.

ಹೊನ್ನಾಳಿಗೆ ಬಂದು ನಾವು ನೆಲೆಸುವ ಹೊತ್ತಿಗೆ ಸರಿಯಾಗಿ ನನ್ನ ಪಿಯುಸಿ ಫಲಿತಾಂಶ ಪ್ರಕಟವಾಯಿತು. ನಾನು ಫೇಲಾಗಿದ್ದೆ. ನನ್ನ ಬಗ್ಗೆ ನನ್ನ ತಾಯಿಯವರು ಕಟ್ಟಿಕೊಂಡು ಬಂದಿದ್ದ ಕನಸುಗಳೆಲ್ಲ ಭಗ್ನವಾಗಿದ್ದವು. ಅವರು ಕಣ್ಣೀರಿಟ್ಟು ಗೋಳಾಡಿದರು. ನಾನು ಅಪರಾಧಿಯಂತೆ ಪೆಚ್ಚುಮೋರೆ ಹಾಕಿಕೊಂಡು ತೆಪ್ಪಗೆ ಕುಳಿತುಬಿಟ್ಟೆ. " ಆಸ್ತಿ, ಮನೆ, ಮಠ ಯಾವುದು ಇಲ್ಲದ ನಮಗೆ ವಿದ್ಯಾಭ್ಯಾಸದ ಆಸರೆಯೂ ಇಲ್ಲದಿದ್ದರೆ ಬೀದಿಪಾಲಾಗಿ ಬದುಕಬೇಕಾಗುತ್ತದೆನ್ನುವುದನ್ನು ನೆನಪಿಟ್ಟುಕೊ" ಎಂದು ಪರಿಪರಿಯಾಗಿ ಬುದ್ಧಿ ಹೇಳಿ, "ಓದುವುದನ್ನು ತಾತ್ಸಾರ ಮಾಡಬೇಡ" ಎಂದು ತಾಕೀತು ಮಾಡಿದರು. ಅವರು ಗೋಳಾಡುವುದನ್ನು ನೋಡಿ, ನಾನು ಪಾಪಪ್ರಜ್ಞೆಯಿಂದ ಬೆಂದು ಹೋದೆ.

ನನ್ನ ದಾರುಣವಾದ ಸ್ಥಿತಿಯನ್ನು ಗಮನಿಸಿದ ಕರುಣಾಮಯಿಯಾದ ನನ್ನ ತಾಯಿಯವರ ಮನಸ್ಸು ಕರಗಿತು. "ಫೇಲಾದರೇನಂತೆ ಪ್ರಪಂಚ ಮುಳುಗಿ ಹೋಗಿಲ್ಲ. ಎಂತೆಂತಹ ಶ್ರೀಮಂತರ ಮಕ್ಕಳೇ ಫೇಲಾಗುತ್ತಾರೆ, ನೀನು ತಬ್ಬಲಿಯಾಗಿ ಬೆಳೆದವನು. ಕಷ್ಟಪಟ್ಟು ಓದಿದರೆ ಮುಂದಿನ ಪರೀಕ್ಷೆಯಲ್ಲಿ ಖಂಡಿತಾ ಪಾಸಾಗುತ್ತೀಯ, ಚಿಂತಿಸಬೇಡ" ಎಂದು ನನ್ನನ್ನು ಸಮಾಧಾನ ಮಾಡಿ ಪ್ರೋತ್ಸಾಹಿಸಿದರು. ಅವರ ಅದಮ್ಯವಾದ ಜೀವನೋತ್ಸಾಹ ನನ್ನನ್ನು ಉತ್ತೇಜಿಸಿತು. ನನ್ನ ಪಾಪಪ್ರಜ್ಞೆ ಮರೆಯಾಯಿತು. ಓದುವ ಏಕಾಗ್ರತೆ ಮಾತ್ರ ಉಂಟಾಗಲಿಲ್ಲ.

ಹೊನ್ನಾಳಿಯ ಪರಿಸರವೇ ನನಗೆ ಪರಕೀಯವಾಗಿತ್ತು. ಶಿವಮೊಗ್ಗದ ಬೌದ್ಧಿಕ ಒತ್ತಡವಾಗಲಿ ಅಥವಾ ಮಲೆನಾಡಿನ ನೈಸರ್ಗಿಕ ಪರಿಸರವಾಗಲಿ ಇಲ್ಲದೆ ನಾನು ಏಕಾಂಗಿಯಾಗಿಬಿಟ್ಟೆ. ತಾಲ್ಲೂಕು ಕೇಂದ್ರವಾದರೂ ಹೊನ್ನಾಳಿ ಪುಟ್ಟ ಊರು. ತುಂಗಭದ್ರಾ ನದಿ ಹರಿಯುತ್ತಿದ್ದರೂ ನನ್ನ ಪಾಲಿಗೆ ಆ ಊರು ಜಡವಾಗಿತ್ತು. ಸದಾಕಾಲ ಮನೆಯಲ್ಲಿ ಕುಳಿತಿರಲಾರದ ನಾನು, ಪರಕೀಯನಂತೆ ಊರಿನ ಬೀದಿಗಳನ್ನು ಸುತ್ತತೊಡಗಿದೆ.

ಅಪ್ಪಟ ರೈತಾಪಿ ಜನರ ಊರಾಗಿದ್ದ ಹೊನ್ನಾಳಿಯ ವಿದ್ಯಮಾನಗಳಲ್ಲಿ ಪ್ರಕ್ಷುಬ್ಧತೆಯ ಲಕ್ಷಣಗಳಿಲ್ಲದಿದ್ದರೂ, ಮಾರಿಜಾತ್ರೆಗಳ ರೌದ್ರತೆ, ಗರಡಿ ಮನೆಗಳ ದರ್ಬಾರು, ಪೈಲ್ವಾನರುಗಳ ದಾದಾಗಿರಿಯ ಜಟಾಪಟಿಯಿಂದ -ಆಗಾಗ ನಡೆಯುತ್ತಿದ್ದ ಮಾರಾಮಾರಿಗಳಿಂದ ಹೊನ್ನಾಳಿಯ ಖ್ಯಾತಿ ಮತ್ತು ಅಪಖ್ಯಾತಿಗಳು ಜೋಕಾಲಿಯಾಡುತ್ತಿದ್ದವು. 'ಹೊನ್ನಾಳಿ ಹೊಡೆತ' ವೆಂದರೆ

ಗರಡಿಮನೆಗಳ ತಾಲೀಮಿನ ವಿಭಿನ್ನ ಪಟ್ಟುಗಳ ವರಸೆಗಳೆಂದು ಜನ ತಿಳಿದಿದ್ದರೂ ಸರ್ಕಾರಿ ಅಧಿಕಾರಿಗಳು ಮಾತ್ರ ಭೀತಿಯಿಂದ ನಡುಗುತ್ತಿದ್ದರು.

## ಮೊಟ್ಟ ಮೊದಲ ಪ್ರತಿಭಟನೆ

ಈ ಊರಿನಲ್ಲಿ ನನ್ನ ಪಾಲಿಗೆ ಯಮಗಂಡ ಕಾಲ ಬರುತ್ತದೆಂದು ನಾನು ತಿಳಿದಿರಲಿಲ್ಲ. ಪ್ರತಿದಿನ ಸಂಜೆ ಹೋಟೆಲೊಂದರಲ್ಲಿ ಚಹಾ ಕುಡಿದು ಅಲ್ಲಿ ಬರುತ್ತಿದ್ದ ಪೇಪರ್‌ಗಳನ್ನು ಓದುತ್ತಿದ್ದೆ. ಅದರ ಮಾಲೀಕರು ಮತ್ತು ಅಲ್ಲಿಗೆ ಬರುತ್ತಿದ್ದ ಅವರ ಸ್ನೇಹಿತರ ಪರಿಚಯವಾಗಿ ಒಡನಾಟ ಪ್ರಾರಂಭವಾಯಿತು. ಅವರಲ್ಲಿ ಕೆಲವರು ಶಾಲಾ ಮಾಸ್ತರರು ಇದ್ದರು. ಮಾಲೀಕರಾದ ಪರಮೇಶ್ವರಯ್ಯನವರನ್ನು ಎಲ್ಲರೂ 'ಸ್ವಾಮಿಯೋರು'ಎಂದು ಅಡ್ಡ ಹೆಸರಿನಿಂದಲೇ ಕರೆಯುತ್ತಿದ್ದರು. ಅವರಿಗೆ ನಾಡು-ನುಡಿಗಳ ಬಗ್ಗೆ ಅಪಾರ ಕಾಳಜಿ ಇತ್ತು. ಸ್ವಾಮಿಯೋರ ಹೋಟೆಲ್ ನನ್ನ ಕಾಲಹರಣದ ಅಡ್ಡೆಯಾಯಿತು. ಒಮ್ಮೆ ಅವರು ಆಗಸ್ಟ್ ೧೫ ರಂದು ಪುರಭವನದಲ್ಲಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮವಿದೆ. ಭಾಗವಹಿಸುವಂತೆ ತಿಳಿಸಿ, ನನಗೊಂದು ಆಹ್ವಾನಪತ್ರಿಕೆ ಕೊಟ್ಟರು. ಆಗಸ್ಟ್೧೫ ರಂದು ೮ ಗಂಟೆಗೆ ಪುರಭವನದ ಮುಂಭಾಗದಲ್ಲಿ ಆ ಪ್ರದೇಶದ ಸ್ವಾತಂತ್ರ್ಯ ಹೋರಾಟಗಾರರಾದ ಮಂತ್ರಿಗಳಿಂದ ಧ್ವಜಾರೋಹಣ ಕಾರ್ಯಕ್ರಮ ನಿಗದಿಯಾಗಿತ್ತು. ನಾನು ಸಮಯಕ್ಕೆ ಸರಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಪುರಭವನಕ್ಕೆ ಹೋದೆ. ಕೆಲವು ಶಾಲಾ ಬಾಲಕರು, ಕೆಲವೇ ಕೆಲವು ಆಸಕ್ತ ನಾಗರಿಕರು ಮತ್ತು ಪೊಲೀಸರು ಮಂತ್ರಿಗಳ ಆಗಮನದ ನಿರೀಕ್ಷೆಯಲ್ಲಿದ್ದರು.

ನಿಗದಿತ ಸಮಯ ಕಳೆದು ಎಷ್ಟು ಹೊತ್ತಾದರೂ ಮಂತ್ರಿಗಳು ಸುಳಿಯಲೇ ಇಲ್ಲ. ಅಲ್ಲಿಗೆ ಬಂದಿದ್ದ ಜನ ಅತ್ಯಂತ ತಾಳ್ಮೆಯಿಂದ ಪಾರ್ಕಿನಲ್ಲಿ ಸಂಭಾಷಣೆಯಲ್ಲಿ ತೊಡಗಿದ್ದರು. ಸೋನೆ ಮಳೆ ಸಣ್ಣಗೆ ಬೀಳಲಾರಂಭಿಸಿತು. ಪಾರ್ಕಿನಲ್ಲಿದ್ದ ಜನ ಚದುರಿ, ಪುರಭವನದಲ್ಲಿ ಹೋಗಿ ಆಶ್ರಯ ಪಡೆದರು. ಜನರ ನಡುವೆ ನಿಂತಿದ್ದ ನನ್ನ ಮನಸ್ಸು ಕಂಪಿಸತೊಡಗಿತು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ, ಅದರ ಫಲಾನುಭವಿಗಳಾದ ಈ ಮಂತ್ರಿಗಳಿಗೆ ಅಧಿಕಾರದ ಅಮಲಿನಲ್ಲಿ ಆ ದಿನಗಳ ರೋಮಾಂಚನದ ಕ್ಷಣಗಳೇ ಮರೆತು ಹೋಗಿರುವುದು ಸ್ವಾತಂತ್ರ್ಯೋತ್ತರ ಭಾರತದ ದುರಂತ. ಇಂತಹವರಿಗಾಗಿ ಕಾಯುವುದು, ಗೌರವಿಸುವುದು, ಅವರ ಮಾತುಗಳಿಗೆ ಚಪ್ಪಾಳೆ ತಟ್ಟುವುದು ಎಂತಹ ಅವಮಾನದ ಕೆಲಸವೆನಿಸತೊಡಗಿತು. ತುಂತುರು ಮಳೆಯ ತಣ್ಣನೆಯ ಗಾಳಿಯಲ್ಲೂ ಮೈ ಬಿಸಿಯಾಯಿತು. ಇಲ್ಲಿಂದ ಹೊರಟು ಬಿಡೋಣವೆನ್ನುವಷ್ಟರಲ್ಲಿ ಮಂತ್ರಿಗಳ ಆಗಮನವಾಯಿತು. ಆಗ ಗಂಟೆ ೯.೩೦ ಆಗಿತ್ತು. ಒಂದೂವರೆ ಗಂಟೆ ತಡವಾಗಿ ಬಂದಿದ್ದರೂ ಅವರ ಹಸನ್ಮುಖದಲ್ಲಿ ವಿಷಾದದ ಛಾಯೆ ಇರಲಿಲ್ಲ. ಅಧಿಕಾರಿಗಳು ಛತ್ರಿ ಹಿಡಿದು ಸಚಿವರನ್ನು ಬರಮಾಡಿಕೊಂಡರು.

ಸಭೆ ಪ್ರಾರಂಭವಾಯಿತು. ತಹಶೀಲ್ದಾರರು ಮಂತ್ರಿ ಮಹಾಶಯರನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ದೀನ ದಲಿತರ ಸೇವೆಗೆ ಕಂಕಣಬದ್ಧರಾದವರೆಂದು

ಪುಂಖಾನುಪುಂಖವಾಗಿ ಹಾಡಿ ಹೊಗಳಿ ಪುಷ್ಪ ಮಾಲಾರ್ಪಣೆ ಮಾಡಿ, ನಿಂಬೆಹಣ್ಣು ಕೊಟ್ಟು, ಕೈ ಕುಲುಕಿದರು. ಈ ದೇಶಾವರಿಯ ವಿದ್ಯಮಾನ ಮುಗಿದು, ಮಂತ್ರಿಗಳ ಸ್ವಾತಂತ್ರ್ಯೋತ್ಸವ ಸಂದೇಶವನ್ನು ಆಲಿಸಲು ಸಭಿಕರು ಕಾತರರಾಗಿದ್ದರು.

ನನ್ನೊಳಗೆ ಅವಿತುಕೊಂಡಿದ್ದ 'Angry young man' ನನ್ನನ್ನು ತೆಪ್ಪಗಿರಲು ಬಿಡಲಿಲ್ಲ. ನಾನು ವೇದಿಕೆಯ ಮುಂಭಾಗಕ್ಕೆ ತೆರಳಿ, ವಿಳಂಬವಾಗಿ ಆಗಮಿಸಿ ರಾಷ್ಟ್ರ ಧ್ವಜಾರೋಹಣವನ್ನು ಅಗೌರವಿಸಿದ್ದಕ್ಕಾಗಿ ಸಭೆಯ ಕ್ಷಮೆ ಯಾಚಿಸಬೇಕೆಂದು ಆರ್ಭಟಿಸಿದೆ. ಅನಿರೀಕ್ಷಿತವಾದ ನನ್ನ ಆಕ್ಷೇಪದಿಂದ ಸಭೆ ತಬ್ಬಿಬ್ಬಾಯಿತು. " ಯಾವನಲೇ ಅವನು, ಸುಮ್ಮನೇ ಕೂರಲೇ, ತಲಿ ನೆಟ್ಟಗಿಲ್ಲೇನು" ಎಂದು ಕೆಲವರು ನನ್ನ ಕಡೆಗೆ ಧಾವಿಸಿದರು. ನಾನು ವಿಚಲಿತನಾಗದೆ ಕಲ್ಲಿನಂತೆ ನಿಂತೇ ಇದ್ದೆ. ತಹಶೀಲ್ದಾರರು ಪೋಲೀಸರಿಗೆ ಸೂಚನೆ ನೀಡಿ, "ಅವನನ್ನು ಎಳೆದು ಹೊರಗ್ಹಾಕ್ರಿ" ಎಂದು ತಾಕೀತು ಮಾಡಿದರು. ಪೋಲೀಸರು ಬಂದು ನನ್ನ ಕೈ ಹಿಡಿದು ಎಳೆಯುತ್ತಿದ್ದಂತೆ ಸಭೆಯಲ್ಲಿ ಗದ್ದಲವಾಯಿತು. "ಅಲ್ರೀ, ಹುಡುಗ ಕೇಳಿದ್ರಾಗ ತಪ್ಪಾರು ಏನೈತಿ", "ಬರೋಬರಿ ಕೇಳ್ಯಾನ ಬಿಡ್ರೀ ಅವನ" ಎಂದು ಸಭಿಕರಲ್ಲಿ ಕೆಲವರು ನನ್ನ ಬೆಂಬಲಕ್ಕೆ ನಿಂತರು. ವಾದ ವಿವಾದಗಳಿಂದ ಸಭೆಯಲ್ಲಿ ಕೋಲಾಹಲವಾಯಿತು. ಒಳಗಿನ ಗದ್ದಲ, ಧ್ವನಿವರ್ಧಕದ ಮೂಲಕ ಹೊರಗಡೆ ಮೊಳಗತೊಡಗಿತು. ಕದನ-ಕುತೂಹಲಿಗಳಾದ ಜನರು ಒಳಗೆ ಇಣುಕತೊಡಗಿದರು.

ನನ್ನ ತಾಯಿಯವರು ಕೆಲಸ ಮಾಡುತ್ತಿದ್ದ ಆಸ್ಪತ್ರೆ ಪುರಭವನದ ಪಕ್ಕದಲ್ಲೇ ಇತ್ತು. ಈ ಗದ್ದಲದಲ್ಲಿ ನನ್ನನ್ನು ಗುರುತಿಸಿದ ಆಸ್ಪತ್ರೆಯ ನೌಕರನೊಬ್ಬ " ಅಯ್ಯೋ ಮಂಜಮ್ಮನವರೆ, ನಿಮ್ಮ ಮಗನಿಗೆ ಹಿಗ್ಗಾ-ಮುಗ್ಗಾ ಹೊಡೆಯುತ್ತಿದ್ದಾರೆ. ಏನೋ ಗಲಾಟೆ ಕಣ್ರೀ" ಎಂದು ಹೇಳಿದ. ಭೀತಿಯಿಂದ ತಲ್ಲಣಿಸಿದ ತಾಯಿಯವರು, ಗದ್ದಲದ ನಡುವೆ ಸಭಾಂಗಣದಲ್ಲಿ ನಿಂತಿದ್ದ ನನ್ನ ಕಡೆಗೆ ನುಗ್ಗಿ ಬಂದರು. " ಅವನು ನನ್ನ ಮಗ, ಬಿಡ್ರಿ ಅವನ್ನ" ಎಂದು ದಾರುಣವಾದ ಆರ್ತಸ್ವರದಲ್ಲಿ ಮೊರೆ ಇಟ್ಟರು. "ಈ ಹುಡುಗ, ನಿಮ್ಮ ಮಗ ಏನ್ರಮ್ಮ, ಕರಕೊಂಡು ಹೋಗ್ರಿ" ಎಂದು ನನ್ನನ್ನು ದಬ್ಬಿದರು.

ನನ್ನ ತಾಯಿಯವರಿಗೆ ಆವೇಶ ಬಂದಾಗಿತ್ತು. " ಈ ಊರಿನ ಉಸಾಬರಿ ನಿನಗ್ಯಾಕ್ಲೋ, ಯಾರ ತಂಟೆ- ತಕರಾರಿಗೆ ಹೋಗಬ್ಯಾಡ ಅಂತ ನಾನು ಹೇಳಿರಿಲಿಲ್ವಾ" ಎನ್ನುತ್ತಾ ಸಿಟ್ಟಿನಿಂದ ನನ್ನ ಕೆನ್ನೆಗೊಂದು ಏಟು ಬಾರಿಸಿ, "ಇದು ಪುಂಡರ ಊರು, ನಾವು ಪರದೇಶಿಗಳು ನಡಿ ಮನೆಗೆ" ಎಂದು ಲಗಾಮು ಹಾಕಿದ ಹೋರಿಯನ್ನು ಎಳೆದೊಯ್ಯುವಂತೆ ನನ್ನ ಕೈಹಿಡಿದು ದರದರನೆ ಎಳೆದುಕೊಂಡು ಹೊರಟರು. ಅಪ್ರಜ್ಞಾಪೂರ್ವಕವಾಗಿ ಅವರು ಆಡಿದ ನಿಂದನಾತ್ಮಕವಾದ ಮಾತುಗಳನ್ನು ಜನ ಗಮನಿಸಿರಲಿಲ್ಲ.

ಭಾರತ ಜನನಿಯ ತನುಜಾತನಾದ ನನ್ನ ಮೊಟ್ಟಮೊದಲ ಸಾರ್ವಜನಿಕ ಪ್ರತಿಭಟನೆ ನನ್ನ ತಾಯಿಯವರ ಮಧ್ಯಪ್ರವೇಶದಿಂದ ಭಗ್ನವಾಯಿತು. ನನಗೆ ಆ ಕ್ಷಣದಲ್ಲಿ ಮುಖಭಂಗವಾದರೂ ನಾನೊಬ್ಬ ಪ್ರತಿಭಟನಾಕಾರನಾಗಿ ಹೊಸ್ತಾಳಿಯಲ್ಲಿ ಅಪಾಯಕಾರಿಯಾದ ಅಖಾಡಕ್ಕೆ ಇಳಿದಿದ್ದೆ.

ಏನಾದರೇನಂತೆ, ನಾನು ಸೆಪ್ಟಂಬರ್ ಪರೀಕ್ಷೆಯಲ್ಲೂ ಫೇಲಾಗಿಬಿಟ್ಟೆ. ನನ್ನ ತಾಯಿಯವರ ಬುದ್ಧಿವಾದ ಫಲಿಸಿರಲಿಲ್ಲ. ನನ್ನ ವಿದ್ಯಾಭ್ಯಾಸದ ದುರ್ಗತಿಯಿಂದ ಅವರು ಖಿನ್ನರಾದರು.

ಹೀಗೆ ದಿಕ್ಕು ತಪ್ಪುತ್ತಿದ್ದ ನನ್ನನ್ನು ಒಂದು ಗುರಿ ಮುಟ್ಟಿಸಬೇಕೆಂದು ಸಂಕಲ್ಪ ಮಾಡಿದ ಅವರು ಸುಮ್ಮನಿರಲಿಲ್ಲ. ಸಹೋದ್ಯೋಗಿಗಳು ಕೊಟ್ಟ ಸಲಹೆಯಂತೆ, ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಹಂಗಾಮಿಯಾದ 'ಮಲೇರಿಯಾ ಸರ್ವಲೆನ್ಸ್ ವರ್ಕರ್'ಕೆಲಸಕ್ಕೆ ಸೇರಿಸಿದರು. ನನ್ನನ್ನು ತೀರ್ಥಹಳ್ಳಿ-ಹುಲಿಕಲ್ ಮಧ್ಯದ 'ಎಡೂರು' ಎಂಬ ದಟ್ಟ ಮಲೆನಾಡಿನ ಹಳ್ಳಿಗೆ ನೇಮಕ ಮಾಡಲಾಯಿತು. ಸ್ವಾತಂತ್ರ್ಯ ಹೋರಾಟಗಾರರನ್ನು ಕರಿನೀರಿನ ಶಿಕ್ಷೆ ವಿಧಿಸಿ ಅಂಡಮಾನ್ ದ್ವೀಪಕ್ಕೆ ಕಳಿಸುತ್ತಿದ್ದಂತೆ, ನನ್ನ ತಾಯಿಯವರು ನನ್ನನ್ನು ಎಡೂರಿಗೆ ಗಡಿಪಾರು ಮಾಡಿದರು. ನಾನು ಎಡೂರಿನಲ್ಲಿ ಒಂದು ವರ್ಷ ಅಜ್ಞಾತವಾಸವನ್ನು ಅನುಭವಿಸಬೇಕಾಯಿತು.

## ಮೈಸೂರಿನಲ್ಲಿ...

ಅದು ೬೨-೬೩ ರ ಕಾಲ. ಪಿಯುಸಿ ಮುಗಿಸಿದ್ದೆ. ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಜಾಹೀರಾತು ಬಂದಿತ್ತು. ಮೈಸೂರಿನ ಕೆ.ಎಚ್. ರಾಮಯ್ಯ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಊಟ-ವಸತಿ ಸೌಲಭ್ಯವಿದೆ ಎನ್ನುವುದು ಆ ಜಾಹೀರಾತಿನ ಸಾರ. ಪಿಯುಸಿ ಮುಗಿಸಿ ಮುಂದಿನ ಓದಿಗೆ ದಾರಿ ಹುಡುಕುತ್ತಿದ್ದ ನಾನೂ ಒಂದು ಅರ್ಜಿ ಸಲ್ಲಿಸಿದೆ. ನನಗೆ ಹಾಸ್ಟೆಲ್‌ನಿಂದ ಒಂದು ಕಾರ್ಡ್ ಬಂತು. 'ನಿಮಗೆ ಪ್ರವೇಶ ನೀಡಲಾಗಿದೆ, ಬನ್ನಿ'ಎಂದು ಅದರಲ್ಲಿ ಬರೆದಿತ್ತು. ಒಂದೆರಡು ಬಟ್ಟೆಗಳಿದ್ದ ಸಣ್ಣ ಟ್ರಂಕ್ ಎತ್ತಿಕೊಂಡು ಬಸ್ಸು ಹತ್ತಿ ನೇರ ಕೆ. ಆರ್. ಸರ್ಕಲ್‌ನಲ್ಲಿ ಬಂದು ಇಳಿದಾಗ ರಾತ್ರಿ ೯ ಗಂಟೆ. ಅಲ್ಲಿಂದ ಟಾಂಗಾ ಹತ್ತಿಕೊಂಡು ಒಂಟಿಕೊಪ್ಪಲಿನಲ್ಲಿದ್ದ ಆ ಹಾಸ್ಟೆಲ್‌ಗೆ ಬಂದೆ. ರಾತ್ರಿಯಾದ್ದರಿಂದ ಅಲ್ಲಿದ್ದ ಹುಡುಗರು ಉಳಿದುಕೊಳ್ಳಲು ತಮ್ಮ ರೂಮಿನಲ್ಲಿ ಜಾಗ ಕೊಟ್ಟರು. ಮರುದಿನ ಬೆಳಿಗ್ಗೆ ಹಾಸ್ಟೆಲ್ ವಾರ್ಡನ್ ಬಂದಾಗ ಅವರಿಗೆ ಪತ್ರ ತೋರಿಸಲು ಹೇಳಿದರು. ಬೆಳಿಗ್ಗೆ ಹಾಸ್ಟೆಲ್ ವಾರ್ಡನ್ ಲಾಯರ್ ಭೈರಪ್ಪ ಅವರು ಬಂದರು. ನನಗೆ ಬಂದ ಅಂಚೆ ಕಾರ್ಡ್ ತೋರಿಸಿದೆ. ಕಾರ್ಡ್ ನೋಡಿ ಕಿಡಿಕಿಡಿಯಾದ ಭೈರಪ್ಪ, 'ಯಾವ್ ನನ್ನ ಮಗಾ ಈ ಕಾರ್ಡ್ ಕಳಿಸಿದ್ದು?' ಎಂದು ಕೂಗಾಡಿದರು. ನೋಡಿದರೆ, ಅದ್ಯಾರೋ ಹುಡುಗರ ಕೆಲಸ. ಕಾರ್ಡ್ ಅವರು ಕಳಿಸಿರಲಿಲ್ಲ. ಮೇಲಾಗಿ ಅದು ಒಕ್ಕಲಿಗರ ಹಾಸ್ಟೆಲ್. ಕಾರ್ಡ್‌ನ್ನು ಹರಿದುಹಾಕಿದ ಅವರು 'ಟ್ರಂಕ್ ಸಮೇತ ಈ ಹುಡುಗನನ್ನು ಹೊರಗೆ ಒಗೀರಿ' ಎಂದು ಆದೇಶಿಸಿದರು. ಹುಡುಗರು ಬಹಳ ಬೇಜಾರು ಮಾಡಿಕೊಂಡರು. ಅಲ್ಲಿ ಉಳಿದ ಒಂದೇ ರಾತ್ರಿಯಲ್ಲಿ ಆ ಹುಡುಗರಿಗೆ ಸೌದೆ ಒಡೆಯುವುದು, ನೀರು ತುಂಬುವುದಕ್ಕೆ ಸಹಾಯ ಮಾಡಿದ್ದೆ. ಹಾಗಾಗಿ ಅವರಿಗೂ ನನ್ನ ಬಗ್ಗೆ ಪ್ರೀತಿ ಮೂಡಿತ್ತು. ಆದರೆ ವಾರ್ಡನ್ ಹೆದರಿಕೆಗೆ ಸುಮ್ಮನಾದರು. ನನಗೆ ಅಳು ಬಂತು. ಟ್ರಂಕ್ ಎತ್ತಿಕೊಂಡು ಅಳುತ್ತಾ ರಸ್ತೆಗಿಳಿದೆ. ಹಾಗೆಯೇ ನಡೆದುಕೊಂಡು ರಾಮಸ್ವಾಮಿ ಸರ್ಕಲ್‌ವರೆಗೆ ಬಂದೆ. ಎಲ್ಲಿಗೆ ಹೋಗಬೇಕೆಂದು ಗೊತ್ತಿರಲಿಲ್ಲ. ರಸ್ತೆಯಲ್ಲಿ

ನಡೆಯುತ್ತಿದ್ದರೆ ಎಸ್.ಡಿ. ಸುಂದರೇಶ್ ಕಾಣಿಸಿದರು. ಅವರು ಆಕಸ್ಮಿಕವಾಗಿ ನನ್ನನ್ನು ಕಂಡರು. ವಿಷಯ ತಿಳಿದು ನನ್ನನ್ನು ತಮ್ಮ ರೂಮಿಗೆ ಕರೆದುಕೊಂಡು ಹೋದರು. ಊಟ ಕೊಡಿಸಿದರು. 'ಬೇರೆ ಯಾವುದಾದರೂ ಹಾಸ್ಟೆಲ್‌ಗೆ ಸೇರಿಸ್ತೀನಿ, ನೋಡೋಣ ಇರಿ'ಎಂದರು.

ಆಗ ಶಾರದಾ ಹಾಸ್ಟೆಲ್ ಅಂತ ಒಂದಿತ್ತು. ಈಗಿನ ಕೋರ್ಟ್ ಬಳಿಕ ಮುಂದೆ ಹೋದರೆ ಪೆಟ್ರೋಲ್ ಬಂಕ್ ಇದೆಯಲ್ಲ ಅದರತ್ತಿರದಲ್ಲಿ. ಶಿವಮೊಗ್ಗದ ಸಾಕಷ್ಟು ಹುಡುಗರು ಅಲ್ಲಿ ಉಳಿದು ಓದುತ್ತಿದ್ದರು. ಆದರೆ ಅದು ಪೇಯಿಂಗ್ ಹಾಸ್ಟೆಲ್. ತಾತ್ಕಾಲಿಕವಾಗಿ ಸುಂದರೇಶ್ ನನ್ನನ್ನು ಅಲ್ಲಿ ಸೇರಿಸಿದರು. ಆದರೆ ಅದು ಪೇ ಮೆಸ್ ಆದದ್ದರಿಂದ ಉಚಿತ ಹಾಸ್ಟೆಲ್ ಸಾಧ್ಯವಾದಷ್ಟು ಬೇಗನೆ ಹುಡುಕಿಕೊಳ್ಳಬೇಕಿತ್ತು. ಆಗ ಮೈಸೂರಿನಲ್ಲಿ ಮುನ್ಸಿಪಾಲಿಟಿಯ ಉಚಿತ ಹಾಸ್ಟೆಲ್ ಒಂದಿತ್ತು-ಅಂಬಳೆ ಅಣ್ಣಯ್ಯ ಸ್ಮಾರಕ ಹಾಸ್ಟೆಲ್. ಅಲ್ಲಿ ಸೀಟು ಪಡೆಯಲು ಗೊತ್ತಿದ್ದವರ ಕಡೆಗೆಲ್ಲ ಓಡಾಡಿದೆ. ಹಲವು ಮುನ್ಸಿಪಾಲಿಟಿ ಸದಸ್ಯರ ಮನೆಗೆ ತಿರುಗಿದ ಬಳಿಕ ಸೀಟು ಸಿಕ್ಕಿತು. ಎರಡು ವರ್ಷ ಆ ಹಾಸ್ಟೆಲ್‌ನಲ್ಲಿದ್ದೆ. ಚೆನ್ನಾಗಿತ್ತು. ಆದರೆ ನಾನು ಸುಮ್ಮನೆ ಕುಳಿತುಕೊಳ್ಳುವವ ಅಲ್ಲವಲ್ಲ? ಅಲ್ಲೊಬ್ಬ ವಾರ್ಡನ್ ಇದ್ದ- ಚೆನ್ನಾಗಿ ದುಡ್ಡು ಹೊಡೀತಿದ್ದ. ಹುಡುಗರಿಗೆ ಹುಳ ಬಿದ್ದ ಸಾಂಬಾರ್ ಹಾಕುತ್ತಿದ್ದ. ಅದೊಂದು ದಿನ ಹುಡುಗರನ್ನು ಕಟ್ಟಿಕೊಂಡು ಹುಳ ಬಿದ್ದ ಸಾಂಬಾರ್ ಪ್ರದರ್ಶಿಸುತ್ತ ಮೆರವಣಿಗೆ ಹೊರಟೆ. ಆಗ ಕೆ. ಆರ್. ಕ್ಷೇತ್ರದ ಶಾಸಕರು ವೆಂಕಟಲಿಂಗಯ್ಯ ಅಂತ. ಹುಡುಗರನ್ನೆಲ್ಲ ಮನೆಗೆ ಕರೆಸಿ ಊಟ ಹಾಕಿಸಿದರು. ತನಿಖೆ ನಡೆಸಿ, ವಾರ್ಡನ್‌ನನ್ನು ವಜಾ ಮಾಡಿದರು.

ಮುಂದಿನ ವರ್ಷ ಮಹಾರಾಜಾದಲ್ಲಿ ನನ್ನದು ಫೈನಲ್ ಇಯರ್ ಬಿ.ಎ. ಹಾಸ್ಟೆಲ್‌ನಲ್ಲಿ ಸೀಟಿಲ್ಲ ಎಂದರು. ಮತ್ತೆ ಕೇರಾಫ್ ಫುಟ್‌ಪಾತ್. ಶಾಂತವೀರಪ್ಪ ಅನ್ನುವವರು ಆಗ ಪ್ರಿನ್ಸಿಪಾಲರು. ನನ್ನ ಸ್ಥಿತಿ ನೋಡಲಾಗದೆ ಮಹಾರಾಜ ಕಾಲೇಜಿನಲ್ಲೇ ಒಂದು ಕೊಠಡಿಯಲ್ಲಿ ರಾತ್ರಿ ಕಳೆಯಲು ಅವಕಾಶ ಮಾಡಿಕೊಟ್ಟರು. ಕಾಲೇಜಿನ ರೂಮ್ ನಂಬರ್ ೪ ರಲ್ಲಿ ರಾತ್ರಿ ನಿದ್ದೆ. ಬೆಳಿಗ್ಗೆ ಹಾಸ್ಟೆಲ್‌ನಲ್ಲಿ ಸ್ನಾನ. ಸ್ವಲ್ಪ ಕಾಲ ಹೀಗೆಯೇ ಸಾಗಿತು. ಆಗ ವೀರೇಂದ್ರ ಪಾಟೀಲ್ ಅವರ ಸಂಪುಟದಲ್ಲಿ ಕೆ.ಪುಟ್ಟಸ್ವಾಮಿ ಮಿನಿಸ್ಟ್ರು. ಅವರ ಅಳಿಯ ಮರೀಗೌಡ್ರು ಯೂನಿವರ್ಸಿಟೀಲಿ ಅಸಿಸ್ಟೆಂಟ್ ಲೈಬ್ರೇರಿಯನ್. ಅವರು ನೆರವು ನೀಡಿದರು. ಅವರ ನೆರವಿನಿಂದ ಇನ್ನೊಂದು ಮೆಸ್‌ನಲ್ಲಿ ಊಟ, ತಿಂಡಿಯ ವ್ಯವಸ್ಥೆ ಆಯ್ತು. ದೇವಮ್ಮ ಮೆಸ್ ಅಂತ ಆಗ ಬಹಳ ಫೇಮಸ್ಸು. ಅವರಿಗೆ ಚೆಂದದ ಹುಡುಗಿಯರಿದ್ದರು. ಅವರೇ ಬಡಿಸೋರು. ಶ್ರೀಮಂತರೂ ಅಲ್ಲಿ ಊಟ ಮಾಡೋಕ್ಕೆ ಬರೋರು. ಸಾಕಷ್ಟು ಹುಡುಗರು ಅಲ್ಲಿ ಊಟಕ್ಕೆ ಸೇರುತ್ತಿದ್ದರು. ಎಷ್ಟೋ ಮಂದಿ ಊಟದ ದುಡ್ಡು ಕೊಡದೆ ಕೈಕೊಟ್ಟವರೂ ಉಂಟು.

ಅಷ್ಟರಲ್ಲಿ ಮೈಸೂರಿನ ನನ್ನ ಚಿಂದಿ ಚಿತ್ರಾನ್ನ ಸ್ಥಿತಿಯ ವರದಿ ಅಮ್ಮನಿಗೆ ಸಾಕಷ್ಟು 'ವರಿ' ಉಂಟುಮಾಡಿತ್ತು. ಸರ್ಕಾರಿ ಆಸ್ಪತ್ರೆಯಲ್ಲಿ ಡ್ಯೂಟಿಯಲ್ಲಿದ್ದ ಅವರು ಕಷ್ಟಪಟ್ಟು ಶಿಫಾರಸ್ಸು ಮಾಡಿಸಿಕೊಂಡು ಮೈಸೂರಿಗೆ ವರ್ಗಾ ಆಗಿ ಬಂದರು. ಅಲ್ಲಿಂದ ನನ್ನ ಹೊಟ್ಟೆಯ ಸಮಸ್ಯೆಗೆ ಪೂರ್ಣವಿರಾಮ ಬಿತ್ತು.

## ಜಾತಿ ಬಿಡಿ, ಧರ್ಮ ಬಿಡಿ, ಮಾನವತೆಗೆ ಜೀವ ಕೊಡಿ

**ನಿರೂಪಣೆ : ಐ.ಜಿ. ಚಂದ್ರಶೇಖರಯ್ಯ**

ನಾನು ಇಲ್ಲಿಗೆ ಬಂದಿರೋದೆ ಬಹಳಷ್ಟು ಜನರಿಗೆ ಆಶ್ಚರ್ಯ. ಬಹಳ ಜನ ಮೈಸೂರಲ್ಲಿ ಮತ್ತು ಇಲ್ಲಿಗೆ ಬಂದಮೇಲೂ ಕೇಳಿದರು; 'ಮಠ ಮಾನ್ಯಗಳಿಗೆ ಯಾಕೆ ಹೋಗ್ತೀರಿ?' ಅವರು ಕೇಳುವಂಥ ಪ್ರಶ್ನೆ ಬಹಳ ಸಹಜವಾದುದು. ಕರ್ನಾಟಕದಲ್ಲಿ ಮಠಮಾನ್ಯಗಳನ್ನ ಪ್ರತಿಭಟಿಸುವ ಒಂದು ಚಳವಳಿಯನ್ನೇ ಮಾಡಿಕೊಂಡು ಬರ್‍ತಾ ಇದ್ದೇನೆ. ಯಾಕೆ ನಾನು ಚಳವಳಿ ಅಂತಾ ಹೇಳ್ತಾ ಇದ್ದೇನೆ ಅಂದ್ರೆ 'ದಟ್ ಈಸ್ ದಿ ಮೇಜರ್ ಅಜೆಂಡಾ'. ಮೈಸೂರಿನಲ್ಲಿ ಮತ್ತು ಅದರ ಸುತ್ತಮುತ್ತ ಬಹಳ ಮಠಮಾನ್ಯಗಳು ಇವೆ. ಬಹುಶಃ ಭಾರತದಲ್ಲೇ ಅತ್ಯಂತ ಹೆಚ್ಚು ಮಠಗಳಿರುವಂತಹ ರಾಜ್ಯ ಅಂದ್ರೆ ಕರ್ನಾಟಕ.

ಇಲ್ಲಿಗೆ ಬರುವಾಗ ನನ್ನ ಮನಸ್ಸಿನಲ್ಲಿ ಒಂದು ರೀತಿಯ ದ್ವಂದ್ವ ಇತ್ತು. ನಿಮ್ಮ ಮನಸ್ಸಿನಲ್ಲಿಯೂ ಇರಬಹುದು. ಬೆಳಿಗ್ಗೆಯಿಂದ 'ಭಯೋತ್ಪಾದನೆ, ಮತೀಯವಾದ ಮತ್ತು ಧರ್ಮ' ಕುರಿತು ನಾವು ಬೌದ್ಧಿಕ ಜಿಜ್ಞಾಸೆ ಮಾಡಿದ್ದೇವೆ. ಬಹಳ ಜನ ನಮ್ಮ ಸ್ನೇಹಿತರು ಅದರ ಎಲ್ಲ ಆಯಾಮಗಳನ್ನು ಕುರಿತು ಬೇರೆ ಬೇರೆ ದೃಷ್ಟಿಕೋನಗಳಿಂದ ನಿಮ್ಮ ಮುಂದೆ ಮಂಡಿಸಿದ್ದಾರೆ, ಸಂವಾದ ಮಾಡಿದ್ದಾರೆ. ಅದನ್ನು ಮೀರಿ ಹೇಳುವಂತಹದ್ದು ಹೆಚ್ಚು ಇಲ್ಲದೇ ಇರುವುದರಿಂದ, ನಾಟಕ ಬೇರೆ ಇರೋದ್ರಿಂದ ಸಂಕ್ಷಿಪ್ತವಾಗಿ ನನ್ನ ಅಭಿಪ್ರಾಯಗಳನ್ನು ನಿಮ್ಮ ಮುಂದೆ ಮಂಡಿಸ್ತೇನೆ.

ಭಯೋತ್ಪಾದನೆ ಅನ್ನೋದು ಮನುಷ್ಯನ ಒಳಗಡೇನೇ ಇದೆ. ಮನುಷ್ಯ ಮೂಲಭೂತವಾಗಿ ಬಹಳ ಭೀತನಾದಂತಹವನು. ಎಲ್ಲಾ ಪ್ರಾಣಿ ಪಕ್ಷಿಗೂ ಭೀತಿಯಿದೆ. ಯಾವ ಸಮಾಜಕ್ಕೆ ಸಾವಿನ ಭೀತಿ ಹೆಚ್ಚಾಗಿ ಇರುತ್ತೋ ಆ ಸಮಾಜ ಶಸ್ತ್ರಾಸ್ತ್ರಗಳನ್ನು ಉತ್ಪಾದನೆ ಮಾಡೋದಕ್ಕೆ ಶುರು ಮಾಡಿಬಿಡುತ್ತೆ. ಬುದ್ಧ ಪೂರ್ಣಿಮೆಯ ದಿನ ನಾವು ಮಾಡಿದ ಕೆಲಸ ಏನು? ನಾವು ಜಗತ್ತಿನಲ್ಲಿ ತಲೆತಗ್ಗಿಸಬೇಕಾದ ಕೆಲಸ ಅದು. ಆದರೆ ಈಗ ಜಗತ್ತಿನಲ್ಲಿ ಬಹಳ ಹೆಮ್ಮೆ ಪಡುವಂತಹ

ವಿಚಾರ ಯಾವುದೂ ಅಂದ್ರೆ, ನಾವೂ 'ವೆಪನ್ ಆಫ್ ಮಾಸ್ ಡಿಸ್ಟ್ರಕ್ಷನ್' ಆಗ್ತೇವೆ ಅನ್ನೋದು. ಈಗ ನಾಟಕ ನೋಡಿದ್ರಲ್ಲ; ನಾಗಸಾಕಿ, ಹಿರೋಶಿಮಾದ ಮೇಲೆ ಅಮೆರಿಕಾದವರು ಬಾಂಬ್ ಹಾಕಿದ ಪರಿಣಾಮ. ನಾಗಸಾಕಿ-ಹಿರೋಶಿಮಾದ ಜನರು, ಮಕ್ಕಳು ಇವತ್ತಿಗೂ ಶಾಪಗ್ರಸ್ತರಾಗಿದ್ದಾರೆ. ಆ ಶಾಪದಿಂದ ವಿಮೋಚನೆಯಾಗುವ ದಾರಿಗಳೇ ಇಲ್ಲದಿರುವ ಮಾನವ ಜಗತ್ತೊಂದು ಸೃಷ್ಟಿಯಾಗಿದೆ. ಅದರ ಜೊತೆಗೆ ಮತೀಯ ಭಯೋತ್ಪಾದನೆ ಪ್ರಾರಂಭ ಆಗಿದೆ. ಇದು ಹೊಸದಾಗಿ ಏನೂ ಪ್ರಾರಂಭ ಆಗಿರೋದಲ್ಲ, ಸೆಪ್ಟಂಬರ್ 11 ವರ್ಲ್ಡ್ ಟ್ರೇಡ್ ಆರ್ಗನೈಜೇಷನ್ ಮೇಲೆ ಅಥವಾ ಪೆಂಟಗಾನ್ ಮೇಲೆ ಸಿವಿಲ್ ಏವಿಯೇಷನ್‌ನ ವಿಮಾನಗಳು ಹೋಗಿ ಅಪ್ಪಳಿಸ್ತಾವೆ ಅಂತಾ ಕಲ್ಪನೆ ಮಾಡಿಕೊಂಡಿರಲಿಲ್ಲ ಅಷ್ಟೇ. ಶಸ್ತ್ರಾಸ್ತ್ರಗಳು ಯಾವತ್ತಾದ್ರೂ ಬಂದು ದಾಳಿ ಮಾಡ್ತವೆ ಅನ್ನೋದು ಗೊತ್ತಿತ್ತು. ಆದರೆ ನಾವು ಓಡಾಡುವ ವಿಮಾನಗಳೇ ಶಸ್ತ್ರಾಸ್ತ್ರಗಳಾಗಿ ಪರಿವರ್ತನೆ ಆಗ್ತಾವೆ ಅನ್ನೋದನ್ನ ಯಾವ ವಿಜ್ಞಾನಿಯೂ, ಯುದ್ಧದ ಪರಿಣತನೂ ಕಲ್ಪನೆ ಮಾಡಿಕೊಂಡಿರಲಿಲ್ಲ. ಅದು ನಡೆದೋಯ್ತು. ಆದ್ದರಿಂದಲೇ ಜಗತ್ತಿನ ಇತಿಹಾಸ; ಸೆಪ್ಟಂಬರ್ 11 ರ ನಂತರದ ಜಗತ್ತಿನ ಇತಿಹಾಸ ಸಂಪೂರ್ಣವಾಗಿ ಸ್ಥಿತ್ಯಂತರವಾಗಿದೆ.

ನಮ್ಮ ಮನಸ್ಸು, ಇಲ್ಲಿ ಕೂತಿರೋರ ಮನಸ್ಸು, ಬೆಳಿಗ್ಗೆಯಿಂದ ಕೇಳ್ತಾ ಇರುವ ಮನಸ್ಸು ಇದೆಯಲ್ಲಾ; ಈ ಮನಸ್ಸಲ್ಲೂ ಒಂದು ದ್ವಂದ್ವ ಇದೆ. ಅಮೆರಿಕಾ ಮಾಡ್ತಾ ಇರೋದು ಸರಿಯೇ? ತಾಲಿಬಾನ್‌ಗೆ ಹೋಗಿ ಸೂಯಿಸೈಡ್ ಬಾಂಬನ್ನು ಧರ್ಮದ ಹೆಸರಿನಲ್ಲಿ, 'ಜೆಹಾದ್' ಅಂತಾ ಹೇಳಿ ಹಾಕ್ತಾ ಇರೋದು ಸರಿಯೇ? ಯಾವುದು ಸರಿ? ಈ ಪ್ರಶ್ನಾರ್ಥಕ ಚಿಹ್ನೆ ನಮ್ಮ ಮುಂದೆ ಮಾತ್ರ ಅಲ್ಲ; ಜಗತ್ತಿನ ಮುಂದೆ ಇದೆ. ಈ ಪ್ರಶ್ನೆಗೆ ನಾವು-ನೀವು, ಇಡೀ ಜಗತ್ತು, ಇಪ್ಪತ್ತೊಂದನೆಯ ಶತಮಾನ ಉತ್ತರ ಹೇಳದೇ ಇದ್ರೆ ಇಪ್ಪತ್ತೊಂದನೆಯ ಶತಮಾನ ಜಗತ್ತಿನ ಅತ್ಯಂತ ಕರಾಳ ಅಧ್ಯಾಯವಾಗಿ ಪರಿವರ್ತನೆಯಾಗುತ್ತೆ. ಯಾಕೆ ಕರಾಳ ಅಧ್ಯಾಯವಾಗಿ ಪರಿವರ್ತನೆ ಆಗುತ್ತೆ? 'ಟೆರರ್ ಅಂಡ್ ಕೌಂಟರ್ ಟೆರರಿಜಂ'. ಇವತ್ತು ಅಮೆರಿಕಾ ಯುದ್ಧ ಅಂತಾ ಕರೆದಿದೆ, ಯುದ್ಧ ಅಲ್ಲಾ ಅದು; ಅದು ಒಂದು ಕೌಂಟರ್ ಟೆರರಿಜಂ ಅಷ್ಟೇ. ಒಂದು ಭಯೋತ್ಪಾದನೆಗೆ ಇನ್ನೊಂದು ಭಯೋತ್ಪಾದನೆ ಅಷ್ಟೆ. ಮೊನ್ನೆ ಗಾಂಧಿ ಜಯಂತಿ ದಿನ ನಾಲ್ಕೈದು ಜನ ಹುಡುಗರು ಬೆಂಗಳೂರಿನಲ್ಲಿ ಬಹಳ ಸಿಂಬಾಲಿಕ್ ಆಗಿರೋ ಒಂದು ಪ್ಲಕಾರ್ಡ್ ಹಿಡ್ಕೊಂಡು ಗಾಂಧಿ ಪ್ರತಿಮೆ ಹತ್ತಿರ ನಿಂತಿದ್ರು. ನನಗಂತೂ ಅದು ರೋಮಾಂಚನಕಾರಿಯಾದ, ಅದ್ಭುತವಾದ ಮೆಸೇಜ್. ಏನು ಹೇಳ್ತಾ ಇತ್ತು? ನಾವು ಕಣ್ಣಿಗೆ ಕಣ್ಣು, ಸೇಡಿಗೆ ಸೇಡು, ಪ್ರತೀಕಾರಕ್ಕೆ ಪ್ರತೀಕಾರ ಮಾಡ್ತ ಹೋದ್ರೆ ಜಗತ್ತು ಸ್ಮಶಾನವಾಗಿ ಪರಿವರ್ತನೆಯಾಗುತ್ತೆ. ಬರೇ ಕುರುಡರು, ಅಂಗವಿಕಲರು, ನಿರ್ಗತಿಕರು ಇರುವಂತಹ ಜಗತ್ತಾಗಿ ಪರಿವರ್ತನೆಯಾಗುತ್ತೆ. ಅಮೆರಿಕಾನೂ ಅದರಿಂದ ಎಕ್ಸೆಪ್ಷನ್ ಆಗಲಿಕ್ಕೆ ಸಾಧ್ಯ ಇಲ್ಲ, ಯೂರೋಪೂ ಸಾಧ್ಯ ಇಲ್ಲ. ಧರ್ಮ ಅಲ್ಲ ಇದು.

ಲೋಹಿಯಾರವರ ಮಾತಿನ ಪ್ರಕಾರ; ಇವತ್ತಿನ ರಾಜಕೀಯ ಇವತ್ತಿನ ಧರ್ಮ. ಇವತ್ತು ಏನು ರಾಜಕೀಯ ನಡೀತಾ ಇದೆ ಅದು ಇವತ್ತಿನ ಧರ್ಮ. ನಿನ್ನೆ ಧರ್ಮ ಅಂತಾ ಕರೀತಾ ಇದ್ವಿ

ಅದು ಅವತ್ತಿನ ರಾಜಕಾರಣ. ಧರ್ಮ ಯಾವಾಗಲೂ ಸಂಘಟನಾತ್ಮಕ ರೂಪದಲ್ಲಿ ಇರಲಿಲ್ಲ. ಸಂಘಟನಾತ್ಮಕ ರೂಪವನ್ನು ಪಡೆದುಕೊಂಡ್ರೆ- ಅದು ಬೌದ್ಧ ಧರ್ಮ ಆಗಿರಬಹುದು, ವೀರಶೈವ ಧರ್ಮ ಆಗಿರಬಹುದು, ಹಿಂದೂ ಧರ್ಮ ಆಗಿರಬಹುದು, ಜಗತ್ತಿನ ಯಾವುದೇ ಧರ್ಮ ಆಗಿರಬಹುದು -ಅದು ಭಯೋತ್ಪಾದಕವಾಗುತ್ತೆ. ವ್ಯಕ್ತಿಯನ್ನು, ಅವನ ಆಲೋಚನಾಶಕ್ತಿಯನ್ನು, ಅವನ ಪ್ರತಿಭಟಿಸುವ ಶಕ್ತಿಯನ್ನು ಮತ್ತು ಅವನ ಅನ್ವೇಷಣಾತ್ಮಕವಾದಂತಹ ಶಕ್ತಿಯನ್ನು ನಾಶ ಮಾಡಿ 'ಫೆಯಿತ್' ಆಗಿ ಕನ್ವರ್ಟ್ ಮಾಡಿಬಿಡ್ತದೆ. ಅದಕ್ಕೆ ನಾನು ಮಠಗಳನ್ನು ವಿರೋಧ ಮಾಡ್ತೇನೆ. ಮಠಗಳ ಬಗೆಗೆ ಬಸವಣ್ಣನ ಕಾನ್‌ಸೆಪ್ಟ್ ಬೇರೆ. ಬಸವಣ್ಣ 'ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡುವೆ ಬಡವನಯ್ಯಾ...' ಅಂತಾ ಪ್ರಾರಂಭ ಮಾಡಿದ ವಚನ ಇದೆಯಲ್ಲಾ, ಆ ವಚನದ ಮೂಲಕ ಇಡೀ ಧರ್ಮದ ಅಮೂರ್ತತೆಯನ್ನು ಮತ್ತು ಧರ್ಮದ ಸಜೀವವಾದ, ಸಕಾರಾತ್ಮಕವಾದ, ಮೂರ್ತವಾದ ರೂಪವನ್ನ ಹುಡುಕೋದಕ್ಕೆ ಪ್ರಯತ್ನ ಪಟ್ರು. ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ. ಯಾವುದು ಸ್ಥಾವರವಾಗುತ್ತೆ ಅದು ಟೆರರಿಸ್ಟ್ ಆಗುತ್ತೆ. ಯಾರೋ ಪ್ರಶ್ನೆ ಕೇಳ್ತಾ ಇದ್ರು; ಇಸ್ಲಾಂನವರ ಖುರಾನ್ ಕುರಿತು. ಖುರಾನ್ ಅಲ್ಲ. ಇಲ್ಲೇ ತಗೊಳ್ಳಿ; ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ನಾವು ಈ ಸ್ವಾಮಿಜಿಗೆ ಪ್ರಶ್ನೆ ಕೇಳಿ, ಪ್ರತಿಭಟನೆ ಮಾಡಿದ್ರೆ? ನನಗೆ ಚೆನ್ನಾಗಿ ಗೊತ್ತು, ಇಲ್ಲಿ ಕೂತಿರೋ ಭಕ್ತರೆಲ್ಲಾ ಬಂದು ನನ್ನ ಒದ್ಬಿಡ್ತಾರೆ. ಇದನ್ನು ನಾನು ಅನುಭವಿಸಿದ್ದೇನೆ. ಫೆಯಿತ್ ಆದ ತಕ್ಷಣವೇ, ನೀವು ಅವರನ್ನ ಹೀನಾಮಾನ ಹೊಗಳಿ ಚಪ್ಪಾಳೆ ಹೊಡೀತೀರ. ಅವರಲ್ಲಿ ಇಲ್ಲದೇ ಇರೋ ಗುಣಗಳನ್ನೆಲ್ಲಾ ಹೇಳಿ, ಆರೋಪ ಮಾಡಿ ನಾನು ಅರ್ಧಗಂಟೆ ಮಾತಾಡಿದ್ರೂ ಚಪ್ಪಾಳೆ ಹೊಡೀತಾನೇ ಇರ್ತೀರ. ಯಾಕಪ್ಪಾ ಇಂತಹ ಮನಸ್ಥಿತಿ ನಮಗೆ ನಿರ್ಮಾಣ ಆಗುತ್ತೆ?

ಈ ಸ್ವಾಮಿಜಿಗಳು ಒಳ್ಳೇ ಕೆಲಸ ಮಾಡ್ತಾ ಇದ್ದಾರೆ. ಸಮಾಜದಲ್ಲಿ ಅವರು ಯಾವ ಜವಾಬ್ದಾರಿಯನ್ನು ತಗೊಂಡಿದ್ದಾರೆ ಆ ಜವಾಬ್ದಾರಿಯನ್ನು ಅವರು ನಿರ್ವಹಿಸ್ತಾ ಇದ್ದಾರೆ. ಆ ನಿರ್ವಹಣೆಯ ಸಂದರ್ಭದಲ್ಲಿ ಅವರು ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಬೇಕಾದಂತಹ ನೈತಿಕ ಹೊಣೆಗಾರಿಕೆಯ ಸ್ಥಾನವನ್ನು ಈಗಾಗ್ಲೆ ಅಲಂಕರಿಸಿದ್ದಾರೆ. ನಾನು ಅದಕ್ಕೇ ಹೇಳೋದು; ಬಸವಣ್ಣ ಬಹಳ ಚೆನ್ನಾಗಿ ಯೋಚನೆ ಮಾಡಿ, ಇದೆನಪ್ಪಾ, ಹೊಗಳಿ ಹೊಗಳಿ ಎನ್ನನ್ನು ಹೊನ್ನ ಶೂಲಕ್ಕೆ ಇಡ್ತಾರೆ ಅಂತ. ಯಾಕೆ ಹೇಳಿದ್ನಪ್ಪ ಅಂದ್ರೆ, ಒಬ್ಬ ಮನುಷ್ಯನನ್ನ ಹೊಗಳ್ತಾ ಹೊಗಳ್ತಾ 'ಯು ಕೆನ್ ಕನ್ವರ್ಟ ಎ ಹ್ಯೂಮನ್ ಬೀಯಿಂಗ್ ಇಂಟೂ ಎ ಡಿಕ್ಟೇಟರ್'. ಇದು ಡೆಮಾಕ್ರಸಿಯಲ್ಲಿ ಆಗುತ್ತೆ. ಇಂದಿರಾಗಾಂಧಿ ನೋಡಿ, ಡೆಮಾಕ್ರಿಟಿಕ್ ಫಾರಂನಲ್ಲಿ ಬಂದಂತಹ ಅವಳನ್ನು ಹೊಗಳಿ ಹೊಗಳಿ ಸೈಕೋಫ್ಯಾತ್‌ಟ್ಸ್ ಮಾಡಿಬಿಟ್ರು; ದೆ ಕನ್ವರ್ಟೆಡ್ ಇಂದಿರಾಗಾಂಧಿ ಎ ಡೆಮಕ್ರಿಟಿಕ್ ಪ್ರೈಮಿನಿಸ್ಟರ್ ಇನ್‌ಟು ಏ ಡಿಕ್ಟೇಟರ್. ನಾಗರಿಕ ಸಮಾಜದಲ್ಲಿ ಯಾಕೆ ಹೀಗಾಗುತ್ತೆ? ನೀವು-ನಾವು ಎಲ್ಲಾ ಪ್ರಶ್ನೆ ಕೇಳಿಕೋಬೇಕಾಗಿರೋದು ಏನು? ಧರ್ಮ ಅನ್ನೋದು ಬಹಳ ವೈಯಕ್ತಿಕವಾದದ್ದು. ಧರ್ಮಕ್ಕೆ ಎರಡು ರೂಪ ಇದೆ. ಒಂದು ಅದರ ಕರ್ಮಕಾಂಡ. ದೇವಸ್ಥಾನಗಳನ್ನು ಕಟ್ಟಿಸೋದು, ಮಠಗಳನ್ನು ಕಟ್ಟೋದು, ವೈಭವದಿಂದ ಉತ್ಸವಗಳನ್ನು

ಆಚರಿಸೋದು, ರಥೋತ್ಸವಗಳನ್ನು ಮಾಡೋದು. ಯಜ್ಞಯಾಗಾದಿಗಳನ್ನು ಮಾಡೋದು, ಏನು ಬೇಕಾದ್ರೂ ನೀವು ಧರ್ಮದ ಹೆಸರಿನಲ್ಲಿ ಮಾಡಬಹುದು. ಬೀದಿನಲ್ಲೇ ದೇವಸ್ಥಾನ ಕಟ್ಟಬಹುದು. ಎಲ್ಲಾ ಧರ್ಮದವರೂ ಮಾಡ್ತಾ ಇದ್ದಾರೆ ಅದನ್ನ. ಕ್ರಿಶ್ಚಿಯನ್ನರು ಮಾಡ್ತಾ ಇದ್ದಾರೆ, ಮುಸ್ಲಿಮರು ಮಾಡ್ತಾ ಇದ್ದಾರೆ, ಹಿಂದೂಗಳು ಮಾಡ್ತಾ ಇದ್ದಾರೆ. ಅವರು ಮಾಡ್ತಾರೆ ಅಂತ ಇವರು, ಇವರು ಮಾಡ್ತಾರೆ ಅಂತ ಅವರು. ಯಾಕೆ ಮಾಡ್ತಾ ಇದ್ದಾರೆ? ಇದು ಅಹಂಕಾರ. ಧರ್ಮ ಯಾವಾಗ ಸಂಘಟನಾತ್ಮಕವಾದ ರೂಪವನ್ನು ಪಡೆದುಕೊಳ್ಳುತ್ತೋ ಆಗ ಅದು ಅಹಂಕಾರ ಜನ್ಯವಾಗುತ್ತೆ. ಪ್ರಪಂಚದಲ್ಲಿ ಇವತ್ತು ಎರಡು ರೀತಿಯ ಅಹಂಕಾರ ಜನ್ಯವಾಗಿದೆ. ಅಮೆರಿಕಾ ದೇಶದ ಅಹಂಕಾರ ಯಾವುದು? ಆರ್ಥಿಕ ಅಹಂಕಾರ; ಧಾರ್ಮಿಕ ಅಹಂಕಾರ ಅಲ್ಲ. ಪೆಂಟಗಾನ್ ಮತ್ತು ವರ್ಲ್ಡ್ ಟ್ರೇಡ್ ಸೆಂಟರ್ ಏಕೆ ಡೆಸ್ಟ್ರಾಯ್ ಮಾಡಿದ್ರು? ಅಮೆರಿಕಾ ಜಗತ್ತಿನಲ್ಲಿ ಪಾಳೇಗಾರನಂತೆ ವರ್ತಿಸೋದಕ್ಕೆ. ನಮ್ಮ ಮನಸ್ಸಿನಲ್ಲಿ ಎರಡು ತರದ ಅಹಂಕಾರ ಇದೆ. ಒದು ಧಾರ್ಮಿಕ ಅಹಂಕಾರ. ನಾವು ಅವರಿಗೆ ಪಾಠ ಕಲಿಸಬೇಕಾದ್ರೆ ಸೂಯಿಸೈಡ್ ಸ್ಕ್ವಾಡ್ ಬೇಕು. ಎಲ್ಲಿಂದ ಬಂತು ಸೂಯಿಸೈಡ್ ಸ್ಕ್ವಾಡ್! ಪಾಪ, ಚಿಕ್ಕ ಚಿಕ್ಕ ಹುಡುಗರ ತಲೆಯಲ್ಲಿ ಧರ್ಮ ತುಂಬಿ ಸೂಯಿಸೈಡ್ ಸ್ಕ್ವಾಡ್ ಆಗಿ ಕನ್ವರ್ಟ್ ಮಾಡೋದು. ಇಟ್ ಈಜ್ ಎ ವೆಪನ್ ಆಫ್ ಮಾಸ್ ಡಿಸ್ಟ್ರಕ್ಷನ್. ರಿಲಿಜನ್ ಈಜ್ ಆಲ್ಸೋ ಎ ವೆಪನ್ ಆಫ್ ಮಾಸ್ ಡಿಸ್ಟ್ರಕ್ಷನ್. ಅಮೆರಿಕಾ ಮಾಡ್ತಾ ಇರೋ ಕೆಲಸನೂ ಅದೇ. ಅಮೆರಿಕಾದ ಟ್ರೇಡ್ ಆರ್ಗನೈಜೇಷನ್, ರಿಮೋಟ್ ಕಂಟ್ರೋಲ್ಡ್ ಟೆಕ್ನಾಲಜಿ ನಿಮ್ಮ ಮನೆಗಳಲ್ಲಿ, ನಿಮ್ಮ ಮನಸ್ಸಿನ ಮೇಲೆ ಮಾಡ್ತಾ ಇರೋ ಆಕ್ರಮಣ. ರೈತರ ಸಾಮೂಹಿಕ ಆತ್ಮಹತ್ಯೆ ಮತ್ತು ಈ ಎಲ್ಲ ನೈತಿಕ ಸ್ತರಗಳ ಸಂಪೂರ್ಣವಾದ ಪತನ ಯಾಕಾಗ್ತಾ ಇದೆ? ಬುದ್ಧ, ಬಸವಣ್ಣ, ಗಾಂಧಿ ಈ ಮೂರು ಜನರನ್ನು ನಾವು ಯಾಕೆ ಇಟ್ಟುಕೊಳ್ಳಬೇಕು ಅಂದರೆ ಅವರು ಯಾರೂ ಈ ಸಂಘಟನಾತ್ಮಕವಾದ ರೂಪವನ್ನು ಹೇಳಲಿಲ್ಲ.

ಬಡವರ, ದಲಿತರ ಗುಡಿಸಲಿಗೆ ಬೆಂಕಿ ಹಾಕಬೇಕು ಅಂತ ನಮಗೆ ಮನಸ್ಸು ಬರುತ್ತೆ ಯಾಕೆ? ಜಾತಿಯ ಅಹಂಕಾರ. ಕಂಬಾಲಪಲ್ಲಿಯ ದಲಿತರ ಗುಡಿಸಲುಗಳಿಗೆ ಬೆಂಕಿ ಹಾಕಿದಾಗ ನಮ್ಮ ಮನಸ್ಸಿನಲ್ಲಿ ಇದ್ದದ್ದೇನು? ಜಾತಿಯ ಅಹಂಕಾರ. ಕೆಳಗಡೆ ಇದ್ದ ಮನುಷ್ಯ ನಮ್ಮನ್ನೇ ಪ್ರಶ್ನೆ ಮಾಡ್ತಾನೆ. ಆದ್ದರಿಂದ ಸುಟ್ಟು ಹಾಕು ಅವನನ್ನು. ಅಂದ್ರೆ ಪ್ರಶ್ನಿಸುವ, ಪ್ರತಿಭಟಿಸುವ ಅಧಿಕಾರ ಯಾವ ಸಮಾಜದಲ್ಲಿ ಇರೋದಿಲ್ಲ; ಆ ಸಮಾಜ ಈ ರೀತಿಯ ಅಹಂಕಾರವನ್ನು ಸೃಷ್ಟಿ ಮಾಡ್ತಾ ಹೋಗುತ್ತೆ. ಬಸವಣ್ಣನನ್ನು ನಾವು ಯಾಕೆ ನೆನಪು ಮಾಡಿಕೊಳ್ಳಬೇಕು? ಬಸವಣ್ಣ ಒಬ್ಬ ಮೂರ್ತಿ ಭಂಜಕ. ಬುದ್ಧ ಒಬ್ಬ ಮೂರ್ತಿ ಪೂಜೆಯನ್ನು ಮಾಡಲಿಲ್ಲ. ಗಾಂಧಿಗಿಂತ ಕ್ರಾಂತಿಕಾರಿ ಯಾರೂ ಇಲ್ಲ. ಯಾಕಂದ್ರೆ ಗಾಂಧಿಯನ್ನ ನಾನು ಧಾರ್ಮಿಕ ವ್ಯಕ್ತಿ ಅಂತ ಕರೆಯೋದೇ ಇಲ್ಲ. ಗಾಂಧಿ ಯಾವ ಧರ್ಮದ ವ್ಯಕ್ತೀರಿ? ಗಾಂಧಿ ಯಾವ ಯಜ್ಞ ಯಾಗಾದಿಗಳನ್ನೂ ಕುರಿತು ಮಾತನಾಡುವ ಹಕ್ಕು ಯಾಕಿತ್ತು? ಬಿಕಾಸ್ ಹಿ ವಾಜ್ ಎ ಟ್ರಾನ್ಸ್‌ಫರೆಂಟ್ ಮ್ಯಾನ್. ಎ ಮ್ಯಾನ್ ವಿತ್ ಗ್ರೇಟ್ ಕರೇಜ್ ಅಂಡ್ ಎ ಮ್ಯಾನ್ ವಿತ್ ಗ್ರೇಟ್ ಮಾರಲ್ ಡಿಗ್ನಿಟಿ ಅಂಡ್ ಹಾನರ್

ವಿತೌಟ್ ಎನಿ ಸೆಲ್ಫಿಷ್ ಮೋಟೀವ್. ಅದಕ್ಕೆ ಬಸವಣ್ಣ ಹೇಳಿದ: ಸಾವು ಬರುತ್ತೇನಪ್ಪಾ! ನಾಳೆ ಬರುವುದು ಇಂದೇ ಬರಲಿ. ಮರಣವೇ ಮಹಾನವಮಿ ಅಂದ. ಸಾವಿಗ್ಯಾಕೆ ಹೆದರ್ತೀರ ನೀವು? ಸಾವು ಅಂದ್ರೆ ಸೂಯಿಸೈಡ್ ಅಲ್ಲ. ಸೂಯಿಸೈಡ್ ಈಸ್ ಡಿಫರೆಂಟ್. ಯಾರು ಭಯೋತ್ಪಾದನೆ ಮಾಡ್ತಾರೆ ಅವರು ದೆ ಆರ್ ದಿ ಕವರ್ಡ್ಸ್. ಹೇಡಿಗಳು ಮಾತ್ರ ಭಯೋತ್ಪಾದಕರು. ಅಮೆರಿಕಾ ಮಾಡ್ತಾ ಇರೋ ಕೆಲಸ ಏನು ಇವತ್ತು? ಮೊದಲೇ ಸ್ಮಶಾನ ಆಗಿದೆ ಕಾಬೂಲ್. ಆ ಸ್ಮಶಾನದ ಮೇಲೆ, ಸತ್ತ ಘೋರಿಗಳ ಮೇಲೆ ಬ್ಲ್ಯಾಂಕೇಟ್ ಬಾಂಬಿಂಗ್ ಮಾಡುವಂತಹ ನಾಗರಿಕತೆ ನಾಚಿಕೆಗೇಡಿನ ನಾಗರಿಕತೆ. ನೀವು ಅಮೆರಿಕಾ ಪರವಾಗಿ ಮಾತಾಡ್ತೀರಾ? ಈಜ್ ಇಟ್ ಎ ಸಿವಿಲೈಜೇಷನ್. ಜಸ್ಟ್ ಬಿಕಾಸ್ ದೆ ಆರ್ ಓನಿಂಗ್ ದಿ ಮಾಡ್ರನ್ ವೆಪೆನ್ಸ್. ಏನಿದು? ಇವತ್ತು ಯುನೈಟೆಡ್ ನೇಷನ್‌ನ ಸ್ಥಿತಿಯೇನಾಗಿದೆ? ನಾವೆಲ್ಲ ಏನಾಗಿದ್ದೇವೆ? ನಾನು ಹೇಳೋದು ವಿ ಮಸ್ಟ್ ಎಕ್ಸ್‌ಪ್ರೆಸ್ ಅವರ್ ಡಿಸೆಂಟ್. ತಾಲೀಬಾನ್ ವಿರುದ್ಧ ಹೇಗೆ ಡಿಸೆಂಟ್ ಎಕ್ಸ್‌ಪ್ರೆಸ್ ಮಾಡ್ತೇವೋ, ಮುಸ್ಲಿಮರ ವಿರುದ್ಧ ನಮ್ಮ ಮನಸ್ಸಿನಲ್ಲಿ ಎಲ್ಲೋ ಒಂದು ಕಡೆಗೆ ಪ್ರಿ ಆಕ್ಯುಪೈಡ್ ಆಗಿರೋದು ಇದೆ. ಜಗತ್ತಿನ ಯಾವ ಧರ್ಮವಾಗಲಿ, ಮನುಷ್ಯನನ್ನ ಮಾನವೀಯತೆಗೆ ಖಂಡಿತಾ ಇನ್ಸ್‌ಪೈರ್ ಮಾಡೋದಿಲ್ಲ.

ಖುರಾನನ್ನು, ಭಗವದ್‌ಗೀತೆಯನ್ನು ಶಾಶ್ವತ ಅಂತ ತಿಳಿದುಕೊಂಡ್ರೆ ಮುಗಿದ್ಹೋಯ್ತು- ಅವನು ರಾಕ್ಷಸ ಆಗ್ಬಿಡ್ತಾನೆ. ಯಾವುದೇ ಧರ್ಮಗ್ರಂಥಗಳು ಆಯಾ ಕಾಲದ ಒತ್ತಡಗಳಿಗೆ, ತಿಳಿವಳಿಕೆಗೆ, ಅರಿವಿಗೆ, ಅನುಭವಕ್ಕೆ ಕೊಟ್ಟ ಅಭಿವ್ಯಕ್ತಿ ಮಾತ್ರ. ಆದ್ದರಿಂದ ನಾವು ಇವತ್ತು ಬಸವಣ್ಣನನ್ನ ವೈಭವೀಕರಣ ಮಾಡಬೇಕಾಗಿಲ್ಲ. ಬಸವಣ್ಣನನ್ನ ಹೇಗೆ ವೈಭವೀಕರಣ ಮಾಡ್ತಾ ಇದ್ದೇವೆ? ಬಸವಣ್ಣನನ್ನ ಸಂತನಂತೆ ನೋಡ್ತಾ ಇಲ್ಲ. ಕುದುರೆ ಮೇಲೆ ಕತ್ತಿ ಹಿಡಿದುಕೊಂಡು ರಾಜನಂತೆ ಹೋಗೋ ಪ್ರತಿಮೆ ನಮ್ಮ ವಿಧಾನ ಸೌಧದ ಹತ್ತಿರ ಹಾಕಿದ್ದನ್ನ ನೋಡಿದ್ರೆ ನನಗೆ ಬಸವಣ್ಣ ಅಂತಾ ಗೌರವ ಬರೋದಿಲ್ಲ. ಏನೋ ಯುದ್ಧಕ್ಕೆ ಹೊರಟವನಂತೆ ಇದೆ. ಜೆಹಾದ್! ಬಸವಣ್ಣನಂತೆ ಕಾಣಿಸುತ್ತೇನ್ರಿ? ಯಾರೋ ಕಿರೀಟ ಗಿರೀಟ ಧಾರಣೆ ಮಾಡಿಕೊಂಡು, ಕೈಯಲ್ಲಿ ಕತ್ತಿ ಹಿಡಿದುಕೊಂಡು ಯುದ್ಧಕ್ಕೆ ಹೋಗ್ತಾ ಇರೋರಂತೆ ಇದೆ. ಛತ್ರಪತಿ ಶಿವಾಜಿ ನೋಡಿ ಆ ಪ್ರತಿಮೆ ಮಾಡಿದ್ದಾರೆ. ನಾನ್‌ಸೆನ್ಸ್. ದಟ್ ಇಜ್ ಎ ಗ್ರೇಟ್, ಡಿಸ್‌ಗ್ರೇಸ್, ಡಿಜಾನರ್ ಟು ಬಸವಣ್ಣ. ನಮಗೆ ಯಾಕೆ ಇದು ನಮ್ಮ ಸೆನ್ಸಿಬಲಿಟಿಸ್‌ಗೆ ಯಾಕೆ ಅರ್ಥ ಆಗೋದಿಲ್ಲ? ನಾನು ಮಠಗಳ ವಿರುದ್ಧ ಯಾಕೆ ಇದ್ದೇನೆ ಅಂದ್ರೆ, ಬಸವ ಕಲ್ಯಾಣಕ್ಕೆ ಹೋಗಿದ್ದೆ. ಅಲ್ಲಿ ನನಗೆ ಎಷ್ಟು ಶಾಕ್ ಆಯ್ತು ಅಂದ್ರೆ, ಬಸವ ಕಲ್ಯಾಣ ಸ್ಮಶಾನ ಆಗ್ಹೋಗಿದೆ. ಬಸವಣ್ಣನ ಕಲ್ಯಾಣ ಅಲ್ಲಾರೀ, ಸ್ಮಶಾನ ಅದು. ಶಿವಶರಣರು ಹೊಸ ಕನಸುಗಳನ್ನು ಬಿತ್ತಿದ ಜಾಗ ಈಗ ಸ್ಮಶಾನ ಆಗ್ಹೋಗಿದೆ. ಮಠಗಳನ್ನು ನೋಡ್ರಿ? ಜಗದ್ಗುರುಗಳನ್ನು ನೋಡ್ರಿ? ಚಿನ್ನದ ಕಿರೀಟ ಯಾತಕ್ರೀ ಬೇಕು ಜಗದ್ಗುರುಗಳಿಗೆ? ಬಸವಣ್ಣನ ಗಂಡುಮೆಟ್ಟಿನ ನೆಲ ಎಲ್ಲಿ? ಅಕ್ಕಮಹಾದೇವಿಗೆ ಈ ಸಮಾಜವನ್ನು ಪ್ರತಿಭಟಿಸುವಂತಹ ಶಕ್ತಿ ಹೇಗಿತ್ತು? ಬೆತ್ತಲಾಗುವ ಶಕ್ತಿ ಏನ್ ತಮಾಷೆನಾ? ಜನಗಳ ಎದುರಿಗೆ 'ಸಾವ ಕೆಡುವ ಗಂಡಸರನ್ನೆಲ್ಲಾ ಒಲೆಯೊಳಗಿಕ್ಕು ತಾಯೆ'. ಆ ತರದ ಪ್ರತಿಭಟನೆ ಮಾಡಿದೋರು

ಕರ್ನಾಟಕದಲ್ಲಿ ಇನ್ನೊಬ್ಬರು ಇಲ್ಲ. ಇವತ್ತು ವರದಕ್ಷಿಣೆ ತೆಗೆದುಕೊಂಡು ಮದುವೆ ಆಗ್ತಾ ಇರೋ ಹೆಣ್ಮಕ್ಕಳು ನೆನಪಿಟ್ಕೋಬೇಕು. ಇಂಥ ಪ್ರತಿಭಟನೆ ಸಾಧ್ಯ ಆಗೋದಾದ್ರೆ ಈ ಸಮಾಜ ಬದಲಾಗಿ ಹೋಗುತ್ತೆ.

ಈ ಸಮಾಜ ಬದಲಾಗಬೇಕಾ? ಮಠಗಳು ಬೀದಿಗೆ ಇಳಿಯಬೇಕು. ಈ ಸಾಣೇಹಳ್ಳಿಯ ಸ್ವಾಮಿಗಳು ಮಾಡ್ತಾ ಇದ್ದಾರಲ್ಲ ಕೆಲ್ಸಾ ಹಾಗೆ. ನಾನು ಯಾಕೆ ಸಾಣೇಹಳ್ಳಿಗೆ ಬಂದಿದ್ದೇನೆ ಅಂದ್ರೆ ಗ್ರಾಮಾಂತರ ಪ್ರದೇಶದಲ್ಲಿ ಈ ರೀತಿಯ ಬೌದ್ಧಿಕ ಚಿಂತನೆ ನಡೆಯುತ್ತಿರುವುದಕ್ಕಾಗಿ. ಇದನ್ನು ಆಲಂಕಾರಿಕವಾಗಿ ಮಾಡೋದಲ್ಲ. ಬೌದ್ಧಿಕ ಚಿಂತನೆಯನ್ನ, ಬೌದ್ಧಿಕ ಕ್ರಿಯಾಶೀಲತೆಯನ್ನಾಗಿ ಪರಿವರ್ತನೆ ಮಾಡಬೇಕು. ಚಿಂತನೆ ಮಾಡಿ, ಸೆಮಿನಾರ್ ಮಾಡಿ ಬೆಡ್‌ಶೀಟ್ ಹೊದ್ದುಕೊಂಡು ಮಲಗಿದ್ರೆ ಏನ್ರೀ ಆಗುತ್ತೇ? ನಮ್ಮ ವಿಶ್ವವಿದ್ಯಾನಿಲಯಗಳನ್ನು ನೋಡಿ ನೀವು. ವಿಶ್ವವಿದ್ಯಾನಿಲಯಗಳೆಲ್ಲಾ ಜಾತಿಯ ಮಠಾರಗಳಾಗಿ ಕನ್ವರ್ಟ್ ಆಗಿ ಹೋಗಿದ್ದಾವೆ. ಮಾನ ಮರ್ಯಾದೆ ಇದೆಯಾ ವಿಶ್ವವಿದ್ಯಾನಿಲಯದಲ್ಲಿರೋರಿಗೆ? ಜೋತಿಷ್ಯಶಾಸ್ತ್ರ ಪಾಠ ಮಾಡಬೇಕು ಅಂತ ಸರಕಾರ ಹೇಳಿದ್ರೆ 'ಆಗ್ಲಿ' ಅಂತಾರೆ. ಧೈರ್ಯದಿಂದ "ಇದನ್ನ ನಾವು ಮಾಡೋಲ್ಲ. 'ನಹೀ ಜ್ಞಾನೇನ ಸದೃಶಂ' ಎನ್ನುವ ನಮ್ಮ ವಿಶ್ವವಿದ್ಯಾನಿಲಯದ ತತ್ವಕ್ಕೆ ಜ್ಯೋತಿಷ್ಯ ಶಾಸ್ತ್ರ ವಿರುದ್ಧವಾದದ್ದು" ಅಂತ ಹೇಳುವ ತಾಕತ್ತು ನಮ್ಮ ವಿಶ್ವವಿದ್ಯಾನಿಲಯಗಳಿಗೆ, ನಮ್ಮ ಬುದ್ಧಿ ಜೀವಿಗಳಿಗೆ ಇಲ್ಲ. ಗಾಂಧಿವಾದಿ ಸತ್ಯವ್ರತ ಅವರು ಭಗವದ್‌ಗೀತೆ ಬಗ್ಗೆ ಬಹಳ ಹೇಳ್ತಾ ಇದ್ರು. ಭಗವದ್‌ಗೀತೆ ಈಜ್ ಎ ಡಾಕ್ಯುಮೆಂಟ್. ಐ ವಿಲ್ ಪ್ರೂವ್ ಬಿಯಾಂಡ್ ಡೌಟ್. ಇಟ್ ಈಜ್ ಎ ಡಾಕ್ಯುಮೆಂಟ್ ಆಫ್ ವೈಲೆನ್ಸ್. ಏನು ಹೇಳುತ್ತೆ ಭಗವದ್‌ಗೀತೆ? ಯಾವನಾದ್ರೂ ಇರಲಿ ಕಣಯ್ಯಾ ಅರ್ಜುನಾ. ನಿನ್ನನ್ನ ಆಡಿಸಿದವನು ಇರಬಹುದು, ನಿನ್ನ ಗುರು ಇರಬಹುದು, ಕೊಲ್ಲೋದು ನಿನ್ನ ಕರ್ತವ್ಯ. ನೀನು ಬಂದಿರೋದ್ಯಾಕೆ? ಬಿಡು ಬಾಣ. ಮಗು ಇರಲಿ, ಮುದುಕಾ ಆಗ್ಲಿ, ಯಾವನಾದ್ರೆ ಏನು? ಇಜ್ ಇಟ್ ಎ ರಿಲೀಜಿಯಸ್ ಡಾಕ್ಯುಮೆಂಟ್? ನನ್ನ ಪ್ರಕಾರ ಇಟ್ ಶುಡ್ ಬಿ ಡೆಸ್ಟ್ರಾಯ್ಡ್. ಅಂಬೇಡ್ಕರ್ ಮನು ಧರ್ಮಕ್ಕೆ ಬೆಂಕಿ ಹಚ್ಚಿದ್ರು. ಯಾಕೆ? ಈ ತರದ ಆಲೋಚನೆಗಳಿರುವಂತಹ ಯಾವುದೇ ಸಿದ್ಧಾಂತ, ಅದು ಖುರಾನ್ ಇರಬಹುದು; ಅಲ್ಲಿ ಏನಾದ್ರೂ ಈ ರೀತಿ ಸೂಯಿಸೈಡ್ ಸ್ಕ್ವಾಡ್ ಆಗಿ ಹೋಗಿ ಎಲ್ಲವನ್ನೂ ಡೆಸ್ಟ್ರಾಯ್ ಮಾಡಬೇಕು ಅಂತ ಹೇಳಿದ್ರೆ 'ಖುರಾನ್ ಶುಡ್ ಬಿ ಡೆಸ್ಟ್ರಾಯ್ಡ್'. ಹೆದರಬೇಕಾಗಿಲ್ಲ ಅದನ್ನು ಹೇಳೋದಕ್ಕೆ. ಬಹಳ ಜನ ಹೆದರ್ತಾರೆ. ನನಗೇನೂ ಹೆದರಿಕೆ ಇಲ್ಲ. ಯಾಕಂದ್ರೆ ನನಗೆ ಮುಸ್ಲಿಮರ ಪರವಾಗಿ ಮಾತನಾಡುವ ಅಧಿಕಾರ ಇದೆ.

ಬಾಬಾಬುಡನ್‌ಗಿರಿಯಲ್ಲಿ ಮೊನ್ನೆ ಸರಕಾರದವರೇ, ನಮ್ಮ ಚಂದ್ರೇಗೌಡರು, ಎಂ. ಪಿ ಮಕ್ಕಳು, ಭಜರಂಗದಳದವರು, ಶಿವಸೇನೆಯವರು ದತ್ತಪೀಠದಲ್ಲಿ ಮಾಡಿದ್ದೇನು? ಫ್ಯಾಸಿಸ್ಟ್. ಹಿಂದುಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಖುಷಿಯಿಂದ ಓಡಾಡ್ತಾ ಇರುವಂತಹ ಸುಂದರವಾದ ಬೆಟ್ಟ ಅದು. ಎಲ್ಲ ಜನರು ಹೋಗ್ತಾ ಇದ್ರು. ಸೂಫೀ ಸಂತರ ತಾಣ. ಇವತ್ತು ಅಲ್ಲಿ 'ಅಯ್ಯಪ್ಪ-ಶಬರೀಮಲೈ' ಮಾಡಿದ್ದಾರಲ್ಲಾ ಆ ತರಾ ಕನ್ವರ್ಟ್ ಮಾಡ್ತಾ ಇದ್ದಾರೆ. ಅಲ್ಲಿಗೆ ಪೊಲೀಸ್

ಆಫೀಸರ್, ಜಿಲ್ಲಾಧಿಕಾರಿ, ಮಂತ್ರಿ ಎಲ್ಲರೂ ಹೋಗಿ ಮಾಲೆ ಹಾಕಿಕೊಂಡು ಪೂಜೆ ಮಾಡಿದ್ದಾರೆ. ಇದನ್ನು ನೀವು ಜಾತ್ಯತೀತ ಸರಕಾರ ಅಂತೀರಾ? ಕಾಂಗ್ರೆಸ್ ಸರಕಾರ ಇದೆ. ನಾನು ಕಾಂಗ್ರೆಸ್ ಸರಕಾರ ಅಂತಾ ಕಾಂಗ್ರೆಸ್ಸಿಗೆ ಮಾತ್ರ ಬೈಯ್ತಾ ಇಲ್ಲ. ಇಂಡಿಯಾ ದೇಶದ ಎಲ್ಲ ರಾಜಕಾರಣವೂ ಮಹಾ ಭ್ರಷ್ಟ ಮತ್ತು ವಂಚನೆಯದು. ಬರೇ ಬಿಜೆಪಿ ಮಾತ್ರ ಅಲ್ಲ, ಓಪನ್ ಆಗಿದೆ ಅದರ ಐಡೆಂಟಿಟಿ. ಕಾಂಗ್ರೆಸ್‌ನವರದು, ಬೇರೆಯವರದು ಹಿಡನ್ ಅಜೆಂಡಾ. ನಿಜವಾಗ್ಲೂ ಬಹಳ ಬೇಸರ ಆಗುತ್ತೆ. ಯಾಕಂದ್ರೆ ಜಾತಿಪದ್ಧತಿಯ ಜೊತೆಯಲ್ಲಿ ಬದುಕುವಂತಹ ಸಮಾಜ ಬಸವಣ್ಣನನ್ನು ಗೌರವಿಸುತ್ತೇನ್ರಿ? ನಾವು ನಿಜಾ ಹೇಳೋಣ. ನೀವು, ನಾವು ಎಲ್ಲ ಕೂತ್ಕೊಂಡಿದ್ದೇವೆ. ಸ್ವಾಮಿಗಳಿದ್ದಾರೆ. ನಾವು ನಮ್ಮ ನಮ್ಮ ಅಂತಃಸಾಕ್ಷಿ ಕೇಳಿಕೊಳ್ಳೋಣ. ನಾವು ನಿಜವಾಗ್ಲೂ ಜಾತಿಪದ್ಧತಿಯ ವಿರುದ್ಧ ದಂಗೆ ಏಳೋದಕ್ಕೆ ತಯಾರಿದ್ದೀವಾ? ಯಾಕೆ ತಯಾರಿಲ್ಲ ನಾವು? ಹೊರಗಡೆ ಜಾತಿಯನ್ನು ಪ್ರತಿಭಟಿಸ್ತೀವೆ. ಒಳಗಡೆ ದಲಿತನಿಂದ ಹಿಡಿದು ಬ್ರಾಹ್ಮಣರವರೆಗೂ ಜಾತಿಯ ವಠಾರಗಳನ್ನ ಗಟ್ಟಿಮಾಡಿಕೊಳ್ಳೋದಕ್ಕೆ ಪ್ರಯತ್ನ ಮಾಡ್ತಾ ಇದ್ದೇವೆ. ದಲಿತರಲ್ಲೂ ಎಡ ಬಲ ಯಾಕೆ ಬರೋಕೆ ಶುರು ಆಯಿತು? ವೀರಶೈವರಲ್ಲಿ ಎಷ್ಟು ಮಠಗಳಿವೆ? ಬಸವಣ್ಣ ಎಲ್ಲರಿಗೂ 'ಲಿಂಗ' ಲಾಂಛನ ಮಾಡಿದ. ಯಾಕೆ ಲಾಂಛನ ಮಾಡಿದ? ವೀರಶೈವ ಧರ್ಮ ಕಟ್ಟಬೇಕು ಅಂತಾ ಅಲ್ಲ. ದೇಹವೇ ಪವಿತ್ರವಾದದ್ದು, ದೇಹವೇ ದೇಗುಲ. ದೇಹವೇ ದೇಗುಲ ಆದ್ಮೇಲೆ ಎಲ್ಲ ಜೀವ ಪವಿತ್ರವಾದದ್ದು ಅನ್ನೋದು ಬಸವಣ್ಣನವರ ಕಾನ್ಸೆಪ್ಟ್. ಲಿಂಗ ಲಾಂಛನ ಅಂದ್ರೆ ಲಿಂಗ ಕಟ್ಕೊಂಡು, ಅಲಂಕಾರ ಮಾಡಿ, ಅದಕ್ಕೆ ದಿನಾ ಪೂಜೆ ಮಾಡಿಕೊಂಡು ಓಡಾಡೋದು ಅಲ್ಲ. ಜೀವ ಪವಿತ್ರವಾದದ್ದು. ಎಲ್ಲ ಜೀವವೂ ಪವಿತ್ರವಾದದ್ದು. ಅದಕ್ಕೆ ಬಸವಣ್ಣ ಬಹಳ ಮುಖ್ಯವಾದ ಮಾತು ಹೇಳಿದ್ದು: 'ದಯವಿಲ್ಲದ ಧರ್ಮ ಅದಾವುದಯ್ಯಾ?' ದಯವೇ ಇಲ್ಲದೇ ಇದ್ರೆ?

ಭಯೋತ್ಪಾದನೆಗೆ - ಅಮೇರಿಕಾಕ್ಕೆ ಯಾಕೆ ಹೋಗಬೇಕ್ರಿ? ಇಲ್ಲೇ ತಗೊಳ್ಳಿ: ಚಿದಾನಂದಮೂರ್ತಿ, ಶಿವರುದ್ರಪ್ಪನವರ ಅಭಿಪ್ರಾಯ ನಾವು ಒಪ್ಪದೇ ಇರಬಹುದು. ಆದರೆ ಅವರಿಬ್ಬರಿಗೆ ನಾವು ಬಹಿಷ್ಕಾರ ಹಾಕ್ತೀವಿ ಅಂತ ಭೀಮಣ್ಣ ಖಂಡ್ರೆ, ಅವರು, ಇವರು... ಊರು ತುಂಬಾ ದೊಡ್ಡ ಮೆರವಣಿಗೆ ತೆಗೆದ್ರು. ಬಸವಣ್ಣನ ಧರ್ಮದಲ್ಲಿ ಬಹಿಷ್ಕಾರ ಇಲ್ಲ; ಸ್ವೀಕಾರ ಇದೆ. ಎಲ್ಲರಿಗೂ ಲಿಂಗ ಲಾಂಛನ ಮಾಡೋದು ಅಂದ್ರೆ ಸ್ವೀಕಾರ, ಸಮಾನತೆ. ಆದರೆ ಯಾಕೆ ಪ್ರತಿಭಟನೆ ಮಾಡಿದ್ರು? 'ಧರ್ಮಕಾರಣ' ಪುಸ್ತಕ ಪಿ.ವಿ. ನಾರಾಯಣ ಬರೆದ್ರು, ಕಲ್ಬುರ್ಗಿ 'ಮಾರ್ಗ' ಬರೆದ್ರು. ಇವರು ಅದನ್ನು ಕಂಡೆಮ್ ಮಾಡಿದ್ರು. ಆ ಪುಸ್ತಕಕ್ಕೆ ಪ್ರತಿವಾದವನ್ನು ಮಂಡಿಸಿ, ಪರವಾಯಿಲ್ಲ. ಆದರೆ ನಿನಗೆ ಬೆಂಕಿ ಹಾಕಿ ಸುಡ್ತೀನಿ, ನೀನು ಹುಟ್ಟಲೇ ಇಲ್ಲಾ ಅಂತಾ ಮಾಡ್ತೀನೆ, ವೀರಶೈವ ಧರ್ಮದಿಂದಲೇ ನಿನಗೆ ಬಹಿಷ್ಕಾರ ಹಾಕ್ತೀನೆ ಅಂದ್ರೆ, ಇದು ಭಯೋತ್ಪಾದನೆ. ಯಾವಾಗ ಧರ್ಮ ಸಂಘಟಿತವಾಗುತ್ತೆ ಆವಾಗ ಅದು ಅಪಾಯಕಾರಿಯಾಗಿಬಿಡುತ್ತೆ. ಧರ್ಮ ಯಾವಾಗಲೂ ಸ್ಪಿರಿಚುಯಲ್ ಲೆವೆಲ್‌ನಲ್ಲಿ ಇರಬೇಕು. ಧರ್ಮ ಬೇಡ ಅಂತಾ ನಾ ಹೇಳೋಲ್ಲ. ನನಗೆ ಧರ್ಮದಲ್ಲಿ ನಂಬಿಕೆಯಿಲ್ಲ. ನನಗೆ ಬಸವಣ್ಣನ ಚಿಂತನೆಯಲ್ಲಿ ನಂಬಿಕೆಯಿದೆ, ಗಾಂಧಿಯ

ಚಿಂತನೆಯಲ್ಲಿ ನಂಬಿಕೆಯಿದೆ, ಬುದ್ಧನ ಚಿಂತನೆಯಲ್ಲಿ ನಂಬಿಕೆಯಿದೆ. ಯಾಕಂದ್ರೆ ಥಾಟ್ ವಿಲ್ ಡೆಫನೆಟ್ಲಿ ಇನ್‌ಸ್ಫೈರ್ ಯೂ ಫಾರ್ ಎ ಗ್ರೇಟರ್ ಆಕ್ಷನ್. ಭಜನೆ ಮಾಡೋಕೆ ಅಲ್ಲ ಧರ್ಮ ಇರೋದು. ನೀವು ಭಜನೆ ಮಾಡೋಕೆ ಧರ್ಮ ಇಟ್ಟುಕೊಳ್ಳೋದಾದ್ರೆ ಧರ್ಮ ಫೈತ್ ಆಗುತ್ತೆ, ಫೈತ್ ಆದ ತಕ್ಷಣವೇ ಡೇಂಜರ್ ಆಗಿಬಿಡುತ್ತೆ. ಅಮೆರಿಕಾದಲ್ಲಿ ಬಾಂಬುಗಳನ್ನು ಇಟ್ಟುಕೊಂಡಿದ್ದಾರಲ್ಲಾ! ಆ ಬಾಂಬ್ ಒಂದು ಫೈತ್ ಆಗಿಬಿಡುತ್ತೆ. ನಮ್ಮವರನ್ನು ನೋಡಿ; ಪೋಕ್ರಾನ್‌ನಲ್ಲಿ ಬುದ್ಧಪೂರ್ಣಿಮೆಯ ದಿನ ಆಟಂಬಾಂಬ್ ಹಾಕಿದ ದಿನ ಆರ್ ಎಸ್ ಎಸ್‌ನವರು, ಭಜರಂಗದಳದವರು ಆ ರೇಡಿಯೇಷನ್‌ನಲ್ಲಿರೋ ಬೂದಿಯನ್ನ ತೆಗೆದುಕೊಂಡು ತೀರ್ಥಯಾತ್ರೆ ಹೊರಡಬೇಕು ಅಂತಾ ಮಾಡಿದ್ರು. ಆಮೇಲೆ ಸೈಂಟಿಸ್ಟ್‌ಗಳೆಲ್ಲಾ ಬೈದು, ಅರೆ ನೀವು ಸತ್ತೇ ಹೋಗಿಬಿಡ್ತೀರ, ಅಲ್ಲಿ ಹೋಗಬೇಡಿ ಅಂದ್ಮೇಲೆ ಅವನ್ ಬಿಟ್ರು. ಇಲ್ದೇ ಇದ್ರೆ ಅದನ್ನು ತಗೊಂಡು ಬಂದು ಎಲ್ಲರಿಗೂ ಕುಂಕುಮದ ಥರಾ ಇಡಬೇಕು ಅಂತಾ ಮಾಡಿದ್ರು. ಇಂಥಾ ಮುಠ್ಠಾಳರ ದೇಶದಲ್ಲಿ ಆಟಂಬಾಂಬ್‌ಗಳನ್ನ ಇಟ್ಟುಕೊಂಡ್ಬಿಟ್ರೆ ಏನ್ರೀ ಆಗುತ್ತೇ?

ಸ್ನೇಹಿತರೇ, ನಾನು ಇದನ್ನ ಹೆಚ್ಚು ಎಲಾಬ್ರೇಟ್ ಮಾಡೋದಿಲ್ಲ. ಯಾಕಂದ್ರೆ ನೀವೆಲ್ಲರೂ ವಿಚಾರವಂತರು. ಆದ್ರೆ ವಿಚಾರವನ್ನು ಆಚಾರವಾಗಿ ಯಾವಾಗ ತರೋಕಾಗೋದಿಲ್ಲ ಆಗ ಆ ವಿಚಾರ ಅಲಂಕಾರಿಕವಾಗಿಬಿಡುತ್ತೆ. ಬಸವಣ್ಣ ಅಲಂಕಾರವಾಗ್ತಾನೆ. ಬುದ್ಧ ಅಲಂಕಾರವಾಗ್ತಾನೆ. ಗಾಂಧಿ ನಿಷ್ಕ್ರಿಯೆಯಾಗಿಬಿಡ್ತಾನೆ. ಸತ್ಯವ್ರತ ಕಟ್ಟಾ ಗಾಂಧಿವಾದಿಗಳು. ಆದ್ರೆ ಯಂಗರ್ ಜನರೇಷನ್‌ಗೆ ಗಾಂಧಿಯನ್ನ ಯಾಕೆ ಕಮ್ಯುನಿಕೇಟ್ ಮಾಡೋಕಾಗಲಿಲ್ಲ? ಈ ಗಾಂಧಿವಾದಿಗಳು ಏನ್ ಮಾಡಿದ್ರು? ಗಾಂಧಿಯನ್ನು ಸಾಂಪ್ರದಾಯಿಕವಾಗಿ ಮಡಿ ಮಾಡಿ ಮಾಡಿ 'ಬೀಡಿ ಸೇದ್ತಾನೆ' ಅಂದ್ರೆ ಅವನು ಗಾಂಧಿಗೆ ವಿರೋಧ. ಪಾಪ, ಯಾರೋ ಬಸ್ಟ್ಯಾಂಡ್‌ನಲ್ಲಿ ಕೂತ್ಕೊಂಡು ಬೀಡಿ ಸೇದ್ತಾನಲ್ಲ ಅವನೂ ಗಾಂಧಿ ವಿರೋಧಿ ಅಂತಾ ತಿಳ್ಕೊಂಡ್ಬಿಡೋದು. ಹೀಗಾಗಿ ಗಾಂಧಿಯನ್ನ ಕಮ್ಯುನಿಕೇಟ್ ಮಾಡಲಿಲ್ಲ. ವಿನೋಬ ಭಾವೆ ಏನು ಮಾಡಿದ್ರು ಹೇಳಿ; ವಿನೋಬ ಭಾವೆ ಗುಣಗಾನ ಮಾಡ್ತೀವಲ್ಲ? ವಿನೋಬ ಭಾವೆ ಮಾಡಿದ್ದು ಗಾಂಧಿಯ ತಿಥಿ. ಯಾಕೆ ಅಂದ್ರೆ ಗಾಂಧಿಯ ಹೋರಾಟವನ್ನ, ಗಾಂಧಿಯ ಸತ್ಯಾಗ್ರಹವನ್ನ ಸರಕಾರೀಕರಣ ಮಾಡಿಬಿಟ್ರು ನೆಹರು ಕಾಲದಲ್ಲಿ. ಎಲ್ಲಾ ಪಾರ್ಟಿಯವರನ್ನು ಕರೆದುಬಿಟ್ಟು 'ನೀವೇನೂ ಭೂದಾನ ಮಾಡಬೇಕಾಗಿಲ್ಲ, ಚಳವಳಿ ಮಾಡಬೇಕಾಗಿಲ್ಲ. ನಿಮ್ಮ ಕಾರ್ಯಕ್ರಮ, ನಮ್ಮ ಸರಕಾರಿ ಕಾರ್ಯಕ್ರಮ ಒಂದೇ ಅಂದ್ಬಿಟ್ರು' ನೆಹರು. ಆಗ 'ಉಳುವವನೇ ಹೊಲದೊಡೆಯ' ಅಂತ ಚಳವಳಿ ನಡೀತಾ ಇತ್ತು. ಇವರೇನು ಆ ಮೇಲೆ ಯಜ್ಞ, ದಾನ-ಧರ್ಮ ಮಾಡಿಕೊಂಡೇ ಈ ದೇಶ ಈ ರೀತಿಯಾಗಿ ಗುಜರಿಯಾಗಿ ಹೋಗಿಬಿಟ್ಟಿದೆ. ಯಾರೂ ದಾನ-ಧರ್ಮ ನಿಜವಾದದ್ದು ಕೊಡೋದೇ ಇಲ್ಲ. ಮೊನ್ನೆ ಹೇಳ್ತಾ ಇದ್ದರು; ತಾಲಿಬಾನ್‌ನಲ್ಲಿ ಅಮೆರಿಕಾದ ಯುದ್ಧ ನಿಲ್ಲಿಸಲು ಅಶ್ವಮೇಧ ಯಾಗ ಮಾಡ್ತಾರಂತೆ. ಅದೂ ಸರಕಾರಿ ಖರ್ಚಿನಲ್ಲಿ! ನಾನು ಒಬ್ಬ ಮಂತ್ರೀನ ಕೇಳಿದೆ, 'ಅಲ್ರೀ ಸರಕಾರಿ ಖರ್ಚಿನಲ್ಲಿ ಇದೆಲ್ಲ ಮಾಡೋದು ಸರೀನ?' ಅಂತ. 'ಏನ್ಮಾಡ್ತೀರ ಸಾರ್, ಮಳೆ ಬರದೇ ಇದ್ರೆ ಪರ್ಜನ್ಯ ಜಪ ಮಾಡಬಹುದು ಅಂತ ಎಂಡೋಮೆಂಟಲ್ಲಿದೆ' ಅಂತಾರೆ. ಅದು ಪ್ರಕಾಶ್‌ಗೆ

ಗೊತ್ತಿರಬೇಕು. ಈ ಮಠ-ಮಾನ್ಯಗಳು ಏನ್ಮಾಡ್ತವೆ? ಮಂತ್ರಿ ಭ್ರಷ್ಟ, ಫೋರ್‌ಟ್ವೆಂಟಿ ಅಂತ ಎಲ್ಲರಿಗೂ ಗೊತ್ತಿರುತ್ತೆ. ಅವನನ್ನು ಕರೆಸಿ ಉದ್ಘಾಟನೆ ಅದು ಇದೂ ಮಾಡಿಸ್ತಾರಲ್ಲ! ಅಲ್ರೀ ಮಠ-ಮಾನ್ಯಗಳಿಗಾದ್ರೂ ಒಂದು ಗೌರವ ಬ್ಯಾಡ್ವಾ? ಅವನ ಹಂಗೇನು? ಹಾಗಾದ್ರೆ ರಾಜಕಾರಣಿಗಳನ್ನ ಕಂಟ್ರೋಲ್ ಮಾಡೋದು ಯಾರು? ಜನ ಸಾಮಾನ್ಯರು, ನಮ್ಮಂಥವರು ಕಂಟ್ರೋಲ್ ಮಾಡೋಕೆ ಹೋದ್ರೆ ಪೊಲೀಸ್‌ನವರು ವ್ಯಾನ್ ತೆಗೆದುಕೊಂಡು ಬಂದು ಅರೆಸ್ಟ್ ಮಾಡ್ತಾರೆ. ಈ ಸಮಾಜಕ್ಕೆ ನೈತಿಕತೆಯನ್ನ, ಶಾಂತಿಯನ್ನ, ಪ್ರಶ್ನಿಸುವ ಹಕ್ಕನ್ನ, ಪ್ರತಿಭಟಿಸುವ ಸತ್ಯಾಗ್ರಹದ ಕಲ್ಪನೆಯನ್ನ ಕಲಿಸಿಕೊಡೋರು ಯಾರು? ಆ ದೃಷ್ಟಿಯಿಂದಲೇ ನಾನು ಇಲ್ಲಿಗೆ ಬಂದೆ.

ಈ ಮಠದ ಸ್ವಾಮಿಗಳು ಬಹಳ ಒಳ್ಳೆ ಕೆಲಸ ಮಾಡ್ತಾ ಇದ್ದಾರೆ. ಹೀಗೆ ಗ್ರಾಮಾಂತರ ಪ್ರದೇಶದಲ್ಲಿ ನಾಟಕ, ಚಳವಳಿ, ಸಾಂಸ್ಕೃತಿಕ ವಾತಾವರಣವನ್ನ ಮಾಡೋದ್ರ ಮೂಲಕ ಸತ್ತ ಮನುಷ್ಯರಿಗೆ ಮತ್ತೆ ಜೀವ ತರಬೇಕು. ಬಸವಣ್ಣನ ಆರಾಧನೆ ಮಾಡೋದಲ್ಲ, ಬಸವಣ್ಣ ನಮ್ಮ ಮನಸ್ಸಿನಲ್ಲಿ ನಡೆದಾಡಬೇಕು. ಬುದ್ಧ, ಬಸವಣ್ಣ, ಗಾಂಧಿ ಎಲ್ಲ ನಮ್ಮ ಜೊತೆಗೆ ನಡೆದಾಡಬೇಕು. ಆಗ ಈ ಸಮಾಜ ಖಂಡಿತ ಬದಲಾಗುತ್ತೆ. ಇಲ್ವೇ ಹೋದ್ರೆ ಇದು ಸ್ಥಾವರವಾಗುತ್ತೆ. ಇಲ್ಲಿ ಭಯೋತ್ಪಾದನೆ, ಜಾತಿಯ ಭಯೋತ್ಪಾದನೆ ಇನ್ನೂ ಉಗ್ರವಾಗುತ್ತೆ. ಪಾಕಿಸ್ತಾನ ಪಕ್ಕದಲ್ಲೇ ಇದೆ. ಕ್ರಿಕೆಟ್ ಆಟದಲ್ಲಿ ನಮ್ಮ ದೇಶಪ್ರೇಮ ತೋರಿಸ್ತಾ ಇದ್ವೇವೆ. ನಮ್ಮ ಪೇಟ್ರಿಯಾಟಿಜಂ ಯಾವುದು? ನಿಜವಾಗ್ಲೂ ನಾವು ದೇಶಪ್ರೇಮಿಗಳಾದ್ರೆ, ನಾವು ಭ್ರಷ್ಟಾಚಾರ ಮಾಡೋಲ್ಲ, ಬಸ್ಸುಗಳನ್ನ ಸುಡೋದಿಲ್ಲ. ಅವುಗಳನ್ನೆಲ್ಲ ಪ್ರೀತಿಯಿಂದ ನೋಡಿಕೊಳ್ತಿದ್ವಿ. ಯಾಕೆ ನೋಡಿಕೊಳ್ಳೋಕೆ ಆಗಿಲ್ಲ? ಯಾಕಂದ್ರೆ ನಾವೆಲ್ಲರೂ ಬೇಸಿಕ್ ಆಗಿ ಭ್ರಷ್ಟರು. ನಮ್ಮ ಮನೆಯ ಒಳಗಡೆ ನಾವು ಬಹಳ ಹಾನೆಷ್ಟಾಗಿರ್ತೇವೆ. ನಮ್ಮ ಮನೆಯಲ್ಲಿ ಒಂದು ಸಣ್ಣ ಬಿರುಕು ಬಂದ್ರೂನೂ ಶಾಕ್ ಹೊಡೆದಾಂಗ್ ಆಗುತ್ತೆ; ಎಂಥಾ ಬಡ್ಡಿಮಗ ಮೋಸ ಮಾಡ್ಬಿಟ್ಟಿದ್ದಾನೆ ಕಂಟ್ರಾಕ್ಟರ್ ಅಂತಾ. ಡ್ಯಾಮ್ ಒಡೆದು ಹೋದ್ರೆ, ದುಡ್ಡು ತಿಂದಿದಾನೆ ಬಿಡೋ ಹೋಗ್ಲಿ ಅಂತಾರೆ. ಇದನ್ನೆಲ್ಲ ರಿಲೆಟೀವ್ ಆಗಿ ಹೇಳ್ತಾ ಇದ್ದೇನೆ. ಬುದ್ಧ, ಬಸವ, ಗಾಂಧಿ ವಿಸ್ಮೃತವಾಗಿ ಮತ್ತು ವರ್ತಮಾನದ ತಾಲಿಬಾನ್‌ಗಳು, ವರ್ತಮಾನದ ಅಮೆರಿಕಾ ನಮ್ಮೆಲ್ಲರ ಮನಸ್ಸುಗಳನ್ನ ಅಡ ಇಟ್ಕೊಂಡಿವೆ. ಧರ್ಮ, ಜಾತಿ ಕೂಡ ನಿಮ್ಮನ್ನ ಅಡ ಇಟ್ಕೊಂಡಿದೆ. ಸುಮ್ನೆ ವಿಚಾರ ಸಂಕಿರಣದಲ್ಲಿ ಮಾತಾಡ್ತೇವೆ. ಆದರೆ ನಮ್ಮ ಮಕ್ಕಳ ಮದುವೆ ನಮ್ಮ ಜಾತಿಯಲ್ಲೇ ಆಗ್ಬೇಕು ಅಂತೇವೆ.

ಜಾತಿಯ ಬಂಧನದಿಂದ ಹೊರಬಂದು ಪ್ರೀತಿಸಿ ಮದುವೆ ಆಗುವವರಿಗಾಗಿ 'ಮಾನವ ಮಂಟಪ' ಅಂತ ಮಾಡಿದ್ದೇವೆ. ನನಗೂ ಒಬ್ಬಳು ಮಗಳಿದ್ದಾಳೆ. ನಾನು ಅವಳಿಗೆ ಹೇಳಿದ್ದೇನೆ: ನಿನಗೆ ಇಷ್ಟವಾದವನನ್ನ ನೀನು ಪ್ರೀತಿ ಮಾಡು. ಗೋ ಬಿಯಾಂಡ್ ಯುವರ್ ಕಮ್ಯುನಿಟಿ. ವರದಕ್ಷಿಣೆ ಕೊಟ್ಟು ಮಾತ್ರ ಮದುವೆ ಆಗಬೇಡ. ಮದುವೆ ಇಲ್ಲದೇ ಇದ್ರೂ ಪರವಾಗಿಲ್ಲ. ಅಕ್ಕಮಹಾದೇವಿ ಮದುವೆಯನ್ನ ತಿರಸ್ಕರಿಸಿದಳಲ್ಲಾ! ದಟ್ ಈಜ್ ಗ್ರೇಟ್! ನೀವು ಮದುವೆಯನ್ನ ತಿರಸ್ಕರಿಸಿ ಪರವಾಯಿಲ್ಲ. ನಿಮ್ಮ ಇಷ್ಟ ಬಂದ ಹುಡುಗನ ಜೊತೆ ಓಡಾಡಿ

ಪರವಾಯಿಲ್ಲ. ಅನೈತಿಕ ಅಂತಾ ನೀವು ಅದನ್ನ ತಿಳಿಬೇಡಿ. ಹಕ್ಕಿ-ಪಕ್ಷಿಗಳಿಗೆ ಯಾವ ನೈತಿಕತೆ, ಯಾವ ಧರ್ಮನೂ ಇಲ್ಲಾರೀ. ನಾವ್ಯಾಕೆ ಕಟ್ಟಿಕೊಂಡು ಸಾಯ್ತಾ ಇದ್ದೇವೆ? ವರದಕ್ಷಿಣೆ, ಜಾತಿ ಇವುಗಳನ್ನು ಇಟ್ಕೊಂಡು ನಮ್ಮ ಹೆಣ್ಮಕ್ಕಳು ಮದುವೆನೇ ಆಗ್ತಾ ಇಲ್ಲ. ಮೂರು ದಿನದ ಹಿಂದೆ ಕ್ರಿಶ್ಚಿಯನ್ ಹುಡುಗ, ಮುಸ್ಲಿಮ್ ಹುಡುಗಿ ಓಡಿಕೊಂಡು ಬಂದ್ರು. ಪಾಪ! ಸೂಯಿಸೈಡ್ ಮಾಡಿಕೊಳ್ತೀವಿ ಅಂತಾ. 'ಯಾಕೆ ಸೂಯಿಸೈಡ್ ಮಾಡಿಕೊಳ್ತೀರಿ' ಅಂದೆ. 'ಸಾರ್ ಈಗ ಯುದ್ಧ ಬೇರೆ ಶುರುವಾಗಿಬಿಟ್ಟಿದೆ. ನಮಗೆ ಯಾರೂ ಬಾಡಿಗೆಗೂ ಮನೆ ಕೊಡೋದಿಲ್ಲ, ಎಲ್ಲಿಗೆ ಹೋಗೋದು ಸಾರ್' ಅಂದ್ರು. ನಾನ್ಹೇಳ್ದೆ; 'ನೋಡಿ, ನೀವು ಪ್ರೀತಿ ಮಾಡುವಾಗ ಇವನು ಕ್ರಿಶ್ಚಿಯನ್, ಇವಳು ಹಿಂದೂ, ಮುಸ್ಲಿಂ ಅಂತಾ ಪ್ರೀತಿ ಮಾಡಿದ್ರಾ? ಹುಡುಗ-ಹುಡುಗಿ ಅಂತಾ ಪ್ರೀತಿ ಮಾಡಿದ್ದೀರ. ಹುಡುಗ-ಹುಡುಗಿ, ಗಂಡ -ಹೆಂಡತಿ ಅಂತಾನೇ ಬದುಕಿ. ಮಾನವ ಮಂಟಪದಲ್ಲಿ ನಿಮಗೆ ಮದುವೆ ಮಾಡ್ತೇವೆ. ಸತ್ರೂ ಪರವಾಗಿಲ್ಲ. ಯಾರಾದ್ರೂ ಹೊಡೆದು ಸಾಯಿಸ್ಲಿ. ಏನ್ ಮಾಡೋಕೆ ಆಗುತ್ತೆ? ನಿರ್ಭೀತರಾಗಿ ಬದುಕಿ.'

ಗಾಂಧಿ ಕೊನೆ ಗೊತ್ತು; ಗೋಡ್ಸೆ ಹೊಡದ್ಹಾಕ್ಬಿಟ್ಟ. ಏಸುಕ್ರಿಸ್ತನ ಕೊನೆಗೊತ್ತು; ಸಿಲುಬೆಗೆ ಏರಿಸ್ಬಿಟ್ರು. ಬಸವಣ್ಣನ ಕೊನೆ ಹೇಗಾಯ್ತು? ಬಸವಣ್ಣನ್ನ ವೈಭವೀಕರಣ ಮಾಡ್ಬಿಟ್ಟು ಕೂಡಲಸಂಗಮದಲ್ಲಿ ಐಕ್ಯನಾದ ಅಂತೇವೆ. ಕೂಡಲ ಸಂಗಮದಲ್ಲಿ ಹೇಗೆ ಐಕ್ಯ? ಯಾಕೆ ಐಕ್ಯ? ತಾನು ಯಾರನ್ನ ನಂಬಿದ್ನೋ, ಯಾರನ್ನ ರೂಪಿಸಿದ್ನೋ ಅಂಥ ಜನರೇ ತನ್ನ ವಿರುದ್ಧ ದಂಗೆ ಏಳುವ ಪರಿಸ್ಥಿತಿ ಯಾಕೆ ಆಯ್ತು? ಒಂದೇ ಒಂದು ಅಂತರ್ಜಾತಿಯ ಮದುವೆಯಿಂದ. ಬ್ರಾಹ್ಮಣರ ಹುಡುಗಿ, ಅಂತ್ಯಜರ ಹುಡುಗ. ಬಸವಣ್ಣ ಯಾವಾಗ ತನ್ನ ವಿಚಾರಗಳನ್ನು, ಕಲ್ಪನೆಗಳನ್ನು ಕ್ರಿಯೆಯಾಗಿ ಪರಿವರ್ತನೆ ಮಾಡೋಕೆ ಶುರುಮಾಡಿಬಿಟ್ನೋ ಆಗ ಸಮಾಜಕ್ಕೆ ಗಾಬರಿಯಾಗ್ಬಿಟ್ತು. ಗಾಂಧಿಗೂ ಅದೇನೇ. ಗಾಂಧಿ ಯಾವಾಗ ಸರ್ವಧರ್ಮ, ಸಮಭಾವ, ಹಿಂದೂ, ಮುಸ್ಲಿಂ, ಇಸಾಯಿ ಎಲ್ಲಾ ಒಂದೇ ಕಣ್ರೀ; ಯಾಕ್ ಸಾಯ್ತಿರಾ ಅಂತಾ ಹೇಳಿದ್ನೋ ಗಾಂಧಿಗೆ ಮುಳುವಾಗ್ಹೋಯ್ತು. ಗುಂಡು ಹೊಡದು ಕೊಂದ್ರು. ಗುಂಡು ಹೊಡೆದು ಕೊಂದವರು ಯಾರು? ಕಟ್ಟಾ ಹಿಂದೂಗಳು. ಯಾವನವನು? ಭಯೋತ್ಪಾದಕ. ಆ ಭಯೋತ್ಪಾದಕರ ಶನಿ ಸಂತಾನ ಇವತ್ತು ಭಾರತ ಆಳ್ತಾ ಇದೆ. ನಮ್ಮಲ್ಲಿ ಎಷ್ಟೋ ಜನರು ನಮ್ಮ ಮನಸ್ಸಿನೊಳಗಡೇನೇ ಆ ಶನಿ ಸಂತಾನವನ್ನ ಸಾಕ್ತಾನೇ ಇದ್ದೇವೆ: ಜಾತಿ ರೂಪದಲ್ಲಿ ಇರಬಹುದು, ಧರ್ಮದ ರೂಪದಲ್ಲಿ ಇರಬಹುದು.

ಸ್ನೇಹಿತರೇ, ಇದಕ್ಕಿರೋದು ಒಂದೇ ಒಂದು ಪರಿಹಾರ. 'ಜಾತಿ ಬಿಡಿ, ಧರ್ಮ ಬಿಡಿ, ಮಾನವತೆಗೆ ಜೀವ ಕೊಡಿ'. ದಲಿತ ಸಂಘಟನೆ ಪ್ರಾರಂಭ ಆದಾಗ ಇದನ್ನು ದಲಿತ ಹುಡುಗರು ಗೋಡೆ ಮೇಲೆ ಬರೀತಾ ಇದ್ರು. ಈಗ ಅವರ ಸ್ಥಿತಿ ಹೇಗೆ ಆಗ್ಬಿಟ್ಟಿದೆ? ಆ ಸ್ಲೋಗನ್ ಅವರಿಗೆ ಮರ್ತೇ ಹೋಗ್ಬಿಟ್ಟಿದೆ. ಯಾಕಂದ್ರೆ ಅವರೇ ಜಾತಿಯಾಗಿ ಕನ್ವರ್ಟ್ ಆಗ್ಬಿಟ್ಟಿದ್ದಾರೆ. ನೋಡಿ ಹೇಗಿದೆ! ನನಗೆ ಅವರ ಬಗ್ಗೆ ಬಹಳ ಹೆಮ್ಮೆ ಇತ್ತು; 'ಜಾತಿ ಬಿಡಿ, ಧರ್ಮ ಬಿಡಿ, ಮಾನವತೆಗೆ ಜೀವ ಕೊಡಿ' ಎಲ್ಲ ಗೋಡೆಗಳ ಮೇಲೆ ಬರೀತಾ ಇದ್ರು. ಬ್ಯೂಟಿಫುಲ್ ವಾಲ್ ರೈಟಿಂಗ್.

ಇಟ್ ವಾಜ್ ರಿಯಲಿ ಎ ಮೋಸ್ಟ್ ಥ್ರಿಲಿಂಗ್ ಅಂಡ್ ಇಟ್ ಈಜ್ ದಿ ಡ್ರೀಮ್ ದಟ್ ವಾಜ್ ರಿಫ್ಲೆಕ್ಟೆಡ್ ಆನ್ ವಾಲ್ಸ್. ಬಾಬರಿ ಮಸೀದಿ ಉರುಳಿಸ್ತಾ ಇದ್ದಾಗ, ಶಾರದಾ ಅಂತಾ ಶೃಂಗೇರಿಯ ಹುಡುಗಿ ಧೈರ್ಯವಾಗಿ ಶಿವಮೊಗ್ಗದಲ್ಲಿ ಹೇಳಿದ್ಲು; 'ಇಟ್ಟಿಗೆ ಪವಿತ್ರವಲ್ಲ, ಜೀವ ಪವಿತ್ರ. ಯಾಕೆ ಇಟ್ಟಿಗೆ ತಲೆಮೇಲೆ ಇಟ್ಕೊಂಡು ಓಡಾಡ್ತಾ ಇದ್ದೀರಾ?' ಆ ಇಟ್ಟಿಗೆ ತಲೆಮೇಲೆ ಹೊತ್ಕೊಂಡು ಹೋಗೋದಕ್ಕೆ ಬದಲಾಗಿ ನಿಮ್ಮ ಮಕ್ಕಳನ್ನ ಹೆಗಲ ಮೇಲೆ ಕೂರಿಸಿಕೊಂಡು ಓಡಾಡಿ. ನಿಮ್ಮ ಮಕ್ಕಳು ನಿಮ್ಮ ಕನಸು. ಇಟ್ಟಿಗೆ ಪವಿತ್ರವಲ್ಲ, ಧರ್ಮ ಪವಿತ್ರವಾದುದಲ್ಲ, ಜೀವ ಪವಿತ್ರ.' ಧರ್ಮ ಬೇಕು ಅಂದ್ರೆ ಸ್ಪಿರಿಚುಯಲ್ ಆಗಿರಬೇಕು. ದೇವರಲ್ಲಿ ನಂಬಿಕೆ ಇದ್ರೆ ಅದನ್ನು ನಾನು ವೈಯಕ್ತಿಕವಾಗಿ ಮಾಡಿಕೊಳ್ಳಬೇಕು. ಪ್ರೇಮದ ಥರ. ಪ್ರೇಮ ಕೂಡ ವೈಯಕ್ತಿಕವಾದದ್ದು, ಖಾಸಗಿಯಾದದ್ದು. ಪಬ್ಲಿಕ್ನಲ್ಲೆಲ್ಲಾ ಸೇರಿಕೊಂಡು ಒಟ್ಟಿಗೆ ಪ್ರೇಮ ಮಾಡೋಕಾಗಲ್ಲ. ಅದೇ ರೀತಿ ಧರ್ಮ, ಪೂಜೆ, ಪುನಸ್ಕಾರ, ಧಾರ್ಮಿಕ ನಂಬಿಕೆಗಳನ್ನು ವೈಯಕ್ತಿಕವಾಗಿ ಇಟ್ಟುಕೊಳ್ಳಬೇಕೇ ಹೊರತು ಅದಕ್ಕೆ ಬಹಳ ಬಿಗಿಯಾದ ಸಂಘಟನಾತ್ಮಕ ರೂಪ ಕೊಟ್ಟ ತಕ್ಷಣವೇ ತಾಲಿಬಾನ್‌ಗಳು ಸೃಷ್ಟಿಯಾಗ್ತಾರೆ. ಖೋಮೇನಿಗಳು, ಬುಷ್‌ಗಳು ಸೃಷ್ಟಿಯಾಗ್ತಾರೆ. ಇವತ್ತು ನಡೀತಾ ಇರೋದು. ಧರ್ಮದ ಲೇಪನ ಇದೆ ಅಷ್ಟೆ. ಬೈಬಲ್‌ನಲ್ಲಿ ಒಂದು ಮಾತಿದೆ. 'ಮ್ಯಾನ್ ಶಲ್ ನಾಟ್ ಲೀವ್ ಬೈ ಬ್ರೆಡ್ ಅಲೋನ್'. ನಮ್ಮಲ್ಲೂ ಅದನ್ನೇ ಹೇಳಲಾಗಿದೆ. ಧರ್ಮ, ಅರ್ಥ, ಕಾಮ, ಮೋಕ್ಷ. ಚತುರ್ವಿಧ ಪುರುಷಾರ್ಥಗಳು. ನಮಗೆ ಇವೆಲ್ಲವೂ ಬೇಕು. ಮೋಕ್ಷ ಅಂದ್ರೆ ಬಿಡುಗಡೆ, ಹೊರಟ್ಹೋಗೋದು, ಜಾಗ ಖಾಲಿ ಮಾಡ್ತಾ ಇರೋದು. ಈ ಪುರುಷಾರ್ಥಗಳನ್ನು ವೈಯಕ್ತಿಕವಾಗಿ ಇಟ್ಕೊಳ್ಳಿ.

ಸಾಮಾಜಿಕವಾಗಿ ಮಾಡಬೇಕಾಗಿರೋದು; 'ಜಾತಿ ಬಿಡಿ, ಧರ್ಮ ಬಿಡಿ, ಮಾನವ[illegible] ಜೀವ ಕೊಡಿ'. ಆ ಕೆಲ್ಸ ಸಾಣೇಹಳ್ಳಿಯಲ್ಲಿ ಪ್ರಾರಂಭವಾಗೋದಾದ್ರೆ ನಾನು ಇಲ್ಲಿಗೆ ಬಂದದ್ದಕ್ಕೆ ಸಾರ್ಥಕ ಆಗುತ್ತೆ. 'ಶಿವಸಂಚಾರ' ನಾಟಕಗಳು ಅಂಥ ಸಂದೇಶವನ್ನ ಸಾರ್ತಾ ಇವೆ ಅಂತಾ ಹೇಳಿದ್ದಾರೆ. 'ಶಿವ'ಅಂದ್ರೆ ದೇವರು ಅಂತಾ ನಾನು ಕರಿಯೋದೇ ಇಲ್ಲ. 'ಶಿವ' ಅಂದ್ರೆ ಮಂಗಳಕರವಾದದ್ದು. ಎಲ್ಲರಲ್ಲೂ ಶಿವಸಂಚಾರವಾಗಬೇಕು. ಲೆಟ್ ದೆರ್ ಬಿ ಎ ಗ್ರೇಟ್ ಡ್ರೀಮ್, ಅಟ್‌ಲಿಸ್ಟ್ ಎ ಗ್ರೇಟ್ ಅಸ್ಪಿರೇಷನ್ ಆಫ್ ಎ ನ್ಯೂ ಸೊಸೈಟಿ, ನ್ಯೂ ಗ್ಲೋಬಲ್ ವರ್ಲ್ಡ್. ನಾನು ಅದಕ್ಕೋಸ್ಕರ ಇಲ್ಲಿಗೆ ಬಂದಿದ್ದೇನೆ. ನಾನು ಯಾವ ಮಠಗಳಿಗೂ ಹೋಗೋನಲ್ಲ. ಈಗ್ಲೂ ಕೂಡ ಸ್ವಾಮಿಜಿಯವರ ಎದುರು ಹೇಳ್ತಾ ಇದ್ದೇನೆ; ಆತ್ಮವಂಚನೆ ಮಾಡಿಕೊಳ್ಳಲಿಕ್ಕೆ ತಯಾರಿಲ್ಲ: ಮಠಗಳು ಬೀದಿಗೆ ಬರಬೇಕು. ಸ್ಥಾವರದಿಂದ ಅವು ಜಂಗಮ ಸ್ವರೂಪಿಯಾಗಬೇಕು. ಹಳ್ಳಿ-ಹಳ್ಳಿಗಳಿಗೆ ಹೋಗ್ಬೇಕು. ಈ ಇಂಜಿನಿಯರಿಂಗ್ ಕಾಲೇಜುಗಳು, ಮೆಡಿಕಲ್ ಕಾಲೇಜುಗಳು ಯಾವನ್ಯಾವನೋ ಮಾಡ್ತನೆ ಕಣ್ರೀ. ಅದಕ್ಕೆ ಜಗದ್ಗುರುಗಳು ಬೇಕಾಗಿಲ್ಲ. ನಮ್ಮಲ್ಲಿ ಇಂಜಿನಿಯರಿಂಗ್ ಕಾಲೇಜುಗಳು, ಮೆಡಿಕಲ್ ಕಾಲೇಜುಗಳನ್ನು ಹಿಡ್ಕೊಂಡು ಕೂತ್ಕೊಂಡ್ಬಿಟ್ಟಿದ್ದಾರಲ್ಲಾ ಜಗದ್ಗುರುಗಳು; ಅವರಿಗೆ ನಾನು ಕೇಳೋದು ಇಷ್ಟೇ; ಅವನ್ನ ಎಲ್ಲರೂ ಮಾಡ್ತಾರೆ. ನೀವು ಮಾಡ್ಬೇಕಾಗಿರೋದು ಜನಸಾಮಾನ್ಯರ ಒಳಿತಿನ ಕಾರ್ಯ. ಅಲ್ಲಮನನ್ನ

ನಾನು ಬಸವಣ್ಣನಿಗಿಂತ ಎತ್ತರಕ್ಕೆ ನಿಲ್ಲಿಸೋದು ಯಾಕೆ ಅಂದ್ರೆ ಅಲ್ಲಮನಿಗೆ ಯಾವ ಹಂಗೂ ಇರಲಿಲ್ಲ. ಅವನು ಸ್ಥಾವರ ಆಗೋಕೆ ಯಾವತ್ತೂ ಪ್ರಯತ್ನಪಟ್ಟೇ ಇಲ್ಲ. ಅಲ್ಲಮನ ಹೆಸರಿನಲ್ಲಿ ಒಂದು ಮಠಾನೂ ಇಲ್ಲ ಕರ್ನಾಟಕದಲ್ಲಿ, ಇದ್ರೂ ಪವರ್‌ಫುಲ್ ಮಠಗಳಂತೆ ಕಾಣ್ತಾ ಇಲ್ಲ. ಅಲ್ಲಮ ಅನ್ನೋದೇ ಒಂದು ಶೂನ್ಯ. ಅಲ್ಲಮನ ವಿಚಾರ ಹೇಳ್ಬಿಟ್ಟು ಮುಗಿಸ್ಬಿಡ್ತೇನೆ. ಬಯಲು ಬಯಲನೇ ಬಿತ್ತಿ, ಬಯಲು ಬಯಲನೇ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ಆ ಥರ ಈ 'ಶಿವಸಂಚಾರ' ಬಯಲು ಬಯಲಾಗಿ, ಬಯಲಾಯಿತ್ತಯ್ಯಾ ಅನ್ನೋ ಸಂದೇಶ ತಗೊಂಡೋದ್ರೆ ನನಗೆ ತುಂಬಾ ಸಂತೋಷ. ನನಗೆ ಅವಕಾಶಕೊಟ್ಟು ಇಲ್ಲಿ ಕರೆದಿದ್ದಕ್ಕೋಸ್ಕರ- ನಾನೇನಾದ್ರೂ ನಿಮ್ಮೆದುರುಗಡೆ, ಸ್ವಾಮಿಜಿಯವರಿಗೆ ಅನುಚಿತವಾಗಿ ಮಾತನಾಡಿದ್ರೆ, ನೀವು ಅವರಿಗೆ ತುಂಬಾ ಗೌರವ ಕೊಡ್ತೀರಿ ಅಂತ ನನಗೆ ಗೊತ್ತು. ನಾನು ಅವರನ್ನ ಗಮನದಲ್ಲಿಟ್ಟುಕೊಂಡು ಮಾತಾಡಿದ್ದೇನೆ. ಐ ರೆಸ್ಪೆಕ್ಟ್ ಹಿಮ್ ವಿತ್ ಗ್ರೇಟ್ ಹಾನರ್.

ಮಠ-ಮಾನ್ಯಗಳು ಜನಪರ ಚಳವಳಿಗಳಾಗಿ ಬೆಳೆಯಬೇಕೆನ್ನುವುದು ನನ್ನ ಆಶಯ. ಸ್ವಾಮೀಜಿಗಳು ಜನಪರ ಕಾಳಜಿಯ ನೇತಾರರಾಗಬೇಕು. ಇಂತಹ ಜನಪರ ಕಾಳಜಿಯನ್ನು ನಾನು ಬೆಂಬಲಿಸುತ್ತೇನೆ ಮತ್ತು ಗೌರವಿಸುತ್ತೇನೆ. ಜಾತಿ-ಧರ್ಮಗಳನ್ನು ಸಂಘಟಿಸುವುದು ಕಷ್ಟದ ಕೆಲಸವಲ್ಲ. ಅದನ್ನು ಅನೇಕರು ಅನೇಕ ರೂಪದಲ್ಲಿ ಮಾಡುತ್ತಿದ್ದಾರೆ.

ಜನಪರ ಹೋರಾಟ ಬಹುದೊಡ್ಡ ಸವಾಲು. ಜನಸಮುದಾಯವನ್ನು ಜಾತಿ-ಧರ್ಮಗಳನ್ನು ಮೀರಿ ನಿಲ್ಲುವ ಮಾನವ ಸಮುದಾಯವನ್ನಾಗಿ ಪರಿವರ್ತಿಸುವುದು ನಮ್ಮ ಕಾಲದ ದೊಡ್ಡ ಕನಸು. ಗ್ರಾಮಾಂತರ ಪ್ರದೇಶದಲ್ಲಿ ವೈಚಾರಿಕ ಜಾಗೃತಿಯನ್ನು ಮತ್ತು ನೈತಿಕ ತಳಹದಿಯನ್ನು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ವಿಸ್ತರಿಸುತ್ತಿರುವ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು, ಸಾಣೇಹಳ್ಳಿಯನ್ನು ಗ್ರಾಮಾಂತರ ಸಮುದಾಯದ ವೈಚಾರಿಕ ಕೇಂದ್ರವನ್ನಾಗಿ ಪರಿವರ್ತಿಸಬೇಕೆನ್ನುವುದು ನನ್ನ ಅಪೇಕ್ಷೆ. ಈ ಆಶಯದಿಂದಲೇ ನಾನು ಸಾಣೇಹಳ್ಳಿಗೆ ಬಂದಿದ್ದೇನೆ. ಇಲ್ಲಿಗೆ ಬಂದ ನಂತರ ನಾನು ವಿಷಾದಗಳಿಂದ ಮುಕ್ತನಾಗಿದ್ದೇನೆ. ಎಲ್ಲರಿಗೂ ನಮಸ್ಕಾರ.

## ರಾಮದಾಸ್ ಅವರ ಭಾಷಣದ ಹಿನ್ನೆಲೆಯಲ್ಲಿ ಮೂಡಿಬಂದ ಆಲೋಚನೆಗಳು

'ಮಠಗಳನ್ನು ಪ್ರತಿಭಟಿಸುವುದೇ ನನ್ನ ಚಳವಳಿ' ಎಂದು ಶ್ರೀ ರಾಮದಾಸ್ ಅವರು ಯಾವ ನೆಲೆಯಲ್ಲಿ ಹೇಳಿದರೋ ತಿಳಿಯದು. ಮಠಗಳನ್ನು ಪ್ರತಿಭಟಿಸಲು ಒಂದು ಹಿನ್ನೆಲೆ, ಉದ್ದೇಶ ಇರಬೇಕು. ಮಠಗಳು ಎನ್ನುತ್ತಲೇ ಮೂಗು ಮುರಿಯುವ ಪದ್ಧತಿ ಹಲವರಲ್ಲಿದೆ. ಇದು ನಿಜಕ್ಕೂ ಆರೋಗ್ಯಕರ ಬೆಳವಣಿಗೆಯಲ್ಲ. ಮಠಗಳಿಂದ ಎಷ್ಟೋ ಒಳ್ಳೆಯ ಕೆಲಸಕಾರ್ಯಗಳು ನಡೆಯುತ್ತಾ ಬಂದಿವೆ. ಮಠಗಳ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾಕಾರ್ಯಗಳಿಂದಾಗಿಯೇ ಇಂದು ಬಹುಜನರು ಉತ್ತಮ ಜೀವನ ನಡೆಸಲು ಸಾಧ್ಯವಾಗಿದೆ. ಇಂತಿರುವಾಗ ಉತ್ತಮ ಕೆಲಸಕಾರ್ಯಗಳನ್ನು ಮಾಡುವ ಮಠಗಳನ್ನು ಮೆಚ್ಚಬೇಕು, ಪ್ರೋತ್ಸಾಹಿಸಬೇಕು. ಒಂದು ವೇಳೆ ಮಠಗಳಿಂದ ಸಮಾಜಘಾತುಕ ಕಾರ್ಯಗಳು ನಡೆದರೆ,

ನಡೆಯುತ್ತಿದ್ದರೆ ಅಂಥ ಮಠಗಳನ್ನು ಪ್ರತಿಭಟಿಸಬೇಕು. ಅಲ್ಲದೆ ಆ ಮಠಗಳ ದೋಷಗಳನ್ನು ಎತ್ತಿ ಹೇಳಿ ಅವುಗಳನ್ನು ಜಾಗೃತಗೊಳಿಸಬೇಕು. ಅವು ಸನ್ಮಾರ್ಗದಲ್ಲಿ ಸಾಗದಿದ್ದರೆ ಅಂಥಲ್ಲಿಗೆ ಜನರು ಹೋಗದಂತೆ ತಿಳುವಳಿಕೆ ನೀಡಬೇಕು. ಇದು ಸಾಧುವಾದ ಕಾರ್ಯ. ಇದನ್ನು ಮಾಡದೆ ಪ್ರತಿಭಟನೆಯನ್ನೇ ಒಂದು 'ಮೇಜರ್ ಅಜೆಂಡಾ' ಮಾಡಿಕೊಳ್ಳುವುದು ವಿಚಾರವಂತಿಕೆಯ ಲಕ್ಷಣವಲ್ಲ. 'ಸಾಣೇಹಳ್ಳಿಗೆ ಬರುವಾಗಲೂ ನನ್ನಲ್ಲಿ ದ್ವಂದ್ವ ಇತ್ತು' ಎನ್ನುವ ಅವರ ಮಾತು ವಿಚಾರವಂತಿಕೆಗೆ ತಕ್ಕುದಲ್ಲ. ಪೂರ್ವಗ್ರಹಪೀಡಿತರಾಗಿ ನೋಡದೆ ಮುಕ್ತವಾಗಿ ಚಿಂತಿಸಬೇಕು.

'ಧರ್ಮ ಸಂಘಟನಾತ್ಮಕ ರೂಪ ಪಡೆದರೆ ಭಯೋತ್ಪಾದಕ ಆಗುತ್ತದೆ' ಎನ್ನುವ ರಾಮದಾಸ್ ಅವರ ಮಾತು ಸಂಪೂರ್ಣ ಸತ್ಯವಾಗಬೇಕಾಗಿಲ್ಲ. ಧರ್ಮದ ನಿಜಾರ್ಥವನ್ನು ತಿಳಿದು, ಅದನ್ನು ಯಥಾವತ್ತಾಗಿ ಆಚರಣೆಯಲ್ಲಿ ತಂದು, ಆ ಮೂಲಕ ಸಂಘಟಿತವಾಗುವುದಾದರೆ ಅಂಥ ಧರ್ಮ ಎಂದಿಗೂ ಭಯೋತ್ಪಾದಕ ಆಗಲು ಸಾಧ್ಯವಿಲ್ಲ. ಬದಲಾಗಿ ನೈಜ ಧರ್ಮತತ್ವಗಳನ್ನು ಮರೆಮಾಚಿ ಧರ್ಮಾಂಧತೆ, ಜಾತ್ಯಂಧತೆಯ ಹಿನ್ನೆಲೆಯಲ್ಲಿ ಸಂಘಟನೆ ಆದಾಗ ಮಾತ್ರ ಅಂಥ ಧರ್ಮ ಭಯೋತ್ಪಾದಕ ಆಗುವುದರಲ್ಲಿ ಯಾವ ಅನುಮಾನವೂ ಇಲ್ಲ. ಧರ್ಮ ನಿಜಾರ್ಥದಲ್ಲಿ ವ್ಯಕ್ತಿಯ ಆಲೋಚನಾ ಶಕ್ತಿಯನ್ನ, ಅವನ ಪ್ರತಿಭಟನೆಯ ಮನೋಭಾವನೆಯನ್ನ, ಅನ್ವೇಷಣಾ ಪ್ರವೃತ್ತಿಯನ್ನ ಎಂದಿಗೂ ನಾಶ ಮಾಡಲು ಸಾಧ್ಯವಿಲ್ಲ. ನೈಜಧರ್ಮ ಈ ಎಲ್ಲ ಗುಣಗಳನ್ನ ಬೆಳೆಸುವಂತಹುದು. ಧರ್ಮ ಕೇವಲ 'ನಂಬಿಕೆ'ಯಾಗಿ ಉಳಿಯಬೇಕಾಗಿಲ್ಲ. ಬಸವಾದಿ ಶಿವಶರಣರ ವಿಚಾರಗಳನ್ನೇ ತೆಗೆದುಕೊಂಡರೆ ಅಲ್ಲಿ ಪ್ರತಿಭಟನೆಯ ಮನೋಭಾವನೆ ಇದೆ. ಆಲೋಚನೆಗಳಿಗೆ ಸಾಣೆ ಹಿಡಿಯುವ ಸಾಮರ್ಥ್ಯವಿದೆ. ಅನ್ವೇಷಣಾ ಶಕ್ತಿಯನ್ನು ವೃದ್ಧಿಗೊಳಿಸುವ ಚಿಂತನೆಯಿದೆ.

ಮನುಷ್ಯನಿಗೆ ನಂಬಿಕೆ ಬೇಕೇಬೇಕು. ನಂಬಿಕೆಯೇ ಬದುಕಿನ ಆಧಾರ ಸ್ತಂಭ. ಆದರೆ ಆ ನಂಬಿಕೆ ಅಂಧಶ್ರದ್ಧೆ, ಕಂದಾಚಾರಗಳಿಂದ ಕೂಡಿರಬಾರದು. ತಾರ್ಕಿಕ ತಳಹದಿ ಅದಕ್ಕಿರಬೇಕು. ಎಲ್ಲ ಧರ್ಮಗಳೂ 'ನಂಬಿಕೆ' (Faith) ಇರಬೇಕೆಂದು ಹೇಳಿದರೂ ಮೂಢರಾಗಿ, ತರ್ಕಹೀನರಾಗಿ, ಮಂದಮತಿಗಳಾಗಿ ಕುರುಡುನಂಬಿಕೆಯಿಂದ ನಂಬಬೇಕೆಂದು ಎಲ್ಲಿಯೂ ಹೇಳಿಲ್ಲ. ಯಾರಾದರೂ ಹಾಗೆ ಹೇಳಿದರೆ ಅದು ಧರ್ಮಪ್ರಚಾರಕರ ದೋಷವೇ ಹೊರತು ಧರ್ಮದ ದೋಷವಲ್ಲ.

'ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ನಾವು ಈ ಸ್ವಾಮಿಗಳಿಗೆ ಪ್ರಶ್ನೆ ಕೇಳಿ, ಪ್ರತಿಭಟನೆ ಮಾಡಿದ್ರೆ ಭಕ್ತರೆಲ್ಲಾ ಒದ್ಬಿಡ್ತಾರೆ...' ಎನ್ನುವ ಅನುಮಾನ ರಾಮದಾಸ್ ಅವರಿಗಿದೆ. ಖಂಡಿತ ಈ ಅನುಮಾನ ಬೇಡ. ಯಾರೂ ನಿಮಗೆ ಒದೆಯುವುದಿಲ್ಲ. ನಮ್ಮ ಪರಿಸರದಲ್ಲಿ ಬೆಳೆದ ಯಾರಿಗೂ ಆ ರೀತಿಯ ಸಣ್ಣತನಗಳಿಲ್ಲ. ಅದೇ ರೀತಿ ನಮ್ಮಲ್ಲಿಲ್ಲದ ಗುಣಗಳು ಇವೆ ಎಂದು ನೀವು ಹೊಗಳಿದಾಕ್ಷಣ ಯಾರೂ ಖುಷಿಯಿಂದ ಚಪ್ಪಾಳೆ ತಟ್ಟುವುದಿಲ್ಲ. ಬದಲಾಗಿ ಇವನೊಬ್ಬ ಸಮಯಸಾಧಕನಿರಬೇಕು ಅದಕ್ಕಾಗಿಯೇ ಹೊಗಳುಭಟ್ಟನ ಕಾರ್ಯ ಮಾಡುತ್ತಿದ್ದಾನೆ. ಹೊಗಳಿ ಏನೋ ಸಾಧಿಸಿಕೊಳ್ಳುವ ಸಂಚಿರಬೇಕು ಎಂದು ಹೊಗಳುವವರನ್ನೇ ಅನುಮಾನದಿಂದ ನೋಡುವ ಪ್ರವೃತ್ತಿ ನಮ್ಮ ಜನರಲ್ಲಿದೆ. ಆದುದರಿಂದ ಅವರಿಗೆ ಎಲ್ಲೋ ಏನೋ ಕಹಿ ಅನುಭವ ಆಗಿದೆಯೆಂದು ಅದನ್ನೇ ಸಾರ್ವತ್ರೀಕರಣಗೊಳಿಸುವುದು ನಿಜವಾದ ಚಿಂತನೆಯ ಪರಿಯಲ್ಲ.

ನಮ್ಮಲ್ಲಿ ನಡೆಯುತ್ತಿರುವ ಬೌದ್ಧಿಕ ಚಿಂತನೆ ಅಲಂಕಾರಿಕವಾಗಿ ನಡೆಯುವುದಿಲ್ಲ. 'ಬೌದ್ಧಿಕ ಚಿಂತನೆ ಬೌದ್ಧಿಕ ಕ್ರಿಯಾಶೀಲತೆಯಾಗಿ ಪರಿವರ್ತನೆ ಆಗಬೇಕು' ಎಂಬುದೇ ನಮ್ಮ ಆಶಯ. ಅದಕ್ಕಾಗಿಯೇ ರಾಮದಾಸ್ ಅವರಂಥ ವಿಚಾರಶೀಲರನ್ನೂ ಸಾಣೇಹಳ್ಳಿಗೆ ಆಹ್ವಾನಿಸಿದ್ದು. ಆ ಮೂಲಕ ಗಂಭೀರ ಚಿಂತನೆಗೆ ಅನುವುಮಾಡಿಕೊಟ್ಟು, ಆ ಚಿಂತನೆಯ ಸಾರವನ್ನು ಆಚರಣೆಯಲ್ಲಿ ತರುವ ಪ್ರಯತ್ನ ಮಾಡುತ್ತಿರುವುದು.

'ವಿಶ್ವವಿದ್ಯಾನಿಲಯಗಳು ಜಾತಿಯ ವಠಾರಗಳಾಗಿ ಕನ್ವರ್ಟ್ ಆಗಿವೆ' ಎನ್ನುವ ಅವರ ಮಾತು ಸಹ ಪೂರ್ಣ ಸತ್ಯವಾದುದಲ್ಲ. ವಿಶ್ವವಿದ್ಯಾನಿಲಯದ ಯಾರೋ ಕೆಲವರು ಜಾತಿಯ ಕಪಿಮುಷ್ಟಿಗೆ ಸಿಲುಕಿ ಅದನ್ನೇ ಬೆಳೆಸುವ ಹುಂಬತನ ತೋರಿದರೆ ಅಲ್ಲಿರುವ ಎಲ್ಲರನ್ನೂ ಅದೇ ಮಾಪನದಿಂದ ಅಳೆಯುವುದು ಎಷ್ಟರಮಟ್ಟಿಗೆ ಸರಿಯಾದೀತು ? ರಾಮದಾಸ್ ಅವರೂ ಸಹ ವಿಶ್ವವಿದ್ಯಾನಿಲಯದ ವಾತಾವರಣದಿಂದ ಬಂದವರು ತಾನೆ ? ವಿಶ್ವವಿದ್ಯಾನಿಲಯಗಳಲ್ಲಿಯೂ ಇವರಂತೆ ಯೋಚಿಸುವ, ಜನಪರ ಕಾಳಜಿಯನ್ನು ಹೊಂದಿರುವ, ಜಾತ್ಯತೀತರಾಗಿ ವರ್ತಿಸುವ ಸಾಕಷ್ಟು ಚಿಂತಕರಿದ್ದಾರೆ. ಆದ್ದರಿಂದ ಸಾರಾಸಗಟಾಗಿ ವಿಶ್ವವಿದ್ಯಾನಿಲಯಗಳೆಲ್ಲಾ ಜಾತಿಯ ವಠಾರಗಳಾಗಿವೆ ಎನ್ನುವ ಮಾತು ಉತ್ಪ್ರೇಕ್ಷೆಯದಾಗುತ್ತದೆ. ಮುಂದುವರಿದು ಅವರು 'ವಿಶ್ವವಿದ್ಯಾನಿಲಯದಲ್ಲಿ ಇರುವವರಿಗೆ ಮಾನ-ಮರ್ಯಾದೆ ಇದೆಯೇ ?' ಎಂದು ಭಾವುಕರಾಗಿ ಪ್ರಶ್ನಿಸಿದ್ದು ಸರಿ ಎನಿಸುವುದಿಲ್ಲ. ಕಂಡ ಅನ್ಯಾಯಗಳನ್ನು ಕೆಲವರು ಪ್ರತಿಭಟಿಸಬಹುದು. ಕೆಲವರು ಪ್ರತಿಭಟಿಸದಿರಬಹುದು. ಪ್ರತಿಭಟಿಸಲಿಲ್ಲ ಎಂದಾಕ್ಷಣ ಅವರು ಮಾನಮರ್ಯಾದೆ ಇಲ್ಲದವರು ಎಂದು ಹೇಳಲಾಗದು. ಹೀಗೆ ರಾಮದಾಸ್ ಅವರು ಆಡಿದ ಮಾತುಗಳಲ್ಲಿ ಒಪ್ಪಿತವಾಗುವ ಹಾಗೂ ಪ್ರಶ್ನಾರ್ಹವಾದ ಹಲವು ವಿಚಾರಗಳಿದ್ದರೂ ಆ ಮಾತಿನ ಹಿಂದಿನ ಕಳಕಳಿ ನಿಜಕ್ಕೂ ಮೆಚ್ಚುವಂತಹುದು.

# ಕಮೋಡ್ ಶೌಚ ಸಂಸ್ಕೃತಿಯು ಬ್ರಹ್ಮಾಂಡ ದರ್ಶನ

**ಕೆ. ರಾಮದಾಸ್**

ಮಿರಿಮಿರಿ ಮಿಂಚುತ್ತಾ ಕ್ಷಿಪ್ರಗತಿಯಲ್ಲಿ ಧಾವಿಸುತ್ತಿರುವ ವರ್ತಮಾನದ ಬೆನ್ನುಹತ್ತಲಾಗದೆ ಸುಸ್ತಾಗಿರುವ ನಾನು, ಗುಜರಿಯಂತೆ ಕಾಣುವ ನನ್ನ ಜೀವನದ ನೆನಪುಗಳನ್ನು ತಡಕಾಡುತ್ತಾ, ಅಮೂರ್ತವಾದದ್ದನ್ನು ಮೂರ್ತಗೊಳಿಸುತ್ತ ವರ್ತಮಾನವನ್ನು ತುಂಬಿಕೊಳ್ಳಲು ಭೂತಕಾಲದ ಕನ್ನಡಿಯಲ್ಲಿ ನನ್ನ ಕಳೆದುಹೋದ ಪ್ರತಿಬಿಂಬಗಳನ್ನು ಹುಡುಕುತ್ತೇನೆ.

ನಾವು ಶ್ವೇತ ಸಂಸ್ಕೃತಿಯ ವಾರುಸುದಾರರಲ್ಲದಿದ್ದರೂ ಈಗ ಅದರ ಪಾಲುದಾರರಾಗಲು ದುಂಬಾಲು ಬಿದ್ದಿದ್ದೇವೆ. ನಮ್ಮ ಜೀವನ ಶೈಲಿ ಬದಲಾಗಿ ಹೋಗಿದೆ. ವಿದ್ಯಾವಂತರಾದ ನಾವೆಲ್ಲ ಶ್ವೇತಸಂಸ್ಕೃತಿಯ ಫಲಾನುಭವಿಗಳು. ನಾವು ಹುಟ್ಟಿ-ಬೆಳೆದ ಊರು, ಕೇರಿ, ಹಳ್ಳಿಗಳು ನಮಗೆ ಪರಕೀಯವಾಗಿವೆ. ಅಮೆರಿಕಾ, ಇಂಗ್ಲೆಂಡ್ ನಮಗೆ ಹತ್ತಿರವಾಗಿದೆ.

ನನ್ನ ಬಾಲ್ಯಕಾಲದಲ್ಲಿ ನನ್ನನ್ನು ಬೆದರುಬೊಂಬೆಯಂತೆ ಬೆದರಿಸಿಬಿಟ್ಟಿದ್ದ ಮತ್ತು ಅದರ ಪರಕೀಯತೆಯಿಂದ ನಾನು ನನ್ನ ತಾಯಿಯವರು ಬಳಸಲು ನಿರಾಕರಿಸಿದ್ದ 'ಕಮೋಡ್'ಅನ್ನು ಈಗ ಸಲೀಸಾಗಿ ಬಳಸತೊಡಗಿದ್ದೇನೆ. ನಾವು 'ತಂಗಳು ಪೆಟ್ಟಿಗೆ ' ಯೆಂದು ಕರೆಯುತ್ತಿದ್ದ 'ಫ್ರಿಜ್'ನಮ್ಮ ಜೀವನದ ಅವಿಭಾಜ್ಯ ಭಾಗವಾಗಿದೆ.

ನಾನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾಲೇಜು ಅಧ್ಯಾಪಕ ವೃತ್ತಿಯನ್ನು ಆರಂಭಿಸಿದ ಕಾಲದಲ್ಲಿ, ನಾನು ಮತ್ತು ನನ್ನ ತಾಯಿಯವರು ಚಿಕ್ಕ ಬಾಡಿಗೆಮನೆಯಲ್ಲಿ ವಾಸವಾಗಿದ್ದೆವು. ವಿಶ್ವವಿದ್ಯಾನಿಲಯದ ವಸತಿ ಗೃಹಗಳಲ್ಲಿ ನನಗೊಂದು ಮನೆ ಅಲಾಟ್ ಮಾಡಬೇಕೆಂದು ನಾನು ಅರ್ಜಿಹಾಕಿಕೊಂಡು, ನನ್ನ ಸರದಿಗಾಗಿ ಕಾಯತೊಡಗಿದೆ. ವರ್ಷಗಳು ಕಳೆಯುತ್ತಿದ್ದಂತೆ ನನ್ನ ಸರದಿ ಬಂದೇ ಬಿಟ್ಟಿತು.

ಮಾನಸಗಂಗೋತ್ರಿಯಲ್ಲಿ ನನಗೊಂದು ಫ್ಲಾಟ್ ಅಲಾಟ್ ಮಾಡಿದ್ದರು. ಫ್ಲಾಟ್ ನೋಡಲು ನಾನು ಸಂಭ್ರಮದಿಂದ ನನ್ನ ತಾಯಿಯವರನ್ನು ಕರೆದುಕೊಂಡು ಹೊರಟೆ. ಅದು

ಮಹಡಿಯ ಮೇಲಿನ ಫ್ಲಾಟ್, ನನಗೆ ಇಷ್ಟವಾಯಿತು. ನನ್ನ ತಾಯಿಯವರು ಹಾಲ್, ಅಡಿಗೆಮನೆ, ಬೆಡ್‌ರೂಂ, ಬಾಲ್ಕನಿ, ಕೊನೆಗೆ ಬಾತ್ ರೂಂ ನೋಡಿದರು. ಬಾತ್‌ರೂಂ ವಿದೇಶಿ ಮಾದರಿಯಲ್ಲಿತ್ತು. ಸ್ನಾನ ಮತ್ತು ಶೌಚಾಲಯಗಳು ಒಂದೇ ಆಗಿತ್ತಲ್ಲದೆ, ಟಾಯಲೆಟ್ ಕಮೋಡಾಗಿತ್ತು. ಅದನ್ನು ಬಳಸಲು ನನ್ನಿಂದಾಗುವುದಿಲ್ಲ. ನಾವು ಬಾಡಿಗೆ ಮನೆಯಲ್ಲೇ ಇರೋಣ. ಈ ಫ್ಲಾಟ್ ನಮಗೆ ಬೇಡವೇ ಬೇಡವೆಂದು ಹಠ ಹಿಡಿದರು. ಬಳಸುತ್ತಾ, ಬಳಸುತ್ತಾ ಎಲ್ಲ ಒಗ್ಗಿ ಹೋಗುತ್ತದೆ, ಸಿಕ್ಕ ಅವಕಾಶವನ್ನು ಕಳೆದುಕೊಳ್ಳುವುದು ಬೇಡವೆಂದು ನಾನು ಪರಿಪರಿಯಾಗಿ ಅವರನ್ನು ಒಪ್ಪಿಸಲು ಪ್ರಯತ್ನಿಸಿದೆ. ಅವರು ಸುತಾರಾಂ ಅಲ್ಲಿ ವಾಸಮಾಡಲು ಒಪ್ಪಲಿಲ್ಲ. ನಾನು ಅಸಹಾಯಕನಾಗಿ ಚಿಂತಿಸಿದೆ. ನನಗೂ ಕಮೋಡ್ ಬಳಸಿ ಅಭ್ಯಾಸವಿರಲಿಲ್ಲ. ಮಲೆನಾಡಿನ ಹೊಳೆಸಾಲಿನ ಪರಿಸರದಲ್ಲಿ ಬೆಳೆದ ನಮಗೆ ಶೌಚಾಲಯವೇ ಪರಕೀಯವಾಗಿತ್ತು.

ಮಾನಸಗಂಗೋತ್ರಿಯ ಸುಂದರ ಪರಿಸರದಲ್ಲಿ ವಾಸಮಾಡುವ ಅವಕಾಶವನ್ನು ಕಳೆದುಕೊಳ್ಳಲು ನಾನು ತಯಾರಿರಲಿಲ್ಲ. ನನ್ನ ಜೊತೆಯಲ್ಲಿ ಮನೆ ಅಲಾಟ್ ಆದವರ ಪಟ್ಟಿಯಲ್ಲಿ ಕೆಳಗಡೆ ಫ್ಲಾಟ್ ಅಲಾಟ್ ಆದ ಸಹೋದ್ಯೋಗಿಯೊಬ್ಬರನ್ನು ಪತ್ತೆ ಹಚ್ಚಿ ಅವರನ್ನು ಭೇಟಿಯಾಗಿ ನನ್ನ ಸಮಸ್ಯೆಯನ್ನು ನಿವೇದಿಸಿಕೊಂಡೆ. ಅವರು ಒಬ್ಬಂಟಿಯಾಗಿದ್ದರು. 'ಪರ್‍ವಾಗಿಲ್ಲ ಬಿಡಿ, ಅದಕ್ಕೇನಂತೆ ಪರಸ್ಪರ ಒಪ್ಪಿಗೆಯಿಂದ ಫ್ಲಾಟ್ ಬದಲಾಯಿಸಿಕೊಳ್ಳೋಣ'ವೆಂದು ಔದಾರ್ಯದಿಂದ ನನ್ನ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಿದರು. ಬಾಡಿಗೆ ಮನೆಯಿಂದ ಮಾನಸಗಂಗೋತ್ರಿಯ ಟಿ-೧೯ನೇ ನಂಬರಿನ ಫ್ಲಾಟ್‌ಗೆ ನಮ್ಮ ವಾಸಸ್ಥಳ ಬದಲಾಯಿತು. ನನಗೆ ತುಂಬ ಖುಷಿಯಾಯಿತು. ನನ್ನ ತಾಯಿಯವರಿಗೆ ಇಂಡಿಯನ್ ಮಾದರಿಯ ಶೌಚಾಲಯ ದೊರೆತರೂ ಸ್ನಾನ ಮತ್ತು ಕಕ್ಕಸು ಒಂದೇ ಕಡೆ ಇರುವುದು ಸ್ವಲ್ಪದಿನಗಳ ಕಾಲ ಕಸಿವಿಸಿಯನ್ನುಂಟುಮಾಡಿತು. ಅವರು ಆಸ್ಪತ್ರೆಯಲ್ಲಿ ನರ್ಸಿಂಗ್ ವೃತ್ತಿಯಲ್ಲಿದ್ದರೂ ಮಲೆನಾಡಿನ ದೇಸಿ ಪರಿಸರದ ಮಡಿವಂತಿಕೆಯ ಕನವರಿಕೆಯಲ್ಲೇ ಕಾಲ ಕಳೆಯುತ್ತಿದ್ದರು.

ಮಲೆನಾಡಿನ ಸುಂದರ ಪರಿಸರದ ವರದಾ ನದಿಯ ಹೊಳೆ ಸಾಲಿನಲ್ಲಿ ಬೆಳೆದು ಬಂದ ನಮಗೆ ಕಕ್ಕಸ್, ಬಾತ್‌ರೂಂ, ಬೆಡ್‌ರೂಂ, ಪೂಜಾರೂಂ ಇತ್ಯಾದಿಗಳೆಲ್ಲ ಪರಕೀಯವಾಗೇ ಇದ್ದವು. ಹೊಳೆಯ ತೀರದಲ್ಲಿ ವಾಸಿಸುವ ನಮ್ಮ ಜೋಪಡಿ ಮನೆಗಳಲ್ಲಿ ಇವುಗಳಿಗೆ ಅವಕಾಶವೇ ಇರಲಿಲ್ಲ. ಮನೆಗೆ ಎರಡೇ ಬಾಗಿಲು, ಮುಂಬಾಗಿಲು ಮತ್ತು ಹಿತ್ತಲಿಗೆ ಹೋಗುವ ಹಿಂಬಾಗಿಲು, ಕಿಂಡಿಯಾಕಾರದ ಒಂದೆರೆಡು ಕಿಟಕಿಗಳು. ಈ ಮನೆಗಳಿಗೆ ಬೀಗ ಹಾಕುವ ಅಗತ್ಯವು ಇರಲಿಲ್ಲ.

ನಮ್ಮ ಹೊಳೆಬಾಗಿಲು ಕೇರಿಯ ಹೆಂಗಸರು, ಮಕ್ಕಳು, ಗಂಡಸರು ಎಲ್ಲ ಸಾರಾಸಗಟಾಗಿ ಹೊಳೆಯ ತೀರಕ್ಕೆ ಶೌಚವಿಹಾರಕ್ಕೆ ಹೋಗುತ್ತಿದ್ದರು. ಹೆಂಗಸರು ಚುಮುಚುಮು ಬೆಳಗಾಗುವ ಸಮಯಕ್ಕೆ ಅಥವಾ ಮುಸ್ಸಂಜೆಯ ಹೊತ್ತಿನಲ್ಲಿ ನೆರಹೊರೆಯವರೆಲ್ಲ ಜೊತೆಯಾಗಿ ಶೌಚವಿಹಾರಕ್ಕೆ ಅಣಿಯಾಗುತ್ತಿದ್ದರು. ಅವರ ಪಾಲಿಗೆ ಅದು 'Natural Call'ಮಾತ್ರ ವಾಗಿರಲಿಲ್ಲ. Call of the Nature' ಆಗಿರುತಿತ್ತು. ಹೊಳೆಯ ಸಾಲಿನಲ್ಲಿ ಸುತ್ತುತ್ತಾ, ಗದ್ದೆ ಬಯಲಿನ ಹೊನಗನೆ ಸೊಪ್ಪು ಮುಂತಾದ ಬೆರಕೆ ಸೊಪ್ಪುಗಳನ್ನು ಉಡಿಯಲ್ಲಿ ಕಟ್ಟಿಕೊಂಡು

ಬರುತ್ತಿದ್ದರು. ಮನೆಗೆ ಅಗತ್ಯವಾದ ಸೌದೆ, ಕಾಡುಕುಳ್ಳು, ಮಳೆಗಾಲದಲ್ಲಿ ಅಣಬೆ, ಗದ್ದೆ ಏಡಿ, ಕಳಲೆ ಇವುಗಳನ್ನು ಆಯ್ದು ತಂದು ವನವಿಹಾರ ನಡೆಸುತ್ತಿದ್ದರು.

ನಮ್ಮ ಕೇರಿಯ ಹುಡುಗರಿಗಾಗಲಿ, ಗಂಡಸರಿಗಾಗಲಿ ಕಾಲದ ನಿರ್ಬಂಧವಿರಲಿಲ್ಲ. ಏಕೆಂದರೆ ಇವರಿಗೆ ಮಾನ-ಮಾರ್ಯಾದೆ, ಸಂಕೋಚ-ಲಜ್ಜೆಗಳ ಹಂಗಿರಲಿಲ್ಲ. ಹುಡುಗರಾದ ನಾವು ಮನೆಯಲ್ಲೇ ಚಡ್ಡಿಯನ್ನು ಕಿತ್ತೆಸೆದು ಅಂಗಿಯ ಜೇಬಿನಲ್ಲಿ ಎರಡು ಇಜ್ಜಲು ಚೂರುಗಳನ್ನು ಹಾಕಿಕೊಂಡು ನಮ್ಮ ಬೀದಿಯ ಹತ್ತಿರದ ರೈಲ್ವೆಗೇಟ್ ದಾಟಿಕೊಂಡು ರೈಲು ಹಳಿಗಳ ಮೇಲೆ ಬ್ಯಾಲೆನ್ಸ್ ಮಾಡುತ್ತ ಮುದುರಿಕೊಂಡು ಸಾಲಾಗಿ ಕುಕ್ಕರಗಾಲಿನಲ್ಲಿ ಕುಳಿತುಕೊಂಡು ಅಪ್ರಜ್ಞಾಪೂರ್ವಕವಾಗಿ ಶೌಚಕ್ರಿಯೆಯಲ್ಲಿ ನಿರತರಾಗುತ್ತ, ಆಗಾಗ ಕುಳಿತ ಸ್ಥಳ ಬದಲಾಯಿಸುತ್ತಾ, ಎಷ್ಟೋ ಹೊತ್ತು ಕುಳಿತ ಮೇಲೆ, ಥಟ್ಟನೆ ನೆನಪಾದವರಂತೆ ಹೊಳೆಯ ನೀರಿಗೆ ಇಳಿದು ನೀರಿನಲ್ಲಿ ಅಂಡುಮುಳುಗಿಸಿ ತೊಳೆಯುತ್ತಿದ್ದೆವು. ಆ ಮೇಲೆ ಹೊಳೆಯ ದಡದ ಜೇಡಿಮಣ್ಣಿಗೆ ಕೈ ಉಜ್ಜಿ ಕೈತೊಳೆಯಲಾಗುತ್ತಿತ್ತು.

ನಮ್ಮ ಜಲಕ್ರೀಡೆಯ ಮುಂದಿನ ಹಂತ ಹಲ್ಲುಜ್ಜುವುದು. ಜೇಬಿನಿಂದ ಇಜ್ಜಲು ಚೂರುಗಳನ್ನು ತೆಗೆದು ಬಾಯಿಗೆ ಹಾಕಿ, ಪೆಪ್ಪರ್‌ಮಿಂಟ್‌ನಂತೆ ಹಲ್ಲಿನಿಂದ ಪುಡಿಮಾಡಿ ಬೆರಳಿನಿಂದ ಗಸಗಸ ಉಜ್ಜಿ, ಬಾಯಿ ಮುಕ್ಕಳಿಸುವುದು, ಮುಖ ತೊಳೆಯುವುದು ಅಂಗಿಯಿಂದ ಒರೆಸಿಕೊಂಡು ಹಾಯಾಗಿ ಹೊಳೆಸಾಲಿನಲ್ಲಿ ಸುತ್ತುವುದು, ಹೊಳೆಯ ದಂಡೆಯ ಬಿಲಗಳಲ್ಲಿ ಕೈ ಹಾಕಿ ಏಡಿಗಳ ಶಿಕಾರಿಯಲ್ಲಿ ನಿರತರಾಗುತ್ತಿದ್ದೆವು. ಪುಟ್ಟ ಮಕ್ಕಳು ಮಾತ್ರ ಮನೆಯ ಅಂಗಳದಲ್ಲಿ ಕುಳಿತು ಬೀದಿನಾಯಿಗಳಿಗೆ ಗಮಗಮ ಪ್ರಸಾದದ ಎಡೆ ಇಡುತ್ತಿದ್ದರು. ಇದು ನಮ್ಮ ಕೇರಿಯ ಅಪ್ಪಟ ದೇಸಿ ಸಂಸ್ಕೃತಿಯ ನಡಾವಳಿಯಾಗಿತ್ತು.

ಬೇಸಿಗೆಯಲ್ಲಿ ಬತ್ತಿ, ಹಳ್ಳದಂತೆ ಕಿರಿದಾಗಿ ಬರಿದಾಗಿ ಹರಿಯುತ್ತಿದ್ದ ವರದಾ ನದಿ ಮಳೆಗಾಲದಲ್ಲಿ ಭೋರ್ಗರೆದು ಉಕ್ಕಿ ಹರಿಯುತಿತ್ತು. ನಮ್ಮ ಕೇರಿಯ ಜನರ ಶೌಚವಿಹಾರಕ್ಕೆ ಇದು ಗಂಡಾಂತರದ ಕಾಲ. ಹೊಳೆಯ ತೀರಕ್ಕೆ ಹೋಗಲಾಗುತ್ತಿರಲಿಲ್ಲ. ಕಾಲು ಜಾರಿ ನೀರುಪಾಲಾಗುವ ಅಪಾಯವಿತ್ತು. ಈ ಗಂಡಾಂತರದ ಕಾಲದಲ್ಲಿ ನಾವು ನಮ್ಮ ರೈಲ್ವೆಗೇಟ್ ದಾಟಿಕೊಂಡು ಎತ್ತರವಾದ ಬ್ಯಾಣದ ಕಡೆಗೆ ಹೋಗುತ್ತಿದ್ದೆವು. ಅಲ್ಲಿ ನಿಬಿಡವಾಗಿ ಬೆಳೆದ ಲಕ್ಕಿ, ಲಂಟಾನದ ಪೊದೆಗಳು ನಮ್ಮ ಪ್ರೈವೆಸಿಯನ್ನು ಕಾಪಾಡುತ್ತಿದ್ದವು. ಹಳ್ಳ-ಕೊಳ್ಳಗಳಲ್ಲಿ ಹರಿಯುತ್ತಿದ್ದ ನೀರಿನಲ್ಲಿ ನಮ್ಮ ಜಲಕ್ರೀಡೆ ನಿರಾತಂಕವಾಗಿ ನಡೆಯುತ್ತಿತ್ತು. ಜೇಡಿ ಮಣ್ಣಿನಲ್ಲಿಕಾಲು ಜಾರಿ ಬಿದ್ದು, ಮೈಯಲ್ಲ ಕೆಸರಾದರೂ ನಮಗೇನು ಬೇಜಾರಾಗುತ್ತಿರಲಿಲ್ಲ. ನಾವು ಬೆಳೆಯುತ್ತಾ. ಬೆಳೆಯುತ್ತಾ ಚಡ್ಡಿಹಾಕಿಕೊಂಡು ಓಡಾಡುವುದು ಅನಿವಾರ್ಯವಾಯಿತು. ನನಗೆ ಎಸ್.ಎಸ್.ಎಲ್.ಸಿಗೆ ಬರುವವರೆಗೂ ಶೌಚಾಲಯಕ್ಕೂ ಮತ್ತು ಮೂತ್ರಾಲಯಕ್ಕೂ ವ್ಯತ್ಯಾಸವೇ ಗೊತ್ತಿರಲಿಲ್ಲ.

ನನ್ನ ಬಾಲ್ಯದ ನೆನಪಿನಂಗಳದಲ್ಲಿ ಹೊಳೆ ಮತ್ತು ರೈಲು ನಿಶಬ್ದವಾಗದೆ ನಿರಂತರವಾಗಿ ಚಲಿಸುತ್ತಿವೆ. ಹೊಳೆ ಸಾಲಿನ ತಿರುಗಾಟ, ರೈಲು ಹಳಿಗಳ ಮೇಲಿನ ಓಡಾಟ ನನ್ನ ಜೀವನದ

ಬಾಲ್ಯವನ್ನು ವಿಸ್ತರಿಸುತ್ತಲೇ ಇವೆ. ಇವುಗಳ ರಮ್ಯ ಆಕರ್ಷಣೆಗಳ ಆನಂದವನ್ನು ಹತ್ತಿಕ್ಕಲಾರದೆ ಶಾಲೆಯಿಂದ ತಪ್ಪಿಸಿಕೊಳ್ಳುತ್ತಿದ್ದೆ. ನಮ್ಮ ಕೇರಿಯ ಅಗಸರ ಹುಡುಗ ಹಾಲಪ್ಪ ನನ್ನ ಸಹಪಾಠಿಯಾಗಿ ನನ್ನ ಜೊತೆಗಾರನಾಗಿದ್ದ. ಹಸುರು ಹಾವುಗಳನ್ನು ಹಿಡಿದು ಚಡ್ಡಿ ಜೇಬಿನಲ್ಲಿಟ್ಟುಕೊಂಡು ಶಾಲೆಗೆ ಬರುತ್ತಿದ್ದ ಹಾಲಪ್ಪ ಅದನ್ನು ಕೈಯಲ್ಲಿ ಹಿಡಿದು ಆಟವಾಡುತ್ತಾ ಎಲ್ಲರಲ್ಲೂ ಭೀತಿ ಹುಟ್ಟಿಸುತ್ತಿದ್ದ. ಅವನ ನಿರ್ಭೀತತೆಗೆ ನಾನು ಬೆರಗಾಗಿದ್ದೆ. ಗಂಡುಹಾಲನೆಂದೇ ಖ್ಯಾತನಾಗಿದ್ದ ಹಾಲಪ್ಪನ ಜೊತೆಯಲ್ಲಿ ಹೊಳೆಸಾಲಿನಲ್ಲಿ ಸುತ್ತುವುದು, ಕಾಡು ತಿರುಗುವುದು, ಮರ ಹತ್ತುವುದು, ಮರದ ಬಳ್ಳಿಗಳನ್ನು ಹಿಡಿದು ಜೀಕುತ್ತಾ ಉಯ್ಯಾಲೆಯಾಡುವುದು. ಅದರ ಮಜವೇ ಬೇರೆ.

ಶಿವಮೊಗ್ಗದಿಂದ ಬಂದು -ಹೋಗುತ್ತಿದ್ದ ರೈಲು ನಮ್ಮ ಕೇರಿಯ ಹತ್ತಿರದ ಸೇತುವೆಯನ್ನು ದಾಟುವಾಗ ಅದರ ವಿಶಲ್ ಪ್ರಾರಂಭವಾಗುತ್ತಿತ್ತು. ನಮ್ಮ ಮನೆಯ ಜಗುಲಿಯ ಮೇಲೆ ನಿಂತರೆ ಸಾಕು ಅದರ ದರ್ಶನವಾಗುತ್ತಿತ್ತು. ಸ್ವಲ್ಪದೂರದಲ್ಲಿರೈಲ್ವೆ ಸ್ಟೇಷನ್. ನಾವು ಶಾಲೆಗೆ ಹೋಗುವಾಗ, ಬರುವಾಗ ರೈಲ್ವೆ ದಾರಿಯನ್ನೇ ಬಳಸುತ್ತಿದ್ದೆವು. ರೈಲ್ವೆ ಸ್ಟೇಷನ್‌ನಲ್ಲಿ ಸುತ್ತಾಡಿ, ಆಮೇಲೆ ಶಾಲೆಗೆ ಹೋಗುತ್ತಿದ್ದೆವು. ರೈಲು ತಾಳಗುಪ್ಪಕ್ಕೆ ಹೋಗಿ ಬರುತ್ತಿತ್ತು. ಸ್ಟೀಮ್ ಇಂಜನ್ನಿನ ರೈಲು ಬರುವುದು, ನಿಲ್ಲುವುದು, ಹೊರಡುವುದು ಬುಸ್ಸೆಂದು ಇಂಜನ್ನಿನ ಕುದಿಯುವ ನೀರು ಹಬೆಯಾಗಿ ಚಿಮ್ಮುತ್ತಾ ಗಾಲಿಯಲ್ಲಿ ಬಿಸಿನೀರಿನ ಬುಗ್ಗೆಯಾಗಿ ತುಂತುರಾಗಿ ಹೊಗೆ ಉಕ್ಕಿಸುವುದು ಚೋದ್ಯಮಯವಾಗಿತ್ತು. ಇದನ್ನು ನಾನು ಮತ್ತು ಗಂಡುಹಾಲ ಇಬ್ಬರು ನಿಬ್ಬೆರಗಾಗಿ ನೋಡುತ್ತ ನಿಲ್ಲುತ್ತಿದ್ದೆವು. ಆನೆಯ ಸೊಂಡಿಲಿನಂತಿದ್ದ ಕೊಳಾಯಿಯ ಮೂಲಕ ಮತ್ತೆ ಎಂಜಿನ್ನಿಗೆ ನೀರು ತುಂಬಿಸುತ್ತಿದ್ದರು. ರೈಲು ಹೊರಟ ಮೇಲೆ ಸ್ಟೇಷನ್ ನಿರ್ಜನವಾಗಿ ಬಣಗುಡುತಿತ್ತು. ನಮಗೂ ನಿರಾಸೆಯಾಗುತ್ತಿತ್ತು. ಗತ್ಯಂತರವಿಲ್ಲದೆ ಜೋಲು ಮುಖ ಹಾಕಿಕೊಂಡು ಶಾಲೆಯ ದಾರಿ ಹಿಡಿಯುತ್ತಿದ್ದೆವು.

ಶಾಲೆಯಲ್ಲಿ ಬಹಳ ಹೊತ್ತು ಸುಮ್ಮನೆ ಕೂರಲಾಗುತ್ತಿರಲಿಲ್ಲ. ನಮ್ಮಲ್ಲೆ ಕಣ್ಣುಮಿಟುಕಿಸಿ, ಎದ್ದುನಿಂತು ಕಿಬ್ಬೆರಳು ತೋರಿಸುವುದು ಅಥವಾ ಕೈ ಮುಷ್ಟಿಕಟ್ಟಿ ಹೆಬ್ಬೆರಳನ್ನು ಬಾಯಿಯ ಹತ್ತಿರ ಚಾಚಿ ಬಾಯಾರಿಕೆಯೆಂದು ಸೂಚಿಸಿ, ಶಾಲೆಯಿಂದ ಹೊರಬೀಳುತ್ತಿದ್ದೆವು. ನೀರು ಕುಡಿಯುವ ನೆಪದಲ್ಲಿ ಶಾಲೆಯ ಹತ್ತಿರವಿದ್ದ ರೈಲ್ವೆ ಸ್ಟೇಷನ್‌ಗೆ ಓಡುತ್ತಿದ್ದೆವು. ಅಲ್ಲಿಯ ನಲ್ಲಿಗಳಲ್ಲಿ ಚಿಮ್ಮುವ ನೀರನ್ನು ಬೊಗಸೆಯಲ್ಲಿ ಕುಡಿದು ತಲೆಯನ್ನು ನಲ್ಲಿ ಕೆಳಗೆ ಚಾಚಿ ಬಿಸಿಲಿನ ತಾಪಕ್ಕೆ ಶೈತ್ಯೋಪಚಾರ ಮಾಡಿಕೊಳ್ಳುತ್ತಿದ್ದೆವು. ಸ್ವಲ್ಪ ಹೊತ್ತು ಸ್ಟೇಷನ್ನಿನಲ್ಲಿ ಠಳಾಯಿಸಿ ಬರುತ್ತಿದ್ದೆವು.

ಹೀಗೊಂದು ದಿನ ನಾನು, ಗಂಡುಹಾಲ ನಿರ್ಜನವಾದ ರೈಲ್ವೆಸ್ಟೇಷನ್ನಿನಲ್ಲಿ ಠಳಾಯಿಸುತ್ತಿರುವಾಗ, ಸ್ಟೇಷನ್ನಿನ ಮಹಡಿಯನ್ನು ನೋಡುವ ಕುತೂಹಲವನ್ನು ತಡೆಯಲಾಗಲಿಲ್ಲ. ಸ್ವಲ್ಪ ಭೀತಿಯಿಂದಲೇ ಮಹಡಿಯ ಮೆಟ್ಟಿಲುಗಳನ್ನು ಮೆಲ್ಲಗೆ ಹತ್ತತೊಡಗಿದೆವು. ಅತ್ಯಂತ ಸುಂದರವಾದ ಮಹಡಿಯ ಆವರಣ ನಿಶಬ್ದವಾಗಿತ್ತು. ಅಲ್ಲಿಯ ಕೊಠಡಿಗಳಿಗೆ ಬೀಗ ಹಾಕಿದ್ದರು. ಕಿಟಕಿಯ ಗಾಜುಗಳ ಮೂಲಕ ಕಣ್ಣುಹಾಯಿಸಿ ಒಳಗಡೆ ನೋಡಲು ಪ್ರಯತ್ನಿಸಿದೆವು. ಮಸುಕಾದ ಗಾಜಿನ ಮೂಲಕ ಏನೂ ಕಾಣುತ್ತಿರಲಿಲ್ಲ. ಮೈಸೂರು

ಮಹಾರಾಜರು ಜೋಗ ಜಲಪಾತ ನೋಡಲು ವಿಶೇಷ ರೈಲಿನಲ್ಲಿ ಬಂದಾಗ ಇಲ್ಲಿಯ ಕೊಠಡಿಗಳಲ್ಲಿ ತಂಗುವುದರಿಂದ ಇವೆಲ್ಲ ಭವ್ಯವಾಗಿವೆಯೆಂದು ಜನಜನಿತವಾಗಿದ್ದರಿಂದ, ನಾವು ಇಮ್ಮಡಿ ಕುತೂಹಲದಿಂದ ಹಣಕುತ್ತಾ ಹೊರಟೆವು. ಏನೂ ನೋಡಲಾಗದೆ ನಿರಾಶರಾದ ನಮಗೆ, ಒಂದು ಕೊಠಡಿಯ ಬಾಗಿಲಿಗೆ ಬೀಗಹಾಕದಿರುವುದು ಕಣ್ಣಿಗೆ ಬಿತ್ತು. ಕಳ್ಳಬೆಕ್ಕುಗಳಂತೆ ನಿಧಾನವಾಗಿ ಬಾಗಿಲನ್ನು ತಳ್ಳಿದೆವು. ಸಲೀಸಾಗಿ ಬಾಗಿಲು ತೆರೆದುಕೊಂಡಿತು. ಕೊಠಡಿಯ ಒಳಗಿನ ಭೀಕರ ದೃಶ್ಯವನ್ನು ನೋಡಿ ಕಂಗಾಲಾದ ನಾವು ಗಾಬರಿಯಿಂದ ಕಟಾರನೇ ಕಿರುಚುತ್ತಾ ಅಲ್ಲಿಂದ ಪರಾರಿ.

ಆ ಕೊಠಡಿಯಲ್ಲಿ ಆಜಾನುಬಾಹುವಾದ ಕೆಂಪುಬಣ್ಣದ ಮನುಷ್ಯಾಕೃತಿಯೊಂದು ಬೆತ್ತಲಾಗಿ ಸಿಂಹಾಸನದ ಮೇಲೆ ಕೂತ ಭಂಗಿಯಲ್ಲಿ ಕಾಲುಚಾಚಿಕೊಂಡು ಕುಳಿತಿತ್ತು. ನಮ್ಮ ಊಹೆಗೂ ನಿಲುಕದ ಆ ನಗ್ನಾವಸ್ಥೆಯ ಮನುಷ್ಯನ ಬ್ರಹ್ಮಾಂಡ ದರ್ಶನದಿಂದ ಭಯಭೀತರಾದ ನಾವು, ಮಹಡಿಯ ಮೆಟ್ಟಿಲುಗಳಿಂದ ಕುಪ್ಪಳಿಸಿ ಶರವೇಗದಲ್ಲಿ ಸ್ಟೇಷನ್ ಮುಂಭಾಗದ ಕಾಡಿನಲ್ಲಿ ಹೋಗಿ ಅವಿತುಕೊಂಡೆವು.

ನಾವು ಹಿಂದೆಂದೂ ನೋಡದ ಕೆಂಪು ಮನುಷ್ಯ ಏಕಾಂಗಿಯಾಗಿ ಆ ಕೊಠಡಿಯಲ್ಲಿ ಬ್ರಹ್ಮಾಂಡ ಸ್ವರೂಪಿಯಾಗಿ, ವಿಶ್ವರೂಪ ದರ್ಶನ ನೀಡುತ್ತಾ ಏಕೆ ಕುಳಿತಿದ್ದನೆನ್ನುವುದು ನಮ್ಮ ಮನೆಯ ಹತ್ತಿರದ ರೈಲ್ವೆಗೇಟ್ ಕಾಯುವ ಗಾರ್ಡ್‌ಮಂಜಣ್ಣನ ಹತ್ತಿರ, ನಾವು ನೋಡಿದ ಸಮಸ್ತ ವಿಚಾರವನ್ನು ನಿವೇದಿಸಿಕೊಂಡೆವು.

ಗಾರ್ಡ್‌ಮಂಜಣ್ಣ, ನಮ್ಮ ಮಾತು ಕೇಳಿ ಗಹಗಹಿಸಿ ನಗತೊಡಗಿದ. "ಅದೇನು ಗೊತ್ತಾ, ಅಲ್ಲಿ ನೀವು ನೋಡಿದ್ದು, ಪಾಯಿಖಾನೆ ಮಾಡುತ್ತಿದ್ದ ಮನುಷ್ಯನನ್ನ. ಜೋಗ್‌ಫಾಲ್ಸ್ ನೋಡಲು ಬರುವ ಪರಂಗಿಯವರು, ಸ್ಟೇಷನ್ ರೂಂನಲ್ಲಿ ಹಾಲ್ಟ್ ಮಾಡ್ತಾರೆ. ಅವರು 'ಕಮೋಡ್'ಮೇಲೆ ಕುಳಿತು ಪಾಯಿಖಾನೆ ಮಾಡುವಾಗ ಬಟ್ಟೆ ಹಾಕಲ್ಲ, ಫಾರೀನರ್ಸ್" ಎಂದು, ಅವನಿಗೆ ತಿಳಿದ ರೀತಿಯಲ್ಲಿ ನಮಗೆ ತಿಳುವಳಿಕೆ ಕೊಟ್ಟ. ನಮಗೆ 'ಕಮೋಡ್'ಇತ್ಯಾದಿಯಾಗಿ ಸರಿಯಾಗಿ ಅರ್ಥವಾಗದಿದ್ದರೂ, ಅದೊಂದು ಸುಪ್ತಭೀತಿಯಾಗಿ ತೆಪ್ಪಗಾದೆವು. ನಿರ್ಜನ ರೈಲ್ವೆ ಸ್ಟೇಷನಿನಲ್ಲಿ ಭೂತ ದರ್ಶನವಾದವರಂತೆ ಆ ಅವ್ಯಕ್ತ ಭೀತಿಯಿಂದಲೇ ಓಡಾಡುತ್ತಿದ್ದೆವು.

ಪಿ.ಯು.ಸಿ ಮುಗಿಸಿಕೊಂಡು ಮಲೆನಾಡಿನ ಗಡಿಯನ್ನು ದಾಟಿ ನಾನು ಮೈಸೂರಿಗೆ ಬಂದ ಮೇಲೆ ಪರಿಸ್ಥಿತಿ ಬದಲಾಯಿಸಿತು. ಕಕ್ಕಸು ಟಾಯ್‌ಲೆಟ್, ಬಾತ್‌ರೂಂ ಶಬ್ದಗಳು ಮಹತ್ವದ ಸ್ಥಾನ ಪಡೆದುಕೊಂಡವು. ನಾನು ಮೈಸೂರಿಗೆ ಬರುವವರೆಗೂ 'ಟಾಯ್‌ಲೆಟ್' ಅನ್ನು ಬಳಸುವ ಭಾಗ್ಯವೇ ದೊರೆತಿರಲಿಲ್ಲ.

ಮೈಸೂರಿನ 'Municipal Hostel' ನಲ್ಲಿ ವಾಸವಾಗಿದ್ದ ಸುಮಾರು ೫೦-೬೦ ಜನ ವಿದ್ಯಾರ್ಥಿಗಳಿಗೆ ಕೇವಲ ಮೂರೋ-ನಾಲ್ಕೋ ಕಕ್ಕಸುಗಳಿದ್ದವು. ಅವುಗಳಿಗೆ ಮೇಲಿನ ಚಾವಣಿ ಇರಲಿಲ್ಲ. ತುಕ್ಕು ಹಿಡಿದು, ಜೀರ್ಣವಾಗಿದ್ದ ತಗಡಿನ ಬಾಗಿಲುಗಳು ಹೆಸರಿಗೆ ಮಾತ್ರ ಇದ್ದವು. ಒಳಗೆ ಹೋಗಿ ಕುಳಿತವರು ದೊಡ್ಡ ಸೈಜುಗಲ್ಲನ್ನು ಬಾಗಿಲಿಗೆ ಅಡ್ಡ ಇಟ್ಟು, ಕೆಮ್ಮುತ್ತಾ, ಇನ್ನು ಕೆಲವರು ತಾರಕದಲ್ಲಿ ಹಾಡುತ್ತಾ ಕುಳಿತುಕೊಂಡು, ಎಮರ್ಜೆನ್ಸಿಗೆ ಗೂಳಿಯಂತೆ ನುಗ್ಗಿ ಬರುವವರ

ಅಪಾಯವನ್ನು ಎದುರಿಸಬೇಕಾಗಿತ್ತು. ಹೀಗೆ ಹಾಡುತ್ತಾ ಹಾಡುತ್ತಾ ದನಿ ಕುದುರಿಸಿಕೊಂಡು ನಮ್ಮ ಹಾಸ್ಟೆಲ್‌ನ ಕೆಲವು ವಿದ್ಯಾರ್ಥಿಗಳು ಕಾಲೇಜಿನ ಸೂಪರ್ ಸ್ಟಾರ್ ಗಾಯಕರಾಗಿ ಮಿಂಚುತ್ತಿದ್ದರು. ಹಾಸ್ಟೆಲ್‌ನ ಈ ಅವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿ ಕ್ರಾಂತಿಕಾರರಾದ ನಾವು ಕೆಲವರು ಅಲ್ಲಿಂದ ಉಚ್ಚಾಟಿತರಾಗಿ, ತಬ್ಬಲಿಗಳಂತೆ ನೂರಡಿ ರಸ್ತೆ ಸೇರಬೇಕಾಯಿತು.

ನೂರಡಿ ರಸ್ತೆ ನಮ್ಮ ಜೀವನದ ಐತಿಹಾಸಿಕ ಸ್ಥಳ. ನಮ್ಮ ಕ್ರಾಂತಿಯನ್ನು ರೂಪಿಸಿದ ಹೆದ್ದಾರಿ. ಈ ರಸ್ತೆಯಲ್ಲೇ ಜಿ.ಎಚ್. ನಾಯಕ್, ಎಚ್.ಎಂ.ಚನ್ನಯ್ಯ ತೇಜಸ್ವಿ, ಬಿ.ಎನ್.ಶ್ರೀರಾಮ್, ಶ್ರೀಕೃಷ್ಣ ಆಲನಹಳ್ಳಿ, ಎನ್.ಡಿ. ಸುಂದರೇಶ್, ಶಾಮಣ್ಣ, ಕೆ.ನ.ಶಿವತೀರ್ಥನ್ ಮುಂತಾದವರ ದರ್ಶನ ಭಾಗ್ಯಕ್ಕೆ ಅವಕಾಶ ದೊರೆಯಿತು.

ನಮ್ಮ ಸೀನಿಯರ್ ಬಿ. ಎನ್. ಶ್ರೀರಾಮ್ ನೂರಡಿ ರಸ್ತೆಯ ಮೂಲನಿವಾಸಿಯಾಗಿದ್ದರು. ಹಣೆಯ ತುಂಬ ಬೃಹದಾಕಾರದ ತಿರುಪತಿ ನಾಮ ಹಾಕಿಕೊಂಡು ಸದಾ ನಿಕ್ಕರ್‌ದಾರಿಯಾಗಿ, ಪೌರಾಣಿಕವ್ಯಕ್ತಿಯಂತೆ ಕಾಣುತ್ತಿದ್ದ ಜನಪ್ರಿಯರಾದ ಹೊನ್ನಯ್ಯನವರ ಅಂಗಡಿಯ ಪಕ್ಕದ ಗಲ್ಲಿಯ ಮನೆಯೊಂದರ ಮಹಡಿಯ ಮೇಲೆ ವಾಸವಾಗಿದ್ದ ಶ್ರೀರಾಮ್ ಜೊತೆಯಲ್ಲಿ ಆಜು-ಬಾಜು ರೂಂಗಳಲ್ಲಿ ನಾವು ಠಿಕಾಣಿ ಹೂಡಬೇಕಾಯಿತು.

ಆ ಮಹಡಿಯ ಡಂಜನ್ ಆವರಣ ಭೂಗತ ಚಟುವಟಿಕೆಗಳ ಅಡ್ಡೆಯಂತೆ ಕಾಣುತ್ತಿತ್ತು. ಇದರ ಡಾನ್ ಬಿ. ಎನ್. ಶ್ರೀರಾಮ್ ನಮ್ಮನ್ನು ಕಟ್ಟುನಿಟ್ಟಾದ ಹತೋಟಿಯಲಿಟ್ಟಿದ್ದರು. ಇಲ್ಲಿಯ ನಿವಾಸಿಗಳಿಗೆ ಒಂದೇ ಒಂದು ಟಾಯ್‌ಲೆಟೆಂಬ ಹಾಸ್ಯಾಸ್ಪದವಾದ ಕಕ್ಕಸಿತ್ತು. ಒಂದು ಎತ್ತರವಾದ ಇಕ್ಕಟ್ಟಾದ ಪೀಠದ ಮೇಲೆ ಹತ್ತಿ, ಅಲ್ಲಿ ದಮ್ಮು ಹಿಡಿದು ಕುಕ್ಕರಗಾಲಿನಲ್ಲಿ, ಬೀಳದಂತೆ ಬ್ಯಾಲೆನ್ಸ್ ಮಾಡುತ್ತ ಶೌಚಕ್ರಿಯೆ ನಡೆಸಬೇಕಾಗಿತ್ತು. ಇದರ ಬಾಗಿಲು ವಿಚಿತ್ರವಾಗಿತ್ತು. ಇದು ನಮ್ಮ ಕೆಲಭಾಗವನ್ನು ಮಾತ್ರ ಮರೆ ಮಾಡುವ 'Bottom Line Flop Door'. ಜಗತ್ತಿನ ಯಾವ ಭಾಗದಲ್ಲೂ ಇಂತಹ ಅದ್ಭುತ ಟಾಯ್‌ಲೆಟ್ ನೋಡಲು ದೊರೆಯಲಾರದು. ಇದು ಒಂದು ತಿರುಪಿನ ಮೂಲೆಯಲ್ಲಿ ಇದ್ದದ್ದರಿಂದ, ಸಡನ್ನಾಗಿ ಯಾರಾದರೂ ಬರದಂತೆ Compulsoryಯಾಗಿ ಕೆಮ್ಮುತ್ತಾ ಅಥವಾ ಹಾಡುತ್ತಾ ಅಥವಾ ಸಿಳ್ಳೆಹೊಡೆಯುತ್ತಾ ಕೂರಬೇಕಾಗಿತ್ತು.

ನಾವೆಲ್ಲ ಈ ಯಾತನಾ ಶಿಬಿರದಲ್ಲಿರುವಾಗಲೇ ನೂರಡಿ ರಸ್ತೆಯಲ್ಲಿ ನಮ್ಮ ಕಟ್ಟಡಕ್ಕೆ ಹೊಂದಿಕೊಂಡಂತೆ ನಿವೃತ್ತ ಮೇಷ್ಟ್ರೊಬ್ಬರು 'ಮೆಸ್'ಪ್ರಾರಂಭಿಸಿದರು. ೨೫ಪೈಸೆಗೆ ಬಿಸಿನೀರಿನ ಸ್ನಾನ -ಶೌಚಾಲಯ ಕಲ್ಪಿಸಲಾಗಿತ್ತು. ನಮ್ಮ ಸೀನಿಯರ್ ಶ್ರೀರಾಮ್ ಜೊತೆಯಲ್ಲಿ ನಾವೆಲ್ಲ ಅಲ್ಲಿಗೆ ಹೋಗತೊಡಗಿದೆವು. ಆಜು-ಬಾಜು ರೂಂಗಳ ವಿದ್ಯಾರ್ಥಿಗಳೆಲ್ಲ ಅಲ್ಲಿಗೆ ಬರುತ್ತಿದ್ದರು. ಅಲ್ಲಿದ್ದ ಮೂರು-ನಾಲ್ಕು ಕಕ್ಕಸುಗಳ ಮುಂದೆ ಕ್ಯೂ' ಇರುತ್ತಿತ್ತು.

ಶ್ರೀರಾಮ್ ಅಲ್ಲಿಗೆ ಬರುವ ವಿದ್ಯಾರ್ಥಿಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವರ ಜಾತಕ ತಯಾರಿಸುತ್ತಿದ್ದರು. ಕಕ್ಕಸು ಬಾಗಿಲಿನಲ್ಲಿ ನಿಂತು ನಮ್ಮ ಸರದಿಗಾಗಿ ಕಾಯುವಾಗ ಒಳಗಿದ್ದ ಆಸಾಮಿಯ ಬಗ್ಗೆ Running Commentory ಕೊಡುತ್ತಿದ್ದರು. 'ಈತ ರಾತ್ರಿ ಚೆನ್ನಾಗಿ ಬಾಡು

ತಿಂದವ್ನೆ. ಅದಕ್ಕೆ ತಿಣಕ್ತಾ ಕೂತವ್ನೆ. ಇನ್ನು ಅರ್ಧ ಗಂಟೆ ಅವನು ಹೊರಗೆ ಬರಲ್ಲಾ. ಪಕ್ಕಕ್ಕೆ ನಿಂತ್ಕಳಿ' ಎನ್ನುತ್ತಿದ್ದರು. 'ಈಗ ಹೋದ್ನಲ್ಲ, ಅವನು ಗ್ಯಾಸ್‌ಬುರುಕ. ಸಲೀಸಾಗಿ ಆಗಲ್ಲಾ. ಬರೇ Sound and Fury, Signifying nothing . ಟೈಂ ವೇಸ್ಟ್ ಮಾಡಿ ಹೊರಕ್ಕೆ ಬರ್ತ್ತಾನೆ.' "ಆ ಕಡೆ ನಿಂತವ್ನಲ್ಲ ಅವನು, ಬಕೆಟ್ ತರಾ ಸುರುದು ಬಿಟ್ಟು ಸರಿಯಾಗಿ ನೀರು ಹಾಕ್‌ದೆ ಬರ್ತ್ತಾರೆ. ದುರ್ವಾಸನೆ ಮುಂಡೇದು!'- ಹೀಗೆ ಪರಿಪರಿಯಾದ ಪರಿಭಾಷೆಯಲ್ಲಿ ಶೌಚ ವ್ಯಾಖ್ಯಾನದಲ್ಲಿ ನಮ್ಮನ್ನು ನಗಿಸುತ್ತಾ ತನ್ಮಯಗೊಳಿಸುತ್ತಿದ್ದರು.

ಭಾರತೀಯರ ಶೌಚ ಸಂಸ್ಕೃತಿಯ ರೌರವ ನರಕದ ವಿರಾಟ್ ದರ್ಶನವಾದರೂ ನನಗೆ ವಿದೇಶಿ ಮಾದರಿಯ ಕಮೋಡ್ ಬಳಸುವ ಅವಕಾಶವೇ ದೊರೆತಿರಲಿಲ್ಲ. ಬೆಂಗಳೂರಿನ ಹೋಟೆಲ್‌ನಲ್ಲಿ ತಂಗಿದ್ದಾಗ ಅಲ್ಲಿಯ ಶೌಚಾಲಯದಲ್ಲಿ ಕಮೋಡಿತ್ತು. ನನಗೆ ಪರಕೀಯವಾಗಿದ್ದ ಅದನ್ನು ಹೇಗೆ ಬಳಸಬೇಕೆಂದು ತಿಳಿಯದೆ, ಅದರ ಮೇಲೆ ಹತ್ತಿ ಕುಕ್ಕರಗಾಲಿನಲ್ಲಿ ಕೂರಲು ಹೋಗಿ, ಮುಗ್ಗರಿಸಿ ಬಿದ್ದ ನೆನಪು ಮರೆಯಲಾಗುವುದಿಲ್ಲ.

ಕಾಲ ಸರಿದು ಹೋಗಿದೆ. ಮುಗ್ಧವಾದ ಬಾಲ್ಯವು ಕಳೆದುಹೋಗಿದೆ. ಈಗ ನಾನು ಸುಗಂಧ ದ್ರವ್ಯಗಳ ಪರಿಮಳದಿಂದ ಗಮಗಮಿಸುವ ಪಂಚತಾರಾ ಶೌಚಾಲಯಗಳನ್ನು ಮತ್ತು ನಮ್ಮ ಬಸ್‌ಸ್ಟ್ಯಾಂಡುಗಳ, ಸಾರ್ವಜನಿಕ ಶೌಚಾಲಯಗಳ ದುರ್ಗಂಧದ ರೌರವ ನರಕದ ಶೌಚ ಸಂಸ್ಕೃತಿಯ ವಿರಾಟ್ ದರ್ಶನ ಮಾಡಿದ್ದೇನೆ. ನೊಬಲ್ ಬಹುಮಾನ ವಿಜೇತ ಲೇಖಕ ವಿ.ಎಸ್. ನೈಪಾಲ್ 'India is a open air Lavatory' ಎಂದು ಹೇಳಿರುವುದು ನಿಂದನಾತ್ಮಕವಾದ ಉತ್ಪ್ರೇಕ್ಷೆಯಾಗಿ ಕಾಣುವುದಿಲ್ಲ. ಬೊಂಬಾಯಿ, ಕಲ್ಕತ್ತಾ, ದೆಹಲಿ ನಗರಗಳನ್ನು ಮುಂಜಾನೆಯ ಹೊತ್ತಿನಲ್ಲಿ ರೈಲಿನಲ್ಲಿ ತಲುಪುವಾಗ ಈ ವಿರಾಟ್ ದರ್ಶನವಾಗುತ್ತದೆ. ಅದೇ ರೀತಿ ನಮ್ಮ ಹಳ್ಳಿಗಳಲ್ಲಿ ಹೆಂಗಸರು ನಿತ್ಯಕರ್ಮಗಳಿಗಾಗಿ ಕತ್ತಲಾಗುವುದನ್ನು ಕಾಯಬೇಕಾಗುತ್ತದೆ.

ನಾನು ಭಾರತದ ರಾಜ-ಮಹಾರಾಜರ, ಸುಲ್ತಾನರ, ಬಾದಷಹಗಳ, ಚಕ್ರವರ್ತಿಗಳ ಭವ್ಯವಾದ ಪ್ರಾಚೀನ ಅರಮನೆಗಳನ್ನು ನೋಡಲು ಹೋದಾಗ, ಅವರ ಅಂತಃಪುರಗಳು, ಸಭಾಭವನಗಳು, ಅತ್ತರಿನ ಪರಿಮಳದ ಜಲಕ್ರೀಡಾ ಉದ್ಯಾನಗಳು ಎಲ್ಲವನ್ನು ನೋಡಿದರೂ, ಅವರ ಶೌಚಾಲಯಗಳನ್ನು ಆ ಭವ್ಯವಾದ ಅರಮನೆಗಳಲ್ಲಿ ಇದುವರೆಗೂ ನೋಡಲಾಗಲಿಲ್ಲ. ಈಗಲೂ ಅವರ ಶೌಚಾಲಯಗಳ ಪ್ರಶ್ನೆ ನನ್ನನ್ನು ಕಾಡುತ್ತಿದೆ. ನಾನೇ ಈ ಪ್ರಶ್ನೆಗೆ ಉತ್ತರವನ್ನು ಊಹಿಸಿಕೊಂಡಿದ್ದೇನೆ. ಭಾರತೀಯರಿಗಾಗಲಿ, ಮೊಗಲರಿಗಾಗಲಿ ಶೌಚ ಸಂಸ್ಕೃತಿ ಇದ್ದಂತೆ ಕಾಣುವುದಿಲ್ಲ. ಗುಲಾಮರ ಮೇಲೆ ದಲಿತರ ಮೇಲೆ ಮಲಹೊರಿಸುವ ಕರಾಳ ಸಂಸ್ಕೃತಿಯಾಗಿ ರೂಪಿಸಲ್ಪಟ್ಟಿತು. ಬ್ರಿಟೀಷರ ಆಗಮನದಿಂದ ಶೌಚಾಲಯದ ನಾಗರಿಕತೆಯ ದರ್ಶನವಾಯಿತೆಂದು ಕಾಣುತ್ತದೆ. ಮಲೆನಾಡಿನ ಅಪ್ಪಟ ದೇಸಿ ಮಹಿಳೆಯಾಗಿದ್ದ ನನ್ನ ತಾಯಿಯವರಿಗೆ ಕಮೋಡ್ ಪರಕೀಯವಾಗಿ ಕಂಡದ್ದು, ಅದರ ದರ್ಶನ ಮಾತ್ರದಿಂದಲೇ ನಾನು ಭಯಭೀತನಾದದ್ದು ಪರಮ ಆಶ್ಚರ್ಯವೇನಲ್ಲ. ಈಗ ನಮ್ಮ ಮನೆಯ ಬಾತ್‌ರೂಂನಲ್ಲೇ ಕಮೋಡ್ ಬಂದು ಕುಳಿತಿದೆ. ತಾಯಿಯವರು ನಿರ್ಗಮಿಸಿಬಿಟ್ಟಿದ್ದಾರೆ.

# ಸಾಹಿತ್ಯದ ದಿಗ್ಗಜ ಶಿವರಾಮ ಕಾರಂತರು ಹೃದಯ ಬಿಚ್ಚಿ ಮಾತಾಡಿದಾಗ

**ಕೆ. ರಾಮದಾಸ್**

ಈಗ್ಗೆ ಒಂದೂವರೆ ವರ್ಷಗಳ ಹಿಂದೆ ಶಿವರಾಮ ಕಾರಂತರೊಂದಿಗೆ ಕೆಲವು ಗಂಟೆಗಳ ಕಾಲ ಜೊತೆಯಲ್ಲಿರುವ ಅವಕಾಶ ಆಕಸ್ಮಿಕವಾಗಿ ನನಗೆ ದೊರೆಯಿತು. ಕೆ.ಆರ್.ನಗರ ಸಮೀಪದ ಕಪ್ಪಡಿಯಲ್ಲಿ ಏರ್ಪಾಡಾಗಿದ್ದ ಸಾಕ್ಷರತಾ ತರಬೇತಿ ಶಿಬಿರವನ್ನು ಉದ್ಘಾಟಿಸಲು ಅವರನ್ನು ಆಹ್ವಾನಿಸಲಾಗಿತ್ತು. ನನ್ನ ಹೆಮ್ಮೆಯ ಹಿರಿಯ ಲೇಖಕರಾದ ಕಾರಂತರ ಜೊತೆಯಲ್ಲಿ ಕಾಲ ಕಳೆಯುವುದು ಸಂತೋಷದ ಕೆಲಸವಾಗಿತ್ತು.

ಕಾರಂತರು ಕಾರ್ಯಕ್ರಮದ ಹಿಂದಿನ ದಿನದ ಸಂಜೆಯೇ ಬಂದು ಕೆ.ಆರ್.ನಗರದ ಪ್ರವಾಸಿ ಮಂದಿರದಲ್ಲಿ ತಂಗಿದ್ದರು. ನಾನು ಮತ್ತು ಸಾಕ್ಷರವಾಹಿನಿಯ ಆಗಿನ ಕಾರ್ಯದರ್ಶಿ ಸಚ್ಚಿದಾನಂದಯ್ಯ ಜೊತೆಯಾಗಿ ಕಾರಂತರನ್ನು ಕಪ್ಪಡಿಗೆ ಕರೆದುಕೊಂಡು ಹೋಗಲು ಬೆಳಿಗ್ಗೆ 9 ಗಂಟೆಗೆ ಪ್ರವಾಸಿ ಮಂದಿರಕ್ಕೆ ಹೋದೆವು. ಆಲ್ಬರ್ಟ್ ಐನ್‌ಸ್ಟೀನ್ ಥರ ಕಾಣಿಸುತ್ತಿದ್ದ ಕಾರಂತರು, ಸುಂದರವಾದ ನೀಲಿ ಬಣ್ಣದ ಟೀ ಷರ್ಟ್ ಧರಿಸಿಕೊಂಡು ಕೊಠಡಿಯಲ್ಲಿ ಕುಳಿತಿದ್ದರು. ನಾನು ಕಾರಂತರನ್ನು ನೋಡಿ ಅನೇಕ ವರ್ಷಗಳಾಗಿದ್ದವು. ನಾವು ನಮಸ್ಕಾರ ಮಾಡಿ ಕುಳಿತೆವು.

ಔಪಚಾರಿಕವಾಗಿ ಅವರ ಪ್ರಯಾಣ ಇತ್ಯಾದಿಯೆಲ್ಲ ವಿಚಾರಿಸಿ, 'ಮೈಸೂರಿನಲ್ಲೇ ಉಲ್ಲಾಸ್ ಮನೆಯಲ್ಲಿ ಉಳಿಯಬಹುದಿತ್ತಲ್ಲಾ ಸಾರ್, ಈ ಐಬಿ ಕೊಠಡಿ, ಇಲ್ಲಿಯ ಊಟ ಯಾವುದೂ ಸರಿ ಇಲ್ಲ' ಎಂದೆ. 'ತೊಂದರೆ ಇಲ್ಲ' ಎಂದರು. ಕೋರ್ಟ್ ಕೇಸಿಗಾಗಿ ಚಿಕ್ಕಮಗಳೂರಿಗೆ ಬಂದವರು, ಅದನ್ನು ಮುಗಿಸಿಕೊಂಡು ನೇರವಾಗಿ ಇಲ್ಲಿಗೆ ಬಂದಿರುವುದಾಗಿ ತಿಳಿಸಿದರು.

ಕನ್ನಡದ ಅಗ್ರಮಾನ್ಯ ಸಾಹಿತಿ ಮತ್ತು ವ್ಯಕ್ತಿಯಾದ ಕಾರಂತರ ನಿಷ್ಠುರತೆ ಅವರ ಹಸನ್ಮುಖದಲ್ಲೂ ಪ್ರಜ್ವಲಿಸುತ್ತಿತ್ತು. ಏಕಾಂಗಿಯಾಗಿದ್ದ ಕಾರಂತರಿಗೆ ಜೊತೆಗಾರನಾಗಿದ್ದ ಸಿಗರೇಟು ಕಣ್ಮರೆಯಾಗಿತ್ತು. ಪುಂಖಾನುಪುಂಖವಾಗಿ ಕಾರಂತರು ಸಿಗರೇಟು ಎಳೆಯುವುದನ್ನು ನಾನು

ನೋಡಿದ್ದೆ. ಬಹಿರಂಗ ಸಭೆಗಳ ವೇದಿಕೆಯ ಮೇಲೆ ಕುಳಿತಾಗಲೂ ಅವರು ಸಿಗರೇಟು ಸೇದುತ್ತಿದ್ದರು. ವೈದ್ಯರ ಸಲಹೆ ಮತ್ತು ಪರಿಸರ ಚಳವಳಿಯ ಪ್ರಭಾವ ಅವರನ್ನು ಸಿಗರೇಟಿನಿಂದ ದೂರಮಾಡಿರಬಹುದು ಅಂದುಕೊಂಡೆ. ಅದೇ ಬಿರುಸಾದ ಮಿಂಚುವ ಮುಖ. 'ಕಡಲ ತೀರದ ಭಾರ್ಗವ'ನೆಂದು ಕರೆಯಲ್ಪಟ್ಟ ಅವರ ಪೌರಾಣಿಕ ಪರಶುರಾಮ ಕೋಪ ಆರಿದಂತೆ ಕಾಣಲಿಲ್ಲ. ಕಾರಂತರ ಹತ್ತಿರ ಹುಡುಗಾಟದ ಮಾತನಾಡಿದರೆ ಸುಟ್ಟು ಭಸ್ಮವಾಗಿಬಿಡಬಹುದೆಂಬ ಭೀತಿ.

ಆಗಷ್ಟೇ ಮೈಸೂರಿನ ಧ್ವನ್ಯಾಲೋಕದಲ್ಲಿ ನಡೆದಿದ್ದ ಅಖಿಲ ಭಾರತ ಲೇಖಕರ ಕಮ್ಮಟದ ಬಗ್ಗೆ ವಿಚಾರಿಸಿದೆ. ಅದರಲ್ಲಿ ಅವರು ಭಾಗವಹಿಸಿದ್ದರು. "ಹೇಗಿತ್ತೂ ಸಾರ್ ಕಮ್ಮಟ" ಎಂದೆ. "ಅದು ಬಿಡಿ ಮಾಮೂಲಿ, ಎಲ್ಲ ಸೆಮಿನಾರು ನಡೆಯೋ ಥರಾನೇ ನಡೆಯಿತು. ಬುದ್ಧಿ ಪ್ರದರ್ಶನದ ಕಸರತ್ತು ತಾನು ಏನು ಓದಿದ್ದೇನೆ ಎಂದು ಹೇಳಿಹೋಗುವುದಕ್ಕಾಗಿ ಎಲ್ಲರೂ ಬರುತ್ತಾರೆ. ಅಷ್ಟೆ" ಎಂದರು. ಆ ಕಮ್ಮಟ ಅವರಿಗೆ ಖುಷಿ ಕೊಟ್ಟಂತೆ ಕಾಣಲಿಲ್ಲ. ಯಾರ ಹಂಗು - ಮುಲಾಜುಗಳಿಗಾಗಿ ತಮ್ಮ ಅಭಿಪ್ರಾಯ ಮುಚ್ಚಿಡುವುದು ಅವರ ಸ್ವಭಾವದಲ್ಲೇ ಇಲ್ಲ.

ನಮ್ಮ ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಪ್ರೊ. ಶಂಕರಲಿಂಗಯ್ಯನವರು, ನಮ್ಮ ವಿದ್ಯಾರ್ಥಿಗಳಿಗೆ ಕಾರಂತರ ಭಾಷಣ ಕೇಳುವ ಅವಕಾಶವೇ ಸಿಕ್ಕಿಲ್ಲ ಎಂದು ಅವರನ್ನು ನಮ್ಮ ಕಾಲೇಜಿಗೆ ಆಹ್ವಾನಿಸುವ ಅಪೇಕ್ಷೆ ವ್ಯಕ್ತಪಡಿಸಿದರು. ಸಾರ್, ಅವರ ಕಾರು ಬಾಡಿಗೆ, ಖರ್ಚು - ವೆಚ್ಚ ಎಲ್ಲ ಕೊಡಬೇಕಾಗುತ್ತದೆ ಎಂದು ನಾನು ಸೂಚಿಸಿದೆ. ವಿದ್ಯಾರ್ಥಿ ಸಂಘದಲ್ಲಿ ಅಷ್ಟೆಲ್ಲ ಖರ್ಚು ಮಾಡಲು ಹಣವಿಲ್ಲ ಎಂದರು. ನಾನು ಅವರಿಗೆ ಒಂದು ಕಾಗದ ಬರೆದು ತಾವು ಅನ್ಯ ಕಾರ್ಯನಿಮಿತ್ತ ಮೈಸೂರಿಗೆ ಬಂದಾಗ ನಮ್ಮ ಕಾಲೇಜಿನ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ವಿನಂತಿಸಿಕೊಂಡೆ. ಸ್ವಲ್ಪ ದಿನಗಳಲ್ಲಿ ಕಾರಂತರಿಂದ ಉತ್ತರ ಬಂದಿತು. ತಾವು ಧ್ವನ್ಯಾಲೋಕದ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಂಥ ದಿನ ಬರುತ್ತಿರುವುದಾಗಿ, ಅಲ್ಲಿ ತಮ್ಮನ್ನು ಭೇಟಿಯಾಗಿ ಕಾಲೇಜಿನ ಕಾರ್ಯಕ್ರಮ ಖಚಿತಪಡಿಸಬೇಕೆಂದು ಬರೆದಿದ್ದರು. ನಮ್ಮ ಕುವೆಂಪು ನಗರದಲ್ಲಿರುವ ಅವರ ಮಗ ಉಲ್ಲಾಸ್ ಕಾರಂತ್ ಅವರ ಮನೆಯಲ್ಲಿ ಕಾರಂತರನ್ನು ಭೇಟಿಯಾಗಿ ಗೊತ್ತಾದ ದಿನ ಸಂಜೆ 5.30ಕ್ಕೆ ನಮ್ಮ ಕಾಲೇಜಿನ ಕಾರ್ಯಕ್ರಮದಲ್ಲಿ ಭಾಗವಹಿಸುವುದಾಗಿ ಹೇಳಿದರು. ನಮಗೆಲ್ಲ ಕಾರಂತರ ಔದಾರ್ಯದಿಂದ ತುಂಬ ಖುಷಿಯಾಯಿತು. ನಮ್ಮ ಪ್ರಿನ್ಸಿಪಾಲರು ಕಾರಂತರಿಗೆ ನಾವು ಖರ್ಚು ವೆಚ್ಚ ಕೊಟ್ಟಿಲ್ಲ ಒಂದು 'ಉಪಾಹಾರ ಕೂಟ' ಕಾರ್ಯಕ್ರಮ ಮೊದಲು ಇಟ್ಟುಕೊಳ್ಳೋಣ. ನೀವು ಅವರನ್ನು ಸಂಜೆ 5.15ಕ್ಕೆ ಕರೆದುಕೊಂಡು ಬನ್ನಿ ಎಂದರು.

ನಾನು ಮತ್ತು ನಮ್ಮ ಕಾಲೇಜಿನ ಆಗಿನ ಆಡಳಿತಾಧಿಕಾರಿಯಾಗಿದ್ದ ಪ್ರೊ.ಎಂ. ಶಿವಲಿಂಗಯ್ಯನವರ ಜೊತೆಯಲ್ಲಿ ಕಾರಂತರನ್ನು ಕರೆದುಕೊಂಡು ಬರಲು ಅವರ ಕಾರಿನಲ್ಲಿ ಧ್ವನ್ಯಾಲೋಕಕ್ಕೆ ಹೋಗಿ ಕಾರಂತರನ್ನು ಉಪಾಹಾರಕೂಟಕ್ಕೆ ಬರುವಂತೆ ವಿನಂತಿಸಿದೆವು. ಕಾರಂತರಿಗೆ ಸಿಟ್ಟು ಬಂತು. ನಾನು ಒಪ್ಪಿಗೆ ಕೊಟ್ಟಿರುವುದು ಸಂಜೆ 5.30ರ ಕಾರ್ಯಕ್ರಮಕ್ಕೆ ಮಾತ್ರ. ನಿಮ್ಮ ಟೀ ಪಾರ್ಟಿಗೆ ನಾನು ಒಪ್ಪಿಲ್ಲ. ನೀವು ಹೋಗಿ ಟೀ ಕುಡಿದು ಕುಳಿತುಕೊಳ್ಳಿ.

ನಾನು 5.30ಕ್ಕೆ ಸರಿಯಾಗಿ ಅಲ್ಲಿಗೆ ಹೋಗಿ ಬರುತ್ತೇನೆ. ನೀವು ಕರೆದುಕೊಂಡು ಹೋಗುವ ಅಗತ್ಯವಿಲ್ಲ ಎಂದು ಚಾಪಟಿಯಿಂದ ಹೊಡೆದಂತೆ ಹೇಳಿದರು. ನಮ್ಮ ಉಸಿರೇ ಅಡಗಿಹೋಯಿತು. ಕಾಲಕ್ಕೆ ಸರಿಯಾಗಿ ಬಂದ ಕಾರ್ಯಕ್ರಮದಲ್ಲಿ ಭಾಗವಹಿಸಿ ರಾತ್ರಿ 8 ಗಂಟೆಯವರೆಗೂ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿ ಹೋದರು. ನಮಗೆ ಕಾರಂತರ ಮೇಲಿದ್ದ ಗೌರವ ಇಮ್ಮಡಿಯಾಯಿತು.

ಕಾರಂತರ ಮುಂದೆ ಕುಳಿತ ಕ್ಷಣದಿಂದ ಆರಂಭವಾದ ಈ ಬಿಡಿಬಿಡಿಯಾದ ಸಂದರ್ಭಗಳೆಲ್ಲ ಕಾರಂತರ ವ್ಯಕ್ತಿತ್ವವನ್ನು ನೆನಪಿಸಿ ಮಿಂಚಿ ಮಾಯವಾದವು. ಬೆಳಗ್ಗೆ 10 ಗಂಟೆಗೆ ಕಾರಂತರನ್ನು ಕರೆದುಕೊಂಡು ಕಪ್ಪಡಿಗೆ ಹೊರಟೆವು. ಕೆ.ಆರ್. ನಗರದ ಹಚ್ಚಹಸಿರಾದ ಗದ್ದೆ ಬಯಲುಗಳು ಬಯಲು ಸೀಮೆಯ ಸೊಬಗಿನಂತೆ ಕಾಣುತ್ತಿದ್ದವು. ಕಾರಿನಲ್ಲಿ ಮಾತು ಪರಿಸರದ ಕಡೆಗೆ ತಿರುಗಿತು. ಕಣ್ಮರೆಯಾಗುತ್ತಿರುವ ರಸ್ತೆ ಪಕ್ಕದ ಮರಗಳು, ಬಯಲಾಗುತ್ತಿರುವ ಕಾಡುಗಳು, ಮಾಲಿನ್ಯಗೊಂಡಿರುವ ಪರಿಸರ, ಅವಿವೇಕಿ ಸರ್ಕಾರ, ಅಪಾಯದ ಎಚ್ಚರವಿಲ್ಲದ ಜನರು - ನಮ್ಮ ಸಮಗ್ರ ವ್ಯವಸ್ಥೆಯ ದುರಂತದ ಬಗ್ಗೆ ವಿಷಾದದಿಂದ ಮಾತನಾಡಿದರು.

ಕಪ್ಪಡಿ, ಕಾವೇರಿ ನದಿಯ ದಂಡೆಯಲ್ಲಿರುವ ಸುಂದರವಾದ ಪ್ರಶಾಂತ ಸ್ಥಳ. ಸಾಕ್ಷರ ಆಂದೋಲನದ ಕಾರ್ಯಕರ್ತರು. ಶಿಬಿರಾರ್ಥಿಗಳು ಎಲ್ಲ ಸೇರಿ ಸುಮಾರು 50 ಜನರ ಪುಟ್ಟ ಕಾರ್ಯಕ್ರಮ. ಕೆಲವು ಪತ್ರಕರ್ತರು ಬಂದಿದ್ದರು.

ಕಾರಂತರಿಗೆ ಮೈಸೂರು ಜಿಲ್ಲೆಯ ಸಂಪೂರ್ಣ ಸಾಕ್ಷರತಾ ಆಂದೋಲನದ ಚಟುವಟಿಕೆಗಳ ಪರಿಚಯ ಮಾಡಿಕೊಡಲಾಯಿತು. ಪಠ್ಯಪುಸ್ತಕಗಳನ್ನು ತೋರಿಸಲಾಯಿತು. ಕಾರಂತರು ಎಲ್ಲವನ್ನು ಅವಲೋಕಿಸಿದರು.

ಕಾವೇರಿ ನದಿಯ ತಣ್ಣನೆಯ ಗಾಳಿ ಬೀಸುತ್ತಿತ್ತು. ಕಾರಂತರು ಉದ್ಘಾಟನಾ ಭಾಷಣ ಪ್ರಾರಂಭಿಸಿದರು. ಅವರ ಮಾತಿನಿಂದ ಸ್ಫೂರ್ತಿ ಪಡೆಯಲು ಸಾಕ್ಷರವಾಹಿನಿಯವರೆಲ್ಲರೂ ಕಾತರರಾಗಿದ್ದರು. ಕಾರಂತರು ನಮ್ಮ ಶೈಕ್ಷಣಿಕ ವ್ಯವಸ್ಥೆ, ಬೇಜವಾಬ್ದಾರಿಯ ಸರ್ಕಾರ ಮತ್ತು ಅವೈಜ್ಞಾನಿಕ ಶೈಕ್ಷಣಿಕ ಯೋಜನೆಗಳನ್ನು ರೂಪಿಸುವ ತಜ್ಞರನ್ನು ತರಾಟೆಗೆ ತೆಗೆದುಕೊಂಡರು. ತಮ್ಮ ಸ್ವಂತ ಪ್ರಯೋಗಗಳು. ಅವುಗಳ ಅನುಭವಗಳನ್ನು ಹೇಳುತ್ತಾ, ಪಠ್ಯವಸ್ತು, ಬೋಧನಾ ಕ್ರಮ, ಕಲಿಯುವವರ ಸಾಮಾಜಿಕ - ಆರ್ಥಿಕ ಪರಿಸರ ಇತ್ಯಾದಿಗಳನ್ನು ಗಮನಿಸದೆ, ಪರಕೀಯವಾದ ಅಂಶಗಳನ್ನು ಕಲಿಯುವ ಪ್ರಯತ್ನ ಅವೈಜ್ಞಾನಿಕ ಎಂದರು. ಕಲಿಯುವವರಿಗೆ ಅಗತ್ಯವಿಲ್ಲದ ವಿಚಾರಗಳನ್ನು ಕಲಿಸುವ ಪ್ರಯತ್ನ ಮೂರ್ಖತನವೆಂದರು. ಸಾಕ್ಷರವಾಹಿನಿಯ ಉತ್ಸಾಹಕ್ಕೆ ತಣ್ಣೀರೆರಚಿದಂತಾಯಿತು. ಕಾರಂತರ ಜೊತೆಯಲ್ಲಿ ಬಹಳ ಹೊತ್ತಿನವರೆಗೂ ಚರ್ಚೆ ನಡೆಯಿತು. ಸಂಪೂರ್ಣ ಸಾಕ್ಷರತಾ ಆಂದೋಲನದ ಗುಣಾತ್ಮಕ ಅಂಶಗಳನ್ನು ಗಮನಿಸಬೇಕೆಂದು ಅನೇಕರು ಕಾರಂತರನ್ನು ಒತ್ತಾಯಪಡಿಸಿದರು. ಕಾರಂತರು ಜಗ್ಗಲೇ ಇಲ್ಲ. "ಸರ್ಕಾರ ನಿಮಗೆ ಹಣ ಕೊಟ್ಟಿದೆ. ಖರ್ಚು ಮಾಡಲು ಹೇಳಿದೆ. ನೀವು ನಿಮ್ಮ ಕೆಲಸ ಮಾಡಿ ನನ್ನ ಅಭ್ಯಂತರವೇನೂ ಇಲ್ಲ" ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು. ಕಾರಂತರನ್ನು ಅಷ್ಟು ದೂರದಿಂದ

ಕರೆಸಿಕೊಂಡು ಉಗಿಸಿಕೊಳ್ಳಬೇಕಾಯಿತಲ್ಲ ಇದು ನಮ್ಮ ನಿಜವಾದ ಕರ್ಮವೆಂದು ಸಾಕ್ಷರವಾಹಿನಿಯ ಸಂಘಟಕರು ನಿಸ್ಸಹಾಯಕರಾಗಿ ಪರಿತಪಿಸಿದರು.

ಊಟದ ವಿರಾಮ ಪಾಟಾಳಿಯಂತೆ ಮಾತನಾಡಿದ ಕಾರಂತರು ದಣಿದಿರಬಹುದೆಂದು 'ಸಾರ್, ಕೆ.ಆರ್. ನಗರಕ್ಕೆ ಹೋಗೋಣ. ಅಲ್ಲೇ ಊಟ ಮಾಡಿ ವಿಶ್ರಾಂತಿ ಪಡೆಯಬಹುದು' ಎಂದೆ. 'ನನಗೆ ಹೆಚ್ಚಿಗೇನೂ ಊಟಬೇಡ, ಇಲ್ಲಿರುವುದನ್ನೇ ಒಂದು ಪ್ಲೇಟ್‌ನಲ್ಲಿ ಸ್ವಲ್ಪ ಹಾಕಿಕೊಡಿ ಸಾಕು' ಎಂದರು. ಕಪ್ಪಡಿಯಲ್ಲಿ ಊಟ ಮಾಡಿ, ಅಲ್ಲಿಯ ಪರಿಸರದಲ್ಲಿ ಒಂದು ಸುತ್ತು ಹಾಕಿದರು. ತಂಗಾಳಿ ಜೋರಾಗಿಯೇ ಬೀಸುತ್ತಿತ್ತು. ನಮಗೆಲ್ಲ ಸ್ವಲ್ಪ ಚಳಿಯಾಗುತ್ತಲೇ ಇತ್ತು. ಕಾರಂತರು ಶಾಲೂ ತಂದಿರಲಿಲ್ಲ. ಅವರನ್ನು ಹೇಗಾದರೂ ಕೆ.ಆರ್. ನಗರದ ಐಬಿಗೆ ಕರೆದೊಯ್ಯಲು ಹವಣಿಸುತ್ತಿದ್ದೆ. 'ಸಾರ್ ಸ್ವಲ್ಪ ಚಳಿ ಇದೆ. ಹೋಗೋಣ' ಎಂದೆ. ಹಾಗೂ ಹೀಗೂ 3 ಗಂಟೆಯಾಯಿತು. 'ಸಾರ್ ಕಾರು ಹೊರಟಿದೆ' ಮತ್ತೆ ಜ್ಞಾಪಿಸಿದೆ. 'ಆಯಿತು' ಎಂದು ಹೊರಟರು. ಕಾರಂತರನ್ನು ಸುಸ್ತು ಮಾಡುವುದು ಬೇಡವೆಂದು ಅವರನ್ನು ಹೆಚ್ಚು ಮಾತನಾಡಿಸಲಿಲ್ಲ. ಐಬಿಗೆ ಬಂದಮೇಲೆ 'ಸಾರ್ ಸ್ವಲ್ಪ ಮಲಗಿಕೊಳ್ಳಿ' ಎಂದೆ. 'ಅಗತ್ಯವಿಲ್ಲ. ನೀವು ಕೂರಬಹುದು' ಎಂದರು ಅಸಹಾಯಕನಾಗಿ ಕೂತೆ.

ಅವರ ಬರವಣಿಗೆ, ಓಡಾಟದ ವಿಚಾರ ಕೇಳಿದೆ. ತಿಂಗಳಲ್ಲಿ ಒಂದು ವಾರವಾದರೂ ಓಡಾಟ ಮಾಡುವುದಾಗಿ ತಿಳಿಸಿದರು. ತಮ್ಮ ಜೀವನದ ಅವಸ್ಥಾಂತರಗಳನ್ನು ಜ್ಞಾಪಿಸಿಕೊಂಡು, ತಾವು 'ಬಾಲವನ' ಸ್ಥಾಪಿಸಿದ್ದು, ಮಕ್ಕಳಿಗೆ ಆಟಿಕೆಗಳನ್ನು ತಯಾರಿಸಲು ಹೋಗಿ, 'ಸಾ ಮಿಲ್' ಇಟ್ಟಿದ್ದು, ಪಂಪ್ ಸೆಟ್ಟುಗಳ ಏಜೆನ್ಸಿ ಪಡೆದಿದ್ದು ಇತ್ಯಾದಿ ಇತ್ಯಾದಿ. ಮಂಗಳೂರು ವಿಶ್ವವಿದ್ಯಾನಿಲಯದ 'ಕಾರಂತ ಪೀಠ'ದ ವತಿಯಿಂದ ಮಾಲಿನಮಲ್ಯ ಅವರು ಸಂಪಾದಿಸಿರುವ ತಮ್ಮ ಬರವಣಿಗೆಯ ಪ್ರಾರಂಭಕಾಲದ ಪತ್ತೇದಾರಿ ಕತೆಗಳು. ಅಪ್ರಕಟಿತ ಬರಹಗಳು ಸಂಕಲನಗೊಳ್ಳುತ್ತಿರುವ ವಿಚಾರ ಪ್ರಸ್ತಾಪಿಸಿ, ವಿಮರ್ಶಕರ ಕೆಲವು ಅವಿವೇಕತನಗಳ ಬಗ್ಗೆ ರೇಗಿದರು. ಹೀಗೆ ಕಾರಂತರು ಮಾತನಾಡುವ ಹುರುಪಿನಲ್ಲಿದ್ದರು. ನಾನು ಏನೇನೋ ಕೆದಕುತ್ತಲೇ ಇದ್ದೆ. ಅಷ್ಟರಲ್ಲಿ ಕೆ.ಆರ್. ನಗರದ ಕೆಲವು ತರುಣರು ಕಾರಂತರು ಬಂದಿರುವ ವಿಚಾರ ತಿಳಿದು ಅವರನ್ನು ಗೌರವಿಸಲು 'ಹಾರ' ತೆಗೆದುಕೊಂಡು ಒಳಬಂದರು. ನಾನು ಅವರಿಗೆ ಜಾಗ ತೆರವು ಮಾಡಲು ಕಾರಂತರಿಗೆ ನಮಸ್ಕಾರ ಹೇಳಿ ಅಲ್ಲಿಂದ ಧನ್ಯತೆಯಿಂದ ಹೊರಟೆ.

ಈಚೆಗೆ ಕಾರಂತರ ವೈಚಾರಿಕ ಅಸಂಬದ್ಧತೆಗಳ ಬಗ್ಗೆ ನನಗೆ ಅಸಹನೆ ಉಂಟಾಗಿತ್ತು. ಅವರು ಬಾಬರಿ ಮಸೀದಿ ಉರುಳಿಸಿದ್ದನ್ನು ಸಮರ್ಥಿಸಿ, ಮತೀಯ ಮೂಲಭೂತವಾದವನ್ನು ಬೆಂಬಲಿಸಿ ಮಾತನಾಡಿದ್ದನ್ನು ನಾನು ಪತ್ರಿಕೆಗಳ ಮೂಲಕ ಖಂಡಿಸಿದ್ದೆ. ಅವರು ತಮ್ಮ ನಿಲುವನ್ನು ಸಮರ್ಥಿಸಿ ವಿವರವಾದ ಲೇಖನವನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಅದು ಕೂಡ ಅತಾರ್ಕಿಕವಾಗಿತ್ತು.

ಹಿಂದೆ ಮೈಸೂರಿನಲ್ಲಿ ನಡೆದ 'ವಿಶ್ವ ಕನ್ನಡ ಮೇಳ'ದ ಸಂದರ್ಭದಲ್ಲಿ ಕನ್ನಡದ ಪ್ರಾಥಮಿಕ ಶಿಕ್ಷಣದ ಬಗ್ಗೆ ಕನ್ನಡ ಭಾಷೆಯ ಬಗ್ಗೆ ನಿಜವಾದ ಕಾಳಜಿ ಇಲ್ಲದ ಸರ್ಕಾರ ತೀವ್ರವಾದ ಬರಗಾಲದ ಸಮಯದಲ್ಲಿ ಹತ್ತಾರು ಕೋಟಿ ರೂಪಾಯಿ ದುಂದು ವೆಚ್ಚ ಮಾಡಿ ಜನರ ಗೋಳಿನ

ಮಧ್ಯೆ ಮೋಜು ಮಾಡಲು ಮೇಳಕ್ಕೆ ನಾವು ಪ್ರತಿಭಟನೆ ವ್ಯಕ್ತಪಡಿಸಿದ್ದೆವು. ರಾಮಕೃಷ್ಣ ಹೆಗಡೆ ಸರ್ಕಾರ ನಮ್ಮ ಪ್ರತಿಭಟನೆಯನ್ನು ಹತ್ತಿಕ್ಕಲು ನಮ್ಮನ್ನೆಲ್ಲ ಒಂದು ವಾರ ಕಾಲ ಜೈಲಿಗೆ ಕಳಿಸಿತು. 'ವಿಶ್ವ ಕನ್ನಡ ಮೇಳ'ದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಕಾರಂತರು, ಮೇಳವನ್ನು ಸಮರ್ಥಿಸುತ್ತಾ, "ಬರಗಾಲದಲ್ಲಿ 'ವಿಶ್ವ ಕನ್ನಡ ಮೇಳ'ದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಕಾರಂತರು, ಮೇಳವನ್ನು ಸಮರ್ಥಿಸುತ್ತಾ, "ಬರಗಾಲದಲ್ಲಿ 'ವಿಶ್ವ ಕನ್ನಡ ಮೇಳ' ನಡೆಸುವುದನ್ನು ವಿರೋಧಿಸುವ ಇವರು, ಬರಗಾಲದಲ್ಲಿ ಮಸಾಲೆದೋಸೆ ತಿನ್ನುವುದನ್ನು ಬಿಟ್ಟಿದ್ದಾರಾ ?" ಎಂದು ನಮ್ಮನ್ನು ಲೇವಡಿ ಮಾಡಿದ್ದರು. ಇದರಿಂದ ಕಾರಂತರ ಬಗ್ಗೆ ನಾವು ಇಟ್ಟುಕೊಂಡಿದ್ದ ಅಪಾರವಾದ ಗೌರವಕ್ಕೆ ಚ್ಯುತಿಯಾಗಿತ್ತು. ಆಮೇಲೆ ನಾನು ಕಾರಂತರನ್ನು ನೋಡಿರಲಿಲ್ಲ.

ಕಾರಂತರ ಅದಮ್ಯವಾದ ಜೀವನೋತ್ಸಾಹ, ನಿರಂತರ ಚಲನಶೀಲತೆ, ರಾಜಕೀಯ - ಸಾಮಾಜಿಕ ಜೀವನದಲ್ಲಿ ಅಪಮೌಲ್ಯಗೊಳ್ಳುತ್ತಿರುವ ಬದುಕು, ವಿನಾಶಗೊಳ್ಳುತ್ತಿರುವ ಪರಿಸರ ಇತ್ಯಾದಿಗಳಿಂದ ಇವತ್ತಿಗೂ ನಳನಳಿಸುತ್ತಿರುವ ಅವರ ಆಕ್ರೋಶಗಳಿಂದ ತುಂಬಿದ ಅವರ ವಿರಾಟ್ ಸ್ವರೂಪಿಯಾದ ವ್ಯಕ್ತಿತ್ವಕ್ಕೆ ಮುಪ್ಪು ಮುಟ್ಟಿರಲಿಲ್ಲ. ಕಾರಂತರ ಸಾಮೀಪ್ಯದಲ್ಲಿ ಕಳೆದ ಕೆಲವು ಕ್ಷಣಗಳು ನನ್ನ ಮನಸ್ಸಿನಲ್ಲಿದ್ದ ನನ್ನ ಆಕ್ಷೇಪಣೆಗಳನ್ನು ಸುಟ್ಟು ಭಸ್ಮಮಾಡಿದವು.

ಈಗ ಕಾರಂತರಿಗೆ ಅಖಿಲ ಭಾರತ ಮಟ್ಟದ 'ಪರ್ಯಾವರಣ ಪ್ರಶಸ್ತಿ' ಬಂದಿರುವುದು ಹಚ್ಚಹಸಿರಾಗಿಯೇ ಉಳಿದುಕೊಂಡಿರುವ ಕಾರಂತರ ಬದುಕಿಗೆ ಕೊಟ್ಟ ಗೌರವವಾಗಿದೆ.

# ನ್ಯೂ ಮಿಲೆನಿಯಮ್ ಎಂಬ ಮಾಯಾಮೃಗ

ಕೆ.ರಾಮದಾಸ್

ನ್ಯೂ ಮಿಲೆನಿಯಮ್ ಆಗಮನದ ಕೌಂಟ್‌ಡೌನ್(Count Down)ಆರಂಭವಾಗಿದೆ. ೨೦ನೆಯ ಶತಮಾನ ನಿರ್ಗಮಿಸುವ ಕ್ಷಣಗಳು ಸಮೀಪಿಸುತ್ತಿವೆ. ಹೊಸ ಸಹಸ್ರಮಾನ ೨೧ನೆಯ ಶತಮಾನದ ಉದಯಕಾಲದ ಸಂಭ್ರಮಕ್ಕಾಗಿ ಜಗತ್ತು ಉನ್ಮತ್ತವಾದಂತೆ ವರ್ತಿಸುತ್ತಿದೆ.

೨೧ನೆಯ ಶತಮಾನ ಕಾಲಿಡುವ ಮೊದಲೇ 'Y2K' ಕಂಪ್ಯೂಟರ್ ಸಮಸ್ಯೆ ಜಗತ್ಪ್ರಳಯವನ್ನುಂಟು ಮಾಡುವ ಭೀತಿಯನ್ನು ಹುಟ್ಟಿಸಿ ಬಿಟ್ಟಿತು. ಇದರ ಅನಾಹುತವನ್ನು ತಡೆಯಲು ಜಗತ್ತೇ ಸಜ್ಜಾಗಿರುವುದಾಗಿ ಘೋಷಿಸಲಾಗುತ್ತಿದೆ. ಇದು ಕಂಪ್ಯೂಟರ್ ಯುಗದ ಭವಿಷ್ಯದ ಮುನ್ಸೂಚನೆಯಾಗಿದೆ.

ಹೊಸ ಸಹಸ್ರಮಾನದ ವಿದ್ಯಮಾನಗಳನ್ನು ಚರ್ಚಿಸುತ್ತಿರುವವರು ವಿದ್ಯುನ್ಮಾನದ ಡಿಜಿಟಲ್ ಕಂಪ್ಯೂಟರ್ ಯುಗದ ಹೊಸ ಚಮತ್ಕಾರದ ಇಂಟರ್‌ನೆಟ್, ವೆಬ್‌ಸೈಟ್, ಇಮೈಲ್, ಹಾಟ್‌ಮೈಲ್, ಸಿ.ಡಿ. ರಾಮ್, ಕಂಪ್ಯೂಟರ್ ವೈರಸ್, ಸ್ಕೈ ಶಾಪಿಂಗ್, ಇ-ಬ್ಯಾಂಕಿಂಗ್, ಇ-ಟ್ರೇಡ್ ಇತ್ಯಾದಿ ಪರಿಭಾಷೆಯಲ್ಲಿ ಸಂಭಾಷಿಸುತ್ತಿರುವುದು ಕಂಪ್ಯೂಟರ್ ಪರಿಜ್ಞಾನವಿಲ್ಲದ ನಮಗೆ ಅವರೆಲ್ಲ ಗ್ರೀಕ್, ಲ್ಯಾಟಿನ್, ಸಂಸ್ಕೃತದಲ್ಲಿ ಮಾತನಾಡುತ್ತಿರುವಂತೆ ತೋರುತ್ತದೆ.

೨೦ನೆಯ ಶತಮಾನದ ಅಕ್ಷರ ಸಂಸ್ಕೃತಿಗೆ ಈಗ ತಾನೆ ಕಣ್ಣುತೆರೆದಿರುವ ನಮ್ಮ ತಲೆಮಾರಿನ ಜನರಿಗೆ ಈ ಕ್ಷಿಪ್ರ ಕ್ರಾಂತಿಯ ಕಂಪ್ಯೂಟರ್ ಯುಗದ ಹೊಸ ಪರಿಭಾಷೆಯ ನವಸಾಕ್ಷರತೆಯ ವಿದ್ಯಮಾನಗಳ ವೇಗ ಮತ್ತು ಸಂಭ್ರಮವನ್ನು ಗಮನಿಸಿದರೆ ದಿಗ್ಭ್ರಮೆಯಾಗುತ್ತದೆ. ಮತ್ತೆ ನಾವು ನಿರಕ್ಷರಸ್ಥರಾಗಿ ಬಿಡುವ ಭೀತಿ ಹುಟ್ಟುತ್ತದೆ. ಇನ್ನೂ ನಮ್ಮ ದೇಶದ ಶೇ.೫೦ ಭಾಗದಷ್ಟು ಜನರು ಅಕ್ಷರ ಸಂಸ್ಕೃತಿಯಿಂದ ವಂಚಿತರಾಗೇ ಇರುವಾಗ ಈ ಕಂಪ್ಯೂಟರ್ ಯುಗದ ನವ ನಾಗರಿಕತೆಯಲ್ಲಿ ಅವರ ಭವಿಷ್ಯವೇನಾಗುತ್ತದೆ? ಈ ರೀತಿಯ ಗೊಂದಲಗಳು ನನ್ನಲ್ಲಿ ತಳಮಳವನ್ನು ಉಂಟುಮಾಡಿವೆ. ಇದು ಸಂಕ್ರಮಣ ಕಾಲದ ಸ್ವಾಭಾವಿಕವಾದ ಭ್ರಮಾತ್ಮಕ ಸ್ಥಿತಿಯಾಗಿರಲೂ ಬಹುದು ಅಥವಾ ಕಠೋರವಾದ ಸತ್ಯವಾಗಿರಲೂ ಬಹುದು.

೧೯೬೯ರಲ್ಲಿ ಅಮೇರಿಕಾದ ಖಗೋಳ ಯಾತ್ರಿ ನೀಲ್ ಆರ್ಮ್‌ಸ್ಟ್ರಾಂಗ್ ಗಗನನೌಕೆ ಅಪೋಲೋ ೧೧ರಲ್ಲಿ ಕುಳಿತು ಭೂಮಿಯ ಕಕ್ಷೆಯನ್ನು ದಾಟಿ ಚಂದ್ರಗ್ರಹದ ಮೇಲೆ ಮಾನವನ ಮೊಟ್ಟ ಮೊದಲ ಹೆಜ್ಜೆ ಇಟ್ಟಾಗ, ಆ ಅಪೂರ್ವ ಕ್ಷಣದ ರೋಮಾಂಚನದಲ್ಲಿ ಉದ್ಗರಿಸಿದ 'One step ahead of Mankind"ಆತನ ಮಾತು ಜಗತ್ತಿನ ಭವಿಷ್ಯದ ನಿರ್ಣಯದಲ್ಲಿ ಭವಿಷ್ಯವಾಣಿಯಾಗುತ್ತದೆಂದು ಯಾರೂ ಭಾವಿಸಿರಲಿಲ್ಲ. ಚಂದ್ರ ಗ್ರಹದ ಮೇಲೆ ಆತನಿಟ್ಟ ಮೊದಲ ಹೆಜ್ಜೆ ಜಗತ್ತಿನ ತಂತ್ರಜ್ಞಾನದಲ್ಲಿ ಕ್ಷಿಪ್ರಕ್ರಾಂತಿಯ ದಾಪುಗಾಲಾಗುತ್ತದೆಂದು ನಾವು ತಿಳಿದಿರಲಿಲ್ಲ.

ಖಗೋಳ ವಿಜ್ಞಾನದ ಈ ಕ್ರಾಂತಿಕಾರಿ ಹೆಜ್ಜೆಗಳಿಂದ ಗಾಳಿಪಟಗಳಂತೆ ಆಕಾಶಕ್ಕೆ ಹಾರಿದ ಭೂ ಉಪಗ್ರಹಗಳು ಸಂಪರ್ಕ ತಂತ್ರಜ್ಞಾನದಲ್ಲಿ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಉಂಟು ಮಾಡಿದ ಆವಿಷ್ಕಾರಗಳಿಂದ ೨೧ನೆಯ ಶತಮಾನದ ಆಧುನಿಕ ಜಗತ್ತು ಪ್ರತ್ಯಕ್ಷವಾಗಿದೆ. ಕ್ಷಣ ಕ್ಷಣಕ್ಕೆ ಬದಲಾಗುತ್ತಿದೆ. ಈ ಬದಲಾವಣೆಯು ಗತಿ ಕ್ಷಿಪ್ರವಾದದ್ದು. ಇಂತಹ ಆಧುನಿಕ ಜಗತ್ತಿನ ಮೂರ್ತರೂಪವಾಗಿ ಬಂದ ರೇಡಿಯೋಗಳು. ಟ್ರಾನ್ಸಿಸ್ಟರ್‌ಗಳು ಈಗ ಪಟಗುಟ್ಟುವ ಗುಜರಿ ಪೆಟ್ಟಿಗೆಯಂತೆ ಕಾಣುತ್ತವೆ. ಕಲರ್ ಟೆಲಿವಿಷನ್ ಬಂದು ಕಪ್ಪುಬಿಳುಪು ಟೆಲಿವಿಷನ್‌ಗಳು ರಿಮೋಟ್ ಕಂಟ್ರೋಲ್ ಡಿಜಿಟಲ್ ಟೆಲಿವಿಷನ್‌ಗಳು, ಸಿ.ಡಿ. ಪ್ಲೇಯರ್‌ಗಳು ಹಲವು ಕಂಪನಿಗಳ ಹಲವು ಮಾದರಿಗಳ ಈ ರೀತಿಯ ವಿನೂತನ ಸರಕುಗಳು ಮಾರುಕಟ್ಟೆಯನ್ನು ಈಗ ವಿಜೃಂಭಿಸತೊಡಗಿವೆ.

ಯಂತ್ರ ನಾಗರಿಕತೆಯು, ಸರಕು ಸಂಸ್ಕೃತಿಯ ಮಾಯಾ ಮೃಗವಾಗಿ ಹೊಸ ಸಹಸ್ರಮಾನದ ೨೧ನೆಯ ಶತಮಾನ ಮುಖಾಮುಖಿಯಾಗಿದೆ. ಇದೇ ಮುಕ್ತ ತಂತ್ರಜ್ಞಾನದ, ಮುಕ್ತ ಮಾರುಕಟ್ಟೆಯ ಜಾಗತೀಕರಣ. ಬಹುಮುಖಿಯಾಗಿದ್ದ ಜಗತ್ತು ಮಾರುಕಟ್ಟೆಯ ವರ್ಣರಂಜಿತವಾದ ಚುಂಬಕ ಶಕ್ತಿಯ ಗುರುತ್ವಾಕರ್ಷಣೆಯ ಕಡೆಗೆ ಸೆಳೆಯಲ್ಪಡುತ್ತಿದೆ. ರಾಷ್ಟ್ರೀಯತೆ, ಪ್ರಾದೇಶಿಕತೆಯ ವಿಕೇಂದ್ರೀಕರಣ ಭ್ರಮಾತ್ಮಕವಾದಂತೆ ಕಾಣುತ್ತದೆ. ಬಹುರಾಷ್ಟ್ರೀಯ ಕಂಪನಿಗಳು ರಾಷ್ಟ್ರಗಳ ಸ್ವಯಂ ನಿರ್ಧಾರದ ಹಕ್ಕನ್ನು ತೆಗೆದುಹಾಕಿವೆ. ರಾಷ್ಟ್ರ-ರಾಷ್ಟ್ರಗಳ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಯನ್ನೇ ಬದಲಾಯಿಸಿಬಿಟ್ಟಿವೆ. ಸಾಮಾಜಿಕ ಮೌಲ್ಯಗಳ ಸ್ಥಿತ್ಯಂತರವಾಗಿದೆ. ನೈತಿಕ ಮೌಲ್ಯಗಳು ಭೂಗತವಾಗಿವೆ. ನವ ಶ್ರೀಮಂತರು, ನವ ವ್ಯವಸಾಯಗಾರರು, ನವವಾಣಿಜ್ಯೋದ್ಯಮಿಗಳು ಮೂರ್ತರಾಗುತ್ತಿದ್ದಾರೆ. ಆಧುನಿಕ ತಂತ್ರಜ್ಞಾನ ಜಗತ್ತಿನ ಮನುಷ್ಯರ ಬುದ್ಧಿ ಮನಸ್ಸುಗಳನ್ನು ಮತ್ತು ಅವರ ಕನಸುಗಳನ್ನು ದೂರ ನಿಯಂತ್ರಣದ ಮಾಹಿತಿ ತಂತ್ರಜ್ಞಾನ (Remote Controlled Information Technology) ಜಾಲಕ್ಕೆ ಒಳಪಡಿಸಲಾಗಿದೆ. ಮಾರುಕಟ್ಟೆಯ ಪ್ರಭುತ್ವದ ಚಾಲಕ ಶಕ್ತಿ ಇದನ್ನೆಲ್ಲ ನಿಯಂತ್ರಿಸುತ್ತಿದೆ.

೨೦ನೆಯ ಶತಮಾನದ ಪ್ರಾರಂಭದಲ್ಲಿ ಸ್ವಾತಂತ್ರ್ಯ ಸಮಾನತೆ ಮತ್ತು ಸ್ವಾವಲಂಬನೆಯ ಕನಸುಗಳ ಆದರ್ಶಗಳ ಸಾಧನೆಗೆ ನಾವು ನಡೆಸಿದ ಹೋರಾಟಗಳೆಲ್ಲ ಬುಡಮೇಲಾಗಿ ಬಿದ್ದಿವೆ. ಸ್ವದೇಶಿ ಚಳವಳಿ, ವಿದೇಶಿ ಚಳವಳಿಯಾಗಿ ಪರಿವರ್ತನೆಗೊಂಡಿದೆ. ಗ್ರಾಮ ಸ್ವರಾಜ್ಯ ಸೈಬರ್

ಕಣಿವೆಯಾಗಿ, ಸೈಬರ್ ನಗರಗಳಾಗಿ ಮೂರ್ತವಾಗುತ್ತಿದೆ. ಸಮಾಜವಾದದ ಸಿದ್ಧಾಂತದಿಂದ ಪ್ರಚೋದಿತವಾದ ರಾಷ್ಟ್ರೀಕರಣ ಆಳುವ ವರ್ಗದ ಭ್ರಷ್ಟತೆ, ಮನುಷ್ಯರ ಅದಕ್ಷತೆ ಮತ್ತು ಸೋಮಾರಿ ತನದ ಜಡತ್ವದಿಂದ ಖಾಸಗೀಕರಣವಾಗಿ ಬದಲಾಯಿಸಿಬಿಟ್ಟಿದೆ. ಸಾಮಾಜಿಕ ನ್ಯಾಯ ಸಿದ್ಧಾಂತ ಶಿಥಿಲವಾಗಿ ದುರ್ಬಲವಾಗುತ್ತಿದೆ.

ಬಡವರ, ಅಸಹಾಯಕರ, ದುರ್ಬಲ ವರ್ಗದ ಸೇವೆ ಮಾಡಬೇಕಾದ ಸರ್ಕಾರಿ ಬಸ್ಸುಗಳು ಮುಂತಾದ ಸಾರ್ವಜನಿಕ ಸೇವಾ ಸಂಸ್ಥೆಗಳು ಅಸಹ್ಯವಾಗುವಷ್ಟು ಹಾಳು ಬಿದ್ದಿವೆ. ಸರ್ಕಾರವೇ ಇವನ್ನೆಲ್ಲ ನಡೆಸಲಾಗದಷ್ಟು ದುರ್ಬಲವಾಗಿ ಖಾಸಗೀಕರಣಕ್ಕೆ ಹಸ್ತಾಂತರ ಮಾಡುತ್ತಿದೆ.

೨೧ನೆಯ ಶತಮಾನದ ಹೊಸ್ತಿಲಲ್ಲಿ ವಾಣಿಜ್ಯೋದ್ಯಮದ ಮಾರುಕಟ್ಟೆಯಲ್ಲಿ ತಾಂಡವವಾಡುತ್ತಿರುವ ಜಗಜಗಿಸುತ್ತಿರುವ ಸಂಭ್ರಮ ಸಡಗರದ ಪಾದರಸದ ಚಲನೆ ಮಾಯಾಮೃಗದಂತೆ ಕಾಣುತ್ತದೆ. ನಮ್ಮ ಹಳ್ಳಿಗಾಡುಗಳ ಗ್ರಾಮೀಣ ಪರಿಸರದ ವಿದ್ಯಮಾನಗಳು ಮಂಕುಕವಿದಂತೆ ಜಡವಾಗಿರುವುದು ಆತಂಕ ಹುಟ್ಟಿಸುತ್ತದೆ. ಸಣ್ಣ ಪುಟ್ಟ ರೈತರು ತಾವು ಬೆಳೆದ ಫಸಲಿಗೆ ಕೃಷಿ ಮಾರುಕಟ್ಟೆಯಲ್ಲಿ ಉಂಟಾದ ಬೆಲೆಗಳ ಯದ್ವಾತದ್ವಾ ಕುಸಿತದಿಂದ ಆರ್ಥಿಕ ಆಧಾರದ ಭರವಸೆ ಇಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು, ಗ್ರಾಮೀಣ ಜನರ ದುರಂತದ ಭವಿಷ್ಯವನ್ನು ಸೂಚಿಸುತ್ತದೆ. ರೈತನ ಬೆಳೆಗಳಿಗೆ ಮುಕ್ತ ಮಾರುಕಟ್ಟೆ ಇಲ್ಲ. ಅವನು ಬೆಳೆದ ಬೆಳೆಯ ಬೆಲೆಯನ್ನು ವ್ಯಾಪಾರಿ ನಿರ್ಧರಿಸುತ್ತಾನೆ. ಅವುಗಳ ಚಲನೆಯನ್ನು ಸರ್ಕಾರ ನಿರ್ಧರಿಸುತ್ತಿದೆ.

ಬಹುರಾಷ್ಟ್ರೀಯ ಕಂಪನಿಗಳು ತಳಿ ವಿಜ್ಞಾನದ ಮತ್ತು ಬೀಜ ತಂತ್ರಜ್ಞಾನದ ಮೂಲಕ ಕೃಷಿ ವಿದ್ಯಮಾನಗಳನ್ನು ನಿರ್ಬಂಧಿಸಲು ಮತ್ತು ನಿಯಂತ್ರಿಸಲು ಜಾಗತಿಕ ಮಾರುಕಟ್ಟೆಯ ಕಾನೂನುಗಳನ್ನು ಜಾರಿಗೆ ತರುತ್ತಿರುವುದರಿಂದ ಉಂಟಾಗುತ್ತಿರುವ ಅಸಮತೋಲನದಿಂದ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಕೃಷಿ ಕ್ಷೇತ್ರ ಗಂಡಾಂತರದಲ್ಲಿದೆ.

ಕೈಗಾರಿಕೋದ್ಯಮ ಕ್ಷೇತ್ರದಲ್ಲಿ ದೇಶೀಯವಾದ ಸಣ್ಣ ಕೈಗಾರಿಕೆಗಳು ನಿರ್ನಾಮವಾಗಿ ದೊಡ್ಡ ಕಂಪನಿಗಳ ಸರಕು ಅತ್ಯಾಕರ್ಷವಾಗಿ ಮಾರುಕಟ್ಟೆಯನ್ನು ಪ್ರವೇಶಿಸುತ್ತಿರುವುದರಿಂದ ನಿರುದ್ಯೋಗಿಗಳ ಸಂಖ್ಯೆ ಅಧಿಕವಾಗುತ್ತಿದೆ. ಎಸ್.ಎಸ್.ಎಲ್.ಸಿ, ಪಿ.ಯು.ಸಿ ಮತ್ತು ಬಿ.ಎ, ಬಿ.ಎಸ್‌ಸಿ, ಜನರಲ್ ಡಿಗ್ರಿಗಳನ್ನು ಪಡೆದವರು ಯಾವ ಕಾರ್ಯಕ್ಷಮತೆ ಇಲ್ಲದ ನಿರುದ್ಯೋಗಿಗಳ ತಂಡವನ್ನು ಸೇರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ನ್ಯೂ ಮಿಲೆನಿಯಮ್‌ನ ಈ ರೀತಿಯ ಉನ್ಮಾದದ ಹಿಂದೆ ಈ ದುರಂತಗಳೆಲ್ಲ ಕಾದು ನಿಂತಿರುವುದು ಈ ಸರಕು ಸಂಸ್ಕೃತಿಯ ಯಾಂತ್ರಿಕತೆಯ ಮಾಯಾ ಮೃಗದ ಮೋಹದ ಮೈಮರೆವಿನಲ್ಲಿ ನಮಗೆ ಕಾಣದೆ ಹೋಗಬಹುದು.

ಮುಕ್ತ ಜಗತ್ತಿನ ಜಾಗತೀಕರಣದ ಸಮೂಹಸನ್ನಿಯಲ್ಲಿ ನಮ್ಮ ಬುದ್ಧ, ನಮ್ಮ ಗಾಂಧಿ, ನಮ್ಮ ಬಸವಣ್ಣ, ನಮ್ಮ ಅಂಬೇಡ್ಕರ್ ಎಲ್ಲ ಪರಕೀಯರಾಗಿ ಬಿಡಬಹುದು.

ಅಮೆರಿಕಾದ ಮೈಕಲ್ ಜಾಕ್ಸನ್ ಕಂಪ್ಯೂಟರ್ ಯುಗದ ನವ ಪೀಳಿಗೆಯ ತರುಣರಿಗೆ ಸಾಂಸ್ಕೃತಿಕ ಹೀರೋ ಆಗಿಬಿಡಬಹುದು.

ಹೊಸ ಯುಗದ ಹೊಸ್ತಿಲಲ್ಲಿ ನಿಂತಿರುವ ನಾವು ನೀವು ಎಲ್ಲ ಹೀಗಾಗದಿರಲಿ ಎಂದು ಬಯಸೋಣ, ಹೀಗಾಗದಿರಲಿ ಎಂದು ಎಲ್ಲಾ ಸೇರಿ ಪ್ರಯತ್ನಿಸೋಣ. ನವ ಸಾಮ್ರಾಜ್ಯಶಾಹಿ, ಕಂಪ್ಯೂಟರ್ ಮುಖವಾಡದಿಂದ ನಮ್ಮನ್ನು ಮತ್ತೆ ಮತ್ತೆ ವಂಚಿಸದಂತೆ ಎಚ್ಚರವಾಗಿರೋಣ. ಈ ಪರಿಸ್ಥಿತಿಯನ್ನು ಎದುರಿಸಲು ಮತ್ತು ಪ್ರತಿಭಟಿಸಲು 'ಚರಕ'ವನ್ನೇ ಅಸ್ತ್ರವನ್ನಾಗಿ ಸಜ್ಜಾಗಿ ಇಟ್ಟುಕೊಳ್ಳೋಣ.

ಕಾಲ ಅಖಂಡವಾದದ್ದು, ಕಾಲ ಅನಂತವಾದದ್ದು ಮತ್ತು ಕಾಲ ನಿರ್ಗುಣವಾದದ್ದು. ಕಾಲ ಚಕ್ರ ತಿರುಗುತ್ತಲೇ ಇರುತ್ತದೆ. ಕಾಲದ ಚಲನೆಯನ್ನು ನಿರ್ಬಂಧಿಸಲಾಗುವುದಿಲ್ಲ. ಕಾಲದ ಚಲನೆಯನ್ನು ಸ್ವಾಗತಿಸೋಣ:ಕಾಲಾಯ ತಸ್ಮೈನಮಃ

ಈ ಹೊಸ ಸಹಸ್ರಮಾನದ ಸಂದರ್ಭದಲ್ಲಿ ವರಕವಿ ದ.ರಾ.ಬೇಂದ್ರೆ ಯವರ 'ಹಕ್ಕಿ ಹಾರುತಿದೆ ನೋಡಿದಿರಾ?" ಕವಿತೆಯ ಕೆಲವು ಸಾಲುಗಳು ನೆನಪಾಗುತ್ತಿವೆ:

ಇರುಳಿರುಳಳಿದು ದಿನದಿನ ಬೆಳಗೆ
ಸುತ್ತಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ?
ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ-ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ ?
ಯುಗ ಯುಗಗಳ ಹಣೆಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುವ ಚೇತನಗೊಳಿಸಿ
ಹೊಸಗಾಲದ ಹಸು ಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

## ಹೋರಾಟದ ಹಾದಿಯಲ್ಲಿ ಹಾಸ್ಯದ ರಾಶಿ ಮತ್ತು....

ಪ್ರೊ. ಕೆ. ರಾಮದಾಸ್

೧೯೭೬ ಅಂತ ಕಾಣುತ್ತೆ. ಆಗ ದೇಶದ ಎಲ್ಲ ಕಡೆ ಒಂದು ಚಳವಳಿ ನಡೀತಾ ಇತ್ತು. ಅದೇನು ಅಂದ್ರೆ, ಭಾರತದಲ್ಲಿ ಸಾಮ್ರಾಜ್ಯಶಾಹಿಯ ಕುರುಹುಗಳನ್ನು ಅಳಿಸಿಹಾಕುವಂಥದ್ದು. ಆ ದಿನಗಳಲ್ಲಿ ಬೆಂಗಳೂರು; ದೆಹಲಿ, ಮುಂಬೈ, ಕೋಲ್ಕತಾ ಮುಂತಾದ ನಗರಗಳಲ್ಲಿದ್ದ ವಿಕ್ಟೋರಿಯಾ ರಾಣಿ ಮತ್ತಿತರರ ಪ್ರತಿಮೆಗಳನ್ನು ತೆಗೆದುಹಾಕಲಾಗುತ್ತಿತ್ತು. ಆಗ ನಾವೇನು ಮಾಡೋದು ಅಂತ ಯೋಚಿಸಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಎದುರು ಡೆವಿಡ್‌ಸನ್ ಗೋರ್ಡಾನ್ ಅಂತ ಒಬ್ಬ ಬ್ರಿಟಿಷ್ ಅಧಿಕಾರಿ ಪ್ರತಿಮೆ ಇದೆ. ಅದನ್ನು ತೆಗೆದುಹಾಕುವಂತೆ ಜಿಲ್ಲಾಧಿಕಾರಿಗೆ ಮನವಿ ನೀಡಿದೆವು. ನೀವು ತೆಗೆಯದಿದ್ದರೆ ನಾವೇ ಆ ಕೆಲಸಕ್ಕೆ ಮುಂದಾಗಬೇಕಾಗುತ್ತದೆ ಎಂದು ಒಂದು ವಾರ ಗಡುವು ನೀಡಿದ್ದೆವು. ಗಡುವು ಮುಗಿದರೂ ತೆಗೆಯಲಿಲ್ಲ. ಆಗ ಅದನ್ನು ತೆರವುಗೊಳಿಸಲು ನಾವೇ ಮುಂದಾದಾಗ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿದ್ದರು.

ನಂಜುಂಡಸ್ವಾಮಿ ಸೇರಿದಂತೆ ನಾವು ಇದ್ದದ್ದು ಸುಮಾರು ೨೫ ಮಂದಿ. ಪೊಲೀಸರಿದ್ದದ್ದು ಸುಮಾರು ಆರುನೂರು ಮಂದಿ. ಆಗ ನಾವು ಭಾಷಣ ಮಾಡಿ 'ನೀವು ಈಗಲೂ ಸಾಮ್ರಾಜ್ಯಶಾಹಿಗಳಿಗೆ ಬೆಂಬಲವಾಗಿದ್ದೀರಿ, ಪ್ರಜಾಪ್ರಭುತ್ವವನ್ನು ಗೌರವಿಸಿ ಎಂದು ಹೇಳಿ ವಾಪಸ್ ಬಂದೆವು. ಏನು ಹೀಗಾಯ್ತಲ್ಲಾ ಅಂದೆ. ಅದಕ್ಕೆ ನಂಜುಂಡಸ್ವಾಮಿ, ಏನಾದ್ರು ಬೇರೆ ಪ್ಲಾನ್ ಮಾಡೋಣ ಅಂದ್ರು. ಸಮಾಜವಾದಿ ಅಡ್ವೊಕೇಟ್ ಟಿ.ಎನ್. ನಾಗರಾಜು ನಮ್ಮ ಮಾರ್ಗದರ್ಶಿಯಾಗಿದ್ದರು. ನಂಜುಂಡಸ್ವಾಮಿ ಗುರುಗಳು. ಅವರ ಹತ್ತಿರ ಎರಡು ಸ್ಟೇಷನ್ ವ್ಯಾಗನ್ ವಾಹನ ಇತ್ತು. ಅದನ್ನ ತಗೊಂಡು ಹೋಗಿ ರಾತ್ರಿ ಪ್ರತಿಮೆಗೆ ಕಟ್ಟಿ ಎಳೆಸುವುದು ಅಂತ ತೀರ್ಮಾನಿಸಿದೆವು. ಎಲ್ಲ ಸಿದ್ಧತೆ ಮಾಡಿಕೊಂಡು ರಾತ್ರಿ ಎರಡು ಬಾವಿ ಹಗ್ಗಗಳನ್ನು ಪ್ರತಿಮೆ ಕೊರಳಿಗೆ ಕಟ್ಟಿ ಎಳೆಸಲು ಪ್ರಯತ್ನ ಮಾಡಿದೆವು. ಪ್ರೊಫೆಸರ್ ಡ್ರೈವಿಂಗ್ ಮಾಡಿದರು.

ಪ್ರಯತ್ನ ಫಲಕಾರಿಯಾಗಲಿಲ್ಲ. ಕಟ್ಟಿದ ಹಗ್ಗ ತುಂಡಾಗಿ ಡೆವಿಡ್‌ಸನ್ ಗೋರ್ಡಾನ್‌ಗೆ ಟೈ ಕಟ್ಟಿದಂತೆ ಸರಿಯಾಗಿ ಎದೆಯ ಭಾಗದಲ್ಲಿ ತುಂಡಾಯಿತು. ಆ ರಾತ್ರಿ ಹಾಗೆಯೇ ವಾಪಸಾದೆವು.

ಮರುದಿನ ಸುತ್ತಿಗೆ ತೆಗೆದುಕೊಂಡು ಹೋಗಿ ಒಡೆದು ಉರುಳಿಸಲು ತೀರ್ಮಾನಿಸಿ ರಾತ್ರಿ ಎಲ್ಲರೂ ಸೇರಿ ಪ್ರತಿಮೆ ಬಳಿ ಹೋಗಿ ಅದಕ್ಕೆ ಹೊಡೆದರೆ ಢಣ್, ಢಣ್ ಎಂದು ಸದ್ದು ಬರುತ್ತಿತ್ತೇ ವಿನಃ ಪ್ರತಿಮೆ ಸ್ವಲ್ಪವೂ ಮುಕ್ಕಾಗಲಿಲ್ಲ. ಅಷ್ಟೊತ್ತಿಗೆ ಪೊಲೀಸರು ಬಂದರು. ನಾವು ಅಲ್ಲಿಂದ ಪರಾರಿಯಾದೆವು. ನಂತರ ನಮ್ಮ ಜತೆಗಿದ್ದವನೊಬ್ಬ ತನಗೆ ಡೈನಮೆಟ್ ಇಡುವುದು ಗೊತ್ತು. ಅದರಿಂದ ಪ್ರತಿಮೆಯನ್ನು ಉಡಾಯಿಸಿಬಿಡುವುದಾಗಿ ಹೇಳಿದ. ಅದಕ್ಕೆ ಪ್ರೊಫೆಸರ್ ಒಪ್ಪಲಿಲ್ಲ. ಆ ರೀತಿಯ ಕೆಲಸಗಳಿಗೆ ಮುಂದಾಗದಂತೆ ಸಲಹೆ ನೀಡಿದರು. ನಾವು ಪ್ರಜಾಸತ್ತಾತ್ಮಕ ನೆಲೆಯಲ್ಲೇ ಹೋರಾಟ ಮಾಡಬೇಕು ಎಂದರು. ನಾವೆಲ್ಲ ನಾಳೆ ರಾತ್ರಿ ಪ್ರತಿಮೆಗೆ ಡಾಂಬರಿನ ಸ್ನಾನ ಮಾಡಿಸಿಬಿಡೋಣ ಎಂದರು. ಅದರಂತೆ ಒಪ್ಪಿ ಮರುದಿನ ಬೇರೆ ಕಡೆ ಡಾಂಬರ್ ಬಿಸಿ ಮಾಡಿ ಅದರ ಮೇಲೆ ಹತ್ತಿ ಸುರಿದೆವು. ಪ್ರತಿಮೆ ಸ್ವಲ್ಪವೂ ಜಗ್ಗಾಡಲಿಲ್ಲ. ಆಮೇಲೆ ಅದರ ಸುದ್ದಿಯನ್ನೇ ಬಿಟ್ಟುಬಿಟ್ಟೆವು. ಈಗಲೂ ಪ್ರತಿಮೆ ಇದೆ. ಹೀಗೆ ನಾವು ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುತ್ತೇವೆ ಎನ್ನುವುದನ್ನು ಅವರು ಒಂದು ರೀತಿಯ ತರಬೇತಿ ಶಿಬಿರದಂತೆ ಮಾಡುತ್ತಿದ್ದರು.

* * *

ಯಾವಾಗ್ಲೂ ತ್ರೀಪೀಸ್ ಸೂಟ್ ಹಾಕ್ಕೊಂಡು, ಬೌ ಕಟ್ಟಿಕೊಂಡು ಸಿಗರೇಟ್ ಸೇದ್ತಾ ಓಡಾಡ್ತಿದ್ದ ನಂಜುಂಡಸ್ವಾಮಿಯನ್ನ ನಾನು ನೋಡಿದ್ದೆ. ಅವರ ಡ್ರೆಸ್ಸು ಅಪ್ಪಟ ವಿದೇಶಿ ಮಾದರಿಯದ್ದು. ಅವರಿಗೆ ಕನ್ನಡವೇ ಬರೊಲ್ಲ ಅದ್ಕೊಂಡಿದ್ದೆ. ಯು. ಆರ್. ಅನಂತಮೂರ್ತಿ ಜತೆಗೆ ಓಡಾಡ್ತಿದ್ರು. ಅನಂತರ ಪರಿಚಯವಾಯ್ತು. ಒಂದು ದಿನ ತೇಜಸ್ವಿ ಮನೆಗೆ ಮೂಡಿಗೆರೆಗೆ ಹೋಗಬೇಕಾಗಿತ್ತು. ಆಗ ನಂಜುಂಡಸ್ವಾಮಿ ನಾನು ರಾತ್ರಿ ೧೦ ಗಂಟೆ ಸಮಯದಲ್ಲಿ ಮೈಸೂರಿನಿಂದ ಹಾಸನ ಮಾರ್ಗವಾಗಿ ನನ್ನ ಸ್ಕೂಟರ್‌ನಲ್ಲಿ ಹೊರಟೆವು. ಹಾಸನದ ಹತ್ತಿರ ಹೋಗುತ್ತಿದ್ದಂತೆ ವಿಪರೀತ ಮಳೆ ಸುರಿಯಲಾರಂಭಿಸಿತು. ಇವರ ಕೋಟು, ಬೌ ಎಲ್ಲ ತೊಪ್ಪೆಯಾಗಿ ಪಜೀತಿ ಆಗಿಬಿಡ್ತು. ಹ್ಯಾಗೋ ಎದ್ದು ಬಿದ್ದು ತೇಜಸ್ವಿ ಮನೆ ತಲುಪಿದೆವು. ಆಗ ಬೆಳಗಿನ ಜಾವ ಐದು ಗಂಟೆ. ಕಿಟಕಿಯಿಂದ ನೋಡಿದ ತೇಜಸ್ವಿ 'ಅಯ್ಯೋ. ಯಾಕ್ರಿ ಹೀಗ್ ಬಂದಿದೀರಿ' ಅಂತ ಬಾಗಿಲು ತೆಗೆದರು. ಅಲ್ಲಿ ಮಾತುಕತೆ ಮುಗಿಸಿ ವಾಪಸಾದೆವು. ವಾಪಸ್ ಬರುವಾಗ ಮೈಸೂರಿನ ಸಮೀಪದ ಬಿಳಿಕೆರೆಯಲ್ಲಿ ರಾತ್ರಿ ೯ರ ಸಮಯದಲ್ಲಿ ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಅಧಿಕಾರಿ ನಮ್ಮ ಸ್ಕೂಟರ್ ತಡೆದ. ಸ್ಮಗ್ಲಿಂಗ್ ನಡಿತಾ ಇದೆ. ಆದ್ದರಿಂದ ನಿಮ್ಮ ಸ್ಕೂಟರ್ ಚೆಕ್ ಮಾಡಬೇಕು. ಡಿಕ್ಕಿ ಬಾಕ್ಸ್ ಓಪನ್ ಮಾಡಿ ಅಂದ. (ಅದನ್ನು ತೆಗೆಯಲು ನಮ್ಮ ಹತ್ತಿರ ಕೀ ಇರಲಿಲ್ಲ.) ಆಗ ಪ್ರೊಫೆಸರ್ Who are you? ಎಂದರು. ಆತ ನಾನು ಅಬಕಾರಿ ಇನ್ಸ್‌ಪೆಕ್ಟರ್ ಎಂದ. ನಿಮ್ಮ ಗುರುತಿನ ಪತ್ರ ತೋರಿಸಿ ಎಂದರು. ಅದು ಅವನ

ಹತ್ತಿರ ಇರಲಿಲ್ಲ. ಅಲ್ಲೇ ಸಮೀಪದಲ್ಲಿ ಜೀಪಿನಲ್ಲಿ ಕುಳಿತಿದ್ದ ಹಿರಿಯ ಅಧಿಕಾರಿ ಇದನ್ನು ಕೇಳಿಸಿಕೊಂಡು ಹತ್ತಿರಕ್ಕೆ ಬಂದ. ಅವನಿಗೆ ವಿಪರೀತ ಸಿಟ್ಟು ಬಂತು. ನೀನು ಒಬ್ಬ ಬೇಜವಾಬ್ದಾರಿ ಅಧಿಕಾರಿ ಗುರುತಿನ ಪತ್ರ ಇಲ್ಲ ಎಂದಮೇಲೆ ನೀವೇ ಡಕಾಯಿತರು ಎಂದು ಪ್ರೊಫೆಸರ್, ಅವರನ್ನು ತರಾಟೆಗೆ ತೆಗೆದುಕೊಂಡರು. ತಕ್ಷಣ ಆ ಅಧಿಕಾರಿ, ಏನು ಬೇಜವಾಬ್ದಾರಿ ಮಾತನಾಡುತ್ತಿದ್ದೀರಿ ನಿಮ್ಮನ್ನು ಅರೆಸ್ಟ್ ಮಾಡುತ್ತೇನೆ ಎಂದ. ಅದಕ್ಕೆ ಪ್ರೊಫೆಸರ್ ಅದು ನಿನ್ನಿಂದ ಸಾಧ್ಯವಿಲ್ಲ ಎಂದರು. ಅಷ್ಟೊತ್ತಿಗೆ ಜನ ಸೇರಿದರು. ನನ್ನನ್ನು ಪಕ್ಕಕ್ಕೆ ಕರೆದು ಆ ಹಿರಿಯ ಅಧಿಕಾರಿ ಕೇಳಿದ. ಅವರು ಯಾರು ಅಂತ. ಆಗ ನಾನು ಹೇಳಿದೆ, ಅವರು ಮೈಸೂರಿನ ಶಾರದಾವಿಲಾಸ ಕಾಲೇಜಿನ ಕಾನೂನು ಪ್ರಾಧ್ಯಾಪಕರು. ನಂಜುಂಡಸ್ವಾಮಿ ಅಂತ ಅಂದೆ. ತಕ್ಷಣವೇ ಬಂದ ಆತ, 'ಕ್ಷಮಿಸಿ ಸಾರ್, ನಿಮ್ಮನ್ನು ತಕ್ಷಣ ಗುರುತಿಸಲು ಸಾಧ್ಯವಾಗಲಿಲ್ಲ. ದಯವಿಟ್ಟು ಹೊರಡಿ' ಎಂದ. ನನಗೆ ಆಗ ನಂಜುಂಡಸ್ವಾಮಿ ಜತೆಗೆ ಓಡಾಡುವುದರಿಂದ ಪೊಲೀಸರನ್ನ, ಅಧಿಕಾರಿಗಳನ್ನು ಹೇಗೆ ಎದುರಿಸಬೇಕು ಅನ್ನೋದು ಗೊತ್ತಾಗುತ್ತಾ ಬಂತು. ಮತ್ತೆ ಅವರ ನಡವಳಿಕೆಗಳನ್ನು ಗುರುತಿಸುವ ಶಕ್ತಿ ಬಂತು.

* * *

ಒಂದು ದಿನ ರೈತ ಸಂಘದ ಹುಡುಗರನ್ನು ಪೊಲೀಸರು ಹೊಡೆದಿದ್ದರು. ಅವರನ್ನು ನೋಡಿಕೊಂಡು ಬರಲು ನಾನು, ನಂಜುಂಡಸ್ವಾಮಿ ಆಸ್ಪತ್ರೆಗೆ ಹೋಗಿದ್ದೆವು. ಅಲ್ಲಿ ನೇತು ಹಾಕಿದ್ದ ಕೇಸ್ ಷೀಟ್ ತೆಗೆದು ಪ್ರೊಫೆಸರ್ ನೋಡುತ್ತಾ ನಿಂತಿದ್ದರು. ಆಗ ಅಲ್ಲಿಗೆ ಬಂದ ವ್ಯಕ್ತಿಯೊಬ್ಬ, ಅದನ್ನು ಡಾಕ್ಟರ್ ಮಾತ್ರ ನೋಡಬೇಕು, ನೀವು ನೋಡುವಂತಿಲ್ಲ ಎಂದ. ತಕ್ಷಣ Are you a Doctor ? ಎಂದು ಕೇಳಿದರು.

ಆತ Yes, I am a Doctor ಎಂದು ಉತ್ತರಿಸಿದ. Where is your Apron ? ಎಂದು First learn to wear apron then come ಎಂದು ಗದರಿದರು. ಇದು ಗೋಪ್ಯ ಯಾರೂ ಮುಟ್ಟಬಾರದು, ನೋಡಬಾರದು ಎಂದರೆ ಜನರ ಕೈಗೆ ಸಿಗುವಂತೆ ಯಾಕೆ ಇಟ್ಟಿದ್ದೀರಿ ಎಂದು ಪ್ರಶ್ನಿಸಿದರು. ವೈದ್ಯರ ಧಿರಿಸಿನಲ್ಲೇ ಇಲ್ಲದ ಆ ವ್ಯಕ್ತಿ ಪೆಚ್ಚುಮೋರೆ ಹಾಕಿಕೊಂಡು ಬಂದ ವೇಗದಲ್ಲೇ ಹಿಂದಿರುಗಿದ.

ಹೀಗೆ ಎಂಥ ಪರಿಸ್ಥಿತಿಯೇ ಇರಲಿ, ಅದನ್ನು ಸ್ವಲ್ಪವೂ ಅಂಜದೆ ಅಳುಕದೆ ನಿಭಾಯಿಸಿ ಬಿಡುತ್ತಿದ್ದರು.

* * *

ನಂಜುಂಡಸ್ವಾಮಿ ಹಿಂದೂನೋ, ಮುಸಲ್ಮಾನೋ, ಕ್ರಿಶ್ಚಿಯನ್ನೋ ಅಂತ ಬಹಳಷ್ಟು ಜನರಿಗೆ ಗೊತ್ತೇ ಇರಲಿಲ್ಲ. ಒಂದು ದಿನ ಹಿಂದೂ ಮುಸ್ಲಿಂ ಮದುವೆ ಮಾಡಿಸಿದರು. ಅನಂತರ ಪತ್ರಿಕಾಗೋಷ್ಠಿ ನಡೆಸಿದೆವು. ಆಗ ಭಗವದ್ಗೀತೆ, ಬೈಬಲ್, ಕುರಾನ್‌ಗಳು Most Reactionary Documents ಆದ್ದರಿಂದ ಅವುಗಳನ್ನು ಬೆಂಕಿಗೆ ಹಾಕಿ ಸುಡ್ತೀವಿ ಅಂದರು. ಆಗ

ಅದು ಭಾರಿ ದೊಡ್ಡ ಸುದ್ದಿಯಾಯಿತು. ಮುಸ್ಲಿಂ ರಾಷ್ಟ್ರಗಳಲ್ಲೆಲ್ಲಾ ಅದು ಕಾಳ್ಗಿಚ್ಚಿನಂತೆ ಹಬ್ಬಿದ್ದರಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಯಿತು. ಆಗ ಶ್ರೀಕಂಠಮೂರ್ತಿ ಅಂತ ಸಂಯುಕ್ತ ಕರ್ನಾಟಕ ಪತ್ರಿಕೆ ವರದಿಗಾರರೊಬ್ಬರಿದ್ದರು. ಅವರು ಬಂದು ಸಾರ್ ಕುರಾನ್‌ಗೂ ಬೆಂಕಿ ಹಚ್ತೀರಾ ಎಂದು ಪ್ರಶ್ನಿಸಿದರು. ಆಗ ಪ್ರೊಫೆಸರ್ Yes, we burn Kuran ಎಂದುಬಿಟ್ಟರು. ಅದು ದೊಡ್ಡ ಗಲಾಟೆ ಹಂತಕ್ಕೆ ತಲುಪಿಬಿಟ್ಟಿತು. ಆಗ ನಾವು ಹೋದ ಕಡೆಯೆಲ್ಲಾ ಪೊಲೀಸರು ನಮ್ಮನ್ನು ಕಾಯತೊಡಗಿದರು. ಹೀಗೆ ನಂಜುಂಡಸ್ವಾಮಿ ಅನೇಕ ಬಾರಿ ತಮ್ಮ ಕೈಮೀರಿದ ಮಾತುಗಳನ್ನಾಡಿಬಿಡುತ್ತಿದ್ದರು. ನಾವೆಲ್ಲಾ ಪೇಚಿಗೆ ಸಿಕ್ಕಿಕೊಂಡು ಒದ್ದಾಡುವಂತಹ ಸ್ಥಿತಿ ನಿರ್ಮಾಣವಾಗಿಬಿಡುತ್ತಿತ್ತು.

* * *

ಬೆಂಗಳೂರಿನ ರಾಮಕೃಷ್ಣ ಲಾಡ್ಜ್‌ನಲ್ಲಿ ಪ್ರೊಫೆಸರ್ ಯಾವಾಗಲೂ ಸಭೆ ಕರೆಯುತ್ತಿದ್ದರು. ನಾನು ತೇಜಸ್ವಿ ಎಲ್ಲ ಹೋಗ್ತಾ ಇದ್ವಿ. ಒಂದು ದಿನ ಮಾತಾಡ್ತಾ ನಾವು ನಾಳೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಬೇಕು ಎಂದಿದ್ದರು. ಅಲ್ಲಾ ಸಾರ್ ನಾವಿರೋದೇ ಇಪ್ಪತ್ತೈದು ಮಂದಿ. ಅದು ಹ್ಯಾಗೆ ಸಾಧ್ಯ ಎನ್ನುತ್ತಿದ್ದೆವು. ಅವರು ಅನೇಕ ಸಂದರ್ಭದಲ್ಲಿ ಶಕ್ತಿಮೀರಿ ಮಾತನಾಡಿಬಿಡುತ್ತಿದ್ದರು. ಅದು ಹಾಸ್ಯಾಸ್ಪದವಾಗಿ ಕಾಣುತ್ತಿತ್ತು.

* * *

ನಾವೆಲ್ಲಾ ಸೇರಿಕೊಂಡು ಸಮಾಜವಾದಿ ಯುವಜನ ಸಭಾದಿಂದ ಕರ್ನಾಟಕ ಪ್ರವಾಸ ಮಾಡಬೇಕು ಅಂತ ತೀರ್ಮಾನಿಸಿದ್ದೆವು. ಅದರಂತೆಯೇ ಒಂದು ಬಾಡಿಗೆ ಕಾರು ಮಾಡಿಕೊಂಡು ಪ್ರವಾಸ ಆರಂಭಿಸಿದೆವು. ಆದರೆ ನಮ್ಮ ಯಾರ ಹತ್ತಿರವೂ ಹಣವಿರಲಿಲ್ಲ. ಪ್ರೊಫೆಸರ್ ಕಡೆಗೋ ಹಣವಿರುತ್ತಿರಲಿಲ್ಲ. ಬರುತ್ತಿದ್ದ ಸ್ವಲ್ಪ ಸಂಬಳ ಯಾವುದಕ್ಕೂ ಸಾಕಾಗುತ್ತಿರಲಿಲ್ಲ. ಆದರೂ ಒಂದು ಬಾಡಿಗೆ ಕಾರು ಮಾಡಿಕೊಂಡು ಪ್ರೊಫೆಸರ್, ನಾನು, ಪ.ಮಲ್ಲೇಶ್ ಸೇರಿದಂತೆ ಐದು ಜನ ಪ್ರವಾಸ ಆರಂಭಿಸಿದ್ದೆವು. ಆ ಪ್ರವಾಸದಲ್ಲಿ ಎರಡು ಉದ್ದೇಶಗಳನ್ನು ಇಟ್ಟುಕೊಂಡಿದ್ದೆವು. ಮೊದಲನೆಯದು ಪ್ರೊಫೆಸರ್ ನಡೆಸುತ್ತಿದ್ದ 'ಮಾನವ' ಪತ್ರಿಕೆಗೆ ಚಂದಾದಾರರನ್ನು ಮಾಡಿಸುವುದು. ಎರಡನೆಯದು ಸಮಾಜವಾದಿ ಯುವಜನ ಸಭಾವನ್ನು ಸಂಘಟಿಸುವುದು.

ಮೈಸೂರಿನಿಂದ ಆರಂಭವಾದ ನಮ್ಮ ಪ್ರಯಾಣ ಶಿವಮೊಗ್ಗ ತಲುಪಿತು. ಶಿವಮೊಗ್ಗಕ್ಕೆ ಹೊಂದಿಕೊಂಡಿರುವ ಪುರದಾಳು ಎಂಬ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದುದನ್ನು ಗಮನಿಸಿದ ಪ್ರೊಫೆಸರ್ ಪತ್ರಿಕಾಗೋಷ್ಠಿ ನಡೆಸಿ, ಶಿವಮೊಗ್ಗದಂತಹ ಮಲೆನಾಡು ಪ್ರದೇಶದಲ್ಲಿ ಅದೂ ನಗರಕ್ಕೆ ಹೊಂದಿಕೊಂಡಿರುವ ಗ್ರಾಮದಲ್ಲಿ ಕುಡಿಯುವ ನೀರಿನ ಬವಣೆ ಎಂದರೆ ನಾಚಿಕೆಯಾಗುವಂಥದ್ದು ಎಂದು ರಾಜಕಾರಣಿಗಳ ಮೇಲೆ ಹರಿಹಾಯ್ದರು. ಇಂಥ ಸಮಸ್ಯೆಗಳನ್ನು ನಿವಾರಿಸಲು ಸಮಾಜವಾದಿ ಯುವಜನ ಸಭಾ ಶ್ರಮಿಸಲಿದೆ. ಸಭಾ ಕರ್ನಾಟಕದಲ್ಲಿ ದಿನಕ್ಕೊಂದು ಬಾವಿ ತೆಗೆದು ರಾಜ್ಯದ ಜನತೆಗೆ ಕುಡಿಯುವ ನೀರೊದಗಿಸಲಿದೆ ಎಂದು ಹೇಳಿಬಿಟ್ಟರು. ಯಾರು

ಬಾವಿ ತೆಗೆಯುವುದು? ಅದಕ್ಕೆ ಸಮಯ ಎಷ್ಟು? ಶ್ರಮ ಎಷ್ಟು? ಮತ್ತೆ ನೀರು ಸಿಗುತ್ತೋ ಇಲ್ಲವೋ ಎಂಬುದರ ಬಗ್ಗೆ ಯಾವುದೇ ರೀತಿಯ ಯೋಚನೆ ಮಾಡದೆ ಹೇಳಿಬಿಡುತ್ತಿದ್ದರು. ನಾವು ಆ ಮೇಲೆ ಪೆಚ್ಚುಮೋರೆ ಹಾಕಿಕೊಂಡು ಓಡಾಡುತ್ತಿರಬೇಕಾಗುತ್ತಿತ್ತು.

* * *

ಚಾಮರಾಜನಗರ ಸಮೀಪದಲ್ಲಿರುವ ಕೆ.ಪಿ. ಶಾಂತಮೂರ್ತಿ ಅವರ ಊರಲ್ಲಿ ಒಂದು ಸಭೆ ನಡೆಸಿದವು. ಆ ಊರಲ್ಲಿ ಲಿಂಗಾಯತರೇ ಬಹುಸಂಖ್ಯಾತರು. ಒಂದು ಲಿಂಗಾಯತರ ಮನೆ ಕಟ್ಟೆ ಮೇಲೆ ಸಭೆ ಏರ್ಪಾಡಾಗಿತ್ತು. ಪ್ರೊಫೆಸರ್ ಭಾಷಣ ಆರಂಭಿಸಿದರು. ಈ ಊರಲ್ಲಿ ಹೆಚ್ಚಾಗಿ ಲಿಂಗಾಯತರಿದ್ದೀರಿ. ಬಸವಣ್ಣನ ಅನುಯಾಯಿಗಳು ಅಂತ ನಾನೇನೂ ನಿಮ್ಮನ್ನು ತಿಳಿದಿಲ್ಲ. ಎಲ್ಲ ಜಾತಿಗಳಂತೆ ನೀವು ಜಾತಿ ಬುದ್ಧಿ ಬಿಟ್ಟಿಲ್ಲ. ನೀವಾಯ್ತು ನಿಮ್ಮ ತಾಯ್ಗಂಡತನದ ರಾಜಕಾರಣ ಆಯ್ತು ಎಂದುಬಿಟ್ಟರು. ನಾವು ಏಟು ಗ್ಯಾರಂಟಿ ಅಂದುಕೊಂಡೆವು. ಆದರೆ ಜನ ಯಾರೂ ಪ್ರತಿಕ್ರಿಯೆ ನೀಡಲೇ ಇಲ್ಲ. ತಪ್ಪಿಸಿಕೊಂಡರೆ ಸಾಕು ಎಂದು ನಾವು ಅಲ್ಲಿಂದ ಹೊರಬಂದೆವು.

* * *

ಈಗಿನ ಹಾವೇರಿ ಜಿಲ್ಲೆಯ ಬ್ಯಾಡಗಿ ಧಾರವಾಡ ಜಿಲ್ಲೆಯಲ್ಲಿತ್ತು. ಬ್ಯಾಡಗಿಯಲ್ಲಿ ಒಂದು ರೈತ ಸಭೆ ಏರ್ಪಾಡಾಗಿತ್ತು. ಸುಮಾರು ೩೦೦ ಜನ ರೈತರು ಸೇರಿದ್ದರು. ಅವರೆಲ್ಲಾ ಉತ್ತರ ಕರ್ನಾಟಕದ ಶೈಲಿಯಲ್ಲಿ ಕಚ್ಚೆ ಪಂಚೆ, ಬಿಳಿ ಟೋಪಿ ಹಾಕಿಕೊಂಡು ಕುಳಿತಿದ್ದರು. ಅದನ್ನು ನೋಡಿದ ನಂಜುಂಡಸ್ವಾಮಿ, ನಿಮಗೆ ಐದು ನಿಮಿಷ ಸಮಯ ಕೊಡ್ತೀನಿ. ಅಷ್ಟರೊಳಗೆ ನೀವೆಲ್ಲರೂ ಟೋಪಿಗಳನ್ನು ತೆಗೆದು ನಿಮ್ಮ ಜೇಬಿನಲ್ಲಿಟ್ಟುಕೊಳ್ಳಿರಿ. ಅದು ಕಾಂಗ್ರೆಸ್‌ನ ಚಿಹ್ನೆ. ಕಾಂಗ್ರೆಸ್ ಈ ದೇಶವನ್ನು ಲೂಟಿ ಮಾಡಿದ ಪಕ್ಷ. ಆದ್ದರಿಂದ ನಮ್ಮ ಸಂಘಟನೆ ಅದನ್ನು ಇಷ್ಟಪಡುವುದಿಲ್ಲ. ಅದರ ವಿರುದ್ಧ ನಾವು ಪ್ರತಿಭಟಿಸಬೇಕು ಎಂದು ತಮ್ಮ ವಾಚ್ ನೋಡಿಕೊಳ್ಳಲಾರಂಭಿಸಿದರು. ಆತಂಕ ಪ್ರಾರಂಭವಾಯಿತು. ಯಾರೂ ಟೋಪಿ ತೆಗೆಯಲಿಲ್ಲ. ವೇದಿಕೆಯಲ್ಲಿ ಸಭೆಯ ಸಂಘಟಕರೊಬ್ಬರಿದ್ದರು. ಅವರು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ತಾವು ಧರಿಸಿದ್ದ ಟೋಪಿಯನ್ನು ತೆಗೆದು ಟೇಬಲ್ ಮೇಲೆ ಇಟ್ಟರು. ತಕ್ಷಣ ಎಲ್ಲರೂ ಟೋಪಿ ತೆಗೆದರು. ಅಲ್ಲಿ ಗಲಾಟೆ ಆಗುತ್ತೆ ಅಂದ್ಕೊಂಡಿದ್ವಿ, ಹಾಗಾಗಲಿಲ್ಲ. ಅದು ಪ್ರೊಫೆಸರ್‌ಗೆ ಇದ್ದ ಒಂದು ರೀತಿಯ ಧೈರ್ಯ ಮತ್ತು ಆತ್ಮವಿಶ್ವಾಸ.

* * *

ಪೂರ್ಣಚಂದ್ರ ತೇಜಸ್ವಿ, ನಂಜುಂಡಸ್ವಾಮಿ, ನಾನು ಮತ್ತೆ ಇನ್ನೊಂದು ನಾಲ್ಕು ಜನ ಸೇರಿಕೊಂಡು ಮೇಲುಕೋಟೆ ನೋಡೋಣ ಅಂತ ಹೋಗಿದ್ದೆವು. ಅಲ್ಲಿ ಹೋಗುತ್ತಿದ್ದಾಗ ನಮ್ಮನ್ನ ಕೆಲವರು ತಡೆದು ನೀವು ಇಲ್ಲಿ ಚಪ್ಪಲಿ ಹಾಕಿಕೊಂಡು ಹೋಗುವಂತಿಲ್ಲ, ಕಾರಣ

ಅಲ್ಲಿ ದೇವಸ್ಥಾನವಿದೆ, ಇಲ್ಲಿ ಗರುಡಗಂಬ ಇದೆ. ಆದ್ದರಿಂದ ನಡುವೆ ನಡೆದು ಹೋದರೆ ದೇವರಿಗೆ ಅಪಚಾರ ಮಾಡಿದಂತಾಗುತ್ತದೆ. ಆದ್ದರಿಂದ ನೀವು ಹೋಗುವುದಾದರೆ ಅಲ್ಲಿ ಸುತ್ತಿಕೊಂಡು ಹೋಗಿ ಎಂದು ರಸ್ತೆಯೊಂದನ್ನು ತೋರಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಪ್ರೊಫೆಸರ್, 'ಇದು ಸರಕಾರಿ ರಸ್ತೆ. ಇದೇನು ದೇವಸ್ಥಾನದ್ದಾ? ಸರಕಾರಿ ರಸ್ತೆಯಲ್ಲಿ ಚಪ್ಪಲಿ ಹಾಕಿಕೊಂಡು ಹೋಗಬಾರದು ಅಂದ್ರೆ ಹ್ಯಾಗೆ. ಚಪ್ಪಲಿಯನ್ನೇನು ತಲೆ ಮೇಲೆ ಇಟ್ಟುಕೊಂಡು ಹೋಗೋದಕ್ಕಾಗುತ್ತಾ' ಎಂದು ಗುಡುಗಿದರು. ನೀವು ಗರುಡಗಂಬ ಒಂದು ಕಡೆ ಬಿಟ್ಟು, ದೇವಸ್ಥಾನ ಒಂದು ಕಡೆ ಬಿಟ್ಟು, ಮಧ್ಯದಲ್ಲಿ ರಸ್ತೆ ಯಾಕೆ ಮಾಡಿದ್ರಿ. ಅದಕ್ಕೆ ನಾವು ಜವಾಬ್ದಾರರಲ್ಲ. ಊರುತುಂಬಾ ಗರುಡಗಂಬ ಇದಾವೆ. ಹಾಗಂದ್ರೆ ನಾವು ಎಲ್ಲೂ ಓಡಾಡೋಕೆ ಆಗಲ್ಲವಲ್ಲ ಎಂದರು. ಬಿಸಿಲು ಸುಡುತ್ತಿದೆ, ನಾನು ಚಪ್ಪಲಿ ಬಿಟ್ಟು ಹೋಗೋಕೆ ಸಾಧ್ಯವಿಲ್ಲ ಎಂದು ಹೇಳಿದರು. ಆಗ ಆ ಕಡೆಯಿಂದ ಬಂದ ಗಾರ್ಡ್ ಒಬ್ಬ, ಇಲ್ಲ ಸಾರ್, ಮಂತ್ರಿಗಳು ಬಂದರೂ ಅದನ್ನ ಪಾಲಿಸ್ತಾರೆ ಎಂದ. ಅವರು ಪಾಲಿಸಬಹುದಪ್ಪ ನಾವು ದೇವಸ್ಥಾನಕ್ಕೆ ಬಂದೋರು ಅಲ್ಲ, ದೇವಸ್ಥಾನದ ಒಳಗಡೆ ಬರೋದೂ ಇಲ್ಲ. ನಮ್ಮ ಪಾಡಿಗೆ ನಾವು ಆ ಕಡೆ ಹೋಗ್ತೀವಿ. ಅದೇನು ಮಾಡ್ತೀರೋ ನೋಡ್ತೀನಿ ಎಂದು ಅವರು ಮುಂದೆ ನಡೆದರು. ನಾವು ಅವರನ್ನು ಹಿಂಬಾಲಿಸಿದೆವು.

ನಾವು ಆ ಕಡೆ ಹೋದ ಮೇಲೆ ಅಲ್ಲೆಲ್ಲಾ ಪುರೋಹಿತರು ಮತ್ತಿತರರು ಸೇರಿದರು. ಅಲ್ಲಿ ನಮ್ಮನ್ನು ತಡೆದವರಿಗೆ ಏನು ಮಾಡಬೇಕು ಅಂತಾನೇ ಗೊತ್ತಾಗಲಿಲ್ಲ. ಹೋಗಿ ಹೋಗಿ ದೇವರು ನಿಮಗೆ ಪಾಠ ಕಲಿಸ್ತಾನೆ ಎಂದರು. ಅದಕ್ಕೆ ದೇವರು ಮೊದಲು ನಿಮಗೆ ಪಾಠ ಕಲಿಸಲಿ. ಯಾರಿಗೆ ಏನು ಹೇಳಬೇಕು ಅನ್ನೋದನ್ನು ಆಮೇಲೆ ನಮಗೆ ಕಲಿಸಲಿ ಎಂದು ಪ್ರೊಫೆಸರ್ ತಿರುಗಿ ಹೇಳಿದರು. ಅಲ್ಲೂ ಊರಿನ ಜನತೆ ಸೇರಿಬಿಡುವ ಅಪಾಯವಿತ್ತು. ಅದು ತಪ್ಪಿತು.

* * *

ನಾವೆಲ್ಲಾ ಆಗ ಜಾತಿ ಸಮ್ಮೇಳನಗಳ ವಿರುದ್ಧ ಪ್ರತಿಭಟನೆ ಮಾಡ್ತಾ ಇದ್ವಿ. ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಅಖಿಲ ಭಾರತ ವೀರಶೈವ ಸಮ್ಮೇಳನ ನಡೀತಾ ಇತ್ತು. ಆಗ ನಂಜುಂಡಸ್ವಾಮಿ ಹೇಳಿದ್ರು, ನಮ್ಮಲ್ಲಿ ಬಹಳ ಜನ ವೀರಶೈವ ಬಣಕ್ಕೆ ಸೇರಿದವರಿದ್ದೇವೆ. ನಾವೇ ಪ್ರತಿಭಟನೆ ಮಾಡದೇ ಹೋದ್ರೆ ಇವರು ರಾಜೀ ಮಾಡಿಕೊಂಡಿದ್ದಾರೆ ಅಂತ ತಿಳಿದುಕೊಳ್ತಾರೆ ಎಂದರು. ಜಿ.ಎಸ್. ಶಿವರುದ್ರಪ್ಪ, ಲಂಕೇಶ್, ಚಿದಾನಂದಮೂರ್ತಿ, ಪ್ರಭುಶಂಕರ, ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ನಾನು, ಸುಂದರೇಶ್ ಪ್ರತಿಭಟನೆ ಮಾಡಲು ನಿರ್ಧರಿಸಿ ಸುಮಾರು ೧೫೦ ಜನ ಸೇರಿ ಸಮಾವೇಶದ ಸ್ಥಳಕ್ಕೆ ಹೋದೆವು. ಆಗ ಅಲ್ಲಿ ಪೊಲೀಸರು, ಸಾರ್ ನಿಮ್ಮನ್ನು ಬಿಡುವುದಿಲ್ಲ. ನಿಮ್ಮೆಲ್ಲರನ್ನೂ ಬಂಧಿಸಿದ್ದೇವೆ ಎಂದು ಹೇಳಿ ಜಯನಗರದ ಠಾಣೆಗೆ ಕರೆದೊಯ್ದು ಕೂರಿಸಿದರು. ಸುಂದರೇಶ್ ಮತ್ತಿತರರು ಕಾಫಿ ತಗೊಂಡು ಬಾ, ದೋಸೆ ತಗೊಂಡು ಬಾ ಎಂದು ಪೇದೆಯಿಂದ ಎಲ್ಲ ತರಿಸಿಕೊಂಡು ತಿಂದರು. ಹಣ ಕೊಡುತ್ತಾರೆ ಎಂದು ತಿಳಿದು ಪೊಲೀಸರು

ಎಲ್ಲ ತಂದು ಸಪ್ಲೈ ಮಾಡಿದರು. ಕೊನೆಗೆ ಸಾರ್ ಬಿಲ್ಲು ಎಂದು ಕೇಳಿದರು. ಏನು ? ಬಿಲ್ಲಾ ! ನಾವೀಗ ಪೊಲೀಸರ ವಶದಲ್ಲಿದ್ದೇವೆ ಇಂಥ ಸಂದರ್ಭಗಳಲ್ಲಿ ಆಹಾರ ನೀಡುವುದು ನಿಮ್ಮ ಕರ್ತವ್ಯ ಎಂದು ಸುಂದರೇಶ್ ದಬಾಯಿಸಿದರು. ನಮ್ಮ ಸ್ವಾತಂತ್ರ್ಯವನ್ನು ದಮನ ಮಾಡಿ ತಂದು ಇಟ್ಟುಕೊಂಡ ಮೇಲೆ ನಾವು ಬಂಧಿಗಳು ಎಂದು ವಾದ ಮುಂದುವರಿಸಿದರು. ಪೇದೆ ಎಲ್ಲಿಂದ ತಂದುಕೊಡಲಿ ಸಾರ್ ಎಂದು ಪೇಚಿಗೆ ಸಿಕ್ಕಿಕೊಂಡ. ನಮ್ಮ ಜತೆಗಿದ್ದವರು ಹಣ ನೀಡಿದರು. ಅಲ್ಲಿಗೆ ಸಮಸ್ಯೆ ಮುಗಿಯಿತು.

ಆನಂತರ ಠಾಣೆಯಲ್ಲಿ: ಕಾಡು ಹರಟೆ ಹೊಡೆಯುತ್ತಾ ಕುಳಿತಿದ್ದೆವು. ನಂಜುಂಡಸ್ವಾಮಿ Don't discuss any other matter. ನಾವು ಮಾತನಾಡುವ ಎಲ್ಲ ವಿಚಾರಗಳನ್ನು ರೆಕಾರ್ಡ್ ಮಾಡಿಕೊಳ್ಳುತ್ತಿದ್ದಾರೆ ಎಂದು ಒಂದು ಬಾಕ್ಸ್ ತೋರಿಸಿದರು. ಹೌದಿರಬೇಕೆಂದು ಎಲ್ಲರೂ ಮೌನವಾದರು. ನಾವು ಅದುವರೆಗೂ ಯಾವುದೇ ಗುಪ್ತ ವಿಚಾರಗಳನ್ನು ಮಾತನಾಡುತ್ತಿರಲಿಲ್ಲ. ಆದರೂ ವಾತಾವರಣ ಶಾಂತವಾಗಿಬಿಟ್ಟಿತು. ಸ್ವಲ್ಪ ಹೊತ್ತಿನ ನಂತರ ಅಲ್ಲಿಗೆ ಬಂದ ಪೇದೆಯೊಬ್ಬ ಏಳಿ ಸಾರ್, ಇದರಲ್ಲಿ ನನ್ನ ಬಟ್ಟೆಗಳಿವೆ ಎಂದ. ಅದರ ಮೇಲೆ ತೇಜಸ್ವಿಯೋ ಯಾರೋ ಕುಳಿತಿದ್ದರು. ಎದ್ದರು. ತೆಗೆದು ನೋಡಿದರೆ ಅದರಲ್ಲಿ ರೆಕಾರ್ಡರ್ ಇಲ್ಲ, ಏನೂ ಇರಲಿಲ್ಲ. ಎಲ್ಲರೂ ನಕ್ಕರು ಏನ್ ನಂಜುಂಡಸ್ವಾಮಿ ನಿಮ್ಮ ಮಾತು ಕೇಳಿದ್ರೆ ಅಷ್ಟೇ ಎಂದರು. ಇಲ್ಲ ಬೇರೆ ಕಡೆ ಎಲ್ಲ ಮಾಡ್ತಾರೆ. ಇವರ್‍ಯಾಕೋ ಮಾಡಿಲ್ಲ ಎಂದರು. ಹೀಗೆ ಇಡೀ ಪರಿಸ್ಥಿತಿಯನ್ನು ಗ್ರಹಿಸಿ ಅದರ ಯೋಚನಾ ಲಹರಿಯನ್ನೇ ಬದಲಿಸುವ ಛಾತಿ ಅವರಿಗಿತ್ತು.

* * *

ಒಂದು ದಿನ, ಏನ್ ಸಾರ್ ಬಹಳ ಹ್ಯಾಂಡ್‌ಸಮ್ ಆಗಿ ಕಾಣ್ತಾ ಇದ್ದೀರಿ ಅಂತ ಯಾರೋ ಒಬ್ಬರು ಅಂದರು. ಅದಕ್ಕೆ ನಂಜುಂಡಸ್ವಾಮಿ, ಒಂದು ದಿನ ಇಂದಿರಾಗಾಂಧಿ ಮೈಸೂರಿನ ಪುರಭವನದ ಆವರಣದಲ್ಲಿ ಭಾಷಣ ಮಾಡ್ತಾ ಇದ್ರು. ಅದನ್ನು ಕೇಳಲು ನಾನು ತ್ರೀಪೀಸ್ ಸೂಟ್ ಹಾಕಿಕೊಂಡು ಹೋಗಿದ್ದೆ. ಆಗ ಅವರ ಕಣ್ಣು ನನ್ನ ಮೇಲೆ ಬಿತ್ತು, ನಂತರ ಅವರ ಭಾಷಣವೇ ತೊದಲತೊಡಗಿತು. ಆಮೇಲೆ ಅವರು ಛೇಡಿಸಲು ಶುರು ಮಾಡಿದರಂತೆ. You don't no, she was attracted by my personality ಅಂದ್ರು. ಅವಕ್ಕೆಲ್ಲಾ ನಾವು ನಂಜುಂಡಸ್ವಾಮಿ ಬುಲೆಟಿನ್‌ಗಳು ಅಂತ ಕರೀತಿದ್ವಿ. ಸಾರ್, ನೀವು ಜರ್ಮನಿಯಲ್ಲಿ ಏನು ಕಲಿತಿರೋ ಗೊತ್ತಿಲ್ಲ. ಬುಲೆಟಿನ್ ಬಿಡೋದನ್ನ ಚೆನ್ನಾಗಿ ಕಲಿತಿದ್ದೀರಿ ಎನ್ನುತ್ತಿದ್ದೆವು.

* * *

ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಇವರು ರೈತ ನಿಯೋಗವೊಂದನ್ನು ಕರೆದುಕೊಂಡು ಹೋಗಿದ್ದರು. ಹೆಗಡೆ ಕೃಷಿ ಇಲಾಖೆಯ ಅಧಿಕಾರಿಗಳನ್ನು ಕರೆದಿದ್ದರು. ಸಭೆ ಆರಂಭವಾಯಿತು. ಇವರು ಹೇಳಿದ್ದನ್ನು ಅಧಿಕಾರಿಗಳು ಬರೆದುಕೊಳ್ಳುತ್ತಿದ್ದರು. ಅದನ್ನು

ನೋಡಿದ ಪ್ರೊಫೆಸರ್, ಮಿಸ್ಟರ್ ರಾಮಕೃಷ್ಣ ಹೆಗಡೆ, ನೀವು ಈ ರಾಜ್ಯದ ಮುಖ್ಯಮಂತ್ರಿ. ನಾವು ಹೇಳುವುದನ್ನು ನೀವೇ ಬರೆದುಕೊಳ್ಳಬೇಕು. ನಿಮ್ಮ ಅಧಿಕಾರಿಗಳು ನಾವು ಹೇಳುವುದೇ ಒಂದಾದರೆ ಅವರು ಬರೆದುಕೊಳ್ಳುವುದೇ ಒಂದು. ಆದ್ದರಿಂದ ನೀವೇ ಬರೆದುಕೊಳ್ಳಬೇಕೆಂದು ಆಗ್ರಹಿಸಿ ಅವರಿಂದಲೇ ಬರೆಸಿದರು. ಅದರಲ್ಲೇ ಥ್ರಿಲ್ ತಗೊಳ್ತಿದ್ರು, ಅಂಥ ರೋಮಾಂಚನಗಳಲ್ಲೇ ಅವರು ಸಮಾಧಾನಪಡುತ್ತಿದ್ದರು. ಮತ್ತೆ ಪ್ರಭುತ್ವವನ್ನು ನಡುಗಿಸುವ ಒಂದು ಮನಃಸ್ಥಿತಿ ಅವರಲ್ಲಿ ಯಾವಾಗಲೂ ಇರುತ್ತಿತ್ತು.

* * *

ನಾವೆಲ್ಲಾ ಸಮಾಜವಾದಿ ಯುವಜನ ಸಭಾದ ಪ್ರವಾಸದಲ್ಲಿದ್ದಾಗ ಕೈಯಲ್ಲೊಂದು ಬಾವುಟ ಹಿಡಿದುಕೊಂಡು ಧಾರವಾಡದ ಪ್ರವಾಸಿ ಮಂದಿರವನ್ನು ಪ್ರವೇಶ ಮಾಡಿದೆವು. ಕೊಠಡಿಗೆ ಪ್ರವೇಶ ಪಡೆಯಲು ಬರೆಯಬೇಕಾದ ಪುಸ್ತಕದಲ್ಲಿ ನಂಜುಂಡಸ್ವಾಮಿ On duty ಎಂದು ಬರೆದರು. ನಾವಿದ್ದ ಪಕ್ಕದ ಕೋಣೆಯಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಇದ್ದ. ನಾವಿಲ್ಲದಿದ್ದಾಗ ಆತ ಪುಸ್ತಕ ತೆಗೆದು ನೋಡಿ, ಅವರು ರೈತ ಸಂಘದವರು. ಅವರೆಲ್ಲಾ ಹ್ಯಾಗೆ ಆನ್ ಡ್ಯೂಟಿ ಮೇಲೆ ಬರ್ತಾರೆ ಅಂತ ಪ್ರವಾಸಿ ಮಂದಿರದ ಮೇಲ್ವಿಚಾರಕನನ್ನು ಪ್ರಶ್ನಿಸಿದನಂತೆ. ಸಂಜೆ ನಾವು ಬಂದಾಗ ಆತ ಈ ವಿಷಯ ತಿಳಿಸಿದ. ಅದಕ್ಕೆ ಪ್ರೊಫೆಸರ್ ಅವನಿಗೆ ಹೇಳು ನಾವು ಅವನ ಮಾಸ್ಟರ್ಸ್ ಅಂತ. ಪ್ರಜಾಪ್ರಭುತ್ವದಲ್ಲಿ ಜನರೇ ಯಾವಾಗಲೂ ಸುಪ್ರೀಂ. ಅಧಿಕಾರಿಗಳು ಅವರ ಸೇವಕರು. ಅವನಿಗೆ ಹೇಳು ಅಲ್ಲಿ ಉಳಿದುಕೊಂಡವರು ನಿನ್ನ ಯಜಮಾನರು ಅಂತ ಎಂದು ಹೇಳಿದರು. ಇಂಥ ಮಾತುಗಳು ರೈತರ ಪರಿಭಾಷೆಯಾಗಿ ಬೆಳೆದವು. ನಿನಗೆ ಸಂಬಳ ಕೊಡೋರು ನಾವು ನೀನು ಓಡಿಸ್ತಿರೋ ಕಾರು ಕೊಟ್ಟೋರು ನಾವು ನಮ್ಮ ಮೇಲೆ ದಬ್ಬಾಳಿಕೆ ಮಾಡ್ತೀಯಾ ಅಂತ ದಬಾಯಿಸಿಬಿಡುತ್ತಿದ್ದರು.

* * *

ಲಂಕೇಶ್ ಮತ್ತು ನಂಜುಂಡಸ್ವಾಮಿ ಹಳೇ ಸ್ನೇಹಿತರು ಕೊನೆಗೆ ವಿರೋಧಿಗಳಾದರು. ಯಾವಾಗಲಾದ್ರು ನಂಜುಂಡಸ್ವಾಮಿ ಸಿಕ್ರೆ ನಿಮ್ಮ ಮೂರು ಕಾಸಿನ ಪತ್ರಿಕೆ ಸಂಪಾದಕ ಹ್ಯಾಗಿದ್ದಾನಯ್ಯ ಅಂತಿದ್ರು. ಚೆನ್ನಾಗಿದಾರೆ ಸಾರ್, ಪತ್ರಿಕೆ ಮೂರು ಕಾಸಿಂದೇ ಆದ್ರೂ ಚೆನ್ನಾಗಿ ನಡೀತಿದೆ ಅಂತಿದ್ದೆ. ನಿಮ್ಮದು ಹ್ಯಾಗಿದೆ ಸರ್, ವಿಧಾನಸೌಧಕ್ಕೆ ಹೋಗೋದು ಯಾವಾಗ ಅಂತಿದ್ದೆ. ಹೋಗ್ತೀನಿ ಕಣಯ್ಯ, ಬಟ್ಟೆಯೆಲ್ಲಾ ರೆಡಿ ಮಾಡಿಸಿದ್ದೇನೆ ತೋರಿಸಲಾ ಎಂದಿದ್ದರು. ಅಷ್ಟೊತ್ತಿಗೆ ಅವರು ಲಾ ಕಾಲೇಜಿನ ಪ್ರಾಚಾರ್ಯರಾಗಿ ಸ್ವಲ್ಪ ಏನೋ ಗಲಾಟೆ ಮಾಡಿಕೊಂಡಿದ್ದರು. ಅದನ್ನು ಲಂಕೇಶ್ ಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸಿದ್ದರು. ಅದು ಪ್ರೊಫೆಸರ್‌ಗೆ ರೇಗಿ ಹೋಗಿತ್ತು. ಅದಕ್ಕೆ ಅವರು, ನಿಮ್ಮ ಮೂರುಕಾಸಿನ ಪತ್ರಿಕೆ ಸಂಪಾದಕ ನನ್ನ ವಿರುದ್ಧ ಸುದ್ದಿ ಬರೆದಿದ್ದಾನೆ. ಅವನ್ನ ಜೈಲಿಗೆ ಹಾಕಿಸ್ತೀನಿ ಅಂದಿದ್ದರು. ನೀವೇನು ಸಾರ್ ಮುಖ್ಯಮಂತ್ರಿನೇ

ಆಗೋರು. ಯಾರನ್ನ ಬೇಕಾದ್ರೂ ಜೈಲಿಗೆ ಹಾಕಿಸಬಹುದು ಎಂದಿದ್ದೆ. ಅವರು ಬಹಳ ಹಟ ಮತ್ತು ಛಲ ಇದ್ದ ಮನುಷ್ಯ.

*　　*　　*

ರೈತ ಸಂಘದ ಆರಂಭದಲ್ಲಿ ಶಿವಮೊಗ್ಗದಲ್ಲಿ ಒಂದು ರೈತರ ಸಭೆ ನಡೆಯುತ್ತಿತ್ತು ಅದರಲ್ಲಿ ಮುಖ್ಯ ಭಾಷಣಕಾರರಾಗಿ ಲಂಕೇಶ್ ಬಂದಿದ್ದರು. ಅವರು ಮಾತನಾಡುತ್ತಾ, ಇಲ್ಲಿ ಸುಮಾರು ೩೦ ಸಾವಿರ ಜನ ಸೇರಿದ್ದೀರಾ. ಇದರಲ್ಲಿ ನನಗೆ ಗೊತ್ತಿರುವ ನಮ್ಮೂರಿನವರೆಲ್ಲಾ ಕುಳಿತಿದ್ದಾರೆ. ಕೆಲವರು ಸೊಸೈಟಿ ಮುಳುಗಿಸಿದವರು, ಬಡ್ಡಿ ಸಾಲದವರು, ಟೋಪಿ ಹಾಕಿದವರು ಎಂದು ಅವರೂರಿನಲ್ಲಿ ನಡೆದ ಅನ್ಯಾಯಕ್ಕೆ ಸಾಕ್ಷಿಯಾದವರನ್ನು ಚೆನ್ನಾಗಿ ಕುಟುಕಿ ಮಾತು ಮುಗಿಸಿದರು. ನಂತರ ರೈತ ಸಂಘದ ವಿರುದ್ಧ ಲೇಖನಗಳನ್ನು ಪ್ರಕಟಿಸಿದರು. ಇದು ನಂಜುಂಡಸ್ವಾಮಿ ಅವರನ್ನು ಕೆರಳಿಸಿತ್ತು. ಈ ಲಂಕ ಯಾವ ಚಳವಳಿಗೂ ಬರಲ್ಲ, ಮತ್ತೆ ಯಾವ ಚಳವಳಿಯನ್ನೂ ಬೆಳೆಯಲು ಬಿಡಲ್ಲ. ಅವನ ಪತ್ರಿಕೆ ಮೂಲಕ ಎಲ್ಲ ನಾಶಮಾಡಬೇಕು ಅಂತಿದಾನೆ. ಅದಕ್ಕೆ ನಾವೇ ಒಂದು ಪತ್ರಿಕೆಯನ್ನು ಪ್ರಾರಂಭಿಸಬೇಕು. ಎಂದು ನಮ್ಮನಾಡು ಪತ್ರಿಕೆಯನ್ನು ಆರಂಭಿಸಿದರು. ಇಂಥ ವಾದ ವಿವಾದ, ವಾಗ್ವಾದಗಳು ಸ್ವಲ್ಪ ಹೆಚ್ಚು ಕಡಿಮೆ ೩೦ ವರ್ಷ ನಡೆದವು.

*　　*　　*

ಬೆಂಗಳೂರಿನಲ್ಲಿ ರೈತ ಸಮಾವೇಶ ನಡೀತಿತ್ತು. ಕಲಾವಿದ ಕೆ.ಟಿ. ಶಿವಪ್ರಸಾದ್ ಸಿಕ್ಕರು. ನಾನು ಅವರೊಂದಿಗೆ ಕುಳಿತುಕೊಂಡಿದ್ದೆ. ಸಭೆ ಮುಗಿಯಿತು. ನಂಜುಂಡಸ್ವಾಮಿ ವೇದಿಕೆಯಿಂದ ಕೆಳಗಿಳಿಯುತ್ತಿದ್ದರು. ನಮಸ್ಕಾರ ನಂಜುಂಡಸ್ವಾಮಿಯವರೇ, ಹ್ಯಾಗಿದ್ದೀರಿ ಅಂದೆ. ಯಾರ್ ನೀವು ಅಂದ್ರು. ಸಾರ್ ನಾನು ರಾಮದಾಸ್ ಅಂತ, ನಾನ್ಯಾರಾದ್ರು ಆಗಿರಲಿ, ನೀವು ನಂಜುಂಡಸ್ವಾಮಿ ತಾನೆ ಅಂದೆ. ಹೋ ಮೈಸೂರಿನಲ್ಲಿ ಒಬ್ಬ ಕ್ರಾಂತಿಕಾರಿಗಳಿದ್ರಲ್ಲ, ಅವರೇನಾ ನೀವು ? ಅಂತ ವ್ಯಂಗ್ಯವಾಡಿದರು. ಮೈಸೂರಿನಲ್ಲಿ ನಂಜುಂಡಸ್ವಾಮಿ ಅಂತ ಕ್ರಾಂತಿಕಾರಿಯೊಬ್ಬರಿದ್ದರು. ಅವರು ಈಗ ರೈತ ನಾಯಕರಾಗಿದ್ದಾರೆ, ವಿಧಾನಸೌಧ ಹಿಡಿಯೋಕೆ ಪ್ರಯತ್ನಪಡ್ತಿದಾರೆ. ನಾವು ಮೈಸೂರಿನಲ್ಲಿರೋರು. ನಾವೇನು ಅದಕ್ಕೆ ಪ್ರಯತ್ನಪಡ್ತಿಲ್ಲ. ನೀವು ನಂಜುಂಡಸ್ವಾಮಿ ಅಂತ ತಿಳ್ಕೊಂಡು ಮಾತಾಡಿದೆ ಅಂತ ಹೇಳಿ ವಾಪಸಾದೆ. ಅನಂತರ ಶಿವಪ್ರಸಾದ್ ಲಾಡ್ಜ್‌ವೊಂದರಲ್ಲಿ ರೂಂ ಮಾಡಿದ್ದರು. ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದರು. ಅಲ್ಲಿ ನನ್ನನ್ನು ನೋಡಿ, 'ಅವನು ಲಂಕೇಶ್ ಪತ್ರಿಕೆ ಕಡೆಯಿಂದ ಬಂದಿರ್‍ತಾನೆ. ಅವನನ್ನ ಒಳಗೆ ಬಿಡಬೇಡಿ' ಎಂದಿದ್ದರಂತೆ.

*　　*　　*

ಒಂದು ದಿನ ಯು.ಆರ್. ಅನಂತಮೂರ್ತಿ ಸಿಕ್ಕು, ನೋಡಿ ನಂಜುಂಡಸ್ವಾಮಿ ಹಳೆಯದನ್ನೆಲ್ಲಾ ಮರೆತು ಇನ್ಮೇಲೆ ನಾವೆಲ್ಲಾ ಒಟ್ಟಿಗೆ ಕೆಲಸ ಮಾಡೋಣ ಅಂದ್ರು.

ಹಳೆಯದನ್ನೆಲ್ಲಾ ಯಾಕೆ ಮರೀಬೇಕು ನೆನಪಿಟ್ಟುಕೊಂಡೇ ಒಟ್ಟಿಗೆ ಕೆಲಸ ಮಾಡೋಣ ಎಂದು ಹೇಳಿದರು.

*        *        *

ಒಂದು ದಿನ ನಂಜುಂಡಸ್ವಾಮಿ ಮತ್ತು ದೇವನೂರು ಮಹಾದೇವ ಭೂ ಆಕ್ರಮಣ ಚಳವಳಿ ಮಾಡಿ ನಂಜನಗೂಡಿನಲ್ಲಿದ್ದ ಎನ್. ರಾಚಯ್ಯ ಅವರ ಜಮೀನನ್ನು ಆಕ್ರಮಿಸಿಬಿಟ್ಟರು. ಆಗ ನಂಜುಂಡಸ್ವಾಮಿ ಮೇಲೆ ಒಂದು ಆರೋಪ ಬಂದಿತ್ತು. ಯಾಕೆ ದಲಿತರನ್ನು ಕಟ್ಟಿಕೊಂಡು ಹೋಗಿ ದಲಿತರ ಜಮೀನನ್ನೇ ಆಕ್ರಮಿಸಿದರು. ಲಿಂಗಾಯತರ ಜಮೀನುಗಳು ಇರಲಿಲ್ಲವೆ ಎಂದು ಕೆಲವರು ಕುಹಕವಾಡಿದರು. ನಂಜುಂಡಸ್ವಾಮಿಗೆ ಚಳವಳಿ ಮತ್ತೆ ಅದರ ಆಶಯಗಳು ಮುಖ್ಯವಾಗುತ್ತಿದ್ದವೇ ಹೊರತು ಜಾತಿ ಮುಖ್ಯವಾಗುತ್ತಿರಲಿಲ್ಲ. ಆದ್ದರಿಂದ ಅದು ಅಂತಹ ದೊಡ್ಡ ಚರ್ಚೆಯ ವಿಷಯವಾಗಲಿಲ್ಲ.

*        *        *

ಶಿವಮೊಗ್ಗದಲ್ಲಿ ರೈತ ಸಮಾವೇಶ ನಡಿತಾ ಇತ್ತು. ಮಳೆ ಬಂದು ಸ್ವಲ್ಪ ಜನ ಹೊರಟುಹೋಯ್ದ್ರು, ಪ್ರೊಫೆಸರ್ ಇನ್ನೂ ಭಾಷಣ ಮಾಡಿರಲಿಲ್ಲ. ಅಭಿಮಾನಿ ರೈತ ಕಾರ್ಯಕರ್ತನೊಬ್ಬ 'ಸಾರ್, ಈಗ ಸ್ವಲ್ಪ ಮಳೆ ಬಿಟ್ಟಿದೆ, ಮತ್ತೆ ಮಳೆ ಬರುವ ಸಾಧ್ಯತೆ ಇದೆ. ಆದ್ದರಿಂದ ನೀವು ಮಾತನಾಡಿ' ಎಂದು ಕೇಳಿಕೊಂಡ. ತಿರುಗಿ ಅವನ ಮುಖ ನೋಡಿದ ನಂಜುಂಡಸ್ವಾಮಿ 'ಯಾರು ನೀನು ?' 'ನಾನು ರೈತ ಸಂಘದ ಕಾರ್ಯಕರ್ತ ಸಾರ್' ಅಂದ. 'ಓ ನೀನೂ ರೈತ, ನಾನೂ ರೈತ, ಆಕಾಶ ನೋಡಿದ್ರೆ ಯಾವಾಗ ಮಳೆ ಬರುತ್ತೆ ಯಾವಾಗ ನಿಲ್ಲುತ್ತೆ ಅನ್ನೋದು ನನಗೂ ಗೊತ್ತಾಗುತ್ತೆ' ಎಂದು ಗದರಿದರು. ಆತ ಬೇಸರ ಮಾಡಿಕೊಂಡು ಹೊರಟು ಹೋದ. ಆ ರೀತಿ ಕೆಲವು ಸಮಯದಲ್ಲಿ ಅವರು ವಿಚಿತ್ರವಾಗಿ ವರ್ತಿಸಿಬಿಡುತ್ತಿದ್ದರು.

*        *        *

ನಂಜುಂಡಸ್ವಾಮಿ ಆಸ್ಪತ್ರೆ ಸೇರಿದಾಗ ನಾನು, ದೇವನೂರು ಮಹಾದೇವ, ರಾಜಶೇಖರ ಕೋಟಿ ಮಾತನಾಡಿಸಿಕೊಂಡು ಬರೋಣ ಅಂತ ಕಿದ್ವಾಯ್ ಆಸ್ಪತ್ರೆಗೆ ಹೋಗಿದ್ದೆವು. ಅವರು ಅಷ್ಟೊತ್ತಿಗೆ ಶಿಥಿಲವಾಗಿಬಿಟ್ಟಿದ್ದರು ಅವರ ಪತ್ನಿ ಮಕ್ಕಳು ಎಲ್ಲಾ ಜತೆಗೇ ಇದ್ದರು. ನೋಡೋಕ್ ಬಂದ್ರಾ, I am not going to die ಎಂದರು. ಕಾಗೋಡು ತಿಮ್ಮಪ್ಪ ಬಂದ್ರು. ಬೇಗ ಗುಣಮುಖರಾಗಿ ಬನ್ನಿ ಎಂದ. ಇನ್ನೊಂದು ವಾರದಲ್ಲಿ ಆಸ್ಪತ್ರೆಯಿಂದ discharge ಆಗಿ ಬರ್ತೀನಿ. ಹೊರಗೆ ಬರೋದಿಲ್ಲ, ವಿಧಾನಸೌಧದ ಒಳಗೆ ಬರ್ತೀನಿ ಅಂತ ಹೇಳಿದೆ. ನಗುತ್ತ ಹೋದ ಎಂದರು. ಸರಿ ಸಾರ್, ಒಟ್ಟಿನಲ್ಲಿ ನೀವು ಬೇಗ ಗುಣಮುಖರಾಗಿ ಬಂದರೆ ಅದಷ್ಟೇ ಸಾಕು ಎಂದೆವು. ನೀವು ಕೂತ್ಕೊಳ್ಳಿ, ಟೀ ಕುಡಿಯೋಣ ಅಂದರು. ಅವರ ಪತ್ನಿ ಟೀ ಕೊಟ್ಟರು. ಅನಂತರ ಅವತ್ತು ಬಹಳ ಮಾತನಾಡಿದರು. ಅಷ್ಟೊತ್ತಿಗೆ ಅವರ ಹಳೇ ಶಿಷ್ಯನೊಬ್ಬ ಬಂದ.

ಡಾ. ವೆಂಕಟಸ್ವಾಮಿ ಅಂತ. ನೋಡಯ್ಯ ನೀನು ಡಾಕ್ಟರ್, ಈ ಎಕ್ಸ್‌ರೇ ಕಾಪಿಗಳನ್ನೆಲ್ಲಾ ನೋಡು ಎಂದರು. ಅವನ್ನು ನೋಡಿದ್ದೇ ತಡ ಗೋಳೋ ಎಂದು ಅಳಲಾರಂಭಿಸಿದ. ಯಾಕೆ ಅಳ್ತಿ ? ಅಷ್ಟಾನ್ನಾಗಿ ಅಳಬಾರದು. ಸದ್ಯಕ್ಕೆ ಹೋಗೋ ಛಾನ್ಸ್ ಇಲ್ಲ. Pendingನಲ್ಲಿ ಇಟ್ಟುಕೊಂಡಿರು, ನೋಡೋಣ ಅಂದ್ರು.

* * *

ನಿಂತ ಹೆಜ್ಜೆಯಲ್ಲೇ ಹೋರಾಟದ ರೂಪುರೇಷೆಗಳನ್ನು ಬದಲಿಸಿಬಿಡುವ ಶಕ್ತಿಯಿದ್ದ ಪ್ರೊಫೆಸರ್, ಜಗತ್ತಿನ ಅನೇಕ ರಾಷ್ಟ್ರಗಳನ್ನು ಸುತ್ತಿ, ಅಲ್ಲಿನ ಕೃಷಿ ನೀತಿಯನ್ನು ಅರ್ಥ ಮಾಡಿಕೊಳ್ಳುತ್ತಿದ್ದರು. ಅವರು ಯಾವುದೇ ಚಳವಳಿಯಲ್ಲಿ ಸೋತು ಬಂದವರಲ್ಲ, ಸೋಲಿಸಿ ಬಂದವರು. ಇದಕ್ಕೆ ಉದಾಹರಣೆ ಎಂದರೆ ಸ್ವಿಟ್ಜರ್‌ಲ್ಯಾಂಡಿನ ಜಿ-8 ಕಚೇರಿ ಎದುರು ನಡೆದ ಪ್ರತಿಭಟನೆ. ಅವತ್ತು ಅಲ್ಲಿನ ಸರಕಾರ ಬಿಗಿ ಬಂದೋಬಸ್ತ್ ಮಾಡಿತ್ತು. ಸ್ವಲ್ಪ ದಾಂಧಲೆ ಶುರು ಮಾಡಿದರೂ ಶೂಟ್ ಮಾಡಲು ಆದೇಶ ನೀಡಿತ್ತು. ಜಿ-8 ಸಭೆ ವಿರುದ್ಧ ಪ್ರತಿಭಟನೆಗೆಂದೇ ಹೋಗಿದ್ದ ನಂಜುಂಡಸ್ವಾಮಿ ಪ್ರತಿಭಟಿಸದೆ ಹಿಂತಿರುಗಲು ಸಿದ್ಧರಿರಲಿಲ್ಲ. ಇದ್ದಕ್ಕಿದ್ದಂತೆಯೇ ನಿಂತ ಹೆಜ್ಜೆಯ ಮೇಲೆ ಹೊಸ ಚಳವಳಿ ರೂಪಿಸಿದರು. ಅದು ನಗುವ ಚಳವಳಿ! ಇದ್ದಕ್ಕಿದ್ದಂತೆ ಚಳವಳಿಗಾರರೆಲ್ಲಾ ಗಹಗಹಿಸಿ ನಗಲಾರಂಭಿಸಿದರು. ಏನು ನಡೆಯುತ್ತಿದೆ ಎಂಬುದು ತೋಚದೆ ಪೊಲೀಸರೂ ನಗಲಾರಂಭಿಸಿದರು. ಈ ಸದ್ದಿನಿಂದ ಒಳಗೆ ನಡೆಯುತ್ತಿದ್ದ ಸಭೆ ರದ್ದಾಯಿತು. ಮಾರನೇ ದಿನ ಅಲ್ಲಿಯ ಪತ್ರಿಕೆಗಳು ಚಿತ್ರಸಮೇತ ಮುಖಪುಟದ ದೊಡ್ಡ ತಲೆಬರಹದಲ್ಲಿ ಬರೆದವು: 'Laughing terrorists from India' (ಭಾರತದಿಂದ ನಗುವ ಉಗ್ರಗಾಮಿಗಳು ಬಂದಿದ್ದಾರೆ.)

* * *

ಪ್ರೊಫೆಸರ್ ಯೋಚನೆಗಳಿಗೆ ಯಾವಾಗಲೂ ಸಮಕಾಲೀನತೆ ಇರುತ್ತಿತ್ತು. ಹಳೆಯ ಗೊಡ್ಡು ಸಿದ್ಧಾಂತಗಳಿಗೆ ಜೋತು ಬೀಳುತ್ತಿರಲಿಲ್ಲ. ಎಂ.ಡಿ.ಎನ್, ತೇಜಸ್ವಿ, ನಾವೆಲ್ಲ ಹೊಸ ಯೋಚನೆಗಳಿಗೆ ಹಾತೊರೆಯುತ್ತಿದ್ದ ಕಾಲವದು. ಒಮ್ಮೆ ತೀರ್ಥಹಳ್ಳಿಯಲ್ಲಿ ನಡೆದ ಸಭೆಯಲ್ಲಿ ಹಳಬರು, ಹೊಸಬರು ನೆರೆದಿದ್ದರು. ವೇದಿಕೆಯ ಮೇಲಿದ್ದ ಎಂ.ಡಿ.ಎನ್ ಹಳಬರ ಕಡೆಗೆ ಕೈ ತೋರಿಸುತ್ತಾ ಇವರೆಲ್ಲಾ ಓಬಿರಾಯನ ಕಾಲದ ಪುರಾಣ ಹೇಳ್ತಾರೆ. ಇವರ ಸೊಂಟ ಮುರಿಬೇಕು ಎಂದರು. ಇದರಿಂದ ಕುಪಿತಗೊಂಡ ಜೆ.ಎಚ್. ಪಟೇಲರು ಏನು ಸೊಂಟ ಮುರಿತೀಯಾ, ಮುರಿ ನೋಡಾನ ಎಂದರು. ಹೀಗಾಗಬಹುದೆಂದು ನಿರೀಕ್ಷಿಸದ ಪ್ರೊಫೆಸರ್ ಸ್ವಲ್ಪ ಯೋಚಿಸಿ 'ಪ್ರಯತ್ನ ಮಾಡಾನ' ಎಂದರು. ಎಂ.ಡಿ.ಎನ್‌ರ ಪೆಚ್ಚುಮೋರೆ ನೋಡಿದ ಪಟೇಲರು ಗಹಗಹಿಸಿ ನಕ್ಕು ವಾತಾವರಣವನ್ನು ತಿಳಿಗೊಳಿಸಿದರು.

# ಹಸಿರು ಟವೆಲ್ಲಿನ ಹರಿಕಾರ ಹಾದು ಹೋದ ಹಾದಿಯಲ್ಲಿ

**ಪ್ರೊ. ಕೆ. ರಾಮದಾಸ್**

ಜೆ.ಪಿ. ಚಳವಳಿಯ ನಂತರದ ವಿದ್ಯಮಾನಗಳು ಜನತಾ ಪಕ್ಷವಾಗಿ ರೂಪಾಂತರವಾಯಿತು. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಜನತಾಪಕ್ಷ ಆಂತರಿಕ ಬಿಕ್ಕಟ್ಟುಗಳಿಂದ ಪತನದ ಹಾದಿ ಹಿಡಿಯಿತು. ಜೆ.ಪಿ. ಚಳವಳಿಯಲ್ಲಿ ಸಕ್ರಿಯರಾಗಿದ್ದ ಸಮಾಜವಾದಿಗಳು ಈ ಭ್ರಮನಿರಸನದಿಂದ ಪಾರಾಗಲು ವಿಭಿನ್ನ ದಾರಿಗಳಲ್ಲಿ ವಿಘಟಿತರಾಗಿ ಚಲಿಸತೊಡಗಿದರು.

ಇದೇ ಸುಮಾರಿನಲ್ಲಿ ಕರ್ನಾಟಕದಲ್ಲಿ ಮೂರ್ತಗೊಂಡ ರೈತ ಚಳವಳಿ ಮತ್ತು ದಲಿತ ಚಳವಳಿಗಳು ಪಕ್ಷ ರಾಜಕಾರಣದಿಂದ ಮುಕ್ತರಾದ ಸಮಾಜವಾದಿಗಳನ್ನು ಆಕರ್ಷಿಸಿದವು. ಪ್ರೊಫೆಸರ್ ನಂಜುಂಡಸ್ವಾಮಿ ರೈತಸಂಘಕ್ಕೆ ಸೇರ್ಪಡೆಯಾದರು. ನರಗುಂದ, ನವಲಗುಂದ ರೈತ ಚಳವಳಿಗಾರರ ಮೇಲೆ ನಡೆದ ಗೋಲಿಬಾರ್ ಪ್ರಕರಣ ರೈತ ಚಳವಳಿಯನ್ನು ಉಲ್ಬಣಗೊಳಿಸಿತು. ಈ ಸಂದರ್ಭದಲ್ಲಿ ಕ್ರಿಯಾಶಾಲಿಯಾದ ಪ್ರೊ.ಎಂ.ಡಿ.ಎನ್ ರೈತ ಚಳವಳಿಯ ಸ್ವರೂಪವನ್ನೇ ಬದಲಾಯಿಸಿ ತಮ್ಮ ಪ್ರಖರವಾದ ಚಿಂತನೆಯಿಂದ ಚಳವಳಿಯ ಸೈದ್ಧಾಂತಿಕ ನೆಲೆಯನ್ನು ಹಸಿರು ಟವೆಲ್ಲಿನ ಪ್ರತಿಭಟನೆಯಾಗಿ ಪರಿವರ್ತಿಸಿದರು. ಕರ್ನಾಟಕ ರಾಜ್ಯ ರೈತ ಸಂಘ ಉದಯವಾಯಿತು. ಸ್ವಾಭಾವಿಕವಾಗಿ ಪ್ರೊ.ಎಂ.ಡಿ.ಎನ್. ಅದರ ಅತ್ಯುನ್ನತ ನಾಯಕರಾದರು.

ನಂಜುಂಡಸ್ವಾಮಿ ರೈತಸಂಘದ ಕಡೆಗೆ ನೋಡುವ ಹೊತ್ತಿಗೆ ಭತ್ತ ಬೆಳೆದ ರೈತರು ಸರ್ಕಾರಕ್ಕೆ ಇಷ್ಟು ಅಂತಾ, ಲೆವಿ ಕೊಡಬೇಕಾಗಿತ್ತು. ಇಲ್ಲದೆ ಹೋದರೆ ಮಾರಾಟಕ್ಕೆ ಅವಕಾಶ ನೀಡುತ್ತಿರಲಿಲ್ಲ. ಆಗ ರೈತರು ಲವಿ ಪದ್ಧತಿಯನ್ನು ವಿರೋಧಿಸಿ ಲೆವಿ ಚೀಟಿಗಳನ್ನು ಬೆಂಕಿಗೆ ಹಾಕಿ ಸುಡುವುದೂ ಸೇರಿದಂತೆ ಹಲವು ರೀತಿಯಲ್ಲಿ ಸರ್ಕಾರಕ್ಕೆ ಪ್ರತಿರೋಧವೊಡ್ಡುತ್ತಿದ್ದರು. ಇಂಥ ಪ್ರತಿಭಟನೆಯಲ್ಲಿ ಪಾಲ್ಗೊಂಡವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ ತೊಂದರೆ ಕೊಡುತ್ತಿದ್ದರು. ಆಗ ನಂಜುಂಡಸ್ವಾಮಿಯನ್ನು ರೈತಸಂಘಕ್ಕೆ ಕಾನೂನು ಸಲಹೆಗಾರರನ್ನಾಗಿ ನೇಮಿಸಿಕೊಳ್ಳಬಹುದು ಎಂದು ಪೂರ್ಣಚಂದ್ರ ತೇಜಸ್ವಿ ಸಲಹೆ ನೀಡಿದ್ದರು. ಹೀಗೆ ಕಾನೂನು

ಸಲಹೆಗಾರರಾಗಿ ನೇಮಕಗೊಂಡಿದ್ದ ನಂಜುಂಡಸ್ವಾಮಿ ಇಡೀ ರೈತ ನಾಯಕರಾಗಿ ಹೊರಹೊಮ್ಮಿದ್ದು ಇಂದು ಇತಿಹಾಸ.

ಅನಿತಾ ಕೌಲ್ ಅಂತ ಚಿಕ್ಕಮಗಳೂರಿನಲ್ಲಿ ಒಬ್ಬರು ಉಪ ವಿಭಾಗಾಧಿಕಾರಿ ಇದ್ರು. ಅವರು ತೇಜಸ್ವಿ ಮತ್ತಿತರರ ಮೇಲೆ ಪ್ರಕರಣ ದಾಖಲಿಸಿದ್ದರು. ಆಗಲೇ ಇಂಥ ಒಂದೆರಡು ಪ್ರಕರಣಗಳನ್ನು ಪ್ರೊಫೆಸರ್ ಗೆದ್ದಿದ್ದರು. ಅವರು ಮೂಲತಃ ಬೌದ್ಧಿಕವಾಗಿ ಬಹಳ ಚಿಂತನೆ ಮಾಡುವಂಥ ವ್ಯಕ್ತಿ. ಅವರಿಗೆ ಸಾಮಾನ್ಯ ಪರಿಜ್ಞಾನ ಮತ್ತು ವಿಶೇಷವಾದ ಕಾನೂನಿನ ಜ್ಞಾನದ ಜತೆಗೆ ಅಂತಾರಾಷ್ಟ್ರೀಯ ವಿದ್ಯಮಾನಗಳನ್ನು ಸುಲಭವಾಗಿ ಗ್ರಹಿಸುವ ಶಕ್ತಿ ಇತ್ತು. ಬಯೋಟೆಕ್ನಾಲಜಿ ಬಂದ್ರೆ ಏನಾಗುತ್ತೆ, ಭಾರತೀಯ ಸಾಂಪ್ರದಾಯಿಕ ಕೃಷಿಗೂ ಮತ್ತು ಬಯೋಟೆಕ್ನಾಲಜಿಗೂ ಇರುವ ಸಾಮ್ಯ ಎಂಥದ್ದು, ಗ್ಯಾಟ್‌ನಿಂದ ಎದುರಾಗುವ ಸವಾಲುಗಳು ಎಂಥವು? ಭವಿಷ್ಯದಲ್ಲಿ ಅದರ ಪರಿಣಾಮ ಎಂಥದ್ದು? ಎಂಬುದನ್ನು ಅವರು ಎಲ್ಲರಿಗಿಂತ ಮೊದಲೇ ಅರ್ಥ ಮಾಡಿಕೊಂಡು ರೈತರಿಗೆ ತಿಳಿಸುವ ಮೂಲಕ ರೈತಸಂಘಕ್ಕೆ ಹೊಸ ಚೈತನ್ಯ ತಂದುಕೊಟ್ಟರು.

ಅದಕ್ಕೂ ಮೊದಲು ರೈತ ಸಂಘ ಅಂಥ ಬಹಳ ದೊಡ್ಡ ಸಂಘಟನೆಯಾಗಿರಲಿಲ್ಲ. ಕಮ್ಯುನಿಸ್ಟ್ ಪಾರ್ಟಿಯವರು ಉತ್ತರ ಕರ್ನಾಟಕದಲ್ಲಿ ಕೃಷಿ ಕೂಲಿ ಕಾರ್ಮಿಕರು ಮತ್ತು ರೈತರನ್ನು ಸೇರಿಸಿ ಸ್ವಲ್ಪ ಪ್ರಮಾಣದಲ್ಲಿ ಸಂಘಟಿಸಿದ್ದರು. ಅದು ಸೀಮಿತ ಪ್ರದೇಶದಲ್ಲಿ ನಡೆಯುತ್ತಿತ್ತು. ಶಿವಮೊಗ್ಗದಲ್ಲಿ ಕಬ್ಬು ಬೆಳೆಗಾರರು ಒಂದು ಸಂಘ ಮಾಡಿಕೊಂಡಿದ್ದರು. ಅದಕ್ಕೆ ಎಚ್.ಎಸ್. ರುದ್ರಪ್ಪನವರು ಅಧ್ಯಕ್ಷರಾಗಿದ್ದರು. ಯಾವ ಪ್ರದೇಶದಲ್ಲಿ ರೈತರನ್ನು ಸುಲಭವಾಗಿ ಸಂಘಟಿಸಲು ಸಾಧ್ಯವಿತ್ತೋ ಆ ಪ್ರದೇಶದಲ್ಲಿ ರೈತರು ಒಟ್ಟುಗೂಡಿ ಒಂದು ಸಂಘ ಕಟ್ಟಿಕೊಂಡಿರುತ್ತಿದ್ದರು. ಉದಾ: ಮಂಡ್ಯ, ಮೈಸೂರು, ಶಿವಮೊಗ್ಗ, ಬೆಳಗಾವಿ ಜಿಲ್ಲೆಗಳಲ್ಲಿ ಕಬ್ಬು ಬೆಳೆಯುವ ರೈತರು ಒಂದುಗೂಡುತ್ತಿದ್ದರು.

ಅಡಕೆ ಬೆಳೆಗಾರರು ಸೇರುತ್ತಿರಲಿಲ್ಲ. ಕಾಫಿ ಬೆಳೆಗಾರರು ನಾವು ರೈತರೇ ಅಲ್ಲ ಎಂದು ದೂರ ಸರಿಯುತ್ತಿದ್ದರು. ಹೀಗೆ ರೈತ ಚಳವಳಿಗೆ ಒಂದು ಸಮಗ್ರತೆಯ ಕಲ್ಪನೆಯೇ ಇರಲಿಲ್ಲ. ಈ ಸಂದರ್ಭದಲ್ಲಿ ಸಮಾಜವಾದಿ ನೆಲೆಯಿಂದ ಬಂದಿದ್ದ ಕಡಿದಾಳು ಶಾಮಣ್ಣ, ಎನ್.ಡಿ. ಸುಂದರೇಶ್ ನಾವೆಲ್ಲಾ ಇದಕ್ಕೆ ಒಂದು ರೂಪ ಕೊಡಲು ಮುಂದಾದೆವು. ಅಷ್ಟೊತ್ತಿಗೆ ನಾರಾಯಣಸ್ವಾಮಿ ನಾಯ್ಡು ನೇತೃತ್ವದಲ್ಲಿ ತಮಿಳುನಾಡಿನಲ್ಲಿ ರೈತ ಚಳವಳಿ ಭಾರಿ ಜೋರಾಗಿ ನಡೆಯುತ್ತಿತ್ತು. ಆಗ ರೈತ ಚಳವಳಿಯ ಒತ್ತಾಯಗಳು ಅಂದ್ರೆ ಸರ್ಕಾರ ನಮಗೆ ಸರಿಯಾಗಿ ವಿದ್ಯುತ್ ಕೊಡುತ್ತಿಲ್ಲ, ಸರ್ಕಾರ ನಮ್ಮನ್ನು ಸಾಲಗಾರರನ್ನಾಗಿ ಮಾಡಿದೆ. ನಮ್ಮ ಬೆಳೆಗಳಿಗೆ ನ್ಯಾಯಯುತವಾದ ಬೆಲೆ ಕೊಡುತ್ತಿಲ್ಲ. ಹಳ್ಳಿಗಳೆಲ್ಲ ಸಾಮ್ರಾಜ್ಯಶಾಹಿ ಕಾಲೊನಿಗಳಾಗಿವೆ. ಬೇರೆ ದೇಶಗಳು ಕಾಲೊನಿಗಳನ್ನು ಇಟ್ಟುಕೊಂಡಂತೆ, ಬಾಂಬೆ, ದೆಹಲಿ, ಬೆಂಗಳೂರು ಮುಂತಾದ ಮಹಾನಗರಗಳು ನಮ್ಮ ಹಳ್ಳಿಗಳನ್ನು ಕಾಲೊನಿಗಳನ್ನಾಗಿಟ್ಟುಕೊಂಡಿವೆ. ಆದ್ದರಿಂದ ಆರ್ಥಿಕ ಸವಲತ್ತುಗಳನ್ನು ಈ ನಗರಗಳು ನುಂಗಿ ಹಾಕುತ್ತಿವೆ. ಇಂಥ ಸಿದ್ಧಾಂತಗಳಲ್ಲಿ ನಂಜುಂಡಸ್ವಾಮಿಯ

Idea - Action ಆಗಿ Convert ಆಯ್ತು. ಅವರ ಬುದ್ಧಿವಂತಿಕೆ, ಸಂಘಟನಾ ಸಾಮರ್ಥ್ಯಗಳು ಸಹಜವಾಗಿಯೇ ಅವರನ್ನು ರೈತನಾಯಕ ಎಂದು ಒಪ್ಪಿಕೊಳ್ಳುವಂತೆ ಮಾಡಿದವು.

ಅಷ್ಟೊತ್ತಿಗೆ ರೈತರು ಎಂದರೆ ಯಾರು? ಅವರನ್ನು ಗುರುತಿಸುವುದು ಹೇಗೆ? ಎಂಬುದೇ ಅರ್ಥವಾಗದಂತಹ ಸ್ಥಿತಿ ಇತ್ತು. ಆಗ ತಕ್ಷಣ ಹಸಿರು ಟವೆಲ್ ಎಂಬ ಲಾಂಛನ ನೀಡಿದರು. ಅದಕ್ಕೆ ನಾನು ಅವರನ್ನು 'ಹಸಿರು ಟವೆಲ್ಲಿನ ಕ್ರಾಂತಿಕಾರಿ' ಎಂದೇ ಕರೆದಿದ್ದೆ.

ಕರ್ನಾಟಕದ ಅನೇಕ ಪ್ರಗತಿಪರ ಚಳವಳಿಗಳ ರೂವಾರಿಯಾಗಿದ್ದ ಅವರು, ಲೋಹಿಯಾ ಚಿಂತನೆಯನ್ನು ಅನೇಕ ಆಯಾಮಗಳಲ್ಲಿ ವಿಸ್ತರಿಸಿದರು. ಹೊಸ ತಲೆಮಾರಿನ ಸಮಾಜವಾದಿ ಚಳವಳಿ, ವಿಚಾರವಾದಿ ಚಳವಳಿಗಳಲ್ಲಿ ಮುಂಚೂಣಿ ನಾಯಕರಾಗಿ ಹೋರಾಟಗಳನ್ನು ರೂಪಿಸಿದ್ದರು. ದಲಿತ ಚಳವಳಿಯ ಪ್ರಚೋದಕರಾಗಿ, ಅಂತಿಮವಾಗಿ ರೈತ ಚಳವಳಿಯನ್ನು ಉತ್ತುಂಗಕ್ಕೆ ಏರಿಸಿದ ಕೀರ್ತಿ ಅವರಿಗೆ ಸಲ್ಲಬೇಕು.

ಜಾಗತೀಕರಣಕ್ಕೆ ಮುಖಾಮುಖಿಯಾಗಿ ಅದರ ಸವಾಲನ್ನು ಎದುರಿಸಲು ಕರ್ನಾಟಕದ ರೈತ ಪಡೆಯನ್ನು ಎಚ್ಚರಗೊಳಿಸಿದರು. ಪ್ರೊಫೆಸರ್ ರೂಪಿಸಿದ ಚಳವಳಿಯಿಂದ ಕರ್ನಾಟಕದ ಒಂದು ತಲೆಮಾರಿನ ರೈತ ಸಮುದಾಯ ಜಾಗೃತವಾಯಿತು. ಶಾಸಕರಾಗಿದ್ದಾಗ ವಿಧಾನಸಭೆ ಕಲಾಪಗಳಲ್ಲಿ ಅವರು ನಡೆಸುತ್ತಿದ್ದ ಚರ್ಚೆ, ಶಾಂತವೇರಿ ಗೋಪಾಲಗೌಡರನ್ನು ನೆನಪಿಸುತ್ತಿತ್ತು.

ಸ್ವಾಭಿಮಾನಿ ರೈತ ಸಂಘ ಅನ್ನೋದನ್ನ ಗುರುತಿಸೋದಕ್ಕಾಗಿ ಪ್ರತಿಯೊಂದು ಹಳ್ಳಿಗಳ ಮುಂದೆ 'ನಮ್ಮ ಅಪ್ಪಣೆ ಇಲ್ಲದೆ ಸರ್ಕಾರಿ ಅಧಿಕಾರಿಗಳು ಗ್ರಾಮ ಪ್ರವೇಶಿಸುವಂತಿಲ್ಲ' ಎಂದು ಬೋರ್ಡ್ ಬರೆಸುತ್ತಿದ್ದರು. ಯಾಕೆ ಅಂದ್ರೆ, ರೈತರು ಕೃಷಿಗಾಗಿ ಬ್ಯಾಂಕ್‌ಗಳಿಂದ ಪಡೆದಿದ್ದ ಸಾಲ ಮರುಪಾವತಿಸಲು ಸಾಧ್ಯವಾಗುತ್ತಿರಲಿಲ್ಲ. ಮಳೆ ಬರುತ್ತಿರಲಿಲ್ಲ, ಬಂದರೆ ಅತಿವೃಷ್ಟಿ, ಹೀಗೆ ನಾನಾ ಕಾರಣಗಳಿಂದ ರೈತರಿಗೆ ಸಾಲ ಹಿಂತಿರುಗಿಸಲು ಸಾಧ್ಯವಾಗುತ್ತಿರಲಿಲ್ಲ. ಸರ್ಕಾರಿ ಅಧಿಕಾರಿಗಳು, ಸಣ್ಣಪುಟ್ಟ ಸಾಲ ಪಡೆದ ರೈತರ ಮನೆಗಳನ್ನು ಜಪ್ತಿ ಮಾಡುತ್ತಿದ್ದರು. ಈ ಸಮಯದಲ್ಲಿ ಕೈಗೆ ಸಿಕ್ಕ ಪಾತ್ರೆ ಪಗಡಿಗಳನ್ನೆಲ್ಲಾ ಎತ್ತಿಕೊಂಡು ಹೋಗುತ್ತಿದ್ದರು. ಅದನ್ನು ತಡೆಯಲು ಇಂಥ ಬೋರ್ಡ್ ಹಾಕಿಸುತ್ತಿದ್ದರು. ಹಾಕುವಾಗ ಸ್ವಲ್ಪ ಯೋಚಿಸಿ ಬದಲಾವಣೆ ಮಾಡುವ ಅಗತ್ಯವಿತ್ತು. ಸರ್ಕಾರದ ಯಾವ ಅಧಿಕಾರಿಯೂ ಹಳ್ಳಿ ಪ್ರವೇಶ ಮಾಡಬಾರದು ಅಂತ ಬೋರ್ಡ್ ಹಾಕಿದ ಮೇಲೆ ಇಡೀ ಗ್ರಾಮದ ಜವಾಬ್ದಾರಿಯನ್ನು ರೈತ ಸಂಘ ತಗೋಬೇಕು. ಅಲ್ಲಿ ಕೋಮು ಸಂಘರ್ಷ ನಡೆಯಬಾರದು ಮತ್ತೆ ಸಾಮಾಜಿಕ ನ್ಯಾಯ ಇರಬೇಕು. ಅಂಥ ಜವಾಬ್ದಾರಿ ತಗೋಬೇಕು. ಇಲ್ಲವಾದರೆ ಅದು ದಬ್ಬಾಳಿಕೆಯ ಲಾಂಛನವಾಗಿಬಿಡುತ್ತದೆ. ಸಾಲ ಕೊಡೋಕೆ ಅಂತ ಬರ್ತಾನೆ, ಸ್ಕೂಲ್ ಕಟ್ಟಿಸೋದಕ್ಕೆ ಅಂತ-ಬರ್ತಾನೆ. ಅಂಥವರಿಗೆ ಈ ಬೋರ್ಡ್ ಅಡ್ಡಿಪಡಿಸುತ್ತದೆ. ಆದ್ದರಿಂದ ಜಪ್ತಿಗೆ ಬರುವವರು ರೈತರ ಅನುಮತಿ ಪಡೆಯಬೇಕು ಅಂತ ಬೋರ್ಡ್ ಹಾಕಬೇಕಾಗಿತ್ತು. ಇಂಥ ಸಂದರ್ಭಗಳಲ್ಲೆಲ್ಲಾ ಅವರ ನಿರ್ಧಾರಗಳು ಸಮಂಜಸವೆನ್ನಲಾಗುವುದಿಲ್ಲ. ಎಂ.ಡಿ.ಎನ್ ಅವರ ನಿಕಟವರ್ತಿಯಾಗಿದ್ದ ಹಾಸನದ ಕಲಾವಿದ ಕೆ.ಟಿ. ಶಿವಪ್ರಸಾದ್ ಮರುಜಪ್ತಿ ಹೋರಾಟಕ್ಕೆ ಚಾಲನೆ ನೀಡಿದರು.

ಜಪ್ತಿಯನ್ನು ತಡೆಯಲು ಪ್ರೊಫೆಸರ್ ಸುಪ್ರೀಂ ಕೋರ್ಟಿನ ಆದೇಶದ ನಕಲನ್ನು ತಂದು ಜೀವನಕ್ಕೆ ಅಗತ್ಯವಾದ ವಸ್ತುಗಳನ್ನು ಮುಟ್ಟುವಂತಿಲ್ಲ ಎಂಬ ಜಾಗೃತಿಯನ್ನು ಮೂಡಿಸಿದರು. ಬಹಳ ದೊಡ್ಡ ಕ್ರಾಂತಿ ಎಂದರೆ ರೈತರಿಗೆ ಪ್ರಶ್ನಿಸುವ ಮತ್ತು ಪ್ರತಿಭಟಿಸುವ ಗುಣ ಕಲಿಸಿದ್ದು. ಇದರ ಕೀರ್ತಿ ನಂಜುಂಡಸ್ವಾಮಿಗೆ ಸಲ್ಲುತ್ತದೆ. ಅಲ್ಲಿಯವರೆಗೆ ರೈತರು ಪೊಲೀಸರನ್ನು ಕಂಡರೆ ಭಯಪಡುತ್ತಿದ್ದರು. ಪೊಲೀಸರು ನಮ್ಮ ಮನೆ ಮುಂದೆ ಬಂದರೆ ಮರ್ಯಾದೆ ಹೋಯ್ತು ಅಂತ ಭಾವಿಸ್ತಿದ್ರು. ಆ ಭಾವನೆಯನ್ನು ಸಂಪೂರ್ಣವಾಗಿ ತೊಡೆದುಹಾಕಿದವರು ಪ್ರೊಫೆಸರ್.

ಇಂಥ ಜಾಗೃತಿ ಉತ್ತುಂಗಕ್ಕೆ ಹೋಗ್ತಾ, ಹೋಗ್ತಾ ರೈತ ಚಳವಳಿಯಲ್ಲಿ ತನ್ನ ಆಶಯಕ್ಕೆ ಸ್ವಲ್ಪ ವಿರುದ್ಧವಾದ ವರ್ತನೆಗಳು ಪ್ರಾರಂಭವಾದವು. ನಂಜುಂಡಸ್ವಾಮಿಯ ದೊಡ್ಡ ಸೋಲು ಅಂದ್ರೆ ಅವರು ಹೇಗೆ ಸಂಘಟಿಸುತ್ತಿದ್ದರೋ, ಹಾಗೆಯೇ ಸಂಘಟನೆಗಳನ್ನು ವಿಘಟಿಸುತ್ತಿದ್ದರು. ಅದು ಅವರ ಪೆಕ್ಯುಲಿಯರ್ ಗುಣ. ನಂಜುಂಡಸ್ವಾಮಿಯವರ ಗುರುವೊಬ್ಬರಿದ್ದರು. ಟಿ.ಎನ್. ನಾಗರಾಜ್ ಅಂತ. ಅವರು ಲೋಹಿಯಾ ಪುಸ್ತಕಗಳನ್ನು ಓದಿಸಿದರು. ಅನಂತರ ಪ್ರೊಫೆಸರ್ ಸಂಪೂರ್ಣ ಬದಲಾದರು. ಅಲ್ಲಿಯವರೆಗೆ ಅವರು ಬೆಂಗಳೂರಿನ ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ಉಪನ್ಯಾಸಕರಾಗಿ ಎಸ್.ಎಂ. ಕೃಷ್ಣರ ಜತೆಗೆ ಕೆಲಸ ಮಾಡ್ತಿದ್ರು. ಆಮೇಲೆ ಸ್ವಲ್ಪ ಕಾಲ ಮೈಸೂರಿನ ಶಾರದಾ ವಿಲಾಸ ಕಾಲೇಜಿಗೆ ಸೇರಿದ್ರು. ಅವರು ಅಲ್ಲಿ ಸೇರಿದ್ರು ಅಂತ ನಾವೆಲ್ಲಾ ನಾನು, ಸಿದ್ದರಾಮಯ್ಯ ಮುಂತಾದವರು ಲಾ ಕಾಲೇಜ್ ಸೇರಿದ್ದೆವು.

ಅನಂತರದಲ್ಲಿ ಜಾಗತೀಕರಣದ ಸಂದರ್ಭದಲ್ಲಂತೂ ರೈತ ಚಳವಳಿಯನ್ನು ತುಂಬಾ ಉತ್ತುಂಗಕ್ಕೆ ತಗೊಂಡು ಹೋದ್ರು. ರೈತರನ್ನ ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಿಗೆ ಕರಕೊಂಡು ಹೋಗ್ತಿದ್ರು. ಅಲ್ಲಿ ನಮ್ಮ ದೇಶಿ ಕೃಷಿಯ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಡ್ತಿದ್ರು. ಕಾರ್ಗಿಲ್ ಬೀಜ ಕಂಪನಿ ಮೇಲೆ, ಮಾನ್ಸಾಂಟೋ ಕೇಂದ್ರದ ಮೇಲೆ ದಾಳಿ ನಡೆಸಿದರು. ಅದೆಲ್ಲಾ ಅಂತಾರಾಷ್ಟ್ರೀಯ ಮಟ್ಟದ ಸುದ್ದಿಯಾಯಿತು. ಆ ವೇಳೆಗಾಗಲೇ ಲ್ಯಾಟಿನ್ ಅಮೆರಿಕ ಸೇರಿದಂತೆ ಯೂರೋಪಿನ ಅನೇಕ ರಾಷ್ಟ್ರಗಳಲ್ಲಿ ಜಾಗತೀಕರಣದ ವಿರುದ್ಧ ಚಳವಳಿ ನಡೀತಾ ಇತ್ತು. ಅಲ್ಲೆಲ್ಲಾ ಈ ವಿಷಯ ಸಂಚಲನವನ್ನೇ ಉಂಟುಮಾಡಿತು. ಆ ಮೂಲಕ ಅವರು ಅಂತಾರಾಷ್ಟ್ರೀಯ ಚಳವಳಿಯ ವಕ್ತಾರರಾದರು. ಹೀಗೆ ಅವರು ಆ ಕಡೆ ಗಮನಹರಿಸಿದಂತೆಲ್ಲಾ ಇಲ್ಲಿ ಚಳವಳಿ ದುರ್ಬಲವಾಗುತ್ತಾ ಬಂತು.

ಮಹಾರಾಷ್ಟ್ರದಲ್ಲಿ ಶೇತ್‌ಕಾರಿ ಸಂಘಟನೆ ಚಳವಳಿ ನಡೆಸ್ತಾ ಇತ್ತು. ಉತ್ತರ ಪ್ರದೇಶದಲ್ಲಿ, ಮಹೇಂದ್ರಸಿಂಗ್ ಟಿಕಾಯತ್ ಚಳವಳಿಯನ್ನು ಸಂಘಟಿಸಲು ಪ್ರೊಫೆಸರ್‌ರೊಂದಿಗೆ ಸಹಕರಿಸುತ್ತಿದ್ದರು. ಜತೆಗೆ ಕೆಲವು ಎನ್‌ಜಿಓಗಳು ಇವರೊಂದಿಗೆ ಕೈ ಜೋಡಿಸಿದವು. ಡಾ. ವಂದನಾ ಶಿವ ಅವರು ಬಯೋಟೆಕ್ನಾಲಜಿ ಬಗ್ಗೆ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಅಂಥವರನ್ನೆಲ್ಲಾ ಇವರು ಜತೆಗೆ ಸೇರಿಕೊಂಡು ಕುಲಾಂತರಿ ತಳಿಗಳು ಬೀಜದ ಮೇಲಿನ ಹಕ್ಕುಗಳನ್ನು ಹೇಗೆ ಕಳೀತಿವೆ, ಬಿಟಿ ಹತ್ತಿಯನ್ನು ನಾವು ಯಾಕೆ ಬೆಳೆಯಬಾರದು ಎಂಬುದರ ಬಗ್ಗೆ ರೈತರಿಗೆ ಚೆನ್ನಾಗಿ ಮನವರಿಕೆ ಮಾಡಿಕೊಡುತ್ತಿದ್ದರು. ನಮ್ಮ ದೇಶಿ ತಳಿಗಳ ಮೇಲೆ ನಮ್ಮ

ಹಕ್ಕುಗಳು ಹೋಗುತ್ತಿವೆ. ಅವುಗಳ ಪುನರುತ್ಥಾನಕ್ಕೆ ಹೇಗೆ ಮುಂದಾಗಬೇಕು ಎಂದು ಮನದಟ್ಟು ಮಾಡಿಕೊಡುವ ಹೊತ್ತಿಗೆ ಅವರ ನಿರ್ಗಮನವಾಯಿತು.

ಈಗ ರೈತರಿಗೆ ನಂಜುಂಡಸ್ವಾಮಿಯಂಥ ಮಾರ್ಗದರ್ಶಕರ ಅಗತ್ಯ ತುಂಬಾ ಇದೆ. ಆಗ ಒಂದು ಕಡೆ ಪ್ರೊಫೆಸರ್ ಗ್ರಾಮಾಂತರ ಪ್ರದೇಶದಲ್ಲಿ ಜಾಗೃತಿಯನ್ನುಂಟುಮಾಡಿದರೆ, ಇನ್ನೊಂದು ಕಡೆ ಪಿ. ಲಂಕೇಶ್ ಪತ್ರಿಕೆ ಮೂಲಕ ಜಾಗೃತಿಯನ್ನುಂಟುಮಾಡುತ್ತಿದ್ದರು. ಅದೇ ರೀತಿ ದಲಿತ ಸಂಘರ್ಷ ಸಮಿತಿಯವರು ದಲಿತ ಜಾಗೃತಿಯ ಬಗ್ಗೆ ಬಹಳಷ್ಟು ಕೆಲಸ ಮಾಡುತ್ತಿದ್ದರು. ಎಲ್ಲೆಡೆ ಹೊಸತನದ ಬೆಳಕು ಹರಿಯುತ್ತಿರುವಾಗ ರೈತ ಸಂಘ ಎರಡಾಯಿತು. ಆಗ ಪ್ರೊಫೆಸರ್ ಹತಾಶರಾದರು. ಮನುಷ್ಯರ ಮೇಲೆ ನಂಬಿಕೆ ಕಳೆದುಕೊಂಡು ಹೊರ ದೇಶಗಳಲ್ಲಿ ಸಂಚರಿಸತೊಡಗಿದರು.

ನಾನು ಎರಡು ಕಾರಣಕ್ಕೆ ಅವರ ಹೋರಾಟವನ್ನು ವಿರೋಧಿಸುತ್ತಿದ್ದೆ. ಆ ಕಾರಣದಿಂದಲೇ ಅವರಿಗೂ ನನಗೂ ಜೆ.ಪಿ. ಚಳವಳಿ ಕಾಲದಲ್ಲೇ ಭಿನ್ನಾಭಿಪ್ರಾಯ ಬಂದಿದ್ದವು. ಸಂಘಟನಾತ್ಮಕವಾಗಿ ಶಕ್ತಿವಂತರಾಗಿದ್ದರೂ ಅವರು ಮನುಷ್ಯ ಭಾವನಾತ್ಮಕ ಸಂಬಂಧಗಳನ್ನು ಗ್ರಹಿಸುವುದರಲ್ಲಿ ಸೋತರು. ಮನುಷ್ಯ ಮನುಷ್ಯನ ಭಾವನಾತ್ಮಕ ಸಂಬಂಧಗಳು ಎಷ್ಟು ಮುಖ್ಯ ಅನ್ನೋದನ್ನು ಅರಿಯದೇ ಬಹಳ ಯಾಂತ್ರಿಕವಾಗಿ ಕೆಲಸ ಮಾಡುತ್ತಿದ್ದರು. ಪ್ರಶ್ನಿಸುವವರನ್ನು ಇಷ್ಟಪಡುತ್ತಿರಲಿಲ್ಲ. ಮೇಷ್ಟ್ರಾದವರು ಹುಡುಗರನ್ನು ಪ್ರಶ್ನೆ ಕೇಳಿ ಅಂತ ಹೇಳಬೇಕು. ಆದರೆ ಅವರು ಪ್ರಶ್ನೆ ಕೇಳಿದರೆ ಸಿಟ್ಟಾಗಿಬಿಡುತ್ತಿದ್ದರು. 'ಕರ್ನಾಟಕದಲ್ಲಿ ಎಷ್ಟು ಹಳ್ಳಿ ನೋಡಿದ್ದೀಯಾ ನೀನು' ಎಂದು Discourage ಮಾಡಿಬಿಡುತ್ತಿದ್ದರು. ಹಾಗಾಗಿ ಅವರಿಂದ ಕೆಲವರು ದೂರ ಸರಿದು ವಿರೋಧಿಗಳಾದರು. ಅವರನ್ನು ನಾನು ಯಾವಾಗಲೂ ವಿರೋಧಿಸುತ್ತಿದ್ದುದು ಎಂದರೆ ರಸ್ತೆತಡೆ ಚಳವಳಿ: ಅವೆಲ್ಲ ಸುಲಭ, ಮತ್ತೆ ಜನವಿರೋಧಿ. ಯಾರೋ ಸಂದರ್ಶನಕ್ಕೆ ಹೋಗ್ತಿರ್ತಾರೆ. ಮದುವೆ ಮುಂತಾದ ಕೆಲಸಗಳಿಗೆ ಹೋಗ್ತಿರ್ತಾರೆ. ಅವರನ್ನ ನಾವು ನಿರ್ಬಂಧಿಸಬಾರದು. ಬೇಕಿದ್ರೆ ಡಿ.ಸಿ ಕಚೇರಿ ಮುಂದೆ ಪ್ರತಿಭಟನೆ ಮಾಡಿ ಜೈಲಿಗೆ ಹೋಗೋಣ. ಹಾಗಾಗದಿದ್ದರೆ ಜನಪರ ಚಳವಳಿಗಳು ಜನವಿರೋಧಿ ಚಳವಳಿಗಳಾಗಿ ಬಿಡುತ್ತವೆ.

ಕೆಂಟಕಿ ಚಿಕನ್ ಸೆಂಟರ್ ಮೇಲೆ ನಡೆದಿದ್ದು ಹಿಂಸಾಚಾರ ಅಲ್ಲ. ಯಾವುದು ವಿಷ ಉತ್ಪಾದಿಸುತ್ತಿತ್ತೋ, ಯಾವುದು ಜೀವ ವಿರೋಧಿಯಾಗಿತ್ತೋ, ಆ ಯಂತ್ರವನ್ನು ನಾಶಮಾಡಿದ್ದೇವೆ. ಅದನ್ನು ಹಿಂಸೆ ಅನ್ನಲು ಸಾಧ್ಯವಿಲ್ಲ. ಆದ್ದರಿಂದ ರಸ್ತೆ ತಡೆ ಇದೆಯಲ್ಲ, ಅದು ಜನವಿರೋಧಿ ಚಟುವಟಿಕೆ. ಎಷ್ಟೆ ಅನಿವಾರ್ಯ ಅಂದ್ರೂ ಅದು ಸರಿಯಾದ ಮಾರ್ಗವಲ್ಲ. ಜನತೆಯೇ ಬೇಕಾದರೆ ಬಂದ್ ಮಾಡಲಿ. ಅದು ಬಿಟ್ಟು ರಸ್ತೆಯ ಮೇಲಿನ ಸಾರ್ವಜನಿಕ ಸಂಚಾರವನ್ನು ನಿರ್ಬಂಧಿಸುವುದು ದಬ್ಬಾಳಿಕೆ.

ಎರಡನೆಯದು ಅಂದ್ರೆ, ಚಳವಳಿಯ ಮೂಲಕ ರಾಜಕೀಯ ಅಧಿಕಾರ ಹಿಡಿಯುತ್ತೇವೆ ಅನ್ನೋದು. ಯಾವುದೇ ಚಳವಳಿಯ ಮೂಲಕ ರಾಜಕೀಯ ಮಾಡಲು ಸಾಧ್ಯವಿಲ್ಲ. ಚಳವಳಿಗಳು ರಾಜಕೀಯ ಪಕ್ಷಗಳನ್ನು ರೂಪಿಸಬೇಕು. ಅವುಗಳನ್ನು ನಿಯಂತ್ರಿಸಬೇಕು. ಅಷ್ಟೇ ಮಾಡಬೇಕು.

ಅವೇ ಅಧಿಕಾರ ಬಯಸಿದರೆ ಅದು ಒಂದು Trozan horse ಆಗಿಬಿಡುತ್ತದೆ. ಹಾಗಾಗಿ ರೈತಸಂಘ ಅಧಿಕಾರದೆಡೆಗೆ ಆಲೋಚಿಸಿದ್ದು ಕೂಡ ತಪ್ಪು.

**ಒಂದಾಗದ ಎರಡು ಚಳವಳಿಯ ಸೋಲು :** ರೈತ ಮತ್ತು ದಲಿತ ಚಳವಳಿಗಳು ಜತೆಯಾಗೇ ಸಾಗಿ ಬಂದರೂ ಅವು ಒಂದುಗೂಡಲು ಸಾಧ್ಯವಾಗಲೇ ಇಲ್ಲ. ಏಕೆಂದರೆ ಈ ಎರಡೂ ಚಳವಳಿಗಳ ಆಶಯಗಳೇ ಭಿನ್ನವಾದವು. ದಲಿತರಿಗೆ ಅಸ್ಪೃಶ್ಯತೆ ಮತ್ತು ಭೂ ಹೀನತೆ ಕಾಡ್ತಾ ಇತ್ತು. ಅವರಿಗೆ ಹಳ್ಳಿಯಲ್ಲಿ ಒಂದು ಎಕರೆ ಇರಲಿ, ಅರ್ಧ ಎಕರೆ ಇದ್ದವನೂ ಭೂ ಮಾಲೀಕನಂತೆ ಕಾಣ್ತಾ ಇದ್ದ. ಬಹಳ ಜನ ದಲಿತರಿಗೆ ಭೂಮಿಯೇ ಇಲ್ಲ. ಅವರು ಕೃಷಿ ಕೂಲಿಗಾರರು. ಅವರಿಗೆ ಅಸ್ಪೃಶ್ಯತೆ ವಿರುದ್ಧ ಹೋರಾಡುವುದು ಮುಖ್ಯವಾಗಿತ್ತೇ ಹೊರತು, ಹೆಚ್ಚಿನ ಬೆಲೆ ಸಿಗಲಿ, ಸಾಲ ಮನ್ನಾ ಮಾಡಿ ಎಂದು ಹೋರಾಡುವುದು ಅವರ ಅಗತ್ಯವಾಗಿರಲಿಲ್ಲ. ಏಕೆ ಅಂದ್ರೆ, ಅವರಿಗೆ ಸಾಲವೇ ಇಲ್ಲ. ಸಾಲ ಪಡೆಯಬೇಕಾದರೆ ಬ್ಯಾಂಕಿಗೆ ಏನಾದರೂ ಅಡ ಇಡಬೇಕು. ಇವರ ಹತ್ತಿರ ಏನೂ ಇಲ್ಲ. ಹಾಗಾಗಿ ಇವರ ಹೆಸರಲ್ಲಿ ಸಾಲವೇ ಇರುತ್ತಿರಲಿಲ್ಲ. ಅವರವೆಲ್ಲ ಸರ್ಕಾರ ಅವಲಂಬಿತ ಒತ್ತಾಯಗಳೇ ಜಾಸ್ತಿ ಇರ್ತಾ ಇದ್ದವು. ಹಾಗಾಗಿ ರೈತರ ಚಳವಳಿಯಲ್ಲಿ ಪಾಲ್ಗೊಂಡು ಅವರಿಗೆ ಹೆಚ್ಚು ಬೆಲೆ ಸಿಕ್ಕರೆ ನಮಗೇನು ಕೊಡ್ತಾರಾ ಎಂದು ದಲಿತರು ಹಿಂದೆ ಸರಿಯುತ್ತಿದ್ದರು. ಹೀಗಾಗಿ ಜತೆ ಜತೆಗೆ ಸಾಗಿದರೂ ಅವು ಒಂದು ಸ್ವರವಾಗಿ ಹೊರಹೊಮ್ಮಲು ಸಾಧ್ಯವಾಗಲೇ ಇಲ್ಲ.

ನಂಜುಂಡಸ್ವಾಮಿಗೆ ರೈತ ಮತ್ತು ದಲಿತ ಚಳವಳಿಯನ್ನು ಬೆಸೆಯುವ ಶಕ್ತಿ ಇತ್ತು. ಯಾಕೆ ಅಂದ್ರೆ, ದಲಿತ ಸಂಘರ್ಷ ಸಮಿತಿಯಲ್ಲಿ ಇದ್ದವರೆಲ್ಲಾ ನಂಜುಂಡಸ್ವಾಮಿ ಶಿಷ್ಯರೇ ಆಗಿದ್ದರು. ದೇವನೂರು ಮಹಾದೇವ, ಕೃಷ್ಣಪ್ಪ, ಇಂದೂಧರ ಹೊನ್ನಾಪುರ ಯಾರ್‍ಯಾರು ಈಗಲೂ ದಲಿತ ಚಳವಳಿಯಲ್ಲಿ ಇದ್ದಾರೋ ಅವರೆಲ್ಲಾ ಪ್ರೊಫೆಸರ್ ಶಿಷ್ಯರೇ. ಆದರೆ ನಂಜುಂಡಸ್ವಾಮಿ ಸಮಸ್ಯೆ ಏನಿತ್ತು ಅಂದ್ರೆ ಅಸ್ಪೃಶ್ಯತೆ, ಜಾತಿಪದ್ಧತಿ ಇವೆಲ್ಲ ಬಳಕೆಯಾದರೆ ರೈತ ಚಳವಳಿ ಸಾಯುತ್ತೆ. ಅದಕ್ಕಾಗಿ ರೈತಾಪಿ ಅನ್ನೋದು ಒಂದು ವರ್ಗ. ಅದರಲ್ಲಿ ಜಾತಿ ಪ್ರಶ್ನೆಗಳನ್ನು ತಕ್ಷಣ ಎತ್ತಲು ಸಾಧ್ಯವಾಗಲ್ಲ. ಯಾಕೆ ಅಂದ್ರೆ, ಅದರಲ್ಲಿ ಲಿಂಗಾಯತರು ಮತ್ತು ಒಕ್ಕಲಿಗರದೇ ಪ್ರಾಬಲ್ಯ. ಬೇರೆ ಜಾತಿಯವರು ಇದ್ದರೂ ಕರ್ನಾಟಕದಲ್ಲಿ ಪ್ರಾಬಲ್ಯ ಅವರದೇ ಆದ್ದರಿಂದ ಅವೆರಡನ್ನು ಬೆಸೆಯುವುದು ಬಹಳ ಕಷ್ಟದ ಕೆಲಸ. ಅವನ್ನು ಒಂದುಗೂಡಿಸಲು ಹೋದರೆ ಗಾಂಧಿ ಮತ್ತು ಅಂಬೇಡ್ಕರ್ ಸಿದ್ಧಾಂತಗಳ ನಡುವೆ ಇರುವಂತೆ ಇಲ್ಲೂ ಸೈದ್ಧಾಂತಿಕ ಸಂಘರ್ಷಗಳು ಬಂದೇ ಬರುತ್ತವೆ.

ನಂಜುಂಡಸ್ವಾಮಿ ದೇಹಾಂತ್ಯಕ್ಕೆ ಒಂದು ವರ್ಷ ಮೊದಲು ಎಚ್.ಎಸ್. ದೊರೆಸ್ವಾಮಿಯವರು ವೇದಿಕೆಯೊಂದರಲ್ಲಿ ಈ ವಿಚಾರವನ್ನು ಮುಂದಿಟ್ಟು, ಹಳ್ಳಿಗಳಲ್ಲಿ ಕುಡಿಯೋ ನೀರಿಗಾಗಿ ಹೊಡೆದಾಡೋರು, ಜಾತಿ ಜಗಳ ತಡೆಯಲು ಯಾಕೆ ಮುಂದಾಗಲಿಲ್ಲ ಎಂದು ಕೇಳಿದಾಗ ನನ್ನ ಮುಂದಿನ ಗುರಿ ಅದೇ ಎಂದಿದ್ದರಂತೆ ಪ್ರೊಫೆಸರ್.

ಈ ಎರಡೂ ಚಳವಳಿಗಳನ್ನು ಬೆಸೆಯಲು ನಂಜುಂಡಸ್ವಾಮಿಯಂತಹ ಪ್ರಖರ ಚಿಂತಕರಿಗೆ ಏಕೆ ಸಾಧ್ಯವಾಗಲಿಲ್ಲವೆನ್ನುವುದು ಮುಂದಿನ ಚರ್ಚೆಯ ಮುಖ್ಯ ವಿಷಯವಾಗಬಹುದು.

**ನೆನಪಿನ ತುಣುಕುಗಳು**

**ನಿರೂಪಣೆ : ವೀರಭದ್ರಪ್ಪ ಬಿಸ್ಲಳ್ಳಿ**

# ಮೌನಿಯಾದ ಕರ್ನಾಟಕದ ಲೌಲಿ ಡಾರ್ಲಿಂಗ್

**ಕೆ. ರಾಮದಾಸ್**

ಅಶಾಂತ ಕಡಲಿನಂತೆ ಸದಾ ನಮ್ಮನ್ನೆಲ್ಲ ಅಪ್ಪಳಿಸುತ್ತಲೇ ಇದ್ದ ಲಂಕೇಶ್ ಈ ರೀತಿ ಇದ್ದಕ್ಕಿದ್ದಂತೆ ಮೌನಿಯಾಗಿ ವಿದಾಯ ಹೇಳಿರುವುದನ್ನು ಹೇಗೆ ಭರಿಸಿಕೊಳ್ಳಬೇಕೆಂದು ನನಗೆ ತಿಳಿಯುತ್ತಲೇ ಇಲ್ಲ.

ಕಳೆದ ಒಂದು ವರ್ಷದಿಂದ, ನಮ್ಮ ಪ್ರೀತಿಯ ಮೇಷ್ಟ್ರು ಲಂಕೇಶರನ್ನು ಅಪಹರಿಸಲು ಹಿಂಜರಿಯುತ್ತಿದ್ದ ಸಾವು ನಡುರಾತ್ರಿಯಲ್ಲಿ ನಾವೆಲ್ಲ ಮಲಗಿರುವಾಗ, ನಮ್ಮಿಂದ ಅಪಹರಿಸಿ ಬಿಟ್ಟಿರುವುದು, ನಮ್ಮೆಲ್ಲರಿಗೆ ತಬ್ಬಲಿತನವನ್ನು ತಂದುಬಿಟ್ಟಿದೆ.

ಈಚೆಗೆ ಅವರ ಜೊತೆಯಲ್ಲಿ ಮಂಗಳೂರಿಗೆ ಹೋಗಿದ್ದಾಗ ನಾನು, ಅಬ್ದುಲ್ ರಶೀದ್, ಜಾಹ್ನವಿ ಅವರನ್ನು ಒತ್ತಾಯದಿಂದ ಸೋಮೇಶ್ವರದ ಕಡಲತೀರಕ್ಕೆ ಕರೆದುಕೊಂಡು ಹೋದಾಗ, ಪುಟ್ಟ ಹುಡುಗನಂತೆ ನೋಡುತ್ತಾ ಕುಳಿತಿದ್ದರು. ಆಮೇಲೆ ಮತ್ತೆ ನಾವು ಹುಟ್ಟಿ ಬೆಳೆದ ಶಿವಮೊಗ್ಗದ ಸಭೆಯಲ್ಲಿ ಭಾಗವಹಿಸಿ ಹಳೆಯ ನೆನಪುಗಳನ್ನೆಲ್ಲ ಮೆಲುಕು ಹಾಕಿದ್ದೆವು.

ಹೊಸ ಮಿಲೆನಿಯಮ್ ಉದಯವಾಗುವ ನಡುರಾತ್ರಿಯ ಕಾರ್ಯಕ್ರಮದಲ್ಲಿ ಸಂಗೀತ, ಹಾಡು, ಮಾತುಕತೆಯ ಮೂಲಕ ಸಂಭ್ರಮಿಸೋಣವೆಂದು ಮಾತನಾಡಿ ಶಿವಮೊಗ್ಗೆಯಲ್ಲಿ ಬೀಳ್ಕೊಟ್ಟೆವು.

ಲಂಕೇಶ್ ಪತ್ರಿಕೆಯ ಕಚೇರಿಯಲ್ಲಿ ಈ ವರ್ಷ, ಪ್ರತಿ ವರ್ಷ ನಡೆಯುತ್ತಿದ್ದ ಹೊಸ ವರ್ಷದ ನ್ಯೂ ಮಿಲೆನಿಯಮ್ ಕಾರ್ಯಕ್ರಮ ನಡೆಯಲಿಲ್ಲ. ಏನೋ ತಳಮಳ ನನ್ನನ್ನು ಕಾಡುತ್ತಲೇ ಇತ್ತು. ೨೧ನೆಯ ಶತಮಾನವೇ ನಮಗೆ ಪರಕೀಯವಾದಂತೆ. ನಾವು ಹೊಸ ಶತಮಾನವನ್ನು ಪ್ರವೇಶಿಸಲು ಜೀವನೋತ್ಸಾಹದಿಂದ ಸಂಭ್ರಮಿಸುತ್ತಿದ್ದ ಲಂಕೇಶ್‌ರು ಅಶಕ್ತರಾದಂತೆ ಕಳವಳ ಉಂಟಾಗಿತ್ತು. ಸದಾ ಅದಮ್ಯವಾದ ಹೊಸ ಮಿಲೆನಿಯಮನ್ನು ಸ್ವಾಗತಿಸಲು ಮನಸ್ಸಿಲ್ಲದವರಂತೆ ನರಳತೊಡಗಿದ್ದರು. ಆಗಲೇ ಒಂದು ರೀತಿಯಲ್ಲಿ ಮಾನಸಿಕವಾಗಿ ಸಿದ್ಧವಾಗಿದ್ದರು.

ಕಳೆದ ಒಂದು ವರ್ಷದಿಂದಲೇ ಅವರು ತಮ್ಮ ಪ್ರೀತಿಯ ಜಾಣ-ಜಾಣೆಯರಿಗೆಲ್ಲ ವಿದಾಯ ಹೇಳುವ ಅಂತಿಮ ಕ್ಷಣಗಳ ಕೌಂಟ್‌ಡೌನ್ ಪ್ರಾರಂಭಿಸಿಬಿಟ್ಟಿದ್ದರು. ನಾನೂ ಹೆಚ್ಚು ಕಡಿಮೆ ಅವರ ಹಾದಿಯಲ್ಲೇ ಸಾಗುತ್ತಿದ್ದೆ. ಅವರು ಅಡ್ವಾನ್ಸ್ ಬುಕಿಂಗ್ ಮಾಡಿಕೊಂಡಿರುವುದು ನಮಗೆ ಗೊತ್ತಾಗಲೇ ಇಲ್ಲ.

ಮೂರ್ತಿಭಂಜಕರಾದ ಲಂಕೇಶರು ಸ್ಥಾಯಿಯಾಗಿ ಬಿಡುವ ಅಪಾಯಗಳನ್ನು ತಿರಸ್ಕರಿಸುತ್ತಾ ಮಿತ್ರರನ್ನು, ಶತ್ರುಗಳನ್ನು ನಿರಂತರವಾಗಿ ಬದಲಾಯಿಸುತ್ತಲೇ ಏಕಾಂಗಿಯಾಗಿ ಅಮೂರ್ತರಾದರು.

ನಮ್ಮಂತಹ ಅನಾಮಿಕ ಏಕಲವ್ಯರನ್ನು ಸ್ಪರ್ಶಿಸುವ ಕೇಂದ್ರ ಪ್ರಜ್ಞೆಯಾಗಿದ್ದ ಲಂಕೇಶರು ಕರ್ನಾಟಕದ ಯುವಕ-ಯುವತಿಯರಿಗೆ ಪತ್ರಿಕೆಯ ಮೂಲಕ ಎಷ್ಟೊಂದು ಕನಸುಗಳನ್ನು ಹಂಚಿದರು, ಎಷ್ಟೊಂದು ರೀತಿಯ ಜೀವನ ದೃಷ್ಟಿಯನ್ನು ರೂಪಿಸಿದರೆಂಬುದು ಅವರ ಸ್ಪರ್ಶವನ್ನು ಅನುಭವಿಸಿದ ಎಲ್ಲರಿಗೂ ಗೊತ್ತು. ಇಂತಹ ಅದ್ಭುತ ಸೃಷ್ಟಿಯ ಕೇಂದ್ರ ಕಳೆದುಹೋಗಿದೆ. ಮತ್ತೆ ಅನಾಥಪ್ರಜ್ಞೆಯ ತಬ್ಬಲಿತನ ಕಾಡುತ್ತಿದೆ. ಈಗ ಲಂಕೇಶ್ ಕರ್ನಾಟಕದ ಜಾಣ-ಜಾಣೆಯರ ಅಸಂಖ್ಯಾತ ಮನಸ್ಸುಗಳಲ್ಲಿ ಅಚ್ಚಳಿಯದೆ ಉಳಿದಿದ್ದಾರೆ.

ಲಂಕೇಶರ ಮೌನದ ನಿರ್ಗಮನವನ್ನು 'ಸಾವು' ಎಂದು ಕರೆಯಲಾಗುವುದಿಲ್ಲ. ಇದೊಂದು ಅಮೂರ್ತ ರೂಪಾಂತರ. ಇಂತಹ ತಳಮಳದ ಕನಸುಗಳ ಮನಸ್ಸುಗಳಿಂದ ಲಂಕೇಶರ ಪ್ರಜ್ಞಾವಲಯ ಮತ್ತೆ ಮೂರ್ತವಾಗುತ್ತದೆಂಬುದು ನನ್ನ ಆಶಯವಾಗಿದೆ.

ಈ ಅಶಾಂತ - ಸಂತನ ಜೊತೆಯಲ್ಲಿ ಸುಮಾರು ೪೦ ವರ್ಷಗಳ ನಿರಂತರ ಒಡನಾಟದಲ್ಲಿದ್ದ ನಾನು ಈಗ ಇದ್ದಕ್ಕಿದ್ದಂತೆ ಒಬ್ಬಂಟಿಯಾಗಿದ್ದೇನೆ.

# ಪುಂಡರ ಊರಿನೊಳಗೊಂದು ಪರದೇಶಿಯ ಪ್ರತಿಭಟನೆ

**ಕೆ. ರಾಮದಾಸ್**

ಈಚೆಗೆ ಮೈಸೂರಿನಲ್ಲಿ ದೊಂಬಿದಾಸರ ಸಮಾವೇಶ ನಡೆಯಿತು. ಆಕಸ್ಮಿಕವಾಗಿ ಸ್ನೇಹಿತರೊಬ್ಬರು ಅವರ ಆಹ್ವಾನ ಪತ್ರಿಕೆಯೊಂದನ್ನು ನನಗೆ ಕೊಟ್ಟರು. ಅದರ ಮೇಲೆ ಕಣ್ಣಾಡಿಸುತ್ತಿರುವಾಗ ಸಮಾವೇಶದಲ್ಲಿ ಉಪಸ್ಥಿತರಿರುವವರ ಪಟ್ಟಿಯಲ್ಲಿ ನನ್ನ ಹೆಸರನ್ನು ಅಗ್ರಪಂಕ್ತಿಯಲ್ಲಿ ಹಾಕಲಾಗಿತ್ತು. ನನ್ನ ಅನುಮತಿಯನ್ನು ಪಡೆಯದೆ ನನ್ನ ಹೆಸರು ಸೇರ್ಪಡೆಯಾಗಿರುವುದು ನನಗೆ ಅಸಮಾಧಾನ ಉಂಟಾಯಿತು.

ಸಮಾವೇಶ ನಡೆಯುವುದಕ್ಕೆ ಎರಡು ದಿನ ಮೊದಲು ಅದರ ವ್ಯವಸ್ಥಾಪಕ ಮಿತ್ರರು ಅಧಿಕೃತವಾಗಿ ನನ್ನನ್ನು ಆಹ್ವಾನಿಸಲು ಬಂದಿದ್ದರು. ನನ್ನ ಅನುಮತಿ ಇಲ್ಲದೆ ನನ್ನ ಹೆಸರನ್ನು ಹಾಕಿರುವುದಕ್ಕೆ ತೀವ್ರವಾಗಿ ಆಕ್ಷೇಪಿಸಿದೆ. ನನ್ನ ಆಕ್ಷೇಪವನ್ನು ಅವರು ಅಷ್ಟು ಗಂಭೀರವಾಗಿ ಪರಿಗಣಿಸದೆ, "ಪರ್‍ವಾಗಿಲ್ಲ ಬಿಡಿಸಾರ್, ಶೋಷಿತರ, ಸಮಾವೇಶಕ್ಕೆ ನಿಮ್ಮ ಬೆಂಬಲ ಇದ್ದೇ ಇರುತ್ತದೆಂದು ವಿಶ್ವಾಸದಿಂದ ಹಾಕಿದ್ದೇವೆ. ದಯಮಾಡಿ ಬನ್ನಿ" ಎಂದು ಹೇಳಿ ಹೊರಟು ಹೋದರು.

ನಾನು ಯೋಚಿಸತೊಡಗಿದೆ. ನಾನು ಹೋದಲೆಲ್ಲ ನನ್ನ ಸ್ವಭಾವಜನ್ಯವಾದ ವಿವಾದ, ತಕರಾರು, ಪ್ರತಿಭಟನೆಗಳಿಂದ ದೊಂಬಿಯ ಪ್ರಸಂಗಗಳು ನಡೆಯುವುದರಿಂದ, ದೊಂಬಿದಾಸರ ಸಮಾವೇಶದ ವ್ಯವಸ್ಥಾಪಕರು ನನ್ನನ್ನೂ ಒಬ್ಬ ವಾರಸುದಾರನನ್ನಾಗಿ ಭಾವಿಸಿರುವುದಕ್ಕೆ ಆಕ್ಷೇಪಿಸುವ ಬದಲು ಹೆಮ್ಮೆಪಟ್ಟುಕೊಳ್ಳುವುದೇ ಉಚಿತವೆಂದು ಭಾವಿಸಿ ಸುಮ್ಮನಾಗಿಬಿಟ್ಟೆ.

ನನ್ನ ಪಾಡೇ ಹೀಗೆ. ನಾನು ಹುಟ್ಟಿದ್ದು, ಬೆಳದದ್ದು ಒಡನಾಡಿದ ಜೀವನ ಶೈಲಿಯೇ ದೊಂಬಿಯ ಪರಂಪರೆಯಲ್ಲಿ. ಅತ್ಯಂತ ತಕರಾರಿನ ಸ್ವಭಾವದ ನನಗೆ 'ರಾಮದಾಸ'ನೆಂಬ ಹೆಸರನ್ನು ಏಕೆ ಇಟ್ಟರೋ ಗೊತ್ತಿಲ್ಲ. ಇದು ರಾಮಭಕ್ತರ ದೇಶವಾದ್ದರಿಂದ, ಅಂದರೆ ಒರಿಜಿನಲ್ ಕಪಿಗಳ ನಾಡಾಗಿರುವುದರಿಂದ ತಂದೆ-ತಾಯಿಗೆ ಬೇರೇ ಹೆಸರು ಹೊಳೆದಿರಲಾರದು ಅಥವಾ ಅಂತ್ಯಕಾಲದ

ಸ್ವರ್ಗಾರೋಹಣಕ್ಕೆ ಸರಳವಾದ ದಾರಿಯೆಂದು ಅವರು ಭಾವಿಸಿದರೋ ಗೊತ್ತಿಲ್ಲ. ಏನಾದರಾಗಲಿ, ನಾನಂತು ನನ್ನ ನಾಮಧೇಯಕ್ಕೆ ಮಸಿ ಬಳಿಯಲು ನನ್ನ ಶಕ್ತಿಮೀರಿ ಶ್ರಮಿಸಿದ್ದೇನೆ. ರಾಮ-ಕೃಷ್ಣರಾದಿಯಾಗಿ ಅಖಿಲಾಂಡ ಕೋಟಿ ಬ್ರಹ್ಮಾಂಡ ದೇವಾನುದೇವತೆಗಳನ್ನೆಲ್ಲ ಸಾರಾಸಗಟಾಗಿ ತಿರಸ್ಕರಿಸಿ, ಅಡಿಗರು ಹೇಳಿದಂತೆ "ಹನುಮದ್ವಿಕಾಸಕ್ಕೆ ಇಲ್ಲ ಎಲ್ಲೆ" ಎನ್ನುವಂತೆ ಎಲ್ಲ ಸರಹದ್ದುಗಳನ್ನು ಉಲ್ಲಂಘಿಸುತ್ತಲೇ ಬಂದಿದ್ದೇನೆ.

ಬಾಲ್ಯದಿಂದಲೂ ತುಂಟನಾಗಿ ಕಪಿಚೇಷ್ಟೆಯಲ್ಲಿ ನಿರತನಾಗಿದ್ದ ನನ್ನನ್ನು ನಿಯಂತ್ರಿಸಲು ತಾಯಿಯವರು ಪಟ್ಟಪಾಡು, ನನ್ನ ಜೀವನ ವೃತ್ತಾಂತದ ಕಥನವಾಯಿತು. ಹೊಟ್ಟೆಪಾಡಿಗೆ ದಾರಿಯಾಯಿತು. ತಾಯಿಯವರ ಪ್ರೀತಿಯ ನೆರಳಿನಲ್ಲಿಯೇ ನಾನು ಅನೇಕ ಕವಲುದಾರಿಗಳನ್ನು ತಟಾಯಿಸಿಕೊಂಡು ಎಸ್.ಎಸ್.ಎಲ್.ಸಿ.ಯ ಗಂಡಾಂತರವನ್ನು ದಾಟಿ ಪಿ.ಯು.ಸಿ.ಗೆ ಬಂದೆ.

ಆಗ ೬೦ರ ದಶಕದ ನೆಹರೂ ಯುಗದ ಮಹಿಮೆಯ ಕಾಲ. ನೆಹರೂವಿನ ವೈಭವೀಕರಣ ಮತ್ತು ನೆಹರೂ ನಿಂದನೆಯ ಕಾಲ. ಇಂತಹ ಪರ್ವಕಾಲದಲ್ಲಿ ಪಿ.ಯು.ಸಿ ಓದಲು ನಾನು ಶಿವಮೊಗ್ಗಾದ ಸಹ್ಯಾದ್ರಿ ಕಾಲೇಜಿಗೆ ಸೇರಿಕೊಂಡೆ.

ಶಿವಮೊಗ್ಗ ಜಿಲ್ಲೆ ಸಮಾಜವಾದಿಗಳ ಹೋರಾಟದ ಪ್ರತಿಭಟನೆಯ ತವರು ಮನೆಯಾಗಿತ್ತು. ಲೋಹಿಯಾ ಚಿಂತನೆಯ ಸುಂಟರಗಾಳಿಯ ಸುಳಿಗೆ ಸಿಕ್ಕವರ ಬುದ್ಧಿ-ಮನಸ್ಸುಗಳು ಹೊಸ ಕನಸುಗಳು ವೈಹಾಳಿಯಲ್ಲಿ ಲಗ್ಗೆಹಾಕಲು ಹಂಬಲಿಸುತ್ತಿದ್ದ ಕಾಲ. ಈ ವೈಹಾಳಿಯ ಮುಂಚೂಣಿಯಲ್ಲಿದ್ದ ಶಾಂತವೇರಿ ಗೋಪಾಲಗೌಡರು, ಜೆ.ಹೆಚ್. ಪಟೇಲರು ಮತ್ತು ಅವರ ಒಡನಾಡಿಗಳೆಲ್ಲ ಕ್ರಾಂತಿಕಾರಿಗಳಂತೆ ಕಂಗೊಳಿಸುತ್ತಿದ್ದರು.

ಇದೇ ಕಾಲದಲ್ಲಿ ಪಿ. ಲಂಕೇಶರು ಸಹ್ಯಾದ್ರಿ ಕಾಲೇಜಿನಲ್ಲಿ ನಮಗೆ ಇಂಗ್ಲಿಷ್ ಮೇಷ್ಟ್ರಾಗಿದ್ದರು. ಮಿರಿಮಿರಿ ಮಿಂಚುತ್ತಿದ್ದ ಲಂಕೇಶರು, ಅವರ ಹೆಸರಿನ ವೈಚಿತ್ರ್ಯಕ್ಕೆ ಅನುಗುಣವಾಗಿ ಔಪಚಾರಿಕತೆಗಳನ್ನು ಉಲ್ಲಂಘಿಸುವ ಅವರ ರೀತಿ-ನೀತಿಗಳ ವಿವಾದಾಸ್ಪದ ನಡವಳಿಕೆಗಳಿಂದ, ಅಶಾಂತರಾಗಿ ಸ್ವಾತಂತ್ರ್ಯೋತ್ತರ ಭಾರತದ "Angry young man" ಲಕ್ಷಣಗಳಿಂದ ಅಧ್ಯಾಪಕ ವರ್ಗದಲ್ಲೇ 'ರೆಬಲ್‌ಸ್ಟಾರ್'ನಂತೆ ವಿಜೃಂಭಿಸುತ್ತಾ, ನಮಗೆ ಆಪ್ತವಾದರು.

ಮಲೆನಾಡಿನಲ್ಲಿ ತುಂಟ ಹುಡುಗನಾಗಿ ಬೆಳೆದಿದ್ದ ನಾನು, ಶಿವಮೊಗ್ಗದ ಪರಿಸರದ ಪ್ರಚೋದನೆಯಿಂದ ಪ್ರಭಾವಿತನಾಗಿ ನನ್ನ ತುಂಟತನ ರೂಪಾಂತರವಾಗಿ ನನ್ನೊಳಗೂ ಒಬ್ಬ ಭಾರತ ಜನನಿಯ ತನುಜಾತನಾದ 'Angry young man' ಮೂರ್ತನಾಗತೊಡಗಿದ. 'ಏನಾದರು ಮಾಡುತ್ತಿರು ತಮ್ಮ, ನೀನು ಸುಮ್ಮನಿರಬೇಡ'ವೆಂಬಂತೆ ನಾನು ವರ್ತಿಸತೊಡಗಿದೆ. ಸಹ್ಯಾದ್ರಿ ಕಾಲೇಜು, ಕರ್ನಾಟಕ ಸಂಘ, ಪುರಸಭಾ ಮೈದಾನದ ಆವರಣಗಳಲ್ಲಿ ನಮ್ಮ ಜೀವನದ ಗುರಿ ಮತ್ತು ದಾರಿಗಳ ಜಿಜ್ಞಾಸೆಗಳು ಹೆಪ್ಪುಗಟ್ಟತೊಡಗಿದವು.

ನಾನು ಬೆಕ್ಕಿನ ಕಲ್ಲುಮಠದ ವಿದ್ಯಾರ್ಥಿ ನಿಲಯದಲ್ಲಿ ಆಶ್ರಯ ಪಡೆದಿದ್ದರೂ ಧಾರ್ಮಿಕತೆಯಿಂದ ಮುಕ್ತವಾದ ಸೆಕ್ಯುಲರ್ ಪರಿಸರದ ಒಡನಾಟದಿಂದ ಅನಿರ್ಬಂಧಿತವಾದ

ಮತ್ತು ನಿರ್ಭೀತವಾದ ಬೌದ್ಧಿಕ ಲಹರಿಯಲ್ಲಿ ನಿರಂಕುಶಮತಿಯಾಗಿ ವಿಹರಿಸುವ ಅವಕಾಶ ಪ್ರಾಪ್ತವಾಯಿತು.

ಈ ಲಹರಿಯಲ್ಲಿ ತಲ್ಲೀನನಾಗಿರುವಾಗಲೇ ಪಿ.ಯು.ಸಿ.ಯ ಒಂದು ವರ್ಷ ಕಳೆದು ಹೋಯಿತು. ಓದುವುದಕ್ಕೆ ತಯಾರಾಗುವ ಮೊದಲೇ ಪರೀಕ್ಷೆ ಬಂದುಬಿಟ್ಟಿತು. ಪರೀಕ್ಷೆ ಮುಗಿಸಿಕೊಂಡು ನನ್ನ ತಾಯಿಯವರಿದ್ದ ಹಳ್ಳಿಗೆ ಹಿಂತಿರುಗಿದೆ. ನನ್ನ ಪಿ.ಯು.ಸಿ ವಿದ್ಯಾಭ್ಯಾಸದ ಬಗ್ಗೆ ಅವರು ಪುಲಕಿತರಾಗಿದ್ದರು. ನನ್ನ ತುಂಟತನ ಮರೆಯಾಗಿ ಅದು ಅಶಾಂತ ಚಿತ್ತವಾಗಿ ರೂಪಾಂತರವಾಗಿರುವುದನ್ನು ಅವರು ಗಮನಿಸಲೇ ಇಲ್ಲ.

ಮಲೆನಾಡಿನ ಪುಟ್ಟಹಳ್ಳಿ ಅಂಬಾರಗೋಡ್ಲುವಿನಲ್ಲಿ ನರ್ಸಮ್ಮನ್ನಾಗಿ ದೀರ್ಘಕಾಲ ನೆಲಸಿದ್ದ ನನ್ನ ತಾಯಿಯವರನ್ನು ಅಚಾನಕವಾಗಿ ಬಯಲುಸೀಮೆಯ ಸೆರಗಿನಲ್ಲಿದ್ದ ಹೊನ್ನಾಳಿಯ ಆಸ್ಪತ್ರೆಗೆ ವರ್ಗಾಯಿಸಲಾಯಿತು. ಪುಟ್ಟಹಳ್ಳಿಯಲ್ಲಿ ಅಲ್ಪವೆಚ್ಚದಲ್ಲಿ ನಿರಾತಂಕವಾಗಿ ಸಾಗುತ್ತಿದ್ದ ಜೀವನಕ್ಕೆ ಸಂಚಕಾರ ಬಂದಿತ್ತು. ಅನೇಕರು ಹೊನ್ನಾಳಿಯನ್ನು ಪುಂಡರ ಊರೆಂದು, ಅಲ್ಲಿಯ ಜನ ತುಂಬ ಒರಟರೆಂದು ದಿನಕ್ಕೊಂದು ಕೊಲೆ, ಹೊಡೆದಾಟ, ಬಡಿದಾಟ ನಡೆಯುವ ಸ್ಥಳವೆಂದು ತಾಯಿಯವರಿಗೆ ಗಾಬರಿ ಹುಟ್ಟಿಸಿದ್ದರು. ಅವರು ಚಿಂತಾಕ್ರಾಂತರಾದರು.

ಶರಾವತಿ ಕಣಿವೆಯ ಹಿನ್ನೀರಿನ ಪರಿಸರದ ಕಾಡು-ಗುಡ್ಡ-ಬೆಟ್ಟಗಳಲ್ಲಿ 'ಟಾರ್ಜಾನ್ ಬಾಯ್'ನಂತೆ ನನ್ನ ಬಾಲ್ಯವನ್ನು ಕಳೆದ ಭಾವನಾತ್ಮಕ ಸಂಬಂಧದಿಂದ ಬಿಡಿಸಿಕೊಂಡು ಹೋಗಲು ತಯಾರಿರಲಿಲ್ಲ.

ಹೊನ್ನಾಳಿಗೆ ಹೋಗುವುದು ಅನಿವಾರ್ಯವಾಗಿತ್ತು. ಪ್ರಚಂಡ ಆತ್ಮವಿಶ್ವಾಸ ಮತ್ತು ಧೈರ್ಯಸ್ಥೆಯಾದ ತಾಯಿಯವರು ಹೊನ್ನಾಳಿಗೆ ಹೋಗುವುದರಿಂದ ಮಗನ ಕಾಲೇಜು ವ್ಯಾಸಂಗಕ್ಕೆ ಅನುವಾಗಬಹುದೆಂದು ಭಾವಿಸಿದ್ದರು. ನಮ್ಮ ಹುಟ್ಟೂರಿನಂತಿದ್ದ ಮಲೆನಾಡಿನ ಹಳ್ಳಿಯನ್ನು ತೊರೆದು ಕಣ್ಣೀರಿಡುತ್ತಲೇ ಹೊನ್ನಾಳಿಗೆ ವಲಸೆ ಹೊರಟೆವು. ಹಳ್ಳಿಯ ಜನ ಅದೇ ಅಂತಃಕರಣದಿಂದ ಕಣ್ಣೀರು ಹಾಕುತ್ತ ನಮ್ಮನ್ನು ಹೊನ್ನಾಳಿಗೆ ಬಂದು ನಾವು ನೆಲೆಸುವ ಹೊತ್ತಿಗೆ ಸರಿಯಾಗಿ ನನ್ನ ಪಿ.ಯು.ಸಿ. ಫಲಿತಾಂಶ ಪ್ರಕಟವಾಯಿತು. ನಾನು ಫೇಲಾಗಿದ್ದೆ. ನನ್ನ ಬಗ್ಗೆ ನನ್ನ ತಾಯಿಯವರು ಕಟ್ಟಿಕೊಂಡು ಬಂದಿದ್ದ ಕನಸುಗಳೆಲ್ಲ ಭಗ್ನವಾಗಿದ್ದವು. ಅವರು ಕಣ್ಣೀರಿಟ್ಟು ಗೋಳಾಡಿದರು. ನಾನು ಅಪರಾಧಿಯಂತೆ ಪೆಚ್ಚುಮೋರೆ ಹಾಕಿಕೊಂಡು ತೆಪ್ಪಗೆ ಕುಳಿತುಬಿಟ್ಟೆ. "ಆಸ್ತಿ, ಮನೆ ಮಠ ಯಾವುದು ಇಲ್ಲದ ನಮಗೆ ವಿದ್ಯಾಭ್ಯಾಸದ ಆಸರೆಯೂ ಇಲ್ಲದಿದ್ದರೆ, ಬೀದಿಪಾಲಾಗಿ ಬದುಕಬೇಕಾಗುತ್ತದೆನ್ನುವುದನ್ನು ನೆನಪಿಟ್ಟುಕೊ" ಎಂದು ಪರಿಪರಿಯಾಗಿ ಬುದ್ಧಿ ಹೇಳಿ, "ಓದುವುದನ್ನು ತಾತ್ಸಾರ ಮಾಡಬೇಡ" ಎಂದು ತಾಕೀತು ಮಾಡಿದರು. ಅವರು ಗೋಳಾಡುವುದನ್ನು ನೋಡಿ, ನಾನು ಪಾಪಪ್ರಜ್ಞೆಯಿಂದ ಬೆಂದುಹೋದೆ. ಮಂಕುಕವಿದವನಂತೆ ಮನೆಯಲ್ಲಿ ಕುಳಿತುಬಿಟ್ಟೆ.

ನನ್ನ ದಾರುಣವಾದ ಸ್ಥಿತಿಯನ್ನು ಗಮನಿಸಿದ ಕರುಣಾಮಯಿಯಾದ ನನ್ನ ತಾಯಿಯವರ ಮನಸ್ಸು ಕರಗಿತು. "ಫೇಲಾದರೇನಂತೆ ಪ್ರಪಂಚ ಮುಳುಗಿ ಹೋಗಿಲ್ಲ. ಎಂತೆಂತಹ ಶ್ರೀಮಂತರ

ಮಕ್ಕಳೇ ಫೇಲಾಗುತ್ತಾರೆ. ನೀನು ತಬ್ಬಲಿಯಾಗಿ ಬೆಳೆದವನು. ಕಷ್ಟಪಟ್ಟು ಓದಿದರೆ ಮುಂದಿನ ಪರೀಕ್ಷೆಯಲ್ಲಿ ಖಂಡಿತಾ ಪಾಸಾಗುತ್ತದೆ. ಚಿಂತಿಸಬೇಡ" ಎಂದು ನನ್ನನ್ನು ಸಮಾಧಾನಮಾಡಿ ಪ್ರೋತ್ಸಾಹಿಸಿದರು. ಅವರ ಅದಮ್ಯವಾದ ಜೀವನೋತ್ಸಾಹ ನನ್ನನ್ನು ಉತ್ತೇಜಿಸಿತು. ನನ್ನ ಪಾಪಪ್ರಜ್ಞೆ ಮರೆಯಾಯಿತು. ಓದುವ ಏಕಾಗ್ರತೆ ಮಾತ್ರ ಉಂಟಾಗಲಿಲ್ಲ.

ಹೊನ್ನಾಳಿಯ ಪರಿಸರವೇ ನನಗೆ ಪರಕೀಯವಾಗಿತ್ತು. ಶಿವಮೊಗ್ಗಾದ ಬೌದ್ಧಿಕ ಒತ್ತಡವಾಗಲಿ ಅಥವಾ ಮಲೆನಾಡಿನ ನೈಸರ್ಗಿಕ ಪರಿಸರವಾಗಲಿ ಇಲ್ಲದೆ ನಾನು ಏಕಾಂಗಿಯಾಗಿಬಿಟ್ಟೆ. ಬಟ್ಟಬಯಲಿನಲ್ಲಿ ನಡೆಯುವ ಸಂತೆಯ ವಹಿವಾಟಿನಂತೆ ಕಾಣುವ ನಿಷ್ಕ್ರಿಯ ಊರಿನಲ್ಲಿ ಕಾಲ ತಟಸ್ಥವಾದಂತೆ ಕಾಣತೊಡಗಿತು.

ತಾಲ್ಲೂಕು ಕೇಂದ್ರವಾದರೂ ಹೊನ್ನಾಳಿ ಪುಟ್ಟ ಊರು. ತುಂಗಭದ್ರನದಿ ಹರಿಯುತ್ತಿದ್ದರೂ ನನ್ನ ಪಾಲಿಗೆ ಆ ಊರು ಜಡವಾಗಿತ್ತು. ಸದಾಕಾಲ ಮನೆಯಲ್ಲಿ ಕುಳಿತಿರಲಾರದ ನಾನು, ಪರಕೀಯನಂತೆ ಊರಿನ ಬೀದಿಗಳನ್ನು ಸುತ್ತತೊಡಗಿದೆ. ಬಸ್‌ಸ್ಟ್ಯಾಂಡ್, ಕೋಟೆ, ಅಗ್ರಹಾರ, ಒಂದೆರಡು ಅಂಗಡಿ ಬೀದಿಗಳು, ಒಂದು ಟೆಂಟ್ ಸಿನಿಮಾ, ಹಿರೇಕಲ್ಲು ಮಠ, ಕುರುಬರ ಕೇರಿಗಳು, ಗರಡಿಮನೆಗಳು, ಮಾರಿಗುಡಿಗಳು, ಊರ ಹೊರಗಿನ ಪ್ರವಾಸಿಮಂದಿರ, ಹೆದ್ದಾರಿಯ ಸೇತುವೆ ಎಷ್ಟು ಸುತ್ತಿದರೂ ಏಳುಸುತ್ತಿನ ಕೋಟೆಯ ದಿಗ್ಬಂಧನದಂತೆ ಹೊತ್ತು ಸಾಗುತ್ತಿರಲಿಲ್ಲ. ನನ್ನ ಪ್ರಕ್ಷುಬ್ಧ ಮನಸ್ಸಿಗೆ ನೆಮ್ಮದಿ ಇರುತ್ತಿರಲಿಲ್ಲ.

ಊರು ಸುತ್ತುವುದು ಬೇಸರವಾಗಿ ಬಾಡಿಗೆ ಸೈಕಲ್ ಪಡೆದು ಹೊನ್ನಾಳಿಯ ಆಸುಪಾಸಿನ ಪ್ರೇಕ್ಷಣೀಯ ಸ್ಥಳಗಳನ್ನು ಅನ್ವೇಷಿಸತೊಡಗಿದೆ. ನ್ಯಾಮತಿ ಸುರಹೊನ್ನ ಹತ್ತಿರದ ತೀರ್ಥರಾಮೇಶ್ವರ, ಬನವಾಸಿಪಟ್ಟಣದ ಹತ್ತಿರದ ಸೂಳೇಕೆರೆ, ತುಂಗಾ-ಭದ್ರ ನದಿಗಳ ಸಂಗಮ ಸ್ಥಳ ಕೂಡ್ಲಿ, ತುಂಗಭದ್ರೆಯ ತೀರದ ಮಾಸಡಿ, ಬಳ್ಳೇಶ್ವರ ಇತ್ಯಾದಿ ಸ್ಥಳಗಳನ್ನು ಸೈಕಲ್ ಸವಾರಿಯಲ್ಲಿ ವಿಹಾರ ನಡೆಸಿದೆ. ಈ ಪರಿಕ್ರಮದಿಂದ ನನ್ನ ಅಶಾಂತ ಚಿತ್ತಕ್ಕೆ ವಿಸ್ಮರಣೆ ಉಂಟಾಯಿತು.

ನಾನು ಲವಲವಿಕೆಯಿಂದ ಓಡಾಡುತ್ತಿರುವುದನ್ನು ಗಮನಿಸಿ ನನ್ನ ತಾಯಿಯವರಿಗೆ ಖುಷಿಯಾಯಿತು. ನಾನು ಓದುತ್ತಿದ್ದೇನೆಂದು ಭ್ರಮಿಸಿ, ಅವರು ಸಂಭ್ರಮಿಸುತ್ತಿದ್ದರು. ಆಸ್ಪತ್ರೆಯಿಂದ ಬರುವಾಗ ನನಗೆ ಬಲು ಇಷ್ಟವಾದ ಕಲ್ಲಂಗಡಿಹಣ್ಣು, ಕರ್ಬೂಜ, ಬನಾಸ್ಪತ್ರೆ ಹಣ್ಣುಗಳನ್ನು ತರುತ್ತಿದ್ದರು. ಗಮಗಮಿಸುವ ಅವುಗಳ ಸ್ವಾದಕ್ಕೆ ನಾನು ಮರುಳಾಗಿ ಹೋಗಿದ್ದೆ. ನನ್ನ ತಾಯಿಯವರು ತಮ್ಮ ವೃತ್ತಿಯಲ್ಲಿ ತಲ್ಲೀನರಾಗಿ ಜನರ ವಿಶ್ವಾಸ ಗಳಿಸಿದ್ದರು. ನಾವು ಹೊನ್ನಾಳಿಗೆ ಬರುವ ಪೂರ್ವದಲ್ಲಿ ಉಂಟಾಗಿದ್ದ ಪೂರ್ವಗ್ರಹಗಳು ನಿವಾರಣೆಯಾಗಿ ಹೊನ್ನಾಳಿ ನಮಗೆ ಆಪ್ತವಾಯಿತು. ನಮ್ಮ ಬಾಡಿಗೆ ಮನೆಯ ಹಿಂಭಾಗದಲ್ಲೇ ಹರಿಯುತ್ತಿದ್ದ ತುಂಗಭದ್ರೆ ತೀರ, ನನ್ನ ವಿಹಾರದ ತಾಣವಾಯಿತು. ಬೆಳಗ್ಗೆ ಹೊತ್ತು ಈಜುವುದು, ಸಾಯಂಕಾಲ ಸೇತುವೆಯ ಪಕ್ಕದಲ್ಲಿ ವಿಹಾರ ನಡೆಸುವುದು ನನ್ನ ದಿನಚರಿಯಾಯಿತು. ಉಂಡಾಡಿ ಗುಂಡನಂತೆ ಕಾಲಕಳೆಯತೊಡಗಿದೆ.

ಅಪ್ಪಟ ರೈತಾಪಿ ಜನರ ಊರಾಗಿದ್ದ ಹೊನ್ನಾಳಿಯ ವಿದ್ಯಮಾನಗಳಲ್ಲಿ ಪ್ರಕ್ಷುಬ್ಧತೆಯ ಲಕ್ಷಣಗಳಿಲ್ಲದಿದ್ದರೂ, ಮಾರಿಜಾತ್ರೆಗಳ ರೌದ್ರತೆ, ಗರಡಿಮನೆಗಳ ದರ್ಬಾರು, ಪೈಲ್ವಾನರುಗಳ ದಾದಾಗಿರಿಯ ಜಟಾಪಟಿಯಿಂದ ಆಗಾಗ ನಡೆಯುತ್ತಿದ್ದ ಮಾರಾಮಾರಿಗಳಿಂದ ಹೊನ್ನಾಳಿಯ ಖ್ಯಾತಿ ಮತ್ತು ಅಪಖ್ಯಾತಿಗಳು ಜೋಕಾಲಿಯಾಡುತ್ತಿದ್ದವು. 'ಹೊನ್ನಾಳಿ ಹೊಡೆತ'ವೆಂದರೆ ಗರಡಿಮನೆಗಳ ತಾಲೀಮಿನ ವಿಭಿನ್ನ ಪಟ್ಟುಗಳ, ವರಸೆಗಳೆಂದು ಜನ ತಿಳಿದಿದ್ದರೂ ಸರ್ಕಾರಿ ಅಧಿಕಾರಿಗಳು ಮಾತ್ರ ಭೀತಿಯಿಂದ ನಡುಗುತ್ತಿದ್ದರು.

ಈ ಊರಿನಲ್ಲಿ ನನ್ನ ಪಾಲಿಗೆ ಯಮಗಂಡ ಕಾಲ ಬರುತ್ತದೆಂದು ನಾನು ತಿಳಿದಿರಲಿಲ್ಲ. ಪ್ರತಿದಿನ ಸಂಜೆ ಹೋಟೆಲೊಂದರಲ್ಲಿ ಚಹಾ ಕುಡಿದು ಅಲ್ಲಿ ಬರುತ್ತಿದ್ದ ಪೇಪರ್‌ಗಳನ್ನು ಓದುತ್ತಿದ್ದೆ. ಅದರ ಮಾಲಿಕರು ಪರಿಚಯವಾಗಿ ಅವರೊಂದಿಗೆ ಆತ್ಮೀಯತೆ ಬೆಳೆಯಿತು. ಅಲ್ಲಿಗೆ ಬರುತ್ತಿದ್ದ ಅವರ ಸ್ನೇಹಿತರು ಪರಿಚಯವಾಗಿ ಅವರ ಒಡನಾಟ ಪ್ರಾರಂಭವಾಯಿತು. ಅವರಲ್ಲಿ ಕೆಲವರು ಶಾಲಾ ಮಾಸ್ತರರು ಇದ್ದರು. ಮಾಲಿಕರಾದ ಪರಮೇಶ್ವರಯ್ಯನವರನ್ನು ಎಲ್ಲರೂ 'ಸ್ವಾಮಿಯೋರು' ಎಂದು ಅಷ್ಟ ಹೆಸರಿನಿಂದಲೇ ಕರೆಯುತ್ತಿದ್ದರು. ಅವರಿಗೆ ನಾಡು-ನುಡಿಗಳ ಬಗ್ಗೆ ಅಪಾರ ಕಾಳಜಿ ಇತ್ತು. ಸ್ವಾಮಿಯೋರ ಹೋಟೆಲ್ ನನ್ನ ಕಾಲಹರಣದ ಅಡ್ಡೆಯಾಯಿತು. ನಮ್ಮ ಪರಿಚಯ ಆತ್ಮೀಯ ಸ್ನೇಹವಾಗಿ ಪರಿವರ್ತನೆಯಾಗಿತ್ತು. ಆಗಸ್ಟ್ ೧೫ರಂದು ಪುರಭವನದಲ್ಲಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮವಿದೆ ಭಾಗವಹಿಸುವಂತೆ ತಿಳಿಸಿ, ನನಗೊಂದು ಆಹ್ವಾನ ಪತ್ರಿಕೆ ಕೊಟ್ಟರು. ಆಗಸ್ಟ್ ೧೫ರಂದು ೮ ಗಂಟೆಗೆ ಪುರಭವನದ ಮುಂಭಾಗದಲ್ಲಿ ಆ ಪ್ರದೇಶದ ಸ್ವಾತಂತ್ರ್ಯ ಹೋರಾಟಗಾರರಾದ ಮಂತ್ರಿಗಳಿಂದ ಧ್ವಜಾರೋಹಣ ಕಾರ್ಯಕ್ರಮ ನಿಗದಿಯಾಗಿತ್ತು. ನಾನು ಸಮಯಕ್ಕೆ ಸರಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಪುರಭವನಕ್ಕೆ ಹೋದೆ. ಧ್ವಜಾರೋಹಣದ ಸಿದ್ಧತೆಯಲ್ಲಿ ಅಧಿಕಾರಿಗಳು ನಿರತರಾಗಿದ್ದರು. ಕೆಲವು ಶಾಲಾ ಬಾಲಕರು, ಕೆಲವೇ ಕೆಲವು ಆಸಕ್ತ ನಾಗರಿಕರು ಮತ್ತು ಪೋಲಿಸರು ಮಂತ್ರಿಗಳ ಆಗಮನದ ನಿರೀಕ್ಷೆಯಲ್ಲಿದ್ದರು. ಅದೊಂದು ಔಪಚಾರಿಕವಾದ ಸರ್ಕಾರಿ ಕಾರ್ಯಕ್ರಮವಾದ್ದರಿಂದ ಜನಸಾಮಾನ್ಯರು ಅದರ ಸುದ್ದಿಗೆ ಬಂದಿರಲಿಲ್ಲ.

ನಿಗದಿತ ಸಮಯ ಕಳೆದು ಎಷ್ಟು ಹೊತ್ತಾದರು ಮಂತ್ರಿಗಳು ಸುಳಿಯಲೇ ಇಲ್ಲ. ಅಲ್ಲಿಗೆ ಬಂದಿದ್ದ ಜನ ಅತ್ಯಂತ ತಾಳ್ಮೆಯಿಂದ ಪಾರ್ಕಿನಲ್ಲಿ ಸಂಭಾಷಣೆಯಲ್ಲಿ ತೊಡಗಿದ್ದರು. ಸೋನೆ ಮಳೆ ಸಣ್ಣಗೆ ಬೀಳಲಾರಂಭಿಸಿತು. ಪಾರ್ಕಿನಲ್ಲಿದ್ದ ಜನ ಚದುರಿ, ಪುರಭವನದಲ್ಲಿ ಹೋಗಿ ಆಶ್ರಯ ಪಡೆದರು. ಜನರ ನಡುವೆ ನಿಂತಿದ್ದ ನನ್ನ ಮನಸ್ಸು ಕಂಪಿಸತೊಡಗಿತು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ, ಅದರ ಫಲಾನುಭವಿಗಳಾದ ಈ ಮಂತ್ರಿಗಳಿಗೆ ಅಧಿಕಾರದ ಅಮಲಿನಲ್ಲಿ ಆ ದಿನಗಳ ರೋಮಾಂಚನದ ಕ್ಷಣಗಳೇ ಮರೆತುಹೋಗಿರುವುದು ಸ್ವಾತಂತ್ರ್ಯೋತ್ತರ ಭಾರತದ ದುರಂತ. ಇಂತಹವರಿಗಾಗಿ ಕಾಯುವುದು, ಗೌರವಿಸುವುದು ಅವರ ಮಾತುಗಳಿಗೆ ಚಪ್ಪಾಳೆ ತಟ್ಟುವುದು ಎಂತಹ ಅವಮಾನದ ಕೆಲಸವೆನಿಸತೊಡಗಿತು. ತುಂತುರು ಮಳೆಯ ತಣ್ಣನೆಯ ಗಾಳಿಯಲ್ಲೂ ಮೈ ಬಿಸಿಯಾಯಿತು. ಇಲ್ಲಿಂದ ಹೊರಟು ಬಿಡೋಣವೆನ್ನುವಷ್ಟರಲ್ಲಿ

ಮಂತ್ರಿಗಳ ಆಗಮನವಾಯಿತು. ಆಗ ಗಂಟೆ ೯.೩೦ ಆಗಿತ್ತು. ಒಂದೂವರೆ ಗಂಟೆ ತಡವಾಗಿ ಬಂದಿದ್ದರೂ ಅವರ ಹಸನ್ಮುಖದಲ್ಲಿ ವಿಷಾದದ ಛಾಯೆ ಇರಲಿಲ್ಲ. ಅಧಿಕಾರಿಗಳು ಛತ್ರಿ ಹಿಡಿದು ಸಚಿವರನ್ನು ಬರಮಾಡಿಕೊಂಡರು.

ಪಾರ್ಕಿನಲ್ಲಿ ಧ್ವಜಾರೋಹಣ, ಡ್ರಿಲ್ ಟೀಚರ್ ಮಂತ್ರಿಗಳಿಗೆ ಸೆಲ್ಯೂಟ್ ಹೊಡೆದು ಹಗ್ಗದ ಎಸಳನ್ನು ಬಿಚ್ಚಿ ಮಂತ್ರಿಗಳ ಕೈಗೆ ಹಸ್ತಾಂತರಿಸಿ ಅದನ್ನು ಜಗ್ಗುವಂತೆ ಸೂಚಿಸಿದರು. ಮಂತ್ರಿಗಳು ಎಷ್ಟು ಜಗ್ಗಿದರು ಧ್ವಜ ಕಟ್ಟಿದ ಗಂಟು ಜಾರಿಕೊಳ್ಳದ ಕಗ್ಗಂಟಾಯಿತು. ಹಗ್ಗದ ಎಸಳು ಅದಲು ಬದಲಾಯಿತೊ ಅಥವಾ ಮಳೆಯಲಿ ನೆನೆದ ಹಗ್ಗ ಜಾರಲಿಲ್ಲವೋ ಧ್ವಜಾರೋಹಣ ಹಾಸ್ಯಾಸ್ಪದವಾಯಿತು. ಡ್ರಿಲ್ ಟೀಚರ್ ಮೇಲೆ ಮಂತ್ರಿಗಳು, ಅಧಿಕಾರಿಗಳು ರೇಗಾಡಿದರು. ಕೊನೆಗೆ ಕಟ್ಟಿದ ಧ್ವಜವನ್ನು ಇಳಿಸಿ ಮತ್ತೆ ಸಡಿಲವಾಗಿ ಗಂಟು ಹಾರುವಂತೆ ಮಾಡಿ ಧ್ವಜಾರೋಹಣದ ಔಪಚಾರಿಕತೆಯನ್ನು ಮುಗಿಸಲಾಯಿತು. ಎಲ್ಲರೂ ಸೆಲ್ಯೂಟ್ ಹೊಡೆದು ಅಂದಾಜಿನಲ್ಲಿ ರಾಷ್ಟ್ರಗೀತೆಯನ್ನು ಹಾಡಿ, ಸಭಾಂಗಣಕ್ಕೆ ಆಗಮಿಸಿದರು.

ಸಭೆ ಪ್ರಾರಂಭವಾಯಿತು. ತಹಶೀಲ್ದಾರರು ಮಂತ್ರಿಮಹಾಶಯರನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಅಪ್ಪಟ ದೇಶಭಕ್ತರು, ದಕ್ಷ ಆಡಳಿತಗಾರರು ಮತ್ತು ದೀನ ದಲಿತರ ಸೇವೆಗೆ ಕಂಕಣ ಬದ್ಧರಾದವರೆಂದು ಪುಂಖಾನುಪುಂಖವಾಗಿ ಹಾಡಿ ಹೊಗಳಿ ಪುಷ್ಪಮಾಲಾರ್ಪಣೆ ಮಾಡಿ, ನಿಂಬೆಹಣ್ಣು ಕೊಟ್ಟು ಕೈ ಕುಲುಕಿದರು. ಈ ದೇಶಾವರಿಯ ವಿದ್ಯಮಾನ ಮುಗಿದು, ಮಂತ್ರಿಗಳ ಸ್ವಾತಂತ್ರ್ಯೋತ್ಸವ ಸಂದೇಶವನ್ನು ಆಲಿಸಲು ಸಭಿಕರು ಕಾತರರಾಗಿದ್ದರು.

ನನ್ನೊಳಗೆ ಅವಿತುಕೊಂಡಿದ್ದ 'Angry young man' ನನ್ನನ್ನು ತೆಪ್ಪಗಿರಲು ಬಿಡಲಿಲ್ಲ. ನಾನು ವೇದಿಕೆಯ ಮುಂಭಾಗಕ್ಕೆ ತೆರಳಿ, ವಿಳಂಬವಾಗಿ ಆಗಮಿಸಿ, ರಾಷ್ಟ್ರಧ್ವಜಾರೋಹಣವನ್ನು ಅಗೌರವಿಸಿದ್ದಕ್ಕಾಗಿ ಸಭೆಯ ಕ್ಷಮೆಯಾಚಿಸಬೇಕೆಂದು ಆರ್ಭಟಿಸಿದೆ. ಅನಿರೀಕ್ಷಿತವಾದ ನನ್ನ ಆಕ್ಷೇಪದಿಂದ ಸಭೆ ತಬ್ಬಿಬ್ಬಾಯಿತು. "ಯಾವನಲೇ ಅವನು, ಸುಮ್ಮನೇ ಕೂರಲೇ, ತಲಿ, ನೆಟ್ಟಗಿಲ್ಲೇನು" ಎಂದು ಕೆಲವರು ನನ್ನ ಕಡೆಗೆ ಧಾವಿಸಿದರು. ನಾನು ವಿಚಲಿತನಾಗದೆ ಕಲ್ಲಿನಂತೆ ನಿಂತೇ ಇದ್ದೆ. ತಹಶೀಲ್ದಾರರು ಪೊಲೀಸರಿಗೆ ಸೂಚನೆ ನೀಡಿ, "ಅವನನ್ನ ಎಳೆದು ಹೊರಗ್ಹಾಕ್ರಿ" ಎಂದು ತಾಕೀತು ಮಾಡಿದರು. ಪೊಲೀಸರು ಬಂದು ನನ್ನ ಕೈ ಹಿಡಿದು ಎಳೆಯುತ್ತಿದ್ದಂತೆ ಸಭೆಯಲ್ಲಿ ಗದ್ದಲವಾಯಿತು. 'ಅಲ್ರೀ ಹುಡುಗ, ಕೇಳಿದ್ರಾಗ ತಪ್ಪಾರು ಏನೈತಿ' 'ಬರೋಬರಿ ಕೇಳ್ಯಾನ ಬಿಡ್ರಿ ಅವನ್ನ' ಎಂದು ಸಭಿಕರಲ್ಲಿ ಕೆಲವರು ನನ್ನ ಬೆಂಬಲಕ್ಕೆ ನಿಂತರು. ವಾದ-ವಿವಾದಗಳಿಂದ ಸಭೆಯಲ್ಲಿ ಕೋಲಾಹಲವಾಯಿತು. ಸುಪ್ತವಾಗಿದ್ದ ಸ್ಥಳೀಯ ರಾಜಕೀಯದ ಗುಂಪುಗಾರಿಕೆ ಸಭೆ ಅಖಾಡವಾಯಿತು. ಒಳಗಿನ ಗದ್ದಲ ಧ್ವನಿವರ್ಧಕದ ಮೂಲಕ ಹೊರಗಡೆ ಮೊಳಗತೊಡಗಿತು. ಕದನ ಕುತೂಹಲಿಗಳಾದ ಜನರು ಒಟ್ಟಿಗೆ ಜಮಾಯಿಸಿದರು.

ನನ್ನ ತಾಯಿಯವರು ಕೆಲಸ ಮಾಡುತ್ತಿದ್ದ ಆಸ್ಪತ್ರೆ ಪುರಭವನದ ಪಕ್ಕದಲ್ಲೇ ಇತ್ತು. ಈ ಗದ್ದಲದಲ್ಲಿ ನನ್ನನ್ನು ಗುರುತಿಸಿದ ಆಸ್ಪತ್ರೆಯ ನೌಕರ 'ಅಯ್ಯೊ, ಮಂಜಮ್ಮನವರೆ ನಿಮ್ಮ ಮಗನಿಗೆ ಹಿಗ್ಗಾ-ಮುಗ್ಗಾ ಹೊಡೆಯುತ್ತಿದ್ದಾರೆ. ಏನೋ ಗಲಾಟೆ ಕಣ್ರಿ' ಎಂಬ ವರ್ತಮಾನ

ಕೇಳಿ ಭೀತಿಯಿಂದ ತಲ್ಲಣಿಸಿದ ತಾಯಿಯವರು, ಗದ್ದಲದ ನಡುವೆ ಸಭಾಂಗಣದಲ್ಲಿ ನಿಂತಿದ್ದ ನನ್ನ ಕಡೆಗೆ ನುಗ್ಗಿಬಂದರು. 'ಅವನು ನನ್ನ ಮಗ ಬಿಡ್ರಿ ಅವನ್ನ' ಎಂದು ದಾರುಣವಾದ ಆರ್ತಸ್ವರದಲ್ಲಿ ಮೊರೆ ಇಟ್ಟರು. 'ಈ ಹುಡುಗ, ನಿಮ್ಮ ಮಗ ಏನ್ರಮ್ಮ ಕರಕೊಂಡು ಹೋಗ್ರಿ' ಎಂದು ನನ್ನನ್ನು ದಬ್ಬಿದರು.

ನನ್ನ ತಾಯಿಯವರಿಗೆ ಆವೇಶ ಬಂದಾಗಿತ್ತು. 'ಈ ಊರಿನ ಉಸಾಬರಿ ನಿನಗ್ಯಾಕೋ ಯಾರ ತಂಟೆ-ತಕರಾರಿಗೆ ಹೋಗಬ್ಯಾಡ ಅಂತ ನಾನು ಹೇಳಿರಿಲ್ಲಿಲ್ಲಾ' ಎನ್ನುತ್ತಾ ಸಿಟ್ಟಿನಿಂದ ನನ್ನ ಕೆನ್ನೆಗೊಂದು ಏಟು ಬಾರಿಸಿ, 'ಇದು ಪುಂಡರ ಊರು, ನಾವು ಪರದೇಶಿಗಳು', 'ನಡಿ ಮನೆಗೆ' ಎಂದು ಲಗಾಮು ಹಾಕಿದ ಹೋರಿಯನ್ನು ಎಳೆದೊಯುವಂತೆ ನನ್ನ ಕೈಹಿಡಿದು ದರದರನೆ ಎಳೆದುಕೊಂಡು ಹೊರಟರು. ಅಪ್ರಜ್ಞಾಪೂರ್ವಕವಾಗಿ ಅವರು ಆಡಿದ ನಿಂದನಾತ್ಮಕವಾದ ಮಾತುಗಳನ್ನು ಜನ ಗಮನಿಸಿರಲಿಲ್ಲ.

ಭಾರತ ಜನನಿಯ ತನುಜಾತನಾದ ನನ್ನ ಮೊಟ್ಟಮೊದಲ ಸಾರ್ವಜನಿಕ ಪ್ರತಿಭಟನೆ ನನ್ನ ತಾಯಿಯವರ ಮಧ್ಯಪ್ರವೇಶದಿಂದ ಭಗ್ನವಾಯಿತು. ನನಗೆ ಆ ಕ್ಷಣದಲ್ಲಿ ಮುಖಭಂಗವಾದರೂ ನಾನೊಬ್ಬ ಪ್ರತಿಭಟನಾಕಾರನಾಗಿ ಹೊನ್ನಾಳಿಯಲ್ಲಿ ಅಪಾಯಕಾರಿಯಾದ ಅಖಾಡಕ್ಕೆ ಇಳಿದಿದ್ದೆ. ಏನಾದರೇನಂತೆ, ನಾನು ಸೆಪ್ಟೆಂಬರ್ ಪರೀಕ್ಷೆಯಲ್ಲೂ ಫೇಲಾಗಿಬಿಟ್ಟೆ. ನನ್ನ ತಾಯಿಯವರ ಬುದ್ಧಿವಾದ ಫಲಿಸಿರಲಿಲ್ಲ. ನನ್ನ ವಿದ್ಯಾಭ್ಯಾಸದ ದುರ್ಗತಿಯಿಂದ ಅವರು ಖಿನ್ನರಾದರು.

ಹೀಗೆ ದಿಕ್ಕುತಪ್ಪುತ್ತಿದ್ದ ನನ್ನನ್ನು ಒಂದು ಗುರಿ ಮುಟ್ಟಿಸಬೇಕೆಂದು ಸಂಕಲ್ಪ ಮಾಡಿದ ಅವರು ಸುಮ್ಮನಿರಲಿಲ್ಲ. ಸಹೋದ್ಯೋಗಿಗಳು ಕೊಟ್ಟ ಸಲಹೆಯಂತೆ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಹಂಗಾಮಿಯಾದ 'ಮಲೇರಿಯಾ ಸರ್ವಲೆನ್ಸ್ ವರ್ಕರ್' ಕೆಲಸಕ್ಕೆ ಸೇರಿಸಿದರು. ನನ್ನನ್ನು ತೀರ್ಥಹಳ್ಳಿ - ಹುಲಿಕಲ್ ಮಧ್ಯದ 'ಎಡೂರು' ಎಂಬ ದಟ್ಟ ಮಲೆನಾಡಿನ ಹಳ್ಳಿಗೆ ನೇಮಕ ಮಾಡಲಾಯಿತು.

ಸ್ವಾತಂತ್ರ್ಯ ಹೋರಾಟಗಾರರನ್ನು ಕರಿನೀರಿನ ಶಿಕ್ಷೆವಿಧಿಸಿ ಅಂಡಮಾನ ದ್ವೀಪಕ್ಕೆ ಕಳಿಸುತ್ತಿದ್ದರಂತೆ, ನನ್ನ ತಾಯಿಯವರು ನನ್ನನ್ನು ಎಡೂರಿಗೆ ಗಡಿಪಾರು ಮಾಡಿದರು. ನಾನು ಎಡೂರಿನಲ್ಲಿ ಒಂದು ವರ್ಷ ಅಜ್ಞಾತವಾಸವನ್ನು ಅನುಭವಿಸಬೇಕಾಯಿತು.

# ಪ್ರಚಲಿತ

# ಮುಸ್ಲಿಂ ಮೂಲಭೂತವಾದ: ಮುಖಾಮುಖಿ ಹೇಗೆ ?

ರಹಮತ್ ತರೀಕೆರೆ

ಕನ್ನಡದ ಲೇಖಕಿ ಬಾನು ಮುಷ್ತಾಕ್ ಮಸೀದಿಯಲ್ಲಿ ಹೆಂಗಸರಿಗೆ ಪ್ರಾರ್ಥನೆ ಮಾಡುವ ಅವಕಾಶ ಕೊಡಬೇಕು ಎಂದದ್ದಕ್ಕಾಗಿ ಅವರಿಗೆ ಹಾಸನದಲ್ಲಿ ಬಹಿಷ್ಕಾರ ಹಾಕಿದ ಪ್ರಕರಣ ನಡೆಯಿತು. ಈ ವಿಷಯವನ್ನು ನನ್ನ ಮನೆಯಲ್ಲಿ ಇರುವ ಇಬ್ಬರು ಮಹಿಳೆಯರ ಜತೆ ಚರ್ಚಿಸಿದೆ. ಯಾರ ಹಕ್ಕಿನ ಪರ ವಿರೋಧದಲ್ಲಿ ವಿವಾದ ಉಂಟಾಗಿದೆಯೊ, ಆ ವಿಷಯದಲ್ಲಿ ಇವರ ಅಭಿಪ್ರಾಯವೇನು ಎಂದು ಕುತೂಹಲವಿತ್ತು. ಮನೆಯಲಿದ್ದ ಇಬ್ಬರು ಮಹಿಳೆಯರಲ್ಲಿ ಒಬ್ಬಳು ನನ್ನ ಮಡದಿ ಬಾನು. ಮತ್ತೊಬ್ಬರು ೮೦ ವರುಷ ಪ್ರಾಯದ ನನ್ನ ಅತ್ತೆ ಬಾನುವಿನ ತಾಯಿ. ಬಾನು ಆಧುನಿಕ ಶಿಕ್ಷಣ ಪಡೆದವಳು. ಅನೇಕ ಸಾಮಾಜಿಕ ಚಳವಳಿಗಳಲ್ಲಿ ಭಾಗವಹಿಸಿದವಳು. ಅವಳು ಹೇಳಿದಳು: "ಮಸೀದಿಗೆ ಹೋಗಿ ಹೆಂಗಸರು ನಮಾಜು ಮಾಡುವುದು ಮೊದಲಿನಿಂದ ನಮ್ಮ ಧರ್ಮದಲ್ಲಿಲ್ಲ. ಎಂದಾದರೆ, ನನಗೂ ಮಸೀದಿಗೆ ಹೋಗಬೇಕು ಎಂದು ಹಠವಿಲ್ಲ". ಹಜ್ ಯಾತ್ರೆ ಮುಗಿಸಿರುವ, ಬಾನುವಿನಂತೆ ನನ್ನಂತೆ ಕಾಲೇಜು ಕಲಿಯದ ಅತ್ತೆ ಕಟುವಾಗಿ ಹೇಳಿದರು: "ಮಸೀದಿಗೆ ಹೆಂಗಸರು ಬರುವುದು ಬೇಡ ಎನ್ನುವುದಾದರೆ ಹಜ್‌ಗೆ ಯಾಕೆ ಜತೆಯಲ್ಲಿ ಹೋಗಬೇಕು? ಪವಿತ್ರ ಮೆಕ್ಕಾದಲ್ಲೇ ಗಂಡು ಹೆಣ್ಣು ಕೂಡಿ ನಮಾಜು ಮಾಡುತ್ತಾರೆ. ಇನ್ನು ಮಸೀದಿಯಲ್ಲಿ ಹೆಂಗಸರು ನಮಾಜಿಗೆ ಹೋಗುವುದಕ್ಕೆ ಏನಡ್ಡಿ? ಹಾಗಾದರೆ ಖಬರಸ್ತಾನ ಯಾಕೆ ಒಂದೇ ಇರಬೇಕು? ಅದನ್ನೂ ಬೇರೆಬೇರೆ ಮಾಡಿಬಿಡಲಿ, ಮೂರ್ಖರು: " ನನಗೆ ಈ ಪ್ರತಿಕ್ರಿಯೆಯಿಂದ ಸಂತೋಷವೂ ಸೋಜಿಗವೂ ಆಯಿತು. ಯಾಕೆಂದರೆ. ಆಧುನಿಕ ಹೆಣ್ಣಾದ ಬಾನು ಬಹಿಷ್ಕಾರಕ್ಕೆ ವಿರುದ್ಧವಾಗಿ ಪ್ರತಿಭಟನೆಯ ದನಿಯಲ್ಲಿ ಪ್ರತಿಕ್ರಿಯಿಸಬಹುದು. ಹಳೆಗಾಲದ ಸಂಪ್ರದಾಯವಾದಿ ಕುಟುಂಬದಲ್ಲಿ ಬೆಳೆದ ಅತ್ತೆಯವರು ಮಸೀದಿ ಹಾಕಿದ ಬಹಿಷ್ಕಾರದ ಪರ ಇರುತ್ತಾರೆ ಎಂಬುದು ನನ್ನ ಊಹೆಯಾಗಿತ್ತು. ಆದರೆ ಅತ್ತೆಯವರ ಪ್ರತಿಕ್ರಿಯೆಯು ಸಾಮಾನ್ಯ ಜನ ಸಂಪ್ರದಾಯವಾದಿಗಳಾಗಿಯೆ ಚಿಂತಿಸುತ್ತಾರೆ ಎಂದು ಊಹಿಸುವ ವಿಚಾರವಾದದ

ಪೂರ್ವಗ್ರಹವನ್ನು ಭಗ್ನವಾಡಿತು. ಸಂಪ್ರದಾಯವಾದ, ಮೂಲಭೂತವಾದ ಮತ್ತು ವೈಚಾರಿಕತೆಗಳನ್ನು ಕುರಿತು ಹೊಸತಾಗಿಯೇ ಆಲೋಚಿಸಬೇಕೆಂದು ಸೂಚಿಸಿತು.

ಮುಸ್ಲಿಂ ಮೂಲಭೂತವಾದವು, ಇಸ್ಲಾಮಿನ ಮುಸ್ಲಿಮರ ಮುಖ್ಯ ಶತ್ರುಗಳಲ್ಲಿ ಒಂದಾಗಿದೆ. ಅದು ಮೂಲತಃ ಒಂದು ಪ್ರತಿಗಾಮಿ ಶಕ್ತಿ. ಅದು ಆಧುನಿಕ ಸಮಾನತೆಯ ಮೌಲ್ಯಗಳನ್ನು ಒಪ್ಪುವುದಿಲ್ಲ; ಬಡವ ಶ್ರೀಮಂತರ ಭೇದವನ್ನು ಒಪ್ಪಿಕೊಳ್ಳುತ್ತದೆ (ಹೆಚ್ಚೆಂದರೆ ಬಡವರಿಗೆ ಸಿರಿವಂತರು ಕರುಣೆದೋರಲು ಉಪದೇಶಿಸುತ್ತದೆ.); ಸ್ತ್ರೀಯರು ಪರಾವಲಂಬಿಗಳಾಗಿ ಇರುವುದನ್ನು ಬಯಸುತ್ತದೆ. ಗಂಡು ಪರ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ; ಧರ್ಮವು ಹಿಂದೆಂದೂ ಇದ್ದಂತೆ ಈಗಲೂ ಪಾಲನೆಯಾಗಬೇಕು ಎಂದು ಚಂಡಿ ಹಿಡಿದು ಹೊಸ ಚಲನೆಯನ್ನು ಅಲ್ಲಗಳೆಯುತ್ತದೆ. ಗಂಡಸರು ಸ್ವೇಚ್ಛೆಯಿಂದ ತಲಾಖ್ ಕೊಡುವುದು, ವರದಕ್ಷಿಣೆಗಾಗಿ ಕಾಡುವುದು, ಮಡದಿಯರನ್ನು ಹೊಡೆದು ಕೊಲ್ಲುವುದು -ಶರೀಯತ್ತಿಗೆ ವಿರುದ್ಧವಾಗಿದ್ದರೂ - ಅವರನ್ನು ಧರ್ಮವಿರೋಧಿಗಳೆಂದು ಅದು ಘೋಷಿಸುವುದಿಲ್ಲ. ಅವರನ್ನು ಶಿಕ್ಷಿಸುವುದಿಲ್ಲ. ಪ್ರಗತಿಪರರ ಭಿನ್ನಾಭಿಪ್ರಾಯವನ್ನು ದಮನಿಸುವ, ಸಂವಾದ ನಿರಾಕರಿಸುವ, ಏಕಪಕ್ಷೀಯವಾಗಿ ಫತ್ವಾ ಹೊರಡಿಸುವ ಅದಕ್ಕೆ, ಪ್ರಜಾಪ್ರಭುತ್ವ ತತ್ವದಲ್ಲಿ ನಂಬಿಕೆಯಿಲ್ಲ. ಕೆಲವು ಇಸ್ಲಾಮಿಕ್ ದೇಶಗಳಲ್ಲಿ ಮುಸ್ಲಿಮರಲ್ಲದ ಅಲ್ಪಸಂಖ್ಯಾತರ ಪಂಥಗಳ ಮೇಲೆ ಅದು ಹಲ್ಲೆ ಮಾಡುತ್ತದೆ. ಬರಹಗಾರರು. ಕಲಾವಿದರು, ಪತ್ರಿಕರ್ತರು ಇದರ ಹೊಡೆತಕ್ಕೆ ಸಿಲುಕಿದ್ದಾರೆ. ಜಗತ್ತಿನ ಬಹುತೇಕ ಇಸ್ಲಾಮಿಕ್ ದೇಶಗಳು ಪ್ರಜಾಪ್ರಭುತ್ವವಿಲ್ಲದ ರಾಷ್ಟ್ರಗಳಾಗಿದ್ದು, ಅಲ್ಲಿ ಮೂಲಭೂತವಾದಿಗಳು ದೊಡ್ಡ ಶಕ್ತಿಯಾಗಿ ಬೆಳೆದುಕೊಂಡಿದ್ದಾರೆ. ಈ ದೇಶಗಳಲ್ಲಿ ಆಳುವ ವರ್ಗದ ರಾಜಕಾರಣಿಗಳು ಭ್ರಷ್ಟತೆ, ದುರಾಡಳಿತ, ಇತ್ಯಾದಿ ರಾಜಕೀಯ ಬಿಕ್ಕಟ್ಟುಗಳಲ್ಲಿ ಸಿಲುಕಿದಾಗೆಲ್ಲ ಅತಿಧಾರ್ಮಿಕ ಎನಿಸಿಕೊಳ್ಳುವ ಅಭಿನಯ ಮಾಡುವ ರೂಢಿ ಬೆಳೆಸಿಕೊಂಡಿದ್ದಾರೆ. ರಾಜಕೀಯ ಪ್ರತಿರೋಧಗಳನ್ನು ನಿಯಂತ್ರಿಸಲು, ಮಹಿಳೆಯರ ಮತ್ತು ಪ್ರಗತಿಪರರ ಚಳವಳಿಯನ್ನು ಬಗ್ಗುಬಡಿಯಲು ಆಡಳಿತವನ್ನು ಇಸ್ಲಾಮೀಕರಣಗೊಳಿಸುವ ತಂತ್ರಗಳನ್ನು ಪ್ರಭುತ್ವಗಳು ಅನುಸರಿಸುತ್ತದೆ. ಭಾರತದಲ್ಲಿ ಕೂಡ ಮೂಲಭೂತವಾದಿಗಳು ಹಾಗೂ ಕೋಮುವಾದಿಗಳು ದಂಗೆಯೆದ್ದಾಗ ಅವರನ್ನು ತೃಪ್ತಿಪಡಿಸುವ ಕೆಲಸವನ್ನು ಶಕ್ತಿರಾಜಕಾರಣ ಮಾಡುತ್ತಿದೆಯಷ್ಟೆ. ಲೇಖಕರ ಮೇಲೆ ಹಾಕುವ ಬಹಿಷ್ಕಾರ ಇಲ್ಲವೇ ಪುಸ್ತಕವೊಂದರ ನಿಷೇಧದಂತಹ ಸಣ್ಣಸಂಗತಿಯ ವಿಷಯದಲ್ಲಿಯೂ ಈ ಅಭಿನಯಗಳು ನಡೆಯುತ್ತಿರುತ್ತವೆ. ಮುಸ್ಲಿಂ ಮೂಲಭೂತವಾದವು ಮುಸ್ಲಿಮರ ಮೇಲಿನ ದೊಡ್ಡ ಮುಜುಗರ ಮತ್ತು ಭಾರಗಳಲ್ಲಿ ಒಂದಾಗಿದೆ. ಅದರಲ್ಲಿ ಬಾನು ಮುಷ್ತಾಕರ ಮೇಲೆ ಹಾಕಿರುವ ಬಹಿಷ್ಕಾರವೂ ಸೇರಿದೆ. ಇದು ಅತ್ಯಂತ ನೀಚವಾಗಿದ್ದು ಖಂಡನೀಯವಾಗಿದೆ. ಆದರೆ ಈ ಖಂಡನೆಯ ಜತೆಜತೆಯಲ್ಲಿ ಈ ಕಾಲವು ನಮ್ಮಲ್ಲಿ ಸೃಷ್ಟಿಸಿರುವ ಕೆಲವು ವೈರುಧ್ಯಗಳನ್ನೂ ಪರಿಶೀಲಿಸಬೇಕಿದೆ. ಅವೆಂದರೆ -

೧. ಈ ಹೊತ್ತು ಮೂಲಭೂತವಾದಕ್ಕೆ ಜಾಗತಿಕ ರಾಜಕಾರಣದ ಆಯಾಮ ಬಂದಿರುವುದು. ಇದಕ್ಕೆ ಆಯಾ ದೇಶಗಳ ಆಂತರಿಕ ರಾಜಕೀಯ ಬಿಕ್ಕಟ್ಟುಗಳೂ, ಸಾಮ್ರಾಜ್ಯಶಾಹಿ

ಮಧ್ಯಪ್ರವೇಶಗಳೂ ಸೇರಿಕೊಂಡಿರುವುದು. ಮೂಲಭೂತವಾದವು ದೇಶ ಮತ್ತು ಧರ್ಮ ರಕ್ಷಣೆಯ ಹೆಸರಲ್ಲಿ ನ್ಯಾಯಪರ ಎನ್ನಬಹುದಾದ ಕೆಲವು ರಾಜಕೀಯ ಹೋರಾಟಗಳಲ್ಲಿ ಧುಮುಕುವಂತಹ ಆರ್ಥಿಕ ರಾಜಕೀಯ ಸನ್ನಿವೇಶವು ಜಾಗತಿಕವಾಗಿ ಸೃಷ್ಟಿಯಾಗಿರುವುದು. ಚೆಚನ್ಯಾ, ಪ್ಯಾಲಸ್ತೈನ್, ಲೆಬನಾನ್, ಇರಾಕ್, ಅಫಘಾನಿಸ್ತಾನ, ಪಾಕಿಸ್ತಾನ ಮುಂತಾದ ಕಡೆ ನಡೆಯುತ್ತಿರುವ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳಲ್ಲಿ ಮೂಲಭೂತವಾದಿ ಎಂದು ಕರೆಯಲಾಗುವ ಶಕ್ತಿಗಳು ದೊಡ್ಡಪ್ರಮಾಣದಲ್ಲಿ ಭಾಗವಹಿಸಿವೆ. 'ಟೆರರಿಸ್ಟ್' ಎಂದು ಪಶ್ಚಿಮದ ನಾಗರಿಕ ಸಮಾಜ ಕರೆಯುವ ಹಮಾಸ್ ಸಂಘಟನೆ ಇರದಿದ್ದರೆ. ಪ್ಯಾಲೆಸ್ತೈನಿಗಳಿಗೆ ಈಗಿರುವಷ್ಟು ನೆಲವನ್ನೂ ಅಮೆರಿಕಾ ಇಸ್ರೇಲುಗಳು ಉಳಿಸುತ್ತಿರಲಿಲ್ಲ. ಈ ಹೋರಾಟಗಳಲ್ಲಿ ಧರ್ಮಯುದ್ಧ 'ಜಿಹಾದ್' ಪರಿಕಲ್ಪನೆ ಕೆಲಸ ಮಾಡುತ್ತಿದೆ. ಅದು ಸಾಮ್ರಾಜ್ಯಶಾಹಿಗಳಿಗೆ ಕಂಪನವನ್ನೂ ಹುಟ್ಟಿಸಿದೆ. ಜಗತ್ತಿನ ಬಹದೊಡ್ಡ ಭಯೋತ್ಪಾದಕನಾಗಿರುವ ಅಮೇರಿಕಕ್ಕೆ, ಈ ಹೊತ್ತು ಭಯವಿರುವುದು ಕಮ್ಯುನಿಸ್ಟರಿಂದಲ್ಲ. ಮೊಣಕಾಲೂರುವ ಭಾರತದಂತಹ ಜಗತ್ತಿನ ಬಹುದೊಡ್ಡ ಪ್ರಜಾಪ್ರಭುತ್ವ ದೇಶಗಳಿಂದಲ್ಲ. ಲ್ಯಾಡೆನ್ ಅಂತಹವರಿಂದ ಎನ್ನುವುದು ಒಂದು ವಿಕಟಸ್ಥಿತಿಯಾಗಿದೆ. ಇಂದು ಮೂಲಭೂತವಾದಕ್ಕೆ ಕ್ರಾಂತಿಕಾರಕರ ಪಾತ್ರವನ್ನು ಕೊಟ್ಟಿರುವುದು ಧರ್ಮವಲ್ಲ, ಲೂಟಿಕೋರ ನೀತಿ ಅನುಸರಿಸುತ್ತಿರುವ ಪ್ರಜಾಪ್ರಭುತ್ವ ದೇಶಗಳು. ಇವುಗಳ ವಸಾಹತುಶಾಹಿ ಆಕ್ರಮಣಗಳಿಗೆ ತಕ್ಕ ಪ್ರತಿರೋಧ ಒಡ್ಡದ ಜನಪರ ಚಳವಳಿಗಳು ಮತ್ತು ಸುಶಿಕ್ಷಿತ ನಾಗರಿಕ ಸಮಾಜಗಳು. ಹಾಗೆಂದು ಇವನ್ನು ಸಾರಾಸಗಟಾಗಿ ಸಮರ್ಥಿಸುವಂತಿಲ್ಲ. ಯಾಕೆಂದರೆ ಇವುಗಳ ಇನ್ನೊಂದು ಸ್ತರದಲ್ಲಿ ಜೀವವಿರೋಧವಿದೆ. ಇದೊಂದು ವಿಷಮಸ್ಥಿತಿ.

೨. ಭಾರತದ ಮಟ್ಟಿಗೆ ಮುಸ್ಲಿಂ ಮೂಲಭೂತವಾದದ ಬೆಳವಣಿಗೆಯಲ್ಲಿ ಹಿಂದುತ್ವವಾದವು ಒಂದು ಪ್ರಚೋದಕವಾಗಿರುವುದು. ಪ್ರಜಾಪ್ರಭುತ್ವ 'ಸಮಾಜವಾದಿ' ಸೆಕ್ಯುಲರ್ ಎಂದು ಘೋಷಿಸಿಕೊಂಡಿರುವ ದೇಶದಲ್ಲಿ ಹುಟ್ಟಿರುವ ಹಿಂದುತ್ವವಾದವು, ಬಹುಸಂಖ್ಯಾತರ ಕಷ್ಟಕ್ಕೆ ಅನ್ಯಧರ್ಮೀಯರು ಹಾಗೂ ಅವರ ವಿದೇಶ ನಿಷ್ಠೆಗಳು ಕಾರಣ ಎಂದು ಪ್ರತಿಪಾದಿಸುತ್ತದೆ. ಕಳಂಕ ಹೊರಿಸುವುದು, ಬಳಿಕ ಆಕ್ರಮಣ ಮಾಡುವುದು ಅದರ ನೀತಿ. ತನ್ನ ಒಳಗಿನ ವೈರುಧ್ಯ ಮತ್ತು ಬಿಕ್ಕಟ್ಟುಗಳನ್ನು ಬಿಡಿಸಿಕೊಳ್ಳುವುದಕ್ಕೆ ಅದು ಆತ್ಮ ವಿಮರ್ಶೆಗೆ ಹೋಗುವ ಬದಲು ಮತ್ತೊಂದು ವೈರುಧ್ಯವನ್ನು ನಿರ್ಮಿಸಿ ತೋರಿಸಿ ಪಾರಾಗುತ್ತಿದೆ. ಉದಾಹರಣೆಗೆ ಜಾತಿಪದ್ಧತಿಯ ಕ್ರೌರ್ಯದಿಂದ ಬೇಸತ್ತ ಅಸ್ಪೃಶ್ಯರು ಮತಾಂತರವಾದರೆ ಅದು ಅನ್ಯಧರ್ಮಗಳ ಪಿತೂರಿ ಎಂದು ಹೇಳುವುದು. ಭಾರತದ ಮುಸ್ಲಿಮರು, ಕ್ರೈಸ್ತರು ಭಾರತೀಕರಣಗೊಳ್ಳಬೇಕು ಮತ್ತು ಮುಖ್ಯ ಪ್ರವಾಹದೊಳಗೆ ಸೇರಿಕೊಳ್ಳಬೇಕು ಎಂದು ಆದೇಶ ಹೊರಡಿಸುವುದು. ಇಂತಹ ಮತೀಯ ಕರೆಗಳಿಂದ ಮುಸ್ಲಿಂ ಮೂಲಭೂತವಾದವು ತನಗೆ ಬೇಕಾದ ಪ್ರಚೋದನೆ ಪಡೆಯುತ್ತದೆ. ಧರ್ಮರಕ್ಷಣೆಯ ಭಯಹುಟ್ಟಿಸಿ ಜನರನ್ನು ಚಿಪ್ಪಿನೊಳಗೆ ಸೇರಿಸುತ್ತದೆ. ಧರ್ಮ, ಸಾಂಸ್ಕೃತಿಕ ಗುರುತು, ಮೂಲಭೂತವಾದ ರಾಜಕೀಯ ಹೋರಾಟ, ಇವು ಜಟಿಲವಾಗಿ ಹೆಣೆದುಕೊಂಡಿರುವ ಈ ಚಾರಿತ್ರಿಕ ಸನ್ನಿವೇಶದಲ್ಲಿ ಧರ್ಮಗಳ ಒಳಗಿಂದಲೇ ಮೂಲಭೂತವಾದವನ್ನು ಮುಖಾಮುಖಿ

ಮಾಡುವುದು ಮತ್ತಷ್ಟು ಏರುಹಾದಿಯಾಗುತ್ತದೆ. ಬಹುಸಂಖ್ಯಾತ ಕೋಮುವಾದದ ಬೆದರಿಕೆಗಳು ಭಾರತದಲ್ಲಿ ಮೂಲಭೂತವಾದದ ಬಲವರ್ಧನೆ ಮಾಡುತ್ತ ಬಂದಿವೆ ಮತ್ತು ಅದರೊಳಗಿಂದ ಹುಟ್ಟುವ ಆಧುನೀಕರಣ, ಸುಧಾರಣೆಯಂತಹ ಯತ್ನಗಳಿಗೆ ಹಿನ್ನಡೆ ತಂದಿವೆ.

೩. ಮೂಲಭೂತವಾದ ಕುರಿತು ಜನಪ್ರಿಯವಾಗಿರುವ ಪೂರ್ವಗ್ರಹಗಳು. ಅವರ ವಿರುದ್ಧದ ನಡೆಸುವ ಹೋರಾಟಕ್ಕೆ ಇನ್ನೊಂದು ತೊಡಕಾಗಿವೆ. ಉದಾಹರಣೆಗೆ ಬಂಡುಕೋರ ಪ್ರಕರಣಗಳನ್ನು ಸೆಕ್ಯುಲರ್ ವಿಚಾರವಾದವು ಕೇವಲ ವ್ಯಕ್ತಿ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿಯ ಹಕ್ಕುಗಳ ದಮನದ ಸೀಮಿತ ಸಂಗತಿಯನ್ನಾಗಿ ನೋಡುತ್ತದೆ. ಈ ಪ್ರಕರಣಗಳಲ್ಲಿ ಮೂಲಭೂತವಾದದ ಅಸಹನೆ, ದಬ್ಬಾಳಿಕೆಗಳು ಮಾತ್ರವಲ್ಲ. ರಾಜಕೀಯ ಪ್ರಜ್ಞೆಯಿಲ್ಲದೆ ವೈಯಕ್ತಿಕ ಸಾಹಸವಾದಿ ಬಂಡುಕೋರತನದಿಂದ ಸತ್ತಂತಿರುವ ಮೂಲಭೂತವಾದಿ ಶಕ್ತಿಗಳಿಗೆ ಮರುಜೀವ ಕೊಡುತ್ತಿರುವ ಲೇಖಕರ ಮತ್ತು ಬಂಡುಕೋರರ ಅಸೂಕ್ಷ್ಮತೆ ಕೂಡ ಇರುವ ಸಾಧ್ಯತೆಗಳಿವೆ. ಅವರ ಬಂಡಾಯದ ಆಶಯ ಪ್ರಾಮಾಣಿಕ ಮತ್ತು ಮಾನವೀಯವಾಗಿದೆ. ಬಂಡಾಯದ ವಿಧಾನದಲ್ಲಿರುವ ಭಾವಾವೇಶ, ತಂತ್ರಹೀನತೆ, ಸಾಮುದಾಯಕ ಪ್ರಜ್ಞೆ ಇಲ್ಲದಿರುವಿಕೆ ಇವು ಗಂಭೀರ ಉದ್ದೇಶವನ್ನೇ ಸೋಲಿಸುತ್ತಿವೆ. ಆರೋಗ್ಯಕರ ಆಶಯಕ್ಕೆ, ಅದನ್ನು ಗೆಲ್ಲಿಸುವ ಯುದ್ಧತಂತ್ರವು ಜೊತೆಗೂಡದಿದ್ದರೆ, ದಂಗೆಯ ಪ್ರಯೋಜನವನ್ನು 'ಶತ್ರು'ಗಳು ಪಡೆದುಕೊಳ್ಳುವರು. ಮೂಲಭೂತವಾದಿಗಳ ವಿರುದ್ಧ ಹೂಡಲಾಗುವ ಸಂಘರ್ಷಗಳಲ್ಲಿ ಮುಸ್ಲಿಮ್‌ದ್ವೇಷಿ ಶಕ್ತಿಗಳು ಪ್ರಯೋಜನ ಪಡೆಯುವುದು ಈ ಹೊತ್ತಿನ ಒಂದು ದೊಡ್ಡ ಸಮಸ್ಯೆಯಾಗಿದೆ. ಜಡ ಕಮ್ಯುನಿಸ್ಟರನ್ನು ಕುರಿತು ಏಳುವ ವಿಮರ್ಶೆಯ ಪ್ರಯೋಜನವನ್ನು ಬಂಡವಾಳಶಾಹಿಗಳೂ ಪಡೆಯುವಂತೆ ಇದು. ಸಲ್ಮಾನ್ ರಶ್ದಿ, ತಸ್ಲೀಮಾ ನಸ್ರೀನ್ ಮುಂತಾದ ಮೂಲಭೂತವಾದ ವಿರೋಧಿ ಲೇಖಕರ ರಕ್ಷಣೆಯನ್ನು, ಸ್ವತಃ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿರುವ, ಜಗತ್ತಿನ ಬಡದೇಶಗಳಿಗೆ ಆಯುಧ ಮಾರಿ ಹಣ ಕಮಾಯಿಸುವ, ತಮಗೆ ಬೇಡವಾದ ಸರಕಾರಗಳನ್ನು ಬುಡಮೇಲು ಮಾಡಲು ಅಂತರ್ಯುದ್ಧ ಮಾಡಿಸುವ, ಬಂಡವಾಳಶಾಹಿ ಸಾಮ್ರಾಜ್ಯಶಾಹಿ ದೇಶಗಳು ಆಶ್ರಯ ಕೊಡುವುದನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಮುಸ್ಲಿಂ ರಾಷ್ಟ್ರಗಳಲ್ಲಿ ಮೂಲಭೂತವಾದ ವಿರೋಧಿ ಚಳವಳಿಗಳಲ್ಲಿ ಇವುಗಳ ಮಧ್ಯಪ್ರವೇಶವು ಮತ್ತಷ್ಟು ಸಮಸ್ಯೆಯನ್ನು ನಿರ್ಮಿಸಿದೆ. ವಾಜಪೇಯಿಯವರ ಕವನಗಳನ್ನು ಅನುವಾದಿಸಿ ದೇಶಭ್ರಷ್ಟನಾಗುವ ಪಾಕಿಸ್ತಾನಿ ಕವಿಗೆ, ಸಂಘಪರಿವಾರವು ಭಾರತಕ್ಕೆ ಕರೆಸಿ ಗೌರವಿಸುವುದು, ತಸ್ಲೀಮಾ ಅವರನ್ನು ಭಾರತಕ್ಕೆ ಕರೆತರಬೇಕು ಇವುಗಳಲ್ಲಿ ಸೇರಿವೆ. ಆರ್ಯರು ಹಿಂದೆ ಗೋಮಾಂಸ ತಿನ್ನುತ್ತಿದ್ದರು ಎಂಬ ವಾಸ್ತವವಾಗಿ ಹೇಳುವ ಚರಿತ್ರೆ ಪುಸ್ತಕವನ್ನು ನಿಷೇಧಿಸುವವರು, 'ಮುಸ್ಲಿಂ' ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಕಾಳಜಿ ಮಾಡುವುದೇ ಒಂದು ವ್ಯಂಗ್ಯ. ಪ್ಯಾಲೆಸ್ತೇನಿಯರ ಸ್ವಂತ ನೆಲವನ್ನು ಕಿತ್ತುಕೊಂಡಿರುವ ಇಸ್ರೇಲನ್ನು, ಚೆಚನ್ಯಾದ ಸ್ವಾಯತ್ತತೆಯ ಹೋರಾಟವನ್ನು ಹೊಸಕಿ ಹಾಕಿರುವ ರಷ್ಯಾವನ್ನು, ಇರಾಕ್, ಇರಾನುಗಳನ್ನು ಆಕ್ರಮಿಸಿಕೊಂಡಿರುವ ಅಮೇರಿಕದಂತಹ ಸಾಮ್ರಾಜ್ಯಶಾಹಿಗಳನ್ನು, ಮಾನ್ಯಮಾಡುವಲ್ಲಿ ಸಂಘಪರಿವಾರದ ಉದ್ದೇಶವು

ಕೇವಲ ಇಸ್ಲಾಮ್ ವಿರೋಧವಾಗಿದೆ. ಹೀಗೆ ಮುಸ್ಲಿಂ ಮೂಲಭೂತವಾದವನ್ನು ವಿರೋಧಿಸುವ ಕೋಮುವಾದ ಮತ್ತು ಸಾಮ್ರಾಜ್ಯಶಾಹಿ ಮಧ್ಯಪ್ರವೇಶವು ಮುಸ್ಲಿಂ ಮೂಲಭೂತವಾದದ ವಿರುದ್ಧ ಏಳುವ ಒಳದಂಗೆಗಳ ಲಯವನ್ನು ತಪ್ಪಿಸಿಬಿಟ್ಟಿದೆ.

೪. ಪಾಶ್ಚಾತ್ಯ ದೇಶಗಳ ಮಾಧ್ಯಮಗಳು ಇಸ್ಲಾಮಿಕ್ ದೇಶಗಳ ಬಗ್ಗೆ ತಳೆದಿರುವ ಧೋರಣೆ ಕೂಡ ಮೂಲಭೂತವಾದದ ಮುಖಾಮುಖಿಯಲ್ಲಿ ತೊಡಕು ಒಡ್ಡಿವೆ. ಈ ಮಾಧ್ಯಮ ಸಂಸ್ಥೆಗಳು ಮುಸ್ಲಿಂ ಸಮಾಜಗಳಿಂದ ವರದಿ ಮಾಡುವ ಬಹುತೇಕ ಸುದ್ದಿಗಳು -ಕಳ್ಳನಿಗೆ ಕೈಕತ್ತರಿಸುವ, ವ್ಯಭಿಚಾರಿಗೆ ಕಲ್ಲು ಹೊಡೆದು ಸಾಯಿಸುವ, ಅಪರಾಧಿಗೆ ಬಹಿರಂಗವಾಗಿ ನೇಣುಹಾಕುವ, ಮುದುಕನೊಬ್ಬ ೧೭ನೇ ಮದುವೆಯಾಗುವ ಮುಂತಾದ ರೋಚಕ ಸುದ್ದಿಗಳು, ಮುಸ್ಲಿಂ ಜಗತ್ತನ್ನು ಅನಾಗರಿಕವೆಂದು ಬಿಂಬಿಸುವ ಈ ನೇತ್ಯಾತ್ಮಕ ದೃಷ್ಟಿಕೋನವು ಭಾರತದ ಮಾಧ್ಯಮಗಳಲ್ಲೂ ಮುಂದುವರೆದಿದೆ. ಈ ಪೂರ್ವಗ್ರಹೀ ದೃಷ್ಟಿಕೋನಕ್ಕೆ ಇಸ್ಲಾಮಿಕ್ ದೇಶಗಳಲ್ಲೂ ಪ್ರಜಾಸತ್ತೆಗಾಗಿ, ಮಾನವ ಹಕ್ಕುಗಳಿಗಾಗಿ, ಮೂಲಭೂತವಾದಿಗಳ ದಬ್ಬಾಳಿಕೆಯ ವಿರುದ್ಧ ನಡೆಯುತ್ತಿರುವ ಹೋರಾಟಗಳ ಮಾಹಿತಿಯೇ ಇಲ್ಲ. ಅಲ್ಲೂ ನಮ್ಮಂತೆ ಬಡತನದಲ್ಲಿ ನರಳುವ ಶಾಂತಿ ಸ್ನೇಹ ಬಯಸುವ ಜನರಿದ್ದಾರೆ ಎಂಬ ಕುತೂಹಲವೂ ಇಲ್ಲ. ಈಚೆಗೆ ಬಾಂಗ್ಲಾದೇಶದಲ್ಲಿ ಮೂಲಭೂತವಾದಿಗಳ ಅಡ್ಡಿಯನ್ನು ಲೆಕ್ಕಿಸದೆ, ಅಲ್ಲಿನ ಪಾರ್ಲಿಮೆಂಟ್, ದೇಶ ಬಿಟ್ಟು ಹೋದ ಹಿಂದೂಗಳ ಆಸ್ತಿಯನ್ನು ಅವರಿಗೆ ಮರಳಿಸುವ ಕಾನೂನನ್ನು ಪಾಸುಮಾಡಿತು. ಕಾಶ್ಮೀರದಲ್ಲಿ ಪಂಡಿತರನ್ನು ಮರಳಿ ಕರೆತರಬೇಕು ಎಂದು ಅಲ್ಲಿನ ಪ್ರಗತಿಪರರು ರ್‍ಯಾಲಿ ನಡೆಸಿದರು. ಇಂತಹ ಸುದ್ದಿಗಳು ಸಣ್ಣಗೆ ಮೂಲೆಯಲ್ಲಿ ಪ್ರಕಟವಾಗುತ್ತವೆ. ಮೂಲಭೂತವಾದಿಗಳ ಫತ್ವಾಗಳನ್ನು ದೊಡ್ಡದಾಗಿ ಬಿಂಬಿಸುವ ಮಾಧ್ಯಮಗಳಿಗೆ, ಅದರ ಹಂಗಿಲ್ಲದೆ ಬದುಕುತ್ತಿರುವ ಬಹುಸಂಖ್ಯಾತ ಮುಸ್ಲಿಮರ ಬದುಕಿನ ಬಗ್ಗೆ ಏನೂ ಗೊತ್ತಿಲ್ಲ. ಈ ಪೂರ್ವಗ್ರಹಗಳು ಕೋಮುವಾದಿಗಳಲ್ಲಿ ಮಾತ್ರವಲ್ಲ, ಉದಾರವಾದಿಗಳಲ್ಲೂ ಪ್ರಗತಿಪರರಲ್ಲೂ ಇವೆ. ತೇಜಸ್ವಿಯವರು ತಮ್ಮ ಮಾತು ಮತ್ತು ಬರೆಹಗಳಲ್ಲಿ ಈ ತನಕ ವ್ಯಕ್ತಪಡಿಸಿರುವ ಗ್ರಹಿಕೆಯನ್ನು ಈ ದೃಷ್ಟಿಯಿಂದ ಪರಿಶೀಲಿಸುವ ಅಗತ್ಯವಿದೆ. ಕೋಮುವಾದಕ್ಕೆ ಮುಸ್ಲಿಮರ ಬಗ್ಗೆ ಸುಳ್ಳು ಹರಡಬೇಕಾದ ಸೈದ್ಧಾಂತಿಕ ರಾಜಕೀಯ ಅನಿವಾರ್ಯತೆಯಿದೆ; ಆದರೆ ಅಂತಹ ಅನಿವಾರ್ಯತೆಯಿಲ್ಲದ ಪ್ರಗತಿಪರರೂ ಪೂರ್ವಗ್ರಹ ತೋರುವುದು ಹೆಚ್ಚು ತುಟ್ಟಿಯಾಗಿದೆ. ಸರಳ ನೈತಿಕ ಆಕ್ರೋಶದಲ್ಲಿ ಎಲ್ಲ ಧಾರ್ಮಿಕ ವಿಕಾರಗಳ ವಿರುದ್ಧ ಚಿಂತಿಸುವ ಅನೇಕ ಪ್ರಗತಿಪರರಿಗೆ ಕೋಮುವಾದ ಮೂಲಭೂತವಾದಗಳ ನಡುವಣ ಸೈದ್ಧಾಂತಿಕ ವ್ಯತ್ಯಾಸಗಳನ್ನು ವಿಶ್ಲೇಷಿಸುವುದು ಅಗತ್ಯವಾಗಿ ಕಂಡಿಲ್ಲ. 'ಹಿಂದೂ ಕೋಮುವಾದವನ್ನು ಕಟುವಾಗಿ ವಿಮರ್ಶಿಸುವ ಪ್ರಗತಿಪರರು, ಮುಸ್ಲಿಂ ಮೂಲಭೂತವಾದದ ಬಗ್ಗೆ ನಿರ್ಲಿಪ್ತವಾಗಿರುತ್ತಾರೆ' ಎಂಬ ಸಂಘಪರಿವಾರದ ಒತ್ತಡ ಇದಕ್ಕೆ ಕಾರಣವೊ, ಧಾರ್ಮಿಕ ಪೂರ್ವಗ್ರಹಗಳಿಂದ ಬಿಡಿಸಿಕೊಳ್ಳಲಾಗದೆ ಇರುವುದು ಕಾರಣವೊ ತಿಳಿಯದಾಗಿದೆ. ತಾತ್ವಿಕ ಅಸೂಕ್ಷ್ಮತೆಯು ನಿರ್ದಿಷ್ಟ ಧರ್ಮ ಮತ್ತು ಸಮುದಾಯವನ್ನು ಕೊಳೆತ ತರಕಾರಿಯಂತೆ ಚಿತ್ರಿಸುವ

ಈ ದೃಷ್ಟಿಕೋನವು ಮುಸ್ಲಿಂ ಮೂಲಭೂತವಾದದ ಹೋರಾಟಕ್ಕೆ ಸಹಾಯಕವಾಗುವ ಬದಲು, ಕೋಮುವಾದಕ್ಕೆ ಪೂರಕವಾಗಿದೆ.

೫. ಕೋಮುವಾದದ ಕೆಲವು ನಿಲುವನ್ನು ಸಮ್ಮತಿಸುವ, ಮತ್ತೆ ಕೆಲವು ನಿಲುವನ್ನು ಅಸಮ್ಮತಿಸುವ ಓಬಿಸಿ ರಾಜಕಾರಣದ ತಾತ್ವಿಕ ಅಸ್ಪಷ್ಟತೆಯು ಇನ್ನೊಂದು ಸಮಸ್ಯೆಯಾಗಿದೆ. ಆಧುನಿಕ ಶಿಕ್ಷಣ ಪಡೆದ ಅನೇಕ ಪ್ರಜ್ಞಾವಂತ ದಲಿತರು ಹಾಗೂ ಹಿಂದುಳಿದ ಜಾತಿಯವರು ಆರೆಸ್ಸೆಸ್ ಸೂಚಿಸುವ ಮೇಲ್ಜಾತಿಯ ಸಾಂಸ್ಕೃತಿಕ ಯಜಮಾನಿಕೆಯನ್ನು ಒಪ್ಪುವುದಿಲ್ಲ. 'ಹಿಂದುತ್ವ' ದ ಒಳಗಿನ ಬ್ರಾಹ್ಮಣಿಕೆ, ವೇದ, ಸಂಸ್ಕೃತ, ಹೋಮ ಹವನ, ಋಷಿಗಳು, ಪುರಾಣಗಳು, ದೇವತೆಗಳು ಇರುವ ಲೋಕವನ್ನು ತಿರಸ್ಕರಿಸುತ್ತಾರೆ. ಭಾರತದ ದಲಿತ ಮತ್ತು ಕೆಳಜಾತಿಯರ ವಿಚಾರವಾದಿ ಚಿಂತನೆಯ ಶಕ್ತಿಮೂಲಗಳು ವೈದಿಕ - ಬ್ರಾಹ್ಮಣವಾದ - ಸನಾತನವಾದಗಳ ವಿರೋಧದೊಳಗೆ ಹುಟ್ಟಿರುವುದು ಇದಕ್ಕೆ ಕಾರಣ. ಆದರೆ ಇದೇ ವಿರೋಧ ನೆಲೆಯ ವಿಚಾರವಾದಿಗಳಲ್ಲಿ ಕೆಲವರು, ಸಂಘಪರಿವಾರ ಹರಡಿರುವ ಕ್ರೈಸ್ತ, ಮುಸ್ಲಿಂ ದ್ವೇಷದ ಬಗ್ಗೆ ನಿರ್ಲಿಪ್ತತೆ ತಾಳುತ್ತಾರೆ, ಇಲ್ಲವೇ ಬೆಂಬಲಿಸುತ್ತಾರೆ. ಶಾಲೆ ಪುಸ್ತಕಗಳಿಂದ ಟಿವಿ.ವೃತ್ತಪತ್ರಿಕೆವರೆಗೆ ಹರಡಿರುವ ಈ ಕೋಮುವಾದಿ ಚಿಂತನೆಗೆ ಒಪ್ಪಿಗೆ ಕೊಟ್ಟಿರುವ ಈ ವಿಚಾರವಾದವು, ಮುಸ್ಲಿಂ ಮೂಲಭೂತವಾದದ ಬಗ್ಗೆ ಕೋಮುವಾದದ ನುಡಿಗಟ್ಟಿನಲ್ಲೇ ಮಾತಾಡುತ್ತದೆ.

೬. ಮುಸ್ಲಿಂ ಮೂಲಭೂತವಾದವನ್ನು ಹಿಂದೂ ಮುಸ್ಲಿಂ 'ಸಾಮರಸ್ಯ' ದ ಚೌಕಟ್ಟುಗಳ ಮೂಲಕ ವಿರೋಧಿಸುವ ಇನ್ನೊಂದು ಜನಪ್ರಿಯ ವಿಧಾನವಿದೆ. ಇದನ್ನು ಪತ್ರಿಕೆಗಳಲ್ಲಿ ಕಾಣಬಹುದು. ಇಲ್ಲಿ ಗಣಪತಿ ಹಬ್ಬದಲ್ಲಿ ಭಾಗವಹಿಸುವ ಮುಸ್ಲಿಮರನ್ನು, ಮೊಹರಂ ಹಬ್ಬದಲ್ಲಿ ಭಾಗವಹಿಸುವ ಹಿಂದುಗಳನ್ನು ಇಲ್ಲಿ ಸೆಕ್ಯುಲರ್ ಮಾದರಿಯೆಂದು ಬಿಂಬಿಸಲಾಗುತ್ತದೆ. ಈ ಸರಳೀಕೃತ ಗ್ರಹಿಕೆಗೆ ಯಾವುದು ಭಯ ಅಥವಾ ಇತರರನ್ನು ಮೆಚ್ಚಿಸಲು ಮಾಡಿದ ಅಭಿನಯ, ಯಾವುದು ನಂಬಿಕೆಯಾಳದಿಂದ ಬಂದ ನಿಜಶ್ರದ್ಧೆ ಎಂಬ ಫರಕು ಗೊತ್ತಾಗುವುದಿಲ್ಲ. ಕೆಲವು ಹಿಂದುತ್ವವಾದಿಗಳನ್ನು ಮೆಚ್ಚಿಸಲು ಸೆಕ್ಯುಲರ್ ಅಥವಾ 'ಭಾರತೀಕರಣ'ಗೊಂಡ ಸಾಮರಸ್ಯದ ಮಾದರಿಗಳಿವೆ. ಬಿಜೆಪಿಯಲ್ಲಿರುವ ಮುಸ್ಲಿಂ ನಾಯಕರೂ ಇಂತಹವರು. ಕರ್ನಾಟಕದಲ್ಲಿ ಮುಮ್ತಾಜ್ ಅಲಿ ಖಾನ್ ಇದಕ್ಕೆ ನಿದರ್ಶನ. ಇಂತಹ ಭಯಭೀರು ಸಾಮರಸ್ಯವಾದಿ ಮಾದರಿಗಳಿಂದ ಮುಸ್ಲಿಂ ಮೂಲಭೂತವಾದವನ್ನು ಎದುರಿಸುವುದು ಸಾಧ್ಯವಿಲ್ಲ. ಈ ಮಾದರಿಗಳಿಗೆ ಮೂಲಭೂತವಾದವನ್ನು ಎದುರಿಸುತ್ತ ಸಮುದಾಯಗಳು ಕಟ್ಟಿಕೊಂಡಿರುವ ಪ್ರತಿರೋಧ ಪರಂಪರೆಯ ಅರಿವೇ ಇಲ್ಲ. ಅದರ ಶಕ್ತಿಯೂ ಇಲ್ಲ. ಮೂಲಭೂತವಾದಕ್ಕೆ ಹೆದರದೆ ತಮ್ಮ ಒಳಗಿನ ಅಗತ್ಯವಾಗಿ ಹುಟ್ಟಿದ ಸೂಫಿತತ್ವಕ್ಕೆ, ಶಿಶುನಾಳನ ಅನುಭಾವಕ್ಕೆ, ಹಿಂದೂಸ್ತಾನಿ ಸಂಗೀತಕ್ಕೆ, ಇಂಗಳಗಿ ಹಸನನ ಲಾವಣಿಗೆ, ಖಾಜಾಸಾಹೇಬನ ತತ್ವಪದಕ್ಕೆ ಸಾಮರಸ್ಯದ ಅಭಿನಯವಿಲ್ಲ. ಈಗ ಈ ಸಂಗೀತ, ಸೂಫಿಸಂ, ಕಲೆಗಳನ್ನು ಆಧುನಿಕ ಕಾಲದ

ಪ್ರಜಾಪ್ರಭುತ್ವವಾದಿ ಮೌಲ್ಯಗಳ ಜತೆಗೆ ಕೂಡಿಸುವ, ಹೀಗೆ ಕೂಡಿಸಿದ್ದನ್ನು ಮೂಲಭೂತವಾದ ವಿರೋಧಿ ಚಳವಳಿಯಲ್ಲಿ ಬೆಸೆಯುವ ಅಗತ್ಯವಿದೆ.

೭. ಧರ್ಮ, ಸಂಸ್ಕೃತಿ, ಸಮುದಾಯ ಎಂಬ ಪರಿಭಾಷೆಯನ್ನು ಮತೀಯವೆಂದು ಜಾತಿಮತಗಳ ಹಂಗಿಲ್ಲದ ಸಮಾಜ ಕಟ್ಟುವ ಕನಸಿನ ಕೆಲವರು ತಿಳಿಯುವುದುಂಟು. ಆದರೆ ಸಾಂಸ್ಕೃತಿಕ ಬುನಾದಿಯಿಲ್ಲದೆ ಕೇವಲ ಶುಷ್ಕ ರಾಜಕೀಯ ಸಿದ್ಧಾಂತಗಳ ಮೇಲೆ ಹುಟ್ಟುವ ಪ್ರತಿರೋಧಕ್ಕೆ ನಮ್ಮ ಸಮಾಜದಲ್ಲಿ ಕ್ರಿಯಾಶೀಲ ಸಾಧ್ಯತೆ ಕಡಿಮೆ. ನಾಸ್ತಿಕವಾದಿ, ವಿಚಾರವಾದಿ ಹಾಗೂ ವ್ಯಕ್ತಿವಾದಿಯಾದ ಕನ್ನಡದ ಸೆಕ್ಯುಲರ್ ಚಿಂತನೆಯು ಮತಧರ್ಮಗಳ ಹೆಸರಿನಲ್ಲಿರುವ ಎಲ್ಲ ಸಂಗತಿಗಳನ್ನು ಅನುಮಾನಿಸುತ್ತದೆ, ನಿರಾಕರಿಸುತ್ತದೆ. ಈಗಲೂ ನಮ್ಮ ಕೆಲವು ವಿಚಾರವಾದಿ ಧಾರೆಗಳಿಗೆ ಧಾರ್ಮಿಕತೆ, ಅನುಭಾವ, ಅಧ್ಯಾತ್ಮ, ಕೋಮುವಾದ, ಮೂಲಭೂತವಾದ, ಮೂಢನಂಬಿಕೆಗಳ ನಡುವೆ ವ್ಯತ್ಯಾಸ ಮಾಡಿಕೊಳ್ಳಲು ಆಗಿಲ್ಲ. ಧರ್ಮ ನಂಬಿ ಬದುಕುತ್ತಿರುವ ಜನಸಮುದಾಯದ ಬಗ್ಗೆ ಅದಕ್ಕೆ ಅನುಮಾನ. ಜನರನ್ನು ಅದು ಧರ್ಮದ ಪಂಕದಲ್ಲಿ ಸಿಕ್ಕಿಬಿದ್ದಿರುವ ಪಶುಗಳಂತೆ ಕಾಣುತ್ತದೆ. ಜನ ಕಟ್ಟಿಕೊಂಡಿರುವ 'ಸಾಂಸ್ಕೃತಿಕ' ಲೋಕಗಳಲ್ಲಿ ಆಧುನಿಕ ಮೌಲ್ಯಗಳ ದೃಷ್ಟಿಯಿಂದ ಒಪ್ಪಲಾಗದ ಸಂಗತಿಗಳಿರುವುದು ನಿಜ. ಹಾಗೆಂದು ಅವರು ಸೃಷ್ಟಿಸಿಕೊಂಡಿರುವ ಇಡೀ ಲೋಕವೇ ಹೇಯವಲ್ಲ. ಅದನ್ನು ತಿರಸ್ಕರಿಸಿರುವ ವಿಚಾರವಾದವು ಪರಂಪರೆಯಿಂದ ಹೆಚ್ಚಿನದನ್ನು ಕಲಿತಿಲ್ಲ ಮತ್ತು ಮತಧರ್ಮಗಳ ಹೆಸರಲ್ಲಿ ಹುಟ್ಟುವ ಮೂಲಭೂತವಾದ ಕೋಮುವಾದಗಳನ್ನು ಎದುರಿಸುವ ತ್ರಾಣವನ್ನು ತೋರಿಸಿಲ್ಲ. ಹೀಗಾಗಿ ಮೂಲಭೂತವಾದಕ್ಕೆ ಧಾರ್ಮಿಕ ನೆಲೆಯಲ್ಲೇ ಪ್ರತಿರೋಧ ಮಾಡುತ್ತ ಬಂದಿರುವ ಪರಂಪರೆಗಳ ಅನುಸಂಧಾನ ಮಾಡುವುದು ಅಗತ್ಯವಿದೆ.

ಬಾನು ಮುಷ್ತಾಕ್ ಬಹಿಷ್ಕಾರ ಪ್ರಕರಣದಲ್ಲಿ ಮೂಲಭೂತವಾದಕ್ಕೆ ವಿಚಾರವಾದಿಗಳಿಂದ, ಪ್ರಗತಿಪರ ಚಿಂತಕರಿಂದ, ಆಧುನಿಕ ನಾಗರಿಕ ಸಮಾಜದಿಂದ, ಸಮಾನತೆ ಬಯಸುವ ಸ್ತ್ರೀವಾದಿಗಳಿಂದ ವಿರೋಧ ವ್ಯಕ್ತವಾಯಿತು. ಇದು ಸಹಜವೂ ಉಚಿತವೂ ಆಗಿತ್ತು. ಆದರೆ ಇದರ ಜತೆಯಲ್ಲೇ ಪ್ರಗತಿಪರ ಚಿಂತಕರಿಂದಲೇ ಮೂಲಭೂತವಾದದ ಜತೆಗೆ ಇಡೀ ಮುಸ್ಲಿಮರನ್ನು ಕುರಿತ ಪೂರ್ವಗ್ರಹಗಳೂ ಪ್ರಕಟವಾದವು. ಸ್ವಾರಸ್ಯಕರವೆಂದರೆ, ಇದೇ ಸಂದರ್ಭದಲ್ಲಿ ಇಸ್ಲಾಮಿಕ್ ಧಾರ್ಮಿಕ ಪಂಡಿತರಾದ ಕೆಲವರು, ಇಸ್ಲಾಮಿನಲ್ಲಿ ಹೆಚ್ಚು ಮಸೀದಿಗೆ ಹೋಗುವ ಚರಿತ್ರೆ ಹಾಗೂ ವರ್ತಮಾನದಲ್ಲಿರುವ ಉದಾಹರಣೆ ಉಲ್ಲೇಖಿಸುತ್ತ, ಮಹಿಳೆಯ ಮಸೀದಿ ಪ್ರವೇಶವನ್ನು ಸಮರ್ಥಿಸಿದರು. ನಾಗರಿಕ ಹಕ್ಕನ್ನು ಧಾರ್ಮಿಕ ಚೌಕಟ್ಟಿನಲ್ಲೇ ಮಂಡಿಸುವ ಮಾದರಿಗಳಿಗೆ ಪರಿಮಿತಿಗಳಿವೆ ನಿಜ. ಆದರೆ ಇಂತಹ ಸನ್ನಿವೇಶಗಳಲ್ಲಿ ಮೂಲಭೂತವಾದದ ಮೇಲೆ 'ಧಾರ್ಮಿಕ' ಎನ್ನಲಾಗುವ ನೆಲೆಯಿಂದ ಬೀಳುವ ಹೊಡೆತಕ್ಕೆ ಬಹಳ ಕಸುವಿರುತ್ತದೆ. ಅದರ ಪರಿಣಾಮ ಆಳವಾಗಿರುತ್ತದೆ. ಇದು ಪ್ರಜಾಪ್ರಭುತ್ವವಾದಿ ನೆಲೆಯ ಹೋರಾಟದ ಪ್ರಾಮುಖ್ಯವನ್ನು ಅಲ್ಲಗಳೆಯುವ ಮಾತಲ್ಲ. ಬದಲಿಗೆ ನಿರ್ದಿಷ್ಟ ಚಾರಿತ್ರಿಕ ಸಂದರ್ಭದಲ್ಲಿ ಧಾರ್ಮಿಕ ನೆಲೆಯ ಪ್ರತಿರೋಧಗಳ ಪ್ರಜಾಪ್ರಭುತ್ವವಾದಿ ರಾಜಕಾರಣದ ಭಾಗವಾಗಿ

ಸೇರಿಕೊಳ್ಳುವುದುಂಟು. ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ಅಂತಹ ಅನೇಕ ಧಾರ್ಮಿಕ ನೆಲೆಯ ಪ್ರತಿರೋಧಿ ಧಾರೆಗಳು ಸೇರಿದ್ದವು. ಸದ್ಯದ ಸಾಮ್ರಾಜ್ಯಶಾಹಿ ಪ್ರತಿರೋಧಗಳಲ್ಲೂ ಈ ಧಾರ್ಮಿಕ ಧಾರೆಗಳಿವೆ. ಮೂಲಭೂತವಾದವನ್ನು ಎದುರಿಸುವಲ್ಲಿ ಧಾರ್ಮಿಕ ಹಾಗೂ ಪ್ರಜಾಪ್ರಭುತ್ವವಾದಿ ನೆಲೆಗಳೆರಡೂ ಮೇಳವಿಸುವ ಬಿಂದುಗಳನ್ನು ಹುಡುಕುವುದರ ಅಗತ್ಯವಿದೆ. ತಟ್ಟನೆ ನೆನಪಾಗುವ ಉದಾಹರಣೆಯೆಂದರೆ ಮುಂಬೈನ ಅಸಘರ್ ಅಲಿ ಇಂಜಿನಿಯರ್ ಅವರದು.

೮. ಆಧುನಿಕ ಸೆಕ್ಯುಲರ್ ಚಿಂತನೆಗಳು ಧರ್ಮವಿರೋಧಿ ಪ್ರಗತಿಪರತೆಯನ್ನು ಮಾತ್ರ ಪರ್ಯಾಯ ಎಂದು ತಿಳಿದಿವೆ. ಜನಸಾಮಾನ್ಯರು ತಮ್ಮ ಧರ್ಮದ ಭಾಗವಾಗಿರುವ ಸಾಂಸ್ಕೃತಿಕ ಲೋಕಗಳ ಜತೆಗೆ ವಿಮರ್ಶಾತ್ಮಕವಾದ ಸಂಬಂಧವೂ ಇಲ್ಲಿ ಜಾತಿ ಅಥವಾ ಧರ್ಮದ ಜತೆಗಿನ ಗುಪ್ತ ಒಪ್ಪಂದದಂತೆ ಕಾಣುತ್ತದೆ. ಇದರಿಂದಲೊ ಏನೊ, ಕೆಲವರಿಗೆ ಸೆಕ್ಯುಲರ್ ಎನಿಸಿಕೊಳ್ಳುವುದು ಎಂದರೆ, ತಂತಮ್ಮ ಜಾತಿ ಮತ್ತು ಧರ್ಮದ ಸಮುದಾಯದ ಜತೆ ಸಂಬಂಧ ಕಡಿದುಕೊಳ್ಳುವುದು ಮತ್ತು ನಾಸ್ತಿಕರೆಂದು ಘೋಷಿಸಿಕೊಳ್ಳುವುದು ಎಂಬಂತಾಗಿದೆ. ಇದರಿಂದ ವೈಯಕ್ತಿಕವಾಗಿ ಅವರಿಗೆ ಸ್ವತಂತ್ರ ಮತ್ತು ಮುಕ್ತ ಬದುಕನ್ನು ಸಾಗಿಸಲು ಸಾಧ್ಯವಾಗಿರಬಹುದು. 'ನಾನೊಬ್ಬ ಹೇಗೆ ಪಾರಾಗಿದ್ದೇನೆ ನೋಡಿ' ಎಂಬ ವ್ಯಕ್ತಿವಾದಿ ಹೆಮ್ಮೆ ಅವರಲ್ಲಿ ಕಾಣಬಹುದು. ಆದರೆ ವಿಶಾಲ ಸಮುದಾಯದ ಜತೆ ಆಪ್ತ ಸಂಬಂಧ ಕಡಿದುಕೊಂಡಿರುವ ಅವರಿಂದ, ಒಟ್ಟು ಸಮಾಜದ ಚಲನಶೀಲತೆಯಲ್ಲಿ ಅವರ ಪಾತ್ರ ಕಡಿಮೆ. ನಾಸ್ತಿಕ ವಿಚಾರವಾದಕ್ಕೆ ಧರ್ಮದ ಸೆರೆಯಲ್ಲಿ ಬಿದ್ದಿರುವ ಜನರನ್ನು ಉದ್ಧರಿಸುವ ಅಹಂಕಾರವೂ ಇರುತ್ತದೆ. ಪ್ರತಿ ಸಮುದಾಯವೂ ತನ್ನ ಧರ್ಮದೊಳಗಿನ ಮೂಲಭೂತವಾದ ಹಾಗೂ ಕೋಮುವಾದಗಳನ್ನು ನಿವಾರಿಸಿಕೊಳ್ಳುವುದಕ್ಕೆ ತನ್ನದೇ ಆದ ಒಳ ಉಪಾಯಗಳನ್ನು ಹೊಂದಿರುತ್ತದೆ. ಇಸ್ಲಾಮಿನಲ್ಲಿ ಸೂಫಿಗಳು, ಲೇಖಕರು, ದಾರ್ಶನಿಕರು, ಜನಪದರು ಚರಿತ್ರೆಯುದ್ದಕ್ಕೂ ಮುಲಭೂತವಾದದ ವಿರುದ್ಧ ಬಗೆಬಗೆಯ ಸೆಣಸಾಟ ಮಾಡುತ್ತ, ಪರ್ಯಾಯಗಳನ್ನು ಹುಟ್ಟಿಸುತ್ತ, ಒಂದು ದೊಡ್ಡ ಪರಂಪರೆ ಕಟ್ಟಿದ್ದಾರೆ. ಇವು ಆಧುನಿಕರೂಪಿ ಮೂಲಭೂತವಾದ ಮತ್ತು ಕೋಮುವಾದ ಎದುರಿಸಲು ಸ್ವಯಂಸಿದ್ಧ ಅಸ್ತ್ರಗಳಲ್ಲ. ಇವನ್ನು ಎದುರಿಸಲು ಪ್ರಗತಿಪರ ಶಕ್ತಿಗಳ ಜತೆಗೆ ಕೂಡಿದ ರಾಜಕೀಯ ಹೋರಾಟವೇ ಬೇಕು. ಇದಕ್ಕಾಗಿ ಚರಿತ್ರೆಯಲ್ಲಿ ನಡೆದ ಹಲವು ಬಗೆಯ ಹೋರಾಟ ಪರಂಪರೆಯ ಅರಿವು ಆಧುನಿಕ ಹೋರಾಟಗಳಿಗೆ ಶಕ್ತಿ ತುಂಬುವ ಸಾಧ್ಯತೆಯನ್ನು ನಿರಾಕರಿಸಬೇಕಿಲ್ಲ.

೯. ಆದರೆ ಎಡಪಂಥೀಯ ಪ್ರಗತಿಪರ ಲೋಕವು ಬಯಸುವ ಸೆಕ್ಯುಲರ್ ಮುಸ್ಲಿಮರ ಜನಪ್ರಿಯ ಮಾದರಿಯೆಂದರೆ, ಸ್ವಧರ್ಮ ದೂರವಾದ ಅಥವಾ ಸ್ವಧರ್ಮ ದ್ವೇಷಿಯಾದ, ಸಮುದಾಯದ ಜತೆ ಸಂಬಂಧ ಕಡಿದುಕೊಂಡ ನಾಸ್ತಿಕವಾದಿ ಮಾದರಿ. ಇದೊಂದು ಸಂಸ್ಕೃತಿಹೀನ ಮಾದರಿ. ಈ ಮಾದರಿಗೆ ಕನ್ನಡದಲ್ಲಿ ಬರೆಹ ಮಾಡುವ ಮುಸ್ಲಿಂ ಲೇಖಕರಿಗೆ ನೀನೇಕೆ ನಿಮ್ಮ ಮಾತೃಭಾಷೆಗಳಲ್ಲಿ ಬರೆಯುವುದಿಲ್ಲ? ನಿಮ್ಮ ಓದುಗರು ಯಾರು, ನಿಮ್ಮ ಮಾತೃಭಾಷಿಕರೊಂದಿಗೆ ನಿಮ್ಮ ಬರವಣಿಗೆಯ ಸಂಬಂಧ ಎಂತಹುದು ಎಂಬ ಪ್ರಶ್ನೆಗಳನ್ನು

ಕೇಳುವುದು ಸಾಧ್ಯವಾಗಿಲ್ಲ. ಇದು ಸೆಕ್ಯುಲರ್ ಮುಸ್ಲಿಮರಿಂದ ತಮ್ಮ ಧರ್ಮದ ಕೇಡುಗಳನ್ನು ಖಂಡಿಸುವುದನ್ನಷ್ಟೆ ಅಲ್ಲ, ನಿರ್ದಿಷ್ಟ ಮಾದರಿಯಲ್ಲಿ ಖಂಡಿಸುವುದನ್ನಷ್ಟೆ ನಿರೀಕ್ಷಿಸುತ್ತದೆ. ಇಂತಹ ಖಂಡನೆಯನ್ನು ಮಾಡಿ 'ನಾನು ಸೆಕ್ಯುಲರ್ ಮುಸ್ಲಿಂ' ಎಂದು ಪ್ರಮಾಣ ಒದಗಿಸುವುದು, ಕೋಮುವಾದಿಗಳ ಮುಂದೆ ಭಾರತೀಯನಾಗಿರುವುದರ ಪುರಾವೆ ಒದಗಿಸುವುದಕ್ಕಿಂತ ಹೆಚ್ಚು ಹಿಂಸೆಯ ಕೆಲಸವಾಗಿದೆ. ಈ ಮಾದರಿಯಲ್ಲಿ ಸೆಕ್ಯುಲರಾಗಿರುವ, ವೈಯಕ್ತಿಕವಾಗಿ ಬಿಡುಗಡೆಗೊಂಡಿರುವ, ನಾಸ್ತಿಕ ಮಾನವತಾವಾದಿಗಳಾಗಿರುವ ಅನೇಕ ಮುಸ್ಲಿಮರಿದ್ದಾರೆ. ಅವರು ಮೂಲಭೂತವಾದಕ್ಕೆ ತೋರುವ ತಿರಸ್ಕಾರವನ್ನೇ ಸಾಮಾನ್ಯ ಮುಸ್ಲಿಮರ ಬಗ್ಗೆಯೂ ತೋರುತ್ತಾರೆ. ಮುಸ್ಲಿಮನಾಗಿ ಹುಟ್ಟಿದ ಪಾಪ ಪರಿಹರಿಸಿಕೊಳ್ಳಲೊ ಎಂಬಂತೆ, 'ಹಿಂದೂ' ಕರಣಗೊಳ್ಳುವ ಹಾದಿ ಹಿಡಿದಿರುವ ಇವರು, ಧಾರ್ಮಿಕ ವಿಕಾರ ಹಾಗೂ ಆಧುನಿಕ ವಿಚಾರವಾದಗಳ ಸಂಕರದಲ್ಲಿ ಹುಟ್ಟಿದ ಮಾದರಿಯವರು. ಇಬ್ಬದಿಯ ತಲ್ಲಣಗಳು ಸೃಜನಶೀಲ ಲೇಖಕರಲ್ಲಿ ಅಪೂರ್ವ ಕಲಾಕೃತಿಗೆ ಕಾರಣವಾಗಬಹುದು. ಆದರೆ ತನ್ನನ್ನು ತಾನೇ ಏಕಾಂಗಿಯಾಗಿಸಿಕೊಂಡ, ಪರಂಪರೆಯ ತಂತಿಲ್ಲದ, ಬೇರಿಲ್ಲದ, ಇಂತಹ ಮಾದರಿಯಿಂದ ಮೂಲಭೂತವಾದದ ಪ್ರತಿರೋಧವನ್ನು ಮಾಡುವುದು ಕಷ್ಟ.

ಧರ್ಮದ ಆಧಾರದಲ್ಲಿ ವಿಭಜನೆಗೊಂಡ ದೇಶವೊಂದರಲ್ಲಿ, ಇಲ್ಲೇ ಉಳಿದ ಮುಸ್ಲಿಮರಲ್ಲಿ, ಮೂಲಭೂತವಾದ ಹಾಗೂ ಕೋಮುವಾದದ ಒತ್ತಡಗಳು ಸಂಕೀರ್ಣವಾದ ಮಾದರಿಗಳನ್ನು ಸೃಷ್ಟಿಸಿವೆ. ಈ ಒತ್ತಡಗಳಲ್ಲೂ ಬಹುಸಂಖ್ಯಾತ ಮುಸ್ಲಿಮರು ಮೂಲಭೂತವಾದದ ಬೆದರಿಕೆಯಿಲ್ಲದೆ ಬದುಕಲು ಕಾರಣಗಳೆಂದರೆ -ಅವರಿಗೆ ನಿತ್ಯ ಬದುಕಿನ ಹೋರಾಟದಲ್ಲಿ ಸಾಂಸ್ಕೃತಿಕ ಗುರುತಿನ ಪ್ರಶ್ನೆ ಅಮುಖ್ಯವಾಗಿರುವುದು; ಅವರು ಸಾಂಸ್ಕೃತಿಕವಾಗಿ ಸ್ಥಳೀಕರಣಗೊಂಡಿರುವುದು ಭಾರತದಲ್ಲಿ ಸೆಕ್ಯುಲರ್ ಚಿಂತಕರ ಧಾರೆಯ ಕವಚ ಇನ್ನೂ ಗಟ್ಟಿಯಾಗಿ ಇರುವುದು, ಹಿಂದೂ ಕೋಮುವಾದವು ಅರೆಸುಳ್ಳು ಮತ್ತು ದ್ವೇಷದ ಸಿದ್ಧಾಂತಗಳ ಮೇಲೆ ನಿಂತಿರುವುದು. ಭಾರತದಲ್ಲಿ ಯಾವತ್ತೂ ಒಂದೇ ಧರ್ಮದ ಜನ ತೀರಾ ಪ್ರತ್ಯೇಕವಾಗಿ ನಿಂತು ಅರ್ಥಪೂರ್ಣವಾಗಿ ಬದುಕಲು ಸಾಧ್ಯವಾಗಿಲ್ಲ. ಹಾಗೆಯೇ ಕೇವಲ ಮೂಲಭೂತವಾದ - ಕೋಮುವಾದಗಳ ವಿರೋಧಕ್ಕೆಂದೇ ಚಳವಳಿಯೊಂದು ಇರುವುದು ಸಾಧ್ಯವಿಲ್ಲ. ಈ ಎರಡೂ ಕೇಡುಗಳನ್ನು ಬಹುಸಂಖ್ಯಾತ ಜಾತ್ಯತೀತ ಜನರೊಂದಿಗೆ ಸೇರಿದ, ಆರ್ಥಿಕ ರಾಜಕೀಯ ಹಕ್ಕುಗಳ ಭಾಗವಾಗಿರುವ ಕೂಡುಚಳವಳಿಯ ಮೂಲಕವೇ ಎದುರಿಸಬೇಕಾಗಿದೆ. ಇಲ್ಲದಿದ್ದರೆ, ನಮ್ಮ ಜತೆ ಯಾರೂ ಇಲ್ಲವೆಂಬ ಅಸಹಾಯಕತೆ ಹುಟ್ಟಿಬಿಡುತ್ತದೆ. ಕೋಮುವಾದದಿಂದ ರಕ್ಷಿಸುವ ಜವಾಬ್ದಾರಿ ಸೆಕ್ಯುಲರ್ ವ್ಯವಸ್ಥೆಯ ಮೇಲಿದೆ ಎಂಬ ನಿರಾತಂಕ ಅವಲಂಬನವು ಆತ್ಮವಿಮರ್ಶೆ ಕಳೆದು ಬಿಡುತ್ತದೆ.

ಈಗಿರುವ ಸವಾಲೆಂದರೆ - ಭಾರತದ ಮುಸ್ಲಿಮರಲ್ಲಿ ಬದುಕುವ ಹಕ್ಕಿನ ಆತ್ಮವಿಶ್ವಾಸವನ್ನೂ ತನ್ನ ಧರ್ಮದೊಳಗೆ ಹುಟ್ಟುವ ವಿಕಾರವನ್ನು ನಿರಾಕರಿಸುವ ಆತ್ಮವಿಮರ್ಶೆಯನ್ನೂ ಏಕಕಾಲಕ್ಕೆ ಮೂಡಿಸುವುದು ಹೇಗೇ? ಇವೆರಡನ್ನೂ ವಿಶಾಲ ನೆಲೆಯ ಪ್ರಜಾಪ್ರಭುತ್ವ ಚಳವಳಿಗಳ

ಭಾಗವಾಗುವಂತೆ ಕಸಿಗೊಳಿಸುವುದು ಹೇಗೆ? ಈ ಸವಾಲಿನಲ್ಲಿ ಸಮುದಾಯ ಹಾಗೂ ಪ್ರಗತಿಪರ ಚಳವಳಿ ಎರಡರ ನಡುವೆಯೂ ಜೀವಂತ ಸಂಬಂಧವುಳ್ಳ ಮುಸ್ಲಿಂ ಬುದ್ಧಿಜೀವಿಗಳ ಪಾತ್ರವು ಮಹತ್ವದ್ದಾಗಿದೆ. ವಿಶಾಲ ಜನಸಮುದಾಯದ ಜತೆ ಆಪ್ತ ಮತ್ತು ವಿಮರ್ಶಾತ್ಮಕ ಸಂಬಂಧವುಳ್ಳ, ಕೋಮುವಾದಕ್ಕೆ ಪ್ರತಿರೋಧ ಹಾಗೂ ಮೂಲಭೂತವಾದದೊಂದಿಗೆ ಸಂಘರ್ಷ ಮಾಡಬಲ್ಲ, ಪ್ರಗತಿಪರ ಚಳವಳಿಗಳ ಜತೆ ಸಖ್ಯವುಳ್ಳ, ಧರ್ಮಗಳು ಹಡೆದಿರುವ ಆರೋಗ್ಯಕರ ಪರಂಪರೆಯ ಸೂಕ್ಷ್ಮ ಅರಿವುಳ್ಳ ಕೊಂಡಿ ಮತ್ತು ಸೇತುವೆಗಳ ಅಗತ್ಯವಿದೆ. ಇದೊಂದು ಬಹುಮುಖಿ ಹೊಣೆಯನ್ನು ನಿಭಾಯಿಸಬಲ್ಲ ಸಾಂಸ್ಕೃತಿಕ ರಾಜಕೀಯ ಕಾರ್ಯ. ಭಾರತದಲ್ಲಿ ಸೆಕ್ಯುಲರ್ ಚಳವಳಿಗಳ ಜತೆ ತಮ್ಮನ್ನು ಕ್ರೈಸ್ತರು, ಮುಸ್ಲಿಮರು ಗುರುತಿಸಿಕೊಳ್ಳದಿದ್ದರೆ, ಅವರನ್ನು ಅವರವರ ಧರ್ಮಗಳ ಮೂಲಭೂತವಾದಿಗಳು, ಫ್ಯಾಸಿಸ್ಟರು, ಕೋಮುವಾದಿಗಳು ಹರಿದುಹಾಕುವರು.

ಮೂಲಭೂತವಾದ, ಕೋಮುವಾದ ವಿರೋಧಿ ಹೋರಾಟವನ್ನು ಹೀಗೆ ಅನೇಕ ವೈರುಧ್ಯ ಮತ್ತು ಇಕ್ಕಟ್ಟುಗಳಲ್ಲಿ ನಡೆಸಬೇಕಾಗಿದೆ. 'ಹಿಂದೂ'ಗಳ ಮೇಲೆ ಹಲ್ಲೆಯನ್ನು ಎಲ್ಲೇ ಯಾರೇ ಮಾಡಿರಲಿ, ಅವು ಇನ್ನೆಲ್ಲೊ ಇರುವ ಮುಸ್ಲಿಮರ ಬದುಕುವ ಹಕ್ಕನ್ನು ಪ್ರಶ್ನೆಮಾಡುತ್ತವೆ - ಅವು ಕೋಮುವಾದಿಗಳ ಹಲ್ಲೆಗಳನ್ನು ಮತ್ತು ಮಸೀದಿ ಕೆಡವಿದ ಕೃತ್ಯವನ್ನು ನ್ಯಾಯಬದ್ಧಗೊಳಿಸುತ್ತವೆ; ಕೋಮುವಾದದ ವಿರುದ್ಧ ಸೈದ್ಧಾಂತಿಕ ರಾಜಕೀಯ ಹೋರಾಟ ನಡೆಸುತ್ತಿರುವವರ ನೈತಿಕ ಸ್ಥೈರ್ಯ ಕುಗ್ಗಿಸುತ್ತವೆ. ಹೀಗಾಗಿ ಭಾರತದ ಮುಸ್ಲಿಮರು ಪಕ್ಕದ ಮುಸ್ಲಿಂ ದೇಶಗಳಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆವ ಹಿಂಸೆಗೆ ಪ್ರತಿಭಟಿಸುವ ಪ್ರತಿಕ್ರಿಯೆ ತೋರಬೇಕಾಗಿದೆ. ಇದು ಸಹಜ ಮಾನವೀಯ ಕಾಳಜಿಯಿಂದಲ್ಲ. ತಮ್ಮ ಸುರಕ್ಷಿತ ಅಸ್ತಿತ್ವಕ್ಕಾಗಿ ಅಲ್ಲ. ಕೋಮುವಾದದ ಮೇಲಿನ ವಿಶಾಲ ಹೋರಾಟಕ್ಕೆ ನೈತಿಕತೆ ದೊರಕಿಸಲು; ಮೂಲಭೂತವಾದ, ಕೋಮುವಾದಗಳು ಪರಸ್ಪರರ ಕಾರ್ಯಾಚರಣೆಗಳ ಮೂಲಕ ಪ್ರೇರಣೆ ಪಡೆಯುತ್ತವೆ. ಅವುಗಳನ್ನು ನಿರಾಕರಿಸುವವರು ಕೂಡ ಇವೆರಡರ ವಿರುದ್ಧ ದನಿಯೆತ್ತಿ ಪರಸ್ಪರ ಪ್ರೇರಣೆ ಹಾಗೂ ಬಲವನ್ನು ಪಡೆದುಕೊಳ್ಳಬೇಕಿದೆ.

ಈ ಕಾರಣದಿಂದ ಸಮಾನ ಶತ್ರುಗಳ ವಿರುದ್ಧ ಕೆಲಸಮಾಡುವ ಸಂಗಾತಿಗಳ ನಡುವೆ ಮತ್ತಷ್ಟು ತೀವ್ರವಾದ ಸಂವಾದ ನಡೆವ ಅಗತ್ಯ ಎಂದಿಗಿಂತ ಹೆಚ್ಚು ಅಗತ್ಯವಾಗಿದೆ. ಕೋಮುವಾದಿಗಳು ಮೂಲಭೂತವಾದಿಗಳು ತಮ್ಮಲ್ಲಿ ಏಕೀಕರಣ ಸಾಧಿಸಿದ್ದರೆ, ಅವರ ವಿರುದ್ಧ ಕೆಲಸ ಮಾಡುವ ಶಕ್ತಿಗಳು ಪರಸ್ಪರ ಶಂಕೆ, ಬೌದ್ಧಿಕ ಅಸೂಕ್ಷ್ಮತೆ, ರಾಜಕೀಯ ಅರಾಜಕತೆಗಳಲ್ಲಿ ಛಿದ್ರರಾಗಿದ್ದಾರೆ. ಪ್ರತಿಭಟನೆ ಏಕಕಾಲಕ್ಕೆ ಆತ್ಮಪರಿಕ್ಷೆಯೂ, ಸಮುದಾಯದ ಒಳಗೆ ಚಲನೆ ಸಾಧ್ಯವಾಗಬಲ್ಲ ಪ್ರಾಮಾಣಿಕ ಯತ್ನವೂ, ಒಟ್ಟು ಸಮಾಜದ ಆರೋಗ್ಯಕರ ಬದಲಾವಣೆಯ ಅಲೆಯ ಭಾಗವೂ ಆಗುವಂತೆ ಮಾಡಬೇಕಾಗಿದೆ. ಜನಪ್ರಿಯ ಪ್ರತಿಭಟನೆಯ ಹಾದಿಯಲ್ಲಿ ವೈಯಕ್ತಿಕ ವಿರೋಧ ಮಾಡಿ ಹೀರೊ ಆಗುವ ಬದಲು, ಒಂದು ವಿಶಾಲ ನೆಲೆಯಲ್ಲಿ ಸೇರಿ ಮುಖಾಮುಖಿ ಮಾಡುವ ಹಾದಿಗಳ ಹುಡುಕಾಟ ಮಾಡಬೇಕಿದೆ. ಸಂಗಾತಿಗಳ ಪ್ರತಿಕ್ರಿಯೆಗಳಲ್ಲಿ ಒರಟುತನ, ಅವಸರ, ಸರಳೀಕರಣಗಳು ಶತ್ರುವಿಗೆ ಮಾಡಿದ ಸಹಾಯವಾಗುತ್ತವೆ. ಸಂಕೀರ್ಣ ಸಂದರ್ಭಕ್ಕೆ

ಪ್ರತಿಕ್ರಿಯೆಯೂ ಸಂಕೀರ್ಣವಾಗಿರಬೇಕು. ಹಾಗೆಂದು ಸಂಕೀರ್ಣತೆ ಧ್ಯಾನವು ಕ್ರಿಯೆಗಿಳಿಸದ ಅಸ್ಪಷ್ಟತೆ ಮತ್ತು ಹಿಂಜರಿತನಕ್ಕೆ ಸಮರ್ಥನೆಯಾಗಬೇಕಿಲ್ಲ. ಮೂಲಭೂತವಾದದ ನೇರ ಮುಖಾಮುಖಿ ಮಾಡಲಾಗದ ನಿಷ್ಕ್ರಿಯತೆಯಿಂದ ಇಂತಹ ಅತಿಸೂಕ್ಷ್ಮ ವಾದಗಳು ಹುಟ್ಟುತ್ತವೆ ಅನಿಸಬಹುದು. ಆದರೆ ಅವಸರವಾದಿ ಪ್ರಗತಿಪರರ ಟೀಕೆಗಳಿಗೆ ತಲೆಗೆಡಿಸಿಕೊಳ್ಳದೆ. ಸಮಾನ ಮನಸ್ಕರ ಜತೆ ಮತ್ತಷ್ಟು ಸಂವಾದ ಮಾಡುವುದು, ತಪ್ಪನ್ನು ತಿದ್ದಿಕೊಳ್ಳುವುದು ಹಾಗೂ ಮತ್ತಷ್ಟು ದೃಢವಾಗಿ ಸೂಕ್ಷ್ಮವಾಗಿ ಪ್ರತಿರೋಧವನ್ನು ಸೃಷ್ಟಿಸುವುದು - ಇದೊಂದೇ ಸಾಧ್ಯವಿರುವ ಹಾದಿ. ಮೂಲಭೂತವಾದವನ್ನು ಎದುರಿಸುವುದು, ಇಸ್ಲಾಮಿಕ್ ದೇಶಗಳಿಗಿಂತ ಭಾರತದಂತಹ ಪ್ರಜಾಪ್ರಭುತ್ವ ರಾಜಕೀಯ ಪದ್ಧತಿಯೂ ಬಹುಧರ್ಮ ಬಹುಸಂಸ್ಕೃತಿಗಳೂ ಇರುವ ದೇಶಗಳಲ್ಲಿ ಸುಲಭ ಕೂಡ. ಕಾರಣ ಇಲ್ಲಿ ರಕ್ಷಿಸುವ ತೋಳುಗಳು ಬಹಳ ಇವೆ. ಜತೆಗೆ ಇಲ್ಲಿ ಒಬ್ಬರಿಗೊಬ್ಬರು ಕನ್ನಡಿ ಹಿಡಿಯುವ, ಹಿಡಿದ ಕನ್ನಡಿಯಲ್ಲಿ ತಮ್ಮನ್ನು ನೋಡಿ ಕಲಿಯುವ ಅವಕಾಶಗಳು ಇನ್ನೂ ಇವೆ.

# ಜಾತಿವ್ಯವಸ್ಥೆ: ಒಂದು ಪುನರ್ ಚಿಂತನೆ

ಡಾ. ಜೆ.ಎಸ್.ಸದಾನಂದ

ಭಾರತದಲ್ಲಿರುವ ಹಿಂದೂಯಿಸಂ ಜಗತ್ತಿನ ಪ್ರಮುಖ ರಿಲಿಜನ್‌ಗಳಲ್ಲೊಂದು ಎಂದು ಗುರುತಿಸಲ್ಪಟ್ಟಿದೆ. ಹಿಂದೂಯಿಸಂ ಎನ್ನುವುದು ರಿಲೀಜನ್ (ಧರ್ಮ ಅಲ್ಲ) ಎನ್ನುವುದೇ ನಿಜವಾದರೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅದನ್ನು ಮತ್ತು ಅದರ ಹಿಂಬಾಲಕರನ್ನು ನಿರ್ದಿಷ್ಟವಾಗಿ ಗುರುತಿಸಲು ನಮಗೆ ಸಾಧ್ಯವಾಗಬೇಕು. ಹಿಂದೂಯಿಸಂ ಒಂದು ರಿಲಿಜನ್ ಆಗಿ ಸಮಾಜದ ಇತರ ವಿದ್ಯಮಾನಗಳಿಗಿಂತ ಹೇಗೆ ಭಿನ್ನವಾಗಿದೆ? ಮತ್ತು ಇತರೆ ರಿಲೀಜನ್‌ಗಳಾದ ಬುದ್ಧಿಸಂ, ಜೈನಿಸಂ, ಕ್ರಿಶ್ಚಿಯಾನಿಟಿ, ಇಸ್ಲಾಂಗಳಿಗಿಂತ ಹಿಂದೂಯಿಸಂ ಹೇಗೆ ಒಂದು ಪ್ರತ್ಯೇಕ ರಿಲೀಜನ್ನಾಗಿ ತನ್ನ ಅಸ್ತಿತ್ವ ಉಳಿಸಿ ಕೊಂಡಿದೆ? ಎಂಬುದನ್ನು ನಿರ್ಧರಿಸಲು ಕನಿಷ್ಠ ಒಂದಾದರೂ ಸ್ಪಷ್ಟವಾದ ಮಾನದಂಡವಿರಬೇಕು. ೧೯ನೇ ಶತಮಾನದಿಂದಲೂ ಸಂಶೋಧಕರು ಇದಕ್ಕೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಮಾನದಂಡವನ್ನು ಕಂಡುಕೊಳ್ಳಲು ವಿಫಲರಾಗಿದ್ದಾರೆ. ಹಿಂದೂಯಿಸಂ ಬಗ್ಗೆ ಸಂಶೋಧನೆ ಮಾಡಿದವರೆಲ್ಲರೂ ಹೇಳುವಂತೆ ಒಂದು ನಿರ್ದಿಷ್ಟ ಆಚರಣೆಯಾಗಲಿ, ನಂಬಿಕೆಯಾಗಲಿ, ಸಿದ್ಧಾಂತವಾಗಲಿ ಸಮಾನವಾದ ಪೂಜೆ ಪುನಸ್ಕಾರಗಳಾಗಲಿ, ಚರ್ಚ್ ಹಾಗೂ ಮಸೀದಿಗಳಂತಹ ರಚನೆಗಳಾಗಲಿ ಹಿಂದೂಯಿಸಂನಲ್ಲಿ ಇರುವುದಿಲ್ಲ. ಹಾಗಿದ್ದೂ ಸಹ ಇದೊಂದು ರಿಲೀಜನ್ ಮತ್ತು ಜಾತಿವ್ಯವಸ್ಥೆ ಹಿಂದೂಯಿಸಂನ ವಿಶಿಷ್ಟವಾದ ಲಕ್ಷಣ ಎನ್ನುವ ತೀರಾ ಅವೈಜ್ಞಾನಿಕವಾದ ತೀರ್ಮಾನಕ್ಕೆ ಅವರು ಬರುತ್ತಾರೆ. ಜಾತಿವ್ಯವಸ್ಥೆ ಹಿಂದೂಯಿಸಂನ ವಿಶಿಷ್ಟವಾದ ಲಕ್ಷಣ ಎಂದು ಗುರುತಿಸಿದಾಗ ನಮಗೆ ಎದುರಾಗುವ ಮುಖ್ಯ ಸಮಸ್ಯೆಗಳೆಂದರೆ, ಹತ್ತೊಂಭತ್ತನೆ ಶತಮಾನದಿಂದೀಚೆಗೆ ನಮಗೆಲ್ಲರಿಗೂ ತಿಳಿದಿರುವಂತೆ ಕ್ರಿಶ್ಚಿಯನ್ನರು ಹಾಗೂ ಮುಸ್ಲಿಮರಲ್ಲೂ ನಾವು ಜಾತಿಗಳನ್ನು ಕಾಣುತ್ತೇವೆ. ಹಾಗಾದರೆ ಕ್ರಿಶ್ಚಿಯನ್ನರು ಹಾಗೂ ಮುಸ್ಲಿಮರು ಹಿಂದುಗಳಾಗುತ್ತಾರೆಯೇ? ಜಾತಿವ್ಯವಸ್ಥೆಯು ಇತರೆ ಸಾಮಾಜಿಕ ವ್ಯವಸ್ಥೆಗಳಿಗಿಂತ (ಪ್ರಜಾಪ್ರಭುತ್ವ, ಮಧ್ಯಕಾಲೀನ ಊಳಿಗಮಾನ್ಯ ಪದ್ಧತಿ,

ಇತ್ಯಾದಿ) ಭಿನ್ನವಾದುದು ಎಂದು ಗುರುತಿಸಲು ಕನಿಷ್ಠ ಒಂದಾದರೂ ವರ್ಗೀಕರಣ ಸೂಚಕ ಚಿಹ್ನೆ ಇರಬೇಕು. ಅಂತಹ ವರ್ಗೀಕರಣ ಸೂಚಕ ಚಿಹ್ನೆಯನ್ನು ಯಾವ ಸಂಶೋಧಕರೂ ಇದುವರೆವಿಗೆ ಕಂಡುಕೊಂಡಿಲ್ಲ. ಬದಲಾಗಿ ಇಪ್ಪತ್ತನೆಯ ಶತಮಾನದ ಆರಂಭದಲ್ಲಿಯೆ ಹಲವಾರು ಸಂಶೋಧಕರು ಕಂಡುಕೊಂಡಿದ್ದೇನೆಂದರೆ ಭಾರತದಲ್ಲಿ ಜಾತಿ ವ್ಯವಸ್ಥೆಯ ರಚನೆಯನ್ನು ನಿಖರವಾಗಿ ಗುರುತಿಸುವುದು ಕಷ್ಟ ಎಂಬುದನ್ನು. (ಉದಾ: ರಿಸ್ಲಿ -೧೯೧೫, ಬ್ಲಂಬ್-೧೯೩೧) ಪರಿಣಾಮವಾಗಿ ೧೯೩೧ರ ಜನಗಣತಿಯಲ್ಲಿ ಜಾತಿಯ ಗುರುತಿಸುವಿಕೆಯನ್ನು ಕೈಬಿಡಲಾಯಿತು. ಇಷ್ಟರ ನಡುವೆಯೂ ಜಾತಿವ್ಯವಸ್ಥೆಯ ಲಕ್ಷಣಗಳನ್ನು ಗುರುತಿಸುವ ಸಂಶೋಧನೆಯು ಅಭಾದಿತವಾಗಿ ಮುಂದುವರೆದಿದೆ. ಜಾತಿವ್ಯವಸ್ಥೆಯನ್ನು ಕುರಿತು ಇದುವರೆಗೆ ನಡೆದಿರುವ ಸಂಶೋಧನೆಯ ಸಾರಾಂಶವನ್ನು ನಾವು ಹೀಗೆ ಗುರುತಿಸಬಹುದು:

* ಜಾತಿ ವ್ಯವಸ್ಥೆ ಒಂದು ಶ್ರೇಣೀಕೃತ ವ್ಯವಸ್ಥೆ, ಅದರ ಅತ್ಯಂತ ಮೇಲ್‌ಸ್ತರದಲ್ಲಿರುವ ಬ್ರಾಹ್ಮಣರು ಜಾತಿವ್ಯವಸ್ಥೆಯ ಕೇಂದ್ರ ಬಿಂದು ಮತ್ತು ಅದರ ಸೂತ್ರಧಾರರು.
* ಜಾತಿ ವ್ಯವಸ್ಥೆಯು ಹಿಂದೂಯಿಸಂನ ಕೆಲವು ಕೇಂದ್ರ ಸಿದ್ಧಾಂತಗಳ ತಳಹದಿಯ ಮೇಲೆ ನಿಂತಿದೆ. ಅವುಗಳೆಂದರೆ ಪುರ್ನಜನ್ಮ ಸಿದ್ಧಾಂತ, ವರ್ಣಸಿದ್ಧಾಂತ, ಹಾಗೂ ಬ್ರಾಹ್ಮಣರ ಹಿರಿಮೆ.
* ಜಾತಿವ್ಯವಸ್ಥೆಯ ಆಧಾರವಾಗಿರುವ ಈ ಸಿದ್ಧಾಂತಗಳು ಹಿಂದೂಯಿಸಂನ ಪವಿತ್ರ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ.
* ಜಾತಿವ್ಯವಸ್ಥೆಯು ಸ್ವಜಾತಿ ವಿವಾಹ, ಸಹಭೋಜನ ಮುಂತಾದ ಕೆಲವು ಆಚರಣೆಗಳ ಮೇಲೆ ನಿಂತಿದೆ ಮತ್ತು ಅಂತಹ ಆಚರಣೆಗಳು ಹಿಂದೂ ರಿಲೀಜನ್‌ನಿಂದ ನ್ಯಾಯಸಮ್ಮತಗೊಂಡಿವೆ.

ಜಾತಿವ್ಯವಸ್ಥೆಯನ್ನು ಗುರುತಿಸುವ ಈ ಮೇಲಿನ ಮಾನದಂಡಗಳೇ ಸಮಸ್ಯಾತ್ಮಕವಾಗಿವೆ. ಮೊದಲಿಗೆ ಬ್ರಾಹ್ಮಣರು ಜಾತಿವ್ಯವಸ್ಥೆಯ ಕೇಂದ್ರ ಬಿಂದುವಾಗಿರುವುದು ನಿಜವಾದರೆ ಬ್ರಾಹ್ಮಣ ಜಾತಿಯನ್ನು ಇತರ ಎಲ್ಲ ಜಾತಿಗಳಿಗಿಂತ ಒಂದು ನಿರ್ದಿಷ್ಟ ಘಟಕವಾಗಿ ಗುರುತಿಸಲು ನಮಗೆ ಸಾಧ್ಯವಾಗಬೇಕು. ಅಂದರೆ ಭಾರತಾದ್ಯಂತ ಇರುವ ಅಸಂಖ್ಯಾತ ಬ್ರಾಹ್ಮಣ ಜಾತಿಗಳನ್ನು 'ಬ್ರಾಹ್ಮಣರು' ಎಂದು ನಿಸ್ಸಂದೇಹವಾಗಿ ಗುರುತಿಸಲು ಆ ಜಾತಿಗಳಿಗೆ ಸಮಾನವಾದ ಯಾವುದಾದರೊಂದು ಅಂಶವನ್ನು ನಾವು ಗುರುತಿಸಬೇಕಾಗುತ್ತದೆ. ಅಂತಹ ಒಂದು ರಾಷ್ಟ್ರೀಯ ಉದಾಹರಣೆಗೆ ಕರ್ನಾಟಕದಲ್ಲಿರುವ ಹವ್ಯಕರು, ಗೌಡ ಸಾರಸ್ವತರು, ಮಾಧ್ವರು, ಸಂಕೇತಿಗಳು, ಹೊಯ್ಸಳ ಕರ್ನಾಟಕರು ಮೊದಲಾದ ಜಾತಿಗಳು ತಮ್ಮನ್ನು ಬ್ರಾಹ್ಮಣರು ಎಂದು ಗುರುತಿಸಿಕೊಂಡಿದ್ದಾರೆ ಎನ್ನುವುದನ್ನು ಹೊರತುಪಡಿಸಿದರೆ, ಆ ಜಾತಿಗಳ ನಡುವಿನ ವ್ಯತ್ಯಾಸ ಬ್ರಾಹ್ಮಣ ಹಾಗೂ ಇತರೆ ಜಾತಿಗಳ ನಡುವಿನ ವ್ಯತ್ಯಾಸಕ್ಕಿಂತ ಹೇಗೆ ಭಿನ್ನವಾಗಿದೆ ಎಂದು ಹೇಳುವುದು ಸಾಧ್ಯವಿಲ್ಲ.

ಎರಡನೆಯದಾಗಿ, ಪುನರ್ಜನ್ಮ ಹಾಗೂ ವರ್ಣಸಿದ್ಧಾಂತಗಳು ಜಾತಿ ವ್ಯವಸ್ಥೆಯ ತಳಹದಿಗಳಾಗಿವೆ ಎಂದು ಒಪ್ಪಿಕೊಳ್ಳಲು ಹಲವಾರು ತೊಡಕುಗಳಿವೆ. ವರ್ಣಸಿದ್ಧಾಂತ ಎನ್ನುವುದು ಹಿಂದೂಯಿಸಂನ ಒಂದು ರಿಲೀಜನ್‌ನ ಕಾನೂನು ಹಾಗಾಗಿಯೆ ಅದು ಹಿಂದೂ ಸಮಾಜದ ಸ್ವರೂಪವನ್ನು ನಿರ್ಧರಿಸುತ್ತದೆ ಎಂದು ನಂಬಲಾಗಿದೆ. ಒಂದು ವೇಳೆ ವರ್ಣಸಿದ್ಧಾಂತ ನಮ್ಮ ಸಮಾಜದ ಸ್ವರೂಪವನ್ನು ಕಳೆದ ಎರಡು ಸಾವಿರ ವರ್ಷಗಳಿಂದ ನಿರ್ಧರಿಸುತ್ತಾ ಬಂದಿದೆ ಎನ್ನುವುದು ನಿಜವಾಗಿದ್ದರೆ, ನಮ್ಮ ಮುಂದಿರುವ ಆಯ್ಕೆ ಎರಡೇ ಎರಡು. ಒಂದು ಭಾರತದ ಸಮಾಜ ಕಳೆದ ಎರಡು ಸಾವಿರ ವರ್ಷಗಳಿಂದ ಯಾವುದೇ ಬದಲಾವಣೆಯನ್ನು ಕಂಡಿಲ್ಲ ಅಥವಾ ವರ್ಣಸಿದ್ಧಾಂತ ಒಂದು ರಿಲೀಜಸ್ ಕಾನೂನಾಗಿ ಇಡೀ ಸಮಾಜವನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದುಕೊಂಡಿದೆ. ಇದರಲ್ಲಿ ಮೊದಲನೆಯ ನಂಬಿಕೆಗೆ ಯಾವುದೇ ಆಧಾರವಿಲ್ಲ. ಅಲ್ಲದೇ ಇಡೀ ಜಗತ್ತಿನ ಇತಿಹಾಸದಲ್ಲಿ ಯಾವುದೇ ಸಮಾಜವು ಸಾವಿರಾರು ವರ್ಷಗಳ ಕಾಲ ತನ್ನ ಸ್ವರೂಪವನ್ನು ಹಾಗೆಯೆ ಉಳಿಸಿಕೊಂಡಿರುವ ಉದಾಹರಣೆ ನಮ್ಮ ಮುಂದಿಲ್ಲ. ಆದರೆ ಹಿಂದೂ ಸಮಾಜ ಅಂತಹ ವಿಶಿಷ್ಟತೆಯನ್ನು ಹೊಂದಿದೆ ಎಂದಾದರೆ ಅದಕ್ಕೆ ಸಾಕಷ್ಟು ವೈಜ್ಞಾನಿಕ ಪುರಾವೆಗಳನ್ನು ನಾವು ನೀಡಬೇಕಾಗುತ್ತದೆ. ಎರಡನೆಯದು ನಾವು ಜಾತಿ ವ್ಯವಸ್ಥೆ ಎನ್ನುವುದು ಅದರ ವೈಜ್ಞಾನಿಕ ಸಂಶೋಧನೆಗೆ ತೊಡಗುವ ಮೊದಲೆ ನಮ್ಮ ಮನಸ್ಸಿನಲ್ಲಿ ಇರುವ ಪೂರ್ವಸಂಬಿಕೆಯಾಗಿದೆ. (ಅಂದರೆ, ಜಾತಿವ್ಯವಸ್ಥೆಯ ಬಗ್ಗೆ ಸಂಶೋಧನೆಗೆ ತೊಡುಗುವ ಮೊದಲೇ ಇದು ಹಿಂದೂಯಿಸಂ ಎನ್ನುವ ರಿಲೀಜನ್‌ನ ಒಂದು ಮುಖ್ಯ ಲಕ್ಷಣ ಎನ್ನುವ ನಂಬಿಕೆ.) ಜಾತಿವ್ಯವಸ್ಥೆಯ ಕುರಿತು ಇದೂವರೆಗೆ ಮಾಡಿದ ಸಂಶೋಧನೆಗಳ ವೈಚಿತ್ರವೆಂದರೆ ಜಾತಿವ್ಯವಸ್ಥೆಯ ಮೂಲಕ ಹಿಂದೂಯಿಸಂನ ಅಸ್ತಿತ್ವವನ್ನು ಸಾಬೀತುಮಾಡುವುದು ಮತ್ತು ಹಿಂದೂಯಿಸಂ ಎನ್ನುವುದು ಅಸ್ತಿತ್ವದಲ್ಲಿದೆ ಎನ್ನುವ ನಂಬಿಕೆಯಿಂದಲೇ ಜಾತಿವ್ಯವಸ್ಥೆಯ ಸಂಶೋಧನೆಯನ್ನು ಪ್ರಾರಂಭಿಸುವುದು. ಅಂದರೆ ಯಾವುದರ ಅಸ್ತಿತ್ವ (ಹಿಂದೂಯಿಸಂನ) ಇದೆ ಎನ್ನುವುದನ್ನು ನಿಮ್ಮ ಸಂಶೋಧನೆಯ ಮೂಲಕ ಸಾದರಪಡಿಸಬೇಕೊ ಅದು ಈಗಾಗಲೆ ಇದೆ ಎನ್ನುವ ನಂಬಿಕೆಯಿಂದಲೇ ಸಂಶೋಧನೆಯನ್ನು ಪ್ರಾರಂಭಿಸುವುದು. ಇದನ್ನು ವೈಜ್ಞಾನಿಕ ಸಂಶೋಧನ ಪರಿಭಾಷೆಯಲ್ಲಿ "ಪೆಟಿಟಿಯೊ ಪ್ರಿನ್ಸಿಪಿಯೊ" ಎಂದು ಕರೆಯುತ್ತಾರೆ. ಯಾವುದರ ಇರುವಿಕೆಗೆ ನೀವು ಆಧಾರ ನೀಡಬೇಕೊ ಅದು ಈಗಾಗಲೇ ಇದೆ ಎಂದು ಪರಿಭಾವಿಸುವುದು ಎಂದು ಇದರರ್ಥ. ಪುನರ್ಜನ್ಮದ ನಂಬಿಕೆ ಜಾತಿ ವ್ಯವಸ್ಥೆಯ ಮೂಲ ಎನ್ನುವುದಾದರೆ ಅಂತಹ ನಂಬಿಕೆ ಇರುವ ಎಲ್ಲ ಸಮಾಜದಲ್ಲೂ ಜಾತಿಗಳು ಕಾಣಸಿಗಬೇಕು. ಪ್ರಾಚೀನ ಗ್ರೀಕ್ ನಾಗರಿಕತೆಯಲ್ಲೂ ಈ ನಂಬಿಕೆ ಇತ್ತು ಆದರೆ ಅಲ್ಲಿ ಏಕೆ ಜಾತಿ ಜನ್ಮತಾಳಲಿಲ್ಲ?

ಮೂರನೆಯದಾಗಿ, ಎಲ್ಲ 'ಹಿಂದೂ'ಗಳು ಒಪ್ಪುವಂತಹ ಮತ್ತು ಅವರ ಆಚರಣೆಗಳನ್ನು ನ್ಯಾಯಸಮ್ಮತಗೊಳಿಸುವಂತಹ ಪವಿತ್ರ ಹಿಂದೂ ಗ್ರಂಥಗಳಿವೆ ಎಂಬುದು ಇದುವರೆಗೆ ನಡೆದ ಯಾವುದೇ ಸಂಶೋಧನೆಯಿಂದ ದೃಢಪಟ್ಟಿಲ್ಲ. ಬ್ರೋಕಿಂಗ್‌ಟನ್‌ರವರು ತಮ್ಮ ಸಂಶೋಧನೆಯಲ್ಲಿ ಕಂಡುಕೊಂಡಂತೆ ಹಿಂದೂಯಿಸಂನ ಪುರೋಹಿತಶಾಹಿ ವರ್ಗಕ್ಕೆ ಸೇರಿದವರು

ಎನ್ನಲಾದ ಬ್ರಾಹ್ಮಣರಲ್ಲೂ ಬಹುಸಂಖ್ಯಾತರಿಗೆ ತಮ್ಮ ಆಚರಣೆಗಳ ಹಿಂದಿರುವ ಪವಿತ್ರ ಗ್ರಂಥಗಳಾವುವು ಎನ್ನುವುದು ತಿಳಿದಿಲ್ಲ.

ನಾಲ್ಕನೆಯದಾಗಿ, ಕೆಲವು ಸಂಶೋಧಕರ ಪ್ರಕಾರ ಜಾತಿವ್ಯವಸ್ಥೆಗೆ ಆಧಾರವಾಗಿರುವುದು ಹಿಂದೂ ಪವಿತ್ರ ಗ್ರಂಥಗಳಲ್ಲ. ಬದಲಾಗಿ ಪ್ರತೀ ಜಾತಿಗೂ ಇರುವ ಸ್ವಜಾತಿ ವಿವಾಹದಂತಹ ಕಟ್ಟುಪಾಡುಗಳು ಮತ್ತು ಆಚರಣೆಗಳು. ಆದರೆ ಹೀಗೆ ಹೇಳುವಾಗ ನಮಗೆ ಸ್ಪಷ್ಟವಾಗದೆ ಇರುವುದು ಏನೆಂದರೆ, ಕೆಲವು ಆಚರಣೆಗಳು ಮಾತ್ರ ಜಾತಿ ಆಚರಣೆಗಳು ಎಂದು ಹೇಗೆ ಗುರುತಿಸಲ್ಪಡುತ್ತವೆ ಎನ್ನುವುದು, ಉದಾಹರಣೆಗೆ ಜೈನ, ಬೌದ್ಧ, ಅಥವಾ ರೋಮನ್ ಜನರಲ್ಲಿದ್ದ ತಮ್ಮ ಸಮುದಾಯದ ಜನರೊಡನೆ ಮಾಡುವ ಭೋಜನ, ವಿವಾಹ ಮುಂತಾದ ಆಚರಣೆಗಳನ್ನು ಸಹ ನಾವು ಏಕೆ ಜಾತಿ ಆಚರಣೆಗಳು ಎಂದು ಕರೆಯಬಾರದು? ಈ ಆಚರಣೆಗಳು ಹಿಂದೂಯಿಸಂಗೆ ಸಂಬಂಧಿಸಿದುವುಗಳಲ್ಲ ಎನ್ನುವ ಒಂದು ಕಾರಣ ನೀಡಬಹುದಷ್ಟೆ. ಆದರೆ ಈಗಾಗಲೆ ತಿಳಿಸಿದಂತೆ ಹಿಂದೂಯಿಸಂ ಎನ್ನುವ ರಿಲೀಜನ್ ಇದೆ ಎನ್ನುವ ಪೂರ್ವ ನಂಬಿಕೆಯಿಲ್ಲದೆ ಹಾಗೆ ಹೇಳಲು ನಮಗೆ ಸಾಧ್ಯವಾಗುವುದಿಲ್ಲ.

ಈ ಮೇಲೆ ತಿಳಿಸಿರುವುದರ ಒಟ್ಟು ಸಾರಾಂಶವೆಂದರೆ, ಜಾತಿವ್ಯವಸ್ಥೆಯನ್ನು ಒಂದು ವಿಶಿಷ್ಟ ಸಾಮಾಜಿಕ ವ್ಯವಸ್ಥೆಯಾಗಿ ಗುರುತಿಸಲು ಹಿಂದೂಯಿಸಂನ ಸಿದ್ಧಾಂತಕ್ಕೆ ಮೊರೆಹೋಗಬೇಕು. ಹೀಗೆ ಹಿಂದೂಯಿಸಂನ ಹಾಗೂ ಜಾತಿವ್ಯವಸ್ಥೆಯ ಮೂಲಭೂತ ಸಮಸ್ಯೆ ನಮಗೆದುರಾಗುತ್ತದೆ. ಹಿಂದೂಯಿಸಂನ್ನು ಒಂದು ಪ್ರತ್ಯೇಕ ರಿಲೀಜನ್ ಆಗಿ ಗುರುತಿಸಲು ಅದರ ಮುಖ್ಯ ಲಕ್ಷಣವಾಗಿ ಜಾತಿವ್ಯವಸ್ಥೆಯನ್ನು ಗುರುತಿಸುವುದು ಅನಿವಾರ್ಯವಾಗುತ್ತದೆ. ಹಾಗೆಯೆ ಜಾತಿವ್ಯವಸ್ಥೆ ಬೇರೆ ಸಾಮಾಜಿಕ ವ್ಯವಸ್ಥೆಗಳಿಗಿಂತ ವಿಶಿಷ್ಟವಾದುದು ಎಂದು ಗುರುತಿಸಲು ಹಿಂದೂಯಿಸಂ ಎನ್ನುವ ರಿಲೀಜನ್ ಇದೆ ಎನ್ನುವ ನಂಬಿಕೆ ಅನಿವಾರ್ಯವಾಗುತ್ತದೆ. ಇದೊಂದು ವಿಷವರ್ತುಲ, ಹಾಗಾದರೆ ಈ ವಿಷವರ್ತುಲ ಕಳೆದ ನೂರೈವತ್ತು ವರ್ಷಗಳ ಜಾತಿವ್ಯವಸ್ಥೆ ಹಾಗೂ ಹಿಂದೂಯಿಸಂನ ಕುರಿತ ಸಂಶೋಧನೆಗಳಲ್ಲಿ ಪುನರುತ್ಪಾದನೆಯಾಗುತ್ತಾ ಬಂದಿದ್ದಾದರೂ ಹೇಗೆ?

**ಹಿಂದೂಯಿಸಂನ ಅಂತಸ್ಸತ್ವವಾಗಿ ಜಾತಿ ವ್ಯವಸ್ಥೆ :**

ಹಿಂದೂಯಿಸಂನ್ನು ಗುರುತಿಸಲು ಜಾತಿವ್ಯವಸ್ಥೆ ಬಹಳ ಮುಖ್ಯವಾದ ಅಂಶ ಎನ್ನುವ ತಿಳಿವಳಿಕೆ ಹುಟ್ಟಿಕೊಂಡಿದ್ದು ಹತ್ತೊಂಭತ್ತನೆಯ ಶತಮಾನದಲ್ಲಿ. ಭಾರತೀಯರಲ್ಲಿ ಇದ್ದ ಸಂಪ್ರದಾಯಗಳು, ಆಚರಣೆಗಳು, ಹಾಗೂ ನಂಬಿಕೆಗಳಲ್ಲಿ ಅಗಾಧವಾದ ವ್ಯತ್ಯಾಸಗಳಿದ್ದಾಗ್ಯೂ ಭಾರತೀಯ ಸಂಸ್ಕೃತಿಯನ್ನು ಅಧ್ಯಯನ ಮಾಡುತ್ತಿದ್ದ ಪಾಶ್ಚಾತ್ಯ ವಿದ್ವಾಂಸರಲ್ಲಿ ಒಂದು ಅಚಲ ನಂಬಿಕೆಯಿತ್ತು. ಈ ಎಲ್ಲ ವೈವಿಧ್ಯತೆಗಳ ತಳಹದಿಯಾಗಿ ಎಲ್ಲರಿಗೂ ಸಮನಾದ ಒಂದು ರಿಲೀಜನ್ ಇದೆ ಎನ್ನುವುದೇ ಆ ನಂಬಿಕೆ. ಇಂತಹ ನಂಬಿಕೆಯನ್ನು ಹೊಂದಿದ್ದವರಿಗೆ ಹಲವಾರು ಸವಾಲುಗಳೂ ಇದ್ದವು. ಹಿಂದೂಯಿಸಂನ ಅನುಯಾಯಿಗಳಿಗೆ ಸಮಾನವಾದ ಸಿದ್ಧಾಂತವಾಗಲಿ, ಎಲ್ಲರೂ ಒಪ್ಪುವ ದೇವರ ಪರಿಕಲ್ಪನೆಯಾಗಲಿ, ಒಂದು ನಿರ್ದಿಷ್ಟ ಪೂಜಾವಿಧಾನವಾಗಲಿ,

ಎಲ್ಲರ ಆಚರಣೆಗಳನ್ನು ನಿರ್ದೇಶಿಸುವಂತಹ ಪವಿತ್ರ ಗ್ರಂಥವಾಗಲಿ, ಎಲ್ಲರೂ ನಡೆದುಕೊಳ್ಳುವ ಚರ್ಚ್‌ನಂತಹ ಸಂಸ್ಥೆಗಳಾಗಲಿ ಯಾವುದೂ ಇಲ್ಲಿ ಇರಲಿಲ್ಲ. ಭಾರತೀಯ ಸಮಾಜದ ಇಂತಹ ವಿಚಿತ್ರಗಳ ಬಗ್ಗೆ ಹದಿನೆಂಟು ಹಾಗು ಹತ್ತೊಂಭತ್ತನೆ ಶತಮಾನದಲ್ಲಿ ಕ್ರೈಸ್ತ ಮಿಷನರಿಗಳು ಹಾಗೂ ಪಾಶ್ಚಾತ್ಯ ವಿದ್ವಾಂಸರುಗಳಲ್ಲಿ ಸಾಕಷ್ಟು ಚರ್ಚೆಗಳಾಗಿವೆ. ಇದು ಸಹಜವಾಗಿಯೆ ಭಾರತೀಯ ಸಂಸ್ಕೃತಿಯಲ್ಲಿ ರಿಲೀಜನ್ ಎನ್ನುವುದೇ ಇಲ್ಲವೇನೋ ಎನ್ನುವ ಸಂದೇಹವನ್ನು ಅವರಲ್ಲಿ ಹುಟ್ಟುಹಾಕಬೇಕಾಗಿತ್ತು. ಬದಲಾಗಿ ಈ ಎಲ್ಲ ಪ್ರಶ್ನೆಗಳಿಗೆ ಪಾಶ್ಚಾತ್ಯ ವಿದ್ವಾಂಸರುಗಳು ಕಂಡುಕೊಂಡ ಉತ್ತರವೆಂದರೆ: ಈ ಎಲ್ಲ ಸಮಸ್ಯೆಗಳೂ ಹಿಂದೂ ಸಂಸ್ಕೃತಿಗೆ ಅಂತರ್ಗತವಾದ ಸಮಸ್ಯೆಗಳು; ಅತ್ಯಂತ ಪ್ರಾಚೀನ ಕಾಲದಲ್ಲಿ ಇವೆಲ್ಲವುಗಳನ್ನು ಒಳಗೊಂಡ ರಿಲೀಜನ್ ಅಸ್ತಿತ್ವದಲ್ಲಿತ್ತು; ಆದರೆ ಕಾಲಕ್ರಮೇಣ ಮೂಲ ರಿಲೀಜನ್ ಅವನತಿಗೊಂಡು ಇಂದಿನ ಸ್ಥಿತಿಗೆ ತಲುಪಿದೆ; ಇದಕ್ಕೆ ಮುಖ್ಯ ಕಾರಣ ಜನಗಳನ್ನು ದಿಕ್ಕು ತಪ್ಪಿಸಿದ ಪುರೋಹಿತಶಾಹಿ ವರ್ಗ ಇತ್ಯಾದಿ. ಇಂತಹ ತೀರ್ಮಾನಗಳಿಗೆ ಬರಲು ಅವರಿಗೆ (ಪಾಶ್ಚಾತ್ಯ ವಿದ್ವಾಂಸರಿಗೆ) ಬಲವಾದ ಕಾರಣವೂ ಇದೆ. ಜಗತ್ತಿನ ಬಗ್ಗೆ ಅವರು ಪಡೆದುಕೊಂಡಿದ್ದ ಜ್ಞಾನದ ಮೂಲ ಕ್ರೈಸ್ತ ಮತ. ಆ ಮತದ ಪ್ರಕಾರ, ದೇವರ ಪ್ರವಾದಿಯಾದ ಏಸುಕ್ರಿಸ್ತ ನಿಜವಾದ ದೇವರ ಸ್ವರೂಪವನ್ನು ಜನರಿಗೆ (ಅಂದರೆ ಕ್ರಿಶ್ಚಿಯನ್ ಜನರಿಗೆ) ತಿಳಿಸುವ ಮೊದಲು ಅವರು ಸುಳ್ಳು ದೇವರುಗಳನ್ನು ಪೂಜಿಸುತ್ತಾ ತಪ್ಪು ಹಾದಿಯಲ್ಲಿದ್ದರು. ಕ್ರಿಸ್ತನ ಮೂಲಕ ದೈವವಾಣಿಯಾದ ನಂತರ ಅವರಿಗೆ ನಿಜವಾದ ದೇವರ ಸ್ವರೂಪ ಗೊತ್ತಾಗಿದೆ. ದೈವವಾಣಿ ತಲುಪದವರು (ಭಾರತೀಯರು ಸೇರಿದಂತೆ) ಇನ್ನೂ ತಪ್ಪು ಹಾದಿಯಲ್ಲಿದ್ದಾರೆ. ಭಾರತೀಯರು ಸುಳ್ಳು ರಿಲೀಜನ್‌ನ ಆರಾಧಕರು. ಅವರ ನಂಬಿಕೆಯ ಪ್ರಕಾರ ರಿಲಿಜನ್ ಇಲ್ಲದೆ ಒಂದು ಸಂಸ್ಕೃತಿ ಇರುವುದು ಸಾಧ್ಯವಿಲ್ಲ. ಭಾರತೀಯ ಸಂಸ್ಕೃತಿ ರಿಲೀಜನ್ನೇ ಇಲ್ಲದ ಒಂದು ಸಂಸ್ಕೃತಿ ಎನ್ನುವ ತಿಳಿವಳಿಕೆಯೊಂದಿಗೆ ಇಲ್ಲಿನ ಸಮಾಜದ ಅಧ್ಯಯನ ಕೈಗೊಂಡಿದ್ದರೆ ನಮ್ಮ ಸಮಾಜ ಹಾಗೂ ಸಂಸ್ಕೃತಿಯ ಬಗ್ಗೆ ಸಂಪೂರ್ಣವಾಗಿ ಭಿನ್ನವಾದ ಚಿತ್ರಣವೇ ಬಹುಶಃ ನಮ್ಮ ಮುಂದಿರುತ್ತಿತ್ತು: ಹತ್ತೊಂಬತ್ತನೆ ಶತಮಾನದಲ್ಲಿ ಹಿಂದೂಯಿಸಂನ ಕುರಿತು ನಡೆದ ಅಧ್ಯಯನವನ್ನು ಹೀಗೆ ಪಾಶ್ಚಾತ್ಯ ಸಂಸ್ಕೃತಿಯ ಅದರಲ್ಲೂ ಮುಖ್ಯವಾಗಿ ಕ್ರೈಸ್ತ ಮತದ ಪ್ರಾಪಂಚಿಕ ಜ್ಞಾನದ ಚೌಕಟ್ಟಿನಲ್ಲಿಯೆ ಮಾಡಲಾಯಿತು. ಹಾಗೆ ಕೈಗೊಂಡ ಅಧ್ಯಯನದ ಮುಖ್ಯ ಸಾರಾಂಶ ಈ ಕೆಳಗಿನಂತಿದೆ.

ಭಾರತದ ಮೂಲ ರಿಲೀಜನ್ ವೇದಗಳ ಕಾಲದಲ್ಲಿತ್ತು. ವೇದಗಳಲ್ಲಿ ಈಗ ಭಾಗಶಃ ಗುರುತಿಸಲು ಸಾಧ್ಯವಾಗುವ ಮೂಲ ರಿಲಿಜನ್ ಕ್ರಮೇಣ ಪುರೋಹಿತಶಾಹಿಯಾಗಿ ಮತ್ತು ಕೇವಲ ಆಚರಣೆಗಳ ರಿಲೀಜನ್ ಆಗಿ ಭ್ರಷ್ಟವಾಯಿತು. ಹೀಗೆ ಭ್ರಷ್ಟಗೊಂಡ ರಿಲಿಜನ್ ಅನ್ನು 'ಬ್ರಾಹ್ಮಣಿಸಂ' ಎಂದು ಕರೆಯಲಾಯಿತು. ವೇದ ಕಾಲದ ರಿಲಿಜನ್ ಆರ್ಯನ್ನರ ಕೊಡುಗೆ. ಹೊರಗಿನಿಂದ ಬಂದ ಆರ್ಯನ್ನರು ಸ್ಥಳೀಯರ ಮೇಲೆ ಆಕ್ರಮಣ ಮಾಡಿ ಇಲ್ಲಿಯೇ ನೆಲೆಸಿದರು. ಆರ್ಯನರ ಪುರೋಹಿತರು ತಮ್ಮ ರಿಲೀಜನ್‌ನ್ನು ಭಾರತದಲ್ಲಿ ವ್ಯಾಪಕವಾಗಿ ವಿಸ್ತರಿಸಿದರು. ಮೊದಲ ಹಂತದಲ್ಲಿ ಸ್ಥಳೀಯರ ನಂಬಿಕೆ ಹಾಗೂ ಆಚರಣೆಗಳನ್ನು ನಾಶಮಾಡುವುದರ ಬದಲಾಗಿ

ಅದರ ಎಲ್ಲಾ ನಂಬಿಕೆಗಳನ್ನು ಹಾಗೂ ದೇವರುಗಳನ್ನು ಒಳಗೊಳ್ಳುತ್ತಾ ಆರ್ಯನ್ ರಿಲಿಜನ್ ಹರಡಿಕೊಳ್ಳುತ್ತಾ ಹೋಯಿತು. ಎರಡನೇ ಹಂತದಲ್ಲಿ ಸುಧಾರಣಾ ಚಳವಳಿಗಳು ಎಂದು ಗುರುತಿಸಲ್ಪಡುವ ಬೌದ್ಧ ಮತ ಹಾಗೂ ಇನ್ನಿತರೆ ಮತಗಳನ್ನು ಹಿಂದೂಯಿಸಂ ಒಳಗೊಂಡಿತು. (ಹಾಪ್‌ಕಿನ್ಸ್ ೧೮೯೫, ಮ್ಯಾಕ್‌ಡೊನೆಲ್, ೧೯೧೫). ಮತ್ತು ಮೂಲ ರಿಲೀಜನ್ ತತ್ವಗಳಾದ ದೇವರ ಬಗೆಗಿನ ಜ್ಞಾನ, ಪವಿತ್ರ ಗ್ರಂಥಗಳು, ನೈಜ ಸಿದ್ಧಾಂತ, ಮೂಲ ಪೂಜಾ ವಿಧಾನಗಳನ್ನು ಉಳಿಸಿಕೊಳ್ಳಲು ಆರ್ಯನ್ನರ ಪುರೋಹಿತ ವರ್ಗ ಸರಿಯಾಗಿ ಗಮನ ಹರಿಸದ ಕಾರಣ, ಅವೆಲ್ಲ ಕ್ರಮೇಣ ಕಣ್ಮರೆಯಾದವು (ವಿಲ್ಸನ್ ೧೮೭೭, ಇಬೆಟ್ಸನ್ ೧೮೮೦ ಮೋನಿಯರ್ ವಿಲಿಯಮ್ಸ್ ೧೮೯೧). ಹಿಂದೂಯಿಸಂಗೆ ಮತಾಂತರ ಮಾಡುವ ಒಂದು ಸಾಧನವನ್ನಾಗಿ ಜಾತಿವ್ಯವಸ್ಥೆಯನ್ನು ಪುರೋಹಿತಶಾಹಿ ವರ್ಗ ಬೆಳೆಸಿತು. ಪರಿಣಾಮವಾಗಿ ಒಬ್ಬ ವ್ಯಕ್ತಿ ಹಿಂದೂ ಆಗಲು ಯಾವುದೇ ನಂಬಿಕೆ ಆಚರಣೆ ಸಿದ್ಧಾಂತ ಇವುಗಳು ಮುಖ್ಯವಲ್ಲ; ಬದಲಾಗಿ ಒಂದು ಜಾತಿಯಲ್ಲಿ ತನ್ನನ್ನು ಗುರುತಿಸಿಕೊಳ್ಳುವುದು ಮುಖ್ಯವಾಯಿತು. ಜಾತಿವ್ಯವಸ್ಥೆ ಒಂದು ಬೃಹತ್ ಸಂಸ್ಥೆಯಾಗಿ ಬೆಳದು ಭ್ರಷ್ಟ ರಿಲೀಜನ್‌ನನ್ನು ಪುನರುತ್ಪಾದಿಸಲು ನೆರವಾಯಿತು. ಹೀಗೆ ಭಾರತ ಉಪಖಂಡದಲ್ಲಿ ಅಸಂಖ್ಯಾತ ವೈವಿಧ್ಯತೆಗಳ ಒಂದು ರಿಲೀಜನ್ ರೂಪುಗೊಳ್ಳಲು ಜಾತಿ ವ್ಯವಸ್ಥೆ ನೆರವಾಯಿತು. (ಉದಾ: ಪೋರ್ಟರ್ ೧೮೯೪, ಬೋಗ್ಲೆ ೧೯೦೮, ಗ್ರಿಸ್‌ವೊಲ್ಡ್ ೧೯೧೨, ಹ್ಯೂಮ್‌೧೯೧೬)

ಹಿಂದೂಯಿಸಂ ಮತಾಂತರ ಮಾಡುವ ಒಂದು ರಿಲೀಜನ್ನೇ ಎನ್ನುವ ಚರ್ಚೆಯಲ್ಲಿ ಬ್ರಿಟಿಷ್ ವಸಾಹತುಶಾಹಿಯಲ್ಲಿ ಅಧಿಕಾರಿಯಾಗಿದ್ದ ಸರ್ ಆಲ್‌ಫ್ರೆಡ್ ಸಿ ಲಾಲ್ ಎನ್ನುವವನ ವಾದ ಬಹಳ ಪ್ರಭಾವ ಬೀರಿತ್ತು. ಅವನ ವಾದವು ಹಲವು ದಶಕಗಳವರೆಗೆ ಹಿಂದೂಯಿಸಂನ್ನು ಒಂದು ರಿಲೀಜನ್ ಆಗಿ ಪರಿಭಾವಿಸುವಲ್ಲಿ ಮತ್ತು ಅದು ಹೇಗೆ ಅಸ್ತಿತ್ವವನ್ನು ಉಳಿಸಿಕೊಂಡಿತು ಹಾಗೂ ವಿಸ್ತಾರಗೊಂಡಿತು ಎನ್ನುವ ಚಿಂತನೆಯ ಮೇಲೆ ಬಹಳ ಪ್ರಭಾವ ಬೀರಿತ್ತು. (ಉದಾ:ಎಲಿಯಡ್‌ನ ಎನ್‌ಸೈಕ್ಲೋಪೀಡಿಯಾ ಆಫ್ ರಿಲೀಜನ್ ೧೮೦೭ನೋಡಿ) ಈ ವಾದವನ್ನು ಮಂಡಿಸುವವನು ಅವನೊಬ್ಬನೆ ಆಗಿರಲಿಲ್ಲ (ಹೆಚ್ಚಿನ ವಿವರಗಳಿಗೆ ೧೯೩೧ರಲ್ಲಿ ಪ್ರಕಟವಾಗಿರುವ ಕ್ಯಾಂಪ್‌ಬೆಲ್ ೧೮೭೧-೧೮೭೨ ನೋಡಿ). ಆದರೆ ಹಿಂದೂಯಿಸಂ ಒಂದು ಮಿಷನರಿ ರಿಲಿಜನ್ ಎಂದು ಸ್ಪಷ್ಟವಾದ ನಿಲುವನ್ನು ಅವನು ತಾಳಿದ್ದನು. ಹಲವಾರು ಗುಂಪುಗಳನ್ನು, ಸಮುದಾಯಗಳನ್ನು ಜಾತಿ ವ್ಯವಸ್ಥೆಗೆ ಮತಾಂತರ ಮಾಡುವ ರಿಲೀಜನ್ ಅಲ್ಲ ಎನ್ನುವ ಮ್ಯಾಕ್ಸ್ ಮುಲ್ಲರ್‌ನಂತವರ ವಾದವನ್ನು ಅವನು ರಿಲೀಜನ್ ಹಾಗೂ ಮತಾಂತರದ ಬಗ್ಗೆ ಇರುವ ಯುರೋಪಿನ ಸಂಕುಚಿತ ದೃಷ್ಟಿಕೋನ ಎಂದು ತಳ್ಳಿಹಾಕಿದ್ದ. ಇವತ್ತಿನವರೆಗೂ ಜಾತಿ ವ್ಯವಸ್ಥೆ ಹಿಂದೂಯಿಸಂಗೆ ಒಂದು ಸ್ಪಷ್ಟವಾದ ಸ್ವರೂಪವನ್ನು ಕೊಡುತ್ತದೆ ಎನ್ನುವ ನಂಬಿಕೆ ಜನಜನಿತವಾಗಿ ಉಳಿದುಬಂದಿದೆ. ಹಿಂದೂಯಿಸಂ ಬಗ್ಗೆ ಪ್ರಕಟವಾಗಿರುವ ಹಲವಾರು ಪಠ್ಯಗಳು (ಉದಾ:ಚೌಧರಿ ಮತ್ತು ಇತರರು ೨೦೦೩;ಫ್ಲಟ್ ೨೦೦೩; ಎಂಜಲ್ ಮತ್ತು ಥರ್ಸ್‌ಬಿ ೨೦೦೫) ಮತ್ತು ವಿಶ್ವಕೋಶಗಳು (ಎನ್‌ಸೈಕ್ಲೋಪೀಡಿಯಾ ಆಫ್ ಬ್ರಿಟಾನಿಕಾ ೧೯೭೫-೧೯೯೯) ತಿಳಿಸುವಂತೆ ನಮಗೆ ಹಿಂದೂಯಿಸಂ ಬಗ್ಗೆ ಮಾತನಾಡಲು ಸಾಧ್ಯವಾಗುವುದು ಜಾತಿ ವ್ಯವಸ್ಥೆ ಇರುವುದರಿಂದಾಗಿ.

ಏಕೆಂದರೆ ಜಾತಿ ವ್ಯವಸ್ಥೆ ಹಿಂದೂಯಿಸಂಗೆ ರಿಲೀಜನ್‌ನ ಒಂದು ಸ್ಪಷ್ಟವಾದ ಸ್ವರೂಪವನ್ನು ಕೊಡುತ್ತದೆ ಎನ್ನುವ ವಿವರಣೆಯನ್ನು ನಾವು ಇಲ್ಲಿ ಕಾಣುತ್ತೇವೆ.

ಹಿಂದೂಯಿಸಂ ಕುರಿತ ಈ ಮೇಲಿನ 'ಶಾಸ್ತ್ರೀಯ' ಪರಿಕಲ್ಪನೆಗಳಿಗೆ ವ್ಯತಿರಿಕ್ತವಾಗಿ 'ಹಿಂದೂಯಿಸಂ' ಎನ್ನುವುದು ನಿಜವಾಗಿಯೂ ಅಸ್ತಿತ್ತ್ವದಲ್ಲಿದೆಯೇ ಎನ್ನುವ ಪ್ರಶ್ನೆಯ ಬಗ್ಗೆ ಚರ್ಚೆ ಈಗ ಪ್ರಾರಂಭವಾಗಿದೆ. ವಸಾಹತೋತ್ತರ "ಸಂರಚನಾಕಾರರು" ವಾದಿಸುವಂತೆ ಹಿಂದೂಯಿಸಂ ಎನ್ನುವುದು ಅಸ್ತಿತ್ವದಲ್ಲೇ ಇರಲಿಲ್ಲ. ನಂತರ ಬಂದ ವಸಾಹತುಷಾಹಿ ಸರ್ಕಾರ ಸ್ಥಳೀಯ ಬ್ರಾಹ್ಮಣರ ವ್ಯಾಖ್ಯಾನವನ್ನು ಆಧರಿಸಿದ ಫಲವಾಗಿ ಇಂದಿನ ಹಿಂದೂಯಿಸಂನ್ನು ರಚಿಸಲಾಗಿದೆ. ವಸಾಹತೋತ್ತರ ಚಿಂತಕರು ಹೀಗೆ ಹಿಂದೂಯಿಸಂನ ಅಸ್ತಿತ್ವದ ಬಗ್ಗೆ ಪ್ರಶ್ನಿಸಿದರೂ ಕೂಡ ಜಾತಿ ವ್ಯವಸ್ಥೆ ಎನ್ನುವುದು ಹಿಂದೂಯಿಸಂನ ವಿಶಿಷ್ಟ ಲಕ್ಷಣ ಮತ್ತು ಬ್ರಾಹ್ಮಣ ಪುರೋಹಿತಶಾಹಿಗಳಿಂದ ಒಂದು ಸಮಾನ ರಿಲೀಜನ್‌ನ್ನು ಸೃಷ್ಟಿಸುವ ಹಾಗೂ ಸ್ಥಳೀಯರ ಮೇಲೆ ಅದನ್ನು ಹೇರುವ ಉದ್ದೇಶದಿಂದ ಬೆಳೆಸಲ್ಪಟ್ಟ ಸಂಸ್ಥೆ ಎನ್ನುವ ಅವರ ವಿರೋಧಿಗಳ ಮಾತನ್ನು ಒಪ್ಪುತ್ತಾರೆ (ಉದಾ:ಫ್ರೈಕೆನ್ ಬರ್ಗ್, ೧೯೯೩; ಲಾರ್ಸನ್ ೧೯೯೫, ಡರ್ಕ್ಸ್ ೨೦೦೧). ಪಾಶ್ಚಾತ್ಯ ದೇಶಗಳಲ್ಲಿ ನಡೆಯುತ್ತಿರುವ ಏಷಿಯಾ ಅಧ್ಯಯನಗಳು ಮತ್ತು ಭಾರತೀಯ ವಸಾಹತೋತ್ತರ ಸಂರಚನಾಕಾರರ ಚರ್ಚೆಗೆ ಒಳಪಡುವ ಸಮಾನ ಪ್ರಶ್ನೆ ಎಂದರೆ, ಹಿಂದೂಯಿಸಂನ್ನು ರಚಿಸಲು ಕಾರಣಕರ್ತರಾದವರು ಯಾರು? ಪ್ರಾಚೀನ ಹಾಗೂ ಮಧ್ಯಕಾಲೀನ ಆರ್ಯ ಬ್ರಾಹ್ಮಣರೇ ಅಥವಾ ನಂತರ ಹತ್ತೊಂಬತ್ತನೇ ಶತಮಾನದಲ್ಲಿ ಬ್ರಾಹ್ಮಣರ ಸಹಯೋಗದೊಂದಿಗೆ ವಸಾಹತುಷಾಹಿಗಳ ಬಗೆಗಿನ ವಿವರಣೆಯನ್ನು ಒಪ್ಪುತ್ತಾರೆ. ಮೊದಲನೆಯದನ್ನು-ಹಿಂದೂಯಿಸಂ ಅಸ್ತಿತ್ವದಲ್ಲಿದೆ ಎನ್ನುವುದನ್ನು-ನಿರಾಕರಿಸುತ್ತಾ, ಎರಡನೇಯದನ್ನು-ಬ್ರಾಹ್ಮಣ ಪುರೋಹಿತಶಾಹಿಗಳ ಪ್ರಯತ್ನದಿಂದಾಗಿ ಹಿಂದೂಯಿಸಂನ ವಿಶಿಷ್ಟ ಲಕ್ಷಣವಾಗಿ ಜಾತಿ ವ್ಯವಸ್ಥೆ ಬೆಳೆಯಿತು ಎನ್ನುವುದು-ಒಪ್ಪುವುದು ಹೇಗೆ ಎನ್ನುವ ಪ್ರಶ್ನೆಗೆ ಅವರಿಂದ ಯಾವ ಉತ್ತರವೂ ಸಿಗುವುದಿಲ್ಲ.

## ನಮ್ಮ ಮುಂದಿರುವ ಸಂಶೋಧನಾ ಪ್ರಶ್ನೆಗಳು :

ಈ ಎಲ್ಲದರ ಹಿನ್ನೆಲೆಯಲ್ಲಿ ಜಾತಿವ್ಯವಸ್ಥೆ ಹಾಗೂ ಹಿಂದೂಯಿಸಂ ಕುರಿತು ಅಧ್ಯಯನ ಮಾಡಲಿಚ್ಛಿಸುವ ಸಂಶೋಧಕರ ಮುಂದಿರುವ ಪ್ರಮುಖ ಪ್ರಶ್ನೆಗಳೆಂದರೆ:

ಅ. ಜಾತಿವ್ಯವಸ್ಥೆ ಹಾಗೂ ಹಿಂದೂಯಿಸಂ ಕುರಿತ ವಿವರಣೆಗಳು ಇಷ್ಟೊಂದು ಸಮಸ್ಯಾತ್ಮಕವಾಗಿರುವುದೇಕೆ?

ಆ. ಹಿಂದೂಯಿಸಂ ಹಾಗೂ ಜಾತಿವ್ಯವಸ್ಥೆಗಳಿಗೆ ನಿರ್ದಿಷ್ಟವಾದ ಲಕ್ಷಣಗಳನ್ನು ಗುರುತಿಸಲು ಕಷ್ಟವಾಗುತ್ತಿರುವುದರ ಕಾರಣವೇನು, ಅಲ್ಲದೆ ಒಂದರ ಅಸ್ತಿತ್ವವನ್ನು ಗುರುತಿಸಲು ಮತ್ತೊಂದರ ಇರುವಿಕೆಯ ನಂಬಿಕೆಯನ್ನು ಆಧಾರಿಸಬೇಕಾದ ಪರಿಸ್ಥಿತಿ ಉದ್ಭವವಾಗುವುದೇಕೆ?

ಇ. ನಮಗೆ ಸಾಮಾಜಿಕ ಶಾಸ್ತ್ರಗಳಲ್ಲಿ ಹಾಗೂ ಸಾರ್ವಜನಿಕವಾಗಿ ನೀಡುತ್ತಿರುವ ವಿವರಣೆಗಳ ಹಿಂದೆ ಆಧಾರರಹಿತ ಪೂರ್ವನಂಬಿಕೆಗಳು ಕೆಲಸಮಾಡುತ್ತಿವೆಯೆ? ಹೌದು ಎಂದಾದರೆ, ಅಂತಹ ಪೂರ್ವನಂಬಿಕೆಗಳಾವುವು?

ಈ. ಅಂತಹ ಪೂರ್ವನಂಬಿಕೆಗಳು ಕಳೆದ ಎರಡು ಶತಮಾನಗಳಿಂದ ಹಿಂದೂಯಿಸಂನ ಕುರಿತ ಚರ್ಚೆ ಪುನರಾವರ್ತನೆಯಾಗುತ್ತಿರುವುದಕ್ಕೆ ಕಾರಣಗಳನ್ನು ನೀಡುತ್ತದೆಯೆ?

ಉ. ಅಂತಹ ಪೂರ್ವನಂಬಿಕೆಗಳನ್ನು ನಮಗೆ ಗುರುತಿಸಲು ಸಾಧ್ಯವಾದರೆ ಅದರ ಪರಿಣಾಮಗಳೇನು?

ಊ. ಹಿಂದೂಯಿಸಂ ಹಾಗೂ ಜಾತಿವ್ಯವಸ್ಥೆಯ ಅಸ್ತಿತ್ವವು ಸಮಸ್ಯಾರಹಿತವಾದವುಗಳೆಂದು ಒಪ್ಪಿಕೊಳ್ಳಲು ನಮಗೆ ಸಾಧ್ಯವಿದೆಯೆ?

ಪಾಶ್ಚಾತ್ಯ ಚಿಂತಕರು, ಪ್ರವಾಸಿಗರು, ಹಾಗೂ ಆಡಳಿತಗಾರರು ನಮ್ಮ ಸಮಾಜ ಹಾಗೂ ಧರ್ಮ (ರಿಲೀಜನ್ ಎಂದು ಪರಿಭಾವಿಸಿ)ದ ಕುರಿತು ನೀಡಿರುವ ನಿರ್ದಿಷ್ಟ ರೀತಿಯ ವಿವರಣೆಗೆ ಕಾರಣವಿದೆ. ಪಾಶ್ಚಾತ್ಯ ಚಿಂತಕರು ಹಿಂದೂಯಿಸಂ ಹಾಗೂ ಜಾತಿವ್ಯವಸ್ಥೆ ಬಗ್ಗೆ ನೀಡಿರುವ ವಿವರಣೆಗೂ ಪ್ರೊಟೆಸ್ಟಂಟ್ ಸುಧಾರಣಾ ಚಳವಳಿಯ ಕಾಲದ ಮಧ್ಯಕಾಲೀನ ಯುರೋಪಿನ ಚರ್ಚ್ ಹಾಗೂ ವರ್ಗಸಮಾಜದ ಬಗೆಗಿನ ವಿಮರ್ಶಾತ್ಮಕ ವಿವರಣೆಗೂ ನಡುವೆ ಸಾಕಷ್ಟು ಹೋಲಿಕೆಗಳಿರುವುದನ್ನು ನಾವು ಗಮನಿಸಬಹುದು. ಮೂರ್ತಿಪೂಜೆ ಪ್ರಚಲಿತವಾಗಿದ್ದ ಕ್ಯಾಥೋಲಿಕ್ ಚರ್ಚನ್ನು "ಬೆಬಿಲೊನ್‌ನ ಹಾದರಗಿತ್ತಿ" ಎಂದು, ಪಾದ್ರಿಗಳನ್ನು ಜನರನ್ನು ತಪ್ಪು ದಾರಿಗೆಳೆಯುವ ಸೈತಾನನ ಸಂತಾನ ಎಂದು ಬಣ್ಣಿಸಲಾಯಿತು. ಅವರು ಜನಸಾಮಾನ್ಯರ ಲೌಕಿಕ ಬಯಕೆ ಹಾಗೂ ಅಗತ್ಯಗಳನ್ನು ಪೂರೈಸಲು ತಮ್ಮ ರಿಲಿಜನ್‌ನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪ ಮಾಡಲಾಯಿತು. ಇದೆಲ್ಲದರಿಂದಾಗಿ ಕ್ರಿಶ್ಚಿಯನ್ ರಿಲಿಜನ್, ಮೂರ್ತಿ ಪೂಜೆ ಹಾಗೂ ಬಹುದೇವತಾ ಆರಾಧನೆಯಾಗಿ ಅವನತಿ ಹೊಂದಿದೆ, ಒಂದು ಪವಿತ್ರ ಗ್ರಂಥದ (ಬೈಬಲ್) ಬದಲಾಗಿ ಹಲವಾರು ಗ್ರಂಥಗಳಿಗೆ ಪುರಸ್ಕಾರ ದೊರೆತಿದೆ, ನಿಜವಾದ ಪೂಜೆಯ ಸ್ಥಾನದಲ್ಲಿ ಅರ್ಥಹೀನ ಶಾಸ್ತ್ರ ವಿಧಿಗಳು ಪ್ರಾರಂಭವಾಗಿವೆ ಎನ್ನುವ ಟೀಕೆ ಕೇಳಿ ಬಂದಿತು. ಪರಿಣಾಮವಾಗಿ ರೋಮನ್ ಕ್ಯಾಥೋಲಿಕ್ ಚರ್ಚ್ ತಪ್ಪು ಕಾರಣಗಳಿಗಾಗಿ ಜನರನ್ನು ತನ್ನ ಮತಕ್ಕೆ ಸೇರಿಸಿಕೊಳ್ಳಲು ಸಾಧ್ಯವಾಗಿದೆ. ಯಾರು ಕ್ರಿಶ್ಚಿಯನರು ಎಂದು ತೀರ್ಮಾನಿಸುವುದು ನಿಜವಾದ ದೇವರ ಮೇಲಿನ ಶ್ರದ್ಧೆಯ ಕಾರಣದಿಂದಲ್ಲ ಬದಲಾಗಿ ಅವರು ರೋಮನ್ ಕ್ಯಾಥೋಲಿಕ್ ಚರ್ಚ್‌ಗೆ ಸೇರಿದ್ದಾರೆಯೆ ಎನ್ನುವ ಕಾರಣಕ್ಕಾಗಿ. ಹೀಗಾಗಿ ಪಾದ್ರಿಗಳ ಭ್ರಷ್ಟ ನಂಬಿಕೆಯನ್ನು ಪ್ರಚಾರಗೊಳಿಸುವ ಸಂಸ್ಥೆಯಾಗಿ ಚರ್ಚ್ ಮಾರ್ಪಟ್ಟಿದೆ ಎಂದು ಆರೋಪಿಸಲಾಯಿತು.

ಮಧ್ಯಕಾಲೀನ ಯೂರೋಪಿನ ಸಮಾಜ ಹಾಗೂ ರಿಲಿಜನ್ ಬಗೆಗಿನ ವಿವರಣೆಗೂ ಭಾರತದ ಜಾತಿವ್ಯವಸ್ಥೆ ಹಾಗೂ ಹಿಂದೂಯಿಸಂ ಬಗೆಗಿನ ವಿವರಣೆಗೂ ನಡುವೆ ಇರುವ ಅಸಾಧಾರಣವಾದ ಸಾಮ್ಯತೆಯನ್ನು ಅರ್ಥ ಮಾಡಿಕೊಳ್ಳುವುದಾದರೂ ಹೇಗೆ? ಒಂದು ಸಾಧ್ಯತೆ ಎಂದರೆ ಪಾಶ್ಚಾತ್ಯ

ಚಿಂತಕರ ಭಾರತೀಯ ಸಂಸ್ಕೃತಿಯ ವಿವರಣೆ ಅವರದೇ ಸಂಸ್ಕೃತಿಯ ಅನುಭವದಿಂದ ಪ್ರೇರೇಪಿತವಾಗಿದೆ. ಯುರೋಪಿನ ಸಂಸ್ಕೃತಿಯ ಮೇಲೆ ಕ್ರಿಶ್ಚಿಯನ್ ರಿಲಿಜನ್ ಗಾಢವಾದ ಪ್ರಭಾವ ಬೀರಿದೆ ಎನ್ನುವ ನಂಬಿಕೆಯ ಮೇಲೆ ಅವರ ಸಂಸ್ಕೃತಿಯ ಚಿತ್ರಣ ರೂಪುಗೊಂಡಿದೆ. ಒಂದು ಸಂಸ್ಕೃತಿಗೆ ರಿಲೀಜನ್ ಅನಿವಾರ್ಯ ಅಥವಾ-ಇದನ್ನೆ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ-ರಿಲೀಜನ್ ಇಲ್ಲದೆ ಸಂಸ್ಕೃತಿ ಇರುವುದು ಸಾಧ್ಯವಿಲ್ಲ ಎನ್ನುವ ಅವರ ಅಚಲ ನಂಬಿಕೆ ಭಾರತೀಯ ಸಂಸ್ಕೃತಿಯಲ್ಲೂ ಇರಲೇ ಬೇಕಾದ (ಅವರ ಪ್ರಕಾರ) ರಿಲೀಜನ್‌ನ್ನು ಹುಡುಕುವಂತೆ ಮಾಡಿದೆ. ನೂರಾರು ವರ್ಷಗಳ ಈ ಹುಡುಕಾಟದ ಪರಿಣಾಮವೆಂದರೆ ಇಲ್ಲಿನ ಬ್ರಾಹ್ಮಣ ಪುರೋಹಿತರು ಅಲ್ಲಿನ ರೋಮನ್ ಕ್ಯಾಥೋಲಿಕ್ ಪಾದ್ರಿಗಳ ತದ್ರೂಪವಾಗುತ್ತಾರೆ. ಪುರೋಹಿತರು ಉದ್ಧರಿಸುವ ಗ್ರಂಥಗಳು ಇಲ್ಲಿನ ಎಲ್ಲ ಸಮಸ್ತ ಜನರ ಪವಿತ್ರ ಗ್ರಂಥಗಳಾಗುತ್ತವೆ. ಅಂತಹ ನಂಬಿಕೆಗೆ ಯಾವುದೇ ಆಧಾರ ದೊರೆಯದಿದ್ದರೂ ಮತ್ತಾವುದೇ ರೀತಿಯಲ್ಲಿ ಇಲ್ಲಿನ ಸಂಸ್ಕೃತಿಯ ವಿವರಣೆ ನೀಡುವುದಕ್ಕೆ ಪಾಶ್ಚಾತ್ಯ ಚಿಂತಕರಿಗೆ ಸಾಧ್ಯವಾಗುವುದಿಲ್ಲ. ಅದಕ್ಕೆ ಕಾರಣ ಅವರ ಸಂಸ್ಕೃತಿ ಅವರ ಮೇಲೆ ಹೇರಿದ ಮಿತಿ.

ಜಾತಿ ವ್ಯವಸ್ಥೆಯ ಕುರಿತು ನಮ್ಮ ತಿಳಿವಳಿಕೆ ಸಮಸ್ಯಾತ್ಮಕವಾಗಿದೆ ಎಂದರೆ ಭಾರತೀಯ ಸಮಾಜದಲ್ಲಿ ಜಾತಿಗಳೇ ಇಲ್ಲವೆಂದಾಗಲಿ, ಜಾತಿಗಳಿಗೆ ಸಂಬಂಧಿಸಿದ ಸಂಪ್ರದಾಯಗಳು, ಆಚರಣೆಗಳಲ್ಲಿ ಯಾವುದೇ ದೋಷಗಳಿಲ್ಲವೆಂದಾಗಲಿ ಅರ್ಥವಲ್ಲ. ಮಾನವೀಯ ಮೌಲ್ಯಗಳನ್ನು ಅಲ್ಲಗಳೆಯುವ, ವ್ಯಕ್ತಿ ಸ್ವಾತಂತ್ರ್ಯ ಹಾಗೂ ಘನತೆಯ ಬದುಕನ್ನು ನಿರಾಕರಿಸುವ ಹಲವಾರು ಆಚರಣೆಗಳು ನಮ್ಮ ಸಮಾಜದಲ್ಲಿವೆ. ಅಂತಹ ಆಚರಣೆಗಳ ವಿರುದ್ಧ ಹೋರಾಡುವುದು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಅತ್ಯಂತ ಅಗತ್ಯ ಕೂಡ. ಆದರೆ ನಾವು ಯಾವುದರ ವಿರುದ್ಧ ಹೋರಾಡುತ್ತಿದ್ದೇವೆಯೊ, ಅದರ ಲಕ್ಷಣ ಹಾಗೂ ಸ್ವರೂಪದ ಬಗ್ಗೆ ಸ್ಪಷ್ಟವಾದ ಅರಿವು ನಮಗೆ ಇರಬೇಕಾಗುತ್ತದೆ. ಭಾರತೀಯ ಸಮಾಜ ಜಾತಿ ವ್ಯವಸ್ಥೆ ಎನ್ನುವ ರೋಗದಿಂದ ನರಳುತ್ತಿದೆ ಎಂದು ಸಮಾಜ ವಿಜ್ಞಾನಿಗಳು, ಚಿಂತಕರು ಗುರುತಿಸಿರುತ್ತಾರೆ ಮತ್ತು ಅದರ ವಿರುದ್ಧ ಹೋರಾಟಗಳು ನಿರಂತರವಾಗಿ ನಡೆಯುತ್ತಲೇ ಇವೆ. ಜಾತಿ ರಹಿತ ಸಮಾಜದ ನಿರ್ಮಾಣ ಪ್ರತಿಯೊಬ್ಬ ಪ್ರಜ್ಞಾವಂತ ಭಾರತೀಯನ ಧ್ಯೇಯ ಎಂದು ನಾವು ತಿಳಿದಿದ್ದೇವೆ. ಭಾರತದಾದ್ಯಂತ ಎಲ್ಲ ಪ್ರಗತಿಪರ ಚಳವಳಿಗಳ ಗುರಿಯೂ ಸಹ ಇದೇ ಆಗಿದೆ. ಅದಕ್ಕಿಂತ ಹೆಚ್ಚಾಗಿ ಹಿಂದೂಯಿಸಂನ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸದಲ್ಲಿ ಹಲವಾರು ಇಂತಹ ಹೋರಾಟಗಳು ನಡೆದಿವೆ ಎಂದು ನಾವು ಓದಿದ್ದೇವೆ. ಇಷ್ಟೆಲ್ಲಾ ಆದರೂ ಜಾತಿರಹಿತ ಸಮಾಜದ ನಮ್ಮ ಗುರಿ ಇನ್ನೂ ಈಡೇರಿಲ್ಲ. ಹೋಗಲಿ ಆ ದಿಕ್ಕಿನಲ್ಲಾದರೂ ನಾವು ಸಾಗುತ್ತಿದ್ದೇವೆಯೆ ಎನ್ನುವ ಬಗ್ಗೆ ಕೂಡ ನಮಗೆ ಇನ್ನೂ ಸ್ಪಷ್ಟವಾಗಿಲ್ಲ. ಜಾತಿಯ ಕುರಿತ ಇತ್ತೀಚಿನ ಸಂಶೋಧನೆಗಳ ಪ್ರಕಾರ ಜಾತಿಗಳು ಕಣ್ಮರೆಯಾಗುವುದರ ಬದಲಾಗಿ ಮತ್ತಷ್ಟು ಗಟ್ಟಿಯಾಗಿ ತಳವೂರುತ್ತಿರುವುದು ಕಂಡುಬರುತ್ತಿದೆ. ಇದೆಲ್ಲದರ ಫಲವಾಗಿ ಜಾತಿ ವಿನಾಶ ಅಸಾಧ್ಯ. ಆದ್ದರಿಂದ ಜಾತಿ ಪದ್ಧತಿಯ ಸುಧಾರಣೆಯತ್ತ ಗಮನ ಹರಿಸಬೇಕು ಎನ್ನುವ ವಾದವನ್ನು

ಕೆಲವು ವಿದ್ವಾಂಸರುಗಳು ಮುಂದಿಡುತ್ತಿದ್ದಾರೆ. ಜಾತಿಪದ್ಧತಿಯ ನ್ಯೂನತೆಗಳನ್ನು ಸರಿಪಡಿಸುವ ಉದ್ದೇಶದಿಂದಲೇ ಕೈಗೆತ್ತಿಕೊಳ್ಳಲಾದ ಮೀಸಲಾತಿಯಂತಹ ಕಾರ್ಯಕ್ರಮಗಳು ಜಾತಿಯ ಗುರುತನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಹುಟ್ಟುಹಾಕುತ್ತಿರುವುದು ಮತ್ತೊಂದು ವಿಪರ್ಯಾಸ. ಹೀಗಾಗಿ ಜಾತಿವಿನಾಶದ ಬಗೆಗಿನ ನಮ್ಮ ಸುದೀರ್ಘ ಅನುಭವದ ಸಂಭಾವ್ಯ ತೀರ್ಮಾನಗಳೆಂದರೆ:

ಒಂದು ; ಸಾವಿರಾರು ವರ್ಷಗಳ ಹೋರಾಟವನ್ನು ಎದುರಿಸಿಯೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವ ಜಾತಿಯ ನಾಶ ಅಸಾಧ್ಯ. ಇಂತಹ ತೀರ್ಮಾನ ಅವೈಜ್ಞಾನಿಕವಾದದ್ದು. ಏಕೆಂದರೆ ಜಗತ್ತಿನ ಇತಿಹಾಸದಲ್ಲಿಯಾವ ಸಾಮಾಜಿಕ ಸಂಸ್ಥೆಯೂ ಸಾವಿರಾರು ವರ್ಷಗಳಷ್ಟು ಕಾಲ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವ ಉದಾಹರಣೆಗಳಿಲ್ಲ. ಜಾತಿ ಇದಕ್ಕೊಂದು ಅಪವಾದವಾಗಿರುವುದಕ್ಕೆ ನಮಗೆ ಯಾವ ಕಾರಣಗಳೂ ಸಿಗುವುದಿಲ್ಲ. ಆದ್ದರಿಂದ ನಾವು ತೆಗೆದುಕೊಳ್ಳಬಹುದಾದ ಮತ್ತೊಂದು ತೀರ್ಮಾನವೆಂದರೆ; ನಮ್ಮ ಸಮಾಜದಲ್ಲಿ ಜಾತಿಯ ಸ್ವರೂಪದ ಬಗ್ಗೆಯಾಗಲೀ ಅದು ಸಮಾಜದಲ್ಲಿ ನಿರ್ವಹಿಸುತ್ತಿರುವ ಪಾತ್ರದ ಬಗ್ಗೆಯಾಗಲೀ ನಮಗೆ ಸರಿಯಾದ ತಿಳಿವಳಿಕೆಯಿಲ್ಲ. ಜಾತಿ ವ್ಯವಸ್ಥೆಯ ಬಗ್ಗೆ ನಮ್ಮ ಓದಿನ ತಿಳಿವಳಿಕೆಗೂ ನಮ್ಮ ದಿನನಿತ್ಯದ ಅನುಭವಕ್ಕೂ ನಡುವಿನ ವ್ಯತ್ಯಾಸವನ್ನು ಗುರುತಿಸುವಲ್ಲಿ ಮತ್ತು ಹಾಗೆ ಗುರುತಿಸಿದಾಗ ಅದಕ್ಕೆ ವೈಜ್ಞಾನಿಕವಾದ ವಿವರಣೆಯನ್ನು ನೀಡುವಲ್ಲಿ ನಮ್ಮ ಸಮಾಜ ಶಾಸ್ತ್ರಜ್ಞರು ವಿಫಲರಾಗಿದ್ದಾರೆ.

ಹಿಂದೂಯಿಸಂ ಹಾಗು ಜಾತಿ ವ್ಯವಸ್ಥೆಯ ಬಗ್ಗೆ ನಮಗೆ ಲಭಿಸಿರುವ ಜ್ಞಾನದ ಮೂಲ ಪಾಶ್ಚಾತ್ಯ ಸಂಸ್ಕೃತಿ ಅದರಲ್ಲೂ ಮುಖ್ಯವಾಗಿ ಕ್ರೈಸ್ತಮತದ ಚೌಕಟ್ಟು. ಕೊನೆಯಲ್ಲಿ ಮತ್ತೊಂದು ವಿಷಯವನ್ನು ಸ್ಪಷ್ಟಪಡಿಸಬೇಕು. ಪಾಶ್ಚಾತ್ಯ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ ಎನ್ನುವ ಕಾರಣಕ್ಕಾಗಿ ಅದನ್ನು ನಿರಾಕರಿಸಬಾರದು. ನಮ್ಮ ಸಂಸ್ಕೃತಿಯನ್ನು ಇತರ ಸಂಸ್ಕೃತಿಯವರು ಅಧ್ಯಯನ ಮಾಡಬಾರದು ಎನ್ನುವ ನಿಲುವು ಪಾಶ್ಚಾತ್ಯ ಶಿಕ್ಷಣದಿಂದ ಪಡೆದ ಜ್ಞಾನ ಸಮಾಜದೊಳಗೆ ಬದುಕುತ್ತಿರುವ ನಮಗೆ ನಮ್ಮ ಅನುಭವಗಳೇ ದಕ್ಕದ ಹಾಗೆ ಮಾಡಿದೆ. ನಾವು ಹೊರಗಿನಿಂದ ಪಡೆದ ಜ್ಞಾನಕ್ಕೆ ಮಾನ್ಯತೆ ನೀಡಿ ನಮ್ಮ ಅನುಭವಗಳನ್ನೇ ನಿರಾಕರಿಸುವ ದುಃಸ್ಥಿತಿಗೆ ನಾವು ತಲುಪಿದ್ದೇವೆ, ಹಾಗಲ್ಲದೆ ಹೋದಲ್ಲಿ, ಜಾತಿವ್ಯವಸ್ಥೆಯನ್ನು ಕುರಿತಾಗಲೀ ಹಿಂದೂಯಿಸಂ ಕುರಿತಾಗಲೀ ಒಂದು ಮೂಲ ಸಂಶೋಧನೆಯನ್ನು ಮಾಡಲು ಏಕೆ ಯಾವ ಭಾರತೀಯ ವಿದ್ವಾಂಸರಿಗೂ ಸಾಧ್ಯವಾಗಿಲ್ಲ?

# ಭಾರತೀಯ ಬಹುಸಂಸ್ಕೃತಿಗಳು ಮತ್ತು ಸೆಕ್ಯುಲರ್‌ವಾದ

ರಾಜಾರಾಮ ಹೆಗಡೆ

ಭಾರತವು ಬಹುಸಂಸ್ಕೃತಿಗಳ ದೇಶವಾಗಿದೆ, ಹಿಂದುತ್ವವು ಅದನ್ನು ಏಕರೂಪಕ್ಕೆ ಬದಲಾಯಿಸುತ್ತಿದೆ ಹಾಗೂ ಇದರ ಹಿಂದೆ ವಸಾಹತುಶಾಹೀ ಚಿಂತನೆಗಳ ಪ್ರಭಾವವಿದೆ ಎಂಬುದು ಭಾರತೀಯ ಸೆಕ್ಯುಲರಿಸಂನ ವಕ್ತಾರರ ಒಂದು ಪ್ರಮುಖ ವಾದ. ಹಾಗೂ ಹಿಂದುತ್ವವನ್ನು ಖಂಡಿಸಲಿಕ್ಕೆ ಇದೊಂದು ಪರಿಣಾಮಕಾರಿಯಾದ ವಾದವಾಗಿದೆ ಎಂಬುದನ್ನು ಸೆಕ್ಯುಲರ್‌ವಾದಿಗಳೆಲ್ಲ ಗುರುತಿಸಿದ್ದಾರೆ. ಆದರೆ ಅವರು ಈ ವಾದವನ್ನು ಒಂದು ಹಂತದವರೆಗೆ ಒಯ್ದು ನಿಲ್ಲಿಸುವುದರಿಂದ ಅವರ ವಾದದಲ್ಲಿ ಹುಟ್ಟಬಹುದಾದ ವಿರೋಧಾಭಾಸವನ್ನು ಅವರು ಬಗೆಹರಿಸುವುದಿಲ್ಲ. ಏಕೆಂದರೆ ಸೆಕ್ಯುಲರ್‌ವಾದವೂ ಕೂಡಾ ವಸಾಹತುಶಾಹೀ ಚಿಂತನೆಗಳ ಸೃಷ್ಟಿಯೇ ಆಗಿರುವುದರಿಂದ ವಸಾಹತು ಕಾಲದಲ್ಲಿನ ಚಿಂತನೆಗಳ ಮಿತಿ ಅದರೊಳಗೂ ಪ್ರಸ್ತುತತೆ ಪಡೆಯುವುದಿಲ್ಲವೇ ಎಂಬ ಪ್ರಶ್ನೆ ಏಳುವುದು ಸಹಜ. ಈ ಲೇಖನದಲ್ಲಿ ಸೆಕ್ಯುಲರ್‌ವಾದದ ಮಿತಿಗಳು ಎಲ್ಲೆಲ್ಲಿವೆ, ಯಾವ ರೂಪದಲ್ಲಿವೆ ಎಂಬುದನ್ನು ಗುರುತಿಸುವ ಪ್ರಯತ್ನ ನಡೆಸಲಾಗಿದೆ. ಅಂದರೆ, ಭಾರತೀಯ ಸಾಂಸ್ಕೃತಿಕ ವೈವಿಧ್ಯತೆ ಹಾಗೂ ವೈಶಿಷ್ಟ್ಯತೆಯನ್ನು ಆಧಾರವಾಗಿಟ್ಟುಕೊಂಡಾಗ ವಾದಗಳು ತಾರ್ಕಿಕವಾಗಿ ಯಾವ ನಿಟ್ಟಿನಲ್ಲಿ ಸಾಗಲೇಬೇಕಾಗುತ್ತದೆ ಹಾಗೂ ಅದು ಸೆಕ್ಯುಲರ್‌ವಾದಕ್ಕೂ ಹೇಗೆ ಸಮಸ್ಯೆಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ಈ ಲೇಖನದಲ್ಲಿ ಗುರುತಿಸಲು ಪ್ರಯತ್ನಿಸಿದ್ದೇನೆ. ಆದರೆ ಸೆಕ್ಯುಲರಿಸಂ ಕುರಿತು ವಿಮರ್ಶಿಸುವಾಗ ಕೋಮುವಾದ ಅದಕ್ಕಿಂತ ಒಳ್ಳೇ ಪರ್ಯಾಯ ಎಂಬ ಸೂಚನೆಯನ್ನು ನಾನು ಸರ್ವಥಾ ನೀಡುತ್ತಿಲ್ಲ. ಈ ಲೇಖನದ ಉದ್ದೇಶವೆಂದರೆ ಭಾರತದಲ್ಲಿ ಈಗ ಪ್ರಚಲಿತದಲ್ಲಿರುವ ಕೋಮುವಾದದ ಸಮಸ್ಯೆಯನ್ನು ಅರ್ಥೈಸುವುದು. ಕೋಮುವಾದದ ಸಮಸ್ಯೆಯನ್ನು ಕುರಿತು ಚರ್ಚಿಸುವಾಗ ಸೆಕ್ಯುಲರಿಸಂನ ಸಮಸ್ಯೆಗಳನ್ನು ಕೂಡಾ ಗುರುತಿಸುವ ಅಗತ್ಯವಿದೆ. ಅವೆರಡರಲ್ಲೂ ಇರಬಹುದಾದ ಮೂಲಭೂತ ಮಿತಿಗಳ ಕುರಿತೇ ಈ ಅವಲೋಕನ. ಈ ಅವಲೋಕನದಿಂದಾಗಿ,

ಈ ಗೋಜಲಿನಿಂದ ಹೊರಬರಬಹುದಾದ ಸಾಧ್ಯತೆಗಳು ಇನ್ನು ಮುಂದೆ ಹೊಳೆದರೂ ಹೊಳೆಯಬಹುದು ಎಂಬ ಆಶಯವೂ ಈ ಲೇಖನದಲ್ಲಿದೆ.

೧. ಇಂದು ಸೆಕ್ಯುಲರ್‌ವಾದದ ಕುರಿತು ಅನೇಕ ಅಭಿಪ್ರಾಯಗಳು ಕೇಳಿಬರುತ್ತಿವೆ. ಅವುಗಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸಿಕೊಳ್ಳಬಹುದು. ಮೊದಲನೆಯ ಗುಂಪು ಭಾರತೀಯ ಸಂದರ್ಭದಲ್ಲಿ ಸೆಕ್ಯುಲರ್ ಪದದ ಅರ್ಥದ ಹಾಗೂ ಅನ್ವಯದ ಕುರಿತು ಚರ್ಚಿಸುತ್ತಿದೆ. ಎರಡನೆಯ ಗುಂಪು ಈ ಸೆಕ್ಯುಲರ್ ಎಂಬ ಕಲ್ಪನೆಯನ್ನೇ ನಾವು ತಿರಸ್ಕರಿಸಬೇಕೆನ್ನುತ್ತದೆ. ಮೊದಲನೆಯ ಗುಂಪಿನ ಪ್ರಕಾರ ಯಾವುದೋ ಒಂದು ರೂಪದಲ್ಲಿ ಸೆಕ್ಯುಲರಿಸಂ ನಮ್ಮ ಆಧುನಿಕ ಪ್ರಜಾಪ್ರಭುತ್ವಕ್ಕೆ ಬೇಕೇ ಬೇಕು. ಆದರೆ ಸೆಕ್ಯುಲರಿಸಂ ಎಂದರೇನು? ದೇಶೀ ಭಾಷೆಯಲ್ಲಿ ಯಾವ ಪರಿಭಾಷೆಯ ಮೂಲಕ ಅದನ್ನು ಗ್ರಹಿಸಬೇಕು? ಎಂಬ ವಿಷಯದ ಕುರಿತು ಸ್ಪಷ್ಟತೆ ಇಲ್ಲ.

ಸೆಕ್ಯುಲರ್ ಎಂಬ ಪದಕ್ಕೆ ನಮ್ಮಲ್ಲಿ ಯಾವ ಬದಲಿ ಪರಿಕಲ್ಪನೆಯಿದೆ ಎಂಬುದರ ಕುರಿತು ಸೆಕ್ಯುಲರ್ ವಾದಿಗಳಲ್ಲಿ ಒಮ್ಮತವಿಲ್ಲದ್ದು ನಮಗೆಲ್ಲ ತಿಳಿದಿದೆ. ಅವರು ಅದನ್ನು ಧರ್ಮ ನಿರಪೇಕ್ಷತೆ ಎಂಬುದಾಗಿ ಗ್ರಹಿಸಿಕೊಂಡವರಿದ್ದಾರೆ, ಸರ್ವಧರ್ಮ ಸಮಭಾವ ಎಂಬುದಾಗಿಯೂ ನಿರೂಪಿಸಿಕೊಂಡವರಿದ್ದಾರೆ. ಧರ್ಮನಿರಪೇಕ್ಷ ಎಂಬ ಶಬ್ದವು ರಾಜಕೀಯವು ಯಾವುದೇ ಮತಧರ್ಮವನ್ನೂ ಅವಲಂಬಿಸದೇ, ಅದಕ್ಕೆ ಅಂಟಿಕೊಳ್ಳದಂತೆ ನಿರ್ಲಿಪ್ತವಾಗಿರಬೇಕು ಎಂಬ ಸೂಚನೆಯನ್ನು ನೀಡುತ್ತದೆ. ಅಂದರೆ ಯಾವುದೇ ನಾಗರೀಕ ಸಮೂಹದ ಭಾಗವಾಗಿರುವ ಪ್ರಜೆಯೊಬ್ಬನು ಸಾರ್ವಜನಿಕವಾಗಿ ಮತಧರ್ಮವಿಲ್ಲದ ವ್ಯಕ್ತಿಯಾಗಿರಬೇಕು. ಹಾಗೂ ಯುರೋಪಿನಲ್ಲಿ ಈ ಅರ್ಥದಲ್ಲೇ ಅದರ ಉಪಯೋಗವಾಗುತ್ತಿದೆ. ಸರ್ವಧರ್ಮಸಮಭಾವವು ರಾಜಕೀಯವು ಎಲ್ಲಾ ಮತಧರ್ಮಗಳ ಜೊತೆಗೂ ಒಂದೇ ರೀತಿಯ ಸಂಬಂಧವನ್ನಿಟ್ಟುಕೊಳ್ಳಬೇಕು ಎನ್ನುವುದನ್ನು ಸೂಚಿಸುತ್ತದೆ. ಭಾರತೀಯ ಸೆಕ್ಯುಲರಿಸಂನ ಘೋಷಣೆಯಾಗಿರುವ ಕೋಮುಸೌಹಾರ್ದತೆಯು ಸಾರ್ವಜನಿಕ ಕ್ಷೇತ್ರದಲ್ಲಿ ಮತಧರ್ಮಗಳ ನಡುವಿನ ಸೌಹಾರ್ದಯುತ ಸಂಬಂಧವನ್ನು ಪ್ರತಿಪಾದಿಸುತ್ತದೆ. ಇದು ಐರೋಪ್ಯ ಕಲ್ಪನೆಗೆ ಸಂಪೂರ್ಣ ವಿರುದ್ಧವಾದ ನಿರೂಪಣೆಗಳನ್ನು ಸೃಷ್ಟಿಸುತ್ತದೆ. ಜಾತ್ಯತೀತತೆ ಎಂಬ ಒಂದು ವಿಚಿತ್ರ ಅನುವಾದವೂ ಈ ಶಬ್ದಕ್ಕಿದೆ, ಈ ಶಬ್ದಕ್ಕೂ ಸೆಕ್ಯುಲರ್‌ವಾದಕ್ಕೂ ಏನು ಸಂಬಂಧ ಎಂಬುದು ನನಗೆ ಹೊಳೆಯುತ್ತಿಲ್ಲ. ಪ್ರಭುತ್ವವು ಜಾತಿಗೆ ಅತೀತವಾಗಿರಬೇಕು ಎಂದೆ? ಆದರೆ ನಮ್ಮ ರಾಜಕೀಯವು ಹೀಗೇನೂ ಭಾವಿಸಿಕೊಂಡಿದ್ದನ್ನು ನಾನು ಗಮನಿಸಿಲ್ಲ. ಸೆಕ್ಯುಲರ್ ವಾದವು ನಮ್ಮ ತಲೆಯೊಳಗೆ ಇಳಿಯಲಿಕ್ಕೆ ಇಷ್ಟು ಹೀನಾಯವಾಗಿ ಸೋತಿದೆ ಎಂಬುದಕ್ಕೆ ಅದು ಸಂಕೇತವಾಗಬಹುದಾದ್ದರಿಂದ ಆ ಶಬ್ದವನ್ನೂ ಇಲ್ಲಿ ಉಲ್ಲೇಖಿಸುತ್ತಿದ್ದೇನೆ.

ಈ ತರ್ಜುಮೆಗಳ ಸಂಬಂಧಿಸಿ ಇಂಥ ಅಪಹಾಸ್ಯಕರ ಸನ್ನಿವೇಶವು ಸೃಷ್ಟಿಯಾದದ್ದು ಹೇಗೆ? ಸೆಕ್ಯುಲರಿಸಂ ಭಾರತೀಯ ಸಂದರ್ಭದಲ್ಲಿ ಏನನ್ನು ಸೂಚಿಸಬೇಕು ಎಂಬುದರ ಕುರಿತಾಗಿ ಅಸ್ಪಷ್ಟತೆ ಇದೆ ಎಂಬುದಂತೂ ಸ್ಪಷ್ಟ. ಸೆಕ್ಯುಲರಿಸಂ ಎಂಬುದು ರಿಲಿಜನ್ನಿಗೆ ಪರ್ಯಾಯವಾದ ಲೋಕದೃಷ್ಟಿ ಎಂಬುದಾಗಿ ಸೆಕ್ಯುಲರ್ ವಾದವು ತಿಳಿಸುತ್ತದೆ. ಆದರೆ ಭಾರತದಲ್ಲಿ ನಮ್ಮ ಆಚರಣೆಗೆ

ಸಂಬಂಧಿಸಿದಂತೇ ಇದಕ್ಕೆ ಏನು ಅರ್ಥ ಎಂಬುದನ್ನು ನೋಡೋಣ. ಸ್ವಲ್ಪ ಗಮನಿಸಿ, ಇಂದಿನ ಎಲ್ಲಾ ಸೆಕ್ಯುಲರ್‌ವಾದೀ ಚರ್ಚೆಗಳೂ ಕಮ್ಯುನಲಿಸಂ ಎಂಬ ಶಬ್ದಕ್ಕೆ ಪ್ರತಿಯಾಗಿ ಈ ಶಬ್ದವನ್ನು ಇಡುತ್ತವೆ. ಕಮ್ಯುನಲಿಸಂ ಶಬ್ದಕ್ಕೆ ಕೋಮುವಾದ ಎಂಬ ತರ್ಜುಮೆಯನ್ನು ನಾವೆಲ್ಲ ಒಪ್ಪಿಕೊಂಡಿದ್ದೇವೆ. ಸೆಕ್ಯುಲರ್ ಪದಕ್ಕೆ ವಿರುದ್ಧ ಪದವು ರಿಲಿಜಿಯಸ್ ಎಂಬುದಾಗಿರುವಾಗ ಭಾರತದಲ್ಲಿ ಈ ಕೋಮುವಾದವು ಎಲ್ಲಿಂದ ಬಂತು? ಕೋಮುವಾದ ಎಂದರೆ ಏನು? ಹಿಂದೂ ಹಾಗೂ ಮುಸ್ಲಿಂ ಎಂಬ ಎರಡು ಪಕ್ಷಗಳನ್ನು ಹಿಡಿದು ಪ್ರತಿಪಾದಿಸುವುದು ಎಂದರೆ ಮಾತ್ರ ಈ ಶಬ್ದದ ಆಚರಣೆ ಏನು ಎಂಬುದು ಸ್ಪಷ್ಟವಾಗುತ್ತದೆ. ಅದಕ್ಕೆ ಇನ್ನಾವ ವ್ಯಾಖ್ಯೆಯನ್ನು ನೀಡಿದರೂ ಅದು ಅರ್ಥವಾಗುವುದಿಲ್ಲ. ಹಾಗೇ, ನಮ್ಮ ಪ್ರಭುತ್ವವು ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ ಮತಗಳನ್ನು ಸಮಾನ ದೃಷ್ಟಿಯಲ್ಲಿ ನೋಡಬೇಕು ಎಂಬುದೇ ಸರ್ವಧರ್ಮ ಸಮಭಾವ ಶಬ್ದದ ಆಚರಣೆ ಎಂಬುದೂ ಸ್ಪಷ್ಟ. ಸದ್ಯದಲ್ಲಿ ಹಿಂದೂ ಕೋಮುವಾದ ಹಾಗೂ ಮುಸ್ಲಿಂ ಕೋಮುವಾದ ಎಂಬೆರಡು ಶಬ್ದಗಳನ್ನು ನಾವು ಸೆಕ್ಯುಲರ್ ಪರಿಭಾಷೆಯಲ್ಲಿ ಬಳಸುತ್ತಿದ್ದೇವೆ.

ಕ್ರಿಶ್ಚಿಯನ್ ಕೋಮುವಾದ ಎಂಬ ಶಬ್ದ ಆಚರಣೆಯಲ್ಲಿಲ್ಲ. ಹಾಗೂ ಹಿಂದೂ ಕೋಮುವಾದ ಎಂಬ ಶಬ್ದ ಮಾತ್ರ ರಾಜಕೀಯದ ಸಮಸ್ಯೆಯಾಗಿದೆ. ಸೆಕ್ಯುಲರ್ ವಾದವು ಬಲಗೊಂಡಿದ್ದೇ ಈ ಹಿಂದೂ ಕೋಮುವಾದವನ್ನು ಎದುರಿಸಲಿಕ್ಕಾಗಿ. ಇಂದಿಗೂ ಕೂಡ ಸೆಕ್ಯುಲರ್‌ವಾದೀ ಲೇಖನಗಳ ಜಿಜ್ಞಾಸೆ ಹಿಂದೂ ಕೋಮುವಾದದ ಕುರಿತೇ ನಡೆಯುತ್ತದೆ. ಏಕೆಂದರೆ ಹಿಂದೂಗಳು ಬಹುಸಂಖ್ಯಾತರ ಧರ್ಮವಾಗಿದ್ದು ಅವರ ಪ್ರಭುತ್ವವು ಅಲ್ಪಸಂಖ್ಯಾತ ಧರ್ಮಗಳನ್ನು ದಮನಿಸುವ ಸಾಧ್ಯತೆಗಳು ಕಂಡುಹಿಡಿಯುವುದರಿಂದ ನಮ್ಮ ದೇಶದ ಸೆಕ್ಯುಲರ್ ತಳಹದಿಗೆ ದಕ್ಕೆಯಾಗುವ ಸೂಚನೆಯನ್ನು ನಾವು ಕಾಣುತ್ತಿದ್ದೇವೆ. ಹಿಂದೂಗಳು ಸಹಿಷ್ಣುಗಳಾಗಿರುವಂತೆ ಕಾಯ್ದುಕೊಳ್ಳುವುದು ಸೆಕ್ಯುಲರಿಸಂನ ಆದ್ಯತೆಯಾಗಿದೆ. ಆ ಕಾರಣಕ್ಕೆ ಸೆಕ್ಯುಲರಿಸಂಗೆ ಅಲ್ಪಸಂಖ್ಯಾತರ ಕುರಿತಂತೆ ಅನುಕಂಪವನ್ನು ವ್ಯಕ್ತಪಡಿಸುವುದು ಮಾನವೀಯ ಕಾಳಜಿಯಾಗುತ್ತದೆ. ಆದರೆ ಇದುವರೆಗೂ ತಾವು ಕೋಮುವಾದಿಗಳೆಂದು ಹಿಂದುತ್ವವಾದಿಗಳು ಒಪ್ಪಿಕೊಂಡಿಲ್ಲ. ಬದಲಾಗಿ ಕಾಂಗ್ರೆಸ್ಸಿಗರು ಸರ್ವಧರ್ಮಗಳನ್ನೂ ಸಮಭಾವದಿಂದ ನೋಡಿಲ್ಲ, ಹಾಗಾಗಿ ಅವರ ಸೆಕ್ಯುಲರಿಸಂ ಸ್ಯೂಡೋ ಸೆಕ್ಯುಲರಿಸಂ ಎಂಬುದಾಗಿ ಹಿಂದುತ್ವವಾದಿಗಳು ಆರೋಪಿಸುತ್ತಾರೆ ಹಾಗೂ ಸೆಕ್ಯುಲರ್‌ವಾದಿಗಳು ಪಾಕಿಸ್ತಾನದ ಏಜಂಟುಗಳು, ಹಿಂದೂಗಳ ವಿರೋಧಿಗಳು ಹಾಗೂ ಅವರೇ ನಿಜವಾದ ಕೋಮುವಾದಿಗಳು ಎಂಬ ಆರೋಪವನ್ನೂ ಮಾಡಲಾಗುತ್ತಿದೆ. ಅವರು ಹೇಗೆ ತಮ್ಮದೇ ನಿಜವಾದ ಸೆಕ್ಯುಲರಿಸಂ ಎಂಬುದನ್ನೂ ವಿವರಿಸುತ್ತಾರೆ. ಹಾಗಾಗಿ ಎಲ್ಲರೂ ಸೆಕ್ಯುಲರಿಸಂ ಒಂದು ಮೌಲ್ಯ ಎಂದು ಒಪ್ಪಿಕೊಂಡ ಮೇಲೆ ಈ ಸೆಕ್ಯುಲರ್ ರಾಷ್ಟ್ರಕ್ಕೆ ಸಮಸ್ಯೆ ಏನು?,

ಕೋಮುವಾದವನ್ನು ವಿರೋಧಿಸಿ ಸಾಕಷ್ಟು ಸೆಕ್ಯುಲರ್ ಚಳವಳಿಗಳಾಗುತ್ತಿವೆ. ಇಂಥ ಚಳವಳಿಗಳು ಹೆಚ್ಚಾದಂತೇ ಕೋಮುವಾದೀ ಹಿಂಸೆ ಕೂಡಾ ಹೆಚ್ಚಾಗುತ್ತಿರುವುದನ್ನೂ ನೋಡುತ್ತಿದ್ದರೆ ಈ ವಾದವೇನೂ ಜನರ ಮೇಲೆ ಪ್ರಭಾವ ಬೀರಿದಂತೆ ತೋರುವುದಿಲ್ಲ. ಇಂದಿಗೆ

ಹೋಲಿಸಿದರೆ ಈಗ ಮೂವತ್ತು ವರ್ಷಗಳ ಹಿಂದೆ ಸೆಕ್ಯುಲರ್‌ವಾದಿಗಳಿಗೆ ತೀರಾ ಕಡಿಮೆ ಸಮಸ್ಯೆಗಳಿದ್ದವು. ೯೦ರ ದಶಕದಿಂದೀಚೆಗೆ ಮತೀಯ ಹಿಂಸೆ ವಿಕಾರವಾಗಿ ಬೆಳೆದುಕೊಂಡಿದೆ. ಹಿಂದುತ್ವವಾದವು ರಾಜಕೀಯ ಶಕ್ತಿಯಾಗಿ ಆವಿರ್ಭವಿಸಿದೆ. ಮುಸ್ಲಿಂ ಭಯೋತ್ಪಾದಕರು ಎಲ್ಲೆಡೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಶಾಂತವಾಗಿದ್ದ ತಾಣಗಳು ವಿವಾದಾಸ್ಪದವಾಗುತ್ತಿವೆ. ಹಿಂದುತ್ವವಾದಕ್ಕೆ ರಾಜಕೀಯ, ಸಾರ್ವಜನಿಕ ಬೆಂಬಲಿಗರು ಎಲ್ಲೆಡೆಯಲ್ಲೂ ವೃದ್ಧಿಸುತ್ತಿದ್ದಾರೆ. ಈ ಸಮಸ್ಯೆಯ ಲಾಭವನ್ನು ಪಡೆದುಕೊಳ್ಳುವಲ್ಲಿ ಯಾವ ರಾಜಕೀಯ ಪಕ್ಷಗಳೂ ಹಿಂದೆ ಬಿದ್ದಿಲ್ಲ. ರಾಜಕೀಯ ಪಕ್ಷಗಳು ಇದನ್ನೊಂದು ಚುನಾವಣೆಗೆ ನಿರ್ಣಾಯಕವಾದ ವಿಷಯ ಎಂಬಂತೆ ನೋಡುತ್ತಿವೆ. ಇದು ಕೋಮುವಾದಿಗಳ ಹುನ್ನಾರ ಎಂದು ವರ್ಣಿಸಿ ಸೆಕ್ಯುಲರ್ ಹೋರಾಟವನ್ನು ಇನ್ನೂ ಹೆಚ್ಚಿಸಬೇಕು ಎಂಬುದಾಗಿ ಕರೆಕೊಡುವುದರಿಂದ ಸೆಕ್ಯುಲರ್ ರಾಜಕಾರಣಕ್ಕೆ, ಹಾಗೂ ಕೆಲವೊಮ್ಮೆ ಕೋಮುವಾದಿಗಳಿಗಿಂತ ಹಿಂಸಾತ್ಮಕವಾದ, ಅವಕಾಶವಾದೀ ವೈರಿ ಸಂಘಟನೆಗಳಿಗೆ ಲಾಭವಾಗಿರಬಹುದೇ ಹೊರತೂ, ನಿಜವಾದ ಕಳಕಳಿ ಇರುವವರಿಗೆ ಈ ಸಮಸ್ಯೆಯಿಂದ ಪಾರಾಗುವ ಮಾರ್ಗ ಯಾವುದು ಎಂಬ ಆತಂಕ ವರ್ಧಿಸುತ್ತಲೇ ಇದೆ. ಸೆಕ್ಯುಲರಿಸಂ ಬೋಧನೆ, ಪ್ರತಿಪಾದನೆ ಹಾಗೂ ಹೋರಾಟಗಳು ಹೆಚ್ಚಿದಂತೆಲ್ಲ ಕೋಮುವಾದವು ಕಡಿಮೆಯಾಗುವ ಬದಲು ಹೆಚ್ಚಾಗುತ್ತಿರುವುದಂತೂ ನಿದರ್ಶಿತ ಸತ್ಯ. ಇದು ತೀರಾ ಆತಂಕಕಾರಿಯಾದ ವಿಷಯ.

ಒಂದು ರೋಗವು ಚಿಕಿತ್ಸೆ ಮಾಡಿದಂತೆಲ್ಲ ಉಲ್ಬಣಿಸುತ್ತಲೇ ಹೋಗುತ್ತದೆ ಅಂತಿಟ್ಟುಕೊಳ್ಳಿ. ಬಹುಶ: ನಾವು ಆ ರೋಗವನ್ನು ಪತ್ತೆ ಮಾಡುವುದರಲ್ಲೇ ತಪ್ಪಿರಬಹುದು ಎಂಬ ಅಭಿಪ್ರಾಯ ಸಹಜವಾಗೇ ಮೂಡುತ್ತದೆ. ಒಮ್ಮೆ ಹಾಗೆ ನಾವು ತಪ್ಪಿದಲ್ಲಿ ಆಗ ಚಿಕಿತ್ಸಾವಿಧಾನವನ್ನು ಬದಲಿಸಿಕೊಳ್ಳಬೇಕು. ರೋಗಿಯ ಜೀವದ ಕುರಿತು ಕಾಳಜಿ ಇರುವವರು ಹೀಗೂ ಯೋಚಿಸುತ್ತಾರೆ. ಇಂಥದೊಂದು ಸಂದರ್ಭದಲ್ಲಿ ಹೀಗೊಂದಿಷ್ಟು ಜನರು ಈ ಚಿಕಿತ್ಸೆಯನ್ನು ಬದಲಿಸಬೇಕೆಂಬ ಸಲಹೆ ನೀಡುತ್ತಾರೆ ಅಂತಿಟ್ಟುಕೊಳ್ಳಿ. ರೋಗಿಯ ಬಂಧುಗಳಿಗೆ ಅದು ಅಪಾಯಕಾರಿಯಾದ ಸಲಹೆಯಾಗಿ ಕಾಣಿಸಬಹುದು. ಆ ಚಿಕಿತ್ಸೆಯನ್ನೇ ಬಂಡವಾಳ ಮಾಡಿಕೊಂಡ ವೈದ್ಯರ ವರ್ಗಕ್ಕಂತೂ ಇಂಥ ವಿಚಾರಗಳು ಪಥ್ಯವಾಗಲು ಕಾರಣವೇ ಇಲ್ಲ. ಬಹುಶಃ ಸೆಕ್ಯುಲರಿಸಂ ಸಂದರ್ಭದಲ್ಲೂ ಹೆಚ್ಚು ಕಡಿಮೆ ಇದೇ ರೀತಿಯಾಗಿದೆ. ಈಗ ಇಪ್ಪತ್ತು ವರ್ಷದ ಹಿಂದೆ ಎಡಪಂಥೀಯರಿಂದಲೇ ಪ್ರಭಾವಿತವಾಗಿದ್ದ ಕಟ್ಟರ್ ಸೆಕ್ಯುಲರ್ ಪಂಥವು ದೇವರು ಧರ್ಮ ಮುಂತಾದವುಗಳ ಕುರಿತು ಮರುಚಿಂತನೆ ನಡೆಸಿದವರನ್ನೂ ಪ್ರಚ್ಛನ್ನ ಕೋಮುವಾದಿಗಳೆಂದೇ ಪರಿಗಣಿಸಿತ್ತು. ಏಕೆಂದರೆ ಈ ಸೆಕ್ಯುಲರಿಸಂನ ಹಡಪದಲ್ಲಿ ಕೋಮು ಸೌಹಾರ್ದವೊಂದೇ ಇರುವುದಿಲ್ಲ, ಅದಕ್ಕೂ ಪ್ರಭಾವಿಯಾದ, ಸೌಹಾರ್ದದ ಕಾರ್ಯಕ್ರಮವನ್ನೇ ಹಾಳುಗೆಡವಬಲ್ಲ ಇತರ ಪೂರ್ವಗ್ರಹೀತಗಳೂ, ಪೂರ್ವಾಗ್ರಹಗಳೂ ಇವೆ. ಏಕೆಂದರೆ ಸೆಕ್ಯುಲರಿಸಂ ಮೂಲತಃ ಪ್ರಭುತ್ವದ ಸಮಸ್ಯೆಗಳನ್ನು ಪರಿಹರಿಸಲಿಕ್ಕೆ ಹುಟ್ಟಿಕೊಂಡಿದ್ದೇ ಹೊರತೂ ಸೌಹಾರ್ದತೆಯನ್ನು ಬೋಧಿಸಲಿಕ್ಕಲ್ಲ. ಆದರೆ ಈಗ ಭಾರತೀಯ ಸಂದರ್ಭದಲ್ಲಿ ಅದರ ಲಕ್ಷ್ಯ ಬದಲಾಗಿದೆ. ಅನೇಕರು ಇಂಥ ಮಿತಿಗಳನ್ನು ಅರಿತುಕೊಂಡು ವಿಚಾರಗಳನ್ನು ಬದಲಿಸಿಕೊಂಡಿದ್ದಾರೆ. ಅವರ

ಕಳಕಳಿಯ ಕುರಿತು ಎರಡು ಮಾತಿಲ್ಲ. ಆದರೆ ಚಿಕಿತ್ಸೆಯನ್ನು ಎಷ್ಟೇ ಸುಧಾರಿಸಿದರೂ ಪ್ರಯೋಜನ ಕಾಣುತ್ತಿಲ್ಲ. ಅಂದರೆ ರೋಗವೇ ಬೇರೆಯ ರೀತಿಯದಾಗಿದೆಯೇ? ಕೆಲವೊಮ್ಮೆ ಔಷಧಿಯೇ ರೋಗವನ್ನು ಸೃಷ್ಟಿಸುವ ಸಂಭವವೂ ಇರುತ್ತದೆ.

ಹಿಂದೂ ಮುಸ್ಲಿಂ ಗಲಭೆಗಳಿಗೆ ಕಾರಣವನ್ನು ಹುಡುಕುವ ಕಾರಣಜಿಜ್ಞಾಸೆಯು ೧೯೮೦ರ ದಶಕದಲ್ಲಿ ಪ್ರಬಲವಾಗಿತ್ತು. ಅಶ್ಗರ್ ಅಲಿ ಇಂಜಿನಿಯರ್ ಅವರು ಆರ್ಥಿಕ ಕಾರಣಗಳ ಕುರಿತು ವಿಸ್ತೃತವಾಗಿ ಶೋಧಿಸಿದ್ದಾರೆ. ಎಡಪಂಥೀಯರು ಇದರಲ್ಲಿ ವರ್ಗ ಸಂಘರ್ಷವನ್ನು ಹಾಗೂ ಮಿಥ್ಯಾಪ್ರಜ್ಞೆಯನ್ನು ಕೂಡಾ ಊಹಿಸಿ ಸೋತರು. ಇಷ್ಟೆಲ್ಲಾ ಆಗಿಯೂ ಈ ಗಲಭೆಗಳ ಹಿಂದೆ ಏನೋ ಒಂದು ವಿವರಣೆಗೆ ಸಿಲುಕದ್ದು ಇದೆ ಎಂಬ ಗುಮಾನಿ ಉಳಿದುಕೊಂಡಿತು. ಅದನ್ನು ಮತೀಯ ಭಾವನೆ ಅಥವಾ ಐಡಿಯಾಲಜಿ ಎಂದೆಲ್ಲ ಊಹಿಸಲಾಯಿತು. ನಂಬಿಕೆಯ ಪ್ರಪಂಚ ಎಂದರು. ಇದು ಆಧುನಿಕ ಪೂರ್ವಕಾಲದ್ದು ಎಂಬುದಾಗಿಯೂ ಕೆಲವರು ವಾದಿಸಿದರು. ಆದರೆ ನಮ್ಮ ಭಾರತೀಯ ಸಂಪ್ರದಾಯಗಳಿಗೆ ಕೋಮುದ್ವೇಷದ ನಂಬಿಕೆಯ ಪ್ರಪಂಚವಾಗಲೀ, ಬೋಧನೆಯ ತಳಹದಿಯಾಗಲೀ ಇದ್ದಂತೆ ಇತಿಹಾಸದಲ್ಲಿ ವಿದಿತವಾಗುವುದಿಲ್ಲ. ಹಾಗಾದರೆ ನಮ್ಮ ಪ್ರಭುತ್ವವು ಅಳವಡಿಸಿಕೊಂಡಿರುವ ಆಧುನಿಕ ಸೆಕ್ಯುಲರ್ ಸಿದ್ಧಾಂತವೇ ಈ ವಿವರಣೆಗೆ ಸಿಲುಕದ ಕಾರಣವನ್ನು ಸೃಷ್ಟಿಸುತ್ತಿದೆಯೆ?

೨

ಸೆಕ್ಯುಲರಿಸಂ ಎಂಬ ಕಾರ್ಯಕ್ರಮವೇ ಮೂಲ ಸಮಸ್ಯೆಯಾಗಿದೆ ಎಂಬ ವಾದಗಳೂ ಬಂದಿವೆ. ಅಶಿಶ್ ನಂದಿ ಹಾಗೂ ಬಾಲಗಂಗಾಧರ ಇದರ ಪ್ರಮುಖ ವಕ್ತಾರರು. ಅವರಿಬ್ಬರೂ ಬೇರೆ ಬೇರೆ ನೆಲೆಯಲ್ಲಿ ಹಾಗೆ ವಾದಿಸುತ್ತಾರೆ. ಅವರ ವಾದವು ಹೀಗಿದೆ: 1) ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ಸೆಕ್ಯುಲರಿಸಂ ಸಮಸ್ಯೆಗೆ ಕಾರಣವಾಗಿದೆ; 2) ವಿಭಿನ್ನ ಮತ, ಸಂಪ್ರದಾಯಗಳು ಶಾಂತಿಯುತವಾಗಿ ಸಹಬಾಳ್ವೆ ನಡೆಸುವುದೇ ಒಂದು ಪ್ರಭುತ್ವದ ಗುರಿಯಾಗಿದ್ದಲ್ಲಿ ಬಹುಶಃ ಸೆಕ್ಯುಲರಿಸಂ ಗಿಂತಲೂ ಒಳ್ಳೆಯ ಮಾದರಿ ನಮ್ಮಲ್ಲಿರುವ ಸಾಧ್ಯತೆ ಇದೆ.

ಅಶಿಶ್ ನಂದಿಯವರು ಇಡುವ ವಾದದ ಪ್ರಕಾರ ಎಲ್ಲಾ ರಿಲಿಜನ್ನುಗಳೂ ಐಡಿಯಾಲಜಿ ಹಾಗೂ ಶ್ರದ್ಧೆ ಎಂಬ ಎರಡು ರೂಪದಲ್ಲಿ ಚಾಲ್ತಿಯಲ್ಲಿರುತ್ತವೆ. ಆಧುನಿಕ ಸೆಕ್ಯುಲರ್ ಪ್ರಭುತ್ವ ಹಾಗೂ ವ್ಯಾಖ್ಯಾನಗಳು ಐರೋಪ್ಯ ದೃಷ್ಟಿಕೋನದಿಂದ ಆಕಾರತಳೆದ ಐಡಿಯಾಲಜಿಯನ್ನೇ ನಿರ್ಣಾಯಕವನ್ನಾಗಿ ಪರಿಗಣಿಸಿ, ದೇಶೀ ಸಾಂಪ್ರದಾಯಗಳ ಶ್ರದ್ಧೆಯ ಭಾಗವನ್ನು ಅವೈಚಾರಿಕವೆಂಬಂತೆ ಅಳಿಸುವ, ದೂರ ಇಡುವ ಪ್ರಯತ್ನಮಾಡುತ್ತಿವೆ. ಈ ಶ್ರದ್ಧೆಗಳು ರಿಲಿಜನ್ನುಗಳ ಸಹಬಾಳ್ವೆಯನ್ನು ಸಾಧ್ಯ ಮಾಡುತ್ತವೆ. ಐಡಿಯಾಲಜಿಗಳು ಮೂಲಭೂತವಾದೀ ಪ್ರವೃತ್ತಿಗಳನ್ನು ಉದ್ದೀಪಿಸುತ್ತವೆ. ಇಂದಿನ ಕೋಮುವಾದವು ಸೆಕ್ಯುಲರಿಸಂ, ಹಾಗೂ ಅದರ ಜೊತೆಗೆ ತಳಕುಹಾಕಿಕೊಂಡಿರುವ ಇನ್ನೂ ಅನೇಕ ಆಧುನಿಕ ಕಾರ್ಯಕ್ರಮಗಳ ಫಲವಾಗಿದೆ.

ನಾವು ಮತಶ್ರದ್ಧೆಗಳು ಕೋಮುವಾದವನ್ನು ಪ್ರಚೋದಿಸುತ್ತವೆ ಎಂಬಂತೇ ನೋಡುತ್ತೇವೆ. ನಂದಿಯವರು ಗಾಂಧಿಯವರ ಉದಾಹರಣೆ ಕೊಟ್ಟು ಸಹಬಾಳ್ವೆಯನ್ನು ಸಾಧಿಸುವಲ್ಲಿ ಹೇಗೆ ಅಪ್ರಸ್ತುತವಾದ ಒಂದು ಪರಿಭಾಷೆಯನ್ನು ರಾಜಕೀಯ ಕಾರ್ಯಕ್ರಮವನ್ನಾಗಿ ಅಳವಡಿಸಿಕೊಳ್ಳುವಾಗ ಹುಟ್ಟುವ ಹಿಂಸೆಯೇ ಈ ಕೋಮುವಾದ. ಈ ಸೆಕ್ಯುಲರ್‌ವಾದ ಹಾಗೂ ಕೋಮುವಾದ ಎರಡೂ ಇನ್ನೂ ಏನೇನೋ ಆಧುನಿಕ ಕಾರ್ಯಕ್ರಮಗಳ ಜೊತೆಗೆ ಹೆಣೆದುಕೊಂಡಿವೆ. ಅವನ್ನೆಲ್ಲ ಭಾರತೀಯ ಸಂದರ್ಭದಲ್ಲಿ ಅರ್ಥಮಾಡಿಸಲು ಸೆಕ್ಯುಲರ್‌ವಾದಿಗಳು ಸೋಲುತ್ತಿದ್ದಾರೆಯಷ್ಟೇ ಅಲ್ಲ, ತೀರ ಆತಂಕ ಹುಟ್ಟಿಸುವ ಭಾಷೆಯಲ್ಲಿ ಅಪಾರ್ಥಗಳನ್ನು ಕೂಡಾ ನೀಡುತ್ತಿದ್ದಾರೆ.

ಬಾಲಗಂಗಾಧರ ಅವರ ವಾದ ಈ ನಿಟ್ಟಿನಲ್ಲೇ ಇದೆ. ಅವರ ಪ್ರಕಾರ ಭಾರತದಲ್ಲಿ ರಿಲಿಜನ್ ಎಂಬ ಸಂಗತಿಯೇ ಇಲ್ಲ. ಹಾಗಾಗಿ ನಂದಿಯವರು ಹೇಳುವ ರಿಲಿಜನ್ನಿನ ಐಡಿಯಾಲಜಿ ಹಾಗೂ ರಿಲಿಜನ್ನಿನ ಶ್ರದ್ಧೆ ಎಂಬ ಯಾವ ವಿಭಾಗಗಳೂ ಭಾರತದ ಸಾಂಪ್ರದಾಯಿಕ ಸಮಾಜಕ್ಕೆ ಪ್ರಸ್ತುತವಾಗಲಾರವು. ಭಾರತದಲ್ಲಿರುವುದು ವಿಭಿನ್ನ ಸಂಪ್ರದಾಯಗಳು. ನಮಗೆ ಸೆಕ್ಯುಲರಿಸಂ ಏಕೆ ಪ್ರಸ್ತುತವಾಗುವುದಿಲ್ಲವೆಂದರೆ ನಮ್ಮಲ್ಲಿ ರಿಲಿಜನ್ನೇ ಇಲ್ಲ. ಸೆಕ್ಯುಲರಿಸಂ ಎಂಬುದು ರಿಲಿಜನ್ನಿನ ಸಮಸ್ಯೆ. ಈ ಪರಿಕಲ್ಪನೆಯನ್ನು ನಮ್ಮ ಪ್ರಭುತ್ವದ ಕಾರ್ಯಕ್ರಮವನ್ನಾಗಿ ಹಾಕಿಕೊಂಡಾಗ ರಿಲಿಜನ್ನುಗಳನ್ನು ರಿಲಿಜನ್ನುಗಳಲ್ಲದ ಸಂಪ್ರದಾಯಗಳ ಜೊತೆಗೆ ಸಮೀಕರಿಸಲಾಗುತ್ತದೆ. ರಿಲಿಜನ್ನು ನಿಜವಾಗಿಯೂ ಏನು ಎಂಬುದಕ್ಕೆ ಸಂಬಂಧಿಸಿದಂತೆ ಬಾಲಗಂಗಾಧರ ಅವರ ವಾದಗಳನ್ನು ಸಂಕ್ಷಿಪ್ತೀಕರಿಸಿ ತಿಳಿಸಲು ಪ್ರಯತ್ನಿಸುತ್ತೇನೆ. ಭಾರತದಲ್ಲಿ ಹಿಂದೂಯಿಸಂ ಎಂಬ ರಿಲಿಜನ್ನು ಇದೆ ಎಂಬುದಾಗಿ ಕ್ರೈಸ್ತ ಮಿಶನರಿಗಳು ಭಾವಿಸಿದ್ದರು. ಈ ಗ್ರಹಿಕೆಯ ಹಿನ್ನೆಲೆಯನ್ನು ಹೊಂದಿದ ಆಧುನಿಕ ಐರೋಪ್ಯರು ಸಿದ್ಧಾಂತಗಳನ್ನು ಬೆಳೆಸತೊಡಗಿದರು. ಆಧುನಿಕ ಹಿಂದೂಯಿಸಂ ನ ರೂಪರೇಷೆಗಳೆಲ್ಲ ಕ್ರೈಸ್ತ ದೈವಶಾಸ್ತ್ರದ ಕಲ್ಪನೆಗಳಾಗಿವೆ. ಅಂದರೆ ಇದರ ಪವಿತ್ರಗ್ರಂಥಗಳು, ಪುರೋಹಿತಶಾಹಿ, ಬೋಧನೆ, ಇತ್ಯಾದಿ. ಇಷ್ಟಾಗಿಯೂ ಭಾರತದಲ್ಲಿ ಈ ಯಾವ ಲಕ್ಷಣಗಳನ್ನೂ ಕಾಣಲು ಅವರಿಗೆ ಸಾಧ್ಯವಾಗಲಿಲ್ಲ. ಏಕೆಂದರೆ ಸೆಮೆಟಿಕ್ ರಿಲಿಜನ್ನುಗಳು ದೈವವಾಣಿಯಿಂದ ಪ್ರವಾದಿಯ ಮೂಲಕ ಅಸ್ತಿತ್ವಕ್ಕೆ ಬಂದಿವೆ ಎಂಬುದಾಗಿ ಪ್ರತಿಪಾದಿಸಲಾಗುತ್ತದೆ. ದೈವವಾಣಿಯೇ ಏಕಮೇವ ಪವಿತ್ರ ಗ್ರಂಥವಾಗುತ್ತದೆ. ಅದರಲ್ಲಿನ ಶ್ರದ್ಧೆಯೆ ನಿಜವಾದ ಶ್ರದ್ಧೆ, ಅದು ಸತ್ಯವೆಂದು ನಂಬುವುದೇ ನಂಬಿಕೆ. ಅದೇ ರೀತಿ ಅನ್ಯರದನ್ನು ಸತ್ಯವೆಂದು ನಂಬಿದರೆ ನಮ್ಮದನ್ನು ಸುಳ್ಳೆಂದು ನಂಬಿದಂತೇ. ಇಂಥ ರಿಲಿಜನ್ನುಗಳಲ್ಲಿ ಕೂಡಾ ಒಡಕುಗಳು ಇವೆ. ಆದರೆ ಅದು ಏಕೈಕ ಸತ್ಯದ ಕುರಿತ ಭಿನ್ನಾಭಿಪ್ರಾಯದಿಂದ ಹುಟ್ಟಿದ್ದು. tate, religion ಮುಂತಾದ ಪದಗಳೆಲ್ಲ ಏಕೈಕ ಸತ್ಯದ ಕುರಿತ ಭಿನ್ನಾಭಿಪ್ರಾಯದಿಂದ ಹುಟ್ಟಿದ ಗುಂಪುಗಳಾಗಿವೆ. ಈ ಒಡಕುಗಳು ಈ ಮೇಲಿನ ಪ್ರವಾದಿ, ಪವಿತ್ರಗ್ರಂಥ, ಇತ್ಯಾದಿಗಳನ್ನು ಸುಳ್ಳೆಂದು ಅಲ್ಲಗಳೆಯುವುದಿಲ್ಲ ಹಾಗೂ ಅನ್ಯ ರಿಲಿಜನ್ನುಗಳು, ದೈವವಾಣಿಗಳು ಸತ್ಯವೆಂದು ಒಪ್ಪಿಕೊಳ್ಳಲಿಕ್ಕೆ ಅವುಗಳಿಗೆ ಸಾಧ್ಯತೆಯೇ ಇಲ್ಲ.

ಇದರ ಜೊತೆಗೆ ಭಾರತೀಯ ಸಂಪ್ರದಾಯಗಳನ್ನು ಹೋಲಿಸಿ ನೋಡಿ. ರಿಲಿಜನ್ನಿನ ಯಾವುದೋ ಲಕ್ಷಣವು ಯಾವುದೋ ಸಂಪ್ರದಾಯದಲ್ಲಿದ್ದಂತೆ ಭಾಸವಾಗುತ್ತದೆ. ಎಲ್ಲವೂ ಒಂದರಲ್ಲೇ ಕಾಣಿಸುವುದಿಲ್ಲ. ಇವರು ಅನ್ಯರ ದೇವರುಗಳನ್ನೂ ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ, ಕೆಲವೊಮ್ಮೆ ದೇವರುಗಳನ್ನು ಬದಲಾಯಿಸುತ್ತಿರುತ್ತಾರೆ. ಇಲ್ಲ ಒಟ್ಟಾಗಿಯೇ ಎಲ್ಲರನ್ನೂ ಪೂಜಿಸುತ್ತಾರೆ. ಹಾಗೂ ಇವರು ತಮ್ಮ ತಾತ್ವಿಕತೆಯನ್ನೇ ಹಾಗೆ ಬೆಳೆಸಿಕೊಂಡಿದ್ದಾರೆ. ಅನ್ಯರ ಸಂಪ್ರದಾಯದ ಕುರಿತು ಅದು ಸರಿಯಾದ ಮಾರ್ಗ ಅಲ್ಲ ಎಂಬ ಟೀಕೆಗಳು ಇವರಲ್ಲಿ ಇರಬಹುದು. ಆದರೆ ಅವರನ್ನು ಒಪ್ಪಿಕೊಂಡರೆ ತಮ್ಮದು ಸುಳ್ಳಾಗುತ್ತದೆ ಎಂಬುದಾಗಿ ಭಾವಿಸಿಕೊಂಡಿಲ್ಲ. ಈ ಸಂಪ್ರದಾಯಗಳೆಲ್ಲ ಹಿಂದೂಯಿಸಂ ನ ವಿಭಾಗಗಳು ಎಂಬಂತೇ ಆಧುನಿಕ ನಿರೂಪಣೆಗಳಿವೆ. ಆದರೆ ಅವು ಯಾವ ಏಕೈಕ ಮತ ತತ್ವದ ವಿಭಾಗಗಳೂ ಅಲ್ಲ. ಇವರೆಲ್ಲರೂ ಸತ್ಯವೆಂದು ಮಾನ್ಯಮಾಡುವ ಯಾವ ಪ್ರವಾದಿಯಾಗಲೀ, ಪವಿತ್ರಗ್ರಂಥವಾಗಲೀ ಇಲ್ಲ. ಇವರಿಗೆಲ್ಲ ಧರ್ಮ ನಿರ್ದೇಶನ ಮಾಡುವ ಒಂದು ಪುರೋಹಿತ ವರ್ಗ ಕೂಡಾ ಇಲ್ಲ. ಮುಸ್ಲಿಂ ಹಾಗೂ ಕ್ರೈಸ್ತ ಸಮುದಾಯಗಳ ಮೇಲೆ ಮುಲ್ಲಾಗಳಿಗೆ ಹಾಗೂ ಪಾದ್ರಿಗಳಿಗೆ ಇರುವ ಧಾರ್ಮಿಕ ಆಕರಾಸ್ಥೆ ಹಾಗೂ ಅಧಿಕಾರಕ್ಕೆ ಹೋಲಿಸಿದರೆ ಬ್ರಾಹ್ಮಣ ಪುರೋಹಿತರಿಗೆ ಹಿಂದೂ ಎಂಬುದಾಗಿ ಭಾವಿಸಿಕೊಂಡ ಸಮುದಾಯಗಳ ಮೇಲೆ ಧಾರ್ಮಿಕ ನಿಯಂತ್ರಣ ಇಲ್ಲ. ನಮ್ಮ ಸಂಪ್ರದಾಯಗಳು ತಮ್ಮ ಪಠ್ಯಗಳ ಜೊತೆಗೆ, ತತ್ವಗಳ ಜೊತೆಗೆ, ದೇವರುಗಳ ಜೊತೆಗೆ, ಪೂಜಾಚರಣೆಗಳ ಜೊತೆಗೆ ಇಟ್ಟುಕೊಂಡಿರುವ ಸಂಬಂಧ ಮೂಲಭೂತವಾಗಿ ಬೇರೆ ರೀತಿಯಲ್ಲಿದೆ. ಅದು ಸತ್ಯ-ಸುಳ್ಳುಗಳ ಆಧಾರದ ಮೇಲೆ ನಿಂತಿಲ್ಲ. ಈ ಸಂಪ್ರದಾಯಗಳು ಸತ್ಯ ಕಥನವಾದ ಹಿಸ್ಟರಿ ಎಂಬ ಪ್ರಕಾರದ ವೃತ್ತಾಂತವನ್ನೇ ಬೆಳೆಸಲಿಲ್ಲ, ಅಷ್ಟೇ ಅಲ್ಲ, ಅದನ್ನು ಅರ್ಥಮಾಡಿಕೊಳ್ಳಲೂ ಸೋಲುತ್ತವೆ. ನಮ್ಮ ಪುರಾಣಗಳ ಐತಿಹಾಸಿಕ ಸತ್ಯದ ಕುರಿತ ಜಿಜ್ಞಾಸೆಯು ಆಧುನಿಕ ಪ್ರವೃತ್ತಿ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇವರ ಆಚರಣೆಗಳನ್ನು ಪಠ್ಯಗಳು ನಿರ್ದೇಶಿಸುವುದಿಲ್ಲ. ಹಾಗಾಗಿ ಪಠ್ಯಗಳನ್ನು ಓದಿದ ವರ್ಗಕ್ಕೆ ಇವರ ಮೇಲೆ ಹಿಡಿತ ಸಾಧಿಸುವ ಸಾಧ್ಯತೆಯೂ ಇಲ್ಲ. ಅಥವಾ ತೀರ ವ್ಯವಸ್ಥಿತವಾಗಿ ಮತ ತತ್ವಗಳನ್ನು ತಿಳಿಸುವ ಒಂದು ಸಂಘಟನೆಯೂ ಇಲ್ಲಿ ಕಾರ್ಯ ನಿರ್ವಹಿಸಿಕೊಂಡು ಬಂದಿಲ್ಲ. ಅಂದಮೇಲೆ ಪಠ್ಯಗಳಲ್ಲಿರುವ ವಿಷಯಗಳನ್ನು ಸತ್ಯಗಳೆಂಬಂತೇ ರೂಢಿಸುವ ಸಾಧ್ಯತೆಯೂ ಇಲ್ಲ. ಹಿಂದೂಯಿಸಂ ಕುರಿತು ನಾವು ಅಂದುಕೊಳ್ಳುತ್ತಿರುವುದೆಲ್ಲ ನಮ್ಮ ಆಧುನಿಕ ವಿದ್ಯಾಭ್ಯಾಸದ ಫಲವಾಗಿ ಎಂಬುದನ್ನು ನಾವು ಗಮನಿಸಬೇಕು. ನಮ್ಮಲ್ಲಿ ಆಧುನಿಕ ವಿದ್ಯಾಭ್ಯಾಸ ಮಾಡದಿರುವ ಬ್ರಾಹ್ಮಣರಿಗೂ ಅವು ಗೊತ್ತಿರಲಿಲ್ಲ.

ರಿಲಿಜನ್ನುಗಳ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಹುಟ್ಟಿಕೊಂಡ ಸೆಕ್ಯುಲರಿಸಂ ಭಾರತದಂಥ ದೇಶಗಳಲ್ಲಿ ರಿಲಿಜನ್ನಲ್ಲದ ಸಂಪ್ರದಾಯಗಳಿಗೆ ಹೊಸ ಸಮಸ್ಯೆಯನ್ನು ಸೃಷ್ಟಿಸುತ್ತದೆ. ಮತಾಂತರದಂಥ ಸಂದರ್ಭದಲ್ಲಿ ಪ್ರಭುತ್ವವು ತಟಸ್ಥ ನಿರ್ಧಾರಗಳನ್ನು ತೆಗೆದುಕೊಳ್ಳುವುದು ತಾರ್ಕಿಕವಾಗಿ ಸಾಧ್ಯವಾಗದ ಮಾತು. ಏಕೆಂದರೆ ರಿಲಿಜನ್ನುಗಳ ತಾತ್ವಿಕತೆಯ ಪ್ರಕಾರ ಅನ್ಯರನ್ನು

ಮತಾಂತರಿಸುವುದು ಅವುಗಳ ಪವಿತ್ರ ಕರ್ತವ್ಯ. ಭಾರತೀಯ ಸಂಪ್ರದಾಯಗಳಲ್ಲಿ ಅವರವರ ಸಂಪ್ರದಾಯವನ್ನು ಪಾಲಿಸುವುದು ಅವರವರ ಧರ್ಮ. ರಿಲಿಜನ್ನುಗಳಿಗೆ ಪವಿತ್ರ ಕರ್ತವ್ಯವಾದುದು ಭಾರತೀಯ ಸಂಪ್ರದಾಯಗಳಿಗೆ ಅಧರ್ಮ. ಇವರೆಲ್ಲರನ್ನೂ ಒಟ್ಟುಸೇರಿಸಿ ಸಂವಿಧಾನಬದ್ಧವಾಗಿ ರಿಲಿಜನ್ನಿನ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಿದರೆ ಮತಾಂತರ ಮಾಡುವ ರಿಲಿಜನ್ನಿಗೆ ಅನುಕೂಲವಷ್ಟೆ. ಪರಿಸ್ಥಿತಿ ಹೀಗಿರುವಾಗ ರಿಲಿಜನ್ನಿನ ಮಾನದಂಡವನ್ನಿಟ್ಟುಕೊಂಡು ಈ ಸಮಾಜಕ್ಕೆ ನೀತಿಗಳನ್ನು ಅಳವಡಿಸಿಕೊಂಡಾಗ ಏನಾಗುತ್ತದೆ? ರಿಲಿಜನ್ನು ನಾಗರೀಕ ಸಮಾಜದ ಮೂಲ ಅರ್ಹತೆಯಾಗುತ್ತದೆ. ನಾಗರಿಕ ಸಮಾಜಕ್ಕೆ ಹಿಂದೂಯಿಸಂ ಎಂಬ ರಿಲಿಜನ್ನನ್ನು ಸೃಷ್ಟಿಸುವ ಒತ್ತಾಯವನ್ನು ಉಂಟುಮಾಡಿದಂತಾಗುತ್ತದೆ. ಹಿಂದೂಯಿಸಂ ಎಷ್ಟೆಷ್ಟು ರಿಲಿಜನ್ನಿನ ಲಕ್ಷಣಗಳನ್ನು ರೂಢಿಸಿಕೊಳ್ಳುತ್ತದೆಯೋ ಅಷ್ಟಷ್ಟು ಅದಕ್ಕೆ ನ್ಯಾಯದ ಸಾಧ್ಯತೆ ತೆರೆಯುತ್ತದೆ. ಹಿಂದೂಗಳು ಭಾರತದ ಜನರನ್ನೆಲ್ಲ ತಮ್ಮ ತೆಕ್ಕೆಗೆ ತಂದುಕೊಳ್ಳಲು ನೋಡುತ್ತಾರೆ, ಅದಕ್ಕೆ ಏಕರೂಪವನ್ನು ನೀಡಲು ಪ್ರಯತ್ನಿಸುತ್ತಾರೆ, ಪುರಾಣಗಳ ಐತಿಹಾಸಿಕ ಸತ್ಯಗಳನ್ನು ಕುರಿತು ಪ್ರತಿಪಾದಿಸುತ್ತಾರೆ, ಪೂಜಾಸ್ಥಳಗಳಿಗಾಗಿ ಹೊಡೆದಾಡುತ್ತಾರೆ. ಅವರಲ್ಲಿ ಮತಾಂತರ ಕಲ್ಪನೆಯೇ ಇಲ್ಲದ್ದರಿಂದ ಅದನ್ನು ತಡೆದು ತಮ್ಮ ರಿಲಿಜನ್ನನ್ನು ರಕ್ಷಿಸಿಕೊಳ್ಳಲು ಯತ್ನಿಸುತ್ತಾರೆ. ತಮ್ಮ ಧರ್ಮಗ್ರಂಥಗಳಿಗೆ, ದೇವತೆಗಳಿಗೆ ಅವಮಾನವಾಯಿತು ಎಂದು ಹಲ್ಲೆ ಮಾಡುತ್ತಾರೆ, ಅನ್ಯ ರಿಲಿಜನ್ನುಗಳು ತಮ್ಮ ವೈರಿಗಳು, ಅವರಿಂದ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆ ಎಂಬುದಾಗಿ ಹೆದರುತ್ತಾರೆ. ಇವೆಲ್ಲವೂ ನಮ್ಮ ಸಂಪ್ರದಾಯಗಳು ತಮ್ಮ ಮೇಲೆ ರಿಲಿಜನ್ನನ್ನು ಆವಾಹಿಸಿಕೊಂಡಾಗ ಆಗುವ ಬದಲಾವಣೆಗಳು, ಹಾಗೂ ಸೆಕ್ಯುಲರ್ ರಾಜ್ಯವು ಅವರ ಸಲುವಾಗಿ ನ್ಯಾಯ-ಅನ್ಯಾಯಗಳ ಹೊಸದೊಂದು ಶಬ್ದಕೋಶವನ್ನೇ ಸೃಷ್ಟಿಸುತ್ತದೆ. ಈ ಶಬ್ದಕೋಶದಿಂದ ಹೊರಬರದೇ ಕೋಮುವಾದದ ವಿಮರ್ಶೆಯು ತನ್ನ ವಿರೋಧಾಭಾಸದಿಂದ ಕಳಚಿಕೊಳ್ಳಲಾರದು.

೩

ಭಾರತದಲ್ಲಿ ಹಿಂದೂಯಿಸಂ ಎಂಬ ರಿಲಿಜನ್ನು ಇಲ್ಲ, ಬದಲಾಗಿ ಇದೊಂದು ಬಹುಸಂಪ್ರದಾಯಗಳ ದೇಶ ಎಂಬುದಾಗಿ ಭಾವಿಸಿಕೊಂಡಾಗ ಸೆಕ್ಯುಲರಿಸಂ ಸಮಸ್ಯೆ ಹೇಗೆ ನಮ್ಮ ಅರಿವಿಗೆ ಬರುತ್ತದೆ ಎಂಬುದನ್ನು ನೋಡೋಣ:

ಈ ಸೆಕ್ಯುಲರಿಸಂನ ಕುರಿತು ಹೇಳುವಾಗ ನಾವು ರಿಲಿಜನ್ನನ್ನು ಧರ್ಮ ಎಂಬುದಾಗಿ ಭಾಷಾಂತರಿಸಿಕೊಂಡೆವು. ಹಾಗೂ ರಾಜಕೀಯದಲ್ಲಿ ಧರ್ಮವನ್ನು ಬೆರೆಸಬಾರದು ಎಂಬುದಾಗಿ ಪ್ರತಿಪಾದಿಸುತ್ತಿದ್ದೇವೆ. ಈ ದಿವ್ಯ ಸಂದೇಶದ ಮೂಲಕ ಸೆಕ್ಯುಲರಿಸಂ ಎಂಬ ಮೌಲ್ಯವನ್ನು ನಮ್ಮ ದೇಶದ ಜನಸಾಮಾನ್ಯರಿಗೆ ಪರಿಚಯಿಸಿ ಅವರನ್ನು ನಾಗರಿಕರನ್ನಾಗಿ ಮಾಡುತ್ತಿದ್ದೇವೆ ಎಂಬುದಾಗಿಯೂ ಭಾವಿಸಿಕೊಂಡಿದ್ದೇವೆ. ಆದರೆ ನಾವು ಕೆಲವೇ ಕೆಲವು ವಿದ್ಯಾವಂತರು ಧರ್ಮ ಎಂಬ ಪದವನ್ನು ರಿಲಿಜನ್ನಿಗೆ ಪ್ರತಿಯಾಗಿ ಬಳಸುತ್ತೇವೆ, ಅಷ್ಟಾಗಿಯೂ ನಮ್ಮಲ್ಲೇ ಬಹುತೇಕ ಜನರಿಗೆ ರಿಲಿಜನ್ನೆಂದರೆ ಏನೆಂಬುದು ತಿಳಿದಿಲ್ಲ. ಸಾಮಾನ್ಯ ಜನರು ಧರ್ಮವನ್ನು ಒಂದು

ಮತೀಯ ಸಂಸ್ಥೆ ಎಂಬಂತೆ ನೋಡುವುದಿಲ್ಲ. ಈ ಕುರಿತು ನನ್ನ ಅನುಭವವನ್ನು ಹೇಳುತ್ತೇನೆ. ಈಚೆಗೆ ಕೆಲವು ವರ್ಷಗಳಿಂದ ಜಾತಿಪದ್ಧತಿಯ ಕುರಿತು ನಾವೊಂದಿಷ್ಟು ಜನರು ಕ್ಷೇತ್ರಕಾರ್ಯ ಮಾಡುತ್ತಿದ್ದೇವೆ. ಕರ್ನಾಟಕದ ವಿಭಿನ್ನ ಭಾಗಗಳ ಸುಮಾರು ಸಾವಿರ ಜನರಿಗೆ ಧರ್ಮ ಎಂದರೇನು ಎಂಬುದಾಗಿ ಪ್ರಶ್ನಿಸಿದೆವು. ಅದರಲ್ಲಿ ೫% ಜನರು ಮಾತ್ರ ಹಿಂದೂ, ಮುಸ್ಲಿಂ ಎಂಬ ಉತ್ತರ ನೀಡಿದರು (ಅವರೆಲ್ಲ ವಿದ್ಯಾವಂತರೇ). ಉಳಿದವರು (ವಿದ್ಯಾವಂತರನ್ನೂ ಒಳಗೊಂಡು) ಧರ್ಮವೆಂದರೆ ಒಳ್ಳೆಯ ಕಾರ್ಯಗಳು, ದಾನ ಮಾಡುವುದು, ಉಪಕಾರ ಮಾಡುವುದು, ಇತ್ಯಾದಿಯಾಗಿಯೇ ತಿಳಿಸಿದ್ದಾರೆ. ಅಂದರೆ ಈ ಧರ್ಮಕ್ಕೂ ರಿಲಿಜನ್ನಿಗೂ ಸಂಬಂಧವಿರುವುದಿರಲಿ, ಅದಕ್ಕೂ ದೇವರಿಗೂ ಕೂಡ ಸಂಬಂಧ ಕಲ್ಪಿಸಲಾಗುವುದಿಲ್ಲ. ಅದು ಮನುಷ್ಯನ ಒಳ್ಳೆಯ ಕೆಲಸಗಳಿಗೆ ಸಂಬಂಧಿಸಿದೆ. ಈ ಉದಾಹರಣೆಯು ಹಳ್ಳಿಯ ಅಥವಾ ಮಧ್ಯಮವರ್ಗದ ಹಿನ್ನೆಲೆಯಿಂದ ಬಂದ ಯಾವ ಭಾರತೀಯನಿಗೂ ಆಶ್ಚರ್ಯತರುವುದಿಲ್ಲ. ನಮ್ಮ ಸಂಸ್ಕೃತ ಹಾಗೂ ದೇಶಿ ಭಾಷೆಯ ಸಾಹಿತ್ಯದಲ್ಲೂ ಇದಕ್ಕಿಂತ ವ್ಯತಿರಿಕ್ತವಾದ ಅಭಿಪ್ರಾಯ ಹೊರಡುವುದಿಲ್ಲ. ಹೀಗಿರುವಾಗ ರಾಜಕೀಯದಲ್ಲಿ ಧರ್ಮ ಇರಬಾರದು ಎಂಬುದಾಗಿ ಭಾಷಣ ಮಾಡಿದರೆ ಈ ಸೆಕ್ಯುಲರ್ ಭಾಷೆಗೆ ಮನಸೋತು ಜನ ನಮ್ಮೊಂದಿಗೆ ಓಡಿಬಂದುಬಿಡುತ್ತಾರೆ ಎಂಬುದಾಗಿ ಅದು ಹೇಗೆ ತಾನೆ ಭಾವಿಸಿಕೊಳ್ಳುತ್ತೀರಿ?

ಸಾಧಾರಣವಾಗಿ ಈ ಧರ್ಮನಿರಪೇಕ್ಷ ಎಂಬಂಥ ಶಬ್ದಗಳು, ಹಿಂದೂಧರ್ಮ, ಮುಸ್ಲಿಂ ಧರ್ಮ ಎಂಬಂಥ ಶಬ್ದಗಳು, ಹಾಗೂ ರಾಜಕೀಯದಲ್ಲಿ ಧರ್ಮವನ್ನು ಬೆರೆಸಬಾರದು ಎಂಬಂಥ ಮಾತುಗಳನ್ನು ದಿನನಿತ್ಯ ಆಡಲಾಗುತ್ತಿದೆ. ಇಲ್ಲೆಲ್ಲ ಧರ್ಮ ಎಂಬುದು ರಿಲಿಜನ್ ಎಂಬ ಪರಿಭಾಷೆಯನ್ನು ಸೂಚಿಸುತ್ತಿದೆ ಎಂಬುದು ಮೇಲಿನ ಚರ್ಚೆಗಳಿಂದ ಬಲವಾಗುತ್ತವೆ. ಈಗ ಬಹುಶಃ ಪಶ್ಚಿಮದಲ್ಲಿ ಈ ಪರಿಕಲ್ಪನೆ ಹಾಗೂ ಕಾರ್ಯಕ್ರಮವು ಬೆಳೆದು ಬಂದ ಬಗೆ ಚೆನ್ನಾಗಿ ಅರ್ಥವಾಗಬಹುದು. ರಾಜಕೀಯದಲ್ಲಿ ರಿಲಿಜನ್ ಎಂಬುದೊಂದು ಸಂಸ್ಥೆಯು ಹಸ್ತಕ್ಷೇಪ ಮಾಡಬಾರದು ಎಂಬುದು ಮೂಲವಾದ. ಪಶ್ಚಿಮದಲ್ಲಿ ಈ ಸಂಸ್ಥೆಗೂ ರಾಜಕೀಯಕ್ಕೂ ಒಂದು ವಿಶಿಷ್ಟವಾದ ಸಂಬಂಧವು ಬೆಳೆದುಬಂದಿದೆ. ಈ ರಿಲಿಜನ್ ಎಂಬುದು ತಾನು ಈ ಪ್ರಪಂಚವನ್ನು ಸೃಷ್ಟಿಸಿದ ಸತ್ಯವಾದ ದೇವನ (ಗಾಡ್) ಸಂಸ್ಥೆ ಎಂದುಕೊಳ್ಳುತ್ತದೆ. ಅವನದೇ ಶಾಶ್ವತವಾದ, ನಿಜವಾದ, ಸರಿಯಾದ ವ್ಯವಸ್ಥೆ, ಅದನ್ನು ಬಿಟ್ಟು ಈ ಪ್ರಪಂಚದಲ್ಲಿ ಮನುಷ್ಯರು ಸೃಷ್ಟಿಸಿಕೊಂಡಿರುವ ಈ ಪ್ರಭುತ್ವಗಳು ಸರಿಯಾದ ವ್ಯವಸ್ಥೆಗಳಾಗಲು ಸಾಧ್ಯವೇ ಇಲ್ಲ. ಅಂದರೆ ಕ್ರಿಶ್ಚಿಯನ್ ಮತವನ್ನು ಅವಲಂಬಿಸದ ಪ್ರಭುತ್ವವು ಸರಿಯಾದ ಪ್ರಭುತ್ವವೇ ಅಲ್ಲ ಎಂದು ಮಧ್ಯಕಾಲದಲ್ಲಿ ಬಿಂಬಿಸಲಾಗಿತ್ತು. ಹಾಗೂ ಮಧ್ಯಕಾಲದಲ್ಲಿನ ಪ್ರಭುತ್ವಗಳೆಲ್ಲ ಕ್ರೈಸ್ತ ಮತದ ಪ್ರಭುತ್ವಕ್ಕೆ ಒಳಪಟ್ಟಿದ್ದವು. ಈ ಪ್ರಕ್ರಿಯೆಯಲ್ಲಿ ಮನುಷ್ಯ ಪ್ರಭುತ್ವವು ಸೆಕ್ಯುಲರ್ (ರಿಲಿಜನ್ನು ಇಲ್ಲದ) ಪ್ರಪಂಚವೆಂದು ರಿಲಿಜನ್ನಿನ ಪ್ರಪಂಚಕ್ಕೆ ವಿರುದ್ಧವಾಗಿ ಗುರುತಿಸಲ್ಪಟ್ಟಿತು. ಹಾಗಾಗಿ ಯುರೋಪಿನಲ್ಲಿ ಈ ವಿವಾದವು ಅಲ್ಲಿಯದೇ ಆದ ಒಂದು ಐತಿಹಾಸಿಕ ಒತ್ತಡದಿಂದ ಹುಟ್ಟಿಕೊಂಡಿವೆ. ಅದು ಪೋಪ್/ಚರ್ಚು ಮತ್ತು ರಾಜರ ನಡುವಿನ ಹಣಾಹಣಿಯಾಗಿದೆ.

ಆಧುನಿಕ ಕಾಲದಲ್ಲಿ ಯುರೋಪಿನಲ್ಲಿ ಸೆಕ್ಯುಲರಿಸಂ ಎಂಬ ಲೋಕದೃಷ್ಟಿಯು ಪ್ರಚಾರದಲ್ಲಿ ಬಂದಿತು. ಈ ಬೆಳವಣಿಗೆಗಳಾಗುವಲ್ಲಿ ಪ್ರೊಟೆಸ್ಟಾಂಟಿಸಂ, ಜ್ಞಾನೋದಯ ಇತ್ಯಾದಿ ಅನೇಕ ಹಿನ್ನೆಲೆಗಳಿವೆ ಹಾಗೂ ಈ ಸೆಕ್ಯುಲರಿಸಂ ಅನೇಕ ಆಧುನಿಕ ಕಾರ್ಯಕ್ರಮಗಳ ಒಂದು ಸಂಹಿತೆಯಾಗಿದೆ. ಆ ಪ್ರಕಾರ ರಿಲಿಜನ್ನಿನ ಸಂಸ್ಥೆಯು ಮನುಷ್ಯನ ಪ್ರಗತಿಗೆ ಮಾರಕವೆಂದು ಗುರುತಿಸಲಾಯಿತು. ಆಧುನಿಕ ಕಾಲದಲ್ಲಿನ ಐರೋಪ್ಯ ಸೆಕ್ಯುಲರ್ ಪ್ರಜಾಪ್ರಭುತ್ವಗಳು ತಮ್ಮ ವ್ಯವಹಾರದಲ್ಲಿ ರಿಲಿಜನ್ನು ಹಸ್ತಕ್ಷೇಪ ಮಾಡಬಾರದೆಂದು ಪ್ರತಿಭಟಿಸಿದವು, ಆಧುನಿಕ ಪ್ರಭುತ್ವವು ಆಧುನಿಕ ಮೌಲ್ಯಗಳ ಪ್ರತಿಪಾದನೆಗಾಗಿ ಇರಬೇಕು, ರಿಲಿಜನ್ನಿನ ಅಧೀನದಲ್ಲಿದ್ದ ಪ್ರಭುತ್ವವಿದ್ದರೆ ಪ್ರಭುತ್ವದ ಮಾನವವಾದೀ ಕಾರ್ಯಕ್ರಮಗಳು ಸಾಧ್ಯವಾಗುವುದಿಲ್ಲ, ಇದರ ಜೊತೆಗೆ ಈ ರಿಲಿಜನ್ನು ತನ್ನ ದೇವನೇ ಏಕಮೇವ ಸತ್ಯ, ಉಳಿದವರೆಲ್ಲ ಸುಳ್ಳು. ತನ್ನ ಪ್ರವಾದಿಯೇ ಸತ್ಯವಾದ ಸಂದೇಶವನ್ನು ತಿಳಿದವನು. ತಾನೇ ಸತ್ಯವಾದ ಮಾರ್ಗ, ಉಳಿದವರನ್ನೆಲ್ಲ ಮತಪರಿವರ್ತಿಸಿ ತನ್ನ ಮಾರ್ಗಕ್ಕೆ ಹಚ್ಚುವುದು ಪುಣ್ಯದ ಕೆಲಸ ಎಂದು ನಂಬಿತ್ತು. ಹಾಗೂ ಇದು ಎಲ್ಲಾ ಸೆಮೆಟಿಕ್ ರಿಲಿಜನ್ನುಗಳ ಲಕ್ಷಣವೂ ಆಗಿದೆ. ಇಂಥ ಸನ್ನಿವೇಶದಲ್ಲಿ ಈ ಎಲ್ಲಾ ಮತಗಳೂ ಒಂದು ಪ್ರಭುತ್ವದ ಪ್ರಜೆಗಳಾಗಿ ಇರುವಾಗ, ಇವುಗಳಲ್ಲಿ ಯಾವುದೋ ಒಂದು ಮತವು ಪ್ರಭುತ್ವವನ್ನು ತನ್ನ ಕೈವಶ ಮಾಡಿಕೊಂಡರೆ ತೊಡಕುಗಳು ಸೃಷ್ಟಿಯಾಗುತ್ತವೆ. ಅಂದರೆ, ತಮ್ಮ ರಿಲಿಜನ್ನಿನ ಸತ್ಯವಾದ ಆಚರಣೆಯನ್ನು ಪ್ರತಿಪಾದಿಸದಿದ್ದರೆ ಅದು ನೀತಿಯುತ ಪ್ರಭುತ್ವವಾಗುವುದಿಲ್ಲ, ಪ್ರತಿಪಾದಿಸಲಿಕ್ಕೆ ಹೋದರೆ ಉಳಿದವುಗಳನ್ನು ಹತ್ತಿಕ್ಕಲೇ ಬೇಕು. ಹಾಗಾಗಿ, ರಿಲಿಜನ್ನಿನ ಹಿಡಿತದಿಂದ ಹೊರಬಂದ ಐರೋಪ್ಯ ಲಿಬರಲ್ ಪ್ರಭುತ್ವಗಳು ಈ ಸೆಕ್ಯುಲರಿಸಂ, ರಿಲಿಜನ್ನಿನ ಟಾಲರೆನ್ಸ್ (ಮತಸಹಿಷ್ಣುತೆ) ಇತ್ಯಾದಿಗಳನ್ನು ಮೌಲ್ಯಗಳನ್ನಾಗಿ ಗುರುತಿಸಿ ಅಳವಡಿಸಿಕೊಂಡವು. ರಿಲಿಜನ್ನು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಬಾರದು, ಪ್ರಭುತ್ವಗಳು ಸೆಕ್ಯುಲರ್ (ರಿಲಿಜನ್ ರಹಿತ) ಆಗಿರಬೇಕು ಎಂದವು. ಯುರೋಪಿನ ರಾಷ್ಟ್ರಗಳಲ್ಲಿ ಸೆಕ್ಯುಲರಿಸಂ ಎಂದರೆ ಪ್ರಭುತ್ವವು (ನಾಗರಿಕ ಸಮಾಜವನ್ನು ಒಳಗೊಂಡಂತೆ) ರಿಲಿಜನ್ನನ್ನು ದೂರ ಇಡಬೇಕು.

ಭಾರತೀಯ ಸಂದರ್ಭದಲ್ಲಿ ರಾಜಕೀಯದಲ್ಲಿ ಧರ್ಮವನ್ನು (ರಿಲಿಜನ್ನನ್ನು) ಬೆರೆಸಬಾರದು ಎಂಬ ವಾದವು ಸ್ಥೂಲವಾಗಿ ಎರಡು ಅಂಶಗಳನ್ನು ಪ್ರತಿಪಾದಿಸುತ್ತದೆ ಹಾಗೂ ಅವುಗಳಲ್ಲಿ ಎರಡನೆಯದು ಮೊದಲನೆಯದನ್ನು ವಿರೋಧಿಸುತ್ತದೆ:1.ರಾಜಕೀಯವು ರಿಲಿಜನ್ನಿನ ಹಿಡಿತದಿಂದ ತಪ್ಪಿಸಿಕೊಳ್ಳಬೇಕು, ಏಕೆಂದರೆ ರಿಲಿಜನ್ನು ಪ್ರಗತಿಪರ ಪ್ರಭುತ್ವಕ್ಕೆ ಅಡ್ಡಗಲ್ಲು. 2.ರಾಜಕೀಯವು ರಿಲಿಜನ್ನಿನ ಹಿಡಿತದಿಂದ ತಪ್ಪಿಸಿಕೊಳ್ಳಬೇಕು, ಏಕೆಂದರೆ ಇಲ್ಲದಿದ್ದಲ್ಲಿ ಅಲ್ಪಸಂಖ್ಯಾತ ರಿಲಿಜನ್ನುಗಳಿಗೆ ಅಪಾಯವಾಗುತ್ತದೆ, ಕೋಮು ಸಾಮರಸ್ಯ ಹಾಳಾಗುತ್ತದೆ. ನಮ್ಮಲ್ಲಿ ರಿಲಿಜನ್ನು ಎಂಬ ಸಂಸ್ಥೆಯೇ ಇಲ್ಲದಿದ್ದ ಮೇಲೆ ನಮ್ಮ ರಾಜಕೀಯವು ಯಾವ ರಿಲಿಜನ್ನಿನ ಹಿಡಿತದಿಂದ, ಏಕಾಗಿ ದೂರವಿರಬೇಕು? ಆಗ ನಾವು ಕೆಲವೊಂದು ಧಾರ್ಮಿಕ ಆಚರಣೆಗಳನ್ನು ಉದಾಹರಿಸುತ್ತೇವೆ: ರಾಜಕಾರಣಿಗಳು ಸಾರ್ವಜನಿಕವಾಗಿ ಪೂಜೆ ಮಾಡುವುದು, ತೆಂಗಿನಕಾಯಿ ಒಡೆಯುವುದು, ಹೋಮ ಮಾಡುವುದು, ದೇವಾಲಯಗಳಿಗೆ ಮತಮಾನ್ಯಗಳಿಗೆ ಭೇಟಿ

ನೀಡುವುದು, ಇತ್ಯಾದಿ. ಇವೆಲ್ಲ ಮೂಢನಂಬಿಕೆಗಳಾಗಿದ್ದು ಪ್ರಗತಿವಿರೋಧಿಯಾಗಿವೆ. ಹಾಗೂ ಇವು ರಿಲಿಜನ್ನಿನ ಆಚರಣೆಗಳಾಗಿದ್ದು ಅನ್ಯ ರಿಲಿಜನ್ನುಗಳಿಗೆ ಪ್ರಚೋದನಾಕಾರಿಯಾಗಿವೆ. ಈ ಆಚರಣೆಗಳು ಹೇಗೆ ಪ್ರಗತಿವಿರೋಧಿಯಾಗಿವೆ ಎಂಬ ವಿಷಯವನ್ನು ಪುರೋಹಿತಶಾಹಿಯ ಕಲ್ಪನೆಯನ್ನು ಉಪಯೋಗಿಸಿ ಸಮರ್ಥಿಸಲಾಗುತ್ತದೆ. ಆದರೆ ಎರಡನೆಯ ವಿಷಯಕ್ಕೆ ಬಂದಾಗ ಸೆಕ್ಯುಲರ್ ವಾದಿಗಳು ಅಲ್ಪಸಂಖ್ಯಾತರ ಧರ್ಮದ ಪರವಾಗಿ ನಿಂತುಕೊಳ್ಳಬೇಕಾದ ವಿಪರ್ಯಾಸ ಸೃಷ್ಟಿಯಾದುದರಿಂದ ಅವರ ಮೊದಲನೆಯ ವಾದ ಢೋಂಗಿ ಸೆಕ್ಯುಲರಿಸಂ ಆಗಿ ಮಾರ್ಪಡುತ್ತದೆ. ನೆಹರೂ ಕಾಲದ ನಂತರದ ರಾಜಕೀಯದಲ್ಲಿ ಐರೋಪ್ಯ ಅರ್ಥದ ಸೆಕ್ಯುಲರಿಸಂ ಎಂಬ ಪರಿಭಾಷೆಯನ್ನು ಕಸದಬುಟ್ಟಿಗೆ ಹಾಕಿಯಾಗಿದೆ. ಏಕೆಂದರೆ ಇದೇ ರಾಜಕಾರಣಿಗಳು ದೇವಾಲಯಗಳಿಗೆ ಹೋದಷ್ಟೇ ಗಂಭೀರವಾಗಿ ಚರ್ಚಿಗೂ ಹೋಗುತ್ತಾರೆ, ಮಸೀದಿಗೂ ಹೋಗುತ್ತಾರೆ. ಹಾಗಾಗಿಯೇ ಸರ್ವಧರ್ಮಸಮಭಾವ ಎಂಬ ಎಂಬ ನಿರೂಪಣೆಯು ಚಾಲ್ತಿಯಲ್ಲಿ ಬಂದಿದೆ. ಅದು ಅವರಿಗೆ ಅರ್ಥವಾಗುತ್ತದೆ, ಸಾಧ್ಯವಾಗುತ್ತದೆ. ಇಂದು ರಾಜಕೀಯದಲ್ಲಿ ಚಾಲ್ತಿಯಲ್ಲಿರುವ ಸಮಸ್ಯೆಯೆಂದರೆ ಕೆಲವು ರಾಜಕೀಯ ಪಕ್ಷಗಳು ಕೆಲವು ಸಮುದಾಯಗಳನ್ನು ಓಲೈಸುತ್ತಿವೆ, ಕೆಲವನ್ನು ಕಡೆಗಣಿಸುತ್ತಿವೆ ಎಂಬಂಥ ಸಮಸ್ಯೆ. ಇನ್ನು ರಿಲಿಜನ್ನನ್ನು ನಾಗರಿಕ ಸಮಾಜದಿಂದ (ಸಿವಿಲ್ ಸೊಸೈಟಿ) ಅಥವಾ ಸಾರ್ವಜನಿಕ ಜೀವನದಿಂದ ಹೊರಗಿಡಬೇಕೆನ್ನುವ ವಿಚಾರಕ್ಕೆ ಬಂದರೆ, ಏಕೆ ಹೊರಗಿಡಬೇಕು? ಎಂಬ ಪ್ರಶ್ನೆಗೂ ಈ ಮೇಲೆ ಉಲ್ಲೇಖಿಸಿದ ಎರಡು ವಾದಗಳೇ ಎದುರಾಗುತ್ತವೆ. ನಾವು ಕೋಮುಸೌಹಾರ್ದತೆಯನ್ನೇ ಉದ್ದೇಶಿಸಿದ್ದಲ್ಲಿ, ಇಂಥ ಸಾರ್ವಜನಿಕ ಆಚರಣೆಗಳೇ ಸೌಹಾರ್ದತೆಯ ಸಾಧನಗಳಾಗಿವೆ ಎಂದಾದಲ್ಲಿ ನಮ್ಮ ನಿಲುವು ಏನು? ಇಲ್ಲೂ ಕೂಡಾ ಎರಡನೆಯ ವಾದವು ಮೊದಲನೆಯ ವಾದಕ್ಕೆ ತೊಡಕಾಗುತ್ತದೆ. ಸಾರ್ವಜನಿಕ ಜೀವನವು ಸೆಕ್ಯುಲರ್ ಆಗಿರಬೇಕು ಹಾಗೂ ರಿಲಿಜನ್ನು ಖಾಸಗಿ ಜೀವನಕ್ಕೆ ಸೀಮಿತವಾಗಿರಬೇಕು, ಇಲ್ಲದಿದ್ದರೆ ರಿಲಿಜನ್ನುಗಳ ನಡುವೆ ಸಂಘರ್ಷ ಹುಟ್ಟಿಕೊಳ್ಳುತ್ತದೆ ಎನ್ನಲಾಗುತ್ತದೆ. ಪೂಜೆಯನ್ನು ರಿಲಿಜನ್ನಿನ ಸಂಕೇತಗಳೆಂದು ಗುರುತಿಸಲಾಗಿರುತ್ತದೆ. ಸಾರ್ವಜನಿಕ ಜೀವನದಲ್ಲಿ ಧಾರಾಳವಾಗಿ ಬಳಸುವ ನಮ್ಮ ಪ್ರಭುತ್ವವು ಸೆಕ್ಯುಲರ್ ರಾಷ್ಟ್ರಗಳು ಎದುರಿಸಲೇಬೇಕಾದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿಲ್ಲ ಎಂಬುದನ್ನು ಗಮನಿಸಿ. ಉದಾಹರಣೆಗೆ ಕೆಲವು ವರ್ಷಗಳ ಹಿಂದೆ ಫ್ರಾನ್ಸಿನ ಸ್ಕೂಲುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ತಲೆಗೆ ಸ್ಕಾರ್ಫ್ ಧರಿಸಿ ಬರುವ ಕುರಿತು ಅಲ್ಲಿನ ಸೆಕ್ಯುಲರ್ ಸರ್ಕಾರಕ್ಕೆ ಬಗೆಹರಿಯದ ಸಮಸ್ಯೆ ಹುಟ್ಟಿತು. ಈ ಸ್ಕಾರ್ಫ್‌ಗಳು ರಿಲಿಜನ್ನಿನ ಸಂಕೇತಗಳಾಗಿದ್ದವು. ಪಾಶ್ಚಾತ್ಯ ಸೆಕ್ಯುಲರ್ ಪ್ರಭುತ್ವಗಳಿಗೆ ಇಷ್ಟು ಕ್ಷುಲ್ಲಕ ವಿಷಯವೇ ಸಮಸ್ಯಾತ್ಮಕವಾಗುತ್ತದೆ. ಇದು ಕ್ರೈಸ್ತ ಹಾಗೂ ಇಸ್ಲಾಂ ಮತಗಳ ನಡುವಿನ ಸಂಘರ್ಷಕ್ಕೆ ಇಂಬುಕೊಡುವ ವಿಷಯ. ಈ ಶೈಲಿಯ ಸೆಕ್ಯುಲರಿಸಂ ನಮಗೆ ಸೌಹಾರ್ದತೆ ಕಲಿಸಬೇಕೆಂದು ನಂಬಿದ್ದೇವೆ! ಭಾರತದಲ್ಲಿ ಒಂದೊಂದು ಸಮುದಾಯವೂ ಒಂದೊಂದು ಲಾಂಛನಗಳನ್ನು, ವೇಷಗಳನ್ನು ಧರಿಸಿಯೇ ಸಾರ್ವಜನಿಕ ಸ್ಥಳವನ್ನು ಪ್ರವೇಶಿಸುತ್ತದೆ. ಇಂಥ ಲಾಂಛನಗಳ ಕುರಿತು ಸೆಕ್ಯುಲರ್‌ವಾದಿಗಳೇ ತೊಂದರೆ

ಪಟ್ಟುಕೊಳ್ಳುವುದನ್ನು ನೋಡುತ್ತೇವೆಯೇ ವಿನಃ ಸಂಪ್ರದಾಯಸ್ಥರಲ್ಲ. (ಕೆಲವರ ಅಭಿಪ್ರಾಯದ ಪ್ರಕಾರ ಸಹಿಷ್ಣುತೆಗಾಗಿ ಹೋರಾಡುತ್ತಿರುವ ಸೆಕ್ಯುಲರ್‌ವಾದಿಗಳೇ ತಮ್ಮ ಸುತ್ತಲಿನ ಸಮಾಜದ ಕುರಿತು, ಸಾಮಾನ್ಯರ ನಂಬಿಕೆಗಳ ಕುರಿತು ಸಹಿಷ್ಣುತೆಯನ್ನು ಹೊಂದಿಲ್ಲ) ಉದಾಹರಣೆಗೆ, ಎಲ್ಲಾ ಕಛೇರಿಗಳಲ್ಲೂ ಶುಕ್ರವಾರ ಲಕ್ಷ್ಮೀ ಪೂಜೆಯನ್ನು ಮಾಡುತ್ತಾರೆ. ಅದನ್ನು ಮುಸ್ಲಿಮ್ ಸಿಬ್ಬಂದಿಗಳೂ ಖುಷಿಯಿಂದ ಆಚರಿಸುತ್ತಾರೆ. ಈ ಸಂಪತ್ತಿನ ದೇವಿಯ ಕುರಿತು ಅವರಿಗೂ ಆಸಕ್ತಿ, ಆಕರಾಸ್ಥೆ ಇರುವುದನ್ನು ನೋಡಿದ್ದೇನೆ. ಅದಕ್ಕೂ ಹೆಚ್ಚಾಗಿ ಆಫೀಸು ವೇಳೆಯಲ್ಲಿ ಕೆಲಸವಿಲ್ಲದೇ ಫಳಾರ ಮಾಡುವ ಕುರಿತಂತೂ ಯಾರಿಗೂ ಅಸಂತೋಷವಿರಲು ಕಾರಣವಿಲ್ಲ. ಆಫೀಸು ಕೆಲಸವನ್ನು ಹಾಳುಮಾಡಿ ಇಂಥ ಆಚರಣೆಗಳನ್ನು ನಡೆಸಬೇಕೆ ಎಂಬುದು ಬೇರೆಯದೇ ಆದ ವಿಷಯ. ಆದರೆ ಅದೊಂದು ಹಿಂದೂ ಧಾರ್ಮಿಕ ಆಚರಣೆ, ಹಾಗಾಗಿ ಅದನ್ನು ಸೆಕ್ಯುಲರ್ ಪ್ರಭುತ್ವದಲ್ಲಿ ಸಾರ್ವಜನಿಕವಾಗಿ ಆಚರಿಸಬಾರದು, ಅಥವಾ ಅದು ಮುಸ್ಲಿಂ ಭಾವನೆಗೆ ನೋವುಂಟುಮಾಡುತ್ತದೆ ಎಂದೆಲ್ಲ ವಾದಿಸುವಾಗ ನಾವು ಎರಡು ತಪ್ಪುಗಳನ್ನು ಮಾಡುತ್ತೇವೆ: ಮೊದಲನೆಯದೆಂದರೆ, ಈ ಸಂದರ್ಭಕ್ಕೆ ಪ್ರಸ್ತುತವಲ್ಲದ ಒಂದು ಅಸಹಿಷ್ಣುವಾದ ಇಸ್ಲಾಂ ಮತವನ್ನು ಇಲ್ಲಿ ಬಿಂಬಿಸುತ್ತಿದ್ದೇವೆ. ಎರಡನೆಯದಾಗಿ, ಅನ್ಯದೇವತೆಗಳನ್ನು ಪೂಜಿಸಿದರೆ ನೋವಾಗುವ ವಿಷಯವು ಹಿಂದೂ ಸಂಪ್ರದಾಯಗಳ ಜಗತ್ತಿಗೆ ಗೊತ್ತೇ ಇಲ್ಲ. ಅವರ ಆ (ಅಮಾಯಕ) ಜಗತ್ತಿನಲ್ಲಿ ಮುಸ್ಲಿಮರಿಗೆ ತಮ್ಮ ದೇವರುಗಳನ್ನು ಕಂಡರಾಗುವುದಿಲ್ಲ ಎಂಬ (ಅವಾಸ್ತವಿಕವಾದ ) ಕಹಿಯನ್ನು ಬಿತ್ತಿದಂತಾಗುತ್ತದೆ. ಇಂಥ ಪ್ರಯತ್ನಗಳ ಫಲವಾಗಿ ಪರಸ್ಪರರ ದೇವತೆಗಳು, ಆಚರಣೆಗಳು ಹಾಗೂ ಸಂಕೇತಗಳ ಕುರಿತು ಅಸಹಿಷ್ಣುತೆಯನ್ನು ಬೆಳೆಸಿದಂತಾಗುತ್ತದೆ. ಇದು ಸೆಕ್ಯುಲರ್ ಕಾರ್ಯಕ್ರಮದ ಗುರಿ ಎಂಬುದನ್ನಂತೂ ಯಾವ ಸೆಕ್ಯುಲರ್ ವಾದಿಗಳೂ ಒಪ್ಪಲಾರರು. ಅಷ್ಟಕ್ಕೂ ಕಾರ್ಲ್ ಮಾರ್ಕ್ಸನ ಆನ್ ಜ್ಯೂಯಿಶ್ ಕೋಶ್ಚನ್ ಲೇಖನವು ತೋರಿಸುವಂತೆ ಮನುಷ್ಯ ವಾಸ್ತವವಾಗಿ ರಿಲಿಜನ್ನನ್ನು ಇಟ್ಟುಕೊಂಡು ಸಾರ್ವಜನಿಕ ನಾಗರಿಕ ಸಮಾಜದಲ್ಲಿ ರಿಲಿಜನ್ನನ್ನು ಉಚ್ಚಾಟಿಸಬೇಕು ಎಂಬುದು ಒಂದು ಮಿಥ್ಯೆ ಅಷ್ಟೆ. ಈಗ ನಮ್ಮ ಮುಂದೆ ಬರುವ ಪ್ರಶ್ನೆಯೆಂದರೆ ಸತ್ಯಗಳನ್ನಿಟ್ಟುಕೊಂಡು ಸಹಜವಾಗಿ ಬಾಳಲು ಸಾಧ್ಯವಿರುವಾಗ ಅಂಥ ಮಿಥ್ಯೆಗಳನ್ನು ಇಟ್ಟುಕೊಂಡು ಬಡಿದಾಡುವ ಅಗತ್ಯವಿದೆಯೆ? ನಾವು ಕೋಮು ಸೌಹಾರ್ದದ ತಾಣಗಳೆಂದು ವೈಭವೀಕರಿಸುವ ಸ್ಥಳಗಳು ಇಂಥವೇ ಸಾರ್ವಜನಿಕ ಸ್ಥಳಗಳೇ ತಾನೆ? ನಾವು ಸಾರ್ವಜನಿಕ ಸ್ಥಳಗಳಲ್ಲಿ ಇಂಥ ಆಚರಣೆಗಳನ್ನು ಮಾಡುವ ಸಾಧ್ಯತೆ ಇರುವುದರಿಂದಲೇ ಅಂಥ ತಾಣಗಳು ಸೃಷ್ಟಿಯಾಗಿವೆ ಎಂಬುದು ಸರಳ ಸತ್ಯ.

೪

ನಮ್ಮ ಇತಿಹಾಸದಲ್ಲಿ ಧರ್ಮ ಸಹಿಷ್ಣುತೆ ಎಂಬ ಪದದಿಂದಲೂ ಅರ್ಥವೇ ಹೊರಡುವುದಿಲ್ಲ. ರಿಲಿಜನ್ನಿನ ಸಂದರ್ಭದಲ್ಲಿ ಅದು ಅರ್ಥವಾಗುತ್ತದೆ. ಏಕೆಂದರೆ ಅನ್ಯರ ದೇವರು ಸತ್ಯವಲ್ಲ ಎಂದು ನಂಬಿದಾಗ ಅವರ ಮೇಲೆ ವಿಶ್ವಾಸ ಹುಟ್ಟುವುದಿಲ್ಲ. ಹಾಗಾಗಿ

ಲಿಬರಲ್ ತತ್ವದ ಮೇಲೆ ನಂಬಿಕೆ ಇಟ್ಟ, ನೀವು ಹೆಚ್ಚೆಂದರೆ ಅಂಥ ರಿಲಿಜನ್ನುಗಳನ್ನು ಸಹಿಸಿಕೊಳ್ಳುವ ಸದ್ಗುಣವನ್ನು ತೋರಬಹುದು. ಭಾರತೀಯ ಸಂದರ್ಭದಲ್ಲಿ ಹಲವು ದೇವರುಗಳನ್ನು, ಪೂಜೆಗಳನ್ನು ಏಕಕಾಲಕ್ಕೆ ಒಪ್ಪಿಕೊಳ್ಳಲಾಗಿರುತ್ತದೆ. ಅನ್ಯ ಪೂಜಾಪಂಥಗಳನ್ನು ಸಹಿಸುವ ಪ್ರಶ್ನೆ ಎಲ್ಲಿ ಉದ್ಭವಿಸುತ್ತದೆ? ಹಾಗಾಗಿ ರಿಲಿಜಿಯಸ್ ಸಹಿಷ್ಣುತೆ ಎಂಬುದಕ್ಕೂ ನಮ್ಮಲ್ಲಿ ಶಬ್ದವಿಲ್ಲ. ಸೆಕ್ಯುಲರಿಸಂ ಗೆ ಮೂಲಭೂತವಾದ ಈ ಶಬ್ದಗಳ ಅಗತ್ಯವೇ ಇಲ್ಲದಂತೆ ನಮ್ಮ ಸಂಸ್ಕೃತಿ ಬೆಳೆದು ಬಂದಿದೆ. ಭಾರತೀಯ ಸಾಂಪ್ರದಾಯಿಕ ರಾಜ್ಯವ್ಯವಸ್ಥೆಗೆ ಇಂಥದೊಂದು ಸಮಸ್ಯೆಯೇ ಇರಲಿಲ್ಲ. ನಮ್ಮ ಆಧುನಿಕ ಕಲ್ಪನೆ ಏನೆಂದರೆ, ಇಂಥ ಹಿಂದಿನ ರಾಜ್ಯಗಳಿಗೆ ಸೆಕ್ಯುಲರಿಸಂ ಎಂಬುದೊಂದು ಉದಾತ್ತವಾದ ತತ್ವದ ತಳಹದಿ, ಕಾನೂನುಗಳು ಇರಲಿಲ್ಲ ಹಾಗಾಗಿ ಅಲ್ಲಿ ಮತೀಯ ದಮನಗಳು ನಡೆದರೆ ರಕ್ಷಕರೇ ಇರಲಿಲ್ಲ. ಹಾಗಾಗಿ ನಮ್ಮ ಆಧುನಿಕ ಪ್ರಭುತ್ವ ಅದಕ್ಕಿಂತ ಒಳ್ಳೆಯದು. ಹೀಗೆ ಯೋಚಿಸುವಲ್ಲೂ ನಾವು ರಿಲಿಜನ್ನುಗಳ ವಾದವನ್ನೇ ಮುಂದಿಡುತ್ತಿದ್ದೇವೆ. ಏಕೆಂದರೆ ಒಂದು ಸಂಪ್ರದಾಯವು ಮತ್ತೊಂದು ದೇವತೆಯ ಪೂಜೆಯನ್ನು ಒಪ್ಪಿಕೊಳ್ಳಲು ಸಮಸ್ಯೆಯನ್ನೇ ಹೊಂದಿರದಿದ್ದರೆ, ಒಂದು ಪ್ರಭುತ್ವವು ಯಾವುದೋ ಒಂದು ಮತದ ಪ್ರತಿಪಾದನೆಯನ್ನೇ ಗುರಿಯಾಗಿಟ್ಟುಕೊಳ್ಳದಿದ್ದರೆ ಮತೀಯ ದಮನದ ಪ್ರಶ್ನೆಯೇ ಅಲ್ಲಿ ಉದ್ಭವಿಸುವುದಿಲ್ಲ. ಹೀಗೆ ಹೇಳಿದಾಕ್ಷಣ ಹಾಗಾದರೆ ನಮ್ಮ ಹಿಂದಿನ ರಾಜ್ಯಗಳು ಮತಪ್ರತಿಪಾದನೆಯನ್ನೇ ಮಾಡಲಿಲ್ಲವೆ? ಅಶೋಕನ ಸಾಮ್ರಾಜ್ಯದ tate, religion ಬೌದ್ಧಮತವಾಗಿರಲಿಲ್ಲವೆ? ಗುಪ್ತರು ಬ್ರಾಹ್ಮಣ ಮತ ಪ್ರವರ್ತಕರಲ್ಲವೆ? ಚೋಳರು ವೈಷ್ಣವ ಮತವನ್ನು ಹತ್ತಿಕ್ಕಿದು ಸುಳ್ಳೆ? ವೀರಶೈವರು ಜೈನರ ದೇವಾಲಯಗಳ ಮೇಲೆ ನಡೆಸಿದ ಹಲ್ಲೆ ಮತ್ತೇನಂತೆ? ಎಂಬೆಲ್ಲ ವಾದಗಳು ಬರುತ್ತವೆ. ಹೇಗೆ ಇಂಥ ವಾದಗಳು ನಮ್ಮ ಇತಿಹಾಸದ ಅಪಾರ್ಥದಿಂದ ಹುಟ್ಟಿಕೊಂಡಿವೆ ಎಂಬುದನ್ನು ನೋಡೋಣ:

ಈ ಐತಿಹಾಸಿಕ ವಿವರಗಳನ್ನೆಲ್ಲ ಮೂಲತಃ ಇಂಗ್ಲೀಷಿನಲ್ಲಿ ಕಟ್ಟಿಕೊಡಲಾಯಿತು. ಇಂಥ ಇತಿಹಾಸವು ಕನ್ನಡಕ್ಕೆ ತರ್ಜುಮೆಯಾಗಿದೆ. ಇಂಥ ವಾದಗಳನ್ನು ಮಾಡುತ್ತಿರುವವರು ಮೂಲತಃ ಇಂಗ್ಲಿಷಿನಲ್ಲೋ ಇಲ್ಲ ಕನ್ನಡದಲ್ಲೋ ಅದನ್ನು ಓದಿರುತ್ತಾರೆ. ನಮ್ಮ ಇತಿಹಾಸದಲ್ಲಿ ಈ ರಿಲಿಜನ್, ಸ್ಟೇಟ್, ಟಾಲರೆನ್ಸ್, ಸೆಕ್ಟ್, ಮುಂತಾದ ಇಂಗ್ಲಿಷ್ ಶಬ್ದಗಳನ್ನೆಲ್ಲ ಬಳಸಲಾಗುತ್ತದೆ. ಅದರಲ್ಲಿರುವ ಸಮಸ್ಯೆಗಳೂ ಕೂಡಾ ಇತಿಹಾಸಕಾರರ ಗಮನಕ್ಕೆ ಬರುವುದಿಲ್ಲ, ಒಂದೊಮ್ಮೆ ಬಂದರೂ ಅವುಗಳನ್ನು ಪರಿಹರಿಸಲು ಅವರಿಗೆ ಅಸಾಧ್ಯ. ಉದಾಹರಣೆಗೆ, ಇತಿಹಾಸ ಪುಸ್ತಕಗಳಲ್ಲಿ ಕೆಲವು ರಾಜವಂಶಗಳಲ್ಲಿ ಗಂಡಂದಿರು ಬ್ರಾಹ್ಮಣ ರಿಲಿಜನ್ ಅನುಸರಿಸಿದ್ದರು, ಹೆಂಡತಿಯರು ಬೌದ್ಧ ರಿಲಿಜನ್ ಅನುಸರಿಸಿದ್ದರು ಎನ್ನಲಾಗುತ್ತದೆ. ಒಬ್ಬ ರಾಜನೇ ವೈಯಕ್ತಿಕವಾಗಿ ಒಂದು ರಿಲಿಜನ್ನನ್ನು ಅನುಸರಿಸಿ ಉಳಿದ ರಿಲಿಜನ್ನುಗಳನ್ನು ಪೋಷಣೆ ಮಾಡುತ್ತಿದ್ದನು ಎನ್ನಲಾಗುತ್ತದೆ. ಕೆಲವು ರಾಜರು ರಿಲಿಜನ್ನಿನ ಪರಿವರ್ತನೆಗೆ ಕೂಡಾ ಒಳಗಾಗುತ್ತಾರೆ, ಆದರೂ ತಮ್ಮ ಮೂಲ ರಿಲಿಜನ್ನಿನಿಂದ ಹಿಡಿದು ಎಲ್ಲಾ ರಿಲಿಜನ್ನುಗಳ ದೇವತೆಗಳನ್ನೂ ಪೂಜಿಸುತ್ತಾರೆ ಎನ್ನುತ್ತೇವೆ. ನಮಗೆ ಇದು ಆಶ್ಚರ್ಯವನ್ನು ಕೂಡಾ ಮೂಡಿಸುವುದಿಲ್ಲ. ಏಕೆಂದರೆ ಅದರಲ್ಲಿ

ಅರ್ಥವಾಗದಂಥದ್ದು ಏನೂ ಇಲ್ಲ. ಆದರೆ ಪಾಶ್ಚಾತ್ಯರಿಗೆ ಇದು ಮತಸಹಿಷ್ಣುತೆಯಾಗಿ ಕಾಣಿಸುತ್ತದೆ. ಅವರ ಪ್ರಕಾರ ಮತ್ತೊಂದನ್ನು ಒಪ್ಪಿಕೊಂಡರೆ ನಮ್ಮದು ಸುಳ್ಳಾದಂತೆ ಆಗಬೇಕು, ಅಥವಾ ಅದು ಲಿಬರಲ್ ತತ್ವದ ಆಚರಣೆಯಾಗಿರಲೇ ಬೇಕು. ಆದರೆ ಒಂದು ಕ್ಷಣ ಯೋಚಿಸಿ. ರಿಲಿಜನ್ನು ನಾನು ಈ ಮೇಲೆ ಹೇಳಿದ ರೀತಿಯದೇ ಆದರೆ ಒಬ್ಬನೇ ಅಥವಾ ಒಂದೇ ಕುಟುಂಬದವರೇ ಹೀಗೆಲ್ಲ ಕಂಡ ಕಂಡ ರಿಲಿಜನ್ನುಗಳನ್ನು ಪಾಲಿಸುವುದು ಸರ್ವಥಾ ಸಾಧ್ಯವಿಲ್ಲ. ಅಂದರೆ ಈ ಜನರು ಪಾಲಿಸಿದ್ದು ರಿಲಿಜನ್ನೇ ಅಲ್ಲ. ಒಂದು ದೇವರನ್ನು ಅಥವಾ ವ್ರತವನ್ನು ಬಿಟ್ಟು ಮತ್ತೊಂದನ್ನು ಅನುಸರಿಸಿದರೆ ಅದು Conversion ಆಗಲು ಸಾಧ್ಯವಿಲ್ಲ. Conversion ಎಂದರೆ ಸುಳ್ಳು ಮತವನ್ನು ಅನುಸರಿಸುವವರನ್ನು ಅಥವಾ ಮತಹೀನರನ್ನು ಸತ್ಯವಾದ ಏಕೈಕ ಮತಕ್ಕೆ ಪರಿವರ್ತಿಸುವ ಪವಿತ್ರ ಕೆಲಸ. ಆದರೆ ಭಾರತದಲ್ಲಿ ಕಾಣುವುದು ಬೇರೆಯದೇ ವಾಸ್ತವವಾಗಿದೆ. ಒಂದು ದೇವತೆಯನ್ನು, ಮತವನ್ನು ಪುರಸ್ಕರಿಸಿದ ರಾಜರು ಉಳಿದೆಲ್ಲಾ ಮತಗಳನ್ನೂ ಅಷ್ಟೇ ಶ್ರದ್ಧೆಯಿಂದ ಪೋಷಿಸುತ್ತಿದ್ದರು ಎಂಬುದು ಒಂದು ಸಾಮಾನ್ಯ ಸತ್ಯ. ಅಂದರೆ ಹೀಗೆ ಅನ್ಯ ದೇವತೆಗಳನ್ನು, ಸಂಪ್ರದಾಯಗಳನ್ನು ಒಪ್ಪಿಕೊಳ್ಳಲು ನಮ್ಮವರಿಗೆ ಹೇಗೆ ಸಾಧ್ಯವಾಯಿತು? ಏಕೆಂದರೆ, ರಿಲಿಜನ್ನಿನ ಬೋಧನೆ, ಅದರ ಸತ್ಯದ ಕುರಿತ ನಂಬಿಕೆ, ಅಥವಾ ನಮ್ಮ ಆಧುನಿಕ ಭಾಷೆಯಲ್ಲಿ ಹೇಳುವುದಾದರೆ ರಿಲಿಜನ್ನಿನ ಐಡಿಯಾಲಜಿ ಇಂಥ ಆಚರಣೆಗಳ ಹಿಂದೆ ಇಲ್ಲ. ಒಂದು ದೇವತೆಯನ್ನು ಪೂಜಿಸುವುದೆಂದರೆ ಆ ದೇವತೆಯನ್ನು ಕುರಿತಾದ ಒಂದು ಆಚರಣೆ ಅಷ್ಟೆ. ಅದರಿಂದ ಮತ್ತೊಂದು ದೇವತೆಯನ್ನು ಪೂಜಿಸದಿರುವ ನಿರ್ಬಂಧ ಉಂಟಾಗುತ್ತಿರಲಿಲ್ಲ. ಅಂದರೆ ಅನುಸರಿಸುವವರ ಜೀವನದಲ್ಲಿ ಈ ಸಾಂಪ್ರದಾಯಿಕ ಆಚರಣೆಗಳ ಸ್ಥಾನಮಾನ ಹಾಗೂ ಪ್ರಭಾವಗಳು ಬೇರೆ ರೀತಿಯಲ್ಲೇ ಇದ್ದವು ಎಂಬುದನ್ನು ಗುರುತಿಸದಿದ್ದರೆ ನಮಗೆ ನಮ್ಮ ಇತಿಹಾಸವೂ ಅರ್ಥವಾಗುವುದಿಲ್ಲ. ಇಂಥ ಸಮಾಜದಲ್ಲಿ ಎರಡು ಸಾಂಪ್ರದಾಯಿಕ ಗುಂಪುಗಳ ನಡುವಿನ ಹೊಡೆದಾಟವನ್ನು ರಿಲಿಜಿಯಸ್ ಹೊಡೆದಾಟ ಎನ್ನಲು ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ನಮ್ಮಲ್ಲಿ, Sect. hereticಗಳೂ ಇರಲಿಲ್ಲ ಎಂಬುದನ್ನು ಮನಗಾಣುತ್ತೇವೆ. ಒಬ್ಬ ರಾಜನು ಒಂದು ದೇವತೆಯನ್ನೇ ತನ್ನದು ಎಂದು ಭಾವಿಸಿಕೊಂಡಿದ್ದರೆ, ಅವನ ಹೆಂಡತಿಗಾಗಲೀ, ಪ್ರಜೆಗಳಿಗಾಗಲೀ ಅದು ನಿರ್ಬಂಧವನ್ನು ಸೃಷ್ಟಿಸುವ ವಿಚಾರವಾಗಲೇ ಬೇಕಿಲ್ಲ. ಪೂಜಾಚರಣೆಗಳ ಜೊತೆಗೆ, ವಿಭಿನ್ನ ವಿಚಾರಗಳನ್ನು ಪ್ರತಿಪಾದಿಸುವ ಮತಗಳೂ ಅಷ್ಟೆ. ಒಬ್ಬ ರಾಜನಿಗೆ ಒಂದು ಮತದಲ್ಲಿ ಶ್ರದ್ಧೆ ಮೂಡಿತು ಎಂದರೆ ಆತನ ರಾಜ್ಯವೆಲ್ಲ ಆ ಮತವನ್ನು ಅನುಸರಿಸುವ ನಿರ್ಬಂಧವಿಲ್ಲ. ಉದಾಹರಣೆಗೆ, ಬಿಳಗಿ ಅರಸರ ಶಾಸನಗಳಲ್ಲಿ ಘಂಟಣ್ಣೊಡೆಯ ಎಂಬ ಅರಸನ ಕಾಲದಲ್ಲಿ ಅರಸುಮನೆತನದ ಸ್ತ್ರೀಯರು ಲಿಂಗಾಯಿತ ಮಠಕ್ಕೆ ದಾನ ನೀಡುವುದು ಕಂಡುಬಂದರೆ ಆತನು ಜೈನರಿಗೆ ಆಶ್ರಯ ನೀಡಿದ್ದು ಕಂಡುಬರುತ್ತದೆ. ಒಂದು ಶಾಸನದಲ್ಲಿ ಮಹಾನಾಡು ಸೆಟ್ಟಿಗಳು ಲಿಂಗಾಯತ ಮಠಕ್ಕೆ ದಾನಮಾಡುತ್ತಾರೆ ಹಾಗೂ ಈ ಶಾಸನದ ಅಂತ್ಯದಲ್ಲಿ 'ಶ್ರೀ ಪಾರ್ಶ್ವನಾಥ' ಎಂದು ಜಿನಸ್ತುತಿಯಿದೆ. ಅದನ್ನು ಮಾನ್ಯಮಾಡಿದವನು ಘಂಟಣ್ಣೊಡೆಯನೇ. ಇದು ಕೇವಲ ಕೌಟುಂಬಿಕ ಸಂಬಂಧಕ್ಕಷ್ಟೇ

ಸೀಮಿತವಾಗಿಲ್ಲ, ಲಿಂಗಾಯಿತ ಮಠ ಹಾಗೂ ಜೈನರ ಸಂಬಂಧ ಕೂಡಾ ಇದರಲ್ಲಿ ವ್ಯಕ್ತವಾಗುತ್ತದೆ. ಘಂಟಣ್ಣೊಡೆಯನಿಗೇನೂ ಆಧುನಿಕ ಸೆಕ್ಯುಲರ್ ಪ್ರಭುತ್ವದ ರಾಜಕಾರಣಿಗಳಂತೆ ಜೈನರ ವೋಟುಗಳ ಅಗತ್ಯವೇನಿರಲಿಲ್ಲ. ಅವನು ಪಾಲಿಸಿದ ರಾಜರ ಧರ್ಮ ಹಾಗಿತ್ತು ಹಾಗೂ ರಾಜತ್ವ ಮತ್ತು ವಿಭಿನ್ನ ಸಂಪ್ರದಾಯಗಳೆರಡೂ ಈ ನೀತಿಯಲ್ಲೇ ತಮ್ಮ ಅಸ್ತಿತ್ವವನ್ನು ಹಾಗೂ ಒಳಿತನ್ನು ಕಂಡುಕೊಂಡಿದ್ದವು. ಈ ಮೂಲಭೂತ ಕಾರಣಕ್ಕಾಗೇ ರಾಜರು ಎಲ್ಲಾ ಪೂಜಾಚರಣೆಗಳನ್ನು, ಮತಗಳನ್ನು ಪೋಷಿಸುವುದು ತಮ್ಮ ಧರ್ಮ ಎಂದು ಭಾವಿಸಿದ್ದರು. ಆದರೆ ಯಾವುದೋ ಒಂದು ಮತದ ಜೊತೆಗೆ ಖಾಸಗಿ ಸಂಬಂಧವಿದ್ದಾಗ ಅದಕ್ಕೆ ವೈಯಕ್ತಿಕ ಕಾಳಜಿ ನೀಡಿ ಅದನ್ನು ಪೋಷಿಸುವ ಸಂದರ್ಭಗಳೂ ಇದ್ದಿರಬಹುದು. ಆಗ ಅದಕ್ಕೆ ವಿಶೇಷ ಮಾನ್ಯತೆ, ಬಲ ಸಿಕ್ಕಿರುವ ಸಾಧ್ಯತೆಯೂ ಇದೆ. ಹಾಗೂ ಆಸ್ತಿಪಾಸ್ತಿಗಳಿಗೆ ಹೊಡೆದಾಡಿದಂತೆ ಅಲ್ಲಲ್ಲಿ ಘರ್ಷಣೆಗಳೂ ನಡೆದಿರಬಹುದು. ಆದರೆ ಯಾವ ಮತವೂ ಪ್ರಭುತ್ವ ಪೋಷಿತ ಐಡಿಯಾಲಜಿಯಾಗಿ ಅವರಿಗೆ ಕಾಣಿಸಿರಲಿಲ್ಲ. ಅಶೋಕನ ಸಂದರ್ಭದಲ್ಲೂ ಇದನ್ನೇ ನೋಡುತ್ತೇವೆ. ಆತನು ಬೌದ್ಧಮತದ ಪ್ರಚಾರಕ್ಕಾಗಿ ಕ್ರಮಗಳನ್ನು ಕೈಗೊಂಡಿದ್ದನು. ಆದರೆ ಆತನು ತನ್ನ ಧರ್ಮಶಾಸನಗಳ ಮೂಲಕ ಪ್ರಜೆಗಳಲ್ಲಿ ಪ್ರಚಾರಮಾಡಿದ್ದು ಬೌದ್ಧಮತವನ್ನಲ್ಲ, ಬದಲಾಗಿ ಎಲ್ಲಾ ಮತಗಳೂ ಪರಸ್ಪರರನ್ನು ಗೌರವಿಸಬೇಕು ಎಂಬುದಾಗಿ. ಅಂದರೆ ಧರ್ಮ ಎಂಬುದನ್ನು ಈ ಅರ್ಥದಲ್ಲಿ ತೆಗೆದುಕೊಂಡರೆ ನಮ್ಮ ಪ್ರಭುತ್ವಕ್ಕೂ ಈ ಧರ್ಮವೇ ಬೇಕು ಎಂಬ ವಾದವು ಸೆಕ್ಯುಲರ್‌ವಾದಿಗಳಿಗೆ ಸಮಸ್ಯೆ ಸೃಷ್ಟಿಸಲು ಕಾರಣವಿಲ್ಲ.

೫

ಹಿಂದೂಯಿಸಂ ಈ ಮೇಲಿನ ರೀತಿಯಲ್ಲಿ ವಿಶಿಷ್ಟವಾದುದು ಎಂಬುದನ್ನು ಸೆಕ್ಯುಲರ್ ವಾದಿಗಳೂ ಗುರುತಿಸುತ್ತಾರೆ. ಹಾಗಾದರೆ ಯಾವ ರಿಲಿಜನ್ನನ್ನು ಪ್ರಭುತ್ವದ ಜೊತೆ ಬೆರೆಸುವುದರ ಕುರಿತು ಅವರ ಆಕ್ಷೇಪಣೆ? ಹಿಂದೂ ಎಂಬುದೊಂದು ರಿಲಿಜನ್ನೇ ಇಲ್ಲದಿದ್ದ ಮೇಲೆ ಈ ಎಲ್ಲಾ ಸಂಪ್ರದಾಯಗಳೂ ಬಹುಸಂಖ್ಯಾತ ರಿಲಿಜನ್ನು ಹೇಗಾಗುತ್ತವೆ? ಅಲ್ಪಸಂಖ್ಯಾತ ರಿಲಿಜನ್ನಿನ ಪ್ರಶ್ನೆ ಎಲ್ಲಿ ಬರುತ್ತದೆ? ಆದರೆ ಸೆಕ್ಯುಲರ್ ವಾದಕ್ಕೆ ಈ ಕುರಿತು ನಿಶ್ಚಿತವಾದ ಗ್ರಹಿಕೆಗಳಿಲ್ಲ. ಕೆಲವರು ಹೇಳುವಂತೆ, ಹಿಂದೆ ಹಾಗಿದ್ದಿರಬಹುದು, ಆದರೆ ಇಂದಿನ ಹಿಂದುತ್ವವಾದಿಗಳು ಅದನ್ನೊಂದು ಏಕರೂಪೀ ರಿಲಿಜನ್ನಾಗಿ ಮಾಡಿ ರಾಷ್ಟ್ರಪ್ರಭುತ್ವವನ್ನು ವಶಕ್ಕೆ ತೆಗೆದುಕೊಳ್ಳ ಹೊರಟಿದ್ದಾರೆ. ಕಳೆದ ಒಂದು ಶತಮಾನದಲ್ಲಿ ಅಂಥ ಬೆಳವಣಿಗೆಗಳಾಗಿವೆ ಎನ್ನುತ್ತಾರೆ. ಬ್ರಾಹ್ಮಣ ಪುರೋಹಿತಶಾಹಿಯು ಅದಕ್ಕೊಂದು ಏಕರೂಪವನ್ನು ಹಾಗೂ ಐಡಿಯಾಲಜಿಯನ್ನು ನೀಡುತ್ತಿದೆ, ಅದೇ ಅಪಾಯಕಾರಿ ಎನ್ನುತ್ತಾರೆ. ಅಖೀಲ್ ಬಿಲ್‌ಗ್ರಾಮಿ ಎಂಬವರು ಆಶೀಸ್ ನಂದಿಯವರನ್ನು ಟೀಕಿಸುತ್ತ ಬ್ರಾಹ್ಮಣ ಸಂಪ್ರದಾಯವು ಆಧುನಿಕ ಪೂರ್ವ ಕಾಲದಿಂದಲೂ ಹಿಂದುತ್ವದ ಐಕ್ಯತೆಗೆ ತಳಹದಿಯನ್ನು ಹಾಕಿತ್ತು ಎನ್ನುತ್ತಾರೆ. ಹಾಗೂ ಒಟ್ಟಾರೆಯಾಗಿ ಭಾರತದ ಬಹು ಸಂಪ್ರದಾಯಗಳಿಗೆ ಒಂದು ಐಡಿಯಾಲಜಿ (ಬ್ರಾಹ್ಮಣ ಐಡಿಯಾಲಜಿ)ಯನ್ನು ಬೆಳೆಸುವ

ಪ್ರಯತ್ನವು ಬಹಳ ಹಿಂದಿನಿಂದಲೂ ನಡೆದಿದೆ, ಅದು ಮನುಸ್ಮೃತಿಯಂಥ ಕೆಲವು ಸಂಸ್ಕೃತ ಗ್ರಂಥಗಳಲ್ಲಿ ಇದೆ, ಇದು ದೇಶೀ ಸಂಸ್ಕೃತಿಗಳಲ್ಲಿನ ಸಹಬಾಳ್ವೆಯ ಅಂಶಗಳನ್ನು ತೊಡೆದು ಆಕ್ರಮಣಶೀಲತೆಯನ್ನು ಬೆಳೆಸುತ್ತಿದೆ ಎಂಬ ವಾದಕ್ಕೆ ಬಂದು ನಿಲ್ಲುತ್ತಾರೆ. ಅಂದರೆ, ಸೆಕ್ಯುಲರ್ ವಾದಿಗಳು ತಿಳಿಸುವಂತೆ ಈ ಎಲ್ಲಾ ಬಹು ಸಂಪ್ರಾದಯಗಳಿಗೂ ಒಂದು ಏಕೈಕ ಬೋಧನೆಯನ್ನು ಕಟ್ಟಿಕೊಡಲಾಗಿದೆ (ಅದು ನಂತರ ಬ್ರಾಹ್ಮಣರು ಕಟ್ಟಿಕೊಟ್ಟದ್ದೇ ಇರಬಹುದು) ಎಂಬುದನ್ನು ಅವರು ಒಪ್ಪಿಕೊಂಡ ಹಾಗಾಯಿತು, ಅದರರ್ಥ, ಅದೇ ಹಿಂದೂಯಿಸಂ ಎಂಬುದಾಗಿ ಅವರು ವಾದಿಸುತ್ತಿದ್ದಾರೆ, ಹಾಗಾಗೇ ಇದಕ್ಕೊಂದು ಪುರೋಹಿತಶಾಹಿ ಇದೆ ಎಂದು ಅವರು ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ. ಈ ರಿಲಿಜನ್ನಿಗೆ ಅನ್ಯ ರಿಲಿಜನ್ನುಗಳ ಜೊತೆಗೆ ಮತಬೋಧನೆಗಳ ಸಂಬಂಧಿಸಿ ಸತ್ಯ-ಸುಳ್ಳುಗಳ ಜಗಳ ಇದೆ ಎಂಬುದಾಗಿ ಭಾವಿಸಿಕೊಂಡು ಸೆಕ್ಯುಲರಿಸಂನ ಸಮಸ್ಯೆಯನ್ನು ಅರ್ಥೈಸಲು ಇದರಿಂದ ಸಾಧ್ಯವಾಗುತ್ತದೆ. ಆದರೆ ಇಂಥ ವಾದಗಳು ಹೇಗೆ ನಿಷ್ಫಲವಾಗಿವೆ ಎಂಬುದನ್ನು ನೋಡೋಣ:

ಸೆಕ್ಯುಲರಿಸಂನ ಯುದ್ಧವು ರಿಲಿಜನ್ನಿನ ವಿರುದ್ಧ ಎಂಬುದು ಮೂಲ ಸತ್ಯ. ಈ ಮೇಲಿನ ಚರ್ಚೆಯ ಸಂದರ್ಭದಲ್ಲಿ ಒಂದು ಪ್ರಬಲ ರಿಲಿಜನ್ನು ಉಳಿದ ದುರ್ಬಲ ರಿಲಿಜನ್ನುಗಳನ್ನು ಹತ್ತಿಕ್ಕದಂತೆ ನೋಡಿಕೊಳ್ಳುವುದೇ ಸೆಕ್ಯುಲರ್ ವಾದದ ಕಾಳಜಿಯಾಗಿದೆ. ಒಂದೊಮ್ಮೆ ಭಾರತದಲ್ಲಿರುವ ಬಹುಸಂಪ್ರದಾಯಗಳನ್ನು ಏಕೀಕರಿಸಿ ತಮ್ಮ ಬೋಧನೆಗಳನ್ನು ಅದರ ಮೇಲೆ ಹೇರುವ/ ನಿರೂಪಿಸುವ ಪ್ರಯತ್ನಗಳು ಐತಿಹಾಸಿಕವಾಗಿ ನಡೆದಿದ್ದರೆ ಭಾರತದಲ್ಲೇಕೆ ಯುರೋಪು, ಮಧ್ಯಪ್ರಾಚ್ಯದಂತೇ ಏಕರೂಪೀ ರಿಲಿಜನ್ನುಗಳ ಸೃಷ್ಟಿಯಾಗಿಲ್ಲ ಎಂಬ ಪ್ರಶ್ನೆ ಏಳುತ್ತದೆ. (ಅದರಲ್ಲೂ ಈ ಯಾವುದೇ ಪ್ರದೇಶಗಳಿಗಿಂತ ಮೊದಲೇ, ಅಂದರೆ ವೈದಿಕ ಕಾಲದಲ್ಲೇ ಈ ಚಟುವಟಿಕೆ ಪ್ರಾರಂಭವಾಗಿದ್ದಲ್ಲಿ, ಹಾಗೂ ಅಂಥ ಹಿಂದೂ ಪ್ರಭುತ್ವಗಳೂ ಇದ್ದಲ್ಲಿ). ಯುರೋಪು ಹಾಗೂ ಮಧ್ಯಪ್ರಾಚ್ಯಗಳಲ್ಲಿ ನಾವು ಕಾಣುವುದೇನು? ರಿಲಿಜನ್ನುಗಳನ್ನು ಹೊರತುಪಡಿಸಿ ಯಾವ ಅನ್ಯ ಸಂಪ್ರದಾಯಗಳೂ ಅಸ್ತಿತ್ವದಲ್ಲಿಲ್ಲ. ಅಲ್ಲಿರುವ ಬಹುತ್ವ ಎಂದರೆ ರಿಲಿಜನ್ನಿನದೇ ಪಂಥಗಳು ಹಾಗೂ ಒಡಕುಗಳು. ಅಲ್ಲಿ ರಿಲಿಜನ್ನುಗಳ ಪರಿಧಿಗೆ ಹೊರಗಿರುವ ದೇಶೀ ಪೂಜಾ ಸಂಪ್ರದಾಯಗಳು ನಾಶವಾಗಿವೆ. ಭಾರತದಲ್ಲಿನ ಬಹುಸಂಪ್ರದಾಯಗಳು ಏಕೈಕ ದೈವವಾಣಿಯನ್ನಾಧರಿಸಿ ಹುಟ್ಟಿಕೊಂಡ ವಿಭಿನ್ನ ಪಂಥಗಳಲ್ಲ ಎಂಬುದನ್ನು ಗಮನಿಸಿದ್ದೇವೆ. ಈ ವಿಭಿನ್ನ ಸಂಪ್ರದಾಯಗಳನ್ನೆಲ್ಲ ನಾಶಪಡಿಸುವ ಪ್ರಯತ್ನವು ಸಾವಿರಾರು ವರ್ಷ ನಡೆದಿದ್ದರೆ ಭಾರತದಲ್ಲೇಕೆ ಅದು ಸಫಲವಾಗಿಲ್ಲ? ಅಂದರೆ ಭಾರತದ ಪುರೋಹಿತಶಾಹಿಯ ಪ್ರಯತ್ನ ಅಷ್ಟೊಂದು ದುರ್ಬಲವಾಗಿತ್ತು ಎನ್ನಬೇಕಾಗುತ್ತದೆ. ಹಾಗಾದಲ್ಲಿ ಈ ಪ್ರಯತ್ನದಲ್ಲಿ ಸಫಲವಾದ ಸೆಮೆಟಿಕ್ ಮತಗಳ ಕುರಿತು ಸೆಕ್ಯುಲರ್ ವಾದಿಗಳಲ್ಲಿ ಇನ್ನೂ ಹೆಚ್ಚು ಹೆದರಿಕೆ ಹುಟ್ಟಬೇಕು. ಭಾರತೀಯ ಸಂಪ್ರದಾಯಗಳಿಗೆ ಸೆಮೆಟಿಕ್ ಮತಗಳ ಕುರಿತು ಇದೇ ಹೆದರಿಕೆ ಇದ್ದ ಪಕ್ಷದಲ್ಲಿ ಸೆಕ್ಯುಲರ್ ವಾದಿಗಳು ಹಿಂದುತ್ವದ ಕುರಿತು ಅನುಕಂಪವನ್ನು ತೋರಿಸುವುದೂ ಅವರ ಕರ್ತವ್ಯವೇ ಆಗುತ್ತದೆ.

ಬಹುಶಃ ಈ ಮೇಲಿನ ಪರಿಸ್ಥಿತಿಗೆ ಕಾರಣವೆಂದರೆ ಹಿಂದೂಗಳೆಂದೂ ಭಾವಿಸಿಕೊಂಡಿರುವವರಿಗೆ, ರಿಲಿಜನ್ನು ಅವರ ಅನುಭವ ಪ್ರಪಂಚವಲ್ಲದ್ದರಿಂದ ಆ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು. ಹಿಂದೂ ಎಂಬ ಮತದ ರೂಪರೇಷೆಗಳನ್ನು ಹಾಕಿದವರೇ ಸೆಮೆಟಿಕ್ ರಿಲಿಜನ್ನಿಗೆ ಸೇರಿದವರು. ಅದು ಅವರ ಅರ್ಥಪ್ರಪಂಚವಾಗಿರುವುದರಿಂದ ಅವರಿಗೆ ಜಗತ್ತು ಬೇರೆ ರೀತಿ ಕಾಣಲಿಕ್ಕೆ ಕಾರಣಗಳಿರಲಿಲ್ಲ. ತಮ್ಮ ಅನುಭವದ ಬೆಳಕಿನಲ್ಲೇ ಅವರು ಭಾರತೀಯ ಸಮಾಜವನ್ನೂ ನೋಡಿದರು. ಇದು ಹಾಗಿಲ್ಲ, ಬೇರೆ ರೀತಿ ಇದೆ ಎಂಬುದನ್ನು ಭಾರತೀಯ ಸಂಪ್ರದಾಯಗಳಿಗೆ ಸೇರಿದವರು ಹೇಳಬೇಕಷ್ಟೆ. ಹಿಂದೂ ಮತ ಎಂಬುದು ಆಧುನಿಕ ವಿದ್ಯಾಭ್ಯಾಸದ ಮೂಲಕ ಹಿಂದೂಗಳೆಂದು ಭಾವಿಸಿಕೊಂಡವರ ಜ್ಞಾನವಾದಾಗ ಅವು ಪುಸ್ತಕದ ಪರಿಭಾಷೆಗಳಾಗಿ ಅವರ ಅರಿವಿಗೆ ಬಂದಿವೆಯೇ ವಿನಃ ಅವು ಅವರಿಗೆ (ನಮಗೆ) ಅನುಭವ ವೇದ್ಯ ಸಂಗತಿಗಳಲ್ಲ. ಹಾಗಾಗೇ ರಾಜರ, ರಾಣಿಯರ ಮತಗಳ ಕುರಿತು ನಮಗೆ ಪ್ರಶ್ನೆಗಳು ಹುಟ್ಟುವುದಿಲ್ಲ, ಹಾಗೂ ರಿಲಿಜನ್ನನ್ನು ಧರ್ಮ ಎನ್ನುತ್ತೇವೆ. ನಮ್ಮ ರಾಜರುಗಳು ಪರಮತಸಹಿಷ್ಣುಗಳಾಗಿದ್ದರು ಎನ್ನುತ್ತೇವೆ. ಸೆಕ್ಯುಲರಿಸಂ ಅನ್ನು ಜಾತ್ಯತೀತವಾದ ಎನ್ನುತ್ತೇವೆ. ಹಿಂದೂಗಳಿಗೆ ಮುಸ್ಲಿಂ, ಕ್ರೈಸ್ತರೆಲ್ಲ ಬೇರೆ ಬೇರೆ ಜಾತಿಗಳ, ಸಂಪ್ರದಾಯಗಳ ಹಾಗೇ ಕಾಣಿಸುತ್ತಾರೆ. ಅದೇ ಮುಸ್ಲಿಂ-ಕ್ರೈಸ್ತರಿಗೆಲ್ಲ ಹಿಂದೂಯಿಸಂ ತಮ್ಮಂಥದ್ದೇ ಒಂದು ರಿಲಿಜನ್ನಿನ ಹಾಗೆ ಕಾಣಿಸುತ್ತದೆ, ಭಗವದ್ಗೀತೆ ಧರ್ಮಗ್ರಂಥವೆಂದು ಹೇಳಿದರೆ ಅವರಲ್ಲಿ ಸಾಮಾನ್ಯರಿಗೂ ಅರ್ಥವಾಗುತ್ತದೆ, ಆದರೆ ಹಿಂದೂಗಳಿಗೇ ಅದು ಗೊತ್ತಾಗುವುದಿಲ್ಲ. ಬ್ರಾಹ್ಮಣರು ಪುರೋಹಿತಶಾಹಿಯೆಂದರೆ ಅವರು ಇದು ಏಕೈಕ ಹಿಂದೂ ರಿಲಿಜನ್ನಿನ ಬೋಧನೆಗಳನ್ನು ಆಧರಿಸಿದೆ ಅಂದುಕೊಳ್ಳುತ್ತಾರೆ. ಅದೇ ದೇವಚಂದ್ರನೆಂಬ ೧೯ ಶತಮಾನದ ಜೈನ ಪಂಡಿತನಿಗೆ ಶರೀಯತ್ತುಗಳು ಮುಲ್ಲಾಶಾಸ್ತ್ರದಂತೆ ಕಂಡು, ಅದನ್ನು ಬರೆದವನು ಮಲ್ಲಿಭಟ್ಟನಾಗಿ ಕಂಡು, ಮುಸ್ಲಿಮರಲ್ಲಿ ೧೮ ಭೇದಗಳು ಕಂಡವು.

ಹಿಂದುತ್ವವಾದಕ್ಕೆ ಪ್ರತಿವಾದವನ್ನು ಹುಟ್ಟುಹಾಕುವಾಗ ಈ ಮೇಲೆ ಸೃಷ್ಟಿಯಾಗಬಹುದಾದ ವಿರೋಧಾಭಾಸಗಳನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ. ಅಂದರೆ, ನಮ್ಮ ಭಾರತವು ಬಹು ಸಂಪ್ರದಾಯಗಳ ದೇಶ ಎನ್ನುವಾಗ, ನಮಗೆ ರಿಲಿಜನ್ನು ಎಂಬ ಸಂಸ್ಥೆ ಇಲ್ಲ ಎಂಬುದನ್ನು ಗುರುತಿಸಬೇಕು. ಒಮ್ಮೆ ನಮಗೆ ರಿಲಿಜನ್ನು ಎಂಬ ಸಂಸ್ಥೆ ಇದ್ದರೆ, ಆಗ ಬಹುಸಂಪ್ರದಾಯಗಳ ದೇಶ ಎಂಬ ವಾದವು ಕೆಲಸಕ್ಕೆ ಬರುವುದಿಲ್ಲ. ಏಕೆಂದರೆ ಸೆಕ್ಯುಲರಿಸಂ ರಿಲಿಜನ್ನಿಗೂ ಪ್ರಭುತ್ವಕ್ಕೂ ಇರುವ ಸಂಬಂಧವನ್ನಷ್ಟೇ ಉದ್ದೇಶಿಸಿದೆ. ಹಾಗಾಗಿ ಈ ಎರಡನ್ನೂ ಪ್ರತಿಪಾದಿಸುತ್ತೇವೆಂದರೆ ವಿರೋಧಾಭಾಸ ಸೃಷ್ಟಿಯಾಗುತ್ತದೆ. ರಿಲಿಜನ್ನು ಎಂಬ ಸಂಸ್ಥೆ ಇಲ್ಲ ಎಂದರೆ, ಅದರ ಜೊತೆಗೇ ಪುರೋಹಿತಶಾಹಿ, ಪವಿತ್ರಗ್ರಂಥ, ದೈವವಾಣಿ ಮುಂತಾದ ಕಲ್ಪನೆಗಳನ್ನೂ ಬಿಡಬೇಕಾಗುತ್ತದೆ. ಇಂದಿನ ಹಿಂದುತ್ವವಾದವು ಈ ಕಾರಣಕ್ಕೇ ಅನ್ಯರ ದೃಷ್ಟಿಯಾಗಿದೆ. ಹಿಂದುತ್ವವಾದದಲ್ಲಿ ನಮ್ಮ ಬಹು ಸಂಪ್ರದಾಯಗಳಿಗೆ ಸೇರಿದ ಕೆಲವರು ತಮ್ಮನ್ನು ಅನ್ಯ ಅನುಭವದ ಮೂಲಕ ಅರ್ಥೈಸಲು ಪ್ರಯತ್ನಿಸುತ್ತಿದ್ದಾರೆ. ಹಾಗೂ ನಮ್ಮ ಸಂಪ್ರದಾಯಗಳಿಗೆ ಪರಿಚಯವೇ ಇರದ ಈ ಅಂಶಗಳನ್ನೆಲ್ಲ

ಭಾವಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಬಹುಶಃ ರಿಲಿಜನ್ನುಗಳ ಲೋಕವರ್ಣನೆಗಳನ್ನು ಆಧರಿಸಿ ಆಧುನಿಕ ಪ್ರಭುತ್ವಗಳು ಕಾರ್ಯಕ್ರಮವನ್ನು ಹಾಕಿಕೊಂಡಾಗ ನಾವು ರಿಲಿಜನ್ ಅಲ್ಲದಿದ್ದರೆ ಏನಂತೆ? ಇಂದು ನಮ್ಮ ಉಳಿವಿಗೆ ಹಿಂದೂಧರ್ಮವನ್ನೊಂದು ರಿಲಿಜನ್ ಮಾಡೋಣ ಎಂಬ ವಾದಗಳು ಸತಾರ್ಕಿಕವಾಗೇ ಕಾಣಿಸುತ್ತವೆ. ನಾನು ಈ ಹಿಂದೆ ಉಲ್ಲೇಖಿಸಿದ ಅಂಶಗಳೇ ನಮ್ಮ ಸನಾತನ ಧರ್ಮದ ಜೀವಾಳವಾದರೆ ಹಿಂದೂ ರಿಲಿಜನ್ನನ್ನು ಸಾಧಿಸಬೇಕಾದರೆ ಸನಾತನ ಧರ್ಮವನ್ನು ನಾಶಮಾಡಲೇಬೇಕಾಗುತ್ತದೆ. ಅದನ್ನು ಎಷ್ಟೆಷ್ಟು ನಾಶಮಾಡುತ್ತೇವೆಯೋ ಅಷ್ಟು ಹಿಂದೂ ರಿಲಿಜನ್ ಸಾಧ್ಯವಾಗುತ್ತದೆ. ಆದರೆ ಇಂದಿನವರೆಗಂತೂ ಅಂಥದೊಂದು ರಿಲಿಜನ್ನು ಅಸ್ತಿತ್ವದಲ್ಲಿ ಬಂದಿಲ್ಲ. ಅಂಥದೊಂದು ಕಾರ್ಯಕ್ರಮ ರೂಪುಗೊಂಡಿರಬಹುದು. ಈ ಕಾರ್ಯಕ್ರಮಕ್ಕೆ ಸೆಕ್ಯುಲರ್‌ವಾದದ ಕಾಣಿಕೆಯೂ ಅಷ್ಟೇ ಇದೆ ಎಂಬುದನ್ನು ಗಮನಿಸಬೇಕು. ಏಕೆಂದರೆ ಅದು ಹಿಂದುತ್ವವನ್ನು ಅಲ್ಲಗಳೆಯುತ್ತದೆ ಹಾಗೂ ಅದೇ ವೇಳೆಗೆ ಅದನ್ನೊಂದು ರಿಲಿಜನ್ನಾಗಿ ನೋಡುತ್ತದೆ. ರಿಲಿಜನ್ನನ್ನು ಭಾವಿಸಿಕೊಂಡಾಕ್ಷಣ ಹಿಂದೂಯಿಸಂ ಯುದ್ಧಕ್ಕೆ ಸಿದ್ಧವಾಗಲೇಬೇಕು.

೬

ನಮ್ಮ ಸಂಪ್ರದಾಯದ ಕುರಿತ ಈ ರೀತಿಯ ತಿಳಿವಳಿಕೆಯು ಪ್ರಭುತ್ವದ ನೀತಿಯನ್ನು ರೂಪಿಸುವಾಗ ಅತ್ಯಗತ್ಯವಾದುದು. ಇಂದಿನ ಸೆಕ್ಯುಲರಿಸಂ-ಕೋಮುವಾದದ ಕುರಿತ ಸಮಸ್ಯೆಯನ್ನು ಹೀಗಲ್ಲದೇ ಬೇರೆ ರೀತಿಯಲ್ಲಿ ಬಗೆಹರಿಸುವ ಸಾಧ್ಯತೆಗಳು ಕಾಣುತ್ತಿಲ್ಲ. ಇದು ವ್ಯಾವಹಾರಿಕವಾದ ಮಾರ್ಗವೆ? ಎಂಬ ಪ್ರಶ್ನೆ ಉದಿಸುವುದು ಸಹಜ. ಒಂದು ಸಂಗತಿಯನ್ನು ಗಮನಿಸಿ. ನಮ್ಮ ಸಮಾಜದ ಐತಿಹಾಸಿಕ ನಿರ್ಮಾಣವೇ ಹೀಗಿದೆ ಹಾಗೂ ಇಂದಿನವರೆಗೂ ಅದು ಹಾಗೇ ನಡೆದುಕೊಂಡು ಬಂದಿದೆ. ಭಾರತದಲ್ಲಿನ ಸೆಮೆಟಿಕ್ ರಿಲಿಜನ್ನುಗಳೂ ಕೂಡಾ ನೂರಾರು ವರ್ಷಗಳಿಂದ ಈ ನಿರ್ಮಾಣಕ್ಕೆ ಹೊಂದಿಕೊಂಡು ಬಂದಿವೆ. ಹಾಗಾದರೆ ಇಂದು ಸೃಷ್ಟಿಯಾದ ಸಮಸ್ಯೆಗಳು ಯಾವ ಪಾತಳಿಯಲ್ಲಿವೆ? ಅದು ಪ್ರಭುತ್ವದ ಪಾತಳಿಯಲ್ಲಿ ಮಾತ್ರ ಇದೆ. ನಮ್ಮ ಪ್ರಭುತ್ವದ ಸೆಕ್ಯುಲರಿಸಂ ರಾಜಕೀಯವನ್ನು ಹೊರತುಪಡಿಸಿ (ಕಮ್ಯುನಲಿಸಂ ಅದರದೊಂದು ಭಾಗವಷ್ಟೆ) ಹಿಂದೂ-ಮುಸ್ಲಿಂ ರಿಲಿಜನ್ನಿನ ಸಮಸ್ಯೆ ಎಲ್ಲಿತ್ತು? ಎಲ್ಲಿಂದ ಬರಲು ಸಾಧ್ಯ? ಈ ಸಮಸ್ಯೆ ಯಾವಾಗ ಉಲ್ಬಣಿಸುತ್ತದೆ ಹಾಗೂ ಯಾವಾಗ ತಗ್ಗುತ್ತದೆ ಎಂಬುದನ್ನು ಗಮನಿಸಿ. ಅದರಿಂದ ಯಾರ್ಯಾರು ಲಾಭ ಮಾಡಿಕೊಳ್ಳುತ್ತಾರೆ ಎಂಬುದನ್ನು ವಿಶ್ಲೇಷಿಸಿ. ನಮ್ಮ ಪ್ರಭುತ್ವವು ರಿಲಿಜನ್ನಿನ ಸಮಸ್ಯೆಗಳನ್ನು ತನ್ನದೆಂದು ಭಾವಿಸಿ ಇಂಥದೊಂದು ನೀತಿಯ ಮೂಲಕ ಅಲ್ಪಸಂಖ್ಯಾತ ರಿಲಿಜನ್ನುಗಳಿಗೆ ನ್ಯಾಯ ಒದಗಿಸುತ್ತೇನೆ ಎಂದು ಹೊರಟಾಗ ಎಲ್ಲ ಸಮುದಾಯಗಳೂ ಒಂದಿಲ್ಲೊಂದು ರಿಲಿಜನ್ನುಗಳಾಗಿ ತಮ್ಮನ್ನು ಮುಂದೊತ್ತಿಕೊಳ್ಳಬೇಕಾದ ಅನಿವಾರ್ಯತೆಯನ್ನು ಹುಟ್ಟುಹಾಕುತ್ತದೆ. ಈಗ ಆಗುತ್ತಿರುವುದೂ ಅದೇ. ಕಳೆದ ನೂರಕ್ಕೂ ಹೆಚ್ಚು ವರ್ಷಗಳಿಂದ ನಮ್ಮ ವಸಾಹತು ಹಾಗೂ ಸ್ವತಂತ್ರ ಪ್ರಭುತ್ವಗಳು ಈ ವಾಸ್ತವವನ್ನು

ಸೃಷ್ಟಿಸಿವೆ. ಅದರಲ್ಲೂ ಈ ಸಮಸ್ಯೆಯನ್ನು ಎಷ್ಟು ಹೀನವಾಗಿ ರಾಜಕೀಯ ದಾಳವನ್ನಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ನಾವೆಲ್ಲ ನೋಡುತ್ತಿದ್ದೇವೆ. ಅಲ್ಪಸಂಖ್ಯಾತರನ್ನು ಸದಾ ಭಯದ ವಾತಾವರಣದಲ್ಲಿ, ಪೋಷಿತ ಭಾವದಲ್ಲಿ ಇಡಲು ಪ್ರಯತ್ನಿಸಲಾಗುತ್ತಿದೆ. ಇದರಿಂದಾಗಿ ಒಂದೆಡೆ ಕಲ್ಪಿತ ರಿಲಿಜನ್ನುಗಳನ್ನು ಸೃಷ್ಟಿಸಿಕೊಂಡು ನಮ್ಮ ಸಂಪ್ರದಾಯಗಳು ಪ್ರಭುತ್ವದಲ್ಲಿ ಎದ್ದುಬರುತ್ತಿವೆ. ಹಾಗೂ ಇದಕ್ಕೆ ಮೂಲದಲ್ಲಿ ಸೆಮೆಟಿಕ್ ರಿಲಿಜನ್ನುಗಳೇ ಪ್ರೇರಣೆಗಳಾಗಿ, ಕಾರಣಗಳಾಗಿವೆ ಎಂಬುದು ಇತಿಹಾಸದಲ್ಲಿ ಸುಸ್ಪಷ್ಟವಾಗಿದೆ. ಭಾರತದಲ್ಲಿ ಮುಸ್ಲಿಂ ಲೀಗಿನ ಸ್ಥಾಪನೆಯಿಂದ ಹಿಡಿದು, ಮುಸ್ಲಿಂ ಪ್ರತ್ಯೇಕ ಮತಕ್ಷೇತ್ರದಿಂದ ಭಾರತದ ವಿಭಜನೆಯವರೆಗಿನ ಘಟನೆಗಳು ಹಾಗೂ ಮುಸ್ಲಿಮರನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು, ಹಿಂದೂಗಳನ್ನು ಬಹುಸಂಖ್ಯಾತರೆಂದು ಘೋಷಿಸಿದ್ದು, ಇವೆಲ್ಲ ಬೇಡಿಕೆಗಳು ಏಕೆ ಬಂದವೆಂದರೆ ಹಿಂದೂಯಿಸಂ ಒಂದು ರಿಲಿಜನ್ನು ಎಂಬ ಭಾವನೆಯಿಂದ. ಹಿಂದುತ್ವವು ಈ ಬೆಳವಣಿಗೆಗಳ ಫಲವಾಗಿ ರೂಪುತಳೆದಿದೆ ಎಂಬುದೂ ಸ್ಪಷ್ಟ, ಇಂದೂ ಕೂಡ ಭಾರತ ಪಾಕಿಸ್ತಾನದ ಸಂಬಂಧ ಹಾಗೂ ಮುಸ್ಲಿಂ ಭಯೋತ್ಪಾದನೆ ಇವು ಹಿಂದೂ ರಿಲಿಜನ್ನಿನ ಕಲ್ಪನೆಯಲ್ಲಿ ತುಂಬಾ ನಿರ್ಣಾಯಕವಾದ ಪಾತ್ರ ವಹಿಸುತ್ತಿವೆ, ಏಕೆಂದರೆ ಹಿಂದುತ್ವವು ರಿಲಿಜನ್ನಿನ ನೆರಳಿನಂತೆ ಅದನ್ನು ಹಿಂಬಾಲಿಸುತ್ತದೆ. ಹಾಗೂ ಇದನ್ನು ಹಿಂದೂ ರಿಲಿಜನ್ನಿನ ಲಕ್ಷಣವೆಂದು ತಮ್ಮ ಲೋಕದೃಷ್ಟಿಯ ಮೂಲಕ ಕಲ್ಪಿಸಿಕೊಂಡ ಇಸ್ಲಾಂ ಮತದ ಮುಖಂಡರು ನೂರಾರು ವರ್ಷಗಳಿಂದ ತಾವು ಈ ಸೆಕ್ಯುಲರಿಸಂ ಸಹಾಯವಿಲ್ಲದೇ ಸಮಾಜದಲ್ಲಿ ನಡೆಸಿದ ಸಹಬಾಳ್ವೆಯ ನೆನಪನ್ನು ಉಪೇಕ್ಷಿಸಿ ಅಸ್ಥಿರತೆಯನ್ನು ಕಲ್ಪಿಸಿಕೊಳ್ಳುತ್ತಿದ್ದಾರೆ. ಅದೇ ರೀತಿ, ತಾವು ಮುಸ್ಲಿಮರಂತೇ ಸಂಘಟನೆ ಹೊಂದದಿದ್ದರೆ ತಮ್ಮ ರಿಲಿಜನ್ನಿಗೆ ಧಕ್ಕೆ ಬರುವುದನ್ನು ಕಲ್ಪಿಸಿಕೊಂಡು ಹಿಂದುತ್ವದ ಪ್ರತಿಪಾದಕರು ಭಯಭೀತರಾಗಿದ್ದಾರೆ.

ಸೆಕ್ಯುಲರಿಸಂ ಕಾರ್ಯಕ್ರಮವು ಭಾರತೀಯ ಸಂದರ್ಭದಲ್ಲಿ ಇಲ್ಲಿನ ಮುಸ್ಲಿಂ, ಕ್ರೈಸ್ತರಿಗೂ ಸಮಸ್ಯೆಗಳನ್ನು ಸೃಷ್ಟಿಸಿದೆ. ಅದು ಕಟ್ಟಿಕೊಡುವ ರಿಲಿಜನ್ನುಗಳೂ ಕೂಡಾ ಆದರ್ಶೀಕೃತವಾದ ರೂಪಗಳಾಗಿವೆ ಹಾಗೂ ಅವುಗಳ ಕುರಿತು ಆಧುನಿಕ ಪೂರ್ವಗ್ರಹಗಳಿಂದ ಕೂಡಿವೆ. ಇವೆಲ್ಲವೂ ರಿಲಿಜನ್ನುಗಳಿಲ್ಲದ ಸಮಾಜಗಳಲ್ಲಿ ಅವು ಐತಿಹಾಸಿಕವಾಗಿ ಬೆಳೆಸಿಕೊಂಡ ಜೀವನಕ್ರಮವನ್ನು, ತಿಳಿವಳಿಕೆಯನ್ನು ಬದಲಾಯಿಸಿಕೊಳ್ಳುವ ಒತ್ತಡವನ್ನು ಸೃಷ್ಟಿಸುತ್ತವೆ. ಕೋಮುವಾದವು ಆಧುನಿಕ ಸೃಷ್ಟಿಯೋ ಅಲ್ಲವೋ ಎಂಬ ಕುರಿತು ಚರ್ಚೆ ಇರುವುದು ಗೊತ್ತಿರುವ ವಿಷಯವೇ. ಈ ಹಿಂದೆ ನಡೆಸಿದ ಚರ್ಚೆಯ ಬೆಳಕಿನಲ್ಲಿ ನೋಡಿದರೆ ಈ ಸಮಸ್ಯೆಯು ಆಧುನಿಕ ಪೂರ್ವ ಕಾಲದಲ್ಲಿ ಇರಲು ಸಾಧ್ಯವಿಲ್ಲ. ಏಕೆಂದರೆ ಭಾರತೀಯ ಸಂಪ್ರದಾಯಗಳಿಗೆ ಇಸ್ಲಾಂ ಮತ್ತು ಕ್ರೈಸ್ತಮತಗಳು ಕೂಡಾ ಒಂದು ಸಂಪ್ರದಾಯವಾಗಿ ತೋರಿದ್ದವು. ಭಾರತೀಯ ರಾಜರು ಮಸೀದಿ, ಚರ್ಚುಗಳನ್ನು ಕಟ್ಟಿಸಿಕೊಟ್ಟ ಉದಾಹರಣೆಗಳನ್ನು ಈ ಹಿನ್ನೆಲೆಯಿಂದ ನೋಡಿದರೆ ಅವು ಸಹಜವಾಗಿಯೇ ಕಾಣುತ್ತವೆ. ಸೆಮೆಟಿಕ್ ರಿಲಿಜನ್ನುಗಳು ಸಾಂಪ್ರದಾಯಿಕ ಭಾರತದಲ್ಲಿ ಹೇಗಿವೆ? ರಿಲಿಜನ್ನುಗಳ ಬೋಧನೆ ಹಾಗೂ ಆಚರಣೆಗಳ ಸಂಬಂಧಿಸಿ ಭಾರತದಂಥ ದೇಶದಲ್ಲಿ ವ್ಯತ್ಯಾಸಗಳೇನಾದರೂ ಉಂಟಾಗಿವೆಯೆ? ಭಾರತೀಯ ಬಹುಸಾಂಸ್ಕೃತಿಕ ವಾಸ್ತವವು ಸೆಮೆಟಿಕ್ ಮತಗಳ ಮೇಲೆ ಕೂಡಾ

ಪ್ರಭಾವವನ್ನು ಬೀರಿದೆ ಎಂಬುದು ಇಲ್ಲಿಯ ಸಂಸ್ಕೃತಿಯನ್ನು ಅಧ್ಯಯನ ಮಾಡಿದ ಯಾರಿಗಾದರೂ ವೇದ್ಯವಾಗುತ್ತದೆ. ಸಾಧಾರಣವಾಗಿ ಮುಸ್ಲಿಂ ರಾಜರಲ್ಲಿ ಕೆಲವರು ದೇವಾಲಯಗಳನ್ನು ನಾಶಪಡಿಸಿದ್ದನ್ನೇ ಎತ್ತಿ ಹೇಳಲಾಗುತ್ತದೆ. ಆದರೆ ಮುಸ್ಲಿಂ ರಾಜರುಗಳು ಹಿಂದು ದೇವತೆಗಳನ್ನು ಪೋಷಿಸಿದ್ದನ್ನೂ, ಪೂಜಿಸಿದ್ದನ್ನೂ ಅನೇಕ ಸಂದರ್ಭಗಳಲ್ಲಿ ನೋಡುತ್ತೇವೆ. ಮುಸ್ಲಿಂ ಅರಸರು ಮೂಲತಃ ಮತಾಂಧರಾಗಿದ್ದು, ಅಸಹಾಯಕರಾದಾಗ, ಅಥವಾ ರಾಜಕೀಯ ತಂತ್ರಕ್ಕಾಗಿ ಹಿಂದೂ ದೇವತೆಗಳ ಮೊರೆ ಹೊಕ್ಕಿದ್ದರು ಎಂಬುದಾಗಿ ಹಿಂದುತ್ವವಾದಿಗಳು ಅದಕ್ಕೊಂದು ದುರುದ್ದೇಶವನ್ನು ಆರೋಪಿಸುತ್ತಾರೆ. ಈ ವಾದದ ಹಿಂದೆ ಹಿಂದೂ ರಿಲಿಜನ್ನಿಗೂ ಒಂದು ಮತವಿಶ್ವಾಸದ ತಳಹದಿ ಇದೆ, ಮುಸ್ಲಿಂ ರಾಜರು ಅದನ್ನು ಮನಃಪೂರ್ವಕ ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ ಎಂಬ ಗ್ರಹಿಕೆ ಕೆಲಸ ಮಾಡುತ್ತಿರುವುದು ಸ್ಪಷ್ಟ. ಆದರೆ ಈ ಪೂಜೆಗಳು ಕೇವಲ ಸಾಂಪ್ರದಾಯಿಕ ಆಚರಣೆಗಳೇ ವಿನಃ ಯಾವುದೇ ಮತ ಪ್ರತಿಪಾದನೆಗಳಲ್ಲ ಎಂಬುದು ಯಾವುದೋ ರೀತಿಯಲ್ಲಿ ಹೊಲಬಾದಾಗ ಒಬ್ಬ ಮುಸ್ಲಿಂ ಅರಸನೂ ಅದನ್ನು ಶ್ರದ್ಧೆಯಿಂದಲೇ ಮಾಡುವ ಸಾಧ್ಯತೆಗಳು ತೆರೆಯುತ್ತವೆ. ಹಿಂದೂ ಸಂಪ್ರದಾಯದ ಜಗತ್ತಿನಲ್ಲೇ ಬೆಳೆದುಬಂದ ಮುಸ್ಲಿಂ ರಾಜರಿಗೆ ಹಿಂದೂ ಸಂಪ್ರದಾಯಗಳ ಕುರಿತು ಈ ಸಹಜಜ್ಞಾನ ಇರಲಿಲ್ಲ ಎಂದು ಭಾವಿಸಲು ಕಾರಣಗಳೂ ಇಲ್ಲ. ಅವರಿಗೆ ವೈಯುಕ್ತಿಕ ಸಂಪ್ರದಾಯಗಳ ಪ್ರಭಾವವನ್ನಂತೂ ತೋರಿಸುತ್ತದೆ. ಹಾಗಾಗಿ ಸೆಮೆಟಿಕ್ ಮತಗಳ ದೇಶಗಳಲ್ಲಿ ಇಂಥ ಉದಾಹರಣೆಗಳನ್ನೇ ಕಾಣುವುದಿಲ್ಲ. ಆದರೆ ವಿಪರ್ಯಾಸವೆಂದರೆ ಮುಸ್ಲಿಂ ರಾಜರು ಹಿಂದೂ ದೇವತೆಗಳನ್ನು ಶ್ರದ್ಧೆಯಿಂದ ಪೂಜಿಸಿದ ಸಾಧ್ಯತೆಯು ಮುಸ್ಲಿಮರಿಗೇ ಇಂದು ಊಹೆಗೆ ನಿಲುಕದ ವಿಷಯವಾಗತೊಡಗಿದೆ.

ಇಂದಿಗೂ ಬಹುಪಾಲು ಗ್ರಾಮೀಣ ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರು ತಮ್ಮ ಮೂಲ ಪ್ರಾದೇಶಿಕ ಜಾತಿಗಳ ಅನೇಕ ಛಾಯೆಗಳನ್ನು ಉಳಿಸಿಕೊಂಡಿದ್ದಾರೆ. ಅವರಿಗೆ ಇಸ್ಲಾಂ ಮತದ ಆಚರಣೆಯ, ನಂಬಿಕೆಯ ಕುರಿತು ಪ್ರಾಥಮಿಕ ಮಾಹಿತಿಗಳಿರಬಹುದು. ಆದರೆ ಅವರಿಗೂ ಕೂಡ ಎಷ್ಟರಮಟ್ಟಿಗೆ ರಿಲಿಜನ್ನಿನ ಉದ್ದೇಶ ಅರ್ಥವಾಗಿದೆ ಎಂಬುದು ಸಂಶಯಾಸ್ಪದ. ಏಕೆಂದರೆ ಅವರು ಸ್ಥಾನಿಕ ಪೂಜಾಚರಣೆಗಳನ್ನು ತಮ್ಮದೆಂದೇ ಭಾವಿಸಿಕೊಂಡು ನಡೆಸುತ್ತಿರುತ್ತಾರೆ. ನಮ್ಮ ಒಂದು ಕ್ಷೇತ್ರಕಾರ್ಯದಲ್ಲಿ ನಾವು ಇಂಥ ಅನೇಕರನ್ನು ಪ್ರಶ್ನಿಸಿದ್ದೇವೆ. ಖುರಾನೇ ತಮ್ಮ ಧಾರ್ಮಿಕ ಆಚರಣೆಗಳಿಗೆಲ್ಲ ಮೂಲವೆಂಬುದಾಗಿ ಇವರೆಲ್ಲ ತಿಳಿಸಿದರೂ, ಅವರು ಸ್ಥಾನಿಕ ದೇವತೆಗಳನ್ನೂ ಶ್ರದ್ಧಾಭಕ್ತಿಯಿಂದ ಪೂಜಿಸುವುದೂ ಕಂಡುಬಂದಿದೆ. ಅವರಲ್ಲಿ ಈ ಕುರಿತು ವಿವರಣೆಗಳೇನಿಲ್ಲ. ಇಂದಿನ ಒಂದು ಸಾಂಪ್ರದಾಯಿಕ ಸಮಾಜದ ಚೌಕಟ್ಟಿನಲ್ಲಿ ಇದೆಲ್ಲ ಸಾಧ್ಯವಾಗಿರುವುದು ನಮಗೆ ಐತಿಹಾಸಿಕ ನಿದರ್ಶನವಾಗಿದೆ ಹಾಗೂ ಇದು ಅಧ್ಯಯನ ಯೋಗ್ಯವಾದ ವಿಷಯ. ಸೆಕ್ಯುಲರಿಸಂನ ಉಪಸ್ಥಿತಿಯಲ್ಲಿ ಕೇವಲ ಹಿಂದೂ ರಿಲಿಜನ್ನಿನ ಆವಿಷ್ಕಾರಕ್ಕಾಗಿ ಮಾತ್ರವೇ ಒತ್ತಡ ಸೃಷ್ಟಿಯಾಗಿಲ್ಲ, ಶುದ್ಧ ಇಸ್ಲಾಮಿನ ಆವಿಷ್ಕಾರಕ್ಕೂ ಒತ್ತಡ ಉಂಟಾಗಿದೆ ಎಂಬುದನ್ನು ಗಮನಿಸಬೇಕು. ಅಂದರೆ,

ಅವೆಲ್ಲ ರಿಲಿಜನ್ನಿನ ಪರಿಭಾಷೆಗಳನ್ನು ರೂಢಿಸಿಕೊಳ್ಳುವಾಗಿ ಸ್ಥಾನಿಕ ಆಚರಣೆಗಳನ್ನು, ಹಾಗೂ ಸಹಬಾಳ್ವೆಯ ಇತಿಹಾಸವನ್ನು ಅನಧಿಕೃತ ಎಂಬುದಾಗಿ ತಿರಸ್ಕರಿಸುವ ಪ್ರವೃತ್ತಿ ಬೆಳೆಯುತ್ತದೆ.

ಕಳೆದ ಒಂದೂವರೆ ದಶಕದ ಬರವಣಿಗೆಗಳಲ್ಲಿ ಸೆಕ್ಯುಲರ್ ವಾದವು ಕೂಡಾ ಸಾಕಷ್ಟು ಆತ್ಮಾವಲೋಕನೆಯನ್ನು ಮಾಡಿಕೊಂಡಿದ್ದು ಕಂಡುಬರುತ್ತದೆ. ಅದೂ ಪರ್ಯಾಯಗಳನ್ನು ಹುಡುಕುತ್ತಿದೆ. ಭಾರತೀಯ ಸಮಾಜದ ವಾಸ್ತವಗಳನ್ನು ಅರ್ಥೈಸಲು ಪ್ರಯತ್ನಿಸುತ್ತಿದೆ. ಹಾಗೂ ಅದು ಸಾಕಷ್ಟು ಬದಲಾವಣೆಗಳನ್ನೂ ಕಂಡಿದೆ. ಈ ನಿಟ್ಟಿನಲ್ಲಿ ಗಾಂಧೀಜಿಯವರ ವಿಚಾರಗಳ ಮರುಶೋಧನೆ ಕೂಡಾ ನಡೆದಿದೆ. ಹಿಂದುತ್ವವಾದಿಗಳು ಒಂದು ಕಲ್ಪಿತ ಸಮುದಾಯವನ್ನು (ಅಥವಾ ಸುಳ್ಳುಪ್ರಜ್ಞೆ) ಪ್ರತಿಪಾದಿಸುತ್ತಿದ್ದಾರೆ ಎಂಬ ವಾದವು ಸೆಕ್ಯುಲರಿಸಂಗೆ ಹಳೆಯದು. ಹಿಂದೂಯಿಸಂ ಎಂಬುದು ಸೆಮೆಟಿಕ್ ರಿಲಿಜನ್ನಿನಂತಲ್ಲ ಎಂದೂ ಅವರು ಹೇಳಿಯಾಗಿದೆ. ಅದನ್ನು ಏಕರೂಪಿಯನ್ನಾಗಿ ಮಾಡುತ್ತಿದ್ದಾರೆ ಎಂಬುದಾಗಿ ಹಿಂದುತ್ವದ ಬಗೆಗೆ ಅವರ ಆಕ್ಷೇಪಣೆಯೂ ಇದೆ. ಹಾಗೂ ಭಾರತವು ಬಹು ಸಂಸ್ಕೃತಿಗಳ ದೇಶ ಎಂದು ಕೂಡಾ ಅವರು ವಾದಿಸುತ್ತಿದ್ದಾರೆ. ಸೆಕ್ಯುಲರ್ ವಾದಿಗಳು ಭಾರತೀಯರ ಸಾಂಸ್ಕೃತಿಕ ಭಾವನೆಗಳನ್ನು, ನಂಬಿಕೆಗಳನ್ನು ಅರ್ಥಮಾಡಿಕೊಳ್ಳಳು ಸೋತಿದ್ದಾರೆ ಎಂದೂ ಅವರೇ ತಮ್ಮನ್ನು ಟೀಕಿಸಿಕೊಂಡಿದ್ದಾರೆ. ಆದರೆ ಸೆಕ್ಯುಲರ್ ವಾದಿಗಳ ವಾದವು ಒಂದು ಹಂತದವರೆಗೆ ಬಂದು ಅಲ್ಲೇ ನಿಂತುಬಿಡುತ್ತದೆ. ಏಕೆ? ಸೆಕ್ಯುಲರಿಸಂನ ಮೂಲ ಕಾರ್ಯಕ್ರಮವು ಮತೀಯ ಸೌಹಾರ್ದತೆಯಲ್ಲ, ಅದೊಂದು ಪ್ರಭುತ್ವದ ಕಾರ್ಯಕ್ರಮ ಎಂಬುದಾಗಿ ಈಗಾಗಲೇ ಪ್ರಸ್ತಾಪಿಸಲಾಗಿದೆ. ಪ್ರಭುತ್ವವನ್ನು ಸೆಕ್ಯುಲರ್ ಲೋಕದೃಷ್ಟಿಯ ತಳಹದಿಯಮೇಲೆ ನಿಲ್ಲಿಸಬೇಕೆಂಬುದೇ ಅದರ ವಾದ. ಆದರೆ ಭಾರತದಲ್ಲಿ ಅದು ನಿರ್ದಿಷ್ಟವಾಗಿ ಹಿಂದೂ-ಮುಸ್ಲಿಂ ಕೋಮುಸೌಹಾರ್ದತೆಯ ಪ್ರತಿಪಾದನೆಯಾಗಿ ಮಾರ್ಪಟ್ಟಿದೆ. ಆದರೆ ಅಷ್ಟನ್ನೇ ಗುರಿಯಾಗಿಟ್ಟುಕೊಂಡು ಯಾವ ಪರಿಹಾರವನ್ನು ಸೂಚಿಸಿದರೂ ಅದು ಸೆಕ್ಯುಲರ್ ವಾದದ ಇಡೀ ಕಥನಕ್ಕೆ ಸಮ್ಮತವಾಗದಿದ್ದರೆ ಅದು ಪರಿಹಾರವಾಗುವುದಿಲ್ಲ. ಹಿಂದುಯಿಸಂ ಎಂಬ ರಿಲಿಜನ್ನೇ ಇಲ್ಲ ಎನ್ನುವಾಗ ಅದನನ್ನುಸರಿಸಿ ಬರಬಹುದಾದ ಇನ್ನೂ ಕೆಲವು ನಿರ್ಣಯಗಳನ್ನು ಒಪ್ಪಿಕೊಳ್ಳಲು ಅವರಿಗೆ ಕಷ್ಟವಾಗುತ್ತದೆ. ಪ್ರಭುತ್ವದ ಇನ್ನೂ ಹಲವು ಕಾರ್ಯಕ್ರಮಗಳ ಉದ್ದೇಶಕ್ಕಾಗಿ ಈ ಹಿಂದೂಯಿಸಂ ಅನ್ನು ಕಲ್ಪಿಸಿಕೊಳ್ಳುವುದು ಅವರಿಗೆ ಮುಖ್ಯವಾಗುತ್ತದೆ. ಹಿಂದೂಯಿಸಂಗೆ ಒಂದು ಐಡಿಯಾಲಜಿ ಇಲ್ಲ, ಪುರೋಹಿತಶಾಹಿ ಇಲ್ಲ, ಇತ್ಯಾದಿ ವಾದಗಳಾಗಲೀ, ನಮ್ಮ ಸಂಪ್ರದಾಯಗಳು ಈ ಸಮಸ್ಯೆಗೆ ಉತ್ತರಿಸಬಲ್ಲವು ಎಂಬ ವಾದವಾಗಲೀ ಅವರ ಕಥನಕ್ಕೆ ಬೇರೆ ಸಮಸ್ಯೆಗಳನ್ನು ಸೃಷ್ಟಿಸುತ್ತವೆ.

ಆದರೆ ಇದೇ ಆಧುನಿಕ ಕಥನವೇ ಮತೀಯಭಾವನೆಯನ್ನೂ ತಂದಿದೆ ಎಂಬುದು ವಾಸ್ತವ. ಭಾರತೀಯ ಸಂಪ್ರದಾಯಗಳಿಗೆ ಅನ್ಯ ಸಂಪ್ರದಾಯಗಳ ಕುರಿತು ನಾವು ಆರೋಪಿಸುವ ಅಂಥ ನಂಬಿಕೆ ಹಾಗೂ ಭಾವನೆಗಳೇ ಇಲ್ಲ. ಇಂಥ ಭಾವೋದ್ರೇಕಗಳೆಲ್ಲ ಕೋಮುಭಾವನೆಯನ್ನು ತುಂಬಿಕೊಂಡವರಿಗೆ ಮಾತ್ರ ಸಹಜ. ಈ ಕೋಮುಭಾವನೆ ಹಿಂದೂ-ಮುಸ್ಲಿಂ ಪ್ರಭೇದಕ್ಕೆ ಮಾತ್ರ

ಸೀಮಿತವಾಗಿಲ್ಲ. ಯಾವುದೇ ಸಮುದಾಯಕ್ಕೆ ಸ್ಥಿರವಾದ, ಏಕರೂಪೀ ದುರ್ಗುಣಗಳನ್ನು ಹಾಗೂ ದುರುದ್ದೇಶಗಳನ್ನು ಆರೋಪಿಸುವ ಸ್ಟೀರಿಯೋಟೈಪುಗಳನ್ನು ಹುಟ್ಟುಹಾಕಿದಾಗ ಅದು ಜನ್ಮ ತಳೆಯುತ್ತದೆ. ಅವು ಮುಸ್ಲಿಮರ ಬಗೆಗೆ ಮಾತ್ರವೇ ಇಲ್ಲ, ಅಷ್ಟೇ ಹೀನಾಯವಾಗಿ ಹಿಂದೂ ಎಂಬ ಪ್ರಭೇದದ ಕುರಿತೂ ಆಧುನಿಕ ವಿಚಾರಧಾರೆಗಳಿಂದ ಅವು ಹುಟ್ಟಿವೆ. ಸೆಕ್ಯುಲರ್ ವಾದದ ಆದರ್ಶವಾಗಿರುವ ಆಧುನಿಕ ಪ್ರಗತಿಪರತೆಯು ಹುಟ್ಟುಹಾಕಿದ ಜಾತೀಯ ಮೀಮಾಂಸೆಗಳೂ ಈ ಹಂತಕ್ಕೇ ಬಂದು ತಲುಪಿವೆ ಎಂಬುದನ್ನು ಗಮನಿಸಬೇಕು. ಹಾಗಾಗಿ ಇದು ನಿಜವಾಗಿಯೂ ನಮ್ಮ ಸಮಾಜವನ್ನು ಯತಾರ್ಥವಾಗಿ ತಿಳಿದುಕೊಂಡು ಅದನ್ನಾಧರಿಸಿ ನೀತಿಯನ್ನು ರೂಪಿಸುವ ಸಮಸ್ಯೆಯಾಗಿದೆ. ಆದರೆ ಯತಾರ್ಥವನ್ನು ಎಲ್ಲಿಯವರೆಗೆ ಒಪ್ಪಿಕೊಳ್ಳಬಲ್ಲೆವು ಎಂಬುದೇ ಸೆಕ್ಯುಲರ್ ವಾದದ ಸವಾಲು. ಸಮಸ್ಯೆ ಎಲ್ಲಿಂದ ಉದ್ಭವವಾಗುತ್ತದೆಯೆಂದರೆ ಸೆಕ್ಯುಲರಿಸಂಗೆ ಸಂಬಂಧಿಸಿದ ವಿಭಿನ್ನ ಪೂರ್ವಗ್ರಹೀತಗಳು ಒಟ್ಟಾರೆಯಾಗಿ ಒಂದೇ ಕಥನದ ಬೇರೆ ಬೇರೆ ಸಾಲುಗಳು ಹಾಗೂ ಪ್ಯಾರಾಗಳಂತೆ ಇವೆ. ಒಂದು ಸಾಲನ್ನು ಇನ್ನೂ ಯಾವ್ಯಾವುದೋ ಸಾಲುಗಳಿಗೆ ತಳಕು ಹಾಕಿ ಒಟ್ಟಾರೆಯ ಕಥನವನ್ನು ಅರ್ಥೈಸಲಾಗುತ್ತದೆ. ಒಂದು ನಿರ್ದಿಷ್ಟ ರೀತಿಯಲ್ಲಿ ಈ ಕಥನವು ಮನುಷ್ಯ ಕಲ್ಯಾಣದ ಪ್ರತಿಪಾದನೆಯನ್ನು ಮಾಡುತ್ತಿರುತ್ತದೆ. ಅದರಲ್ಲಿ ಪ್ರತೀ ಸಾಲನ್ನು ಕಥನದ ಸಂದೇಶಕ್ಕೆ ಧಕ್ಕೆಯಾಗದ ರೀತಿ ತಿದ್ದಬಹುದು. ವೈಚಾರಿಕತೆಗೆ ಈ ಚೌಕಟ್ಟಿನಲ್ಲಿ ಮಾತ್ರ ಪ್ರಸ್ತುತತೆ ಇದೆ. ವಿಚಾರವು ಈ ಚೌಕಟ್ಟನ್ನು ಮೀರುವ ಹಂತಕ್ಕೆ ಬಂದಾಗ ಅದು ಮನುಷ್ಯ ಕಲ್ಯಾಣದ ಕುರಿತು ಆತಂಕವನ್ನು ಸೃಷ್ಟಿಸುತ್ತದೆ. ಅಂಥ ವಿಚಾರಗಳನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಿಂದೂಯಿಸಂ ಸೆಮೆಟಿಕ್ ರಿಲಿಜನ್ನಿನಂತಲ್ಲ ಎಂದರೆ ಈ ಕಥನಕ್ಕೆ ಸಮಸ್ಯೆಯಿಲ್ಲ. ಆದರೆ ಅದು ರಿಲಿಜನ್ನೇ ಅಲ್ಲ ಎಂದಾಗ, ಮನುಷ್ಯ ಕಲ್ಯಾಣಕ್ಕೆ ರಿಲಿಜನ್ನಿನ ಅನಿವಾರ್ಯತೆಯೇನೂ ಇಲ್ಲ ಎಂದಾಗ ಸಮಸ್ಯೆಗಳು ಹುಟ್ಟುಕೊಳ್ಳುತ್ತವೆ. ಸೆಕ್ಯುಲರಿಸಂನ ಚೌಕಟ್ಟಿನಲ್ಲಿ ವಿಚಾರಮಾಡುವುದೆಂದರೆ ಐರೋಪ್ಯ ಆಧುನಿಕ ಕಥನಗಳ ಚೌಕಟ್ಟಿನಲ್ಲಿ ವಿಚಾರಮಾಡುವ ನಿರ್ಬಂಧವಾಗಿದೆ. ಹಾಗಾಗಿ ಈ ಹಿಂದೂ-ಮುಸ್ಲಿಂ ಕೋಮುವಾದದ ಗೋಜಲಿನಿಂದ ಹೊರಬರುವ ಕೆಲಸವೆಂದರೆ ಭಾರತೀಯರ ನಿಟ್ಟಿನಿಂದ ಮನುಷ್ಯ ಕಲ್ಯಾಣದ ಪರ್ಯಾಯ ಕಥನವನ್ನು ಸೂಚಿಸುವ ಕೆಲಸವೂ ಆಗಿದೆ.

# ಸಮಾಜವಾದಿ ಆಂದೋಲನ : ಒಂದು ಹಿನ್ನೋಟ ಮತ್ತು ಒಂದು ಮುನ್ನೋಟ

ಡಿ.ಎಸ್. ನಾಗಭೂಷಣ

ಜಾಗತೀಕರಣದ ಈ ದಿನಗಳಲ್ಲಿ ಸಮಾಜವಾದದ ಬಗ್ಗೆ ಮಾತಾಡುವುದೇ ಕೆಲವರಿಗೆ ತಮಾಷೆಯಾಗಿ ಕಾಣುವುದು. ಏಕೆಂದರೆ ಸಮಾಜವಾದದ ಸಾವಿನಲ್ಲೇ ಜಾಗತೀಕರಣ ಚಿಗುರೊಡೆದಿರುವುದು ಎಂದು ಇವರು ನಂಬಿದ್ದಾರೆ. ಅರ್ಥಾತ್, ಕಳೆದ ಶತಮಾನದ ಮಹಾರಾಜಕೀಯ ಪ್ರಯೋಗವಾದ ಸಮಾಜವಾದ, ಈಗ ತನ್ನೆಲ್ಲ ವಿಶ್ವಾಸಾರ್ಹತೆ ಕಳೆದುಕೊಂಡು ಜಾಗತೀಕರಣಕ್ಕೆ ದಾರಿ ಮಾಡಿಕೊಟ್ಟಿದೆ ಎಂಬುದು ಇವರ ವಾದ. ಇವರ ಪ್ರಕಾರ ಜಾಗತೀಕರಣವೆಂಬುದು ಮತ್ತೇನೂ ಆಗಿರದೆ, ಯಾವ ಸಮಾಜವಾದ ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಯ ಮೂಲಗಳನ್ನು ಗುರುತಿಸಿ ಅದಕ್ಕೆ ಪರಿಹಾರ ರೂಪವಾಗಿ ಮೂಡಿನಿಂತಿತೋ, ಆ ಸಮಾಜವಾದದ ವಿರುದ್ಧ ಬಂಡವಾಳಶಾಹಿಯು ಸಾಧಿಸಿರುವ ಆತ್ಯಂತ ವಿಜಯವೇ ಆಗಿದೆ. ಇದು ಒಂದು ರೀತಿಯಲ್ಲಿ ನಿಜವೂ ಹೌದು. ಏಕೆಂದರೆ ಕಳೆದಶತಮಾನದ ಮಧ್ಯಭಾಗದಲ್ಲಿ ಹೊಸ ನೈತಿಕತೆಯ ಮಾತ್ರವಲ್ಲ, ಹೊಸ ಮಾನವತೆಯ ಪ್ರತೀಕವಾಗಿ ಜಗತ್ತಿನ ಎಲ್ಲಭಾಗಗಳ ಚಿಂತಕರ ರಾಜಕೀಯ ಆಕರ್ಷಣೆಯಾಗಿದ್ದ ಸಮಾಜವಾದ; ಆ ಶತಮಾನದ ಕೊನೆಯ ಹೊತ್ತಿಗೆ ಚಲಾವಣೆ ಕಳೆದುಕೊಂಡ ನಾಣ್ಯದಂತೆ ಇತಿಹಾಸದ ಜೇಬು ಸೇರುವ ಸ್ಥಿತಿ ತಲುಪಿದ್ದನ್ನೂ ಕಣ್ಣಾರೆ ಕಂಡವರು, ಇನ್ನೇನು ಭಾವಿಸಿಯಾರು?

ಆದರೆ ಈ ಸತ್ಯಕ್ಕೆ ಇನ್ನೊಂದು ಮುಖವೂ ಇದೆ. ಜಗತ್ತಿನ ಇತಿಹಾಸದುದ್ದಕ್ಕೂ ಅನೇಕ ರೀತಿಯ ಐತಿಹಾಸಿಕ ಕಾರಣಗಳಿಂದಾಗಿ ಪ್ರಬಲರಾದವರ ಮತ್ತು ದುರ್ಬಲರಾದವರ ನಡುವೆ ಘರ್ಷಣೆ ನಡೆದೇ ಇದೆ. ಈ ನಿರಂತರ ಘರ್ಷಣೆಯ ಒಂದು ಭಾಗವಾಗಿ ಕಳೆದ ಶತಮಾನದ ರಾಜಕೀಯ ಇತಿಹಾಸ ನೋಡಿದಾಗ ಯಾರಾದರೂ ಅಂತಿಮವಾಗಿ ಗೆದ್ದಿದ್ದಾರೆ ಎಂದು ಹೇಳುವುದು ಇತಿಹಾಸದ ದೃಷ್ಟಿಯಿಂದ ಕಷ್ಟವಾಗುತ್ತದೆ. ಏಕೆಂದರೆ ಕಳೆದ ಶತಮಾನದ ಯಾವ

ಸಮಾಜವಾದಿ ಚಿಂತನೆಯ ಒಂದು ಭಾಗವಾಗಿ ಮಾರ್ಕ್ಸ್‌ವಾದ ಮೂಡಿಬಂತೋ ಆ ಮಾರ್ಕ್ಸ್‌ವಾದ, ಈ ನಿರಂತರ ಘರ್ಷಣೆಗೆ ಕಾರಣವಾದ ಐತಿಹಾಸಿಕ ಶಕ್ತಿಗಳ ಮರ್ಮವನ್ನು ತಾನು ಅರಿತಿದ್ದೇನೆಂದು ಘೋಷಿಸಿಕೊಂಡು; ಅದರ ಶಾಶ್ವತ ನಿವಾರಣೆಗೆ 'ವೈಜ್ಞಾನಿಕ' ಮದ್ದನ್ನು 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ರೂಪದಲ್ಲಿ ಪ್ರಚಾರ ಮಾಡಿ ಹುಟ್ಟಿಸಿದ ನಂಬಿಕೆಯ ಹಿನ್ನೆಲೆಯಲ್ಲಿ ಮಾತ್ರ, ಇವೊತ್ತಿನ ಸೋಲು-ಗೆಲವುಗಳ ಮಾತುಗಳು ಅರ್ಥಪಡೆಯುತ್ತವೆ. ಸಮಾಜವಾದವನ್ನು ಅಥವಾ ಮಾರ್ಕ್ಸ್‌ವಾದವನ್ನು ಜಗತ್ತಿನ ಇತಿಹಾಸದುದ್ದಕ್ಕೂ ಪಟ್ಟಭದ್ರರ ಹಾಗೂ ವಂಚಿತರ ನಡುವೆ ಪದೇಪದೇ ನಡೆಯುತ್ತ ಬಂದಿರುವ ಘರ್ಷಣೆಯ ಇತ್ತೀಚಿನ ರಾಜಕೀಯ ಚಿಂತನಾ ರೂಪಗಳಷ್ಟೇ ಎಂದು ನೋಡಿದಾಗ, ಸೋತಿರುವುದು ಈ ರಾಜಕೀಯ ರೂಪಗಳೇ ಹೊರತು ಸಮಾಜವಾದ ಪ್ರತಿನಿಧಿಸುವ ಮನುಷ್ಯನ ಸಮಾನತೆಯ ಆಶಯವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಜಾಗತೀಕರಣ ಎಂದರೆ- ಹಳೆಯ ಮಾರ್ಕ್ಸ್‌ವಾದಿಗಳೂ ತಮ್ಮ ಸಿದ್ಧಾಂತದ (ಕುರುಡು) ನಂಬಿಕೆಯ ಆಧಾರದ ಮೇಲೆ ಹೇಳುತ್ತಿದ್ದಂತೆ- 'ಇತಿಹಾಸದ ಅಂತ್ಯ' ಎಂದು ಇಂದಿನ ಜಾಗತೀಕರಣವಾದಿಗಳೂ ಹೇಳುತ್ತಿದ್ದಾರೆ. ಅವರಿಗೆ ಇತಿಹಾಸ ನಿರ್ಮಾಣವಾಗುವುದು ಮನುಷ್ಯನ ಅದಮ್ಯ ಚೇತನಶಕ್ತಿಯಿಂದಲೇ ಹೊರತು ಮಾರುಕಟ್ಟೆಯ ಜಡಶಕ್ತಿಗಳಿಂದಲ್ಲ ಎಂಬ ಅಧ್ಯಾತ್ಮಿಕ ಸತ್ಯದ ಅರಿವಿಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಮಾರುಕಟ್ಟೆಗೆ ಅಥವಾ ಅದು ಸೃಷ್ಟಿಸುವ ಭೌತಿಕದಾಹಕ್ಕೆ ಒಂದು ಮಿತಿಯಿದೆ- ಒಂದು ಸ್ಥಗಿತತೆಯ, ಒಂದು ಕೊಳೆಯುವಿಕೆಯ ಬಿಂದು ಇದೆ. ಆ ಸ್ಥಿತಿ ಮುಟ್ಟಿದೊಡನೆ ಮನುಷ್ಯ ಚೇತನ, ಮಾರುಕಟ್ಟೆ ಶಕ್ತಿಗಳ ಹೊಟ್ಟೆಯಿಂದಲೇ ಒಡೆದೆದ್ದು ನಿಲ್ಲುತ್ತದೆ.

ಈ ಒಡೆದೆದ್ದು ನಿಲ್ಲುವುದು ಎಂಬುದು ಭವಿಷ್ಯದ ಮಾತಲ್ಲ. ಇಂದೇ ಅದು ಒಡೆದೆದ್ದು ಬರುತ್ತಿದೆ... ಮಾರುಕಟ್ಟೆಯ ಗಿಜಿಬಿಜಿ ಗಲಾಟೆಯಲ್ಲಿ ಅದರ ಬಿರಿಯುವಿಕೆಯ ಸದ್ದು ಕೇಳಿಸುತ್ತಿಲ್ಲವಷ್ಟೆ! 'ಒಂದೇ ಜಗತ್ತು' ಎನ್ನುವ ಜಾಗತೀಕರಣದ ವಿರುದ್ಧ ಹಳೆಯ ಸಮಾಜವಾದಿಗಳ, ಮಾರ್ಕ್ಸ್‌ವಾದಿಗಳ ಹುಯ್ಲು ಒಂದು ಕಡೆ ಇದ್ದರೆ, 'ಇನ್ನೊಂದು ಜಗತ್ತು ಸಾಧ್ಯ' ಎಂಬ ಪರ್ಯಾಯ ಕಲ್ಪನೆಯೊಂದನ್ನು ಮಂಡಿಸುತ್ತಿರುವ ಹೊಸ ಯುಗದ ಚಿಂತಕರ ಘೋಷಣೆ ಇನ್ನೊಂದೆಡೆ ಗಂಭೀರ ಚರ್ಚೆಗೆ ಒಳಗಾಗಿದೆ. ಸಮಾಜವಾದ ತನ್ನ ಆರಂಭಿಕ ದಿನಗಳಲ್ಲಿ ಬಡ-ಶ್ರೀಮಂತ ದೇಶಗಳೆಂಬ ಭೇದ ಭಾವಗಳಿಲ್ಲದೆ ಹೇಗೆ ಎಲ್ಲ ಜನರ ಗಮನ - ಆಸಕ್ತಿಗಳನ್ನು ಸೆಳೆದಿತ್ತೋ (ಐವ್ವತ್ತು-ಅರವತ್ತರ ದಶಕದಲ್ಲಿ ಅಮೆರಿಕಾದಲ್ಲೂ ಒಂದು ಸಮಾಜವಾದಿ ಪಕ್ಷ ಕ್ರಿಯಾಶೀಲವಾಗಿತ್ತು!) ಈ 'ಇನ್ನೊಂದು ಜಗತ್ತು ಸಾಧ್ಯ' ಚಳುವಳಿಯ ರೂಪದ ಹೊಸ ಸಮಾಜವಾದ ಜಗತ್ತಿನ ಎಲ್ಲ ದೇಶಗಳ-ಜಿ-೮ ದೇಶಗಳೂ ಸೇರಿದಂತೆ-ಗಮನ-ಆಸಕ್ತಿ ಸೆಳೆದಿದೆ. ಇದು, ಕಳೆದ ಶತಮಾನದ ಸಮಾಜವಾದವೂ ಸೇರಿದಂತೆ ಎಲ್ಲ ಎಡಪಂಥೀಯ ರಾಜಕೀಯ ಪ್ರಯೋಗಗಳು ಅನುಭವ-ಪಾಠಗಳ ಆಧಾರದ ಮೇಲೆ ತನ್ನ ತಾತ್ವಿಕತೆಯನ್ನು ಕಟ್ಟಿಕೊಳ್ಳುವ ಪ್ರಯತ್ನದಲ್ಲಿದೆ. ನಾನು ಇದನ್ನು ಪ್ರಸ್ತಾಪಿಸುತ್ತಿರುವುದು, ಇದೇ ಹೊಸ

ಶತಮಾನದ ಸಮಾಜವಾದ ಎಂದು ಸೂಚಿಸಲಲ್ಲ. ಜಾಗತೀಕರಣವೆಂಬುದು ಇತಿಹಾಸದ ಅಂತಿಮ ಘಟ್ಟವಲ್ಲ. ಇತಿಹಾಸದ ಶಕ್ತಿಗಳು ಇನ್ನೂ ಜೀವಂತವಿದ್ದು, ಹೊಸ (ರಾಜಕೀಯ) ಸತ್ಯದ ಅನ್ವೇಷಣೆಯಲ್ಲಿ ತೊಡಗಿದೆ ಎಂದು ಸೂಚಿಸಲು. ಇದು ನಾವು ನಂಬಿದ್ದ ಸಮಾಜವಾದ ನಿಜವಾಗಿಯೂ ಸೋತಿದೆಯೋ ಎಂದು ಕೇಳಿಕೊಂಡು ಸೂಕ್ತ ಉತ್ತರ ಕಂಡುಕೊಳ್ಳಲು ಆತ್ಮವಿಶ್ವಾಸವನ್ನು ನಮಗೆ ಒದಗಿಸುತ್ತದೆ.

ಜಗತ್ತಿನ ಮಾತು ಒತ್ತಟ್ಟಿಗಿರಲಿ, ಭಾರತದಲ್ಲಿ ಸಮಾಜವಾದ ಸೋತಿದೆ ಎನ್ನುವವರಿಗೆ ಕಳೆದ ೫೦ವರ್ಷಗಳಲ್ಲಿ ಭಾರತದಲ್ಲಿ ಆಗಿರುವ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತ್ಯಂತರಗಳ ನೆಲೆಗಳ ಪರಿಚಯವೇ ಇಲ್ಲ ಎಂದು ಹೇಳಬೇಕಾಗುತ್ತದೆ. ಇತಿಹಾಸದ ಸಮಾಜವಾದಿ ಅರಿವಿನಿಂದಾಗಿಯೇ ಶಿಕ್ಷಣ, ಸಾರ್ವಜನಿಕ ಉದ್ಯೋಗ ಹಾಗೂ ರಾಜಕೀಯ ಅಧಿಕಾರಕ್ಕೆ 'ತೆರೆದುಕೊಂಡ' ಸಮಾನ ಅವಕಾಶಗಳು-ಇದನ್ನು ಮುಕ್ತಸ್ಪರ್ಧೆಯ ಜೊತೆಗೆ ಗೊಂದಲ ಮಾಡಿಕೊಳ್ಳಬಾರದು-ಎಷ್ಟು ವಂಚಿತ ಜನವರ್ಗಗಳನ್ನು ಜಾಗೃತಗೊಳಿಸಿಲ್ಲ? ಎಂತೆಂತಹ ಸಾಮಾಜಿಕ -ಆರ್ಥಿಕ-ರಾಜಕೀಯ ಅಂತರ್ಚಲನೆಗಳಿಗೆ ಹಾಗೂ ಸಂಚಲನಗಳಿಗೆ ಕಾರಣವಾಗಿಲ್ಲ? ದುರದೃಷ್ಟದ ಸಂಗತಿ ಎಂದರೆ, ಭಾರತದ ಸಮಾಜವಾದಿ ಚಳವಳಿ, ಆಗಿರುವುದರ ಅರಿವೇ ಇಲ್ಲದೆ; ಆಗದಿರುವುದರ ಬಗ್ಗೆಯೇ ಕೂಗಾಡುತ್ತ ತನ್ನ ಸ್ಥಿಮಿತವನ್ನು ಕಳೆದುಕೊಂಡಿತು. ಹಾಗೆ ನೋಡಿದರೆ ಭಾರತದ ಸಮಾಜವಾದಿ ಚಳವಳಿ ಎಂದರೆ ಅಧಿಕೃತ ಸಮಾಜವಾದಿ ಪಕ್ಷಗಳ ನಿಲುವು -ಧೋರಣೆ-ಸಾಧನೆಗಳು ಮಾತ್ರವಾಗಿರದೆ, ಸರಿಸುಮಾರು ಎಲ್ಲ ರಾಜಕೀಯ ಪಕ್ಷಗಳ ನೀತಿವಿಕಾಸದ ಪರಿಣಾಮಗಳೂ ಸೇರಿದ ಒಂದು ರಾಜಕೀಯ ವಿದ್ಯಮಾನ ಎಂದೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಂದು ಬಿಜೆಪಿಯಂತಹ ಬಲಪಂಥೀಯ ಸಂಪ್ರದಾಯವಾದಿ ಪಕ್ಷವೂ ಮಂಡಲ್ ಆಯೋಗದ ಶಿಫಾರ್ಸುಗಳನ್ನು, ಪಂಚಾಯತ್‌ರಾಜ್ ಕಾಯಿದೆಯ ಬಲವರ್ಧನೆಯನ್ನು ಬೆಂಬಲಿಸುವ ರಾಜಕೀಯ ಅನಿವಾರ್ಯತೆ ಉಂಟಾಗಿರುವುದೇ, ಕಳೆದ ಐವತ್ತು ವರ್ಷಗಳ ಭಾರತದ ಸಮಾಜವಾದಿ ಚಳವಳಿಯ ಯಶಸ್ಸು ಎಂದು ಏಕೆ ನಾವು ಭಾವಿಸಬಾರದು? ಈ ಯಶಸ್ಸನ್ನು ಅರ್ಥಮಾಡಿಕೊಂಡಾಗಲೇ ಅಥವಾ ಅರ್ಥ ಮಾಡಿಕೊಳ್ಳುವ ನೆಲೆಗಳಲ್ಲೇ, ಸಮಾಜವಾದಿ ಚಳವಳಿಯ ವೈಫಲ್ಯಗಳ ನೆಲೆಗಳೂ ನಮ್ಮ ಅರಿವಿಗೆ ಬರತೊಡಗುವುದು.

ಸಮಾಜವಾದಿ ಪಕ್ಷ (ಸದ್ಯದ ಮುಲಾಯಂಸಿಂಗ್ ಪಕ್ಷವಲ್ಲ) ಎಂದೂ ಕೇಂದ್ರದಲ್ಲಿಯಾಗಲೀ, ಯಾವುದೇ ರಾಜ್ಯದಲ್ಲಿಯಾಗಲೀ ಏಕಾಂಗಿಯಾಗಿ ಯಾವುದೇ ಅವಧಿಯ ಆಡಳಿತ ನಡೆಸಿದ ಸಂದರ್ಭದಲ್ಲವಾದ್ದರಿಂದ ನಾವಿಂದು ಸಮಾಜವಾದಿ ಚಳವಳಿಯ ಪರಿಣಾಮಗಳ ಬಗ್ಗೆ ಮಾತಾಡುವಾಗಲೆಲ್ಲ ಅದರ ಅಪ್ರತ್ಯಕ್ಷ ಪರಿಣಾಮಗಳ ಬಗ್ಗೆಯೇ ಮಾತನಾಡುತ್ತಿರುತ್ತೇವೆ ಎಂಬುದೂ ನೆನಪಿರಬೇಕು. ಅಂದರೆ ಸಮಾಜವಾದಿ ಪಕ್ಷಗಳ (ಏಕೆಂದರೆ ಭಾರತದ ಸಮಾಜವಾದದ ಚರಿತ್ರೆ ಎಂದರೆ ವಿಭಜನೆ ಹಾಗೂ ವಿಲೀನಗಳ ಚರಿತ್ರೆಯೇ ಆಗಿದೆ!)

ಹೊರಗಿನ ಒತ್ತಡ ಹಾಗೂ ಆಡಳಿತ ಪಕ್ಷದೊಳಗಿನ ಸಮಾಜವಾದಿ ಒಲವುಳ್ಳ ಶಕ್ತಿಗಳ ಒಳಗಿನ ಒತ್ತಡಗಳೂ ಸೇರಿ ಭಾರತದ ಸಮಾಜವಾದಿ ರಾಜಕಾರಣವನ್ನು ಕಟ್ಟಿವೆ ಎಂಬುದನ್ನು ಗಮನಿಸಿಯೇ ನಾವು ಭಾರತದ ಸಮಾಜವಾದಿ ಚಳವಳಿಯ ಮೌಲ್ಯಮಾಪನ ಮಾಡಬೇಕು. ಏಕೆಂದರೆ, ಸಮಾಜವಾದಿ ಚಳವಳಿಯ ಈ ಯಶಸ್ಸಿನ ನೆಲೆಯಲ್ಲಿಯೇ ಅದರ ವೈಫಲ್ಯಗಳ ಸುಳಿವುಗಳೂ ನಮಗೆ ದೊರೆಯುವುದು.

ಹೀಗಾಗಿ ಮೊದಲ ಪ್ರಶ್ನೆ: ಭಾರತದಲ್ಲಿ ಸಮಾಜವಾದಿ ಚಳವಳಿ ಏಕೆ ಸುಸ್ಥಿರವಾಗಿ ಬೆಳೆಯಲಾಗಲಿಲ್ಲ ? ಏಕೆ ಒಡೆಯುತ್ತ ಕೂಡುತ್ತ, ಚದರುತ್ತ; ತನ್ನ ತತ್ವವನ್ನೂ, ಅದರ ಪರಿಣಾಮಶೀಲತೆಯನ್ನು ಕಳೆದುಕೊಳ್ಳುತ್ತಾ ಹೋಯಿತು? ಅನೇಕ ಶಕ್ತಿಗಳ 'ಆಡೊಂಬಲ'ವಾಗಿದ್ದ ಕಾಂಗ್ರೆಸ್ಸಿನ ಗರ್ಭದಲ್ಲಿ ಜನಿಸಿದ ಭಾರತೀಯ ಸಮಾಜವಾದಿ ಚಳವಳಿ ಬಹಳಕಾಲ ತನ್ನ ಸ್ವಂತ ಅಸ್ತಿತ್ವವನ್ನೂ, ಅಸ್ಮಿತೆಯನ್ನೂ ಸ್ಥಾಪಿಸಿಕೊಳ್ಳಲಾಗದೆ ಕಾಂಗ್ರೆಸ್ ಎಂಬ ಮಹಾಸಮಾಜದ 'ವಂಚಿತ'ರ ಗುಂಪಿನಂತೆಯೇ ಬೆಳೆದು, ಆ ಕಹಿ ಮನೋಭಾವದೊಂದಿಗೇ ಕಾಂಗ್ರೆಸ್ಸಿನಿಂದ ಹೊರಬಂತು. ಬಂದನಂತರ ಅಲ್ಲಿಂದ ಹೊತ್ತುಕೊಂಡು ಬಂದಿದ್ದ ಅನೇಕ ವೈಯಕ್ತಿಕ ಹಾಗೂ ತಾತ್ವಿಕ ಸಂದಿಗ್ಧಗಳನ್ನು ತಮ್ಮದೇ ಸ್ವತಂತ್ರ ರಾಜಕಾರಣದ ಸ್ಥಾಪನೆಯ ಕುಲುಮೆಯಲ್ಲಿ ಕರಗಿಸಕೊಳ್ಳುವ ಮುನ್ನವೇ ಭಾರಿ ಚುನಾವಣಾ ಸೋಲನ್ನು ಅನುಭವಿಸಿ, ಆ ಹತಾಶೆ-ಗೊಂದಲದಲ್ಲಿ ಪಕ್ಷದ ಮೊದಲ ವಿಭಜನೆಯಾದದ್ದು. ಉದಾಹರಣೆಗೆ ನೆಹರೂ ಕುರಿತ ಲೋಹಿಯಾ ಹಾಗೂ ಜೆ.ಪಿಯವರ ವೈಯಕ್ತಿಕ ನಿಲುವುಗಳು ರಾಜಕೀಯ ಸ್ವರೂಪ ಪಡೆದು, ಸಮಾಜವಾದಿ ಚಳವಳಿಯಲ್ಲಿ ಅನೇಕ ಅನಾಹುತಗಳಿಗೆ ಕಾರಣವಾಯಿತು. ಹಾಗೇ ಕಾಂಗ್ರೆಸ್‌ನೊಳಗೇ ಹುಟ್ಟಿಕೊಂಡ ಸಮಾಜವಾದಿ ಬೀಜಗುಂಪು ರೂಪಿಸಿಕೊಂಡ ಮೂಲತಃ ಮಾರ್ಕ್ಸ್‌ವಾದಿ ತಾತ್ವಿಕ ವಿನ್ಯಾಸದೊಳಕ್ಕೆ ಗಾಂಧಿಯನ್ನು ಅನುಸಂಧಾನಿಸುವ ಪ್ರಯತ್ನ ಅನೇಕ ಅಸಾಧ್ಯ ತಾತ್ವಿಕ ರೂಪಕಗಳನ್ನು ಹುಟ್ಟುಹಾಕಿ, ಸಂಘಟನೆಯನ್ನು ಅಸಾಧ್ಯಗೊಳಿಸಿತು. ಸಮಾಜವಾದಿ ಕಾರ್ಯಕರ್ತನ ಒಂದು ಕಣ್ಣಲ್ಲಿ ಅನ್ಯಾಯದ ವಿರುದ್ಧ ಕ್ರೋಧದ ಕಣ್ಣೀರು ಮತ್ತು ಇನ್ನೊಂದು ಕಣ್ಣಲ್ಲಿ ಅನ್ಯಾಯಕ್ಕೊಳಗಾದವರ ಬಗೆಗಿನ ಕರುಣೆಯ ಕಣ್ಣೀರು ಇರಬೇಕೆಂಬ ಲೋಹಿಯಾರ ಪ್ರಸಿದ್ಧ ಘೋಷವಾಕ್ಯ, ವೈಯಕ್ತಿಕ ನೆಲೆಯಲ್ಲಿ ಸಾಕ್ಷಾತ್ಕಾರವಾಗಬೇಕಾದ ಹೋರಾಟ ತತ್ವ. ಸಾಮೂಹಿಕ ನೆಲೆಯಲ್ಲಿ ಅದನ್ನು ರೂಢಿಸಲು, ಕಷ್ಟಸಾಧ್ಯವಾದ ನಿರಂತರ ತರಬೇತಿ ಕಾರ್ಯಕ್ರಮಗಳು ಅಗತ್ಯ. ಆದರೆ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸಂಘಟಿಸುವ ತಾಕತ್ತನ್ನೇ ಗಳಿಸಿಕೊಳ್ಳದ ಲೋಹಿಯಾ ಸಮಾಜವಾದಿ ಚಳವಳಿ, ಬರೀ ಕಾಂಗ್ರೆಸ್ ವಿರೋಧಿ ಕ್ರೋಧದ ಬೆಂಕಿಯಾಗಿ ಉರಿದು ಆರಿ ಹೋಗಿದ್ದು ಸಹಜವೇ ಆಗಿದೆ. ನಗರಪ್ರದೇಶಗಳ ಕಾರ್ಯಕರ್ತರ ಬೌದ್ಧಿಕ ಪ್ರಜ್ಞೆ ಹಾಗೂ ಗ್ರಾಮಾಂತರ ಪ್ರದೇಶದ ಕಾರ್ಯಕರ್ತರ ನಡುವಣ ವಾಸ್ತವ ಪ್ರಜ್ಞೆಗಳ ನಡುವೆ ಪಕ್ಷ ಕಳೆದುಹೋದ ಸಾಧ್ಯತೆಯನ್ನು ನಾವು ಅಲ್ಲಗೆಳೆಯುವಂತಿಲ್ಲ.

ಕಾಗೋಡು ಹಾಗೂ ಸೊಂಡೂರು ಭೂಸತ್ಯಾಗ್ರಹಗಳನ್ನು ಸಮಾಜವಾದಿ ಹೋರಾಟಗಳೆಂದು ಕರೆಯಲಾಗುವುದಾದರೂ, ಈ ಹೋರಾಟಗಳನ್ನು ನಿಜವಾಗಿ ಆರಂಭಿಸಿದ್ದು ಸ್ಥಳೀಯ ರೈತ

ಸಂಘಗಳು ಎಂಬುದನ್ನು ನಾವು ಮರೆಯಬಾರದು. ಅವು ತಮ್ಮ ಹೋರಾಟಗಳನ್ನು ತಾರ್ಕಿಕ ಅಂತ್ಯಗಳಿಗೆ ಒಯ್ಯಲಾಗದೆ, ಆಗ ಪ್ರಭುತ್ವವಿರೋಧಿ ಪಕ್ಷವಾಗಿ ಪ್ರಸಿದ್ಧವಾಗಿದ್ದ ಸಮಾಜವಾದಿ ಪಕ್ಷಕ್ಕೆ ನೇತೃತ್ವ ವಹಿಸಿಕೊಟ್ಟವಷ್ಟೆ. ಆದರೆ ದುತ್ತಾಗಿ ಬಂದ ಈ ಹೋರಾಟಗಳ ಮೂಲಕ ಪಕ್ಷ, ಸಮಾಜವಾದಿ ಚಳವಳಿಯನ್ನು ಬೆಳೆಸಲು ವ್ಯವಸ್ಥಿತ ಪ್ರಯತ್ನಗಳನ್ನು ಮಾಡಿದ ಸೂಚನೆಗಳೇನೂ ನಮಗೆ ಸಿಗುವುದಿಲ್ಲ. ಒಂದು ಕಾಲದಲ್ಲಿ ಕರ್ನಾಟಕದಲ್ಲಿ ಸಮಾಜವಾದಿ ಚಳವಳಿಯ ತವರು ಎನಿಸಿದ್ದ ಶಿವಮೊಗ್ಗ ಜಿಲ್ಲೆ ಇಂದು, ಈ ಹಿಂದೆ ಇಲ್ಲಿ ಹೆಸರೇ ಇರದಿದ್ದ ಸಂಘಪರಿವಾರದ ಭದ್ರಕೋಟೆ ಯಾಗಿರುವುದನ್ನು ವಿವರಿಸುವುದಾದರೂ ಹೇಗೆ? ಈ ಜಿಲ್ಲೆಯ ಇಬ್ಬರು ಪ್ರಮುಖ ಸಮಾಜವಾದಿ ನಾಯಕರು, ಸಮಾಜವಾದಿ ಪಕ್ಷ ವಿಸರ್ಜನೆಯಾಗುವ ಬಹು ಮುನ್ನವೇ ಬೇರೆ ಪಕ್ಷಗಳಲ್ಲಿ ತಮ್ಮ 'ಸೌಖ್ಯ'ವನ್ನು ಕಂಡುಕೊಂಡಿದ್ದಾದರೂ ಏಕೆ? ಸೊಂಡೂರು ಭೂಸತ್ಯಾಗ್ರಹದ ನೇತೃತ್ವವನ್ನು ರೈತ ಸಂಘದಿಂದ ಪಡೆದ ಸಮಾಜವಾದಿ ಪಕ್ಷ, ರೈತರಿಗೆ ಭೂಮಿ ಹಂಚಿಕೆಯಾಗುವ ವಿಧಿ ವಿಧಾನಗಳು ಆರಂಭವಾಗುವ ಹೊತ್ತಿಗೆ ಅಲ್ಲಿಂದ ಕಾಲ್ಕಿತ್ತಿತ್ತು ( ಚಳವಳಿ ನಡೆದಿದ್ದೂ ಬೆಂಗಳೂರು ಶಿವಮೊಗ್ಗಗಳಿಂದ ಬಂದಿದ್ದ ಕಾರ್ಯಕರ್ತರ ಬಲದೊಡನೆ!) ಎಂದರೆ ಏನು ಹೇಳುವುದು? ಸದಾ ವಿರೋಧಾನಂದಿಗಳಾಗಿದ್ದ ಸಮಾಜವಾದಿಗಳು ಗುದ್ದಲಿ, ವೋಟು, ಸೆರಮನೆ(ರಚನಾತ್ಮಕ ಕೆಲಸ, ಚುನಾವಣಾ ರಾಜಕೀಯ, ಪ್ರತಿಭಟನೆ) ತಮ್ಮ ಪಕ್ಷದ ತ್ರಿರೂಪಿ ಕಾರ್ಯಕ್ರಮವೆಂದು ಹೇಳಿಕೊಂಡರೂ, ಪ್ರತಿಭಟನೆಗೆ ಪೂರಕವಾಗಿ ರಚನಾತ್ಮಕ ಕೆಲಸಗಳಲ್ಲಿ ಆಸಕ್ತಿಯನ್ನು ವಹಿಸದೆ ಅಂತಿಮವಾಗಿ ವೋಟುಗಳಿಂದಲೂ ವಂಚಿತರಾದರು!

ಸಿದ್ಧಾಂತ ಏನೇ ಇದ್ದರೂ, ಕಾಂಗ್ರೆಸ್‌ನೊಡನೆಯ ದಾಯಾದಿ ಮತ್ಸರವನ್ನು ತನ್ನ ಅಸ್ತಿತ್ವಕ್ಕೆ ಆಧಾರ ಮಾಡಿಕೊಂಡಂತೆ ಬೆಳೆದ ಸಮಾಜವಾದಿ ಚಳವಳಿ, ಕೊನೆಗೆ ತಾನುಳಿಯಲು 'ಕಾಂಗ್ರೆಸ್ಸೇತರವಾದ'ವನ್ನು ಸೃಷ್ಟಿಸಿಕೊಳ್ಳಬೇಕಾಯಿತು. ಲೋಹಿಯಾರಿಂದ ಪ್ರತಿಪಾದಿಸಲ್ಪಟ್ಟ ಈ ಕಾಂಗ್ರೆಸ್ಸೇತರವಾದ ತನ್ನ ತಾರ್ಕಿಕ ಅಂತ್ಯವನ್ನು ಅವರ ನಿಧನಾನಂತರ ಅವರ ಹಳೆಯ ಸಮಾಜವಾದಿ ಗೆಳೆಯ ಜಯಪ್ರಕಾಶ್ ನಾರಾಯಣರ 'ಸಂಪೂರ್ಣಕ್ರಾಂತಿ'ಯ ಮೂಲಕ ಸಮಾಜವಾದಿ ಪಕ್ಷದ ವಿಸರ್ಜನೆಯಲ್ಲಿ ಕಂಡುಕೊಂಡಿತು ಎಂಬುದನ್ನು ಸಮಾಜವಾದಿ ಚಳವಳಿಯ ಇತಿಹಾಸದ ಅಧ್ಯಯನದ ದೃಷ್ಟಿಯಿಂದ ವಿಶೇಷವಾಗಿ ಗಮನಿಸಬೇಕು. ಹಾಗೆ, ಲೋಹಿಯಾ ಬದುಕಿದ್ದಾಗಲೇ ಈ ಕಾಂಗ್ರೆಸ್ಸೇತರವಾದದ ಮೊದಲ ಬಲಿ ಅವರ ಕಣ್ಣೆದುರಲ್ಲೇ ಬಿಹಾರದಲ್ಲಿನ ಸಂಯುಕ್ತ ಸಮಾಜವಾದಿ ಪಕ್ಷ ನೇತೃತ್ವದ ಸಮ್ಮಿಶ್ರ ಸರ್ಕಾರವೇ ಆಗಿತ್ತು. ಬಿ.ಪಿ. ಮಂಡಲ್ ಎಂಬ ಸಮಾಜವಾದಿ ಸಂಸತ್‌ಸದಸ್ಯ ರಾಜ್ಯದ ಮುಖ್ಯಮಂತ್ರಿ ಆಗುವ ಆಸೆಯಿಂದ ಪಕ್ಷದ ನೀತಿ ಸಂಹಿತೆಯನ್ನೇ ಉಲ್ಲಂಘಿಸಿ, ವಿಧಾನ ಪರಿಷತ್ ಸದಸ್ಯನಾಗಲು ಹವಣಿಸುವ ಮೂಲಕ ಅಂತಿಮವಾಗಿ ಪಕ್ಷವನ್ನು ಒಡೆದು ಸರ್ಕಾರದ ಪತನಕ್ಕೆ ಕಾರಣನಾದ. ಅಷ್ಟು ಸುಲಭವಾಗಿ ಶಿಥಿಲಗೊಳಿಸಿತ್ತು, ಸಮಾಜವಾದದ ನೈತಿಕತೆಯನ್ನು ಈ ಕಾಂಗ್ರೆಸ್ಸೇತರವಾದವೆಂಬ ಪಕ್ಷ ಉಳಿಸಿಕೊಳ್ಳುವ ಹತಾಶ ಯತ್ನ! ಇನ್ನು ಕಾಂಗ್ರೆಸ್ಸೇತರವಾದವನ್ನು ತಾತ್ವಿಕವಾಗಿ ವಿರೋಧಿಸಿದ ಸಮಾಜವಾದಿಗಳ ಒಂದು ಗುಂಪು ಕೆಲವರ ಹೊರತಾಗಿ ಅನತಿ

ಕಾಲದಲ್ಲೇ ಕಾಂಗ್ರೆಸ್ಸಿನಲ್ಲಿ ವಿಲೀನವಾದದ್ದು ಸಮಾಜವಾದಿ ಚಳವಳಿಯ ಇನ್ನೊಂದು ವಿಪರ್ಯಾಸ!

ಇನ್ನು ಇದಾದ ಹತ್ತು ವರ್ಷಗಳ ನಂತರ ಮಾಜಿ ಸಮಾಜವಾದಿ ಜಯಪ್ರಕಾಶನಾರಾಯಣರ ನೇತೃತ್ವದಲ್ಲಿ ಜನತೆಯೇ ಕಟ್ಟಿದ್ದೆಂದು ಹೇಳಬಹುದಾದ ಜನತಾಪಕ್ಷ ಗಾಂಧಿಸಮಾಜವಾದದ ದೀಕ್ಷೆ ಪಡೆದೂ, ಮೂರು ವರ್ಷಗಳಲ್ಲಿ ವಿಘಟನೆಗೊಂಡು, ಭಾರತದ ರಾಜಕಾರಣದ ಅತಿದೊಡ್ಡ ಛಿದ್ರೀಕರಣಕ್ಕೆ ಮತ್ತು ಅದಕ್ಕಿಂತ ಮುಖ್ಯವಾಗಿ ಕೋಮುವಾದಿ ರಾಜಕಾರಣದ ಬಲವರ್ಧನೆಗೆ ಕಾರಣವಾಯಿತು. ಇದು, ನಾನು ನನ್ನ ಇನ್ನೊಂದು ಲೇಖನದಲ್ಲಿ ಹೇಳಿದಂತೆ, ಕೆಲವು ಸಮಾಜವಾದಿಗಳಲ್ಲಿ ಹೊಸ 'ಎಚ್ಚರ' ಮೂಡಿಸಿ; ಕಾಂಗ್ರೆಸ್ಸೇತರವಾದವನ್ನು ಅರ್ಧಕ್ಕೇ ಕೈಬಿಟ್ಟು ಕಾಂಗ್ರೆಸ್ಸೇತರ ವಾದವನ್ನು ಪ್ರತಿಪಾದಿಸಲು ಪ್ರೇರೇಪಿಸಿತು! ಮುಖ್ಯವಾಗಿ ಲೋಹಿಯಾರ ಆಪ್ತಶಿಷ್ಯರಾದ ಮತ್ತು ಸಮಾಜವಾದಿ ಆಂದೋಲನದ ಕಾಂಗ್ರೆಸ್ ವಿರೋಧಿ ಹೋರಾಟಗಳಲ್ಲಿ ಅವರಿಗೆ ಬೆಂಬಲವಾಗಿ ನಿಂತಿದ್ದ ಮಧುಲಿಮೆಯೆ ಅವರೇ, ಬಲಪಂಥೀಯ ಕೋಮುವಾದಿ ರಾಜಕಾರಣದೆದುರು ಕಾಂಗ್ರೆಸ್ಸನ್ನು ಬೆಳೆಸುವ ಅಗತ್ಯ ಮತ್ತು ಮಹತ್ವದ ಮಾತುಗಳನ್ನಾಡಲಾರಂಭಿಸಿದ್ದರು... ಆ ಮೂಲಕ ಅವರು ಸಮಾಜವಾದಿ ಸಂಘಟನೆಯ ಆತ್ಯಂತಿಕ ವೈಫಲ್ಯವನ್ನೂ ಒಪ್ಪಿಕೊಳ್ಳಲಾರಂಭಿಸಿದ್ದರು, ಸಮಾಜವಾದಿ ಆಂದೋಲನದ ಸರಿಸುಮಾರು ಆರಂಭದಿಂದಲೂ ಇದ್ದ ಮತ್ತು ಸಮಾಜವಾದಿ ಚಳವಳಿಯ ಇತಿಹಾಸವನ್ನು ಒಬ್ಬ ಸಾಕ್ಷಿದಾರನಾಗಿಯೂ ಬರೆದಿರುವ ಲಿಮೆಯೆ ತಮ್ಮ ಬದುಕಿನ ಕೊನೇ ದಿನಗಳಲ್ಲಿ ಸಮಾಜವಾದಿ ಪಕ್ಷದ ಅನಿವಾರ್ಯ ಅಂತ್ಯವನ್ನು ಮನಗಂಡಿದ್ದರು... ಆದರೆ ಹಾಗೆ ಮನಗಾಣದ ಎರಡನೇ ಸಾಲಿನ ನಾಯಕರು ತಮ್ಮ ರಾಜಕೀಯ ಅನುಕೂಲಗಳಿಗೆ ತಕ್ಕಂತೆ ವಿವಿಧ ಪಕ್ಷಗಳಲ್ಲಿ ಹಂಚಿಹೋದರು. ನಂತರದ ಗೊಂದಲಗಳಲ್ಲಿ ಜಾತಿಬಲಗಳಿದ್ದ ಕೆಲವು ನಾಯಕರು ಉದಾ : ಲಾಲೂ ಮತ್ತು ಮುಲಾಯಂರಂತಹವರು. ತಮ್ಮದೇ ಪ್ರಾದೇಶಿಕ ಪಕ್ಷಗಳನ್ನು ಕಟ್ಟಿಕೊಂಡರು. ಈ ಪಕ್ಷಗಳಲ್ಲಿನ 'ಗೌಡಿಕೆ'ಯನ್ನು ಸಹಿಸಲಾಗದೆ ಕೆಲವರು ಪಕ್ಷ ಬಿಟ್ಟು ಇನ್ನೆಲ್ಲಿಗೂ ಹೋಗಲಾರದ ಸ್ಥಿತಿ ತಲುಪಿ ಬಿಜೆಪಿ ಮೈತ್ರಿಕೂಟ ಸೇರಿದರು ! ಹೀಗೆ ಭಾರತದಲ್ಲಿ ಸಮಾಜವಾದಿ ಆಂದೋಲನ ಭಾರತದ ಸರ್ವಪಕ್ಷಗಳಿಗೂ ತನ್ನ ಕೊಡುಗೆಯನ್ನು ನೀಡಿದೆ... ಭಾರತದ ಸಮಾಜವಾದವೆಂದರೆ, ಹಾಕಿಕೊಂಡವರ ತಲೆಯ ಆಕಾರ ಪಡೆಯುವ ಕಾಂಗ್ರೆಸ್ ಟೊಪ್ಪಿಗೆ ಇದ್ದಂತೆ ಎಂದು ಈ ಆಂದೋಲನದ ಇತಿಹಾಸ ಬರೆದಿರುವ ಹ್ಯಾರಿಸ್ ವೊಫರ್ಡ್ ಎಂಬ ರಾಜಕೀಯ ಟೀಕಾಕಾರನ ಮಾತುಗಳನ್ನು ನಿಜಗೊಳಿಸಿದೆ !

೨

ಭಾರತದ ಸಮಾಜವಾದಿ ಆಂದೋಲನವನ್ನು ಹತ್ತಿರದಿಂದ ಮತ್ತು ವಸ್ತುನಿಷ್ಠವಾಗಿ ಅಭ್ಯಾಸಮಾಡಿದವರಿಗೆ ಇದೇನೂ ಅಸಹಜವೆನ್ನಿಸುವುದಿಲ್ಲ. ಸಮಾಜವಾದಿ ಪಕ್ಷವೆಂಬುದೇ

ಈ ಹಿಂದೆ ಸೂಚಿಸಿದಂತೆ ಮೂಲತಃ ಕಾಂಗ್ರೆಸ್ ಪಕ್ಷದ ಉಪಪಕ್ಷವಾಗಿ ಆರಂಭವಾದದ್ದು. ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್ಸಿನೊಳಗೇ ಎದ್ದ ಯುವಜನರ ತಾತ್ವಿಕ ಬಂಡಾಯದ ಫಲವದು. ಅದು ಕೂಡಾ ಬಹಳ ಕಾಲ ಒಂದು ತಾತ್ವಿಕ ಸ್ಪಷ್ಟತೆ ಪಡೆದುಕೊಂಡಿರಲಿಲ್ಲ. ಆಗಿನ್ನೂ ಹಸಿಹಸಿ ನೆನಪಾಗಿದ್ದ, ರಷ್ಯಾದ ಕ್ರಾಂತಿಯ ಸ್ಫೂರ್ತಿಯಿಂದಾಗಿ ಮೂಲತಃ ಮಾರ್ಕ್ಸ್‌ವಾದಿಗಳಾಗಿದ್ದ ಇವರು, ಕಾರ್ಯಾಚರಣೆಯಲ್ಲಿ ಅಂದಿನ ಭಾರತದ ಕಮ್ಯೂನಿಸ್ಟ್ ಪಕ್ಷದ ವರಸೆಗಳನ್ನೊಪ್ಪದೆ ಕಾಂಗ್ರೆಸ್‌ನೊಳಗೇ ತಮ್ಮ ಕ್ರಾಂತಿಕಾರಿ ವಿಚಾರಗಳನ್ನು ಬಿತ್ತಲಾರಂಭಿಸಿದವರು. ಇವರ ನಾಯಕ ಜಯಪ್ರಕಾಶ್‌ನಾರಾಯಣ್. ಗಾಂಧೀಜಿಯ ಕಾಲು ಮುಟ್ಟಿ ನಮಸ್ಕರಿಸುವಷ್ಟು ಗಾಂಧಿವ್ಯಕ್ತಿತ್ವದ ಬಗ್ಗೆ ಗೌರವವುಳ್ಳವರಾಗಿದ್ದ ಇವರು ಗಾಂಧೀಜಿಯ ರಾಜಕೀಯ ವಿಚಾರಧಾರೆಯ ಕಟ್ಟಾ ವಿರೋಧಿಯೂ ಆಗಿದ್ದರು! ಒಮ್ಮೆ ಕಮ್ಯೂನಿಸ್ಟರು ಜೆ.ಪಿಯವರ ಈ ದ್ವಂದ್ವ ವ್ಯಕ್ತಿತ್ವದ ಉಪಯೋಗ ಪಡೆದು ಅವರ ಉಪಪಕ್ಷದ ಒಳಹೊಕ್ಕು ಮಾಡಿದ ಅವಾಂತರ ಗೊತ್ತಾದ ನಂತರವಷ್ಟೇ, ಈ ಉಪ ಪಕ್ಷ ಮಾರ್ಕ್ಸ್‌ವಾದ ಎಲ್ಲ ನೈತಿಕತೆಯನ್ನು ಮೀರಿ ನಿಂತದ್ದು ಎಂದು ಮನಗಂಡು ಗಾಂಧಿವಾದದ ಕಡೆ ಸಹಾನುಭೂತಿಪರವಾದ ನಿಲುವು ತಳೆಯಲು ಸಾಧ್ಯವಾದದ್ದು. ಆ ಸಂದರ್ಭದಲ್ಲೇ ಜರ್ಮನಿಯಲ್ಲಿನ ತಮ್ಮ ಸಂಶೋಧನಾ ಅಧ್ಯಯನದ ಸಂದರ್ಭದಲ್ಲಿ ಫ್ಯಾಸಿಸ್ಟರು ಮತ್ತು ಕಮ್ಯುನಿಸ್ಟರು-ಈ ಇಬ್ಬರ 'ಅನೈತಿಕ' ವರಸೆಗಳನ್ನು ಕಂಡಿದ್ದ ಡಾ. ರಾಮಮನೋಹರ ಲೋಹಿಯಾ, ಈ ಉಪಪಕ್ಷಕ್ಕೆ ತಾವು ಜರ್ಮನ್ ಸಮಾಜವಾದಿ ಅರ್ಥಶಾಸ್ತ್ರಜ್ಞರಾದ ಷೂಮೇಕರ್ ಮತ್ತು ಜೆಂಟಾರ್ಟ್ ಅವರಿಂದ ಕಲಿತಿದ್ದ ಮಧ್ಯಮ ಮಾರ್ಗದ ಸಮಾಜವಾದದ ಸೈದ್ಧಾಂತಿಕ ನೆಲೆ ಒದಗಿಸುವ ಪ್ರಯತ್ನ ಮಾಡಿದ್ದು. ಇದಕ್ಕೆ ಪೂರಕವಾಗಿ ಒದಗಿ ಬಂದದ್ದು ಆಗಿನ್ನು ಜೀವಂತ ಪ್ರಯೋಗದಲ್ಲಿದ್ದ ಗಾಂಧಿವಾದ.

ಹೀಗೆ ಭಾರತೀಯ ಸಮಾಜವಾದವೆಂಬುದು ಮಾರ್ಕ್ಸ್‌ವಾದ, ಐರೋಪ್ಯ ಸಮಾಜವಾದ ಮತ್ತು ಗಾಂಧಿವಾದಗಳೆಂಬ ಮೂರು ರಾಜಕೀಯ ವಿಚಾರಧಾರೆಗಳ ಮಿಶ್ರಣವಾಗಿ ಒಂದು ಪಕ್ಷವನ್ನು ಕಟ್ಟತೊಡಗಿತ್ತು. ಕಾಂಗ್ರೆಸ್‌ನೊಳಗಿನ ಈ 'ಕಾಂಗ್ರೆಸ್ ಸೋಷಲಿಸ್ಟ್' ಎಂಬ ಈ ಉಪಪಕ್ಷ, ವಲ್ಲಭಬಾಯಿ ಪಟೇಲರ ನೇತೃತ್ವದ ಬಲಪಂಥೀಯ ಗುಂಪು ಕಾಂಗ್ರೆಸ್ ಪಕ್ಷದ ಅಂಗರಚನೆಗೆ ಒಂದು ತಿದ್ದುಪಡಿ ತಂದು, ಪಕ್ಷದೊಳಗೊಂದು ಉಪಪಕ್ಷವಿರಲು ಸಾಧ್ಯವಿಲ್ಲದಂತೆ ಮಾಡಿ; ತನ್ನ ಮಾತೃಪಕ್ಷದಿಂದ ಹೊರ ಹೋಗುವುದು ಅನಿವಾರ್ಯವೆನಿಸಿದಾಗಲೂ, ಅದು ರಾಜಕೀಯ ಪಕ್ಷವೊಂದರ ಯಾವ ಸ್ಪಷ್ಟ ಲಕ್ಷಣಗಳನ್ನೂ ಹೊಂದಿರಲಿಲ್ಲ! ಬಹಳ ಕಾಲ ಉಪಪಕ್ಷವಾಗಿ ಕೆಲಸ ಮಾಡಿದ್ದುದರಿಂದ ಸಡಿಲ ಸಂಘಟನೆಯನ್ನಷ್ಟೇ ಹೊಂದಿದ್ದ ಈ ಪಕ್ಷ, ಒಂದು ಸ್ಪಷ್ಟ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿಲ್ಲ. ಈ ಎರಡೂ ಕಾರಣಗಳಿಂದಾಗಿ ೧೯೫೨ರ ಮೊದಲ ಮಹಾ ಚುನಾವಣೆಯಲ್ಲಿ ಹೀನಾಯವಾಗಿ ಸೋತ ನಂತರ ಆತ್ಮಪರಿವೀಕ್ಷಣೆಗಾಗಿ ಪಂಚಮಢಿ ಎಂಬಲ್ಲಿ ಸಮಾವೇಶಗೊಂಡಾಗಲೇ ಈ ಪಕ್ಷ ತಮ್ಮ ಈ ಎರಡೂ ದೌರ್ಬಲ್ಯಗಳ ಬಗ್ಗೆ ಗಂಭೀರವಾಗಿ ಚಿಂತಿಸಿದ್ದು! ಹಿರಿಯ ನಾಯಕ

ಆಚಾರ್ಯನರೇಂದ್ರದೇವ ಅವರ ಅನುಪಸ್ಥಿತಿಯಲ್ಲಿ ಈ ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಡಾ. ರಾಮಮನೋಹರ ಲೋಹಿಯಾ ಪ್ರಸ್ತುತಪಡಿಸಿದ ಸಮಾಜವಾದದ ತಾತ್ವಿಕ ಅಡಿಗಲ್ಲುಗಳು' (Doctrinal Foundation of Socialism) ಎಂಬ ಭಾಷಣವೇ ಭಾರತದ ಸಮಾಜವಾದಿ ಆಂದೋಲನಕ್ಕೆ ತನ್ನದೆನ್ನುವ ಒಂದು ಸ್ಪಷ್ಟ ವೈಚಾರಿಕ ಆಕೃತಿಯನ್ನು ನೀಡಿದ್ದು. ಆದರೆ ಬಹುಬೇಗ ದಾಯಾದಿ ಮತ್ಸರದಲ್ಲೆಂಬಂತೆ ತನ್ನ ಕಾಂಗ್ರೆಸ್ ವಿರೋಧಿ ರಾಜಕಾರಣದಲ್ಲೇ ಮೈಮರೆತ ಸಮಾಜವಾದಿ ಆಂದೋಲನ, ವಿಶೇಷವಾಗಿ ಲೋಹಿಯಾ ಧಾರೆ; ಇದರ ರಚನಾತ್ಮಕ ಅಂಶಗಳ ಕಡೆ ಗಮನ ಕೊಟ್ಟದ್ದು, ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಹೋರಾಟದಲ್ಲಿ ಆಯಾಸಗೊಂಡಾಗ ಹೋಗಿ ತಾತ್ವಿಕ ವಿವೇಚನೆಯಲ್ಲಿ ತೊಡಗಲು ಸ್ವತಃ ಲೋಹಿಯಾ ಪ್ರತಿಪಾದಿಸಿದ 'ಸಮಾಜವಾದಿ ಆಶ್ರಮ'ಗಳ ಕಲ್ಪನೆ ಬರೇ ಕಲ್ಪನೆಯಾಗಷ್ಟೆ ಉಳಿಯಿತು. ಹಾಗಾಗಿ ಈ ಸಮಾಜವಾದಿಗಳು ತಮ್ಮ ಈ 'ಹೋರಾಟ' ಗಳಿಂದಾಗಿ ಸೇರಿದ್ದು ಆಶ್ರಮಗಳನ್ನಲ್ಲ, ಸೆರಮನೆಗಳನ್ನಷ್ಟೆ. ಅದೂ ಇನ್ನಾವ ಪಕ್ಷದ ಹೋರಾಟಗಾರರೂ ಸೇರದಷ್ಟು ಬಾರಿ ಮತ್ತು ಅವಧಿಗಳವರೆಗೆ! ಹಾಗೆ ನೋಡಿರದೆ, ಇಂತಹ ಹೋರಾಟಗಳಲ್ಲಿ ಹೀಗೆ ಆಯಾಸಗೊಂಡವರಲ್ಲಿ ಕೆಲವರು ಪಕ್ಷವನ್ನೇ ಬಿಟ್ಟು ಹೋದರೆ, ಇನ್ನುಕೆಲವರು ಪಕ್ಷ ರಾಜಕಾರಣವನ್ನೇ ತೊರೆದುಹೋದರು... ಹಾಗೆ ಪಕ್ಷರಾಜಕಾರಣವನ್ನು ತೊರೆದ ಮುಖ್ಯನಾಯಕರಲ್ಲೊಬ್ಬರಾದ ಜಯಪ್ರಕಾಶರು ಬಿಹಾರದ ಸೆಖೋದೇವೂರಾ ಎಂಬಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು. ಆದರದು ಸರ್ವೋದಯದ ಆಶ್ರಮವಾಗಿತ್ತು. ಅದು ಸರ್ವೋದಯ ಚಳವಳಿಯಂತೆಯೇ ಕ್ರಮೇಣ ಹಾಳು ಬಿದ್ದಿತೆಂಬುದು ಬೇರೆಮಾತು!

ಲೋಹಿಯಾ ಅವರೇನೋ ತಮ್ಮ ಹೋರಾಟದೊಂದಿಗೆ ತಾತ್ವಿಕ ಅನ್ವೇಷಣೆಗಳಲ್ಲೂ ತೊಡಗಿಕೊಂಡರು. ಇದರಿಂದಾಗಿ ರಾಷ್ಟ್ರಾದ್ಯಂತ ಅನೇಕ ಲೇಖಕರು ಕಲಾವಿದರು ಬುದ್ಧಿಜೀವಿಗಳು ಅವರೆಡೆಗೆ ಆಕರ್ಷಿತರಾದರು. ಅವರ 'ಇತಿಹಾಸ ಚಕ್ರ', 'ಮಾರ್ಕ್ಸ್, ಗಾಂಧಿ ಮತ್ತು ಸಮಾಜವಾದ' ಮತ್ತು 'ರಾಜಕೀಯದ ಮಧ್ಯೆ ಬಿಡುವು' ಇಂತಹ ತಾತ್ವಿಕ ಅನ್ವೇಷಣೆಯ ವಿವಿಧ ಸ್ತರಗಳ ಪ್ರಯತ್ನಗಳು. ಆದರೆ ಈ ವಿಷಯದಲ್ಲಿ ಲೋಹಿಯಾರದ್ದು' ವ್ಯಕ್ತಿ ಪ್ರದರ್ಶನ' ವಾಯಿತೇ ಹೊರತು, ಸಮಾಜವಾದಿ ಪಕ್ಷವೆಂಬುದು ಕಾಂಗ್ರೆಸ್ಸಿಗೆ ಒಂದು ರಾಜಕೀಯ ಪರ್ಯಾಯ ಒದಗಿಸುವ ಜನರ ಆಂದೋಲನವಾಗಿ ಬೆಳೆಯಲಾರದಾಯಿತು. ಬದಲಿಗೆ ಅದೊಂದು 'ಪ್ರತಿಭಟನೆ'ಯ ಹೆಸರಿನ ಕೈಬೆರಳೆಣಿಕೆಯ ಗಲಭೆಕೋರ ಪಕ್ಷವೆಂದೇ ಜನರ ಕಣ್ಣಲ್ಲಿ ದಾಖಲಾಗುತ್ತಾ ಹೋಯಿತು. ಇದರಿಂದಾಗಿ ಪಕ್ಷ ತನ್ನ ಜನಪರ ತಾತ್ವಿಕತೆಯ ಹೊರತಾಗಿಯೂ, ಆಯ್ಕೆಯಾದ ಅದರ ಕೆಲವೇ ಶಾಸಕರ ಜನಪರ ಶಾಸನ ಸಭಾ 'ಪ್ರದರ್ಶನ'ಗಳ ಹೊರತಾಗಿಯೂ, ಸೋಲಿನ ಮೇಲೆ ಸೋಲನ್ನು ನುಭವಿಸುತ್ತಾ ಹೋಯಿತು. ಇದರ ಪರಿಣಾಮವಾಗಿ ಪಕ್ಷ, ರಾಷ್ಟ್ರ ಮತ್ತು ರಾಜ್ಯಮಟ್ಟಗಳಲ್ಲಿ ಪದೇಪದೇ ಹೋಳಾಗತೊಡಗಿತು. ಈ ಮಧ್ಯೆ ಕಾಂಗ್ರೆಸ್ ಪಕ್ಷ ಪದೇಪದೇ ತನ್ನ ಸಮಾಜವಾದಿ ನೀತಿ ಬದ್ಧತೆಯನ್ನು ಪುನರುಚ್ಚರಿಸುತ್ತಿದ್ದುದರಿಂದಲೂ,

ಕಾಂಗ್ರೆಸ್ಸಿನ ಕಡೆ ವಲಸೆ ನಡೆದೇ ಇತ್ತು. ೧೯೫೦ರಲ್ಲಿ ಉತ್ತರ ಪ್ರದೇಶದ ಬುಲಂದ್‌ಷಹರ್ ಎಂಬಲ್ಲಿ ಸಮಾಜವಾದಿ ಕಾರ್ಯಕರ್ತರು ಮತ್ತು ರೈತರು ಸೇರಿ 'ಲೋಹಿಯಾ ಸಾಗರ' ಎಂಬ ಕಿರುಜಲಾಶಯವೊಂದನ್ನು ನಿರ್ಮಿಸಿದ್ದರ ಹೊರತಾಗಿ, ಸಮಾಜವಾದಿಗಳು 'ರಚನಾತ್ಮಕ' ಎನ್ನಬಹುದಾದ ಯಾವ ಚಟುವಟಿಕೆಯನ್ನೂ ಮಾಡಿದಂತೆ ತೋರುವುದಿಲ್ಲ. ಕೊನೇ ಪಕ್ಷ ತನ್ನ ಸಂಘಟನೆಗಾಗಿ ಒಂದು ಕೇಂದ್ರ ಕಾರ್ಯಾಲಯದ ಕಟ್ಟಡವೊಂದನ್ನು ಅದು ಕಟ್ಟಿಕೊಳ್ಳಲಾಗಲಿಲ್ಲ. ಹಾಗಾಗಿಯೇ ಶುದ್ಧ ಅಲೆಮಾರಿಗಳ ಪಕ್ಷದಂತಿದ್ದ ಸಮಾಜವಾದಿ ಪಕ್ಷ, ಇಂದು ಭಾರತದ ರಾಜಕಾರಣದಿಂದಲೇ ಕಾಣೆಯಾಗಿದೆ ಹಾಗಾಗಬಾರದೆಂದು ತಮ್ಮ ಬದುಕಿನ ಕೊನೇ ದಿನಗಳಲ್ಲಿ, ನಾನು ಈ ಹಿಂದೆಯೇ ತಿಳಿಸಿದಂತೆ, ಅದರ ಇಬ್ಬರು ಮುಖ್ಯನಾಯಕರುಗಳಾದ ಲೋಹಿಯಾ ಮತ್ತು ಜಯಪ್ರಕಾಶರು ಹತ್ತು ವರ್ಷಗಳ ಅವಧಿಯಲ್ಲಿ ೧೯೬೭ ಮತ್ತು ೧೯೭೭ರಲ್ಲಿ ಕಾಂಗ್ರೆಸ್ಸೇತರವಾದದ ಎರಡು ದೊಡ್ಡ ರಾಜಕೀಯ ತಂತ್ರಗಳನ್ನು ರೂಪಿಸಿದವರಾದರು!

೩

ಇಷ್ಟಾದರೂ ಸಮಾಜವಾದದ ಸೆಳೆತ ಭಾರತೀಯ ಸಮಾಜದಲ್ಲಿ ಕಡಿಮೆಯಾದಂತಿಲ್ಲ. ಜಾಗತೀಕರಣ, ಒಂದು ಜನವರ್ಗವನ್ನು ಬಲಿ ತೆಗೆದುಕೊಂಡೇ ಇನ್ನೊಂದು ಜನವರ್ಗದ ಅಪಾರ ಸಿರಿವಂತಿಕೆಗೆ ಕಾರಣವಾಗುತ್ತಿರುವ (ಇದನ್ನೇ ನವ ವಸಾಹತುಶಾಹಿ ಎನ್ನುವ) ಸಂಗತಿ ಕ್ರಮೇಣ ಸ್ಪಷ್ಟವಾಗುತ್ತಿದ್ದಂತೆ, ಸಮಾಜವಾದದ ಬಗ್ಗೆ ಜನರಲ್ಲಿ ಮತ್ತೆ ಕುತೂಹಲ ಹುಟ್ಟುತ್ತಿದೆ. ಆದರೆ ಈ ಸೆಳೆತ ಮತ್ತು ಕುತೂಹಲಗಳನ್ನು ಅರ್ಥಪೂರ್ಣಗೊಳಿಸುವಂತಹ ಒಂದು ಸಂಘಟನೆಯೇ ಇಂದು ಇಲ್ಲದಾಗಿದೆ. ಹಾಗೆ ನೋಡಿದರೆ ಸಮಾಜವಾದದ ಪುನರುಜ್ಜೀವನಕ್ಕೆ ಇಂದು ಹೊಸ ಅವಕಾಶವೊಂದು ತಾನಾಗಿ ರೂಪುಗೊಂಡಿದೆ. ಕಾಂಗ್ರೆಸ್ ಪೂರ್ವಾಶ್ರಮದ ನೆನಪುಗಳ ಭಾರಗಳಿಂದ ಮುಕ್ತರಾದ ಹೊಸ ತಲೆಮಾರಿನ ಸಮಾಜವಾದಿಗಳು, ಸಮಾಜವಾದವನ್ನು ಇಂದಿನ ಅಗತ್ಯಗಳಿಗೆ ತಕ್ಕಂತೆ ಪುನರ್‌ರೂಪಿಸಬಹುದಾಗಿದೆ. ಅದರ ತಂತ್ರಜ್ಞಾನ, ಆಡಳಿತ, ಜಾತಿ, ಭಾಷೆ ಇನ್ನಿತರ ನೀತಿಗಳನ್ನು ಹೊಸ (ವಿಶೇಷವಾಗಿ ಸದ್ಯದ ಜಾಗತಿಕ ಆರ್ಥಿಕ ಹಿಂಜರಿತದ ಸಮಯದಲ್ಲಿ) ಸಂದರ್ಭಕ್ಕೆ ತಕ್ಕಂತೆ ಪುನರ್‌ನಿರೂಪಿಸುವ 'ಸ್ವಾತಂತ್ರ್ಯ' ಅವರಿಗಿದೆ. ಮುಖ್ಯವಾಗಿ ಸಮಾಜವಾದ ಪ್ರತಿಪಾದಿಸಿದ ಸರಳ ಸಭ್ಯ ಜೀವನ ಮಟ್ಟದ ಮಧ್ಯಮ ಮಾರ್ಗವನ್ನೂ ಅದು ಇಂದಿನ ಹೊಸ ಆರ್ಥಿಕ ಸಂದರ್ಭದಲ್ಲಿ ವ್ಯಾವಹಾರಿಕವೆನ್ನಿಸುವ ರೀತಿಯಲ್ಲಿ ನಿರ್ದಿಷ್ಟೀಕರಿಸಬೇಕಿದೆ. ಲೋಹಿಯಾ ಅವರು ಅರವತ್ತರ ದಶಕದ ಆರ್ಥಿಕತೆಯ ಹಿನ್ನೆಲೆಯಲ್ಲಿ, ಅಸಮಾನತೆಯ ಅಂತರ ಹತ್ತು ಪಟ್ಟಿಗಿಂತ ಹೆಚ್ಚಿರಬಾರದು ಎನ್ನುವ ಗರಿಷ್ಠ ಸಾಧ್ಯಸಮಾನತೆಯ ಸೂತ್ರದ ಆಧಾರದ ಮೇಲೆ ಸರಳಸಭ್ಯ ಜೀವನ ಮಟ್ಟವನ್ನು ನಿರ್ದಿಷ್ಟೀಕರಿಸಿದ್ದರು. ಆದರೆ ಅದು ಕೂಡಾ ಬಹಳಜನರಿಗೆ ಅಂದು ವ್ಯಾವಹಾರಿಕ ಅನ್ನಿಸಲಿಲ್ಲ. ಏಕೆಂದರೆ ಅದು ಸಾಮಾನ್ಯ ಮನುಷ್ಯನೊಬ್ಬನ

ಸುಖದ ಇಚ್ಛೆಯ ಎಲ್ಲೆಗಳನ್ನು ಗುರುತಿಸಿರಲಿಲ್ಲ ಮತ್ತು ಆ ಇಚ್ಛೆಯನ್ನು ನಿಯಂತ್ರಿಸಬಲ್ಲ ರಾಜಕೀಯ ಶಕ್ತಿಯನ್ನೂ ಸಮಾಜವಾದಿ ಸಂಘಟನೆ ಗಳಿಸಿಕೊಂಡರಲಿಲ್ಲ.

ಈಗಲಾದರೋ ಸಮಾನತೆಯ ಅಂತರ ಸಾವಿರ ಪಟ್ಟನ್ನೂ ಮೀರಿ ಹೋಗಿದೆ! ಲೋಹಿಯಾ ಕಾಲದಲ್ಲಿ ಕೆಲವರಲ್ಲಾದರೂ ಇನ್ನೂ ವಿಶ್ವಾಸ ಉಳಿಸಿಕೊಂಡಿದ್ದ ಗಾಂಧಿವಾದಿ ಸರಳ ಜೀವನದ ಆದರ್ಶ ಇಂದು ಅಪ್ರಸ್ತುತವೆನಿಸಿಕೊಂಡಿದೆ. ಮಾಹಿತಿ ತಂತ್ರಜ್ಞಾನದ ಸ್ಫೋಟ ಹಲವಾರು ನೆಲೆಗಳಲ್ಲಿ ಕೆಲಸ ಮಾಡುತ್ತಾ, ಸಮಾಜದ ಲೌಕಿಕ ನಿರೀಕ್ಷೆಗಳ ಮಟ್ಟವನ್ನು ಹಲವು ಪಟ್ಟು ಹೆಚ್ಚಿಸಿದೆ. ಇನ್ನು ಸಾಮಾಜಿಕ ನ್ಯಾಯದ ಆಂದೋಲನವೂ ಈ ವರ್ಷಗಳಲ್ಲಿ ಚೈತನ್ಯ ಶಾಲಿಯಾಗಿ ಬೆಳೆದು ಇದರಿಂದಾಗಿ ಪರಿಶಿಷ್ಟರೂ ಸೇರಿದಂತೆ ಸಮಾಜದ ಶೂದ್ರ ಜಾತಿಗಳು ಗಣನೀಯ ಸಾಮಾಜಿಕ ಚೈತನ್ಯವನ್ನು ಪಡೆದುಕೊಂಡು ರಾಜಕಾರಣದಲ್ಲಿ ಸಾಕಷ್ಟು ಆಕ್ರಮಣಕಾರಿ ಪಾತ್ರವನ್ನೇ ವಹಿಸುತ್ತಿವೆ. ಇಂತಹ ಹೊಸ ಸಾಮಾಜಿಕ ಆರ್ಥಿಕ ಸಂಕೀರ್ಣತೆಗಳಲ್ಲಿ ಸಮಾಜವಾದ ತನ್ನ ಹೊಸ ದಿಗಂತಗಳನ್ನು ಕಂಡುಕೊಳ್ಳಬೇಕಿದೆ. ಹಾಗೆ ಕಂಡುಕೊಂಡ ಹೊಸ ಎಲ್ಲೆಗಳಲ್ಲೇ ಸಮಾಜವಾದಿಗಳೆನಿಸಿಕೊಂಡವರು ತಮ್ಮ ಜೀವನಶೈಲಿಯನ್ನು ರೂಪಿಸಿಕೊಂಡು, ಅದರ ಚೆಲುವನ್ನೇ ಒಂದು ಹೊಸ ಮೌಲ್ಯವೆಂಬಂತೆ ಪ್ರಚುರಪಡಿಸುವಂತಹ ಸಾಂಸ್ಕೃತಿಕ ಆಂದೋಲನವನ್ನಾಗಿ, ಹೊಸ ಸಮಾಜವಾದಿ ಆಂದೋಲನವನ್ನು ಕಟ್ಟಬೇಕಾಗಿದೆ. ಮುಖ್ಯವಾಗಿ ಕುಟುಂಬವೊಂದರ ಆಸ್ತಿ ಮತ್ತು ಆದಾಯ ಮಿತಿಗಳ ನಿರ್ಧಾರದೊಂದಿಗೆ ಈ ಕೆಲಸ ಆರಂಭವಾಗಬೇಕಿದೆ. ಅದರ ಆಧಾರದ ಮೇಲೆ ಸಾಮಾಜಿಕನ್ಯಾಯ ಮೀಮಾಂಸೆಯನ್ನು ಪುನರ್‌ರಚಿಸಬೇಕಿದೆ. ಈ ಮೀಮಾಂಸೆ ಮುಖ್ಯವಾಗಿ ಜಾಗತೀಕರಣ ಸೃಷ್ಟಿಸಿರುವ 'ಸುಖ'ದ ಕಲ್ಪನೆಯ ನಿಜತ್ವವನ್ನು ಶೋಧಿಸಬಲ್ಲ ಪಾರಮಾರ್ಥಿಕತೆಯನ್ನು ಮೈಗೂಡಿಸಿಕೊಳ್ಳಬೇಕಿದೆ. ಇಲ್ಲದೇ ಹೋದಲ್ಲಿ, ಜಾತಿ, ಭಾಷೆ, ಆಡಳಿತ ಮತ್ತು ತಂತ್ರಜ್ಞಾನಗಳನ್ನು ಕುರಿತ ನಮ್ಮ ಹಳೆಯ ನೀತಿಗಳನ್ನು ಪುನರ್ವಿಮರ್ಶಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಈ ವಿಷಯಗಳನ್ನು ಕುರಿತಂತೆ, ಸಮಾಜವಾದ ಹಿನ್ನೆಲೆಗೆ ಸರಿದ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಡೆದಿರುವ ಎಲ್ಲ ಚರ್ಚೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ, ಸಮಾಜವಾದವನ್ನು ಹೊಸ ಕಾಲದ ಮಧ್ಯಮ ಮಾರ್ಗವನ್ನಾಗಿ ಹೇಗೆ ಜನರ ಕಣ್ಣಲ್ಲಿ ವ್ಯಾವಹಾರಿಕವಾಗಿಯೂ ಸಾಧುವೆನ್ನಿಸುವ ಹೌದೆನ್ನುವ ರೀತಿಯಲ್ಲಿ ಪ್ರಸ್ತುತಪಡಿಸಬಹುದು ಎಂಬುದರ ರೂಪು ರೇಷೆಗಳನ್ನು ಸಿದ್ಧಪಡಿಸಬೇಕಿದೆ. ಇದು ಮುಖ್ಯವಾಗಿ, ಮುಕ್ತ ಮಾರುಕಟ್ಟೆಯ ಆರ್ಥಿಕತೆ ಸೃಷ್ಟಿಸುತ್ತಿರುವ ಆಸ್ಫೋಟನಕಾರಿ ಅಸಮಾನತೆಯ, ಅಶ್ಲೀಲತೆಯ ಹಾಗೂ ಅವನತಿಯ ಸಮಾಜಕ್ಕೆ ಒಂದು ನೈತಿಕ ಪರ್ಯಾಯವಾಗಿರುವಂತೆ ನೋಡಿಕೊಳ್ಳಬೇಕಿದೆ. ಉದಾಹರಣೆಗೆ , ಇಂದಿನ ಆರ್ಥಿಕತೆಯಲ್ಲಿ ಪ್ರತಿ ಕುಟುಂಬಕ್ಕೂ ಹತ್ತು ಸಾವಿರ ರೂಪಾಯಿಗಳ ಆದಾಯವಿಲ್ಲದೆ, ಯಾರಾದರೂ ಒಂದು ಲಕ್ಷಕ್ಕಿಂತ ಹೆಚ್ಚಿನ ಆದಾಯಗಳಿಸುವುದು ಮತ್ತು ಅಂತಹ ವ್ಯವಸ್ಥೆ ಇರುವುದು ಅನೈತಿಕ ಎಂಬ ಸಾಂಸ್ಕೃತಿಕ ಎಚ್ಚರವನ್ನು ಪ್ರಚೋದಿಸುವ ರೀತಿಯಲ್ಲಿ ಈ ಆಂದೋಲನವನ್ನು ಆರಂಭಿಸಬೇಕಿದೆ.

ನೇರವಾಗಿ ಹೇಳುವುದಾದರೆ ಹೊಸ ಸಮಾಜವಾದವೆಂಬುದು ರೂಪುಗೊಳ್ಳುವುದಾದರೆ, ಅದೊಂದು ಹೊಸ ನೈತಿಕ ಆಂದೋಲನವಾಗಿಯೇ ಆರಂಭವಾಗಬೇಕಿದೆ.

ಇದಕ್ಕೆ ಸದ್ಯ ಪಕ್ಷದ ಅಗತ್ಯವಿಲ್ಲ. ಮೊದಲು ಈ ಎಲ್ಲ ವಿಷಯಗಳ ಬಗ್ಗೆ ಚರ್ಚಿಸಲು, ಸಹಮತ ಮೂಡಿಸಲು ಒಂದು ಅಧ್ಯಯನ ವೇದಿಕೆಯ ಅಗತ್ಯವಿದೆ. ಸಮಾಜವಾದವನ್ನು ಗಾಂಧಿವಾದದ ಹೆಸರಲ್ಲಾಗಲಿ, ಸರ್ವೋದಯದ ಹೆಸರಲ್ಲಾಗಲಿ, ಹೊಸ ಸಮಾಜವಾದದ ಹೆಸರಲ್ಲಾಗಲಿ ಪುನರುಜ್ಜೀವನಗೊಳಿಸಬಯಸುವವರು, ಮೊದಲು ಇಂತಹ ವೇದಿಕೆಯೊಂದರ ಅನಿವಾರ್ಯತೆಯನ್ನು ಮನಗಂಡು, ಅದನ್ನು ರೂಪಿಸುವ ಕಡೆ ಪ್ರಯತ್ನಗಳನ್ನು ಆರಂಭಿಸಬೇಕಿದೆ.

# ಪತ್ರಗಳು

# ಪತ್ರಗಳು

೧

ಕೆ. ರಾಮದಾಸ್
ಕನ್ನಡ ಅಧ್ಯಾಪಕ
ಮಹಾರಾಜ ಕಾಲೇಜು
ಮೈಸೂರು - ೫೭೦ ೦೦೫

ಚಾರ್ವಾಕ
೯೮೬, ಪಂಚಮಂತ್ರ ರಸ್ತೆ
ಕುವೆಂಪು ನಗರ, ಮೈಸೂರು - ೫೭೦ ೦೨೩
೧೩.೧೦.೧೯೯೭

ಪ್ರಿಯ ವಿಲಿಯಂ,

'ರುಜುವಾತು' ತಲುಪಿದೆ. ನಿನ್ನ ವಿಶ್ವಾಸಕ್ಕಾಗಿ ವಂದನೆಗಳು. ನೀನು, ಹೆಗ್ಗೋಡಿನಲ್ಲಿ ಪ್ರಸನ್ನ ಜೊತೆಯಲ್ಲಿ ಕೆಲಸ ಮಾಡುತ್ತಿರುವುದನ್ನು ಅಲ್ಲಿಗೆ ಹೋಗಿ - ಬಂದ ಸ್ನೇಹಿತರು ತಿಳಿಸಿದ್ದರು. ನೀನು 'ರುಜುವಾತು'ವಿನ ಸಹ ಸಂಪಾದಕನಾಗಿರುವುದು ಸಂತೋಷದ ಸಂಗತಿ. 'ರುಜುವಾತು' ಹೆಗ್ಗೋಡಿಗೆ ಸ್ಥಳಾಂತರವಾದ ನಂತರ ಅದನ್ನು ನೋಡಿರಲಿಲ್ಲ. ಚೆನ್ನಾಗಿದೆ. ಪುಸ್ತಕ ಪರಿಚಯದ ನಿನ್ನ ಟಿಪ್ಪಣಿಗಳನ್ನು ಓದಿದೆ. ನೀನು ಬರವಣಿಗೆಯನ್ನು ರೂಢಿಸಿಕೊಂಡಿರುವುದು ಮತ್ತು ಸಾಹಿತ್ಯಿಕ ಚಟುವಟಿಕೆಗಳ ಒಡನಾಟದಲ್ಲಿರುವುದನ್ನು ಗಮನಿಸಿದ್ದೇನೆ.

ಸಾಗರ ಹೇಗಿದೆ ? ನಾನು ಸಾಗರ ಬಿಟ್ಟು ಎಷ್ಟೊಂದು ವರ್ಷಗಳಾದವು. ಊರು-ಕೇರಿ ಯಾವುದು ಇಲ್ಲದವನಂತೆ ಎಲ್ಲೆಲ್ಲೋ ಅಲೆದಾಡಿ ಮೈಸೂರನ್ನು ಆಶ್ರಯಿಸಿದ್ದೇನೆ. ಎಷ್ಟೊಂದು ಊರುಗಳು, ಎಷ್ಟೊಂದು ನೆನಪುಗಳು. ಆದರೂ ನನ್ನ ಬಾಲ್ಯವನ್ನು ಕಳೆದ ಸಾಗರದ ನೆನಪುಗಳು ಯಥಾವತ್ತಾಗಿವೆ.

ವರದಾ ನದಿ ಚರಂಡಿಯಂತೆ ಹರಿಯುವುದನ್ನು ನೋಡಿ, ನನಗೆ ತುಂಬ ಕಳವಳವಾಯಿತು. ನಾವು ಈಜು ಕಲಿತ ಆನೆಗುಂಡಿ ಮಾಯವಾದಂತೆ ಕಂಡಿತು. ಎಲ್ಲ ಬದಲಾಗಿ ಹೋಗಿದೆ. ಕಳೆದ ವರ್ಷ ಇದೇ ಸುಮಾರಿನಲ್ಲಿ ನಾವೆಲ್ಲ ಅಂಕೋಲದಿಂದ ಹಿಂತಿರುಗಿ ಬರುವಾಗ ಸಾಗರದ ಮೇಲಾಯಿಸಿ ಬಂದೆವು. ರಾತ್ರಿಯಾಗಿತ್ತು. ಯಾರನ್ನೂ ನೋಡಲಾಗಲಿಲ್ಲ. ಸುಮ್ಮನೆ ತಿರುಗಾಡಿ ಬಂದೆವು.

ಈಗಲೂ ಸ್ನೇಹಿತರು, ನಿಮ್ಮ ಊರು ಯಾವುದೆಂದು ಕುತೂಹಲದಿಂದ ಕೇಳುತ್ತಾರೆ. ನನಗೆ ಅನೇಕ ಊರುಗಳಿವೆ. ಆದರೂ ಸಾಗರ ನನ್ನ ಊರು ಎಂದು ಉತ್ತರಿಸುತ್ತೇನೆ. ನನ್ನ ಪ್ರೀತಿಯ ಬಾಲ್ಯಕ್ಕಾಗಿ. ನಿಮ್ಮ ಬೀದಿಯಲ್ಲಿರುವ ಸ್ನೇಹಿತರಾದ ಕರಿಯಪ್ಪ ಹೇಗಿದ್ದಾರೆ. ಅನೇಕರ ನೆನಪಾಗುತ್ತಿದೆ. ಕೆಲವು ಹೆಸರುಗಳೂ ಮಾಸಿ, ವ್ಯಕ್ತಿಗಳು ಮಾತ್ರ ನೆನಪಿಗೆ ಬರುತ್ತಾರೆ.

ಅಮ್ಮ ನನ್ನ ಮಗಳು ಸ್ನೇಹಾಳ ಜೊತೆ ರಿಪ್ಪನ್‌ಪೇಟೆ ಕಡೆ ತಿರುಗಾಡಲು ಈ ದಿನ ಇಲ್ಲಿಂದ ಹೊರಟರು. ಸಾಗರಕ್ಕೂ ಬರಬಹುದು.

ಹೆಗ್ಗೋಡಿನಲ್ಲಿ ಸಾಂಸ್ಕೃತಿಕ ಶಿಬಿರ ಆರಂಭವಾಗಿರಬಹುದು. ಈ ಸಾರಿಯ ಶಿಬಿರದಲ್ಲಿ ನನ್ನ ಪ್ರೀತಿಯ ಸ್ನೇಹಿತರಾದ ಡಾ. ಹೆಚ್.ಬಿ. ಶಿವರಾಮ್ (ಶಿವಮೊಗ್ಗ) ಅವರ ಮಕ್ಕಳು ರಕ್ಷಿತಾ ಮತ್ತು ಹರ್ಷಿತಾ ಭಾಗವಹಿಸುತ್ತಾರೆ. ಅವರು ತ್ಯಾನಂದೂರು ಪುಟ್ಟಣ್ಣನವರ ಮೊಮ್ಮಕ್ಕಳು. ದಯಮಾಡಿ ಅವರನ್ನು ಗುರುತಿಸಿ, ಮಾತನಾಡಿಸು. ಅವರಿಗೆ ಏನಾದರೂ ತೊಂದರೆ ಇದ್ದರೆ ಸಹಾಯಮಾಡು. ನಿನ್ನ ಕುಟುಂಬದ ಎಲ್ಲರಿಗೂ ನನ್ನ ನೆನಪು ಮಾಡಿ ನಮಸ್ಕಾರ ತಿಳಿಸು.

ನಿನ್ನ
**ಕೆ. ರಾಮದಾಸ್**

೨

ಕೆ. ರಾಮದಾಸ್ — ಚಾರ್ವಾಕ
ಕನ್ನಡ ಅಧ್ಯಾಪಕ — ೯೮೬, ಪಂಚಮಂತ್ರ ರಸ್ತೆ
ಮಹಾರಾಜ ಕಾಲೇಜು — ಕುವೆಂಪು ನಗರ, ಮೈಸೂರು - ೫೭೦ ೦೨೩
ಮೈಸೂರು - ೫೭೦ ೦೦೫ — ೨೦-೧೦-೧೯೯೪

ಪ್ರಿಯ ವಿಲ್ಲಿ,

ನಿನ್ನ ಎರಡು ಕಾಗದಗಳು ತಲುಪಿದೆ. ಹೆಗ್ಗೋಡಿನಲ್ಲಿ ರಕ್ಷಿತಾ-ಹರ್ಷಿತಾರನ್ನ ಭೇಟಿ ಮಾಡಿ ಮಾತನಾಡಿಸಿರುವುದು ನನಗೆ ತುಂಬಾ ಸಂತೋಷ ಉಂಟುಮಾಡಿದೆ. ಅವರಿಬ್ಬರೂ ತುಂಬ ಲವಲವಿಕೆಯ ಪ್ರೀತಿಯ ಹುಡುಗಿಯರು. ಹೆಗ್ಗೋಡಿನ ಪರಿಸರ ಮತ್ತು 'ಸಾಂಸ್ಕೃತಿಕ ಶಿಬಿರ' ಅವರಿಗೆ ಇಷ್ಟವಾಗಬಹುದು ಅಂದುಕೊಂಡಿದ್ದೇನೆ.

ನನ್ನ ಮಗಳು ಸ್ನೇಹಾ ಅಜ್ಜಿಯ ಜೊತೆಯಲ್ಲಿ ರಿಪ್ಪನ್‌ಪೇಟೆ, ಶಿವಮೊಗ್ಗಕ್ಕೆ ಹೋದವಳು, ಈ ದಿನ ಮೈಸೂರಿಗೆ ಹಿಂತಿರುಗಿ ಬಂದಿದ್ದಾಳೆ. ಅಕ್ಕ ಅಲ್ಲೇ ಉಳಿದುಕೊಂಡಿದ್ದಾರೆ. ಇನ್ನೂ ಕೆಲವು ದಿನಗಳ ಕಾಲ ಅವರು ಅಲ್ಲೇ ಇರುತ್ತಾರೆ.

'ಕಾರಂತ ಮಂಥನ'ದಲ್ಲಿರುವ ನನ್ನ ಲೇಖನ ಸಾಮಾನ್ಯವಾಗಿದೆ. ಓದಿ ಅಭಿಪ್ರಾಯ ತಿಳಿಸು. ಮಿತ್ರರಾದ ಟಿ.ಪಿ. ಅಶೋಕ ಅದನ್ನು (ಮಂಥನ) ಚೆನ್ನಾಗಿ ಸಂಪಾದಿಸಿದ್ದಾರೆ. ಅಶೋಕ ನಮ್ಮ

ನಡುವೆ ಬೆಳೆದ ಹುಡುಗ. ಸಾಗರದ ಪರಿಸರದಲ್ಲಿ ಆತ ವಿಮರ್ಶೆಯ ಕಾಳಜಿಯನ್ನು ಬೆಳೆಸಿಕೊಂಡು ಒಳ್ಳೆಯ ವಿಮರ್ಶಕನಾಗಿ ಬೆಳೆದಿರುವುದು ನಮಗೆಲ್ಲ ಹೆಮ್ಮೆಯಾಗಿದೆ. ನನ್ನ ಹೆಮ್ಮೆಯ ಲೇಖಕರಾದ ಕಾರಂತರ ಬಗ್ಗೆ ಆತ ಸಂಪಾದಿಸಿರುವ ಎರಡೂ ಪುಸ್ತಕಗಳು ಚೆನ್ನಾಗಿ ಬಂದಿವೆ. ನನ್ನ ಲೇಖನಕ್ಕೂ ಅವಕಾಶ ಕೊಟ್ಟು ಕಾರಂತರಿಗೆ ಸಲ್ಲುವ ಗೌರವದಲ್ಲಿ ಭಾಗಿಯನ್ನಾಗಿ ಮಾಡಿದ್ದಾರೆ. ನಾನು ಬರೆದಿರುವುದೇ ಕಡಿಮೆ. ಬರವಣಿಗೆಯ ತಾಳ್ಮೆ ಮತ್ತು ಶಿಸ್ತು ಎರಡೂ ನನ್ನಲಿಲ್ಲ. ನಾನು ಕ್ರಿಯೆಯನ್ನು ಪ್ರೀತಿಸುತ್ತಾ ಆದರೆ ಥ್ರಿಲ್‌ನಲ್ಲೇ ಕಾಲಕಳೆದು ಬಿಟ್ಟೆ. ತೇಜಸ್ವಿಯವರ ಕಾದಂಬರಿಗಳಲ್ಲಿ ನಮ್ಮ ಅನುಭವದ 'share' ಇದೆ ಅಷ್ಟೆ. ಅವರು ಬರೆದಾಗಲೆಲ್ಲ ನಾವೇ ಬರೆದಷ್ಟು ಸಂತೋಷವನ್ನು ಹಂಚಿಕೊಂಡಿದ್ದೇವೆ. ಲಂಕೇಶ್ ಪತ್ರಿಕೆ ಕೂಡ ನಮ್ಮ 'ಥ್ರಿಲ್'ನ ಇನ್ನೊಂದು ರೂಪ. ನನ್ನ ಜೊತೆಗಾರಳಾಗಿರುವ ನಿರ್ಮಲಾ ಮೌನಿಯಾದರೂ ಆಗಾಗ ಕಥೆ, ಕವನ, ಪ್ರಬಂಧ ಇತ್ಯಾದಿ ಬರೆದು ತನ್ನನ್ನು ವ್ಯಕ್ತಪಡಿಸುತ್ತಾಳೆ. ನಾನು ಮಾತನಾಡುತ್ತಲೇ ಇದ್ದೇನೆ. ನಾನೊಬ್ಬ Record ಇಲ್ಲದ ಸಂಗೀತಗಾರನಂತೆ ಅಥವಾ ಜನಪದ ಹಾಡುಗಾರ ಎಂದರೆ ಸರಿಹೋಗಬಹುದು.

ಅದೆಲ್ಲ ಇರಲಿ, ಮತ್ತೆ ಬಾಲ್ಯಕ್ಕೆ ಬರೋಣ. ನೀನು ನೆನಪಿಸಿದ ಮೇಲೆ ಎಷ್ಟೊಂದು ಹೆಸರುಗಳು ನೆನಪಿಗೆ ಬರುತ್ತಿವೆ. ಸೋಮಣ್ಣ, ಗುತ್ತ್ಯಪ್ಪ, ಬಾಲಾಜಿ, ಜಾರ್ಜ್, ಜೋಸೆಫ್, ಬಾಬು, ಸಣ್ಣಪ್ಪಿ, ಸಂಘ ಮಿತ್ರ, ಗಂಟ್ಯಾಲ, ಕಲಂದರ್, ಬಾಬು, ಭಾಸ್ಕರ, ಪ್ರಭಾಕರ, ಪಾಪಣ್ಣ ಇತ್ಯಾದಿ ಇತ್ಯಾದಿ ಹಿರಿಯರು-ಕಿರಿಯರು ಎಂಥ ಅದ್ಭುತವಾದ ಸಾಗರದ ದಿನಗಳು. ಈಗ ಸಾಗರ ತುಂಬ ಬೆಳೆದಿದೆ, ಬದಲಾಗಿದೆ. ಸಾಗರಕ್ಕೆ ಈಗ ನಾನು ಬಂದಾಗ ಆಗಂತುಕನಂತೆ ಅನಿಸುತ್ತದೆ. ಕಾಲದ ಗುಣವೇ ಹಾಗೇ ಅಲ್ಲವೇ ? ನೀನು ನಿನ್ನ ಮನೆಯವರನ್ನೆಲ್ಲ ಕರೆದುಕೊಂಡು ಯಾವ ಸಂಕೋಚವು ಇಲ್ಲದೆ ನಿನಗೆ ಅನುಕೂಲವಾದಾಗ ಮೈಸೂರಿಗೆ ಬರಬಹುದು. ನಿಮ್ಮ ಪುಷ್ಪ, ಸುಗಂಧ ಇವರನ್ನೆಲ್ಲ ನೋಡಿ ಯಾವ ಕಾಲವಾಯಿತು. ಅವರನ್ನೆಲ್ಲ ಗುರುತಿಸಲು ನನಗೆ ಸಾಧ್ಯವಾಗದಿರಬಹುದು. ಅವರೆಲ್ಲ ಬಂದಾಗ ನನ್ನ ನೆನಪು ಮಾಡು. ನೀನು ಭೇಟಿಮಾಡುವ ನನ್ನ ಬಾಲ್ಯದ ಮಿತ್ರರಿಗೆ ನಾನು ವಿಚಾರಿಸಿರುವುದಾಗಿ ತಿಳಿಸು. ನಿನ್ನ ಮನೆಯವರಿಗೆಲ್ಲ ನನ್ನ ಶುಭಾಶಯ ತಿಳಿಸು.

ಆಗಾಗ ಪತ್ರಿಸು ಅಷ್ಟೆ.

ನಿನ್ನ

**ಕೆ. ರಾಮದಾಸ್**

೩

ಕೆ. ರಾಮದಾಸ್
ಕನ್ನಡ ಅಧ್ಯಾಪಕ
ಮಹಾರಾಜ ಕಾಲೇಜು
ಮೈಸೂರು - ೫೭೦ ೦೦೫

ಚಾರ್ವಾಕ
೯೮೬, ಪಂಚಮಂತ್ರ ರಸ್ತೆ
ಕುವೆಂಪು ನಗರ, ಮೈಸೂರು - ೫೭೦ ೦೨೩
೧೧.೯.೧೯೯೫

ಪ್ರಿಯ ವಿಲ್ಲಿ,

ನಿನ್ನ ಕಾಗದ ನೋಡಿ ಖುಷಿಯಾಯಿತು. ನಿನ್ನ ಮೂಲಕವೇ ಸಾಗರದ ಸಂಪರ್ಕ ಉಳಿದಿರುವುದು. ಸಾಗರದ ಹಳೆಯ ಮುಖಗಳೆಲ್ಲ ಕಣ್ಮರೆಯಾಗುತ್ತಿವೆ. ಅದರೊಂದಿಗೆ ನಮ್ಮ ನೆನಪುಗಳು ಕೂಡ.

ಶ್ರೀ ನಾ. ಡಿಸೋಜ ಜೊತೆಯಲ್ಲಿ ನೀವೆಲ್ಲ ಬೆಳೆಸಿರುವ 'ಒಡನಾಟ' - ಸಾಹಿತ್ಯ ವೇದಿಕೆಯ ಚಟುವಟಿಕೆಗಳನ್ನು ಕೆಲವು ವರ್ಷಗಳಿಂದ ಗಮನಿಸುತ್ತಿದ್ದೇನೆ. ಅದನ್ನು ಸಾಂಸ್ಕೃತಿಕವಾಗಿ ಸಾಗರದಲ್ಲಿ ಸಕ್ರಿಯವಾಗಿಟ್ಟಿರುವುದು ಹೆಮ್ಮೆಯ ಸಂಗತಿ. ನಿಮ್ಮ ವೇದಿಕೆಯ ಮೂಲಕ ಸಾಹಿತ್ಯ - ಸಂಸ್ಕೃತಿಯ ಅರ್ಥಪೂರ್ಣ ಚರ್ಚೆ, ಸಂವಾದದ ಕಾರ್ಯಕ್ರಮಗಳಿಂದ ಸ್ಪಂದಿಸುತ್ತಿರುವುದು ಮಹತ್ವದ ಸಂಗತಿಯಾಗಿದೆ.

ಗೆಳೆಯರಾದ ತೇಜಸ್ವಿಯವರನ್ನು ನಿಮ್ಮ ವೇದಿಕೆಗೆ ಆಹ್ವಾನಿಸಬಯಸಿರುವುದು ಒಳ್ಳೆಯದು. ಆದರೆ ತೇಜಸ್ವಿ, ಈಚೆಗೆ ಹೆಚ್ಚು ಬರವಣಿಗೆ, ಪ್ರಕಾಶನದ ಕೆಲಸದಲ್ಲಿ ಮುಳುಗಿ ಹೋಗಿದ್ದಾರೆ. ಮನೆಬಿಟ್ಟು ಅಲ್ಲಾಡಲು ಬಯಸುವುದಿಲ್ಲ. ಈ ವಿಷಯ ಎತ್ತಿದರೆ ಅವರಿಗೆ ಕಿರಿಕಿರಿಯಾಗುತ್ತದೆ. ನಾನು ಅವರಿಂದ ಈ ಬಗ್ಗೆ ಬೈಯ್ಸಿಕೊಂಡು ಸಾಕಾಗಿದೆ.

ಆದರೂ ನಾನು ನಿಮ್ಮ 'ಒಡನಾಟ'ದ ಮತ್ತು ಸಾಗರದ ಮೇಲಿನ ಕಾಳಜಿಯಿಂದ ಈ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ. ಸ್ವಲ್ಪ ದಿನ ಕಳೆಯಲಿ. ಈಗ ತಾನೇ ಶಿವಮೊಗ್ಗಕ್ಕೆ ಬಂದು ಹೋಗಿದ್ದೇವೆ. ನವೆಂಬರ್ ತಿಂಗಳಿನಲ್ಲಿ ನೋಡೋಣ. ಔಪಚಾರಿಕ ಕಾರ್ಯಕ್ರಮಗಳನ್ನು ಅವರು ಇಷ್ಟಪಡುವುದಿಲ್ಲ. ಯಾವುದಾದರು ವಿಷಯವನ್ನು ಕುರಿತು ಮಾತನಾಡುವಂತೆ ಕೇಳಬಹುದು ಅಥವಾ ಅವರ ಸಾಹಿತ್ಯದ ಬಗ್ಗೆ ಸಂವಾದ ಕಾರ್ಯಕ್ರಮ ನಡೆಸಬಹುದು. ಅಥವಾ ಕುವೆಂಪು, ತೇಜಸ್ವಿ ಇವರಲ್ಲಿ ಒಬ್ಬರ ಸಾಹಿತ್ಯದ ಬಗ್ಗೆ ಒಂದು ವಿಚಾರ ಸಂಕಿರಣ ಏರ್ಪಡಿಸಿ, ಆ ಸಂದರ್ಭದಲ್ಲಿ ಅವರನ್ನು ಕರೆಯಬಹುದು. ಇದು ನಿಮ್ಮ 'ಒಡನಾಟ'ಕ್ಕೆ ಬಿಟ್ಟ ವಿಚಾರ. ಅವರು ಅವರ ಕಾರಿನಲ್ಲೇ ಬರುತ್ತಾರೆ. ನಿಮ್ಮ 'ಒಡನಾಟ'ದಿಂದ ನೇರವಾಗಿ ಅವರನ್ನು ಸಂಪರ್ಕಿಸುವುದು ಒಳ್ಳೆಯದು. ನಾನೂ ಅವರಿಗೆ ನಿಮ್ಮ ಅಪೇಕ್ಷೆಯನ್ನು ತಿಳಿಸುತ್ತೇನೆ. ನಾನು ಒಪ್ಪಿಸುತ್ತೇನೆಂದು ಹೇಳಲಾರೆ. ಪ್ರಯತ್ನಿಸೋಣ.

ಇನ್ನು ಸ್ವಂತ ವಿಚಾರ: ಅಮ್ಮ ಚೆನ್ನಾಗಿದ್ದಾರೆ. ಈಚೆಗೆ ತಾನೇ ಶಿವಮೊಗ್ಗಾ ಕಡೆಯ ಪ್ರವಾಸ ಮುಗಿಸಿ ಬಂದಿದ್ದಾರೆ. ನನ್ನ ಮಗಳು ಸ್ನೇಹಾ ನಮ್ಮ ಮಹಾರಾಜ ಕಾಲೇಜಿನಲ್ಲಿ ಪ್ರಥಮ

ಬಿ.ಎ.ಗೆ ಸೇರಿದ್ದಾಳೆ. Himalayan trekking ಹೋಗಿ ಬಂದಳು. Dance (ಭರತನಾಟ್ಯ) ಅವಳ ಮುಖ್ಯ ಆಸಕ್ತಿ. ಸಾಗರದ ಕಡೆ ಬರಬೇಕು. ಬಹಳ ದಿನವಾಯಿತು. ಹೀಗೇ ಸುಮ್ಮನೆ ಕಾಲಕಳೆಯಲು. Mid term ರಜೆಯಲ್ಲಿ ಪ್ರಯತ್ನಿಸುತ್ತೇನೆ. ನನ್ನ ಓಡಾಟವು ಜಾಸ್ತಿಯಾಗಿದೆ. ಸಾಗರದ ಕಡೆ ಬರಲು ಮನೆಯಲ್ಲಿ ಎಲ್ಲರಿಗೂ ಆಸಕ್ತಿ. ಎಲ್ಲರು ಒಟ್ಟಿಗೆ ಬರಲು ಅನೇಕ ತೊಂದರೆಗಳು. ನನ್ನ ಆರೋಗ್ಯವು ಅಷ್ಟು ಚೆನ್ನಾಗಿಲ್ಲ. ದಬಾಯಿಸಿಕೊಂಡು ಹೋಗುತ್ತಿದ್ದೇನೆ.

ನೀನು ನಿಮ್ಮ ಮನೆಯವರನ್ನೆಲ್ಲ ಕರೆದುಕೊಂಡು ಮೈಸೂರಿಗೆ ಬಂದರೆ ನಮಗೆಲ್ಲ ಸಂತೋಷವಾಗುತ್ತದೆ. ಸ್ವಲ್ಪ ಮೊದಲೇ ತಿಳಿಸಿ ಯಾವಾಗ ಬೇಕಾದರು ಬರಬಹುದು.

ಎಲ್ಲರಿಗೂ ನನ್ನ ನೆನಪು ಮಾಡು. ಸಾಗರವೆಂದರೆ ಬಾಲ್ಯದ ನೆನಪಾಗುತ್ತದೆ. ಅಲ್ಲವೇ ? ಸಾಗರ ಈಗ ಎಷ್ಟು ಬದಲಾಗಿರಬಹುದು. ಎಲ್ಲ ಊರು-ಜನಗಳಂತೆ ನನ್ನ ಊರಿಗೆ ನಾನೇ ಅಪರಿಚಿತನಂತೆ.

'ರುಜುವಾತು' ಚೆನ್ನಾಗಿ ಬರುತ್ತಿದೆ. ಸದ್ಯದಲ್ಲೇ ಚಂದಾ ಕಳಿಸುತ್ತೇನೆ. ಈಗ ದುಡ್ಡಿಲ್ಲ. ಓಡಾಟಕ್ಕೆ ಎಲ್ಲ ಖರ್ಚಾಗುತ್ತದೆ. ನಿನ್ನ Book review ಗಮನಿಸುತ್ತಿದ್ದೇನೆ.

ಆಗಾಗ ಕಾಗದ ಬರೆಯುತ್ತಿರು. ಸಾಗರದ ನೆನಪು ಕೊಡು.

ಶ್ರೀ ನಾ. ಡಿಸೋಜ ಅವರಿಗೆ ನನ್ನ ಪರಿಚಯವಿಲ್ಲ. ನಮಸ್ಕಾರ ತಿಳಿಸು. ಶ್ರೀ ಕೆ.ಜಿ. ಜಗದೀಶ್ ಒಡೆಯರ್‌ಗೆ ನಾನು ವಿಚಾರಿಸಿರುವುದಾಗಿ ತಿಳಿಸು.

ನಿನ್ನ

**ಕೆ. ರಾಮದಾಸ್**

೪

ಕೆ. ರಾಮದಾಸ್
ಕನ್ನಡ ಅಧ್ಯಾಪಕ
ಮಹಾರಾಜ ಕಾಲೇಜು
ಮೈಸೂರು - ೫೭೦ ೦೦೫

ಚಾರ್ವಾಕ
೯೮೬, ಪಂಚಮಂತ್ರ ರಸ್ತೆ
ಕುವೆಂಪು ನಗರ, ಮೈಸೂರು - ೫೭೦ ೦೨೩
೧೩.೬.೧೯೯೬

ಪ್ರಿಯ ವಿಲ್ಲಿ,

ನಿನ್ನ ಕಾಗದಕ್ಕೆ ಉತ್ತರಿಸಲು ವಿಳಂಬವಾಯಿತು. ಕ್ಷಮಿಸು. ನಾನು ಬರವಣಿಗೆಯ ವಿಚಾರದಲ್ಲಿ ತುಂಬ ಸೋಂಭೇರಿ.

ಶ್ರೀ ನಾ. ಡಿಸೋಜ ಕೂಡ ಒಂದು ಕಾಗದ ಬರೆದಿದ್ದರು. ತಿಂಗಳು ಕಳೆಯಿತು. ಉತ್ತರಿಸಲೇ ಇಲ್ಲ. ಈ ನನ್ನ ಅಸೌಜನ್ಯಕ್ಕಾಗಿ ಅವರಿಗೆ ಕ್ಷಮಿಸುವಂತೆ ಹೇಳು.

ಇದೇ ರೀತಿ ನೀನು ಕಳುಹಿಸುತ್ತಿರುವ 'ರುಜುವಾತು'ವಿಗೆ ಚಂದಾ ಕಳಿಸಲು ವಿಳಂಬವಾಗಿದೆ. Cheque ಅನ್ನು ನಿನ್ನ ಹೆಸರಿಗೆ ಕಳುಹಿಸುತ್ತಿದ್ದೇನೆ. ಚಂದ ಸಂದಾಯವಾಗಲಿ.

ಅಕ್ಕ-ರಾಧಿಯ ಜೊತೆಯಲ್ಲಿ ಸಾಗರಕ್ಕೆ ಬಂದು ಹುಟ್ಟೂರಿನ ವ್ಯಾಮೋಹದಿಂದ ತಿರುಗಾಡಿ ಹೋಗಿರುವುದು ಮತ್ತು ನಿಮ್ಮನ್ನೆಲ್ಲ ಭೇಟಿಯಾಗಿರುವುದು ಸಂತೋಷದ ಸಂಗತಿ.

ಈ ರಜೆಯಲ್ಲಿ ನಾನು ಕೂಡ ತಿರುಗಾಡಲು ಬರಬೇಕೆಂದ್ದಿದ್ದೆ. ಅಲ್ಲಿ-ಇಲ್ಲಿ ಸುತ್ತಾಡುತ್ತಲೇ ರಜೆ ಕಳೆಯಿತು. ಇನ್ನು ನವಂಬರ್‌ನಲ್ಲಿ ಮತ್ತೆ ಪ್ರಯತ್ನಿಸುತ್ತೇನೆ. ಈಚೆಗೆ ಚಿಕ್ಕಮಗಳೂರಿನ ಸಮೀಪದ ಕಾಡಿನಲ್ಲಿ ಕೆಲವು ಗಂಟೆಗಳ ಕಾಲ ಒಬ್ಬನೆ ಕುಳಿತು ನೇರಳೆಹಣ್ಣು ತಿನ್ನುತ್ತಾ, ಸಾಗರದ ನನ್ನ ಬಾಲ್ಯದ ದಿನಗಳೆಲ್ಲ ನೆನಪಾದವು. ನಾವು ಸ್ಕೂಲಿಗೆ ಚಕ್ಕರ್ ಹೊಡೆದು ಕಾಡು ತಿರುಗಿದ್ದು, ಹಣ್ಣು-ಹಂಪಲು ಹೆಕ್ಕುತ್ತಾ ಓಡಾಡಿದ್ದು, ಸಾಗರದ ರೈಲ್ವೆ ನಿಲ್ದಾಣದಲ್ಲಿ ರೈಲ್ವೆ ಎಂಜಿನ್ನು ನೋಡುತ್ತಾ ರೋಮಾಂಚನಪಟ್ಟಿದ್ದು, ನಮ್ಮ ವರದಾನದಿಯ ಆನೆಗುಂಡಿಯಲ್ಲಿ ಈಜು ಕಲಿತಿದ್ದು, ಪಟೇಲ್ ಸಾಮಿಲ್‌ನಿಂದ ನಾಟಾದ ತೊಗಟೆಗಳನ್ನು ಎಬ್ಬಿಸಿ ಹೊರೆಕಟ್ಟಿ ನಾನು - ನೀವೆಲ್ಲ ಹೊತ್ತು ಸಾಗಿಸಿದ್ದು, ಆಲೆಮನೆಗಳ ಕಬ್ಬಿನಹಾಲು, ಕಬ್ಬಿನ ಕಳ್ಳತನ, ಸುರಗಿಯ ಹೂವು ನಮ್ಮ ಬಾಲ್ಯದ ಜಗಳಗಳು - ಎಷ್ಟೊಂದು ನೆನಪುಗಳು, ಕಹಿ - ಸಿಹಿಯಾದ ನೆನಪುಗಳು. ಇದೇ ರೀತಿಯ ನಾಲ್ಕು ದಿನಗಳನ್ನು ಮಡಿಕೇರಿಯ ಗುಡ್ಡದ ತುದಿಯಲ್ಲಿ ಮೆಲುಕು ಹಾಕಿದೆ. ರಜೆ ಕಳೆಯಿತು. ಈ ಕನಸಿನ ಲೋಕದಿಂದ ಮತ್ತೆ ವಾಸ್ತವಕ್ಕೆ ಮರಳಿದ್ದೇನೆ.

ಈ ರಜೆಯಲ್ಲಿ Cease Fire ಆಗಿದ್ದ ವಿಚಾರಗಳು ಮತ್ತೆ confrontationಗೆ readyಯಾಗಿವೆ. ಅದೇ ರೀತಿ ನನ್ನ ಕಾಯಿಲೆಗಳು ಕೂಡ. confrontation ಇಲ್ಲದೆ ಸುಮ್ಮನಿರುವುದು ನನಗೆ ತುಂಬ ಕಷ್ಟ.

ರಾಜಕೀಯ ಬದಲಾವಣೆ ನನ್ನ ಆತಂಕಕ್ಕೆ ಕಾರಣವಾಗಿತ್ತು. ಬಿ.ಜೆ.ಪಿ.ಯ ಮತಾಂಧ ಸರ್ಕಾರ unbearable. ಆಗಿನ ದೇವೇಗೌಡರ ಸರ್ಕಾರ secular ಆಗಿ ವರ್ತಿಸಲೇ ಬೇಕಾಗಿರುವುದು ಅದು ಅಷ್ಟೇ ಕಂತ್ರಿ ಸರ್ಕಾರವಾದರೂ constituional ಆಗಿದೆ. ಮತಾಂಧರ ಗಂಡಾಂತರದ ಸರ್ಕಾರ ಸದ್ಯಕ್ಕೆ ತಪ್ಪಿರುವುದು ಆತಂಕ ಕಡಿಮೆ ಮಾಡಿದೆ.

ಕರ್ನಾಟಕದಲ್ಲಿ ನನ್ನ ಅನೇಕ ಮಿತ್ರರು ಅಧಿಕಾರ ಹಿಡಿದಿದ್ದಾರೆ. ಅಂದರೆ ಅಷ್ಟು ಜನ ಗೆಳೆಯರು ಕಡಿಮೆಯಾಗಿದ್ದಾರೆ ಅಷ್ಟೆ. ಮತ್ತೇನೂ ಹೆಮ್ಮೆ ಪಡುವ ವಿಚಾರವಿಲ್ಲ.

ಸಾಗರದಲ್ಲಿ ಮಳೆಗಾಲದ ಉದ್ಘಾಟನೆಯಾಗಿರಬಹುದೆಂದು ತಿಳಿದಿದ್ದೇನೆ. ಇಲ್ಲಿ ಮೋಡ ಕವಿದಿದೆ. ಈಚೆಗಿನ ವರ್ಷಗಳಲ್ಲಿ ಶಿವಮೊಗ್ಗಾ-ಸಾಗರದ ಉರಿಬಿಸಿಲು ಅನುಭವಿಸಿ ನನಗೆ ಗಾಬರಿಯಾಗಿದೆ. ಮಲೆನಾಡು ಈ ಪ್ರದೇಶದಲ್ಲಿ ಕಣ್ಮರೆಯಾಗಿದೆ. ಮಡಿಕೇರಿ ಮೂಡಿಗೆರೆ ಈಗಲೂ ಉಲ್ಲಾಸಮಯವಾಗಿದೆ.

ಮೊನ್ನೆ ತಾನೇ ತೇಜಸ್ವಿ ನೋಡಲು ಮೂಡಿಗೆರೆಗೆ ಹೋಗಿದ್ದೆ. ನಾನು ಸ್ನೇಹಾ Motor cycleನಲ್ಲಿ. ತೇಜಸ್ವಿಗೆ ನಿಮ್ಮ ಕಾರ್ಯಕ್ರಮದ 'ಒಡನಾಟ'ದ ವಿಚಾರ ಸಾಕಷ್ಟು ಹೇಳಿದ್ದೇನೆ. ಅವರು ಜಗ್ಗಲಿಲ್ಲ. "ಯಾವಾಗಾದರೂ ಆ ಕಡೆ ಹೋಗೋಣ ಈಗ ಆಗಲ್ಲ ಕಣ್ರಿ" ಎಂದರು. ಅವರು ಮೈಸೂರಿಗೆ ಬಂದಾಗ ನಾ. ಡಿಸೋಜ ಅವರ ಕಾಗದ ಕೂಡ ತೋರಿಸಿದ್ದೇನೆ.

ನೀನು ಮತ್ತು ಡಿಸೋಜ joint ಆಗಿ ಶ್ರೀರಾಮ್ ಅವರಿಗೆ ಒಂದು ಕಾಗದ ಬರೆಯಿರಿ. ನನ್ನ Reference ಬೇಡ. ನಿನ್ನ ಶ್ರೀಮತಿ ಮತ್ತು ಮಗಳನ್ನು ಕರೆದುಕೊಂಡು ಮೈಸೂರಿಗೆ ಬಾ. ಅವರನ್ನೆಲ್ಲಾ ನಾನು ನೋಡಿಯೇ ಇಲ್ಲ.

ಸ್ನೇಹಾ-ನಿರ್ಮಲಾ ನಿನಗೆ ಕಾಗದ ಬರೆಯಲು ಒತ್ತಾಯಿಸಿದ್ದಾರೆ. ಅಕ್ಕ ಕೂಡ phone ಮಾಡಿದಾಗ ನಿನ್ನ ಭೇಟಿಯ ವಿಚಾರ ತಿಳಿಸಿದ್ದರು. ಅವರು ತಿರುಗಾಟ ಮುಗಿಸಿಕೊಂಡು ಇನ್ನೂ ಬಂದೇ ಇಲ್ಲ. ಅಲ್ಲೇ ಎಲ್ಲೋ ಇದ್ದಾರೆ.

ನಾ. ಡಿಸೋಜ ಅವರಿಗೆ ನಮಸ್ಕಾರ ತಿಳಿಸು.

ನಿನ್ನ

**ಕೆ. ರಾಮದಾಸ್**

೫

ಕೆ. ರಾಮದಾಸ್
ಕನ್ನಡ ಅಧ್ಯಾಪಕ
ಮಹಾರಾಜ ಕಾಲೇಜು
ಮೈಸೂರು - ೫೭೦ ೦೦೫

ಚಾರ್ವಾಕ
೯೮೬, ಪಂಚಮಂತ್ರ ರಸ್ತೆ
ಕುವೆಂಪು ನಗರ, ಮೈಸೂರು - ೫೭೦ ೦೨೩
೧೫.೪.೧೯೯೭

ಪ್ರಿಯ ವಿಲಿಯಂ

ಪ್ರೀತಿಯಿಂದ ಬರೆದ ನಿನ್ನ ಕಾಗದಗಳು ಬಂದಿವೆ. ನಾನು ಕಾಗದ ಬರೆಯದಿದ್ದರೂ ನಿನ್ನನ್ನು ನೆನಪಿಸುತ್ತಾ ಆಗಾಗ ನನ್ನ ಬಾಲ್ಯವನ್ನು ಚಪ್ಪರಿಸುತ್ತಲೇ ಇರುತ್ತೇನೆ. ನೀನು ನೆನಪು ಮಾಡಿದ ಹೋಳಿಗೆಯ ಸಂಭ್ರಮದ ದಿನಗಳೆಲ್ಲ ಕಳೆದುಹೋಗಿವೆ. ಮಂಜಕ್ಕ ಈಗ ತುಂಬ ಸುಸ್ತಾಗಿದ್ದಾರೆ. ಆದರೂ ಅವರ ಅದಮ್ಯ ಉತ್ಸಾಹ ಕುಂದಿಲ್ಲ. ಕಳೆದ ಎರಡು-ಮೂರು ತಿಂಗಳುಗಳಿಂದ ಅವರು ತುಂಬ ಬಲಹೀನರಾಗಿದ್ದರು. ಈಗ ಚೇತರಿಸಿಕೊಂಡು ರಿಪ್ಪನ್‌ಪೇಟೆಗೆ ಹೊರಟಿದ್ದಾರೆ. ಅವರ ಈ ತಿರುಗಾಟದಲ್ಲಿ ಸಾಗರಕ್ಕೆ ಬಂದರೂ ಬರಬಹುದು. ನಿನ್ನ ಕಾಗದವನ್ನು ಓದಿ ಸಂತೋಷಪಟ್ಟರು.

ನಿಮ್ಮ 'ಒಡನಾಟ'ದ ಕಾರ್ಯಕ್ರಮಕ್ಕೆ ನಾನು ಬರುವುದು ಅಂತಹ ದೊಡ್ಡ ವಿಚಾರವೇನಲ್ಲ. ಮೇ ತಿಂಗಳಿನಲ್ಲಿ ಬಿಡುವಿಲ್ಲ. ಆ ನಂತರದ ದಿನಗಳಲ್ಲಿ ನೀವು ಅನುಕೂಲವಾದಾಗ ಕರೆದರೆ ಖಂಡಿತಾ ಬರುತ್ತೇನೆ. ನಿಮ್ಮನ್ನೆಲ್ಲ ಭೇಟಿಯಾಗುವ ಅವಕಾಶಕ್ಕಾಗಿ ಅಷ್ಟೆ.

ಲಂಕೇಶ್, ಸಾಗರಕ್ಕೆ ಬರುವಷ್ಟು ಆರೋಗ್ಯವಿಲ್ಲ. ಅವರು ದೂರ ಪ್ರಯಾಣಿಸಲು ತುಂಬ ದುರ್ಬಲರಾಗಿದ್ದಾರೆ. ತೇಜಸ್ವಿಯವರಿಗೆ ಪುರುಸೊತ್ತಿಲ್ಲ. ನಿಮ್ಮ ಒಡನಾಟದ ಬಯಕೆ ಈಡೇರಿಸುವುದು ಸದ್ಯಕ್ಕೆ ಅಸಾಧ್ಯವೆಂದು ಕಾಣುತ್ತದೆ.

ತೇಜಸ್ವಿ ಸಾಹಿತ್ಯದ ಮೇಲೆ ಒಂದು ಸಣ್ಣ ವಿಚಾರ ಸಂಕಿರಣ ಏರ್ಪಡಿಸಿ, ಅದರ ಅಂಗವಾಗಿ ಒಂದು ಸಂವಾದ ಇಟ್ಟುಕೊಂಡರೆ ಅವರನ್ನು ಕರೆಯಲು ದಾರಿಯಾಗಬಹುದು. ಇದು ನಾನು ಕೊಟ್ಟ ಸಲಹೆ ಎಂಬುದು ಅವರಿಗೆ ತಿಳಿದರೆ ಅಪಾಯ, ಪ್ರಯತ್ನಿಸಿ. ಈ ಬಗ್ಗೆ ನೀನು ಪುಸ್ತಕ ಪ್ರಕಾಶನದ ಬಿ.ಎನ್. ಶ್ರೀರಾಮರೊಂದಿಗೆ ಸಂಪರ್ಕಿಸಿದರೆ ಯಶಸ್ವಿಯಾಗಬಹುದು. ಮೇ ತಿಂಗಳಿನಲ್ಲಿ ಸಾಧ್ಯವಾಗಲಾರದು. ಮೇ ನಂತರ ಪ್ರಯತ್ನಿಸಬಹುದು.

ನಿನ್ನ ಕವನ ಸಂಕಲನ 'ಬೆಳ್ಳಿಚೂರು' ಪ್ರಕಟವಾಗುತ್ತಿರುವುದು ಮತ್ತು ಈಗಾಗಲೇ ನೀನು ನಾಲ್ಕು ಪುಸ್ತಕಗಳನ್ನು ಸಂಪಾದಿಸಿರುವುದು ಸಂತೋಷದ ಸಂಗತಿ. ನಿರ್ಮಲಾಳ ಪ್ರಬಂಧ ಸಂಕಲನ ಪ್ರಕಟಣೆಗೆ ಸಿದ್ಧವಾಗುತ್ತಿದೆ. ಸ್ನೇಹಾ ಪರೀಕ್ಷೆಗೆ ಸಿದ್ಧವಾಗುತ್ತಿದ್ದಾಳೆ. ನಿನ್ನ ಶಾಲಿನಿ-ದೀಪು ಅವರನ್ನು ನಾನು ನೋಡುವ ಅವಕಾಶವೇ ಆಗಲಿಲ್ಲ. ಪಿ.ಯು.ಸಿ. ಪರೀಕ್ಷೆಯಲ್ಲಿ ಆಕೆಗೆ ಉಲ್ಲಾಸದಾಯಕವಾಗಲಿ ಎಂದು ತಿಳಿಸು.

ನಾನು ಹೆಚ್ಚು ಕಡಿಮೆ ಎಲ್ಲ Frontಗಳನ್ನು confront ಮಾಡುತ್ತಿರುವುದರಿಂದ ನನ್ನ ಜೀವನದಲ್ಲಿ Cease Fireಗೆ chance ಇಲ್ಲದಂತಾಗಿದೆ. ಇದು ನನ್ನ ಜೀವನ ಶೈಲಿ ಮೊದಲಿನಿಂದಲೂ ಅಲ್ಲವೇ ? ದೂರದಲ್ಲಿರುವ ನಿನಗೆ ಗಾಳಿಯ ಸಮಾಚಾರಗಳು ತಲುಪುತ್ತಿರಬಹುದು. ದೈಹಿಕವಾಗಿ ದುರ್ಬಲನಾಗುತ್ತಿರುವುದು ನನ್ನ ಗಮನದಲ್ಲಿದೆ.

ನಿನ್ನ ಮನೆಯವರನ್ನೆಲ್ಲ ಕರೆದುಕೊಂಡು ಮೈಸೂರಿಗೆ ಈ ರಜೆಯಲ್ಲಿ ನೀನು ಬಂದರೆ ಖುಷಿಪಡಬಹುದು. ಶ್ರೀ ನಾ. ಡಿಸೋಜ ಅವರಿಗೆ ಅವರ ವಿಶ್ವಾಸಕ್ಕಾಗಿ ವಂದನೆ ತಿಳಿಸು.

ನಿನ್ನ

**ಕೆ. ರಾಮದಾಸ್**

೬

ಕೆ. ರಾಮದಾಸ್
ಕನ್ನಡ ಅಧ್ಯಾಪಕ
ಮಹಾರಾಜ ಕಾಲೇಜು
ಮೈಸೂರು - ೫೭೦ ೦೦೫

ಚಾರ್ವಾಕ
೯೮೬, ಪಂಚಮಂತ್ರ ರಸ್ತೆ
ಕುವೆಂಪು ನಗರ, ಮೈಸೂರು - ೫೭೦ ೦೨೩

ಪ್ರಿಯ ವಿಲ್ಲಿ,

ನಿಮ್ಮ 'ಒಡನಾಟ'ದ ಪರಿಸರ ಕಾರ್ಯಕ್ರಮಕ್ಕೆ ಯಲ್ಲಪ್ಪ ರೆಡ್ಡಿಯವರು ಬರುತ್ತಿರುವುದು ಸಂತೋಷದ ಸಂಗತಿ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ನೀವು ಕರೆದಿದ್ದರೆ ತೇಜಸ್ವಿ ಬರುತ್ತಿದ್ದರೆಂದು ಕಾಣುತ್ತದೆ. ಒಳ್ಳೆ ಅವಕಾಶವಿತ್ತು. ತೇಜಸ್ವಿಯವರಿಗೆ ಪರಿಸರ ಮತ್ತು ಯಲ್ಲಪ್ಪರೆಡ್ಡಿ ತುಂಬ ಇಷ್ಟ. Wait for the next chance.

ನನ್ನ ಆರೋಗ್ಯ ಸರಿ ಇಲ್ಲ. Facial Allergyಯಿಂದ ಒದ್ದಾಡುತ್ತಿದ್ದೇನೆ. Photo sensitive skinನಿಂದ ನಾನು ಬಿಸಿಲಿಗೆ Expose ಆಗುವಂತಿಲ್ಲ. ಮುಂದಿನ ಅಕ್ಟೋಬರ್-ನವೆಂಬರ್‌ನಲ್ಲಿ ಬರಲು ಸಾಧ್ಯವಾಗಬಹುದು. ಅಕ್ಕನ ಆರೋಗ್ಯ ಚೆನ್ನಾಗಿಲ್ಲ. She is also sinking ತುಂಬಾ dull ಆಗಿದ್ದಾರೆ.

'ಒಲವು' ಸಂಚಿಕೆ ಕಳಿಸಿದ್ದೇನೆ. ಅಭಿಪ್ರಾಯ ತಿಳಿಸು.

ಲಂಕೇಶ್ ಪತ್ರಿಕೆಯಲ್ಲಿ ನಾ. ಡಿಸೋಜಾ ಅವರ ಕತೆ ಓದಿ ಸಾಗರದ ಪರಿಸರವೆಲ್ಲ ಮತ್ತೆ ನೆನಪಾಯಿತು. ಮತ್ತೆಲ್ಲ ಮನೆಯವರಿಗೆ ನಮಸ್ಕಾರ ತಿಳಿಸು.

ನಿನ್ನ

**ಕೆ. ರಾಮದಾಸ್**

೭

ಚಾರ್ವಾಕ
೯೮೬, ಪಂಚಮಂತ್ರ ರಸ್ತೆ
ಕುವೆಂಪು ನಗರ, ಮೈಸೂರು - ೫೭೦ ೦೨೩
೨೩.೩.೨೦೦೪

ಕೆ. ರಾಮದಾಸ್
ಕನ್ನಡ ಅಧ್ಯಾಪಕ
ಮಹಾರಾಜ ಕಾಲೇಜು
ಮೈಸೂರು - ೫೭೦ ೦೦೫


ಪ್ರಿಯ ವಿಲ್ಲಿ,

ನಿನ್ನ ಕಾಗದ ಮತ್ತು ಪತ್ರಿಕೆ ತಲುಪಿದೆ. Thanks ಸಾಗರದಲ್ಲಿ ಹಳೆಯ ಒಡನಾಟಗಳನ್ನು ನೋಡಿ ನನ್ನ ಬಾಲ್ಯವೆಲ್ಲ ನೆನಪಾಯಿತು. ನೀವೆಲ್ಲ ವ್ಯಕ್ತಪಡಿಸಿದ ಅವ್ಯಕ್ತ ಭಾವನಾತ್ಮಕತೆಯಿಂದ ನಾನು ಮೈಸೂರಿಗೆ ಬಂದ ಮೇಲೆ ನನಗೆ ತುಂಬ ಕಾಡತೊಡಗಿತು. ಈ ಸಾರಿ ಸಾಗರದ ಭೇಟಿಯಿಂದ ನನಗೆ ಖುಷಿಯಾಯಿತು. ಈಗ ತುಂಬ ಓಡಾಟ - ಒತ್ತಡದಲ್ಲಿದ್ದೇನೆ.

ನಿನ್ನ

**ಕೆ. ರಾಮದಾಸ್**


# ಚಿತ್ರ ಸಂಪುಟ



ಕೆ. ರಾಮದಾಸ್ ತಾಯಿ ಮಲೆನಾಡಿನ ಮಂಜಮ್ಮ



ಬಾಲ್ಯದಲ್ಲಿ ರಾಮದಾಸ್



ಕೆ. ರಾಮದಾಸ್



ಕೆ. ರಾಮದಾಸ್, ಕಡಿದಾಳು ಶಾಮಣ್ಣ



ಹಿರಿಯ ಸಾಹಿತಿ ಚದುರಂಗರ ಜೊತೆ
ಎನ್. ಎಸ್. ರಘುನಾಥ್
ಕೆ. ರಾಮದಾಸ್
ದೇವನೂರು ಮಹಾದೇವ
ಶಿವರಾಮು ಕಾಡನಕುಪ್ಪೆ



ಜನಾರ್ಧನ (ಜನ್ನಿ)
ಹೆಚ್. ಗೋವಿಂದಯ್ಯ ಅವರ
ಜೊತೆ
ಕೆ. ರಾಮದಾಸ್




ರಾಮದಾಸರ ನೇತೃತ್ವದಲ್ಲಿ ನಡೆದ ಮಾನವ ಸರಪಳಿಯ
ಒಂದು ನೋಟ



ಪ್ರೀತಿಯ ನಾಯಿಯ ಜೊತೆ ಮಂಜಮ್ಮ,
ಪತ್ನಿ ಆರ್. ನಿರ್ಮಲ ಹಾಗೂ ಮಗಳು ಸ್ನೇಹಾ



ಒಲವಿನ ಮದುವೆಯ
ಮಧುರ ಕ್ಷಣ




16-8-1975



ಒಲವಿನ ಮದುವೆಗೆ
ಪ್ರೊ. ಕೆ. ರಾಮದಾಸ್
ಸಾರಥ್ಯ



ಕರ್ನಾಟಕ ಪ್ರಗತಿರಂಗದ
ಬಹಿರಂಗ ಸಭೆ
ಮಂಡ್ಯಜಿಲ್ಲೆಯಲ್ಲಿ
ನಡೆದಾಗ
ಹೆಚ್.ಎಲ್. ಕೇಶವಮೂರ್ತಿ
ಪಿ. ಲಂಕೇಶ್
ಜೊತೆ
ಪ್ರೊ. ಕೆ. ರಾಮದಾಸ್



ಜಿಲ್ಲಾಧಿಕಾರಿ ಕಛೇರಿ ಮುಂದೆ
ಪ್ರತಿಭಟನಾ ನಿರತರ ಜೊತೆ
ಮನವಿ ಪತ್ರ ಓದುತ್ತಿರುವ
ಪ್ರೊ. ಕೆ. ರಾಮದಾಸ್



<u>ಜೀವದ ಗೆಳೆಯರು</u>

ಪ್ರೊ. ಕೆ. ರಾಮದಾಸ್
ಬಿ.ಎನ್. ಶ್ರೀರಾಮ್
ಕೆ. ಪಿ. ಪೂರ್ಣಚಂದ್ರ ತೇಜಸ್ವಿ




ಕಡಿದಾಳು ಶಾಮಣ್ಣ
ಚದುರಂಗ
ಪ್ರೊ. ಕೆ. ರಾಮದಾಸ್
ಮಾತುಕತೆಯಲ್ಲಿ




ಚಿರನಿದ್ರೆಯಲ್ಲಿ
ಪ್ರೊ. ಕೆ. ರಾಮದಾಸ್




ಅಬ್ದುಲ್ ರಷೀದ್, ಪಿ. ಲಂಕೇಶ್, ರಾಮದಾಸ್





ತೇಜಸ್ವಿ ಜೊತೆ ರಾಮದಾಸ್








ಸಮಾರಂಭದಲ್ಲಿ ರಾಮದಾಸ್



ಪಿ.ಲಂಕೇಶ್ ಜೊತೆ ರಾಮದಾಸ್



ಸ್ನೇಹಿತರಾದ ತೇಜಸ್ವಿ,
ಸುಂದರೇಶ್ ಜೊತೆ ರಾಮದಾಸ್



ದೇವನೂರು ಮಹಾದೇವ ಹಾಗೂ
ಎಂ.ಡಿ.ಎನ್ ಜೊತೆ ರಾಮದಾಸ್



ಹಸನ್ಮುಖಿ ರಾಮದಾಸ್



ಪಿ.ಲಂಕೇಶ್, ತೇಜಸ್ವಿಯೊಂದಿಗೆ
ಶಿವಮೊಗ್ಗದಲ್ಲಿ ರಾಮದಾಸ್





ರಾಮದಾಸರ ಒಲವಿನ
ಮಡದಿ ನಿರ್ಮಲ,
ಮಗಳು ಸ್ನೇಹಾ



ಪ್ರೊ. ಕೆ. ರಾಮದಾಸ್
ಕೆ. ಪಿ. ಪೂರ್ಣಚಂದ್ರ ತೇಜಸ್ವಿ




ಮೀನುಶಿಕಾರಿಯಲ್ಲಿ
ರಾಮದಾಸ್



ಲಂಕೇಶ್ ಜೊತೆ, ಮಗಳು ಸ್ನೇಹಾಳೊಂದಿಗೆ
ರಾಮದಾಸ್



ಎಂ.ಡಿ.ಎನ್ ಜೊತೆ
ರಾಮದಾಸ್



# ನಮ್ಮ ರಾಮನೇ ಬೇರೆ...

ನಮ್ಮ ರಾಮನ ಜನ್ಮಭೂಮಿ
ಕನ್ನಡ ದೇಶದ ಅಪ್ಪಟ ಮಲೆನಾಡು
ದಾದಿ ಅಮ್ಮ ಲೋಕಮಾತೆ
ಕೇವಲ ಅವಳ ಕಣ್ಣ ಆರೈಕೆ
ಮಳೆಗೆ ಕರಗಿ ಕುಸಿವ ಗೋಡೆ
ಸೋರುವ ಸೂರು
ನಿರ್ಭೀತಿ, ನೀರವ ಮೌನ ಕಲಿಸಿತು
ಮಲೆನಾಡ ಕಾಡು....

....ನಮ್ಮ ರಾಮನ ಬಳಿ
ಬತ್ತಲಾರದ ಬತ್ತಳಿಕೆ ತುಂಬ ವಿವಿಧಾಸ್ತ್ರಗಳು.
ವ್ಯವಸ್ಥೆಯ ವಿರುದ್ಧಾಸ್ತ್ರ
ಜಾತೀಯತೆಯ ವಿರುದ್ಧಾಸ್ತ್ರ
ಭ್ರಷ್ಟತೆಯ ವಿರುದ್ಧಾಸ್ತ್ರ
ಸಿದ್ಧ ಏಕಾಂಗಿ ಎದೆ ಸೆಟೆದು ಪ್ರಯೋಗಿಸುವ ಕಲಿ
ಎದುರಿದ್ದವರ ಎದೆಗಷ್ಟೇ ನೇರಗುರಿ.

ನಮ್ಮ ಬಂಡುಕೋರ ರಾಮನ
ಬಳಿಯಿದ್ದದ್ದು ಒಂದೇ ಮಾರಕಾಸ್ತ್ರ
ಅಂಗೈಯಲ್ಲಿ ಮುಚ್ಚಿದ **Matchbox**
ಅದಕ್ಕೆ ಏಕೈಕ ಬಲಿ ಚಾರ್ಮ್ಸ್ ಸಿಗರೇಟ್
'ಇದೇನು ಸಾರ್' ಅನ್ನುವವರಿಗೆ
'ಅದೆಲ್ಲ ಬಿಡ್ರೀ' ಎಂಬ ರೆಡಿಮೇಡ್ ಉತ್ತರ
ಸಿಗರೇಟ್ ಹೊಗೆ ಬಾಯ್ತುಂಬ ನಗೆ
ಚೆಲ್ಲುತ್ತಿದ್ದ ನಮ್ಮ ರಾಮನೇ ಬೇರೆ.

ನಿರ್ಮಲಾಂತಃಕರಣದ ಮಡದಿ ಜೊತೆಗೂಡಿ
ಜಾತಿಗಿಂತ ನೀತಿ ಮುಖ್ಯ, ಪ್ರೀತಿ ಮುಖ್ಯ ಎಂದು ಹಾಡಿ
ಗುಣಶಾಲಿ ಮದ್ದು ನೀಡಿ ಒಲುಮೆಯ ಚಿಲುಮೆಯುಕ್ಕಿಸಿದ
ಕಲ್ಮಶವುಳ್ಳವರ ಒಳಗನ್ನು ತೊಳೆಯುತ್ತಿದ್ದ
ತನ್ನಂತೆ ಬಾಲ್ಯವುಂಡವರ ಬಾಳಿಗೆ
ಬೆಳಕಿನ ಪಂಜು ಹಿಡಿದ
ನಮ್ಮ ರಾಮನೇ ಬೇರೆ.

–ಅಗ್ರಹಾರ ಕೃಷ್ಣಮೂರ್ತಿ

(ಆಯ್ದ ಸಾಲುಗಳು)

ISBN 81-7877-075-X
9788178770758

ಅಭಿರುಚಿ ಪ್ರಕಾಶನ
ನಂ. 386, 14ನೆಯ ಮುಖ್ಯರಸ್ತೆ,
3ನೆಯ ಅಡ್ಡರಸ್ತೆ, ಸರಸ್ವತೀಪುರ ಮೈಸೂರು-9